Reg No. D. 1550

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.
ಸಂಪಾದಕ:—ಪಿ. ಐ. ಬೆಳ್ಯಪ್ಪ.
ವಾರ್ಷಿಕ ಚಂದಾ ರೂ. ೩-೮-೦
ತಾ. ೧೨—೧—೧೯೪೦.
ಸಂಪುಟ ೧೯] [ಸಂಚಿಕೆ ೩೩.

OUR GREETINGS & GOOD WISHES
to
ALL OUR CONSTITUENTS, DEPOSITORS
SHAREHOLDERS & WELL WISHERS
for
A HAPPY & PROSPEROUS NEW YEAR.
THE CANARA BANKING CORPORATION LIMITED.
(Incorporated in British India)
Estd. 1906.
52-3

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara.

52—27

ಕೊಡಂದೇರ ಬಿ. ಮಾಚಯ್ಯ,
L.D Sc. (COLLEGE OF DENTISTRY)
EX-SUPERVISOR, LAXMIBAI PATEL DENTAL HOSPITAL, KARACHI
ದಂತ ವೈದ್ಯರು
ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ
DENTAL CLINIC
ನಲ್ಲಿ ವಿಚಾರಿಸಿರಿ.
ಸುಲಭ ದರ. (26) ನವೀನ ರೀತಿಯ ಚಿಕಿತ್ಸೆ.

ಕೇರಳ ಆಯುರ್ವೇದಿಕ್
ವೈದ್ಯಶಾಲಾ, ವಿರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:- ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದವುಗಳನ್ನು ಬರೆದು ಕೊಡುವುದಲ್ಲದೆ, ದೇಶಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಾಲಜರ್, (ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.

52-48

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ| ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ| ಮಂಡೇಪಂಡ ಸೋಮಯ್ಯನವರು.
ಮೆ| ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ಧಾಪುರ— ಮೆ| ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ| ಪಿ. ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮೆ| ಅಜ್ಜಮಾಡ ಮಾದಪ್ಪನವರು ಮತ್ತು ಮೆ| ಜಿ ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ| ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ| ಕೆ ಬೋಗಪ್ಪನವರು.

ನಾಪೋಕ್ಲು—ಮೆ| ಬಿಳ್ಳಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ| ಎಚ್. ಎಂ. ಪುಟ್ಟಣ್ಣನವರು.

ಸೂಚನೆ — ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಪ್ಲೀನೋಲ್'

ಪೂರ್ಣ ಶಕ್ತಿಮಾತ್ರ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್
(52-15)

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಸ್ಥಾಪಿತವಾದ್ದು 1907.

ಹೆಡ್ ಆಫೀಸು—ಅಜ್ಮೀರ್.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಗಯ್ಯಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಸಿಲ್ಹೆಟ್, ಸಿಕಂದರಾಬಾದ್, ತ್ರಿಚನಾಪಳ್ಳಿ ಮತ್ತು ನೆಲ್ಲೂರು.

52-50

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಕಳೆದ ತಾ. 30-12-39 ರಲ್ಲಿ ಬೆಳಗ್ಗೆ 10.30 ಗಂಟೆಗೆ ಮ. ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಾಗಿದ್ದರು. ಮ. ಗಳಾದ 1. ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟ್,) 2. ರಾ. ಬಹದೂರ್ ಪಿ. ದೇವಯ್ಯನವರು (ಟ್ರೆಜರರ್,) 3. ಐ ಪಿ. ಕಾರ್ಯಪ್ಪನವರು, 4. ಕೆ. ಯಂ. ಕುಶಾಲಪ್ಪನವರು, 5. ಹೆಚ್. ಯಂ. ಪುಪ್ಪಣ್ಣನವರು, 6. ಎನ್. ಬಿ. ಸೋಮಯ್ಯನವರು, 7. ಕೆ. ಕೆ. ಗಣಪತಿಯವರು, 8. ಕೆ. ಸಿ. ಕರುಂಬಯ್ಯನವರು, 9. ಯನ್. ಯನ್. ರಾಮಶೆಟ್ಟಿಯವರು (ಗೌರವ ಕಾರ್ಯದರ್ಶಿ,) 10. ಪಿ. ಜಿ. ಐಯ್ಯಪ್ಪನವರು, 11. ಪಿ. ಸಿ. ಕರುಂಬಯ್ಯನವರು, 12 ಯಂ. ಸಿ. ದೇವಯ್ಯನವರು, 13. ಬಿ. ಪಿ. ಪೂಜಯ್ಯನವರು, ಮತ್ತು 14. ಯನ್. ಶಂಕರಯ್ಯನವರು, ಸಹಕಾರಿ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರರೂ ಸಹ ಹಾಜರಿದ್ದರು.

ಡೈರೆಕ್ಟರು ಮ. ಯಂ. ಯನ್. ಸೋಮಯ್ಯನವರು ಗೈರುಹಾಜರಾಗಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಸುಪರ್‌ವಿಷನ್ ಬೋರ್ಡಿನ ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

3. ಸಾಲ ನಿವಾರಣೆ ಬೋರ್ಡಿನ ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

4. ಕಳೆದ ನವಂಬರ್ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಒಪ್ಪಲಾಯಿತು.

ಹಿಂದಳ ಶಿಲ್ಕು	ರೂ.	24,010 4 7
ನವಂಬರ್ ತಿಂಗಳಲ್ಲಿ ವಸೂಲಿ	ರೂ.	21,424 6 0
ಜುಮ್ಲ	ರೂ.	45,434 10 7
ಸದರಿ ತಿಂಗಳಲ್ಲಿ ಖರ್ಚು	ರೂ.	34,316 3 6
ಬಾಕಿ ಶಿಲ್ಕು	ರೂ.	11,118 7 1

5. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು.

(1) ಕಿರುಂದಾಡು ಸೊಸೈಟಿಗೆ ರೂ. 175 (2) ಮೂರ್ನಾಡು ಕ್ರಾಪ್‌ಲೋನ್ ಅಂಡ್ ಸೇಲ್ ಸೊಸೈಟಿಗೆ ರೂ. 2000 (3) ಈಚೂರು ಸೊಸೈಟಿಗೆ ರೂ. 1200 ಮತ್ತು (4) ಅಮ್ಮತ್ತಿ ಕ್ರಾಪ್‌ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 5000.

6. ಈ ಕೆಳಗಿನ ಸೊಸೈಟಿಗಳ ಸಾಲದ ಅರ್ಜಿಗಳನ್ನು ಬರುವ ಮಾರ್ಚಿ ತಿಂಗಳಲ್ಲಿ ಆಲೋಚಿಸಬಹುದೆಂತ ತೀರ್ಮಾನವಾಯಿತು.

(1) ಕಿರಗಂದೂರು ಸೊಸೈಟಿ, (2) ಹೊಸಕೇರಿ ಸೊಸೈಟಿ ಮತ್ತು (3) ಕೋಣಗೇರಿ ಸೊಸೈಟಿ.

7. ಮಡಿಕೇರಿ ಟೌನ್ ಸೊಸೈಟಿಯ ಸಾಲದ ಅರ್ಜಿಯನ್ನು ಕಾರಣಾಂತರದಿಂದ ತಿರಸ್ಕರಿಸಲಾಯಿತು.

8 ಕಾಗ್ಗೋಡು ಮುಸ್ಲಿಂ ಸೊಸೈಟಿಯ ಸಾಲದ ಅರ್ಜಿಯನ್ನು ಫೆಬ್ರವರಿ ತಿಂಗಳಲ್ಲಿ ಆಲೋಚಿಸಬಹುದೆಂತ ಮುಂದರಿಸಿಡಲಾಯಿತು.

9. ಬ್ಯಾಂಕಿನ ಪ್ರೆಸಿಡೆಂಟರು ಈ ಕೆಳಗಿನ ಸೊಸೈಟಿಗಳಿಗೆ ಕೊಟ್ಟ ಹುತ್ತಿ ಸಾಲಗಳನ್ನು ಒಪ್ಪಲಾಯಿತು. (1) ಕರಣಂಗೇರಿ ಸೊಸೈಟಿಗೆ ರೂ. 100 (2) ಬಲ್ಲತ್ನಾಡು ಸೊಸೈಟಿಗೆ ರೂ. 150 (3) ಕುಂಜಿಲಗೇರಿ ಸೊಸೈಟಿಗೆ ರೂ. 450 ಮತ್ತು (4) ಬೇಟೋಳಿ ಸೊಸೈಟಿಗೆ ರೂ. 200.

10. ಬ್ಯಾಂಕಿನ ಕೆಲವು ರಾಮರ್ಗಗಳ ವಿಷಯ 1938-1939 ನೇ ಇಸವಿಯ ಅಸಿಸ್ಟೆಂಟ್ ರಿಜಿಸ್ಟ್ರಾರರ ಆಡಿಟ್ ವರದಿಯನ್ನೂ ಮತ್ತು ರಿಜಿಸ್ಟ್ರಾರರ ಟಿಪ್ಪಣಿ ಆಡಿಟ್ ನೋಟನ್ನೂ ಓದಲಾಯಿತು.

ಈ ಕೆಳಗಿನ ಡೈರೆಕ್ಟರುಗಳಿಂದ ಕೂಡಿದ ಸಬ್ ಕಮಿಟಿಯನ್ನು ಏರ್ಪಡಿಸಿ ಆಡಿಟ್ ವರದಿಯನ್ನನುಸರಿಸಿ ಆಫೀಶಿಯಲ್ ಶರಾವುಗಳನ್ನು ತಯಾರಿಸಿ, ಮತ್ತು ಬಿದು ಮೆಂಬರುಗಳಿಂದ ಮತ್ತು ಸೊಸೈಟಿಗಳಿಂದ ಕಳುಹಿಸಲ್ಪಡುವ ಶರಾವುಗಳನ್ನು ಹೆಕ್ಕಿ ತೆಗೆದು ತಾ. 20-1-40 ರಲ್ಲಿ ನಡೆಯುವ ಡೈರೆಕ್ಟರುಗಳ ಮೀಟಿಂಗಿನ ಮುಂದಿಡುವಂತೆ ತೀರ್ಮಾನಿಸಲಾಯಿತು.

ಶ್ರೀ. ಗಳಾದ (1) ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟ್,) (2) ಎನ್. ಎನ್. ರಾಮಶೆಟ್ಟಿಯವರು (ಗೌರವ ಕಾರ್ಯದರ್ಶಿ,) (3) ರಾ. ಬ ಪಿ. ದೇವಯ್ಯನವರು (ಟ್ರೆಜರರ್,) (4) ಪಿ. ಜಿ. ಐಯ್ಯಪ್ಪನವರು, ಮತ್ತು ಕೆ. ಸಿ. ಕರುಂಬಯ್ಯನವರು.

11. ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ತಾ. 18-2-1940 ರಲ್ಲಿ ಬೆಳಗ್ಗೆ 11 ಗಂಟೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ನಡಿಸುವಂತೆ ತೀರ್ಮಾನಿಸಲಾಯಿತು.

ಸದರಿ ಮೀಟಿಂಗಿಗೆ ಅಧ್ಯಕ್ಷರಾಗಿ ಬರಲು ಪುತ್ತೂರಿನ ಅಡ್ವೊಕೇಟರು ಮತ್ತು ಕೋಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಪ್ರೆಸಿಡೆಂಟರಾದ ಶ್ರೀಮಾನ್ ಯಂ. ಶಿವರಾಯರನ್ನು ಆಹ್ವಾನಿಸುವಂತೆ ತೀರ್ಮಾನವಾಯಿತು.

12. ಡೈರೆಕ್ಟರುಗಳ ಮೀಟಿಂಗು ತಾ. 5-1-40 ರಲ್ಲಿ ನಡೆಯಬದ್ದ ಪಕ್ಷ ಮೇಲ್ಕಂಡ ಸಬ್ ಕಮಿಟಿಯವರು 1938-39 ನೇ ಸಂವತ್ಸರದ ಡೈರೆಕ್ಟರುಗಳ ಕರಡು ರಿಪೋರ್ಟು 1939-40 ರ ಬಾಪ್ತು ಬ್ಯಾಂಕಿನ ಅಂದಾಜು ಬಡ್ಜೆಟ್ ಮತ್ತು ಬ್ಯಾಂಕಿನ ಇಂಗ್ಲಿಷ್ ಕರಡು ಬೈಲಾವನ್ನು ನೋಡಿ ಮಂಜೂರು ಮಾಡುವಂತೆ ತೀರ್ಮಾನಿಸಲಾಯಿತು.

13. ಡೈರೆಕ್ಟರುಗಳು ತಾ. 5.1.40 ರಲ್ಲಿ ಸೇರಿ ಡೈರೆಕ್ಟರುಗಳ ಕರಡು ರಿಪೋರ್ಟನ್ನೂ, ಡ್ರಾಫ್ಟ್ ಬಡ್ಜೆಟನ್ನೂ ಮತ್ತು ಬ್ಯಾಂಕಿನ ಡ್ರಾಫ್ಟ್ ಇಂಗ್ಲಿಷ್ ಬೈಲಾವನ್ನು ಮಂಜೂರ್ಮಾಡುವುದಲ್ಲದೆ ಪ್ರಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರಾದ ಸರ್. ಜಗದೀಶ್ ಪ್ರಸಾದ್‌ರವರು ಆ ದಿನ ಮಡಿಕೇರಿಗೆ ಬಂದರೆ ಡೈರೆಕ್ಟರುಗಳೆಲ್ಲರೂ ಅವರನ್ನು ಭೇಟಿಯಾಗಬೇಕಾಗಿ ಸಹ ತೀರ್ಮಾನಿಸಲಾಯಿತು

14. ಬ್ಯಾಂಕಿನ ಮೆಂಬರುಗಳಾಗಲು ಅರ್ಜಿ ಬರೆದುಕೊಂಡ ಈ ಕೆಳಗಿನವರುಗಳನ್ನು ಮೆಂಬರುಗಳಾಗಿ ಆರಿಸಿಕೊಳ್ಳಲಾಯಿತು.

(1) ಶ್ರೀ ಯಂ ಎಸ್. ವೆಂಕಟಸುಬ್ಬರಾವ್‌ರವರು, (2) ಹಾತೂರು ಕ್ರಾಪ್, ಲೋನ್, ಸೇಲ್, ಅಂಡ್ ಸಪ್ಲೈ ಸೊಸೈಟಿ.

15. 1938-39 ನೇ ವರ್ಷಕ್ಕೆ ಬ್ಯಾಂಕಿಗೆ ವಿಧಿಸಿರುವ ರೂ. 119-15-0 ಆಡಿಟ್ ಫೀಸನ್ನು ಕೊಡಬೇಕಾಗಿ ಅಸಿಸ್ಟೆಂಟ್ ರಿಜಿಸ್ಟ್ರಾರರಿಂದ ಬಂದ ಪತ್ರವನ್ನು ಓದಿ ಸದರಿ ಮೊಬಲಗನ್ನು ತಾ. 15-1-40 ರೊಳಗೆ ಪಾವತಿ ಮಾಡುವಂತೆ ಮಂಜೂರ್ಮಾಡಲಾಯಿತು.

16. ನಾರ್ತ್ ಇಂಡಿಯಾ ಇನ್ಶೂರೆನ್ಸ್ ಸೊಸೈಟಿಯು ಕೊಡಗು ಲೋಕಲ್ ಬೋರ್ಡಿನ ಕನ್‌ವೀನರರ ಹೆಸರಿನಲ್ಲಿ ಬ್ಯಾಂಕಿನ ಸೇವಿಂಗ್ಸ್‌ಬ್ಯಾಂಕ್ ಲೆಕ್ಕದಲ್ಲಿರುವ ಮೊಬಲಗು ರೂ. 1859-2-0 ರ ವಸೂಲಾತಿಗೆ ಮದ್ರಾಸು ಡಿಪ್ಯುಟಿ ರಿಜಿಸ್ಟ್ರಾರರ ಕೋರ್ಟಿನಲ್ಲಿ ಸದರಿ ಸೊಸೈಟಿಯು ದಾವೆ ಹಾಕಲು ಹೂಡಿ ಅಲ್ಲಿಂದ ಬ್ಯಾಂಕಿಗೆ ಬಂದಿರುವ ಸಮನನ್ನು ಆಲೋಚಿಸಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು

17. ಬ್ಯಾಂಕಿನ ಇನ್ನೊಂದು ಡೈರೆಕ್ಟರುಗಳ ಮೀಟಿಂಗನ್ನು ತಾ. 20-1-40 ರಲ್ಲಿ ನಡಿಸುವಂತೆ ತೀರ್ಮಾನಿಸಲಾಯಿತು.

18. ಡಿಸೆಂಬರ್ ತಾ. 11-12 ಮತ್ತು 13 ರಲ್ಲಿ ಹೊಸ ಡೆಲ್ಲಿಯಲ್ಲಿ ನಡೆದ ಅಖಿಲ ಭಾರತ ರಿಜಿಸ್ಟ್ರಾರುಗಳ ಸಮ್ಮೇಳನಕ್ಕೆ ಕೊಡಗಿನಿಂದ ಡೆಲಿಗೇಟರಾಗಿ ಹೋಗಿದ್ದ ಬ್ಯಾಂಕು ಪ್ರೆಸಿಡೆಂಟರಾದ ಶ್ರೀ ಪಿ. ಐ. ಬೆಳ್ಯಪ್ಪನವರು ಸದರಿ ಸಮ್ಮೇಳನದ ವಿಷಯ ಬರೆಕೊಂಡ ರಿಪೋರ್ಟನ್ನು ಓದಿ ರಿಕಾರ್ಡು ಮಾಡಲಾಯಿತು.

19. ಬ್ಯಾಂಕಿನ ಉಪಯೋಗಕ್ಕೆ 20 ರೂಪಾಯಿಗಳಿಗೆ ಮೇಲ್ಪಡದೆ ನಾಲ್ಕು ಹೊಸ ಕುರ್ಚಿಗಳನ್ನು ಕೊಂಡುಕೊಳ್ಳಬಹುದೆಂತ ತೀರ್ಮಾನವಾಯಿತು.

20. ಮದ್ರಾಸಿನ ಸಹಕಾರಿ ಸಂಸ್ಥೆಯಲ್ಲಿ ತರಬೇತು ಹೊಂದುತ್ತಿರುವ ಉಮೇದ್ವಾರುಗಳಿಗೆ ಎರಡು ತಿಂಗಳುಗಳ ವರೆಗೆ ಪ್ರಾಕ್ಟಿಕಲ್ ಟ್ರೈಯಿನಿಂಗ್ ಇರುವುದರಿಂದ ಬ್ಯಾಂಕಿನಿಂದ ತಿಂಗಳಿಗೆ ಹತ್ತು ರೂಪಾಯಿ ಮೇರೆ ಎರಡು ತಿಂಗಳು ಸ್ಟೈಪೆಂಡ್ ಕೊಡಬೇಕೆಂದು ಬರೆಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

ಪಿ. ಐ. ಬೆಳ್ಯಪ್ಪ,
ಅಧ್ಯಕ್ಷರು.

ಫ್ರಾನ್ಸ್‌ಗೆ ಭಾರತದ ಹೇಸರ ಕತ್ತೆಗಳು.

'ಯಂತ್ರಯುಗದ ಇಂದಿನ ಯುದ್ಧದಲ್ಲಿ ಹೇಸರ ಕತ್ತೆಗಳಿಂದೇನುಪ್ರಯೋಜನ ಎಂದು ಕೇಳುವವರು ಹಾಸ್ಯ ಮಾಡಬಹುದು. ಒಳ್ಳೆಯ ರಸ್ತೆಗಳಿರುವ ಪ್ರದೇಶದಲ್ಲಿ ಆಧುನಿಕ ವಾಹನಗಳಿಂದ ಸಾಮಾನು ಸರಂಜಾಮುಗಳ ರವಾನೆಯು ಸುಲಭ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಅದರಲ್ಲೂ ಹೆಚ್ಚಿನ ಹಿಮ ಬೀಳುತ್ತಿರುವಾಗ ಆಧುನಿಕ ಯಂತ್ರಗಳು ಕೆಲಸಕ್ಕೆ ಬಾರದವಾಗುತ್ತವೆ. ಈ ಅನುಭವವು ಕಳೆದ ಯುದ್ಧದಲ್ಲಿಯೇ ಉಂಟಾಯಿತು. ಆದುದರಿಂದಲೇ ಈಗ ಫ್ರಾನ್ಸ್‌ಗೆ ಹೇಸರ ಕತ್ತೆಗಳನ್ನು ಭಾರತದಿಂದ ಕಳುಹಿಸಿರುವದು' ಎಂಬುದಾಗಿ ಒಂದು ಪ್ರಕಟಣೆ ತಿಳಿಸುತ್ತಿದೆ.

ರಾಮಘಡ ಕಾಂಗ್ರೆಸ್ ಅಧಿವೇಶನ.

ನೆಚ್ಚದ ಬಾಬುಗಳ ಅಂದಾಜು.

ರಾಮಘಡದಲ್ಲಿ ನಡೆಯುವ ಕಾಂಗ್ರೆಸ್ ಅಧಿವೇಶನದ ಸಲುವಾಗಿ ಕಾಂಗ್ರೆಸ್ ನಗರವನ್ನು ರಚಿಸಲು ಬೇಕಾದ ವೆಚ್ಚ ರಾಮಘಡ ಕಾಂಗ್ರೆಸ್ ಸಮಿತಿಯ ಕಾರ್ಯಸಮಿತಿಯ ಸಭೆಯಲ್ಲಿ ತಾ. 8 ರಲ್ಲಿ ಅನುಮೋದಿತವಾಯಿತು. ಡಿಸ್ಟ್ರಿಕ್ಟುಗಳಿಂದ ವಸೂಲ್ಮಾಡಬೇಕಾದ ಹಣದ ಮೊಬಲಗುಗಳನ್ನು ನಿರ್ಧರಿಸಿತು. ಸ್ವಯಂಸೇವಕರ ದಳ, ವೈದ್ಯ ಸಹಾಯ ಸೌಲಭ್ಯ ಮುಂತಾದ ಅನುಕೂಲಗಳ ವಿಚಾರವೂ ನಿರ್ಧರವಾಯಿತು.

ಡಿಸ್ಟ್ರಿಕ್ಟ್ ವಾರ್ ವಸೂಲಾಗಬೇಕಾಗಿರುವ ಹಣದ ಪಟ್ಟಿ ಕೆಳ ಕಂಡಂತಿದೆ:–

ದರ್ಭಾಂಗ	೪೫,೦೦೦
ಚಂಪಾರಣ್	೨೫,೦೦೦
ಪಾಟ್ನ	೧೫,೦೦೦
ಮೊಂಘೈರ್	೧೬,೦೦೦
ಭಾಗಲ್ಪುರ	೧೫,೦೦೦
ಮುಜಫರಪುರ	೧೫,೦೦೦

ಕಾಂಗ್ರೆಸ್ ಅಧಿವೇಶನಕ್ಕೆ ಪ್ರೇಕ್ಷಕರಾಗಿ ಬರುವವರಿಗಾಗಿ ಟಿಕೇಟು ದರಗಳು ಈ ರೀತಿ ನಿಷ್ಕರ್ಷಿಸಲ್ಪಟ್ಟಿವೆ:–

೫೦ ರೂ, ೧೦೦ ರೂ, ೨೫೦ ರೂ, ೫೦೦ ರೂ, ಮತ್ತು ೧೦೦೦ ರೂ.

ಇನ್ನೂ ಕಡಮೆ ಬೆಲೆಯ ಟಿಕೇಟುಗಳನ್ನು ಆ ಮೇಲೆ ಗೊತ್ತು ಹಚ್ಚಲಾಗುವುದು.

ಮಂಜೂರು ಆಗಿರುವ ಬಜೆಟ್ಟಿನ ವಿಷಯಗಳಾವುವೆಂದರೆ:–

ನಗರ ರಚನೆ, ನೀರು ಸರಬರಾಯಿ, ವಿದ್ಯುಚ್ಛಕ್ತಿ	೧,೧೫,೦೦೦
ಸ್ವಯಂಸೇವಕರಿಗಾಗಿ	೭೦,೦೦೦
ಅಡಿಗೆ ಮನೆ	೧೫,೦೦೦
ಇತರ ಬಾಬುಗಳು	೩೫,೦೦೦
ಪ್ರದರ್ಶನ	೧೦,೦೦೦

ಕೊಡಗು

ಜನವರಿ ತಾರೀಕು ೧೨ ನೇ ಶುಕ್ರವಾರ ೧೯೪೦.

ಹಿಂದೂ - ಮುಸ್ಲಿಂ ಒಗ್ಗಟ್ಟಿನ ಸಮಸ್ಯೆ.

ಹಿಂದೂಸ್ಥಾನದ ಪ್ರಾಮುಖ್ಯ ಮತಸ್ಥರಾದ ಹಿಂದೂ-ಮುಸ್ಲಿಮರೊಳಗೆ ಒಗ್ಗಟ್ಟಾದರೆ ಭಾರತ ಭೂಮಿಯ ಸ್ವಾತಂತ್ರ್ಯದ ಪ್ರಶ್ನೆಯು ಬಹು ಸುಲಭದಲ್ಲಿ ಸಾಧಿಸಲ್ಪಡುವದೆಂಬುವದರಲ್ಲಿ ಸಂದೇಹವಿಲ್ಲ. ಆದುದರಿಂದ ಹಿಂದೂ-ಮುಸ್ಲಿಂ ಒಗ್ಗಟ್ಟಿನ ಸಮಸ್ಯೆಗೆ ಇಷ್ಟೊಂದು ದೊಡ್ಡ ಪ್ರಾಮುಖ್ಯತೆಯು ದೊರೆತ್ತಿರುವದಾಗಿದೆ. ಈ ಸಮಸ್ಯೆಯನ್ನು ಬಿಡಿಸಲು ದೀರ್ಘಕಾಲದಿಂದ ಹಲವು ಪ್ರಯತ್ನಗಳು ಮಾಡಲ್ಪಟ್ಟಿವೆ; ಈಗಲೂ ಮಾಡಲ್ಪಡುತ್ತಿವೆ. ಆದರೂ ಅದು ಇನ್ನೂ ಸಂಪೂರ್ಣವಾಗಿ ತೀರ್ಮಾನಿಸಲ್ಪಟ್ಟಿರುವುದಿಲ್ಲವೆಂಬುದು ಭಾರತದ ದುರ್ದೈವವೆಂದೇ ಭಾವಿಸಬೇಕಾಗಿದೆ.

ಹಿಂದೂಸ್ಥಾನದ ಸ್ವಾತಂತ್ರ್ಯ ಹೋರಾಟವು ಮುಂದೊತ್ತುತ್ತಾ ಬರುತ್ತಿರುವ ಈ ಕಾಲದಲ್ಲಿ ಯೂರೋಪು ಖಂಡದಲ್ಲಿ ಯುದ್ಧವು ಪ್ರಾರಂಭವಾಗಿ, ನಮ್ಮನ್ನಾಳುತ್ತಿರುವ ಬ್ರಿಟಿಷ್ ಸರ್ಕಾರನವರೂ ಅದರಲ್ಲಿ ಭಾಗವಹಿಸುವ ಸಂಭವವುಂಟಾದದ್ದು ಇಂಡಿಯಾದಲ್ಲಿ ಒಂದು ಹೊಸ ಪರಿಸ್ಥಿತಿಯನ್ನುಂಟುಮಾಡಿತು. ಯೂರೋಪಿನಲ್ಲಿ ಚಿಕ್ಕ ರಾಜ್ಯಗಳ ಸ್ವಾತಂತ್ರ್ಯವನ್ನು ಕಾಪಾಡಲು ನಡಿಸುತ್ತಿರುವ ಯುದ್ಧಕ್ಕೆ ಹಿಂದೀಯರ ಸಹಾಯವು ಬೇಕಾಗಿದ್ದಲ್ಲಿ, ಹಿಂದೂ ದೇಶದ ಭವಿಷ್ಯತ್ತಿನ ಯಾ ಸ್ವಾತಂತ್ರ್ಯದ ಕಡೆ ಬ್ರಿಟಿಷರ ಧೋರಣೆ ಏನೆಂಬುದನ್ನು ಸ್ಪಷ್ಟಪಡಿಸಬೇಕೆಂದು ಕಾಂಗ್ರೆಸು ಸಂಸ್ಥೆಯು ನ್ಯಾಯವಾಗಿಯೇ ಕೇಳಿತು. ಇದಕ್ಕೆ ತೃಪ್ತಿಕರವಾದ ಜವಾಬು ದೊರೆಯದ್ದರಿಂದ ಕಾಂಗ್ರೆಸು ಮಂತ್ರಿ ಮಂಡಳಿಗಳು ರಾಜಿನಾಮೆಯನ್ನೂ ಕೊಟ್ಟವು.

ಈ ಬಿಕ್ಕಟ್ಟಿನ ಸಮಯದಲ್ಲಿ ಹಿಂದೂ-ಮುಸ್ಲಿಮರೊಳಗೆ ಒಗ್ಗಟ್ಟನ್ನು ಸಾಧಿಸಲು ಮತ್ತೊಮ್ಮೆ ಯತ್ನಿಸಬೇಕೆಂದು ಮುಂದಾಳುಗಳಿಗೆ ತೋರಿತು. ವೈಸರಾಯರೂ ಇಂಡಿಯಾದ ಮುಂದಿನ ಪಸಾಹತು ಸ್ವರಾಜ್ಯಕ್ಕೆ ಹಿಂದೂ-ಮುಸ್ಲಿಮರ ಸಮಸ್ಯೆಯೊಂದು ಅಡಚಣೆಯಾಗಿದೆಯೆಂದು ಒತ್ತಿ ಹೇಳಿದರು. ಭಾರತ ಭೂಮಿಯು ಸ್ವಾತಂತ್ರ್ಯ ಪಡೆಯಲು ಪ್ರತಿಯೊಬ್ಬ ಭಾರತೀಯನೂ ಕುತೂಹಲಪಡುತ್ತಿರುವ ಈ ಸಂದರ್ಭದಲ್ಲಿ ಹಿಂದೂ-ಮುಸ್ಲಿಂ ಸಮಸ್ಯೆಯು ಹಿಂದೀಯರ ಒಳಗಿನ ಸಮಸ್ಯೆಯೆಂತಲೂ, ಇದನ್ನು ಸ್ವಾತಂತ್ರ್ಯಕ್ಕೆ ಅಡಚಣೆಯಾಗಿ ಒಡ್ಡುವುದು ಒಂದು ನೆವಮಾತ್ರವಾಗಿದೆಯೆಂತಲೂ, ಇಲ್ಲಿ ಪರದೇಶೀಯರು ಅಧಿ

ಸರಿಪಡಿಸುವುದು ಸುಲಭ ಸಾಧ್ಯವಲ್ಲವೆಂತಲೂ ಕಾಂಗ್ರೆಸ್ಸಿನವರು ವೈಸರಾಯರಿಗೆ ಉತ್ತರವಿತ್ತಿರುವರು. ಆದರೂ ಕೂಡ ಈ ಸಂಬಂಧ ಕಾಂಗ್ರೆಸು ಮುಂದಾಳುಗಳೂ, ಮುಸ್ಲಿಂಲೀಗಿನ ಮುಂದಾಳೂ ವೈಸರಾಯರ ಭೇಟಿಗೆ ಹೋಗಿದ್ದ ಕಾಲದಲ್ಲಿ ತಮ್ಮೊಳಗಿನ ಒಡಕನ್ನು ಸರಿಪಡಿಸಲು ಪ್ರಯತ್ನಿಸಬೇಕೆಂದು ನಿಶ್ಚಯಿಸಿದರು. ಇದಕ್ಕಾಗಿ ಪಂಡಿತ ಜವಾಹರಲಾಲ್ ನೆಹರವರು ಮತ್ತು ಜಿನ್ನಾರವರೊಳಗೆ ಬೇಗನೆ ಸಂಧಾನಗಳು ನಡೆಯಬೇಕೆಂದು ತೀರ್ಮಾನವಾಯಿತು. ಈ ಮಧ್ಯೆ ಜಿನ್ನಾರವರು ಅವರ ಈದ್ ಹಬ್ಬದಲ್ಲಿ ಮಾಡಿದ ಒಂದು ಭಾಷಣವೂ ಇದಕ್ಕೆ ಅನುಗುಣವಾಗಿಯೇ ಕಂಡು ಬಂತು.

ಆದರೆ ಈ ಸಂಭಾಷಣೆಯನ್ನು ನಡಿಸಲಿಕ್ಕಾಗಿ ದಿನ ನಿಶ್ಚಯ ಮಾಡಲು ಪತ್ರವ್ಯವಹಾರಗಳು ನಡಿಯುತ್ತಿರುವುದರ ಮಧ್ಯೆ ಜಿನ್ನಾರವರು-ಕಾಂಗ್ರೆಸ್ ಸರ್ಕಾರದವರು ಅಧಿಕಾರ ತ್ಯಜಿಸಿದ್ದು ತಮಗೊಂದು ವಿಮೋಚನಾ ದಿನವೆಂದು ಡಿಸಂಬರು ತಾ. 22ನ್ನು ಆಚರಿಸಬೇಕೆಂದು ಮುಹಮ್ಮದೀಯ ಮತಸ್ಥರಲ್ಲಿ ವಿನಂತಿ ಮಾಡಿಕೊಂಡರು. ಕಾಂಗ್ರೆಸ್ ಮಂತ್ರಿ ಮಂಡಳಿಗಳು ತಮ್ಮ ಅಧಿಕಾರದಲ್ಲಿ ಮುಸ್ಲಿಮರಿಗೆ ತುಂಬಾ ಅನ್ಯಾಯ ಮಾಡಿದರೆಂಬುದೇ ಇದಕ್ಕೆ ಕಾರಣವೆಂದು ಸೂಚಿಸಿದರು. ಈ ಆರೋಪಣೆಯಲ್ಲಿ ಹುರುಳಿಲ್ಲವೆಂದಲೂ, ಇದನ್ನು ಬೇಕಾದರೆ ನಿಷ್ಪಕ್ಷಪಾತದ ವ್ಯಕ್ತಿಯಿಂದ ವಿಚಾರಿಸಬಹುದೆಂತಲೂ, ಒಗ್ಗಟ್ಟಿನ ಸಂಧಾನ ನಡಿಸಬೇಕೆಂದಿರುವ ಈ ಸಮಯದಲ್ಲಿ ಹಿಂದೂ-ಮುಸ್ಲಿಮರೊಳಗೆ ವೈಮನಸ್ಯವನ್ನು ಹೆಚ್ಚಿಸುವ ಈ 'ವಿಮೋಚನಾ ದಿನ'ವನ್ನು ಆಚರಿಸುವದನ್ನು ನಿಲ್ಲಿಸುವದು ಉತ್ತಮವೆಂದೂ ಕಾಂಗ್ರೆಸ್ ಮುಂದಾಳುಗಳೇ ಮಾತ್ರವಲ್ಲ; ಹಲವು ಮುಸ್ಲಿಂ ಧುರೀಣರೂ ಜಿನ್ನಾರವರಿಗೆ ಅಪೀಲು ಮಾಡಿದರೂ ಕೂಡ ಅವರು ಗಮನಿಸದೆ ಆ ದಿನವನ್ನು ಆಚರಿಸಿಯೇ ಬಿಟ್ಟರು. ಈ ವಿಚಾರವನ್ನೆತ್ತಿ ಬರೆದಾಗ್ಯೆ ಜಿನ್ನಾರವರು ಪಂಡಿತ ನೆಹರುರವರಿಗೆ ತೃಪ್ತಿಕರವಾದ ಉತ್ತರವನ್ನೇ ಕೊಡಲಿಲ್ಲ. ಇದರೊಂದಿಗೆ ಮುಸ್ಲಿಂ ಲೀಗನ್ನು ಮಹಮ್ಮದೀಯರೆಲ್ಲರ ಪ್ರತಿನಿಧಿ ಸಂಸ್ಥೆಯೆಂದು ಕಾಂಗ್ರೆಸು ಒಪ್ಪಿಕೊಂಡ ವಿನಹ ರಾಜಿ ಸಂಧಾನ ನಡಿಸಲು ಸಾಧ್ಯವಿಲ್ಲವೆಂದೂ ಜಿನ್ನಾರವರು ಬರೆದರು. ಮುಸ್ಲಿಂ ಲೀಗ್ ಮುಸಲ್ಮಾನ

ರೂ ಅದಕ್ಕೆ ಸೇರದೇ ಕಾಂಗ್ರೆಸ್ಸು, ಜಮಿಯುತುಲೆಮ, ಶಿಯಾ ಸಂಘ, ಮಜಲಿಸ್ ಅಹರಾರ್, ಮೊಮಿನ್ ಸಂಘ ಮೊದಲಾದ ಸಂಸ್ಥೆಗಳಿಗೆ ಸೇರಿರುವ ಮಹಮ್ಮದೀಯರನೇಕರಿರುವರು. ಮುಸ್ಲಿಂಲೀಗ್ ಒಂದನ್ನೇ ಮುಸ್ಲಿಮರ ಪ್ರತಿನಿಧಿ ಸಂಘವೆಂದು ಒಪ್ಪಿಕೊಂಡರೆ ಈ ಬೇರೆ ಸಂಘಗಳ ಮುಸ್ಲಿಮರನ್ನು ಬಿಟ್ಟಂತಾಗುವದು. ಆದಕಾರಣ ಇದು ಸಾಧ್ಯವಿಲ್ಲವೆಂದು ಪಂಡಿತ ನೆಹರೂರವರ ಉತ್ತರವಾಗಿದೆ. ಮಾತ್ರವಲ್ಲ, ಮುಸ್ಲಿಂ ಲೀಗು ಮುಸಲ್ಮಾನರ ಪ್ರತಿನಿಧಿ ಸಂಸ್ಥೆಯೆಂದು ಒಪ್ಪಿಕೊಂಡ ಕೂಡಲೆ ಕಾಂಗ್ರೆಸ್ ಸಂಸ್ಥೆಯು ಮಹಮ್ಮದೀಯರ ಸಂಸ್ಥೆಯಲ್ಲವೆಂದೂ, ಅದು ಬರೀ ಹಿಂದೂಗಳ ಒಂದು ಕೋಮುವಾರು ಸಂಸ್ಥೆಯೆಂದೂ ಒಪ್ಪಿಕೊಂಡಂತಾಗುವದು. ಇದು ನಿಜಸ್ಥಿತಿಗೆ ವಿರುದ್ಧವಾಗುವುದು ಮತ್ತು ಕಾಂಗ್ರೆಸ್ ಸಂಸ್ಥೆಯ ಶಕ್ತಿಯನ್ನು ಕುಂದಿಸುವುದು. ಅಲ್ಲದೆ, ಕಾಂಗ್ರೆಸು ಒಪ್ಪಿಕೊಂಡಾಕ್ಷಣ ಮುಸ್ಲಿಂ ಲೀಗ್ ಮಹಮ್ಮದೀಯರ ಪ್ರತಿನಿಧಿ ಸಂಘವಾಗಿ ಬಿಡುವುದಿಲ್ಲ. ಅದು ತನ್ನ ಸೇವಾ ಕಾರ್ಯಗಳಿಂದಲೇ ಪ್ರತಿನಿಧಿ ಸಂಘವಾಗಬೇಕಲ್ಲದೆ ಅನ್ಯಥಾ ಅಲ್ಲ. ಇಂದು ಕಾಂಗ್ರೆಸ್ ಸಂಸ್ಥೆಯು ಭಾರತೀಯರ ಪ್ರತಿನಿಧಿ ಸಂಸ್ಥೆಯೆಂದು ಕರೆಸಿಕೊಂಡಿರುವದಾದರೂ ಅದು ಮಾಡಿರುವ ಅದ್ವಿತೀಯವಾದ ತ್ಯಾಗ, ದೇಶ ಸೇವೆ, ಅನುಭವಿಸಿರುವ ಕಷ್ಟ ಪರಂಪರೆಗಳು-ಇವುಗಳಿಂದಲೇ ಆಗಿದೆ.

ಇವೆಲ್ಲಾ ಕಾರಣಗಳಿಂದ ನೆಹರು-ಜಿನ್ನಾರವರೊಳಗೆ ನಡೆಯಬೇಕಾಗಿದ್ದ ಮಾತುಕತೆಗಳು ನಿಂತು ಹೋಗಿವೆ. ಇದಕ್ಕಾಗಿ ಇವರಿಬ್ಬರೊಳಗೆ ನಡೆದ ಪತ್ರವ್ಯವಹಾರಗಳು ಪ್ರಕಟವಾಗಿವೆ. ಇದು ದುಃಖದ ವಿಷಯ. ಎಲ್ಲರ ಆಶೆಯಾದ ಅಮೂಲ್ಯವಾದ ಸ್ವಾತಂತ್ರ್ಯದ ಗುರಿಯನ್ನು ಯಾರೂ ಮರೆಯಬಾರದು. ಮುಸ್ಲಿಂ ಲೀಗ್ ಸಹೋದರರು ಈ ವಿಚಾರ ತುಂಬಾ ಆಲೋಚಿಸಬೇಕಾಗಿದೆ. ಅವರ ಮುಂದಾಳುಗಳು ಯಾರೇ ಆಗಲಿ, ಅವರು ತಮ್ಮ ಮಾತೃಭೂಮಿಯ ಸ್ವಾತಂತ್ರ್ಯಕ್ಕೆ ಅಡ್ಡಿ ಬಾರದಂತೆ ನೋಡಿಕೊಳ್ಳುವುದು ಅವರ ಕರ್ತವ್ಯವಾಗಿದೆ.

ಭಾರತ ಸಮಸ್ಯೆಯು ತೀರಿದ್ದಲ್ಲದೆ ಮಂತ್ರಿಗಳು ಪುನಹ ಅಧಿಕಾರ ಸ್ವೀಕಾರ ಮಾಡರು.

ಸರ್ದಾರ ಪಟೇಲರ ಉದ್ಘೋಷ.

'ಕಾಂಗ್ರೆಸಿನ ಇಂದಿನ ಧ್ಯೇಯವಾದ ರಾಜ್ಯಘಟನಾಸಮಿತಿಯ ನೇಮಕವಾಗುವವರೆಗೆ ಕಾಂಗ್ರೆಸು ಅಧಿಕಾರ ಸ್ವೀಕಾರ ಮಾಡುವ ಕಡೆಗಾಗಲೀ ಇಂದಿನ ಮುಸ್ಲಿಂ ಲೀಗಿನ ಕಡೆಗಾಗಲೀ ಕಣ್ಣೆತ್ತಿ ನೋಡದು. ಕಾಂಗ್ರೆಸ್ಸಿಗರ ಕೇಳಿಕೆಯು ಬ್ರಿಟಿಷ್ ಸರಕಾರದಿಂದ ಸಲ್ಲಿಸಲ್ಪಟ್ಟು ಕಾಂಗ್ರೆಸು ನವಚೈತನ್ಯದಿಂದ ಅಭಿವೃದ್ಧಿಗೊಂಡಾಗಲೇ ಅದು ಇನ್ನು ಮಂತ್ರಿಪದವನ್ನು ಸ್ವೀಕರಿಸುವದು' ಎಂದು ಸರ್ದಾರ ವಲ್ಲಭಭಾಯಿ ಪಟೇಲರು ಅಲ್ಲಹಾಬಾದಿನ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದರು. ಮುಂದರಿಸುತ್ತಾ, 'ಮುಸ್ಲಿಂಲೀಗು ಕಾಂಗ್ರೆಸಿನೊಡನೆ ಸಹಕರಿಸಲು ತಿರಸ್ಕರಿಸುವ ಪ್ರಯುಕ್ತ ಮುಂದೆ ಅವರೊಡನೆ ಸಂಧಾನವು ಅನಾವಶ್ಯವೆಂದು ವರ್ಕಿಂಗ್ ಕಮಿಟಿಯು ಸಾರಿದೆ. ಮುಸ್ಲಿಂ ಲೀಗಿನ ಕೇಳಿಕೆಯಂತೆ ಲೀಗನ್ನು ಮುಸ್ಲಿಮರ ಏಕ ಮಾತ್ರ ಸಂಸ್ಥೆಯೆಂದು ಕಾಂಗ್ರೆಸು ಒಪ್ಪಿಕೊಂಡಿದ್ದ ಪಕ್ಷಕ್ಕೆ ಕಾಂಗ್ರೆಸು ಆತ್ಮಹತ್ಯೆ ಮಾಡಿಕೊಂಡಂತಾಗುತ್ತಿತ್ತು. ಕಾಂಗ್ರೆಸು ಮುಸ್ಲಿಂ ಲೀಗನ್ನು ಬಹುಮತ ಮುಸ್ಲಿಮರ ಪ್ರತಿನಿಧಿ ಸಂಸ್ಥೆಯೆಂದು ಅಂಗೀಕರಿಸಿದೆ. ಆದ ಪ್ರಯುಕ್ತವೇ ಕಾಂಗ್ರೆಸು ಮುಸ್ಲಿಂ ಲೀಗಿನೊಡನೆ ಸಂಧಾನ ಪ್ರಯತ್ನ ಮಾಡುವದಾಗಿದೆ. ಯಾವುದೊಂದು ತೀರ್ಮಾನವಾಗಬೇಕಾದರೂ ಎರಡು ಕಡೆಯವರೂ ಕಾತುರರಾಗಿರಬೇಕು. ಆದರೆ ಮುಸ್ಲಿಂ ಲೀಗು ಪಟ್ಟಿಷ್ಟು ಉಳಿದಿರುವ ಪ್ರಯುಕ್ತ ಸಂಧಾನವು ಅಸಾಧ್ಯ ಕಂಡು ಬಂದಿದೆ. ಕಾಂಗ್ರೆಸು ರಾಜ್ಯಘಟನಾಸಮಿತಿಯ ನೇಮಕದ ಬಗ್ಗೆ ತನ್ನ ಕೇಳಿಕೆಯನ್ನು ಮುಂದಿಟ್ಟಿದೆ. ಹಿಂದೂ-ಮುಸ್ಲಿಮರಿಗೆ ಪ್ರತ್ಯೇಕ ಪ್ರತ್ಯೇಕ ಚುನಾವಣೆಯನ್ನಿಟ್ಟು ಮತಕೊಡುವ ಹಕ್ಕನ್ನು ಹೆಚ್ಚಿಸಿ ಮೇಲ್ಕಂಡ ರಾಜ್ಯಘಟನಾಸಮಿತಿಯನ್ನು ನೇಮಿಸುವದೆಂದು ಕಾಂಗ್ರೆಸು ಕೇಳಿದ ಹಿಂದೂ-ಮುಸ್ಲಿಮರೊಳಗಿನ ಭಿನ್ನಭೇದವು ಅಂತ್ಯಕ್ಕೀಕರವಾದಷ್ಟು ಅವರ ತೀರ್ಮಾನದ ಬಗ್ಗೆ ಮೂರನೇ ಪಂಗಡದವರು ತಾಪಪಡಬೇಕಾದ್ದಿಲ್ಲ. ವಿಶಾಲ ಭಾರತದ ಮುಸ್ಲಿ ಸಹೋದರರು ಇಂದು ತಪ್ಪು ಹೆಜ್ಜೆ ಇಡುತ್ತಿರುವ ಮುಸ್ಲಿಂಲೀಗಿನ ಮುಖಂಡರ ವರ್ತನೆಯನ್ನು ಖಂಡಿಸಿರುವರು. ಹಿಂದೂದೇಶವು ಪ್ರಜಾಪ್ರಭುತ್ವಕ್ಕೆ ಯೋಗ್ಯವಾಗಿಲ್ಲವೆಂಬುದು, ಹಿಂದೂಸ್ಥಾನವು ಗುಲಾಮಗಿರಿಗೇ ಯೋಗ್ಯವೆಂದು ಹೇಳಿದಂತಾಯಿತು.'

ಸ್ವಾತಂತ್ರ್ಯದಿನಾಚರಣೆಯ ವಿಚಾರ ಹೇಳುತ್ತಾ, 'ಲಾಹೋರು ಕಾಂಗ್ರೆಸಿನ ನಂತರ ಅದು ವರ್ಷಂಪ್ರತಿ ಆಚರಿಸಲ್ಪಡುತ್ತಿದೆ. ಆದರೆ ಈಗ ಪ್ರತಿಜ್ಞೆಗೆ ಒಂದು ಅಂಶವನ್ನು ಸೇರಿಸಿ, ಪ್ರತಿಜ್ಞೆಯು ಕಾರ್ಯರೂಪಕ್ಕೆ ಬರುವಂತೆ ಮಾಡಿದೆ. ಮಹಾತ್ಮ ಗಾಂಧೀಯವರ ಮುಖಂಡತ್ವವನ್ನು ಒಪ್ಪುವವರು ಭಾರತ ವಿಮೋಚನೆಗೆ ಹೊಸ ಮಾರ್ಗತೋರಿಸಿ, ಜನತೆಯನ್ನು ಮುನ್ನಡೆಸುವಲ್ಲಿ ಅಭ್ಯಂತರವಿಲ್ಲ. ಆದರೆ ಕ್ರಮೇಣ ಇಂದಿನ ಯುದ್ಧಾಂತ್ಯದಲ್ಲಿ ಭಾರತ ಗಗನದಲ್ಲಿ ಉದಯಿಸಿರುವ ಭಿನ್ನಾಭಿಪ್ರಾಯಗಳು ಮಾಯವಾಗಿ ಗಾಂಧೀತತ್ವವೇ ವಿಜಯಪತಾಕೆಯನ್ನು ಹಿಡಿದು ನಿಲ್ಲುವದೆಂಬುದು ನಿಃಸಂಶಯದ ಮಾತು. ಮಹಾತ್ಮರಿಂದ ಬೋಧಿಸಲ್ಪಡುತ್ತಿರುವ ಅಹಿಂಸಾ, ಸತ್ಯಗಳು ಜಗತ್ತನ್ನೇ ರಕ್ಷಿಸುವವು.' ಎಂದು ಸರ್ದಾರರು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಒಳದೇಶ.

ಶ್ರೀ. ಬಿದ್ದಾಟಂಡ ತಿಮ್ಮಯ್ಯ ಬಿ. ಯಸ್. ಸಿ.ಯವರನ್ನು ಮೈಸೂರು ಸರ್ಕಾರದವರು ರೇಂಜರ್ಸ್ ತರಬೇತಿಗೆ ಆರಿಸಿರುವರೆಂದು ತಿಳಿದು ಸಂತೋಷಪಡುತ್ತೇವೆ.

ಮೈಸೂರಿನ ಎಕ್ಸಿಕ್ಯುಟಿವ್ ಕೌನ್ಸಿಲಿನ ಸದಸ್ಯರಾದ ಸರ್ ಜಗದೀಶಪ್ರಸಾದರವರು ಇಲ್ಲಿಗೆ ತಾ. 5ರಲ್ಲಿ ಬಂದು 7ರಲ್ಲಿ ಹೋದರಷ್ಟೆ. ಈ ಸಂದರ್ಭದಲ್ಲಿ ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳು ಕೌನ್ಸಿಲ್ ಹಾಲ್‍ನಲ್ಲಿ ಅವರಿಗೊಂದು ಬಿನ್ನಹ ಪತ್ರವನ್ನು ಅರ್ಪಿಸಿದರು. ಅವರು ತಾ. 6ರಲ್ಲಿ ವೀರಾಜಪೇಟೆಗೆ ಹೋಗಿ, ಅಲ್ಲಿ ಜೇನು ಮತ್ತು ಮೇಣ ಸಂಘ, ಭತ್ತದ ಸ್ಟೋರು ಮತ್ತು ಆಸ್ಪತ್ರೆ ಇವುಗಳನ್ನು ಸಂದರ್ಶಿಸಿ ಪೊನ್ನಂಪೇಟೆಯಲ್ಲಿ ಕೆಲವು ಕಾಫಿ ತೋಟಗಳನ್ನು ನೋಡಿಕೊಂಡು ವಾಪಸು ಮಡಿಕೇರಿಗೆ ಬಂದು, ಇಲ್ಲಿ ಆಸ್ಪತ್ರೆಯನ್ನೂ ಸಂದರ್ಶಿಸಿದರಾಗಿ ತಿಳಿಯುತ್ತೇವೆ.

ಡೆಲ್ಲಿಯಲ್ಲಿರುವ ಇಂಪೀರಿಯಲ್ ವ್ಯವಸಾಯ ಪರಿಶೋಧನಾ ಸಮಿತಿಯ ಉಪಾಧ್ಯಕ್ಷರಾದ ಮಿ. ಕಾರಗಾಟ್ ಐ. ಸಿ. ಯಸ್. ರವರು ಈ ತಾರೀಕು 10ರಲ್ಲಿ ಮೈಸೂರಿನಿಂದ ಮಡಿಕೇರಿಗೂ, ಅಲ್ಲಿಂದ ವೀರಾಜಪೇಟೆಗೂ ಹೋಗಿ, ಜೇನುಮೇಣ ಸಂಘವನ್ನೂ, ಭತ್ತದ ಸ್ಟೋರನ್ನೂ ಸಂದರ್ಶಿಸಿದರೆಂದೂ, ಸೋಮವಾರಪೇಟೆ ಬಳಿ ಕೆಲವು ಕಾಫಿ ತೋಟಗಳನ್ನೂ, ಮರುದಿನ ಮಡಿಕೇರಿಯಲ್ಲಿ ಸಹಕಾರಿ ಸೆಂಟ್ರಲ್ ಬ್ಯಾಂಕನ್ನೂ ಸಂದರ್ಶಿಸಿ, ಮೈಸೂರಿಗೆ ವಾಪಸು ಹೋದರೆಂದೂ ತಿಳಿಯುತ್ತೇವೆ.

ದಕ್ಷಿಣಕೊಡಗು ಸುಂಕದ ಕಟ್ಟೆಗಳ ಸುಂಕ ವಸೂಲಾತಿಯ ಹರಾಜು ಫೆಬ್ರವರಿ ತಾ. 7ರಲ್ಲಿ ವೀರರಾಜಪೇಟೆಯಲ್ಲೂ ಶನಿವಾರ ಸಂತೆ ನಾಡಿನ ಸುಂಕದ ಕಟ್ಟೆಗಳ ಹರಾಜು ಫೆಬ್ರವರಿ ತಾ. 10ರಲ್ಲಿ ಶನಿವಾರ ಸಂತೆಯಲ್ಲಿಯೂ, ಉಳಿದ ಟೋಲ್‍ಗೇಟುಗಳ ಹರಾಜು ಫೆಬ್ರವರಿ 2ರಲ್ಲಿ ಮಡಿಕೇರಿಯಲ್ಲಿ ನಡೆಯುವದೆಂದೂ, ಸಂತೆ ಪಸರಾಯಿ ಎತ್ತುವಳಿಯ ಹರಾಜು ಫೆಬ್ರವರಿ ತಾ. 2ರಲ್ಲಿ ಮಡಿಕೇರಿಯಲ್ಲಿಯೂ, 3ರಲ್ಲಿ ಸೋಮವಾರಪೇಟೆಯಲ್ಲೂ, 4ರಲ್ಲಿ ರಾಮಪುರ, ಕುಟ್ಟ, ಮತ್ತು ಸುಂಟಿಕೊಪ್ಪದಲ್ಲೂ, 8ರಲ್ಲಿ [illegible]ನಲ್ಲಿಯೂ, 10ರಲ್ಲಿ ಶನಿವಾರಸಂತೆಯಲ್ಲೂ, 11ರಲ್ಲಿ ಸಿದ್ದಾಪುರದಲ್ಲಿಯೂ, 20ರಲ್ಲಿ ಅಮ್ಮತ್ತಿಯಲ್ಲಿಯೂ, 25ರಲ್ಲಿ ಗೋಣಿಕೊಪ್ಪಲಿನಲ್ಲಿಯೂ, 26ರಲ್ಲಿ ಮಡಿಕೇರಿಯಲ್ಲಿಯೂ ನಡೆಯುವವೆಂದೂ ತಿಳಿದುಬರುತ್ತದೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 135, ಏಲಕ್ಕಿ ಮಣಕ್ಕೆ ರೂ. 32ರ ಪಡಿಗೆ ಕ್ರಯವಿದೆ.

ಕಮಿಷನರವರು ತಾ. 11ರಲ್ಲಿ ಬೆಂಗಳೂರಿಗೆ ಹೋಗಿರುವರಾಗಿ ತಿಳಿದುಬರುತ್ತದೆ.

ಮಡಿಕೇರಿ ಸುತ್ತುಮುತ್ತಲಿನ ಕೊಡವರ ಸಂಘವನ್ನು ಪುನರ್ಘಟನೆಗೊಳಿಸಲಿಕ್ಕಾಗಿ ಈ ತಾರೀಕು 14ರಲ್ಲಿ ಇಲ್ಲಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ಕೊಡವರ ಸಭೆಯೊಂದು ಸೇರುವದೆಂದು ತಿಳಿಯುತ್ತೇವೆ.

ಕಮಿಷನರು ತಾ. 22ರಲ್ಲಿ ಫ್ರೇಜರ್ ಪೇಟೆಗೆ ಹೋಗಿ ಎರಡುದಿನ ಅಲ್ಲಿರುವರೆಂದು ತಿಳಿದುಬಂದಿದೆ.

ತಾ. 2-2-40ರಲ್ಲಿ ಇಲ್ಲಿಯ ಹೈಸ್ಕೂಲಿನಲ್ಲಿ ಯುದ್ಧದಲ್ಲಿ ಭಾಗವಹಿಸಿದ ಹಿಂದೂ ಸೈನಿಕರ ಸಹಾಯಾರ್ಥವಾಗಿ ಧನ ಸಂಗ್ರಹಿಸಲು ರೆಡ್‍ಕ್ರಾಸ್ ಸಂಘದವರ ಆಶ್ರಯದಲ್ಲಿ ಒಂದು ಪ್ರದರ್ಶನವು ನಡೆಯಲಿರುವದು.

ಬೆಂಗಳೂರು ರಾಮಕೃಷ್ಣಾಶ್ರಮದ ಶ್ರೀ ಯಾಸಾನಂದಜೀಯವರು ಇಲ್ಲಿಯ ವೇದಾಂತ ಸಂಘದ ಆಶ್ರಯದಲ್ಲಿ ತಾ. 8ರಲ್ಲಿ ಹೈಸ್ಕೂಲ್ ಹಾಲ್‍ನಲ್ಲೂ, ಮರುದಿನ ವೇದಾಂತ ಸಂಘದಲ್ಲೂ ಭಾಷಣಗಳನ್ನು ಮಾಡಿದರು.

ತಾ. 26-1-40ರಲ್ಲಿ ಅಂಬರೆ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಇಲ್ಲಿಯ ಜಮೀನ್ದಾರರ ಸಂಘದ ಹಾಲ್‍ನಲ್ಲಿ ಶ್ರೀ ಗೋಪಾಲದಾಸರು 'ಶೃಂಗಾರ ಭಾರತಿ' ಎಂಬ ಹರಿಕಥೆಯನ್ನು ಮಾಡುವರೆಂದೂ ಎಲ್ಲರಿಗೂ ಆಹ್ವಾನವಿದೆಯೆಂದೂ ವರ್ತಮಾನ.

ವೀರಾಜಪೇಟೆ

ಇಲ್ಲಿ ಬತ್ತ ಗಾಡಿಗೆ ರೂ. 44 ಕ್ರಯವಿರುತ್ತೆ.

ಸೋಮವಾರಪೇಟೆ.

ಶ್ರೀಮತಿ ಡಿ. ನಾಕಮ್ಮನವರಿಗೆ ಮೈಸೂರು ಸರ್ಕಾರವು ದಯಪಾಲಿಸಿರುವ 'ಲೋಕಸೇವಾ ಪರಾಯಣೆ' ಎಂಬ ಬಿರುದಿನ ಸಂತೋಷಾರ್ಥವಾಗಿ ಇಲ್ಲಿಯ ನಾಡಿನ ಮತ್ತು ಟೌನಿನ ನಿವಾಸಿಗಳು ತಾ. 16-1-40ರಲ್ಲಿ ಅವರಿಗೆ ಒಂದು ಬಿನ್ನವತ್ತಳೆಯನ್ನು ಕೊಡುವರಾಗಿ ತಿಳಿಯುತ್ತೇವೆ.

ಗೋಣಿಕೊಪ್ಪಲು.

ಇಲ್ಲಿಯ ಜಾನುವಾರುಗಳ ಪ್ರದರ್ಶನವು ಫೆಬ್ರವರಿ ತಾ. 9, 10 ಮತ್ತು 11 ಈ ಮೂರು ದಿನಗಳಲ್ಲಿ ನಡೆಯುವದೆಂದು ತಿಳಿದು ಬಂದಿದೆ.

ನಿಧನ ವಾರ್ತೆ.

ಹೊದ್ದೂರು ಕಟ್ಟೆಮಾಡು ಗ್ರಾಮದ ಮಿ. ಬಿದ್ದಂಡ ಯಂ. ಸುಬ್ಬಯ್ಯನವರು ಈ ದಿನ ಬೆಳಿಗ್ಗೆ ಮಡಿಕೇರಿ ಆಸ್ಪತ್ರೆಯಲ್ಲಿಯೂ, ನಿವೃತ್ತ ಕಣಿಕೆದಾರರಾದ ಶ್ರೀ. ಎ. ಪಿ. ಸುಬ್ಬಯ್ಯನವರು ತಾ. 6-1-40ರಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಹಿಂದೂದೇಶ.

ಹಿಂದೂಸ್ಥಾನದಲ್ಲಿ ನೆಲಸಿರುವ ಐರೋಪ್ಯರ ಪೈಕಿ ಸುಮಾರು 13,000 ಮಂದಿ ಸೈನ್ಯ ಶಿಕ್ಷಣವನ್ನು ಪಡೆಯಲು ತಾವು ಸಿದ್ಧರಾಗಿರುವರೆಂದೂ, ಯಾರ ಒತ್ತಾಯವೂ ಇಲ್ಲದೆ ತಾವೇ ತಮ್ಮ ಹೆಸರನ್ನು ದಾಖಲು ಮಾಡಿಸಿರುತ್ತಾರೆ.

ಇಂಡಿಯಾ ಸರ್ಕಾರದವರ ನೇರವಾ ಮೇಲ್ವಿಚಾರಣೆಗೆ ಒಳಪಟ್ಟಿರುವ, ದೇಶೀಯ ಸಂಸ್ಥಾನಗಳಲ್ಲಿರುವ, ಬ್ರಿಟಿಷ್ ಇಂಡಿಯಾಗೆ ಸೇರಿದ ಭೂಪ್ರದೇಶಗಳಲ್ಲಿ, ಶಾಂತಿಯನ್ನೂ ಶಿಸ್ತನ್ನೂ ಕಾಪಾಡುವ ಉದ್ದೇಶದಿಂದ, ಆಯಾ ಸಂಸ್ಥಾನದ ಪೊಲೀಸ್ ಇಲಾಖೆಯವರಾಗಲಿ, ಆ ಸಂಸ್ಥಾನಕ್ಕೆ ಸಂಬಂಧಪಟ್ಟ ರಾಜಕೀಯ ಏಜೆಂಟರ ಅನುಮತಿ ಪಡೆದು ಆ ಸಂಸ್ಥಾನದ ಶಾಂತಿಯನ್ನೂ ಶಿಸ್ತನ್ನೂ ಕಾಪಾಡುತ್ತಿರುವ ಬ್ರಿಟಿಷ್ ಸೈನಿಕರಾಗಲಿ ಪ್ರವೇಶಿಸಿ, ಒಬ್ಬ ಮ್ಯಾಜಿಸ್ಟ್ರೇಟರ ಹುಕುಮಿನಸಾರವಾಗಿ ವರ್ತಿಸಿ, ಅಲ್ಲಿ ಸೇರಿರುವ ನ್ಯಾಯ ವಿರುದ್ಧವಾದ ಜನಸಮೂಹವನ್ನು ಚದುರಿಸಲು ಅವಶ್ಯಕೋರಿದ ಮಾರ್ಗವನ್ನೂ ಶಕ್ತಿಯನ್ನೂ ಪ್ರಯೋಗಿಸಲು ಅವಕಾಶ ಕೊಡತಕ್ಕ ಒಂದು ಹೊಸ ಕಾನೂನನ್ನು ಇಂಡಿಯಾ ಸರ್ಕಾರದವರು ಜಾರಿಗೆ ತಂದಿರುತ್ತಾರೆ.

ಪಂಡಿತ ಜವಾಹರಲಾಲ್ ನೆಹರೂಯವರು ಕಳೆದ ವಾರ ಅಮೃತಸರದಲ್ಲಿ ನಡೆದ ಅಖಿಲ-ಹಿಂದೂಸ್ಥಾನದ ಸ್ಟೇಟ್ಸ್ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಕುದುರೆಯ ಮೇಲೆ ಕುಳಿತು ಮೆರವಣಿಗೆ ಹೋಗುತ್ತಿದ್ದಾಗ ಅವರು ಕುದುರೆಯಿಂದ ಬಿದ್ದುಬಿಟ್ಟರು. ಅವರಿಗೆ ಹೆಚ್ಚಿನ ತೊಂದರೆಗಳಾಗಲಿಲ್ಲ. ಪಂಡಿತರನ್ನು ಸ್ವಾಗತಿಸಲು ಸೇರಿದ್ದ ಜನಸ್ತೋಮವು ಹತೋಟಿ ಮೀರಿ ನುಗ್ಗಿಬಿಟ್ಟಿತು. ಜನರ ಗದ್ದಲವೂ ನೂಕಾಟವೂ ತಡೆಯಲಸಾಧ್ಯವಾಗಿದ್ದಿತು. ಪಂಡಿತರು ಆ ಜನರನ್ನು ಶಾಂತಿಯಿಂದಲೂ ಶಿಸ್ತಿನಿಂದಲೂ ವರ್ತಿಸಬೇಕೆಂದು ಪ್ರಾರ್ಥಿಸುತ್ತಾ ಕುದುರೆಯ ಮೇಲೆ ಓಡಾಡುತ್ತಿದ್ದಾಗ ಅವರು ಬಿದ್ದುಬಿಟ್ಟರೆಂದು ಹೇಳಲಾಗಿದೆ. ಜನರು ಶಿಸ್ತಿಲ್ಲದೆ ಈ ರೀತಿ ಗಲಭೆ ಮಾಡಿದುದಕ್ಕಾಗಿ ಅವರು ಪ್ರಾಯಶ್ಚಿತ್ತಾರ್ಥವಾಗಿ 48 ಗಂಟೆಗಳ ಕಾಲ ಉಪವಾಸ ಮಾಡಿದರು.

ತಿರುವಾಂಕೂರು ನ್ಯಾಷನಲ್ ಮತ್ತು ಕ್ವಿಲಾನ್ ಬ್ಯಾಂಕಿನ ಮಾಜಿ ಡೈರೆಕ್ಟರುಗಳು ಲೆಕ್ಕ ಪತ್ರಗಳನ್ನು ತಿದ್ದಿ ಮೋಸಪಡಿಸಿ ನಂಬಿಕೆ ದ್ರೋಹಮಾಡಿದರೆಂದು ನ್ಯಾಯಾಧೀಶರು ನಿರ್ಧರಿಸಿ ಅವರಿಗೆ ಈ ರೀತಿ ಶಿಕ್ಷೆ ವಿಧಿಸಿರುತ್ತಾರೆ. ಬ್ಯಾಂಕಿನ ಚೇರ್ಮನರು ಕೆ. ಸಿ. ಮಾಮನ್ ಮಾಪಿಳ್ಳೆಯವರಿಗೆ ಎಂಟು ವರ್ಷಗಳ ಸಾದಾ ಸಜಾ, 2,000 ರೂಪಾಯಿಗಳ ಜುಲ್ಮಾನೆ. ಡೆಪ್ಯುಟಿ ಡೈರೆಕ್ಟರು ಕೆ. ಸಿ. ಈಪನ್‍ಯವರಿಗೆ 21 ತಿಂಗಳ ಸಾದಾ ಸಜಾ, 500 ರೂಪಾಯಿ ಜುಲ್ಮಾನೆ. ಮ್ಯಾನೇಜಿಂಗ್ ಡೈರೆಕ್ಟರ್ ಸಿ. ಪಿ. ಮತ್ತಾನ್‍ಯವರಿಗೆ ಎಂಟು ವರ್ಷಗಳ ಕಠಿಣ ಸಜಾ ಶಿಕ್ಷೆ. 2,000 ರೂಪಾಯಿಗಳ ಜುಲ್ಮಾನೆ. ಜಾಯಿಂಟ್ ಮ್ಯಾನೇಜಿಂಗ್ ಡೈರೆಕ್ಟರ್ ಕೆ. ಯಂ. ರುಪತ್‍ಯವರಿಗೆ ಎಂಟು ವರ್ಷಗಳ ಕಠಿಣ ಸಜಾ ಶಿಕ್ಷೆ. ಸೆಕ್ರೆಟರಿ ಕೆ. ಪಿ. ವರ್ಗೀಸ್‍ಯವರಿಗೆ 21 ತಿಂಗಳ ಕಠಿಣ ಸಜಾ ಶಿಕ್ಷೆ, 500 ರೂಪಾಯಿ ಜುಲ್ಮಾನೆ. ಈ ಬ್ಯಾಂಕಿನ ಜನರಲ್ ಮ್ಯಾನೇಜರಾಗಿದ್ದ ಮಿ. ಕೆ. ಎಸ್. ರಾಮಾನುಜಮ್‍ಯವರು ಸರ್ಕಾರದ ತರಫ್ ಸಾಕ್ಷಿನುಡಿದು ಬ್ಯಾಂಕಿನ ಮೋಸವನ್ನೆಲ್ಲಾ ಹೊರಪಡಿಸಿದುದರಿಂದ ಅವರನ್ನು ಬಿಡುಗಡೆ ಮಾಡಿದ್ದಾರೆ. ಈ ಬ್ಯಾಂಕಿನ ಶಾಖೆಯು ಕೊಡಗಿನಲ್ಲೂ, ಇದ್ದು ಅದರಲ್ಲಿ ಹಣ ಹಾಕಿದ್ದ ನಮ್ಮ ಪ್ರಾಂತದ ಅನೇಕ ಮಂದಿ ಪ್ರಜೆಗಳು ನಷ್ಟಗಳಿಗೆ ಸಿಕ್ಕಿದುದೂ ನಮ್ಮ ವಾಚಕರಿಗೆ ನೆನಪಿರಬಹುದು.

ವಿದೇಶ.

ಟರ್ಕಿಗೆ ಜಗತ್ತಿನ ನಾನಾ ಭಾಗಗಳಿಂದ ಧನ ಸಹಾಯವೂ ಒದಗುತ್ತಿದ್ದು ಅಫ್ಘಾನಿಸ್ಥಾನದ ಅರಸರೂ 2 ಸಾವಿರ ಸ್ಟರ್ಲಿಂಗಿನ ದಾನ ಮಾಡಿರುವಾಗ, ಟೈಗ್ರಿಸ್ ಮೊದಲಾದ ನದಿಗಳ ನೀರೇರಿ, ದಯಾರ್ ಬೆಕರ್, ಅಂಕೋಲಿಯಾ ನಗರಗಳಿಗೆ ಬಹಳ ಕಷ್ಟ ಒದಗಿದೆ. ಪ್ರವಾಹಕ್ಕೆ ಸಿಕ್ಕಿದ ನಾನೂರು ಮಂದಿ ಹೆಂಗಸರು ಮಕ್ಕಳ ರಕ್ಷಣಾ ಕಾರ್ಯದಲ್ಲಿ 50 ಮಂದಿ ಸೈನಿಕರು ಅತಿಶಯವಾದ ಸಾಹಸವನ್ನು ತೋರಿರುತ್ತಾರೆ. ಅಲ್ಲದೆ ಸರಕಾರವು ಈ ಹೊಸ ವಿಪತ್ತಿನ ನಿವಾರಣೆಗಾಗಿ ಯಾವತ್ತು ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ.

ಕೊಡಗಿನ ಮುಖ್ಯಪಟ್ಟ ಒಬ್ಬ ವೃದ್ಧರ ನಿಧನ.

ತಾರೀಕು 6-1-1940 ನೇ ಶನಿವಾರ ದಿನ ಕಣಿಕೆ ಎ. ಪಿ. ಸುಬ್ಬಯ್ಯನವರು ಮಡಿಕೇರಿಯಲ್ಲಿ ತಮ್ಮ 93 ನೇ ವರ್ಷದಲ್ಲಿ ಕಾಲವಾದರು.

ಕೊಡಗಿನ ಬ್ರಿಟಿಷ್ ಸರಕಾರದಲ್ಲಿ ಇವರು ಕಣಿಕೆದಾರರಾಗಿದ್ದು ಸಾಧಾರಣ 41 ವರ್ಷಗಳ ಕಾಲ ಪೆನ್ಷನ್ ಹೊಂದುತ್ತಿದ್ದರು. ಇವರು ಅಮ್ಮಕೊಡಗರು, ಶಿವಬ್ರಾಹ್ಮಣರ ಮತ್ತು ದೇವಾಂಗ ಪಕ್ಷದ ಮುಖ್ಯಾಧಿಕಾರಿಗಳಾಗಿದ್ದರು. ಇವರ ತಂದೆ ಮತ್ತು ಅಜ್ಜಂದಿರು ಸಹ ಕೊಡಗಿನ ರಾಜರುಗಳಲ್ಲಿ ಉಪ ಅಧಿಕಾರಿಗಳಾಗಿದ್ದರು. ಇವರು ಕೊಡಗಿನ ಬ್ರಾಹ್ಮಣವರ್ಗದಲ್ಲಿ ಪ್ರಥಮತಃ ಇಂಗ್ಲಿಷ್ ವಿದ್ಯಾಭ್ಯಾಸಮಾಡಿ ಅದರ ಸಂಪೂರ್ಣಾನುಭವ ಮತ್ತು ಉಪಯೋಗವನ್ನು ಪಡೆದವರು. ಇವರಿಗೆ ಹಿಂದೂ ಧಾರ್ಮಿಕ ವಿಷಯದಲ್ಲಿ ತುಂಬಾ ಪರಿಶ್ರಮವಿತ್ತು.

'ಶತಮಾನಂ ಭವತಿ ....' ಎಂಬ ಆಶೀರ್ವಾದದ ಫಲವನ್ನು ಅನುಭವಿಸುವವರು ವಿರಳವಾಗಿರುವ ಕಾಲದಲ್ಲಿ ಇವರು ಇಷ್ಟು ದೀರ್ಘಕಾಲ ಜೀವಿಸಿದುದು ಇವರ ಆರೋಗ್ಯಭಾಗ್ಯದ ಲಕ್ಷಣ. ದೇಹಾರೋಗ್ಯವನ್ನೂ, ಸ್ಮರಣೆಯನ್ನೂ ಕಣ್ಣಿನ ಶಕ್ತಿಯನ್ನೂ ಅಂತ್ಯದವರೆಗೆ ಸರಿಯಾಗಿಟ್ಟುಕೊಂಡು ತಮ್ಮ ನಿತ್ಯಕರ್ಮಗಳನ್ನು ಕ್ಷಿಪ್ರವಾಗಿ ನಡೆಸಿಕೊಂಡು ಬರುತ್ತಾ, ಕೇವಲ ಒಂದು ವಾರದ ಅಸೌಖ್ಯದಿಂದ ಮರಣ ಹೊಂದಿದ ಈ ವೃದ್ಧರ ಜೀವನವು, ಆರೋಗ್ಯ ಜೀವನದ ಮೇಲ್ಪಂಕ್ತಿಯಾಗಿದೆ.

ಇವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ.

ಯುದ್ಧ ವಾರ್ತೆ.

ರಷ್ಯಾ-ಫಿನ್‌ಲೆಂಡ್ ಯುದ್ಧ.

ಫಿನ್ನಿಷ್ ವೈಮಾನಿಕನ ಅದ್ಭುತ ಸಾಹಸ.

ಶನಿವಾರ ಫಿನ್‌ಲೆಂಡಿನ ಮೇಲೆ ಹಾರಿ ಬಂದಿದ್ದ ರಷ್ಯನ್ ವಿಮಾನಗಳ ಪೈಕಿ ಕನಿಷ್ಟ ಪಕ್ಷ 18 ವಿಮಾನಗಳನ್ನಾದರೂ ಗುಂಡು ಹೊಡೆದು ಕೆಡವಲಾಯಿತೆಂದು ವರ್ತಮಾನ.

ಹೆಲ್ಸಿಂಕಿಗೆ ಈಶಾನ್ಯಭಾಗದಲ್ಲಿ ಆರು ಮತ್ತ ಮೈಲು ದೂರದಲ್ಲಿರುವ ಉತ್ತಿ ಎಂಬ ನಗರದ ಮೇಲೆ ಧಾಳಿ ನಡೆಸಿದ 9 ರಷ್ಯನ್ ವಿಮಾನಗಳ ಪೈಕಿ 6 ವಿಮಾನಗಳನ್ನು ಒಬ್ಬನೇ ಒಬ್ಬ ಫಿನ್ನಿಷ್ ವೈಮಾನಿಕನು ಉರುಳಿಸಿ ಅತ್ಯದ್ಭುತ ಸಾಹಸ ಕಾರ್ಯವನ್ನು ಮಾಡಿದ್ದಾನೆ. ಈ ಧಾಳಿಯಲ್ಲಿ ಪುನಹ ಎರಡು ರಷ್ಯನ್ ವಿಮಾನಗಳು ಉರುಳಿದವು.

ರಷ್ಯನ್ ವಿಮಾನಗಳು ಫಿನ್‌ಲೆಂಡಿನ ಮಧ್ಯ ಮತ್ತು ಉತ್ತರ ಪ್ರದೇಶಗಳ ಮೇಲೆ ಅನೇಕ ಸಲ ಬಾಂಬಿಂಗ್ ಧಾಳಿ ನಡೆಸಿದುವೆಂದು ಫಿನ್ನಿಷ್ ಪ್ರಕಟಣೆ ತಿಳಿಸುತ್ತದೆ.

ಮಿಕ್ಕೆಲ್‌ನಲ್ಲಿ ಹೆಂಗಸರು ಮಕ್ಕಳಾದಿಯಾಗಿ ಅನೇಕ ಜನ ನಾಗರೀಕರು ಮಡಿದರು.

ಫಿನ್ನಿಷ್ ವಿಮಾನಗಳು ಅನೇಕ ಸಲ ಶತ್ರುದೇಶದ ಮೇಲೆ ಹಾರಿ ಹೋಗಿ ಬಾಂಬು ಕಾರಿ, ಸ್ಥಳ ಪರಿಶೀಲನೆ ಮಾಡಿಕೊಂಡು ಬಂದುವು.

ತಾರೀಕು 6ರಲ್ಲಿ ಮುಖ್ಯವಾದ ಸಂಗತಿ ಏನೂ ಆಗಲಿಲ್ಲ. ಅನೇಕ ಕಡೆಗಳಲ್ಲಿ ಬೇಹುಗಾರರ ಪಡೆಗಳ ಚಟುವಟಿಕೆಗಳು ಹೆಚ್ಚಾಗಿದ್ದುವು. ರಷ್ಯನ್ ವಿಮಾನಗಳು ಶತ್ರುವಿನ ಉಗ್ರಾಣಗಳ ಮೇಲೆ, ಶಸ್ತ್ರಾಗಾರಗಳ ಮೇಲೆ ಕಾರ್ಯಕಾರಿಯಾಗಿ ಧಾಳಿ ನಡೆಸಿದುವು. ವಿಮಾನ ಯುದ್ಧದಲ್ಲಿ 10 ಶತ್ರು ವಿಮಾನಗಳು ಉರುಳಿದವು. ಎಂದು ಲೆನಿನ್‌ಗ್ರಾಡ್ ಮಿಲಿಟರಿ ಶಿಬಿರದ ಪ್ರಕಟಣೆ ತಿಳಿಸುತ್ತದೆ.

ಸ್ವೀಡನ್ನಿನ ಸ್ವಯಂ ಸೇವಕರನ್ನೂ, ಡೆನ್‌ಮಾರ್ಕಿನಿಂದ ಬಂದಿದ್ದ ಸ್ವಯಂ ಸೇವಕರನ್ನೂ, ಒಳಗೊಂಡ ರೈಲೊಂದು ಫಿನ್‌ಲೆಂಡಿಗೆ ಪ್ರಯಾಣ ಮಾಡಿತು. ದಾರಿಯಲ್ಲಿ ನಾರ್ವೆಯ ಸ್ವಯಂಸೇವಕರು ಇವರ ಜೊತೆಗೆ ಸೇರಿಕೊಳ್ಳುವರು.

ಸೌಮುಸಾಲ್ಮಿಯಲ್ಲಿ ಫಿನ್ನರ ಭಾರಿ ವಿಜಯ.

ತಾ. 8ರಲ್ಲಿ ಸೌಮು ಸಾಲ್ಮಿಯಿಂದ ರಷ್ಯನ್ ಸರಹದ್ದಿನ ವರೆಗೂ ಇದ್ದ ರಷ್ಯನ್ ಡಿವಿಜನ್ ಒಂದನ್ನು ನಾಮಾವಶೇಷ ಮಾಡಿ ಫಿನ್ನರು ಭಾರಿ ವಿಜಯ ಪಡೆದರೆಂದು ಹೆಲ್ಸಿಂಕಿ ಪ್ರಕಟಣೆ.

ಫಿನ್ನರು 1000 ಜನ ರಷ್ಯನ್ ಸೈನಿಕರನ್ನು ಕೈಸೆರೆ ಹಿಡಿದರಲ್ಲದೆ ಟ್ಯಾಂಕುಗಳು, ಆರ್ಮರ್ಡ್ ಕಾರುಗಳು ಮುಂತಾಗಿ ಹೇರಳವಾಗಿ ಆಯುಧ ಸಾಮಗ್ರಿಗಳನ್ನೂ ವಶಪಡಿಸಿಕೊಂಡರು.

ರಷ್ಯದ 44ನೇ ಸಂಬರ್ ಡಿವಿಜನನ್ನು ಸೋಲಿಸುವುದೇ ಈಚಿನ ಸಂಗ್ರಾಮದ ಮುಖ್ಯೋದ್ದೇಶವಾಗಿದ್ದಿತು. ಶತ್ರುವಿನ ಮೂಲಾಧಾರವಾಗಿದ್ದ ಪಡೆಯೊಂದು ನಾಶವಾಗಿರುವುದರಿಂದ ಈ ಉದ್ದೇಶ ಸಫಲವಾಗಿದೆ. ಈ ಯುದ್ಧದಲ್ಲಿ ಫಿನ್ನರಿಗೆ ಸೇರಿದ ಸಾಮಗ್ರಿಗಳಾವುವೆಂದರೆ.

ಫಿರಂಗಿಗಳು 102, ಟ್ಯಾಂಕುಗಳು 43, ಆರ್ಮರ್ಡ್ ಕಾರು 10, ಟ್ರ್ಯಾಕ್ಟರುಗಳು 20, ಮೋಟಾರು ಗಾಡಿಗಳು 278, ಕುದುರೆಗಳು 1000, ಅಡಿಗೆಮನೆ ಡೇರೆ 47, ಏರೋಪ್ಲೇನುಗಳು ಕೊಂಚ.

ರಷ್ಯನ್ ಪಡೆ ಸೋತು ಓಡುತ್ತಿದೆ.

ಸೌಮುಸಾಲ್ಮಿ ಪ್ರಾಂತದಿಂದ ರಷ್ಯನ್ ಸೇನೆ ಕಾಲ್ದೆಗೆದಿದೆ. ಈ ಪ್ರಾಂತದಲ್ಲಿ ಫಿನ್ನರು ಹಿಂದೆಂದೂ ಪಡೆಯದಿದ್ದಂಥ ವಿಜಯವನ್ನು ಪಡೆದಿದ್ದಾರೆ. ಎಂದು ಲೆನಿನ್‌ಗ್ರಾಡ್ ಸೈನ್ಯ ಶಿಬಿರದಿಂದ ಬಂದಿರುವ ವಾರ್ತೆ ತಿಳಿಸುತ್ತದೆ.

'ಭಾನುವಾರ ದಿವಸ ಖಾಟೂ ಎಂಬಲ್ಲಿ ರಷ್ಯಾ ಫಿನ್‌ಲೆಂಡ್ ಕಾಲಾಳು ಪಡೆಗಳಿಗೆ ತೀವ್ರ ಯುದ್ಧವಾಗಿ, ರಷ್ಯನ್ನರು ಸೌಮುಸಾಲ್ಮಿಗೆ ಪಶ್ಚಿಮದಲ್ಲಿ ಬಹಳ ದೂರ ಹಿಂದೆ ಬಂದಿದ್ದಾರೆ. ಎಂಬುದಾಗಿ ಈ ಲೆನಿನ್‌ಗ್ರಾಡ್ ಪ್ರಕಟಣೆ ಒಪ್ಪಿಕೊಳ್ಳುತ್ತದೆ.

ಫಿನ್ಲೆಂಡಿನ ಪೂರ್ವಪ್ರದೇಶದ ಮೂರು ಸಣ್ಣ ನಗರಗಳನ್ನೂ ಪಶ್ಚಿಮ ಪ್ರದೇಶದ ಮೂರು ಸಣ್ಣ ನಗರಗಳನ್ನೂ, ರಷ್ಯನ್ ವಿಮಾನಗಳು ಧಾಳಿ ಮಾಡಿದುವು. ಅಂಥಾ ಅಪಾಯವೇನೂ ಸಂಭವಿಸಲಿಲ್ಲ.

ಲೆನಿನ್ ಗ್ರಾಡ್ ಮರ್ಮಾನ್‌ಸ್ಕ ರೈಲ್ವೆ ಮಾರ್ಗವು ಮತ್ತೆ ಫಿನ್ನರಿಂದ ಕತ್ತರಿಸಲ್ಪಟ್ಟಿದೆಯೆಂದು ರೋಮ್ ರೇಡಿಯೋ ತಿಳಿಸುತ್ತದೆ.

ಪಶ್ಚಿಮ ರಣರಂಗ.

ಫ್ರೆಂಚ್–ಜರ್ಮನ್ ವಿಮಾನ ಚಟುವಟಿಕೆಗಳು.

ಪೂರ್ವ ಬ್ಲ್ಯಾಸ್ ಪ್ರದೇಶದಲ್ಲಿ ಯುದ್ಧ ಕ್ಷೇತ್ರದ ಹಲವಾರು ಕಡೆಗಳಲ್ಲಿ ತಾ. 7ರಲ್ಲಿ ಕಾವಲು ವಿಮಾನ ಚಟುವಟಿಕೆಗಳು ಉಭಯ ಪಕ್ಷಗಳಲ್ಲೂ ಜೋರಾಗಿದ್ದವು ಎಂದು ಫ್ರೆಂಚ್ ಪ್ರಕಟಣೆ ತಿಳಿಸುತ್ತದೆ.

ಜರ್ಮನ್ ಪ್ರಕಟಣೆ.

ಜರ್ಮನ್ ವಿಮಾನ ದಳಗಳು ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್‌ಗಳ ಮೇಲೆಲ್ಲಾ ಸ್ಥಳ ಪರಿಶೋಧನಾ ಕಾರ್ಯಕ್ಕಾಗಿ ಸಂಚರಿಸಿ ಬಂದವು. ಸಶಕ್ತರಾದ ಅಸಂಖ್ಯಾತ ಪೋಲರು ಬಾಲ್ಟಿಕ್ ರಾಷ್ಟ್ರಗಳ ಮೂಲಕ ಶತ್ರು ಭೂಮಿಯನ್ನು ಸೇರಲು ಪ್ರಯತ್ನಿಸುತ್ತಿದ್ದರು; ಇದನ್ನು ಪದೇ ಪದೇ ನಮ್ಮ ನೌಕಾಬಲದ ದಳಗಳು ಕಂಡು ಅವರನ್ನು ತಡೆದರು.

ಫ್ರೆಂಚ್ ಪಡೆಯ ಸಾಹಸ.

ಅಪಾರ್ ಪೂರ್ವದಲ್ಲೂ ಮತ್ತು ಪಶ್ಚಿಮ ರಂಗದ ಹಲವಾರು ಕಡೆಗಳಲ್ಲಿ ಗೋಲಂದಾಜು ಪಡೆಗಳು ಚಟುವಟಿಕೆಯಿಂದ ಉಗ್ಗಡಿಸುತ್ತಿವೆ. ಕಾವಲು ಮತ್ತು ಬೇಹುಗಾರ ವಿಮಾನ ಪಡೆಗಳು ಬಹಳ ಚಟುವಟಿಕೆಯಿಂದ ತಮ್ಮ ಹಾರಾಟಗಳನ್ನು ನಿರ್ವಹಿಸುತ್ತಿವೆ. ಒಂದು ಸ್ವಾರಸ್ಯವಾದ ಘಟನೆ ಮಾತ್ರ ಜರಗಿತು.

ಫ್ರೆಂಚರ ವ್ಯೂಹಕ್ಕೆ ಆಹಾರ ಸಾಮಗ್ರಿಗಳನ್ನು ತಂದೊದಗಿಸುತ್ತಿದ್ದ ಸಿಬ್ಬಂದಿ ದಳದ ಮೇಲೆ ಜರ್ಮನ್ ಕಾವಲು ವಿಮಾನಗಳು ಆಕ್ರಮಣ ಮಾಡಿದವು. ಫ್ರೆಂಚರು ಕೂಡಲೆ ತುಪಾಕಿ ತೆಗೆದು ಯುದ್ಧಕ್ಕೆ ನಿಂತರು. ಮತ್ತು ತಮ್ಮ ವಿಮಾನವಿನಾಶಕ ತೋಪುಗಳನ್ನು ಕೂಡಲೇ ಕಾವಲು ವಿಮಾನಗಳ ಕಡೆ ತಿರುಗಿಸಿ ಅಗ್ನಿವೃಷ್ಟಿ ಕಾರಲಾರಂಭಿಸಿದರು. ಜರ್ಮನ್ ಕಾವಲು ವಿಮಾನಗಳು ಪಲಾಯನ ಸೂತ್ರ ಪಠಿಸಿದವು.

ಫ್ರೆಂಚ್ ಚೂಣಿಯಲ್ಲಿ ಜರ್ಮನ್ ಚಟುವಟಿಕೆಗಳು ವಾಸ್ತವಿಕವಾಗಿ ಏನೂ ಇಲ್ಲನೆಂದೇ ಹೇಳಬಹುದು; ಆದರೆ ಫ್ರಾನ್ಸಿನ ಪೂರ್ವಭಾಗದಲ್ಲಿ ಜರ್ಮನ್ ಬೇಹುಗಾರ ವಿಮಾನಗಳು ಬೆಲ್ಜಿಯಂ ಮುಖಾಂತರವಾಗಿ ಹಾರಾಡುತ್ತಾ ಬಂದು, ಅದೇ ಮಾರ್ಗವಾಗಿಯೇ ಹಿಂದಿರುಗಿದವು. ಅವರ ತಾಟಸ್ಥ್ಯ ನಿಯಮಕ್ಕೆ ವಿರುದ್ಧವಾಗಿ ಜರ್ಮನಿಯು ಈ ರೀತಿ ವರ್ತಿಸಿದುದಕ್ಕಾಗಿ ಬೆಲ್ಜಿಯಂ ಸರ್ಕಾರವು ಪ್ರತಿಭಟನೆಯನ್ನು ಕಳುಹಿಸಿದೆ.

'ಹಗಲಿನಲ್ಲಿ ನಮ್ಮ ಕಾವಲು ವಿಮಾನದಳಗಳು ಸಮರಭೂಮಿಯ ಅನೇಕ ಕಡೆಗಳಲ್ಲಿ ಶತ್ರು ವಿಮಾನಗಳನ್ನು ಸಂಧಿಸಿ, ಉಗ್ರವಾಗಿ ಹೋರಾಡಿ, ಹಲವು ಮಂದಿಯನ್ನು ಸೆರೆಹಿಡಿದು ತಂದವು' ಎಂದು ಫ್ರೆಂಚರ ಹೇಳಿಕೆ.

ಯುದ್ಧ ಭೂಮಿಯಲ್ಲಿ ಮಳೆ ಮಂಜು.

ಈ ಫ್ರೆಂಚ್ ರಣರಂಗದಲ್ಲಿ ಮಳೆ ಮಂಜು ಸಾರ್ವತ್ರಿಕವಾಗಿ ಬೀಳಲಾರಂಭಿಸಿದೆ. ಕಳೆದ 24 ಗಂಟೆಗಳಿಂದ ಯುದ್ಧರಂಗವು ನೆಮ್ಮದಿಯಿಂದ ಇದೆ.

ವೋಸ್ಜೆಗೆ ಪಶ್ಚಿಮ ಭಾಗದಲ್ಲಿ ಮಾತ್ರ ಬೇಹುಗಾರ ಪಡೆಗಳು ಮಳೆ ಕೆಸರಿನಲ್ಲಿ ನುಸಿದುಕೊಂಡು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿವೆ.

ವಿಮಾನ ಚಟುವಟಿಕೆ ಏನೇನೂ ಇಲ್ಲ. ಒಂದೇ ಒಂದು ಜರ್ಮನ್ ವಿಮಾನ ಪಶ್ಚಿಮ ಫ್ರಾನ್ಸ್‌ನ ಸ್ಥಿತಿಗತಿಗಳನ್ನು ಅರಿತು ಹೋಗಲು ಬಂದಿದ್ದಿತು.

ವರದಿ ಮಾಡಲು ಅಂಥ ಮುಖ್ಯ ಘಟನೆಗಳಾವುವೂ ಈ ದಿನ ಪಶ್ಚಿಮ ರಣರಂಗದಲ್ಲಿ ಸಂಭವಿಸಿಲ್ಲ ಎಂಬುದಾಗಿ ಒಂದು ಫ್ರೆಂಚ್ ಪ್ರಕಟಣೆ ತಿಳಿಸುತ್ತದೆ.

ದಲಾದಿಯರ್‌ರಿಗೆ ಅಪಘಾತ.

ಫ್ರಾನ್ಸಿನ ಪ್ರಧಾನಾಮಾತ್ಯ ಮಿ. ದಲಾದಿಯರ್‌ರಿಗೆ ನಿನ್ನೆ ಮಧ್ಯಾಹ್ನ ಅಪಘಾತವಾಗಿ, ಕಾಲು ಮೂಳೆ ಮುರಿಯಿತೆಂದೂ, ಆದರೆ ಈಗ ನೋವು ಕಡಮೆಯಾಗಿರುವುದಾಗಿಯೂ ಪ್ರಕಟಣೆಯೊಂದು ತಿಳಿಸುತ್ತದೆ. ಮಿ. ದಲಾದಿಯವರು ಕೂಡಲೇ ಯುದ್ಧ ಖಾತೆಯಲ್ಲಿ ತಮ್ಮ ಕೆಲಸದ ಮೇಲೆ ಬಂದರು.

ನೌಕಾ ಯುದ್ಧ.

ನಿನ್ನೆ ಬ್ರಿಟನ್ನಿನ ಆಗ್ನೇಯ ತೀರಪ್ರದೇಶದ ಬಳಿ ಆಸ್ಫೋಟನದಿಂದ ಸೀಡ್ರಿಂಗ್ಟನ್ ಕೋರ್ಟ್ ಟನ್ ಎಂಬ ಬ್ರಿಟಿಷ್ ಜಹಜು 10 ನಿಮಿಷ ಗಳಗೊಳಗೊಳಗಾಗಿ ಮುಳುಗಿತು. ಜಹಜಿನಲ್ಲಿದ್ದ 34 ಮಂದಿ ನಾವಿಕರನ್ನು ಮುಂದಿಯನ್ನೂ ಕಾಪಾಡಲಾಯಿತು.

ಬ್ರಿಟಿಷ್ ಜಹಜಿನ ಮೇಲೆ ಶತ್ರು ದಾಳಿ.

ಬ್ರಿಟಿಷ್ ಟ್ಯಾಂಕರ್ ಜಹಜೊಂದರ ಮೇಲೆ ಉತ್ತರ ಸಮುದ್ರದಲ್ಲಿ ಶತ್ರು ವಿಮಾನವು ದಾಳಿ ಮಾಡಿತು. ವಿಮಾನವು ತೀರ ಕೆಳಗೆ ಬಂದು ಮೂರು ಬಾಂಬುಗಳನ್ನು ಹಾಕಿತು.

ಇವುಗಳಲ್ಲೊಂದು ಬಾಂಬು ಜಹಜಿನ ತೀರ ಸಮೀಪವಾಗಿ ಬಿತ್ತು. ತತ್ಫಲವಾಗಿ ಜಹಜಿನ ಎಣ್ಣೆಯ ಪೈಪುಗಳು ಇಬ್ಭಾಗವಾದುವು; ಮತ್ತು ವೈರ್‌ಲೆಸ್ ಯಂತ್ರ ಸಾಧನವು ಅಲ್ಲಾಡಿ ಹೋಯಿತು.

ಆ ಮೇಲೆ ವಿಮಾನವು ಜಹಜನ್ನು ಮೆಷಿನ್ ಗನ್ನುಗಳಿಂದ ಹೊಡೆಯಿತು. ಆದರೆ ಅಪಾಯವೇನೂ ಸಂಭವಿಸಲಿಲ್ಲ. ಕೂಡಲೆ ಜಹಜು ವಿಮಾನದ ಮೇಲೆ ಫಿರಂಗಿ ಹಾರಿಸಿತು. ವಿಮಾನವು ಮೋಡದ ಮರೆಯಲ್ಲಿ ಪರಾರಿಯಾದುದರಿಂದ ಅದಕ್ಕಾದ ಅಪಘಾತ ಸಂಭವಿಸಿತೆಂದು ಗೊತ್ತಾಗಲಿಲ್ಲ. ಈ ಟ್ಯಾಂಕರ್ ಜಹಜು ಈಗ ಅಂಸ್ಟರ್ಡಾಮಿಗೆ ಬಂದಿದೆ.

ಶತ್ರು ವಿಮಾನ ಧಾಳಿ.

ತಾರೀಕು 9ರ ಬೆಳಗ್ಗೆ ಇಂಗ್ಲೆಂಡಿನ ಪೂರ್ವತೀರದಾಚೆ ಲೈಟ್ ಹೌಸ್ ಬಳಿ ಸಂಚರಿಸುವ ಬ್ರಿಟಿಷ್ ಜಹಜಿನ ಮೇಲೆ ಜರ್ಮನ್ ವಿಮಾನವು ಧಾಳಿ ಮಾಡಿತು. ಸ್ವಲ್ಪ ಕಾಲಾನಂತರ ಫಿರಂಗಿಗಳ ಅಥವಾ ಆಸ್ಫೋಟನಗಳ ಸದ್ದು ತೀರದಲ್ಲಿದ್ದವರಿಗೆ ಕೇಳಿತು.

ಕೂಡಲೆ ಈ ದಿಕ್ಕಿನಲ್ಲಿ ಬ್ರಿಟಿಷ್ ವಿಮಾನಗಳು ಸರ್ರನೆ ಹೋದುದನ್ನು ಎಲ್ಲರೂ ನೋಡಿದರು. ಲೈಫ್ ಬೋಟಿನವರೂ ಸಹಾಯಕ್ಕೆ ಸಿದ್ಧರಾಗಿದ್ದರು. ಆದರೆ, ಬ್ರಿಟಿಷ್ ಜಹಜಿನಲ್ಲಿದ್ದವರಾರಿಗೂ ಅಪಾಯವಾಗಿರಲಿಲ್ಲ. ಬ್ರಿಟಿಷ್ ಮಾನಗಳು ವಾಪಾಸು ಬಂದುವು.

ಈ ರೀತಿ ಜರ್ಮನ್ ವಿಮಾನದಿಂದ ಆಕ್ರಮಣ ಮಾಡಲ್ಪಟ್ಟ ಲೈಟ್ ಹೌಸ್ ಸರ್ವಿಸ್ ಜಹಜಿನಲ್ಲಿ ಒಬ್ಬನು ಮೃತಿಯನ್ನೈದುವಷ್ಟು ಗಾಯಗೊಂಡನೆಂದು ಹೇಳಲಾಗಿದೆ.

ಜರ್ಮನ್ ವಿಮಾನಗಳು ಅರ್ಧ ಗಂಟೆ ಈ ಜಹಜಿನ ಮೇಲೆ ಮೆಷಿನ್ ಗನ್ ಕಾರಿದುವು. 32 ಮಂದಿಗೆ ಗಾಯಗಳಾಗಿವೆ. ಕೆಲವರಿಗೆ ತೀವ್ರ ಗಾಯಗಳಾಗಿವೆ.

ಅಹಿಂಸಾ ಕ್ರಾಂತಿ.

ಆಚಾರ್ಯ ಕೃಪಾಲಿನಿಯವರ ಲೇಖನಾಧಾರದಿಂದ.

ಲೇಖಾಂಕ ೪.

ಗತ ಲೇಖನದಲ್ಲಿ ವಿವರಿಸಿದಂತೆ ದಾರಿ ತಪ್ಪಿ ಭ್ರಮಿಸುತ್ತಿರುವ ಜಗತ್ತಿನಲ್ಲಿ ಇಂದು ಪೂಜ್ಯ ಗಾಂಧಿಜಿಯವರು ತಮ್ಮ ಸತ್ಯ ಅಹಿಂಸೆಗಳೆಂಬ ಸಂದೇಶಗಳನ್ನು ಸಾರುತ್ತಿರುವರು. ಅವ್ಯಸ್ತರಹಾತ್ ಅವರು ಕೇವಲ ಪ್ರಚಾರಕರೇ ಅಲ್ಲ; ಜನತೆಯನ್ನು ಸುಗಮವಾದ ಹಾದಿಯಲ್ಲಿ ಮುನ್ನಡೆಸುವ ಮುಖಂಡರಾಗಿರುವರು. ಇಂದಿನ ನವೀನ ಯುಗದಲ್ಲಿ ಸತ್ಯ, ಅಹಿಂಸೆ, ಮತಗಳಲ್ಲಿ ನಂಬಿಕೆ ಇವೆಲ್ಲಾ ಕೇವಲ ಹಾಸ್ಯಾಸ್ಪದವಾದ ವಿಚಾರಗಳೆಂದು ಪರಿಗಣಿಸಲ್ಪಡುತ್ತಿವೆ. ಹಿಂಸೆ, ದುರಾಚಾರ, ಮಿಥ್ಯಾ ಚರ್ಯೆಯಲ್ಲಿ ಮುಳುಗಿರುವ ಜಗತ್ತಿನಲ್ಲಿ ಮಹಾತ್ಮರ ಅಭಿಪ್ರಾಯಗಳು ಅಯೋಗ್ಯವೆಂದು ಹೇಳಲ್ಪಟ್ಟವು. ಆದರೆ ಮಹಾತ್ಮರ ಆ ಕರ್ತವ್ಯ ಶಕ್ತಿ ಕಾರ್ಯತಃ ಆಚರಿಸಿ ಜನತೆ ನಂಬುವಂತೆ ಮಾಡಬಲ್ಲ ಆ ಸ್ಥಿರತೆ ಇಂದು ಮಹಾತ್ಮರ ಸಂದೇಶಗಳಿಗೆ ಸರ್ವೋಚ್ಚ ಸ್ಥಾನಗಳನ್ನು ದಕ್ಕಿಸಿಕೊಟ್ಟಿವೆ. ಮಹಾತ್ಮರು ಕೇವಲ ಪ್ರಚಾರಕರೇ ಆಗಿದ್ದ ಪಕ್ಷ ಅವರ ದಿವ್ಯ ಸಂದೇಶಗಳು ಇಂದಿನ ನವೀನ ಜಗತ್ತಿನಲ್ಲಿ ಮಾಯವಾಗುತ್ತಿದ್ದವು. ಮಹಾತ್ಮರ ಸಂದೇಶಗಳು ಇನ್ನೂ ಶೈಶವದಲ್ಲಿದ್ದರೂ ಅವರ ಈ ಅಲ್ಪ ಅವಧಿಯಲ್ಲಿ ನಡೆದ ಘಟನೆಗಳು ಜನತೆಯ ಮನಸನ್ನೇ ಪಲ್ಲಟಗೊಳಿಸಿವೆ. ದಕ್ಷಿಣ ಆಫ್ರಿಕಾ, ಚಂಪಾರಣ್ಯ, ಕೈರಾಗಳಲ್ಲಿಯ ಅಹಿಂಸಾ ಚಳವಳಿಗಳಲ್ಲದೆ ಅವರು ಮೂರು ಅಖಿಲಭಾರತ ಅಹಿಂಸಾ ಚಳವಳಿಯನ್ನು ಕೈಕೊಂಡರು. ಇದರ ಪರಿಣಾಮವಾಗಿಯೇ ಜಗತ್ತಿನಲ್ಲಿ ಬಲಾಢ್ಯವೆಂದೆನಿಸಲ್ಪಟ್ಟಿರುವ ಬ್ರಿಟಿಷ್ ಸಾರ್ವಭೌಮ ಸರ್ಕಾರದ ಅನ್ಯಾಯದ ದಬ್ಬಾಳಿಕೆಯನ್ನು ಭಾರತ ಜನಾಂಗವು ಜಯಪ್ರದವಾಗಿ ಎದುರಿಸಿತು. ಜಗತ್ತಿನಲ್ಲಿ ಆವರೆಗೆ ನಡೆದ ಯಾವ ಯುದ್ಧವೂ ಈ ರೀತಿ ಅಹಿಂಸಾಮಯವಾಗಿದ್ದಿಲ್ಲ. ಯುದ್ಧವು ಪ್ರಚಂಡ ಸಾಮ್ರಾಜ್ಯವಾದಿಯ ಜೊತೆಯ ನಡೆದರೂ ಜನರ ಪ್ರಾಣಹಾನಿಯಾಗಿಲ್ಲ. ಯುದ್ಧಕ್ಕಿಳಿದವರ ಆಸ್ತಿಪಾಸ್ತಿಗಳಿಗೆ ಯಾವ ಧಕ್ಕೆಯೂ ಬರಲಿಲ್ಲ. ಅವರಂತೆ ವಿರೋಧಿಗಳ ಜೀವ ನಷ್ಟವೂ, ಆಸ್ತಿಪಾಸ್ತಿಗಳ ಅಪಹರಣವೂ ಸಂಭವಿಸಲಿಲ್ಲ. ಹಿಂಸಾಯುತವಾದ ಒಂದು ಚಿಕ್ಕ ದಂಗೆಯು ಒಡನೆ ಜನಾಂಗ ಜನಾಂಗಗಳನ್ನೇ ಹಿಂಸಾಯುತವಾದ ಘೋರ ಸಂಗ್ರಾಮಕ್ಕೆ ಇಳಿಸುವದು. ಇದರಿಂದ ಜಯಪಡೆದವರಿಗೂ, ಸೋತವರಿಗೂ ಆಗುವ ನಷ್ಟವಾದರೂ ಅವರ್ಣನೀಯ. ಆದರೆ ಈ ಅಹಿಂಸಾಯುತ ಯುದ್ಧದಲ್ಲಿ ಭೌತಿಕ ನಷ್ಟವು ಕೇವಲ ಸ್ವಲ್ಪವೇ ಆದರೂ ವಿರೋಧಿಯ ಮಾನಸಿಕ ನಷ್ಟವು ವಿಪರೀತವಿದೆ. ಮೇಲೆ ನಮೂದಿಸಿದ ಗಾಂಧೀಜೀಯವರ ಮೂರು ಅಹಿಂಸಾಯುತ ಯುದ್ಧದ ಪರಿಣಾಮದಿಂದಾಗಿ ಭಾರತ ಸ್ವಾತಂತ್ರ್ಯವು ಕರಗತವಾಗುವದರಲ್ಲಿ ಸಂಶಯವಿಲ್ಲದಂತಾಗಿದೆ. ಇದಲ್ಲದೆ ದರ್ಪಶಾಲಿ ಬ್ರಿಟಿಷ ಸಾಮ್ರಾಜ್ಯಶಾಹಿಯು ಜನತೆಯ ಕೋರಿಕೆಗೆ ಮಣಿಯಬೇಕೆಂಬುದು ಮನದಟ್ಟಾಗಿದೆ. ಭಾರತದ ಅಕ್ಷವು ಇಂದು ಪರದೇಶೀಯರ ಹೆದರಿಕೆ, ಮೋಟಗಾರಿಕೆಯನ್ನು ಜಯಿಸಿದೆ. ಇಂದು ಪರದೇಶೀಯರ ಪ್ರತಿಷ್ಠೆಯು ನಾಶವಾಗಿದೆ. ಮಾನಸಿಕ ಹಿರಿತನ ಸಡಿಲವಾಗಿದೆ. ಪರದೇಶೀ ಸರ್ಕಾರದ ಬೆನ್ನೆಲುಬೇ ಮುರಿದಿದೆ. ಸ್ವರಾಜ್ಯವು ಇನ್ನೂ ಲಭಿಸಿಲ್ಲ, ನಿಜ. ಅಸ್ವಾಭಾವಿಕವಾದ, ಆದರಲ್ಲೂ ಜಗತ್ತಿಗೇ ನೂತನವಾದ ಜನತೆಯ ಮೂರು ಸಣ್ಣ ಪ್ರಯತ್ನಗಳು ಇಂದು ಇಡೀ ಭಾರತೀಯರಿಗೆ ಮಾನಸಿಕ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟಿವೆ. ಶತಮಾನಗಳ ಗುಲಾಮಗಿರಿಯಲ್ಲಿ ವರ್ಣ, ಜಾತಿ, ಮತ, ಪಂಗಡಗಳೆಂಬದಾಗಿ ಛಿನ್ನವಿಚ್ಛಿನ್ನವಾಗಿರುವ ಒಂದು ರಾಷ್ಟ್ರವು ಹಿಂಸಾಯುತ ಘೋರ ಸಂಗ್ರಾಮದಿಂದ ಕೇವಲ 15 ವರ್ಷಗಳಲ್ಲಿ ಸ್ವಾತಂತ್ರ್ಯ ಸಂಪಾದಿಸಿತೇ? ಗಾಂಧೀಜೀಯವರ ಪ್ರೇರಣೆಯಿಂದ ನಡೆಸಲ್ಪಡುತ್ತಿರುವ ಅಹಿಂಸಾಯುತ ಯುದ್ಧವು ಭಾರತೀಯರನ್ನೇ ಅಲ್ಲ; ಇಡೀ ಜಗತ್ತಿನ ಜನತೆಯ ಮನವನ್ನು ಪಲ್ಲಟಿಸಿದೆ. ಸ್ವಾತಂತ್ರ್ಯ ಸಂಪಾದಿಸಲು ಇಟಲಿ, ಐರ್ಲೆಂಡ್ ಇವು ಎಷ್ಟು ಕಠಿಣವಾಗಿ ಹೋರಾಡಿಲ್ಲ? ಎಷ್ಟು ನೂರು ಜೀವಿಗಳನ್ನು ಅದಕ್ಕಾಗಿ ಬಲಿ ಕೊಟ್ಟಿಲ್ಲ? ಪಾರವಾರಂಪರ್ಯದ ವರೆಗೆ ಯಾವ ಯಾವ ರೀತಿಯ ಮನಃಕಷ್ಟಯವನ್ನು ಬೆಳೆಸಿಕೊಂಡಿಲ್ಲ. ಫಲವು ಇದರಿಂದ ಅಲ್ಪ ಮಾತ್ರವಾಗಿದೆ. ಗಾಂಧೀಜಿಯವರು ಯುದ್ಧಕ್ಕೆ ನವೀನ ಬಗೆಯ ಮಾನಸಿಕ ಸಾಧನವನ್ನು ಕಂಡು ಹಿಡಿದಿರುವರು. ಅದರೇ ಅದನ್ನು ವ್ಯವಸ್ಥಿತ ರೀತಿಯಲ್ಲಿ ಜಾರಿಗೆ ತಂದು ಅದು ಫಲದಾಯಕವೆಂಬುವನ್ನು ಜನತೆಗೆ ತೋರಿಸಿ ಕೊಟ್ಟಿರುವರು. ಅದರಿಂದ ಹೊಗಳಲರ್ಹವಾದ ಫಲವಾದರೂ ಭಾರತೀಯರಿಗೆ ಲಭಿಸಿದೆ. ರಾಷ್ಟ್ರೀಯ ಸಮಸ್ಯೆಯನ್ನು ಅದು ಬಗೆಹರಿಸಿಲ್ಲ. ಅದನ್ನು ಬಗೆಹರಿಸುವ ಬಗ್ಗೆ ಅದು ಮಾರ್ಗದರ್ಶಿಯಾಗಿದೆ. ಅದು ಇಂದು ವಿವೇಚನಾತುರ ಜನತೆಯ ಮನವನ್ನು ಈಗಾಗಲೇ ಆಕರ್ಷಿಸಿರುವದು.

ಚಾರಿತ್ರಿಕವಾಗಿ ಗಾಂಧೀಜೀಯವರು ಸಂಕುಚಿತ ಪ್ರದೇಶದಲ್ಲಿ ತಮ್ಮ ತತ್ವ ಪ್ರದರ್ಶನ ಮಾಡುತ್ತಿರುವರು. ಭಾರತವು ಸ್ವತಂತ್ರ ರಾಷ್ಟ್ರವಾಗಿದ್ದ ಪಕ್ಷ ಯಾವ ರೀತಿಯ ಹೊಸ ಅಹಿಂಸಾತತ್ವವನ್ನು ಅಂತರರಾಷ್ಟ್ರೀಯ ರಾಜಕೀಯದಲ್ಲಿ ಗಾಂಧಿಜಿಯವರು ತರುತ್ತಿದ್ದರೆಂಬದನ್ನು ಯಾರೂ ಊಹಿಸಲಾರರು. ಯಾಕೆ? ಗಾಂಧಿಜಿಯವರಿಗೆ ಅದು ಮನವರಿಕೆ ಇರದು. ಇಂದು ಅವರು ತಮ್ಮ ಅಹಿಂಸಾ ತತ್ವವನ್ನು ಪರದೇಶಿ ಸಾಮ್ರಾಜ್ಯಶಾಹಿಯ ಉಪಟಳದಿಂದ ತನ್ನ ವ್ಯಕ್ತಿತ್ವವನ್ನು ಕಳಕೊಂಡಿರುವ ತನ್ನ ಜನಾಂಗದ ಸ್ವಾತಂತ್ರ್ಯತೆಯ ಬಗ್ಗೆ ಕಾರ್ಯರಂಗಕ್ಕಿಳಿಸಿರುವರು. ಈ ಕಾರ್ಯರಂಗದಲ್ಲಿ ತನ್ನ ದೇಶೀಯರಿಗೆ ಹೊಸ ಶಕ್ತಿ, ಹೊಸ ಆಯುಧ, ನವೀನ ರೀತಿಯನ್ನು ಕಲ್ಪಿಸಿಕೊಟ್ಟಿರುವರು. ತನ್ನ ಅಹಿಂಸೆಯನ್ನು ಸಂಘ ಸಂಸ್ಥೆಗಳಾಗಿ ಮಾರ್ಪಡಿಸಿರುವರು.

ನಿಜವಾದ ಸತ್ಯಾಗ್ರಹಿಗೆ ಯಾರ ಮೇಲೂ ದ್ವೇಷವಿರದು. ಸತ್ಯಾಗ್ರಹಿಯು ತನ್ನ ಅಂತಃಪ್ರೇರಣೆಯನ್ನು ವ್ಯವಸ್ಥಿತ ರೀತಿಗೆ ತರುವನು. ಅದನ್ನು ಸಂಘ ಸಂಸ್ಥೆಗಳ ಮುಖಾಂತರ ಕೆಲಸ ಮಾಡುವಂತೆ ಪ್ರೇರೇಪಿಸುವನು [illegible] ಫಲಗಳನ್ನು ಕೊಡುವಂತೆ ಮಾಡುವನು. ಎಲ್ಲಾ ವಿಧದ ಆಂತರಿಕ ಚೈತನ್ಯವು ಕಾರ್ಯರಂಗದಲ್ಲಿ ವಿವಿಧ ವಿಚಾರಗಳೊಂದಿಗೆ ಬೆರಕೆಯಾದಾಗ ಹೇಗೆ ತನ್ನ ಮೂಲ ಪ್ರಕೃತಿಯಲ್ಲಿ ಸ್ವಲ್ಪಾಂತರವನ್ನಾದರೂ ತಳಕೊಳ್ಳುವದೋ ಅದೇ ರೀತಿ ಸತ್ಯಾಗ್ರಹವಾದರೂ ಈ ಬಹಿರ್ವಿಚಾರಗಳಿಂದ ಗಿಡ್ಡವಾಗಿ ಮುಖ್ಯತ್ವ ಕುಂದಿದಂತಾಗಿದೆ. ಇಂಥಾ ಮಾನಸಿಕ ನಷ್ಟವಾದರೂ ಪ್ರಕೃತಿ ನಿಯಮವಾಗಿರುವದು. ಅದ್ದರಿಂದ ಇಂದು ಗಾಂಧಿಜೀಯವರ ತತ್ವಗಳಾದ ಅಹಿಂಸೆ ಮತ್ತು ಸತ್ಯ ಇವು ಮೂಲದ ಹಾಗೆ ಅಲ್ಲಲ್ಲಿ ಅಲ್ಪಪ್ರಮಾಣದಿಂದ ಹಿಂಸೆ, ಘರ್ಷಣೆಗಳನ್ನು ಪಡೆದಿದ್ದರೆ ಅದು ಕೇವಲ ಈ ಪ್ರಕೃತಿ ನಿಯಮದಿಂದಾಗಿಯೇ ಆಗಿದೆ.

ಸಾಮೂಹಿಕ ಸಂಬಂಧದಲ್ಲಿ ಇಂದು ಗಾಂಧಿಜಿಯವರಿಂದ ಉಪಯೋಗಿಸಲ್ಪಡುತ್ತಿರುವ ಪ್ರೀತಿ ಮತ್ತು ಅಹಿಂಸಾ ನಿಯಮಗಳು ಪುರಾತನ ಕಾಲದಿಂದಲೂ ವ್ಯಕ್ತಿಗತ ಜೀವನದಲ್ಲಿ ಉಪಯೋಗಿಸಲ್ಪಡುತ್ತಿರುವದಕ್ಕಿಂತಲೂ ಭಿನ್ನವಾಗಿವೆ. ಮತಪ್ರವಾದಿಗಳಿಂದ ಬೋಧಿಸಲ್ಪಟ್ಟಂತೆ ಅವು ಕೇವಲ ಆಂತರಿಕ, ಹಾಗೂ ವ್ಯಕ್ತಿಗತವಾಗಿದ್ದವು. ಅವಕ್ಕೆ ವ್ಯವಹಾರಿಕ ಪ್ರಯೋಗವಿದ್ದರೂ, ಅವು ಬಹಿರ್ಲೋಕದಲ್ಲಿಯ ಕುರಿತ ಸಮಸ್ಯೆಗಳನ್ನು ಬಗೆಹರಿಸುವಂತಿರಲಿಲ್ಲ. ಅವು ಕೇವಲ ಅವರ ಐಹಿಕ ಶಕ್ತಿಯಿಂದಲೇ ಮುನ್ನಡೆಯುತ್ತಿತ್ತು. ತತ್ಕಾಲಿಕ ಅದು ಯಾವ ಫಲನೀಡದೆಯಿದ್ದರೂ ಕ್ರಮೇಣ ಅದು ಯಾವ ರೀತಿಯಿಂದಲಾದರೂ ಫಲವನ್ನು ದೊರಕಿಸುವದೆಂಬ ನಂಬಿಕೆ ಇತ್ತು. ಈ ಜಗತ್ತು ಅದರ ವ್ಯವಹಾರ ಕ್ಷೇತ್ರವಲ್ಲವೆಂದೂ ಭಾವಿಸಲಾಗುತಿತ್ತು. ಫಲದ ಇಚ್ಛೆಯಿಂದಾದರೂ ಅದು ಪ್ರವರ್ತಿಸುತ್ತಿಲ್ಲವೆಂದು ಪರಿಗಣಿಸಲಾಗಿತ್ತು. ಅದ್ದರಿಂದ ಈ ಪುರಾತನ ಕಾಲದ ಅಹಿಂಸೆಯು ತನ್ನನ್ನು ತಾನು ವ್ಯವಸ್ಥೆ ಮಾಡಿಕೊಳ್ಳಲು ಏನೂ ಪ್ರಯತ್ನಿಸಲಿಲ್ಲ. ಸಾಧುಸಂತರೂ, ಸುಗುಣಶಾಲಿಗಳೂ, ಅಹಿಂಸಾವಾದಿಗಳಿದ್ದರೂ ಅಹಿಂಸೆಯನ್ನು ವ್ಯವಸ್ಥಿತ ರೀತಿ ಕಾರ್ಯರಂಗಕ್ಕಿಳಿಸಲು ಅವರಿಂದ ಸಾಧ್ಯವಾಗಲಿಲ್ಲ. ಅವರೂ ಪ್ರಾಪಂಚಿಕ ವಿಚಾರಗಳಲ್ಲಿ ದೇವರ ಕೃಪೆಯಿಲ್ಲದೆ ಕಾರ್ಯಸಾಗದೆಂಬುವನ್ನು ಅದು ಮನವರಿಕೆ ಮಾಡಿಕೊಟ್ಟರು.

ಪುರಾತನ ಪ್ರೀತಿಯ ನಿಯಮತ್ವ ಆ ವಿರೋಧದ ಹಿನ್ನೂಲ ಆಗಿತ್ತು 'ದುರ್ಜನರನ್ನು ಎದುರಿಸದಿರಿ; ಒಂದು ಮೈಲು ನಡೆಯಲು ಬಲಾತ್ಕರಿಸಿದರೆ ಎರಡು ಮೈಲು ನಡೆಯುವಷ್ಟು ಸಹನಶೀಲರಾಗಿ. ಒಂದು ಕೆನ್ನೆಗೆ ಹೊಡೆದವನಿಗೆ ಮತ್ತೊಂದನ್ನು ತೋರಿಸಿ' ಇಂಥಾ ಸದ್ಗುಣಗಳಲ್ಲದಿದ್ದರೆ ಜಗತ್ತಿಗೆ ನಿನ್ನಿಂದೇನು ಪ್ರಯೋಜನ? ಸೌಂದರ್ಯಯುತವಾದ ಹೂಗಳನ್ನು ನೋಡಿರಿ, ಅವು ಕೆಲಸ ಮಾಡುವದಿಲ್ಲ; ಆದರೂ ಬೆಳೆಯುತ್ತವೆ. ಅವು ನೂಲುವದಾಗಲೀ, ನೇಯುವದಾಗಲೀ ಇಲ್ಲ; ಆದರೂ ಅವು ಸೊಬಗಿನ ರಾಣಿಗಳಾಗಿವೆ. ಒಬ್ಬ ಹಿಂದೂ ಸನ್ಯಾಸಿಯು ಒಂದು ರಾತ್ರಿ ತನ್ನ ಕುಟೀರಕ್ಕೆ ಒಬ್ಬ ಕಳ್ಳನು ನುಗ್ಗಿದ್ದನ್ನು ಅರಿತು, ಕಳ್ಳನು ತೆಗೆದುಕೊಂಡು ಹೋಗುವಂಥಾ ವಸ್ತು ತನ್ನ ಕುಟೀರದಲ್ಲಿ ಇಲ್ಲದ್ದನ್ನು ಕಂಡು ತಾನು ಹೊದ್ದುಕೊಂಡಿದ್ದ ಒಂದೇ ಒಂದು ಕಂಬಳಿಯನ್ನು ಆತನು ತೆಗೆದುಕೊಳ್ಳಲನುವಾಗುವಂತೆ ತೆಗೆದಿಟ್ಟುಕೊಟ್ಟನು. ಕಳ್ಳನು ಆ ಕಂಬಳಿಯನ್ನು ತೆಗೆದುಕೊಂಡು ಹೋಗಲಾಗಿ ಸನ್ಯಾಸಿಯ ವರ್ತನೆಯ ಮಹಿಮೆಯಿಂದ ತನ್ನ ಕಳ್ಳತನದ ದೋಷವನ್ನರಿತು ಕೂಡಲೇ ಅದನ್ನು ಬಿಟ್ಟು ಒಕ್ಕಲೇ ಸತ್ಪುರುಷನಾದನಂತೆ. ಈ ರೀತಿಯ ಕಥೆ ಎಲ್ಲಾ ಮತಗಳಲ್ಲಿಯೂ ಇರುವವು. ಇವುಗಳ ಧ್ಯೇಯವಾದರೂ ಮಹಾ ಮಹಾ ತತ್ವಗಳ ಪ್ರಚಾರವೇ ಆಗಿದೆ. ಪುರಾತನ ಕಾಲದಲ್ಲಿ ಪೂರ್ಣ ಅಹಿಂಸೆಯೊಡಗೂಡಿರುವದು ಸಮಾಜದಲ್ಲಿಲ್ಲವೆಂಬ ಭಾವನೆಯಿತ್ತು. ಅದ್ದರಿಂದಲೇ ಋಷಿಗಳು ಅರಣ್ಯಕ್ಕೆ ತಮ್ಮ ನಿಷ್ಠೆಯನ್ನು ಹೊರಪಡಿಸುತ್ತಿದ್ದರು.

ಈ ರೀತಿಯ ಒಂದು ವಿಚಾರವು, ಯಾವುದೊಂದೂ ವ್ಯವಸ್ಥಿತವಾದ ಸಂಸ್ಥೆಯಿಲ್ಲದ ಈ ರೀತಿಯ ಒಂದು ತತ್ವವು ಜಗತ್ತನ್ನೇ ತೊರೆದು ಏಕಾಂಗಿಗಳಾಗಿರುವ ಸನ್ಯಾಸಿಗಳಿಗೆ ಮಾತ್ರ ಸರಿಯಾಗುವದು. ಆತ್ಮದ ವಿಕಾಸಕ್ಕೆ, ಚೈತನ್ಯ ಜೀವನಕ್ಕೆ, ಭವಿಷ್ಯ ಜೀವ ಸುಖಕ್ಕೆ ಇದರಿಂದ ಪ್ರಯೋಜನವಿದ್ದರೂ, ಮಾನವ ಜೀವನವನ್ನು ಮಾರ್ಪಡಿಸಿ, ಪರಸ್ಪರರಲ್ಲಿ ಸೌಹಾರ್ದವನ್ನು ಬೆಳೆಸುವ ಶಕ್ತಿಯು ಅದಕ್ಕಿರಲಿಲ್ಲ. ಸಾಮೂಹಿಕ ರಾಜಕೀಯ ಸಂಬಂಧದಲ್ಲಿಯೂ, ಆಂತರಿಕ ಆಡಳಿತದಲ್ಲಿಯೂ ಸಹ ಅದು ಅಯೋಗ್ಯವೆಂದು ಪರಿಗಣಿಸಲ್ಪಟ್ಟಿತು. ಜನಸಮುದಾಯವು ಸನ್ಯಾಸಿಗಳಂತೆ ಐಹಿಕ ಸುಖಸಂಪತ್ತುಗಳನ್ನು ತೊರೆದು ಜೀವಿಸುವದು ಅಸಾಧ್ಯ. ಜನಸಮುದಾಯವು ಅನುಭವಿಸುತ್ತಿರುವ ಕಷ್ಟಪರಂಪರೆಗಳಿಂದಾಗಿ ಕ್ರಮೇಣ ಪ್ರಾಣಿಗಳ ಹೃದಯವು ಕರಗಿ ಅವರಿಗೆ ಸುಖ ಲಭಿಸುವದೆಂದು ಕನಸಿರಿಸುವದೂ ಅಸಾಧ್ಯ. ಅದ್ದರಿಂದಲೇ ಗಾಂಧೀಜಿಯವರು ತಮ್ಮ ತತ್ವಗಳನ್ನು ಜನರಿಂದ ವ್ಯತಹ ಅನುಸರಿಸುವಂತೆ ಮಾಡುತ್ತಿರುವರು. ಜನತೆಯು ಯಾವದೊಂದು ತತ್ವವನ್ನು ಅನುಸರಿಸಬೇಕಾದರೂ ಅದು ಜಯವನ್ನು ನಿಶ್ಚಯವಾಗಿ ತರುವದೆಂಬ ನಂಬಿಕೆ ಜನರಲ್ಲಿ ಮನದಟ್ಟಾಗಬೇಕು. ಈ ನಂಬಿಕೆಯಾದರೂ ಗಾಂಧೀಜಿಯವರ ಈ ಮೊದಲಿನ ಮೂರು ಬಾರಿಯ ಯುದ್ಧದಿಂದಾಗಿ ಜನರಲ್ಲಿ ಖಚಿತವಾಗಿದೆ. ಅಹಿಂಸೆ ಮತ್ತು ಸತ್ಯ ಈ ತತ್ವಗಳನ್ನು ಸತ್ಯಾಗ್ರಹದ ರೂಪದಲ್ಲಿ ಅನುಷ್ಠಾನಕ್ಕೆ ತಂದು ಗಾಂಧೀಜಿಯವರು ಜನತೆಗೆ ತಮ್ಮ ಸ್ವಾತಂತ್ರ್ಯವನ್ನು ಪಡೆಯುವ ಮಾರ್ಗ ತೋರಿಸಿದ್ದಾರೆ. ಮೊದಲೇ ತಾವಂತೆ ಕಾರ್ಯರಂಗದಲ್ಲಿ ಈ ಅಹಿಂಸಾ ಮತ್ತು ಸತ್ಯವೆಂಬ ಮಹಾತತ್ವಗಳು ಸುಲಲಿತವಾಗಬಹುದು. ಆದರೀಗ ಆವರಿಸುವ ಪ್ರದೇಶವ್ಯಾಪ್ತಿಯಿಂದ ಅದು ಕೇವಲ ಅಲ್ಪ.

ಬಾತ್ಮಿ.

ಕೊಡಗು ಕ್ರಾಪ್ ಲೋನ್, ಸೇಲ್, ಎಂಡ್ ಸಪ್ಲೈ ಸಂಘದ ಚಾಲಕರಲ್ಲಿ ವಿನಂತಿ.

ಅಯ್ಯಾ,

ಕಾಸರಗೋಡಿನಲ್ಲಿ ಈಗ ಭತ್ತ ಗಾಡಿ ಒಂದರ ರೂ. 55 ರ ದರದಲ್ಲಿ ವಿಕ್ರಯವಾಗುತಿದೆಯಾಗಿ ತಿಳಿದು ಬರುತ್ತದೆ. ಇಷ್ಟು ಒಳ್ಳೇ ಕ್ರಯವಿದ್ದರೂ ಕೊಡಗಿನ ರೈತ ಬಂಧುಗಳು ಭತ್ತ ಗಾಡಿ ಒಂದಕ್ಕೆ ಬರೇ ರೂ. 40-45 ರ ದರದಲ್ಲಿ ವಿಕ್ರಯಿಸಿ ಬಹಳ ನಷ್ಟ ಹೊಂದಿಕೊಳ್ಳುವುದನ್ನು ನೋಡಿದರೆ ಹಳ್ಳಿಯ ನಾಡಿನ ರೈತರಿಗೆ ಪೇಟೆಯ ನ್ಯಾಯವಾದ ಧಾರಣೆ ತಿಳಿಯದಿರುವುದೂ, ಹಣದ ಅಡಚಣೆಯಿಂದ ನರಳುವುದೂ ಕಾರಣವೆಂದು ನಂಬಬೇಕಾಗಿದೆ. ರೈತರು ಬಹಳ ಶ್ರಮಪಟ್ಟು ಬೆಳೆಯಿಸಿದ ಧಾನ್ಯವನ್ನು ನ್ಯಾಯವಾದ ಬೆಲೆ ಇದ್ದರೂ ಬೆಲೆ ತಗ್ಗಿಸಿ ಮಾರುವುದಕ್ಕೆ ಮುಖ್ಯ ಕಾರಣವೆಂದರೆ ಊರಿನ ಧನಿಕರ ಮತ್ತು ಸಂಘಗಳ ಬೆಂಬಲವಿಲ್ಲದಿರುವುದೆಂದರೆ ತಪ್ಪಾಗಲಾರದು. ಆದುದರಿಂದ ಇನ್ನಾದರೂ ಊರಿನ ಧನಿಕ ಮಹಾಶಯರುಗಳೂ, ಮೇಲಿನ ಸಂಘದ ಚಾಲಕರುಗಳೂ ಹೀಗೆ ನಷ್ಟ ಹೊಂದುತ್ತಿರುವ ರೈತರಿಗೆ ಸಾಕಷ್ಟು ಬೆಂಬಲಕೊಡುತಿದ್ದರೆ ಪರವೂರಿನ ವ್ಯಾಪಾರಿಗಳು ಹೊಂದುತ್ತಿರುವ ದೊಡ್ಡ ಲಾಭದ ಸ್ವಲ್ಪಾಂಶವಾದರೂ ಕಷ್ಟ ಪಟ್ಟ ರೈತರಿಗೂ ದೊರತುತ್ತಿತ್ತು.

'ನೊಂದ ರೈತರಲ್ಲೊಬ್ಬ.'

ಇಗ್ಗುತಪ್ಪ ದೇವರ ದೇವಸ್ಥಾನದಲ್ಲಿ ತಂತ್ರಿ ದಕ್ಷಿಣೆ ಕೊಡುವ ತಕರಾರು.

ಪಾಡಿ ಇಗ್ಗುತಪ್ಪದೇವರ ದೇವಸ್ಥಾನದಲ್ಲಿ ತಂತ್ರಿ ದಕ್ಷಿಣೆ ಕೊಡುವ ಬಾಬಿನಲ್ಲಿ ಕಳೆದ 10 ವರ್ಷಗಳಿಂದಲೂ ದೇವತಕ್ಕರಾದ ನಂಬಡಮಾಡ ಕುಟುಂಬಸ್ಥರಿಗೂ ದೇಶತಕ್ಕರಾದ ಪರದಂಡ ಕುಟುಂಬಸ್ಥರಿಗೂ ತಕರಾರು ನಡೆಯುತ್ತಾ ಎಷ್ಟೋ ಸರ್ತಿ ಪಂಚಾಯಿತಿ ನಡೆದು ತೀರ್ಮಾನವಾಗದೆ ನಂಬಡಮಂಡ ಕುಟುಂಬಸ್ಥರು ಮುಜರಾಯಿ ಇಲಾಖೆಯವರಿಗೆ ಪುಕಾರು ಅರ್ಜಿ ಬರಕೊಂಡದಕ್ಕೆ ಇಲಾಖೆಯವರಿಂದ ಇಂಥಾ ತಕರಾರುಗಳನ್ನು ನಾಡು ತಕ್ಕಮುಖ್ಯಸ್ಥರ ಮೂಲಕ ತೀರ್ಮಾನಿಸಿಕೊಳ್ಳಬೇಕೆಂದು ನಂಬಡಮಂಡ ಬೆಳ್ಯಪ್ಪ ಪೆಗ್ಗಡೆ ಕುಟುಂಬಸ್ಥರಿಗೆ ಬಂದ ಹುಕುಂ ಮೇರೆ ಅವರು ನಾಡುತಕ್ಕಮುಖ್ಯಸ್ತರಿಗೆ ಅರ್ಜಿ ಬರಕೊಂಡ ಮೇರೆ ಇದರ ತೀರ್ಮಾನದ ಬಗ್ಗೆ ನಾಡುತಕ್ಕರಾದ ದಿವಾನ್ ಬಹದೂರ್ ಕೇಟೋಳಿರ ಚಂಗಪ್ಪನವರು ಮತ್ತು ನಾಡುತಕ್ಕಮುಖ್ಯಸ್ತರು ತಾರೀಖು 31-12-39ರಲ್ಲಿ ಪಾಡಿದೇವಸ್ಥಾನದಲ್ಲಿ ಸೇರಿ ಚರ್ಚೆ ನಡೆಸಲಾಯಿತು. ಸುಮಾರು 60 ಜನರ ವರೆಗೆ ಹಾಜರಿದ್ದರು. ಎಲ್ಲಾ ವಿಚಾರಿಸಿ 1840ನೇ ಇಸವಿ ಸಪ್ಟಂಬರ್ ತಾ. 14ರಲ್ಲಿ ಬರೆದು ತಸ್ತಿಕು ಓದಿ ನೋಡಿದಲ್ಲಿ ನಂಬಡಮಂಡ ಕುಟುಂಬಸ್ತರೇ ಈ ದೇವರ ತಕ್ಕರೆಂದು ಕಂಡುಬಂದದಾಯಿತು. ಆದರೆ ತಂತ್ರಿದಕ್ಷಿಣೆ ಕೊಡುವದು ನಮೂದಿಸಿಲ್ಲದ್ದರಿಂದ ದಿ. ಬ. ಕೆ.ಚಂಗಪ್ಪನವರು ಎಲ್ಲಾ ನಾಡುತಕ್ಕಮುಖ್ಯಸ್ಥರನ್ನು ವಿಚಾರಿಸಿದಲ್ಲಿ ಯಾರಿಗೂ ಖಂಡನೆ ಹೇಳಲು ಸಾಧ್ಯವಾಗದೆ, ಉಭಯ ಕಡೆಯವರ ಒಪ್ಪಿಗೆ ಮೇರೆ ದೇವರಲ್ಲಿ 'ಹೂವು' ತೆಗಿಸಿ ಯಾರಿಗೆ ಜಯವಾಗಿ ಬರುತ್ತದೋ ಅಂಥಾವರೆ ಇನ್ನು ಮುಂದಕ್ಕೆ ತಂತ್ರಿದಕ್ಷಿಣೆ ಕೊಡಬೇಕೆಂದು ತೀರ್ಮಾನಮಾಡಿ ದೇವರ ತೀರ್ಮಾನಕ್ಕೆ ಬಿಡಲಾಯಿತು. ದೇವರಲ್ಲಿ ಹೂವು ತೆಗೆಸಿ ನೋಡಿದಲ್ಲಿ ದೇವತಕ್ಕರಾದ ನಂಬಡಮಂಡ ಕುಟುಂಬಸ್ತರು ಜಯಶೀಲರಾದರು. ಇದನ್ನು 1840ನೇ ಇಸವಿಯಲ್ಲಿ ಬರೆದ ತಸ್ತಿಕಿನ ಪ್ರತಿಯಲ್ಲಿ ಬರೆಯಿಸಿ ಎಲ್ಲಾ ನಾಡುತಕ್ಕಮುಖ್ಯಸ್ತರು ಸೈನ್ ಮಾಡಲಾಯಿತು. ಇದರ ನಕಲು ಒಂದನ್ನು ಮುಜರಾಯಿ ಇಲಾಖೆಯವರಿಗೂ ಕಳುಹಿಸುವಂತೆ ತೀರ್ಮಾನಿಸಿ ಬರಖಾಸ್ತು ಮಾಡಲಾಯಿತು.

ಹಾಜರಿದ್ದವ.

ಈ ಕೆಲವು ವಿಷಯಗಳನ್ನು ಸಂಬಂಧಪಟ್ಟವರು ಪರ್ಯಾಲೋಚಿಸಿ, ಅನುಕೂಲತೆ ಒದಗಿಸಿಕೊಡಬೇಕಾಗಿ ವಿನಂತಿ.

(1) ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಸಮೀಪಿಗೆ ಮರದ ರಸ್ತೆಗಾಗಿ ಪ್ರೋಸ್ಟಾಫೀಸು ಕಡೆ ಹೋಗುವ ಜನರಿಗೆ ಗೋಚರವಾಗುವ ದೃಶ್ಯಗಳು ಬಹು ಅಸಹ್ಯವಾಗಿದೆ. ಸಂತೆ ದಿನಗಳಲ್ಲೂ ಮತ್ತು ಇತರ ದಿನಗಳಲ್ಲೂ ಯುರೋಪಿಯನ್ ಕ್ಲಬ್ಬಿನ ಕೆಳಗಡೆ, ಮೇಲೆ ಹೇಳಿದ ಕಡೆ ಮುಖ ಮಾಡಿ, ಮೂತ್ರ ವಿಸರ್ಜನೆ ಮತ್ತು ಮಲಮೂತ್ರಾನ ಸಹ ಮಾಡುವದು ಬಹಳ ಜನರಿಗೆ ನಾಚಿಕೆಯನ್ನುಂಟುಮಾಡದಿರದು. ಆದರೆ ಮಾಡುವುದೇನು? ಅಲ್ಲಿ ಅದಕ್ಕೆ ಸರಿಯಾದ ವ್ಯವಸ್ಥೆಯಲ್ಲಿ ಇದಕ್ಕಾಗಿ ಈ ಭಾಗದಲ್ಲಿ ಗಂಡಸರಿಗೂ, ಹೆಂಗಸರಿಗೂ ಯೋಗ್ಯವಾದ ಒಂದು ಕಕ್ಕೂಸನ್ನು ಸಂಬಂಧಪಟ್ಟವರು ಏರ್ಪಡಿಸಿದರೆ ಎಷ್ಟು ಪ್ರಯೋಜನವಾಗಬಹುದು.

(2) ಬಸ್‍ಸ್ಟೇಂಡಿನಲ್ಲಿ ಬೆಳಗ್ಗಿನಿಂದ ಸಾಯಂಕಾಲದ ವರೆಗೆ ಎಷ್ಟೋ ಬಸ್ಸುಗಳು ಬರುವವು-ಹೋಗುವವು. ಇದು ವಿಚಾರಿಸುವವರಿಗೆ ಮಾತ್ರ ಗೊತ್ತು. ಆದರೆ ಮೈಸೂರಿನಲ್ಲಿಟ್ಟಿರುವಂತೆ ಒಂದು ಕಾಲ ನಿಯಾಮಕ ಪಟ್ಟಿಯನ್ನು ಸಾರ್ವಜನಿಕರ ಗಮನಕ್ಕೆ ಬರುವಂತೆ ಇಟ್ಟರೆ ಪ್ರಯಾಣಿಕರಿಗೆ ಬಹಳ ಸಹಾಯವೂ, ಸೌಕರ್ಯವೂ ಆಗುವದರಲ್ಲಿ ಸಂಶಯವಿಲ್ಲ.

(3) ಬಸ್ ಸ್ಟೇಂಡಿನಲ್ಲಿ ಸಿ. ಪಿ. ಸಿ ಕಂಪೆನಿಯವರು ಲಾಯಕ್ಕಾದ ಒಂದು ಆಫೀಸ್ ಮನೆಯನ್ನು ಇಟ್ಟಿದ್ದಾರೆ. ಆದರೆ ಯೋಗ್ಯವಾದ ಮತ್ತು ಸರ್ವರೂ ಅನುಸರಿಸಬಹುದಾದ ಒಂದು ಸ್ಟೇಂಡರ್ಡ್‍ಗಡಿಯಾರವು ಅತ್ಯವಶ್ಯವೆಂದು ಅವರ ವಿಶಾಲ ಬುದ್ಧಿಗೆ ಗೋಚರವಾಗದಿದ್ದದ್ದು ಬಹು ಆಶ್ಚರ್ಯ. ಇಂಥಾ ಚಿಲ್ಲರೆ ಖರ್ಚನ್ನು ಲಕ್ಷಿಸದೆ ಇನ್ನಾದರೂ ಈ ಭಾಗದಲ್ಲಿ ಪ್ರಯಾಣಿಕರಿಗೆ ಸಮಯ ತಪ್ಪದಂತೆ ಸೌಕರ್ಯ ಒದಗಿಸಲು ಮನಸ್ಸು ಮಾಡುವರೇ?

(4) ಬಸ್ ಸ್ಟೇಂಡಿನ ಬಸ್ಸುಗಳಲ್ಲಿ ಕೂತಾಗ ಅನೇಕ ಸಂದರ್ಭಗಳಲ್ಲಿ ಪ್ರಯಾಣಿಕರಿಗೆ ಅವಸರವಾಗಿ ಕಾಗದ ಪತ್ರಗಳನ್ನು ಪೋಸ್ಟು ಮಾಡುವ ಅವಶ್ಯ ಬರುವದಿದೆ. ಆದರೆ ಪೋಸ್ಟಾಫೀಸಿಗೆ ಹೋಗುವಷ್ಟು ಸಮಯವು ಬಸ್ಸಿನವರ ಆತುರದಿಂದ ಸಿಕ್ಕುವದಿಲ್ಲ. ಒಂದು ಪಿಲ್ಲರ್ ಬಾಕ್ಸ್ 'ಯಾ' ಚಿಕ್ಕ ಪೆಟ್ಟಿಗೆ ಇದುವಷ್ಟು ಪೋಸ್ಟಾಫೀಸಿನವರು ಕೃಪೆ ಮಾಡಿದ್ದರೆ ಪ್ರಯಾಣಿಕರಿಗೆ ಬಹಳ ಸೌಲಭ್ಯವನ್ನೊದಗಿಸಿದಂತಾಗುತ್ತಿತ್ತು.

(5) ಮುನ್ಸಿಪಾಲಿಟಿಯವರು ಬೆಳಕಿಗಾಗಿ ತುಂಬಾ ಖರ್ಚು ಮಾಡುತ್ತಿರಬಹುದು. ಆದರೆ ಒಂದೊಂದು ಕಂಭದಲ್ಲಿ ಕೃಷ್ಣಪಕ್ಷದ ಒಂದೊಂದು ದಿನದಲ್ಲಿ ಬೆಳಕು ಇರುವದೂ, ಒಂದೊಂದು ದಿನದಲ್ಲಿ ಇಲ್ಲದಿರುವದೂ ಕಾಣಬರುತ್ತದೆ. ಬೆಳಕು ಇದದ ದಿನಗಳಲ್ಲಿ ಆ ರಸ್ತೆಯ ಭಾಗದಲ್ಲಿ ಯಾರೂ ತಿರುಗಾಡುವುದಿಲ್ಲವೆಂದು ತಿಳಿಯೋಣವೇ? ಲೆಕ್ಕದ ದೀಪಗಳು ಕ್ರಮವಾಗಿ ಇರಿಸಲ್ಪಟ್ಟವೆಯೋ? ಇಲ್ಲವೋ ಎಂಬುವನ್ನು ನೋಡುವವರೂ ಇಲ್ಲವೇ? ಖರ್ಚು ಮಾತ್ರ ಲೆಕ್ಕಕ್ಕೆ ಬರಬಹುದು. ಸಂಬಂಧ ಪಟ್ಟವರು ಇದರ ವಿಚಾರ ನೋಡಿಕೊಳ್ಳಬೇಕಾದದ್ದು ನ್ಯಾಯವಿದೆ.

'ತಿರುಕ.'

ಅಂಚೆಯ ಮೂಲಕ ಆಹಾರ.

ಓಸ್ಲೋವಿನ ಜರ್ಮನ್ ರಾಯಭಾರಿಗಳು ಒಂದು ಹೊಸ ಪ್ರಸಿದ್ಧಿ ಪತ್ರ ಹೊರಡಿಸಿದ್ದಾರೆ. ಆ ಪ್ರಸಿದ್ಧಿ ಪತ್ರದಿಂದ ಜರ್ಮನಿಯಲ್ಲಿ ಆಹಾರ ಸಾಮಗ್ರಿಗಳಿಗಿರುವ ಅಭಾವವೆಷ್ಟೆಂಬುದೂ, ಅಲ್ಲದೆ ಹೊರದೇಶಗಳಿಂದ ತನಗೆ ಆಹಾರ ಸಾಮಗ್ರಿಗಳು ಬರದಂತೆ ಮಿತ್ರ ಮಂಡಲಿಯವರು ಹಾಕಿರುವ ಆರ್ಥಿಕ ಪ್ರತಿಬಂಧಕಗಳ ಬಿಗಿ ಎಷ್ಟು ಪ್ರಬಲವೆಂಬುದೂ ಮತ್ತು ಆ ಪ್ರತಿಬಂಧಕಗಳಿಂದ ಪಾರಾಗಲು ಜರ್ಮನಿ ಸರ್ಕಾರವು ಅನುಸರಿಸುತ್ತಿರುವ ಮಾರ್ಗವೆಂತಹುದೆಂಬುದೂ ವ್ಯಕ್ತ ಪಡುತ್ತದೆ.

ಜರ್ಮನಿಗೆ ಹೊರದೇಶಗಳವರು ಆಹಾರ ಪದಾರ್ಥಗಳನ್ನು ಅಂಚೆಯ ಮೂಲಕ ಕಳುಹಿಸಬಹುದೆಂದೂ, ಅಂಚೆಯ ಬಾಂಗಿಗಳಲ್ಲಿನ ಆಹಾರ ಪದಾರ್ಥವು 25 ಮಾರ್ಕ್‍ಗಳ ಬೆಲೆಗೆ ಮತ್ತು 5 ಕಿಲೋಗಳಿಗಿಂತ ಹೆಚ್ಚು ತೂಕಕ್ಕೆ ಮೀರಿರದಿದ್ದರೆ ಜರ್ಮನಿಯೊಳಕ್ಕೆ ಅವು ಸುಂಕವಿಲ್ಲದೆಯೇ ತಲ್ಪುವುವೆಂದೂ ಪ್ರಚುರಪಡಿಸಲಾಗಿದೆ.

ಈ ಹೊಸ ವ್ಯವಸ್ಥೆಯು ಇಷ್ಟಕ್ಕೇ ನಿಲ್ಲದೆಂದೂ ಬ್ರಿಟಿಷ್ ನಿಷಿದ್ಧವಸ್ತುಗಳ ಹತೋಟಿಕಾರರು ಈ ಹೊಸ ವ್ಯಾಪಾರವನ್ನು ತಡೆಗಟ್ಟಬಹುದೆಂಬ ಸೂಚನೆಗಳು ಇವೆಯೆಂದೂ ಹೇಳಲಾಗಿದೆ.

ಕಾಂಗ್ರೆಸ್ಸಿಗರು ಹಾಗೂ ನೂಲುವದು.

ಪ್ರಕಟಣೆ 32.

ದೇಶದ ಸ್ವಾತಂತ್ರ್ಯದ ಹೋರಾಟದಲ್ಲಿ ರಚನಾತ್ಮಕ ಕಾರ್ಯವು ಎಷ್ಟು ಮಹತ್ವದ ಭಾಗವನ್ನು ಪಡೆದಿದೆಯೆಂಬುದು ಆಚೀಚಿನ ವರ್ಕಿಂಗ್ ಕಮಿಟಿಯ ನಿರ್ಣಯಗಳು ಮತ್ತು 'ಹರಿಜನ'ದಲ್ಲಿ ಮಹಾತ್ಮಾಜಿಯವರ ಲೇಖನಗಳಿಂದ ಜನತೆಗೆ ಸ್ಪಷ್ಟವಾಗಲಿಕ್ಕೆ ಸಾಕು. ರಚನಾತ್ಮಕ ಕಾರ್ಯಗಳು ಅದರಲ್ಲೂ ಮುಖ್ಯತಃ ಖಾದಿಯ ಕಾರ್ಯಕ್ರಮವು ದೇಶದ ಆರ್ಥಿಕ ದರಿದ್ರತೆಯನ್ನು ದೂರ ಮಾಡುವ ಸಾಧನಗಳಲ್ಲದೆ ಅಹಿಂಸೆ ಸಾಹಾರ್ದ ದ್ಯೋತಕವಾಗಿದೆ. ಅಂತೆಯೇ ಈ ಸಲದ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ವರ್ಕಿಂಗ್ ಕಮಿಟಿಯವರು ರಚನಾತ್ಮಕ ಕಾರ್ಯಗಳ ವಿಶೇಷತಃ ಖಾದಿಯ ಹಾಗೂ ಸ್ವತಃ ನೂಲುವದರ ಉಲ್ಲೇಖ ಮಾಡಿರುವರು.

ವರ್ಕಿಂಗ್ ಕಮಿಟಿಯ ಸೂಚನೆಯಂತೆ ಕಾಂಗ್ರೆಸ್ಸಿಗರು ನೂಲಲು ಅನುಕೂಲ ಮಾಡಿಕೊಡುವದಕ್ಕಾಗಿ ಅಖಿಲಭಾರತ ಚರಖಾ ಸಂಘದ ಸಹಾಯದಿಂದ ಚರಕ, ತಕಲಿ, ಹಂಜಿ ಮುಂತಾದ ನೂಲುವ ಸಾಧನಗಳು ಪ್ರಾಂತದಲ್ಲಿ ಎಲ್ಲೆಡೆಗಳಲ್ಲಿಯೂ ಸಾಕಷ್ಟು ಸಿಗುವ ವ್ಯವಸ್ಥೆ ಮಾಡಲಾಗಿದೆ. ಧಾರವಾಡದಲ್ಲಿಯ ಪ್ರಾಂತೀಯ ಕಾಂಗ್ರೆಸ್ ಸಮಿತಿ ಪ್ರಾಂತದ ಎಲ್ಲ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಮತ್ತು ಚರಕ ಸಂಘದ ಎಲ್ಲ ಖಾದಿ ಭಂಡಾರಗಳಲ್ಲಿ ಕೆಳಗಿನ ದರಗಳ ಪ್ರಕಾರ ಚರಕ, ತಕಲಿ ಮುಂತಾದವುಗಳು ದೊರಕಲ್ಪಡುತ್ತವೆ.

1. (ಅ) ಚರಕ (ಯರವಾಡ ಮಾದರಿ)	ರೂ.	3	0	0
	,,	3	10	0
2. ತಕಲಿ	,,	0	2	0
3. ಹಂಜಿಗಳು (1 ಪೌಂಡು)	,,	0	8	0

ಜಿಲ್ಲಾ ಕಾಂಗ್ರೆಸ್ ಸಮಿತಿಗಳು ತಮ್ಮ ಕಡೆಗೆ ಬರುವ ಈ ಸಮ್ಬಂಧದ ಬೇಡಿಕೆಗಳನ್ನು ಮತ್ತು ಬೇಕಾದ ಮಾಲಿನ ಅರ್ಧ ಹಣವನ್ನು ಮುಂಗಡ ಒಟ್ಟುಗೂಡಿಸಿ ಸಮೀಪದಲ್ಲಿರುವ ಖಾದಿ ಭಂಡಾರದಲ್ಲಿ ಅವುಗಳಿಗೋಸ್ಕರ 'ಆರ್ಡರ್' ಕೊಡಬೇಕು. ಅಂದರೆ ಖಾದಿ ಭಂಡಾರಗಳು ತಡ ಮಾಡದೆ ಬೇಡಿಕೆಗಳನ್ನು ಪೂರೈಸಿ ಕೊಡುವದು ಸಾಧ್ಯವಾಗುತ್ತದೆ.

ನೂಲುವ ವ್ರತ ಹಿಡಿದಿರುವ ಪ್ರಾಂತದಲ್ಲಿಯ ಎಲ್ಲ ಕಾಂಗ್ರೆಸಿಗರೂ, ಮಾಡಿರುವ ಈ ಅನುಕೂಲತೆಗಳ ಪೂರ್ಣ ಉಪಯೋಗ ತೆಗೆದುಕೊಳ್ಳುವರೆಂದು ಆಶಿಸಲಾಗಿದೆ.

ನಾ. ಸು. ಹರ್ಡೀಕರ್,
ಗೌ. ಕಾರ್ಯದರ್ಶಿ,
ಕ. ಪ್ರಾಂ. ಕಾಂ. ಕಮಿಟಿ.

ಖಾದಿಯೂ ಅಹಿಂಸೆಯ ಪ್ರತೀತವು.

ಖಾದೀ ಪ್ರಕಟಣೆ ೪.

ಎಲ್ಲೆಲ್ಲಿಯೂ ಹಿಂಸೆಯು ವ್ಯಾಪಿಸಿ ರಾಷ್ಟ್ರಗಳನ್ನೇ ಆಹುತಿ ತೆಗೆದುಕೊಳ್ಳುತ್ತಿರುವ ಈಗಿನ ಕಾಲದಲ್ಲಿ, ಜಗತ್ತಿನ ಶಾಂತಿ ದೂತರಾದ ಮಹಾತ್ಮರು ಅಹಿಂಸಾಸ್ತ್ರವನ್ನು ಘೋಷಿಸುತ್ತ ಬಂದಿದ್ದಾರೆ. ಹಿಂಸೆಯು ಅಶಾಂತಿಗೆ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಒಂದು ವ್ಯಕ್ತಿಗೆ ತನ್ನ ನ್ಯಾಯವಾದ ಹಕ್ಕುಗಳನ್ನು ಪಡೆಯಲು ಭಾರವಂತೆ ಮಾಡುವ ಪಾಶವೀ ಶಕ್ತಿಯು ಅಲ್ಲಲ್ಲಿ ಅನೇಕ ಮುಖಗಳಿಂದ ಹಿಂಸೆಯ ರೂಪದಲ್ಲಿ ಪ್ರಕಟವಾಗುವದು. ಗಿರಣಿಯೊಡೆಯರ ತಂತ್ರದಿಂದ, ಲಾಭದಾಶೆಯಿಂದ ಬಡ ಕೂಲಿಗಾರನಿಗೆ ಆತನ ದುಡಿಮೆಯ ಲಾಭ ಆಗತಕ್ಕಷ್ಟು ಆಗಲು ಸಾಧ್ಯವಿಲ್ಲ. ಕೂಲಿಗಾರನು ಬೆವರು ಸುರಿಸಿ ದುಡಿದ ದುಡಿಮೆಯ ಫಲ ಬಂಡವಳದಾರನ ಕಿಸೆಗೆ! ಬಂಡವಲದಾರನು ತನ್ನ ಸ್ವಂತ ಲಾಭಕ್ಕಾಗಿ ಬಡ ಕೂಲಿಗಾರರ ದುಡಿಮೆಯನ್ನು ಸುಲಿದುಕೊಳ್ಳುವದೂ ಒಂದು ಹಿಂಸೆಯೇ ಸರಿ. ಗಿರಣಿ ಬಟ್ಟೆಯು ಹೀಗೆ ಹಿಂಸೆಯ ಪ್ರತೀತವೆನಿಸುವದು. ಖಾದಿಯಲ್ಲಿ ಸುಲಿಗೆಯ ಸುಳಿವೇ ಇಲ್ಲ. ಅಖಿಲ ಭಾರತ ಚರಕ ಸಂಘಕ್ಕೆ ಇಳಿಯಬಹುದಾದ ಲಾಭಕ್ಕೆ ನೂಲುವವರೇ ಒಡೆಯರು. ಅದು ನೂಲುವವರ ಮತ್ತು ಅವರ ಹಿತಕ್ಕಾಗಿಯೇ ಉಪಯೋಗಿಸಲ್ಪಡುವದು. ಆದುದರಿಂದ ಖಾದಿಯ ಉತ್ಪತ್ತಿಯಲ್ಲಿ ಕೂಲಿಕಾರರ ಸುಲಿಗೆ ಇಲ್ಲ. ದಿನಾಲು ೮ ತಾಸು ನೂಲುವವರಿಗೆ ೩ ಆಣೆ ಕೂಲಿ ಬೀಳತಕ್ಕದೆಂದು ಮಹಾತ್ಮರು ನಿರ್ಧರಿಸಿ, ಅದರಂತೆ ನೂಲಿನ ಧಾರಣೆಯನ್ನು ನಿಶ್ಚಯಿಸಿರುವರು. ಹೀಗೆ ಕಂಗಾಲ ಸ್ಥಿತಿಯಿಂದ ಬಡಬಾಂಧವರನ್ನು ಉದ್ಯೋಗದ ಮೂಲಕ ಉದ್ಧಾರ ಮಾಡಿ, ನಿರುದ್ಯೋಗತನವನ್ನು ನಿರ್ಮೂಲಗೊಳಿಸಿ, ಎಲ್ಲರಿಗೂ ಶಾಂತಿಯನ್ನು ನೀಡುವ ಖಾದಿಯು ಅಹಿಂಸೆಯ ದ್ಯೋತಕವು. ಖಾದಿಯ ಉತ್ಪತ್ತಿಯು ಹೆಚ್ಚಾದಂತೆ ಜನರಲ್ಲಿ ರೂಢವಾದ ನಿರುದ್ಯೋಗತನವು ಅಳಿಯುವದು. ಬಡವರ ಹೊಟ್ಟೆಗೆ ತುಣುಕು ರೊಟ್ಟಿಯು ದೊರೆಯುವದು. ಅದಕ್ಕಾಗಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ನಿರ್ಣಯಿಸಿದಂತೆ ಸಾಧಾರಣವಾಗಿ ಆಗಬಹುದಾದ ಮಾರಾಟಕ್ಕಿಂತ ರೂ. ೫೦,೦೦೦ ಹೆಚ್ಚು ಮಾರಾಟವು ೧೫ನೇ ಮಾರ್ಚದೊಳಗೆ ಆಗುವಂತೆ ಎಲ್ಲರೂ ನೇರವಾಗಿ ಖಾದಿಯ ಸೇವೆಗೆ ಸಹಾಯ ನೀಡುವಿರೆಂದು ನಂಬಿದ್ದೇನೆ.

ಎಲ್ಲ ಜಾತಿಯ ಕಲ್ಯಾಣವೇ ಖಾದಿಯ ಉದ್ದೇಶ.

ಪ್ರಕಟಣೆ ನಂ. ೫.

ರಾಜಕೀಯ ಬಿಕ್ಕಟ್ಟಿನ ಕಾಲದಲ್ಲಿ ಕಾಂಗ್ರೆಸ್ಸು ರಚನಾತ್ಮಕ ಕಾರ್ಯಕ್ರಮದ ಕಡೆಗೆ ವಿಶೇಷವಾಗಿ ಲಕ್ಷ್ಯ ಕೊಡತಕ್ಕದ್ದೆಂದು ವರ್ಕಿಂಗ್ ಕಮಿಟಿಯವರು ಮೇಲಿಂದ ಮೇಲೆ ಹೇಳುತ್ತ ಬಂದಿದ್ದಾರೆ. ಖಾದಿ ಪ್ರಚಾರವು ರಚನಾತ್ಮಕ ಕಾರ್ಯಗಳಲ್ಲಿ ಶ್ರೇಷ್ಠವಾದದ್ದೆಂದು ನಮ್ಮ ಮಾರ್ಗದರ್ಶಕರಾದ ಮಹಾತ್ಮ ಗಾಂಧಿಯವರು ಒತ್ತಿ ಹೇಳಿದ್ದಾರೆ. ರಚನಾತ್ಮಕ ಕಾರ್ಯದಿಂದ ಸರ್ವಜನರ ಕಲ್ಯಾಣವು ಸಮಾನವಾಗಿ ಸಾಧಿಸಲ್ಪಡುವದರಿಂದ ಅಲ್ಲಿ ಜಾತೀಯತೆಗೆ ಎಡೆ ಇಲ್ಲ. ದೇಶೀಯ ಸರ್ವತೋಮುಖ ಉನ್ನತಿಯ ದೃಷ್ಟಿಯಿಂದಲೇ ರಚನಾತ್ಮಕ ಕಾರ್ಯಗಳನ್ನು ಕೈಕೊಳ್ಳುವದರಿಂದ ವ್ಯಕ್ತಿಗಳ ಶ್ರೇಷ್ಠತೆಗೆ ಅಲ್ಲಿ ಸ್ಥಾನಮಾನಗಳಲ್ಲಿ ಕಾರ್ಯದ ಮಹತ್ವವು ಅದರಿಂದ ಜನರಿಗೆ ಆದ ಕಲ್ಯಾಣದ ಮೇಲಿಂದಲೇ ಅಳೆಯಲ್ಪಡುವದು. ಕರ್ನಾಟಕದಲ್ಲಿ ಕಳೆದ ವರ್ಷ ಖಾದಿಯ ಕೆಲಸದಿಂದ ಕೆಳಗಿನಂತೆ ಜನರು ಹೊಟ್ಟೆ ತುಂಬಿಕೊಂಡಿರುವರು.

	ನೂಲುವವರು.	ನೇಯುವವರು.	ಹಿಂಜುವವರು
ಹರಿಜನರು	457	38	
ಹಿಂದುಗಳು	9090	40	178
ಮುಸಲ್ಮಾನರು	895	150	
	10442	590	

ಇದಲ್ಲದೆ ಹತ್ತಿ ಅರೆಯುವವರು, ಕದರು ಮಾಡುವ ಕಮ್ಮಾರರು, ಬಡಿಗರು, ಪಟಗಾರರು, ಬೆಸ ಕಟ್ಟುವವರು, ಲಾಳಿ ಮಾಡುವವರು, ಅಗಸರು, ಅಚ್ಚು ಮಾಡುವವರು, ಬಣ್ಣಗಾರರು, ಬಣ್ಣದ ಚಕ್ಕೆಗಳನ್ನು ತರುವ ಲಮಾಣಿಯವರು ಮುಂತಾದ ಎಷ್ಟೋ ಜನರಿಗೂ ಖಾದಿಯು ಉದ್ಯೋಗವನ್ನು ಕಲ್ಪಿಸಿಕೊಟ್ಟಿರುವದು. ಖಾದಿಯ ಪ್ರಸಾರವು ಹೆಚ್ಚಾದಂತೆ ಮೇಲೆ ಹೇಳಿದ ಕೈ ಕೆಲಸಗಾರರ ಸಂಖ್ಯೆಯೂ ಬೆಳೆಯುತ್ತಾ ಹೋಗುವದು. ಇಷ್ಟೊಂದು ಜನತೆಯ ಜೀವನಾಧಾರವಾದ ಖಾದಿಯು ಎಲ್ಲ ಜಾತಿಯ ಜನರ ಕಲ್ಯಾಣ ಮಾಡುವ ಕಾರ್ಯವೆಂಬುವುದರಲ್ಲಿ ಸಂದೇಹವೇನು? ಇಂಥಾ ವಿಧಾಯಕ ಕಾರ್ಯದಲ್ಲಿಯೇ ರಾಷ್ಟ್ರದ ಉತ್ಕರ್ಷವು ಅಡಕವಾಗಿರುತ್ತದೆ. ಆದುದರಿಂದ ಕರ್ನಾಟಕ ಬಾಂಧವರೇ, ಬರುವ 15ನೇ ಮಾರ್ಚದೊಳಗಾಗಿ 50 ಸಾವಿರ ರೂ. ಬೆಲೆಯ ಖಾದಿಯನ್ನು ಕೊಂಡು ಮುಂದಿನ ವರ್ಷದ ಖಾದಿಯ ಉತ್ಪತ್ತಿಗೆ ಅಸ್ಪದ ಕೊಡಿರಿ.

ಖಾದಿಯ ಕಾರ್ಯಕ್ಕೆ ಎಲ್ಲರೂ ನೆರವಾಗಿರಿ.

ಖಾದಿ ಪ್ರಕಟಣೆ ೬.

ಇತ್ತಿತ್ತಲಾಗಿ ಚರಖದಿಂದ ನೂಲುವವರ ಸಂಖ್ಯೆಯು ಬೆಳೆಯುತ್ತ ನಡೆದಿದೆ. ಎಷ್ಟೋ ಸ್ಥಳಗಳಿಂದ, ನಮ್ಮಲ್ಲಿ ಚರಖಾ ಸಂಘದ ಉತ್ಪತ್ತಿ ಕೇಂದ್ರವನ್ನು ಸ್ಥಾಪಿಸಿರಿ ಎಂಬ ಬಿನ್ನಹಗಳು ಚರಕಾ ಸಂಘದ ಚಾಲಕರ ಕಡೆಗೆ ಬಂದಿವೆ. ಇಷ್ಟೇ ಅಲ್ಲ ಚರಖಾ ಸಂಘದವರು ತಮ್ಮಲ್ಲಿ ಕೇಂದ್ರ ತೆರೆದು ತಮ್ಮ ಭಾಗದ ಜನರಿಗೆ ಉದ್ಯೋಗ ಕಲ್ಪಿಸಿ ಕೊಡಲೊಲ್ಲರು ಎಂಬ ಅರ್ಥದ ದೂರುಗಳು ನಮ್ಮ ಕಡೆಗೆ ಬರತೊಡಗಿವೆ. ಖಾದೀ ಕಾರ್ಯಕ್ಷೇತ್ರವು ವಿಸ್ತಾರವಾದ ಎಲ್ಲ ಕಡೆಗೂ ಕೇಂದ್ರಗಳಾಗುವದೇ ಚರಖ ಸಂಘದ ಧ್ಯೇಯವಿದೆ. ಆದರೆ ಚರಖಾ ಸಂಘದ ಬಂಡವಲು ಮರ್ಯಾದಿತವಿದ್ದುದರಿಂದ ಜನರು ನೂತ ಎಲ್ಲ ನೂಲನ್ನು ಕೊಳ್ಳಲು ಅಸಮರ್ಥವಾಗುತ್ತದೆ. ಇತ್ತೀಚೆಗೆ ಚರಖ ಸಂಘದವರು ನೂಲುವವರಿಗೆ ದಿನಾಲು 3 ಆಣೆಯಂತೆ ಕೂಲಿ ಬೀಳುವ ಹಾಗೆ ನೂಲಿನ ಬೆಲೆಯನ್ನು ಹೆಚ್ಚಿಸಿರುವದರಿಂದ ನೂಲುವವರು ಹೆಚ್ಚು ಆಸಕ್ತಿಯಿಂದ ನೂಲುವದರಲ್ಲಿ ತೊಡಗಿದ್ದಾರೆ. ಅದರಂತೆ ನೂಲುವ ಉದ್ಯೋಗದಲ್ಲಿ ಹೊಸ ಹೊಸ ಜನರು ಕೈ ಹಾಕ ಹತ್ತಿದ್ದಾರೆ. ಇದೊಂದು ಶುಭಚಿಹ್ನ. ಆದರೆ ಈ ನೂಲುವ ಎಲ್ಲ ಭಗಿನಿಯರನ್ನೂ, ಉದ್ಯೋಗಕ್ಕೆ ಹಚ್ಚುವ ಶಕ್ತಿಯನ್ನು ಚರಖ ಸಂಘಕ್ಕೆ ತಂದು ಕೊಡುವದು ಖಾದಿ ಗ್ರಾಹಕರ ಮೇಲೆಯೇ ಅವಲಂಬಿಸಿದೆ. ಖಾದಿ ಗ್ರಾಹಕರ ಸಂಖ್ಯೆಯು ನೂಲುವವರ ಸಂಖ್ಯೆಯಂತೆ ಬೆಳೆಯದೆ ಇದ್ದುದರಿಂದ ಬಂಡವಲೆಲ್ಲವೂ ಖಾದಿಯಲ್ಲಿ ತೊಡಗಿ, ಖಾದೀ ಕೇಂದ್ರಗಳಲ್ಲಿ ಈಗ ನೂಲು ಅತಿಶಯವಾಗಿ ಕೂಡಿ ಬಿದ್ದು ಖಾದಿಯ ಉತ್ಪತ್ತಿ ಕಾರ್ಯಕ್ಕೆ ದೊಡ್ಡ ಎಡರು ಉಂಟಾಗಿರುತ್ತದೆ. ನೂಲುವವರ ಸಂಖ್ಯೆಯು ಹೆಚ್ಚಾದಂತೆ ಖಾದೀಧಾರಿಗಳ ಸಂಖ್ಯೆಯು ಬೆಳೆದರೆ ಮಾತ್ರ ಖಾದಿಯ ಕಾರ್ಯವು ನಿರಾತಂಕವಾಗಿ ಸಾಗಬಹುದು. ಆದುದರಿಂದ ಈ ವರ್ಷ ನೂಲಿನ ಸುಗ್ಗಿಯೊಳಗಾಗಿ, ಅಂದರೆ ಬರುವ ಮಾರ್ಚದೊಳಗಾಗಿ ಚರಖ ಸಂಘದಲ್ಲಿ ರಾಶಿರಾಶಿಯಾಗಿ ಕೂಡಿರುವ ಮಾಲನ್ನು ಮಾರಾಟ ಮಾಡಿಸುವದು ಎಲ್ಲ ಕಾಂಗ್ರೆಸ್ ಸಮಿತಿಗಳ ಕರ್ತವ್ಯವೆಂದು ತಿಳಿಯಬೇಕು. ಅದ್ದರಿಂದಲೇ ಕರ್ನಾಟ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕಾರ್ಯಕಾರೀ ಮಂಡಲವು 'ಸಾಧಾರಣವಾಗಿ ಮಾರಾಟವಾಗುವ ಖಾದಿಯನ್ನು ಬಿಟ್ಟು ಇದೇ 1940 ನೇ ಮಾರ್ಚ 15 ರೊಳಗಾಗಿ 50,000 ರೂ. ಹೆಚ್ಚಿನ ಖಾದಿಯನ್ನು ಮಾರಬೇಕೆಂದು ನಿರ್ಧರಿಸಿದ್ದಾರೆ' ಅದಕ್ಕೆ ಕಾಂಗ್ರೆಸ್ ಅಭಿಮಾನಿಗಳೆಲ್ಲರೂ ಸಹಾಯ ಮಾಡಬೇಕು.

ಸ್ವಾತಂತ್ರ್ಯ ದಿನಾಚರಣೆ.

ಪ್ರಕಟಣೆ ೭೩.

(೬-೧-೧೯೪೦)

ಹಿಂದೂಸ್ಥಾನದ ಇತಿಹಾಸದಲ್ಲಿ ಜನವರಿ ೨೬ನೇ ತಾರೀಕು ಅತಿ ಮಹತ್ವದ ದಿನಗಳಲ್ಲೊಂದಾಗಿದೆ. ಹತ್ತು ವರ್ಷಗಳ ಹಿಂದೆ ಇದೇ ದಿನ ಹಿಂದೂಸ್ಥಾನವು 'ಸ್ವಾತಂತ್ರ್ಯ'ಗಳಿಸಲು ತನಗಿರುವ ಇಚ್ಛೆಯನ್ನು ಘೋಷಣೆ ಮಾಡಿತು. ಇನ್ನೂ ಈ ವರೆಗೆ ಆ ಪ್ರತಿಜ್ಞೆಯನ್ನು ಪೂರೈಸಲು ಶಕ್ಯವಾಗಿಲ್ಲ. ಅಂದಿನಿಂದ ನಮ್ಮ ದೇಶವು ತನ್ನ ಹೆಚ್ಚಿನ ಧ್ಯೇಯವನ್ನು ಸಾಧಿಸಲು ಎಷ್ಟೋ ಕಠಿಣ ದಿನಗಳನ್ನು ದಾಟಿದೆ. ಸ್ವಾತಂತ್ರ್ಯ ಧ್ವಜವನ್ನು ಹಾರಾಡಿಸುತ್ತಿರಲು ಭಾರತ ಮಾತೆಯ ಅನೇಕ ಪುತ್ರ ಪುತ್ರಿಯರು ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿರುವರು. ಸ್ವಾತಂತ್ರ್ಯಕ್ಕೋಸುಗ ಇನ್ನೊಂದು ಸಲ ಉಗ್ರ ರೂಪದಲ್ಲಿ ಹೋರಾಟ ಹೂಡಬಹುದಾದ ವಿಷಯ ಪರಿಸ್ಥಿತಿಯಲ್ಲಿ ಈ ಸಲದ ಈ ಚಾರಿತ್ರಿಕ ದಿನಾಚರಣೆಗೆ ಹೆಚ್ಚು ಮಹತ್ವ ಬಂದಿರುವದು. ಕಾರಣ ಈ ದಿನಾಚರಣೆಯನ್ನು ಯುಕ್ತ ರೀತಿಯಲ್ಲಿ ಗಂಭೀರ್ಯದಿಂದ ಎಲ್ಲಾ ಕಾಂಗ್ರೆಸಿಗರು ಆರಿಸುವದು ಆವಶ್ಯಕ.

ನಮ್ಮ ಪ್ರಾಂತದಲ್ಲಿನ ಎಲ್ಲಾ ಕಾಂಗ್ರೆಸ್ ಜನರೂ, ಬರುವ ೨೬-೧-೪೦ ನೇ ದಿನ ವರ್ಕಿಂಗ್ ಕಮಿಟಿಯವರು ಹಾಕಿಕೊಟ್ಟ ಪ್ರತಿಜ್ಞೆಯನ್ನೂ ತೆಗೆದುಕೊಂಡು ಅದರಂತೆ ನಡೆಯುವರೆಂದು ಆಶಿಸಲಾಗಿದೆ.

ಅಂದು ಪ್ರತಿಜ್ಞೆ ತೆಗೆದುಕೊಳ್ಳಲಿಚ್ಛಿಸುವವರಿಗೆ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಪ್ರತಿಜ್ಞೆಯ ಪ್ರತಿಗಳನ್ನು ಒದಗಿಸಿಕೊಡಬೇಕಲ್ಲದೆ ಪ್ರಾಂತೀಯ ಸಮಿತಿಯಿಂದ ಹಾಕಿಕೊಡಲಾಗುವ ಕಾರ್ಯಕ್ರಮವನ್ನು ಅಂದು ಅನುಸರಿಸಲು ತಮ್ಮಲ್ಲಿನ ಎಲ್ಲ ಅಧೀನ ಕಾಂಗ್ರೆಸ್ ಸಮಿತಿಗಳಿಗೂ ಸೂಚನೆ ಕೊಡಬೇಕಾಗಿ ವಿನಂತಿ.

ಎನ್. ಎಸ್. ಹರ್ಡೀಕರ್,
ಗೌ. ಕಾರ್ಯದರ್ಶಿ,
ಕ. ಪ್ರಾ. ಕಾ. ಸಮಿತಿ.

ವಿನಂತಿ.

ರಾಷ್ಟ್ರವು ಪ್ರಗತಿಪಥದಲ್ಲಿ ಮುನ್ನಡೆದು, ದೇಶವು ಸುಭಿಕ್ಷವಾಗಿ ಸ್ವಾತಂತ್ರ್ಯ ಪಥವು ಸುಗಮವಾಗಬೇಕಾದರೆ ಖಾದಿ ಪ್ರೋತ್ಸಾಹವೇ ಸುಲಭ ಹಾದಿ ಎಂಬುವದನ್ನು ಮುಖಂಡರು ಸಾರಿ ಹೇಳಿದ್ದಾರೆ. ಆದ್ದರಿಂದಲೇ 'ಬಡವರ ಒಡಲಿಗೆ ಅಡಿಗೆಯೂಗಿರುವ ಬೆಡಗು ಸುರಿವ ಖಾದಿ' ಎಂದು ಕವಿಗಳು ವರ್ಣಿಸಿರುವರು. ಖಾದಿಯು ಬಡ ಜನರ ಜೀವಾಳ. ಬಂಡವಾಳದಾರ ಹಿಡಿತದಲ್ಲಿ ಸಿಕ್ಕಿ ಗುಲಾಮರಾಗಿ ನರಳುತ್ತಿರುವವರನ್ನು ಸ್ವತಂತ್ರರನ್ನಾಗಿ ಮಾಡಬಲ್ಲ ಒಂದು ದಾರಿಯೆಂದರೆ ಖಾದಿ ಪ್ರೋತ್ಸಾಹ. ಕರ್ನಾಟಕದ ಎಲ್ಲೆಡೆಗಳಲ್ಲಿಯೂ ಕಾಂಗ್ರೆಸಿನ ಅಪ್ಪಣೆಯಂತೆ ವಿಧಾಯಕ ಕಾರ್ಯಕ್ರಮವಾದ ಈ ಖಾದೀ ಪ್ರೋತ್ಸಾಹವು ಭರದಿಂದ ನಡೆಯುತ್ತಿದೆ. ದಿನೇ ದಿನೇ ಖಾದಿಯ ಮಹತ್ವವನ್ನು ಜನತೆಯು ಮನಗಾಣುತ್ತಿದೆ. ತಾರೀಕು 26-1-40 ರಂದು ಸ್ವಾತಂತ್ರ್ಯ ಪ್ರತಿಜ್ಞೆ ಮಾಡಬೇಕಿದೆ. ಆ ಪ್ರತಿಜ್ಞೆಯಲ್ಲಡಕವಾಗಿರುವ ನೂಲುವ ಹವ್ಯಾಸವನ್ನು ಪ್ರತಿಯೊಬ್ಬನು ಕೈಕೊಳ್ಳುವದೂ ಆದ್ಯಕರ್ತವ್ಯವಿದೆ. ಅದರ ಸಲುವಾಗಿಯೇ ಚರಖಾ, ತಕಲಿ, ಹಂಜಿಗಳನ್ನು ಅಪೇಕ್ಷಿಸುವವರಿಗೆ ಸರಬರಾಯಿ ಮಾಡುವ ಕಾರ್ಯವನ್ನಾದರೂ ಕೈಕೊಳ್ಳಲಾಗಿದೆ. ಪ್ರತಿಯೊಬ್ಬನು ಮನೆಯಲ್ಲಿ ನೂಲುವ ಹವ್ಯಾಸವನ್ನು ಕೈಕೊಂಡರೆ ಭಾರತೀಯರನ್ನು ಆವರಿಸಿರುವ ದಾರಿದ್ರ್ಯವು ಮಾಯವಾಗುವದೆಂದು ಬೇರೆ ಹೇಳಬೇಕಿಲ್ಲ. ಎಲ್ಲಾ ಜಾತಿ ಮತಗಳ ಕಲ್ಯಾಣವನ್ನು ಸರ್ವತೋಮುಖವಾಗಿ ಸಾಧಿಸಬಲ್ಲ ಖಾದಿಗೆ ಪ್ರೋತ್ಸಾಹವಿತ್ತು ಪ್ರತಿಯೊಬ್ಬನೂ ಮೇಲೆ ಸೂಚಿಸಿದಂತೆ ನೂಲುವ ಆವಶ್ಯಕಗಳನ್ನು ಪಡೆದು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕೆಂದು ವಿನಂತಿ ಮಾಡುವದಾಗಿದೆ. ಮೇಲಾಗಿ ಈ ವರ್ಷದ ಪ್ರತಿಜ್ಞೆಯಂತೆ ನಮ್ಮ ಪ್ರಾಂತದಲ್ಲಿ 1000 ರೂ. ಖಾದಿ ಮಾರಾಟವಾಗಬೇಕೆಂದಿರುವದಾದರೂ ಮಾನ್ಯ ವಾಚಕರಿಗೆ ತಿಳಿಯದ್ದಲ್ಲ. ಈ ಧ್ಯೇಯಸಾಫಲ್ಯಕ್ಕಾಗಿ ಎಲ್ಲರೂ ಸಹಕರಿಸಬೇಕಾಗಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುವೆವು.

ಬಿ. ಯಂ. ಕಾರ್ಯಪ್ಪ,
ಮಡಿಕೇರಿ, ಗೌ. ಸೆಕ್ರೆಟರಿ,
12.1.40. ಕೊ. ಜಿ. ಕಾ. ಕಮಿಟಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಅ	ಪೈ
ಶೇರ್ ಬಂಡವಾಳ	-	50,000	0	0
ವಸೂಲಾದ ಶೇರ್ ಮೊಬಲಗು	-	47 810	0	0
ಜಮೊಬಂದ ಠೇವಣಾತಿ	-	2,13,262	0	4
ವಸೂಲಾದ ಕ್ಷೇಮನಿಧಿ	-	1,56,611	12	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಸ್	-	40 979	5	1
ಫ್ರಿಕ್ಸ್ಡ್ ಡಿಪಾಜಿಟ್ಸು	-	23,560	14	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೊರ್ತಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಿ ತಿಗಳಿಗೆ ಶೇಕಡ ಶಾಲಿಯೂನ 3½ ವರದಲ್ಲಿಯೂ, ಮೂರು ಅದಕ್ಕೂ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ [illegible] 4ರ ದರದಲ್ಲಿಯೂ ತಾ 1-9 1937ರಿಂದ ಬಡ್ಡಿ ದೊರೆಯುತ್ತೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಫ್ರಿಕ್ಸ್ಡ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿದೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಫ್ರಿಕ್ಸ್ಡ್ ಡಿಪಾಜಿಟ್ಸು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-38ರಿಂದ ಹೊಂದಿಕೊಳ್ಳುವಂತೆ [illegible] ಸಲಾಗಿತ್ತು. ಆದರೆ ಪುನಹ ತಾ 29-7-39ರಿಂದ ತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ ಸಂಘಗಳ ರಿಜಿಸ್ಟ್ರಾರರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರಸಿಡೆಂಟು—[illegible]
ಟ್ರೆಜರರ್—[illegible]
ಸೆಕ್ರೆಟರಿ—[illegible]

ತಾ 1-1-1940

ಶುಭ ಸಂದೇಶ.

ಕಂಪನಿಗೆ ಈ ತನಕ ತೋರಿಸಿದ ಸಹಕಾರ, ಸಹಾನುಭೂತಿಯ ಬಗ್ಗೆ ಗಿರಾಕಿ ವ ಹಿತಚಿಂತಕರಿಗೆ ವಸ್ತು ಸಂತೋಷದಿಂದ ಕಂಪನಿಯ ಸಂಚಾಲಕ [illegible] ಈ ಮೂಲಕ [illegible] ಇದೇ ರೀತಿಯಲ್ಲಿ ಹೊಸ ವರ್ಷದಲ್ಲಿಯೂ ವಿಶ್ವಾಸಪೂರ್ವಕ ಪ್ರೀತಿ ಪ್ರೋತ್ಸಾಹಗಳನ್ನು ಅಪೇಕ್ಷಿಸಿ, ಎಲ್ಲರಿಗೂ ಶಾಂತಿ ಸುಖವನ್ನು ಹಾರೈಸುವ

Bhuvanendra Products Ltd,
Karkadi S. K.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

52-6 ಕಾರ್ಕಳ, ದ. ಕ.

[illegible]

[illegible]

ಜ್ವರದ ಗುಳಿಗೆ
ಎಲ್ಲಾ ಪ್ರಕಾರದ ಜ್ವರಗಳ [illegible] ಔಷಧ
[illegible]

ಜ್ವರಗಡ್ಡೆ (ಅಡ್ಡಗ್ಗೆ) ಗುಳಿಗೆ.

[illegible]

(52-3) [illegible]

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯಮಿತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಆಲೋಚನಾಪೂರ್ವಕ ಮತ್ತು ಜವಾಬ್ದಾರಿಯ ಜೀವ ವಿಮೆ ಕೊಳ್ಳುವದರಲ್ಲಿ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

“ ಓರಿಯಂಟಲ್ ”
ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು

ತಡಮಾಡದಿರಿ!

ಇಂದೇ ‘ಓರಿಯಂಟಲ್’ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರ್ಯಾಂಚ್ ಸೆಕ್ರೆಟರಿ.
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(62-51)

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮಾಡಿಸಿರಿ

ಕೊಡಗು

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು.

[illegible]

THE CANARA BANKING CORPORATION LIMITED.

Estd 1906

52-4

Shorthand, Typing etc.

ಶಾರ್ಟ್‌ಹ್ಯಾಂಡ್, ಟೈಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣ ಬೇಕಾದರೆ, ಮಡಿಕೇರಿ ಬಸ್ ಸ್ಟ್ಯಾಂಡಿನ ಬಳಿಯಲ್ಲಿರುವ ಟ್ಯುಟೋರಿಯಲ್ ಸ್ಕೂಲ ಇವರಲ್ಲಿ ವಿಚಾರಿಸಿರಿ

The Manager,
Tutorial School,
Mercara

52—28

ಕೊಡಂದೇರ ಡಿ. ಪೂಣಚ್ಚ,

L.D Sc (COLLEGE OF DENTISTRY)
EX SUPERVISOR LAXMIBAI PATEL DENTAL HOSPITAL, KARACHI

ದಂತ ವೈದ್ಯರು

ಎಲ್ಲಾ ರೀತಿಯ ದಂತ [illegible]ಗೆ
ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (27) **ನವೀನ ರೀತಿಯ ಚಿಕಿತ್ಸೆ.**

ಕೇರಳ ಆಯುರ್ವೇದಿಕ್ ವೈದ್ಯಶಾಲಾ, ವಿರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ [illegible] ತಯಾರಿಸುತ್ತಿರುವ [illegible] ಅರಿಷ್ಟಗಳು, ದ್ರಾಕ್ಷಾರಿಷ್ಟಗಳು, [illegible] ಎಣ್ಣೆಗಳು, ಕಷಾಯಗಳು, ತೈಲಗಳು, [illegible], ರಸಾಯನಗಳು, ಚೂರ್ಣಗಳು, ಮಾತ್ರೆಗಳು, [illegible] ಎಲ್ಲಾ ತರಹದ [illegible] ಗಳಿಗೆ ಪ್ರತ್ಯೇಕ ಔಷಧಗಳು ಮಾರಾಟಕ್ಕೆ ಸಿದ್ಧವಾಗಿವೆ

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನ, ದೇವ ಪ್ರಶ್ನೆ ಮೊದಲ [illegible] ಒಳ್ಳೆ [illegible] ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದವುಗಳನ್ನು, ಫೀಜು ಇಲ್ಲದೆ ಕಲಿಸಲಾಗುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟ್ಯಾಂಪು ಕಳುಹಿಸಿದರೆ ಕೆಟಲಾಗ ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
[illegible] (ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟೀಷನರ್, ವೀರಾಜಪೇಟೆ.

52-49

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳನ್ನಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಬೋಪಯ್ಯನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು
ಮ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ—ಮ. ಐನಂಡ ಮಾದಪ್ಪನವರು

ಪೊನ್ನಂಪೇಟೆನಾಡು—ಮ. ಪಿ. ಟಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಪಿ. ಜಿ. ಮಾಪಮ್ಮಯ್ಯನವರು.

ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ. ಕೆ. ಪೊಗಪ್ಪನವರು.

ನಾಪೋಕ್ಲು—ಮ. ಬೆಳ್ಳಿಯಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಪ್ಲೀನೋಲ್'

ಪೂರ್ಣ ಶಕ್ತಿಸ್ವರೂಪ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್.
(52-16) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಸ್ಥಾಪಿತವಾದ್ದು 1907.

ಹೆಡ್ ಆಫೀಸು—ಅಜ್ಮೀರ್.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3¼ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-51

ವಿಜ್ಞಾಪನಾ ಪತ್ರ.

ವೈಸರಾಯರ ಎಗ್ಸಿಕ್ಯೂಟಿವ್ ಕೌನ್ಸಿಲಿನ ಸದಸ್ಯರಾದ ಸನ್ಮಾನ್ಯ ಕುನ್ವಾರ್ ಸರ್ ಜಗದೀಶ ಪ್ರಸಾದ್ ಕೆ. ಸಿ. ಎಸ್. ಐ., ಕೆ. ಸಿ. ಐ. ಈ., ಓ. ಬಿ. ಈ. ಇವರಿಗೆ ತಾರೀಕು 6-1-1940 ರಲ್ಲಿ ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಪರ ಬ್ಯಾಂಕಿನ ಪ್ರೆಸಿಡೆಂಟರು ಅರ್ಪಿಸಿದ ಬಿನ್ನಹ ಪತ್ರ.

(ಇಂಥಾ ಬಿನ್ನಹ ಪತ್ರಗಳನ್ನು ಇಂಡಿಯಾ ಸರಕಾರದ ವ್ಯವಸಾಯ ಕಮಿಷನರಾದ ಡಾ. ಬರ್ನ್ಸ್‌ರವರು ಬಂದಿದ್ದಾಗಲೂ ಇತ್ತೀಚೆಗೆ ಇಂಪೀರಿಯಲ್ ವ್ಯವಸಾಯ ಸಂಶೋಧನಾ ಕೌನ್ಸಿಲಿನ ಉಪಾಧ್ಯಕ್ಷರಾದ ಮಿ. ಕಾರಿಗಾರ್, ಐ. ಸಿ. ಎಸ್‌ರವರು ಬಂದಿದ್ದಾಗಲೂ ಬ್ಯಾಂಕು ಅರ್ಪಿಸಿದೆ. ಹೆಚ್ಚು ಕಮ್ಮಿ ಅವೆಲ್ಲಾ ಇದೇ ರೀತಿಯವಾದ್ದರಿಂದ ಇದರೊಂದರ ತರ್ಜುಮೆಯನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಸಂ.)

'ಕೊಡಗು ಸಹಕಾರಿ ಸಂಘದ ಡೈರೆಕ್ಟರುಗಳ ಮತ್ತು ಬ್ಯಾಂಕಿಗೆ ಸಂಯೋಜಿಸಲ್ಪಟ್ಟಿರುವ ಕೇವಲ ವ್ಯವಸಾಯಗಾರರಿಂದೊಡಗೂಡಿದ 300 ಸಹಕಾರಿ ಸಂಘಗಳ ಪರ ನಿಮಗೆ ಹೃತ್ಪೂರ್ವಕವಾದ ಸ್ವಾಗತವನ್ನು ಬಯಸಲು ಆನಂದವೆನಿಸುತ್ತದೆ. ವೈಸರಾಯರ ಎಗ್ಸಿಕ್ಯೂಟಿವ್ ಕೌನ್ಸಿಲಿನ ಸದಸ್ಯರೊಬ್ಬರು ಕೊಡಗಿಗೆ ಸಂದರ್ಶನೆಯನ್ನಿತ್ತದ್ದು ಕೊಡಗಿನ ಇತಿಹಾಸದಲ್ಲೇ ಇದು ಪ್ರಥಮವಾದ್ದಾಗಿದೆ. ಇದರಿಂದ ನಾವು ಸನ್ಮಾನಿತರಿದ್ದೇವೆ. ಆದರೆ ಕೊಡಗಿನಲ್ಲಿ ನಿಮ್ಮ ಇರುವಿಕೆಯು ಕೇವಲ ಕ್ಷಣಿಕವೆಂದು ತಿಳಿದು ನಮಗೆ ವಿಷಾದವೆನಿಸುತ್ತದೆ. ಆದರೂ ನೀವು ಈ ಅಲ್ಪ ಸಮಯದಲ್ಲಿ ಪುಟ್ಟ ನಾಡಾದ ಕೊಡಗಿನ ಮತ್ತು ಅದರ ಜನತೆಯ ಆನಂದದಾಯಕ ನೆನಪುಗಳನ್ನು ಮನಸಿನಲ್ಲಿಟ್ಟುಕೊಂಡು ಹೋಗುವಿರಾಗಿ ಆಶಿಸುತ್ತೇವೆ. ನೀವು ವಿದ್ಯೆ ಆರೋಗ್ಯ ಮತ್ತು ಭೂಮಿ ಈ ಇಲಾಖೆಗಳ ಮೇಲ್ವಿಚಾರದ ಸದಸ್ಯರಿರುವದರಿಂದ ವಯುಕ್ತಿಕವಾಗಿ ಸಹಕಾರಿಗಳ ಹಾಗೂ ಸಾಮಾನ್ಯವಾಗಿ ವ್ಯವಸಾಯಗಾರರ ಕೆಲವು ಪ್ರಾಮುಖ್ಯ ಕಷ್ಟಗಳನ್ನು ನಿಮ್ಮ ಮುಂದಿಡಬಯಸುತ್ತೇವೆ.

ಕೊಡಗಿನ ವೆಟರಿನರಿ ಮತ್ತು ವ್ಯವಸಾಯ ಅವಶ್ಯಕತೆಗಳ ಬಗ್ಗೆ ಇಂಡಿಯಾ ಸರಕಾರವು ಮಾಡಿದ ವಿಚಾರಣೆಗೆ ನಮ್ಮ ಕೃತಜ್ಞತೆಯನ್ನು ಸಮರ್ಪಿಸುವದರೊಂದಿಗೆ, ರಾಷ್ಟ್ರೀಯ ಕಟ್ಟೋಣದ ಇಲಾಖೆಗಳಾದ ವಿದ್ಯೆ, ವ್ಯವಸಾಯ ಮತ್ತು ವೆಟರಿನರಿ ಇವುಗಳಿಗೆ ಮಹತ್ವದ ಸಹಾಯ ದೊರೆಯಬಹುದೆಂದು ಆಶಿಸುತ್ತೇವೆ. ಕೊಡಗಿನಲ್ಲಿ ಸಹಕಾರಿ ಚಳವಳಿಯ ಉದ್ಯೋಗಸ್ಥರಲ್ಲದ ಪ್ರತಿನಿಧಿಗಳಾಗಿ, ನಮ್ಮಿಂದ ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ಈ ಕೇಳಿಕೆಗಳನ್ನು ಸ್ಪೆಷಲ್ ಆಫೀಸರಾದ ಮಿ. ಯಜ್ಞನಾರಾಯಣ ಐಯ್ಯರವರೊಡನೆಯೂ ಮತ್ತು ಇಂಡಿಯಾ ಸರಕಾರದ ವ್ಯವಸಾಯ ಕಮಿಷನರಾದ ಡಾ. ಬರ್ನ್ಸ್‌ರವರೊಡನೆಯೂ ನಿವೇದಿಸಿಕೊಂಡಿರುವೆವು. ನಮ್ಮ ನಿರ್ದಿಷ್ಟ ಕೇಳಿಕೆಗಳನ್ನು ಆ ಇಬ್ಬರೂ ನಿಮ್ಮ ಅವಗಾಹನೆಗೆ ತಂದಿರಬಹುದಾಗಿ ನಂಬುತ್ತೇವೆ.

1924ರಲ್ಲಿ ಕೊಡಗು ಪ್ರಾಂತೀಕರಿಸಲ್ಪಟ್ಟಾಗ ಇಂಡಿಯಾ ಸರಕಾರವು ಇಲ್ಲಿಯ ಆಡಳಿತ ನಿರ್ವಹಿಸಲು ನ್ಯಾಯವಾದ ಪ್ರಥಮ ಖರ್ಚಿನ ಹಣವನ್ನು ಇಟ್ಟಿದ್ದ ಪಕ್ಷ ಕೊಡಗಿನ ಆರ್ಥಿಕ ಸ್ಥಿತಿಯು ಇಷ್ಟು ಶೋಚನೀಯ ಸ್ಥಿತಿಯಲ್ಲಿರುತ್ತಿರಲಿಲ್ಲ. ಕೊಡಗು ಸರಕಾರದ ಉಳಿತಾಯವೆಲ್ಲಾ ಒಂದು ಕೋಟಿ ರೂ.ನ್ನು ಇಂಡಿಯಾ ಸರಕಾರದ ಆರ್ಥಿಕ ಉಸ್ತವಾರಿಯೊಡನೆ ಸೇರಿಸಿಡಲಾಯಿತೆಂದು ಅಂದಾಜು ಹಾಕಲಾಗಿದೆ. ಪ್ರಾಂತದ ಆರ್ಥಿಕ ಸ್ಥಿತಿಯು ಸ್ಥಿರವಾಗಿದ್ದ ಪಕ್ಷ ನಮ್ಮ ಈ ಮೂರು ರಾಷ್ಟ್ರೀಯ ಕಟ್ಟೋಣ ಖಾತೆಗಳು ಇಂದಿನ ಶೋಚನೀಯ ಸ್ಥಿತಿಗೆ ಬರುತ್ತಿರಲಿಲ್ಲ. ಈ ಕಾರಣದಿಂದಾಗಿಯೇ ನಮ್ಮ ಸರಕಾರವು ಇಂಡಿಯಾ ಸರಕಾರದಿಂದ ಆರ್ಥಿಕ ಸಹಾಯಕ್ಕಾಗಿ ಅನೇಕ ಸಾರಿ ಪ್ರಯತ್ನಿಸಿದೆ. ಈಗಾಗಲಾದರೂ ಇಂಡಿಯಾ ಸರಕಾರವು ಈ ಮೂರು ಇಲಾಖೆಗಳ ಅಭಿವೃದ್ಧಿಗಾಗಿ ಯೋಗ್ಯವಾದ ವಂತಿಗೆಯನ್ನು ಕೊಡುವ ಪ್ರೇಮ ಸಂಪೂರ್ಣ ನಂಬಿರುವೆವು. ಇಂಡಿಯಾದ ವ್ಯವಸಾಯದ ಬಗ್ಗೆಯ ರಾಯಲ ಕಮಿಷನಿನ ವರದಿಯಲ್ಲಿ ಚಿಕ್ಕ ಪ್ರಾಂತ್ಯಗಳ ಈ ಇಲಾಖೆಗಳಿಗೆ ಇಂಡಿಯಾ ಸರಕಾರವು ಹೆಚ್ಚಿನ ಗಮನ ಕೊಡಬೇಕೆಂದು ಸೂಚಿಸಿದೆ. ಆದ್ದರಿಂದ ನಮ್ಮ ಕೇಳಿಕೆಯು ನ್ಯಾಯಬದ್ಧವಾಗಿದೆಯೆಂದು ನಮಗೆನಿಸುತ್ತದೆ.

ಈ ಮೂರು ಇಲಾಖೆಗಳ ಪೈಕಿ ಸಹಕಾರ ಇಲಾಖೆಯು ಕೊಡಗಿನಲ್ಲಿ ಒಂದು ವಿಧದಲ್ಲಿ ಅಭಿವೃದ್ಧಿಗೊಂಡು ಪಸರಿಸಿದೆ. ಈ ವಿಚಾರವನ್ನೇ ಡೆಲ್ಲಿಯಲ್ಲಿ ಕೂಡಿ ಸಿಮ್ಲಾದಿಂದ ತೆರೆಯಲ್ಪಟ್ಟ ಅಖಿಲಭಾರತ ರಿಜಿಸ್ಟ್ರಾರುಗಳ ಸಮ್ಮೇಳನದ ಅವಗಾಹನೆಗೆ ನಾನು ಕೊಡಗಿನ ಒಬ್ಬ ಉದ್ಯೋಗಸ್ಥನಲ್ಲದ ಪ್ರತಿನಿಧಿಯಾಗಿ ತಂದಿರುವೆನು. ಸೂಕ್ಷ್ಮದಲ್ಲಿ ವಿವರಿಸುವದಾದರೆ ಕೊಡಗಿನಲ್ಲಿ ಸಹಕಾರ ಚಳವಳಿಯು 1904ರಲ್ಲಿ ಪ್ರಾರಂಭವಾಗಿ ಇಂದು ಇಪ್ಪತ್ತು ಸಾವಿರ ಸದಸ್ಯರನ್ನೂ, 20½ ಲಕ್ಷ ಬಂಡವಾಳವನ್ನೂ ಒಳಗೊಂಡ 319 ಸಂಘಗಳು ತೆರೆಯಲ್ಪಟ್ಟಿವೆ. ಪ್ರಾಮುಖ್ಯವಾಗಿ ಹೆಚ್ಚಿನ ಸಂಘಗಳು ಲೇವಾದೇವಿ ಸಂಘಗಳಾಗಿ ಮರುಪಾವತಿಯು ಸರಾಸರಿ ನೇಕಡ 54ರಂತೆ ನಡೆದಿದೆ. ಇಂಡಿಯಾದ ಇತರ ಪ್ರಾಂತಗಳೊಡನೆ ಇದನ್ನು ಹೋಲಿಸಿದರೆ ಇದು ಮೆಚ್ಚುವಂಥಾದ್ದೇ ಆಗಿದೆ. ಇತ್ತೀಚೆಗೆ ಸಹಕಾರ ಚಳವಳಿಯ ನಾನ್ ಕ್ರೆಡಿಟ್ ಸಂಘಗಳ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ನಿಗಕೊಡಲಾಗುತ್ತಿದೆ. ಸ್ಪೆಷಲ್ ಆಫೀಸರಾದ ಶ್ರೀ. ಯಜ್ಞನಾರಾಯಣ ಐಯ್ಯರವರು 'ಇಂಡಿಯನ್ ಕೋಪರೇಟಿವ್ ರಿವ್ಯೂ' ಪತ್ರಿಕೆಯಲ್ಲಿ ಈ ಪ್ರಾಂತದ ಸಹಕಾರ ಮುನ್ನಡೆಯನ್ನು ಶ್ಲಾಘಿಸಿರುವರು. ಕೊಡಗಿನ ಪ್ರಮುಖ ಬ್ಯಾಂಕಾದ ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕೊಂದೇ ಸಹಕಾರಿ ಸಂಘಗಳಿಗೆ ಆರ್ಥಿಕ ಸಹಾಯ ಮಾಡುವ ಸಂಸ್ಥೆಯಾಗಿದೆ. ಕೊಡಗಿನಲ್ಲಿ ಪ್ರಾಂತೀಕ ಬ್ಯಾಂಕು ಅಥವ ಭೂಮಿ ಅಡಮಾನ ಸಂಘಗಳಿಲ್ಲದ ಪ್ರಯುಕ್ತ ಸೆಂಟ್ರಲ್ ಬ್ಯಾಂಕೇ ಭೂಮಿ ಅಡಮಾನ ಮತ್ತು ಪ್ರಾಂತೀಕ ಬ್ಯಾಂಕುಗಳ ಪಾತ್ರವನ್ನು ವಹಿಸಿದೆ. ಚಳವಳಿಯ ಒಟ್ಟು ಬಂಡವಾಳವಾದ 20½ ಲಕ್ಷ ರೂಪಾಯಿಗಳಲ್ಲಿ ಕೇವಲ ... 000 ಮಾತ್ರ ಸರಕಾರದ ಸಾಲವಾಗಿದೆ. ಬ್ಯಾಂಕಿನ ಮೇಲ್ವಿಚಾರಣೆ ಬೋರ್ಡಿಗೆ ಕೊಡಲ್ಪಡುತ್ತಿದ್ದ ಅಲ್ಪ ಸಹಾಯವಲ್ಲದೆ ಸರಕಾರದಿಂದ ಸಹಕಾರ ಸೆಂಟ್ರಲ್ ಬ್ಯಾಂಕಿಗೆ ಯಾವದೊಂದು ಆರ್ಥಿಕ ಸಹಾಯವು ದೊರೆಯುತ್ತಿರುವದಿಲ್ಲ. ವ್ಯವಸಾಯಗಾರರಿಗೆ ದೀರ್ಘ ಕಂತಿನ ಸಾಲಗಳನ್ನು ಕೊಡುವ ಬಗೆ ಇಂಡಿಯಾ ಸರಕಾರದಿಂದ ಕಮ್ಮಿ ಪಕ್ಷ 3 ಲಕ್ಷ ರೂಪಾಯಿಗಳ ಸಾಲವನ್ನಾದರೂ ಒದಗಿಸಿ ಕೊಡುವ ಬಗ್ಗೆ ಸರಕಾರವನ್ನು ಬ್ಯಾಂಕು ಪದೇ ಪದೇ ಕೇಳುತ್ತಿದೆ. ಆದರೆ ನಮ್ಮ ಕೇಳಿಕೆಗಳಿಗೆ ಈ ವರೆಗೆ ಸರಕಾರವು ಕಿವಿಗೊಟ್ಟಿರುವದಿಲ್ಲ. ಕೊಡಗಿನ ಗ್ರಾಮಾಭಿವೃದ್ಧಿ ಬಗ್ಗೆ ಇಂಡಿಯಾ ಸರಕಾರದಿಂದ ಸಿಕ್ಕಿದ ವಂತಿಗೆಯಲ್ಲಿ ಕ್ರಾಫ್, ಲೋನ್, ಸೇಲ್ ಮತ್ತು ಸಪ್ಲೈ ಸಂಘದವರು ವ್ಯವಸಾಯಗಾರರ ಉತ್ಪತ್ತಿಯನ್ನು ಶೇಕರಿಸಿಡಲು ಕಟ್ಟಿದ ಉಗ್ರಾಣಗಳ ಖರ್ಚಿನಲ್ಲಿ ಶೇಕಡ 25 ರಷ್ಟು ಮಾಫಿಯನ್ನು ಮದ್ರಾಸಿನಲ್ಲಿ ಕೇಳದೇ ಬಿಟ್ಟಿದ್ದರೂ ನಾವು ಕೇಳಿದ ಶೇಕಡ 25ರ ಮಾಫಿಯು ಸಹ ಅನುಕೂಲ ರೀತಿಯಲ್ಲಿ ಯೋಚಿಸಲ್ಪಡಲಿಲ್ಲ. ಸಹಕಾರ ಮತ್ತು ವ್ಯವಸಾಯ ಇಲಾಖೆಗಳಿಗೆ ಒಬ್ಬ ಮೇಲಾಧಿಕಾರಿಯನ್ನು ನೇಮಿಸಿದ ಆ ಶುಭವದಿಂದಾಗಿ ಈಗ ಸರಕಾರವು ಸಹಕಾರ ಇಲಾಖೆಗೇ ಯೋಗ್ಯ ತರಬೇತು ಹೊಂದಿದ ಒಬ್ಬ ಅಧಿಕಾರಿಯನ್ನು ನೇಮಿಸಿರುವರು. ಆದರೆ ಈ ಎರಡು ಇಲಾಖೆಗಳನ್ನು ಪುನಃ ಸಂಯೋಜಿಸುವ ಸಂಶಯವು ಇದೆ. ಸಹಕಾರ ಇಲಾಖೆಗೇ ಒಬ್ಬ ಪ್ರತ್ಯೇಕ ಅಧಿಕಾರಿಯನ್ನು ಕೊಡದಿದ್ದರೆ ಸಹಕಾರ ಚಳವಳಿಕ್ಕೆ ತುಂಬಾ ಧಕ್ಕೆ ಬರುವದರಲ್ಲಿ ಸಂಶಯವಿಲ್ಲವೆಂದು ನಾವು ದೃಢವಾಗಿ ನಂಬುತ್ತೇವೆ. ಸ್ಪೆಷಲ್ ಆಫೀಸರವರ ವರದಿಯ ಮೇಲೆ ಹುಕುಂ ಮಾಡುವಾಗ ತಾವು ಇದನ್ನು ಗಮನದಲ್ಲಿಟ್ಟುಕೊಳ್ಳುವಿರೆಂದು ನಾವು ಆಶಿಸುತ್ತೇವೆ.

ವ್ಯವಸಾಯ ಇಲಾಖೆಯಂತೂ ತೀರಾ ಅಲಕ್ಷಿಸಲ್ಪಟ್ಟಿದೆ. ಪ್ರಾಮುಖ್ಯ ಕಸಬೇ ವ್ಯವಸಾಯವಾಗಿರುವ ಕೊಡಗಿನಂಥಾ ನಾಡಿನಲ್ಲಿ ಸರಕಾರವು ಆ ಇಲಾಖೆಗಳ ಅಭಿವೃದ್ಧಿಗಾಗಿ ಈ ವರೆಗೆ ಮಾಡಿದ ಕಾರ್ಯಕ್ಕಿಂಥಾ ಹೆಚ್ಚಿನ ನಿಗ ತೆಗೆದುಕೊಳ್ಳಬೇಕಿತ್ತು. ಕೊಡಗಿನಲ್ಲಿ ಕೇವಲ ಎರಡು ವ್ಯವಸಾಯ ಉಪಬೋಧಕರಿರುವರು. ರೈತರ ಕೇಳಿಕೆಯನ್ನು ಸಲ್ಲಿಸುವದು ಇಬ್ಬರಿಂದ ಅಸಾಧ್ಯದ ಕೆಲಸ. ನವೀನ ವ್ಯವಸಾಯ ಯೋಜನೆ, ಗೊಬ್ಬರದ ಪ್ರಯೋಗ, ಬೀಜದ ಪರಿಷ್ಕರಣೆ ಇವೆಲ್ಲವನ್ನೂ ಪ್ರತಿಯೊಬ್ಬ ರೈತನಿಗೂ ಮನದಟ್ಟಾಗುವಂತೆ ಬೋಧಿಸಬೇಕು. ಮಣ್ಣಿನ ಪರಿಶೋಧನೆ, ಹುಳಗಳಿಗೆ ಔಷಧ, ಮತ್ತಿತರ ವ್ಯವಸಾಯರೋಗಗಳಿಗೆ ಈ ಇಲಾಖೆಯು ಮುಖಾಂತರ ಔಷಧಿ ಸರಬರಾಯಿ ಮಾಡುವಂಥಾಗಬೇಕು. ಈಗೀಗ ಏಲಕ್ಕಿ, ಕಿತ್ತಳೆ, ಮತ್ತು ಭತ್ತದ ಬೆಳೆಗಳಿಗೆ ವಿವಿಧ ರೀತಿಯ ಕೀಟಕಗಳಿಂದ ತೊಂದರೆ ಮತ್ತು ಅನೇಕ ರೀತಿಯ ನಾಶಕಾರಕ ಕ್ರಿಮಿಗಳು ಧಾಳಿ ಕೊಡುತ್ತಿರುವುದನ್ನು ಕಾಣುತ್ತಿರುವೆವು. ಆದಿಕೆ ವ್ಯವಸಾಯಕ್ಕೆ ಅದರಿಂದ ತುಂಬಾ ಧಕ್ಕೆ ಇದೆ. ಈ ರೋಗಗಳನ್ನು ನಿವಾರಿಸಲು ಈಗಿನ ಸಿಬ್ಬಂದಿಗಳ ಸಹಾಯದಿಂದ ಇನ್ನೂ ಸಾಧ್ಯವಾಗಿಲ್ಲ. ಶಾಸ್ತ್ರೀಯ ರೀತಿಯ ವ್ಯವಸಾಯಕ್ರಮವು ಜಾರಿಗೆ ಬಂದ ವಿನಹ ಬಡ ರೈತರ ವ್ಯವಸಾಯೋತ್ಪತ್ತಿಯನ್ನು ಹೆಚ್ಚಿಸುವ ಪ್ರಯತ್ನವು ನಿಷ್ಫಲ. ವ್ಯವಸಾಯ ಉತ್ಪತ್ತಿಗಳಿಗೆ ಸರಿಯಾದ ಸಂತೆಯನ್ನು ಕಲ್ಪಿಸಿಕೊಡುವ ವಿಚಾರವಾದರೂ ತುರಿತ್ತದ್ದಿದೆ. ಸರಕಾರದಿಂದ ನಡೆಸಲ್ಪಡುವ, ಪ್ರಾಂತೀಕ ಮಾರ್ಕೆಟಿಂಗ್ ಸಂಘಗಳು ರೈತರಿಗೆ ತುಂಬಾ ಪ್ರಯೋಜನವನ್ನು ಮಾಡಿಯಾವು. ಭಾರತದಲ್ಲೇ ನವೀನ ಮಾದರಿಯದಾದ ಜೇನು, ಮೇಣ ಸಹಕಾರಿ ಸಂಘಕ್ಕೆ ಮಧ್ಯ ಸರಕಾರದಿಂದ ಉತ್ಸಾಹ ಪೂರಿತ ಸಹಾಯವು ಬೇಕಿದೆ. ದಕ್ಷಿಣ ಭಾರತದಲ್ಲೇ ಖ್ಯಾತಿಗೊಂಡಿರುವ ಕೊಡಗಿನ ಕಿತ್ತಳೆ ಬೆಳೆಸುವವರಿಗೆ ಸರಿಯಾದ ಸಂತೆಯನು ಕಲ್ಪಿಸಿಕೊಡುವ ಏರ್ಪಾಡುಗಳಾಗಬೇಕು. ಗೊಬ್ಬರ ಮತ್ತು ವ್ಯವಸಾಯ ಸಾಧನಗಳು ಸುಲಭ ಕಂತಿನ ದರದಲ್ಲಿ ಸಾಲವಾಗಿ ಕೊಡಲ್ಪಡಬೇಕು. ಇವೆಲ್ಲಾ ಅಂದರೆ ವ್ಯವಸಾಯ ಇಲಾಖೆಯ ವಿಸ್ತರಣೆಯೇ ಆಗಿದೆ. ಇಂಡಿಯಾ ಸರಕಾರದ ಸಹಾಯ ಧಾತಿಯು ಇವಕ್ಕೆ ದೊರೆಯುವದೆಂದು ಆಶಿಸಿದ್ದೇವೆ.

ಕೊಡಗಿನ ಕಾಫಿ ವ್ಯವಸಾಯದ ವಿಚಾರ ಇಲ್ಲಿ ನಮೂದಿಸುವದು ಆಗತ್ಯವೆನಿಸುತ್ತದೆ. ಕೊಡಗು ಕಾಫಿ ಪ್ಲಾಂಟರುಗಳ ತೊಂದರೆಯನ್ನು ಕಂಡು 1937ರಲ್ಲಿ ಇಂಡಿಯಾ ಸರಕಾರವು ರೂ 7 ಲಕ್ಷ ಕಾಫಿ ಸಾಲ ಮಂಜೂರ್ಮಾಡಿತು. 5 ವರ್ಷಗಳ ಕಂತಿನ ಬದಲು 15, 20 ವರ್ಷಗಳ ಕಂತನ್ನು ಕೊಟ್ಟಿದ್ದರೆ ಇದರಿಂದ ತುಂಬಾ ಪ್ರಯೋಜನವಾಗುತ್ತಿತ್ತು. ಈಗಿನ ಅಲ್ಪ ಫಸಲು ಮತ್ತು ಅದಕ್ಕಿರುವ ಅತ್ಯಲ್ಪ ಧಾರಣೆಯಿಂದಾಗಿ ಪ್ಲಾಂಟರುಗಳಿಗೆ ಸಾಲದ ಕಂತನ್ನು ಸಕಾಲದಲ್ಲಿ ಮರುಪಾವತಿ ಮಾಡುವದು ಕಷ್ಟವಾಗಿದೆ. ಕಾಫಿ ಸಾಲದ ಮರುಪಾವತಿಗಾಗಿ ತೋಟಗಳನ್ನು ಹರಾಜು ಮಾಡುವದಾದರೆ ಪ್ರಾಂತೀಕ ಉತ್ಪತ್ತಿಗೇ ಧಕ್ಕೆ ತಾಗಿದಂತಾಗುತ್ತದೆ. ಈಗಾಗಲೇ ಅನೇಕ ತೋಟಗಳು ಈ ಬಾಕಿಗಾಗಿ ಕಮ್ಮಿ ಕ್ರಯಕ್ಕೆ ಮಾರಲ್ಪಟ್ಟಿವೆ.

ನಮ್ಮ ಸಹಕಾರ ಸೆಂಟ್ರಲ್ ಬ್ಯಾಂಕು ಕೊಡಗು ಕಾಫಿ ಪ್ಲಾಂಟರ್ಸ್ ಸೊಸೈಟಿಗೆ ರೂ.25,000 ಸಾಲ ಕೊಟ್ಟಿದ್ದರೂ, ನಮ್ಮ ಸಾಲವು ಅಲ್ಪ ಕಂತಿನದಾಗಿರುವ ಪ್ರಯು

ಕ್ತ ಇವರಿಗೆ ಹೆಚ್ಚು ಸಹಾಯ ಮಾಡುವದು ಸಾಧ್ಯವಾಗಿಲ್ಲ. ಆದ್ದರಿಂದ ಈ ಕಾಫಿ ಸಾಲದ ಕಂತುಗಳನ್ನು 5ರಿಂದ 20ಕ್ಕೆ ಹೆಚ್ಚಿಸಿ ಕಾಫಿಯ ವ್ಯವಸಾಯವನ್ನು ಉದ್ಧಾರ ಮಾಡಬೇಕೆಂದೇ ಇಂಡಿಯಾ ಸರಕಾರವಲ್ಲಿ ನಾವು ಕೇಳಿಕೊಳ್ಳುವದಾಗಿದೆ.

ವ್ಯವಸಾಯ ಇಲಾಖೆಯು ಅಭಿವೃದ್ಧಿಗೊಳ್ಳಬೇಕಾದರೆ ಅದಕ್ಕನುಗುಣವಾಗಿಯೇ ವೆಟರಿನರಿ ಇಲಾಖೆಯಾದರೂ ಅಭಿವೃದ್ಧಿಗೊಳ್ಳಬೇಕು. ರೈತರಿಗೆ ಏನಾದರೊಂದು ಪ್ರಯೋಜನವಾಗಬೇಕಾದರೆ ಈ ಎರಡು ಇಲಾಖೆಗಳೂ ಸಮ್ಮಿಳಿತವಾಗಿ ಕಾರ್ಯಮಾಡಬೇಕು. ಸಾಂಕ್ರಾಮಿಕ ರೋಗಗಳ ನಿವಾರಣೆ ಮತ್ತು ಜಾನುವಾರುಗಳ ಅಭಿವೃದ್ಧಿ ಇವು ಒಡನೆ ಮಾಡಲ್ಪಡಬೇಕು. ಕೊಡಗಿನ ರೈತರ ನಾಶಕ್ಕೆ ಒಂದನೆ ಕಾರಣವಂದರೆ ಈ ದನಗಳ ನಾಶವೇ ಆಗಿದೆ. ಸರಕಾರದ ಸಹಾಯದಿಂದ ಇದನ್ನು ತಪ್ಪಿಸುವದು ಸಾಧ್ಯವಿದೆ.

ನಮ್ಮ ಈ ಬೇಡಿಕೆಗಳನ್ನು ಪರಿಶೀಲಿಸಿ ಇಲ್ಲಿಯ ರೈತರ ಆರ್ಥಿಕ ಉದ್ಧಾರದ ಬಗ್ಗೆ ಸಮಂಜಸವಾದ ಧನಸಹಾಯ ಕೊಡಬೇಕಾಗಿ ಕಡೆಯದಾಗಿ ನಿಮಗೆ ಅಪೀಲು ಮಾಡಿಕೊಳ್ಳುವೆವು. ಕೊಡಗಿನ ರೈತರಿಗಾಗಿ ಇಂಡಿಯಾ ಸರಕಾರದಿಂದ ಕೊಡುವ ಸಹಾಯವನ್ನು ಕೃತಜ್ಞತೆಯಿಂದ ನೆನಪಿನಲ್ಲಿಟ್ಟುಕೊಳ್ಳುವೆವು. ನಿಮ್ಮನ್ನು ಭೇಟಿಯಾಗಲು ಸಂದರ್ಭ ಕಲ್ಪಿಸಿಕೊಟ್ಟದ್ದಕ್ಕೂ, ಕೊಡಗಿನ ರೈತರ ಕಷ್ಟಪರಂಪರೆಗಳನ್ನು ನಿವೇದಿಸಿಕೊಳ್ಳಲಿಕ್ಕೆ ಅನುವುಮಾಡಿ ಕೊಟ್ಟದ್ದಕ್ಕೂ ನಿಮಗೆ ನಮ್ಮ ವಂದನೆಯನ್ನರ್ಪಿಸುತ್ತೇವೆ.

ನಿಮ್ಮವನಾದ
ಪಿ ಐ ಬೆಳ್ಯಪ್ಪ,
ಪ್ರೆಸಿಡೆಂಟ್

ಸ್ವಾತಂತ್ರ್ಯ ದಿನಾಚರಣೆ.

ವರ್ಕಿಂಗ್ ಕಮಿಟಿಯ ನಿರ್ಧಾರ.

26-1-1940 ನೇ ದಿನ ಸ್ವಾತಂತ್ರ್ಯ ದಿನವನ್ನು ಯೋಗ್ಯವಾಗಿಯೂ ಯುಕ್ತ ಗಾಂಭೀರ್ಯದಿಂದಲೂ ಆಚರಿಸುವದರ ಅವಶ್ಯಕತೆಯ ಕಡೆಗೆ ವರ್ಕಿಂಗ್ ಕಮಿಟಿಯು ಕಾಂಗ್ರೆಸ್ ಸಮಿತಿಗಳ, ಕಾಂಗ್ರೆಸ್ಸಿಗರ ಹಾಗು ದೇಶದ ಲಕ್ಷ್ಯವನ್ನೆಳೆಯುತ್ತದೆ. 1930 ರಿಂದ ತಪ್ಪದೆ ಈ ದಿನವು ದೇಶದಲ್ಲೆಲ್ಲಾ ಪಾಲಿಸಲ್ಪಟ್ಟು ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇದು ಒಂದು ಹೆಗ್ಗುರುತಾಗಿ ಪರಿಣಮಿಸಿದೆ. ಹಿಂದೂಸ್ಥಾನ ಮತ್ತು ಬೇರೆ ರಾಷ್ಟ್ರಗಳು ಸದ್ಯ ದಾಟುತ್ತಿರುವ ಬಿಕ್ಕಟ್ಟು ಹಾಗು ಸ್ವಾತಂತ್ರ್ಯದ ನಮ್ಮ ಹೋರಾಟವು ಇನ್ನೂ ತೀಕ್ಷ್ಣತೆಯಿಂದ ಮುಂದುವರಿಸಬೇಕಾಗಬಹುದಾದ ಸಂದರ್ಭ ಇವುಗಳನ್ನು ಅನುಲಕ್ಷಿಸಿ ಈ ಸಲದ ದಿನಾಚರಣೆಗೆ ಒಂದು ಹೆಚ್ಚಿನ ಮಹತ್ವ ಬಂದಿರುವದು. ಆದುದರಿಂದ ಈ ದಿನಾಚರಣೆಯು ಸ್ವಾತಂತ್ರ್ಯಕ್ಕೋಸುಗ ದೇಶದ ಇಚ್ಛೆಯ ಘೋಷಣೆ ಮಾತ್ರವಲ್ಲದೆ, ಆ ಹೋರಾಟದ ತಯಾರಿ ಮತ್ತು ಶಿಸ್ತಿನಿಂದ ಕಾರ್ಯ ಮಾಡುವ ಪ್ರತಿಜ್ಞೆಯು

ಆದುದರಿಂದ, ಕೆಳಗೆ ಕೊಟ್ಟಿರುವ ಪ್ರತಿಜ್ಞೆಯನ್ನು ಈ ಸಂಬಂಧ ಕರೆಯಲ್ಪಡುವ ಸಾರ್ವಜನಿಕ ಸಭೆಗಳಲ್ಲಿ ತೆಗೆದುಕೊಳ್ಳಲು ವರ್ಕಿಂಗ್ ಕಮಿಟಿಯು ಕಾಂಗ್ರೆಸ್ ಸಮಿತಿಗಳು ಹಾಗು ವೈಯಕ್ತಿಕ ಕಾಂಗ್ರೆಸಿಗರನ್ನು ಕೇಳಿಕೊಳ್ಳುತ್ತದೆ. ಒಂದುವೇಳೆ ಅನಾರೋಗ್ಯದಿಂದ ಅಥವಾ ಇತರ ಶಾರೀರಕ ಅಶಕ್ತತೆಯ ಮೂಲಕ ಸಭೆಯಲ್ಲಿರಲು ಯಾವ ಕಾಂಗ್ರೆಸಿಗರಿಗೆ ಶಕ್ಯವಾಗದಿದ್ದರೆ ಅವರು ತಮ್ಮ ಮನೆಗಳಲ್ಲಿ ವೈಯಕ್ತಿಕವಾಗಿ ಅಥವಾ ಗುಂಪು ಕೂಡಿ ಅಂದು ಪ್ರತಿಜ್ಞೆ ತೆಗೆದುಕೊಳ್ಳಬೇಕು. ಆದ ಸಭೆಗಳ ಹಾಗು ಪ್ರತಿಜ್ಞೆ ತೆಗೆದುಕೊಂಡು ಮಾಹಿತಿಯನ್ನು ಸಂಸ್ಥೆ ವ್ಯಕ್ತಿ ಗುಂಪುಗಳು ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಕಳುಹಿಸಿಕೊಡಬೇಕೆಂದು ವರ್ಕಿಂಗ್ ಕಮಿಟಿಯು ಸಲಹೆ ಕೊಡುತ್ತದೆ. ಪ್ರತಿಜ್ಞೆಯಲ್ಲಿನ ವಿಷಯಗಳಲ್ಲಿ ನಂಬಿಕೆಯಿಲ್ಲದವರು ಬರೀ ತೋರಿಕೆಗಾಗಿ ಪ್ರತಿಜ್ಞೆ ತೆಗೆದುಕೊಳ್ಳುವುದಿಲ್ಲವೆಂದು ಈ ಕಮಿಟಿಯು ನಂಬುತ್ತದೆ. ಹಾಕಿಕೊಡಲಾದ ಪ್ರತಿಜ್ಞೆಯಲ್ಲಿ ನಂಬಿಕೆಯಿಲ್ಲದ ಕಾಂಗ್ರೆಸ್ಸಿಗರು ಅದರ ಕಾರಣಗಳನ್ನು ತಮ್ಮ ಹೆಸರು ವಿಳಾಸದೊಂದಿಗೆ ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ತಿಳಿಸಬೇಕು. ಈ ಮಾಹಿತಿಯು ಬೇಕಾಗಿರುವದು ಪ್ರತಿಜ್ಞೆಯಲ್ಲಿ ಯಾವದು ಅಸಮರ್ಪಕವಿರುವದೆಂಬುವನ್ನು ತಿಳಿಯಲು ಮಾತ್ರವಲ್ಲದೆ ಯಾವದೇ ತರದ ಶಿಸ್ತಿನ ಕ್ರಮ ತೆಗೆದುಕೊಳ್ಳಲಿಕ್ಕಲ್ಲ. ವರ್ಕಿಂಗ್ ಕಮಿಟಿಯು ಮನಸಿಲ್ಲದವರ ಮೇಲೆ ಈ ಪ್ರತಿಜ್ಞೆಯನ್ನು ಹೇರಲಿಚ್ಛಿಸುವದಿಲ್ಲ. ಅಹಿಂಸಾತ್ಮಕ ಸಂಸ್ಥೆಯಲ್ಲಿ ಒತ್ತಾಯಕ್ಕೆ ಎಡೆಯಿರಲಾರದು. ಅಸಹಕಾರ ಚಳವಳಿಯನ್ನು ಹೂಡಲು ಅದಕ್ಕೆ ಅಗತ್ಯವಾದ ಕರಾರುಗಳನ್ನು ಶಿಸ್ತಿನಿಂದ ಪೂರೈಸಲು ಅವಶ್ಯಕ.

ಪ್ರತಿಜ್ಞೆ.

ಹಿಂದೀಯರ ಪ್ರಗತಿಗೆ ಪೂರ್ಣ ಅವಕಾಶ ದೊರೆಯುವದಕ್ಕೋಸುಗ ಸ್ವಾತಂತ್ರ್ಯ ಪಡೆಯಲು ಮತ್ತು ಜೀವನದ ಆವಶ್ಯಕತೆಗಳು ಹಾಗು ಪರಿಶ್ರಮದ ಫಲಗಳನ್ನು ಅನುಭೋಗಿಸಲು, ಇತರ ಜನಾಂಗಗಳಿಗಿರುವಂತೆ ಹಿಂದೀಯರಿಗೂ ಪೂರ್ಣ ಅಧಿಕಾರವಿರುವದೆಂದು ನಾವು ನಂಬುತ್ತೇವೆ. ಯಾವುದೇ ಸರಕಾರವು ಪ್ರಜೆಗಳ ಈ ಜನ್ಮ ಸಿದ್ಧ ಹಕ್ಕನ್ನು ಕಸಿದುಕೊಂಡರೆ ಮತ್ತು ಅವರ ಮೇಲೆ ದಬ್ಬಾಳಿಕೆ ನಡೆಸಿದರೆ ಆ ಸರಕಾರವನ್ನು ಬದಲು ಮಾಡಲು ಅಥವಾ ರದ್ದು ಮಾಡಲು ಪ್ರಜೆಗಳಿಗೆ ಅಧಿಕಾರವಿದೆಯೆಂದು ಸಹ ನಾವು ತಿಳಿಯುತ್ತೇವೆ. ಹಿಂದುಸ್ಥಾನದಲ್ಲಿರುವ ಬ್ರಿಟಿಷ್ ಸರಕಾರವು ಹಿಂದೀಯರ ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ. ಇಷ್ಟೇ ಅಲ್ಲ, ಹಿಂದೀ ಜನತೆಯನ್ನು ಶೋಷಿಸುವದನ್ನೇ ತಳಹದಿಯನ್ನಾಗಿಟ್ಟುಕೊಂಡು ಹಿಂದೂಸ್ಥಾನವನ್ನು ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಹಾಗು ಅಧ್ಯಾತ್ಮಿಕ ರೀತಿಯಿಂದ ಹಾಳುಮಾಡಿದೆ. ಆದ್ದರಿಂದ ಹಿಂದೂಸ್ಥಾನವು ಬ್ರಿಟಿಷರ ಸಂಬಂ

ಜ' ವನ್ನು ಪಡೆಯಲೇಬೇಕೆಂದು ನಾವು ಅಭಿಪ್ರಾಯಪಡುತ್ತೇವೆ.

ನಮ್ಮ ಸ್ವಾತಂತ್ರ್ಯವನ್ನು ಪಡೆಯಲು ಹಿಂಸಾ ಮಾರ್ಗವು ಉತ್ತಮ ಫಲಕಾರಿಯಾದುದಲ್ಲವೆಂದು ನಾವು ತಿಳಿಯುತ್ತೇವೆ. ಶಾಂತ ಮತ್ತು ನ್ಯಾಯ ಮಾರ್ಗಗಳಿಂದಲೇ ದೇಶದ ಬಲವು ಮತ್ತು ಸ್ವಾವಲಂಬನ ಶಕ್ತಿಯು ಹೆಚ್ಚಿ ಸ್ವರಾಜ್ಯ ಸಾಧನೆಯಲ್ಲಿ ಬಹಳ ಮುಂದಡಿ ಇಟ್ಟಿದೆ. ಆದರಂತೆ ಇನ್ನು ಮುಂದುವರೂ ಈ ಮಾರ್ಗವನ್ನು ಅನುಸರಿಸುವದರಿಂದ ನಮ್ಮ ದೇಶವು ಸ್ವಾತಂತ್ರ್ಯವನ್ನು ಪಡೆಯುವದು.

ಹಿಂದೂಸ್ಥಾನದ ಸ್ವರಾಜ್ಯ ಸಾಧನೆಗಾಗಿ ನಾವು ಪುನಃ ಪಣ ತೊಡುತ್ತೇವೆ, ಮತ್ತು ಪೂರ್ಣ ಸ್ವರಾಜ್ಯ ಸಿಗುವ ವರೆಗೆ ಸ್ವಾತಂತ್ರ್ಯ ಸಂಗ್ರಾಮವನ್ನು ಅಹಿಂಸಾತ್ಮಕ ರೀತಿಯಿಂದ ಸಾಗಿಸುವೆವೆಂದು ದೃಢ ಪ್ರತಿಜ್ಞೆ ಮಾಡುತ್ತೇವೆ.

ಸಾಮಾನ್ಯತಃ ಅಹಿಂಸಾತ್ಮಕ ಹೋರಾಟಕ್ಕೆ ಖಾದಿ, ಜಾತೀಯ ಸೌಹಾರ್ದತೆ ಮತ್ತು ಅಸ್ಪೃಶ್ಯತಾ ನಿವಾರಣೆ ಈ ರಚನಾತ್ಮಕ ಕಾರ್ಯಕ್ರಮಗಳನ್ನು ಯಶಸ್ವೀ ರೀತಿಯಿಂದ ಪಾಲಿಸುವದು ಅವಶ್ಯವೆಂದು ನಾವು ನಂಬುತ್ತೇವೆ. ಜಾತಿಮತಭೇದಗಳನ್ನೆಣಿಸದ ನಮ್ಮ ಬಾಂಧವರಲ್ಲಿ ಸೌಹಾರ್ದತೆಯನ್ನು ಬೆಳಿಸಲು ಎಲ್ಲ ರೀತಿಯಿಂದ ಪ್ರಯತ್ನಿಸುವೆವು. ಮತ್ತು ಹಿಂದುಳಿದವರೆಂದೂ ಹಿಂದಕ್ಕಟ್ಟಲ್ಪಟ್ಟವರೆಂದೂ ಗಣಿಸಲಾಗಿರುವ ಜನರ ಹಿತಸಾಧನೆಯನ್ನು ಪ್ರತಿ ವಿಧದಲ್ಲಿಯೂ ಮುಂದರಿಸುವೆವು.

ನಾವು ಸಾಮ್ರಾಜ್ಯಶಾಹಿ ಪದ್ಧತಿಯನ್ನು ನಾಶ ಮಾಡಲು ಹೊರಟಿರುವವರೂ, ಇಂಗ್ಲಿಷ ಅಧಿಕಾರಿಗಳೊಡನಾಗಲೀ ಅಧಿಕಾರೇತರರೊಡನಾಗಲೀ ನಮ್ಮ ಜಗಳವಿಲ್ಲವೆಂಬುದು ನಾವು ಬಲ್ಲೆವು. ಸವರ್ಣ ಹಿಂದುಗಳು ಮತ್ತು ಹರಿಜನರೊಳಗಿನ ಭೇದ ಭಾವಗಳು ಹೋಗಬೇಕೆಂದೂ, ಸವರ್ಣ ಹಿಂದುಗಳು ತಮ್ಮ ನಿತ್ಯ ವ್ಯವಹಾರದಲ್ಲಿ ಈ ಭೇದ ಭಾವಗಳನ್ನು ಮರೆಯಬೇಕೆಂದೂ ನಾವು ಅಭಿಪ್ರಾಯ ಪಡುತ್ತೇವೆ. ಇಂತಹ ಭೇದ ಭಾವಗಳು ಅಹಿಂಸಾತ್ಮಕ ಆಚರಣೆಗೆ ಅಡ್ಡಿಯಾಗಿರುವವು. ನಮ್ಮ ಮತಗಳು ಬೇರೆ ಇದ್ದರೂ ನಾವು ಒಂದೇ ರಾಷ್ಟ್ರ, ಒಂದೇ ರಾಜಕೀಯ, ಆರ್ಥಿಕ ಹಿತಸಂಬಂಧಗಳಿಂದ ಕೂಡಿರುವ ಭಾರತಮಾತೆಯ ಮಕ್ಕಳಂತೆ ವರ್ತಿಸುವೆವು. ಹಿಂದೂಸ್ಥಾನದ ಏಳು ಲಕ್ಷ ಹಳ್ಳಿಗಳನ್ನು ಪುನರುದ್ಧರಿಸಲು ಮತ್ತು ಜನತೆಯಲ್ಲಿನ ದರಿದ್ರತೆಯನ್ನು ಹೋಗಲಾಡಿಸಲು ಪ್ರಯತ್ನಿಸುವ ನಮ್ಮ ರಚನಾತ್ಮಕ ಕಾರ್ಯಕ್ರಮದಲ್ಲಿ ಚರಕ ಖಾದಿಗಳು ಅತಿ ಮುಖ್ಯ ಭಾಗಗಳಾಗಿವೆ. ಆದುದರಿಂದ ನಾವು ತಪ್ಪದೆ ನೂಲುವೆವು; ನಮ್ಮ ಸಲುವಾಗಿ ಖಾದಿಯನ್ನೇ ಕೊಳ್ಳುವೆವು. ಮತ್ತು ಇತರರಾದರೂ ಈ ರೀತಿ ಮಾಡು

ಕಾಂಗ್ರೆಸ್ ತತ್ವ ಧೋರಣಗಳನ್ನು ಶಿಸ್ತಿನಿಂದ ಪಾಲಿಸಲು ಮತ್ತು ಹಿಂದೀ ಸ್ವಾತಂತ್ರ್ಯ ಸಂಗ್ರಾಮವನ್ನು ಸಾಗಿಸಲು ಯಾವಾಗ ಕಾಂಗ್ರೆಸಿನ ಕರೆ ಬಂದರೂ ಆಗ ಅದರಲ್ಲಿ ಸೇರಲು ನಾವು ಪ್ರತಿಜ್ಞೆ ಮಾಡುತ್ತೇವೆ.

ಅಧಿಕೃತ ಖಾದಿಯನ್ನೇ ಉಪಯೋಗಿಸಿರಿ.

ಖಾದೀ ಪ್ರಕಟನೆ ೮.

ಶುದ್ಧ ಮತ್ತು ಅಧಿಕೃತ ಖಾದಿಯನ್ನೇ ಉಪಯೋಗಿಸಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಾಂಗ್ರೆಸದ ಅಭಿಮಾನಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿರುವದು. ನಮ್ಮ ಸ್ವಾತಂತ್ರ್ಯದ ಹೋರಾಟದಲ್ಲಿ ಖಾದಿಗೆ ಇರುವ ಮಹತ್ವವನ್ನು ಅನೇಕ ಸಲ ಹೇಳುತ್ತಾ ಬಂದಿದ್ದರೂ ಇನ್ನೂ ಹಲವಡೆಗಳಲ್ಲಿ, ಸಂದೇಹ ಅವಿಶ್ವಾಸಗಳು ಉಳಿದಿರುವವು. ಇಷ್ಟೇ ಅಲ್ಲ ಕೆಲವು ಕಾರ್ಯಕರ್ತರು ನೂಲುವವರಿಗೆ ಕಡಿಮೆ ಕೂಲಿ ಕೊಟ್ಟು ಅನಧಿಕೃತ ಖಾದಿಯನ್ನು ತಯಾರಿಸಿ ಅದನ್ನೇ 'ಶುದ್ಧ ಖಾದಿ' ಎಂದು ಜನತೆಯಲ್ಲಿ ಪ್ರಚಾರ ಮಾಡಲು ತಮ್ಮ ವರ್ಚಸ್ಸನ್ನು ಉಪಯೋಗಿಸುತ್ತಾರೆ. ಇದು ತೀರ ದುಃಖಕರವಾದ ಸಂಗತಿಯು. ಎಲ್ಲ [illegible] ಮಾರಾಟವಾಗವೇ ಇದ್ದರೆ ಹೆಚ್ಚು [illegible] ನೂಲ [illegible] ಕೊಳ್ಳುವ ಶಕ್ತಿಯು [illegible] ದರಿಂದ [illegible] ಎಷ್ಟೇ [illegible] ನೂಲುವವರ ಎಲ್ಲ [illegible] ರರಾಗುತ್ತಾರೆ. [illegible] ನೂಲುವ [illegible] ಎಷ್ಟೇ ಮುದ್ದ [illegible] ತಮ್ಮ ನೂಲನ್ನು [illegible] ಧಾರಣೆಗೆ [illegible] ಟ್ಟುಬಿಡುವದುಂಟು. ಪಾಪ! ಇಂಥ ಹೀನ ಸ್ಥಿತಿಯಲ್ಲಿ [illegible] ಲಾಭ [illegible] ಅನಧಿಕೃತ ವ್ಯಾಪಾರಗಳು ನಡೆಯುತ್ತ ಹೋದರೆ ನಾವು ಇನ್ನು ಕಣ್ಣು ತೆರೆಯುವದೆಂದು? ಈ ಅನಧಿಕೃತ ಖಾದಿಯಲ್ಲಿ ಗಿರಣಿಯ ನೂಲನ್ನು ಯಾರಾದರೂ ಸೇರಿಸಿದರೆ ಅದನ್ನು ತಿಳಿಯುವ ಬಗೆಯಿಲ್ಲ. ಇನ್ನಾದರೂ ಕಾಂಗ್ರೆಸ್ಸಿಗರು ಕಣ್ಣು ತೆರೆದು, ತಮ್ಮೊಳಗಿನ ಅನಧಿಕೃತ ವ್ಯಾಪಾರಸ್ಥರಿಗೆ ತಮ್ಮ ವ್ಯಾಪಾರವನ್ನು ನಿಲ್ಲಿಸಬೇಕೆಂದು ಕೇಳಿಕೊಂಡು ಅಂಥ ಅಶುದ್ಧ ಖಾದಿಯ ಬೆಳವಣಿಗೆಗೆ ಸಹಾಯವಾದ ಎಲ್ಲ ಅಂಶಗಳನ್ನು ಹೊಡೆದೋಡಿಸುವರೆಂದು ನಂಬಿದ್ದೇವೆ. ಅಶುದ್ಧ ಖಾದಿಯು ಪವಿತ್ರವಾದ ಶುದ್ಧ ಖಾದಿಯೆಂದು ಹೇಳಿ ನಿಜವಾದ ಖಾದೀ ಪ್ರೇಮಿಯನ್ನು ಸಹ ವಂಚಿಸುವ ಕೆಲಸಗಾರರನ್ನು ತಡೆಯಲು ಕಾಂಗ್ರೆಸ್ಸು ಮಂದೇ ಸಮರ್ಥವಿರುವದೆಂದು ತಿಳಿದು ನಾವು ಎಲ್ಲ ಕಾಂಗ್ರೆಸಿಗರಿಗೆ ಕಾರ್ಯಪ್ರವೃತ್ತರಾಗಲಿಕ್ಕೆ ಬಿನ್ನವಿಸುತ್ತೇವೆ.

ನಾ. ಸು. ಹರ್ಡೀಕರ್,
ಧಾರವಾಡ, ಗೌ. ಕಾರ್ಯದರ್ಶಿ,
12 1.40. ಕ. ಪ್ರಾ. ಕಾ. ಸ.

ಯುದ್ಧ ವಾರ್ತೆ.

ರಷ್ಯಾ ಫಿನ್‌ಲೇಂಡ್ ಯುದ್ಧ.

ವಿಮಾನಧಾಳಿಗೆ ಸಿಲುಕಿದ ಫಿನ್ನರ ಸಂಖ್ಯೆ.

ರಷ್ಯಾ-ಫಿನ್‌ಲೇಂಡ್ ಯುದ್ಧಾರಂಭವಾದಾಗಾಯಿತು ಜನವರಿ 9 ನೇ ತಾ.ನ ವರೆಗೆ, ರಷ್ಯನ್ ವಿಮಾನ ದಾಳಿಯಿಂದ, 234 ಜನ ಮಡಿದಿದ್ದಾರೆ; 269 ಜನ ಪೂರಾ ಗಾಯಪಟ್ಟಿದ್ದಾರೆ. 210 ಜನ ಗಾಯಗೊಂಡಿದ್ದಾರೆ. ಎಂದು ಲಂಡನಿನಲ್ಲಿರುವ ಫಿನ್ನಿಷ್ ರಾಯಭಾರಿ ಕಛೇರಿಯವರು ಪ್ರಕಟಿಸಿದ್ದಾರೆ.

ಹೆಲ್ಸಿಂಕಿಯಲ್ಲೂ ವಿಮಾನಧಾಳಿ ರಕ್ಷಣಾ ಸಾಧನಗಳನ್ನೊಳಗೊಂಡ ಇತರ ನಗರಗಳಲ್ಲೂ ಮುಖ್ಯವಾಗಿ ಸ್ವೀಡಿಷ್ ವಿಮಾನ ವಿರೋಧಕ ತೋಪುಗಳ ಪ್ರಾಬಲ್ಯದಿಂದ ವಿಮಾನ ವಿರೋಧಕ ಕಾರ್ಯವು ಫಲಕಾರಿಯಾಗಿ ಜರುಗಿದೆ ಎಂದೂ ಹೇಳಲಾಗಿದೆ.

ಫಿನ್ನಿಷ್ ಸಂಗ್ರಾಮ ಜಾಗ್ರತೆ ಮುಗಿಯಬೇಕೆಂದು ಹಿಟ್ಲರ್ ಅತ್ಯಂತ ಕಾತುರನಾಗಿದ್ದಾನೆ. ಫಿನ್‌ಲೇಂಡಿಗೆ ಸಹಾಯ ಒದಗಿದರೆ ಯುದ್ಧ ಪಶ್ಚಿಮ ಯೂರೋಪಿಗೂ ಹರಡಬಹುದೆಂದು ಆತನ ದಿಗಿಲು. ರಷ್ಯ, ಫಿನ್‌ಲೇಂಡಿನ ಮೇಲೆ ಯುದ್ಧ ಮಾಡುತ್ತಿರುವುದರಿಂದ ರಷ್ಯಾ-ಜರ್ಮನಿ ವಾಣಿಜ್ಯ ಸಂಧಾನಗಳಿಗೆ ಬಹಳ ಅಡ್ಡಿಯಾಗಿರುವುದಾಗಿ ಆತನ ಸಂದೇಹ. ಈ ಕಾರಣಗಳಿಂದ ಜಾಗ್ರತೆ ಫಿನ್ನಿಷ್ ಯುದ್ಧ ಮುಗಿಯಲೆಂದು ಆತ ಬಯಸಿರುವುದು.

ಇದೇ 14ನೇ ಭಾನುವಾರ 300 ಕ್ಕಿಂತ ಹೆಚ್ಚು ವಿಮಾನಗಳು ಫಿನ್‌ಲೇಂಡಿನ ಮೇಲೆ ಧಾಳಿ ನಡಿಸಿದವು. ಎಸ್ಪೂ, ರಾಜಮಾಕಿ, ಲೋಜ, ಕಾರ್ಜ ಈ ನಾಲ್ಕು ನಗರಗಳ ಮೇಲೆಯೇ ರಷ್ಯನ್ ವಿಮಾನಗಳು ಸುಮಾರು 600 ಬಾಂಬುಗಳನ್ನು ಕಾರಿದುವು ಎಂದು ಫಿನ್ನಿಷ್ ಅಧಿಕಾರಿ ಪ್ರಕಟಣೆ ತಿಳಿಸುತ್ತದೆ.

ಹ್ಯಾಂಗೋ ರೇವಿಗೇ ವಿಪರೀತ ನಷ್ಟ ಸಂಭವಿಸಿರುವ ಹಾಗಿದೆ. ಆ ನಗರದೊಡನೆ ವ್ಯವಹಾರವೇ ಸಾಧ್ಯವಿಲ್ಲವಾಗಿದೆ.

ಹೆಲ್ಸಿಂಕಿ ಜಿಲ್ಲೆಯೊಂದರಲ್ಲೇ ಸುಮಾರು 12 ನಗರಗಳ ಮೇಲೆ ರಷ್ಯನ್ ವಿಮಾನಗಳು ಧಾಳಿ ನಡಿಸಿದುವು. ಅನೇಕ ಮನೆ ಮಠಗಳು ಉರಿದು ಬಿದ್ದವು. ಟೆಲಿಫೋನ್ ಮತ್ತು ಟೆಲಿಗ್ರಾಫ್ ತಂತಿಗಳು ಛಿದ್ರವಾಗಿವೆ.

14ನೇ ಭಾನುವಾರ ಅನೇಕ ನಗರಗಳು ರಷ್ಯನ್ ವಿಮಾನಧಾಳಿಗೆ ಸಿಲುಕಿವೆನೆಂದು ಫಿನ್ನಿಷ್ ಪ್ರಕಟಣೆ ತಿಳಿಸುತ್ತದೆ. ವಾಸಾ ನಗರಕ್ಕೆ ವಿಪರೀತ ನಷ್ಟವಾದುದಾಗಿ ಹೇಳಲಾಗಿದೆ.

ವಾಸಾ ನಗರದಲ್ಲಿ 8 ಜನ ನಾಗರೀಕ ಪ್ರಜೆಗಳು ಹೆಂಗಸರು ಮಕ್ಕಳು ಮಡಿದರು. ಅನೇಕರಿಗೆ ಗಾಯಗಳಾಗಿವೆ. ನಷ್ಟವೂ ವಿಪರೀತ.

ಇತರ ಕಡೆಗಳಲ್ಲಿ ಅಷ್ಟು ನಷ್ಟವಾದ ಹಾಗೆ ಇಲ್ಲ; ಶತ್ರು ವಿಮಾನಗಳು ಆರ್ಕಿಜ್ ಪ್ರಾಂತದಿಂದ ಸಾರ್ನ್ ಪ್ರದೇಶವನ್ನು ದಾಟಿ ಬಂದುವು.

ಧಾಳಿ ನಡಿಸಿದ ವಿಮಾನಗಳ ಪೈಕಿ ಮೂರು ವಿಮಾನಗಳನ್ನು ಗುಂಡು ಹೊಡೆದು ಕೆಡವಲಾಯಿತು. ಇನ್ನೂ ಮೂರು ಉರುಳಿದವೆಂದು ವರ್ತಮಾನ.

ರಷ್ಯನ್ ವಿಮಾನಗಳು ಅನೇಕ ಕಡೆಗಳಲ್ಲಿ ನಾಗರಿಕ ಪ್ರಜೆಗಳ ಮೇಲೆ ಮೆಷಿನ್ ಗನ್‌ಗಳಿಂದ ಗುಂಡು ಹಾರಿಸಿವೆ. ಇಂಥಾ ಧಾಳಿ ಇದು ವರೆಗೆ ನಡೆಯಲೇ ಇಲ್ಲ.

ತಾ. 15ರಲ್ಲಿ 60 ರಷ್ಯನ್ ವಿಮಾನಗಳು ಫಿನ್‌ಲೇಂಡಿನ 8 ಪ್ರದೇಶಗಳ ಮೇಲೆ ಕನಿಷ್ಟ ಒಟ್ಟು 600 ಬಾಂಬುಗಳನ್ನು ಕಾರಿದವು. ಮಡಿದವರ ಮತ್ತು ಗಾಯಗೊಂಡವರ ಸಂಖ್ಯೆಯನ್ನೂ, ಬಿದ್ದ ಬಾಂಬುಗಳ ಸಂಖ್ಯೆಯನ್ನೂ ಗಮನಿಸಿದರೆ ಈ ಪ್ರಮಾಣ 1ಕ್ಕೆ 10ರಂತೆ ಇರುವುದೆಂದು ಗೊತ್ತಾಗುತ್ತದೆ.

ನಾಲ್ಕು ರಂಗದಲ್ಲಿ ಫಿನ್ನರು ಎರಡು ರಷ್ಯನ್ ಸೇನಾ ಪಡೆಗಳನ್ನು ನಾಮಾವಶೇಷ ಮಾಡಿದರೆಂದು ಫಿನ್ನಿಷ್ ಪ್ರಕಟಣೆ.

ಫಿನ್ನಿಷ್ ಸೇನೆಗೆ ಜರ್ಮನ್ ಪ್ರಜೆ.

ಫಿನ್‌ಲೇಂಡಿನಲ್ಲಿರುವ ಜರ್ಮನ್ ರಾಯಭಾರಿ ಕಛೇರಿಯ ವ್ಯಾಪಾರ ಇಲಾಖೆಯ ಮುಖ್ಯಾಧಿಕಾರಿ ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಫಿನ್ನಿಷ್ ಸೇನೆಗೆ ಸ್ವಯಂ ಸೇವಕನಾಗಿ ಸೇರಿದ್ದಾನೆ.

ಫಿನ್‌ಲೇಂಡಿಗೆ ಅಮೇರಿಕನ್ ಸ್ವಯಂಸೇವಕ ಪಡೆ.

ಫಿನ್‌ಲೇಂಡಿಗೆ ಅಮೇರಿಕದಿಂದ ಸ್ವಯಂ ಸೇವಕರ ಪ್ರಥಮ ಪಡೆಯು ಪ್ರಥಮವಳ ಬಂದು ತಲಪಿದೆ. ಅವರಿಗೆ ಈಗನ್ನೈಗನ್ನು ಕಟ್ಟಿಕೊಂಡು ಓಡಾಡುವ ಮತ್ತು ತುಪಾಕಿಗಳಿಂದ ಗುಂಡು ಹೊಡೆಯುವ ಶಿಕ್ಷಣ ಕೊಡಲ್ಪಡುತ್ತಿದೆ ಎಂದು ನ್ಯೂಯಾರ್ಕ್ ಹೇರಾಲ್ಡ್ ಟ್ರಿಬ್ಯೂನಿನ ಪ್ಯಾರಿಸ್ ಸಂಚಿಕೆ ಪ್ರಕಟಿಸಿದೆ.

ಪಶ್ಚಿಮ ರಣರಂಗ.

ಬ್ರಿಟನ್, ಫ್ರಾನ್ಸ್, ಜರ್ಮನಿ ಯುದ್ಧ. ಚಳಿ ಹೆಚ್ಚು; ಜರ್ಮನ್ ವಿಮಾನಕ್ಕೆ ಏಟು.

ಪಶ್ಚಿಮ ರಂಗವು ಬಹಳ ಚಳಿಯಾದ ಹವಾಗುಣದಿಂದ ಕೂಡಿದೆ. ಬಲವಾದ ಶೀತ ಮಾರುತವು ಬೀಸುತ್ತಿದೆ. ಉಭಯ ಪಕ್ಷಗಳಲ್ಲೂ ವಿಮಾನ ಚಟುವಟಿಕೆ ಕಡಮೆಯಾಗಿದೆ.

ಒಂದು ಸಲ ಈ ವಿಮಾನ ಚಟುವಟಿಕೆ ನಡೆಯುತ್ತಿರುವಾಗ ಜರ್ಮನ್ ಸ್ಥಳ ಪರಿಶೋಧನಾ ವಿಮಾನವೊಂದು ಫ್ರೆಂಚ್ ವ್ಯೂಹಕ್ಕೆ 20 ಮೈಲಿ ಹಿಂಭಾಗದಲ್ಲಿ ಹೊಡೆದುರುಳಿಸಲ್ಪಟ್ಟಿತು.

ಜರ್ಮನ್ ವಿಮಾನಗಳು ಸ್ಥಳಪರಿಶೋಧನೆಗಾಗಿ ಈಶಾನ್ಯ ಫ್ರಾನ್ಸಿನಲ್ಲಿ ಓಡಾಡಿದುವರಿಂದ ವಿಮಾನ ಧಾಳಿಯ ಎಚ್ಚರಿಕೆ ಕೊಡಲ್ಪಟ್ಟಿತು.

ಶೀತವು ವಿಪರೀತವಾಗಿರುದರಿಂದ ಯಾರಿಗೂ ಸೇರದೇ ಇರುವ ಪ್ರದೇಶದಲ್ಲಿ ಬೇಹುಗಾರ ಪಡೆಗಳ ಚಟುವಟಿಕೆ ಕಡಿಮೆಯಾಗಿದೆ. ಈ ಮಧ್ಯೆ, ಜರ್ಮನರು ಮೋಸೆಲ್‌ನ್‌ಗೆ ಪಶ್ಚಿಮದಲ್ಲೂ ಪೂರ್ವದಲ್ಲೂ ಸ್ವಲ್ಪ ಗೋಲಂದಾಜ ಚಟುವಟಿಕೆ ನಡೆಸಿದ್ದಾರೆ.

ತಾ. 12ರ ಮಧ್ಯಾಹ್ನ 11 ಗಂಟೆ ಆದ ಕೊಂಚ ಹೊತ್ತಿನ ಮೇಲೆ, ಶತ್ರು ವಿಮಾನಗಳು ಬ್ರಿಟಿಷ್ ಪೂರ್ವತೀರ ಪ್ರದೇಶದ ಮೇಲೆ ಕಾಣಿಸಿಕೊಂಡುವು. ಟೆಂಸ್ ಅಳಿವೆ ಪ್ರದೇಶದ ಮೇಲೂ ಶತ್ರು ವಿಮಾನಗಳು ಬಂದಿದ್ದುವು. ಇಲ್ಲಿ ವಿಮಾನ ವಿರೋಧಕ ತೋಪುಗಳು ಗುಂಡು ಹಾರಿಸಿದುವು. ಬ್ರಿಟಿಷ್ ಯುದ್ಧದ ವಿಮಾನಗಳು ಗಗನಕ್ಕೆ ಹಾರಿ ಶತ್ರು ವಿಮಾನಗಳನ್ನು ಸಮುದ್ರದಾಚೆಗೆ ತೊಲಗಿಸಿದುವು ಎಂದು ಬ್ರಿಟಿಷ್ ವಿಮಾನಖಾತೆ ಪ್ರಕಟಿಸಿದೆ.

ನೌಕಾ ಯುದ್ಧ.

ತಾ. 15ರಲ್ಲಿ ಶತ್ರು ಸಬ್ ಮೆರಿನ್ ಒಂದು ಸಮುದ್ರದಲ್ಲಿ ಒಳಹೋಗಲು ಪ್ರಯತ್ನಿಸುತ್ತಿದ್ದಾಗ ಫ್ರೆಂಚ್ ಯುದ್ಧದ ಹಡಗೊಂದು ಅದನ್ನು ಪ್ರತಿಭಟಿಸಿತು. ಆ ಸಬ್ ಮೇರಿನ್ ನಾಶವಾಗಿರಬೇಕು. ಇಲ್ಲವೇ ಅಪ್ಪಸ್ಪನಶಾತ್ ತಪ್ಪಿಸಿಕೊಂಡಿರಬೇಕು.

ಉತ್ತರ ಸಮುದ್ರದಲ್ಲಿ ಶತ್ರು ಸಬ್ ಮೆರಿನ್ ಒಂದರ ಮೇಲೆ ಬ್ರಿಟಿಷ್ ರಾಯಲ್ ಏರ್‌ಫೋರ್ಸಿನ ವಿಮಾನಗಳು ಬಾಂಬು ಕಾರಿದವು.

ಜಾನಸ್ ಎಂಬ ಹಡಗೊಂದು ಯೂರೋಪದೋ ಒಂದು ರೇವಿಗೆ ಹೊರಡಲು ಆ ಸಂಜೆ ಸಮುದ್ರ ಮಾರ್ಗದಲ್ಲಿ ಬಂದಾಗ ಫ್ರೆಂಚ್ ಯುದ್ಧದ ಹಡಗೊಂದು ಅದನ್ನು ಎದುರಿಸಿತು. ಆಗ ಆ ಶತ್ರು ಹಡಗು ತನ್ನನ್ನು ತಾನೇ ಮುಳುಗಿಸಿಕೊಂಡಿತು.

ಸೀಹಾರ್ಸ್, ಅನ್‌ಡೈನ್, ಸ್ಟಾರ್ ಫಿಷ್ ಎಂಬ ಮೂರು ಬ್ರಿಟಿಷ್ ಸಬ್ ಮೆರಿನ್ ಶಿಬಿರಕ್ಕೆ ಹಿಂತಿರುಗಲೂ ಇಲ್ಲ. ವರದಿ ಕೂಡ ಕಳುಹಿಸಲಿಲ್ಲ. ಆದುದರಿಂದ ಅವು ನಷ್ಟವಾಗಿರಬೇಕು ಎಂದು ಬ್ರಿಟಿಷ್ ನೌಕಾ ಖಾತೆ ಪ್ರಚುರಪಡಿಸಿದೆ.

ಹಾಲೆಂಡ್ ಬೆಲ್ಜಿಯಂ?

ಹಾಲೆಂಡ್ ಬೆಲ್ಜಿಯಂಗಳು ಕೈಕೊಂಡಿರುವ ಜಾಗ್ರತ ಕ್ರಮಗಳಿಗೆ ಬೆಲ್ಜಿಯಂನಲ್ಲಿ ಬಂದಿಳಿದ ಜರ್ಮನ್ ವೈಮಾನಿಕನ ಬಳಿಯಲ್ಲಿದ್ದ ಕಾಗದ ಪತ್ರಗಳಲ್ಲಿ ಅಡಕವಾಗಿದ್ದ ಆತಂಕಗಳಲ್ಲ ಕಾರಣ. ಬ್ರಸೆಲ್ಸ್‌ಗೆ ಬಂದ ರಾಜಕೀಯ ಮತ್ತು ಮಿಲಿಟರಿ ಸಂಬಂಧವಾದ ವರ್ತಮಾನಗಳು ಎಂದು ತಿಳಿದು ಬಂದಿದೆ.

ಹಾಲೆಂಡ್ ಬೆಲ್ಜಿಯಂಗಳಿಗೆ ಸಂಪೂರ್ಣ ಸಹಕಾರ ಮತ್ತು ಐಕಮತ್ಯವಿದೆ. ಇವೆರಡರಲ್ಲಿ ಜರ್ಮನಿ ಯಾವುದನ್ನು ಮುಟ್ಟಿದರೂ ಅದು ಮತ್ತೊಂದನ್ನು ಮುಟ್ಟಿತೆಂದು ಭಾವಿಸಲ್ಪಡುವುದು ಎಂದು ಹಾಲೆಂಡಿನ ಹೊಣೆ ಪ್ರಧಾನಾಮಾತ್ಯರಾದ ಮಿ. ಕಾಲಿನ್‌ರವರು ಕಳೆದವಾರ ಇಟೆಲಿಯ ವಿದೇಶಾಂಗ ಸಚಿವರಾದ ಕೌಂಟ್ ಸಿಯಾನೋರವರಿಗೆ ತಿಳಿಸಿದರೆಂದು ತಿಳಿಯಬಂದಿದೆ.

ರೋಂನಲ್ಲಿರುವ ಅನೇಕ ಡಚ್ ಪ್ರಜೆಗಳು ಅವರು ಸೈನ್ಯಕ್ಕೆ ಸೇರಲು ಬದ್ಧರಾಗಿಲ್ಲವಾದರೂ ಕ್ಷಣಾರ್ಧದಲ್ಲಿ ಹಾಲೆಂಡಿಗೆ ಹೊರಡಲು ಗಂಟುಮೂಟೆ ಕಟ್ಟಿಸಿದ್ದಾಗಿದ್ದಾರೆ.

ಖಾದಿಯು ತುಟ್ಟಿಯಾದರೂ ಎಲ್ಲ ಹಣವು ನಮ್ಮ ಬಾಂಧವರಿಗೆ ಮುಟ್ಟುತ್ತದೆ.

ಖಾದೀ ಪ್ರಕಟನೆ ೭.

'ಒಂದು ಪೌಂಡು ತೂಕದ ಅರಳೆಯನ್ನು ಗಿರಣಿಯ ಮುಖಾಂತರ ಬಟ್ಟೆ ಮಾಡಲು 0-8-6 ವೆಚ್ಚ ತಗಲುವದು ಆದರೆ ಅಷ್ಟೇ ಅರಳೆಯನ್ನು ಖಾದಿಯನ್ನಾಗಿ ಮಾಡಲು 30 ಆಣೆ ವೆಚ್ಚ ಮಾಡಬೇಕಾಗುತ್ತದೆ. ಮೊದಲನೇ ರೀತಿಯಿಂದ ಅರಿವೆ ತಯಾರಿಸುವಾಗ ನೂಲುವವನಿಗೆ ಮತ್ತ ನೇಕಾರನಿಗೆ ಕೂಡಿ ರೂ. 0-4-6 ಮಾತ್ರ ಮುಟ್ಟುವದು ಆದರೆ 2 ನೇ ರೀತಿಯಲ್ಲಿ ಅವರಿಬ್ಬರಿಗೂ ಕೂಡಿ 24 ಆಣೆ ಕೂಲಿ ಸಿಗುವದು ಹಾಗಾದರೆ ಯಾವದನ್ನು ಕೊಳ್ಳುವಿರಿ? ತುಟ್ಟಿಯಾಗಿ ಕಾಣುವ ಖಾದಿಯನ್ನೋ? ಅಗ್ಗವಾಗಿ ತೋರುವ ಗಿರಣಿಯ ಬಟ್ಟೆಯನ್ನೋ?'

ಮಹಾತ್ಮ ಗಾಂಧಿ. ('ಹರಿಜನ' 2-12-39.)

ಆದ್ದರಿಂದ ಬಾಂಧವರೇ ತುಟ್ಟಿಯಾಗಿ ಕಂಡರೂ ನಾವು ಕೊಡುವ ಪ್ರತಿಯೊಂದು ಪೈಯೂ ನಮ್ಮ ಸಹೋದರ ಕೆಲಸಗಾರರಿಗೆ ಸಲ್ಲುತ್ತದೆ. ಆದ್ದರಿಂದ ಹಳ್ಳಿಗಳಲ್ಲಿ ಹಂಚಲ್ಪಡುವ ಖಾದಿಯನ್ನು ಕೊಳ್ಳಿರಿ. ಸರಿ ಅರ್ಧ ಬೆಲೆಯು ಬಂಡವಲುಗಾರನಿಗೂ, ಯಂತ್ರಕ್ಕೂ ಹೋಗುವ ಗಿರಣಿಯ ಬಟ್ಟೆಯನ್ನು ಕೊಳ್ಳಬೇಡಿರಿ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ.

(ಚುನಾವಣೆ ವಿಭಾಗ.)

ಮತದಾನ ಪದ್ಧತಿ:- ಪ್ರಕಟನೆ ೮.

ಇದೇ 28-1-40 ನೇ ದಿನ ನಡೆಯಲಿರುವ ರಾಮದುರ್ಗ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಗಳಲ್ಲಿ, ಒಂದಕ್ಕಿಂತ ಹೆಚ್ಚು ಪ್ರತಿನಿಧಿಗಳು ಆರಿಸಲ್ಪಡಬೇಕಾದ ಮತದಾರ ಸಂಘಗಳಲ್ಲಿಯ ಮತದಾರರು ಸಾಮೂಹಿಕ ಮತದಾನ ಪದ್ಧತಿ Comutative methad of Voting)'ಯ ಪ್ರಕಾರ ತಮ್ಮ ಮತ ಕೊಡಬೇಕು.

ಅಂದರೆ ಪ್ರತಿಯೊಬ್ಬ ಮತದಾರನಿಗೆ ಆ ಮತದಾರ ಸಂಘಕ್ಕೆ ಕೊಡಲ್ಪಟ್ಟ ಸ್ಥಳಗಳ ಸಂಖ್ಯೆಯಷ್ಟು ಮತಗಳಿರುವವು. ಆತನು ಅವೆಲ್ಲ ಮತಗಳನ್ನು ಒಬ್ಬ ಹುರಿಯಾಳುವಿಗೇ ಕೊಡಬಹುದು. ಆದರೆ ಕೊಟ್ಟ ಒಟ್ಟು ಮತಗಳು ಆ ಮತದಾರ ಸಂಘಕ್ಕೆ ಇರುವ ಸ್ಥಳಗಳ ಸಂಖ್ಯೆಯನ್ನು ಮೀರಲಾಗದು. ನಮೂದು ಮಾಡಬೇಕಾದಕ್ಕಿಂತ ಹೆಚ್ಚು ಮತಗಳನ್ನು ನಮೂದು ಮಾಡಿದ ಮತ ಪತ್ರಿಕೆಯು ರದ್ದಾಗುವದು.

ಮೇಲಿನ ಈ ಪದ್ಧತಿಯು ಮುಂಬಾಯಿ ಅಸೆಂಬ್ಲಿಯ ಚುನಾವಣೆಗಳಲ್ಲಿ ಮತ ಕೊಡಲು ಅನುಸರಿಸುತ್ತಿರುವ ಮತದಾನ ಪದ್ಧತಿಯೇ ಇರುತ್ತದೆ.

ನಾ. ಸು. ಹರ್ಡೀಕರ್,
ಧಾರವಾಡ, ಗೌ. ಕಾರ್ಯದರ್ಶಿ,
16.1.40. ಕ. ಪ್ರಾ. ಕಾ. ಸಮಿತಿ.

ಕೊಡಗು

ಜನವರಿ ತಾರೀಖು ೧೯ ನೇ ಶುಕ್ರವಾರ ೧೯೪೦.

ಸ್ವಾತಂತ್ರ್ಯ ದಿನಾಚರಣೆ.

೧೯೩೦ನೇ ಇಸವಿಯಿಂದ ಸ್ವಾತಂತ್ರ್ಯ ದಿನವು ಜನವರಿ ತಿಂಗಳ 26ರಲ್ಲಿ ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲೂ ತಪ್ಪದೆ ಆಚರಿಸಲ್ಪಡುತ್ತಾ ಬರುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ವರ್ಷ ಈ ದಿನಾಚರಣೆಗೆ ಈ ಮೊದಲಿಗಿಂತ ಹೆಚ್ಚಿನ ಮಹತ್ವ ಕೊಡಲಾಗಿದೆ. ಯೂರೋಪಿನಲ್ಲಿ ಚಿಕ್ಕ ಮತ್ತು ಬಲಹೀನ ಜನಾಂಗಗಳ ಸ್ವಾತಂತ್ರ್ಯವನ್ನು ಕಾಪಾಡಲು ಹಿಂಸಾತ್ಮಕ ಯುದ್ಧವು ನಡೆಯುತ್ತಿದೆ. ಭಾರತೀಯರು ಈ ಯುದ್ಧದಲ್ಲಿ ಭಾಗವಹಿಸಬೇಕೋ, ಯಾ ಬೇಡವೋ ಎಂಬುದನ್ನು ಇನ್ನೂ ನಿರ್ಧರಿಸಿರುವುದಿಲ್ಲ. ಈ ಸಂದರ್ಭದಲ್ಲಿ ಹಿಂದೂದೇಶದ ಈಗಿನ ಸ್ಥಿತಿಯನ್ನೂ, ಹಿಂದೀಯರು ಮುಂದೆ ಕೈಕೊಳ್ಳಬೇಕಾದ ಹೋರಾಟವನ್ನೂ ಆಲೋಚಿಸದೆ ಇರಲು ಸಾಧ್ಯವಿಲ್ಲ. ಬ್ರಿಟಿಷರು ಹಿಂದೂಸ್ಥಾನದ ಸ್ವಾತಂತ್ರ್ಯವನ್ನು ಅಪಹರಿಸಿ, ಅದರ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳನ್ನು ಕೆಡಿಸಿಬಿಟ್ಟಿರುವರು. ಈ ಗುಲಾಮಗಿರಿಯ ಸ್ಥಿತಿಯ ನೋವು ಮತ್ತು ನಾಚಿಕೆಯನ್ನು ಹಿಂದೀಯರು ಇತ್ತೀಚೆಗೆ ಚೆನ್ನಾಗಿ ಮನನಮಾಡಿರುವರು. ಆದುದರಿಂದ ಈ ಸ್ಥಿತಿಯನ್ನು ಹೋಗಲಾಡಿಸಿ, ತಮ್ಮ ಸ್ವಾತಂತ್ರ್ಯವನ್ನು ಪುನಹ ಗಳಿಸಲು ತಾವು ಸಿದ್ಧರಿದ್ದೇವೆಂದು ಕಳೆದ ಒಂಭತ್ತು ವರ್ಷಗಳಿಂದ ಅವರು ಪ್ರತಿಜ್ಞೆಮಾಡುತ್ತಾ ಬಂದಿರುವರು. ಈ ಪ್ರತಿಜ್ಞೆಯನ್ನು ಜಾರಿಗೆ ತರಲು ಈಗಿನ ಪರಿಸ್ಥಿತಿಯಲ್ಲಿ ತೀವ್ರ ಚಳವಳ ನಡಿಸಬೇಕಾಗುವ ಸಂದರ್ಭ ಉಂಟಾಗಬಹುದು. ಆದುದರಿಂದ ಅಂಥಾ ಚಳವಳಕ್ಕೆ ಬೇಕಾದ ಕಾರ್ಯಕ್ರಮಗಳನ್ನೂ, ಶಿಸ್ತಿನ ಸಿದ್ಧತೆಯನ್ನೂ ಮಾಡಬೇಕಾಗಿದೆ. ಈ ಉದ್ದೇಶದಿಂದ ಕಾಂಗ್ರೆಸು ವರ್ಕಿಂಗ್ ಕಮಿಟಿಯವರು ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿರುವರು.

ಈ ಬದಲಾವಣೆಗಳಿಂದರೆ ಹೊಸ ವಿಷಯಗಳನ್ನೇನೂ ಪ್ರತಿಜ್ಞೆಗೆ ಸೇರಿಸಿರುವುದಿಲ್ಲ. ಹಲವು ವರ್ಷಗಳಿಂದ ನಡಿಸಲ್ಪಡುತ್ತಿರುವ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಗಳು ಮಾತ್ರ ಅದಕ್ಕೆ ಸೇರಿಸಲ್ಪಟ್ಟವೆ. ಸ್ವಾತಂತ್ರ್ಯವನ್ನು ಪಡೆಯಲು ಮಾಡುವ ತಯಾರಿಕೆಯಲ್ಲಿ ಕೋಮುವಾರು ಭಾವನೆಯನ್ನು ಕಿತ್ತು ಹಾಕಿ ಹಿಂದೂಸ್ಥಾನದಲ್ಲಿ ಜನರೆಲ್ಲರೂ ರಾಜಕೀಯ ಮತ್ತು ಆರ್ಥಿಕ ವಿಚಾರಗಳಲ್ಲಿ ಜಾತಿ ಮತ ಭೇದವೆಣಿಸದೆ ಸಹೋದರರಂತೆ ವರ್ತಿಸುವಂತಾಗಬೇಕು. ಅಸ್ಪೃಶ್ಯರೆಂದು ಮೂಲೆಗೆ ತಳ್ಳಲ್ಪಟ್ಟಿರುವ ಹರಿಜನರ ದೊಡ್ಡ ಸಂಘವು ಮೇಲೆತ್ತಲ್ಪಡಬೇಕು. ಏಳು ಲಕ್ಷ ಗ್ರಾಮಗಳಲ್ಲಿ ಸಾಕಷ್ಟು ಉಣ್ಣಲೂ ಮತ್ತು ಉಡಲೂ ಇಲ್ಲದೆ ಕಷ್ಟಪಡುತ್ತಿರುವ ಬಡವರ ಕಷ್ಟನಿವಾರಣೆಯಾಗಬೇಕು; ಇದಕ್ಕಾಗಿ ಕೈಯಿಂದ ನೂಲುವುದಕ್ಕೂ, ಆ ನೂಲಿನಿಂದ ತಯಾರಾದ ಬಟ್ಟೆಯನ್ನೇ ಉಪಯೋಗಿಸುವುದಕ್ಕೂ ದೇಶೀಯರು ಸಿದ್ಧರಿರಬೇಕು. ಗ್ರಾಮ ಕೈಗಾರಿಕೆಯ ಸಾಮಾನುಗಳನ್ನೇ ಉಪಯೋಗಿಸಬೇಕು.

ಇವುಗಳೊಂದಿಗೆ ಅಹಿಂಸಾತತ್ವವನ್ನು ಸಂಪೂರ್ಣ ಪರಿಪಾಲಿಸಲು ತಯಾರಿರಬೇಕು. ಯೂರೋಪಿನಲ್ಲಿ ಇಂದು ನಡೆಯುತ್ತಿರುವ ಯುದ್ಧದ ಉದ್ದೇಶ್ಯವು ಅಂದರೆ ಚಿಕ್ಕ ಜನಾಂಗಗಳ ಸ್ವಾತಂತ್ರ್ಯವನ್ನು ಕಾಪಾಡುವದು – ಉತ್ತಮವಾದುದಾದರೂ ಅದನ್ನು ಸಾಧಿಸುವ ರೀತಿಯು ಯೋಗ್ಯವಾದುದಲ್ಲ ಮಾತ್ರವಲ್ಲ, ಅದು ಜಯಪ್ರದವಾದರೂ ಕೂಡ ಪ್ರಪಂಚದಲ್ಲಿ ಶಾಂತಿಯನ್ನು ನೆಲೆಗೊಳಿಸಲಾರದು. ಅದಕ್ಕೆ ಉತ್ತಮವಾದ ದಾರಿಯೇ ಅಹಿಂಸಾ ತತ್ವದ ದಾರಿ. ಈ ವಿಧಾನವನ್ನು ನೈತಿಕ ಮತ್ತು ಆತ್ಮಿಕ ಶಕ್ತಿ ಇರುವ ಯಾವ ವ್ಯಕ್ತಿಯೇ ಆಗಲಿ, ಜನಾಂಗವೇ ಆಗಲಿ ಜಯಪ್ರದವಾಗಿ ಉಪಯೋಗಿಸಬಹುದು. ಕಾಂಗ್ರೆಸು ಈ ದಾರಿಯನ್ನು ಹಿಡಿದಂದಿನಿಂದ ತನ್ನ ಹೋರಾಟದಲ್ಲಿ ಮುಂದುವರಿಯುತ್ತಾ ಬಂದಿದೆ. ಈಗ ತತ್ವಕ್ಕೆ ಸಂಪೂರ್ಣ ಜಯವಾಗುವ ಕಾಲ ಸಮೀಪಿಸುತ್ತಿದೆ. ಪಶ್ಚಿಮ ದೇಶಗಳಲ್ಲಿ ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಯುತ್ತಿರುವ ಅತಿ ಘೋರ ಮತ್ತು ಅಮಾನುಷ ಕೃತ್ಯಗಳು ಪಾಶ್ಚಿಮಾತ್ಯರ ಕಣ್ಣುಗಳನ್ನು ತೆರೆಸದೆ ಇರವು. ಅಹಿಂಸಾ ತತ್ವದ ಮಹತ್ವವು ಅವರಿಗೆ ಬೇಗನೆ ತಿಳಿಯದೆ ಇರದು. ಆದುದರಿಂದ ಸ್ವಾಭಾವಿಕವಾಗಿ ಈ ತತ್ವವನ್ನು ಪರಿಪಾಲಿಸಲು ಯೋಗ್ಯರಾದ ಹಿಂದೀಯರು ಇತರರಿಗೆ ಈ ವಿಚಾರದಲ್ಲಿ ಮೇಲ್ಪಂಕ್ತಿಯನ್ನು ಹಾಕಬೇಕಾಗಿದೆ. ಅದಕ್ಕಾರಣ ಈ ತತ್ವಗುರುಗಳಾದ ಮಹಾತ್ಮ ಗಾಂಧಿಯವರ ಮುಂದಾಳುತನದಲ್ಲಿಯೇ ಶೀಘ್ರವಾಗಿ ಭಾರತ ಭೂಮಿಯ ಸ್ವಾತಂತ್ರ್ಯವನ್ನು ಸಂಪಾದಿಸಲು ಪ್ರತಿಯೊಬ್ಬ ಭಾರತೀಯನೂ ಸೊಂಟಕಟ್ಟಬೇಕಾಗಿದೆ. ಈ ಉದ್ದೇಶದಿಂದ ಈ ತಾ. 26ರಲ್ಲಿ ಭಾರತ ಮಾತೆಯ ಗೌರವದ ಚಿಹ್ನೆಯಾದ ರಾಷ್ಟ್ರೀಯ ಧ್ವಜದಡಿಯಲ್ಲಿ, ತಮ್ಮ ಗುಲಾಮಗಿರಿಯನ್ನು ಹೋಗಲಾಡಿಸಿ, ಸ್ವಾತಂತ್ರ್ಯವನ್ನು ಪಡೆಯಲಿಕ್ಕಾಗಿ ನಡಿಸಬೇಕಾದ ಸಂಗ್ರಾಮದಲ್ಲಿ ಸೇರಲು ಎಂದಿಗೂ ತಯಾರಿರುವೆವೆಂದು ದೃಢ ಪ್ರತಿಜ್ಞೆ ಮಾಡುವುದು ಕಾಂಗ್ರೆಸಿಗೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯ ಧರ್ಮವಾಗಿದೆ.

ಚರಖಾವೇ ಅಮೋಘಾಸ್ತ್ರ.

ಗಾಂಧೀಜಿಯವರ ಘೋಷಣೆ.

ಪೂಜ್ಯ ಗಾಂಧೀಜಿಯವರು 'ಹರಿಜನ' ಪತ್ರಿಕೆಯಲ್ಲಿ 'ಚರಖಾ' ಎಂಬ ಅಭಿದಾನದಿಂದ ಒಂದು ಲೇಖನವನ್ನು ಬರೆದು, ಚರಖಾವೇ ಅಹಿಂಸೆಯ ಅಮೋಘಾಸ್ತ್ರವೆಂದು ಹೇಳಿರುವರು.

'ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಜಯಪಡೆಯಲಿಕ್ಕೆ ಅತ್ಯಾವಶ್ಯಕವೆಂದು ನಾನು ಭಾವಿಸಿರುವ ಗುಣಗಳನ್ನು ಹೊಂದಿಲ್ಲದ ಸೈನ್ಯದ ನಾಯಕತ್ವವನ್ನು ನಾನು ವಹಿಸಿಕೊಳ್ಳಲಾರೆ' ಎಂದಿರುವರು. ಅವರು ಲೇಖನವನ್ನು ಮುಂದರಿಸಿ ಸ್ವಾತಂತ್ರ್ಯಸಾಧನೆಗೆ ಸತ್ಯಾಗ್ರಹ ಹೂಡಿದರೆ ಅವರ ಜಯಲಭ್ಯವಾಗುವ ವರೆಗೂ ಸತ್ಯಾಗ್ರಹವನ್ನು ನಿಲ್ಲಿಸಲಾಗದೆಂದೂ, ಅಹಿಂಸಾ ಯುದ್ಧವಾದ ಈ ಸತ್ಯಾಗ್ರಹ ಸಮರಕ್ಕೆ ಅಹಿಂಸಾಚರಣೆಯು ಅತ್ಯಗತ್ಯವೆಂದೂ ಹೇಳಿದ್ದಾರೆ.

'ನಾನು ಇಂಗ್ಲಿಷರ ಶತ್ರುವೆಂದು ಸತ್ಯಾಗ್ರಹಿಗಳು ಭಾವಿಸಬಾರದು. ಪಾಶ್ಚಿಮಾತ್ಯರನ್ನು ಭಾರತದಿಂದ ಓಡಿಸಬೇಕೆಂಬ ಆಶೆ ನನಗಿಲ್ಲ. ಅವರು ಭಾರತದಲ್ಲಿ ಬದುಕಬೇಕಾದರೆ ಭಾರತದ ಸೇವಕರಾಗಬೇಕೆಂಬುದೇ ನನ್ನ ಬಯಕೆ.' ಎಂದು ಗಾಂಧೀಜಿಯವರು ಉಲ್ಲೇಖಿಸಿರುವರು. ಮುಂದುವರಿಸುತ್ತಾ, ಅಹಿಂಸಾತತ್ವದ ಆಧಾರದ ಮೇಲೆ ರಚಿತವಾಗುವ ನಾಗರೀಕತೆಗೆ ಹತ್ತಿರದ ಮಾರ್ಗವೆಂದರೆ ಭಾರತದಲ್ಲಿ ಹಿಂದೆ ಇದ್ದಂತೆ, (ಪಾಶ್ಚಿಮಾತ್ಯ ಆನಾಕ್ರಮಣಕ್ಕೆ ಮೊದಲು) ಪ್ರತಿಯೊಂದು ಗ್ರಾಮದ ಆಡಳಿತವನ್ನೂ, ಆಯಾಯ ಗ್ರಾಮಸ್ಥರೇ ನೋಡಿಕೊಳ್ಳುವಂತೆ ಮಾಡುವದೇ ಆಗಿದೆಯೆಂದೂ, ಈ ಗ್ರಾಮ ಪುನರುಜ್ಜೀವನವೇ ಭಾರತದ ಪ್ರಗತಿಗೆ ಮೂಲಕಾರಣವೆಂದೂ ಅಂದಿದ್ದಾರೆ.

'ಚರಖಾವೇ ಅಹಿಂಸೆಗಿರುವ ಅಮೋಘಾಸ್ತ್ರ. ಚರಖಾದಿಂದ ಬರುವ ದುರ್ಬಲ ಆಧಾರವು ಕೋಟ್ಯಾಂತರ ಜನರ ಐಕ್ಯಮತ್ಯವನ್ನು ಸಾಧಿಸಿ ಅವರನ್ನು ಸಬಲರನ್ನಾಗಿ ಮಾಡುವದು' ಅಂದಿರುವರು. 'ಚರಖಾವು ಕಾಂಗ್ರೆಸಿನ ಒಂದು ಪ್ರಬಲ ಆಯುಧ. ಆ ಪ್ರಾಮುಖ್ಯತೆಯಿಂದಲೇ ಅದು ರಾಷ್ಟ್ರೀಯ ಧ್ವಜದ ಮಧ್ಯದಲ್ಲಿ ಚಿತ್ರಿತವಾಗಿದೆ. ಇದ್ದರಿಂದ ಚರಖಾವೇ ಅರ್ಥಾತ್ ಖಾದಿಯೇ ಕಾಂಗ್ರೆಸಿನ ಪ್ರಥಮ ಕಾರ್ಯಕ್ರಮವಾಗಿರುವದು.' ಎಂದು ಘೋಷಿಸಿದ್ದಾರೆ.

'ನನ್ನ ತತ್ವಕ್ಕೆ ಅನೇಕರು ವಿರೋಧವಿರಬಹುದು. ಹಾಗೆಯೇ ಅನೇಕರು ಚರಖಾವು ಸರ್ವಶಕ್ತ ಆಯುಧವೆಂದು ನಾ ನಂಬಿದಾಗ ಪರಿಹಾಸ್ಯಮಾಡಿದ್ದುಂಟು. ಆದರೆ ಅವರು ಹಿಂದುಗಳು ಮುಸ್ಲಿಮರು ಯಾ ಯೂರೋಪಿಯನರೇ ಇರಲಿ ನನ್ನ ತತ್ವವನ್ನು ನನ್ನ ಇಷ್ಟಪ್ರಕಾರ ಮಾಡಿ ಅದನ್ನು ಒಪ್ಪಿಸುವುದು ಇಲ್ಲವೇ ಅವಜಯವನ್ನು ಅಂಗೀಕರಿಸುವುದು' ಎಂದು ಹೇಳಿ ಲೇಖನವನ್ನು ಮುಕ್ತಾಯಗೊಳಿಸಿದ್ದಾರೆ.

ಪ್ರಕಟನೆ.

ರಾಮಗಢ ಕಾಂಗ್ರೆಸು ಮಹಾಸಭೆಗೆ ದಕ್ಷಿಣ ಕೊಡಗಿನಿಂದ ಇಬ್ಬರು ಪ್ರತಿನಿಧಿಗಳನ್ನು ಆರಿಸುವ ಬಗ್ಗೆ ನಿಶ್ಚಿತ ದಿನವಾದ ಈ ತಾ. 17ನೇ ತಾರೀಖು ಶ್ರೀ. ಗಳಾದ ಎ. ಎಸ್. ಚಣ್ಣಪ್ಪ, ಕೆ. ಪಿ. ಕರುಂಬಯ್ಯ, ಸಿ. ಯಂ. ಪೂಣಚ್ಚ ಮತ್ತು ಬಿ. ಯಂ. ಕಾರ್ಯಪ್ಪ ಇವರುಗಳ ನೇಮಕ ಪತ್ರಗಳು ಮತ್ತು ಪ್ರಾಂತೀಯ ಕಾಂಗ್ರೆಸ್ ಕಮಿಟಿಗೆ ಲೇವಣಾತಿ ಹಣ (ರೂ 12) ಕಳುಹಿಸಿದರ ಮನಿಯಾರ್ಡರ್ ರಶೀತಿಗಳು (ಶ್ರೀ ಎ. ಎಸ್. ಚಣ್ಣಪ್ಪನವರದ್ದು ವಿನಹ) ನನಗೆ ತಲುಪಿದವು. ಶ್ರೀ. ಬಿ. ಕೆ. ನಂಜುಂಡೇಶ್ವರನವರು ರಿಜಿಸ್ಟರ್ ಟಪ್ಪಾಲು ಮೂಲಕ ತಾ. 11ರಲ್ಲಿ ಕಳುಹಿಸಿದ ನೇಮಕ ಪತ್ರವು ನನಗೆ ತಾ. 16ರ ಸಾಯಂಕಾಲ ತಲುಪಿತು. ಆದುದರಿಂದ ಮೇಲಿನ ನಾಲ್ಕು ಜನರ ನೇಮಕ ಪತ್ರಗಳನ್ನು ಒಪ್ಪಿಕೊಳ್ಳಬಹುದೆಂದು ನಾನು ಕೆ. ಪಿ. ಸಿ. ಸಿ. ಗೆ ಪತ್ರ ಬರೆದೆನು. ಅವರು ಶ್ರೀ ಸಿ. ಯಂ. ಪೂಣಚ್ಚನವರ ಹಣ ಮಾತ್ರ ಸಕಾಲದಲ್ಲಿ ತಲುಪಿದೆಯೆಂದೂ, ಉಳಿದ ನಾಲ್ಕು ಜನರ ನೇಮಕ ಪತ್ರಗಳು ಮಾತ್ರ ತಲುಪಿದೆಯಲ್ಲದೆ ಹಣ ಸಕಾಲದಲ್ಲಿ ತಲುಪಲಿಲ್ಲವೆಂದೂ ಶ್ರೀ ಪೂಣಚ್ಚನವರೊಬ್ಬರೇ ಪ್ರತಿನಿಧಿಯಾಗುವರೆಂದು ಪ್ರಕಟಿಸಬೇಕೆಂದೂ ನನಗೆ ಜವಾಬು ಬರೆದಿರುತ್ತಾರೆ. ಅದಕಾರಣ ಶ್ರೀ ಸಿ. ಯಂ. ಪೂಣಚ್ಚನವರು ಮಾತ್ರ ಪ್ರತಿನಿಧಿಯಾಗಿ ಆರಿಸಲ್ಪಟ್ಟಂತಾಗಿದೆಯೆಂದು ಪ್ರಕಟಿಸಿರುತ್ತೇನೆ.

ಕೆ. ಯಂ. ಕುಶಾಲಪ್ಪ,
ಡಿ. ರಿಟರ್ನಿಂಗ್ ಆಫೀಸರು,
ಮಡಿಕೇರಿ, ತಾ. 19-1-40. ಕೊಡಗು.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 135, ಏಲಕ್ಕಿ ಮಣಕ್ಕೆ ರೂ. 34 ರ ವರೆಗೆ ಕ್ರಯವಿದೆ.

ಫೈನಾನ್ಸು ಕಮಿಟಿ ಮೀಟಿಂಗು ತಾ. 18ರಲ್ಲಿ ಕೌನ್ಸಿಲು ಹಾಲ್‌ನಲ್ಲಿ ನಡೆಯಿತು.

ಇಲ್ಲಿಯ ಹೈಸ್ಕೂಲಿನ 6ನೇ ಫಾರಂನಲ್ಲಿದ್ದ 70 ವಿದ್ಯಾರ್ಥಿಗಳ ಪೈಕಿ 39 ಜನರಿಗೆ ಸ್ಕೂಲ್ ಫೈನಲ್ ಪರೀಕ್ಷೆಗೆ ಸಿಲೆಕ್ಷನ್ ದೊರೆತಿರುವದಾಗಿಯೂ, ಹುಡುಗಿಯರ ಹೈಸ್ಕೂಲಿನ 20 ವಿದ್ಯಾರ್ಥಿನಿಯರ ಪೈಕಿ 14 ವಿದ್ಯಾರ್ಥಿನಿಯರಿಗೆ ಸಿಕ್ಕಿರುವದಾಗಿಯೂ ತಿಳಿದುಬರುತ್ತದೆ.

ಮುನ್ಸೀಫರಾಗಿದ್ದ ಶ್ರೀ ನಿಡ್ಯಮಲೆ ಮುಪ್ಪಪ್ಪ ಬಿ. ಎ., ಬಿ ಎಲ್. ರವರನ್ನು ಹಂಗಾಮಿ ಸಬ್ ಜಡ್ಜರನ್ನಾಗಿ ನೇಮಿಸಲಾಗಿದೆ.

ಪಬ್ಲಿಕ್ ಪ್ರಾಸಿಕ್ಯೂಟರಾಗಿದ್ದ ಶ್ರೀ ಐಚೆಟ್ಟಿರ ಸುಬ್ಬಯ್ಯ ಯಂ. ಎ. ಬಿ. ಎಲ್ ರವರನ್ನು ಇನ್ನೊಂದು ಹುಕುಂ ಬರುವ ವರೆಗೆ ಹಂಗಾಮಿ ಮುನ್ಸೀಫರಾಗಿ ನೇಮಿಸಲಾಗಿದೆ. ಇಬ್ಬರೂ ತಮ್ಮ ತಮ್ಮ ಹುದ್ದೆಯ ಚಾರ್ಜನ್ನು ಈ ತಾ. 15 ರಲ್ಲಿ ತೆಗೆದುಕೊಂಡಿರುವರು.

ಕೊಡಗಿನ ಸರಕಾರದಲ್ಲಿ ಸಿಬ್ಬಂದಿ ಖೋತೆಯ ಪರಿಣಾಮವಾಗಿ ಇನ್ನು ಮುಂದೆ ಕೊಡಗಿನ ಚೀಫ್ ಕಮಿಷನರು ಕೊಡಗಿನಲ್ಲೇ ಇರುವರೆಂದೂ, ಮೈಸೂರಿನ ರೆಸಿಡೆಂಟರು ಚೀಫ್ ಕಮಿಷನರಾಗಿರುವದಿಲ್ಲವೆಂದೂ, ಕೊಡಗಿನಲ್ಲಿ ಕಮಿಷನರ ಹುದ್ದೆಯನ್ನು ತೆಗೆದು ಹಾಕಿ ಅವರ ಕೆಲಸವನ್ನು ಮದ್ರಾಸ್ ಪ್ರಾಂತ್ಯದಿಂದ ಎರವಾಗಿ ಬರುವ ಐ. ಸಿ. ಎಸ್ ಆಫೀಸರಾದ ಹೊಸ ಚೀಫ್ ಕಮಿಷನರಿಗೂ, ಡಿ. ಕಮಿಷನರಿಗೂ ಹಂಚಲಾಗುವದೆಂದೂ, ಈ ಬದಲಾವಣೆಗಳನ್ನು ಮಾಡಲಿಕ್ಕಾಗಿ ಕೊಡಗು ನ್ಯಾಯ ವಿಧಾಯಕ ಸಭೆಯಲ್ಲಿ ತಕ್ಕ ಖಾಯಿದೆ ಬದಲಾವಣೆಗಳು ಬೇಗನೆ ಮಾಡಲ್ಪಡುವವೆಂದೂ ಪ್ರಕಟವಾಗಿದೆ.

ಇಂಡಿಯಾ ಸರಕಾರದ ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ರವರು ಈ ವಾರ ಕೊಡಗಿಗೆ ಬಂದು ಹತ್ತು ದಿನಗಳ ವರೆಗೆ ಕೊಡಗಿನಲ್ಲಿರುವರೆಂದೂ, ಬರುವ ತಾರೀಕು 2ರಲ್ಲಿ ಇಲ್ಲಿಗೆ ಬರುವರೆಂದೂ ವಾರ್ತೆ.

ಇಂಡಿಯಾ ಸರಕಾರದ ಚೀಫ್ ಇಂಜೀನಿಯರವರು ಈ ವಾರ ಕೊಡಗಿಗೆ ಬರುವರೆಂದು ತಿಳಿದುಬರುತ್ತದೆ.

ತಾ. 14-1-40ರಲ್ಲಿ ಇಲ್ಲಿಯ ಹೈಸ್ಕೂಲಿನಲ್ಲಿ ನಡೆಯುವದೆಂದು ಪ್ರಕಟಿಸಲ್ಪಟ್ಟಿದ್ದ ಕೊಡವ ಸಂಘದ ಸಭೆಯು ಕಾರಣಾಂತರದಿಂದ ತಾ. 21-1-40 ಕ್ಕೆ ಮುಂದರಿಸಲ್ಪಟ್ಟಿದೆ. ಆ ದಿನ ಸಭೆಯೂ, ಔತಣವೂ ನಡೆಯುವದಾಗಿ ತಿಳಿಯುತ್ತೇವೆ.

ವೀರಾಜಪೇಟೆ

6ನೇ ಫಾರಮಿನ ಇಲ್ಲಿಯ ಹೈಸ್ಕೂಲಿನ 80 ವಿದ್ಯಾರ್ಥಿಗಳ ಪೈಕಿ 47 ಜನರನ್ನು ಬರುವ ಸ್ಕೂಲ್ ಫೈನಲ್ ಪರೀಕ್ಷೆಗೆ ಕೂರಲು ಆರಿಸಿರುವರಾಗಿ ತಿಳಿದುಬರುತ್ತದೆ.

ಇಲ್ಲಿ ಬತ್ತ ಗಾಡಿಗೆ ರೂ. 45 ಕ್ರಯವಿದೆ.

ನಿಧನ ವಾರ್ತೆ.

ಮೈಸೂರು ಸರಕಾರದಲ್ಲಿ ಪೋಲೀಸು ಸಬ್ ಇನ್ಸ್‌ಪೆಕ್ಟರಾಗಿದ್ದು ನಿವೃತ್ತಿ ಹೊಂದಿ ಮಡಿಕೇರಿಯಲ್ಲಿದ್ದ ಶ್ರೀ ಸಬ್ಬಕ್ಕಾಟೆರ ಅಣಯ್ಯನವರು ತಾರೀಕು 13-1-40 ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಹಿಂದೂ ದೇಶ.

ಪಂಜಾಬಿನಲ್ಲಿ ಈ ವರ್ಷ 1,92,000 ಜನರು ಕಾಂಗ್ರೆಸ ಸದಸ್ಯರಾಗಿದ್ದಾರೆ. ಅವರಲ್ಲಿ 17483 ಮುಸಲ್ಮಾನರು.

ನಾಗಪುರದಲ್ಲಿ 3 ಧಾನ್ಯದ ಅಂಗಡಿಗಳು ಭಸ್ಮವಾಗಿ ಸುಮಾರು ರೂ. 15 ಸಾವಿರದಷ್ಟು ನಷ್ಟ. ಒಬ್ಬ ರಿಕ್ಷಾದವನೂ ಬೆಂದು ಹೋದನು.

ವೈಸರಾಯರು ರೇಂಬಾಯಿಯ ಚೇಂಬರು ಆಫ್ ಕಾಮರ್ಸಿಗೆ ಭೇಟಿ ಕೊಟ್ಟು ಆ ಸಂಘಕ್ಕೆ ಇನ್ನೂ ಕೆಲವು ರಿಯಾಯಿತಿಗಳನ್ನು ಕೊಟ್ಟರು.

ವೈಸರಾಯರು ಡಿಲ್ಲಿಗೆ ಹಿಂದಿರುಗಿದ ಮೇಲೆ ಗಾಂಧೀಜಿಯವರನ್ನು ಕರೆಸಿ ಮಾತಾಡಬಹುದೆಂದು ಸುದ್ದಿ ಹಬ್ಬಿದೆ; ಆದರೆ ಈ ವಾರ್ತೆಗೆ ಅಧಿಕಾರ ವಾಣಿಯ ಬೆಂಬಲವೇನೂ ಇನ್ನೂ ದೊರೆತಿಲ್ಲ.

ಸರಸರಾವು ಪೇಟೆಯ ಸಬ್ ಜೈಲಲ್ಲಿದ್ದ ಮೂರು ಮಂದಿ ಖೈದಿಗಳು ರಾತ್ರಿ ಹೊತ್ತು ಪಾರಿಬಿಟ್ಟಿದ್ದಾರೆ. ಬಾಗಿಲಿನ ಸರಳುಗಳನ್ನು ಬಗ್ಗಿಸಿದುದು ಕಂಡುಬಂದಿದೆ. ಅಪರಾಧಿಗಳು ಇನ್ನೂ ಸಿಕ್ಕಿರುವುದಿಲ್ಲ.

ನಾಗ್ಪುರದಲ್ಲಿ ಡಾ. ಎಚ್. ಸಿ. ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಜರಗಿದ ಸಮಗ್ರ ಭಾರತ ಕ್ರೈಸ್ತ ಸಮ್ಮೇಳನದ 24ನೆಯ ವಾರ್ಷಿಕ ಅಧಿವೇಶನದಲ್ಲಿ, ಈಗಿನ ಯುದ್ಧದ ಉದ್ದೇಶಗಳನ್ನು ಪ್ರಕಟಿಸಬೇಕೆನ್ನುವ ಠರಾವು ಮಂಜೂರಾಯಿತು.

ಮಧ್ಯ ಪ್ರಾಂತದ ಎಸೆಂಬ್ಲಿಯ ಸದರಾದ ಶ್ರೀ ಆರ್. ಎಂ. ದೇಶಮುಖ ಎಂಬ ಕಾಂಗ್ರೆಸ್ ಮಂದಿ, ಕಾಂಗ್ರೆಸ್ ಮಂತ್ರಿ ಮಂಡಲ ತಿರುಗಿ ಕಾರ್ಯಾರಂಭ ಮಾಡುವ ವರೆಗೆ ತಮ್ಮ ಸಂಬಳ ತೆಗೆದುಕೊಳ್ಳುವದಿಲ್ಲವೆಂದು ನಿರ್ಧರಿಸಿರುವರು.

ಇಂದೂರಿನ ಹೋಳ್ಕರ್ ಸರಕಾರದವರು ವ್ಯಾಪಾರದಲ್ಲಿ ಬೆಲೆಯೇರಿಸುವ ವ್ಯಾಪಾರಿಯ ಅಂಗಡಿಯನ್ನು ಮುಟ್ಟುಗೋಲು ಹಾಕಿ ಅಲ್ಲಿ ಸರಕಾರದ ಸರಮನುಷ್ಯನೊಬ್ಬನನ್ನು ವ್ಯಾಪಾರ ಮಾಡಲು ನೇಮಿಸಬಹುದೆಂದು ವ್ಯಾಪಾರ ಶಾಖಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದಾರೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ಇದೇ ಜನವರಿ ತಾ. 19 ರಲ್ಲಿ ಜರುಗುವುದೆಂದು ನಿರ್ಧಾರವಾಗಿ ತಿಳಿದು ಬಂದಿದೆ. ಅಂದು ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ವಿಷಯವನ್ನು ಅದು ತೀರ್ಮಾನಿಸುವುದಲ್ಲದೆ, ವೈಸರಾಯರ ನಾಗ್ಪುರ ಮತ್ತು ಬೊಂಬಾಯಿಯ ಭಾಷಣಗಳ ಕುರಿತೂ ಸಮಾಲೋಚಿಸಬಹುದೆಂದೂ ತಿಳಿದು ಬರುತ್ತಿದೆ.

ಪಂಜಾಬ್ ಅಧಿಸಭ್ಯರ ಮಂತ್ರಿಗಳ ವಾಸಕ್ಕಾಗಿ ಅಲ್ಲಿನ ಸರ್ಕಾರದವರು ರೂ. 1,85,700 ಖರ್ಚು ಮಾಡಿ ಎರಡು ಭಾರಿ ಭವನಗಳನ್ನು ಕಟ್ಟಿಸಿರುತ್ತಾರೆ. ಸಾರ್ವಜನಿಕರ ಹಣವು ಈ ರೀತಿ ಖರ್ಚಾಗಿರುವದು ಅಲ್ಲಿನ ಕೆಲವು ಮಂದಿ ಪ್ರತಿನಿಧಿಗಳಿಗೆ ಅಸಮಾಧಾನವನ್ನುಂಟುಮಾಡಿರುವದು ಸಹಜವಾಗಿದೆ. ಆದರಿಂದ ಆ ಸಂಬಂಧವಾದ ಚರ್ಚೆ ಆ ಪ್ರಾಂತ್ಯದ ನ್ಯಾಯ ವಿಧಾಯಕ ಸಭೆಯಲ್ಲಿ ಬರುವ ವಾರ ನಡೆಯಿತು.

ಇದೇ ಬರುವ ಜನವರಿ ತಾ. 26ರಲ್ಲಿ ಇಂಡಿಯಾ ಸ್ವಾತಂತ್ರ್ಯ ದಿನಾಚರಣೆಯು ಇಂಡಿಯಾದಲ್ಲೆಲ್ಲಾ ಮಾತ್ರವಲ್ಲ; ಲಂಡನಿನಲ್ಲಿಯೂ, ಪ್ರಾಂತಗಳಲ್ಲಿಯೂ ಆಚರಿಸಲ್ಪಡುವದೆಂದು ತಿಳಿದುಬಂದಿದೆ. ಆಕ್ಸ್‌ಫರ್ಡ್, ಕೇಂಬ್ರಿಜ್, ಎಡಿನ್‌ಬರೋ, ಗ್ಲಾಸ್ಗೋ, ಮ್ಯಾಂಚೆಸ್ಟರ್, ಲಿವರ್ಪೂಲ್, ನ್ಯೂಕ್ಯಾಸಲ್ ಮುಂತಾದ ಕಡೆ ವಿದ್ಯಾರ್ಥಿಗಳ ಸಂಘಗಳು ಆ ದಿನದ ಸಭೆಗಳನ್ನು ಏರ್ಪಡಿಸುವರೆಂದು ಹೇಳಲಾಗಿದೆ.

ಹಿಂದೂಸ್ಥಾನದ ಕೈಮಗ್ಗದವರು ತಾವು ಈಗ ಪ್ರತಿ ವರ್ಷವೂ ತಯಾರಿಸುತ್ತಿರುವ ಕಂಬಳಿಗಳ ಜೊತೆಗೆ ಇನ್ನುಮೇಲೆ ಸೈನ್ಯಕ್ಕೆ ಬೇಕಾಗುವ ನಾಲ್ಕು ಲಕ್ಷ ಕಂಬಳಿಗಳನ್ನು ನೆಯ್ದು ಬ್ರಿಟಿಷ್ ಸರ್ಕಾರದವರಿಗೆ ಒದಗಿಸಿಕೊಡಬೇಕಾಗಿದೆ. ಕಾರಣವೇನೆಂದರೆ, ಬ್ರಿಟಿಷ್ ಸರ್ಕಾರದವರು ತಮ್ಮ ಸೈನ್ಯಕ್ಕೆ ಬೇಕಾಗಿರುವ ಮೇಲೆ ಹೇಳಿರುವಷ್ಟು ಕಂಬಳಿಗಳನ್ನು ಕಳುಹಿಸಿ ಕೊಡಿರೆಂದು ಅಪ್ಪಣೆ ಮಾಡಿರುತ್ತಾರೆ. ಇದರಿಂದ ಹಿಂದುಸ್ಥಾನದ ನಾನಾ ಕಡೆಗಳಲ್ಲಿರುವ ನೇಯ್ಗೆಯವರೆಲ್ಲರಿಗೂ ಯಥಾಯೋಗ್ಯವಾದ ಕೆಲಸ ದೊರೆಯುವಂತೆ ಹಂಚಿ ಕೊಡುವುದಕ್ಕಾಗಿ ಇಂಡಿಯಾ ಸರ್ಕಾರದ ಸರಬರಾಜು ಶಾಖೆಯವರ ಮತ್ತು ನಾನಾ ಪ್ರಾಂತ್ಯಗಳ ಮತ್ತು ಸಂಸ್ಥಾನಗಳ ವಾಣಿಜ್ಯ ಶಾಖಾ ಡೈರೆಕ್ಟರುಗಳ ಸಭೆಯೊಂದು ಈ ತಿಂಗಳ ಕೊನೆಯಲ್ಲಿ ದೆಹಲಿಯಲ್ಲಿ ನಡೆಯುವುದಾಗಿದೆ.

'ಇಂಡಿಯಾದ ಸ್ವಾತಂತ್ರ್ಯದ ಪ್ರಶ್ನೆಯು ತೀರ್ಮಾನವಾಗುವ ವರೆಗೆ, ಸಹಕಾರದೊಡನೆ ಒಂದು ನಿರ್ಧಾರಕ್ಕೆ ಬರುವುದಾಗಲೀ, ಕಾಂಗ್ರೆಸ್ ಮಂತ್ರಿ ಮಂಡಲಗಳು ತಿರುಗಿ ಅಧಿಕಾರಕ್ಕೆ ಏರುವ ಮಾತಾಗಲೀ ಸಾಧ್ಯವಿಲ್ಲ. ಇಂಡಿಯಾದ ಅದೃಷ್ಟವು ವೈಸರಾಯರಿಂದಾಗಲೀ, ಅವರು ಈಚೆಗೆ ಕರೆಸಿಕೊಂಡ 52 ಮಂದಿ ಉಪದೇಶಕರಿಂದಾಗಲೀ ಕೊನೆಗೆ ಸರ್ ಸಿಕಂದರ್ ಹಯಾತ್‌ಖಾನರು ಸೂಚಿಸಿದ ಆ 12 ಮಂದಿ 'ಪ್ರಾಜ್ಞಶಿರೋಮಣಿ'ಗಳಿಂದಾಗಲೀ ನಿರ್ಧಾರವಾಗತಕ್ಕದ್ದಲ್ಲ. ಅದಾಗಬೇಕಾದುದು ಇಂಡಿಯಾದ ಜನರಿಂದಲೇ. ಅದೇ ಕಾಂಗ್ರೆಸಿನ ಕಲ್ಪನೆಯ ಮೂಲಾಧಾರ. ಅದನ್ನು ಯಾರಾದರೂ ಹೇಗೆ ವಿರೋಧಿಸಬಹುದೋ ತಿಳಿಯದು' ಎಂದು ಪಂಡಿತ ಜವಹರ್‌ಲಾಲರು ಘಾಜಿಯಾಬಾದಿನ ತಮ್ಮದೊಂದು ಸಾರ್ವಜನಿಕ ಭಾಷಣದಲ್ಲಿ ನುಡಿದರು.

ವಿದೇಶ.

ಜರ್ಮನಿಯವರು ಸ್ವಾಧೀನಪಡಿಸಿಕೊಂಡ ಪೋಲೆಂಡಿನ ರಾಜ್ಯ ಭಾಗಗಳಲ್ಲಿ ಯೆಹೂದ್ಯರು ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ 5 ಗಂಟೆಯ ವರೆಗೂ ರಸ್ತೆಗಳಲ್ಲಿ ಸಂಚರಿಸಕೂಡದೆಂದು ನಾಜಿ ಸರ್ಕಾರದವರು ಅವರನ್ನು ನಿರ್ಬಂಧಿಸಿರುತ್ತಾರೆ.

ಬ್ರಿಟನ್, ಫ್ರಾನ್ಸ್ ಮತ್ತು ತುರ್ಕಿ ದೇಶಗಳವರಿಗೆ ವಾಣಿಜ್ಯ ಮತ್ತು ಆರ್ಥಿಕ ಸಂಬಂಧವಾದ ಒಪ್ಪಂದವೊಂದು ಜನವರಿ ತಾ. 8ರಲ್ಲಿ ಪ್ಯಾರಿಸ್ ನಗರದಲ್ಲಿ ನಡೆಯಿತು. ಆ ದಿನ ಮೇಲ್ಕಂಡ ಮೂರು ದೇಶಗಳ ಪ್ರತಿನಿಧಿಗಳೂ ಆ ಒಪ್ಪಂದಕ್ಕೆ ರುಜು ಮಾಡಿದರು.

ತುರ್ಕಿ ದೇಶದಲ್ಲಿ ಎರಡು ವಾರಗಳ ಹಿಂದೆ ಭೂಕಂಪದ ದೆಸೆಯಿಂದ ಸತ್ತವರು 25 ಸಾವಿರ ಮಂದಿಯೆಂದೂ, ಗಾಯಗೊಂಡವರು 80 ಸಾವಿರ ಮಂದಿಯೆಂದೂ ಅಧಿಕಾರಯುತವಾಗಿ ಪ್ರಕಟವಾಗಿದೆ. ಸುಮಾರು 30 ಸಾವಿರ ಮನೆಗಳು ನೆಲಸಮವಾಗಿವೆ.

ನಾವು ನಮ್ಮ ಬಂಧು ಮಿತ್ರರುಗಳಿಗೆ ಕಾಗದಗಳನ್ನು ಬರೆಯುವಾಗ ಲಕ್ಕೋಟೆಗಳಿಗೆ ಅಂಚೆ ಇಲಾಖೆಯವರಿಂದ ಸ್ಟಾಂಪುಗಳನ್ನು ಕೊಂಡು ಅಂಟಿಸುತ್ತೇವಷ್ಟೆ. ಈ ಸ್ಟಾಂಪುಗಳು ಮೊದಲು ಜಾರಿಗೆ ಬಂದು 1840ನೇ ಇಸವಿ ಮೇ ತಾ. 6ರಲ್ಲಿ. ಆದ್ದರಿಂದ ಈ ವರ್ಷದ ಮೇ ತಾ. 6ರಲ್ಲಿ ಆದ್ದರಿಂದ ಈ ವರ್ಷದ ಮೇ ತಿಂಗಳಿನಲ್ಲಿ ಸ್ಟಾಂಪುಗಳ ಶತಮಾನೋತ್ಸವವು ನಡೆಯುವದಾಗಿದೆ. ಆ ಸಮಯದಲ್ಲಿ ಅಂಚೆ ಇಲಾಖೆಯವರು ವಿಶೇಷ ತರದ ಸ್ಟಾಂಪುಗಳನ್ನು ತಯಾರಿಸುವರೆಂದು ತಿಳಿಯುವುದು.

ಯೂರೋಪಿನ ಕಳೆದ ಘೋರ ಯುದ್ಧವು ಮುಗಿದು ಇಂದಿಗೆ ಇಪ್ಪತ್ತೊಂದು ವರ್ಷಗಳಾದಾಗ್ಯೂ ಈಗಲೂ ಬ್ರಿಟಿಷ್ ಸರ್ಕಾರದವರು ಪ್ರತಿ ವರ್ಷವೂ ಸುಮಾರು 38,00,00,000 ಪೌಂಡುಗಳನ್ನು ಆ ಯುದ್ಧಗಳಲ್ಲಿ ಭಾಗಿಗಳಾಗಿದ್ದ ತಮ್ಮ ಸೈನ್ಯಕರಿಗೆ ವಿಶ್ರಾಂತಿ ವೇತನದ (ಪೆನ್‌ಷನ್) ರೂಪದಲ್ಲಿ ಕೊಡುತ್ತಲಿದ್ದಾರೆ. ಕಳೆದ 25 ವರ್ಷಗಳಲ್ಲಿ ಬ್ರಿಟಿಷ್ ಸರ್ಕಾರದವರು ಈ ವಿಶ್ರಾಂತಿ ವೇತನಕ್ಕಾಗಿ 1,35,00,00,000 ಪೌಂಡುಗಳನ್ನು ಹಂಚಿ ಕೊಟ್ಟಿರುತ್ತಾರೆ. ಈಗಲೂ ಸಹ ಇಂಥಾ ವಿಶ್ರಾಂತಿ ವೇತನಗಳಿಗಾಗಿ ಸುಮಾರು 800 ಅರ್ಜಿಗಳು ಪ್ರತಿ ವರ್ಷವೂ ಬರುತ್ತಲೇ ಇರುತ್ತವೆಂದೂ ಈಗ ಪೆನ್‌ಷನ್ ಪಡೆಯುತ್ತಿರುವವರು 8,50,000 ಮಂದಿಯೆಂದೂ ತಿಳಿಯುವುದು. ಈ ಪೈಕಿ ಸುಮಾರು 46 ಮಂದಿ ತಮ್ಮ ಪೆನ್‌ಷನ್ ಹಣವನ್ನು ಪ್ರಕೃತ ಯುದ್ಧದ ಖರ್ಚಿಗಾಗಿ ವಿನಿಯೋಗಿಸತಕ್ಕದ್ದೆಂದು ತಾವೇ ಸಂತೋಷದಿಂದ ಬ್ರಿಟಿಷ್ ಸರ್ಕಾರದವರು ಬರೆದು ತಿಳಿಸಿರುತ್ತಾರೆ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡು ಆಫೀಸು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

1939—41ರ ಟೋಲ್‌ಗೇಟ್, ಮಾರ್ಕೆಟು, ಗೊಬ್ಬರ ಮತ್ತು ಕಚರ ಎತ್ತುವಳಿಯನ್ನು ಈ ಕೆಳಗೆ ನಮೂದಿಸಿರುವ ತಾರೀಕುಗಳಲಿ ಮತ್ತು ಸ್ಥಳಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಿಂದ ಅಥವಾ ಅವರಿಂದ ಅಧಿಕರಿಸಲ್ಪಟ್ಟ ಉದ್ಯೋಗಸ್ಥರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುವುದು.

ಟೋಲ್ ಮತ್ತು ಮಾರ್ಕೆಟುಗಳ ಹೆಸರು.	ಹರಾಜಾಗುವ ಸ್ಥಳ.	ತಾರೀಕು.
1. ಫ್ರೇಜರ್‌ಪೇಟೆ ಗೇಟು.	ಮಡಿಕೇರಿನಾಡು ಕಚೇರಿಯ ಮುಂದೆ.	2-2-1940
2. ಶಿರಂಗಾಲ ,,		
3. ಸಂಪಾಜೆ ,,		
4. 10ನೇ ಮೈಲು (ಚೆಟ್ಟಳ್ಳಿ) ಮಾರ್ಕೆಟ್		
5. ಕೊಯನಾಡು ಮಾರ್ಕೆಟ್.		
6. ಸಂಪಾಜೆ ಗಾಟು ರೋಡು 168/6 ನೇ ಮೈಲು ಕಲ್ಲಿನ ಬಳಿ ಜಮೆಯಾಗುವ ಗೊಬ್ಬರ.		
7. .... 171/5		
8. .... 160/6		
9. .... 163/8		
10. ಮಡೆ ಗಾಡಿ ಮಾಳದ ಗೊಬ್ಬರ.		
11. ಜಂಬೂರು ಮಾರ್ಕೆಟು.	ಜಂಬೂರು ಪೇಟೆ.	3-2-1940
12. ಮಾದಾಪುರ ಸಂತೆ ಮೈದಾನ ಮತ್ತು 12/7ನೇ ಮೈಲು ಕಲ್ಲಿನ ಬಳಿ ಜಮೆಯಾಗುವ ಗೊಬ್ಬರ.		
13. ಮಡಿಕೇರಿ-ಕೊಡ್ಲಿಪೇಟೆ ರಸ್ತೆ 9/7 ನೇ ಮೈಲು ಬಳಿ ಇರುವ ಗಾಡಿಮಾಳದಲ್ಲಿ ಜಮೆಯಾಗುವ ಗೊಬ್ಬರ.		
14. ಸುಂಟಿಕೊಪ್ಪ ಮಾರ್ಕೆಟು.	ಸುಂಟಿಕೊಪ್ಪನಾಡು ಹಳೆ ಕಚೇರಿ.	4-2-1940
15. ,, ಸ್ಲಾಟರ್ ಹೌಸ್.		
16. ,, ಪೇಟೆ, ಸಂತೆ, ಕಚೇರಿ ಕಾಂಪೌಂಡಿನಲ್ಲು ಮತ್ತು ಸ್ಲಾಟರ್ ಹೌಸಿನಲ್ಲಿ ಜಮಾಯಿಸುವ ಗೊಬ್ಬರ ಮತ್ತು ಕಚರ.		
17. ಮಡಿಕೇರಿ-ಫ್ರೇಜರ್‌ಪೇಟೆ ರೋಡು ನಾರುಗಣೆ ಗ್ರಾಮದಲ್ಲಿ 146/5ನೇ ಮೈಲು ಬಳಿ ಇರುವ ಗಾಡಿ ಮಾಳದಲ್ಲಿ ಜಮೆಯಾಗುವ ಗೊಬ್ಬರ.		
18. ಮಡಿಕೇರಿ-ಸಿದ್ದಾಪುರ ರಸ್ತೆ 148/5 ನೇ ಮೈಲು ಬಳಿ ಇರುವ ಗಾಡಿ ಮಾಳದಲ್ಲಿ ಜಮೆಯಾಗುವ ಗೊಬ್ಬರ.		
19. ರಾಮಸ್ವಾಮಿ ಕಣಿವೆ ಮಾರ್ಕೆಟ್.	ರಾಮಪುರ ಪೇಟೆ.	4-2-1940
20. ರಾಮಪುರ ಪೇಟೆ, ರಾಮಸ್ವಾಮಿ ಕಣಿವೆ ಗಾಡಿಮಾಳದಲ್ಲಿ ಜಮೆಯಾಗುವ ಗೊಬ್ಬರ.		
21 ಕಾವೇರಿ ಹೊಳೆಯ ಉಭಯ ಪಾರ್ಶ್ವಗಳಲ್ಲಿ ಇರುವ ಗವರ್ನ್‌ಮೆಂಟ್ ಬಂಡಿಮಾಳಗಳು.		
22. ಸುಣ್ಣದ ಕೊಪ್ಪಲ ಬಳಿ ಹೆಬ್ಬಾಲೆ ಕಲ್ಲುಹಳ್ಳದ ಬಂಡಿಮಾಳ.		
23. ಮಾಕೂಟ ಟೋಲ್‌ಗೇಟ್.	ವೀರಾಜಪೇಟೆ ನಾಡು ಕಚೇರಿ.	7-2-1940
24. ಸಿದ್ದೇಶ್ವರ ಗದ್ದಿಗೆ ,,		
25. ಆನೆಚೌಕೂರ್ ,,		
26. ಕುಟ್ಟ ,,		
27. ಪೆರಂಬಾಡಿ ಗಾಟ್ ರೋಡು 149/7 ನೇ ಮೈಲು ಬಳಿ ಇರುವ ಗಾಡಿಮಾಳದಲ್ಲು ಜಮೆಯಾಗುವ ಗೊಬ್ಬರ.		
28. .... 151/1		
29. .... 152/8		
30. .... 153/1		
31. .... 153/2		
32. .... 155/3		
33 .... 156/6		
34. ಮೂರ್ನಾಡು ಪೇಟೆ ಮಾರ್ಕೆಟ್.	ಮೂರ್ನಾಡು ಪೇಟೆ	8-21940
35. ಕಾಂತುಮೂರ್ನಾಡು ಸಂತೆ ಮೈದಾನ ಮತ್ತು ಪೇಟೆ ಬೀದಿ ಕಚರ ಸಹ.		
36. ಎಡೆಹಳ್ಳಿ ಟೋಲ್ ಗೇಟ್.	ಶನಿವಾರಸಂತೆ ಹೋಬಳಿ ಕಚೇರಿ.	10-2-1940
37. ನಿಲುವಾಗಿಲು ,,		
38. ಹೆಬ್ಬುಲುಸೆ ,,		
39. ಶನಿವಾರಸಂತೆ ಮಾರ್ಕೆಟ್		
40. ,, ಸ್ಲಾಟರ್ ಹೌಸ್.		
41. ಮಡಿಕೇರಿ-ಕೊಡ್ಲಿಪೇಟೆ ರೋಡು 32ನೇ ಮೈಲು ಬಳಿ ಇರುವ ಗಾಡಿ ಮಾಳದಲ್ಲಿ ಜಮೆಯಾಗುವ ಗೊಬ್ಬರ.		
42. .... 38 ...		
43. ಶನಿವಾರಸಂತೆ ಮತ್ತು ಸದರಿ ಪೊಲೀಸು ಸ್ಟೇಷನ್ ಬಳಿ ದೊಡ್ಡಿಯಲ್ಲಿ ಜಮೆಯಾಗುವ ಗೊಬ್ಬರ.		
44. ಶನಿವಾರಸಂತೆ ಹೊಳೆಛತ್ರದಗೊಬ್ಬರ.		
45 ತಂಬಿನ ಬಾಣೆ ಹೊಸ ಮುಸಾಫರಿ ಬಂಗ್ಲೆ ಮೈದಾನದ ಗೊಬ್ಬರ.		
46. ಸಿದ್ದಾಪುರ ಮಾರ್ಕೆಟ್.	ಸಿದ್ದಾಪುರ ಪೇಟೆ.	20-2-1940
47. ,, ಸ್ಲಾಟರ್ ಹೌಸ್.		
48. ,, ಪೇಟೆ ಹಳೆ ಸಿದ್ದಾಪುರ ಬಕ್ಕದಿಂದ ಮುಲ್ಲೆತೋಡು ಮತ್ತು ಕಾವೇರಿ ಹೊಳೆಯ ವರೆಗೆ ರಸ್ತೆ ಬಾಜಿನಲ್ಲಿಯೂ, ಹಳೇ ಮತ್ತು ಹೊಸ ಸಂತೆ ಮಾಳದಲ್ಲಿಯೂ.		
49. ಸಿದ್ದಾಪುರದಿಂದ ಸಿದ್ದೇಶ್ವರದ ಗದ್ದಿಗೆ ವರೆಗೆ ಪಬ್ಲಿಕ್ ರೋಡಿನಲ್ಲಿ ಜಮೆಯಾಗುವ ಗೊಬ್ಬರ.		
50. ಅಮ್ಮತ್ತಿ ಮಾರ್ಕೆಟು.	ಅಮ್ಮತ್ತಿನಾಡು ಕಚೇರಿ.	20-2-1940
51. ಅಮ್ಮತ್ತಿ ಸ್ಲಾಟರ್ ಹೌಸ್.		
52. ಅಮ್ಮತ್ತಿ ಪೇಟೆ ಬೀದಿಯಲ್ಲಿ ಜಮೆಯಾಗುವ ಗೊಬ್ಬರಯೂ ಕಚರ (2) ಅಮ್ಮತ್ತಿಯಿಂದ ಕೋಡಂಗೇರಿಗೆ ಹೋಗುವ ರಸ್ತೆ ಬಾಜಿನ ಗಾಡಿ ಮಾಳದ ಗೊಬ್ಬರ. (3) ಅಮ್ಮತ್ತಿಯಿಂದ ತಿತಿಮತಿಗೆ ಹೋಗುವ ರಸ್ತೆ ಬಾಜಿನ ಗಾಡಿಮಾಳದ ಗೊಬ್ಬರ, (4) ಅಮ್ಮತ್ತಿ ಕೆರೆ ಬಳಿ ಬಂಡಿಮಾಳದಲ್ಲು ಜಮೆಯಾಗುವ ಗೊಬ್ಬರ.		
53. ಅಮ್ಮತ್ತಿ-ವೀರಾಜಪೇಟೆ ರೋಡು 146/7ನೇ ಮೈಲು ಬಳಿ ಜಮೆಯಾಗುವ ಗೊಬ್ಬರ.		
54. ಗೋಣಿಕೊಪ್ಪಲು ಮಾರ್ಕೆಟ್.	ಗೋಣಿಕೊಪ್ಪಲು ಪೇಟೆ.	25-2-1940
55. ,, ಸ್ಲಾಟರ್ ಹೌಸ್.		
56. ,, ಬಂಡಿಮಾಳ.		
57. ಆನೆಚೌಕೂರು ,,		
58. ತಿತಿಮತಿ ,,		
59. ಹುದಿಕೇರಿ ಮಾರ್ಕೆಟ್.	ಹುದಿಕೇರಿ ಪೇಟೆ ಕಚೇರಿ.	26-2-1940
60. ಹುದಿಕೇರಿ ಬಂಡಿಮಾಳ.		
61. ಪೊನ್ನಂಪೇಟೆ ,,	ಪೊನ್ನಂಪೇಟೆ ನಾಡುಕಚೇರಿ.	26-2-1940

ಪಿ. ಐ. ಬೆಳ್ಯಪ್ಪ,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡ್.

ಕಾಲಚಕ್ರದ ಉರುಳಾಟದಲ್ಲಿ ಪುರಾತನ ಕಾಲದಲ್ಲಿ ಕಠಿಣವಾಗಿ ಕಂಡು ಬಂದ ಕಾರ್ಯಗಳು ಇಂದು ಸುಲಭವಾಗಿ ಸಾಧಿಸಲ್ಪಡುತ್ತಿವೆ. ಇಂದು ಜಗತ್ತು ಜ್ಞಾನದ ಶಿಖರವನ್ನು ಒಂದೆಡೆ ಹತ್ತಿರುವ ಪ್ರಯುಕ್ತ ಜಗತ್ತಿನ ಕಾರ್ಯಕಲಾಪಗಳನ್ನೆಲ್ಲಾ ಸತ್ಯಾಗ್ರಹ ಅಥವಾ ಅಸಹಕಾರದಿಂದ ಪ್ರತ್ಯಕ್ಷ ಬದ್ಧಸ್ಥಿತಿಗೆ ತರಲು ಸಾಧ್ಯವಾಗಿದೆ. ಸಾರ್ವಜನಿಕ ಅಭಿಪ್ರಾಯವು ಇಂದು ರಾಜಕೀಯ ಪ್ರಜಾಸತ್ತೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಪ್ರಚಾರ, ಭಾಷಣ ಇವು ಪ್ರಧಾನ ಆಯುಧಗಳಾಗಿ ಪರಿಣಮಿಸಿವೆ. ಒಂದು ಕಾರ್ಖಾನೆಯ ಕೆಲಸಗಾರರು ಹೇಗೆ ಅಸಹಕಾರ ಮಾಡಿದರೆ ಕೈಗಾರಿಕೆಯ ಮಾಲೀಕರಾಗಿ ಅಧಿಕಾರಿಗಳು ಕೆಲಸಗಾರರ ಮುಂದೆ ಗೊಗ್ಗ ಕಾಲೂರಬೇಕಾಗುವದೋ ಅದೇ ರೀತಿ ರಾಜಕೀಯ ವಿಚಾರದಲ್ಲೂ ಜನತೆಯು ತಮ್ಮ ನಿರ್ದಿಷ್ಟ ಕಾರ್ಯಗಳನ್ನು ಬಿಟ್ಟು ತಟಸ್ಥ ಕುಳಿತರೆ ಎಂಥಾ ವ್ಯವಸ್ಥಿತ ಸರಕಾರವೇ ಇರಲಿ, ಯಾ ಎಂಥಾ ಬಲಾಢ್ಯ ಅಧಿಕಾರಿಯೇ ಇರಲಿ, ಜನತೆಯೊಡನೆ ಸಂಧಾನಕ್ಕೆ ಬರಲೇಬೇಕಾಗುವದು. ಜನತೆಯು ತನ್ನ ಕಾರ್ಯಕಲಾಪಗಳನ್ನು ಬಹಿಷ್ಕರಿಸಿ ಸರಕಾರದೊಡನೆ ಅಸಹಕಾರ ಮಾಡುವದರಿಂದ ಸರಕಾರದ ಪ್ರಬಲವಾದ ಯುದ್ಧೋಪಕರಣಗಳೂ ಕೂಡ ನಿಸ್ಸಹಾಯಕವಾಗುವವು.

ಪಾಶವೀ ಕೃತ್ಯಗಳನ್ನು ತಡೆಗಟ್ಟಲು ಅವಕ್ಕೊಳಗಾದವರ ಅಹಿಂಸಾಪೂರಿತ, ಹಾಗೂ ವ್ಯವಸ್ಥಿತ ಸಂಘಟನೆಯೇ ದಾರಿ ಎಂದು ಇಂದು ಹೆಚ್ಚಾಗಿ ಅನುಭವಕ್ಕೆ ಬಂದಿದೆ. ಬಡವರನ್ನು ಹಾಗೂ ಅಧೀನರನ್ನು ಬಂಧಿಸಿರುವ ಸಂಕೋಲೆಯಾದರೂ ಈ ಬಡವರ ತಯಾರಿಯೇ. ಒಂದಾವೃತ್ತಿ ಈ ಕೆಳತುಳಿಯಲ್ಪಟ್ಟ ಬಡ ಜನರು ತಮ್ಮ ಕಾರ್ಯಗಳನ್ನು ಮಾಡದೆ ಅಸಹಕರಿಸಿದ್ದಾದರೆ ಇಡೀ ರಾಷ್ಟ್ರದ ಕೈಗಾರಿಕೆ, ವ್ಯಾಪಾರೋದ್ಯಮ, ಸರಕಾರದ ಬಚ್ಚಾಳಿಕೆ, ಇವೆಲ್ಲಾ ಕುಸಿದು ಬೀಳುವವು. ಇದೇ ಇಂದು ಟ್ರೇಡ್ ಯೂನಿಯನ್‌ಗಳ ಚಳವಳಿಗಳನ್ನು ಜಯಪ್ರದವನ್ನಾಗಿಸಿವೆ. ದೇಶದ ಕೈಗಾರಿಕೆ, ವ್ಯಾಪಾರ ಮತ್ತು ನೈತಿಕ ವಿಚಾರಗಳ ಬೆನ್ನೆಲುಬೇ ಬಡಜನತೆಯೆಂಬುದು ಅವರಿಗೆ ತಿಳಿದಿದೆ. ಅವರು ತಮ್ಮ ಹಿತಸಾಧನೆಗಾಗಿ ಮಾಡಬೇಕಾದುದು, ತಮ್ಮಲ್ಲಿ ಶಿಸ್ತು ಸಂಘಟನೆಯನ್ನು ಅಭಿವೃದ್ಧಿಮಾಡಿ ತಮ್ಮನ್ನು ಪೀಡಿಸುವವರಲ್ಲಿ ಅಸಹಕಾರವನ್ನು ಮಾಡುವದಾಗಿದೆ. ಇಂದು ಒಂದು ಮುಷ್ಕರ ಯಾ ಸಂಪು ಯಾವುದಾದರೂ ಕಾರ್ಯರೂಪದ ರಾಜಕೀಯ ಕಾರ್ಯವೆಂದು ಪರಿಗಣಿಸಲ್ಪಟ್ಟಿದೆ. ಕೈಗಾರಿಕೆ ಮುಷ್ಕರಗಳು ನಡೆಯದಿದ್ದ ಪಕ್ಷ ಇಂದು ಕೂಲೀಕಾರರು ಅನುಭವಿಸುತ್ತಿರುವ ಸೌಲಭ್ಯಗಳು ಅನೇಕ ವರ್ಷದ ಮಾತಾಗಿ ಉಳಿಯುತಿತ್ತು. ಮುಷ್ಕರವು ಹೇಗೆ ಅಧಿಕಾರಿಗಳನ್ನು ಕೂಲಿಯವರ ಹತ್ತಿರ ಓಡಿ ಬೇಡುವಂತೆ ಮಾಡುವದೋ ಅದೇ ರೀತಿ ಸತ್ಯಾಗ್ರಹವಾದರೂ ಸರಕಾರವನ್ನು ತನ್ನ ಕರ್ತವ್ಯದೆಡೆಗೆ ಕರೆದು ನಿಲ್ಲಿಸುವದು. ಮುಷ್ಕರದಂತೆಯೇ ಸತ್ಯಾಗ್ರಹದಲ್ಲೂ ಸಂಘಟನೆ, ಶಿಸ್ತು ಅವಶ್ಯ.

ಅಹಿಂಸಾ ಕ್ರಾಂತಿ.

ಆಚಾರ್ಯ ಕೃಪಾಲಿನಿಯವರ ಲೇಖನಾಧಾರದಿಂದ.

ಲೇಖಾಂಕ ೫.

●○●

ಕೈಗಾರಿಕೆ ಮುಷ್ಕರಗಳು ಕೇವಲ ಕೆಲವೊಂದು ಜನತೆಯ ಯಾ ಪಾರ್ಟಿಯ ಮೇಲಿನ ಮತ್ಸರದಿಂದ ನಡೆಯುತ್ತದೆ. ಒಂದು ಕಾರ್ಖಾನೆಯ ನೌಕರರ ಮೇಲೆ ಕೂಲಿಗಾರರು ಮುಷ್ಕರ ಮಾಡುತ್ತಾರೆ. ಇದಕ್ಕೆ ಈ ಎರಡು ಸಂಗಡಗಳೊಳಗಿನ ಭಿನ್ನ ಭಾವವೇ ಕಾರಣ. ಇಲ್ಲಿ ಮುಷ್ಕರಕ್ಕೆ ಪ್ರಧಾನ ಕಾರಣವು ಮತ್ಸರ. ಒಂದು ಸಂಗಡದವರ ನಷ್ಟವು ಇನ್ನೊಂದು ಸಂಗಡದ ಲಾಭವಾಗಿ ಪರಿಣಮಿಸುತ್ತದೆ. ಆದ್ದರಿಂದ ಮುಷ್ಕರಗಳಲ್ಲಿ ಯಾವಾಗಲೂ ಪರಸ್ಪರ ದ್ವೇಷ ಬಲ ಇದ್ದು ಕಂಡು ಬರುತ್ತದೆ. ಹಿಂಸೆಯು ಮುಷ್ಕರಗಳಲ್ಲಿ ತನ್ನ ಕೈವಾಡವನ್ನು ತೋರಿಸುವದು ಕಂಡು ಬರುತ್ತದೆ. ಮುಷ್ಕರಗಳನ್ನು ಜಯಪ್ರದವಾಗಿ ನಡೆಸಿದವರಿಗೆ ಮುಷ್ಕರದಲ್ಲಿ ಅಹಿಂಸೆಯು ಎಷ್ಟು ಸಹಕಾರಿ ಎಂಬುದು ಮನದಟ್ಟಾಗಿದೆ. ಮುಷ್ಕರದಲ್ಲಿ ಜಯಹೊಂದಬೇಕಾದರೆ ಅಹಿಂಸಾನುಚರಣೆಯು ಅಗತ್ಯವೆಂಬುದು ಅವರಿಗೆ ತಿಳಿದಿದೆ. ಮುಷ್ಕರ ವಿರೋಧಿಗಳ ದೇಹಿಕ ಶಕ್ತಿಯು ಹೆಚ್ಚಿರುವದೆಂದೂ, ಅವರ ಶಕ್ತಿ ಸಂಪನ್ನ ಹಾಗೂ ವ್ಯವಸ್ಥಿತ ಸಂಗಡದ ಮುಂದೆ ಕೂಲಿಗಾರರ ಶಕ್ತಿಯು ನಡೆಯದೆಂದೂ, ಆದ್ದರಿಂದ ಅಹಿಂಸೆಯನ್ನು ಆಚರಿಸಿದರೇನೇ ವಿರೋಧಪಕ್ಷದವರ ಮನಸ್ಸನ್ನು ಗೆಲ್ಲಲು ಸಾಧ್ಯವೆಂದೂ ಖಚಿತವಾಗಿದೆ. ಅನೇಕ ವೇಳೆ ಮುಷ್ಕರದವರಲ್ಲಿ ಹಿಂಸಾಚರಣೆ ಮಾಡುವಂತೆ ಪ್ರೇರಿಸಿ ಮುಷ್ಕರಗಳನ್ನು ಅಧಿಕಾರಿಗಳು ಮುರಿದು ಹಾಕಿದ ನಿದರ್ಶನಗಳೆಷ್ಟೋ ಇವೆ. ಆದ್ದರಿಂದ ಕೈಗಾರಿಕಾ ಮುಷ್ಕರಗಳಲ್ಲಿ ಜಯಹೊಂದಬೇಕಾದರೆ ಅಹಿಂಸೆಯೇ ಪ್ರಥಮ ಸಾಧನವೆಂಬುದು ಸಿದ್ಧಾಂತವಾಗಿದೆ. ಮುಷ್ಕರದಲ್ಲಿ ಅವಶ್ಯವಿರುವ ಆ ಅಹಿಂಸಾತತ್ವವು ಸತ್ಯಾಗ್ರಹದಲ್ಲಿ ಕಾಯಾ, ಮನಸಾ ಆಚರಿಸಲ್ಪಡುವದು. ಸತ್ಯಾಗ್ರಹದ ಜೀವಾಳವೇ ಅಹಿಂಸೆ. ಸತ್ಯಾಗ್ರಹದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಪ್ರಾಮುಖ್ಯವಾದ ಜೀವನದ ಐಕ್ಯತೆಯ ಅರಿವು ಸತ್ಯಾಗ್ರಹಿಗಿರುವದು. ಮುಷ್ಕರಗಾರನು, ಆಸ್ತಿ, ಆಯುಧ ಯಾ ದೇಹಿಕಶಕ್ತಿಯಿಂದ ಮಾಡುವ ಕಾರ್ಯವನ್ನು ಸತ್ಯಾಗ್ರಹಿಯು ಆತ್ಮಶಕ್ತಿಯಿಂದ ಮಾಡುವನು. ಮುಷ್ಕರದಲ್ಲಿಯೂ ದೇಹ ಶಾರೀರಿಕ ಶಕ್ತಿಗಿಂತಲೂ, ಮಾನಸಿಕ ಸ್ಥಿರತೆಯೇ ಜಯಸಂಪಾದಿಸುವದೆಂಬುದನ್ನು ಅವನು ಬಲ್ಲನು. ಆದ್ದರಿಂದ ಅವನು ಅಹಿಂಸಾ ಅರ್ಥಾತ್ ಆತ್ಮಶಕ್ತಿಯಲ್ಲಿ ನಂಬಿಗೆಯನ್ನಿಡುವನು. ಅವನೂ ಅವನು ಹೊರಗಿನ ಆಯುಧಗಳನ್ನು ಅಲ್ಲಗಳೆಯುವನು. ಅವನ ಇವು ವಿಚಾರದ ಆಯುಧಗಳಲ್ಲ. ಅವು ಸಹಕಾರ, ಸಂಘಸಂಸ್ಥೆಗಳ ಆಯುಧಗಳು. ಕ್ರಾಂತಿಯು ಶಸ್ತ್ರಾಚರಣೆಯಿಂದ ಇನ್ನಷ್ಟು ಕ್ರಾಂತಿಯಾಗುವದು ಸ್ವಾಭಾವಿಕ. ಆದ್ದರಿಂದ ಸತ್ಯಾಗ್ರಹಿಯು ತನ್ನ ಕೋರಿಕೆಯು ನ್ಯಾಯಸಮರ್ಪಕವಾಗಿದೆಯೆಂಬ ಭರವಸೆಯಿಂದ ಅಹಿಂಸಾತತ್ವದ ನಂಬಿಕೆಯಿಂದ ತನ್ನ ಕಷ್ಟಕಾರ್ಪಣ್ಯಗಳ ಕರ್ತನನ್ನು ವಿರೋಧಿಸುವನು. ನೀತಿತತ್ವಗಳ ಮೇಲಿನ ಆತನ ನಂಬಿಕೆಯು ಆತನು ಉಪಯೋಗಿಸುವ ದಾರಿ, ಮತ್ತು ಸಾಧನಗಳಲ್ಲಿ ಗಮನವಿಟ್ಟು ಸತ್ಪಥದಲ್ಲಿ ನಡೆಸುವದು. ಆತನು ಅಹಿಂಸಾವಾದಿಯಾಗುವದು ಶಾರೀರಿಕ ಅಶಕ್ತತೆಯಿಂದಾಗಲೀ ಯಾ ಆಗಲೇಬೇಕೆಂಬ ಬಲಾತ್ಕಾರದಿಂದಾಗಲೀ ಅಲ್ಲ; ಕೇವಲ ಸ್ವಇಚ್ಛೆಯಿಂದ, ಆತ್ಮೀಯ ಶಕ್ತಿಯಿಂದ ಆಗುವದಾಗಿದೆ.

ಸತ್ಯಾಗ್ರಹದ ಮುಖಂಡನು ದೂರದೃಷ್ಟಿ, ಮಾನಸಿಕ ಶಾಂತಿ, ಹಾಗೂ ಮನ್ನಿಸುವ ಶಕ್ತಿ ಇವರಿಂದ ಕೂಡಿದವನಿರಬೇಕು. ಎಲ್ಲಿ ಆತನಿಗೆ ಆಂತರೀಕ ಶಕ್ತಿಯು ಮಾರ್ಗದರ್ಶಿಯಾಗಲಾರದೋ ಅಲ್ಲಿ ಆತನು ಬಹಿರ್ಘೋಷಣೆಯನ್ನು ಒಪ್ಪಬೇಕಾಗುವದು. ಯಂತ್ರದೋಪಾದಿ ನಿರ್ದಿಷ್ಟಕಾರ್ಯದಲ್ಲೇ ಮಗ್ನನಾಗಿರುವ ವಿಚಾರವು ಮನಸಿಗೆ ಹತ್ತದಿದ್ದರೂ ಅದನ್ನು ಆತನು ನಿರ್ವಹಿಸುವನು. ಸತ್ಯಾಗ್ರಹವು ಅಹಿಂಸಾ ವಿರೋಧ, ಯಾ ಅಸಹಕಾರವೆಂಬ ಎರಡು ವಿಧಾನಗಳನ್ನೊಳಗೊಂಡಿದೆ. ಆದರೂ ಈ ಶಬ್ದಗಳು ಸತ್ಯಾಗ್ರಹದ ನಿಜ ಅರ್ಥವನ್ನು ಹೊರಗೆಡಹರವು. ಸತ್ಯಾಗ್ರಹದಲ್ಲಿ ವಿರೋಧವೂ ಇಲ್ಲ, ತಾಕ್ಕೆಯೂ ಇಲ್ಲ. ಅದು ಒಂದು ಕೆಲಸದ ನೀತಿ. ಅದರ ರೀತಿ ವಿರೋಧದ ಮಟ್ಟಿಗೆ ಅದು ತಾತ್ವಿಕವಾಗಿದೆ. ಆದರೆ ಅದರ ಆಂತರೀಕ ವಿರೋಧವು ಬಹಳ ಜಟಿಲ ಹಾಗೂ ಖಂಡಿತದ ವಿಚಾರವಾಗಿದೆ. ಈ ಮಾನಸಿಕ ವಿರೋಧವು ಹಿಂಸಾಮಾರ್ಗದಿಂದ ಬರುವ ಲಾಭಗಳನ್ನೂ, ಕೇವಲ ಕ್ರಿಯೆ ಇವರಿಂದ ಬರುವ ಫಲಗಳನ್ನೂ ತ್ಯಜಿಸುವದು. ಆದ್ದರಿಂದ ಸತ್ಯಾಗ್ರಹಕ್ಕೆ ಕೈಕೊಳ್ಳುವ ಮಾನವನ ಜೀವನವು ಪವಿತ್ರತೆಯನ್ನು ಹೊಂದುವದು. ಆತನಲ್ಲಿ ಒಂದು ವಿಧದ ಸುಧಾರಣೆ, ಆತನ ಹೃದಯದಲ್ಲಿ ಒಂದು ವಿಧದ ಮಾರ್ಪಾಡು ಆಗುವದು. ಸತ್ಯಾಗ್ರಹವು ಅವಶ್ಯವಾಗಿ ಅನುಸರಿಸಬೇಕಾದ ಕೆಲವು ನಿಯಮ ನಿಷ್ಟೆಗಳನ್ನು ಮುಂದಿಡುವದು. ಕೆಲವು ಸಾರೆ ಈ ನಿಯಮಗಳು ಕೇವಲ ಬರೇ ತಿಳಿಯದ ವಸ್ತುಗಳ ಮೇಲೆ ನಿರ್ಧರಿಸಲ್ಪಡುವದು. ಉದಾ: ಅಧಿಕಾರಿಗಳೊಡನೆ ಸಾಮಾಜಿಕ ವ್ಯವಹಾರ, ವಿದೇಶಿ ವಸ್ತುಗಳ ಉಪಯೋಗ, ಬಿರುದು ಬಾವಲಿಗಳ ಸ್ವೀಕಾರ, ಸರಕಾರದ ಶಾಲೆ, ಹಾಗೂ ಕೋರ್ಟುಗಳು, ಇವುಗಳ ಬಹಿಷ್ಕಾರ. ಕೆಲವು ಸಾರೆ ನಿಜವಾಗಿಯೂ ಈ ನಿಯಮಗಳು ಮುಖ್ಯವಾಗಿರದೆ [illegible] ಹಾಗಿದ್ದರೂ [illegible]. ಉದಾ – ಅಸ್ಪೃಶ್ಯತೆ, ಅದರಿಂದ ಮನುಷ್ಯನಿಗಾದ [illegible]ಧ, ಇತ್ಯಾದಿ. ಕೆಲವರು ಈ ವಿಚಾರಗಳು ಸತ್ಯಾಗ್ರಹದ ವೈಶಿಷ್ಟ್ಯವೆಂದು ವಾದಿಸುವರು. ವಿಚಾರ ಮಾಡಿ ನೋಡಿದರೆ ಕೆಲವು ನಿರ್ಬಂಧಗಳು ಇದ್ದೇ ಇರಬೇಕೆಂಬುದು ಗೋಚರವಾಗದಿರದು. ಹಿಂದಿನ ಕಾಲದ ಎಲ್ಲಾ ಮತೀಯ ಹಾಗೂ ವ್ಯಾವಹಾರಿಕ ಜಗಳಗಳಲ್ಲಿ ಈ ರೀತಿಯ ನಿರ್ಬಂಧಗಳು ಇದ್ದದ್ದು ಕಂಡು ಬರುತ್ತದೆ. ಕ್ರಿಶ್ಚಿಯನರಾಗಲೀ, ಮಹಮ್ಮದೀಯರಾಗಲೀ ಯಾ ಇನ್ನಾವ ಮತೀಯರೇ ಆಗಲೀ ಈ ನಿರ್ಬಂಧಗಳನ್ನಿಟ್ಟುಕೊಂಡಿದ್ದವು. ಈ ನಿರ್ಬಂಧಗಳಾದರೂ ಇರಲೇಬೇಕೆಂಬುದು ಅನವಶ್ಯಕ.

ಸಾಮೂಹಿಕ ಜೀವನದಲ್ಲಿ ಅಹಿಂಸೆ ಮತ್ತು ಸತ್ಯಗಳ ಅನುಭವಿಕ ಉಪಯೋಗವು ಬದಲಾವಣೆಯನ್ನು ಹೊಂದುತ್ತದೆ. ಪುರಾತನ ಕಾಲದ ತತ್ವದಂತೆ ಸತ್ಯಾಗ್ರಹವು ಕೆಡುಕಿಗೆ ಅಪ್ರತಿಭಟನೆಯನ್ನು ಮಾಡುವ ತತ್ವವೇ ಅಲ್ಲ. ಅವಿರೋಧವೆಂಬುದು ಕೇವಲ ಶಾರೀರಿಕ ಹಾಗೂ ಹಿಂಸಾಮಾರ್ಗಗಳಿಗೆ ಸಂಬಂಧಿಸುವದು. ಉಳಿದ ವಿಚಾರಗಳಿಗೆ ಅದು ಘೋರ ಹಾಗೂ ಧೃಢನಿಶ್ಚಯದ ವಿರೋಧಿಯಾಗಿರುವದು. ಉದಾಹರಣೆಗೆ ಬ್ರಿಟಿಷರು ಹಿಂದೂಸ್ಥಾನವನ್ನು ಶತಮಾನಗಳಿಂದ ಆಳಿ ಅದರ ರಾಜಕೀಯ ಹಾಗೂ ಆರ್ಥಿಕ ಶಕ್ತಿಯನ್ನು ಸೂರೆಗೊಂಡು ಕೋಟ್ಯಂತರ ರೂಪಾಯಿಗಳನ್ನು ಇಂಗ್ಲೆಂಡಿಗೆ ಸಾಗಿಸಿರುವದರಿಂದ ಅವರ ಆತ್ಮಪಲ್ಲಟಮಾಡುವ ಯಾ ಅವರಲ್ಲಿ ಕನಿಕರ ಹುಟ್ಟಲೆಂಬ ಬಗ್ಗೆ, ಮತ್ತು ಪ್ರಕೃತಿಯಾದರೂ ಬಡ ಭಾರತದ ನೆರವಿಗೆ ಬರಲೆಂಬ ದೃಷ್ಟಿಯಿಂದ ಕಷ್ಟದಲ್ಲಿ ಸಂಪಾದಿಸಿದ ಭಾರತದ ಹಣವನ್ನು ಯಥಾವಿಧಿ ಇಂಗ್ಲೆಂಡಿಗೆ ಕಳುಹಿಸಲು ಮಹಾತ್ಮರು ಇಂದು ಹೇಳರು. ಬದಲಾಗಿ ನಮ್ಮ ರಾಷ್ಟ್ರವನ್ನು ಕೊಳ್ಳೆ ಹೊಡೆಯಲು ನಾವು ಅವರೊಡನೆ ಸಹಕರಿಸಿದ್ದು ಹಾಗೆ ಅವರು ಹಣದೋಚಿಕೊಂಡು ಹೋಗಲು ಕಾರಣವಾಯಿತೆಂದು ಅವರು ಹೇಳುವರು. ಭಾರತದ ಸಂಪತ್ತನ್ನು ಸೂರೆಗೊಳ್ಳಲು ನಾವು ಪರದೇಶೀಯರಿಗೆ ಸಹಕರಿಸಿರುವೆವೆಂದೂ, ಪರದೇಶೀ ವಸ್ತುಗಳ ವ್ಯಾಪಾರ, ಅವುಗಳ ಪ್ರೋತ್ಸಾಹ ಇವೆಲ್ಲಾ ಅದರ ಚಿಹ್ನೆಯೆಂದು ಅವರು ಹೇಳುವರು. ಈ ವ್ಯಾಪಾರದಿಂದ ಸಂಪಾದಿಸಿದ ಲಾಭವು ಪಾಪದ ಕೂಲಿ, ಕಳಂಕಪೂರಿತವಾದ ಧನವಾಗಿರುವದು. ಪರದೇಶಿ ವಸ್ತು ಪ್ರೋತ್ಸಾಹ ಮಾಡುವವನಿಗೆ, ಪರದೇಶಿ ವಸ್ತುಗಳ ಪ್ರೋತ್ಸಾಹದಿಂದ ತನ್ನ ಗೌರವವನ್ನು ಕಳಕೊಳ್ಳಬೇಕಾಗುವದೆಂದೂ, ತನ್ನ ನೆರೆಹೊರೆಯ ಸಹೋದರರ ಕೂಳಿಗೆ ಮಣ್ಣು ಹಾಕುವ ಕಾರ್ಯ ಮಾಡಿದರೆಂದೂ ಹೇಳಿದ್ದಾರೆ. ಒಬ್ಬ ಸತ್ಯಾಗ್ರಹಿಯು ಒಂದು ಕಪ್ಪು ಸಾರಾಯಿ ಕುಡಿಯಲು ಕೇಳಿದ ಕುಡುಕನಿಗೆ ಎರಡು ಕೊಡನು. ಬದಲು ಆ ಕುಡುಕ ವ್ಯಕ್ತಿಯ ಶಾರೀರಿಕ ಹಾಗೂ ಮಾನಸಿಕ [illegible] ತನ್ನ ಚಟವನ್ನು ನಿವಾರಿಸಲು ಆತನು ಪ್ರಯತ್ನಿಸುವನು. [illegible] ಶಕ್ತಿಯುದ್ಧಗ, ಅಧಿಕಾರಯುದ್ಧಗ ಈ ಮಟ್ಟವನ್ನು ನಿರ್ಮೂಲ ಮಾಡಲು ಆತನು [illegible].

- - -

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ [illegible]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

ಶೇರ್ ಬಂಡವಾಳ	— 50,000	0	0
ವಸೂಲಾದ ಶೇರ್ ಬಂಡವಾಳ	— 17,510	0	0
ಒಟ್ಟು ಠೇವಣಿ	— 2,13,262	0	4
[illegible]	[illegible]	12	
[illegible]	40,070	[illegible]	[illegible]
ರಿಸರ್ವ್ ಫಂಡ್	— 23,560	14	0

[illegible]

[illegible] ಅವಧಿಯ ಠೇವಣಿಗಳಿಗೆ [illegible]

ತಾ 1-10-19[illegible] [illegible] ತಾ. 1-1-1937 ರಲ್ಲಿ [illegible] ತಾ 1-9 38ರಿಂದ [illegible]

[illegible]

ಪ್ರೆಸಿಡೆಂಟ್ [illegible]

ಟ್ರಜರರ:— [illegible]

ಸೆಕ್ರೆಟರಿ— [illegible]

ತಾ 1-7 1940

ಶುಭ ಸಂದೇಶ.

[illegible] ಗಿರಾಕಿ ವ ಹಿತಚಿಂತಕರಿಗೆ ತಮ್ಮ ಸಂತೋಷ ಸೂಚನೆಯನ್ನು [illegible] ಸಂಚಾಲಕ [illegible] ಈ [illegible] ಪ್ರೀತಿ [illegible] ಎಲ್ಲರಿಗೂ [illegible]

Bhuvanendra Printers Ltd.,

ಭುವನೇಂದ್ರ ಪ್ರಿಂಟರ್ಸ್ ಲಿಮಿಟೆಡ್,

5? 9 [illegible]

[illegible]

ಜ್ವರ [illegible]

[illegible]

[illegible] (ಅಸ್ಸಾಂ) [illegible].

[illegible]

(52-4) [illegible]

ನಿತವ್ಯಯದ ಅಭ್ಯಾಸವನ್ನು ಚಿಕ್ಕಂದಿನಲ್ಲಿಯೇ ಪ್ರೋತ್ಸಾಹಿಸಿ ನಿಮ್ಮ ಮಕ್ಕಳ ಮುಂದಿನ ಪ್ರಾಪ್ತ ಭಾರವಕ್ಕೆ ಸಾಕಾದಷ್ಟು ಅನುಕೂಲವನ್ನು ಕಲ್ಪಿಸಿ

ಕೂಡಲೇ " ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್" ನ ಒಂದು ಪಾಲಿಸಿಯನ್ನು

ಅತ್ಯಂತ ಭದ್ರವಾದ ಮತ್ತು ಜನಾದರಣೀಯವಾದ

ಭಾರತೀಯ ವಿಮಾ ಕಂಪೆನಿಯಾದ

" ಓ ರಿ ಯ ೦ ಟ ಲ್ "

ನಲ್ಲಿ ತೆಗೆದುಕೊಳ್ಳಿರಿ.

ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್:— ಇದೊಂದು ಹೊಸ ರೀತಿಯ ಯೋಜನೆ. ಇದರ ಪ್ರಕಾರ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಸುಲಭ ದರದ ಪ್ರೀಮಿಯಮ್ಮಿನ ಲಿಮಿಟೆಡ್ ಹೋಲ್ ಲೈಫ್ ಅಥವಾ ಎಂಡೋವ್ಮೆಂಟ್ ವಿಮಾ ಪಾಲಿಸಿಯನ್ನು ಪಡೆಯಬಹುದು. ಇದರಲ್ಲಿ ಈ ಪಾಲಿಸಿಯ 'ರಿಸ್ಕ್' 22 ವರ್ಷ ವಯಸ್ಸಿಗೆ ಕಡಮೆ ಇಲ್ಲದ ಯಾವುದಾದರೊಂದು ಕ್ಲಪ್ತ ಕಾಲದಿಂದ ಪ್ರಾರಂಭವಾಗುತ್ತದೆ.

52 52) **ದಾಖಲೆಗೆ ಬರೆಯಿರಿ:— ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್. ಸ್ಥಾಪನೆ-1874. ಹೆಡ್ ಆಫೀಸು ಬೊಂಬಾಯಿ. ಅಥವಾ ದಿ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.**

Printed & Published by P. I. Belliappa at 'Kodagu' Press, Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೨೭—೧—೧೯೪೦.

ಸಂಪುಟ ೧೯] [ಸಂಚಿಕೆ

OUR GREETINGS & GOOD WISHES

to

ALL OUR CONSTITUENTS, DEPOSITORS

SHAREHOLDERS & WELL WISHERS

for

A HAPPY & PROSPEROUS NEW YEAR.

THE CANARA BANKING CORPORATION LIMITED.

(Incorporated in British India)

Estd. 1906.

52-5

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರ್ಯಾಟಿಂಗ್ ಮೊದಲಾದ ವಿಷಯಗಳನ್ನು ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara.

52—29

ಕೊಡಂದೇರ ಡಿ. ಮಾಚಯ್ಯ,

L.D.Sc. (COLLEGE OF DENTISTRY)
EX-SUPERVISOR. LAKHMAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ಕಲ್ಲಿ ವಿಚಾರಿಸಿರಿ.

ಸುಲಭ ದರ. (28) ನವೀನ ರೀತಿಯ ಚಿಕಿತ್ಸೆ.

ಕೇರಳ ಆಯುರ್ವೇದಿಕ್ ವೈದ್ಯಶಾಲಾ, ವಿರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟ್ಯಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಾಲಜರ್ (ರಿಜಿಸ್ಟರ್ಡ್)
ಪ್ರಿನ್ಸಿಪಲ್ ಪ್ರಾಕ್ಟಿಷನರ್, ವಿರಾಜಪೇಟೆ.

52-50

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ|| ಮುಕ್ಕಾಟಿರ ಜೋಯಪ್ಪನವರು.

ಒಂಬೆಮ್ಮನ ಕರ್ತವ್ಯನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ|| ಮಂಡೇಪಂಡ ಸೋಮಯ್ಯನವರು.
ಮ|| ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ—ಮ|| ಐನಂಡ ಮೊದಪ್ಪನವರು

ಪೊನ್ನಂಪೇಟೆನಾಡು—ಮ|| ಪಿ. ಬಿ. ಮುದ್ದಯ್ಯನವರು.

ಪಡಿಕೇರಿ—ಮ|| ಅಜ್ಜಮಾಡ ಮೊದಪ್ಪನವರು ಮತ್ತು ಸಿ. ಜಿ. ಮೊಣ್ಣಯ್ಯನವರು.

ಸುಂಟಿಕೊಪ್ಪ—ಮ|| ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ|| ಕೆ. ಮೊಗಪ್ಪನವರು.

ನಾಪೋಕ್ಲು—ಮ|| ಬಿಳ್ಳಿಯಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ|| ಎಚ್. ಎಂ. ಪುಟ್ಟಣ್ಣನವರು.

ಸೂಚನೆ:— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗೆಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವನ್ನೂ, ಹೆಚ್ಚಾದ ಜೀರ್ಣಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟಾಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್.
(52-17) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ.
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರಿಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಢಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಸಿಲ್ಹಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.
52-52

ಜರ್ಮನಿಯು ಕಳೆಗುಂದಿ ಕುಗ್ಗುತ್ತಿದೆ.

ಸಾಧನ ಸಾಮಗ್ರಿಗಳ ಅಭಾವವು ಹೆಚ್ಚುತ್ತಿದೆ.

ಕಳೆದ ಯುದ್ಧದ ಕಾಲಕ್ಕಿಂತ ಇಂದು ಜರ್ಮನಿಯು ಶಸ್ತ್ರದಲ್ಲಿ, ಸೈನ್ಯದಲ್ಲಿ ಹಲವು ಪಾಲಿಗೆ ಪ್ರಬಲವಾಗಿದೆಯೆಂಬುದರಲ್ಲಿ ಏನೇನೂ ಸಂಶಯವಿಲ್ಲ. ಸೀಜ್‌ಫ್ರಿಡ್ ದುರ್ಗದ ಮುಂದೆ ಮಿತ್ರ ರಾಷ್ಟ್ರಗಳಾದವೂ, ಇದು ವರೆಗೆ ಭಯಂಕರ ಯುದ್ಧವನ್ನು ಮಾಡದೆ ದಿನಕಳೆಯುವದರ ಅರ್ಥವಾದರೂ ಏನು? ಶಸ್ತ್ರ ಸೈನ್ಯಗಳ ಯುದ್ಧದಲ್ಲಿ ನಾಜೀ ಜರ್ಮನಿಯು ಇಂದು ಯಾರಿಗೂ ಅಂಜುವದಿಲ್ಲ. ಇದನ್ನು ತಿಳಿದೇ ಮಿತ್ರ ರಾಷ್ಟ್ರಗಳು ಯುದ್ಧವನ್ನು ದೀರ್ಘ ಎಳೆದು ಆರ್ಥಿಕ ಯುದ್ಧವನ್ನು ನಡೆಸುತ್ತಿವೆ.

ಸಾಧನ ಸಾಮಗ್ರಿಗಳಿಲ್ಲ.

ಎಷ್ಟೇ ಸೈನ್ಯವಿರಲಿ, ಎಷ್ಟೇ ಯುದ್ಧ ಸಾಧನಗಳಿರಲಿ ಅವುಗಳು ಕೆಲಸಮಾಡಬೇಕಾದರೆ ಅವುಗಳಿಗೆ ಬೇಕಾದ ಸಾಮಗ್ರಿಗಳು ದೊರಕಬೇಕಾಗಿದೆ. ಆಹಾರವಿಲ್ಲದ ಸೈನ್ಯಕರು ಕಾದಲಾರರು. ಎಣ್ಣೆ ಪೆಟ್ರೋಲುಗಳಿಲ್ಲದ ವಿಮಾನಗಳು ಚಲಿಸಲಾರವು. ಕಬ್ಬಿಣ, ಉಕ್ಕು, ಎಲ್ಯುಮಿನಿಯಂಗಳು ದೊರಕದೆ ಹೊಸ ಯುದ್ಧ ಸಾಧನಗಳನ್ನು ಮಾಡಿ ಯುದ್ಧವನ್ನು ಮುಂದುವರಿಸಲು ಆಗುವಂತಿಲ್ಲ. ಇಂದಿನ ಯುದ್ಧ ರೀತಿಯಲ್ಲಂತೂ ಹೊಸ ಹೊಸ ಸಾಮಗ್ರಿಗಳು ಹಿಂದಿನ ಯಾವ ಯುದ್ಧ ಕಾಲಕ್ಕಿಂತಲೂ ಅಧಿಕವಾಗಿಯೇ ಬೇಕಾಗಿದೆ. ಜರ್ಮನಿಗೆ ಇವುಗಳ ಅಭಾವದಿಂದ ಕಷ್ಟಕಾಲ ಒದಗಿದೆ. ಸಮುದ್ರದ ಗಡಿಗಳಲ್ಲಿ, ಬೇರೆ ಬೇರೆ ಪ್ರಾಮುಖ್ಯ ಮಾರ್ಗಗಳಲ್ಲಿ ಜರ್ಮನಿಗೆ ಸಾಮಗ್ರಿಗಳು ಹೋಗದಂತೆ ಮಿತ್ರ ರಾಷ್ಟ್ರಗಳು ಮಾಡಿದ ಬಂಧನದಿಂದ, ಜರ್ಮನ್ ಭೂತದ ಹೊಟ್ಟೆಯು ಇಂದು ಹಸಿವಿನದಾಹದಿಂದ ಸುಡುತ್ತಿವೆ

ಜರ್ಮನಿಯಂತೆ ಬ್ರಿಟನಿಲ್ಲ.

ಬ್ರಿಟನಾದರೂ, ಕಲ್ಲಿದ್ದಲು ಒಂದನ್ನು ಬಿಟ್ಟು ಮಿಕ್ಕುವೆಲ್ಲದನ್ನೂ ಹೊರಗಿನ ರಾಷ್ಟ್ರಗಳಿಂದ ಪಡೆಯಬೇಕು. ಜರ್ಮನಿಯು ಸುರಂಗಗಳಿಂದ ಬ್ರಿಟನಿನ ಸಮುದ್ರ ಸಂಚಾರವನ್ನು ದುಸ್ಸಾಧ್ಯಮಾಡಲು ಶತ ಪ್ರಯತ್ನಗಳನ್ನು ಮಾಡುತ್ತಿದೆ. ಆದರೆ ಎಷ್ಟಂದರೂ ಜರ್ಮನಿಯು ಎಷ್ಟೇ ತಡೆ ಮಾಡಿದರೂ ಬ್ರಿಟನು ತನಗೆ ಬೇಕಾದ ಸಾಮಗ್ರಿಗಳನ್ನು ಶಾಂತಿ ಕಾಲದಲ್ಲಿ ಪಡೆಯುತ್ತಿದ್ದಂತೆ ಇಂದು ಯುದ್ಧ ಕಾಲದಲ್ಲಿಯೂ ಅವ್ಯಾಹತವಾಗಿ ಪಡೆಯುತ್ತಿದೆ. ಆದರೆ ಇಂದು ಯಾವುದೇ ಸಮುದ್ರದಲ್ಲಾದರೂ ಜರ್ಮನಿಯ ಹಡಗುಗಳು ಅತ್ತಿತ್ತ ಓಡಾಡದಂತೆ ಮಿತ್ರ ರಾಷ್ಟ್ರಗಳು ಮಾಡಿಬಿಟ್ಟಿವೆ.

ಜರ್ಮನಿಯು ಕಂಗೆಟ್ಟಿದೆ.

ಇಂದು ಎಲ್ಲದಕ್ಕಿಂತಲೂ ಪ್ರಧಾನವಾಗಬೇಕಾದುದು ಕಬ್ಬಿಣ. ಜರ್ಮನಿಗೆ ಇದಂತೂ ಜರ್ಮನಿಯಲ್ಲಿ ಸಿಗುವದು ಬಹಳ ಕಡಿಮೆ. ಹೊರಗಿಂದ ಬರುವುದು ಸಾಧ್ಯವೇ ಇಲ್ಲ. ಕಳೆದ ಯುದ್ಧದಲ್ಲಿ ಫ್ರಾನ್ಸ್ ಮತ್ತು ಬೆಲ್ಜಿಯಮ್‌ಗಳಿಂದ ಅದಕ್ಕೆ ಕಬ್ಬಿಣವು ಒದಗುತ್ತಿತ್ತು. ಆದರೆ ಇಂದು ಸಿಗುವದು ಸಾಧ್ಯವೇ ಇಲ್ಲ. ಇಂತಹ ಅವಸ್ಥೆಯನ್ನು ಮೊದಲೇ ತಿಳಿದಿದ್ದ ಜರ್ಮನಿಯು ಕಬ್ಬಿಣ ಕಾರ್ಖಾನೆಯನ್ನು ಮಾಡಿತ್ತು. ಆದರೆ ಅಲ್ಲಿ ಆಗುವ ಕಬ್ಬಿಣಗಳಿಗೆ ಏನೇನೂ ಸಾಲುತ್ತಿಲ್ಲ. ಮಾತ್ರವಲ್ಲದೆ ಬಹಳ ಕಡಿಮೆ ಪರಿಣಾಮದಲ್ಲಿ ಆಗುತ್ತಿದೆ. ಈ ಕಡಿಮೆತರದ ಕಬ್ಬಿಣದಿಂದ ಕೆಲ ಸಮಯ ಜರ್ಮನಿಯು ಕಾದಾಡಿದರೂ, ಅಲ್ಲಿನ ಇನ್ನೊಂದು ಸಮಸ್ಯೆಯೆಂದರೆ ಎಣ್ಣೆಯದು.

ರಶ್ಯದ ಬೆಂಬಲವುಂಟೇ?

ರಶ್ಯವು ಈ ಬಗೆಯಲ್ಲಿ ತನಗೆ ಬೆಂಬಲ ಕೊಡುವದೆಂದು ಜರ್ಮನಿಯು ನಂಬಿತ್ತು. ಆದರೆ ರಶ್ಯದ ಬೆಂಬಲವಂತೂ ಸಂದೇಹವಾಗಿದೆ. ಇದು ವರೆಗೆ ಯಾವ ಸಹಾಯವೂ ಅಲ್ಲಿಗೆ ಹೋಗಿಲ್ಲ. ಪೋಲೆಂಡಿನ ವಿಷಯದಲ್ಲಂತೂ ರಶ್ಯವು ಜರ್ಮನಿಯ ಆಕ್ರಮಣವನ್ನು ತಡೆವಂತೆ ತನಗೂ ಪಾಲು ಬೇಕೆಂದು ಕೇಳಿಕೊಂಡಿದೆ. ಬಾಲ್ಟಿಕಿನಲ್ಲಿ ರಶ್ಯವು ಪ್ರಬಲವಾಗುವುದೆಂದರೆ, ಜರ್ಮನಿಯ ಪ್ರಭಾವಕ್ಕೆ ಆತಂಕವನ್ನುಂಟುಮಾಡಿದಂತೆಯೇ ಆಗಿದೆ.

ಎಣ್ಣೆಯ ಅಭಾವ.

ಜರ್ಮನಿಯಲ್ಲಿ ಎಣ್ಣೆಯ ಅಭಾವವು ಬಹಳವಿದೆ. ಹೀಗೆಯೇ ಯುದ್ಧ ನಡೆದ ಪಕ್ಷದಲ್ಲಿ ಒಂದು ದಿನ ಅಲ್ಲಿ ಎಣ್ಣೆಯು ಒದಗದೆ ಜರ್ಮನಿಯ ವಿಮಾನಗಳು ಟ್ಯಾಂಕುಗಳೂ ಚಲಿಸದೆ ನಿಂತುಹೋಗುವ ಪ್ರಸಂಗವೂ ಬರಬಹುದು. ಪೋಲೆಂಡು ರುಮೇನಿಯಾ ಈ ಎರಡು ರಾಷ್ಟ್ರಗಳು ನಿರಂತರ ಅಲ್ಲಿಗೆ ಎಣ್ಣೆಯನ್ನು ಕಳುಹಿಸಿಕೊಟ್ಟರೂ ಅದು ಜರ್ಮನಿಗೆ ಸಾಕಾಗುವುದೆಂದು ನಂಬಲು ಬರುವುದಿಲ್ಲ.

ಪರಿಹಾರ ಯೋಜನೆ.

ಜರ್ಮನಿಯಲ್ಲಿ ನಾಜೀ ಸರಕಾರವು ಅಧಿಕಾರಕ್ಕೆ ಬಂದ ಮೇಲೆ ಅದಕ್ಕೆ ಇಂತಹ ಒಂದು ಸಂಭವವು ಒದಗಬಹುದೆಂದು ಮೊದಲೇ ತಿಳಿದಿತ್ತು. ಆದುದರಿಂದ ಅದು ರಾಷ್ಟ್ರದ ಇತರ ಏಳಿಗೆಯ ಕಾರ್ಯಗಳ ಕಡೆಗೂ ಲಕ್ಷ್ಯ ಕೊಡದೆ ತನಗೆ ಬೇಕಾದ ವಸ್ತುಗಳನ್ನು ತನ್ನಲ್ಲಿಯೇ ಒದಗಿಸಲು ಎಲ್ಲಾ ವಿಧದಿಂದಲೂ ಯತ್ನಿಸಿದೆ. ಆದರೆ ಆಯಾಯ ಸಾಮಗ್ರಿಗಳನ್ನು ಉಂಟುಮಾಡುವ ಸತ್ವವು ಅಲ್ಲಿನ ಮಣ್ಣಿಗೇ ಇರದಿದ್ದರೆ ಸಾಹಸವು ಏನು ಫಲಕಾರಿಯಾದೀತು?

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜರ್ಮನಿಯು ಇಂದು ಚಡಪಡಿಸುತ್ತದೆ. ಎಷ್ಟೇ ತಯಾರಿಯಿಂದ ಜರ್ಮನಿಯು ಇಂದು ರಣರಂಗಕ್ಕಿಳಿದಿದ್ದರೂ ಬಹುಕಾಲ ಅದು ಯುದ್ಧಮಾಡಲು ಸಾಧ್ಯವಿಲ್ಲ. ಇದೇ ಇಂದಿನ ಯುದ್ಧವನ್ನು ಮಿತ್ರರಾಷ್ಟ್ರಗಳು ಹೀಗೆ ದೀರ್ಘ ಎಳೆಯುವದರ ಗುಟ್ಟಾಗಿರಬೇಕೆಂದು ಗೊತ್ತಾಗಿದೆ.

ಫಿನ್ನರ ಸ್ವಾತಂತ್ರ್ಯ ರಕ್ಷಣೆಗೆ ರಕ್ತದ ಕಾಲುವೆ ಹರಿಸುವ ತ್ರಿಮೂರ್ತಿಗಳು.

ಇಂದಿನ ರಷ್ಯಾ ಫಿನ್‌ಲೆಂಡ್ ಯುದ್ಧವು ಒಂದು ರೀತಿಯಲ್ಲಿ ರಶ್ಯದ ಶಕ್ತಿಯನ್ನು ಒರೆಗಲ್ಲಿಗಿಟ್ಟು ಪರೀಕ್ಷಿಸಿದಂತೆ ಆಯಿತು. ಪ್ರಪಂಚದ ಪ್ರಬಲ ಸೈನ್ಯ ಶಕ್ತಿಯುಳ್ಳದ್ದೆಂದು ಪ್ರಸಿದ್ಧವಾದ ರಶ್ಯವನ್ನು ಒಂದು ಇಂಚು ಮುಂದುವರಿಯಲು ಫಿನ್‌ವೀರರು ಎಡೆಗೊಡುವುದಿಲ್ಲ. ಸುಶಿಕ್ಷಿತ ಫಿನ್ ಸೇನಾನಿಗಳ ಸಾಮರ್ಥ್ಯದಿಂದ, ಅಶಿಕ್ಷಿತರಾದ ರಶ್ಯನ್ ಸೈನ್ಯಕರು ಕಂಗೆಡುತ್ತಿದ್ದಾರೆ. ಇಡೀ ಯೂರೋಪಿನಲ್ಲಿ ಫಿನ್ನರು ಬಹಳ ಸಮಯಗಳಿಗಿಂತ ಹಿಂದೆಯೇ ಯುದ್ಧ ಕಲಾಕುಶಲರೆಂದು ಪ್ರಸಿದ್ಧರಾಗಿರುವುದು ಮಾತ್ರವಲ್ಲದೆ, ಅನೇಕ ಸಂಗ್ರಾಮಗಳಲ್ಲಿ ಕಾದಾಡಿ ನೆತ್ತರು ಚೆಲ್ಲಿದ ಕದನಕಲಿಗಳೂ ಆಗಿರುತ್ತಾರೆ.

1918ರಲ್ಲಿ ಫಿನ್ನರು ತಮ್ಮ ಸೇನಾನಿಯಾದ ಫೀಲ್ಡ್ ಮಾರ್ಶಲ್ ಮೇನರಿಮ್ಮನ ಧೀರ ನಿಶ್ಚಯ, ನಿರ್ಭಯ ಸಂಗ್ರಾಮ ಸಾಹಸಗಳನ್ನು ತೋರಿಸಿ, ಬೋಲ್ಶೆವಿಸ್ಟರನ್ನು ಫಿನ್‌ಲೆಂಡಿನಿಂದ ಹೊರ ಅಟ್ಟಿದರು. ಇಂದು ತಿರಿಗಿ ಅದೇ ದೃಢ ನಿಶ್ಚಯ ಅದೇ ನಿರ್ಭಯಸಂಗ್ರಾಮ ಸಾಹಸಗಳನ್ನು ಪ್ರದರ್ಶಿಸುತ್ತಾರೆ. ಓಸ್ಟರ್‌ಮೇನ್, ಓಸ್ಟ್ ಮತ್ತು ಓಕ್ವಿಸ್ಟ್ ಎಂಬ ಈ 'ಓ' ಅಕ್ಷರಾದಿಯ ಹೆಸರುಳ್ಳ ತ್ರಿಮೂರ್ತಿಗಳು, ಫಿನ್‌ಲೆಂಡಿನ ಸೇನಾನಾಯಕರು. ಇಂದಿನ ಯುದ್ಧದಲ್ಲಿ ಪ್ರಚಂಡ ಸಾಹಸಗಳನ್ನು ತೋರಿಸಿ, ಮುಂದಿನ ದಿನಗಳಲ್ಲಿ ತಮ್ಮ ವೀರ ಕೀರ್ತಿಯನ್ನು ಜಗತ್ತಿಗೆ ಸಾರಲಿರುವರು. ಅವರಲ್ಲಿ ಓಸ್ಟರ್ ಮೇನನು ಫಿನ್ ಸೈನ್ಯಕರ ದಳಪತಿಯಾಗಿಯೂ, ಓಸ್ಟನು ಚೀಫ್‌ಸ್ಟಾಫ್ ಆಗಿಯೂ, ಓಕ್ವಿಸ್ಟನು ಕರೇಲಿಯನ್ ಇಸ್ತ್‌ಮುಸ್ ಲಾಡೋಗಾ ಕರಾವಳಿಯಲ್ಲಿ ಕಾದಾಡುವ ಸೇನಾನಿಯೂ ಆಗಿ ನೇಮಕ ಹೊಂದಿದ್ದಾರೆ.

ವಿದ್ಯಾಭ್ಯಾಸವೋ? ರಾಷ್ಟ್ರಸೇವೆಯೋ?

ಕಳೆದ ಮಹಾಯುದ್ಧದ ಸಮಯದಲ್ಲಿ ಈ ತ್ರಿಮೂರ್ತಿಗಳು ವಿದ್ಯಾರ್ಥಿಗಳಾಗಿದ್ದರು. ಫಿನ್‌ಲೆಂಡಿನಲ್ಲಿ ಜನರು ರಶ್ಯನರ ಒತ್ತಾಯದಿಂದ ಬೆಂದು ಬೇಗುದಿಗೊಂಡಿದ್ದರು. ಅಲ್ಲಿನ ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯದಾಹವು ಎಲ್ಲೆ ಮೀರಿತ್ತು. 2,500 ಮಂದಿ ವಿದ್ಯಾರ್ಥಿಗಳೊಡನೆ ಈ ಮೂವರು ಕೈಯ ಪುಸ್ತಕಗಳನ್ನು ಬಿಸುಟು, ಖಡ್ಗಧಾರಿಗಳಾಗಿ ಹೊರಟರು. ಅಲ್ಲಿಂದ ಕೈಸರನ ಸೈನ್ಯದಲ್ಲಿ ಸೇರಿ, ಪೂರ್ವ ರಣರಂಗದಲ್ಲಿ ರಷ್ಯದೊಡನೆ ಕಾದಾಡಿದರು. ಮೂರು ವರ್ಷಗಳ ತನಕ ವಿಶ್ರಾಂತಿಯಿಲ್ಲದೆ ಕಾದಾಡಿದ **ಮೇಲೆ ಅವರು** ಸೈನ್ಯದಲ್ಲಿ ಬಹಳ ಕೀರ್ತಿಗಳನ್ನು ಪಡೆದರು.

ಮೇನರಿಮ್ಮನ ಧುರೀಣತೆ.

ಕಮ್ಯುನಿಸ್ಟ್ ಕ್ರಾಂತಿಯು ಉಂಟಾದಾಗ **ಅವರೆಲ್ಲರೂ** ಪ್ರಸಿದ್ಧ ವೀರನಾದ **ಮೇನರಿಮ್ಮನ ಕೈಕೆಳಗೆ ಹೋಗಿ ನಿಂತರು. ಮೇನರಿಮ್ಮನು ಒಬ್ಬ ಫಿನ್ನ ಸೇನಾನಿಯಾ**ಗಿದ್ದರೂ, ರಶ್ಯನರ ಸೈನ್ಯದಲ್ಲಿಯೂ ಅಂತಹ ದಳಪತಿಯು ಇರಲಿಲ್ಲವೆಂದು ಖ್ಯಾತಿಯನ್ನು ಆತನು ಪಡೆದಿದ್ದ. ರಷ್ಯದಲ್ಲಿ ಬೋಲ್ಶೆವಿಸ್ಟರು ಸೇನಾನಿಗಳನ್ನು ಎಡಬಲ ಬದಿಗಳಿಂದ ಕೊಲ್ಲುತ್ತಿದ್ದ ಕಾಲದಲ್ಲಿಯೇ ಮೇನರಿಮ್ಮನು ರಷ್ಯದಲ್ಲಿ ಏಕಾಂಗಿಯಾಗಿ ತನ್ನ ಪೂರ್ಣ ವೇಷದಿಂದಲೇ ನಿರ್ಭಯನಾಗಿ ಸಾಗಿದರೂ, ಆತನ ಮೇಲೆ ಕೈಯೆತ್ತಲು ಯಾವಾತನೂ ಧೈರ್ಯಗೊಳ್ಳಲಿಲ್ಲ. ಹಾಗಿತ್ತು ಆತನ ಪ್ರಭಾವ. ಅಂತಹ ಧೀರನನ್ನು ಈ ತ್ರಿಮೂರ್ತಿಗಳು ಇತರ ಹಲವರೂ ಮುಖಂಡನಾಗಿ ಅಂಗೀಕರಿಸಿದರು. ಇವರೆಲ್ಲರ ಸಹಾಯದಿಂದ ಆ ಮೇಲೆ ಕೇವಲ ಎಂಟೇ ದಿನಗಳಲ್ಲಿ ಫಿನ್‌ಲೆಂಡು ಸ್ವಾತಂತ್ರ್ಯದ ಬೆಳಕನ್ನು ಕಂಡಿತು.

ಇಂದು ಮೇನರಿಮ್ಮನಿಗೆ ಎಪ್ಪತ್ತು ವರ್ಷಗಳ ಪ್ರಾಯ. ಆದರೂ ತನ್ನ ಉಳಿದ ಶಕ್ತಿಯೆಲ್ಲವನ್ನೂ ಆತನು ರಶ್ಯನರನ್ನು ಗೆಲ್ಲುವಂತೆ ಮಾಡುವ ಯತ್ನಗಳಲ್ಲಿ ಉಪಯೋಗಿಸುತ್ತಾನೆ. ಈ ತ್ರಿಮೂರ್ತಿಗಳ ಪರಾಕ್ರಮಗಳಲ್ಲಿ ಆತನಿಗೆ ಒಳ್ಳೆಯ ವಿಶ್ವಾಸವಿದೆ. ಇವರೆಲ್ಲರೂ 40ವರ್ಷ ಪ್ರಾಯದ ಸುರಿತು ವೀರರು. ರಕ್ತದ ಸಾಮರ್ಥ್ಯವುಳ್ಳ ಯೋಧರೂ ಆಗಿರುವರು.

ಈ ಮೂರು 'ಓ' ಗಳು

ಓಸ್ಟರ್ ಮೇನನಿಗೆ 43 ವರ್ಷ ಪ್ರಾಯ. ಆತನ ದಳದ ಸೈನಿಕರೆಂದರೆ ಇಡೀ ಫಿನ್‌ಲೆಂಡಿನಲ್ಲಿ ಹೆಸರು ಹೊಂದಿದವರು. ಶಿಸ್ತುಪಾಲನೆ ಮತ್ತು ಸಂಘ ರಚನೆಯಲ್ಲಿ ಆತನು ಬಹಳ ಹೆಸರು ಪಡೆದವನು.

ಓಸ್ಟನಿಗೆ 42 ವರ್ಷ ಪ್ರಾಯ. ಆತನು ಯಾವಾಗಲೂ ಕೀರ್ತಿಗೆ ಬಹಳ ನಾಚುವವನು. ಆದರೆ ಮೇನರಿಮ್ಮನ ಉಪಾಯ ಸಾಹಸಗಳ ಪ್ರತಿಬಿಂಬವೆಂದು ಆತನಿಗೆ ಅಂತರ್ ರಾಷ್ಟ್ರೀಯ ಖ್ಯಾತಿಯಾಗಿದೆ.

ಓಸ್ಟನಿಗೆ 45 ವರ್ಷ ಪ್ರಾಯ. ಆದರೆ ಇಂದು ಫಿನ್‌ಲೆಂಡಿನ ಬಹಳ ಪ್ರಾಮುಖ್ಯ ಸ್ಥಳದಲ್ಲಿ ಕಾದಾಡುವ ಹೊಣೆಗಾರಿಕೆ ಹೊತ್ತ ಸಾಹಸಿಯವನು. ಫಿನ್ನರ ಸ್ವಾತಂತ್ರ್ಯದ ರಕ್ಷಣೆಗೆಂದು ಓಕಿಸ್ಟನು ಕಳೆದ ಆರು ವರ್ಷಗಳಿಂದ ಅಲ್ಲಿ, ಮುಂಬರುವ ರಶ್ಯನೊಡನೆ ಕಾದಾಡುತ್ತಾ ಇರುವನು. ಆವನ ಕೈಕೆಳಗಿನ ಜನರಲ್ಲಿ ಆತನು ಬಹಳ ಜನಪ್ರಿಯನೂ ಗೌರವಾರ್ಹನೂ ಆಗಿದ್ದಾನೆ.

ಇಂತಹ ಸೇನಾನಿಗಳಿಂದ ಶಿಕ್ಷಣ ಪಡೆದ ಸೈನ್ಯಕರೇ ಇಂದು ರಶ್ಯನರನ್ನು ಗದ್ದುಹದ ಮಾಡುತ್ತಿದ್ದಾರೆ. ಇಂದು ಅಂತರ್ ರಾಷ್ಟ್ರೀಯ ಕೀರ್ತಿಯನ್ನು ಪಡೆದಿದ್ದಾರೆ. ಎಂತಹ ಪ್ರಬಲ ಸೈನ್ಯವೇ ಇರಲಿ, ಇವರ ಸಾಹಸದಿಂದ [illegible] ಹೇವು ಸಮಯಗಳ ವರೆಗೆ [illegible] ಡಿತನೇನೂ, ರಷ್ಯನ್ನು ಜೇನ [illegible] ಲಿಯಬೇಕೆಂದು [illegible] ಳುತ್ತಿದ್ದಾರೆ.

ಸ್ವಾರ್ಥೀ ಜಗತ್ತು.

(ಲೋಭ)

ಲೇಖಾಂಕ ೪.

ಲೇಖಕ:-ಗುಪ್ತ, ಮಡಿಕೇರಿ.

ಲೋಭವು ಅಸತ್ಯವನ್ನು ನುಡಿಸುತ್ತದೆ. ಅಕೃತ್ಯವನ್ನು ಮಾಡಿಸುತ್ತದೆ. ಕಷ್ಟಪರಂಪರೆಗಳಿಗೆ ತಳ್ಳುತ್ತದೆ. ಮಾನಮರ್ಯಾದೆಯನ್ನು ತೃಣೀಕರಿಸುತ್ತದೆ. ರಾಷ್ಟ್ರ ರಾಷ್ಟ್ರಗಳಲ್ಲಿ ಘರ್ಷಣೆಯನ್ನು ತರುತ್ತದೆ. ಧನಿಕರ ಜೀವಾಳವಾಗಿ ಮೆರೆಯುತ್ತದೆ. ಹೆಚ್ಚೇಕೆ? ಆಶ್ರಯಿಸಿದವನಿಗೂ, ಆಶ್ರಯಿಸದವನಿಗೂ ಏಕರೀತಿಯ ಫಲವನ್ನೀಯುವ ಮಹಾ ಸಮತವಾದಿಯೇ ಲೋಭ ಆಗಿದೆ.

ಸ್ವಾರ್ಥೀ ಜಗತ್ತಿನ ಕುಟುಂಬದ ಸಪ್ತ ಸಹೋದರರಲ್ಲಿ ಲೋಭವು ಮೂರನೆಯದು. ನಮ್ಮ ಲೇಖನ ಸರಣಿಯಂತೆ ಕಳೆದ ವಾರಗಳಲ್ಲಿಯೇ ಲೋಭದ ವಿವೇಚನೆಯು ಆಗಬೇಕಿದ್ದರೂ ಕಾಲಚಕ್ರದ ಉರುಳಾಟದಲ್ಲಿ ಮಾನವ ವಾಂಛಿತ ಕಾರ್ಯವು ದೆಸೆಗೆಟ್ಟು ಅಸಂಭಾವ್ಯ ಸಂಗತಿಗಳು ನಡೆಯುವಂತೆ ಲೋಭದ ಸರದಿಯಾದರೂ ಈ ವಾರಕ್ಕೆ ಬಂದಿದೆ. 'ಲೋಭ,' ಈ ವಿಚಾರವನ್ನು ವಿವೇಚಿಸಿದರೆ ಇವರೊಳಗೆ ಸ್ವಾರ್ಥೀಜಗತ್ತಿನ ಹಿರಿಯಣ್ಣನಾದ ಸ್ವಾರ್ಥವು ಅಡಗಿರುವಂತೆ ಕಾಣುತ್ತದೆ. ಏಕ ಮಾತಾಪಿತೃಗಳಿಂದ ಜನಿಸಿದ ಬಾಲಕರಲ್ಲಿ ಒಬ್ಬರೊಬ್ಬರಿಗೆ ಹೋಲುವ ಗುಣಗಳಿರುವಂತೆ ಲೋಭದಲ್ಲಿ ಇತರ ಸಹೋದರರ ಗುಣಗಳಿರುವದು ಕಂಡು ಬರುವದು. ಸಹೋದರರೊಳಗಿನ ಬಾಂಧವ್ಯವು ಈ ರೀತಿ ಇದ್ದರೂ ಲೋಭವು ತನ್ನ ಕೈವಾಡವನ್ನು ಇತರ ಸಹೋದರರ ಮೇಲೆ ತೋರಿಸಿ ಕೆಲವೊಂದು ಸಮಯದಲ್ಲಿ ಅವುಗಳನ್ನು ತನ್ನಧೀನದಲ್ಲಿಟ್ಟುಕೊಳ್ಳುವದೂ ಉಂಟು. ಇದು ಸ್ವಾರ್ಥೀ ಕುಟುಂಬದೊಳಗೆ ಲೋಭದ ವೈಶಿಷ್ಟ್ಯ. ಇನ್ನು ಸ್ವಾರ್ಥೀ ಜಗತ್ತಿನಲ್ಲಿ ಲೋಭದ ಸ್ಥಾನವೆಲ್ಲಿದೆಯೆಂದು ಪರಿಶೀಲಿಸಿದರೆ ಮಾನವ ಜನಾಂಗವನ್ನೇ ಇದು ಆವರಿಸಿಕೊಳ್ಳದಿದ್ದರೂ ಪ್ರಾಮುಖ್ಯವಾಗಿ ಧನಿಕರನ್ನು ಇದು ಆಶ್ರಯಿಸಿದೆ. ಖಾನೇಸುಮಾರಿ ಲೆಕ್ಕಕ್ಕೆ ಮಾತ್ರವಿರುವ ಅಸಂಖ್ಯಾತ ಬಡ ಬಗ್ಗರಲ್ಲಿ ಲೋಭವು ಅಲ್ಪ ಪ್ರಮಾಣದಲ್ಲಿ ಕಂಡು ಬಂದರೂ ಧನಿಕರಲ್ಲಿ ಸರ್ವಸ್ವವಿದೆಯೆಂದು ತಿಳಿದೋ ಏನೋ ಅವರಲ್ಲಿ ಮೂರ್ತಿಮತ್ತಾಗಿ ನೆಲೆಸಿದೆ. ಲೋಭವು ಧನಿಕರ ಜೀವ ಜೀವಾಳವೇ ಆಗಿದೆ. ಈ ಮಹಾ ವಸ್ತು ಲೋಭದ ಆಶ್ರಯವಿಲ್ಲದಿದ್ದರೆ ಅವರು ತಮ್ಮ ಧನಿಕತ್ವಕ್ಕೆ ಬಿರುದಿಗೆ ತಿಲಾಂಜಲಿಯನ್ನೀಯಬೇಕಾಗುವದು. ಲೋಭವು ಪಾತ್ರಾಪಾತ್ರ ವಿವೇಚನೆ ಮಾಡಗೊಡದು. ಮಾನವನ ಗೌರವವನ್ನರಿಯದು. ಮಹಾ ಮಹಿಮರೇ ಲೋಭದ ಮುಂದೆ ತಲೆಬಾಗಬೇಕು. ಆದ್ದರಿಂದ ಅದು ಮಹಾ ಪ್ರಚಂಡ ಸಾಧನವಿರುವದು. ಈ ಲೋಭದ ಪ್ರೇರಣ ಶಕ್ತಿಯಿಂದಲೇ ಸುಳ್ಳು, ಸ್ವಾರ್ಥ, ಇವು ಬಹಿರ್ಪ್ರಪಂಚದಲ್ಲಿ ವಿರಾಜಿಸುವವು. ಲೋಭದಿಂದ ಮಾನವನಲ್ಲಿ ಚಿತ್ತಭ್ರಮೆಯಾಗುವದು. ಆದ್ದರಿಂದಲೇ ತಜ್ಞರು, 'ಅತಿಯಾಸೆಯಿಂದ ಮನುಷ್ಯನ ಮತಿಯೆಲ್ಲ ಕೆಟ್ಟು ಆತನು ಗತಿಗೇಡಿಯಾಗುವನು' ಎಂದಿದ್ದಾರೆ. ಲೋಭದ ಅರ್ಥಾತ್ ಆಸೆಯ ಪ್ರಭಾವವಿಲ್ಲದಿದ್ದ ಪಕ್ಷ ಮಾನವ ಜೀವನವೇ ನೀರಸವಾಗುತಿತ್ತೆಂಬುವದರಲ್ಲಿ ಸಂಶಯವಿಲ್ಲ.

ಲೋಭದ ಕಾರ್ಯಕ್ರಮವೇನೆಂದು ವಿಚಾರಿಸಿದರೆ ಜಗತ್ತಿನ ಆಗು ಹೋಗುಗಳಿಗೆಲ್ಲಾ ಅದೇ ಕಾರಣವಿರಬಹುದೆಂದು ಗೋಚರವಾಗುತ್ತದೆ. ಲೋಭವು ಯಾಚಿಸುವವರಿಗೆ ನಕಾರ ಹಾಕಿಸುತ್ತದೆ. ಖರ್ಚಿನ ಪ್ರಸಂಗದಲ್ಲಿ ಮಾನವನನ್ನು ಕಡಿವಾಣ ಹಿಡಿದೆಳೆದಂತೆ ಹಿಂದೆ ನಿಲ್ಲಿಸುತ್ತದೆ. ಮಾನವನ ಸರ್ವಸ್ವವಾದ ಮರ್ಯಾದೆ ಹೋದರೂ ಕಾಸನ್ನು ಭದ್ರವಾಗಿ ಮುಚ್ಚಿಡುತ್ತದೆ. ಹೆಚ್ಚೇಕೆ? ಅಷ್ಟೈಶ್ವರ್ಯಗಳಿದ್ದರೂ ಧನಿಕನ ಹೊಟ್ಟೆಗೇ ಅನ್ನವಿಲ್ಲದ ಮಾಡುತ್ತದೆ ಈ ಲೋಭ! ಕಾಸಿಗಾದರೂ ಕಠಿಣ ತಪಸ್ಸು ಮಾಡಿಸುತ್ತದೆ. ಮಾನವ ಜೀವಿಯೆಂದು ಮೆರೆಯುವ ಮಹಾ ವ್ಯಕ್ತಿಗಳನ್ನು ತನ್ನದೊಂದು ಪ್ರಭಾವದಿಂದ ಪಶುಗಳಿಗೂ ಕಡೆ ಮಾಡುತ್ತದೆ. ಲೋಭದ ಈ ಮಹತ್ವವನ್ನರಿತೇ ಸರ್ವಜ್ಞ ಕವಿಯು ಈ ರೀತಿ ಅಂದಿರುವನು—

"ನುಡಿಸುವುದಸತ್ಯವನು |
ಕೆಡಿಸುವುದು ಧರ್ಮವನು |
ಹಿಡಿಸುವದು ಕಟ್ಟೊಡಲ ಕಾಲೋಭದಾ|
ಗಡಣ ಕಾಣಯ್ಯ! ಸರ್ವಜ್ಞ ||"

ಆದ್ದರಿಂದ ಲೋಭವು ತನ್ನೊಂದು ದೃಷ್ಟಿಯಿಂದ ಮಾನವನ ಚಿತ್ತಪಲ್ಲಟ ಮಾಡುವದೆಂಬುದು ಸ್ವಯಂವ್ಯಕ್ತ. ಇರಲಿ; ಈಗ ಲೋಭದೊಡನೆ ಹೋರಾಡಿ ಜಯಶೀಲರಾದವರು ಯಾರಾದರಿರುವರೇ ಎಂದು ನೋಡೋಣ. ನಿಜ, ಪುರಂದರ ದಾಸರ ಕಥೆಯಲ್ಲಿ ನೋಡಿದರೆ ಅವರ ಜೀವನವೇ ಈ ಲೋಭದ ಮೂರ್ತಿ ಸ್ವರೂಪವಾಗಿತ್ತೆಂದು ಕಂಡು ಬರುವದು. ಅಂಥ ಈ ಲೋಭವನ್ನು ಜಗನ್ನಿಯಾಮಕನ ಸಹಾಯದಿಂದ ಕಿತ್ತು ಬಿಸಾಡಲು ಪುರಂದರ ದಾಸರು ಪ್ರಯತ್ನಿಸಿದರು. ಯಾಕೆ? ಕಿತ್ತೇ ಬಿಸಾಡಿದರು. ತನ್ನಲ್ಲಿದ್ದ ಲೋಭವನ್ನು ನಿರ್ಮೂಲಮಾಡಿದರು. ಆದರೆ ಲೋಭವು ಭಯಪಡಲಿಲ್ಲ. ಅದಕ್ಕೆ ಸರಿಯಾದ ಪ್ರತೀಕಾರವನ್ನೇ ಮಾಡಿತು. ಲೋಭವು ಇತರರ ಆಶ್ರಯಪಡೆದು ಪುರಂದರದಾಸರಿಗೆ ಭಿಕ್ಷೆಯೇ ಸಿಗದಂತೆ ಮಾಡಿತು. ನಾನಾರೀತಿಯಲ್ಲಿ ಅವರನ್ನು ತೊಂದರೆಗೀಡುಮಾಡಿತು. ಇದೀಗ ಲೋಭದ ಮಹತ್ವ. ಚರಿತ್ರೆಯ ಪುಟಗಳನ್ನು ತಿರುವಿದರೆ ಲೋಭದಿಂದ ಮುಕ್ತರಾದವರನ್ನು ಕಾಣುವುದು ಅಪರೂಪ. ಈ ಲೋಭವೇ ರಾಷ್ಟ್ರರಾಷ್ಟ್ರಗಳ ಕೈಯಲ್ಲಿ ಶಸ್ತ್ರವನ್ನು ಹಿಡಿಸುವದು. ಲೋಭವೇ ಊಹಿಸಲಸದಳವಾದ ಕ್ರೂರ ಕೃತ್ಯಗಳನ್ನು ಮಾಡಿಸುವದು. ಈ ಲೋಭವೇ ಜೀವನವನ್ನು ತೃಣಪ್ರಾಯವಾಗಿ ಮಾಡಿ ನರೆಹೊರೆಯವರ, ಬಂಧು ಭಗಿನಿಯರ, ಯಾಕೆ? ಒಡ ಹುಟ್ಟಿದವರ ವಿನಾಶಕ್ಕೆ ಕಾರಣವಾಗುವದು. ಲೋಭದ ಮಹಿಮೆಯಿಂದಾಗಿಯೇ ಜಪಾನವು ಚೀನಾದ ಮೇಲೆ ಕೈಯಿಟ್ಟಿದೆ. ಜರ್ಮನಿಯು ಈ ಲೋಭದಿಂದಾಗಿಯೇ ಜೀವಹಿಡಿದು ನಿಂತಿದೆ. ರಷ್ಯಾದ ಆಕ್ರಮಣವಾದರೂ ಈ ಲೋಭದ ಪ್ರಕೃತಿಯಲ್ಲದೆ ಬೇರಿಲ್ಲ. ಸಣ್ಣ ಪುಟ್ಟ ರಾಷ್ಟ್ರಗಳನ್ನು ಈ ಲೋಭದಿಂದಾಗಿ ಪ್ರಬಲ ರಾಷ್ಟ್ರಗಳು ಕಬಳಿಸುತ್ತಿರುವಾಗ ಅಬಲ ರಾಷ್ಟ್ರಗಳ ಸಹಾಯಕ್ಕೆ ಬರುವೆನೆಂದು ಧೈರ್ಯ ಹೇಳಿ ತಾಟಸ್ಥ್ಯವನ್ನು ವಹಿಸಿ ಕೂಡುವ ಸಾಮ್ರಾಜ್ಯವಾದಿಯ ವರ್ತನೆಯಾದರೂ ಲೋಭದ ಆಟವೇ. ಇದು ಅಂತರ ರಾಷ್ಟ್ರೀಯ ವಿಚಾರದಲ್ಲಿ ಲೋಭದ ಕ್ರೀಡನವಾಯಿತು. ನಮ್ಮ ಮಾತೃಭೂಮಿಯಲ್ಲಿ ಲೋಭವು ಹೇಗೆ ವಿರಾಜಿಸುತ್ತಿದೆಯೆಂಬುದನ್ನು ನೋಡಿದರೆ ತನ್ನ ಪಕ್ಷವೇ ಇಲ್ಲಿ ಮುಸ್ಲಿಮರನ್ನು ಪ್ರತಿನಿಧಿಸುವ ಪ್ರಧಾನ ಸಂಸ್ಥೆಯೆಂದು ಘೋಷಿಸುವ ಜಿನ್ನಾರವರ ಆರ್ತನಾದವಾದರೂ ಲೋಭತ್ವದ ಲಕ್ಷಣ. ಇತ್ತ ಕಾಂಗ್ರೆಸಿನಲ್ಲಿ ಅಧಿಕಾರ ಪೀಠಕ್ಕೇರಬೇಕೆಂದು ಕೃತ್ರಿಮಗಳನ್ನು ನಡೆಸಿ ಕಾರ್ಯಕುಶಲರನ್ನು ಪೀಠದಿಂದ ಉರುಳಿಸಲು ಪ್ರಯತ್ನಿಸುವ ಭಾವೀ ಮುಖಂಡರ ವರ್ತನೆಯಾದರೂ ಲೋಭ ಪ್ರೇರಿತವಾದ್ದೇ. ಕಾಂಗ್ರೆಸಿನ ಮುಂದಿನ ನೀತಿಯು ಸರಿಯಿಲ್ಲ; ಆದ್ದರಿಂದ ತೀವ್ರಗಾಮಿಗಳ ಪಡೆಯನ್ನು ಸ್ಥಾಪಿಸಿ ತೀವ್ರವಾಗಿ ಸ್ವರಾಜ್ಯವನ್ನು ಗಳಿಸಿ ಶಹಬಾಸ್ ಗಿರಿಯನ್ನು ಪಡೆಯಬೇಕೆಂದು ಪ್ರಯತ್ನಿಸುವದಾದರೂ ಲೋಭದ ಕೈವಾಡದಿಂದಲೇ ಅನ್ನಬಹುದು. ಒಟ್ಟಾರೆ ಈ ಲೋಭವು ಅಂತರರಾಷ್ಟ್ರೀಯ ರಂಗದಲ್ಲೇ ಅಲ್ಲ, ನಮ್ಮ ಮಾತೃಭೂಮಿಯಲ್ಲೂ ಸ್ಥಾನಗಳಿಸಿಕೊಂಡಿದೆಯೆಂಬುದು ವ್ಯಕ್ತವಾಗುತ್ತದೆ. ಅದೇ ಲೋಭವು ನಮ್ಮ ಪ್ರಾಂತದಲ್ಲಿ ಹೇಗೆ ಕಾರ್ಯ ಮಾಡುತ್ತಿದೆಯೆಂದು ಪರಿಶೀಲಿಸಿದರೆ ಲೋಭದ ಕರಾಳ ನಗ್ನಸ್ವರೂಪವೇ ಇಲ್ಲಿ ಕಂಡು ಬರುತ್ತದೆ. ಲೋಭದ ಅಂತಸ್ಥು ಬೆಳೆದೂ, ಬೆಳೆದೂ ಈಗ ಹೊಸರೂಪವನ್ನು ತಾಳಿದೆ. ಈಗ ಅದನ್ನು ಲೋಭವೆಂದು ಕರೆಯೋಣವೇ? ಅದು ಅಸಮಂಜಸ! ಮತ್ಸರವೆಂದೆನ್ನೋಣವೇ? ಅಲ್ಲಿ ಲೋಭದ ಚಿಹ್ನೆಯಿದೆ. ಅಂತು ಸ್ಥಿತಿಯು ಇವೆರಡರಿಂದ ಸಮ್ಮಿಶ್ರಿತವಾಗಿದೆ. ಒಬ್ಬನು ಸ್ವಪ್ರಯತ್ನದಿಂದಲೋ ಯಾ ದೈವಪ್ರೇರಣೆಯಿಂದಲೋ ಒಂದು ಅಧಿಕಾರಸ್ಥಾನ ಪಡೆದನೆನ್ನುವ. ಆದಾಗಲೇ ಬೇರೆ ಸಂಗಾತಿಗಳಲ್ಲಿ ಲೋಭವು ಉದ್ಭವವಾಯಿತು. ಪರಸ್ಪರ ಚಲನವಲನಗಳಲ್ಲಿ ವೈಶಿಷ್ಟ್ಯ ಬರಲಾರಂಭವಾಯಿತು. ಆತನು ಇನ್ನೊಂದು ಹೆಜ್ಜೆ ಮುಂದಿಟ್ಟನೆಂದರೆ ಲೋಭವು ಮತ್ಸರವಾಗಿ ಪರಿಣಮಿಸಿತು. ಕೃತ್ರಿಮದಿಂದ ಆತನನ್ನು ಕೆಳಗುರುಳಿಸುವ ಪ್ರತೀಕಾರ ಬುದ್ಧಿಯು ಹೊಳೆಯಿತು. ಪರಸ್ಪರ ಸ್ನೇಹಬಾಂಧವ್ಯವು ದೂರವಾಗತೊಡಗಿತು. ಇನ್ನೊಂದು ಹೆಜ್ಜೆ ಮುಂದೆ ಅಂಗರೆ ತೀರಿತು. ಅಪಪ್ರಚಾರ ಪ್ರಾರಂಭವಾಯಿತು. ಪತ್ರಿಕೆಗಳ ಪುಟ ಪುಟಗಳೇ ಅವುಗಳಿಗೆ ಮೀಸಲು. ಕೃತ್ರಿಮ ಕಾರ್ಯಕಲಾಪಗಳು ತಮ್ಮ ಪರಮಾವಧಿಯನ್ನು ತಲುಪುವವು. ಇದೀಗ ನಮ್ಮ ಈ ಪ್ರಾಂತದಲ್ಲಿ ಲೋಭವು ಮಾಡುತ್ತಿರುವ ಕಾರ್ಯ. ಕೊಡಗುನಾಡು ಹುಲುಸಾದ ಪ್ರದೇಶವೆಂದೋ ಅಥವಾ ಇನ್ನಾವುದಾದರೂ ಕಾರಣದಿಂದಲೋ ಲೋಭವೆಂಬ ವೃಕ್ಷವು ಇಲ್ಲಿ ಹುಲುಸಾಗಿ ಬೆಳೆದು ಶಾಖೋಪಶಾಖೆಗಳಿಂದೊಡಗೂಡಿ ವಿವಿಧ ರೀತಿಯ ಫಲಗಳನ್ನು ಕೊಡುತ್ತಿದೆ.

ಕಡೆಯದಾಗಿ ಲೋಭದ ವೈಶಿಷ್ಟ್ಯವೊಂದನ್ನು ಹೇಳಬಯಸುತ್ತೇನೆ. ಮೇಲಿನ ಪುರಂದರದಾಸರ ನಿದರ್ಶನದಿಂದ ಲೋಭವನ್ನು ಆಶ್ರಯಿಸಿದವರಿಗೇನೇ ಜೀವನವು ಸುಗಮವಾಗುವದೆಂಬುದು ತಿಳಿದು ಬರುತ್ತದೆ. ಅವರ ಲೋಭವು ಎರಡು ಬಾಯಿಯಿರುವ ಕತ್ತಿಯಂತೆ! ಆಶ್ರಯಿಸಿದವನಿಗೂ, ಆಶ್ರಯಿಸದವನಿಗೂ ಅದರ ಉಪದ್ರ ತಪ್ಪಿದ್ದಲ್ಲ. ಉದಾಹರಣೆಗೆ ಸರ್ವಜ್ಞನ ವಚನವನ್ನು ಹೇಳುತ್ತೇನೆ. 'ಲೋಭದಿಂ ಕೌರವನು | ಲಾಭವೇನಿದಹನೆ? ನಾಭಿಯಿಂ ಕೆಳಗೆ ಎರಡೂರ ಕೊಂಬಾಗ | ಲಾಭವೆಂದಹುದೆ? ಸರ್ವಜ್ಞ || ಆದ್ದರಿಂದ ಲೋಭವನ್ನು ಆಶ್ರಯಿಸಿ ಕೌರವನು ಸುಖಿಯಾಗಿಲ್ಲ. ಆಶ್ರಯಿಸದೆಯೂ ಅನೇಕಾನೇಕ ಮಹಾ ಪ್ರಭೃತಿಗಳು ಕಷ್ಟಕ್ಕೀಡಾಗಿರುವರು. ಆದ್ದರಿಂದ ಲೋಭದ ಮಹಿಮೆಯು ಅರಿಯಲಸದಳವಾದ್ದು. ವಿಚಾರಕ್ಕೆ ನಿಲುಕದ್ದು.

'ಕೊಡಗು' ಪತ್ರಿಕೆಯ ಚಂದಾದಾರರೇ, ದಯವಿಟ್ಟು ತಮ್ಮ ಪತ್ರಿಕೆಯ ಬಾಕ್ಕಿ ಚಂದಾ ಹಣವನ್ನು ವಡನೆ ಕಳುಹಿಸಿ ಕೊಡಿರಿ.

ಅಹಿಂಸಾ ಕ್ರಾಂತಿ.

ಆಚಾರ್ಯ ಕೃಪಾಲಿನಿಯವರ ಲೇಖನಾಧಾರದಿಂದ.

ಲೇಖಾಂಕ ೨.

ಹಿಂಸೆಯಿಂದ ಹಿಂಸೆಯನ್ನು ಜಯಿಸುವದು ಅಸಾಧ್ಯವೆಂದು ಸಿದ್ಧಾಂತವಿದೆ. ಹಿಂಸೆಯು ಮಾನವನನ್ನು ಕೆಳಅಂತಸ್ತಿಗೆ ತರುವದೆಂದು ಸ್ವಯಂವ್ಯಕ್ತವಾಗಿದೆ. ಹಿಂಸೆಯಿಂದ ಮಾನವ ಕೋಟಿಗೆ ಸುಖವಾಗಲಾರದೆಂಬುದು ಖಚಿತವಾಗಿದೆ.

● ○ ●

ಸತ್ಯಾಗ್ರಹಿಗೆ ಜನರಲ್ಲಿ ಯಾ ವ್ಯಕ್ತಿಯಲ್ಲಿ ದ್ವೇಷವಿಲ್ಲ. ಆತನ ಜಗಳವು ಸಂಸ್ಥೆಗಳಲ್ಲಿ; ಯೋಜನೆಗಳಲ್ಲಿ ಆಗಿದೆ. ಜನರಿಂದು ಎಷ್ಟರ ಮಟ್ಟಿಗೆ ತಪ್ಪು ಯೋಜನೆಗಳನ್ನು ಮಾಡಿ ಕಾರ್ಯಪ್ರವರ್ತರಾಗುವರು ಅಷ್ಟರ ಮಟ್ಟಿಗೆ ಆ ಯೋಜನೆಯನ್ನೂ, ಜನರನ್ನೂ ಆತನು ವಿರೋಧಿಸುವನು. ಜಗಳವು ವ್ಯಕ್ತಿಗತವಾಗಿರಲಾರದು. ಆತನು ಹೊತ್ತ ಜವಾಬ್ದಾರಿಯ ದೃಷ್ಟಿಯಿಂದ ಜಗಳವು ನಡೆಯುವದು. ಅಧಿಕಾರ ವಹಿಸಿ ಜನಾಪಕಾರಕ ಯೋಜನೆಗಳನ್ನು ಜಾರಿಗೆ ತರಲೆತ್ನಿಸುವ ಅಧಿಕಾರಿಯಾದರೂ ಈ ಯೋಜನೆಯ ಫಲವನ್ನು ಅನುಭವಿಸಬೇಕೆಂಬುದನ್ನು ಸತ್ಯಾಗ್ರಹಿಯು ಬಲ್ಲನು. ಆದ್ದರಿಂದ ವ್ಯಕ್ತಿಗಳ ಮೇಲೆ ಸತ್ಯಾಗ್ರಹಿಯು ದ್ವೇಷಮಾಡನು.

ಅನಾದಿಯಿಂದ ನಡೆದು ಬಂದಂತೆಯೇ ಕೆಡುಕನ್ನು ಅಹಿಂಸಾರೀತಿಯಿಂದ ನಿರೋಧಿಸುವದು, ನೈತಿಕ ಹಾಗೂ ಮಾನಸಿಕ ಮಹಾ ತತ್ವವೆಂಬುದು ಸಿದ್ಧಾಂತವಾಗಿದೆ. ಆದರೆ ಅದು ತನ್ನ ಹಾಗೂ ತನ್ನ ನಿರ್ಮಾಪಕನ ಬಗ್ಗೆ ವ್ಯಕ್ತಿಯ ಕರ್ತವ್ಯವಾಗಿದೆ. ಅದು ಸಾಮಾಜಿಕ ಕರ್ತವ್ಯವನ್ನು ವ್ಯವಸ್ಥೆಗೊಳಿಸಲಾರದು. ಸತ್ಯಾಗ್ರಹವು ವ್ಯಕ್ತಿಯ ಕರ್ತವ್ಯವೇ ಅಲ್ಲ; ಸಾಮಾಜಿಕ ಕರ್ತವ್ಯವೂ ಹೌದು. ಪುರಾತನ ಕಾಲದ ಆ ಅಸಹಕಾರವು ವ್ಯಕ್ತಿಯ ಹಕ್ಕನ್ನು ಸ್ಥಾಪಿಸುವ ಕಾರ್ಯವಾಗಿತ್ತು. ಸತ್ಯಾಗ್ರಹವು ಇಷ್ಟೇ ಅಲ್ಲ; ಅದು ಒಂದು ಶಿಸ್ತಿನ ಸಾಮಾಜಿಕ ವರ್ತನೆಯಾಗಿದೆ. ಅದು ವ್ಯಕ್ತಿಯೊಬ್ಬನ ಹಕ್ಕನ್ನು ಸ್ಥಾಪಿಸುವ ಸಾಧನವೇ ಅಲ್ಲ; ಸಾಮೂಹಿಕ ಕಾರ್ಯವನ್ನು ನಡೆಸಿ ಯಾವುದೊಂದು ಯೋಜನೆಯನ್ನೂ ಫಲಕಾರಿಯಾಗದಂತೆ ಮಾಡುವ ಸಾಮರ್ಥ್ಯವನ್ನು ಹೊಂದಿದ ನವೀನ ವಿಧಾನ. ಯೋಜನೆಯನ್ನು ತಿರಸ್ಕರಿಸುವಂಥಾ ಕಾರ್ಯಕ್ಕೆ ವ್ಯಕ್ತಿಯ ಹಕ್ಕಾಗಿರುವ ಪ್ರಯುಕ್ತ ಅದು ಹಿಂಸೆಯಾಗಿ ಪರಿಣಮಿಸದು. ಬೇರೊಂದು ವ್ಯಕ್ತಿಯೊಡನೆ ದ್ವೇಷ, ಜಗಳವಿಲ್ಲದೆ ಪಕ್ಷ ಒಬ್ಬ ವ್ಯಕ್ತಿಯು ತನ್ನ ವ್ಯಕ್ತಿಗತ ಕರ್ತವ್ಯವನ್ನು ಮಾಡಲಾರನು. ಇವು ಸಾಮೂಹಿಕ ಜೀವನದಲ್ಲೂ ಸರಿಹೋಗುತ್ತವೆ. ಈ ಸತ್ಯಾಗ್ರಹ ಸಮರವು ಅಹಿಂಸೆ, ಸತ್ಯ, ವ್ಯಕ್ತಿದ್ವೇಷವಿಲ್ಲದೆ ನಡೆಯೋಣವಾದ್ದರಿಂದ ರಿಂದ ವಿರೋಧಿಯು ವಿರೋಧಿಸುವವರ ವಿಚಾರ ಮಾಡು ಹೇಳುವದು ಸಾಧ್ಯವಿಲ್ಲ. ಅತ್ಯಾಚಾರಗಳಿಗೆ ಅಲ್ಲಿ ಎಡೆಯಿಲ್ಲ. ವಿರೋಧಿಯ ಮನಸ್ಸನ್ನು ಕರಗಿಸಿ ಜಯಿಸುವ ವಿಧಾನ ಇದಾದ್ದರಿಂದಲೂ, ವಿರೋಧಿಯನ್ನು ಹಿಂಸಿಸದೆ ತಾನೇ ಹಿಂಸೆಗೊಳಗಾಗುವದೇ ಸತ್ಯಾಗ್ರಹದ ಮಹಾತತ್ವವಾದ್ದರಿಂದಲೂ ಇಲ್ಲಿ ವಿರೋಧಿ ಹಾಗೂ ವಿರೋಧಿಸಲ್ಪಡುವವರ ಮನಃಕಷಾಯಕ್ಕೆ ಎಡೆ ಇಲ್ಲ.

ಪುರಾತನ ಕಾಲದ ಆ ಅಸಹಕಾರದಲ್ಲಿ ವಿರೋಧಿಯ ಮನಸ್ಸನ್ನು ಪಲ್ಲಟಗೊಳಿಸಿ ಸುಧಾರಿಸುವನನ್ನಾಗಿ ಮಾಡುವದು ರೂಢಿಯಿತ್ತು. **ಇಂದಿನ ಸತ್ಯಾಗ್ರಹದಲ್ಲಾದರೂ ಈ ತತ್ವವೇ ಮೂರ್ತಿಸ್ವರೂಪವಾಗಿದೆ. ಸಾಮೂಹಿಕ ಜನತೆಯ ಮನಸ್ಸು** ಯಾ ಅಧಿಕಾರಿವರ್ಗದ ಮನವು ಯಾವಾಗಲೂ ಯಂತ್ರದೋಪಾದಿಯಿರುವ ಪ್ರಯುಕ್ತ ವ್ಯಕ್ತಿಗಳ ಮನದಲ್ಲಾಗುವಷ್ಟು ಶೀಘ್ರವಲ್ಲಿ ಅವರಲ್ಲಿ ಬದಲಾವಣೆಯಾಗದು. ಮಾನಸಿಕ ಪ್ರಭಾವದಿಂದಾಗಲೀ, ಸಮಂಜಸ ಕಾರಣದಿಂದಾಗಲೀ ಸಾಮೂಹಿಕ ಮನಸ್ಸು ವ್ಯಕ್ತಿಗತ ಮನಸ್ಸಿನಷ್ಟು ಬೇಗ ಪರಿವರ್ತನೆ ಹೊಂದಲಾರದು. ಸಾಮೂಹಿಕ ಜೀವನವು ಹೆಮ್ಮೆ, ಸಿಟ್ಟು, ಮತ್ಸರ, ಪ್ರತೀಕಾರ ಇವುಗಳಿಂದಾಗಿ ವ್ಯಕ್ತಿಯ ಮನಸಿಗಿಂಥ ಬೇಗ ಪರಿವರ್ತನೆ ಹೊಂದುವದು. ಸತ್ಯಾಗ್ರಹವು ಸಾಮೂಹಿಕ ಮನಸ್ಸನ್ನು ಬೇಗ ಪಲ್ಲಟಗೊಳಿಸಲಾರದು. ಯಾಕೆಂದರೆ ಸಾಮೂಹಿಕ ಮನಸ್ಸು ಯಂತ್ರದೋಪಾದಿ ನಿರ್ದಿಷ್ಟ ಕಾರ್ಯಪ್ರವರ್ತವಾಗಿರುವ ಪ್ರಯುಕ್ತ ಸತ್ಯಾಗ್ರಹದ ನೈತಿಕ ಬೋಧನೆಯೂ, ಮಾನಸಿಕ ಅಪೀಲೂ ಅವರಲ್ಲಿ ಶೀಘ್ರವಾದ ಪರಿವರ್ತನೆಯನ್ನು ಮಾಡಲಾರದು. ಆದರೆ ಎಂಥಾ ನಿರ್ದಿಷ್ಟ ಧ್ಯೇಯದ ವ್ಯಕ್ತಿಯೇ ಇರಲಿ, ಸತ್ಯಾಗ್ರಹದ ಕಾರ್ಯಕ್ರಮವನ್ನು ಅನುಸರಿಸಿದರೆ ಕೆಲವು ಸಮಯದಲ್ಲಿ ಆತನ ಪರಿವರ್ತನೆಯಾದದ್ದು ನಿದರ್ಶನಕ್ಕೆ ಬರುವದು. ಅಲ್ಲದೆ ಸತ್ಯಾಗ್ರಹದ ಮಹಾತ್ಮರ ನಿರೋಧಿಸುವ ವಿರೋಧಿಯದೆಯು ಹಿಂಸಾಮಯನಾಗಿದ್ದರೂ ತಮ್ಮನ್ನು ವಿರೋಧಿಸುವವರ ಅಹಿಂಸಾ ತತ್ವಾವಲಂಬಿಗಳಾಗಿರುವದರಿಂದ ಕ್ರಮೇಣ ಅವರಲ್ಲಿಯೂ ಅಹಿಂಸೆಯ ಪ್ರಭಾವವು ಕಂಡು ಬರುವದು. ಸಿಟ್ಟನ್ನು ಸಿಟ್ಟಿನಿಂದ ಎದುರಿಸಿದರೆ ಅದು ಮೀರಿ ಮಿತಿ ಹೋಗುವದು. ಆದರೆ ಸಿಟ್ಟನ್ನು ಶಾಂತ ರೀತಿಯಿಂದ ಎದುರಿಸಿದರೆ ಸಿಟ್ಟಿಗೆ ಬೇಕಾಗುವ ವಸ್ತು ಈ ಶಾಂತಸ್ವಭಾವದಲ್ಲಿ ಸಿಕ್ಕದ್ದರಿಂದ ಅದು ಶಮನವಾಗಬೇಕಾಗುವದು. ಸಿಟ್ಟು ಬಂದು ಒಬ್ಬನು ಹೊಡೆಯಬಹುದು. ಅವನನ್ನು ಪ್ರತಿಭಟಿಸುವವನು ಇಲ್ಲದಿದ್ದರೆ ಆತನು ಏನು ಮಾಡ್ಯಾನು? ಸಿಟ್ಟು ತಾನಾಗಿಯೇ ಶಮನವಾಗಬೇಕಾಗುವದು. ಒಬ್ಬ ಸತ್ಯಾಗ್ರಹಿಯಂತೆ ಒಂದು ಸತ್ಯಾಗ್ರಹಿಗಳ ತಂಡವು ಅಹಿಂಸಾ, ಸತ್ಯ, ಹಾಗೂ ಪರಿಶುದ್ಧತೆಯಿಂದ ಕೂಡಿರಲಾರದು. ಆದ್ದರಿಂದಲೇ ಸಾಮೂಹಿಕ ಸತ್ಯಾಗ್ರಹದಲ್ಲಿ ಆಗಾಗ್ಯೆ ಹಿಂಸೆ ಮೊದಲಾದುವು ಕಂಡುಬರುವದು.

ಸತ್ಯಾಗ್ರಹವು ಅಪ್ರಸ್ತುತವಾದ್ದು. ಅದರಿಂದ ಅಮೋಘ ಕಾರ್ಯಗಳನ್ನು ಸಾಧಿಸುವದು ಅಸಾಧ್ಯವೆಂದು ಹೇಳುವವರು ಸತ್ಯಾಗ್ರಹದ ತತ್ವವನ್ನು ಕೂಲಂಕುಷ ವಿಚಾರಿಸಿಲ್ಲವೆಂದು ವ್ಯಕ್ತವಾಗುತ್ತದೆ. ಚರಿತ್ರೆಯಲ್ಲಿ ಸತ್ಯಾಗ್ರಹದ ಕೆಲವು ನಿದರ್ಶನಗಳು ಕಂಡು ಬಂದರೂ ಸತ್ಯಾಗ್ರಹವು ಚರಿತ್ರೆಗೇ ಹೊಸದೆಂದು ಹೇಳಬಹುದು. ಅದು ಕೈಗಾರಿಕಾ ಮುಷ್ಕರಗಳಲ್ಲಿ ಒಂದು ವಿಧದಿಂದ ಉಪಯೋಗಿಸಲ್ಪಡುತ್ತಿತ್ತು. ಕ್ರಮೇಣ ಸತ್ಯಾಗ್ರಹದ ತತ್ವಗಳು ಜಯವನ್ನು ಪಡೆದು ವಿಶಾಲಕ್ಷೇತ್ರವನ್ನು ಆವರಿಸಹೊರಟಿವೆ. ಇಂದು ಅಂತರ ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಶಾಂತಿಯುಂಟಾಗಬೇಕಾದರೆ ಯಾ, ಯುದ್ಧವು ಕೊನೆಗೊಳ್ಳಬೇಕಾದರೆ ಆ ಯುದ್ಧ ಪ್ರೇರಿತ ಯುದ್ಧ ಸಾಮುಗ್ರಿಗಳಿಂದಲ್ಲ; ಅದು ಅಹಿಂಸೆಯಿಂದ ಅಥವ ಸತ್ಯಾಗ್ರಹದಿಂದ ಎಂಬುದು ಮನವರಿಕೆಯಾಗುತ್ತಿದೆ. ಇಂದು ಅನೇಕ ಸಣ್ಣ ರಾಷ್ಟ್ರಗಳು ಯುದ್ಧದಿಂದ ನಿರ್ಲಿಪ್ತರಾಗಿರಲು ಪ್ರಯತ್ನಿಸುತ್ತಿವೆ. ಆದರೂ ಅವು ಯುದ್ಧ ಸಾಮುಗ್ರಿಗಳನ್ನು ಶೇಖರಿಸಿಡುತ್ತಿವೆ. ಯಾಕೆಂದರೆ ಯುದ್ಧವನ್ನು ನಿಲ್ಲಿಸುವ ಅಥವ ಯುದ್ಧದಿಂದ ದೂರ ನಿಲ್ಲುವ ಬೇರೆ ಉಪಾಯಗಳು ಇಂದು ಅವಕ್ಕೆ ಬಗೆಹರಿದಿಲ್ಲ. ಈ ಯುದ್ಧ ತಯಾರಿಯಿಂದ, ಅಥವಾ ತಮ್ಮ ಸಂಕುಚಿತ ಸೈನ್ಯಬಲದಿಂದ ಜಯವು ಅಸಾಧ್ಯವೆಂಬುದು ಅವಕ್ಕೆ ತಿಳಿದಿದ್ದರೂ ಅವು ಸೈನ್ಯ ತಯಾರಿಗೆ ಹಾತೊರೆಯುತ್ತಿವೆ. ಈ ರೀತಿಯಾಗಿ ಹಿಂಸೆಯು ಸಾರ್ವತ್ರಿಕವಾಗಿ ಹರಡಿ ರಾಷ್ಟ್ರ ರಾಷ್ಟ್ರಗಳ ಕಣ್ಣು ಕಟ್ಟಿದಂತೆ ಮಾಡಿದೆ. ಈ ಹಿಂಸಾಬಲೆಯನ್ನು ತುಂಡರಿಸಬೇಕಾದರೆ ಹಿಂಸಾಯುತವಲ್ಲದ ಬೇರೆ ವಿಧಾನಗಳನ್ನು ಕಂಡು ಹಿಡಿಯುವದು ಅತ್ಯಾವಶ್ಯಕ. ಇಂದು ಸಾರ್ವಜನಿಕ ಜೀವನದಲ್ಲಿ ಬುದ್ಧ, ಯಾ ಕ್ರಿಸ್ತ ಇವರ ವಾಕ್ಯಗಳು ಕೇವಲ ಮತಸಂಬಂಧವಾದವೆಂದು ಪರಿಗಣಿಸಲ್ಪಡುತ್ತಿವೆ. ದ್ವೇಷದಿಂದ ದ್ವೇಷವನ್ನು ಜಯಿಸುವದು ಅಸಾಧ್ಯ. ದ್ವೇಷವನ್ನು ಜಯಿಸಲು ಪ್ರೀತಿಯು ಬೇಕು. ಹಿಂಸೆಯನ್ನು ಹಿಂಸೆಯಿಂದ ಜಯಿಸಲೆತ್ನಿಸುವದು ಅಸಂಭವ. ಹಿಂಸೆಯನ್ನು ಅಹಿಂಸೆಯಿಂದಲೇ ಜಯಿಸಬೇಕು.

ಈ ವಿಚಾರಗಳನ್ನು ಚೆನ್ನಾಗಿ ಮನನ ಮಾಡಿಯೇ ಪೂಜ್ಯ ಗಾಂಧೀಜಿಯವರು ಭೇದದ ಮಹಾ ಧುರೀಣರ ಸಹಾಯದಿಂದ ಇಡೀ ಜಗತ್ತಿನ ಶಾಂತಿಗೇ ಸಹಕಾರಿಯಾಗುವಂಥಾ ಒಂದು ನವೀನ ವಿಧಾನವನ್ನು ಕಂಡು ಹಿಡಿದಿರುವರು. ಮಾನವ ಜನಾಂಗವನ್ನು ವ್ಯಕ್ತಿಗತ ಜೀವನದಲ್ಲಿ ಸತ್ಯ, ಅಹಿಂಸೆ ಇವು ಹೇಗೆ ಸುಗಮವಾದ ಹಾದಿಯಲ್ಲಿ ಮುನ್ನಡೆಸಿದವೋ ಅದೇ ರೀತಿ ಅಂತರ್ಜಾತೀಯ ಅಥವ ಅಂತರರಾಷ್ಟ್ರೀಯ ಸಂಬಂಧದಲ್ಲಿಯೂ ಈ ತತ್ವಗಳು ಮಾರ್ಗದರ್ಶಿಗಳಾಗಬೇಕು. ವ್ಯಕ್ತಿಯು ಸಮಸ್ಯೆಯನ್ನು ವ್ಯಕ್ತಿಗತ ಹಿಂಸೆಯಿಂದ ಸಾಧಿಸಿಕೊಳ್ಳುವ ಕಾಲ ಅದೊಂದಿತ್ತು. ಸುಧಾರಕರೂ, ಮತಪ್ರವಾದಿಗಳೂ ಈ ಹಿಂಸೆಯನ್ನು ವ್ಯವಸ್ಥಿತ ರೀತಿಗೆ ತರಲು ಪ್ರಯತ್ನಿಸಿದರು. ಆದ್ದರಿಂದಲೇ ಅವರು ಒಬ್ಬನ ಒಂದು ಕಣ್ಣನ್ನು ನಾಶಮಾಡಿದವನ ಒಂದು ಕಣ್ಣನ್ನು ತೆಗೆದು ಹಾಕಬೇಕು. ಒಂದು ಹಲ್ಲು ಕಿತ್ತವನ ಒಂದು ಹಲ್ಲನ್ನು ಕೀಳಬೇಕು ಎಂದರು. ಯಾವ ತಪ್ಪನ್ನು ಮಾಡಿದನೋ ಅದನ್ನೆ ಪುನಃ ಮಾಡಿದವನ ಮೇಲೆ ಶಿಕ್ಷೆಯ ರೂಪದಲ್ಲಿ ವಿಧಿಸುವ ಕಾನೂನುಗಳನ್ನು ಮಾಡಿದರು. ಈ ರೀತಿಯ ಕಾನೂನು ನಡೆದುದ್ದರೆ ಅವನಿಗೆ ವಿಪರೀತಕ್ಕಿಟ್ಟುಕೊಳ್ಳುವನೆಂದು ಅವರಿಗೆ ತಿಳಿದಿತ್ತು. ಮಾನವ ಜನಾಂಗವು ಕ್ರಮೇಣ ಮುಂದುವರಿದಂತೆ ಈ ಕಾನೂನು ತೃಪ್ತಿಕರವಾಗಿ ಕೆಲಸ ಮಾಡಲಾರದಾಯಿತು. ಆದ್ದರಿಂದ ಸುಧಾರಕರು ಹೊಸ ಕಾನೂನನ್ನು ಕಂಡು ಹಿಡಿಯಬೇಕಾಯಿತು. ಹೊಸ ಬೋಧನೆಯೇ ಸಹಕಾರ ಹಾಗೂ ಅಹಿಂಸೆಯ ಕಾನೂನು. ಇಂದು ಕಣ್ಣಿಗೆ ಕಣ್ಣನ್ನು ತೆಗೆಯುವ ಆ ಕಾನೂನನ್ನು ಯಾರಾದರೂ ಅನುಸರಿಸಿದರೆ ಅವನಿಗೆ ಇಂದಿನ ಕಾನೂನಿನನ್ವಯ ಕಠಿಣ ಶಿಕ್ಷೆಯಾಗುವದು. ಹಳೆಯ ಕಾನೂನು ಇಂದಿನ ಕಾನೂನಿಗೆ ಪೂರ್ತಿ ವಿರೋಧವಾಗಿರುವದು. ಇಬ್ಬರಲ್ಲಿ ದ್ವೇಷ ಬಂದು ಪರಸ್ಪರ ವೈರವು ಬಂದರೆ ದ್ವಂದ್ವ ಯುದ್ಧದ ಮೂಲಕ ಜಯಶಾಲಿಯಾದವನೇ ತಪ್ಪು ಮಾಡದವನೆಂದು ನಿರ್ಧರಿಸುವ ಕಾಲವೂ ಇತ್ತು. ಅಂದು ದ್ವಂದ್ವ ಯುದ್ಧಕ್ಕೆ ನಿಲ್ಲದವನನ್ನು ಹೇಡಿಯೆಂದೆನ್ನುತ್ತಿದ್ದರು. ಆದರೆ ಇಂದು ದ್ವಂದ್ವ ಯುದ್ಧಕ್ಕೆ ಕರೆವದೇ ತಪ್ಪು. ಅದಕ್ಕಾಗಿ ಶಿಕ್ಷೆ. ಹೀಗೆ ಯುದ್ಧಕ್ಕೆ ಕರೆಯುವವನನ್ನು ಮತಿಭ್ರಷ್ಟನೆಂದು ಪರಿಗಣಿಸಲಾಗುವದು. ಹೀಗೆ ಅನಾದಿಯಿಂದಲೂ ಹಿಂಸೆಯು ವ್ಯಕ್ತಿಜೀವನದಲ್ಲಿ ಮಾನವವ್ಯಕ್ತಿಗೆ ಸುಗಮ ಪಥವನ್ನು ತೋರಿಸಿಲ್ಲವೆಂಬುದು ತಿಳಿದು ಬರುತ್ತೆ.

ಸಾಮೂಹಿಕ ಜೀವನದಲ್ಲೂ ಹಿಂಸಾತ್ಮಕ ಇಚ್ಛಿತ ಕಾರ್ಯವನ್ನು ಸಾಧಿಸುವ ಯಾ ನಿಶ್ಚಿತ ಧ್ಯೇಯಗಳನ್ನು ಸಾಧಿಸುವ ಕಾರ್ಯದಲ್ಲಿ ಜಯಶಾಲಿಯಾಗಿಲ್ಲ. ಇಂದು ಹಿಂಸೆಯು ಮಾನವ ಜನಾಂಗವನ್ನು ಪ್ರಾಣಿಗಳ ಅಂತಸ್ತಿಗಿಳಿಸುವ ಸಾಧನವೆಂದು ಪರಿಗಣಿಸಲ್ಪಟ್ಟಿದೆ. ಹಿಂಸೆಯು ಮಾನವನನ್ನು ಸುಧಾರಿತನನ್ನಾಗಿ **ಮಾಡ**ಲಾರದು. ಸಮೂಹದ ಏಳ್ಗೆಯನ್ನು ಸಾಧಿಸದು. ಅದು ವ್ಯಕ್ತಿಯನ್ನೂ, **ಸಮೂ**ಹವನ್ನೂ ಕೆಳ ಅಂತಸ್ತಿಗೆ ತರುತ್ತದೆ. **ಆ**ದ್ದರಿಂದ ಸಮೂಹದಲ್ಲಿರುವ ನ್ಯೂನ**ತೆಗಳ**ನ್ನು ಯಾ ಜನಾಂಗದಲ್ಲಿರುವ **ಕುಂದು** ಕೊರತೆಗಳನ್ನು ನಿವಾರಿಸಲು **ಹಿಂಸೆಯು ಅರ್ಥಾತ್ ಯುದ್ಧವು ಸಮರ್ಥವಲ್ಲವೆಂ**ದು ಖಚಿತವಾಗಿ ತಿಳಿದು ಬಂದಿದೆ.

ಕೊಡಗು

ಜನವರಿ ತಾರೀಕು ೨೬ ನೇ ಶುಕ್ರವಾರ ೧೯೪೦

ಮುಂದೇನು?

ಅವ್ಯವಸ್ಥೆಯ ಬೀಡಾಗಿರುವ ಜಗತ್ತಿನ ವಿಹಂಗನೋಟವನ್ನೊಮ್ಮೆ ನೋಡಿದರೆ 'ಮುಂದೇನು?' ಎಂಬವೊಂದು ಪ್ರಶ್ನೆಯು ಉಪಸ್ಥಿತವಾಗುತ್ತದೆ. ಇದನ್ನೇ ವಿವೇಚಿಸುವ ಬಗ್ಗೆ ಜಗತ್ತಿನ ನಾನಾ ಕಾರ್ಯರಂಗಗಳ ಒಳನೋಟವನ್ನು ನೋಡುವದೊಳಿತು. ಅಂತರ ರಾಷ್ಟ್ರೀಯ ಆಂದೋಲನವನ್ನು ಪರಿಶೀಲಿಸಿದರೆ ದಿಗ್ವಿಜಯ ಯಾತ್ರೆಯನ್ನು ಕೈಕೊಂಡು ದುರ್ಬಲ ರಾಷ್ಟ್ರಗಳನ್ನು ಒಂದೊಂದಾಗಿ ಕಬಳಿಸುತ್ತಿದ್ದ ಹಿಟ್ಲರನು ಬ್ರಿಟನ್ ಫ್ರಾನ್ಸುಗಳ ಅರ್ಭಟವನ್ನು ಕೇಳಿ ಸ್ವಲ್ಪ ನಿಂತು ಯೋಚಿಸುವಂತೆ ಕಂಡು ಬರುತ್ತದೆ. ಜರ್ಮನಿಯ ಬಲಗೈ ಬಂಟನಂತಿದ್ದ ಇಟಲಿಯು ರಷ್ಯಾದ ಆಕ್ರಮಣವನ್ನು ಕಂಡು ಫಿನ್‌ಲೆಂಡಿಗೆ ಸಹಾಯ ಮಾಡಲು ಕೈ ನೀಡಿದೆ. ಇದು ಜರ್ಮನಿಯನ್ನು ಇನ್ನೂ ಯೋಚನೆಗೀಡುಮಾಡಿದೆ. ರಷ್ಯಾದ ಪಟ್ಟಾಳಿಕೆಗೆ ಆಹುತಿಯಾಗಿರುವ ಫಿನ್‌ಲೆಂಡಿಗೆ ಬ್ರಿಟನು ಫ್ರಾನ್ಸುಗಳು ಸಹಾಯ ಮಾಡಲುಪಕ್ರಮಿಸಿವೆ. ಹೀಗೆ ಫಿನ್‌ಲೆಂಡಿಗೆ ಸಹಾಯ ದೊರೆಯುವದರಿಂದ ಫಿನ್‌ಲೆಂಡೇ ಜಗತ್ತಿನ ಘೋರ ಯುದ್ಧದ ರಂಗವಾಗಬಹುದೆಂದೂ, ಹೀಗೆ ಘೋರ ಯುದ್ಧವಾದರೆ ತನ್ನ ದಿಗ್ವಿಜಯ ಯಾತ್ರೆಯು ಮುಗಿದುಹೋಗುವದೆಂದೂ ಚಿಂತಿಸಿ ಜರ್ಮನಿಯು ಫಿನ್‌ಲೆಂಡ್ ಕದನವು ಶೀಘ್ರ ಕೊನೆಗೊಳ್ಳಬೇಕೆಂದು ಆತುರಪಡುತ್ತಿದೆ. ಇತ್ತ ಜರ್ಮನಿಯ ನಾಝಿ ಅಧಿಕಾರವನ್ನು ರಸಾತಳಕ್ಕೊತ್ತುವೆವೆಂದು ಬ್ರಿಟನ್ ಫ್ರಾನ್ಸ್‌ಗಳು ಘೋಷಿಸುತ್ತಿವೆ. ಮಧ್ಯ ಯೂರೋಪದಲ್ಲಿ ಜರ್ಮನಿಯ ಅತ್ಯಾಚಾರದಿಂದಾಗಿ ಆವರಿಸಿರುವ ಅವ್ಯವಸ್ಥೆಗಳನ್ನು ನೀಗಿಸಿ ಯೂರೋಪಿನಲ್ಲಿ ನವಸ್ಫೂರ್ತಿಯನ್ನು ಹುಟ್ಟಿಸಿ, ಯೂರೋಪಿನ ಜನಾಂಗಗಳು ತಮ್ಮ ಕಷ್ಟಗಳನ್ನು ತಾಳ್ಮೆಯಿಂದ, ಸದ್ಭಾವದಿಂದ ಪರಿಹರಿಸುವಂತೆ ಮಾಡುವೆವೆಂದು ಬ್ರಿಟಿಷ್ ಮಹಾ ಪ್ರಧಾನರಾದ ಮಿ॥ ಚೇಂಬರ್ಲೇನರು ಸಾರುತ್ತಿದ್ದಾರೆ. ಅವರ ಒಂದು ವಿಚಾರ. ಪ್ರಜಾಪ್ರಭುತ್ವ ರಾಷ್ಟ್ರಗಳ ಇಚ್ಛೆಯಂತೆ ಜರ್ಮನಿಯು ಧ್ವಂಸವಾಗಿ ನಾಝಿ ಆಡಳಿತವು ಅಳಿದು ಹೋದ ಮೇಲಾದರೂ ಯೂರೋಪಿನಲ್ಲಿ ಶಾಂತತೆ ನೆಲಸೀತೆ ಎಂಬುವದನ್ನು ನೋಡಬೇಕಾಗಿದೆ. ಅವರೆ ಹಿಂದಿನ ಘಟನೆಗಳನ್ನು ನೋಡಿದರೆ ಈ ಪ್ರಶ್ನೆಗೆ ಸಮರ್ಪಕ ಉತ್ತರ ದೊರೆಯುವದಿಲ್ಲ. 1918ರ ಘೋರ ಯುದ್ಧದಲ್ಲಿ ಇದೇ ಮಿತ್ರ ರಾಷ್ಟ್ರಗಳು ಜರ್ಮನಿಯನ್ನು ಸೋಲಿಸಿದವು. ಜರ್ಮನಿಯನ್ನು ನುಚ್ಚು ನೂರಾಗಿ ಹರಿದು ಹಂಚಿದವು. ಆ ಬಳಿಕೇನಾಯಿತು? ಜನಾಂಗಗಳಲ್ಲಿ ಪರಸ್ಪರ ದ್ವೇಷ, ಸಂಶಯ ನಿವಾರಣೆಯಾಗಲಿಲ್ಲ. ಅನ್ಯ ರಾಷ್ಟ್ರಗಳನ್ನು ಆಕ್ರಮಿಸುವ ದುರಾಗ್ರಹವು ಅಳಿಯಲಿಲ್ಲ. ಚಿಕ್ಕ ಪುಟ್ಟ ರಾಷ್ಟ್ರಗಳಿಗೆ ದೊಡ್ಡ ರಾಷ್ಟ್ರಗಳ ಭಯ ತಪ್ಪಲಿಲ್ಲ. ಕಳೆದ ಪರಿಸ್ಥಿತಿಯೇ ಈ ರೀತಿ ಕಣ್ಣಿಗೆ ಕಟ್ಟುವಂತಿರುವಾಗ ಅಂದಾದ ಆ ಗುರಿಹುಮನೇ ಇನ್ನೂ ಆಗಲಿಕ್ಕಿಲ್ಲನೆಂಬುದಕ್ಕೆ ಆಧಾರವೇನು? ಈ ಯುದ್ಧದಲ್ಲಿ ವಿಜಯಿಯಾದವರು ಮಿತ್ರ ರಾಷ್ಟ್ರಗಳ ಮೇರೆ ಕೈಯೆತ್ತಲಾರರೆಂದು ಹೇಳಬಲ್ಲವರಾರು? ಯುದ್ಧದಲ್ಲಿ ಪರಾಜಿತರಾದರೂ ಪುನಃ ಹಿಂದಿನಂತೆ ಸೈನ್ಯ ಸಂಘಟನೆ ಮಾಡಿ ಜರ್ಮನಿಯು ಯುದ್ಧಕ್ಕೆ ನಿಲ್ಲದ್ದೆಂಬುವದಕ್ಕೆ ಖಾತರಿಯೇನು? ಆದ್ದರಿಂದ ಯುದ್ಧದಿಂದ ಜಯ ಪಡೆದು ಶಾಂತಿ ಸ್ಥಾಪನೆ ಮಾಡುವದೆಂಬುದು ಕೇವಲ ಕನಸಿನ ಮಾತು. ಶಾಂತಿಯು ನೆಲಸಬೇಕಾದರೆ ಮನುಷ್ಯ ಕುಲವನ್ನು ಶೋಷಣೆ ಮಾಡಬೇಕೆನ್ನುವ ಆ ದುರ್ಬುದ್ಧಿಯು ನಾಶವಾಗಬೇಕು. ಪಸ್ತು ಸ್ಥಿತಿ ಹೀಗಿರುವ ಪ್ರಯುಕ್ತ ಜಗತ್ತಿನ ಶಾಂತಿ ಸ್ಥಾಪನೆಯು ಯುದ್ಧದ ಜಯದಿಂದಾಗದು. ನಾಝಿ ತತ್ವವನ್ನು ಮೂಲೆಗೊತ್ತಿ ಶಾಂತಿ ಸ್ಥಾಪಕರೆಂಬ ಬಿರುದನ್ನು ಪಡೆಯುವೆವೆಂಬ ಮಹಾ ಪ್ರಧಾನರ ಮಾತಾದರೂ ಕನವರಿಕೆಯಾಗಿದೆ. ಶಾಂತಿಗೆ ಯುದ್ಧವು ಪ್ರತಿಕೂಲವಾದುದು. ಅದು ದ್ವೇಷಾಸೂಯೆಗಳನ್ನು ಹೆಚ್ಚಿಸುವಂಥಾದ್ದು. ಪ್ರತೀಕಾರ ಬುದ್ಧಿಯನ್ನು ಪ್ರೇರೇಪಿಸುವಂಥಾದ್ದು. ಆದ್ದರಿಂದ ಜಗತ್ತಿನಲ್ಲಿ ಶಾಂತಿ ನೆಲೆಸಬೇಕಾದರೆ ಮಾನವನ ಮನಸಿನಲ್ಲಿ ಸದ್ಭಾವವು ಹುಟ್ಟಬೇಕು. ಈ ಸದ್ಭಾವ ಹುಟ್ಟಿಸಲು ಅಹಿಂಸೆಯು ಅಗತ್ಯ. ಆದುದರಿಂದ ಜಗತ್ತಿನಲ್ಲಿ ಶಾಂತಿ ನೆಲೆಸಬೇಕಾದರೆ ಜಗತ್ತಿನ ಜೀವಾಳದಂತಿರುವ ಪೂಜ್ಯ ಮಹಾತ್ಮರ ಅಮೋಘ ತತ್ವಗಳಿಂದಲ್ಲದೆ ಆಧುನಿಕ ಯುದ್ಧೋಪಕರಣಗಳಿಂದ ಸುಸಜ್ಜಿತರಾಗಿ ಮೃತ್ಯುವನ್ನಾಲಂಗಿಸಲು ಸಿದ್ಧರಾಗಿರುವ ರಾಜ್ಯ ವಿಸ್ತರಣಾ ಲಾಲಸೆಯಿಂದ ಕೂಡಿರುವ ಜನಾಂಗಗಳ ಪೈಶಾಚಿಕ ಕೃತ್ಯದಿಂದಲ್ಲವೆಂಬುವುದು ಸ್ವಯಂ ವ್ಯಕ್ತವಾಗುತ್ತದೆ. ಇಂತು ಅಂತರ ರಾಷ್ಟ್ರೀಯ ವಿಚಾರವಾಯಿತು.

ಇತ್ತ ಭರತಖಂಡದಲ್ಲಿ ಮಹಾತ್ಮರ ನೇತೃತ್ವದಲ್ಲಿ ಕಾಂಗ್ರೆಸು ಮುನ್ನಡೆಯುತ್ತಿದೆ. ಮೊನ್ನಿನ ವರ್ಕಿಂಗ್ ಕಮಿಟಿ ಮೀಟಿಂಗಿನಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಹಾಗೂ ಭಾರತದೊಡನೆ ಸಂಧಾನವನ್ನು ಬೆಳೆಸುವ ಬಗ್ಗೆ ಮಹಾತ್ಮರಿಗೆ ಪೂರ್ಣ ಅಧಿಕಾರ ಕೊಡಲಾಗಿದೆ. ಈಗಾಗಲೇ (ಫೆಬ್ರುವರಿ ತಿಂಗಳಿನ ಮೊದಲಿನ ವಾರ) ಗಾಂಧಿ-ವೈಸರಾಯರ ಭೇಟಿಯಾಗುವ ಸಂದರ್ಭವಿದೆ. ವೈಸರಾಯರು ಬೊಂಬಾಯಿಯಲ್ಲಿ ಭಾಷಣ ಮಾಡಿ ಭಾರತಕ್ಕೆ ವೆಸ್ಟ್‌ಮಿನಿಸ್ಟರ್ ಶಾಸನದಲ್ಲಿ ಉಕ್ತವಾಗಿರುವಂಥಾ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಡುವದೇ ಬ್ರಿಟನಿನ ಧ್ಯೇಯವೆಂದು ಹೇಳಿರುವದು ಇದರಿಂದ ಕಾಂಗ್ರೆಸಿಗರಲ್ಲಿ ಹಾಗೂ ದೇಶೀಯರಲ್ಲಿ ಆಶಾಂಕುರವು ಮೊಳೆತಿದೆ. ಮುಂದೆ ಕಾಂಗ್ರೆಸ್ ಹಾಗೂ ಸರ್ಕಾರದೊಡನೆ ಸಂಧಾನವಾಗುವ ಸವಿಗನಸುಗಳನ್ನು ಹಲವರು ಕಾಣುತ್ತಿದ್ದಾರೆ. ಸ್ವನಿರ್ಮಿತ ವಿಧಾಯಕ ಕಾರ್ಯಕ್ರಮವು ಪ್ರಬಲವಾಗಿ ನಡೆಯಬೇಕೆಂದು ಕಾಂಗ್ರೆಸು ವಿಧಿಸಿದೆ. ಸ್ವಾತಂತ್ರ್ಯ ಸಂಪಾದನೆಗೆ ತುಂಬಾ ಮಹತ್ವವನ್ನು ಕೊಟ್ಟು ದೇಶೀಯರ ಅಗ್ನಿಪರೀಕ್ಷೆ ಮಾಡಿ ತನ್ನ ಸ್ಥಿತಿಯನ್ನರಿತುಕೊಳ್ಳಲು ಕಾಂಗ್ರೆಸು ಹೊರಟಿದೆ. ಅದರೊಂದಿಗೆ ಕೋಮುವಾರು ಸಮಸ್ಯೆಯು ಕಂಠಳ ರೂಪ[illegible] ವರೂ ಇದರ ಪರಿಹಾರದ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಹಿಂದಿಗಿಂತಲೂ ಉತ್ಸುಕರಾಗಿ ಅದಕ್ಕೆ ದುಡಿಯುತ್ತಿದ್ದಾರೆ. ಇಷ್ಟರಲ್ಲಿ ತೀವ್ರಗಾಮಿಗಳ ಪಡೆಯೊಂದು ಮುನ್ನಡೆಯಲೆತ್ನಿಸುತ್ತಿದೆ. ಸತ್ಯಾಗ್ರಹವನ್ನು ಹೂಡಬೇಕೆಂದು ಹಾತೊರೆಯುತ್ತಿದೆ. ಹೀಗೆ ರಾಜಕೀಯ ಶೃಂಖಲೆಯು ಸರಾಗವಾಗಿ ಮುನ್ನಡೆಯಲು ತೊಂದರೆಯಾಗಿದೆ. ಈ ವಿಚಾರ ಸರಣಿಗಳ ಮಧ್ಯದಲ್ಲಿ ತನ್ನ ಅಮೋಘ ತತ್ವಗಳ ಬೆಳಕನ್ನು ಬೀರಿ ಭಾರತದ ಜನಾಂಗವನ್ನೇ ಸುಗಮ ಹಾದಿಯಲ್ಲಿ ಮುನ್ನಡೆಸುತ್ತಿರುವ ಮಹಾತ್ಮ ಗಾಂಧೀಜೀಯವರಿಂದ ಭಾರತ ಮಾತೆಯು ಧನ್ಯಳಾಗಿರುವಳು. ದೇಶದ ಅವ್ಯವಸ್ಥೆಯನ್ನು ಹೋಗಲಾಡಿಸಿ ಭಾರತ ಮಾತೆಯನ್ನು ಪಾವನಳನ್ನಾಗಿ ಮಾಡುವ ಕಾರ್ಯವನ್ನು ಗಾಂಧೀಜೀಯವರು ಕೈಕೊಂಡಿರುವರು. ಅವರ ಪ್ರಯತ್ನವು ಜಯಪ್ರದವಾಗಿ ಭಾರತ ಮಾತೆಯು ದಾಸ್ಯ ಶೃಂಖಲೆಗಳಿಂದ ಪಾರಾಗಿ, ಸ್ವಾತಂತ್ರ್ಯ ಭಾಗ್ಯಾಕಾಶದಲ್ಲಿ ನಲಿದು, ಮೆರೆದು, ಜಗತ್ತಿನ ಶಾಂತಿಗೇ ಕಾರಣೀಭೂತಳಾಗಲೆಂದು ಆಶಿಸೋಣ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ.

ಪ್ರಕಟನೆ ನಂ. 10.

ರಾಮುಗಢದ ಕಾಂಗ್ರೆಸ್ ಪ್ರತಿನಿಧಿ ಉಪಚುನಾವಣೆ.

ಈ ಕೆಳಗೆ ಕಾಣಿಸಿದ 26 ಪ್ರತಿನಿಧಿ ಸ್ಥಳಗಳು ಖಾಲೀ ಬಿದ್ದ ಮೂಲಕ ಆಯಾ ಮತದಾರ ಸಂಘಗಳಲ್ಲಿ ಉಪಚುನಾವಣೆಗಳಾಗುವವು.

ಸಂಖ್ಯೆ. ಮತದಾರ ಸಂಘ	ಸ್ಥಳ
1. ಬಳ್ಳಾರಿ ಜಿಲ್ಲಾ.	
1. ಹರಪನ ಹಳ್ಳಿ	2.
2. ಕೊಡಗು ಜಿಲ್ಲಾ.	
1. ದಕ್ಷಿಣಕೊಡಗು	1.
3. ಧಾರವಾಡ ಜಿಲ್ಲಾ.	
1. ಹುಬ್ಬಳ್ಳಿಶಹರ	1.
2. ಹಿರೇಕೇರೂರ	1.
4. ಕಾರವಾರ ಜಿಲ್ಲಾ.	
1. ಶಿರ್ಸಿ, ಸಿದ್ದಾಪುರ, ಯಲ್ಲಾಪುರ	9.
2 ಹೊನ್ನಾವರ ಭಟ್ಕಳ	2.
3. ಕುಮಟಾ ಅಂಕೋಲಾ	3.
4 ಕಾರವಾರ ಹಲ್ಯಾಳ ಮತ್ತು ಸೂಪಾ	1.
5. ಬೆಂಗಳೂರ ದಂಡು.	
1. ಬೆಂಗಳೂರ ದಂಡು	.1
6 ಮೈಸೂರ ಜಿಲ್ಲಾ.	
1 ಮೈಸೂರ ನಗರ	1.
2. ನಾಗಮಂಗಲ	1
3. ಶ್ರೀರಂಗಪಟ್ಟಣ ಫ್ರೆಂಚರಾಕ್ಸ್	1.
7 ಹೈದರಾಬಾದ್ ಸಂಸ್ಥಾನ.	
1 [illegible]ಪೂರ ಪಟ್ಟಣ	1.
2. ರಾಯಚೂರ ಹಳ್ಳಿ	1.
ಒಟ್ಟು	26.

ಉಪಚುನಾವಣೆಯ ವೇಳಾಪತ್ರಿಕೆ.

1 ನಾಮಪತ್ರ ಸ್ವೀಕರಿಸುವದು. 25-1-40ರಿಂದ 2-2-40ರ ಸಂಜೆ 6 ಗಂಟೆಯ ವರೆಗೆ.

2 ನಾಮಪತ್ರ ಪರಿಶೀಲನೆ 5-2-40

3 ನಾಮಪತ್ರಿಕೆ ಹಿಂತೆಗೆದುಕೊಳ್ಳುವದು, 7-2-40 ಮಧ್ಯಾಹ್ನ 3 ಗಂಟೆಯ ವರೆಗೆ

4. ನಾಮಪತ್ರ ಹಿಂತೆಗೆದವರ ಹಾಗೂ ವಿರೋಧವಾಗಿ ಆರಿಸಿ ಬಂದವರ ಹೆಸರುಗಳ ಪ್ರಕಟಣೆ. 7-2-40 ಮಧ್ಯಾಹ್ನ 3 ಗಂಟೆಯ ನಂತರ.

5. ಚುನಾವಣೆ ಬೆಳಿಗ್ಗೆ 8ರಿಂದ 12. ಮಧ್ಯಾಹ್ನ 2ರಿಂದ ಸಂಜೆ 6. 12-2-40

6. ಚುನಾವಣೆ ಅಧಿಕಾರಿಗಳಿಗೆ ಬ್ಯಾಲಟ್ ಪೆಟ್ಟಿಗೆ ಮುಟ್ಟಿಸುವದು, 13-2-40. ಮಧ್ಯಾಹ್ನ 12 ಗಂಟೆಯೊಳಗೆ.

7. ಮತಗಣನೆ 13-2-40 ಮಧ್ಯಾಹ್ನ 1ರಿಂದ 3 ಗಂಟೆಯೊಳಗೆ ಪ್ರಾರಂಭ.

8. ಚುನಾವಣೆಯ ಕಾಗದ ಪತ್ರಗಳನ್ನು ವರದಿಯೊಂದಿಗೆ ಪ್ರಾಂತೀಯ ಕಚೇರಿಗೆ ಕಳಿಸುವದು. 14-2-40.

ಪ್ರತಿನಿಧಿ ಚುನಾವಣೆಯ ಸಂಬಂಧ ಮೊದಲೇ ಪ್ರಸಿದ್ಧಿಸಿದ ನಿಯಮಗಳು ತಾರೀಖು ವಿನಃ ಈ ಉಪಚುನಾವಣೆಗಳಲ್ಲಿಯೂ ಅನುಸರಿಸಲಾಗುವದು.

ರಿಟರ್ನಿಂಗ್ ಆಫೀಸರು ಪ್ರಸಿದ್ಧಿಸುವ ಯಶಸ್ವೀ ಹುರಿ ಆಳುಗಳಿಗೆ ವಾರ್ಷಿಕ ಸಭೆಯ ನೋಟೀಸನ್ನು ಕಳುಹಿಸಲು ಅತ ಕಾಶವಿರದ್ದರಿಂದ ಇದನ್ನೇ ಅವರು ನೋಟೀಸೆಂದು ತಿಳಿದು 15-2-40ನೇ ದಿವಸ ಜರಗುವ ಪ್ರಾಂತೀಯ ವಾರ್ಷಿಕ ಸಭೆಗೆ ಹಾಜರು ಇರತಕ್ಕದ್ದು.

ಧಾರವಾಡ 22-1-40 ಹಾ. ಸು ಹರ್ಡೀಕರ. ಗೌ ಕಾರ್ಯದರ್ಶಿ.

ವರ್ತಮಾನ ಸಂಗ್ರಹ.

ಒಳ ದೇಶ.

ತಾ. 19-1-40ರಲ್ಲಿ ಮದ್ರಾಸ್ ಯೂನಿವರ್ಸಿಟಿ ಯೂನಿಯನ್ನಿನ ಆಶ್ರಯದಲ್ಲಿ ನಡೆದ ಇಂಗ್ಲಿಷ್ ವಾಕ್ ಸ್ಪರ್ಧೆಯಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕೆಮಿಸ್ಟ್ರಿ ಪೋಸ್ಟ್ ಗ್ರಾಜುವೇಟ್ ಕೋರ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ಶ್ರೀಯುತ ಕುಂಬೇರ ಕೆ. ಪೂವಯ್ಯ ಬಿ. ಎ. ಯವರು ಬಹುಮಾನ ಪಡೆದಿರುವರೆಂದೂ, ಇದೇ ತಾ. 26 ಮತ್ತು 27ರಲ್ಲು ಡೆಲ್ಲಿಯಲ್ಲಿ ನಡೆಯುವ ಅಖಿಲ ಭಾರತ ಅಂತರ ವಿದ್ಯಾನಿಲಯ ವಾಕ್ ಸ್ಪರ್ಧೆಗೆ ಮದ್ರಾಸು ಯೂನಿವರ್ಸಿಟಿಯ ಪರವಾಗಿ ಆರಿಸಲ್ಪಟ್ಟ ಇಬ್ಬರು ಪ್ರತಿನಿಧಿಗಳ ಪೈಕಿ ಇವರು ಪೂವಯ್ಯನವರು ಒಬ್ಬರಾಗಿರುವರೆಂದೂ, ಈ ವರೆಗೆ ಕೊಡಗಿನಿಂದ ಮದ್ರಾಸಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪೈಕಿ ಈ ವಾಕ್ ಸ್ಪರ್ಧೆಯಲ್ಲಿ ಬಹುಮಾನವನ್ನು ಪಡೆದವರೂ, ಅಖಿಲಭಾರತ ಅಂತರ ವಿದ್ಯಾನಿಲಯ ವಾಕ್ ಸ್ಪರ್ಧೆಗೆ ಪ್ರತಿನಿಧ್ಯವನ್ನು ಪಡೆದವರೂ ಇವರೇ ಮೊದಲನೇಯವರೆಂಬ ವಿಷಯವನ್ನು ತಿಳಿಸಲು ಸಂತೋಷಪಡುತ್ತೇವೆ.

ರಾಮಗಢ ಕಾಂಗ್ರೆಸಿಗೆ ಕೊಡಗಿನಿಂದ ಕಳುಹಿಸಬಹುದಾದ ಎರಡು ಪ್ರತಿನಿಧಿಗಳ ಪೈಕಿ ಇನ್ನೊಂದರ ಉಪಚುನಾವಣೆಯು ಫೆಬ್ರವರಿ ತಾ. 12 ರಲ್ಲಿ ನಡೆಯುವದಾಗಿ ತಿಳಿಯಬರುತ್ತದೆ.

ಮಡಿಕೇರಿ.

ಇಲ್ಲಿ ಯಾಲಕ್ಕಿ ಮಣಕ್ಕೆ ರೂ. 30 ಮತ್ತು ಕಾಫಿ ಮೂಟೆಗೆ ರೂ. 135 ಕ್ರಯ ಇರುತ್ತೆ.

ಮೂರ್ನಾಡು

ಮೂರ್ನಾಡಿನಲ್ಲಿ ಕಳೆದ ವಾರ ನಡೆದ ರಾ. ಸಾ. ಕಾಂಡಂಡ ಚಂಗಪ್ಪನವರ ಬ್ಯಾಡ್ಮಿಂಟನ್ ಕಪ್ ಪಂದ್ಯಾಟದಲ್ಲಿ 6 ಟೀಮುಗಳು ಭಾಗ ವಹಿಸಿ ಕಡೆಗೆ ವೀರಾಜಪೇಟೆ ರೈಸಿಂಗ್ ಸ್ಟಾರ್ ಎಂಬ ಟೀಮನ್ನು ಮೂರ್ನಾಡಿನ ಪಬ್ಲಿಕ್ ಬಿ. ಟೀಮಿನವರು ಸೋಲಿಸಿ ಕಪ್ಪನ್ನೂ, ಬಿ. ಮಂಜಪ್ಪರೈಯವರು ಇನಾಂ ಆಗಿ ಇಟ್ಟ ಐದು ಮೆಡಲುಗಳನ್ನೂ ಪಡೆದರು.

ಫ್ರೇಜರ್‌ಪೇಟೆ

ಇಲ್ಲಿಯ ರಂಗ ಸಮುದ್ರದ ಬಳಿ ಶ್ರೀ ಮಾದಪಂಡ ಕುಶಾಲಪ್ಪನವರ ಮಗಳಿಗೆ ಅಲ್ಲಿಯೇ ಕೆಲಸ ಮಾಡುತ್ತಿದ್ದ ಗೌಡುಗಳ ರಾಮಪ್ಪನೆಂಬವನು ಕಾರಣಾಂತರದಿಂದ ಈ ತಾ. 24-1-40ರಲ್ಲಿ ಗುಂಡು ಹೊಡೆದು ಕೊಂದನೆಂದೂ, ಪೋಲೀಸ್ ತನಿಖೆಯಾಗುತ್ತಿರುವುದೆಂದೂ ವರ್ತಮಾನ.

ನಿಧನ ವಾರ್ತೆ.

ಕೆದಮುಳ್ಳೂರಿನ ಶ್ರೀ ಚೆಂದಿರ ಚಿಣ್ಣಪ್ಪನವರು ತಾರೀಕು 14ರಲ್ಲಿ ತಮ್ಮ 54ನೇ ವಯಸ್ಸಿನಲ್ಲಿ ದೈವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಗಜೆಟ್.

ಶ್ರೀ ಎಸ್. ಆರ್. ಗೋಪಾಲಕೃಷ್ಣ ಬಿ. ಎ. ಬಿ ಎಲ್ ರವರನ್ನು ಸರಕಾರದ ಲಾಯರು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಿಸಲಾಗಿದೆ.

ಕೊಡಗು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ಬರುವ ಮಾರ್ಚ ತಾರೀಕು 13ನೇ ಬುಧವಾರ ಪ್ರಾರಂಭವಾಗುವದೆಂದೂ, ಅಧಿವೇಶನಕ್ಕೆ ಠರಾವುಗಳನ್ನು ಬರುವ ಫೆಬ್ರವರಿ ತಾರೀಕು 26 ರೊಳಗೆ ಕಳುಹಿಸಬೇಕೆಂದೂ ಪ್ರಕಟವಾಗಿದೆ.

ಹಿಂದೂ ದೇಶ.

ಬೆಂಕಿಯ ಅನಾಹುತದಿಂದ ನಾಶವಾದ ಮದ್ರಾಸ್ ಕಾಂಗ್ರೆಸ್ಸ್ ಪ್ರದರ್ಶನ [illegible] 10,000 [illegible]

[illegible] ಅಧಿವೇಶನಕ್ಕೆ [illegible] ಅಧ್ಯಕ್ಷರಾಗಬೇಕೆಂದು [illegible] ಸೂಚಿಸಿದ್ದಾರೆ.

ಬೊಂಬಾಯಿ ಅಸೆಂಬ್ಲಿಯ ಮಾಜೀ ಪ್ರಧಾನ [illegible] ಕಾಂಗ್ರೆಸ್ಸಿಗೆ ಪ್ರತಿನಿಧಿಯಾಗಿ [illegible] ಆರಿಸಲ್ಪಟ್ಟಿರುವರು.

ಮೈಸೂರು ಸ್ಟೇಟ್ ಕಾಂಗ್ರೆಸಿನ ಪ್ರೆಸಿಡೆಂಟರಾದ ಹೆಚ್. ಸಿ. ದಾಸಪ್ಪನವರು ಮಹಾತ್ಮ ಗಾಂಧೀಜಿಯವರನ್ನು ವಾರ್ಧಾದಲ್ಲಿ ಕಂಡು ಮೈಸೂರಿನ ರಾಜಕೀಯ ಸ್ಥಿತಿಯ ಬಗ್ಗೆ ಮಾತಾಡಿದರು.

ರಾಜಕೋಟೆಯ ದಿವಾನರಾಗಿದ್ದು ಅಲ್ಲಿಯ ರಾಜಕೀಯ ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರಜಾಮಂಡಲವನ್ನು ಪ್ರತಿನಿಧಿಸುತ್ತಿದ್ದ ಗಾಂಧೀಜಿಯವರನ್ನು ವಿರೋಧಿಸಿ ಕಾರ್ಯನಡೆಸಿದ ದರ್ಬಾರ್ ವೀರವಲ್ಲರು ತಾ. 24 ರಲ್ಲಿ ಮೃತರಾದರು.

ಮಹಾತ್ಮಾಜಿಯವರು ಈ ವಾರದ ಹರಿಜನದಲ್ಲಿ ಒಂದು ಲೇಖನವನ್ನು ಬರೆದು 'ವೈಸರಾಯರು ಬೊಂಬಾಯಿಯಲ್ಲಿ ಮಾಡಿದ ಘೋಷಣೆಯಲ್ಲಿ ಸಂಧಾನದ ಕುರುಹುಗಳು ಕಂಡು ಬರುತ್ತವೆ' ಎಂದು ಅಂದಿರುವರು.

ಮದ್ರಾಸಿನ ಹಿಂದಿನ ಕಾಂಗ್ರೆಸ್ ಮಂತ್ರಿಮಂಡಳದವರು ಪಾಸು ಮಾಡಿದ ದೇವಾಲಯ ಪ್ರವೇಶ ಕಾಯಿದೆಯನ್ನು ರದ್ದು ಮಾಡಬೇಕೆಂದು ಅದನ್ನು ಅಮಲಿನಲ್ಲಿ ಬರಗೊಡಬಾರದೆಂದೂ ಸನಾತನಿಗಳು ಕೇಳಿಕೊಂಡಿದ್ದರು. ಸರಕಾರದವರು ಅವರ ಬಿನ್ನಹ ನಿರಾಕರಿಸಿದರು.

ಅಖಿಲ ಭಾರತ ಕಾಂಗ್ರೆಸ್ಸಿನ ಈ ವರ್ಷದ ಅಧಿವೇಶನವು ಬರುವ ಮಾರ್ಚ ತಾ. 19,20 ಮತ್ತು 21 ರಲ್ಲಿಯೂ ವರ್ಕಿಂಗ್ ಕಮಿಟಿ ಮೀಟಿಂಗು 14 15 ಮತ್ತು 16 ರಲ್ಲಿಯೂ, ವಿಷಯನಿಯಾಮಕ ಸಭೆಯು 17, 18 ಮತ್ತು 19 ರಲ್ಲಿಯೂ ನಡೆಯುವುದೆಂದು ತೀರ್ಮಾನಿಸಲಾಗಿದೆ.

ವಿದೇಶ.

ಕೆನಡ ಸರಕಾರದವರು ರಷ್ಯಕ್ಕೆ ಈ ವರೆಗೆ ಮಾಡುತ್ತಿದ್ದ ಗೋಧಿ ಸರಬರಾಯಿಯನ್ನು ಸದ್ಯಕ್ಕೆ ನಿಲ್ಲಿಸಿದೆ.

ಮಣಿಪುರದಲ್ಲಿ ಸ್ತ್ರೀಯರು ಹೊರದೇಶಕ್ಕೆ ಅಕ್ಕಿಯ ರಫ್ತನ್ನು ನಿಲ್ಲಿಸುವುದಕ್ಕಾಗಿ ಸತ್ಯಾಗ್ರಹವನ್ನು ಹೂಡಿರುವರು. ಅಲ್ಲಿ ಅಕ್ಕಿಗೆ ಕ್ಷಾಮವಾಗಿದೆ.

ಜರ್ಮನಿಯ ಕಬ್ಬಿಣ ಕಾರ್ಖಾನೆಯಲ್ಲಿ ಪ್ರಚಂಡವಾದ ಬೆಂಕಿಯೆದ್ದು 36 ಗಂಟೆಗಳ ವರೆಗೆ ಉರಿದು ಅನೇಕ ಕಾರ್ಖಾನೆಗಳೂ, ಸಾಧನ ಸಾಮಗ್ರಿಗಳೂ ಬೇರು ಅಪರಿಮಿತ ನಷ್ಟವಾಗಿದೆ.

[illegible] ಹಳ್ಳಿಯಲ್ಲಿ ದೊಡ್ಡದೊಂದು ವೃಕ್ಷ ದೇವತೆಯ ಬೊಂಬೆಯನ್ನು ಅತಿ ವೈಭವದಿಂದ ಸುಟ್ಟರು. ಅಂದು ಜನರು ನೆರೆದಿದ್ದರಲ್ಲದೆ, 'ಮಹಾತ್ಮ ಗಾಂಧೀಕಿ ಜೈ' ಎಂದು ಜಯಘೋಷ ಮಾಡಿದರು.

ಹಾಲೆಂಡು ದೇಶದಲ್ಲಿ ಒಂದು ಅಪೂರ್ವ ರೀತಿಯಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿರುವರು. ಅಲ್ಲಿ ಪ್ರತಿ ರಸ್ತೆಯಲ್ಲಿ ಯೂ ಮೋಟಾರುಗಳು ಹೋಗಿ ಬರಲು ಪ್ರತ್ಯೇಕ ಭಾಗ, ಸೈಕಲುಗಳ ಗಮನಕ್ಕೆ ಪ್ರತ್ಯೇಕ ಭಾಗ, ಟ್ರಾಂಗಳ ತಿರುಗಾಟಕ್ಕೆ ಪ್ರತ್ಯೇಕ ಭಾಗಗಳಿರುವವು.

ಜೆಕೊಸ್ಲೊವಾಕಿಯದ ಸುಮಾರು 800 ಮಂದಿ ಹುದ್ದೇದಾರರುಗಳನ್ನು ಕ್ರಿಸ್ಮಸ್ ಹಬ್ಬದಿಂದೀಚೆಗೆ ಜರ್ಮನಿಯ ಗುಪ್ತ ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆಂದೂ ಆ ಪೈಕಿ ಕೆಲವರನ್ನು ದಂಗೆ ಏಳಲು ಪ್ರಯತ್ನ ಪಟ್ಟರೆಂಬ ಕಾರಣದ ಮೇಲೆ ಆ ಕೂಡಲೆ ಕೊಂದುಬಿಟ್ಟರೆಂದೂ ಹೇಳಲಾಗಿದೆ.

ಜಪಾನ್ ದೇಶದ ಮುಖ್ಯ ಪಟ್ಟಣವಾದ ಟೋಕಿಯೋ ನಗರಕ್ಕೆ ನೈರುತ್ಯದಲ್ಲಿ ಸುಮಾರು ಒಂದು ನೂರು ಮೈಲಿಗಳ ದೂರದಲ್ಲಿರುವ ಶಿಜೂವೋಕ ಎಂಬಲ್ಲಿ ಕಳೆದ ವಾರ ಬೆಂಕಿಯಿಂದ 8,000 ಮನೆಗಳು ಭಸ್ಮವಾದವು. 40,000 ಮಂದಿಗೆ ವಾಸಕ್ಕೆ ಮನೆಯಿಲ್ಲದಂತಾಯಿತು. ಈ ಅನಾಹುತದಿಂದ ಪ್ರಾಣ ಕಳೆದುಕೊಂಡವರು ಇಬ್ಬರು; ಎಂಟು ಮಂದಿಗೆ ಗಾಯಗಳಾದವು.

ಐರ್ಲಾಂಡಿನಿಂದ ಬ್ರಿಟನ್ನಿಗೆ ಇನ್ನು ಮುಂದೆ ರವಾನೆಯಾಗುವ ಪಶುಪ್ರಾಣಿಗಳಿಗೆ ಬ್ರಿಟನ್ನಿನವರು ಹಿಂದೆ ಕೊಡುತ್ತಿದ್ದ ಬೆಲೆಗಿಂತಲೂ ಮೂರನೇ ಒಂದು ಭಾಗದಷ್ಟು ಹೆಚ್ಚು ಹಣವನ್ನು ಕೊಡುವುದಾಗಿ ಆ ದೇಶದವರೊಡನೆ ಹೊಸದಾದ ಒಂದು ಒಪ್ಪಂದ ಮಾಡಿಕೊಂಡಿರುತ್ತಾರೆ. ಯುದ್ಧದ ದೆಸೆಯಿಂದ ಪಶುಪ್ರಾಣಿಗಳನ್ನು ಸಾಕುವುದೇ ಕಷ್ಟವಾಗಿರುವುದರಿಂದ ಬ್ರಿಟನ್ನಿನವರು ಈ ರೀತಿ ಉದಾರಮನೋಭಾವವನ್ನು ತೋರಿರುವುದು ಸ್ತುತ್ಯರ್ಹವಾಗಿದೆ.

ಯುದ್ಧದ ನಿಮಿತ್ತ ಗ್ರೇಟ್ ಬ್ರಿಟನ್ನಿನಲ್ಲಿ ರಾತ್ರಿಯ ವೇಳೆ ಬೀದಿಗಳಲ್ಲಿ ದೀಪಗಳನ್ನೆಲ್ಲಾ ಮರೆಮಾಡಿ ಕತ್ತಲೆ ಮಾಡಿಬಿಡುತ್ತಾರಷ್ಟೆ. ಅದರ ದೆಸೆಯಿಂದ ಜನರ ಮತ್ತು ವಾಹನಗಳ ಸಂಚಾರಕ್ಕೆ ಬಹಳ ತೊಂದರೆಯಾಗಿದೆ. ಅದೂ ಅಲ್ಲದೆ ಈ ಕತ್ತಲೆಯಲ್ಲಿ ವಾಹನಗಳಿಗೆ ಸಿಕ್ಕಿ ಸತ್ತವರ ಸಂಖ್ಯೆಯಂತೂ ಮಿತಮೀರಿ ಹೋಗಿದೆ. ಕಳೆದ ಡಿಸೆಂಬರ್ ತಿಂಗಳಿನಲ್ಲಿ 1,155 ಮಂದಿ ಗ್ರೇಟ್ ಬ್ರಿಟನ್ನಿನ ನಾನಾ ರಸ್ತೆಗಳಲ್ಲಿ ವಾಹನಾದಿಗಳಿಗೆ ಸಿಕ್ಕಿ ಪ್ರಾಣ ಕಳೆದುಕೊಂಡಿರುತ್ತಾರೆ. ಹಿಂದೆ ಯಾವಾಗಲೂ ಒಂದು ತಿಂಗಳಲ್ಲಿ ಇಷ್ಟು ಮಂದಿಯ ಅಕಾಲ ಮರಣಗಳು ಅಲ್ಲಿನ ರಸ್ತೆಗಳಲ್ಲಾಗಿರಲಿಲ್ಲ.

ಪೋಲೆಂಡಿನಲ್ಲಿ ಜರ್ಮನಿಯವರು ಆಕ್ರಮಿಸಿಕೊಂಡಿರುವ ರಾಜ್ಯಭಾಗಗಳಲ್ಲಿರುವ ಅಂದರೆ ಪೋಸೆನ್, ಪೊಮೆರೇನಿಯ ಮತ್ತು ಸೈಲೇಷಿಯ ಈ ಮೂರು ಪ್ರದೇಶಗಳಲ್ಲಿರುವ ಪೋಲೆಂಡಿನ ಪ್ರಜೆಗಳನ್ನು ಅಲ್ಲಿಂದ ಓಡಿಸಲು ನಾಜಿ ಸರ್ಕಾರದ ಗುಪ್ತ ಪೋಲೀಸಿನವರು ಅನುಸರಿಸುತ್ತಿರುವ ಅಮಾನುಷಿಕ ಕೃತ್ಯಗಳು ಮನುಷ್ಯನ ಮಾತ್ಸರ್ಯದ ಪರಮಾವಧಿಯಾಗಿದೆ. ಗೆಸ್ಟಾಪೊ ಎಂಬ ಜರ್ಮನಿಯ ಗುಪ್ತ ಪೋಲೀಸಿನವರು ಮೇಲ್ಕಂಡ ಪ್ರದೇಶಗಳಲ್ಲಿರುವ ಮುಖ್ಯ ಜನರನ್ನು ಆರಿಸಿ ಅವರನ್ನು ಗುಂಡಿನಿಂದ ಹೊಡೆದು ಕೊಲ್ಲುತ್ತಿದ್ದಾರೆ. ಈ ರೀತಿ ಸಾಯುತ್ತಿರುವವರ ಪೈಕಿ ಕೆಲವರು ಹೆಂಗಸರೂ ಮಕ್ಕಳೂ ಆಗಿರುತ್ತಾರೆ. ಇದು ವರೆಗೆ 15,000 ಮಂದಿ ಗಂಡಸರೂ, ಹೆಂಗಸರೂ, ಮಕ್ಕಳೂ ನಾಜಿಗಳಿಂದ ಮೇಲ್ಕಂಡ ರೀತಿಯಲ್ಲಿ ನಾಶವಾಗಿದ್ದಾರೆ. ಜರ್ಮನರು ನರಧ್ವಂಸವೊಂದನ್ನಲ್ಲದೆ, ಪೋಲೆಂಡಿನ ಭಾಷೆಯನ್ನೂ ಸಂಸ್ಕೃತಿಯನ್ನೂ ಮತ್ತು ಆ ಜನಾಂಗದ ಸಮಸ್ತ ಸ್ಮಾರಕ ಚಿಹ್ನೆಗಳನ್ನೂ ನಾಶಪಡಿಸಲು ಯತ್ನಿಸುತ್ತಿರುವರೆಂದು ಹೇಳಲಾಗಿದೆ.

ಅಪೀಲು.

ಅಖಿಲ ಭಾರತ ಕಾಂಗ್ರೆಸಿನ ಪ್ರೇರಣೆಯಂತೆ ಖಾದೀ ಪ್ರಸಾರ ಕಾರ್ಯವು ಎಲ್ಲೆಡೆಯಲ್ಲೂ ಭರದಿಂದ ನಡೆಯತೊಡಗಿದೆ. ಹುಂಡಿಗಳ ಮಾರಾಟದ ವ್ಯವಸ್ಥೆಯು ಸಾರ್ವತ್ರಿಕವಾಗಿ ನಡೆಯುತ್ತಿದೆ. ಕೊಡಗಿನಲ್ಲಾದರೂ ಹುಂಡಿಗಳನ್ನು ಮಾರುವ ವ್ಯವಸ್ಥೆಯು ನಡೆದಿದೆ. ಅಲ್ಲದೆ ಅಂಗಡಿ ಹಾಕಿ ಖುದ್ದಾಗಿ ಖಾದಿ ಮಾರುವ ಏರ್ಪಾಡು ಮಾಡಲಾಗಿದೆ. ಆದ್ದರಿಂದ ದೇಶೀಯರು ಈ ಕಾರ್ಯಕ್ರಮದಲ್ಲಿ ಸಹಕರಿಸಿ ಕಾರ್ಯಕ್ರಮದಂತೆ ನಿಶ್ಚಯಿಸಲ್ಪಟ್ಟಿರುವ ರೂ. 1000ಗಳ ಮಾರಾಟವನ್ನು ಯಶಸ್ವಿಯಾಗಿ ಮಾಡಬೇಕೆಂದು ವಿನಂತಿ ಮಾಡುವದಾಗಿದೆ.

ಬಿ. ಯಂ. ಕಾರ್ಯಪ್ಪ,
ಗೌ. ಕಾರ್ಯದರ್ಶಿ.
ಕೊ. ಜಿ. ಕಾ. ಸಮಿತಿ.

ಯುದ್ಧ ವಾರ್ತೆ.

ರಷ್ಯಾ ಫಿನ್‌ಲೇಂಡ್ ಯುದ್ಧ.

ರಷ್ಯನರ ವಿಮಾನಧಾಳಿ.

ಬೆಂಕಿ ಕಾರುವ ಬಾಂಬುಗಳ ಸುರಿಮಳೆ.

ರಷ್ಯನ್ ವೈಮಾನಿಕರು ಪರಿಯಾದಾಕ್ಷಿಣ್ಯವಿಲ್ಲದೆ ನಿರಕ್ಷಿತ ಫಿನ್ನಿಷ್ ನಗರಗಳ ಮೇಲೆ ಬೆಂಕಿ ಕಾರುವ ಬಾಂಬುಗಳನ್ನು ಕಾರುತ್ತಿದ್ದಾರೆ. ಅಬೋ ರೇವಿನ ಮೇಲೆ ನಿನ್ನೆ 11 ರಷ್ಯನ್ ವಿಮಾನಗಳು ಅತಿ ಭಯಂಕರವಾದ ಧಾಳಿ ನಡೆಸಿ, ಬೆಂಕಿ ಕಾರುವ 70 ಬಾಂಬುಗಳನ್ನೂ, 150 ಭಾರಿ ಬಾಂಬುಗಳನ್ನೂ ಕಾರಿದವು. 16000 ಅಡಿ ಎತ್ತರದಿಂದ ಬಿದ್ದುವು ಬಾಂಬುಗಳು. ಅನೇಕ ಮನೆಮಠಗಳು ನೆಲಸಮವಾದುವು. ದಿಕ್ಕು ಕೆಟ್ಟು ಮನೆಮಠಗಳಿಲ್ಲದೆ ಅನೇಕ ಪ್ರಜೆಗಳು 48 ಡಿಗ್ರಿ ಚಳಿಯಲ್ಲಿ ಬೀದಿ ಬೀದಿಗಳಲ್ಲಿ ಅಲೆಯುತ್ತಿರುವದನ್ನು ನೋಡಿದರೆ ಬಹಳ ವ್ಯಥೆಯಾಗುತ್ತದೆ.

ಯುದ್ಧಾರಂಭವಾದ ಲಾಗಾಯ್ತು ಇದುವರೆಗೆ ಈ ನಗರದ ಮೇಲೆ ರಷ್ಯನ್ ವಿಮಾನಗಳು 30 ಸಲ ಧಾಳಿ ನಡೆಸಿವೆ. ಆ ಧಾಳಿಗಳಲೆಲ್ಲ ಈಪೂತ್ತಿನ ಧಾಳಿಯೇ ಅತಿ ಘೋರವಾದುದು. ಇದು ಫಿನ್‌ಲೆಂಡಿನ ಭಾರಿ ಬಂದರುಗಳಲ್ಲಿ ಎರಡನೆಯದು. ಬೆಂಕಿಯನ್ನು ಆರಿಸಲು ಫೈರ್ ಮೆನ್‌ಗಳು ಅತಿ ದಣಿವಾಗಿ ಪ್ರಯತ್ನಿಸಿದರು. ರಷ್ಯನ್ ವಿಮಾನವೊಂದನ್ನು ಕೆಡವಲಾಯಿತು.

ಇದನ್ನೂ, ಇತರ ರೇವುಗಳನ್ನೂ ಪದೇ ಪದೇ ಮುತ್ತಿ, ಫಿನ್‌ಲೆಂಡಿಗೆ ಬಾಹ್ಯ ಪ್ರಪಂಚದ ಸಂಪರ್ಕವೇ ಇಲ್ಲದಂತೆ ಮಾಡಬೇಕೆಂದು ರಷ್ಯನ್ ಸೇನಾನಿಗಳು ಆಲೋಚಿಸಿರುವದಾಗಿ ತಿಳಿಯಬರುತ್ತದೆ.

ಹೀಬರ್ಗ್‌ನವರನ್ನು ಇನ್ನು 24 ಗಂಟೆಗಳೊಳಗಾಗಿ ಸೆರೆಹಿಡಿಯುತ್ತೇವೆ. ಜರ್ಮನರು ನಮ್ಮ ಸಹಾಯಕ್ಕೆ ಬರುತ್ತಿದ್ದಾರೆ. ಎಂದು ರಷ್ಯನ್ ಸೈನ್ಯದವರು ಲೌಡ್ ಸ್ಪೀಕರುಗಳನ್ನು ಇಟ್ಟುಕೊಂಡು ಫಿನ್ನರನ್ನು ಬೆದರಿಸಿ, ಅವರು ತಮಗೆ ಶರಣಾಗತರಾಗುವಂತೆ ಪುಸಲಾಯಿಸಿ ತನ್ಮೂಲಕ ವಿಜಯ ಪಡೆಯಲೆತ್ನಿಸಿದರು. ಆದರೆ ಫಿನ್ನರು ಜಗ್ಗದೆ, ಶತ್ರುವನ್ನು ಸೋಲಿಸಿ ಓಡಿಸಿದರು.

ನಿನ್ನೆ ಮಧ್ಯಾಹ್ನ ಟೈಪೋಲ್‌ನದಿ ಪ್ರದೇಶದ ಮೇಲೆ ಮತ್ತೆ ಮುತ್ತಿಗೆ ಹಾಕಲು ರಷ್ಯನರು ತಯಾರುಮಾಡಿಕೊಳ್ಳುತ್ತಿದ್ದಾರೆ. ಅಷ್ಟರಲ್ಲಿ ಅವರನ್ನು ಹೊಡೆದು ಬಡಿದು ಓಡಿಸಲಾಯಿತು.

ಲಡೋಗ ಸರೋವರದ ಈಶಾನ್ಯ ಭಾಗದಲ್ಲು ಫಿನ್ನರು ಜಯ ಪಡೆಯುತ್ತಿದ್ದಾರೆ. ಶತ್ರುಸೇನೆ ಮೇಲಿಂದ ಮೇಲೆ ಬಂದು ಮುತ್ತುತ್ತಿರುವದಾದರೂ ಅದನ್ನು ಸೋಲಿಸಿ ಓಡಿಸುತ್ತಿದ್ದಾರೆ.

ಲಡೋಗ ರಣರಂಗದಲ್ಲಿ ಫಿನ್ನರ ವಿಜಯ.

ಲಡೋಗ ಸರೋವರದ ಈಶಾನ್ಯ ಭಾಗದ ಪ್ರದೇಶದಲ್ಲಿ ನಮ್ಮ ಸೇನೆಗಳು ವಿಜಯಶಾಲಿಗಳಾಗಿಯೇ ಯುದ್ಧ ಮಾಡುತ್ತಿವೆ ಎಂದು ಫಿನ್ನಿಷ್ ಸಂಗ್ರಾಮ ಪ್ರಕಟಣೆ ತಿಳಿಸುತ್ತದೆ.

ಅನೇಕ ಕಡೆಗಳಲ್ಲಿ ರಷ್ಯನರು ಮುನ್ನುಗ್ಗಲಾಗಿ, ಅವರುಗಳೆಲ್ಲರನ್ನೂ ಸೋಲಿಸಿ ಓಡಿಸಲಾಯಿತು. ರಷ್ಯನರಿಗೆ ಅಪಾರ ನಷ್ಟವಾಗಿದೆ.

ಈಗೊಂದೆರಡು ದಿನಗಳಿಂದ ಕೊಲ್ಲಾಸ್‌ಜೋಕಿಯಲ್ಲಿ ನಡೆಯುತ್ತಿರುವ ಕದನದಲ್ಲಿ ಸಾವಿರಾರು ಮಂದಿ ರಷ್ಯನರು ಮಡಿದಿದ್ದಾರೆ.

ಇದುವರೆಗೆ ಬಂದಿರುವ ವರ್ತಮಾನಗಳ ಪ್ರಕಾರ 6 ರಷ್ಯನ್ ವಿಮಾನಗಳು ಕೆಡವಲ್ಪಟ್ಟವು. ಇನ್ನೂ ಮೂರು ವಿಮಾನಗಳ ಗತಿ ಏನಾಯಿತೋ ತಿಳಿಯದು.

ಕ್ರೋನ್‌ಸ್ಟಾಟ್ ಎಂಬ ರಷ್ಯನ್ ಶಿಬಿರದ ಮೇಲೆ ಸುಮಾರು 20 ಫಿನ್ನಿಷ್ ವಿಮಾನಗಳು ಧಾಳಿ ನಡೆಸಿದುವು. ಅನೇಕ ರಷ್ಯನ್ ಹಡಗುಗಳಿಗೆ ಜಖಂ ಆಯಿತೆಂದು ವರ್ತಮಾನ. ಬಾಲ್ಟಿಕ್ ಶಿಬಿರದ ಮೇಲೆ ಫಿನ್ನರು ಧಾಳಿ ಮಾಡಿದಾಗ ಹೊರಗಿನಿಂದ ಬಂದಿರುವ ಸ್ವಯಂಸೇವಕ ವೈಮಾನಿಕರು ಭಾಗ ವಹಿಸಿದರೆಂದು ಹೇಳಲಾಗಿದೆ.

ಹೆಲ್ಸಿಂಕಿಗೆ ಇಟಾಲಿಯನ್ ಮತ್ತಿತರ ಸ್ವಯಂ ಸೇವಕರೂ, ವೈಮಾನಿಕರೂ ಬಂದು ತಲುಪಿದ್ದಾರೆ.

ಫ್ರಾನ್ಸ್, ಬ್ರಿಟನ್ ಮತ್ತು ಜರ್ಮನಿ ಯುದ್ಧ.

ನೌಕಾ ಯುದ್ಧ.

'ಗ್ರೆನ್‌ವಿಲ್' ಎಂಬ ಬ್ರಿಟಿಷ್ ಡಿಸ್ಟ್ರಾಯರ್ ಜಹಜು ಉತ್ತರ ಸಮುದ್ರದಲ್ಲಿ ಮೈನ್‌ಗೆ ತಾಗಿಯೋ ಅಥವಾ ಟಾರ್ಪಿಡೊ ಮಾಡಲ್ಪಟ್ಟೋ ಮುಳುಗಿತು. ಜಹಜಿನಲ್ಲಿದ್ದ ಅಧಿಕಾರಿಗಳೂ, ಜನರೂ ಸೇರಿ 118 ಮಂದಿ ಇದು ವರೆಗೆ ಸುರಕ್ಷಿತವಾಗಿ ಬಂದು ಸೇರಿದ್ದಾರೆ. 8 ಮಂದಿ ಸತ್ತಿರುವುದಾಗಿ ಗೊತ್ತಾಗಿದೆ. 73 ಮಂದಿ ಪತ್ತೆ ಇಲ್ಲ. ಇವರು ಮೃತರಾಗಿರಬಹುದೆಂದು ಕಳವಳ ಉಂಟಾಗಿದೆ ಎಂಬುವುದು ಬ್ರಿಟಿಷ್ ನೌಕಾ ಖಾತೆಯ ಕಾರ್ಯದರ್ಶಿಗಳು ಪ್ರಕಟಿಸಿ ತಮ್ಮ ಅಗಾಧವಾದ ವಿಷಾದವನ್ನು ವ್ಯಕ್ತಪಡಿಸಿದ್ದಾರೆ.

ಅಳಿದುಳಿದು ಬಂದಿರುವವರಲ್ಲಿ ವಿಪರೀತವಾಗಿ ಗಾಯಗೊಂಡಿರುವವರು ಬಹಳ ಮಂದಿ ಇದ್ದಾರೆ. ಅವರು ತೀರವನ್ನು ಸೇರುವ ಮೊದಲೇ ಡಾಕ್ಟರುಗಳೂ, ನರ್ಸುಗಳೂ ಅಂಬುಲೆನ್ಸುಗಳು ಕಾದಿದ್ದರು. ಗಾಯಗೊಂಡವರನ್ನು ಕೂಡಲೆ ಆಸ್ಪತ್ರೆಗೆ ಸಾಗಿಸಲಾಯಿತು. ಸತ್ತವರ ಪತ್ತೆ ಇಲ್ಲದಿರುವವರ ಮತ್ತು ಗಾಯಗೊಂಡವರ ಸಂಬಂಧಿಗಳಿಗೆ ಕೂಡಲೆ ಸುದ್ದಿ ಕಳಿಸಲಾಗಿದೆ.

ಹೆಕ್ಲ ಎಂಬ ಡೇನಿಷ್ ಜಹಜು ತಾ. 22ರಲ್ಲಿ ಸ್ಕಾಟ್ಲೇಂಡಿನ ಈಶಾನ್ಯ ತೀರದಲ್ಲಿ ಮುಳುಗಿತು. ಇದು ಮೈನ್‌ಗೆ ತಾಗಿ ನಾಶ ಹೊಂದಿರಬಹುದೆಂದು ಊಹಿಸಲಾಗಿದೆ. ನಾರ್ವೆ ದೇಶದ ಜಹಜೊಂದು ಈ ಜಹಜಿನ ನಾವಿಕರನ್ನು ಸಂರಕ್ಷಿಸಿ ಬರ್ಗೆನ್‌ಗೆ ಕರೆದೊಯ್ದಿತು.

ಬ್ರಿಟಿಷ್ ಜಹಜಿಗೆ ಅಪಘಾತ.

ಕ್ಯಾರ್ಡೊನಿ ಎಂಬ ಬ್ರಿಟಿಷ್ ಜಹಜು ತಾ. 21ರಲ್ಲಿ ಒಂದು ಆಸ್ಫೋಟನೆಯಾದ ಮೇಲೆ ಇಂಗ್ಲೆಂಡಿನ ನೈಋತ್ಯ ತೀರದಲ್ಲಿ ಮುಳುಗಿತು.

ನಾವಿಕರೆಲ್ಲ ರಕ್ಷಿಸಲ್ಪಟ್ಟರಾದರೂ ಅನೇಕರಿಗೆ ಗಾಯಗಳಾಗಿವೆ. ಕೆಲವರು ಮೇಲಕ್ಕೆಗರಿಸಲ್ಪಟ್ಟು ಬಿದ್ದರು. ಜಹಜಿನಲ್ಲಿದ್ದ ನೌಕಾಧಿಕಾರಿಯ ಕಾಲ್ಗಳೆರಡೂ ಮುರಿದಿವೆಂದು ಹೇಳಲಾಗಿದೆ.

'ಅಸ್ಮಾಮಾರು' ಎಂಬ ಜಪಾನೀ ಜಹಜೊಂದರಲ್ಲಿ ಜರ್ಮನಿಗೆ ಹೋಗುತ್ತಿದ್ದ ಮಿಲಿಟರಿ ವಯಸ್ಕರಾದ ಕೆಲವು ಜರ್ಮನರನು ಉತ್ತರ ಫೆಸಿಫಿಕ್‌ನಲ್ಲಿ ಬ್ರಿಟಿಷ್ ನೌಕಾಪಡೆಯವರು ಹಿಡಿದೊಯ್ದರೆಂದು ಒಂದು ಪ್ರಕಟಣೆ.

ಫ್ಲಾಂಡ್ರಾಯ್ ಎಂಬ ಸ್ವೀಡಿಸ್ ಜಹಜೊಂದು ಯುಮ್ಡೆನ್‌ಗೆ 100 ಮೈಲಿ ಯಾಚೆ ಎರಡು ಮೈನ್‌ಗಳಿಗೆ ತಾಗಿ ನಾಶ ಹೊಂದಿತು. ನಾವಿಕರಲ್ಲಿ 17 ಮಂದಿ ಜಲ ಸಮಾಧಿ ಹೊಂದಿದರು. ಇನ್ನು ನಾಲ್ವರು ಸಮುದ್ರದಲ್ಲಿ ಎರಡು ದಿನ ದೋಣಿಗಳಲ್ಲಿ ಕಳೆದು ಅನಂತರ ನಾರ್ವೆ ಜಹಜೊಂದರಿಂದ ಸಂರಕ್ಷಿಸಲ್ಪಟ್ಟರು. ಇವರು ಶನಿವಾರ ರಾತ್ರಿ ಯುಮ್ಡೆನ್‌ಗೆ ಬಂದಿಳಿದರು 'ಫ್ಲಾಂಡ್ರಿಯಾ' ಜಹಜು ಗೋಥೆನ್‌ಬರ್ಗ್‌ನಿಂದ ಆಂಸ್ಟರ್ಡಾಂಗೆ ಹೋಗುತ್ತಿತ್ತು.

ಪ್ರೊಟೆಸಿಲಾಲ್ (9000)ಟನ್ ಎಂಬ 'ಬ್ಲೂಫನಲ್' ಕಂಪೆನಿಯ ಜಹಜು ಪಶ್ಚಿಮತೀರ ಪ್ರದೇಶದಲ್ಲಿ ಮೈನ್‌ಗೆ ತಾಕಿ ಮುಳುಗಿತು. ಅದರಲ್ಲಿದ್ದ 60 ಮಂದಿ ಜನ ಸೇರಿದರು. 13 ಜನರಿಗೆ ಇವರಲ್ಲನೇಕರು ಬೇರೆಬೇರೆ ಗಾಯಗಳಾಗಿವೆ.

ಫರ್ರಿಲ್ (1000ಟನ್)ಎಂಬ ಅಬರ್ಡೀನ್ ಜಹಜು ಈಶಾನ್ಯ ತೀರ ಪ್ರದೇಶದಲ್ಲಿ ಮೈನ್ ತಾಕಿಮುಳುಗಿತು. ಸಿಡಿತದ ಶಬ್ದ ತೀರ ಪ್ರದೇಶಕ್ಕೆ ಕೇಳಿಸಿತು. ಜಹಜಿನಲ್ಲಿದ್ದ ನಾವಿಕರ ಪೈಕಿ 12 ಮಂದಿ ನೀರು ಪಾಲಾದರೆಂದು ಭಯ. ಇಬ್ಬರು ಜೀವ ಸಹಿತ ದಡಕ್ಕೆ ತಲುಪಿದರು.

ನಾಟ್ ಎಂಬ ಎಸ್ತೋನಿಯನ್ ಜಹಜು ಷೆಟ್ಲೆಂಡ್ ದ್ವೀಪಗಳ ಸಮೀಪದಲ್ಲಿ ಮುಳುಗಿತು. ಇದರಲ್ಲಿದ್ದ ನಾವಿಕರನ್ನು ಯಾವುದೋ ಇನ್ನೊಂದು ಜಹಜು ಪಾರು ಮಾಡಿತು.

ಲ್ಯಾಂಡಾಫ್ ಕ್ಯಾಸಲ್ ಎಂಬ ದಕ್ಷಿಣ ಆಫ್ರಿಕ ಜಹಜು ಎಲ್ಲೋ ಢಿಕ್ಕಿ ಹೊಡೆದು ಸ್ವಲ್ಪ ಜಖಂಗೊಂಡು ದಕ್ಷಿಣ ತೀರದ ರೇವಿಗೆ ಬಂದಿತು. ಜಹಜಿನಲ್ಲಿ 170 ಜನ ಪ್ರಯಾಣಿಕರಿದ್ದರು. ಯಾರಿಗೂ ಗಾಯಗಳಾಗಲಿಲ್ಲ. ಎಲ್ಲರೂ ಅವರವರ ಮನೆಗಳಿಗೆ ಹಿಂದಿರುಗಿದ್ದಾರೆ. ಜಹಜು ಜಾಗ್ರತೆ ರಿಪೇರಿ ಆಗುವದೆಂದು ನಿರೀಕ್ಷೆ.

ವಿಮಾನ ಯುದ್ಧ.

ಪಶ್ಚಿಮ ರಂಗದಲ್ಲಿ ಬ್ರಿಟಿಷ್ ಫ್ರೆಂಚ್ ಮತ್ತು ಜರ್ಮನ್ ವಿಮಾನ ಪಡೆಗಳ ಚಟುವಟಿಕೆ ಜೋರಾಗಿದೆ. [illegible]ದಲ್ಲಿ ಜರ್ಮನ್ ವಿಮಾನಗಳೂ ಚಟುವಟಿಕೆ ನಡೆಸಿವೆ. ಒಂದು ಜರ್ಮನ್ ವಿಮಾನವನ್ನು ಹೊಡೆದುರುಳಿಸಲಾಯಿತು.

ಒಂದು ಫ್ರೆಂಚ್ ಬೇಹುಗಾರ ಪಡೆ ಶತ್ರು ವ್ಯೂಹದೊಳಗೆ ನುಗ್ಗಿ ಬಹು ದೂರ ಹೋಗಿತ್ತು. ಇದು ಜರ್ಮನಿ ತುಕಡಿಗಳೊಡನೆ ಹೋರಾಡಿಕೊಂಡು ವಿಶೇಷ ಸಾಹಸದಿಂದ ಸ್ವಸ್ಥಾನಕ್ಕೆ ವಾಪಸು ಬಂದಿತು.

ಬ್ಲೈಸ್ ನದಿ ಪ್ರಾಂತದಲ್ಲಿ ಫ್ರೆಂಚ್ ಪಡೆಗೂ, ಶತ್ರು ಪಡೆಗೂ ಘರ್ಷಣೆಯೊದಗಿತು. ಶತ್ರು ವಿಮಾನವೊಂದನ್ನು ಹೊಡೆದುರುಳಿಸಲಾಯಿತು ಎಂಬದಾಗಿ ಫ್ರೆಂಚ್ ಪ್ರಕಟಣೆಗಳು ತಿಳಿಸುತ್ತವೆ. ಜರ್ಮನ್ ಹೈಕಮಾಂಡ್ ಪ್ರಕಟಣೆಯೊಂದು ಬರ್ಲಿನಿನಿಂದ ತಿಳಿಸುವುದೇನೆಂದರೆ-

ಮೋಸೆಲ್ ನದಿಗೂ ಪೆಲಾಟಿನೇಟ್ ಅರಣ್ಯಕ್ಕೂ ಮಧ್ಯಭಾಗದಲ್ಲಿ ನಮ್ಮ ಸೇನಾ ಪಡೆಗಳು ಬಲವಾಗಿ ಫ್ರೆಂಚರೊಡನೆ ಹೋರಾಡಿ ಅವರಲ್ಲಿ ಅನೇಕರನ್ನು ಸೆರೆ ಹಿಡಿದವು.

ಫ್ರೆಂಚ್ ಗಡಿ ಪ್ರದೇಶದಲ್ಲಿ ನಮ್ಮ ವಿಮಾನ ಪಡೆ ಜೋರಾಗಿ ಚಟುವಟಿಕೆ ನಡೆಸಿದವು. ಈ ಸಂದರ್ಭದಲ್ಲಿ ಒಂದು ಜರ್ಮನ್ ವಿಮಾನ ನಾಶವಾಯಿತು.

ಒಪ್ಪಂದದ ಮಾತು.

ವರ್ಸೇಲ್ಸ್ ಒಪ್ಪಂದ ಯೂರೋಪಿಗೆ ಕಳಂಕ ತಂದಿತ್ತ ಕಾಲ ಎಂದೋ ಹೋಯಿತು. ವರ್ಸೇಲ್ಸ್‌ಗಿಂತಲೂ ಹೆಚ್ಚು ವಿಪತ್ಕಾರಿಯಾದ ಕಳಂಕವೇ ಈ ಹಿಟ್ಲರ್. ಜರ್ಮನಿಯೊಡನೆ ದಕ್ಷಿಣ ಆಫ್ರಿಕಾ ಪ್ರತ್ಯೇಕವಾಗಿ ಕರಾರು ಮಾಡಿಕೊಳ್ಳುವ ವಿಚಾರವೇ ಇಲ್ಲ ಎಂದು ಜನರಲ್ ಸ್ಮಟ್ಸ್ ರವರು ಈ ದಿನ ದಕ್ಷಿಣ ಆಫ್ರಿಕಾ ಪಾರ್ಲಿಮೆಂಟಿನಲ್ಲಿ ಹೇಳಿದರು. ಜರ್ಮನಿಯೊಡನೆ ಕರಾರು ಮಾಡಿಕೊಳ್ಳುವಂತೆ ಸೂಚಿಸಿದ ದಕ್ಷಿಣ ಆಫ್ರಿಕದ ಮಾಜಿ ಪ್ರಧಾನಮಂತ್ರಿ ಜನರಲ್ ಹೆರ್ಟ್ಜೋಗ್ ರವರು ಮಾಡಿದ ಭಾಷಣವು 'ಮೈನ್ ಕ್ಯಾಂಪ್' (ಹಿಟ್ಲರನ ಆತ್ಮ ಚರಿತ್ರೆ)ನಿಂದ ಎತ್ತಿ ಪಠಿಸಲ್ಪಟ್ಟ ಅಧ್ಯಾಯದಂತಿದೆ ಎಂದು ಜನರಲ್ ಸ್ಮಟ್ಸ್‌ರವರು ಹೇಳಿದಾಗ ಸಭೆ ನಗುವಿನಲ್ಲಿ ಮುಳುಗಿ ಹೋಯಿತು.

ಜರ್ಮನಿಯೊಡನೆ ಯಾವ ವ್ಯವಹಾರವನ್ನು ಇಟ್ಟುಕೊಳ್ಳಬಾರದೆಂದು ಸೆಪ್ಟೆಂಬರ್ 4ನೇ ತಾ. ಸಭೆ ನಿರ್ಣಯಿಸಿತ್ತು. ಅದೇ ನೀತಿಯನ್ನೇ ಅನುಸರಿಸಬೇಕೆಂಬ ಜನರಲ್ ಸ್ಮಟ್ಸ್‌ರವರ ಸೂಚನೆ ಅನುಮೋದಿತವಾಯಿತು.

ಆರ್ಷೇಯ ಕೀರ್ತಿ ಪ್ರತಾಪಗಳಿಂದ ಮೆರೆದ ಚೀನ.

ನಾಗರೀಕತೆಯಲ್ಲಿ ಮುನ್ನಡೆದು ಪ್ರಗತಿ ಪ್ರಭೆಯನ್ನು ಜಗತ್ತಿನಲ್ಲಿ ಬೀರಿದ ಚೀನದ ಅವನತಿಗೆ ಕಾರಣವೇನು? ಪಾಶ್ಚಾತ್ಯ ರಾಷ್ಟ್ರಗಳ ಹಾಷಂಡೀ ಕೃತ್ಯಗಳಿಂದಾಗಿ ಚೀನಾವು ಅನುಭವಿಸಿದ ವಿಪತ್ತುಗಳೇನು? ಚೀನವು ನಾಗರೀಕತೆಯ ವೈಭವಕಳಸಕ್ಕೇರಿರುವಾಗ ಇನ್ನೂ ಜನಿಸದಾಗದಿದ್ದ ಜಪಾನವು ಇಂದು ವೈಭವ ಶಿಖರದ ಗದ್ದುಗೆಯನ್ನು ಆಕ್ರಮಿಸಿದ ವಿಚಾರವೇನು? ವಿಶಾಲ ಚೀನಾವನ್ನು ಆಕ್ರಮಿಸುವ ಮಹಾತ್ವಾಕಾಂಕ್ಷೆಯಿಂದ ಮುನ್ನುಗ್ಗಿರುವ ಜಪಾನದ ಈ ಧೈರ್ಯವಾದರೂ ಏನು?

ಆರ್ಷೇಯ ಚೀನ.

ಚೀನ ದೇಶವು ಒಂದು ಕಾಲಕ್ಕೆ ಸವನಾಗರೀಕತೆಯಿಂದ ಕೂಡಿ ಹೆಸರುಗೊಂಡಿತ್ತು. ಅಂದಿನ ಚೀನವು ಪ್ರಚಂಡವಾಗಿತ್ತು. ವಿಸ್ತಾರದಲ್ಲಿ ನಲುವತ್ತು ಲಕ್ಷ ಚದರ ಮೈಲುಗಳನ್ನೊಳಗೊಂಡಿದ್ದ ವಿಸ್ತಾರವಾದ ಚೀನವು ಇಂದು ಯೂರೋಪು ಖಂಡಕ್ಕಿಂತ ದೊಡ್ಡ ಮತ್ತು ಭರತಖಂಡದ ಇಮ್ಮಡಿಗಿಂತ ಹೆಚ್ಚಿನ ಪ್ರದೇಶವನ್ನು ಅವಚಿಕೊಂಡಿತ್ತು. ಸಾಂಸ್ಕೃತಿಕ ಬುನಾದಿತನದಲ್ಲಿಯೂ, ಚೀನೀಯರು ಭಾರತೀಯರನ್ನು ಮೀರಿಸಬಹುದು. ಅವರ ಇತಿಹಾಸವು 18 ಶತಮಾನಗಳಾಚೆ ಚಾಚಿದೆ. ಅವರ ಕುಲದ ಮೂಲವು ಯಾರ ಬುದ್ಧಿಗೂ ಸಿಲುಕಿಲ್ಲ. ಅವರು ಎಂದಿನಿಂದಲೂ ಅಲ್ಲೇ ಇದ್ದವರೆಂದು ನಂಬಲಾಗಿದೆ. ಅವರ ಪ್ರದೀರ್ಘವಾದ ಇತಿಹಾಸದ ಸೂಕ್ಷ್ಮ ಸಿಂಹಾವಲೋಕನವನ್ನು ಮಾಡಿದರೆ ಅವರ ಚಕ್ರವರ್ತಿಗಳಲ್ಲೊಬ್ಬನು ಸಾವಿರಾರು ಮೈಲು ಉದ್ದದ ಚೀನಾ ಗೋಡೆಯನ್ನು ಕಟ್ಟಿಸಿದನು. ಅಂದಿನಿಂದ ಆವನ ಮನೆತನಕ್ಕೆ ಚೀನಾ ಎಂದು ಹೆಸರು ಬಂದು, ಅಲ್ಲಿಂದ ಅದೇ ಹೆಸರು ಜನಾಂಗಕ್ಕೂ ಬಂದಿದೆ. ಈ ಸಂದರ್ಭದಲ್ಲಿ ಆಳಿದ ಚೀನೀ ಅರಸರು ಚೀನಾವನ್ನು ಒಳ್ಳೇ ಪ್ರಭಾವಶಾಲಿಯನ್ನಾಗಿ ಮಾಡಿದರು. ರಾಜ್ಯಭಾರ ಮಾಡಿದ ತಾಂಗ ಮನೆತನದವರ ಕಾಲದಲ್ಲಿ ಚೀನವು ನಾಗರೀಕತೆಯ ಅತ್ಯುಚ್ಚ ಶಿಖರಕ್ಕೇರಿತ್ತು. ನಂತರ 1911–12ರಲ್ಲಿ ಡಾ. ಸನ್ಯಾತ್ ಸೇನರವರ ಪ್ರಜಾಪ್ರಭುತ್ವ ಚಳವಳವು ಅರಸರ ಆಳಿಕೆಯನ್ನು ಕೊನೆಗೊಳಿಸಿತು. ಅಂದಿನಿಂದ ಚೀನಾವು ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ.

ಅಳಿಗಾಲ.

ಹೀಗೆ ನಾಗರೀಕತೆಯಲ್ಲಿ ಮುಂದುವರಿದು ತನ್ನ ಪ್ರಗತಿಪ್ರಭೆಯನ್ನು ಬೀರಿದ ಚೀನದ ಅವನತಿ ಹೇಗಾಯಿತೆಂದು ವಿಚಾರಿಸಿದರೆ ಪಾಶ್ಚಿಮಾತ್ಯರು ಚೀನಾದಲ್ಲಿ ವ್ಯಾಪಾರಕ್ಕಾಗಿ ಕಾಲಿಟ್ಟೆಂದಿನಿಂದ ಅವರ ಅಳಿಗಾಲವು ಪ್ರಾರಂಭವಾಯಿತೆಂಬುದು ಕಂಡು ಬರುತ್ತದೆ. ವ್ಯಾಪಾರದ ನೆಪದಿಂದ ರಷ್ಯಾ, ಬ್ರಿಟನ್, ಫ್ರಾನ್ಸ್ ಮೊದಲಾದ ದೇಶಗಳು ಸಂಪತ್ಸಮೃದ್ಧಿಯಿಂದ ಮೆರೆಯುತ್ತಿದ್ದ ವಿಶಾಲ ಚೀನಾದಲ್ಲಿ ಕಾಲಿಕ್ಕಿ ಅದರ ಅಂಗೋಪಾಂಗಗಳನ್ನು ಒಂದೊಂದಾಗಿ ಅಪಹರಿಸತೊಡಗಿದವು. ಕ್ರಮೇಣ ನಲುವತ್ತು ಲಕ್ಷ ಚದರ ಮೈಲುಗಳನ್ನೊಳಗೊಂಡು ಮೆರೆಯುತ್ತಿದ್ದ ಚೀನಾವು ಪರದೇಶೀಯರ ಹಾವಳಿಗೆ ಸಿಲುಕಿ ಬರೇ 20 ಲಕ್ಷ ಚದರ ಮೈಲುಗಳಿಗಿಳಿಯಿತು. ಅರ್ಧ ಚೀನಾವನ್ನು ಬಗಲಿಗೆ ಹಾಕಿದರೂ ಸಾಲದೆ ಈ ರಾಜ್ಯ ವಿಸ್ತರಣಾ ತೃಷೆಯಿಂದ ಬಳಲುತಿದ್ದ ರಾಷ್ಟ್ರಗಳು ಉಳಿದರ್ಧದಲ್ಲೂ ಆರ್ಥಿಕ ಸುಲಿಗೆಯನ್ನು ತಡೆಯಿಲ್ಲದೆ ನಡೆಸಿದರು. ಮುಖ್ಯ ವ್ಯಾಪಾರ ಕೇಂದ್ರಗಳೆಲ್ಲಾ ಹೆರವರ ಅಧೀನವಾಗಿ ಸುಂಕದ ಅಧಿಕಾರಿಗಳು ಹೆರವರೇ ಆದರು. ಅದ್ದರಿಂದ ಚೀನೀಯರ ಕೈಗಾರಿಕೆಯು ಕುಗ್ಗಿ ಮೂಲೆ ಸೇರುವಂತಾಯಿತು. ಹೀಗೆ ಆರ್ಷೇಯವಾಗಿದ್ದ ಚೀನವು ಒಂದೆಡೆ ಪಾಶ್ಚಾತ್ಯ ರಾಷ್ಟ್ರಗಳ ಮಹತ್ವಾಕಾಂಕ್ಷೆಗೆ ಬಲಿಯಾಗಿ ತತ್ತರಿಸುವಾಗಲೇ ಜಪಾನದ ಉದಯವಾಯಿತು.

ಜಪಾನರ ಉದಯ:

ಚೀನವು ಈ ರೀತಿ ಗತಿಗೆಟ್ಟಿರುವ ಸಂದರ್ಭದಲ್ಲಿ ಜಪಾನವು ಮಧ್ಯ ಯುಗದ ತನ್ನ ನಿಷ್ಕ್ರಿಯಲ್ಲಿಯೇ ಇತ್ತು. ಜಪಾನರು ಅನಾದಿಯಿಂದಲೂ ತಮ್ಮ ಹುಟ್ಟಿಗೆ ಹೆಮ್ಮೆಪಟ್ಟುಕೊಳ್ಳುವ ರಾಷ್ಟ್ರ. ತಾವು ಸೂರ್ಯ ವಂಶಜರೆಂದೂ ಅವರು ಹೆಮ್ಮೆಪಟ್ಟುಕೊಳ್ಳುವುದುಂಟು. ಆದರೆ ಚೀನಾದೊಡನೆ ಜಪಾನವನ್ನು ಹೋಲಿಸಿದರೆ ಜಪಾನಿನ ಗತಾಯುಷ್ಯವು ಚೀನಾದಷ್ಟು ಪ್ರಭಾವಯುತವಾಗಿರಲಿಲ್ಲ. ಚೀನಾವು ನಾಗರೀಕತೆಯಲ್ಲಿ ಅಗ್ರಸ್ಥಾನವನ್ನು ಪಡೆದು ವಿರಾಜಿಸುತ್ತಿದ್ದ ಕಾಲಕ್ಕೆ ಜಪಾನವು ನಿದ್ರಾಂಗನೆಯನ್ನಾಲಂಗಿಸಿದ್ದಿತು. ಕಾಗದ, ರೇಶ್ಮೆ, ಮುದ್ರಣ ಕಲೆ ಮೊದಲಾದುವು ಚೀನದಲ್ಲಿಯೇ ಉದ್ಭವವಾದವು. ಜಪಾನವು ಕ್ರಮೇಣ ತನ್ನ ನಿಷ್ಕ್ರಿಯಿಂದೆಚ್ಚತ್ತು ಚೀನಾವನ್ನು ಅನುಸರಿಸತೊಡಗಿತು. ಸಂಸ್ಕೃತಿಯಲ್ಲಿ ಚೀನಾವೇ ಜಪಾನದ ತಾಯಿ. ಚೀನವು ನಾಗರೀಕತೆಯ ವೈಭವದ ಕಳಸಕ್ಕೇರಿದಾಗ ಜಪಾನ, ಜರ್ಮನಿ, ಇಟಲಿ ಇನೇ ಮೊದಲಾದ ಇದೀಗಿನ ಮುಂದುವರಿದ ಜನಾಂಗಗಳು ಇನ್ನೂ ನಾಗರೀಕತೆಯ ಬೆಳಕನ್ನು ಕಂಡಿರಲಿಲ್ಲ. ಕ್ರಮೇಣ ಪಡುವಣಿಗರ ಒತ್ತಾಯದಿಂದ ಜಪಾನವು ಜಾಗತಿಕ ವ್ಯವಹಾರಕ್ಕೆ ಕಾಲಿಕ್ಕಬೇಕಾಯಿತು. ಅಂದಿನಿಂದ ಇಂದಿನ ವರೆಗೆ ಅವರು ಮಿಂಚಿನಂತೆ ಪ್ರಗತಿ ಹೊಂದುತ್ತಿರುವರು. ಗುಣಗ್ರಾಹಿಗಳಾಗಿ ಮುಂದಡಿಯಿಡುತ್ತಿರುವರು. ಆದರೆ ಚೀನೀಯರ ಅವನತಿಯೇನಾಯಿತು?

ಚೀನದ ದುರ್ಗತಿಗೇನು ಕಾರಣ?

ಈ ಪ್ರಶ್ನೆಯನ್ನು ಉತ್ತರಿಸುವುದಕ್ಕೆ ಮೊದಲು ಬೇರೊಂದು ಪ್ರಶ್ನೆ ಹಾಕುವದು ಉತ್ತಮ. ನಮ್ಮ ಭಾರತವು ಏಕೆ ತತ್ತರಿಸಿತು? ನಾಗರೀಕತೆಯ ಜನನಿಯೆಂದೆನಿಸಲ್ಪಟ್ಟ ಭಾರತದ ಅವನತಿಗೆ ಯಾವ ಕಾರಣಗಳನ್ನು ಕೊಡಬಹುದೋ ಅವೇ ಕಾರಣಗಳು ಚೀನದ ದುರ್ಗತಿಗೂ ಹೊಂದಿಕೆಯಾಗಬಹುದು. ಚೀನೀಯರೂ, ಭಾರತೀಯರೂ ಒಂದೇ ವರ್ಗದ ಜೀವಿಗಳು. ನಮ್ಮಿಬ್ಬರಿಗೂ ನಮ್ಮ ನಾಡಿನ ಪ್ರಚಂಡ ವಿಸ್ತಾರದ ಬಗ್ಗೆ ಅದೆಷ್ಟು ಹೆಮ್ಮೆ. ಉತ್ತರದಲ್ಲಿ ಅಲ್ಲಿಂದ ದಕ್ಷಿಣದಲ್ಲಿ ಇಲ್ಲಿಯ ವರೆಗೆ ನಮ್ಮ ದೇಶವು ಆವರಿಸಿದೆಯೆಂದು ಹೆಮ್ಮೆಯಿಂದ ಹೇಳುವೆವಲ್ಲವೇ? ಆದರೆ ಈ ಪ್ರಚಂಡ ವಿಸ್ತಾರವೇ ನಮ್ಮ ಶೈಥಿಲ್ಯಕ್ಕೆ ಕಾರಣವಾಗಿ ಬರ ಬರುತ್ತಾ ನಮ್ಮ ಒಡಕಿಗೆ ಕಾರಣವಾಯಿತೆಂಬವನ್ನು ನಾವು ಮರೆಯಲಾರೆವು. ಪ್ರಚಂಡ ವಿಸ್ತಾರವು ಜನಾಂಗದ ಒಗ್ಗಟ್ಟಿಗೆ ಎಂದೂ ಪ್ರತಿಕೂಲವಾದುದು. ಉತ್ತರದಲ್ಲಿರುವ ಪಂಜಾಬಿಗಳಿಗೂ, ದಕ್ಷಿಣದ ನಮ್ಮ ಕನ್ನಡಿಗರಿಗೂ ಯಾವ ಸಾಮ್ಯ. ವೇಷಕಟ್ಟು ಬೇರೆ, ನುಡಿ ಬೇರೆ, ನಡೆ ಬೇರೆ, ಊಟ ಬೇರೆ, ಉಡಿಗೆ ಬೇರೆ, ಧರ್ಮ ಬೇರೆ, ಜಾತಿ ಬೇರೆ, ರೀತಿ ಬೇರೆ ಎಲ್ಲಾ ಬೇರೆ. ಇಂತಿರುವಾಗ್ಯೆ ಐಕ್ಯತೆಯಾದರೂ ಎಲ್ಲಿ? ಏನೋ ಇದೇ ಉದಯಿಸಿರುವ ರಾಷ್ಟ್ರೀಯ ಭಾವನೆಯೊಂದೇ ನಮ್ಮನ್ನೆಲ್ಲಾ ಏಕೀಕರಿಸಬಲ್ಲುದು. ಆದರೆ ಹಿಂದೆ ಈ ಭಾವನೆ ಇತ್ತೇ? ಒಬ್ಬರ ಮೇಲೊಬ್ಬರು ಕತ್ತಿ ಝಳಪಿಸುತ್ತಿದ್ದ ಆ ಕಾಲಕ್ಕೆ ತಾವಿಬ್ಬರೂ ಭಾರತೀಯರೆಂಬ ಅರಿವು ಹೇಗೆ ಬರಬೇಕು. ಈ ರೀತಿಯ ಶೈಥಿಲ್ಯವೇ ಭಾರತದ ಹಾಗೂ ಚೀನಾದ ನಾಶಕ್ಕೆ ಕಾರಣ.

ಚೀನೀಯರು ಹಿಂದುಳಿದು ಕುಗ್ಗಲು ಇನ್ನೊಂದು ಕಾರಣವಿದೆ. ಅದೇ ವ್ಯಕ್ತಿತ್ವದ ನಾಶ. ಈ ಮಾತು ಭಾರತೀಯರಿಗೂ ಸಲ್ಲುವದು. ವ್ಯಕ್ತಿತ್ವದ ಅರಿವೆಯಲ್ಲಿ ಕಮ್ಮಲ್ಲಿಯುಂತೆಯೇ ಚೀನೀಯರಿಗೆ ಸನಾತನ ಪದ್ಧತಿಯ ಬಗ್ಗೆ ಬಲು ಆದರ. ಮಿತಿ ಮೀರಿದ ಪಿತೃ ಭಕ್ತಿಯಿಂದ ವ್ಯಕ್ತಿತ್ವದ ಪ್ರಕಾಶವಾಗದೆ ಹೋಯಿತು. ಹಿಂದಿನ ಅಂದಚಂದಗಳನ್ನೇ ಹಾಡುತ್ತಿ ಇಂದಿನ ಮತ್ತು ಮುಂದಿನ ವಿಚಾರಗಳನ್ನೇ ಮರೆತು ಬಿಟ್ಟರು. ನಮ್ಮ ಹಿರಿಯರು ದೇವತಾಸದೃಶರು, ನಾವು ಪಾಮರರು, ನಮ್ಮಿಂದ ಏನು ನಡೆದೀತು? ಇಂಗ್ಲಾಂಡಿನ ತತ್ವಜ್ಞಾನವು ಕ್ರಿಸ್ತ ಶಿಖಾಮಣಿಗಳ ಬಾಯಿಂದ ಎಂದಿಗೂ ಹೊರ ಸರಿಸುತ್ತದೆ. ಈ ಭಾವಿಕತನವೇ ಕೆಲಸ ತಪ್ಪಿಸಿಕೊಳ್ಳುವ ಉತ್ತರ ಕುಮಾರನ ಹೆದ್ದಾರಿಯಾಯಿತು. ರಾಷ್ಟ್ರೀಯ ಸಂಘಟನೆಯಿಂದ ಕಾಲಕ್ಕೆ ತಕ್ಕಂತೆ ಮಾರ್ಪಾಡುಗಳಾಗದೆ ನಿಂತವು. ಅಂತೆಯೇ ಅವರು ಕಳೆಗುಂದಿ ಒಡೆದು ಆಳುವವರಲ್ಲಿ ಜಾಣರಾದ ಹೆರವರ ಕೈವಾಡದಲ್ಲಿ ಮುಳುಗಿ ಗತಿಗೆಟ್ಟರು.

ಜಪಾನರ ಮುನ್ನಡೆಯ ಗುಟ್ಟು.

ಹಿಂದಿನ ಅಂದಚಂದಗಳನ್ನು ನೆನೆಯುತ್ತಾ ಅಂಧರಾಗಿ ಹಿಂದುಳಿದು ಕುಗ್ಗಿ ಕಳೆಗುಂದುವ ಚೀನವನ್ನು ಕಂಡು ಜಪಾನರು ಎಚ್ಚೆತ್ತರು. ಹಿರಿಯರು ಏಳು ಮೆಟ್ಟಿನ ಹುಲಿಗಳಾದರೆ ಕಿರಿಯರು ತಿರಿಯರು ಎಂಟು ಮೆಟ್ಟಿನ ಹುಲಿಗಳೆಂಬುದನ್ನರಿತು ಜಪಾನದ ಆಧುನೀಕರಣಕ್ಕೆ ಟೊಂಕ ಕಟ್ಟಿದರು. ತಾವು ನಾಡಿಗರು ಹೆರವರು ಕಾಡಿಗರೆಂಬ ಭಾವನೆಯನ್ನು ತೊರೆದು ಪಾಶ್ಚಿಮಾತ್ಯರ ಅನುಕರಣೆ ಮಾಡಿ ಅವರೊಡನೆಯೇ ಮೇಲಾಟ ಮಾಡತೊಡಗಿದರು. ಚೀನಾದಲ್ಲಿ ರಷ್ಯಾ ಸುಲಿಗೆಯನ್ನು ನಿಲ್ಲಿಸಲು ಜಪಾನರು ಕೊರಿಯಾದ ಮೇಲೆ ಕಾಲಿಟ್ಟರು. ಆದರೆ ಹೆರವರ ಕೈಗೊಂಬೆಗಳಾದ ಚೀನೀಯರು ರಷ್ಯಾವನ್ನು ಬಿಟ್ಟು ಜಪಾನಿಯರನ್ನೇ ಎದುರಿಸಿದರು. ಇದೇ ಪ್ರಥಮ ಚೈನಾ ಜಪಾನು ಯುದ್ಧ. ಇದರಲ್ಲಿ ಜಪಾನರು ವಿಜಯ ಪತಾಕೆಯನ್ನು ಹಿಡಿದು ಮೆರೆದರು. ಕೊರಿಯಾ ಮತ್ತು ಫೋರ್ಮೋಸಾ ದ್ವೀಪಗಳು ಜಪಾನಿಗೆ ಸಂದವು.

ಇದರಿಂದ ರಷ್ಯಾವು ಉದ್ರೇಕಗೊಂಡಿತು. 1902ರಲ್ಲಿ ಬ್ರಿಟನ್, ಜಪಾನ್ ಸಂಧಾನವಾದನಂತರ ಜಪಾನಿನ ಕಳೆಯೇರತೊಡಗಿತು. ಪಡುವಣಿಗರನ್ನು ಜಯಪ್ರದವಾಗಿ ಸ್ಪರ್ಧಿಸುವಷ್ಟು ಸಮರ್ಥರಾದರು. 1904–5ರ ರಷ್ಯಾ ಜಪಾನು ಯುದ್ಧದಲ್ಲಿ ಜಪಾನವು ರಷ್ಯಾವನ್ನು ಬಗ್ಗು ಬಡಿದು ಜಗತ್ತಿನೊಳಗಿನ ಮೊದಲನೇ ತರಗತಿಯ ಜನಾಂಗಗಳ ಸಾಲಿನಲ್ಲಿ ನಿಂತಿತು. ಮುಂದೆ 1914–18ರ ಘೋರ ಸಂಗ್ರಾಮದಲ್ಲಿ ಅದು ತನ್ನ ವ್ಯಾಪಾರ ಕೈಗಾರಿಕೆ ರಸ್ತಾಸ್ತ್ರಗಳನ್ನು ಅಭಿವೃದ್ಧಿಪಡಿಸಿಕೊಂಡು ಪ್ರಬಲ ರಾಷ್ಟ್ರವೆನಿಸಿಕೊಂಡಿತು. 1931ರಲ್ಲಿ ಮಂಚೂರಿಯಾದ ಮೇಲೆ ಧಾಳಿ ನಡೆಸಿ ಅದನ್ನು ಆಕ್ರಮಿಸಿತು. ಮುಂದೆ 1937 ರಲ್ಲಿ ಕ್ರಮೇಣ ಬೆಳೆದು ಆಕಾಶದಲ್ಲಿ ಸಿಲುಕಿದ ಜಪಾನು ಚೀನಾವನ್ನೇ ಆಕ್ರಮಿಸತೊಡಗಿತು. ಅದೇ ಇಂದಿನ ಚೀನಾ ಜಪಾನು ಯುದ್ಧ. ಚೀನಾದ ಕೆಲವೊಂದು ಭಾಗಗಳನ್ನು ಅದು ಆಕ್ರಮಿಸಿಕೊಂಡಿದೆ. ಯುದ್ಧವಾದರೂ ನಡೆಯುತ್ತಲೇ ಇದೆ. ಮುಂದುವರಿದು ಹಿಗ್ಗಿ ಕಳೆಯೇರುತ್ತಿರುವ ಜಪಾನದ ಚಿತ್ರವಿದು. ಹಿಂದುಳಿದು ಕುಗ್ಗಿ ಕಳೆಗುಂದುತ್ತಿರುವ ಚೀನಾದ ಚಿತ್ರವಿದು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ
ಷೇರ್ ಬಂಡವಾಳ	–	50,000	0	0
ವಸೂಲಾದ ಷೇರ್ ಮೊಬಲಗು	–	47 810	0	0
ಜಮಾಖಂಡ ಠೇವಣಾತಿ	–	2,13,262	0	4
ವಸೂಲಾದ ಕ್ಷೇಮನಿಧಿ	–	1 56 611	12	0
ಸೇವಿಂಗ್ ಬ್ಯಾಂಕ್ ಡಿಪಾಜಿಟ್ಟು	–	40 979	5	1
ಫಿಕ್ಸ್ಡ್ ಡಿಪಾಜಿಟ್ಟು	–	23,560	14	0

ಈ ಬ್ಯಾಂಕಿನಿಂದ ಕೊಡಗು [illegible] ಸಹಕಾರಿ ಸಂಘಗಳಿಗೆ [illegible] ಸಾಲ ಕೊಡಲ್ಪಡುತ್ತದೆ.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಬಡ್ಡಿ ಶಾಲಿಯಾನ 3½ ಪರವಲ್ಲಿಯೂ, ಮೂರು ಅದಕ್ಕೆ ಹೆಚ್ಚಿನ ಅವಧಿಯ ಠೇವ[illegible] 19[illegible]ರಿಂದ [illegible] ದೊರೆಯುತ್ತ[illegible]

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಫಿಕ್ಸ್ಡ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಫಿಕ್ಸ್ಡ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-38ರಿಂದ ಹೊಂದಿಕೊಳ್ಳುವಂತೆ [illegible] ವಿಸಲಾಗಿತ್ತು. ಅದನ್ನು ಪುನಃ ತಾ 29-7-39ರಿಂದ ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

ವರ್ಷಕ್ಕೊಂದು ಸರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರರು ಲೆಕ್ಕ ಅಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟ್.—ಪಂದ್ಯಂಡ ಐ. ಬೆಳ್ಯಪ್ಪನವರು, ಎಂ. ಎಲ್. ಸಿ.
ಟ್ರೆಜರರ —ರಾವ ಬಹದ್ದೂರ [illegible]
ಸೆಕ್ರೆಟರಿ. —ಮಿ. ಎಸ್. ಎನ್. ರಾಮಶೆಟ್ಟಿಯವರು

ತಾ. 1-1-1940

ಶುಭ-ಸಂದೇಶ.

[illegible] ಬಗ್ಗೆ ಗಿರಾಕಿ ವ ಹಿತಚಿಂತಕರಿಗೆ ತಮ್ಮ ಸಂತೋಷದ [illegible] ಈ [illegible] ಹೊಸ ವರ್ಷದಲ್ಲಿಯೂ [illegible] ಪ್ರೀತಿ ಪ್ರೋತ್ಸಾಹಗಳನ್ನು ಅಪೇಕ್ಷಿಸಿ, ಎಲ್ಲರಿಗೂ ಶಾಂತಿ ಸುಖವನ್ನು ಹಾರೈಸುವ

Bhuvanendra Products Ltd,
[illegible] S. K.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

52-10 [illegible], ದ. ಕ.

[illegible]

[illegible]

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ [illegible]
[illegible]

ಜ್ವರಗಡ್ಡೆ (ಅಜ್ಜ್ಯ) ಗುಳಿಗೆ.

[illegible]

ಗಣೇಶ ರಾಮಚಂದ್ರ ಶೆಟ್. ಮತ್ತು ಕಂಪೆನಿ,
(32-5) [illegible]

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಹಣತಿಯಿಂದ ದೃಢಗೊಳಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅನೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"
ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೋಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೈಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪರೇಡ್, ಬೆಂಗಳೂರು.

(32-1)

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ತಾ. ೯—೨—೧೯೪೦.

ವಾರ್ಷಿಕ ಚಂದಾ ರೂ. ೩-೮-೦

ಸಂಪುಟ ೧೯] [ಸಂಚಿಕೆ ೩೬

MR. CAN'T : These are very hard days. No; I can't save anything.

MR. CAN. : I have opend a CUMULATIVE DEPOSIT a/c now in the CORPORATION; after this I find that **I CAN SAVE.**

From small amount set apart every month fortunes can be built. It is not difficult to set apart a rupee (or multiple thereof) per month from one's earnings. Those who opened the CUMULATIVE DEPOSIT accounts know how easy it is to save.

Have you opened yours?

THE CANARA BANKING CORPORATION LIMITED.

(Incorporated in British India)

Estd. 1906.

52-6

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರ್‍ಯಾಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara.

52—30

ಕೊಡಂದೇರ ಬಿ. ಮಾಚಯ್ಯ,

L.D.Sc. (COLLEGE OF DENTISTRY)
EX-SUPERVISOR, LAXMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಅವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (29) ನವೀನ ರೀತಿಯ ಚಿಕಿತ್ಸೆ.

ಕೇರಳ ಆಯುರ್ವೇದಿಕ್ ವೈದ್ಯಶಾಲಾ, ವಿರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿಸುತ್ತವೆ:—ಆಸವಗಳು, ಆರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುತ್ತವೆ.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಅಣೆ ಸ್ಟ್ಯಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಾಲಜರ್, (ರಿಜಿಸ್ಟರ್ಡ್)
ಮೆಡಿಕಲ್ ಪ್ರ್ಯಾಕ್ಟಿಶನರ್, ವೀರಾಜಪೇಟೆ.

52-51

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು

ಪೊನ್ನಂಪೇಟೆನಾಡು—ಮ ಪಿ ಜಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಜಿ ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ ಕೆ. ಮೊಗಪ್ಪನವರು

ನಾಪೋಕ್ಲು—ಮ. ಬೆಳ್ಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ. ಎಚ್ ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಸ್ವಾರ್ಥ ಶಕ್ತಿಸಹಿತ್ಯ ಬೀಜಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟಾಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್.
(52-18) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ!
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬೆನಾರೀಸ್, ಡೆಹ್ರಾಡೂ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡೆಲ್ಲಿ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.

52-1

ಚಾಣಕ್ಯ ನೀತಿಯ ಸ್ಟಾಲಿನ್ನ

ಗಂಡಾಂತರದಿಂದ ಜಾರಿಕೊಳ್ಳುವ ಮುಂದಾಳು.

ಕ್ರೌರ್ಯದಿಂದ ಅಧಿಕಾರ ನಡೆಸುವ ಸರ್ವಾಧಿಕಾರಿ.

ಸಂಗ್ರಾಹಕ:—ವ್ಹಿ. ಎಸ್. ಡಿ.

ರಶಿಯ ರಾಜಕಾರಣ.

ರಶಿಯದಲ್ಲಿ ಕ್ರಾಂತಿಯ ಪೂರ್ವದ ಕಾಲ ಕ್ರಾಂತಿಯಿನ್ನೂ ದೂರವಿದ್ದಿತು ಆದರೆ ಕ್ರಾಂತಿಯ ಬೀಜಗಳಿಂದ ಮೊಳಕೆಗಳು ಅದೇ ಹೊರಬಿದ್ದಿದ್ದವು. ಬಹುತರ ಎಲ್ಲ ಕ್ರಾಂತಿಕಾರರು ರಶಿಯದ ಹೊರಗೇ ಇದ್ದರು. ಟ್ರಾಟಿಸ್ಕಿಯವರು ವಿಯೆನ್ನದಲ್ಲಿಯ ಹೊಟೆಲೊಂದರಲ್ಲಿ ತಮ್ಮ ಮಿತ್ರನೊಂದಿಗೆ ಚಹಕುಡಿಯುತ್ತ ಕುಳಿತಿದ್ದರು. ಬಾಗಿಲು ಇಕ್ಕಿದ್ದಿತು. ಒಳಗಿದ್ದವರ ಪರವಾನಿಗೆ ತೆಗೆದುಕೊಳ್ಳುವಷ್ಟು ಸೌಜನ್ಯವನ್ನು ಸಹ ತೋರದ ಒಬ್ಬನು ಒಳಗೆ ಬಂದು ತನ್ನ ಕೈಯಲ್ಲಿದ್ದ ಕಾಜಿನ ಪಾತ್ರೆಯಲ್ಲಿ ಚಹ ಸುರುವಿಕೊಂಡು ಹೊರಗೆ ಹೋದ. ಇಂಥ ಅಸಭ್ಯವರ್ತನೆಯನ್ನು ನೋಡಿ ಟ್ರಾಟ್ಸ್ಕಿಯವರಿಗೆ ಬಹಳ ಆಶ್ಚರ್ಯವಾಯಿತು. ಆಗಂತುಕನು ಹೊರಬಿದ್ದು ಹೋದ ಮೇಲೆ ಅವನಾರೆಂದು ಸಹಜವಾಗಿ ತಮ್ಮ ಮಿತ್ರನನ್ನು ವಿಚಾರಿಸಿದಲ್ಲಿ ಅವನ ಹೆಸರು ಝು.ಗ.ಷ್ವಿ (ಸ್ಟಾಲಿನನ ನಿಜವಾದ ಹೆಸರು) ಎಂದೂ 'ಅವನು ಹೊಸದಾಗಿ ಬೊಲ್ಶೆವಿಕ್ ಮಧ್ಯವರ್ತಿ ಮಂಡಲಕ್ಕೆ ನಿಯಮಿಸಲ್ಪಟ್ಟದ್ದಾನೆಂದೂ ತಿಳಿದುಬಂದಿತು.

ಕೆಲ ದಿನಗಳಾದ ಮೇಲೆ ಟ್ರಾಟಸ್ಕಿಯವರು ರಶಿಯನ್ ಪತ್ರವೊಂದರಲ್ಲಿ ರಶಿಯಕ್ಕೆ ಸಂಬಂಧಿಸಿದ ಲೇಖನವೊಂದು ಯೊಸೆಸ್ ಸ್ಟಾಲಿನ್ನ ಎಂಬ ಹೆಸರು ಕೆಳಗೆ ಪ್ರಸಿದ್ಧವಾದುದನ್ನು ಓದಿದರು. ಅದನ್ನೋದಿದಾಗ ಅದರಲ್ಲಿಯ ವಿಚಾರ ಪರಿಪೂರ್ಣತೆಯನ್ನು ನೋಡಿದವರಿಗೆ ಲೇಖವು ಸ್ಟಾಲಿನ್ನನದೆಂದು ಸಂಶಯಬರುವಂತೆ ಸಹ ಇರಲಿಲ್ಲ. ಟ್ರಾಟ್ಸ್ಕಿಯವರಿಗೆ ಈ ಲೇಖವು ಲೆನ್ನಿನನಿಂದಲೇ ಬರೆಯಲ್ಪಟ್ಟಿರಬಹುದೆಂದೆನಿಸಿತು.

೧೯೧೭ ನೇ ಮೇ ತಿಂಗಳಲ್ಲಿ ಟ್ರಾಟಸ್ಕಿಯವರು ತಮ್ಮ ಇತರ ಕ್ರಾಂತಿಕಾರ ಮಿತ್ರರೊಂದಿಗೆ ಪೆಟ್ರೊಗ್ರಾಡಿಗೆ ಬಂದರು. ಲೆನಿನ್ ಝಿನೋವ ಮುಂತಾದವರೆಲ್ಲರೂ ಅಲ್ಲಿದ್ದರು. ಅಲ್ಲಿ ಸಹ ಸ್ಟಾಲಿನ್ನನ ಹೆಸರು ಕೇಳಬರುತ್ತಿರಲಿಲ್ಲ. ಆದರೆ ಲೆನಿನ್ನನ ಮುಖ್ಯ ಅಂಗವಿದ್ದ ಪ್ರವಾಡಾ ಪತ್ರದಲ್ಲಿ ಮಾತ್ರ ಅವನ ಹೆಸರಿನಲ್ಲಿ ಲೇಖಗಳು ಪ್ರಕಟವಾಗುತ್ತಿದ್ದವೇ ಹೊರತು ಉಳಿದ ಲೇಖನಗಳಿಂದ ಅವನ ಹೆಸರು ಜನತೆಗೆ ಏಕೆ, ರಶಿಯನ್ ಪಾರ್ಲಿಮೆಂಟದಲ್ಲೂ ಸಹ ಹೆಚ್ಚಾಗಿ ಗೊತ್ತಿರಲಿಲ್ಲ.

ದೊಡ್ಡ ಸಭೆಗಳಲ್ಲಿ ಮಾತನಾಡುವದು ಆಗ ನಾಯಕತ್ವದ ಮುಖ್ಯದ್ಯೋತಕವಾಗಿದ್ದಿತು. ಸಭೆಗಳಲ್ಲಿ ಭಾಷಣ ಮಾಡುವ ಸಂಧಿಯನ್ನು ಯಾವ ಪ್ರಮುಖ ಮುಖಂಡನೂ ಕಳೆದುಕೊಳ್ಳುತ್ತಿರಲಿಲ್ಲ. ಆದರೆ ಸ್ಟಾಲಿನ್ನನು ರಶಿಯನರೆದುರಿಗೆ ಭಾಷಣ ಮಾಡಿದ್ದುದು ಎಂದೂ ಕೇಳಬಂದಿಲ್ಲ. ಇಷ್ಟೇ ಅಲ್ಲ; ದೇಶಕ್ಕೆ ಸಂಬಂಧಿಸಿದ ಮುಖ್ಯ ಪ್ರಶ್ನೆಗಳ ಬಗ್ಗೆ ಪಾರ್ಲಿಮೆಂಟದಲ್ಲಿ ಚರ್ಚೆ ನಡೆದಾಗ ತನ್ನ ಹೇಳಿಕೆ ಎಲ್ಲರಿಗೂ ತಿಳಿಯುವಂತೆ ಅವನು ಮಾತು ಸಹ ಚೆನ್ನಾಗಿ ಆಡುತ್ತಿರಲಿಲ್ಲ. ಹೀಗಾಗಿ ಮುಖ್ಯ ಪ್ರಶ್ನೆಗಳ ಮೇಲೆ ನಿರ್ಣಯಗಳಾಗುವಾಗ ಸ್ಟಾಲಿನ್ನನಿಗೆ ಪ್ರಾಶಸ್ತ್ಯ ಎಂದೂ ಸಿಗುತ್ತಿರಲಿಲ್ಲ.

ಸ್ಟಾಲಿನ್ನನ ರಾಜಕಾರಣ ಪ್ರವೇಶ.

ಹೀಗೆಂದ ಮೇಲೆ ಸ್ಟಾಲಿನ್ನನು ರಶಿಯದ ಮುಖ್ಯಾಧಿಕಾರಿಯಾದುದು ಹೇಗೆ? ವಕ್ತೃತ್ವವಿಲ್ಲ ಮುತ್ಸದ್ದಿತನವಿಲ್ಲ ಎಂದ ಮೇಲೆ ಅವನು ಇಷ್ಟು ಘನತೆಗೇರಿದುದು ಹೇಗೆ?

ಅವನು ತನ್ನ ಈ ಪದವಿಗೆ ಬಂದದು ತಂತ್ರ. ಕುತಂತ್ರಗಳಿಂದ ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎಬ್ಬಿಸಿ ಕೂಡ್ರಿಸಿ ತನ್ನ ಕೆಲಸ ಸಾಧಿಸುವದರಿಂದ. ಇವನು ಈ ಕಾರ್ಯಗಳನ್ನು ಹೇಗೆ ಸಾಧಿಸಿದನೆಂಬದನ್ನು ಕೆಳಗೆ ವಿವರಿಸಿದೆ.

ಪೂರ್ವಪರಿಚಯ.

ವಿಸಾರಿಯನ್ ಝುನಾಶಿಲ್ವಿ ಎಂಬ ಟಿಫ್ಲಿಸ್‌ದ ಮೋಚಿಗಾರನ ೪ ನೇ ಮಗನಾದ ಸೋಸೋನು ೧೮೭೯ ಡಿಸೆಂಬರು ೨೧ನೇ ತಾರೀಖಿನ ದಿವಸ ಹುಟ್ಟಿದನು. ಇವನು ಹುಟ್ಟಿದಾಗ ಇವನ ತಾಯಿಗೆ ಇಪ್ಪತ್ತೇ ವರ್ಷಗಳಿದ್ದು ಆವಳು ಬಡತನವನ್ನು ಹಿಂಗಿಸುವದಕ್ಕಾಗಿ ಕೂಲಿ ಕುಂಬಳಿಗಳನ್ನು ಮಾಡುತ್ತಿದ್ದಳು. ತಂದೆಯೋ ಮಹಾ ಕುಡುಕ. ತಾನು ಗಳಿಸಿದ್ದನ್ನೆಲ್ಲಾ ವೊಡ್ಕಾ (ರಶಿಯದ ಶೆರೆ) ಕುಡಿಯುವದರಲ್ಲಿ ಕಳೆದು ಮನೆಯಲ್ಲಿ ಹೆಂಡತಿಯನ್ನು ಪೀಡಿಸುತ್ತಿದ್ದ. ಇವನ ಕ್ರೂರತನದ ಪರಿಣಾಮದಿಂದ ಹೆಂಗಸರು ಎಲಾ ಮುಗಿದಿಯೆಂದ ಬಿಡುಗಡೆ ಹೊಂದಬೇಕೆಂಬ ಇಚ್ಛೆ. ಸ್ಟಾಲಿನ್ನನಲ್ಲಿ ಬಲವಾಗಿ ಅವನು ಅಧಿಕಾರಾರೂಢನಾದ ಮೇಲೆ ಆ ದಿಶೆಯಲ್ಲಿ ಕಾರ್ಯಮಾಡಿದನು. ಸೋಸೋನನ್ನು ತನ್ನಂತೆ ಮೋಚಿಗಾರನನ್ನಾಗಿ ಮಾಡಬೇಕೆಂದು ತಂದೆಯ ಇಚ್ಛೆಯಿತ್ತು. ಆದರೆ ಇವನ ತಾಯಿಯು ಇವನನ್ನು ಪಾದ್ರಿಯನ್ನಾಗಿ ಮಾಡಬೇಕೆಂದು ನಿಶ್ಚಯಿಸಿ ಅದರಂತೆ ಅವನನ್ನು ಟಿಫ್ಲಿಸ್‌ದಲ್ಲಿಯ ಧಾರ್ಮಿಕ ವಿದ್ಯಾಲಯಕ್ಕೆ ಕಳುಹಿದಳು. ಆದರೆ ಇಲ್ಲಿ ಆಹಾರದ ಕೊರತೆಯಿದ್ದುದಲ್ಲದೆ ಶಿಕ್ಷೆಗಳು ಲೆಕ್ಕವಿಲ್ಲದಷ್ಟಿದ್ದವು. ತಮ್ಮ ಕ್ರಾಂತಿಕಾರಕ ವಿಚಾರಗಳನ್ನು ಧರ್ಮದ ಸೋಗಿನ ಹಿಂದೆ ಹೇಗೆ ಮುಚ್ಚಿಡಬೇಕೆಂಬದನ್ನು ಅವರಿಗೆ ಕಲಿಸಿ ಕೊಡಲಾಗುತ್ತಿತ್ತು. ಇಲ್ಲಿಯ ದೊಲಸು ವಾತಾವರಣದಲ್ಲಿ ಕ್ರಾಂತಿಕಾರಕ ವಿಚಾರಗಳು ಹೆಚ್ಚಾಗಿ ಬೆಳೆಯಲು ಅನುಕೂಲವಾಯಿತು. ರಶಿಯದ ಮುಖ್ಯ ಮುಖ್ಯ ಕ್ರಾಂತಿಕಾರರೆಲ್ಲರೂ ಈ ಶಾಲೆಯಿಂದಲೇ ಹೊರಬಿದ್ದವರಾಗಿದ್ದಾರೆ. ಇಂಥವರಲ್ಲಿ ಸ್ಟಾಲಿನ್ನನೂ ಕ್ರಾಂತಿಕಾರಕನಾದದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ದೇವರ ಮೇಲೆ ಸ್ಟಾಲಿನ್ನನಿಗೆ ಮುಂಚಿನಿಂದಲೂ ವಿಶ್ವಾಸವಿರಲಿಲ್ಲ. ಅಲ್ಲದೆ ಜನರಲ್ಲಿಯ ತಪ್ಪುಗಳು ಮಾತ್ರ ಅವನಿಗೆ ಕಂಡು ಬರುತ್ತಿದ್ದವು. ಯಾವ ನಿಸ್ವಾರ್ಥಿ ಕಾರ್ಯಕರ್ತನೂ ಇವನ ಸಂಶಯಕ್ಕೊಳಗಾಗದಿರುತ್ತಿರಲಿಲ್ಲ. ಅವನ ಪ್ರತಿಯೊಂದು ಕೃತ್ಯದಲ್ಲಿಯೂ ಅಧಿಕಾರಸ್ಪೃಯತೆ ತುಂಬಿ ತುಳುಕುತ್ತಿದ್ದಿತು. ಇವನನ್ನು ವಿರೋಧಿಸಿದವರು ಯಾವಾಗಲೂ ತೊಂದರೆಗೊಳಗಾಗದಿರುತ್ತಿರಲಿಲ್ಲ.

ಈ ಸಮಯಕ್ಕೆ ಸ್ಟಾಲಿನ್ನನು ಮಾರ್ಕ್ಸ ಮತ್ತು ಡಾರ್ವಿನ್‌ರ ಗ್ರಂಥಗಳನ್ನೋದಿ ಅವರ ವಿಚಾರಗಳನ್ನು ತನ್ನ ತಲೆಯಲ್ಲಿ ತುಂಬಿಕೊಳ್ಳಹತ್ತಿದ. ಅದರಿಂದ ತತ್ವಾಭ್ಯಾಸದ ಕಡೆಗೆ ಒಲವು ಕಡಿಮೆಯಾಗಿ ದಿನೇ ದಿನೇ ಅವನ ಪ್ರಗತಿಯು ಕುಂಠಿತವಾಗುತ್ತ ನಡೆಯಿತು. ಕೊನೆಗೆ ಶಾಲೆಯ ಅಧಿಕಾರಿಗಳ ಉಪಟಳವನ್ನು ತಡೆಯಲಾರದೆಯೋ ಏನೋ ಅವನು ಶಾಲೆಗೆ ಶರಣುಹೊಡೆದು ರಾಜಕೀಯ ರಂಗದಲ್ಲಿ ಕಾಲಿಟ್ಟನು.

ಸ್ಟಾಲಿನ್ನನ ಚಾಣಕ್ಯ ನೀತಿ.

ಸ್ಟಾಲಿನ್ನನಿಗೆ ಕೊಬಾನು ಎಂಬ ಬಂದು ಹೆಸರಿದ್ದಿತು. ಕೋಬಾನು ಜಾರ್ಜಿಯದಲ್ಲಿಯ ಕ್ರಾಂತಿಕಾರಕನಾಗಿದ್ದನು. ಕಳ್ಳ ರೀತಿಯಲ್ಲಿ ಮುದ್ರಣ ಕಾರ್ಯವನ್ನು ನಡಯಿಸಿ, ಓಡಿ ಹೋಗುವವನು. ಹೀಗೆ ಪಾರಾಗುವ ಪ್ರಯತ್ನದಲ್ಲಿ ಪೋಲೀಸರ ಕೈಯಲ್ಲಿ ಸಿಕ್ಕು ಶಿಕ್ಷೆಗೆ ಪಾತ್ರವಾಗುವದು ಈ ಕ್ರಾಂತಿಕಾರನ ದಿನಚರಿಗಳಾಗಿದ್ದವು. ರಾಜಕೀಯ ಜೀವನದ ಪ್ರಾರಂಭದಿಂದಲೂ ಸ್ಟಾಲಿನ್ನನ ಬಗ್ಗೆ ಕತೆಗಳು ಹರಡಿದ್ದವು. ಅವನು ಎರಡು ಬಣ್ಣಗಳಲ್ಲಿ ಒಡಕು ಹುಟ್ಟಿಸಿ ಅದರಲ್ಲಿಯ ಒಡಕಿನ ಲಾಭವನ್ನು ತಾನು ಮಾಡಿಕೊಳ್ಳುತ್ತಿದ್ದನೆಂದು ಮತ್ತು ತನ್ನ ಜೊತೆಯ ಕಾರ್ಯಕರ್ತರನ್ನು ಎಷ್ಟೋ ಸಲ ಮೋಸ ಮಾಡಿ ಪೋಲೀಸರಿಗೆ ಒಪ್ಪಿಸಿದನೆಂದೂ ತಿಳಿದು ಬಂದಿದೆ.

೧೯೦೩ ರಲ್ಲಿ ರಶಿಯದಲ್ಲಿ ಬೋಲ್ಶೆವಿಕ್ ಮತ್ತು ಮೆನಶೆವಿಕ್ ಎಂಬ ಎರಡು ವಿಭಾಗಗಳಾದವು. ಕೋಬಾನು ಯಾವ ಪಕ್ಷಕ್ಕೂ ಸೇರದೆ ಅನುಕೂಲ ವೇಳೆ ಬರುವ ವರೆಗೆ ದೂರಗಿದ್ದು ಕೊನೆಗೆ ಪ್ರಥಮ ಪಕ್ಷವನ್ನು ಸೇರಿದ. ಆದರೂ ಇವನ ಹೆಸರು ಲೆನಿನ್ನನ ವರೆಗೆ ಬಂದಿರಲಿಲ್ಲ.

೧೯೦೫ ರಲ್ಲಿ ಸಂಭವಿಸಿದ ಕ್ರಾಂತಿಯಲ್ಲಿ ಇವನು ಬೆಳಕಿಗೆ ಬರಲೇ ಇಲ್ಲ. ವಕ್ತೃತ್ವವಂತೂ ಇವನಿಗೆ ಗೊತ್ತಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಕುತಂತ್ರಗಳನ್ನು ರಚಿಸುವವರಲ್ಲಿ ಜಾಣನಾದ ಇವನು ಸಾರ್ವಜನಿಕರೆದುರಿಗೆ ಬರುವದನ್ನು ಯಾವಾಗಲೂ ತಪ್ಪಿಸುತ್ತಿದ್ದ.

ಕಾಕೇಶಸ್‌ದಲ್ಲಿ ಕುತಂತ್ರಗಳು.

೧೯೦೫ ರ ನಂತರ ರಾಜಕೀಯ ಚಟುವಟಿಕೆಗಳು ಕಡಿಮೆಯಾಗಿ ಹಿಂಸಾತ್ಮಕ ದಂಗೆಗಳು ಹೆಚ್ಚಾದವು. ಕೊಳ್ಳೆಸುಲಿಗೆಗಳು ಹೆಚ್ಚಾದವು. ಇವುಗಳಿಗೆ ಕೋಬಾನು ಸಂಬಂಧವಿಟ್ಟುಕೊಂಡಿದ್ದನೆಂದೂ ಆದರೆ ತಾನು ಸ್ವತಃ ಈ ಕಾರ್ಯ ಮಾಡದೆ ಬೇರೆ ಜನರನ್ನು ಹಚ್ಚಿ ತನ್ನ ಕಾರ್ಯ ಮಾಡಿಸಿಕೊಂಡು ತಾನು ಮಾತ್ರ ಸಂಭಾವಿತನಂತೆ ತೋರಿಸಿಕೊಳ್ಳುತ್ತಿದ್ದನೆಂದೂ ಈಗ ತಿಳಿದು ಬಂದಿದೆ.

೧೯೧೨ ರಲ್ಲಿ ಕೋಬಾನನ್ನು ಲೆನಿನ್ನನು ಜುಲುಮೆಯಿಂದ ಬೋಲ್ಶೆವಿಕ್ ಮಧ್ಯವರ್ತಿ ಮಂಡಲಕ್ಕೆ ನಿಯಮಿಸಿದ. ಆಗ ಈ ಜಾರ್ಜಿಯನ್ ಪ್ರಾಂತದ ಕೋಬಾನು ತನ್ನ ಹೆಸರನ್ನು ಬದಲಿಸಿ ಸ್ಟಾಲಿನ್ನ (ಉಕ್ಕಿನಂಥ) ಎಂಬ ಅನ್ವರ್ಥಕ ನಾಮವನ್ನಿಟ್ಟುಕೊಂಡನು.

೧೯೧೩ ರಲ್ಲಿ ಸ್ಟಾಲಿನ್ನನನ್ನು ಸೈಬೇರಿಯಕ್ಕೆ ಗಡಿಪಾರು ಮಾಡಲಾಯಿತು.

ಅವನಿಗೆ ಅರ್ಧಾಂಗವಾಯುವಿದ್ದುದರಿಂದ ಸೈನ್ಯಕ್ಕೆ ಅವನನ್ನು ಸೇರಿಸಿಕೊಳ್ಳಲಾಗಲಿಲ್ಲ. ಇವನ ಬುದ್ಧಿಯು ಸಾಕಷ್ಟು ಚುರುಕಿರಲಿಲ್ಲ. ಈಗಲೂ ಇಲ್ಲ. ೪ ವರ್ಷಗಳನ್ನು ಜೇಲಿನಲ್ಲಿ ಕಳೆಯುವಾಗ ದೀರ್ಘ ಪ್ರಯತ್ನ ಮಾಡಿದರೂ ಅವನಿಗೆ ಜರ್ಮನ್ ಭಾಷೆ ಕಲಿಯುವದಾಗಲಿಲ್ಲ.

ಸೈಬೇರಿಯದಿಂದ ರಶಿಯಕ್ಕೆ

೧೯೧೭ರಲ್ಲಿ ರಾಜಮನೆತನದ ಪತನದ ನಂತರ ಸ್ಟಾಲಿನ್ನನು ತಿರುಗಿ ರಶಿಯಕ್ಕೆ ಬಂದು ಕೆಲವು ದಿವಸಗಳ ವರೆಗೆ ಅಧಿಕಾರ ಸೂತ್ರಗಳನ್ನು ತನ್ನ ಕೈಯಲ್ಲಿಟ್ಟುಕೊಂಡನು. ಲೆನಿನ್ನನು ಬಂದ ಕೂಡಲೇ ಅವನು ಲೆನಿನ್ನನಿಗೆ ಸ್ಥಳಕೊಟ್ಟು ತಾನು ಹಿಂಜರಿಯಬೇಕಾಯಿತು. ಹಿಂದಿನ ಘಟನೆಗಳ ಮೇಲಿಂದ ಮುಂದಾಗುವದನ್ನು ತಿಳಿಯುವ ಮುತ್ಸದ್ದಿತನ ಅವನಲ್ಲಿದ್ದದರಿಂದ ಅವನು ೧೯೦೫ ಅಥವಾ ೧೯೧೭ ರ ಕ್ರಾಂತಿಗಳಲ್ಲಿ ಮುಂದೆ ಬರಲಿಲ್ಲ. ತನ್ನಲ್ಲಿಯೇ ಕಾರ್ಯಸಾಧನೆಯ ವಿಶ್ವಾಸವಿಲ್ಲ. ಮತ್ತು ಯಾವದಾದರೊಂದು ಸಾಹಸ ಕಾರ್ಯಕ್ಕೆ ಪರರು ಕೈಹಾಕಿ ಅದನ್ನು ಮುಗಿಸುವ ವರೆಗೆ ಅದರ ಸಮೀಪಕ್ಕೆ ಹೋಗದೆ ತಪ್ಪಾದರೆ ಪರರದು, ಒಪ್ಪಾದರೆ ತನ್ನದು ಈ ಧೋರಣೆಯನ್ನನುಸರಿಸುತ್ತಾನೆ.

ಯಾರಾದರೂ ತಪ್ಪು ಮಾಡಿದುದು ಇವನಿಗೆ ಕಂಡರೆ ಅಥವಾ ತನ್ನ ವಿರುದ್ಧ ಕಾರ್ಯ ನಡೆಯಿಸಿದರೆ ಇವನು ಆ ಪ್ರತಿಸ್ಪರ್ಧಿಯ ನಾಶ ಮಾಡುವ ವರೆಗೂ ಅವನ ಬೆನ್ನು ಬಿಡುವದಿಲ್ಲ. ತಪ್ಪು ಎಷ್ಟೇ ಸಣ್ಣದಿದ್ದರೂ ಕುತಂತ್ರಿಯಾದ ಈತನು ಅದನ್ನು ದೊಡ್ಡದಾಗಿ ಕಾಣಿಸುವಂತೆ ಮಾಡಿ ಆ ವ್ಯಕ್ತಿಯು ದಂಡನೆಯೊದುದು ಸರಿ ಎಂದು ಜನರೆಲ್ಲ ಸೈ ಎನ್ನುವಂತೆ ಕಾರ್ಯ ಮಾಡುವನು.

ಸ್ಟ್ಯಾಲಿನ್ನನು ಒಳ್ಳೇ ಚತುರನೆಂದೂ ಬುದ್ಧಿಸಮತೋಲವುಳ್ಳವನೂ ಎಂದು ಕೆಲವು ಮನಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಆದರೆ ಇವೆಲ್ಲ ಗುಣಗಳಿಂದ ಪರಿಪೂರ್ಣನಾದವನು ಲೆನಿನ್ನನೊಬ್ಬನೇ ಮತ್ತು ಈ ಗುಣಗಳ ಅಭಾವವು ಸ್ಟ್ಯಾಲಿನ್ನನಲ್ಲಿದ್ದಷ್ಟು ಮತ್ತಾರಲ್ಲಿಯೂ ಇಲ್ಲ. ಸ್ಟ್ಯಾಲಿನ್ನನ ಆಕಾಂಕ್ಷೆ ಮತ್ತು ಅವನ ಬುದ್ಧಿ ಶಕ್ತಿಗಳಲ್ಲಿ ಸಂಬಂಧವು ಎಳ್ಳಷ್ಟೂ ಇಲ್ಲ. ವಿದ್ಯಾಭ್ಯಾಸವೂ ಅಷ್ಟಕ್ಕಷ್ಟೇ ಎಂದ ಮೇಲೆ ಸ್ಟ್ಯಾಲಿನ್ನನು ಮುಂದೆ ಬಂದುದು ಹೇಗೆ ಎಂಬುದು ಸಮಸ್ಯೆಯಾಗಿ ಪರಿಣಮಿಸದಿರದು. ಮುಖಂಡರಲ್ಲಿ ಒಡಕು ಹುಟ್ಟಿಸಿ ಒಬ್ಬರ ವಿರುದ್ಧ ಮತ್ತೊಬ್ಬರನ್ನೆಬ್ಬಿಸಿ ತಾನು ಎರಡೂ ಕಡೆಗಳಿಂದ ಲಾಭ ಹೊಂದಿ ಇಬ್ಬರನ್ನೂ ನಾಶಮಾಡಿ ಅಧಿಕಾರವನ್ನು ವಶಪಡಿಸಿಕೊಳ್ಳುವಲ್ಲಿ ಇವನಂಥ ನಿಪುಣನು ಸದ್ಯಕ್ಕೆ ಜಗತ್ತಿನಲ್ಲಿ ಯಾರೂ ಇಲ್ಲವೆಂದೆನ್ನಬಹುದು.

ತನ್ನ ಮುಖ್ಯ ಗುಣವಾದ ಕಾಠಿಣ್ಯವ ಉಪಯೋಗವನ್ನು ಇವನು ಬಹಳ ಚೆನ್ನಾಗಿ ಹೊಂದಿದ್ದಾನೆ. ಆಪ್ತ ಇಷ್ಟರು ತನ್ನ ತನ್ನವರೆಂಬ ಭೇದಭಾವ ತೋರಿಸದೆ ಕೆಲವು ಸಲ ಕಾರ್ಯಮಾಡಿ ಜನರ ಒಲವನ್ನು ತನ್ನೆಡೆಗೆ ತಿರುಗಿಸಿಕೊಂಡಿದ್ದಾನೆ ಈಗ ಅವನು ಎಂಥ ದುಷ್ಕೃತ್ಯ ಮಾಡಿದಾಗ್ಯೂ ಅದು ನಿಷ್ಕಪಟ ವೃತ್ತಿಯ ಸೋಗಿನ ಕೆಳಗೆ ಮುಚ್ಚಿ ಹೋಗುತ್ತಿದೆ.

ಕುತ್ಸಿತ ಸ್ವಭಾವ.

ಸ್ಟ್ಯಾಲಿನ್ನನು ತನಗೆ ಬೇಕಾದುದನ್ನು ದೊರಕಿಸಲು ಎಂಥ ಹೀನ ಕೃತ್ಯವನ್ನೆಸಗಲೂ ಹಿಂಜರಿಯ. ಪರರಿಗೆಷ್ಟೇ ಕಷ್ಟವಾದರೂ ತನ್ನ ಕಾರ್ಯವಾದರೆ ತೀರಿತು. ಕ್ರೆಮ್ಲಿನ್ನ ಅರಮನೆ ದೊರಕಿಸಬೇಕಾದರೆ ಲೆನಿನ್ನನು ಸ್ಟ್ಯಾಲಿನ್ನನ ಸಲುವಾಗಿ ಕೆಲವರನ್ನು ಹೊರದೂಡಬೇಕಾಯಿತು. ಇದರಂತೆ ತನ್ನ ಸುಖಕ್ಕಾಗಿ ಅರಮನೆಯ ಎಲ್ಲ ಕಟ್ಟಳೆಗಳನ್ನೂ ಅವನು ತನ್ನ ಅನುಕೂಲದ ಪ್ರಕಾರ ಮುರಿಯಲು ಹಿಂಜರಿಯುತ್ತಿರಲಿಲ್ಲ.

ಸ್ಟ್ಯಾಲಿನ್ನನು ಎರಡು ಸಾರೆ ಮದುವೆಯಾದ. ಮೊದಲನೆಯ ಹೆಂಡತಿಯಿಂದ ಒಬ್ಬ ಗಂಡು ಹುಡುಗನಿದ್ದು ಅವನು ಸ್ಟ್ಯಾಲಿನ್ನನಿಗೆ ಬಹಳ ಅಂಜುತ್ತಿದ್ದನು. ಸ್ಟ್ಯಾಲಿನ್ನನ ಕಾಠಿಣ್ಯವೆಂದರೆ ಅಂತಹದು. ಸ್ಟ್ಯಾಲಿನ್ನನ ಮಗನು ಯಾವಾಗಲೂ ತಮ್ಮ ಮನೆಯಲ್ಲಿಯೇ ಇರುತ್ತಿದ್ದ. ಮೊದಲನೇ ಹೆಂಡತಿಯು ಕ್ಷಯದಿಂದ ೧೯೦೭ರಲ್ಲಿ ತೀರಿಕೊಂಡಳು. ಈಗಾದರೂ ಸ್ಟ್ಯಾಲಿನ್ನನು ಮೊದಲನೇ ಹೆಂಡತಿಯ ಮಗನೊಡನೆ ಸಂಬಂಧ ಚೆನ್ನಾಗಿಲ್ಲ. ಅವನ ಮಗನು ದೂರದ ಊರೊಂದರಲ್ಲಿ ಇಂಜಿನಿಯರನಾಗಿ ಕಾಲ ಕಳೆಯುತ್ತಿದ್ದಾನೆ.

ಸ್ಟ್ಯಾಲಿನ್ನನು ಎರಡನೇ ಸಲ ರಶಿಯನ್ನ ಹುಡುಗಿಯೊಂದನ್ನು ಮದುವೆಯಾದ. ಆಗ ಸ್ಟ್ಯಾಲಿನ್ನನಿಗೆ ೪೧ ವರ್ಷ ಮತ್ತು ಅವನ ಹೆಂಡತಿ ಅಲಿಲುವೆಇಯೊಳಿಗೆ ೧೭ ವರ್ಷಗಳಿದ್ದವು. ಇವಳಿಂದ ಸ್ಟ್ಯಾಲಿನ್ನನಿಗೆ ಎರಡು ಮಕ್ಕಳಿವೆ. ಸ್ಟ್ಯಾಲಿನ್ನನ ರಾಜಕೀಯ ಧೋರಣೆಯ ವಿರೋಧವಾಗಿ ತನ್ನ ಅಭಿಪ್ರಾಯ ವ್ಯಕ್ತಮಾಡಿದುದಕ್ಕಾಗಿ ೩೨ರಲ್ಲಿ ಆತ್ಮಹತ್ಯ ಮಾಡಿಕೊಳ್ಳಬೇಕಾಯಿತು. [illegible] ಅವಳು ಅಭಿಪ್ರಾಯ ತ[illegible] ಪಡಿಸಿದುದಕ್ಕೆ ಸ್ಟ್ಯಾಲಿನ್ನನು ಅವಳನ್ನು ತೀವ್ರವಾಗಿ ಖಂಡಿಸಿದುದೇ ಇದಕ್ಕೆ ಕಾರಣ.

ರಶಿಯಾದಲ್ಲಿ ಕಾರ್ಯ ಮಾಡುವವರೆಲ್ಲರೂ ಸ್ಟ್ಯಾಲಿನ್ನನ ಕ್ರೌರ್ಯದ ಅಂಜಿಕೆಯಿಂದಲೇ.

ಸ್ಟ್ಯಾಲಿನ್ನನಿಗೆ ಜನರಲ್ಲಿ ಯಾವಾಗಲೂ ವಿಶ್ವಾಸವಿಲ್ಲ. ಈಗ ಅವನು ಜನರಿಗೆ ಅಂಜಹತ್ತಿದ್ದಾನೆ. ಯುದ್ಧಕ್ಕಂತೂ ಅವನು ಅಂಜುವಷ್ಟು ಯಾರೂ ಅಂಜುವದಿಲ್ಲ. ಬ್ರಿಟನ್ನದವರೊಡನೆ ಒಪ್ಪಂದ ಮಾಡಿಕೊಂಡಿದ್ದರೆ ರಶಿಯಕ್ಕೆ ನಿಜವಾಗಿ ಲಾಭವಿದ್ದಿತು ಆದರೆ ದೊಡ್ಡ ಯುದ್ಧದಿಂದ ದೂರವಿರಬೇಕೆಂಬ ಇಚ್ಛೆಯಿಂದ ಸ್ಟ್ಯಾಲಿನ್ನನು ಹಿಟ್ಲರನ ಕೂಡ ಈ ಆಶ್ಚರ್ಯಕರವಾದ ಒಪ್ಪಂದ ಮಾಡಿಕೊಂಡಿರುವನು.

ಕ. ವಿ.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 20-1-40ರಲ್ಲಿ ಬೆಳಿಗ್ಗೆ 10-30 ಗಂಟೆಗೆ ಮಡಿಕೇರಿ ಬ್ಯಾಂಕು ಆಫೀಸಿನಲ್ಲಿ ಶ್ರೀಮಾನ್ ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ಮೆ. ಗಳಾದ (1) ಪಿ. ಐ. ಬೆಳ್ಯಪ್ಪನವರು (ಅಧ್ಯಕ್ಷರು), (2) ರಾ. ಬಾ. ಪಿ. ದೇವಯ್ಯನವರು (ಟ್ರೆಜರರ್), (3) ಪಿ. ಜಿ. ಐಯ್ಯಪ್ಪನವರು, (4) ಕೆ. ಸಿ. ಕರುಂಬಯ್ಯನವರು, (5) ಐ. ಪಿ. ಕಾರ್ಯಪ್ಪನವರು, (6) ಕೆ. ಯಂ. ಕುಶಾಲಪ್ಪನವರು, (7) ಪಿ. ಸಿ. ಕರುಂಬಯ್ಯನವರು, (8) ಕೆ. ಕೆ. ಗಣಪತಿಯವರು,(9) ಹೆಚ್. ಎಂ. ಪುಪ್ಪಣ್ಣನವರು, (10) ಎಂ. ಎಸ್. ಸೋಮಯ್ಯನವರು, (11) ಬಿ. ಸಿ. ಮಾಚಯ್ಯನವರು, (12) ಎಂ. ಸಿ. ದೇವಯ್ಯನವರು, (13) ಎನ್. ಬಿ. ಸೋಮಯ್ಯನವರು ಮತ್ತು(14) ಎಸ್. ಎಸ್. ರಾಮಶೆಟ್ರು (ಗೌರವ ಕಾರ್ಯದರ್ಶಿ).

ಸರಕಾರ ಸಂಘಗಳ ರಿಜಿಸ್ಟ್ರಾರವರೂ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರವರೂ ಸಹ ಹಾಜರಿದ್ದರು.

ಡೈರೆಕ್ಟರು ಮೆ ಎನ್. ಶಂಕರಯ್ಯನವರು ಗೈರ್ಹಾಜರಾಗಿದ್ದರು.

1. ಕಳೆದ ಮೀಟಿಂಗು ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

2. ಸುಪರ್‌ವಿಜನ್ ಬೋರ್ಡಿನ ಕಳೆದ ಮೀಟಿಂಗು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

3. ಕಳೆದ ಡಿಸೆಂಬರ್ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿ.

ಹಿಂದಿನ ಶಿಲ್ಕು	ರೂ.	11,118	7	1
ನವಂಬರ್ ತಿಂಗಳಲ್ಲಿ ವಸೂಲಿ	ರೂ.	34,737	13	0
ಜುಮ್ಲ	ರೂ.	45,856	10	7
ಸದರಿ ತಿಂಗಳಲ್ಲಿ ಖರ್ಚು	ರೂ.	23,940	13	9
ಬಾಕಿ ಶಿಲ್ಕು	ರೂ.	21,915	6	4

4. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು.

(1) ಕಿಗ್ಗಟ್ಟುನಾಡು ಕ್ರಾಪ್, ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 6,000, (2) ಕೈಕೇರಿ ಕ್ರಾಪ್, ಲೋನ್, ಸೇಲ್, ಅಂಡ್, ಸಪ್ಲೈ ಸೊಸೈಟಿಗೆ ರೂ. 2,000 (3) ಹಾತೂರು ಕುಂದ ಮತ್ತು ಈಚೂರು ಕ್ರಾಪ್, ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 1,000, (4) ಮೂರ್ನಾಡು ಟೌನ್ ಸೊಸೈಟಿಗೆ ರೂ. 500, (5) ವೀರಾಜಪೇಟೆ ಕ್ರಾಪ್, ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 5,000 ಮತ್ತು (6) ಮೂರ್ನಾಡು ಕ್ರಾಪ್, ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 2,000.

5. ಬರುವ ಬ್ಯಾಂಕಿನ ಮಹಾ ಸಭೆಯ ಮೀಟಿಂಗಿನಲ್ಲಿ ಚರ್ಚೆ ಬಗ್ಗೆ ಬ್ಯಾಂಕಿಗೆ ಸೇರಿದ ಮೆಂಬರುಗಳಿಂದ ಮತ್ತು ಮೆಂಬರು ಸೊಸೈಟಿಗಳಿಂದ ಕಳುಹಿಸಲ್ಪಟ್ಟ ಠರಾವುಗಳನ್ನೆಲ್ಲಾ ಚರ್ಚಿಸಿ ಅವಶ್ಯವಿರುವ ಠರಾವುಗಳನ್ನು ಗುರ್ತಿಸಿ ಅವುಗಳನ್ನು ಮತ್ತು ಆಡಿಟ್ ರಿಪೋರ್ಟನ್ನನುಸರಿಸಿ ಕೆಲವು ಠರಾವುಗಳನ್ನು ಜನರಲ್ ಬಾಡಿಯವರ ಚರ್ಚೆ ಬಗ್ಗೆ ಇಡಬಹುದೆಂತ ತಾರೀಕು 30-12-39ರಲ್ಲು ನೇಮಕ ಮಾಡಿದ ಸಬ್ ಕಮಿಟಿಯವರು ರಿಪೋರ್ಟು ಮಾಡಿಕೊಂಡ ಮೇರೆ ಅವುಗಳನ್ನು ಅಂಗಿಕರಿಸಲಾಯಿತು.

6. ಬ್ಯಾಂಕಿನ ಸೇವಿಂಗ್ಸ್ ಬ್ಯಾಂಕು ಲೆಕ್ಕದಲ್ಲಿ ಸೌತ್ ಇಂಡಿಯಾ ಇನ್ಶೂರೆನ್ಸ್ ಸೊಸೈಟಿಯ ಕೊಡಗು ಲೋಕಲ್ ಬೋರ್ಡಿನ ಕನ್‌ವೀನರರ ಹೆಸರಿನಲ್ಲಿರುವ ಸೇವಿಂಗ್ಸ್ ಬ್ಯಾಂಕು ಮೊಬಲಗು ರೂ. 1859-2-0ನ್ನು ವಸೂಲಾತಿ ಬಗ್ಗೆ ಇನ್ಶೂರೆನ್ಸ್ ಸೊಸೈಟಿಯ ಸೆಕ್ರೆಟರಿಯವರು ಮದ್ರಾಸಿನ ಡಿಪ್ಯುಟಿ ರಿಜಿಸ್ಟ್ರಾರವರ ಕೋರ್ಟಿನಲ್ಲಿ ಈ ಬ್ಯಾಂಕಿನ ಮೇಲೆ ದಾವಾ ದಾಖಲು ಮಾಡಿದ ಮೇರೆ ಸದರಿ ಕೋರ್ಟಿನಿಂದ ಬಂದ ತಾರೀಕು 15-12-39ರ ನಂಬರು A. F. 270,3940ನ್ನು ಓದಲಾಯಿತು.

ಈ ವ್ಯಾಜ್ಯದ ಬಗ್ಗೆ ಬ್ಯಾಂಗಿನ ಪರವಾಗಿ ವ್ಯವಹಾರ ನಡಿಸಲು ಪ್ರೆಸಿಡೆಂಟರು ಮೆ. ಪಿ. ಐ. ಬೆಳ್ಯಪ್ಪ ಯಂ. ಯಲ್. ಸಿ. ಯವರನ್ನೂ ಮತ್ತು ಪಿ. ಜಿ. ಐಯ್ಯಪ್ಪ ಬಿ. ಎ. ಬಿ. ಎಲ್‌ರವರನ್ನೂ ಮದ್ರಾಸಿಗೆ ಕಳುಹಿಸುವಂತೆ ತೀರ್ಮಾನವಾಯಿತು.

7. ಬ್ಯಾಂಕಿನ ಉಳುವರಿ ಶಿಲ್ಕು ಇರುವ ಪಕ್ಷ ರೂ. 10,000ವನ್ನು ಪ್ರೆಸಿಡೆಂಟರ ಹೆಸರಿನಲ್ಲಿ ಪೋಸ್ಟು ಆಫೀಸಿನ ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿಡುವಂತೆ ತೀರ್ಮಾನವಾಯಿತು.

8. ನೇಗಳೆಕರ್ಕಳ್ಳಿ ಸೊಸೈಟಿಯವರು ಬ್ಯಾಂಕಿಗೆ ಕೊಡಲಿಕ್ಕಿರುವ ಸಾಲಗಳಿಗೆ ಹೊಸದಾಗಿ 5 ವರ್ಷದ ಕಂತುಗಳನ್ನು ಕೊಡಿಸಿಕೊಡಬೇಕೆಂದು ಅಸಿಸ್ಟೆಂಟ್ ರಿಜಿಸ್ಟ್ರಾರವರ ಎಂಡಾರ್ಸ್‌ಮೆಂಟ್ ಸಮೇತ ಕಳುಹಿಸಿದ ಅರ್ಜಿಯನ್ನು ಓದಲಾಗಿ, ಸೊಸೈಟಿಯ ಕೆಲಸ ಕಾರ್ಯಗಳ ವಿಷಯ ಹೆಚ್ಚಿನ ಸಂಗತಿ ತಿಳಿಯಲು ಪುನಹ ಅಸಿಸ್ಟೆಂಟ್ ರಿಜಿಸ್ಟ್ರಾರವರನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

9. ಪಬ್ಲಿಕ್ ಜನರ ಪ್ರಯೋಜನಾರ್ಥವಾಗಿ ಬ್ಯಾಂಕಿನಲ್ಲಿ ಒಂದು ಮೊಫಿ ವಾಚನಾಲಯವನ್ನು ತೆರೆಯಬೇಕೆಂದು ಸುಪರ್‌ವಿಜನ್ ಬೋರ್ಡಿನ ಪ್ರೆಸಿಡೆಂಟರವರಿಂದ ಬಂದ ಪತ್ರವನ್ನು ಓದಲಾಗಿ ಜನರಲ್ ಬಾಡಿಯವರ ಮಂಜೂರಾತಿ ನಿರೀಕ್ಷಣೆ ಮೇರೆ ಬ್ಯಾಂಕಿನ ಕಾಮನ್‌ಗುಡ್ ಫಂಡ್‌ನಿಂದ 50 ರೂ. ಗಳನ್ನು ಮಂಜೂರುಮಾಡುವಂತೆ ತೀರ್ಮಾನವಾಯಿತು.

10. ಬರುವ ಬ್ಯಾಂಕಿನ ಜನರಲ್ ಬಾಡಿ ಮೀಟಿಗಿನ ಖರ್ಚಿಗೋಸ್ಕರ ಜನರಲ್‌ಬಾಡಿಯವರ ಒಪ್ಪಿಗೆ ನಿರೀಕ್ಷಣೆ ಮೇರೆ 250 ರೂಪಾಯಿಗಳನ್ನು ಮಂಜೂರು ಮಾಡುವಂತೆ ತೀರ್ಮಾನಿಸಲಾಯಿತು.

ಬ್ಯಾಂಕಿನ ಇನ್ನೊಂದು ಡೈರೆಕ್ಟರುಗಳ ಮೀಟಿಂಗನ್ನು ತಾರೀಕು 17-2-40 ರಲ್ಲು ಬೆಳಿಗ್ಗೆ 10-30 ಗಂಟೆಗೆ ಬ್ಯಾಂಕು ಆಫೀಸಿನಲ್ಲಿ ನಡಿಸುವಂತೆ ತೀರ್ಮಾನವಾಯಿತು.

12. ಬ್ಯಾಂಕಿನ ಡೈರೆಕ್ಟರುಗಳ ಕೋರಿಕೆ ಮೇರೆ ಜನರಲ್‌ಬಾಡಿ ಮೀಟಿಂಗಿಗೆ ತಾನು ಅಧ್ಯಕ್ಷನಾಗಿ ಬರುವದು ಬ್ಯಾಂಕಿನ ಬೈಲಾಕ್ಕೆ ವಿರೋಧ ಮಾಡಿದಂತಾಗುವುದೆಂದು ಮೆ. ಯಂ. ಶಿವರಾಯರು ಬರೆದ ಪತ್ರವನ್ನು ಓದಲಾಯಿತು.

ಸಾಧಾರಣ ಹೊರಗಿನ ಮಹನೀಯರುಗಳನ್ನೇ ಅಂಥಾ ಸಂದರ್ಭಗಳಲ್ಲಿ ಅಧ್ಯಕ್ಷರನ್ನಾಗಿ ಅವ್ಹಾನಿಸುವದು ಬ್ಯಾಂಕಿನ ಪದ್ಧತಿಯಾಗಿರುವುದರಿಂದ ಅವರನ್ನೇ ದಯವಿಟ್ಟು ಸದರಿ ಮೀಟಿಂಗಿಗೆ ಅಧ್ಯಕ್ಷರಾಗಿ ಬರುವಂತೆ ಕೇಳಿಕೊಳ್ಳಲು ತೀರ್ಮಾನವಾಯಿತು.

13. ಬ್ಯಾಂಕಿಗೆ ಕೊಡಲಿಕ್ಕಿರುವ ಪೂರ್ತಿ ಸಾಲಗಳ ಬಡ್ಡಿಯನ್ನು ವಜಬಿಡಬೇಕೆಂದು ಮೂರ್ನಾಡು ಸ್ಟೋರು ಸಂಘದವರು ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

14. ವೀರಾಜಪೇಟೆ ನಾಡಿನವರು ದನಗಳ ಪ್ರದರ್ಶನವನ್ನು ನಡಿಸಲು ಬ್ಯಾಂಕಿನಿಂದ 20 ರೂಪಾಯಿ ಧನ ಸಹಾಯ ಮಾಡಬೇಕೆಂದು ಬರಕೊಂಡ ಅರ್ಜಿ ಮೇರೆ ಅವರ ಕೋರಿಕೆಯು ಪ್ರಥಮವಾದ್ದರಿಂದ 10 ರೂಪಾಯಿಯನ್ನು ಜನರಲ್ ಬಾಡಿಯವರ ಮಂಜೂರಾತಿ ನಿರೀಕ್ಷಣೆಯಿಂದ ಬ್ಯಾಂಕಿನ ಕಾಮನ್‌ಗುಡ್ ಫಂಡಿನಿಂದ ಕೊಡಬಹುದೆಂತ ತೀರ್ಮಾನವಾಯಿತು

15. ಬ್ಯಾಂಕಿನ ಪೂರ್ತಿ ರಿಜರ್ವ್ ಫಂಡು ಮೊಬಲಗು (ಈ ವರ್ಷದ್ದು ಸೇರಿ) ರೂ. 28,344-3-10ಕ್ಕೆ ಗವರ್ನ್‌ಮೆಂಟ್ ಪ್ರಾಮಿಸರಿ ನೋಟುಗಳನ್ನು ಕೊಂಡುಕೊಳ್ಳುವಂತೆ ತೀರ್ಮಾನವಾಯಿತು.

16. ಬ್ಯಾಂಕಿನ ಮೆಂಬರಾಗಲು ಅರ್ಜಿ ಬರಕೊಂಡ ಮೆ. ಬಿ. ಕೆ. ಹಬಿಬುಲ್ಲಾ ಖಾನ್ ಪ್ರೆಸ್ಸಿಯವರನ್ನು ಮೆಂಬರಾಗಿ ಆರಿಸಿಕೊಳ್ಳಲಾಯಿತು.

17. ಸೌತ್ ಇಂಡಿಯಾ ಇನ್ಶೂರೆನ್ಸ್ ಸೊಸೈಟಿಯ ಕೊಡಗು ಲೋಕಲ್ ಬೋರ್ಡಿಗೆ, ಸದರಿ ಇನ್ಶೂರೆನ್ಸ್ ಸೊಸೈಟಿಯಿಂದ ವಿಮೆ ಕೆಲಸಗಳನ್ನು ನಡಿಸಿದ್ದಕ್ಕಾಗಿ ಬರಬೇಕಾಗಿರುವ ಕಮಿಷನನ್ನು ವಸೂಲು ಮಾಡಲಿಕ್ಕಾಗಿ ಲೋಕಲ್‌ಬೋರ್ಡಿನ ಮಾಜಿ ಕನ್‌ವೀನರ ಮೇಲೆ ದಾವಾ ದಾಖಲು ಮಾಡುವಂತೆಯೂ ತೀರ್ಮಾನವಾಯಿತು.

18. ಬ್ಯಾಂಕಿನ ಬರುವ ಜನರಲ್ ಬಾಡಿ ಮೀಟಿಂಗಿಗೆ, ವ್ಯವಸಾಯೋತ್ಪನ್ನಗಳನ್ನು ಪ್ರದರ್ಶಿಸುವ ಏರ್ಪಾಡು ಮಾಡುವಂತೆ ತೀರ್ಮಾನವಾಯಿತು.

ಪಿ. ಐ. ಬೆಳ್ಯಪ್ಪ,
ಅಧ್ಯಕ್ಷರು.

ಯುದ್ಧವೇಕೆ?

ಲೇಖಕ:- ಜೆ. ಸಿ. ಕುಮಾರಪ್ಪ. 'ಹರಿಜನ'

ಜಗತ್ತು ಯುದ್ಧಕ್ಕಾಗಿಯೇ ತಯಾರಿಗೊಳ್ಳುತ್ತಿದೆ. ಪ್ರತಿಯೊಂದು ಕಾರ್ಯವಾದರೂ ಆ ನೋಟದಿಂದಲೇ ನಡೆಸಲ್ಪಡುತ್ತಿದೆ. ಕಾಲು ಶತಮಾನದಿಂದಲೇ ಈ ಅಂತರಿಕ ಯುದ್ಧವು ನಡೆದಿದೆ. ಆದ್ದರಿಂದ ಇಂದಿನ ಯುದ್ಧವು ಅಗತ್ಯವಿದೆ. ಯುದ್ಧವು ನಿಂತು ಶಾಂತಿಯು ನೆಲೆಗೊಳ್ಳಬೇಕಾದರೆ ಜಗತ್ತಿನಲ್ಲಿ ಸರಳ ಜೀವನವು ನೆಲೆಸಿ, ಅಮಾನುಷ ಕಾಂಕ್ಷೆಗಳು ಮಾಯವಾಗಲೇ ಬೇಕು.

ಕಳೆದ ಮಾನವ ನಾಶಕ ಯುದ್ಧದಿಂದ ಇನ್ನೂ ಕಾಲು ಶತಮಾನವಾಗಿಲ್ಲ. ಅಷ್ಟರಲ್ಲಿಯೇ ಮತ್ತೊಂದು ಘೋರ ಸಂಗ್ರಾಮವು ಶಾಂತಿಪ್ರಿಯ ಜನತೆಯನ್ನು ಅಲ್ಲೋಲಕಲ್ಲೋಲ ಮಾಡುತ್ತಿದೆ. ಈ ರೀತಿಯ ವಿನಾಶಕಾರಕ ಸಂಭವಗಳು ಯಾಕೆ? ಏತರಿಂದ ಆಗುತ್ತವೆಂದು ಪರಿಶೀಲಿಸಲು ಅನೇಕರು ಸತತ ಪ್ರಯತ್ನಿಸುತ್ತಿರುವರು. ಇದಕ್ಕೆ ಉತ್ತರವು ತೀರಾ ಸುಲಭವಾಗಿದೆ. ಇಂದು ಜಗತ್ತು ಯುದ್ಧಕ್ಕಾಗಿ ತಯಾರು ಮಾಡಲ್ಪಟ್ಟಿದೆಯೇ ವಿನಹ ಶಾಂತಿಗಾಗಿ ಅಲ್ಲ. ಹಳ್ಳವಿರುವ ಕಡೆ ನೀರು ಹರಿಯುವದು ಸ್ವಭಾವ. ನಾವು ಹೇಗೆ ಪ್ರಯತ್ನಿಸಿದರೂ ನೀರು ಬೇರೆ ಕಡೆ ಹರಿಯುವದು ಅಸಂಭವ. ಹಳ್ಳವನ್ನು ಎತ್ತರಿಸಿ ಸರಿಪಡಿಸದ ವಿನಹ ನೀರು ಹಳ್ಳದತ್ತ ಸಾಗುವದು ನಿಲ್ಲದು. ಅದ್ದರಿಂದ ಇಂದು ಜಗತ್ತಿನ ರಾಷ್ಟ್ರಗಳು ಯುದ್ಧಕ್ಕಾಗಿ ತಯಾರು ಮಾಡುತ್ತಿವೆ. ಇದರ ಫಲಿತಾಂಶವು ಯುದ್ಧವಲ್ಲದೆ ಬೇರೆಯಾಗದು. ಆದ್ದರಿಂದ ಯುದ್ಧವನ್ನು ನಿಲ್ಲಿಸಲು ಈ ತಯಾರಿಯನ್ನು ನಿಲ್ಲಿಸಿ ಶಾಂತಿಯತ್ತ ಕಡೆಗೆ ನಾವು ಜನತೆಯ ದೃಷ್ಟಿಯನ್ನು ತಿರುವಬೇಕು ಎಂದಲ್ಲದೆ ಯುದ್ಧವು ನಿಲ್ಲಲಾರದು.

ಇಂದಿನ ಆಧುನಿಕ ಯುದ್ಧಗಳು ಮಾನವನ ಗೌರವಕ್ಕಾಗಿ ಅಲ್ಲ, ಪ್ರತೀಕಾರ ಮಾಡಲಿಕ್ಕಲ್ಲ, ಇಲ್ಲವೇ ಸ್ವಾರ್ಥತೆಯಿಂದಲ್ಲ. ಬೇರೆ ರಾಷ್ಟ್ರಗಳ ಕಚ್ಚಾ ಮಾಲುಗಳ, ವ್ಯಾಪಾರ ಕೇಂದ್ರಗಳ ಸ್ವಾಧೀನತೆಯಿಂದ ತಮ್ಮ ದೇಶದ ಉತ್ಪತ್ತಿಯನ್ನು ಹೆಚ್ಚಿಸುವ ಕಾಂಕ್ಷೆಯಿಂದ ಯುದ್ಧಗಳು ನಡೆಯುತ್ತಿವೆ. ಈ ರೀತಿಯ ಚೌರ್ಯದಿಂದ ನಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವ ಕಾಂಕ್ಷೆ ಇರುವ ವರೆಗೆ ದೇಶದಲ್ಲಿ ಶಾಂತಿ ನೆಲೆಸಬೇಕೆಂದು ಕೂಗಿಕೊಳ್ಳುವದು ಕೇವಲ ಕನವರಿಕೆಯೆಂಬುದರಲ್ಲಿ ಸಂಶಯವಿಲ್ಲ. ಯುದ್ಧವು ಇಂದು ಅನಿವಾರ್ಯವಾದ್ದು, ಯಾಕೆ? ಇಂದಿನ ತಯಾರಿಯ ದೃಷ್ಟಿಯಿಂದ ಅಗತ್ಯವಾದ್ದು. ಇಂದು ಎಲ್ಲಾ ರೀತಿಯ ಚಾಕ ಚಕ್ಕಗಳ ಬೆನ್ನೆಲುಬೇ ಯುದ್ಧ. ಇಂದು ಯಾವ ಮೂಲೆಯಲ್ಲಿ ನೋಡಿದರೂ ಯುದ್ಧತಯಾರಿಯೇ. ವ್ಯಾಪಾರ ಸಂಸ್ಥೆಗಳಾದರೂ ಕ್ಷಿಪ್ರದಲ್ಲಿ ಯುದ್ಧ ಸಾಧನ ಸಾಮಗ್ರಿಗಳ ಕಾರ್ಖಾನೆಗಳಾಗಿ ಮಾರ್ಪಡಿಸಲನುಕೂಲವಾಗುವಂತೆ ರಚಿತವಾಗಿವೆ. ನಿಜವಾಗಿಯೂ ಜಗತ್ತು ಯುದ್ಧದಲ್ಲೇ ಮುಳುಗಿದೆಯೆಂಬುದನ್ನು ಜಗತ್ತಿನ ಕಾರ್ಯಕಲಾಪಗಳೇ ವ್ಯಕ್ತಪಡಿಸುತ್ತವೆ.

1919ರಿಂದ 1939ರ ವರೆಗೂ ಜಗತ್ತು ಯುದ್ಧದಲ್ಲಿಯೇ [illegible] ರುವದು. [illegible] ಯುದ್ಧ, ಒಮ್ಮೆಗೆ ಪ್ರದರ್ಶನವಾಗಿರಲಿಲ್ಲ. ಮುಂದಿನ [illegible] ಹೋಮಕ್ಕೆ [illegible] ಕಾಲವದು. ಇಂದಾಗ [illegible] ಬಹಿರಂಗವಾಗಿದೆ. ಅಂದಿಗೂ ಇಂದಿಗೂ ವ್ಯತ್ಯಾಸವೇನು? ಅಂದೂ, [illegible] ಯುದ್ಧವು [illegible] ವದೋ ಎಂಬ ಹೆದರಿಕೆ ಇತ್ತು. ಇಂದಾದರೂ ಯುದ್ಧದಲ್ಲಿ [illegible] ಎಂಬ ಭಯವಿದೆ. ಹೀಗೆ ಮಾನವ ಮನಸಿನಲ್ಲಿ ಶಾಂತಿಯಿಲ್ಲದೆ ವಿನಾಶಕಾರಕಗಳ ಕೋಲಾಹಲವು ನಡೆದ ಅನಂತರ ಚರಿತ್ರೆಯನ್ನು ಮುಟ್ಟಿಸಿದಾಗ ಜಗತ್ತಿನಲ್ಲಿ ಶಾಂತಿಯೆಲ್ಲಿಂದ ಬರಬೇಕು?

ಯೂರೋಪಿನ ಜನತೆಯು ತಮ್ಮ ರಾಜ್ಯವಿಸ್ತರಣಾ ಕಾಂಕ್ಷೆಯನ್ನು ನಿವಾರಿಸಿಕೊಂಡು ಜಗತ್ತು ಶಾಂತಿಯಲ್ಲಿರಬೇಕೆಂದು ಆಶಿಸುತ್ತಿರುವರು. ಶಾಂತಿಯೂ, ಈ ಅಧಿಕಾರಲಾಲಸೆಯೂ ಐಕ್ಯದಿಂದ ಕೆಲಸ ಮಾಡವೆಂಬುದು ಅವರಿಗೆ ಗೋಚರವಾಗಿರಲಿಕ್ಕಿಲ್ಲ. ಯಾಕೆ? ಜಗತ್ತಿಗೆ ಈ ತತ್ವವನ್ನು ಅರಿತಂತೆ ಕಂಡುಬರುವದು. ಗಾಂಧೀಜಿಯವರ 70ನೇ ಜನ್ಮೋತ್ಸವ ಸಮಾರಂಭದಲ್ಲಿ ಅವರಿಗೆ ಒಪ್ಪಿಸಿದ ಪುಸ್ತಕದಲ್ಲಿ ಬರೆದಿರುವ ಅಸಂಖ್ಯಾತ ಪ್ರಮುಖ ಲೇಖಕರಾದರೂ ಈ ತತ್ವವನ್ನು ಮರೆತು ಬಿಟ್ಟಿರುವರು. ಎಲ್ಲರೂ ಸತ್ಯಾಗ್ರಹವು ಚಳವಳವನ್ನು ಅಥವಾ ದಬ್ಬಾಳಿಕೆಯನ್ನು ನಿಲ್ಲಿಸಲು ಗಾಂಧಿಯವರು ಕಂಡುಹಿಡಿದ ಸುಗಮ ಹಾದಿಯೆಂದು ಒಪ್ಪುತ್ತಾರೆ. ಇದು ಪ್ರಾಮುಖ್ಯ ವಿಚಾರವಾದರೂ ಸಣ್ಣ ವಿಚಾರ. ಗಾಂಧೀಜಿಯವರ ಜೀವನವನ್ನು ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿದರೆ 'ದಿನಚರಿ ಜೀವನದಲ್ಲಿ ಶಾಂತಿಯನ್ನು ಅಭ್ಯಸಿಸಿ ಸಂಘಟಿತರಾಗಿ ವರ್ತಿಸಿರಿ ಎಂಬ' ಅವರ ಸಂದೇಶವನ್ನು ಅವರು ಸಾರಿರುವರು. ನಮ್ಮ ಪ್ರಯತ್ನದಿಂದ, ನಮ್ಮ ದೇಶದಲ್ಲಿ ಮಾಡಲ್ಪಡುವ ವಸ್ತುಗಳಲ್ಲಿ ನಮ್ಮ ಕಾಂಕ್ಷೆಯು ಪೂರ್ತಿಯಾಗುವಂತೆ ನಮ್ಮನ್ನು ನಾವು ತರಬೇತು ಮಾಡಿಕೊಳ್ಳುವದೇ ಇಂದು ಅಗತ್ಯವಿರುವ ಸಾಧನ. ಇತರರ ಸಾಧನಗಳಿಗೆ ಕಾಂಕ್ಷಿಸಿ ಆಂದೋಲನವೆಬ್ಬಿಸುವದು, ಯಾ ಅಶಾಂತಿ ಉಂಟುಮಾಡುವದು ಇಂದಿನ ಯುದ್ಧದ ಮಾದರಿಯೇ. ಗಾಂಧೀಜಿಯವರ ಈ ಸಂದೇಶವನ್ನು ಸ್ವೀಕರಿಸಲು ನಾವು ತಯಾರಿದ್ದೇವೆಯೇ? ಗಾಂಧೀಜಿಯವರ ಈ ತತ್ವವನ್ನು ಸ್ವೀಕರಿಸಿ ಸರಳ ಜೀವನವನ್ನು ಬಯಸಿ ಸತ್ಯಾಗ್ರಹಿಯಂತೆ ಜೀವನ ನಡೆಸಲಾರೆವೇ?

ಕಾಂಗ್ರೆಸ್ಸೂ, ಖಾದಿಯೂ.

ಲೇ:-ಮಹಾತ್ಮ ಗಾಂಧಿ.

'ಹರಿಜನ' ತಾ. 27-1-40.

ಕಾಂಗ್ರೆಸ್ ಘಟನೆಯಲ್ಲಿರುವ ಖಾದಿ ಶರತ್ತು ಕಾಂಗ್ರೆಸಿಗರಿಂದ ಅನುಸರಿಸಲ್ಪಡುವದರ ಬದಲು ಮೀರಿಯಲ್ಪಡುತ್ತಿದೆ ಎಂಬ ಅರ್ಥದ ಪತ್ರಗಳು ನನ್ನ ಕೈಗೆ ಸಿಕ್ಕಿವೆ. ಕಾಂಗ್ರೆಸ್ ಉಮೇದ್ವಾರರನ್ನು ಮುನಸಿಪಾಲಿಟಿಗಳಿಗಾಗಲೀ, ಯಾ, ಸ್ಥಳೀಯ ಬೋರ್ಡುಗಳಿಗಾಗಲೀ ಆರಿಸುವಾಗ ಕಾಂಗ್ರೆಸ ಅಧಿಕಾರಿಗಳು ಖಾದೀ ಶರತ್ತನ್ನು ಪಾಲಿಸುವದಿಲ್ಲವೆಂಬುದು ಒಂದು. ಖಾದಿ ಧರಿಸುವ ಯೋಗ್ಯರಾದ ವ್ಯಕ್ತಿಗಳು ಸಿಕ್ಕದ್ದರಿಂದ ಈ ಖಾದೀ ಶರತ್ತನ್ನು ಬದಿಗೊತ್ತಲಾಗುವದೆಂಬುದು ಎರಡನೆಯ [illegible] ಖಾದಿ ಶರತ್ತು [illegible] ಎಂದ ವಾದಕರು. [illegible] ಕಾಂಗ್ರೆಸ ಘಟನೆಯ [illegible] ಶರತ್ತು ಬದಲಾಯಿಸಲ್ಪಡಲಿ ಎಂದು ಹೇಳುವವರೂ ಇರುವರು. ಪ್ರತಿಯೊಬ್ಬ ಕಾಂಗ್ರೆಸಿಗನು [illegible] ಲಭಿಸುವದು. ಆದ್ದರಿಂದ ಖಾದಿ ಶರತ್ತನ್ನು ಬದಿಗೊತ್ತಿ ಕಾಂಗ್ರೆಸಿನ ಘಟನೆಯನ್ನು ಉಲ್ಲಂಘಿಸುವ ಕಾಂಗ್ರೆಸಿಗರು ತಮಗೆ ಹಾನಿ ತಂದೊಡ್ಡಿಕೊಳ್ಳುತ್ತಿರುವರು.

ಸ್ವರಾಜ್ಯಕ್ಕೂ ಖಾದಿಗೂ ಸಂಬಂಧವಿಲ್ಲವೇನು? ಕಾಂಗ್ರೆಸಿನ ಘಟನೆಯಲ್ಲಿ ಖಾದಿ ಶರತ್ತನ್ನು ಹಾಕಿದ ಆ ಕಾಂಗ್ರೆಸಿಗರು, ಇಂದಿನ ನಮ್ಮ ರಾಜಕಾರಣರು ಮುಂದಿಡುತ್ತಿರುವ ವಾದಸರಣಿಯನ್ನು ತಿಳಿಯದಷ್ಟು, ಯಾ ಮುನ್ನೋಡದಷ್ಟು ಮತಿಹೀನರೇನು? ಮಿಲಿಯಾಂತರ ಭಾರತೀಯರಿಗೆ ಸ್ವರಾಜ್ಯ ಲಭಿಸಬೇಕಾದರೆ, ಬಡತನದ ಧುಳಕ್ಕೆ ಬಲಿಯಾಗಿರುವ ಲಕ್ಷಾಂತರ ಜನರ ಉದ್ಧಾರವಾಗಬೇಕಾದರೆ, ನಿರಕ್ಷರ ಕುಕ್ಷಿಗಳಾಗಿ ನಿರಾಶ್ರಿತರಾಗಿರುವ ಅಸಂಖ್ಯಾತ ಭಾರತಮಾತೆಯ ಪುತ್ರ ಪುತ್ರಿಯರ ಕಲ್ಯಾಣವಾಗಬೇಕಾದರೆ, ಖಾದಿಯಿಂದಲ್ಲದೆ ಬೇರೆಯಿಲ್ಲ ಎಂದು ನಾನು ಮೊದಲು ಸಾರಿ ಹೇಳಿದ್ದೇನೆ. ಈಗಲಾದರೂ ಧೈರ್ಯವಾಗಿ ಹೇಳುತ್ತೇನೆ. ಸತತ ಖಾದಿ ಧರಿಸುವದು ದೇಶದ ಬಡ ಜನತೆಯೊಡನೆ ತಾನು ಐಕ್ಯವಾಗುವ ಚಿಹ್ನೆಯಾಗಿದೆ. ಜನತೆಯ ಹಿತಕ್ಕಾಗಿ ಸ್ವಾರ್ಥತ್ಯಾಗ ಮಾಡುವ ಚಿಹ್ನೆಯಾಗಿದೆ. ಖಾದಿ ಮೊರಗಾಗಿ ಪರದೇಶಿ ವಸ್ತುಗಳಿಗೆ ಉಡಲು ಸುಲಭವಲ್ಲದಿದ್ದರೂ ದೇಶಿಯರಾಗಿ, ಬಡಭಾರತೀಯರಿಗಾಗಿ ತನ್ನ ತಾಪವನ್ನು ಅದು ಸೂಚಿಸುತ್ತದೆ.

ಐಕ್ಯತೆ ಮತ್ತು ನ್ಯಾಯ.

ಲೇ:-ಮಹಾತ್ಮ ಗಾಂಧಿ.

'ಹರಿಜನ' ತಾ. 27-1-40.

ಹಿಂದೂ ಮುಸ್ಲಿಂ ಐಕ್ಯದ ವಿನಹ ಹಿಂದೂ ದೇಶದ ಸ್ವಾತಂತ್ರ್ಯವು ಕನವರಿಕೆಯೆಂದೂ, ಕೋಮುವಾರು ಐಕ್ಯತೆ ಇಲ್ಲದೆ ಸ್ವರಾಜ್ಯವು ಲಭಿಸದೆಂದೂ ಹೇಳಿದ ನನ್ನ ಘೋಷಣೆಯಿಂದ ಭಾರತಕ್ಕೆ ಸರಿಪಡಿಸಲಸದಳವಾದ ಕೇಡನ್ನು ಬಗೆದಂತಾಗಿದೆಯೆಂದೂ ಕೋಮುವಾರು 'ಐಕ್ಯತೆ' ಎಂಬದರ ಬದಲು ಪಂಗಡಗಳಲ್ಲಿ 'ನ್ಯಾಯಶೀಲತೆ' ಇಲ್ಲದಿದ್ದರೆ ಸ್ವರಾಜ್ಯ ಲಭಿಸುವದು ಕಷ್ಟ ಎಂದು ಹೇಳುವದು ಒಳಿತೆಂದೂ, ಒಬ್ಬ ಸಂಪರ್ಕಕರು ನನ್ನಲ್ಲಿಗೆ ಬಂದು ಉದ್ಗರಿಸುತ್ತಿದ್ದರು. ನಾನು ಎಷ್ಟೇ ವಿವರಣೆ ಕೊಟ್ಟರೂ ಅವರು ತೃಪ್ತರಾಗಲಿಲ್ಲ. ನನಗೆ ಪೂರ್ಣ ಬಿಡುವಿಲ್ಲದಿದ್ದ ಪ್ರಯುಕ್ತ 'ಹರಿಜನ' ಪತ್ರಿಕೆಯಲ್ಲಿ ಆ ವಿಚಾರ ಚರ್ಚಿಸುವೆನೆಂದು ಭರವಸೆ ಕೊಟ್ಟೆ. ನನ್ನ ಈ ತಾರ್ಕಣೆಯು ಅವರನ್ನು ಸಮಾಧಾನ ಪಡಿಸೀತೆಂದು ನಾನು ನಂಬಲಾರೆ.

ಕೋಮುವಾರು ಐಕ್ಯತೆ ಇಲ್ಲದೆ ಅಹಿಂಸಾ ರೀತಿಯಿಂದ ಸ್ವರಾಜ್ಯವನ್ನು ಗಳಿಸುವದು ಕಷ್ಟವೆಂದು ಈ ಮೊದಲೇ ಸಾರಿರುವೆನು. ಆ ನನ್ನ ನಂಬಿಕೆಯು ಇನ್ನೂ ಬದಲಾಗಲಿಲ್ಲ. ಕೋಮುಗಳ ಐಕ್ಯತೆಯು ಆಗಬೇಕಾದರೆ ನ್ಯಾಯಶೀಲತೆ ಅವಶ್ಯ. ಮುಸ್ಲಿಂ ಅಥವಾ ಇನ್ನಾವ ಐಕ್ಯತೆಯಾದರೂ ಲಂಚದಿಂದ ಸಾಧ್ಯವಿಲ್ಲ. ಲಂಚ ಕೊಡುವದೆಂದರೆ ಹೇಡಿತನ ಅಥವಾ ಹಿಂಸೆ. ನಾನು ಯಾರಿಗೂ ಲಂಚ ಕೊಡಲಾರೆ. ನನ್ನ ದಯಾಭಾವದಿಂದ ಸಂಶಯವನ್ನು ನಿವಾರಿಸಿಕೊಳ್ಳುವೆನು. ದಯಾ ಭಾವವಿಲ್ಲದ ನ್ಯಾಯಶೀಲತೆಯು ಪ್ರಯೋಜನವಿಲ್ಲ.

ಆದ್ದರಿಂದ ಈ ಐಕ್ಯತೆಯ ಪ್ರಶ್ನೆಯನ್ನಾಗಲೀ ಅಥವಾ ಅದಕ್ಕಾಗಿ ಮಾಡುವ ಪ್ರಯತ್ನವನ್ನಾಗಲೀ ನಾನು ಬಿಟ್ಟುಕೊಡಲಾರೆ. ಮಿ. ಜಿನ್ನಾರವರು ನನ್ನ ಹೇಳಿಕೆಗೆ ಕೊಟ್ಟ ಉತ್ತರವು ಹಿಂದೂ ಮುಸ್ಲಿ ಐಕ್ಯದ ಬುಡಕ್ಕೇ ಕೊಡಲಿ ಹಾಕುವಂತಿದೆ. ಹಿಂದೂ ದೇಶವು ವಿವಿಧ ಜನಾಂಗಗಳಿಂದ ಕೂಡಿದ ವಿವಿಧ ಮತೀಯರ ರಾಷ್ಟ್ರವೆಂಬ ಜಿನ್ನಾರವರ ಉದ್ಗಾರವು ಈ ಕಳೆದ ಅರ್ಧ ಶತಮಾನದಿಂದ ಕಾರ್ಯ ಮಾಡುತ್ತಿರುವ ಕಾಂಗ್ರೆಸ್ಸಿನ ಧ್ಯೇಯವನ್ನೇ ಮುರಿದು ಹಾಕುವಂತಾಗಿದೆ. ಆದರೆ ಜಿನ್ನಾರವರ ಈ ಅಭಿಪ್ರಾಯವು ಮುಸ್ಲಿಂ ಲೀಗಿನ ಚರಿತ್ರೆಯಲ್ಲಿ ಕ್ಷಣಿಕವೆಂದು ಭಾವಿಸುತ್ತೇನೆ. ವಿವಿಧ ಪ್ರಾಂತಗಳಲ್ಲಿರುವ ಮುಸ್ಲಿಮರು ಹಿಂದೂ, ಕ್ರಿಶ್ಚಿಯನ್ ಸಹೋದರರಿಂದ ವಿಭಾಗಿಸಿ ನಿಲ್ಲಲು ಆಶಿಸರೆಂದು ನಂಬುತ್ತೇನೆ. ಮುಸ್ಲಿಮರಾಗಲೀ, ಕ್ರಿಶ್ಚಿಯನರಾಗಲೀ ಹಿಂದೂಮತದವರ ಯಾ ಜಾತಿಯಿಂದ ಜಾತಿಗೆ ಸೇರಿದವರ ಪೀಳಿಗೆಗಳೇ. ಮಿ. ಜಿನ್ನಾರವರು ಅವರ ಸ್ನೇಹಿತರ ಅಭಿಪ್ರಾಯವನ್ನು ಸಹ ಪ್ರತಿನಿಧಿಸುತ್ತಿಲ್ಲವೆಂದು ನನ್ನ ಅಭಿಪ್ರಾಯವಾಗಿದೆ.

ಕೊಡಗು

ಫೆಬ್ರವರಿ ತಾರೀಕು ೨ ನೇ ಶುಕ್ರವಾರ ೧೯೪೦.

ಹಿಟ್ಲರನ ಭಾಷಣ.

ಯುದ್ಧ ಪ್ರಾರಂಭವಾಗಿ ಐದು ತಿಂಗಳಾಗುತ್ತಾ ಬಂತು. ಈ ಅವಧಿಯಲ್ಲಿ ಪೋಲೆಂಡು ದೇಶದ ನಾಮಾವಶಿಷ್ಟವಲ್ಲದೆ ಬೇರೆ ಹೇಳಿಕೊಳ್ಳಬಹುದಾದ ಇಲ್ಲವೇ ರೋಮಾಂಚಕಾರಕ ಘಟನೆಗಳೇನೂ ನಡೆದಿಲ್ಲವೆಂದು ಹೇಳಬಹುದು. ಒಳದಂಗೆಗಳು, ಅಲ್ಲಲ್ಲಿಯ ರಾಜಕ್ರಾಂತಿ ಆಹಾರ ಸಾಮಗ್ರಿಗಳ ಅಭಾವದ ಗೊಂದಲ ಇದರಿಂದ ಜರ್ಮನಿಗೆ ತೊಂದರೆಯೊಗಿದೆ. ಆದರೂ ಯುದ್ಧವು ನಡೆಯುತ್ತಲೇ ಇದೆ. ಸಮುದ್ರದಲ್ಲಿ ಸಮರವಾಗುತ್ತಿದೆ. ಹಡಗುಗಳು ಮುಳುಗುತ್ತಿವೆ. ವಿಮಾನ ಯುದ್ಧಗಳು ನಡೆಯುತ್ತಿವೆ. ಪತ್ರಿಕೆಗಳಲ್ಲಿ ಈ ಯುದ್ಧದ ಬಾಕ ಚಕ್ಯತೆಯ ವರ್ಣನೆಗಳಾಗುತ್ತಿವೆ. ಇದರೊಂದಿಗೆ ಯುದ್ಧಾಸಕ್ತ ರಾಷ್ಟ್ರಗಳಲ್ಲಿ ಪ್ರಚಂಡವಾದ ವಾಗ್ಯುದ್ಧಗಳಾಗುತ್ತಿವೆ. ಇಂಥಾ ಒಂದು ವಾಗ್ಯುದ್ಧದ ಸರಣಿಯನ್ನು ಹಿಟ್ಲರನು ತಾರೀಕು 30ರಲ್ಲಿ ಬರ್ಲಿನನಲ್ಲಿ ಮಾತಾಡುತ್ತಾ ಹೇಳಿರುವನು. ಮ್ಯೂನಿಚಿನಲ್ಲಿ ಸ್ಫೋಟನವಾದ ಕಾಲಕ್ಕೆ ಭಾಷಣ ಮಾಡಿದನಂತರ ಹಿಟ್ಲರನು ಮಾಡಿದ ಪ್ರಚಂಡ ಭಾಷಣವೆಂದರೆ ಇದೇ. ಇದರಲ್ಲಿ ಜರ್ಮನಿಯು ಪ್ರಜಾಸತ್ತ ರಾಜ್ಯಕ್ರಮದ ಉತ್ತರಾಧಿಕಾರಿಯೆಂದು ಹಿಟ್ಲರನು ಸಾರಿರುವನು. 'ಈಗ ಜರ್ಮನಿಯಲ್ಲಿ ಪ್ರಜಾಸತ್ತಾ ರಾಜ್ಯಕ್ರಮದ ಮಾತಿಲ್ಲ. ಜರ್ಮನರಿಗೆ ಈ ಪ್ರಜಾದ ಬಗ್ಗೆ ಒಂದೆ ಅನುಭವವಿದೆ. ಜರ್ಮನಿಯು 15 ವರ್ಷಗಳ ವರೆಗೆ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು ಅದರ ರುಚಿಯನ್ನು ನೋಡಿದೆ' ಎಂಬುದೇ ಹಿಟ್ಲರನ ಉದ್ಗಾರ. ಬ್ರಿಟನಿನ ಯುದ್ಧೋದ್ದೇಶಗಳನ್ನು ಖಂಡಿಸಿ ಬ್ರಿಟಿಷರ ಮುತ್ಸದ್ದಿತನಕ್ಕೆ ಹೊಸ ವಿಚಾರಗಳೇ ಹೊಳೆಯದಾಗಿದೆಯೆಂದು ನುಡಿದಿರುವನು. 'ನೂತನ ಯೂರೋಪೊಂದು ಉದ್ಭವವಾಗುತ್ತದೆ. ಈ ಯೂರೋಪಿನಲ್ಲಿ ಅನ್ಯಾಯಕ್ಕೆ ಕಿಂಚಿತ್ತೂ ಎಡೆ ಇಲ್ಲ. ಇದರಿಂದ ಶಸ್ತ್ರಾಸ್ತ್ರಗಳು ಅನಗತ್ಯವಾಗಬೇಕು. ಸಾರ್ವತ್ರಿಕವಾಗಿ ಶಸ್ತ್ರಸನ್ಯಾಸ ಕೈಕೊಳ್ಳಬೇಕು. ಆಗ ವ್ಯಾಪಾರಾಭಿವೃದ್ಧಿಯಾಗುತ್ತದೆ. ಸಂಸ್ಕೃತಿ ಮತ್ತು ಮತಗಳು ಬೆಳೆಯುತ್ತವೆ. ಸ್ವರ್ಣಯುಗವೊಂದು ಆರಂಭವಾಗುತ್ತದೆ.' ಇದೇ ಬ್ರಿಟಿಷರ ಯುದ್ಧೋದ್ದೇಶಗಳಾಗಿವೆ. ಆದರೆ ಇಂಥಾ ಸ್ವರ್ಣಯುಗದ ಕನವರಿಕೆಯನ್ನು ಹಿಂದೆ ಎಷ್ಟೋ ಸಲ ಬ್ರಿಟನು ಮಾಡಿದ್ದುಂಟು. ಆದರೆ ಈ ಪಕ್ಷೋಪದೇಶಿಗಳಾದ ಬ್ರಿಟಿಷರಿಗೆ ನಮ್ಮ ಪ್ರಜೆಗಳಿಗೆ ಆಶೆಯನ್ನು ಹುಟ್ಟಿಸುವ ಒಂದೇ ಹೊಸ ವಿಷಯವನ್ನಾದರೂ ಕಂಡು ಹಿಡಿಯಲು ಆಗದಿರುವದನ್ನು ನೋಡಿದರೆ ವಿಷಾದವುಗುತ್ತದೆ" ಎಂದು ಹೇಳಿರುವನು. ಬ್ರಿಟಿಷರ ಯುದ್ಧ ನೀತಿಯು ಸರಿಯಲ್ಲವೆಂದು ಅವಾಚ್ಯವಾಗಿ ಖಂಡಿಸಿರುವನು. ವರ್ಸೈಲ್ಸ್ ಒಪ್ಪಂದವನ್ನು ಖಂಡಿಸುತ್ತ ಇಂದಿನ ಈ ಮಿತ್ರರಾಷ್ಟ್ರಗಳು ಅಂದು ಅವನತ ಸ್ಥಿತಿಯಲ್ಲಿದ್ದ ಜರ್ಮನಿಯನ್ನು ರಸಾತಳಕ್ಕೆ ತುಳಿದುಹಾಕಲು ವಿವಿಧ ಶರತುಗಳನ್ನು ಈ ಒಪ್ಪಂದಕ್ಕೆ ಸೇರಿಸಿ ಅದೇ ಬೈಬಲೆಂದು ಘೋಷಿಸಿದರೆಂದೂ, ಆರ್ಥಿಕ ಅಧಃಪತನವಾಗಿ ಜರ್ಮನಿಯು ಕಷ್ಟಪರಂಪರೆಯಲ್ಲಿ ಸಿಲುಕಿರುವ ಕಾಲಕ್ಕೆ 'ಆದಾವ ಆಂಗ್ಲೇಯನೂ ಬೈಬಲಿನ ಅಥವಾ ಕ್ರಿಸ್ತನ ತತ್ವಗಳನ್ನು ಯೋಚಿಸಿಕೊಳ್ಳಲಿಲ್ಲವೆಂದೂ, ಆದರೆ ಇಂದು ಬೈಬಲನ್ನು ಹಿಡಿದು ಶಾಂತಿಧೂತರಾಗಿ ಬಂದಿರುವ ಆಂಗ್ಲೇಯರ ಕೃತ್ಯವು ಖಂಡನೀಯವೆಂದೂ ಹೇಳಿರುವನು. 'ಯುದ್ಧೋದ್ದೇಶಗಳ ಪ್ರಚಾರ ಮಾಡುತ್ತಿರುವ ಮಿ. ಚೆಂಬರ್ಲೇನರನ್ನು ನೋಡಿದರೆ ಕಂಕುಳಲ್ಲಿ ಬೈಬಲ್ ಹಿಡಿದು ಬಡಜೀವಿಗಳಿಗೆ ತತ್ವೋಪದೇಶ ಮಾಡಲು ಹೊರಟ ದೆವ್ವದ ಕತೆ ಜ್ಞಾಪಕಕ್ಕೆ ಬರುತ್ತದೆ.' ಎಂದು ಟೀಕಿಸಿರುವನು.

ಯುದ್ಧದ ಬಗ್ಗೆ ಹಿಟ್ಲರನು, ಯುದ್ಧದ ಪ್ರಥಮ ಅಧ್ಯಾಯ ಮುಗಿಯಿತೆಂದೂ, ಒಡನೆ ಎರಡನೆ ಅಧ್ಯಾಯವು ಪ್ರಾರಂಭವಾಗುವದೆಂದೂ ಅಂದಿರುವನು. 'ಬ್ರಿಟನಿನ ವರ್ತನೆಯನ್ನವಲೋಕಿಸಿದರೆ ಅದು ಹೆಂಗಸರು ಮತ್ತು ಮಕ್ಕಳನ್ನು ಸಹ ಕೊಲ್ಲಲು ಹೇಸಿರುವಂತೆ ಕಂಡುಬರುವದಿಲ್ಲ' ಎಂದು ಹೇಳಿರುವನು. 'ಜರ್ಮನಿಯು ಇಂದು ರಣೋಪಕರಣಗಳ ಸಿದ್ಧತೆಯಲ್ಲಿ ಖ್ಯಾತಿ ಪಡೆದಿದೆ. ಅನೇಕ ರಾಷ್ಟ್ರಗಳು ಜರ್ಮನರ ವಿಧಾನಗಳನ್ನು ಅನುಸರಿಸಲು ಪ್ರಯತ್ನಿಸುತ್ತಿರುವರು ಆದರೆ ಜರ್ಮನರ ಕಲಾ ಕೌಶಲ್ಯವು ಅವರ ತಲೆಗೆ ಹೇಗೆ ಹಿಡಿಯಬೇಕು? ಶತ್ರು ಪ್ರಚಾರವನ್ನು ನೋಡಿದರೆ ಯುದ್ಧದಲ್ಲಿ ಜಯವು ನಮಗೇ ದೊರಕುವದೆಂಬ ಭರವಸೆ ದಿನೇ ದಿನೇ ಹೆಚ್ಚುತ್ತಿದೆ. ನಮ್ಮ ಹಕ್ಕು ಬಾಧ್ಯತೆಗಳನ್ನು ನಾವು ಗಳಿಸಿಕೊಂಡ ವಿನಹ ಶಾಂತಿಯಾಗಲೀ ರಾಜಿಯಾಗಲೀ ಸಾಧ್ಯವೇ ಇಲ್ಲ. 44,000,000 ಪ್ರಜಾ ಸಂಖ್ಯೆಯುಳ್ಳ ಬ್ರಿಟಿಷರು ಜಗತ್ತಿನಲ್ಲಿ 40,000,000 ಚದರ ಮೈಲಿನ ವಿಸ್ತೀರ್ಣ ಸ್ಥಳವನ್ನು ಆಕ್ರಮಿಸಿರುವದನ್ನು ಇನ್ನೂ ಸಹಿಸಲಾಗುವದಿಲ್ಲ. ಫ್ರೆಂಚರೂ ಈ ರೀತಿ ವಿಶಾಲ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದಾರೆ. ಆದರೆ 80,000,000 ಪ್ರಜಾ ಸಂಖ್ಯೆಯುಳ್ಳ ಜರ್ಮನ್ ಜನಾಂಗಕ್ಕೆ ಇರುವ ಪ್ರದೇಶ 6,000,000 ಚದರ ಮೈಲು. ಈ ಸಮಸ್ಯೆ ಬಗೆ ಹರಿಯಲೇ ಬೇಕು. ಇದು ಬಗೆ ಹರಿಯಲ್ಲಿವರೆಗೆ ಶಾಂತಿ ಇಲ್ಲ' ಎಂದು ಹಿಟ್ಲರನು ಆವೇಶಪೂರಿತನಾಗಿ ಸಾರಿದ್ದಾನೆ.

ಈತನ ಈ ಭಾಷಣಾವಲೋಕನ ಮಾಡಿದರೆ ಸಂಧಿಯಾಗುವ ಸಂಭವ ಕಾಣುವದಿಲ್ಲ. ಜರ್ಮನಿಯು ತನ್ನ ಹಕ್ಕು ಸ್ಥಾಪನೆಗಾಗಿ ಕಡೆಯ ತನಕ ಹೋರಾಡಲು ಸಿದ್ಧವಿರುವದು ಕಂಡು ಬರುವದು. ಇದ್ದರಿಂದ ಇಂದಿನ ಸಣ್ಣ ಯುದ್ಧ ಕ್ಷೇತ್ರಗಳು ವಿಸ್ತರಿಸಿ ಇಡೀ ಪ್ರಪಂಚವನ್ನು ಪ್ರಳಯಾಗ್ನಿಯು ಆವರಿಸುವಂತಾಗಬಹುದು. ಪ್ರತಿಯೊಂದು ರಾಷ್ಟ್ರವೂ ತನ್ನ ಸ್ವಾರ್ಥಕ್ಕಾಗಿ ಹೋರಾಡುತ್ತಿದೆ. ಬಾಲ್ಕನಿನಲ್ಲಿ ಇಟೆಲಿಯ ಸ್ವಾರ್ಥವಿದೆ. ಜರ್ಮನಿ ರಾಷ್ಟ್ರಗಳು ಯೂರೋಪದ ಭೂಚಿತ್ರವನ್ನು ಮಾರ್ಪಡಿಸುವ ಹಂಚಿಕೆಯಲ್ಲಿದ್ದಾರೆ. ಆದ್ದರಿಂದ ಎಲ್ಲಾ ರಾಷ್ಟ್ರಗಳೂ ಒಂದು ಕಾಲಕ್ಕೆ ಯುದ್ಧರಂಗಕ್ಕಿಳಿಯಬೇಕಾಗುವದು. ಈಗಾಗಲೇ ಕೆಲವು ರಾಷ್ಟ್ರಗಳು ಲಾಭಾ ಲಾಭಗಳನ್ನು ತೂಗಿ ನೋಡುತ್ತಿವೆ. ತಟಸ್ಥ ರಾಷ್ಟ್ರಗಳು ಅಪಾಯ ನಿರೀಕ್ಷಣೆಯಲ್ಲಿಯೇ ಮಗ್ನವಾಗಿವೆ. ಬ್ರಿಟಿಷರ ಧೈರ್ಯ ಪರೀಕ್ಷೆಯ ದಿನಗಳು ಹತ್ತಿರ ಬರುತ್ತಿವೆ. ಮುಂದೆ ವಿಚಾರಗಳು ಹೇಗೆ ಘಟಿಸುವವೆಂಬುವದನ್ನು ನಿರೀಕ್ಷಿಸುವ.

ಮುಖಂಡರ ಉದ್ಗಾರ.

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು.

ರಾಷ್ಟ್ರಾಧ್ಯಕ್ಷ ಪ್ರಸಾದರು ಗಯೆಯಲ್ಲಿ ಒಂದು ಭಾಷಣ ಮಾಡುತ್ತಾ ಹಿಂದೂ ಮುಸ್ಲಿಂ ಐಕ್ಯತೆಯು ಅತ್ಯಗತ್ಯವೆಂದೂ, ಹಿಂದೂದೇಶದಲ್ಲಿರುವ ಮತೀಯರೆಲ್ಲರೂ ಐಕ್ಯತೆಯಿಂದ ಕಾರ್ಯ ಮಾಡಬೇಕೆಂದೂ, ಹಿಂದೂ ದೇಶವು ಅದರಲ್ಲಿರುವ ಜನತೆಯಿಂದಾವೃತವಾದ ಏಕ ಜನಾಂಗದ ಒಂದೇ ರಾಷ್ಟ್ರವೆಂದೂ, ಅದನ್ನು ಭಿನ್ನ ಭಿನ್ನವಾಗಿ ಮುರಿಯಲೆತ್ನಿಸುವವರು ರಾಷ್ಟ್ರವಿಘಾತಕರೆಂದೂ ಹೇಳಿದರು. ಮುಂದುವರಿಸುತ್ತಾ, ಕಾಂಗ್ರೆಸಿನಲ್ಲಿ ಇಂದು ಅಧಿಕಾರ ನಡೆಸುತ್ತಿರುವ ವರ್ಗವು ಎಂದೂ ಹಿಂದಿಲ್ಲವೆಂದೂ, ಸಮಯದ ಕರೆಗೆ ಸರಿಯಾಗಿ ಅವರು ರಾಷ್ಟ್ರವನ್ನು ನಡೆಸಲು ಯೋಗ್ಯರೆಂದೂ, ಅವರ 'ಇಂದಿನ ವರ್ತನೆಯು ಅಹಿಂಸಾಯುತ ಯುದ್ಧವೇ ಆಗಿದೆಯೆಂದೂ ಒಂದು ಸೈನ್ಯದಲ್ಲಿ ಎಷ್ಟೇ ವೀರನಿರಲಿ, ಆ ತೇಜಸ್ವಿ ಇರಲಿ ಆ ಸೈನಿಕನು ತನ್ನ ಸಂಗಡವನ್ನು ಬಿಟ್ಟು ಒಬ್ಬೊಂಟಿಗನಾಗಿ ಮುನ್ನುಗ್ಗಿದರೆ ಶತ್ರುವಿನಿಂದ ಸುಲಭವಾಗಿ ಹತನಾಗುವನೆಂದೂ, ಯಾರಾದರೂ ಕಾಂಗ್ರೆಸ್ಸಿನ ಅಧಿಕಾರ ಕಡಿವಾಣವನ್ನು ಹಿಡಿದು ರಾಷ್ಟ್ರವನ್ನು ಸುಗಮವಾದ ಹಾದಿಯಲ್ಲಿ ನಡೆಸುವವರಿದ್ದರೆ ಅಂಥವರಿಗೆ ಸ್ಥಳ ಬಿಟ್ಟು ಕೊಡಲು ಇಂದಿನ ಅಧಿಕಾರಿ ವರ್ಗವು ಸದಾ ತಯಾರಿದೆಯೆಂದೂ ಹೇಳಿದರು.

ಶ್ರೀ. ರಾಜಗೋಪಾಲ ಚಾರಿಯವರು.

ಮದ್ರಾಸಿನ ಮಾಜಿ ಪ್ರಧಾನಾಮಾತ್ಯರಾದ ರಾಜಗೋಪಾಲಾಚಾರಿಯವರು ಕುಂಭಕೋಣಂನಲ್ಲಿ ಭಾಷಣ ಮಾಡುತ್ತಾ 'ಮಂತ್ರಿಗಳು ಪದವಿಗೆ ರಾಜಿನಾಮೆಯಿತ್ತು ಹೊರಬಂದುದು ಒಂದು ವಿಧದ ಅಹಿಂಸಾ ಯುದ್ಧ. ಮಂತ್ರಿಗಳು ಅಧಿಕಾರ ಸೂತ್ರವನ್ನು ಕೆಳಗಿಟ್ಟರೆ ಬ್ರಿಟಿಷ್ ಸಾರ್ವಭೌಮ ಸರಕಾರವು ಸಂತೋಷಾಂಬುಧಿಯಲ್ಲಿ ಮುಳುಗುವದೆಂದೂ ಅನೇಕರು ನಂಬಿದ್ದರು ಆದರೆ ವಸ್ತುತಃ ಆದುದೇನು? ಇಂದು ಬ್ರಿಟಿಷ್ ಸಾರ್ವಭೌಮ ಸರಕಾರವು ಕಾಂಗ್ರೆಸಿನವರು ಪುನಹ ಅಧಿಕಾರ ಸೂತ್ರವನ್ನು ಹಿಡಿಯಬೇಕೆಂದು ಹಂಬಲಿಸುತ್ತಿದೆ. ಅಲ್ಲದೆ ಹಿಂದೂ ದೇಶಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಡುವದೆಂದು ಸಾರಿದ್ದಾರೆ. ಈ ಮೊದಲು ಇತರ ರಾಷ್ಟ್ರಗಳಿಗೆ ಬ್ರಿಟಿಷರು ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಕೊಡಬೇಕಾದರೆ ಘೋರ ಸಂಗ್ರಾಮವೇ ನಡೆದಿದೆ. ಆ ರಾಷ್ಟ್ರದ ಜನರು ಬ್ರಿಟಿಷರ ಸಂಬಂಧಿಕರೇ ಇದ್ದಾಗ್ಯೂ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಕೊಡುವದು ಬ್ರಿಟಿಷರಿಗೆ ಕಷ್ಟವಾಯಿತು. ಆದರೆ ಇಂದು ಭಾರತೀಯರಿಗೂ ಬ್ರಿಟಿಷರಿಗೂ ಯಾವ ರಕ್ತ ಸಂಬಂಧವೂ ಇಲ್ಲ. ಬದಲು ಈ ವರೆಗೆ ಅವರೊಡನೆ ನಾವು ಯುದ್ಧವನ್ನೇ ಮಾಡುತ್ತಿದ್ದೆವು. ಅಂಥಾದ್ದರಲ್ಲಿ ಬ್ರಿಟಿಷ್ ಸಾರ್ವಭೌಮ ಸರ್ಕಾರವು ಬಗ್ಗಿ ಕಾಲೂರಲು ಕಾರಣವೇನು? ನಾವು ಮೊದಲಿನಂತೆ ಉಪ್ಪಿನ ಸತ್ಯಾಗ್ರಹವನ್ನು ಈಗ ಮಾಡಿಲ್ಲ. ಈಗ ನಾವು ಮಾಡಿದ್ದು ಮಂತ್ರಿಗಳ ಸತ್ಯಾಗ್ರಹ ಆದರೆ ಇದರ ಅಮೋಘ ಫಲಿತಾಂಶವು ಹೊಗಳಲರ್ಹವಾಗಿದೆ. ಇದೆಲ್ಲಾ ಸರಕಾರದ ಜೀವಾಳವು ಮಂತ್ರಿಗಳಿಗೆ ಹೃದಯಂಗಮವಾಗಿರುವದೇ ಆಗಿದೆ.'

ಮುಂದುವರಿಸುತ್ತಾ 'ಹಿಂದೂ ಮುಸ್ಲಿಮರೊಳಗೆ ಗೌರವಪೂರ್ವಕವಾದ ಒಪ್ಪಂದ ಮಾಡಲು ಎಲ್ಲರೂ ಸಿದ್ಧರಿರುವೆವು. ಮುಸ್ಲಿಮರು ಇಂಥಾ ಒಂದು ಒಪ್ಪಂದವನ್ನು ಮಾಡಲು ಗಾಂಧೀಯವರ ತೀರ್ಮಾನವನ್ನು ಒಪ್ಪುವದೊಳಿತು. ಗಾಂಧೀಯವರಿಗೆ ಈ ನ್ಯಾಯ ತೀರ್ಮಾನದ ಅಧಿಕಾರ ಕೊಟ್ಟರೆ ಯೂರೋಪಿಯನರ ಮುಸ್ಲಿಮರ ಮತ್ತು ಇನ್ನಿತರ ಅಲ್ಪ ಪಕ್ಷದವರ ಭವಿತವ್ಯವು ಸುಲಭವಾಗಿ ನಿರ್ಣಯಿಸಲ್ಪಡುವದು. ಕಾಂಗ್ರೆಸು ಸಹಚುನಾವಣೆಯನ್ನು ಅಂಗೀಕರಿಸುವ ಬಗ್ಗೆ ಮುಸ್ಲಿಮರನ್ನು ಬೇಡಿಕೊಂಡಿತು. ಆದರೆ ಮುಸ್ಲಿಮರು ಒಪ್ಪಲಿಲ್ಲ. ಅದರ ಪರಿಣಾಮವಾಗಿ ಮುಸ್ಲಿಮರು ಭಾರತದಲ್ಲಿಇಂದೂ, ಇನ್ನು ಮುಂದಕ್ಕೂ ಅಲ್ಪ ಪಕ್ಷವಾಗಿಯೇ ಇರಬೇಕಾಗಿ ಬಂದಿದೆ. ಅಂದು ಬಿತ್ತಿದ ವೃಕ್ಷದ

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 140 ರ ವರೆಗೂ ಏಲಕ್ಕಿ ಮಣಕ್ಕೆ ರೂ 36ರ ವರೆಗೂ ಕ್ರಯವಿದೆ.

ಶ್ರೀ ವಿವೇಕಾನಂದರವರ ಜಯಂತ್ಯುತ್ಸವದ ಸಂಬಂಧ ತಾ 4-2-40ನೇ ಭಾನುವಾರ ಅಪರಾಹ್ನ 3.30 ಗಂಟೆಗೆ ಇಲ್ಲಿಯ ವೇದಾಂತ ಸಂಘದಲ್ಲಿ ಉಪನ್ಯಾಸಗಳಾಗುವವೆಂದೂ ಎಲ್ಲರಿಗೂ ಆಹ್ವಾನವಿದೆಯೆಂದೂ ತಿಳಿದುಬರುತ್ತದೆ

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಮಹಾಸಭೆಯು ದನ ವ್ಯವಸಾಯ ಉತ್ಪತ್ತಿಗಳ, ಕೈಗಾರಿಕಾ ಸಾಮಾನುಗಳ ಒಂದು ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿದೆಯೆಂದೂ, ಸಾಮಾನುಗಳನ್ನು ಕಳುಹಿಸುವವರು ತಾರೀಕು 17ರಲ್ಲಿ ವಸ್ತು ಪ್ರದರ್ಶನಾಲಯದಲ್ಲಿಟ್ಟು ಬಹುಮಾನ ಪಡೆಯಬಹುದೆಂದೂ ತಿಳಿಯಬಂದಿದೆ.

ಇಲ್ಲಿಯ ತಾಲೋಕು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ 'ಸ್ವಾತಂತ್ರ್ಯದಿನಾಚರಣೆ'ಯ ದಿನ ಅಂದರೆ ತಾ. 26ರಲ್ಲಿ ಶ್ರೀ ಗೋಪಾಲರಾಯರವರು 'ಶೃಂಗಾರ ಭಾರತಿ' ಎಂಬ ಕಥೆಯನ್ನೂ, ತಾ. 27ರಲ್ಲಿ ಇಲ್ಲಿಯ ಹೈಸ್ಕೂಲ್ ವಿದ್ಯಾರ್ಥಿನಿವಾಸಗೃಹದ ಭಜನಮಂದಿರದ ಆಶ್ರಯದ 'ಶಶಿರೇಖಾಪರಿಣಯ'ವೆಂಬ ಕಥೆಯನ್ನು ಶ್ರೀ ಚಿಕ್ಕೆರ ಅಪ್ಪಯ್ಯನವರ ಹಾರ್ಮೋನಿಯಂ ವಾದನದೊಡಗೂಡಿ ಸ್ವಾರಸ್ಯವಾಗಿ ಮಾಡಿದರು.

ಇದೇ ತಾ. 10ನೇ ಶನಿವಾರ ಸಾಯಂಕಾಲ 6 ಗಂಟೆಯಿಂದ 9 ಗಂಟೆಯವರೆಗೆ ಇಲ್ಲಿಯ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ಮೈಸೂರು ಆಸ್ಥಾನ ಸಂಗೀತ ವಿದ್ವಾನ್ ಶ್ರೀ [illegible] ಶಿಷ್ಯರಾದ ಶ್ರೀ [illegible] ಅವರ ಸಂಗೀತ ಮಂಡಳಿಯೊಡನೆ ಅಮೋಘ ಸಂಗೀತ [illegible] ನಡೆಸುವರೆಂದೂ, ಇವರ ಈ ಪ್ರಯತ್ನವು ಜಯಪ್ರದವಾಗುವಂತೆ ಉದಾರ ಹಸ್ತದಿಂದ ಸಹಕರಿಸಬೇಕೆಂದೂ ಮೇಲ್ಕಂಡ ಕಚೇರಿಯ ವ್ಯವಸ್ಥಾಪಕರು ಪಬ್ಲಿಕ್ ಜನತೆಗೆ ಅರಿಕೆ ಮಾಡಿಕೊಂಡಿರುವರೆಂದು ತಿಳಿಯುತ್ತೇವೆ.

ತಾರೀಕು 27 1-40ರಲ್ಲಿ ಇಲ್ಲಿಯ ಮುಸ್ಲಿಂ ಗರ್ಲ್ಸ್ ಸ್ಕೂಲಿನಲ್ಲಿ ಒಂದು ಸಭೆಯು ಡಿ. ಎಜ್ಯುಕೇಶನಲ್ ಆಫೀಸರಾದ ಶ್ರೀ ಸಿ. ಯಂ. ರಾಮರಾವ್ ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ನಡೆದು ಸದರಿ ಶಾಲೆಯ ಅಭಿವೃದ್ಧಿ ಹಾಗೂ ಮುಸ್ಲಿಂ ವಿದ್ಯಾಭ್ಯಾಸದ ವಿಚಾರ, ವಿಚಾರಪೂರ್ಣ ಚರ್ಚೆಗಳಾದವೆಂದೂ, ಕೆನರಾ ಸಬ್ರೇಯ ರೇಂಜ್ ಡಿಪ್ಯುಟಿ ಇನ್ಸ್‌ಪೆಕ್ಟರಾದ ಶ್ರೀ ಆಲಿಜನಾಬ್ ಅಬ್ದುಲ್ ರಹಮಾನ್ ಸಾಹೇಬರೂ ಇನ್ನಿತರ ಪ್ರಮುಖ ಮುಖಂಡರೂ ಚರ್ಚೆಯಲ್ಲಿ ಭಾಗಿಗಳಾಗಿದ್ದರೆಂದೂ, ಶ್ರೀ ಎಂ. ಎಂ. ಸಿದ್ದೀಕರು ಅಧ್ಯಕ್ಷರಿಗೂ ಇತರರಿಗೂ ಮತ್ತು ಮುಸ್ಲಿಂ ಬಾಲಿಕೆಯರಿಗೂ ವಂದನೆಗಳನ್ನರ್ಪಿಸಿದನಂತರ ಸಭೆಯು ಕೊನೆಗೊಂಡಿತೆಂದೂ ತಿಳಿದು ಬರುತ್ತೆ.

ನಾಪೋಕ್ಲು.

ಪಾರಾಣೆ, ಕಕ್ಕಬೆ, ನಾಪೋಕ್ಲು ಈ ಸ್ಥಳಗಳಲ್ಲಿ ಪಾಡಿನಾಲ್ಕುನಾಡು ತಾಲೋಕು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ವೀರಾಜಪೇಟೆ.

ತಾ. 26-1-40ರಲ್ಲಿ ಪ್ರಭಾತಫೇರಿ ಧ್ವಜ ವಂದನೆಯೊಡಗೂಡಿ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ವೀರರಾಜಪೇಟೆನಾಡು ಮೈತಾಡಿ ಗ್ರಾಮದ ಐಚೆಟ್ಟಿರ ಕುಟುಂಬಸ್ಥರು ತಾ. 26ರಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಶ್ರೀ ಐ. ಯಂ. ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ವಾದ್ಯ ಘೋಷಣೆಗಳಿಂದ ವಿಜೃಂಭಣೆಯಾಗಿ ಜರಗಿಸಿದರೆಂದು ತಿಳಿದು ಬರುತ್ತದೆ.

ತಾ. 20-1-40ರಲ್ಲಿ ಇಲ್ಲಿಯ ಮುನ್ಸಿಪಲ್ ಹಾಲ್‌ನಲ್ಲಿ ಅಪರಾಹ್ನ 2 30ಕ್ಕೆ ಹಿಂದಿ ಪ್ರಮಾಣ ಪತ್ರ ವಿತರಣ ಸಮಾರಂಭವು ಮೈಸೂರು ಇಂಟರ್ ಮೀಡಿಯೇಟ್ ಕಾಲೇಜಿನ ಇಂಗ್ಲಿಷ್ ಪ್ರೊಫೆಸರ್, ಹಾಗೂ ಮೈಸೂರು ಸ್ಟೇಟ್ 'ಹಿಂದೀ ಪ್ರಚಾರ ಸಮಿತಿಯ' ಕಾರ್ಯದರ್ಶಿಯವರೂ ಆಗಿರುವ ಶ್ರೀಮಾನ್ ನಾಗೇಶರಾಯರ ಪತ್ನಿ ಶ್ರೀಮತಿ ಸುಶೀಲಾಬಾಯಿಯವರೂ, ಹಾಗೂ ಮೈಸೂರು ಸ್ಟೇಟ್ ಹಿಂದೀ ಪ್ರಚಾರ ಸಮಿತಿಯ ಒಬ್ಬ ಮೆಂಬರರೂ ಆಗಿರುವ ಶ್ರೀಮಾನ್ ಶ್ರೀನಿವಾಸ ಮೂರ್ತಿ ಬಿ. ಎ ಬಿ. ಎಲ್. ರವರೂ ಹಿಂದಿ ಭಾಷೆಯನ್ನು ಕಲಿಯತಕ್ಕ ಆವಶ್ಯಕತೆಯನ್ನೊಳಗೊಂಡ ಗಂಭೀರ ಭಾಷಣವನ್ನಿತ್ತರು.

ಮೂರ್ನಾಡು

ಸ್ವಾತಂತ್ರ್ಯ ದಿನಾಚರಣೆಯು ಇಲ್ಲಿ ವಿಜೃಂಭಣೆಯಿಂದ ತಾರೀಕು 26ರಲ್ಲಿ ನೆರವೇರಿತು.

ಅಮ್ಮತ್ತಿ.

ಇಲ್ಲಿ ಪ್ರಭಾತಫೇರಿಯೊಂದೊಡಗೂಡಿ ಸ್ವಾತಂತ್ರ್ಯ ದಿನಾಚರಣೆಯು ತಾ. 26ರಲ್ಲಿ ನಡೆದು ಸಾರ್ವಜನಿಕ ಸಭೆಯಲ್ಲಿ ಪ್ರತಿಜ್ಞಾಸ್ವೀಕರಣವೂ ನಡೆಯಿತು.

ಪೊನ್ನಂಪೇಟೆ.

ಕಿಗ್ಗಟ್ಟುನಾಡು ತಾಲೋಕು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಪೊನ್ನಂಪೇಟೆ ಹುದಿಕೇರಿ, ಗೋಣಿಕೊಪ್ಪ ಈ ಸ್ಥಳಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯು ತಾ. 26ರಲ್ಲಿ ಆಚರಿಸಲ್ಪಟ್ಟು ಪ್ರತಿಜ್ಞಾಸ್ವೀಕರಣವಾಯಿತೆಂದು ತಿಳಿಯುತ್ತೇವೆ.

ಶ್ರೀಮಂಗಲ.

ತಾರೀಕು 26-1-40ರಲ್ಲಿ ಶ್ರೀ ಮಾಣೆರ ಯಂ. ಕಾಳಪ್ಪನವರು ಬೇಟೆಗೆ ಹೋಗಿದ್ದಾಗ, 1½ ಅಡಿ ದಪ್ಪದ ಸುತ್ತು 15 ಅಡಿ ಉದ್ದದ ಒಂದು ಕರಿ ನಾಗರಹಾವನ್ನು ಗುಂಡು ಹೊಡೆದು ಕೊಂದರೆಂದು ತಿಳಿಯುತ್ತೇವೆ.

ಶನಿವಾರಸಂತೆ.

ತಾರೀಕು 26-1-40 ನೇ ಶುಕ್ರವಾರ ಶನಿವಾರ ಸಂತೆಪೇಟೆಯಲ್ಲಿ ಧ್ವಜದ ಮೆರವಣಿಗೆಮಾಡಿ ಇಲ್ಲಿಯ ಟ್ರಾವಲರ್ಸ್ ಬಂಗಲೆ ಸಮೀಪದ ಮೈದಾನದಲ್ಲಿ ಸ್ವಾತಂತ್ರ್ಯದಿನಾಚರಣೆ ನಡೆಸಲಾಯಿತು. ವರ್ಕಿಂಗ್ ಕಮಿಟಿ ಪ್ರತಿಜ್ಞೆ ಪತ್ರ ಓದಿದ ನಂತರ ಸಭೆ ಬರಖಾಸ್ತು ಮಾಡಲಾಯಿತು.

ಸಿದ್ದಾಪುರ.

ಕೆಲವು ತಿಂ[illegible]ಂದೆ ಇಲ್ಲಿಯ ಮೈಲಾತಪುರ ತೋಟದ ಸಮೀಪ ರಾತ್ರಿ ರಸ್ತೆಯಲ್ಲಿ ಹೋಗುತ್ತಿದ್ದ ಗಾಡಿಗಳ ಸಾಮಾನುಗಳನ್ನು ದರೋಡೆ ಮಾಡಿದ ಕೇಸು ಸೆಷನ್ಸ್ ಕೋರ್ಟಿನಲ್ಲಿ ವಿಚಾರ ಮಾಡಿ, ಅಪರಾಧಿ ಎರವರ ಕರಿಯನಿಗೆ 6 ವರ್ಷ ಸಜಾವೂ ಉಳಿದ 7 ಜನರಿಗೆ ತಲಾ ಮೂರು ವರ್ಷ ಕಠಿಣ ಸಜಾವೂ ವಿಧಿಸಲಾಗಿದೆಯಾಗಿ ತಿಳಿಯುತ್ತೇವೆ.

ಮಾದಾಪುರ.

ಇಲ್ಲಿಯ ಬೆಟ್ಟಗೇರಿ ತೋಟದಲ್ಲಿ ರೈಟರಾಗಿದ್ದ ಮ. ಚೆಟ್ಟಿಮಾಡ ಐಯ್ಯಣ್ಣನವರು ಆ ತೋಟದಲ್ಲೇ ರೈಟರಾಗಿದ್ದ ಮ. ಪುವಿಯೊಕ್ಕಡ ಸೋಮಯ್ಯನವರಿಗೆ ಕಳೆದ ತಾ. 26 ರಲ್ಲಿ ಗುಂಡು ಹೊಡೆದರೆಂದೂ, ಆದರೆ ಅವರು ಸಾಯಲಿಲ್ಲವೆಂದೂ, ಮ. ಐಯ್ಯಣ್ಣನವರು ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡರೆಂದೂ, ಪೊಲೀಸ್ ತನಿಖೆಯಾಗುತ್ತಿರುವುದೆಂದೂ ಸುದ್ದಿ.

ನಿಧನ ವಾರ್ತೆ.

ಶ್ರೀ ಮಾಳೇಟಿರ ಅಚ್ಚಪ್ಪನವರ ತಾಯಿ ಅಚ್ಚಮ್ಮನವರು ತಮ್ಮ 92ನೇ ವಯಸ್ಸಿನಲ್ಲಿ ತಾರೀಕು 20ರಲ್ಲಿಯೂ, ಕುಂಜಿಲ ಗ್ರಾಮದ ಶ್ರೀ ಕಂಬೆಯಂಡ ಸೋಮಪ್ಪನವರು ತಾರೀಕು 29ರಲ್ಲೂ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಹಿಂದೂ ದೇಶ.

ವೈಸರಾಯ್-ಗಾಂಧಿಜಿ ಭೇಟಿ ಫೆಬ್ರವರಿ 5ನೇ ತಾರೀಕು ಬೆಳಿಗ್ಗೆ 11 ಗಂಟೆಗೆ ನಡೆಯುವಂತೆ ಏರ್ಪಡಿಸಲಾಗಿದೆಯೆಂದು ತಿಳಿದುಬಂದಿದೆ.

ಮಧ್ಯವರ್ತಿ ಅಸೆಂಬ್ಲಿಗೆ ಈ ಸಲ ಕಾಂಗ್ರೆಸ್ ಸದಸ್ಯರು ಹೋಗುವದಿಲ್ಲವಾದ್ದರಿಂದ ಬಜೆಟ್ ಅಧಿವೇಶನವು ಮಾರ್ಚ ಕೊನೆಯೊಳಗಾಗಿ ಮುಗಿಯಬಹುದೆಂದು ತೋರುತ್ತದೆ.

ಮಧ್ಯಪ್ರಾಂತದಲ್ಲಿ ಭಂಡಾರಾ ಎಂಬ ಹಳ್ಳಿಯಿಂದ ಹೊರಟು ನಾಲ್ಕು ತಿಂಗಳು ಕಾಲಿನಿಂದ ಪ್ರವಾಸ ಮಾಡಿ ಇಬ್ಬರು ರಾಮಗಢಕ್ಕೆ ಬಂದು ಮುಟ್ಟಿರುವರು. ಕಾಂಗ್ರೆಸಿನಲ್ಲಿ ಬೇಕಾದ ಕೆಲಸ ಮಾಡಲು ಅವರು ಸಿದ್ಧರಿರುವರು.

ಬಿಹಾರ್ ಅಧಿಪತ್ಯದ ಗ್ರಾಮಾಂತರ ಪೊಲೀಸ್ ಪಡೆಯವರಿಗೆ ಖಾದಿ ಶಿಸ್ತಿನ ಉಡುಪುಗಳನ್ನೇ ಒದಗಿಸಿಕೊಡಬೇಕೆಂದು ಅಲ್ಲಿನ ಸರಕಾರದವರು ಹುಕುಂ ಮಾಡಿ ಆ ಉಡುಪುಗಳಿಗಾಗಿ 40 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ.

ವರ್ತಮಾನ ಪತ್ರಿಕೆಗಳನ್ನು ಮುದ್ರಣ ಮಾಡಲು ಹಿಂದೂಸ್ಥಾನದಲ್ಲಿ ಉಪಯೋಗಿಸುತ್ತಿರುವ ಕಾಗದಗಳು ಯುದ್ಧದ ದೆಸೆಯಿಂದ ಈಚೆಗೆ ವಿದೇಶಗಳಿಂದ ಬರುವದೇ ದುರ್ಲಭವಾಗಿರುವುದರಿಂದ ಅಂಥಾ ಕಾಗದಗಳನ್ನು ಈ ದೇಶಕ್ಕೆ ತರಿಸಿಕೊಡಲು ಇಂಡಿಯಾ ಸರಕಾರದವರು ವಿಶೇಷ ತರದ ಸೌಲಭ್ಯಗಳನ್ನು ಕಲ್ಪಿಸಿಕೊಡುವವರಾಗಿದ್ದಾರೆ.

ವಿದೇಶ.

ದಕ್ಷಿಣ ಅಮೇರಿಕದಲ್ಲಿ ಹಿಂದೆಂದೂ ಇಲ್ಲದ ಕಠಿಣ ತರವಾದ ಚಳಿಯು ಕಳೆದ ಎರಡು ವಾರಗಳಿಂದ ಆ ದೇಶ ಆದ್ಯಂತ್ಯದಲ್ಲೂ ಪ್ರಬಲಿಸಿಕೊಂಡಿರುತ್ತದೆ. ಈ ಚಳಿಯನ್ನು ತಡೆಯಲಾರದೆ 339 ಮಂದಿ ಮರಣ ಹೊಂದಿರುತ್ತಾರೆ.

ತನ್ನ ದೇಶಕ್ಕೆ ದ್ರೋಹ ಮಾಡಿ ಜಪಾನಿನವರ ಪಕ್ಷದಲ್ಲಿ ಸೇರಿರುವ ಮಿ. ವಾಂಗ್ ಚಿನ್ ವೈ ಎಂಬ ಚೀನಾ ದೇಶದ ರಾಜತಾಂತ್ರಜ್ಞನು ಚೀಣಾ ದೇಶಸ್ಥರಿಗೂ ಜಪಾನಿನವರಿಗೂ, ಸಮಾಧಾನವಾಗುವಂತೆ ಪ್ರಯತ್ನಿಸುತ್ತಲಿದ್ದಾನೆ. ಆದರೆ ಆತನ ಉದ್ದೇಶವು ಸಿದ್ಧಿಗೆ ಬರುವುದಿಲ್ಲ.

ಚೀಣಾ-ಜಪಾನ್ ದೇಶಗಳ ಈಗಿನ ಯುದ್ಧದಲ್ಲಿ ಜಪಾನಿನ ಸೈನಿಕರು 3,500 ಮಡಿದರೆಂದೂ, ಚೀಣಾದವರ ಕಡೆ 90 ಸಾವಿರ ಮಂದಿ ಹತರಾಗಿ 4 ಸಾವಿರ ಮಂದಿ ಶತ್ರುವಶರಾದರೆಂದೂ ಜಪಾನಿನವರ ಈ ಹೇಳಿಕೆ.

ಕಟು ಫಲವನ್ನು ಮುಸ್ಲಿಮರು ಇಂದು ಅನುಭವಿಸಬೇಕಾಗಿ ಬಂದಿದೆ. ಯುದ್ಧದ ನಿಮಿತ್ತದಿಂದ ಬ್ರಿಟಿಷ್ ಸರಕಾರದ ದೃಷ್ಟಿಯು ಗಾಂಧೀಜಿಯವರ ಮೇಲೆ ಬಿದ್ದಿದೆ. ಗಾಂಧಿಯವರ ಹಿತಬೋಧನೆಗೆ ಕಿವಿಗೊಡುವಂತಾಗಿದೆ. ಆದ್ದರಿಂದ ಗಾಂಧೀಜಿಯವರಿಗೆ ನಮ್ಮ ಪೂರ್ಣ ಬೆಂಬಲವಿತ್ತು ಅವರ ಹಿಂದೆ ಇಡೀ ಭಾರತ ಜನತೆಯೇ ಒಂದಾಗಿ ನಿಂತಿದೆ ಎಂಬುವನ್ನು ಅವರಿಗೆ ಖಚಿತಪಡಿಸಬೇಕು'. ಮುಂದುವರಿಸುತ್ತಾ ಹಿಂದೂ ಮುಸ್ಲಿಮರು ಬೇರೆ ಬೇರೆ ಜನಾಂಗದವರೆಂಬ ಜಿನ್ನಾ ಸಾಹೇಬರ ಮಾತಿನಲ್ಲಿ ತಿರುಳಿಲ್ಲವೆಂದೂ, ಜಿನ್ನಾರವರ ಈ ಸ್ವಾರ್ಥಾಲಾಪವು ಹೆಚ್ಚು ದಿನ ಮುಂದರಿಯದೆಂದೂ, ಶೀಘ್ರದಲ್ಲಿಯೇ ಜಿನ್ನಾರವರ ಮುಖಂಡತ್ವವು ಹಾಸ್ಯಾಸ್ಪದಕರವಾದದೆಂದು ಮುಸ್ಲಿಂ ಸಹೋದರರು ತಿಳಿಯುವರೆಂದೂ, ಆದ್ದರಿಂದ ಐಕ್ಯತೆಯಿಂದ ವರ್ತಿಸಿ ದೇಶದ ಏಳಿಗೆಯನ್ನು ಸಾಧಿಸುವದು ಹಿತಕರವೆಂದೂ, ಬ್ರಿಟಿಷರು ಭಾರತಕ್ಕೆ ಕಾಲಿಕ್ಕುವ ಮೊದಲು ಈ ಎರಡು ಮತೀಯರು ಐಕ್ಯತೆಯಿಂದ ಸುಖಿಗಳಾಗಿ ಬಾಳಿರುವರೆಂದೂ, ಇಂದಾದರೂ ಗ್ರಾಮಾಂತರಗಳಲ್ಲಿ ಹಿಂದು ಮುಸ್ಲಿಮರು ಐಕ್ಯತೆಯಿಂದ ಬಾಳಿ ಬದುಕುತ್ತಿರುವರೆಂದೂ ಹೇಳಿದರು.

ಯುದ್ಧ ವಾರ್ತೆ.

ರಷ್ಯಾ ಫಿನ್‌ಲೇಂಡ್ ಯುದ್ಧ.

ಅಬೋವಿನ ಮೇಲೆ ತಾ. 28ರಲ್ಲಿ ರಷ್ಯ ವಿಮಾನಗಳು ಅನೇಕ ಸಲ ದಾಳಿ ಮಾಡ ಲಾಗಿ 20 ಮಂದಿ ಸತ್ತು 50 ಜನ ಗಾಯಗೊಂಡಿದ್ದಾರೆ. ಹತ್ತು ಹನ್ನೆರಡು ಮನೆಗಳು ನಾಶವಾಗಿವೆ. 50 ಸೋವಿಯೆಟ್ ಬಾಂಬರ್ ವಿಮಾನಗಳು ಸರ್ರನೆ ಕೆಳಗಿಳಿದು ಬಂದು ಘಂಟೆಗಳ ಕಾಲ ದಾಳಿ ಮಾಡಿದುವು. ಅಬೊ ನಗರವು ಇದು ವರೆಗೆ ಈ ಬಗೆಯ ಧಾಳಿಗೆ ಸಿಕ್ಕಿರಲಿಲ್ಲ. ಬೆಳಿಗ್ಯೆ ಒಂಬತ್ತೂಮುಕ್ಕಾಲು ಗಂಟೆಯಿಂದ ಮಧ್ಯಾಹ್ನ ನಾಲ್ಕು ಗಂಟೆಯ ವರೆಗೂ ಮಧ್ಯ ಮಧ್ಯೆ ಬಿಟ್ಟು ಧಾಳಿ ನಡೆಯಿತು. ಹೆಲ್ಸಿಂಕಿ ಮತ್ತು ಕನ್ನಿ ಮುಂತಾದುವುಗಳಿಗೆ ಸೇರಿದ ಬ್ರಿಟಿಷ್ ಪತ್ರಿಕಾ ಪ್ರತಿನಿಧಿಗಳೂ ಬ್ರಿಟಿಷ್ ವೈಸ್‌ಕಾನ್ಸಲ್‌ರಾದ ಮಿ. ಸ್ಟೈಲಾಂಚರ್‌ರವರೂ ಈ ಗಲಭೆಗೆ ಸಿಕ್ಕಿದರು. ಆದರೆ ದೈವವಶಾತ್ ಯಾರಿಗೂ ಏನೂ ಅಪಾಯವಾಗಲಿಲ್ಲ. ಕಳೆದ ಎಂಟು ವಾರದಿಂದ ಅಬೊ ನಗರವು 35 ಸಲ ದಾಳಿ ಮಾಡಲ್ಪಟ್ಟಿದೆ.

ರಷ್ಯನ್ ಸೈನಿಕರು ಸೆರೆ ಸಿಕ್ಕಿದರು.

ಜನವರಿ 28ನೇ ತಾ. ಲಡೋಗ ಸರೋವರದ ಈಶಾನ್ಯಭಾಗದಲ್ಲಿ ಅನೇಕ ಕಡೆಗಳಲ್ಲಿ ಕದನ ಬಹಳ ಬಲವಾಗಿದ್ದಿತೆಂದು ಹೆಲ್ಸಿಂಕಿ ಪ್ರಕಟಣೆ.

ಎಲ್ಲಾ ಕಡೆಗಳಲ್ಲೂ ಫಿನ್ನರು ರಷ್ಯನ್ ಸೇನೆಗಳನ್ನು ನೂಕಿಸಿ, ಶತ್ರುವಿಗ ಮುಖ್ಯವಾಗಿದ್ದ ಹಲವು ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.

ರಷ್ಯನ್ ಸೇನೆಗಳಲ್ಲಿ 800 ಜನ ಮಡಿದರು. 160 ಜನ ಸೆರೆ ಸಿಕ್ಕಿದರು. 100 ಕುದುರೆಗಳನ್ನೊಳಗೊಂಡಿದ್ದ ರಷ್ಯನ್ ಟ್ರಾನ್ಸ್‌ಪೋರ್ಟ್ ಪಡೆಯನ್ನು ಫಿನ್ನರು ನಾಶಪಡಿಸಿದರು.

ಐಟ್ಟೊ ಜೋಕಿ ಕಡೆ ಹೊರಡಲು ಪ್ರಯತ್ನಿಸುತ್ತಿದ್ದ ರಷ್ಯನ್ ಪಡೆಗೂ ಸೋಲಾಗಿ 350 ಜನ ಮಡಿದರು.

ರಷ್ಯನ್ ವಿಮಾನಪಡೆ ಕೋಟ್ಕ, ಲೋವಿಸ, ಹ್ಯಾಂಗೋ, ರೌಮಡಿ ಸ್ಟಿಕ್ಟ್‌ಗಳ ಮೇಲೆ ಧಾಳಿ ನಡೆಸಿದುವು. ಉತ್ತರ ಫಿನ್‌ಲೆಂಡಿನಲ್ಲಿರುವ ಕೈಸಾಲ್ಮಿಯ ಮೇಲೆ ಬಾಂಬು ಕಾರಿದುವು.

ಫಿನ್ನಿಷ್ ವಿಮಾನಗಳು ಎರಡು ರಷ್ಯನ್ ವಿಮಾನಗಳನ್ನು ಉರುಳಿಸಿದುವು. ರಷ್ಯನ್ ಸೇನೆಗಳು ಜಮಾಯಿಸಿಕೊಳ್ಳುವ ಪ್ರದೇಶಗಳ ಮೇಲೂ, ಸೇನಾಪಡೆಗಳ ಮೇಲೂ ಬಾಂಬು ಕಾರಿದುವು.

ತಾ. 28ರಲ್ಲಿಹೆಲ್ಸಿಂಕಿಯಲ್ಲಿ ನಾಲ್ಕು ಬಾರಿ ವಿಮಾನ ಧಾಳಿ ಎಚ್ಚರಿಕೆ ಕೊಡಲ್ಪಟ್ಟಿತು. ನಗರದ ಮೇಲೆ ಬಾಂಬುಗಳು ಬೀಳಲಿಲ್ಲ.

ಬೆಳಿಗ್ಗೆ ರಷ್ಯನ್ ವಿಮಾನಗಳು ಹೆಲ್ಸಿಂಕಿಯ ಮೇಲೆ ಧಾಳಿ ಮಾಡಲು ಬಂದಾಗ, ವಿಮಾನನಿರೋಧಕ ಫಿರಂಗಿಗಳು ಗುಂಡು ಹಾರಿಸಿ ಅವನ್ನು ಹಿಂದಕ್ಕಟ್ಟಿದುವು.

ಈ ದಿನ ಹ್ಯಾಂಗೋವಿನ ಮೇಲೆ ರಷ್ಯನ್ ವಿಮಾನಗಳು ಧಾಳಿ ಮಾಡಿದ ಪ್ರಯುಕ್ತ 50 ಮಂದಿ ಸತ್ತು 200 ಮಂದಿ ಗಾಯಪಡೆದಿದ್ದಾರೆ.

ಫಿನ್ಲೆಂಡು ಅವರ ಜೀವನಾಡಿಪದಲ್ಲೇ ತಾ. 29ರ ದಿವಸದಂಥಾ ಮರ್ದಿನವನ್ನು ಕಂಡಿರಲಿಲ್ಲ. ಶತ್ರುಗಳು ಯಾತ್ರಿವನ್ನೂ ಪರಿಗಣಿಸದೆ ಹುಚ್ಚಾಬಟ್ಟೆ ಈ ಪ್ರಾಂತದಲ್ಲಿ ಧಾಳಿ ಮಾಡಿದ್ದಾರೆ. ನಗರಗಳನ್ನೂ, ಪಟ್ಟಣಗಳನ್ನೂ ಗ್ರಾಮಗಳನ್ನೂ ದೊಲಗದ್ದೆಗಳನ್ನೂ ಅಲ್ಲಿರುವ ಮನೆ ಮಠ ಗುಡಿಸಲುಗಳನ್ನೂ ಕಟುಗ್ರವಾಗಿ ರಷ್ಯನ್ ವಿಮಾನ ಪಡೆಯವರು ಧಾಳಿ ಮಾಡಿದ್ದಾರೆ. ತಾರೀಕು 21 ರಿಂದ 28ರ ವರೆಗೆ ಫಿನ್ಲೆಂಡಿನಲ್ಲಿ 3000 ಬಾಂಬುಗಳು ಬಿದ್ದಿವೆ.

ಪಶ್ಚಿಮ ರಣರಂಗ.

ತೆಳ್ಳನೆ ಒಂದೇ ಸಮನಾಗಿ ಸೋನೆ ಹಿಡಿದಿರುವುದರಿಂದ ಪಶ್ಚಿಮರಂಗದಲ್ಲಿ ಒಂದು ತೆರೆಯನ್ನು ಹಾಕಿದಂತಾಗಿದೆ.

ಉಭಯ ಪಕ್ಷಗಳವರ ವಿಮಾನಗಳೂ ಚಟುವಟಿಕೆ ನಡೆಸಲು ಸಾಧ್ಯವಿಲ್ಲದ ಇದ್ದಲ್ಲೇ ಉಳಿದಿವೆ.

ಮಳೆ ಬಿದ್ದು ಮೆತ್ತಗಾಗಿರುವ ನೆಲದಿಂದ ಕಾಲಾಳು ಪಡೆಯ ಚಟುವಟಿಕೆ ಗಾವ ರೊಂದರಲಿಯೂ ಉಂಟಾಗಿಲ್ಲ.

ಪೋಸ್ಜಸ್‌ಗೆ ಪಶ್ಚಿಮದಲ್ಲಿ ಜರ್ಮನರು ದಾಳಿ ಮಾಡಲು ಯತ್ನಿಸಿದುದು ಪತ್ತೆಯಾಗಿ ಅವರನ್ನು ಬಾಂಬಿನಿಂದಲೂ ತುಪಾಕಿಯಿಂದಲೂ ಘಾತಿಸಿ ಓಡಿಸಲಾಯಿತು.

ಹೈನ್‌ನದೀ ಪ್ರದೇಶದಲ್ಲಿರುವ ರಣಮುಖದಲ್ಲಿ ಉಭಯಪಕ್ಷಗಳವರೂ ಗೋಲಂದಾಜ ಚಟುವಟಿಕೆಯನ್ನು ಬಲವಾಗಿ ನಡೆಸುತ್ತಿದ್ದಾರೆ.

ವಿಮಾನ ಚಟುವಟಿಕೆಯೂ ಗೋಲಂದಾಜ ಚಟುವಟಿಕೆಯೂ ಈ ರಾತ್ರಿ ಹೆಚ್ಚಾಗಿದ್ದವು ಎಂಬುದಾಗಿ ಒಂದು ಪ್ರಕಟಣೆ ತಿಳಿಸುತ್ತದೆ.

ಜರ್ಮನರ ಪ್ರಚಂಡ ವಿಮಾನ ಧಾಳಿ.

ಉತ್ತರ ಇಂಗ್ಲೆಂಡಿನಲ್ಲಿ ಟೀ ನದಿಯ ಅಳಿವೆ ಪ್ರದೇಶದಿಂದ ಹಿಡಿದು ದಕ್ಷಿಣದಲ್ಲಿ ಕೆಂಟ್ ತೀರದ ವರೆಗೂ ಸುಮಾರು 400 ಮೈಲಿಯಷ್ಟು ದೂರ ತೀರಪ್ರದೇಶ ಮಧ್ಯದಲ್ಲೂ ಇಂದು ಜರ್ಮನ್ ವಿಮಾನಗಳು ಬಹು ಕೆಚ್ಚಿನಿಂದ ಬ್ರಿಟಿಷ್ ಜಹಜುಗಳಿರುವ ಅನೇಕ ಕಡೆ ಧಾಳಿ ಮಾಡಿದುವು.

ಇಂಥ ಭಾರಿ ಪ್ರಯತ್ನವನ್ನು ಜರ್ಮನ್ ವಿಮಾನಗಳು ಇದು ವರೆಗೂ ಕೈಗೊಂಡಿರಲಿಲ್ಲ. ಬೆಳಿಗ್ಗೆ 9 ಗಂಟೆಯಿಂದ ಆರಂಭವಾದ ಈ ಧಾಳಿ ಮಧ್ಯಾಹ್ನದ ವರೆಗೂ ನಡೆಯಿತು. ಹವಾಗುಣವು ಚೆನ್ನಾಗಿಲ್ಲದಿದ್ದರೂ, ಮಂಜು ಅಲ್ಲಲ್ಲೇ ಮುಸುಕಿದ್ದರೂ ರಾಯಲ್ ಏರ್‌ಫೋರ್ಸ್ ವಿಮಾನಗಳು ಟೈನ್ ಡಿಸ್ಟ್ರಿಕ್ಟಿನಲ್ಲಿ ಬಹಳ ಚಟುವಟಿಕೆಯಿಂದ ಕೆಲಸ ಮಾಡಿದುವು. ವಿಮಾನ ವಿನಾಶಕ ಫಿರಂಗಿಗಳೂ ಉಗ್ಗಡಿಸುತ್ತಿದ್ದುವು.

ಒಂಬೇ ಸಲ ಏಳು ಬಾಂಬು!

ಈ ಸಂಬಂಧವಾಗಿ ಬ್ರಿಟಿಷ್ ವಿಮಾನ ಖಾತೆಯವರು ಪ್ರಕಟಿಸಿರುವ ಒಂದು ಹೇಳಿಕೆ ಮುಂದೆ ಕಂಡಂತಿದೆ:—

'ಬೆಳಿಗ್ಗೆ 9 ಗಂಟೆಯಾದ ಕೂಡಲೆ ಇಂಗ್ಲೆಂಡಿನ ಈಶಾನ್ಯಭಾಗದಲ್ಲಿ ಶತ್ರು ವಿಮಾನಗಳು [illegible] ಧಾಳಿ ಎಚ್ಚರಿಕೆಯನ್ನು ಕೊಡಲಾಯಿತು. ಶತ್ರು ವಿಮಾನಗಳು ಕಣ್ಮರೆಯಾದ ಮೇಲೆ ಅಪಾಯವಿಲ್ಲವೆಂಬ ಸೂಚನೆ ಕೊಡಲ್ಪಟ್ಟಿತು.

ರಾಯಲ್ ಏರ್‌ಫೋರ್ಸಿನ ಅನೇಕ ವಿಮಾನಗಳು [illegible] ಮಾಡಿದುವು.

'ತೀರ ಪ್ರದೇಶದ ಒಳ ಭಾಗದಲ್ಲಿರುವ ನಗರಗಳಿಗೆ ಈ ವಿಮಾನ ಧಾಳಿ ಎಚ್ಚರಿಕೆ ಕೇಳಿಬರಲಿಲ್ಲ. ವಿಮಾನಗಳಾವುವೂ ಅವರಿಗೆ ಕಂಡು ಬರಲಿಲ್ಲ.'

ಶತ್ರು ವಿಮಾನವೊಂದು ಟೈನ್ ಡಿಸ್ಟ್ರಿಕ್ಟಿನಲ್ಲಿ ತೀರಕ್ಕೆ ಸಮೀಪವಾಗಿದ್ದ 'ಅ..ನ್' ಎಂಬ ಜಹಜಿನ ಮೇಲೆ ಏಳು ಬಾಂಬುಗಳನ್ನು ಹಾಕಿದುದಾಗಿ ತಿಳಿದುಬಂದಿದೆ.

ಆದರೆ ಜಹಜಿಗೆ ಒಂದು ಏಟೂ ಬೀಳಲಿಲ್ಲ.

ಶೆಟ್‌ಲ್ಯಾಂಡ್ಸ್ ಮೇಲೂ ವಿಮಾನಗಳು.

ಈ ಮಧ್ಯಾಹ್ನ ಶೆಟ್‌ಲ್ಯಾಂಡ್ಸ್ ದ್ವೀಪಗಳ ಮೇಲೆ ಗುರುತು ಸಿಕ್ಕದ ವಿಮಾನಗಳು ಹಾರಿಹೋದವು.

ವಿಮಾನಗಳು ಕಂಡ ಕೂಡಲೆ ಅವುಗಳನ್ನು ಬೆನ್ನಟ್ಟಿ ರಾಯಲ್ ಏರ್‌ಫೋರ್ಸ್ ವಿಮಾನಗಳು ಮೇಲೇರಿದುವು.

40 ನಿಮಿಷದ ಮೇಲೆ ಆಲ್‌ಕ್ಲಿಯರ್ ಸೂಚನೆ ಕೊಡಲ್ಪಟ್ಟಿತು.

ಏಳು ಮಂದಿಗೆ ಅಪಮೃತ್ಯು.
ಲಿಟ್ವಿಯಾ ಜಹಜಿನ ಮೇಲೆ ಧಾಳಿ.

'ಟಾಟ್‌ಮಿಲ್ಲಾ' (3,700 ಟನ್) ಎಂಬ ಲಿಟ್ವಿಯಾ ದೇಶದ ಜಹಜು ಉತ್ತರ ಸಮುದ್ರದಲ್ಲಿ ಗಮಿಸುತ್ತಿದ್ದಾಗ ಜರ್ಮನ್ ವಿಮಾನಗಳು ಅದರ ಮೇಲೆ 10 ಬಾಂಬುಗಳನ್ನು ಹಾಕಿದುವು. ಜಹಜಿನಲ್ಲಿದ್ದವರಲ್ಲಿ 7 ಮಂದಿ ಮೃತರಾದರೆಂದು ಕಳವಳ ಹುಟ್ಟಿದೆ.

ಜೀವದೊಡನೆ ಪಾರಾದ ಎಂಟನೆಯವನೊಬ್ಬಾತನು ಒಂದು ದೋಣಿಯಲ್ಲಿ ಕುಳಿತು ತೇಲುತ್ತಿದ್ದುದು ಕಂಡು ಬಂದಿತು. ಈ ದೋಣಿಗೂ ಬಾಂಬಿನಿಂದ ಜಖಂ ಆಗಿದೆ. ಲೈಫ್‌ಬೋಟುಗಳು ಈ ದೋಣಿಯನ್ನು ಹುಡುಕುತ್ತಿವೆ.

ಜಹಜಿನ ಬೇರೆ 15 ಮಂದಿಯೂ ಕ್ಯಾಪ್ಟನ್ನರ ಪತ್ನಿಯೂ ಒಂದು ದೋಣಿಯಲ್ಲಿ ಕುಳಿತು ಪಾರಾಗಿದ್ದಾರೆ. ಇವರನ್ನು ಇನ್ನೊಂದು ನೌಕೆ ಸಂರಕ್ಷಿಸಿ ದಡಕ್ಕೆ ಕರೆತಂದಿದೆ.

'ಇಂಗ್ಲೆಂಡ್' ಮುಳುಗಿತು!

'ಇಂಗ್ಲೆಂಡ್' (2777 ಟನ್) ಎಂಬ ಡೇನಿಷ್ ಜಹಜೂ, ಹೊಸಾಂಗರ್ (1491 ಟನ್) ಎಂಬ ನಾರ್ವೆಯ ಜಹಜೂ ಪೂರ್ವಭಾವಿಯಾಗಿ ಎಚ್ಚರಿಕೆ ಕೊಡಲ್ಪಡದೆ ಜರ್ಮನ್ ಜಲ ಸುರಂಗಗಳಿಂದ ಮುಳುಗಿಸಲ್ಪಟ್ಟವು.

'ಇಂಗ್ಲೆಂಡ್' ನಿಂದ ಪಾರಾಗಿ ಬಂದವನೊಬ್ಬನೇ ಒಬ್ಬ. ಈತ ಜಹಜಿನ ಸೆಕೆಂಡ್ ಆಫೀಸರ್. ಒಂದು ದಿಮ್ಮಿ ಹಿಡಿದು ಈತ 36 ಗಂಟೆ ನೀರಿನಲ್ಲಿ ತೇಲುತ್ತಿದ್ದು ಅನಂತರ ಸಂರಕ್ಷಿಸಲ್ಪಟ್ಟನು.

ಈತನನ್ನು ಸಂರಕ್ಷಿಸಿದ ನೌಕೆಯಲ್ಲಿ ಹೊಸಾಂಗರ್ ಜಹಜಿನ ಮೂರು ಮಂದಿಯಿದ್ದಾರೆ. ಉಳಿದವರು ಇಪ್ಪತ್ತೇ ಮಂದಿ.

'ಸಿಟಿ ಆಫ್ ಫ್ಲಿಂಟ್'
೧೧೩ ದಿನಗಳ ಮೇಲೆ ವಾಪಸ್.

'ಸಿಟಿ ಆಫ್ ಫ್ಲಿಂಟ್' ಜಹಜು 113 ದಿನಗಳು ಪ್ರಯಾಣ ಮಾಡಿ ಈಗ ಬಂದಿದೆ. ನ್ಯಾಯವಾಗಿ ಆ ಜಹಜು ಬಾಲ್ಟಿಮೋರಿಗೆ ಬಂದು ಸೇರಲು ಕೇವಲ ಆರೇ ವಾರಗಳು ಹಿಡಿಯುತ್ತಿತ್ತು. ಇದರ 113 ದಿನಗಳ ಯಾನವು ಬಹಳ ಸ್ವಾರಸ್ಯವಾಗಿದೆ.

'ಸಿಟಿ ಆಫ್ ಫ್ಲಿಂಟ್' ಜಹಜು ಅಮೇರಿಕಕ್ಕೆ ಸೇರಿದ್ದು. ಸಮುದ್ರ ಮಧ್ಯೆ ಕಳೆದ ಅಕ್ಟೋಬರ್ ತಿಂಗಳ ಅಂತ್ಯದಲ್ಲಿ ಸಂಚರಿಸುತ್ತಿದ್ದಾಗ 'ಡ್ಯೂಷ್‌ಲ್ಯಾಂಡ್' ಎಂಬ ಜರ್ಮನ್ ಸಂಗ್ರಾಮ ನೌಕೆಯು ಅದನ್ನು ಸೆರೆಹಿಡಿಯಿತು. ಆಗ ಅಮೇರಿಕನ್ ನಾವಿಕರ ವಶಕ್ಕೆ ಜರ್ಮನ್ ಜಹಜಿನಲ್ಲಿ ಬಂಧನದಲ್ಲಿದ್ದ ಇತರ ನಾವಿಕರನ್ನು ಒಪ್ಪಿಸಲಾಯಿತು. ಅವರೊಡಗೂಡಿ ಈ ಜಹಜು ಆ ಮೇಲೆ ಟ್ರೋಂಸ್ಲೋ (ನಾರ್ವೆ) ರೇವಿಗೆ ಬಂದಿತು; ಅಲ್ಲಿಂದ ಮುರ್ಮಾನ್‌ಸ್ಕ್ (ರಷ್ಯ) ಬಂದರಿಗೆ ಬಂದಿತು.

ಅಲ್ಲಿ ಕೆಲವು ದಿನಗಳ ಕಾಲ ಸೋವಿಯಟ್ ಅಧಿಕಾರಿಗಳಿಂದ ಅದು ತಡೆದು ನಿಲ್ಲಿಸಲ್ಪಟ್ಟಿತು. ಆ ಮೇಲೆ ಅದರ ನಾವಿಕರು ಮತ್ತು ಸಾಮಗ್ರಿಗಳು ಯಾವುದಕ್ಕೂ ಲೋಪವಿಲ್ಲದೆ ಅದರ ಬಿಡುಗಡೆಯಾಯಿತು. ಅಲ್ಲಿಂದ ಹೊರಟು ರಹದಾರಿಯಿಲ್ಲದೆ ಹಾಗ್‌ಸೆಂಡ್ ರೇವಿನಲ್ಲಿ ಲಂಗರು ಹಾಕಿದ್ದರಿಂದ ನಾರ್ವೀಜಿಯನ್ ಸರ್ಕಾರದವರು ಅದನ್ನು ನಿರ್ಬಂಧದಲ್ಲಿಟ್ಟರು. ಜರ್ಮನ್ ನೌಕೆಯಿಂದ ಬಂದ ನಾವಿಕರ ದಸ್ತಗಿರಿಯಾದ ಮೇಲೆ ಇದರ ಬಿಡುಗಡೆಯಾಯಿತು.

ಎರಡನೇ ಡಿವಿಡೆಂಡ್.

ಈ ಮೊದಲು ಮುಚ್ಚಲ್ಪಟ್ಟ ಟ್ರಾವಂಕೂರು ನೇಶನಲ್ ಮತ್ತು ಕ್ವಿಲಾನ್ ಬ್ಯಾಂಕಿನ, 50 ರೂಪಾಯಿಗೆ ಮೇಲ್ಪಟ್ಟ ಠೇವಣಾತಿದಾರರಿಗೆ ರೂಪಾಯಿಗೆ ಎರಡಾಣೆಯಂತೆ ಎರಡನೇ ಡಿವಿಡೆಂಡು ಕೊಡಲಾಗುವದೆಂದು ಪ್ರಕಟವಾಗಿದೆ.

ಆರೋಗ್ಯವೇ ಆದ್ಯಕರ್ತವ್ಯ.

(ಲೇಖಕ:-ಶ್ರೀ. ಜಿ. ವಿ.)

"ಕಸದ ಡಬ್ಬಿಗಳಲ್ಲಿ ಕಸ ಚೆಲ್ಲಲು ಕೂಡ ಆಗದ ಶೀಲವಂತರಿಂದ ಮುನಸಿಪಾಲಿಟಿಗೆ ಹೇಗೆ ಸಹಾಯವಾದೀತು? ಸತ್ತ ಬಳಿಕ ದೊರೆಯುವ ಶಾಶ್ವತವಾದ ಸ್ವರ್ಗಸುಖದ ಸಂಪಾದನೆಗಾಗಿ ತಮ್ಮ ಕೇರಿಯವರಿಗೆಲ್ಲ ನರಕವಾಸದ ಕಟು ಅನುಭವ ಮಾಡಿಕೊಡುವ ಸತ್ಕಾರ್ಯವನ್ನು ಮಾಡಿರುತ್ತಾರೆ."

ಮುನಸಿಪಾಲಿಟಿಗಳ ಅನೇಕ ಕರ್ತವ್ಯಗಳಲ್ಲಿ ನಾಗರಿಕರ ಆರೋಗ್ಯ ರಕ್ಷಣೆ ಪೋಷಣೆಯೇ ಎಲ್ಲಕ್ಕೂ ಮುಖ್ಯವಾದ ಕರ್ತವ್ಯವೆಂದು ಹೇಳಬಹುದು. ಭರತ ಖಂಡದಲ್ಲಿಯ ಜನರ, ಮುಖ್ಯವಾಗಿ ಪಟ್ಟಣ ವಾಸಿಗಳ ಆರೋಗ್ಯವು ಚೆನ್ನಾಗಿಲ್ಲವೆಂಬ ಸಂಗತಿಯನ್ನು ಎಲ್ಲರೂ ಒಪ್ಪಬೇಕಾಗಿದೆ. ಅನೇಕ ರೋಗಗಳು ನೀರಿನಿಂದ ಉದ್ಭವಿಸುತ್ತವೆ. ಹಳ್ಳಿಗರಿಗೆ ಪಟ್ಟಣ ವಾಸಿಗಳಿಗೆ ಯಾವ ತರದ ರೋಗಜಂತುಗಳಿಗೂ ಆಶ್ರಯ ಕೊಡದಂಥ ನಿರ್ಮಲವಾದ ಆರೋಗ್ಯಕರವಾದ ನೀರಿನ ಪುರವಠಿ ಮಾಡಿಕೊಡುವದು ಸ್ಥಾನಿಕ ಸಂಸ್ಥೆಗಳ ಮೊಟ್ಟ ಮೊದಲನೇ ಕೆಲಸವಾಗಿದೆ. ಕಾಂಗ್ರೆಸ್ ಮುಂದಾಳುಗಳು ಬೇರೆ ಬೇರೆ ಪ್ರಾಂತಗಳಲ್ಲಿ ಅಧಿಕಾರ ಸ್ವೀಕರಿಸಿದ ಬಳಿಕ ಹಳ್ಳಿಗಳಲ್ಲಿಯ ಕೆರೆ, ಭಾವಿಗಳ ಕೆಲಸವನ್ನು ಕೈಕೊಂಡರು. ಅವರಂತೆ ಸಣ್ಣ ದೊಡ್ಡ ಪಟ್ಟಣಗಳಲ್ಲಿಯ ಮುನಸಿಪಾಲಿಟಿಗಳು ನೀರಿನ ವ್ಯವಸ್ಥೆ ಚೆನ್ನಾಗಿ ಮಾಡಿವೆಯೋ ಇಲ್ಲವೋ ಎಂಬುವರ ವಿಚಾರ ವಕ್ಷತೆಯಿಂದ ನಡೆಯಿತು. ಸ್ಥಾನಿಕ ಸಂಸ್ಥೆಗಳ ಉತ್ಪನ್ನ ತಕ್ಕಮಟ್ಟಿಗಿಲ್ಲದ್ದರಿಂದ ಪ್ರಾಂತೀಕ ಸರಕಾರಗಳು ಹಳ್ಳಿಗಳಲ್ಲಿಯ ಕೆರೆ, ಬಾವಿಗಳಿಗಾಗಿ ಹಣ ಮಂಜೂರಮಾಡಿದರು. ಅದರಲ್ಲಿ ಸ್ವಾವಲಂಬಿಗಳಿಗೆ ಮೊದಲು ಹಣ ದೊರೆಯುವ ವ್ಯವಸ್ಥೆ ಮಾಡುವದರಲ್ಲಿ ಬಂದಿತು. ಯಾವ ಹಳ್ಳಿಗಳಿಂದ ದ್ರವ್ಯ ಸಹಾಯ ಅಥವಾ ಶ್ರಮ ಸಹಾಯ ದೊರೆಯುತ್ತದೋ ಅವರಿಗೆ ಸರಕಾರದ ಸಹಾಯ ಮೊದಲು ಸಿಗುವದು. ನಾಗರೀಕರು ತಮ್ಮ ಹಕ್ಕುಗಳನ್ನು ಬೇಡುವದರಲ್ಲಿ ತತ್ಪರರಿದ್ದಂತೆ ತಮ್ಮ ಕರ್ತವ್ಯಗಳಿಗೂ ಸಾಕಷ್ಟು ಜಾಗರೂಕರಾಗಿರಬೇಕು. ಸುಧಾರಣೆಗಳಿಗೆ ಹಣ ಬೇಕು. ಹಣ ದೊರಕಿಸುವ ಉಪಾಯವೆಂದರೆ ಹೆಚ್ಚಿನ ಕರ ಕೂಡಿಸುವದು. ಸಧ್ಯದ ಕಾಲದಲ್ಲಿ ಹೆಚ್ಚಿನ ಕರ ಕೊಡುವ ಬಲವು ಪಟ್ಟಣಿಗರಲ್ಲಿ ಇಲ್ಲ, ಹಳ್ಳಿಗರಲ್ಲಿಯೂ ಇಲ್ಲ. ಧನವಂತ ಪಶ್ಚಾತ್ಯ ದೇಶಗಳಲ್ಲಿಯ ಸ್ಥಾನಿಕ ಸಂಸ್ಥೆಗಳ ಆಡಳಿತಗಾರರಿಗೆ ಹೆಚ್ಚಿನ ಕರ ಕೂಡಿಸಿ ಉತ್ಪನ್ನ ಬೆಳೆಸುವ ಕ್ರಮವನ್ನು ನಿಲ್ಲಿಸಬೇಕಾಗಿದೆ. ಅನೇಕ ಸ್ಥಾನಿಕ ಸಂಸ್ಥೆಗಳು ಆಧುನಿಕ ಶಾಸ್ತ್ರೀಯ ಶೋಧಗಳ ಸಹಾಯದಿಂದ ವೆಚ್ಚ ಕಡಿಮೆ ಮಾಡುವ ಆದಾಯ ಬೆಳೆಸುವ ಯೋಜನೆ ಮಾಡಿದ್ದಾರೆ. ಶಾಂಘಾಯದಲ್ಲಿ ಹೇಸಿಕೆಯಿಂದ ಪ್ರತಿಯೊಬ್ಬನಿಗೆ ವರ್ಷಕ್ಕೆ ಎರಡು ರೂಪಾಯಿಯಂತೆ ಉತ್ಪನ್ನ ಬರುತ್ತಿದೆ. ಡಾಕ್ಟರ ಗಿಲ್ಬರ್ಟ್ ಫವಲರ ಎಂಬವರು ಈ ಪ್ರಯೋಗವನ್ನು ಮದ್ರಾಸು ಕಾರ್ಪೊರೇಶನದವರು ಮಾಡಬೇಕೆಂದು ಸೂಚಿಸಿದ್ದಾರೆ. ಮದ್ರಾಸು ಪಟ್ಟಣದ ಜನಸಂಖ್ಯೆ 7 ಲಕ್ಷ. ಅವರ ಹೇಸಿಕೆಯಿಂದ ವರ್ಷಂಪ್ರತಿ ಮದ್ರಾಸ ಮುನಿಸಿಪಾಲಿಟಿಗೆ 15 ಲಕ್ಷ ಉತ್ಪನ್ನ ಬರುವದು. ಅದಕ್ಕಾಗಿ ಮಾಡಬೇಕಾದ ವೆಚ್ಚವನ್ನು ತಜ್ಞರ ಸಹಾಯದಿಂದ ಮಾಡಬೇಕೆಂದು ಅವರ ಸಲಹೆ. ಪುಣೆ ಮುನಸಿಪಾಲಿಟಿಯವರು ಸಹ ಹೊಲಸು ಕೂಡಿದ ನೀರಿನ ಪ್ರಥಕ್ಕರಣ ಮಾಡಿಸಿ ಅದರಲ್ಲಿದ್ದ ನಾಯಟ್ರೋಜನದ ಪ್ರಮಾಣದಿಂದ ಅದರ ಕ್ರಯ ನಿರ್ಣಯಿಸಿ ಅದನ್ನು ಒಕ್ಕಲಿಗರಿಗೆ ಮಾರುತ್ತಾರೆ. ಅದರಿಂದ ಆ ಮುನ್ಸಿಪಾಲಿಟಿಗೆ ಬರುವ ಪಂಪಿಂಗ್ ವೆಚ್ಚದ ಹಣ ಪರಭಾರೆ ಬರುತ್ತದೆ. ಯೂರೋಪದಲ್ಲಿ ಒಂದು ಚಿಕ್ಕ ಮುನಸಿಪಾಲಿಟಿಯ ಹದ್ದಿನಲ್ಲಿಯ ಕಸ ಸುಟ್ಟು ವಿದ್ಯುತ್ ಶಕ್ತಿಯನ್ನು ಹುಟ್ಟಿಸಿ ಬೀದಿಗಳಲ್ಲಿ ದೀಪ ಹಚ್ಚುವ ಯೋಜನೆಯನ್ನು ಒಬ್ಬ ಶಾಸ್ತ್ರಜ್ಞನು ಮಾಡಿದ್ದಾನೆ.

ಮುನಸಿಪಾಲಿಟಿ ನಮ್ಮದು.

ನಗರವು ನಮ್ಮದು, ಮುನಸಿಪಾಲಿಟಿ ನಮ್ಮದು ಎಂಬ ಭಾವನೆಯಿಂದ ನಾಗರೀಕರು ಸಹಾಯ ಮಾಡಿದ ಹೊರತು ಹೆಚ್ಚಿನ ಸುಧಾರಣೆ ಯಾಗುವದು ಶಕ್ಯವಿಲ್ಲ. ಸಾರ್ವಜನಿಕ ಕರ್ತವ್ಯದ ಜಾಗೃತಿಯಾಗಬೇಕು. ಸಾಂಘಿಕ ನೀತಿಯ ಅರಿವು ಹೆಚ್ಚಾಗಬೇಕು. ಆಯ್ಕೆಯಲ್ಲಿ ಮನಬಲ್ಲಂತೆ ವೆಚ್ಚ ಮಾಡಿ ಆರಿಸಿ ಬಂದ ಮುನಸಿಪಾಲಿಟಿಯ ಸಭಿಕನು ತನ್ನ ಸಭಾಸದತ್ವದ ದುರುಪಯೋಗ ಮಾಡುವದು ಸಹಜವಿದೆ. ಇದನ್ನು ತಪ್ಪಿಸುವದು ಮತದಾರರ ಕೈಯಲ್ಲಿದೆ. ಸಾರ್ವಜನಿಕ ಸೇವೆಗಾಗಿ ದುಡಿಯಲು ಸಿದ್ಧರಿದ್ದವರನ್ನು ಆರಿಸುವದು ತಮ್ಮ ಕರ್ತವ್ಯವೆಂದು ತಿಳಿದುಕೊಂಡು ಮತ ಕೊಡದಿದ್ದರೆ ಕೆಟ್ಟ ಆಡಳಿತಕ್ಕೆ ಗುರಿಯಾಗಬೇಕಾಗುತ್ತದೆ. ಕೆಲವು ಕಡೆಗೆ ಸ್ಥಾನಿಕ ಸಂಸ್ಥೆಗಳಿಗೆ ಸಹಕಾರೀಸಂಘಗಳ ಸಹಾಯ ದೊರೆತಿದೆ. ಹಿಂದೂಸ್ಥಾನದಲ್ಲಿ ಸಹಕಾರದ ಆಂದೋಲನದಲ್ಲಿ ಮುಂದಾಗುವರ ಮುಖ್ಯ ಉದ್ದೇಶ, ಅಧಿಕಾರ ಸ್ಥಾನ ದೊರಕಿಸಿಕೊಂಡು ಕಿತಾಬು ಪಡಕೊಂಡು ಮೆರೆಯುವದಾಗಿದೆಯೆಂಬ ಅನುಭವವು ಬರಹತ್ತಿದೆ. ಬೇರೆ ಸುಧಾರಿಸಿದ ದೇಶಗಳಲ್ಲಿ ಸಹಕಾರದಂಥ ಜನಸಾಹಾಯಕ ಆಂದೋಲನದಿಂದ ಜೀವಿತವನ್ನು ಸುಖಮಯಮಾಡುವ ಯತ್ನ ನಡೆಯುತ್ತಿದೆ. ಟೋಕಿಯೋದಲ್ಲಿ ನ್ಯಾಶನಲ್ ಹೆಲ್ತ ಕೋಆಪರೇಟಿವ್ ಸೊಸೈಟಿ ಇದೆ. ಈ ಸಹಕಾರಿ ಸಂಘದವರು ಆರು ತಿಂಗಳಲ್ಲಿ ಒಮ್ಮೆಯಾದರೂ ಪ್ರತಿಯೊಂದು ಮನೆಗೆ ಹೋಗಿ ಅದನ್ನು ಸ್ವಚ್ಛಮಾಡುತ್ತಾರೆ. ಹೀಗೆ ಸ್ವಚ್ಛವಾದ ನಂತರ ಮನೆಯವರಲ್ಲಿ ಪೋಲೀಸರಿಂದ ಸರ್ಟಿಫಿಕೇಟು ದೊರಕಿಸದೆ ಇರುವವರಿಗೆ ದಂಡವಾಗುತ್ತಿದೆ. ಕಲಿಯುಗದಲ್ಲಿ ಸಂಘಶಕ್ತಿಯಿಂದಲೇ ಕೆಲಸವಾಗಬೇಕು. ಪರಸ್ಪರ ಸಹಾಯಕ ಸಂಘಗಳ ಮೂಲಕ ಜಪಾನದಲ್ಲಿ ಸ್ಥಾನಿಕ ಸಂಸ್ಥೆಗಳಿಗೆ ಆದ ಸಹಾಯವನ್ನು ಸುಪ್ರಸಿದ್ಧ ಸಹಕಾರಿಗಳಾದ ಡಾಕ್ಟರ ಕಾಗಾವ ಅವರು ಚೆನ್ನಾಗಿ ವಿವರಿಸಿದ್ದಾರೆ. ಸ್ಥಳ ಸಂಕೋಚದ ಮೂಲಕ ಅದರ ಬಗ್ಗೆ ಹೆಚ್ಚಿಗೆ ಬರೆಯಲು ಶಕ್ಯವಿಲ್ಲ. ಕಸದ ಡಬ್ಬಿಗಳಲ್ಲಿ ಕಸ ಚೆಲ್ಲಲು ಸಹ ಸಿದ್ಧರಾಗದ ಉಚ್ಚ ಜಾತಿಯರಿಂದ ಮುನಸಿಪಾಲಿಟಿಗಳಿಗೆ ಎಷ್ಟು ಸಹಾಯ ದೊರೆಯುತ್ತದೆ ನೋಡಿರಿ. ಶೀಲವಂತರು ಕಸದ ಡಬ್ಬಿಯ ಸಮೀಪ ಹೋದರೆ ಮೈಲಿಗೆಯಾಗುತ್ತದೆಂದು ಗಟಾರಗಳಲ್ಲಿ ಕಸ ಚೆಲ್ಲುತ್ತಾರೆ. ಇಲ್ಲವೆ ಕಸದ ಡಬ್ಬಿಯಿಂದ ಮೊಳ, ಎರಡು ಮೊಳ ಅಂತರದ ಮೇಲೆ ನಿಂತು ಒಗೆಯುತ್ತಾರೆ. ಕಸ ಗಟಾರದಲ್ಲಿ ಬಿದ್ದು ಕೊಳೆಯುತ್ತದೆ. ಅಥವಾ ಡಬ್ಬಿಯ ಹೊರಗೆ ಬಿದ್ದು ಓಣಿ ತುಂಬಾ ಹಾರುತ್ತದೆ. ಇವರು ಸತ್ತ ಬಳಿಕ ದೊರೆಯುವ ಶಾಶ್ವತವಾದ ಸ್ವರ್ಗಸುಖದ ಸಂಪಾದನೆಗಾಗಿ ತಮ್ಮ ಕೇರಿಯವರಿಗೆಲ್ಲ ನರಕವಾಸದ ಕಟುಅನುಭವ ಮಾಡಿಕೊಡುವ ಸತ್ಕಾರ್ಯ ಮಾಡುತ್ತಾರೆ. ಇದು ಎಂಥ ಕಾರ್ಯ? ಎಂಥ ಶೀಲ? ಪ್ರತಿಯೊಬ್ಬ ನಾಗರಿಕನು ಮುನಸಿಪಾಲಿಟಿಯ ಕೆಲಸವನ್ನು ಹಗುರಾಗಿ ಮಾಡಲು ಯತ್ನಿಸಿದರೆ ವೆಚ್ಚ ಕಡಿಮೆಯಾಗಿ ಹೆಚ್ಚಿನ ಸೌಕರ್ಯಗಳು ದೊರೆಯುವವು.

ಹೆಲ್ಥ ಮ್ಯೂಜಿಯಮ್.

ಹಿಂಯುಳಿದವರಿಗೆ, ಹೆಣ್ಣು ಮಕ್ಕಳಿಗೆ ಅಶಿಕ್ಷಿತರಿಗೆ ಆರೋಗ್ಯದ ಅವಶ್ಯಕತೆ ಅದರ ಮಹತ್ವ, ಅದರ ಭಾವದಿಂದ ಒದಗುವ ಸಂಕಟಗಳ ಕಲ್ಪನೆ ಇರುವದಿಲ್ಲ. ಅಂಥವರಿಗೆ ಹೆಲ್ಥ ಮ್ಯೂಜಿಯಮ್‌ಗಳು ಅತ್ಯವಶ್ಯಬೇಕು. ಕೆಲವು ಕಡೆಗೆ ಡಿಸ್ಟ್ರಿಕ್ಟ್ ಹೆಲ್ಥ ಎಸೋಸಿಯೇಶನ್‌ದವರು ಈ ಕೆಲಸವನ್ನು ಕೈಕೊಂಡಿದ್ದಾರೆ. ತ್ರಿಚಿನಾಪಲ್ಲಿ ಮುನಸಿಪಾಲಿಟಿಯ ಹೆಲ್ಥ ಆಫೀಸರರು ಇಂಥ ಮ್ಯೂಜಿಯಮ್ಮಿನ ಅವಶ್ಯಕತೆಯನ್ನು ವಿವರಿಸಿ ಅದರ ಕೆಲಸವನ್ನು ಸಣ್ಣ ಪ್ರಮಾಣದಿಂದ ಪ್ರಾರಂಭಿಸಬೇಕೆಂದೂ ಅದಕ್ಕಾಗಿ 500 ರೂಪಾಯಿ ವೆಚ್ಚಮಾಡಬೇಕೆಂದೂ ಸೂಚಿಸಿದರು. ಮುನಸಿಪಾಲಿಟಿಯವರು ಸರಕಾರದ ಸಹಾಯದಿಂದ ಈ ಕೆಲಸವನ್ನು ಮುಂದರಿಸುವರಿದ್ದಾರೆ.

ಲೆಬೋರೇಟರಿ.

ಅಹಮ್ಮದಾಬಾದ್ ನಗರದಲ್ಲಿ ಮುನಸಿಪಾಲಿಟಿಯ ಫುಡ್ ಎನಲೈಸಿಸ್ ಲೆಬೋರೇಟರಿಯಿದೆ. ಅದರಲ್ಲಿ ಆಹಾರ ಪದಾರ್ಥಗಳ ಪೃಥಕ್ಕರಣವಾಗುತ್ತದೆ. ಕ್ರಯಕ್ಕೆ ತಕ್ಕ ಆರೋಗ್ಯಕರವಾದ ಆಹಾರ ಪದಾರ್ಥಗಳು ನಾಗರಿಕರಿಗೆ ದೊರಕುವಂತೆ ಮಾಡುವದು ಮುನಸಿಪಾಲಿಟಿಯ ಕರ್ತವ್ಯಗಳಲ್ಲಿ ಒಂದಾಗಿದೆ. ಇಂಥ ಪ್ರಯೋಗ ಶಾಲೆ ಇದೆ, ಇದರಲ್ಲಿ ತಾವು ಮಾರುವ ಪದಾರ್ಥಗಳ ಪೃಥಕ್ಕರಣವಾಗುತ್ತದೆಂದು ತಿಳಿದರೆ ಮಾರುವವರು ಜಾಗರೂಕರಾಗಿ ಮಿಶ್ರಿತ ಪದಾರ್ಥಗಳನ್ನು ಮಾರಲು ಹಿಂಜರಿಯುತ್ತಾರೆ.

ವಿದ್ಯಾರ್ಥಿಗಳ ವೈದ್ಯಕೀ ಪರೀಕ್ಷಣ.

ಕೆಲವು ಮುಂದರಿದ ಮುನಸಿಪಾಲಿಟಿಗಳು ಮುಂಬಯಿ, ಡಿಲ್ಲಿ, ಮೊದಲಾದವುಗಳು ಬಡ ವಿದ್ಯಾರ್ಥಿಗಳಿಗೆ ಹಾಲು ಸಹ ಪೂರೈಸುತ್ತವೆ. ಮದ್ರಾಸದಲ್ಲಿ ಮಧ್ಯಾನ್ಹದ ಊಟ ಸಹ ದೊರೆಯುತ್ತದೆ. ವಿದ್ಯಾರ್ಥಿಗಳಲ್ಲಿ 100ಕ್ಕೆ 75 ವಿದ್ಯಾರ್ಥಿಗಳಲ್ಲಿ ನ್ಯೂನತೆ ಇದ್ದೇ ಇರುತ್ತದೆ. ಕೆಲವರ ಹಲ್ಲು ಹುಳಿತಿರುತ್ತವೆ. ಕೆಲವರ ಕಣ್ಣು ಚೆನ್ನಾಗಿ ಕಾಣುವದಿಲ್ಲ. ಕೆಲವರಿಗೆ ಸಾಕಷ್ಟು ಕೇಳಿಸುವದಿಲ್ಲ. ಹೀಗೆ ಒಂದಲ್ಲೊಂದು ಇದ್ದದ್ದು ಕಂಡುಬರುತ್ತದೆ. ಇಂಥವರಿಗೆ ಉಚಿತ ವೈದ್ಯಕೀಯಸಹಾಯ ದೊರೆಯುವ ವ್ಯವಸ್ಥೆ ಮಾಡಿದ ಮುನಸಿಪಾಲಿಟಿಗಳುಂಟು. ಕ್ಷಣಕ್ಷಣಕ್ಕೆ ಬಾಯಿಂದ ದೇವರು, ಧರ್ಮವೆಂದು ಉಚ್ಚರಿಸುವ ಅನೇಕ ದೇಶಗಳಿಗಿಂತ ಸ್ವಲ್ಪ ಧರ್ಮವಿಲ್ಲದ ರಶಿಯಾದಂಥ ದೇಶದಲ್ಲಿ ಬಾಲಕ ಬಾಲಕಿಯರ ಸಂಗೋಪನವು ಎಲ್ಲಕ್ಕೂ ಹೆಚ್ಚು ಮಮತೆಯಿಂದಲೂ, ಶಾಸ್ತ್ರ ಸಮ್ಮತವಾಗಿಯೂ ಆಗುತ್ತದೆ. ದರಿದ್ರ ಧನವಂತ ಎಂಬ ಭೇದಭಾವ ಮಾಡದೆ ಎಲ್ಲ ವಿದ್ಯಾರ್ಥಿಗಳ ವೈದ್ಯಕೀ ಪರೀಕ್ಷಣವಾಗಬೇಕು.

ಸಾಂಸರ್ಗಿಕ ರೋಗಿಗಳು.

ಮಹಾರೋಗ, ಕುಷ್ಟರೋಗ, ಮೊದಲಾದ ಸಾಂಸರ್ಗಿಕ ರೋಗಗಳಿಂದ ಪೀಡಿತರಾದ ಭಿಕ್ಷುಕರನ್ನು ಆಯಾ ರೋಗಿಗಳಿರುವ ಆಸ್ಪತ್ರೆಗಳಿಗೆ ಕಳಿಸುವದು ಮುನಸಿಪಾಲಿಟಿಯ ಕರ್ತವ್ಯಗಳಲ್ಲಿ ಒಂದಾಗಿದೆ. ಇಂಥಾ ರೋಗಿಗಳಿಗಾಗಿ ಅನಾಥಾಲಯಗಳೂ ಉಂಟು. ಸಾರ್ವಜನಿಕ ಆರೋಗ್ಯ ರಕ್ಷಣೆಗಾಗಿ ಇಂಥವರನ್ನು ದಟ್ಟ ವಸತಿಯ ನಗರಗಳಲ್ಲಿ ವಾಸಮಾಡಗೊಡುವದು ಇಷ್ಟವಲ್ಲ.

ನಾಗರೀಕರ ಸಹಾಯ, ಸಹಕಾರ, ಸಲಹೆ ಸಹಾನುಭೂತಿಯಿಂದ ನಡೆದ ಸ್ಥಾನಿಕ ಸಂಸ್ಥೆಗಳ ಆಡಳಿತದಲ್ಲಿಯೇ ಜನರ ಹಿತವಿದೆ.

'ಮ. ಗ.'

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	47 810	0	0
ಜಮೂಬಂದ ಠೇವಣಾತಿ	–	2,13,262	0	4
ವಸೂಲಾದ ಕ್ಷೇಮನಿಧಿ	–	1,56,611	12	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	40,979	5	1
ಫಿಕ್ಸ್ಡ್ ಡಿಪಾಜಿಟ್ಟು	–	23,560	14	0

ಈ ಬ್ಯಾಂಕಿನಿಂದ ಕೊಡಗು ಜಿಲ್ಲೆಯ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ನೂರಕ್ಕೆ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ನೂರಕ್ಕೆ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಫಿಕ್ಸ್ಡ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಫಿಕ್ಸ್ಡ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937 ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಅದರೆ ಪುನಹ ತಾ. 29-7-39ರಿಂದ ತಾತ್ಕಾಲಿಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಸಿ. ದೇವಯ್ಯನವರು.
ಸೆಕ್ರೆಟರಿ:—ಮೆ. ಎನ್. ಎಸ್. ರಾಮಶೆಟ್ಟಿಯವರು.

ತಾ. 1-1-1940

ಶುಭ ಸಂದೇಶ.

ಕಂಪೆನಿಗೆ ಈ ತನಕ ತೋರಿಸಿದ ಸಹಕಾರ, ಸಹಾನುಭೂತಿಯ ಬಗ್ಗೆ ಗಿರಾಕಿ ವ ಹಿತಚಿಂತಕರಿಗೆ ತಮ್ಮ ಸಂತೋಷ ಸೂಚನೆಯನ್ನು ಕಂಪೆನಿಯ ಸಂಚಾಲಕ ಮಂಡಳಿಯವರು ಈ ಮೂಲಕ ವ್ಯಕ್ತಪಡಿಸುತ್ತಾರೆ. ಇದೇ ರೀತಿಯಲ್ಲಿ ಹೊಸ ವರ್ಷದಲ್ಲಿಯೂ ವಿಶ್ವಾಸಪೂರ್ವಕ ಪ್ರೀತಿ ಪ್ರೋತ್ಸಾಹಗಳನ್ನು ಅಪೇಕ್ಷಿಸಿ, ಎಲ್ಲರಿಗೂ ಶಾಂತಿ ಸುಖವನ್ನು ಹಾರೈಸುವ.

Bhuvanendra Products Ltd,
Katapadi S. K.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
5–11 ಕಟಪಾಡಿ, ದ. ಕ.

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

[illegible]

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗ್ಗೆ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗ್ಗೆ) ಇದ್ದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಹಸಿವು ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಛತ್ರೆ. ಮತ್ತು ಕಂಪೆನಿ,
(52-6) ಗಿರಗಾಂವ, ಮುಂಬಯಿ ೪,

ಮಿತವ್ಯಯದ ಅಭ್ಯಾಸವನ್ನು ಚಿಕ್ಕಂದಿನಲ್ಲಿಯೇ ಪ್ರೋತ್ಸಾಹಿಸಿ ನಿಮ್ಮ ಮಕ್ಕಳ ಮುಂದಿನ ಪ್ರಾದುರ್ಭಾವಕ್ಕೆ ಸಾಕಾದಷ್ಟು ಅನುಕೂಲವನ್ನು ಕಲ್ಪಿಸಿ.

ಕೂಡಲೇ "ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್" ನ ಒಂದು ಪಾಲಿಸಿಯನ್ನು

ಅತ್ಯಂತ ಭದ್ರವಾದ ಮತ್ತು ಜನಾದರಣೀಯವಾದ

ಭಾರತೀಯ ವಿಮಾ ಕಂಪೆನಿಯಾದ

"ಓರಿಯಂಟಲ್"

ನಲ್ಲಿ ತೆಗೆದುಕೊಳ್ಳಿರಿ.

ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್:–ಇದೊಂದು ಹೊಸ ರೀತಿಯ ಯೋಜನೆ. ಇದರ ಪ್ರಕಾರ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಸುಲಭ ದರದ ಪ್ರೀಮಿಯಮ್ಮಿನ ಲಿಮಿಟೆಡ್ ಹೋಲ್ ಲೈಫ್ ಅಥವಾ ಎಂಡೋಮೆಂಟ್ ವಿಮಾ ಪಾಲಿಸಿಯನ್ನು ಪಡೆಯಬಹುದು. ಇದರಲ್ಲಿ ಈ ಪಾಲಿಸಿಯ 'ರಿಸ್ಕ್' 22 ವರ್ಷ ವಯಸ್ಸಿಗೆ ಕಡಮೆ ಇಲ್ಲದ ಯಾವುದಾದರೊಂದು ಕ್ಲುಪ್ತ ಕಾಲದಿಂದ ಪ್ರಾರಂಭವಾಗುತ್ತದೆ.

52-2) **ಮಾಹಿತಿಗೆ ಬರೆಯಿರಿ:— ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್. ಸ್ಥಾಪನೆ-1874. ಹೆಡ್ ಆಫೀಸು ಬೊಂಬಾಯಿ. ಅಥವಾ ದಿ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.**

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
“ ಕೊಡಗು ”
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಪಿ. ಐ. ಬೆಳ್ಯಪ್ಪ.

ತಾ. ೯—೨—೧೯೪೦.

ವಾರ್ಷಿಕ ಚಂದಾ ರೂ. ೩—೮—೦

ಸಂಪುಟ ೧೯] [ಸಂಚಿಕೆ ೩೬

MR. CAN'T. : These are very hard days. No; I can't save anything.

MR. CAN. : I have opend a CUMULATIVE DEPOSIT a c now in the CORPORATION; after this I find that **I CAN SAVE.**

From small amounts set apart every month fortunes can be built. It is not difficult to set apart a rupee (or multiple thereof) per month from one's earnings. Those who opened the CUMULATIVE DEPOSIT accounts know how easy it is to save.

Have you opened yours?

THE CANARA BANKING CORPORATION LIMITED.

(Incorporated in British India)

Estd. 1906.

52-7

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ ‘ಅಮೃತಪ್ರಾಶ’ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ,— ದ. ಕನ್ನಡ
(ಬ್ರಾಂಚ್: ಕುಮಟಾ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

52-12

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣರಾವ್,
ಜಿ. ಹೆಚ್. ಹೌಸ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	47,810	0	0
ಜಮೂಬಂದ ರೇವಣಾತಿ	–	2,13,263	0	4
ವಸೂಲಾದ ಕ್ಷೇಮನಿಧಿ	–	1,56,611	12	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	40,979	5	1
ತ್ರಿಪ್ಟ್ ಡಿಪಾಜಿಟ್ಟು	–	23,560	14	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ಜಾರಿಮಾಡಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದತತ್ಕಾಲಕ್ಕೆ ನಿಲ್ಲಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಅಪರೇಟಿವ್ ಸಂಘಗಳ ರಿಜಿಸ್ಟ್ರರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯನವರು.
ಸೆಕ್ರೆಟರಿ:—ಪಿ. ಎಸ್ ಎನ್. ರಾಮಶೆಟ್ಟಿಯವರು.

ತಾ. 1-1-1940

ಕೊಡಂದೇರ ಡಿ. ಮಾಚಯ್ಯ,
L. D Sc. (COLLEGE OF DENTISTRY)
EX-SUPERVISOR LAXMIBAI PATEL DENTAL HOSPITAL, KARACHI

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (30) ನವೀನ ರೀತಿಯ ಚಿಕಿತ್ಸೆ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಲೇಕರ್ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ ವಿ. ಪಿ ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಲೇಕರ್. ಮತ್ತು ಕಂಪೆನಿ,
(52-7) ಗಿರಗಾಂವ, ಮುಂಬಯಿ ೪,

ಮಿತವ್ಯಯದ ಅಭ್ಯಾಸವನ್ನು ಚಿಕ್ಕಂದಿನಲ್ಲಿಯೇ ಪ್ರೋತ್ಸಾಹಿಸಿ ನಿಮ್ಮ ಮಕ್ಕಳ ಮುಂದಿನ ಪ್ರಾದುರ್ಭಾವಕ್ಕೆ ಸಾಕಾದಷ್ಟು ಅನುಕೂಲವನ್ನು ಕಲ್ಪಿಸಿ.

ಕೂಡಲೇ "ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್" ನ ಒಂದು ಪಾಲಿಸಿಯನ್ನು

ಅತ್ಯಂತ ಭದ್ರವಾದ ಮತ್ತು ಜನಾದರಣೀಯವಾದ

ಭಾರತೀಯ ವಿಮಾ ಕಂಪೆನಿಯಾದ

"ಓರಿಯಂಟಲ್"

ನಲ್ಲಿ ತೆಗೆದುಕೊಳ್ಳಿರಿ.

ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್:–ಇದೊಂದು ಹೊಸ ರೀತಿಯ ಯೋಜನೆ ಇದರ ಪ್ರಕಾರ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಸುಲಭ ದರದ ಪ್ರೀಮಿಯಮ್ಮಿನ ಲಿಮಿಟೆಡ್ ಹೋಲ್ ಲೈಫ್ ಅಥವಾ ಎಂಡೋಮೆಂಟ್ ವಿಮಾ ಪಾಲಿಸಿಯನ್ನು ಪಡೆಯಬಹುದು. ಇದರಲ್ಲಿ ಈ ಪಾಲಿಸಿಯ '**ರಿಸ್ಕ್**' 22 ವರ್ಷ ವಯಸ್ಸಿಗೆ ಕಡಮೆ ಇಲ್ಲದ ಯಾವುದಾದರೊಂದು ಕ್ಲುಪ್ತ ಕಾಲದಿಂದ ಪ್ರಾರಂಭವಾಗುತ್ತದೆ.

52-3) ಮಾಹಿತಿಗೆ ಬರೆಯಿರಿ:— **ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್. ಸ್ಥಾಪನೆ-1874, ಹೆಡ್ ಆಫೀಸು ಬೊಂಬಾಯಿ.** ಅಥವಾ **ದಿ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.**

Printed & Published by P. I. Belliappa, at 'Kodagu' Press Mercara for 'Kodagu' Ltd.

ಗಾಂಧಿಜೀಯವರು ಕಾಲಕ್ಕೆ ತಕ್ಕ ಮಹಾವಿಭೂತಿ.

ಲೇ:—ಜೇರಲ್ಡ್ ಹರ್ಡ್.

ಅಮೇರಿಕೆಯ ಜೆರಲ್ಡ್ ಹರ್ಡರು ಗಾಂಧಿಜೀಯವರ ೭೦ನೇ ಜಯಂತಿ ಕಾಲದಲ್ಲಿ ಸರ್ ರಾಧಾಕೃಷ್ಣನರವರಿಂದ ಹೊರಡಿಸಲ್ಪಟ್ಟ 'ಮಹಾತ್ಮ ಗಾಂಧಿ' ಎಂಬ ಹೆಸರಿನ 'ಅಂಕ'ಕ್ಕೆ ಒಂದು ಲೇಖವನ್ನು ಬರೆದಿದ್ದಾರೆ. ಅದರ ಕನ್ನಡ ಭಾಷಾಂತರವಿದು.

ನಾಗರೀಕ.

ಶ್ರೀಮಂತರಾಗುವದೆಂದರೆ ನಾಗರಿಕರಾಗುವದು ಎಂದು ಪಾಶ್ಚಾತ್ಯರ ಅಭಿಪ್ರಾಯವಿತ್ತು. ಹಣದ ಯಾಂತ್ರಿಕ ಕೌಶಲ್ಯವು ಅನಿವಾರ್ಯವಾಗಿ ಬೆಳೆದು ಉತ್ಪನ್ನವು ಹೆಚ್ಚಾಗಿ, ಸುಖವು ಅನಂತವಾಗುವದೆಂದೂ, ಎಲ್ಲ ಮಾನವರಲ್ಲಿ ಸಮತಾಭಾವನೆಯುಂಟಾಗುವದೆಂದೂ, ಎಲ್ಲರಿಗೂ ಸುಖವು ಸಮಷ್ಟಿಯಲ್ಲಿ ದೊರಕಿ ಪ್ರಗತಿಯು ಅಮಿತವಾಗುವದೆಂದೂ ನಮ್ಮವರ (ಪಾಶ್ಚಾತ್ಯರ) ಕಲ್ಪನೆಯಿತ್ತು.

ಎಲ್ಲರೂ ಸಮಾನರಲ್ಲ.

ಪಾಶ್ಚಾತ್ಯರ ಈ ಸಂಕುಚಿತ ಕಲ್ಪನೆಯು ಈಗ ಮಾಯವಾಗಲಾರಂಭಿಸಿದೆ. ಎಲ್ಲ ಮಾನವರು ಸಮಾನರಲ್ಲವೆಂದು ಹೇಳಲು ಈಗ ಶಕ್ಯವಿದೆ. ಜಗತ್ತಿನಲ್ಲಿ ಮಹಾವಿಭೂತಿಗಳು ಇದ್ದಾರೆ. ಕ್ಷುಲ್ಲಕರೂ ಇದ್ದಾರೆ. ನಾಗರಿಕತೆಯು ಅನಿವಾರ್ಯವಾಗಿ ಎಂದೂ ಬೆಳೆಯಲಾರದು. ಓರ್ವ ನಿರ್ಮಾಣಕ ಶಕ್ತಿಯು ಮಹಾವ್ಯಕ್ತಿಯಿಂದ ಅದು ಒಮ್ಮೆಲೆ ನಾಶವಾಗುವದು ಅಥವಾ ಚಿಗುರುವದು ಶಕ್ಯವಿದೆ.

ತಕ್ಕ ಸಂಶೋಧನೆ.

ಈ ಸಂಶೋಧನೆಯು ತಕ್ಕ ಕಾಲದಲ್ಲಿ ನಡೆದಿದೆ. ಒಂದು ನಿಮಿಷವಾದರೂ ಅದು ತಡವಾಗಿ ನಡೆಯಲಿಲ್ಲ. ಪಾಶ್ಚಾತ್ಯರು ಸುಖದ ಸವಿಗನಸನ್ನು ಭಾವೀಜಗತ್ತಿನಲ್ಲಿ ನಿರೀಕ್ಷಿಸುತ್ತಿದ್ದರು. ಅವರ ಆಲೋಚನೆಯಂತೆ ಮುಂದೆ ಅಮಿತ ಸುಖ, ಸೌಖ್ಯ ಹಾಗು ಸೌಲಭ್ಯವು ದೊರಕುವದೆಂದು ಇತ್ತು. ಆದರೆ ವಸ್ತುಸ್ಥಿತಿಯು ಮಾತ್ರ ಹಾಗಿಲ್ಲ. ತಮ್ಮ ಮುಖ್ಯ ಸಮಸ್ಯೆಗಳನ್ನು ಬಿಡಿಸುವದು ಅವರಿಗೆ ಸಾಧ್ಯವಾಗಲಿಲ್ಲ. ದಿನದಿಂದ ದಿನಕ್ಕೆ ಈ ಸಮಸ್ಯೆಯು ಮತ್ತಷ್ಟು ಕಠಿಣವಾಗಹತ್ತಿದೆ. ನ್ಯಾಯ ನೀತಿ ಹಾಗು ಕಾಯಿದೆಗೆ ತಕ್ಕ ಮನ್ನಣೆ ಹೇಗೆ ದೊರೆಯಬೇಕು? ಚಿರಶಾಂತಿಯನ್ನು ಹೇಗೆ ಉಳಿಸಬೇಕೆಂಬುದೇ ಈ ಸಮಸ್ಯೆ. ಅದನ್ನು ಬಿಡಿಸುವ ಬಗೆ ಹೇಗೆ? ಹಿಂಸೆಯೇ ನ್ಯಾಯ ಮತ್ತು ಶಾಂತಿಯನ್ನು ಉಳಿಸುವ ಒಂದು ಮಾರ್ಗವಾದರೆ ಅವುಗಳ ರಕ್ಷಕನಿಂದ ಶಾಂತಿ ಮತ್ತು ನ್ಯಾಯವು ನಾಶವಾಗಲಾರದು. ಯಾವತ್ತೂ ಎಲ್ಲರೂ ಪ್ರಮುಖ ಸುಧಾರಕರು ಈ ಸಮಸ್ಯೆಯನ್ನು ಇದಿರಿಸಿದ್ದಾರೆ. ದೇವಕುಮಾರನೆನಿಸಿದ ಯೇಸುಕ್ರಿಸ್ತನು ಖಡ್ಗದಿಂದ ಪ್ರಯೋಜನವಿಲ್ಲವೆಂದು ಸಾರಿದನು. ಆದರೆ ಅವನ ಶಿಷ್ಯರು ತಮಗೆ ನಾಗರಿಕ ಹಕ್ಕುಬಾಧ್ಯತೆಯು ದೊರೆತೊಡನೆ ಖಡ್ಗವನ್ನು ಒರೆಯಿಂದ ಕಳಚಿದರು. ಮಹಮ್ಮದ ಪೈಗಂಬರನು ಎಡೆಬಿಡದೆ ಸಾಧಿಸಿ ತನ್ನ ಧರ್ಮವು ಯಶಸ್ವಿಯಾಗಬೇಕು. ಎಂದು ಶಾಂತರೀತಿಯಿಂದ ಜನರಲ್ಲಿ ಧರ್ಮವು ಪರಿಣಾಮಕಾರಿಯಾಗುವಂತೆ ಯತ್ನಿಸಿದನು. ಆದರೆ ತೀವ್ರತರದ ಪ್ರಚಾರವಾಗಿ ಅದು ರೂಪಾಂತರ ಹೊಂದಿ ಜನರ ಹಿಂಸೆಯಲ್ಲಿ ಕೊನೆಗೊಂಡಿತು.

ಯುದ್ಧವೆಂದರೇನು?

ಏನಿದ್ದರೂ ಯುದ್ಧವು ಉತ್ತಮ ಸಾಧನವಲ್ಲವೆನ್ನುವಾಗ ಅದು ಧರ್ಮಮಾರ್ಗಕ್ಕೆ ಸರಿಯಾದುದೋ ಎನ್ನುವ ಪ್ರಶ್ನೆಯು ಉಳಿಯುವದಿಲ್ಲ. ಇವತ್ತಿನ ಯಾಂತ್ರಿಕ ಪ್ರಗತಿಯಿಂದ ಯುದ್ಧೋಪಕರಣಗಳು ಜಗತ್ತಿನ ಹತ್ಯಾಕಾಂಡದ ಸಾಧನ ಸಂಪತ್ತುಗಳಾಗಿವೆ. ತಮ್ಮ ಮನಸ್ಸಿನ ವಿರುದ್ಧವಾಗಿ ಒಂದು ಅಭಿಪ್ರಾಯವು ಹೇರಿಸಲ್ಪಟ್ಟಿತೆಂದರೆ ಮಾನವನಲ್ಲಿ ಯಾವ ತರದ ಬದಲಾವಣೆಯೂ ಆಗುವದಿಲ್ಲವೆಂಬುದು ನಿಜ. ಆದರೂ ಯುದ್ಧವೆಂಬುದು ತೀರ ಭಯಾನಕವಾದುದು. ದಯೆ ಕನಿಕರವಿಲ್ಲದೆ, ಅಪರಾಧಿ, ನಿರಪರಾಧಿಗಳೆನ್ನದೆ ಗುಂಡಿನ ಸುರಿಮಳೆಯು ಸುರಿಸಲ್ಪಟ್ಟು ಮೂಲ ಕಲಹದ ಸೀಮೆಯನ್ನೇ ದಾಟಿ ಸಂಬಂಧವಿಲ್ಲದವರನ್ನು ಸಹ ತನ್ನ ಕಕ್ಷಿಯೊಳಗೆ ಎಳೆದುಕೊಳ್ಳುವದು. ಯುದ್ಧವು ಒಂದು ಧೋರಣೆಯ ಬಗ್ಗೆ ಧಾರಣೆ ಮಾಡಿದ ಆಯುಧವಲ್ಲ. ಅದು ಸಮಾಜದಲ್ಲಿರುವ ಒಂದು ಬಗೆಯ ರೋಗ.

ಅಹಿಂಸಾ ತತ್ವ.

ಸ್ವತಂತ್ರ ಮನಸ್ಸಿನ ವ್ಯಕ್ತಿಗಳು, ತಮ್ಮ ಉದ್ದೇಶವನ್ನು ಸಾಧಿಸುವ ಬಗ್ಗೆ ತಾವು ಏನು ಮಾಡುವೆವು ಎಂಬುದು ತಿಳಿಯದಿದ್ದರೂ ದಿನೇ ದಿನೇ ತಮ್ಮ ಅಭಿವೃದ್ಧಿಗೊಳ್ಳುತ್ತಿರುವ ಅನುಭವಕ್ಕನುಸರಿಸಿ ಒಂದು ಶಕ್ತಿಯನ್ನು ಹುಟ್ಟಿಸಿ ಅದನ್ನು ಕ್ರಮವಾಗಿ, ಯೋಗ್ಯವಾಗಿ, ಯಶಸ್ವಿಯಾಗಿ ಕೇಂದ್ರೀಕರಿಸುತ್ತಿದ್ದರು. ಇಗ್ನೇಷಿಯಸ್ ಲೋಯೋಲನ, ಯೇಸುಕ್ರಿಸ್ತನ ಸಂಘವು ಈ ಮಾದರಿಯದು. ಅಲ್ಲಿ ಯೋಗ್ಯ ವ್ಯಕ್ತಿಗಳನ್ನು ಆರಿಸಿ ಆಗತ್ಯವಿರುವ ಮೂಲ ಶಿಕ್ಷಣ ಹಾಗು ತರಬೇತಿಯನ್ನು ಕೊಟ್ಟು ಶಿಸ್ತಿನ ಕ್ರಮಕ್ಕನುಸರಿಸಿ ಅವರನ್ನು ಸಜ್ಜುಗೊಳಿಸಲಾಗಿತ್ತು. ಮಾನಸಿಕ ಶಾಸ್ತ್ರದ ಅನುಭವವು ಅವರಿಗೆ ಸಾಕಷ್ಟು ಇತ್ತು. ಶಿಸ್ತು ಮತ್ತು ವಿಧೇಯತೆ ಅವರಲ್ಲಿ ಮಾಡಿ ಅವರಲ್ಲಿಯೇ ಲೀನವಾಗಿತ್ತು. ಮನೆಮಾರು ಹೆಂಡರು ಮಕ್ಕಳು ಜಾತಿ ಪಂಥ, ಸಿರಿ, ಸಂಪತ್ತು ಮೊದಲಾದುವನ್ನು ಸಂಪೂರ್ಣವಾಗಿ ತ್ಯಜಿಸಿ ಒಂದು ಕಾಲದಲ್ಲಿ ರೋಮನ್ ದೇವಾಲಯಗಳು ಕಳೆದುಕೊಂಡ ಧರ್ಮವನ್ನು ತಿರುಗಿ ಮೂರ್ತೀಕರಿಸಲಿಕ್ಕೆ ಅವರು ತಮ್ಮ ಸರ್ವಸ್ವವನ್ನು ತೊರೆದು ಸಿದ್ಧರಾದರು.

ಹುಚ್ಚು ಇಳಿಯಿತು.

ಅಷ್ಟರಲ್ಲಿ ಹಿಂಸೆಯ ತಾಂಡವ ನೃತ್ಯವು ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಜರುಗಿತ್ತು. ಧಾರ್ಮಿಕ ದೃಷ್ಟಿಯಿಂದಲ್ಲವಾದರೂ ಹಿಂಸೆಯನ್ನು ಯಶಸ್ವಿಯಾಗಿ ಯುಕ್ತಿಯಿಂದ ಇದಿರಿಸಿದ ಶಕ್ತಿಗಳಿಗೆ ಒಂದು ತರದ ಪ್ರಾಬಲ್ಯವು ದೊರಕಿತು. ಮಾನವನಲ್ಲಿರುವ ರಕ್ತ ಕುಡಿಯುವ ತೃಷ್ಣೆಯು ಸಾಕಷ್ಟು ಹಿಂಗಿತು. ಹುಚ್ಚು ಇಳಿಯಿತು. ಈ ತರದ ಮನೋವೃತ್ತಿಯು ಬೆಳೆದಂತೆ ಹಿಂಸೆಯನ್ನು ಗೆಲ್ಲಬೇಕಾದರೆ ಅಹಿಂಸೆಯೇ ಮುಖ್ಯವಾದ ಶಸ್ತ್ರವೆನ್ನುವಂತೆ ಮಾನವನಿಗೆ ಮುಂದಟ್ಟಾಯಿತು. ಈ ಶಕ್ತಿಯು ಪ್ರವರ್ಧಮಾನವಾಗಿ ಬೆಳೆದು ಮುಯ್ಯಿಗೆ ಮುಯ್ಯಿ ತೀರಿಸಲೆತ್ನಿಸುವ ತಾಮಸೀ ಮಿಶ್ರಿತ ರಾಜಸ ಗುಣವನ್ನು ಕುಗ್ಗಿಸಿತು. ಸಾದಾಮಾರ್ಗದಲ್ಲಿ ಮುನ್ನಡೆದು ಹಳೆಯ ಹುಚ್ಚನ್ನು ಪರಿಣಾಮಕಾರಿಯಾಗಿ ನಿಲ್ಲಿಸಲೆತ್ನಿಸಿತು. ಈ ಪ್ರಯತ್ನವು ವ್ಯಾಪಕವಾಗಿ ಹಿಂದುಳಿದ ವರ್ಗದವರಲ್ಲಿ ವಿಶೇಷ ಪರಿಣಾಮಕಾರಿಯಾಯಿತು. ಕಾಡುಮೃಗಗಳನ್ನು ಸಾಧುಮಾಡುವದು ಸುಲಭವಾಯಿತು. ರಾಕ್ಷಸೀ ಹಿಂಸೆಗೆ ತಮ್ಮ ಜನ್ಮವನ್ನು ಮೀಸಲಿಟ್ಟವರನ್ನು ಕೂಡ ಪರಿವರ್ತನೆ ಮಾಡುವದಕ್ಕೆ ಇದು ಉತ್ತಮ ಸಾಧನವೆನಿಸಿತು. ಈ ಮಾರ್ಗವು ಅಲ್ಲಲ್ಲಿ ಹಲವು ಬಾರಿ ಯಶಸ್ವಿಯಾಗಿದ್ದರೂ, ಕ್ವೇಕರ್ಸ ಪಂಗಡದವರು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇಂಥ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದರೂ ಇದರ ಪ್ರಯೋಜನವನ್ನು ಜಗತ್ತಿಗೆ ದೊರಕಿಸಲಿಲ್ಲ. ಇದರಿಂದ ಜಗತ್ತಿನಲ್ಲಿ ಯುದ್ಧವನ್ನು ಕೊನೆಗೊಳಿಸಿ ಶಾಂತಿಯನ್ನು ನೆಲೆಗೊಳಿಸಬಹುದೆಂದು ಅಂತರ್‌ರಾಷ್ಟ್ರೀಯ ಹಾಗು ಜಾಗತಿಕ ಸಾಮಾಜಿಕ ಪರಿಸ್ಥಿತಿಯನ್ನು ಸರಿಪಡಿಸಬಹುದೆಂದು ಅವರಿಗೆ ಆಗ್ಗೆ ಗೊತ್ತಾಗಿರಲಿಲ್ಲ. ಕೇವಲ ಪ್ರೇಮದಿಂದ ಹಿಂಸಾ ಪ್ರಾಣಿಗಳನ್ನು ಸಾಧು ಪ್ರಾಣಿಗಳನ್ನಾಗಿ ಮಾಡುತ್ತಿದ್ದರೂ ಅದೇ ಪ್ರೇಮವು ಜಗತ್ತನ್ನೆಲ್ಲ ಒಂದುಗೂಡಿಸಬಹುದೆಂದು ಅವರು ಅರಿತಿರಲಿಲ್ಲ.

ಮಹತ್ವಾಕಾಂಕ್ಷೆ.

ಅಷ್ಟರಲ್ಲಿ ಜಗತ್ತಿನಲ್ಲಿ ಯುದ್ಧಕ್ಕೆ ಒಂದು ಮಹತ್ವದ ಸ್ಥಾನ ದೊರಕಿತು. ಯುದ್ಧಾತುರ ರಾಷ್ಟ್ರಗಳು ಬೇಕಾದಷ್ಟು ಶಕ್ತಿ ಸಂಗ್ರಹಮಾಡಿ ತಮ್ಮ ಶೌರ್ಯದ ಪರಮಾವಧಿಯ ಪ್ರದರ್ಶನ ಮಾಡಿದವು. ಒಂದು ಕಾಲದಲ್ಲಿ ಹಿತಸಂರಕ್ಷಣೆಗೆಂದು ಮಾಡುತ್ತಿದ್ದ ಯುದ್ಧವು ಇಂದು ಅನ್ಯರ ಸ್ವಾತಂತ್ರ್ಯಾಪಹರಣದ ಮುಖ್ಯ ಸಾಧನವಾಗಿದೆ. ಯುದ್ಧಾತುರ ರಾಷ್ಟ್ರಗಳಿಗೆ ರಣದೇವತೆಯಿಂದ ಹೆಚ್ಚಿನ ದೈವವೇ ಜಗತ್ತಿನಲ್ಲಿಲ್ಲದಂತಾಗಿದೆ.

ತಕ್ಕ ಶಕ್ತಿ ಬೇಕು.

ಇಂದು ಎರಡು ಬಗೆಯ ಹುಚ್ಚಾಟಕ್ಕೆ ಪ್ರಾಬಲ್ಯವು ದೊರೆತಿದೆ. ನಾಶಕಾರಕವಾದ ಯಂತ್ರಗಳಿಗೆ ಸ್ವತಂತ್ರ ಮನುಷ್ಯನು ಶರಣಾಗತನಾಗಿ ಮನಸ್ವಿ ಹಾವಳಿ ಮಾಡುವದು ಮೊದಲನೆಯದು. ಹುಚ್ಚರ ಗುಂಪುಗಳನ್ನು ಸೇರಿಸಿಕೊಂಡು ಭೀಕರವಾದ ಯುದ್ಧೋಪಕರಣಗಳಿಂದ ಸುಂದರವಾದ ಜಗತ್ತನ್ನು ನಿಮಿಷ ಮಾತ್ರದಲ್ಲಿ ನಿರ್ಮೂಲಗೊಳಿಸಿ ಪಾಶವೀ ಶಕ್ತಿಯ ಪ್ರದರ್ಶನ ಮಾಡುವದು ಎರಡನೆಯದು. ಇವೆರಡು ಬಗೆಯ ಹುಚ್ಚನ್ನು ತಡೆಗಟ್ಟಿ, ಪ್ರಬಲವಾಗಿ ಇದಿರಿಸಿ, ಜನರಲ್ಲಿ ವ್ಯಾಪಕವಾದ ಪರಸ್ಪರ ಕೊಲೆಯ ಹುಚ್ಚಡಗಿಸಿ ಶಾಂತಿಯನ್ನು ನೆಲೆಗೊಳಿಸಬೇಕಾದರೆ ಅಷ್ಟೇ ಪ್ರಬಲವಾದ, ಪ್ರಚಂಡವಾದ, ಕುಗ್ಗದ ಅವಿಚ್ಛಿನ್ನವಾದೊಂದು ಶಕ್ತಿಯು ಬೇಕು.

ಆ ಶಕ್ತಿಯೇ ಗಾಂಧಿ.

ಆ ಶಕ್ತಿಯೇ ಮಹಾತ್ಮ ಗಾಂಧಿ. ಅದನ್ನು ಚರಿತ್ರಕಾರರು ಇಂದಲ್ಲ ನಾಳೆಯಾದರೂ ಒಪ್ಪಿಯೇ ತೀರಬೇಕು. ಯುರೋಪು, ಏಶಿಯಾ ಹಾಗು ಆಫ್ರಿಕಾ ಖಂಡಗಳಲ್ಲಿ ಪಾಶವೀ ಶಕ್ತಿಯು ಉನ್ಮತ್ತವಾಗಿ ಕುಣಿಯುತ್ತಿರುವಾಗ ಪುಣ್ಯಭೂಮಿಯಾದ ಭಾರತವು ಗಾಂಧಿಜೀಯವರನ್ನು ಆಫ್ರಿಕಕ್ಕೆ ಕಳಿಸಿಕೊಟ್ಟಿತು. ಆಗ್ಗೆ ಗಾಂಧಿಜೀಯವರು ತಮ್ಮ ಪ್ರಯೋಗದ ಮೊದಲನೆ ಪ್ರದರ್ಶನವನ್ನು ಕೇವಲ ಆಫ್ರಿಕಕ್ಕೆ ಮಾತ್ರವಲ್ಲ; ಸಮಗ್ರ ಜಗತ್ತಿಗೆ ಮಾಡಿ ತೋರಿಸಿದರು. ಪ್ರಯೋಗಮಾಡುವವನಿಗೆ ಅಹಿಂಸೆಯು ಉತ್ಕೃಷ್ಟವಾದ ಸಾಧನವಾದರೆ, ಇದಿರಾಳಿಯನ್ನು ಹಾದಿಗೆ ತರುವದಕ್ಕೆ ಅದು ಮತ್ತಷ್ಟು ಉತ್ತಮವಾದ ಸಾಧನವಾಗಿದೆ. ಇದಿರಾಳಿಯಲ್ಲಿ ನೈತಿಕ ಜಾಗೃತಿಯನ್ನು ಹುಟ್ಟಿಸಿ ಅಂತರಂಗದಲ್ಲಿ ಅಡಕವಾದ ದೈವೀಗುಣವನ್ನು ಅದು ಎಚ್ಚರಿಸುತ್ತದೆ.

ಪುಣ್ಯ ಭೂಮಿ ಭಾರತ.

ಭಾರತದಲ್ಲಿ ಅಹಿಂಸೆಯು ಮೊದಲು ಜನ್ಮವೆತ್ತಿತು. ಆಫ್ರಿಕವು ಅದರ ಮೊದಲನೆ ಪ್ರಯೋಗ ಶಾಲೆಯಾಯಿತು. ಈ ಪದ್ಧತಿಯು ಮನುಷ್ಯನಿಗೆ ಸಹಜ ಸಿದ್ಧವಾದುದು ಇದರಿಂದ ಕೇವಲ ಜಗತ್ತಿನ ಮಾನವರೊಳಗೆ ಮಾತ್ರವಲ್ಲ; ದಾನವರೊಳಗೂ ಒಕ್ಕಟ್ಟನ್ನುಂಟುಮಾಡಲು ಶಕ್ಯವಿದೆ. ಅದೇ ಪುಣ್ಯಭೂಮಿ ಭಾರತ ತಪಸ್ವಿಗಳ ಯೋಗಿಗಳ ಹಾಗು ತ್ಯಾಗಿಗಳ ಬೀಡು—ಕರ್ಮಭೂಮಿ ಭಾರತ. ಆ ಭಾರತವೇ ಗಾಂಧೀಜಿಯವರ ಅಹಿಂಸಾವೃತ್ತಿಯ ಜನ್ಮಭೂಮಿಯಾಗಿ ಅದರ ಯಶಸ್ವಿಯಾದ ಹಾಗು ಜಗತ್ಪ್ರಸಿದ್ಧವಾದ ಎರಡನೆ ಪ್ರಯೋಗ ಶಾಲೆಯೆನಿಸಿತು. ಜಗತ್ತಿಗೆ ಬೇಕಾದ ಉತ್ತಮ ಗುಣ, ಆದರ್ಶ ನಡಾವಳಿ ಎಲ್ಲಕ್ಕೂ ಹೆಚ್ಚಾದ ಪವಿತ್ರ ಪ್ರೇಮವನ್ನು ವ್ಯಾಪಕವಾಗಿ ಪಸರಿಸಿ ತಮ್ಮ ಅಸ್ತಿತ್ವವನ್ನು ಉಳಿಸುವ ಯೋಗ್ಯತೆಯೂ ಆ ಭಾರತಕ್ಕೆ ಮಾತ್ರ ಇದೆ. ಜಗತ್ತಿನ ಎಲ್ಲ ಜನಾಂಗಗಳಲ್ಲಿ ಇರಬೇಕಾದ ಉತ್ತಮ ಗುಣ ಉನ್ನತಿಯ ಮಾರ್ಗ ಇವೆಲ್ಲವೂ ಅಡಕವಾಗಿವೆ.

ಒಂದೇ ದಾರಿ.

ಭವಿಷ್ಯ ದೇವತೆಯ ಗರ್ಭದಲ್ಲಿ ಏನಿದೆಯೆಂಬುದನ್ನು ನಾವು ಹೇಳಲಾರೆವು.

ಮೊಹರಮ್ಮಿನ ಅರ್ಥವೇನು?

(ಲೇಖಕ:-ಅಬ್ದುಲ್ ಗಫೂರ್‌ಖಾನ್.)

ಪೂರ್ವ ಕಥೆ.

ಹಜರತ್ ಮೂವಿಯನವರ ಮರಣಾನಂತರ ಇವರ ಮಗ ಯಜೀದ್‌ಯೆಂಬುವನು ಅರೇಬಿಯದ ದೊರೆಯಾದನು. ಈತನ ದೊರೆತನಕ್ಕೆ ಗುರುಗಳ ಮೊಮ್ಮಗನಾದ ಹಜರತ್ ಇಮಾಮ್ ಹುಸೈನ್‌ರವರು ಒಪ್ಪಲಿಲ್ಲ. ಈತನು ಕೆಲವು ಸಂಗತಿಗಳಲ್ಲಿ ಇಸ್ಲಾಂಮತಕ್ಕೆ ವಿರೋಧ ನಡೆಯುತ್ತಿದ್ದನು. ಇವನು ಸಾರಾಯಿ ಸಹ ಕುಡಿಯುತ್ತಿದ್ದನು. ಈ ಸಮಯದಲ್ಲಿ ಈಗ್ಯೆ ಮೆಸಪಟೋಮಿಯಾ ಅನ್ನಿಸಿಕೊಳ್ಳುವ ಜಿಲ್ಲೆಯಲ್ಲು ಕೂಫಾಯೆಂಬ ಪಟ್ಟಣದ ಜನರೆಲ್ಲಾ ಸೇರಿ ಹಜರತ್ ಇಮಾಮ್ ಹುಸೈನ್‌ರವರಿಗೆ ನೀವು ಇಲ್ಲಿಗೆ ಬಂದು ಬಿಟ್ಟರೆ ನಿಮ್ಮನ್ನು ನಾವು ದೊರೆಯಾಗಿ ಒಪ್ಪಿಕೊಳ್ಳುತ್ತೇವೆಯೆಂದು ಕಾಗದ ಬರೆದರು. ಈ ಕಾಗದದ ಮೇರೆ ಅಲ್ಲಿಯ ನಿಜಸ್ಥಿತಿ ತಿಳಿದುಕೋಂಡು ಬರಲಿಕ್ಕೆ ಹಜರತ್ ಮುಸ್ಲಿಂಯೆಂಬುವರನ್ನು ಇಮಾಮ್‌ರು ಕಳುಹಿಸಿದರು. ಇವರು ಕೂಫಾಕ್ಕೆ ತಲಪಿದ ಕೂಡ್ಲೆ ಅಲ್ಲಿಯ ಸಾವಿರಾರು ಜನರು ಬಂದು ಹಜರತ್ ಇಮಾಮ್ ಹುಸೈನ್‌ರವರು ಬಂದು ಬಿಟ್ಟರೆ ದೊರೆಯಾಗಿ ಮಾಡಿಕೊಳ್ಳುವದು ಖಂಡಿತವೆಂದು ಪ್ರಮಾಣವಾಗಿ ಒಪ್ಪಂದು ಮಾಡಿದರು. ಇವರಂತೆ ಹಜರತ್ ಮುಸ್ಲಿಂರವರು ಹಜರತ್ ಇಮಾಮ್‌ಹುಸೈನ್‌ರವರಿಗೆ ಬರಲಿಕ್ಕೆ ಕಾಗದ ಬರೆದು ಬಿಟ್ಟರು.

ಈ ವರ್ತಮಾನವು ಅಲ್ಲಿಯ ಅರಸನಾಗಿದ್ದ ಯಜೀದನ ಕಡೆಯ ಗವರ್ನರ್ ಆಗಿದ್ದ ಜೈಯಾದ್‌ಯೆಂಬುವನಿಗೆ ತಿಳಿಯಿತು. ಆತನು ಆ ಕೂಡ್ಲೆ ಹಜರತ್ ಮುಸ್ಲಿಂರವರನ್ನು ಹಿಡಿಸಿ ಅವರ ಇಬ್ಬರು ಮಕ್ಕಳೊಡನೆ ಕೊಲ್ಲಿಸಿ ಬಿಟ್ಟನು. ಇದಾದ ಕೂಡ್ಲೆ ಜನರು ತಾವು ಇಮಾಮ್‌ರನ್ನು ಅರಸನಾಗಿ ಮಾಡುವೆವೆಂದು ಮಾಡಿದ ಪ್ರಮಾಣವನ್ನು ಉಲ್ಲಂಘಿಸಿದರು. ಈ ವಿಷಯವನ್ನು ಹಜರತ್ ಇಮಾಮ್‌ಹುಸೈನ್‌ರವರಿಗೆ ಯಾರೂ ತಿಳಿಸಲಿಲ್ಲ. ಅವರು ಮೊದಲಿನ ಕಾಗದದ ಪ್ರಕಾರ 61ನೆ ಹಿಜರಿ ಮೋಹರಂ 1ನೆ ತಾರೀಕಿಗೆ ಕರ್ಬಲಾಯೆಂಬ ಮೈದಾನಕ್ಕೆ ತಲಪಿಬಿಟ್ಟರು. ಇದನ್ನು ತಿಳಿದು ಗವರ್ನರ್ ಆಗಿದ್ದ ಜೈಯಾದ್‌ನು ಕೂಡ್ಲೆ 5000 ಸೈನ್ಯವನ್ನು ಕಳುಹಿಸಿ ಮುತ್ತಿಗೆ ಹಾಕಿಸಿ ಬಿಟ್ಟು 'ಯಜೀದನನ್ನೇ ದೊರೆಯಾಗಿ ಒಪ್ಪಬೇಕು. ಇಲ್ಲವಾದರೆ ಯುದ್ಧ ಮಾಡಿ' ಎಂದು ಹಜರತ್ ಇಮಾಮ್‌ಹುಸೈನ್‌ರವರಿಗೆ ತಿಳಿಸಿದನು. ಇದಕ್ಕೆ ಇವರು ಯಜೀದ್‌ಯೆಂಬುವನು ಇಸ್ಲಾಂಮತಕ್ಕೆ ವಿರೋಧ ನಡೆಯುತ್ತಾನೆ ಇದಕ್ಕಾಗಿ ನಾನು ಈತನನ್ನು ದೊರೆಯಾಗಿ ಒಪ್ಪಲಾರೆ ಆದರೆ ನಾನು ಯುದ್ಧಕ್ಕೆ ಬರಲಿಲ್ಲ. ನನ್ನ ಕುಟುಂಬದ 72 ಜನ ಹೆಂಗಸರು ಮಕ್ಕಳು ನೆಂಟರ ಸಮೇತ ಬಂದಿರುತ್ತೇನೆ. ಯಜೀದ್‌ಯೆಂಬವನು ಸಹ ನನ್ನ ಕುಟುಂಬದವನು. ನನಗೆ ತಮ್ಮನೇ ಆಗಬೇಕು. ನನ್ನನ್ನು ಸೆರೆಹಿಡಿದು ರಾಜಧಾನಿಯಾದ ಡಮಸ್‌ಕಸ್ ಕಳುಹಿಸಿಬಿಡುಯೆಂದು ಬರೆದರು. ಈ ಶರತ್ತಿಗೆ ಗವರ್ನರ್ ಒಪ್ಪಲೇ ಇಲ್ಲ. ಯುದ್ಧವೇ ಪ್ರಾರಂಭವಾಯಿತು. ಇಮಾಮ್‌ಹುಸೇನರ ಪಕ್ಷಕ್ಕೆ ನೀರು ಆಹಾರವೇ ಸಿಕ್ಕದ ಹಾಗೆ ಮಾಡಿಬಿಟ್ಟನು. ಹೀಗೆ ಯುದ್ಧ ಪ್ರಾರಂಭವಾಗಿ ಹಜರತ್ ಇಮಾಮ್ ಹುಸೈನ್ ಕಡೆಯವರು ಒಬ್ಬೊಬ್ಬರು ಕೊಲ್ಲಲ್ಪಡುತ್ತಾ 61ನೆ ಹಿಜರಿ ಮೋಹರಂ 10ನೆ ಶುಕ್ರವಾರ ದಿನ ಹಜರತ್ ಇಮಾಮ್‌ಹುಸೈನ್‌ರವರು ಕೊಲ್ಲಲ್ಪಟ್ಟರು. ಗವರ್ನರ್ ಆದ ಜೈಯಾದ್‌ಯೆಂಬುವನು ಇವರ ಕತ್ತನ್ನು ಕುಯಿಸಿ ಆ ತಲೆಯನ್ನು ಕೂಫಾಯೆಂಬ ಟೌನ್‌ನಲ್ಲಿ ಮೆರವಣಿಗೆ ಮಾಡಿಸಿದನು. ಆಗ್ಯೆ ಹಜರತ್ ಇಮಾಮ್‌ರವರ ಚಿಕ್ಕ ಮಗ ಹಜರತ್ ಜೈನುಲ್‌ಆಬಿದೀನ್‌ರವರ ವಿನಹ ಇವರ ಸಂತತಿಯಲ್ಲು ಯಾರೂ ಗಂಡಸರು ಉಳಿಯಲಿಲ್ಲ. ಈ ಮಗುವನ್ನು ಕಾಯಿಲೆಯಾದ್ದರಿಂದ ಮಾತ್ರ ಕೊಲ್ಲದೆ ಬಿಟ್ಟುಬಿಟ್ಟರು. ಅನಂತರ ಗವರ್ನರ್ ಜೈಯಾದ್‌ಯೆಂಬುವನು ಹಜರತ್ ಜೈನುಲ್‌ಆಬಿದೀನ್‌ರವರನ್ನು ಹೆಂಗಸರೊಡನೆ ಸೆರೆ ಹಿಡಿದು ರಾಜಧಾನಿಯಾದ ಡಮಸ್‌ಕಸಿಗೆ ದೊರೆಯಾದ ಯಜೀದ್‌ನ ಬಳಿಗೆ ಕಳುಹಿಸಿ ಬಿಟ್ಟನು. ಈ ಚರಿತ್ರೆಯು ಬಹು ದೊಡ್ಡದಾಗಿದೆ. ನಾನು ಬರೀ ಇದರ ಸಾರಾಂಶ ಮಾತ್ರ ಕೊಟ್ಟಿರುತ್ತೇನೆ. ಹೀಗೆ ನಮ್ಮ ಗುರುಗಳ ಮೊಮ್ಮಗನಾದ ಹಜರತ್ ಇಮಾಮ್‌ಹುಸೈನ್‌ರವರ ಸಂತತಿಯವರನ್ನು ಮೋಸದಿಂದ ಮತ್ತು ಅನ್ಯಾಯದಿಂದ ಕೊಂದದ್ದು ಮುಸಲ್ಮಾನರಿ ಅತ್ಯಂತ ದುಃಖಕರವಾದ ವಿಷಯವಾಗಿದೆ.

ಅಪೀಲು.

ಮುಸ್ಲಿಂ ಸಹೋದರರೇ, ಮೋಹರಂ ವಿಷಯಕ್ಕಾಗಿದೆ. ಇಂಥಾ ಘೋರ ಭಯಂಕರದ ಅತ್ಯಂತ ದುಃಖ ಸಂಗತಿಗೆ ನಾವು ಹಬ್ಬವೆಂದು ಹೇಳಬಹುದೋ? ಪಂಜ ಅಂದರೆ ಕೈ ಇಂಥಾ ಕೈಯನ್ನು ಎಣ್ಣೆ ಟಿನ್ನುಗಳಲ್ಲಿ ಕತ್ತರಿಸಿಕೊಂಡು ಇದನ್ನು ಹಜರತ್ ಇಮಾಮ್‌ಹುಸೈನ್ ಮತ್ತು ಅವರ ಕುಟುಂಬಸ್ಥರ ಪಂಜಗಳು ಅಂದರೆ ಕೈಗಳುಯೆಂದು ಹೇಳಬಹುದೋ? ಇವುಗಳನ್ನು ಪೂಜಿಸಬಹುದೋ? ತಾಬೂತ್ ಅಂದರೆ ಶವವನ್ನು ಹೊತ್ತುಕೊಂಡು ಹೋಗುವ ಮಂಚ. ಈ ತಾಬೂತ್‌ಗಳ ಹಾಗೆಯೇ ನಮ್ಮ ಶವಗಳನ್ನು ಹೊತ್ತುಕೊಂಡು ಹೋಗುವ ಜನಾಜಯೆಂಬ ಮಂಚ ಇದೆಯೋ? ಈ ತಾಬೂತ್‌ಗಳು ಮದಿವೆ ಹೆಣ್ಣು ಗಂಡನನ್ನು ಅಲಂಕರಿಸಿ ಕೂಡಿರುವಂಥ ಮಂಟಪದ ಹಾಗೆ ಇಲ್ಲವೋ? ಗವರ್ನರ್ ಜೈಯಾದ್‌ಯೆಂಬುವನು ಇವರ ತಲೆಯನ್ನು ಕತ್ತರಿಸಿ ತನ್ನ ಜಯದ ಸಂತೋಷಕ್ಕಾಗಿ ಮೆರವಣಿಗೆ ಮಾಡಿಸಿದ ಹಾಗೆ ಒಂದು ಬಿದುರಿಗೆ ನಿಂಬೆ ಹಣ್ಣನ್ನು ಚುಚ್ಚಿಕೊಂಡು ನೇಜಯೆಂದು ಮೆರವಣಿಗೆ ಮಾಡುವದು ನ್ಯಾಯವೋ? ಹಜರತ್ ಇಮಾಮ್‌ಹುಸೈನ್‌ರವರು ತಮ್ಮ ಭದ್ರತೆಗೆ ಟ್ರೆಂಚನ್‌ಮಾಡಿಕೊಂಡು ಬೆಂಕಿ ಹಾಕಿಕೊಂಡಿದ್ದರು. ಇದರ ಬದಲಿಗೆ ಅವಾಸ ಮಾಡಿಕೊಂಡು ಅದರಲ್ಲಿ ಬೆಂಕಿ ಹಾಕಿಕೊಂಡು ಸುತ್ತ ತಿರುಗುತ್ತಾ ಪಂಜೆಗಳ ಪೂಜಾರಿಗೆ ಅಂದರೆ ಮುಜಾವರನಿಗೆ ಪವರೂಪದಲ್ಲಿ ಶ್ರೇಷ್ಠವಾದ ಭಾರಿ ಭಾರಿ ಜೈಗಳನ್ನು ಜೈಯುವದು ಇದು ಇಸ್ಲಾಂ ಮತದ ಧರ್ಮವೋ, ಪ್ರಾರ್ಥನೆಯೋ, ನ್ಯಾಯಯೋ? ಹುಲಿ, ಕರಡಿ, ಕತ್ತೆ, ನಾಯಿ, ಹಂದಿ ವೇಶಗಳನ್ನು ಹಾಕಿಕೊಂಡು ಅವಹೇಳನ ನಖಲಿಗಳನ್ನು ಮಾಡುವದು ಮತಕ್ಕೆ, ನಾಗರೀಕತನಕ್ಕೆ ಸಹಜವೋ? ಇವು ಪಿಶಾಚಿ ಕಾರ್ಯಗಳಲ್ಲವೋ? ಮುಸ್ಲಿಂ ಸಹೋದರರೇ, ಸತ್ಯ, ನ್ಯಾಯ ಮತ್ತು ಮತಧರ್ಮವಾಗಿ ಹೇಳಿ. ಇಸ್ಲಾಂ ಮತವು ಇಂಥಾ ಬೋಧನೆಯು ನಮಗೆ ಕೊಡುತ್ತದೋ? ನೋಡಿ 11ನೇ ಖುರಾನಿನ ಭಾಗದಲ್ಲಿ ಜೂಜಿನಲ್ಲಿ ದೇವರು ಅಪ್ಪಣೆ ಮಾಡುತ್ತಾನೆ! 'ಯಾ ಐಯೋಹಲ್ ಮೂಮೆನೂನ ಇನ್ನಮಲ್ ಖಮರೊ ವಲ್ ಮೈಸರೊ ವಲ್ ಅನ್ಸಾಬೊ ವಲ್ ಅಜ್‌ಲಾಮೊ ರಿಜ್‌ಸುನ್ ಮಿನ್ ಅಮಲಿಷ್ ಶೈತಾನ್ ಫಜ್ ತನಿಬೂಹು ಲಅಲ್ಲಕುಂ ತುಪ್‌ಲಿಹೂನ್' 'ಓ ಮುಸಲ್ಮಾನರೇ, ಖಂಡಿತವಾಗಿ ಸಾರಾಯಿ, ಮತ್ತು ಜೂಜು ಮತ್ತು ಕೈಯಿಂದ ಮಾಡಿದಂಥ ವಸ್ತುಗಳಿಗೆ ಪೂಜಿಸುವಂಥಾದ್ದು ಯಾವ ಕೆಲಸಕ್ಕಾಗಲೀ ಯಾ ಎಲ್ಲಿಯಾದರೂ ಹೋಗಬೇಕಾದರಾಗಲೀ ಒಳ್ಳೆ ಸಮಯ ಕೆಟ್ಟ ಸಮಯವೆಂದು ಜ್ಯೋತಿಷ್ಯ ಇಲ್ಲವೆ ಕಣಿ ನೋಡುವಂಥಾದ್ದು ಇವುಗಳೆಲ್ಲಾ ಶೈತಾಚಿಕ ಕಾರ್ಯಗಳಾಗಿವೆ. ನೀವು ಇಂಥಾ ಕಾರ್ಯಗಳನ್ನು ಮಾಡಬ್ಯಾಡಿ ಹೀಗಾದರೆ ನಾನು ನಿಮ್ಮ ರ ಅಪ್ಪಣೆ ಇದೆ. ಹೀಗಿರುವಾಗ್ಯೆ ಮುಸಲ್ಮಾನರು ಈ ಮೋಹರಂನಲ್ಲಿ ನಡೆಸುವಂಥ ಕಾರ್ಯವು ಶುದ್ಧ ಇಸ್ಲಾಂಮತಕ್ಕೆ ವಿರೋಧವಾದ ಶೈತಾನ್ ಚೇಷ್ಟೆಯಾಗಿದೆ. ಕ್ರಿಶ್ಚಿಯನ್ ಪಾದ್ರಿಗಳು ಈ ಮೋಹರಂ ಹಬ್ಬದ ಶೈತಾನಿಕ್ ಆಟಗಳ ಫಿಲ್ಮ್ ತೆಗೆದು ಅಮೇರಿಕ ಮತ್ತು ಯೂರೋಪಿನಲ್ಲು ಸಿನಿಮಾದಲ್ಲು ಇಸ್ಲಾಂಮತ ಹೀಗಿದೆಯೆಂದು ಪ್ರದರ್ಶಿಸುತ್ತಾ ಇದ್ದಾರೆ. ಇದು ಎಂದೂ ನ್ಯಾಯ ಮತ್ತು ಧರ್ಮವಲ್ಲ. ಆದಷ್ಟು ಪ್ರಯತ್ನಪಟ್ಟು ಮುಸ್ಲಿಂ ಸಹೋದರರು ಇದನ್ನು ನಿಲ್ಲಿಸಬೇಕಾಗಿದೆ.

ಮುಸಲ್ಮಾನರಲ್ಲಿ ಕೆಲವು ಹಣವಂತರು ಮತ್ತು ವ್ಯಾಪಾರಸ್ಥರು ಮೋಹರಂ ಹಬ್ಬವೆಂದು ವೇಷ ನಟನೆಗಳನ್ನು ಹಾಕಿಕೊಂಡು ಬಂದವರಿಗೆ ಹಣ ಕೊಡುತ್ತಾರೆ. ಇದನ್ನು ಸಂಪೂರ್ಣ ನಿಲ್ಲಿಸಬೇಕು. ಇಂಥಾ ಹಣ ಸಾರಾಯಿ ನೆಂದ ಅಂಗಡಿಗಳಿಗೆ ಹೋಗುತ್ತದೇ ವಿನಹ ಇದರಿಂದ ಸ್ವಲ್ಪವಾದರೂ ಪುಣ್ಯ ಉಂಟಾಗುವುದಿಲ್ಲ. ಎರಡನೇಯದಾಗಿ ಸ್ಕೂಲ್ ಮಾಸ್ಟರುಗಳು ತಮ್ಮ ಶಿಷ್ಯರಿಗೆ ಚೆನ್ನಾಗಿ ಬೋಧನೆ ಕೊಟ್ಟು ಇದರಲ್ಲಿ ಸೇರದಂತೆ ಮಾಡಬೇಕು. ಮಸೀದಿಗಳ ಪೇಶ್ ಇಮಾಮ್ ಸಾಹೇಬರುಗಳು ಜನರಿಗೆ ಇದರ ದೋಷಗಳನ್ನು ಚೆನ್ನಾಗಿ ವಿವರಿಸಿ ತಿಳಿಸಬೇಕು ಮತ್ತು ಮಸೀದಿಗಳಲ್ಲಿ ಮೋಹರಂ 10 ದಿನಗಳು ಸಹ ಉಪನ್ಯಾಸ ಹೇಳಬೇಕು ಮತ್ತು ವಿಧವೆಯರಿಗೆ, ಅನಾಥ ಮಕ್ಕಳಿಗೆ ಮತ್ತು ವಿದ್ಯೆಗೆ ದಾನ ಧರ್ಮ ಮಾಡುವಂತೆ ಬೋಧಿಸಬೇಕು. ಯ್ಯಾಗೂ ಮೋಹರಂ ಶೈತಾನಿಕ್ ಕಾರ್ಯಗಳನ್ನು ಮಾಡುವಂಥವರ ಸಂಗಡ ಸೇರದಂತೆಯೂ, ಮತ್ತು ಅವರಿಗೆ ಒಂದು ಕಾಸೂ ಸಿಗದಂತೆಯೂ ಮಾಡಬೇಕಾಗಿ ಮುಸ್ಲಿಂ ಸಹೋದರರಲ್ಲಿ ಬಹು ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಹಿಂದೂ ಮತ್ತು ಕ್ರಿಶ್ಚಿಯನರಲ್ಲಿ ವಿನಂತಿ.

ತಮ್ಮ ಸನ್ನಿಧಾನಗಳಲ್ಲಿ ಸಹ ನನ್ನ ವಿನಯದ ಅರಿಕೆ ಏನೆಂದರೆ—ಈ ಮೋಹರಂ ಹಬ್ಬವು ನಮ್ಮ ಇಸ್ಲಾಂ ಮತಕ್ಕೆ ಸಂಪೂರ್ಣ ವಿರೋಧವಾಗಿದೆ. ಈ ಭೂಮಿಯ ಮೇಲೆ ಪುಣ್ಯವನ್ನು ಹರಡಿಸುವದು ಮತ್ತು ಪಾಪವನ್ನು ನಿರ್ಮೂಲ ಮಾಡುವದು ಪ್ರತಿಯೊಂದು ಮತಸ್ಥರ ಶ್ರೇಷ್ಠವಾದ ಕಾರ್ಯವಾಗಿದೆ. ಆದ್ದರಿಂದ ತಮ್ಮ ತಮ್ಮ ಜನರನ್ನು ಇದರಲ್ಲಿ ಯಾತರದ ಭಾಗವನ್ನು ವಹಿಸದಂತೆಯೂ ಮತ್ತು ಸಹಾಯ ಮಾಡದಂತೆಯೂ, ಹಣಕಾಸು ಕೊಡದಂತೆಯೂ ಬೋಧನೆ ಮಾಡಿ ಬಂದೋಬಸ್ತು ಮಾಡಬೇಕಾಗಿ ಅತ್ಯಂತ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಮಹಾದೇವರು ಹಜರತ್ ಇಮಾಮ ಹುಸೈನ್ (ಇವರ ಮೇಲೆ ಕರುಣೆಯಿರಲಿ)ರವರಂತೆ ತಮ್ಮ ಮತಕ್ಕಾಗಿ ಮತ್ತು ದೇಶಕ್ಕಾಗಿ ಧೈರ್ಯದಿಂದ ತಮ್ಮ ಇಡಿ ಕುಟುಂಬದೊಡನೆ ಈ ಭೂಲೋಕದ ಬಳಿಕೆಯ ವಿಷಯ ಏನೂ ಯೋಚಿಸದೆ ದೇವರ ಹೆಸರಿನಲ್ಲಿ ಜೀವ ಕೊಟ್ಟಂತೆ ಪ್ರ ಮುಸಲ್ಮಾನನಿಗೂ, ದೇಶೀಯರಿಗೂ ಒ ಧೈರ್ಯವನ್ನು ಮತ್ತು ಮನಸು ದಯಪಾಲಿಸಲೆಂದು ಭಯಭಕ್ತಿಯಿಂದ ಪ್ರಾರ್ಥಿಸ

ಗಾಂಧಿಜಿಯವರ ಅಹಿಂಸಾತತ್ವವು ಶಾಲೋಚಿತವಾಗಿವೆ. ಬರುವ ಸೀಳಿಗೆಯಲ್ಲಿ ಅದು ಯಶಸ್ವಿಯಾಗಿ ಕೆಲಸ ಮಾಡಿ ಹಿಂದುಸ್ಥಾನದಲ್ಲಿ ಹಿಂಸೆಯನ್ನು ಕುಗ್ಗಿಸಿ ಜಗತ್ತಿಗೆ ಮಾರ್ಗದರ್ಶಿಯಾಗಬಹುದು. ಆಗ್ಗೆ ಪುಕ್ಕರು ಮತ್ತು ಶ್ರೀಮಂತರು ಕೂಡ ಪಾಠ ಕಲಿತು ಅನಂತವಾದ ವಿಜಯವು ಶಾಶ್ವತವಾದ ಶಾಂತಿಯು—ಅಹಿಂಸೆಯಲ್ಲಿದೆಯೆಂದು ಭಾರತದಿಂದ ಸಮಗ್ರ ಜಗತ್ತಿಗೆ ಸಾರಬಹುದು. ಇದರಿಂದ ಸಮಗ್ರ ಭಾರತದ ಏಳ್ಗೆಯಾಗುವದಲ್ಲದೆ ಜಗತ್ತಿಗೆ ಹೊಸ ಮಾರ್ಗವನ್ನು ತೋರಿಸಿದಂತಾಗುವದು. ಈ ಸಮಸ್ಯೆಯು ಹೇಗೆ ಬಗೆಹರಿಯಬಹುದೆಂಬುವದನ್ನು ಈಗ ಊಹಿಸಲಾಗದಿದ್ದರೂ ಅದೇ ಮಾರ್ಗವು ವಿಹಿತವಾದುದು—ಅದೇ ಒಂದೇ ಒಂದಾದ ದಾರಿ ಎಂದು ತಮ್ಮ ಎಪ್ಪತ್ತರ ವಯಸ್ಸಿನಲ್ಲಿರುವ ಗಾಂಧೀಜೀಯವರು ಜಗತ್ತಿಗೆ ಸಾರಿ ಸಾರಿ 70 ವಯಸ್ಸಿನ ತಮ್ಮ ಆದರ್ಶ ಜೀವನದಲ್ಲಿ ಸ್ಪಷ್ಟಮಾಡಿದ್ದಾರೆ. ಆ ಮಾರ್ಗವನ್ನು ಜಯಪ್ರದವನ್ನಾಗಿ ಮಾಡಿ ಸಮಗ್ರ ಜಗತ್ತಿಗೆ ಮಾರ್ಗದರ್ಶಿಯಾಗುವಂತೆ ಮಾಡುವದು ಗಾಂಧೀಜೀಯವರ ಅನುಯಾಯಿಗಳಾದ ಭಾರತೀಯರ ಕೈಯ್ಯಲ್ಲಿದೆ.

'ಕ. ವಿ.'

ಯುದ್ಧ ವಾರ್ತೆ.

ಫಿನ್‌ಲೇಂಡ್ ಯುದ್ಧ.

ರಷ್ಯನ್ ಸೇನೆಯ ಭಗೀರಥ ಯತ್ನ.

ಕಾರಿಲಿಯನ್ ಭೂಶಿರ ಪ್ರದೇಶದಲ್ಲಿ ಅತ್ಯುಗ್ರ ಕದನವಾಗುತ್ತಿದೆ. ಮ್ಯಾನೆರ್ಹೀಂ ಕೋಟೆಯನ್ನು ಭೇದಿಸಿ ನುಗ್ಗಲು ರಷ್ಯನರು ಅಸಾಧ್ಯವಾಗಿ ಪ್ರಯತ್ನಿಸುತ್ತಿದ್ದಾರೆ. ವಸಂತದ ವರೆಗೂ ಈ ರೀತಿ ಭಾರಿ ಚಟುವಟಿಕೆ ನಡೆಯುವುದೆಂದ ನಿರೀಕ್ಷೆ ಇರಲಿಲ್ಲ.

ಯುದ್ಧವಾರಂಭವಾದ ಕೂಡಲೆ ಮ್ಯಾನರ್ಹೀಂ ಕೋಟೆಯ ಹಿಂದೆ ಇನ್ನಷ್ಟು ಬಲವಾಗಿ ಕೋಟೆ ಕೊತ್ತಳಗಳನ್ನೂ ಫಿನ್ನರು ಕಟ್ಟಲಾರಂಭಿಸಿದರು. ಸುಮಾರು ಇಪ್ಪತ್ತು ಅಥವಾ ಮೂವತ್ತು ಮೈಲಿ ದೂರದ ವರೆಗೂ ಈ ರೀತಿ ರಕ್ಷಣಾ ಸಿದ್ಧತೆ ಏರ್ಪಟ್ಟಿದೆ. ಮೊದಲಿನಂತೆ ಈಗ ರಷ್ಯನ್ ವಿಮಾನಗಳು ಮಿಲಿಟರಿ ಉದ್ದೇಶವುಳ್ಳ ಸ್ಥಾನಗಳನ್ನೇ ಬಾಂಬು ಮಾಡುತ್ತಿಲ್ಲ.

ಮುಖ್ಯವಾದ ಸಮರ ಸೇನೆಗಳಲ್ಲಿ ಉದ್ಯೋಕ್ತರಾಗದ ಚೆಲ್ಸಿಂಕಿಯ ಗಂಡಸರೆಲ್ಲರೂ ಇದೇ 8ನೇ ತಾರೀಕಿನಿಂದ ರಾಷ್ಟ್ರ ಸೇವೆಗೆ ಸಿದ್ಧರಾಗಬೇಕೆಂದು ಒಂದು ಹುಕುಂ ಹೊರಟಿದೆ.

ಕುರುಕ್ಷೇತ್ರದಂತಿದೆ ರಣರಂಗ.

ಮ್ಯಾನರ್ಹೀಂ ಕೋಟೆಗೆ ಲಗ್ಗೆ ಹತ್ತಬೇಕೆಂಬ ರಷ್ಯನರ ಹೊಸ ಉದ್ಯಮ ಫಿನ್ನರು ಆಶ್ಚರ್ಯ ಪಡುವಂಥ ವಿಧಾನದಲ್ಲಿ ನಡೆಸಲ್ಪಡುತ್ತಿದೆ ಎಂಬುದಾಗಿ ಫಿನ್‌ಲೇಂಡ್ ಸ್ವೀಡನ್‌ಗಳ ಗಡಿ ಪ್ರದೇಶದಲ್ಲಿರುವ ರಾಯಿಟರ್ ಬಾತ್ಮೀದಾರರು ತಿಳಿಸುತ್ತಾರೆ. ಇವರು ಈ ಚಟುವಟಿಕೆಯ ವಿಷಯವಾಗಿ ಇನ್ನೂ ತಿಳಿಸುವುದೇನೆಂದರೆ-

ರಣ ರಂಗವು ಈಗ ಉಗ್ರವಾಗಿದೆ. ರಕ್ತವು ಹೆಪ್ಪುಗಟ್ಟಿ ಮಂಜುಗಡ್ಡೆಗಳ ನಡುವೆ ರುದ್ರವಾಗಿ ಕಾಣುತ್ತಿದೆ. ಈಗ ಗೆಡ್ಡೆ ಕಟ್ಟಿರುವ ಮೋಲೂ ಮತ್ತು ಕುಲೋಮ ಸರಸುಗಳ ಮಧ್ಯೆ ಈ ರಣ ಮುಖವು ವಿಶಾಲವಾದ ಕುರುಕ್ಷೇತ್ರದಂತೆ ಕಂಡುಬರುತ್ತಿದೆ.

ರಷ್ಯನರು ಈ ಪ್ರಾಂತ್ಯದಲ್ಲಿ ಮೊದಲನೆಯ ಸಲ ಮಾಡಿದ ಧಾಳಿ ಫಿನ್ನಿಷ್ ರಕ್ಷಣಾ ಪ್ರದೇಶಗಳ ಎಲ್ಲೆಯೊಳಗೆ ಹೋಗುವಷ್ಟು ಮಟ್ಟಿಗಿತ್ತು. ಆದರೆ ಫಿನ್ನರು ಕೂಡಲೆ ಪ್ರತಿಭಟಿಸಿ ತಮ್ಮ ಸ್ಥಾನಗಳನ್ನು ಮತ್ತೆ ಉಳಿಸಿಕೊಂಡರು.

ಫಿನ್ನರಿಗೆ ಇತ್ತೀಚೆಗೆ ದೊರೆತ ಭಾರಿ ವಿಜಯವೆಂದರೆ ಲಡೋಗ ಸರಸಿಗೆ ಉತ್ತರದಲ್ಲಿ. ರಷ್ಯನರನ್ನು ಬೋನಿನಲ್ಲಿ ಸಿಕ್ಕಿಸಿಕೊಂಡಂತೆ ಮಾಡಿ ಪ್ರತ್ಯೇಕಿಸಲು ಫಿನ್ನರು ಕಲ್ಪಿಸಿರುವ ಯುಕ್ತಿಯ ಪಟ್ಟಿನಿಂದ ತಪ್ಪಿಸಿಕೊಳ್ಳುವುದಕ್ಕಾಗಿ ರಷ್ಯನರು ಅಗಾಧವಾಗಿ ಹೋರಾಡುತ್ತಿದ್ದಾರೆ.

ಈ ಸರಸ್ಸಿನ ತೀರದಲ್ಲಿ ಒಂದು ರಷ್ಯನ್ ತುಕಡಿಯನ್ನು ಫಿನ್ನರು ಪ್ರತ್ಯೇಕಿಸಲೆತ್ನಿಸಿ, ಮೆಷಿನ್ ಗನ್‌ಗಳಿಂದ ಸುತ್ತುಗಟ್ಟಿದ್ದಾರೆ. ಅದರಿಂದ ಪಾರಾಗಲು ಆ ರಷ್ಯನ್ ತುಕಡಿ ಭಗೀರಥ ಪ್ರಯತ್ನ ನಡೆಸುತ್ತಿದೆ. ... ಕಡೆ ಫಿನ್ನಿಷ್ ವಿಮಾನಗಳೊಡನೆ ಸೇರಿ ರಕ್ಷಣಾ ಕಾರ್ಯಗಳಲ್ಲಿ ಉದ್ಯುಕ್ತವಾಗಿವೆ.

12 ರಷ್ಯನ್ ವಿಮಾನಗಳ ನಾಶ.

ರಷ್ಯನ್ ವಿಮಾನಗಳು ಫಿನ್ಲೆಂಡಿನ ಅನೇಕ ಭಾಗಗಳ ಮೇಲೆ ಧಾಳಿ ಮಾಡಲು ಬಂದಾಗ 12 ರಷ್ಯನ್ ವಿಮಾನಗಳನ್ನು ಹೊಡೆದುರುಳಿಸಲಾಯಿತು ಎಂದು ಹೇಳಲಾಗಿದೆ. ಕೆಲವು ರಷ್ಯನ್ ವಿಮಾನಗಳು ಆಗ್ನೇಯ ಫಿನ್‌ಲೆಂಡಿನ ಮೇಲೆ ಹಾರಾಡಿ ಬಾಂಬುಗಳನ್ನು ಹಾಕಿದುವು. ಹ್ಯಾಂಗೋ ಒಳಿಯೂ ಕೆಲವು ವಿಮಾನಗಳು ಬಿದ್ದುವು. ಅಪಾಯವೇನೂ ಆಗಿಲ್ಲವೆಂದು ಗೊತ್ತಾಗಿದೆ.

ಫಿನ್ನರಿಗೆ ಭಾರಿ ವಿಜಯ.

ಸಮ್ಮಾ ರಣಾಂಗಣದಲ್ಲಿ ನಡೆದ ಯುದ್ಧದಲ್ಲಿ ಶತ್ರುವಿಗೆ ವಿಪರೀತ ನಷ್ಟ ಸಂಭವಿಸಿತು. ಲಡೋಗ ಸರಸಿಗೆ ಈಶಾನ್ಯ ಭಾಗದಲ್ಲಿ ಫಿನ್ನರು ರಷ್ಯನ್ನರ ಅನೇಕ ಮುಖ್ಯ ಸ್ಥಾನಗಳನ್ನು ಹಿಡಿದರು.

ಇಲ್ಲಿ ರಷ್ಯನ ಸೇನೆಯಲ್ಲಿ 200 ಮಂದಿ ಸತ್ತರು. 75 ಮಂದಿಯನ್ನು ಸೆರೆ ಹಿಡಿಯಲಾಯಿತು. 25 ಟ್ಯಾಂಕುಗಳನ್ನೂ ಮೂರು ಫೀಲ್ಡ್ ಗನ್‌ಗಳನ್ನೂ ವಶಪಡಿಸಿಕೊಳ್ಳಲಾಯಿತು. ಲಡೋಗ ಸರಸಿನ ಬಳಿ ಹೋರಾಟ ನಡೆದಾಗ ಫಿನ್ನರು ರಷ್ಯನರ 11 ಟ್ಯಾಂಕುಗಳನ್ನು 3 ಫಿರಂಗಿಗಳನ್ನೂ ಕೆಲವು ಟ್ರಾನ್ಸ್‌ಪೋರ್ಟ್ ವಗನುಗಳನ್ನೂ ನಾಶ ಮಾಡಿದರು. ಸಾಲ್ಲಾ ರಣಾಂಗಣದಲ್ಲಿ ಶತ್ರುವಿನ ಮುತ್ತಿಗೆಯನ್ನು ಕಡಿದು ಅಪಜಯಗೊಳಿಸಲಾಯಿತು. ಇಲ್ಲಿಯೂ ರಷ್ಯನರು ತಮ್ಮ ಕಡೆ ಸತ್ತ 200 ಕಳೇಬರಗಳನ್ನು ಬಿಟ್ಟು ಹಿಂತಿರುಗಿದರು.

ಶಾಂತಿಗೆ ಸಿದ್ಧವಾಗಿದೆ ಫಿನ್ಲೆಂಡ್.

ಫಿನ್ಲೆಂಡಿನ ಪ್ರಧಾನಮಂತ್ರಿ ಡಾ. ರಿಸ್ಟೋರಿಟಿಯವರು ಮತ್ತೊಂದು ಮನವಿ ಮಾಡಿಕೊಂಡು ಈ ರೀತಿ ಕೋರಿದ್ದಾರೆ–

'ನಮಗೆ ಜನ ಸಹಾಯ ಬೇಕು. ವಿಮಾನ ಸಹಾಯ ಬೇಕು. ಅಲ್ಲದೆ ಮುಖ್ಯವಾಗಿ ಫಿನ್ಲೆಂಡು ಶಾಂತಿಗೆ ಸಿದ್ಧವಾಗಿದೆಯೆಂಬವನ್ನು ಈಗ ಇನ್ನೊಮ್ಮೆ ನಾನು ತಿಳಿಸಬೇಕಿದೆ. ಆದರೆ ನಮ್ಮ ಪವಿತ್ರವಾದ ಹಕ್ಕು ಬಾಧ್ಯತೆಗಳು ಊನವಾಗದೆ ಇರುವಂಥಾ ಗೌರವಪೂರ್ವಕವಾದ ಒಪ್ಪಂದಕ್ಕೆ ಸಿದ್ಧವಾಗಿವೆ. ರಷ್ಯನರು ಒಪ್ಪಿದರೆ ಈ ಫಿನ್ಲೆಂಡ್ ಯುದ್ಧ ನಿಲ್ಲುತ್ತದೆ. ಯೂರೋಪಿನ ಯುದ್ಧದ ಮಾತು ಬೇರೆ. ಆದರೆ ಫಿನ್‌ಲೆಂಡ್ ಯುದ್ಧ ಹೀಗೆಯೇ ನಡೆದರೆ ಅದು ಐರೋಪ್ಯ ಯುದ್ಧದ ಒಂದು ಅಂಗವಾಗಿ ಹೋಗಬಹುದು.'

ಪಶ್ಚಿಮ ರಣರಂಗ.

ವಿಮಾನ ಮತ್ತು ನೌಕಾ ಯುದ್ಧ.

ತಾ. 3ರ ಬೆಳಿಗ್ಗೆ ಅನೇಕ ಶತ್ರು ವಿಮಾನಗಳು ಈಶಾನ್ಯ ತೀರದಲ್ಲಿ ಕಾಣಿಸಿಕೊಂಡುವು. ಅವು ನಮ್ಮ ನೌಕಾ ಸ್ತೋಮದ ಮೇಲೆ ಧಾಳಿ ಮಾಡಲೆತ್ನಿಸಿದುವು. ಕೂಡಲೆ ರಾಯಲ್ ಏರ್‌ಫೋರ್ಸಿನ ವಿಮಾನಗಳು ಮೇಲೇರಿ ಹೋಗಿ ಶತ್ರು ವಿಮಾನಗಳನ್ನು ... ಹಿಂತಿರುಗಿ ಅಟ್ಟಿದುವು.

ಯೋರ್ಕ್‌ಷೈರ್ ಮತ್ತು ನಾರ್ದಂಬರ್ಲೆಂಡ ತೀರಗಳಿಗೆ ಹೆಚ್ಚು ಬಂದ ಎರಡು ಜರ್ಮನ್ ಹೆ.ಕಲ್ ವಿಮಾನಗಳನ್ನು ನಮ್ಮ ಯುದ್ಧ ವಿಮಾನಗಳು ಎದುರಿಸಿದುವು. ... ಒಂದನ್ನು ಹೊಡೆದು ಕೆಳಕ್ಕೆ ಉರುಳಿಸಿದುವು. ಇನ್ನೊಂದಕ್ಕೆ ಪೂರಾ ಹಾನಿ ಆಯಿತು.

ಒಂದು ಬಾಂಬರ್ ವಿಮಾನವನ್ನು ಟೈನ್‌ಮೌತ್‌ನ ಬಳಿಗೆ ಹೊಡೆದು ಕೆಡವಲಾಯಿತು. ಇನ್ನೊಂದು ವಿಮಾನದೊಡನೆ ಮೂರು ಬ್ರಿಟಿಷ್ ವಿಮಾನಗಳು ಘನ ಘೋರವಾಗಿ ಕಾದು ಯೋರ್ಕ್‌ಷೈರ್ ತೀರದ ಬಳಿ ಅದನ್ನು ಕೆಡವಲಾಯಿತು.

ಟೈನ್ ಬಳಿ ಹೊಡೆದು ಕೆಡವಲ್ಪಟ್ಟ ವಿಮಾನದಲ್ಲಿ ನಾಲ್ವರನ್ನು ಸಂರಕ್ಷಿಸಲು ಒಂದು ಹಡಗು ಹೊರಟಿದೆ. ಯೋರ್ಕ್‌ಷೈರ್ ತೀರದಾಚೆ ಎರಡು ಜರ್ಮನ್ ವಿಮಾನಗಳು ಬ್ರಿಟಿಷ್ ಟ್ರಾಲರ್ ನೌಕೆಯೊಂದರ ಮೇಲೆ ಧಾಳಿ ಮಾಡಿ ಮೆಷಿನ್ ಗನ್ ಮಾಡಿದುವು.

ಯೋರ್ಕ್‌ಷೈರ್ ಬಳಿ ಹೊಡೆದು ಕೆಡವಲ್ಪಟ್ಟ ವಿಮಾನವು ಇದೆ ಎಂದೂ ಹೇಳಲಾಗಿದೆ. ವಿಮಾನವು ಗುಡಿಸಲೊಂದರ ಮೇಲೆ ಬಿದ್ದು ಭಗ್ಗನೆ ಹೊತ್ತಿಕೊಂಡು ಉರಿದು ಹೋಯಿತು. ನಾಲ್ವರು ಸತ್ತು ಒಬ್ಬನಿಗೆ ಗಾಯಗಳಾಯಿತು.

ಟೀ ಅಳಿವೆ ಪ್ರದೇಶದಲ್ಲಿ ಚಟುವಟಿಕೆ.

ಈ ಬೆಳಗಿನ ಜಾವದಿಂದ ಹಿಡಿದು ಮಧ್ಯಾಹ್ನದ ವರೆಗೆ ಟೀ ನದಿಯ ಅಳಿವೆಯ ಪ್ರದೇಶದಲ್ಲಿ ವಿಪರೀತವಾಗಿ ಮಧ್ಯೆ ಮಧ್ಯೆ ವಿಮಾನ ಚಟುವಟಿಕೆ ನಡೆದಿದೆ. ಈ ಪ್ರದೇಶದ ಮೇಲೆ ತಾ. 3ರ ಬೆಳಗಿನಿಂದಲೂ ಅನೇಕಾನೇಕ ಬ್ರಿಟಿಷ್ ವಿಮಾನಗಳು ಸಂಚರಿಸುತ್ತಿವೆ. ದೂರದಲ್ಲಿ ಶತ್ರು ವಿಮಾನಗಳು ಕಂಡು ಬಂದದ್ದೇ ಈ ಚಟುವಟಿಕೆಗೆ ಕಾರಣ. ಬೆಳಗ್ಗೆ ಈ ಪ್ರಾಂತ್ಯ ನಿವಾಸಿಗಳಿಗೆ ಮೆಷಿನ್‌ಗನ್ ಸದ್ದು ಕೇಳ ಬಂದಿತು. ಅಂಗಸ್ ತೀರ ಪ್ರದೇಶದಿಂದಾಚೆ 10 ಮೈಲು ದೂರದಲ್ಲಿ ಶತ್ರು ವಿಮಾನಗಳು ಬ್ರಿಟಿಷ್ ನೌಕೆಯೊಂದರ ಧಾಳಿ ಮಾಡುತ್ತಿವೆಯೆಂದು ಗೊತ್ತಾಯಿತು.

ಲೈಫ್ ಬೋಟುಗಳು ಕೂಡಲೆ ಹೊರಟುವಾದರೂ ಏನೂ ಕಾಣದೆ ಪ್ರಯತ್ನ ಅತ್ತ ವಾಪಸ್ ಬಂದವು.

ಶತ್ರು ವಿಮಾನಗಳಿಗೆ ಮಂಕ್ ಬೂದಿ.

ಇಂಗ್ಲೆಂಡಿನ ಟ್ರಾಲರ್ ನೌಕೆಯೊಂದರ ಮೇಲೆ ಶತ್ರು ವಿಮಾನಗಳು ಧಾಳಿ ಮಾಡಲೆತ್ನಿಸಲು ತಕ್ಕ ಸಹಾಯವು ಬರುವ ವರೆಗೆ ಟ್ರಾಲರ್ ನೌಕೆಯು ಶತ್ರು ವಿಮಾನಗಳ ಪಟ್ಟಿಗೆ ಸಿಕ್ಕದೆ ಚತುರ್ಯ ನಡೆಸಿತು.

ಬ್ರಿಟಿಷ್ ದ್ವೀಪಗಳ ನಿವಾಸಿಗಳು ಈ ಯುಕ್ತಿಯನ್ನು ಚಮತ್ಕಾರ ಎಂದರು. ಶತ್ರು ವಿಮಾನಗಳು ಈ ನಿವಾಸಿಗಳಿಗೆ ಬಹಳ ಹೊತ್ತು ಕಾಣಿಸದೆ ಹೋದರೂ ಅವುಗಳ ಸದ್ದು ಮಾತ್ರ ಕೇಳಿಸುತ್ತಿತ್ತು. ಆ ಶತ್ರು ವಿಮಾನಗಳಲ್ಲೊಂದು ಕೆಳಗೆ ಹಾರುತ್ತಾ ಬಂದು ಮೆಷಿನ್‌ಗನ್ ಮಾಡಲೆತ್ನಿಸಿತು. ಕೂಡಲೆ ಟ್ರಾಲರ್ ನೌಕೆಯು ತನ್ನ ವೇಗವನ್ನು ಹೆಚ್ಚಿಸಿ ಚಕ್ರಾಗಿ ಓಡುತ್ತಾ ಹೋಗಲು ಶತ್ರು ವಿಮಾನಕ್ಕೆ ಪತ್ತೆ ಸಿಕ್ಕಲಿಲ್ಲ. ಕೆಲವು ನಿಮಿಷಗಳ ಮೇಲೆ ಬ್ರಿಟಿಷ್ ವಿಮಾನಗಳು ಕಾಣಿಸಿಕೊಂಡು ಶತ್ರು ವಿಮಾನಗಳನ್ನು ಬೆನ್ನಟ್ಟಿದವು. ಈ ಹೋರಾಟದ ಫಲಿತಾಂಶವೇನಾಯಿತೆಂಬುದು ಗೊತ್ತಿಲ್ಲ. ಟ್ರಾಲರ್ ನೌಕೆ ಸುರಕ್ಷಿತವಾಗಿ ನೆಲೆಗೆ ಬಂದು ಸೇರಿದೆ.

ಜರ್ಮನ್ ವಿಮಾನಗಳು ಸಾವತ್ರಿಕವಾಗಿ ಈ ದಿನ ನಡೆಸಿದ ಧಾಳಿಯಲ್ಲಿ ಸ್ವಲ್ಪ ಮಾತ್ರ ನಷ್ಟ ಸಂಭವಿಸಿದೆಯೆಂದು ತಿಳಿದು ಬಂದಿದೆ. 20 ಬಾಂಬರ್ ವಿಮಾನಗಳು ಈ ರೀತಿ ಚಟುವಟಿಕೆ ನಡೆಸಿದುವೆಂದು ಗೊತ್ತಾಗಿದೆ.

ರೈನ್ ನದಿ ತೀರದಲ್ಲಿ ಹೊಡೆದಾಟ.

ರೈನ್ ನದಿ ತೀರ ಪ್ರಾಂತ್ಯದಲ್ಲಿ ಉಭಯ ಪಕ್ಷಗಳ ಪದಾತಿ ಸೈನ್ಯಗಳೂ ತಾ. 3ರಿಂದ ಪರಸ್ಪರ ಗುಂಡು ಹಾರಿಸುತ್ತಿವೆ. ಆದರೆ ಇದಕ್ಕೆ ಹೆಚ್ಚು ಮಿಲಿಟರಿ ಪ್ರಾಶಸ್ತ್ಯವನ್ನು ಕೊಡಲಾಗಿಲ್ಲ. ಫ್ರೋಸ್ಜೆನ ಬಯ ಸಮೀಪದ ಇಳಿಜಾರು ಪ್ರದೇಶಗಳಲ್ಲಿ ಜರ್ಮನ್ ಪಹರೆ ಗುಂಪಿನವರು ಫ್ರೆಂಚ್ ಮುಂಗಾವಲು ಪಡೆಗಳನ್ನು ಸಂಧಿಸಿದರು. ತಕ್ಷಣ ಫ್ರೆಂಚ್ ಪಡೆಗಳು ಗುಂಡು ಹಾರಿಸಿದ್ದರಿಂದ ಜರ್ಮನ್ ಪಡೆಗಳು ಹಿಂದಿರುಗಿದವು.

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರ್‍ಯಾಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara.

52—31

ಕೊಡಗು

ಫೆಬ್ರವರಿ ತಾರೀಕು ೯ ನೇ ಶುಕ್ರವಾರ ೧೯೪೦.

ಪುನಹ ನಿರಾಶೆ.

ತಾರೀಕು 5ರಲ್ಲಿ ಪುನಹ ಗಾಂಧಿ ವೈಸರಾಯರ ಭೇಟಿಯು ನಡೆಯಿತು. ಇಡೀ ಭಾರತದ ಜನತೆಯು ಹಾಗೂ ಬ್ರಿಟಿಷ್ ಜನಾಂಗವು ಈ ಭೇಟಿಯ ಫಲಿತಾಂಶವನ್ನು ಆಶಾದೃಷ್ಟಿಯಿಂದ ನೋಡುತ್ತಿತ್ತು. ಆದರೆ ಭೇಟಿಯ ಫಲಿತಾಂಶವು ಈ ಆಶೆ ಭರವಸೆಗಳನ್ನು ನಿರ್ಮೂಲಗೊಳಿಸಿದೆ. ವೈಸರಾಯರ ಸೂಚನೆಗಳು ತೀರಾ ಅತೃಪ್ತಿಕಾರಕವಾದ್ದರಿಂದ ಮಹಾತ್ಮರು ಚರ್ಚೆಯನ್ನು ತತ್ಕಾಲ ಮುಕ್ತಾಯ ಮಾಡುವಂತೆ ಸೂಚಿಸಿದರು. ವೈಸರಾಯರ ಸೂಚನೆಗಳು ದಿನ ಹೋದಂತೆ ಹೊಸ ಹೊಸ ರೂಪವನ್ನು ತಳೆಯುತ್ತಿವೆ. ಅಂದು ಅಲ್ಪ ಪಕ್ಷೀಯರ ಸಮಸ್ಯೆಯನ್ನು ಮಹತ್ವದ್ದೆಂದು ಮುಂದಿಟ್ಟ ಅವರು ಇಂದು ಇಂಡಿಯಾದ ರಕ್ಷಣೆಯ ವಿಚಾರದ ತಮ್ಮ ಹೆದರಿಕೆಯನ್ನು ಸೂಚಿಸಿರುವರು. ಅಲ್ಲದೆ ಯುದ್ಧದ ನಿಮಿತ್ತ ನಿಲ್ಲಿಸಲ್ಪಟ್ಟಿರುವ ರಾಜ್ಯಾಂಗ ಘಟನೆಯನ್ನು ಜಾರಿಗೆ ತರುವದೇ ಭಾರತದ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ತಳಹದಿಯೆಂದು ಸೂಚಿಸಿದ್ದಾರೆ. ರಾಜ್ಯಾಂಗ ಘಟನೆಯು ಜಾರಿಗೆ ಬಂದರೆ ಇಂದು ಎದುರು ಬಿದ್ದಿರುವ ಅನೇಕ ಸಮಸ್ಯೆಗಳು ಬಗೆ ಹರಿಯುವವೆಂದೂ ಭಾರತದ ರಕ್ಷಣೆಯ ಅಲ್ಪ ಸಂಖ್ಯಾತರ ಹಾಗೂ ದೇಶೀಯ ಅರಸರ ಸಮಸ್ಯೆಗಳು ಸುಲಭವಾಗಿ ಕೊನೆಗೊಳ್ಳುವವೆಂದೂ ಸಾರಿರುವರು. ವೈಸರಾಯರ ಈ ಸೂಚನೆಗಳು ಕಾಂಗ್ರೆಸಿನ ಕೇಳಿಕೆಗೆ ಪೂರ್ಣ ವಿರೋಧವಿರುವದೆಂದು ಗಾಂಧಿಜೀಯರು ಕಂಠೋಕ್ತವಾಗಿ ಸಾರಿದ್ದಾರೆ. ಭಾರತವು ತನ್ನ ರಕ್ಷಣೆ ಮಾಡಿಕೊಳ್ಳುವಷ್ಟು ಅಬಲವಾಗಿದ್ದರೆ ಅದು ಬ್ರಿಟಿಷ್ ಸರಕಾರದ ಸ್ವಾರ್ಥದೃಷ್ಟಿಯ ಆಡಳಿತವೇ ಆಗಿದೆಯೆಂದು ಹೇಳಿದ್ದಾರೆ. ಅಲ್ಲದೆ ಭಾರತವು ಸ್ವತಂತ್ರವಾದಲ್ಲದೆ ಈ ರಕ್ಷಣಾ ಸಮಸ್ಯೆಯು ಬಗೆ ಹರಿಯದೆಂದೂ, ಅಲ್ಪ ಸಂಖ್ಯಾಕರ ಮತ್ತು ದೇಶೀಯ ಅರಸರ ಸಮಸ್ಯೆಯು ಭಾರತೀಯರ ಅಂತರೀಕ ವ್ಯವಹಾರವೆಂದು ಘೋಷಿಸಿದ್ದಾರೆ. ಭಾರತದ ಭವಿತವ್ಯವನ್ನು ನಿರ್ಣಯಿಸುವ ಹಕ್ಕು ಭಾರತೀಯರಿಗೆ ಇರಬೇಕಲ್ಲದೆ ಆ ಬಗ್ಗೆ ಇತರ ಜನಾಂಗದ ಸಹಾಯವು ಅನಾವಶ್ಯ. ಇಂದು ಕಾಂಗ್ರೆಸಿಗೂ ಬ್ರಿಟಿಷ್ ಸಾರ್ವಭೌಮ ಸರಕಾರಕ್ಕೂ ಇರುವ ಭೇದವೆಂದರೆ ಇದೇ. ಭಾರತವು ಇನ್ನೂ ಸ್ವರಾಜ್ಯ ಪಡೆಯಲು ಅರ್ಹವಾಗಿಲ್ಲವೆಂಬ ಧೋರಣೆಯನ್ನು ತಳೆದು ಭಾರತೀಯರ ಪೋಷಕರ ಸೋಗು ಹಾಕಿರುವ ಬ್ರಿಟಿಷ್ ಸರಕಾರದ ವರ್ತನೆಯು ದೇಶೀಯರಲ್ಲಿ ಅತೃಪ್ತಿಯನ್ನು ಹುಟ್ಟಿಸಿದೆ. ಸಾಂಸ್ಕೃತಿಕ, ನಾಗರಿಕ ಹಾಗೂ ರಾಷ್ಟ್ರೀಯತಾದೃಷ್ಟಿಯಿಂದ ಪರೀಕ್ಷಿಸಿದರೆ ಭಾರತವು ಇಂದು ಸ್ವಾತಂತ್ರ್ಯತೆಯಿಂದಿರುವ ಯಾವ ರಾಷ್ಟ್ರಕ್ಕೂ ಹಿಂದಿಲ್ಲ. ಯಾಕೆ? ವರ್ಸೆಲ್ಸ್ ಒಪ್ಪಂದದ ಪರಿಣಾಮವಾಗಿ ತಮ್ಮ ಭವಿತವ್ಯವನ್ನು ನಿರ್ಣಯಿಸಿಕೊಳ್ಳುವ ಸೌಲಭ್ಯವನ್ನು ಪಡೆದ ಬ್ರಿಟಿಷ್ ಸಾಮ್ರಾಜ್ಯಾಂತರ್ಗತ ರಾಷ್ಟ್ರಗಳು ಭಾರತಕ್ಕಿಂಥಾ ಯಾವ ರೀತಿಯಿಂದಲೂ ಮುಂದರಿದಿಲ್ಲ.

ರಾಜ್ಯಾಂಗ ಘಟನೆಯನ್ನು ಜಾರಿಗೆ ತಂದರೆ ಭಾರತ ಸ್ವಾತಂತ್ರ್ಯದ ಪ್ರಶ್ನೆಯು ಬೇಗನೆ ತೀರ್ಮಾನಿಸಲ್ಪಡುವದೆಂದು ವೈಸರಾಯರು ಹೇಳುತ್ತಾರೆ. ರಾಜ್ಯಾಂಗಘಟನೆಯಲ್ಲಿ ಭಾರತ ರಕ್ಷಣೆಯ ವಿಚಾರ ಹೆಚ್ಚು ನಿಗ ತೆಗೆದುಕೊಳ್ಳಲಾಗುವದೆಂದು ಭರವಸೆ ಕೊಡುತ್ತಾರೆ. ಆದರೆ ವೈಸರಾಯರ ಸೂಚನಾ ಪರಿಪತ್ರದಲ್ಲಿ ಭಾರತದ ರಕ್ಷಣೆಯು ಭಾರತೀಯರ ಹಕ್ಕು ಹಾಗೂ ಅವರ ಸಮಸ್ಯೆಯೆಂದಿದೆ. ಈಗ ಐದು ವರ್ಷಗಳು ಕಳೆದರೂ ಈ ಬಗ್ಗೆ ಯಾವ ಕಾರ್ಯವನ್ನು ಮಾಡದಿರುವಾಗ ರಾಜ್ಯಾಂಗ ಘಟನೆಯು ಜಾರಿಗೆ ಬಂದರೆ ರಕ್ಷಣಾ ಬಗ್ಗೆ ಹೆಚ್ಚು ನಿಗತೆಗೆದುಕೊಳ್ಳಲಾಗುವದೆಂದೂ ಮತ್ತು ಈ ಫೆಡರಲ್ ಯೋಜನೆಯು ಭಾರತ ಸ್ವಾತಂತ್ರ್ಯದ ಅಡಿಗಲ್ಲಾಗುವದೆಂಬೂ ಹೇಳುವ ಮಾತಿನ ಭರವಸೆಯೇನು? ಆದ್ದರಿಂದ ಬ್ರಿಟಿಷರ ಮನಸು ಬದಲಾವಣೆಯಾದಲ್ಲದೆ ಈ ತೋರಿಕೆಯ ಸುಧಾರಣೆಗಳಿಂದ ಹೆಚ್ಚಿನ ಪ್ರಯೋಜನವಾಗದು.

ಬ್ರಿಟಿಷ್ ಸರಕಾರದ ಪರ ವೈಸರಾಯರ ಈ ಸೂಚನೆಗಳು ಕಾಂಗ್ರೆಸಿನ ಕೇಳಿಕೆಗೆ ಪೂರ್ಣ ವಿರೋಧವಿರುವ ಪ್ರಯುಕ್ತ ಗಾಂಧೀಜಿಯವರು ಚರ್ಚೆಯನ್ನು ತತ್ಕಾಲ ನಿಲ್ಲಿಸಿರುವರು. ವೈಸರಾಯಿ ಗಾಂಧೀಯವರ ಈ ಭೇಟಿಯಿಂದ ರಾಜಕೀಯ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಗಾಂಧೀಜಿಯವರು ಭಾರತ ಭವಿತವ್ಯದ ಬಗ್ಗೆ ಪೂರ್ಣ ಆಸಕ್ತಿವಹಿಸಿರುವರು. ಈ ಭೇಟಿಯು ನಿಷ್ಫಲವಾದರೂ ಮುಂದಿನ ಯತ್ನಕ್ಕೆ ಇದು ಅಡಿಗಲ್ಲು ಎಂದು ಹೇಳಿರುವರು. ಬ್ರಿಟಿಷ್ ಸರಕಾರವಾದರೂ ದೇಶೀಯರ ಕೇಳಿಕೆಯನ್ನು ಪುರಸ್ಕರಿಸಿ ಬ್ರಿಟಿಷ್ ಸರ್ಕಾರದ ಹಾಗೂ ಭಾರತದ ಹಿತವನ್ನು ಸಾಧಿಸುವಂತೆ ಭಗವಂತನು ಅವರನ್ನು ಪ್ರೇರಿಪಿಸಲಿ ಎಂದು ಆಶಿಸುವಾ.

ಗಾಂಧಿ-ವೈಸರಾಯರ ಭೇಟಿ

ವೈಸರಾಯರ ಆಹ್ವಾನ ಮೇರೆ ಮಹಾತ್ಮಗಾಂಧಿಯವರು ಅವರನ್ನು ತಾ. 5ರಲ್ಲಿ ಡೆಲ್ಲಿಯಲ್ಲಿ ಭೇಟಿಮಾಡಿದರು. ಭೇಟಿಯು 2½ ತಾಸುಗಳ ವರೆಗೆ ಇತ್ತು. ಸ್ನೇಹಪೂರಿತವಾದ ವಾಗ್ವಾದಗಳು ನಡೆದವೆಂದು ತಿಳಿದುಬಂದಿದೆ. ಗಾಂಧೀಜಿಯವರು ಚರ್ಚೆಯ ಪ್ರಾರಂಭದಲ್ಲೇ ತಾವು ಯಾರನ್ನೂ ಪ್ರತಿನಿಧಿಸುತ್ತಿಲ್ಲವೆಂದೂ ತನ್ನ ಸ್ವಂತ ಅಭಿಪ್ರಾಯವನ್ನೇ ಮುಂದಿಡುತ್ತಿರುವದೆಂದೂ ವೈಸರಾಯರಿಗೆ ಮನದಟ್ಟಿಕೆಮಾಡಿದರು. ವೈಸರಾಯರು ಭಾರತದ ಬಗ್ಗೆ ಬ್ರಿಟಿಷರ ಧ್ಯೇಯವನ್ನು ವಿವರಿಸಿ ಭಾರತಕ್ಕೆ ಶೀಘ್ರವಾಗಿ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಕೊಡುವದೇ ಅವರ ಆಶಯವೆಂದೂ, ಆದರೆ ಭಾರತವು ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನನುಭವಿಸುವ ಕಾಲಕ್ಕೆ ಪರದೇಶೀ ಆಕ್ರಮಣದಲ್ಲಿ ಭಾರತವನ್ನು ರಕ್ಷಿಸಿಕೊಳ್ಳುವ ಬಗ್ಗೆ ಡಿಫೆನ್ಸಿನ ಸಮಸ್ಯೆಯು ಕಷ್ಟವೂ, ಜಟಿಲವೂ ಆಗಿದೆಯೆಂದೂ, ಬ್ರಿಟಿಷ್ ಸಾರ್ವಭೌಮ ಸರಕಾರವು ಈ ಸಮಸ್ಯೆಗಳನ್ನೆಲ್ಲಾ ದೇಶೀಯ ಮುಖಂಡರ ಸಮಾಲೋಕನದಿಂದ ಒಡನೆ ವಿಚಾರಿಸಿ ತಕ್ಕ ಕಾರ್ಯಕ್ರಮ ಕೈಗೊಳ್ಳುವರೆಂದೂ, ಈಗ ತತ್ಕಾಲ ಹಿಂದೆ ಹಾಕಲ್ಪಟ್ಟಿರುವ ರಾಜ್ಯಾಂಗ ರಚನೆಯ ಯೋಜನೆಯನ್ನು ಜಾರಿಗೆ ತಂದರೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಪ್ರಥಮ ಮೆಟ್ಟಲೇರಿದಂತಾಗುವದೆಂದೂ ಹೇಳಿರುವರು.

ಮಹಾತ್ಮಗಾಂಧೀಯವರು ಯಾವದಾದರೊಂದು ರೀತಿಯಲ್ಲಿ ಈ ಎರಡು ರಾಷ್ಟ್ರಗಳೊಳಗಿನ ಸಮಸ್ಯೆಯನ್ನು ತೀರ್ಮಾನಿಸುವ ಬಗ್ಗೆ ಬ್ರಿಟಿಷ್ ಸರಕಾರವು ತೋರಿಸುತ್ತಿರುವ ಆಸಕ್ತಿಯನ್ನು ಪ್ರಸಂಶಿಸಿ ವೈಸರಾಯರು ಇಂದು ಮುಂದಿಟ್ಟಿರುವ ಸೂಚನೆಗಳು ಕಾಂಗ್ರೆಸಿನ ಕೇಳಿಕೆಯನ್ನು ಸಲ್ಲಿಸಲಾರವೆಂದೂ ಆದ್ದರಿಂದ ತತ್ಕಾಲಕ್ಕೆ ಈ ಸಮಸ್ಯೆಯ ಚರ್ಚೆಯನ್ನು ಮುಂದರಿಸುವದು ಉತ್ತಮವೆಂದೂ ಗಾಂಧೀಜಿಯವರು ಸೂಚಿಸಿದರು. ವೈಸರಾಯರು ಈ ಸೂಚನೆಯನ್ನು ಅಂಗೀಕರಿಸಿದರು. ಅಂತೆಯೇ ಚರ್ಚೆಯು ಮುಕ್ತಾಯಗೊಂಡು ಗಾಂಧೀಜಿಯವರು 6ರಲ್ಲಿ ವಾರ್ಧಾಕ್ಕೆ ಬಂದರು.

ಗಾಂಧೀಜಿಯವರ ಪ್ರಕಟಣೆ

ಗಾಂಧಿಜೀಯವರು ವೈಸರಾಯರೊಡನೆ ತಮ್ಮ ಭೇಟಿಯು ಮುಗಿದ ನಂತರ ಆ ಬಗ್ಗೆ ಈ ಅರ್ಥದ ಒಂದು ಪ್ರಕಟಣೆಯನ್ನು ಹೊರಡಿಸಿರುವರು. 'ಭಾರತದ ಭವಿತವ್ಯವನ್ನು ಬ್ರಿಟಿಷ್ ಸರ್ಕಾರವೇ ನಿರ್ಣಯಿಸಬೇಕೆಂಬುದು ಬ್ರಿಟಿಷ್ ಸಾರ್ವಭೌಮ ಸರಕಾರದ ಆಶಯವಾಗಿದೆ. ಆದರೆ ಕಾಂಗ್ರೆಸು ಇದಕ್ಕೆ ತೀರಾ ವ್ಯತಿರಿಕ್ತ ಅಭಿಪ್ರಾಯಪಡುತ್ತದೆ. ಇಲ್ಲಿಯೇ ಬ್ರಿಟಿಷ್ ಸರ್ಕಾರಕ್ಕೂ, ಕಾಂಗ್ರೆಸ್ಸಿಗೂ ಭೇದ ಇರುವದಾಗಿದೆ. ಭಾರತದ ಸ್ವಾತಂತ್ರ್ಯದ ಪರಿಕ್ಷೆಯೆಂದರೆ ಭಾರತೀಯರು ತಮ್ಮ ಭವಿತವ್ಯವನ್ನು ಪರದೇಶೀಯರ ಸಹಾಯವಿಲ್ಲದೆ ನಿರ್ಣಯಿಸಿಕೊಳ್ಳುವದೇ ಆಗಿದೆ. ಈ ಸಮಸ್ಯೆಯು ಬಗೆ ಹರಿದಲ್ಲದೆ ಬ್ರಿಟಿಷ್ ಸರ್ಕಾರ ಹಾಗೂ ಕಾಂಗ್ರೆಸ್ಸಿನೊಡನೆ ಸಂಧಾನವೆಂಬುದು ಕನವರಿಕೆಯಾಗಿದೆ. ಬ್ರಿಟಿಷ್ ಸಾರ್ವಭೌಮ ಸರ್ಕಾರವು ಭಾರತೀಯರು ತಮ್ಮ ಭವಿಷ್ಯವನ್ನು ನಿರ್ಣಯಿಸಿಕೊಳ್ಳಲು ಸಮರ್ಥರಾಗಿದ್ದಾರೆಂಬುವುದನ್ನು ತಿಳಿದು ಆ ಪ್ರಕಾರ ವರ್ತಿಸಿದ್ದಾದರೆ ಭಾರತದ ರಕ್ಷಣೆಯು, ಇಲ್ಲವೇ ಭಾರತೀಯರ ಅಲ್ಪ ಪಕ್ಷೀಯರ ಅಥವಾ ಆಶ್ರಿತ ರಾಜರುಗಳ ಸಮಸ್ಯೆಯು ತಾನಾಗಿಯೇ ತೀರ್ಮಾನಗೊಳ್ಳುವವು. ಒಂದು ಪ್ರತಿನಿಧಿ ಸಭೆಯಲ್ಲಿ ದೇಶದ ಎಲ್ಲಾ ಪಕ್ಷೀಯರಿಗೆ ನ್ಯಾಯ ಸಮರ್ಪಕವಾದ ಪ್ರಾತಿನಿಧ್ಯವಿಲ್ಲದಿದ್ದರೆ ಅದು ಪ್ರತಿನಿಧಿ ಸಭೆಯಾಗದು. ಆದ್ದರಿಂದ ಅಲ್ಪ ಪಕ್ಷೀಯರ ಸಮಸ್ಯೆಯು ಸ್ವತಂತ್ರ ಭಾರತದಲ್ಲಿ ಶ್ರಮವಿಲ್ಲದೆ ಬಗೆಹರಿಸಲ್ಪಡುವದು. ಭಾರತದ ರಕ್ಷಣೆಯ ವಿಚಾರ ನೋಡಿದರೆ ಇಂದು ಭಾರತವು ಹೀಗೆ ತನ್ನ ರಕ್ಷಣೆಯನ್ನು ಮಾಡಿಕೊಳ್ಳಲಾರದಷ್ಟು ಅಬಲವಾಗಿರುವದು ಈ ಬ್ರಿಟಿಷರ ಆಳಿಕೆಯಿಂದಾಗಿಯೇ ಆಗಿದೆ. ಬ್ರಿಟಿಷರು ತಮ್ಮ ಅಧಿಕಾರವನ್ನು ತ್ಯಜಿಸಿ ಭಾರತೀಯರಿಗೆ ಅಧಿಕಾರ ಬಿಟ್ಟು ಕೊಡದ ವಿನಹ ಈ ಸಮಸ್ಯೆಯು ಬಗೆಹರಿಸಲ್ಪಡುವದಿಲ್ಲ. ಸಂಸ್ಥಾನದ ಅರಸರ ವಿಚಾರ ಅವರು ಮೇಲ್ಕಂಡ ಪ್ರತಿನಿಧಿ ಸಭೆಗೆ ತಮ್ಮ ಜನತೆಯ ಪರ ಚುನಾವಣೆಗೆ ನಿಲ್ಲಬಹುದು. ಇಂದು ಆಶ್ರಿತ ರಾಜರು ಬ್ರಿಟಿಷ್ ಸರ್ಕಾರದ ಕೈಕೆಳಗಿರುವದೊಡ್ಡ ಜಮೀನ್ದಾರರು. ಅಂತೆಯೇ ಮುಂದೆ ಅವರನ್ನು ಸಂಸ್ಥಾನಧೀಶರೆಂಬುವುದರ ಬದಲು ದೊಡ್ಡ ಜಮೀನ್ದಾರರಾಗಿ ಪರಿಗಣಿಸಲಾಗುವುದು.'

ನಿವೇದನೆ.

ಈ ಮೊದಲೇ ಸೂಚಿಸಿದಂತೆ ಈಗಾಗಲೇ ಹುಂಡಿಗಳ ಮಾರಾಟವನ್ನು ಸಾರ್ವತ್ರಿಕವಾಗಿ ಕೈಗೊಳ್ಳಲ್ಪಟ್ಟಿವೆ. ಬರುವ ಮಾರ್ಚಿ ತಾರೀಕು 15ರೊಳಗೆ 1000 ರೂಪಾಯಿ ಖಾದಿ ಮಾರಾಟವನ್ನು ಇಲ್ಲಿ ಮಾಡಬೇಕೆಂಬದನ್ನು ಯಾರೂ ಮರೆಯತಕ್ಕದ್ದಲ್ಲ. ಈಗಾಗಲೇ ಅಖಿಲ ಭಾರತ ಚರಖಾ ಸಂಘದ ಖಾದಿ ವಸ್ತ್ರಾಲಯದ ಕರ್ಣಾಟಕ ಶಾಖೆಯವರು ಬಟ್ಟೆಯನ್ನು ತರುವವರಿದ್ದಾರೆ. ಖಾದಿಯೇ ಬಡ ಜನರ ಕಾಮಧೇನುವೆಂದು ಜನತೆಯು ತಿಳಿದು ಅದಕ್ಕೆ ಪ್ರೋತ್ಸಾಹ ಮಾಡಬೇಕಿದೆ. ದೇಶೀಯರು ಈ ವರೆಗಾದರೂ ಕಾಂಗ್ರೆಸ್ಸಿನ ಕಡೆಗೆ ತಮ್ಮ ಅಮೂಲ್ಯ ಸಹಾಯವನ್ನು ಶಕ್ತಿಮೀರಿ ಮಾಡಿರುವರು. ಈ ಸಂದರ್ಭದಲ್ಲೂ ಮಹನೀಯರು ಭಾರತ ಸ್ವಾತಂತ್ರ್ಯದ ದ್ಯೋತಕವಾಗಿರುವ ಖಾದಿಗೆ ಪ್ರೋತ್ಸಾಹವಿತ್ತು ಕೊಡಗಿನಲ್ಲಿ ಖಾದಿ ಪ್ರಚಾರ ಕಾರ್ಯಕ್ರಮವನ್ನು ಜಯಪ್ರದವಾಗಿ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುವದಾಗಿದೆ.

ಬಿ. ಯಂ. ಕಾರ್ಯಪ್ಪ,
ಗೌ. ಕಾರ್ಯದರ್ಶಿ.
ಕೊ. ಜಿ. ಕಾ. ಕಮಿಟಿ.

ಮಡಿಕೇರಿ,
10-2-40.

ವರ್ತಮಾನ ಸಂಗ್ರಹ.

ಒಳನಾಡು.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 140, ಏಲಕ್ಕಿ ಮಣಕ್ಕೆ ರೂ. 32 ಕ್ರಯವಿದೆ.

ಮೈಸೂರು ಆಸ್ಥಾನ ಸಂಗೀತ ವಿದ್ವಾನ್ ಬಿ. ದೇವೇಂದ್ರಪ್ಪನವರ ಶಿಷ್ಯರಾದ ಶ್ರೀ ಚೆಕ್ಕೆರ ಅಪ್ಪಯ್ಯನವರ ಸಂಗೀತ ಖಚೇರಿಯು ನಾಳೇ ದಿನ ಸಾಯಂಕಾಲ 6 ಗಂಟೆಗೆ ಇಲ್ಲಿಯ ಪೆಸ್ಕೂಲ್ ಹಾಲ್‌ನಲ್ಲಿ ನಡೆಯುವದು.

ಕೊಡಗು ಜಿಲ್ಲಾ ಬೋರ್ಡಿನ ಬಡ್ಜೆಟ್ ಮೀಟಿಂಗು ತಾ. 13ರಲ್ಲಿ ಕೌನ್ಸಿಲು ಹಾಲ್‌ನಲ್ಲಿ ನಡೆಯುವದು.

ಕೊಡಗು ಕಂಪೆನಿಯ ಮೇಲೆ ಹೂಡಿದ ಕೇಸಿನ ವಿಚಾರವು ಈ ತಾರೀಕು 16 ರಲ್ಲಿ ಸಬ್ ಜಡ್ಜರ ಕೋರ್ಟಿನಲ್ಲಿ ವಿಚಾರಿಸಲ್ಪಡುವದೆಂದು ವಾರ್ತೆ.

ವೀರಾಜಪೇಟೆ

ಇಲ್ಲಿ ಭತ್ತ ಗಾಡಿಗೆ ರೂ. 43 ಕ್ರಯವಿದೆ.

ತಾರೀಕು 8 ರಲ್ಲಿ ಇಲ್ಲಿಗೆ ಸ್ವಲ್ಪ ಮಳೆ ಬಿತ್ತು.

ಇಲ್ಲಿಯ ಕ್ರೌನ್‌ಟೂರಿಂಗ್ ಟಾಕೀಸಿನವರು ಗೋಣಿಕೊಪ್ಪಲಿನಲ್ಲಿ ಇಂದಿನಿಂದ ಚಿತ್ರಪ್ರದರ್ಶನ ಮಾಡುತ್ತಿರುವರು.

ಇಲ್ಲಿಯ ಹಿಂದೀ ಪ್ರಾಥಮಿಕ ಹಾಗೂ ಮಾಧ್ಯಮಿಕ ಪರೀಕ್ಷೆಗಳು ತಾರೀಕು 11ಲ್ಲಿ ನಡೆಯುವದೆಂದು ತಿಳಿಯುತ್ತೇವೆ.

ಇಲ್ಲಿಯ ನಾಡುಮಲೆದೇವರ ಉತ್ಸವ ಸಮಯದಲ್ಲಿ ಅಂದರೆ ಮಾರ್ಚಿ 16,17 ಮತ್ತು 18ರಲ್ಲಿ ಜಾನುವಾರಗಳ ಪ್ರದರ್ಶನ ಒಂದು ನಡೆಯುವದೆಂದೂ, ಉತ್ತಮ ಜಾನುವಾರಗಳಿಗೂ, ಕೈಗಾರಿಕೆ ಮತ್ತು ಕಸೂತಿ ಕೆಲಸಗಳಿಗೂ ಬಹುಮಾನ ಕೊಡಲಾಗುವದೆಂದೂ ವರ್ತಮಾನ.

ತಾ. 31-1-40 ರಲ್ಲು ಶ್ರೀ ಸ್ವಾಮಿ ವಿವೇಕಾನಂದರವರ 77ನೇ ಜಯಂತಿ ಉತ್ಸವವನ್ನು ಇಲ್ಲಿಯ ಕಾವೇರಿ ಭಕ್ತಜನ ಸಂಘದವರು ಭಜನೆ, ಸಂಗೀತ ಉಪನ್ಯಾಸ ಪೂಜಾದಿಗಳಿಂದ ಆಚರಿಸಿದರೆಂದೂ, ಶ್ರೀಮಾನ್ ಯಂ. ಶಂಕರನಾರಾಯಣರವರು ಸ್ವಾಮಿಜಿಯವರ ಜೀವನ ಚರಿತ್ರೆ, ಸಂದೇಶಗಳನ್ನು ಕುರಿತು ಭಾಷಣ ಮಾಡಿದರೆಂದೂ, ಶ್ರೀ. ಚೆಕ್ಕೆರ ಅಪ್ಪಯ್ಯನವರ ಸಂಗೀತ ಖಚೇರಿ ಸಹ ನಡೆಸಲಾಯಿತೆಂದೂ ತಿಳಿಯುತ್ತೇವೆ.

ಸೋಮವಾರಪೇಟೆ.

ಇಲ್ಲಿ ಒಂದು ಸಹಕಾರ ಸಮ್ಮೇಳನವೂ, ವಸ್ತು ಪ್ರದರ್ಶನವೂ ತಾ. 27 ರಲ್ಲಿ ನಡೆಯುವದು.

ಮರಣ ವಾರ್ತೆ.

ಕಳೆದ ತಾ. 25-1-40ರಲ್ಲು ರಿಟೈರ್ಡ್ ಶಾಲಾ ಉಪಾಧ್ಯಾಯರಾದ ಜಿ. ...ನರ ಭಟ್ಟರು ಕಾಕೋಟುಪರಂಬಿನ ...ವರ ಭವನದಲ್ಲಿ ಶಿವಾಧೀನರಾದರೆಂದು ...ವು ವಿಷಾದಿಸುತ್ತೇವೆ.

ರಾಮಗಢ ಕಾಂಗ್ರೆಸಿಗೆ ಪ್ರತಿನಿಧಿ ಉಪಚುನಾವಣೆ.

ಪ್ರಥಮ ಚುನಾವಣೆಯಲ್ಲಿ ಶ್ರೀ ಸಿ. ಯಂ. ಪೂಣಚ್ಚನವರ ನಾಮಪತ್ರ ಮಾತ್ರ ಸರಿಯಿದ್ದು ಅವರೊಬ್ಬರೆ ಪ್ರತಿನಿಧಿಯಾಗಿ ಚುನಾಯಿಸಲ್ಪಟ್ಟಿದ್ದರಷ್ಟೆ. ಆದರೆ ಖಾಲಿ ಇದ್ದ ಇನ್ನೊಂದು ಸ್ಥಳಕ್ಕೆ ಉಪಚುನಾವಣೆ ನಡೆಯಬೇಕಾಗಿದ್ದು ಶ್ರೀಗಳಾದ ಎ. ಎಸ್. ಚಣ್ಣಪ್ಪ, ಬಿ. ಯಂ. ಕಾರ್ಯಪ್ಪ, ಮತ್ತು ಕೆ. ಸಿ. ಕರುಂಬಯ್ಯನವರುಗಳು ನಾಮಪತ್ರವನ್ನು ಹಾಕಿದ್ದರು. ಆದರೆ ಪರಿಶೀಲನೆಯಲ್ಲಿ ಶ್ರೀ. ಎ. ಎಸ್. ಚಣ್ಣಪ್ಪನವರ ನಾಮಪತ್ರ ಸರಿಯಾಗಿಲ್ಲದ್ದರಿಂದಲೂ, ಶ್ರೀ ಬಿ. ಯಂ. ಕಾರ್ಯಪ್ಪನವರು ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದು ಕೊಂಡದ್ದರಿಂದಲೂ ಶ್ರೀ ಕೆ ಸಿ. ಕರುಂಬಯ್ಯನವರು ರಾಮಗಡ ಕಾಂಗ್ರೆಸಿಗೆ ಪ್ರತಿನಿಧಿಯಾಗಿ ಆರಿಸಲ್ಪಟ್ಟಿದ್ದಾರೆ.

ಕೆ. ಯಂ. ಕುಶಾಲಪ್ಪ,
ಜಿ. ರಿಟರ್ನಿಂಗ್ ಆಫೀಸರ್.

ಹಿಂದೂ ದೇಶ.

ಶತ್ರು ರಾಷ್ಟ್ರಗಳೊಡನೆ ಪತ್ರವ್ಯವಹಾರ ನಡೆಸುತ್ತಿದ್ದರೆಂಬ ಆರೋಪದ ಮೇಲೆ ಬೊಂಬಾಯಿ ಪೋಲೀಸರು 4 ಮಂದಿ ಇಟಲಿಯನರು, ಇಬ್ಬರು ಜರ್ಮನ್ ಮಹಿಳೆಯರು ಮತ್ತೊಬ್ಬ ಡಚ್ ಹೆಂಗಸನ್ನು ಕೈದು ಮಾಡಿರುವರು. ವಿಚಾರ ನಡೆಯುತ್ತಿದೆ.

ಬಂಗಾಳದ ಹಿಂದೂ ಮತ್ತು ಮುಸ್ಲಿಮರ ಪ್ರತಿನಿಧಿಗಳ ಒಂದು ದುಂಡು ಮೇಜಿನ ಪರಿಷತ್ತನ್ನು ಕರೆದು ಅಲ್ಲಿ ವಿಷಯಗಳನ್ನು ಇತ್ಯರ್ಥಿಸುವದು ಶ್ರೇಯಸ್ಕರವೆಂದು ಬಂಗಾಳದ ಪ್ರಧಾನ ಮಿ. ಹಕ್ಕರೂ, ಬಂಗಾಳದ ಹಿಂದೂಮಹಾಸಭೆಯ ಉಪಾಧ್ಯಕ್ಷ ಶ್ರೀ. ಬಿ. ಸಿ. ಚಾಟರ್ಜಿಯವರೂ ಒಂದು ಸಂಯುಕ್ತ ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಈಗಿನ ಪರಿಸ್ಥಿತಿಯಲ್ಲಿ ಇದು ಅಪೇಕ್ಷಣೀಯವೆಂದು ಪ್ರಮುಖರಾದ ಹಲವರ ಅಭಿಪ್ರಾಯವಾಗಿದೆ.

ಮಧುರೆಯ ವರ್ಣಾಶ್ರಮ ಸ್ವರಾಜ್ಯ ಸಂಘದ ಸದಸ್ಯರಾದ ಶ್ರೀ. ಆರ್. ಆನಂದರಾವ್ ಎಂಬವರು ದೇವಾಲಯದ ಪ್ರವೇಶ ಮಸೂದೆಯನ್ನು ರದ್ದುಪಡಿಸಬೇಕಾಗಿ ವಿನಂತಿಸಿ ವೈಸರಾಯರಿಗೆ ಮನವಿ ಮಾಡಿಕೊಂಡು, ಅದನ್ನು ರದ್ದು ಮಾಡದಿದ್ದರೆ, ತಾನು ಹಲವು ಮಂದಿ ಸನಾತನಿಗಳೊಡನೆ ಮದ್ರಾಸಿಗೆ ಬಂದು ಅಲ್ಲಿ 'ಸತ್ಯಾಗ್ರಹ' ನಡೆಸುವೆನೆಂದೂ, ಇದೇ ಫೆಬ್ರವರಿ ತಾ. 16ರಲ್ಲಿ ಇದರ ಪ್ರಥಮ ತುಕ್ಕಡಿಯಾದ 100 ಮಂದಿ ಮದ್ರಾಸಿಗೆ ಹೊರಡುವರೆಂದೂ ತಿಳಿಸಿದ್ದಾರೆ.

ಬಿಹಾರ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಪದವಿಗೆ ಬಾಬು ರಾಜೇಂದ್ರ ಪ್ರಸಾದರು ರಾಜಿನಾಮೆ ಕೊಡುವರೆಂಬ ಸುದ್ದಿ ಸ್ಥಳೀಯ ಕಾಂಗ್ರೆಸ್ ವೃತ್ತಗಳಲ್ಲಿ ಬಲವಾಗಿ ಹರಡಿದೆ. ಇದಕ್ಕೆ ಕಾರಣ ಖಚಿತವಾಗಿ ತಿಳಿದು ಬಂದಿಲ್ಲವಾದರೂ ಪ್ರಾಂತ ಕಾಂಗ್ರೆಸಿನಲ್ಲಿ ತಲೆದೋರಿರುವ ಅಶಿಸ್ತಿಯೇ ಇದಕ್ಕೆ ಕಾರಣವೆಂದು ಭಾವಿಸಲಾಗಿದೆ. ಈ ಸಂಬಂಧವಾಗಿ ಹೊಸ ಚುನಾವಣೆಯನ್ನು ಏರ್ಪಡಿಸಬೇಕೆಂದು ರಾಜನ್ ಬಾಬುಗಳು ಪ್ರಾಂತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಿಗೆ ತಿಳಿಸಿದ್ದಾರೆಂದು ಸುದ್ದಿ.

ಡೆಲ್ಲಿಯ ಮುಸ್ಲಿಂ ಲೀಗ್ ವರ್ಕಿಂಗ್ ಕಮಿಟಿಯಲ್ಲಿ ಭಾಗವಹಿಸಲು ಅತ್ತ ತೆರಳಿರುವ ಲೀಗಿನ ಅಧ್ಯಕ್ಷ ಶ್ರೀ. ಜಿನ್ನಾರವರು 'ಇಂಡಿಯದ 90 ಕೋಟಿ ಮುಸ್ಲಿಮರು ಬೇರೊಂದು ಜನಾಂಗವಾಗಿದ್ದು, ಇತರ ಜನಾಂಗಗಳಂತೆ ಅದಕ್ಕೂ ಸ್ವಯಂ ನಿರ್ಧಾರದ ಹಕ್ಕಿರಬೇಕು. ಮುಸ್ಲಿಮರ ಸ್ಥಾನವನ್ನು ಮೈನಾರಿಟಿಗಳ ಮಟ್ಟಕ್ಕೆ ಇಳಿಸಕೂಡದು. ಮುಸ್ಲಿಮರಿಗೇ ಒಂದು ಪ್ರತ್ಯೇಕ ರಾಷ್ಟ್ರೀಯ ಸಂಸ್ಥಾನವಿರಬೇಕು. ಇವೆಲ್ಲವುಗಳಿಗೆ ಅನುಕೂಲವಿಲ್ಲದ ಇಂಡಿಯದ ಸುಧಾರಣೆಗಳಿಗೆ ಮುಸ್ಲಿಮರ ಪ್ರಬಲ ವಿರೋಧವಿದ್ದೀತು.' ಎಂದು ಮುಂತಾಗಿ ಪ್ರಕಟಪಡಿಸಿ, ಇವೆಲ್ಲವೂ ಅಧಿವೇಶನದಲ್ಲಿ ಚರ್ಚಿಸಲ್ಪಡುವುವೆಂದು ತಿಳಿಸಿರುವರು.

ವಿದೇಶ.

ರಷ್ಯವು ಹದಿನೈದು ಸಬ್‌ಮೆರಿನುಗಳನ್ನು ಜರ್ಮನಿಗೆ ಕೊಟ್ಟು ಅದಕ್ಕೆ ಬದಲಾಗಿ ಒಂದು ಜರ್ಮನ್ ಕ್ರೂಸರ್ ಜಹಜನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿದೆಯೆಂದು 'ಡೈಲಿ ಟೆಲಿಗ್ರಾಫ್' ಪತ್ರಿಕೆಯ ಸ್ಟಾಕ್‌ಹೋಂ ಬಾತ್ಮಿದಾರರು ತಿಳಿಸಿದ್ದಾರೆ. ಇನ್ನು ಒಂದೋ ಎರಡೋ ಯುದ್ಧ ಜಹಜುಗಳನ್ನು ರಷ್ಯವು ಜರ್ಮನಿಯಿಂದ ಕೊಳ್ಳುವದಾಗಿ ತಿಳಿದು ಬಂದಿದೆ. ಈಗ ಫಿನ್ನರಿಂದ ನಾಶ ಮಾಡಲ್ಪಟ್ಟ ರಷ್ಯನ್ ಜಹಜುಗಳ ಸ್ಥಾನದಲ್ಲಿ ಈ ಜರ್ಮನ್ ಜಹಜುಗಳನ್ನು ಉಪಯೋಗಿಸಲಾಗುತ್ತದೆ.

ಉತ್ತರ ಮತ್ತು ದಕ್ಷಿಣ ಚೀಣಾದಲ್ಲಿ ಚೀಣಾದ ಸೈನ್ಯಕ್ಕೆ ವಿರೋಧವಾಗಿ ಭಾರಿ ಆಕ್ರಮಣಗಳು ನಡೆಯುತ್ತಿವೆಯೆಂದು ಜಪಾನಿನವರು ಹೇಳಿರುತ್ತಾರೆ. ಚೀನಾ ದೇಶದ ನೈಋತ್ಯದಿಗ್ಭಾಗದಲ್ಲಿರುವ ಭಾರಿ ನಗರವಾದ ನಾನ್ಕಿಂಗಿಗೆ ಪೂರ್ವ ದಕ್ಷಿಣದಲ್ಲಿ ಸುಮಾರು 35 ಮೈಲುಗಳ ದೂರದಲ್ಲಿ ಜಪಾನಿನವರು ಯೂಕಿ-ಯೊಂಗ್ ನದಿಯನ್ನು ದಾಟಿರುತ್ತಾರೆಂದು ಹೇಳಲಾಗಿದೆ. ನಾನ್ಕಿಂಗ್ ಎಂಬ ಈ ಭಾರಿ ಪ್ರಾಮುಖ್ಯವಾದ ಪಟ್ಟಣವು ಈಗ ಜಪಾನಿನವರ ವಶವಾಗಿದೆ. ನಾನ್ಕಿಂಗಿಗೆ ಉತ್ತರದಲ್ಲಿ ಸುಮಾರು 50 ಮೈಲಿನ ದೂರದಲ್ಲಿರುವ ವೂಯುವಾನ್ ಎಂಬ ಊರು ಇಷ್ಟರಲ್ಲಿಯೇ ಜಪಾನಿನವರ ಕೈಸೇರುವಂತಿದೆ. ಎಂದು ಹೇಳಲಾಗಿದೆ.

ಕಳೆದ ಘೋರ ಸಂಗ್ರಾಮದಲ್ಲಿ ಯುದ್ಧ ಪ್ರಾರಂಭವಾದ ಐದು ತಿಂಗಳಿಗೇ ಫ್ರಾನ್ಸಿನಲ್ಲಿ 70 ಸಾವಿರ ಫ್ರೆಂಚ್ ಸೈನಿಕರು ಸತ್ತಿದ್ದರು. ಈಗಿನ ಯುದ್ಧದಲ್ಲಿ ಇದೇ ಕಾಲವನ್ನು ಗಣನೆಗೆ ತೆಗೆದುಕೊಂಡರೆ ಮಿತ್ರ ಮಂಡಲಿಯವರ ನಷ್ಟವೆಲ್ಲಾ ಸೇರಿದರೆ 1,500 ಮಂದಿ ಯೋಧರ ಸಾವು ಮಾತ್ರವೆಂದು ತಿಳಿಯುತ್ತದೆ.

ನಾಗಪುರದಲ್ಲೂ ಬೊಂಬಾಯಿಯಲ್ಲೂ ಗಿರಣಿಗಳ ಕೂಲಿಕಾರರು ಯುದ್ಧದ ನಿಮಿತ್ತ ತಮಗೆ ಜೀವನ ಸಾಗಿಸುವದೇ ದುಸ್ತರವಾಗಿರುವದರಿಂದ ಈ ಸಮಯದಲ್ಲಿ 'ಕ್ಷಾಮದ ಭತ್ಯ' ಕೊಡಬೇಕೆಂದು ತಮ್ಮ ಗಿರಣಿಗಳ ಮಾಲೀಕರುಗಳನ್ನು ಒತ್ತಾಯಪಡಿಸುತ್ತಲೂ, ಮುಷ್ಕರಗಳನ್ನು ಹಿಡಿಯುತ್ತಲೂ ಇದ್ದಾರೆ. ಇದರ ದೆಸೆಯಿಂದ ಬೊಂಬಾಯಿಯಲ್ಲೂ, ನಾಗಪುರದಲ್ಲೂ ಕೆಲವು ಗಿರಣಿಗಳನ್ನು ಮುಚ್ಚಿಬಿಟ್ಟಿದ್ದಾರೆ. ನಾಗಪುರದ ಗಿರಣಿಗಳ ಕೂಲಿಕಾರರ ಸಂಘದವರು, ತಮ್ಮ ಬೇಡಿಕೆಗಳನ್ನು ಅಧಿಕಾರಿಗಳು ನಡಸಿಕೊಡದೆ ಹೋದಲ್ಲಿ ತಾವು ಫೆಬ್ರವರಿ ತಾ. 16ರಿಂದ ಒಂದು ಪಕ್ಷದ ವರೆಗೆ ಮುಷ್ಕರ ಹಿಡಿಯುವದಾಗಿ ಹೆದರಿಸಿರುತ್ತಾರೆ.

ರಾಮಗಡ ಕಾಂಗ್ರೆಸು.

ಈ ಸಾರಿಯ ಕಾಂಗ್ರೆಸ್ ಅಧಿವೇಶನವು ಮಾರ್ಚಿ 17, 18, 19ರಲ್ಲಿ ನಡೆಯುವದಷ್ಟೆ. ಅದಕ್ಕೆ ಬೇಕಾಗಿರುವ ಸಕಲ ಸಿದ್ಧತೆಗಳೂ ಆಗುತ್ತಿವೆ. ಯುದ್ಧದ ದೆಸೆಯಿಂದ ಸಾಮಾನು ಸಾಹಿತ್ಯಗಳ ಕ್ರಯ ಏರಿರುವ ಪ್ರಯುಕ್ತ ಈ ಸಾರಿ ಮೊದಲೇ ಫೀಜು ವಾಪತಿ ಮಾಡಿ ಸ್ಥಳ ನಿಶ್ಚಯಿಸಿದ ಪ್ರೇಕ್ಷಕರಿಗೆ ಅಲ್ಲಿ ಸೌಕರ್ಯಗಳು ಸಿಗದಾಗಿದೆ. ಸ್ವಾಗತ ಸಮಿತಿಯವರು ಎಲ್ಲಾ ರೀತಿಯಿಂದಲೂ ಕಾಂಗ್ರೆಸ್ ಅಧಿವೇಶನವು ಜಯಪ್ರದವಾಗಬೇಕೆಂದು ಪ್ರಯತ್ನಿಸುತ್ತಿರುವರು.

ಈ ಸಾರಿಯ ಕಾಂಗ್ರೆಸ್ ಅಧ್ಯಕ್ಷಪದಕ್ಕೆ ಮೌಲನಾ ಅಬುಲ್ ಕಲಂ ಅಝಾದ್ ಮತ್ತು ಯಂ. ಎನ್. ರಾಯರ ಹೆಸರುಗಳು ಮಾತ್ರ ಸೂಚಿಸಲ್ಪಟ್ಟಿವೆ. ಹತ್ತು ದಿನಗಳೊಳಗೆ ಯಾರಾದರೂ ತಮ್ಮ ಉಮೇದ್ವಾರಿಕೆಯನ್ನು ವಾಪಾಸು ತೆಗೆದುಕೊಳ್ಳಬಹುದಾಗಿದೆ. ಅದರೆ ಅಂಥಾ ಸಂದರ್ಭ ಕಾಣದ್ದರಿಂದ ಈ ಸಾರಿಯೂ ಕಾಂಗ್ರೆಸ್ ಅಧ್ಯಕ್ಷತನಕ್ಕೆ ಚುನಾವಣೆಯಾಗುವ ಸಂದರ್ಭವಿದೆ. ಫೆಬ್ರವರಿ ತಾ. 15ರಲ್ಲಿ ಚುನಾವಣೆ ನಡೆಯುವದು. ಫಲಿತಾಂಶ ಮುಂದೆ ನೋಡಬೇಕಿದೆ.

ಅಬಲ ರಾಷ್ಟ್ರಗಳನ್ನು ನುಂಗಲು

ಬಾಯ್ದೆರೆದಿರುವ ರಷ್ಯಾ-ಜರ್ಮನಿಗಳು.

ನಡುವಿನಲ್ಲಿ ತೊಡಕಾಗಿ ನಿಂತಿರುವ ಬ್ರಿಟನ್ ಫ್ರಾನ್ಸುಗಳು.

ದಿಕ್ಕು ತೋಚದೆ ದಿಗ್ಭ್ರಾಂತವಾಗಿರುವ ವಿವಿಧ ರಾಷ್ಟ್ರಗಳು.

ಸ್ವಾತಂತ್ರ್ಯ ರಕ್ಷಣೆಯ ಮಹತ್ವಾಕಾಂಕ್ಷೆಯಿಂದ ಬಂದ ಎಡರುಗಳನ್ನು ಸಾಮ್ರಾಜ್ಯಶಾಹಿ ರಾಷ್ಟ್ರಗಳ ಬೆಂಬಲವಿದೆಯೆಂಬ ನಂಬಿಕೆಯಿಂದ ಕೆಚ್ಚೆದೆಯಿಂದ ಎದುರಿಸಿದ ಪೋಲೆಂಡು ಸಾಮ್ರಾಜ್ಯಶಾಹಿ ರಾಷ್ಟ್ರಗಳ ಹಿಂಗಡೆಯ ಇರಿತದಿಂದ ಹೋರಾಡಲಾರದೆ ಸ್ವಾತಂತ್ರ್ಯವನ್ನು ಕಳೆದುಕೊಂಡಿತು. ಪ್ರಜಾಪ್ರಭುತ್ವರಾಷ್ಟ್ರಗಳು ಪೋಲೆಂಡಿನ ಭಗ್ನ ಸಮಾಧಿಯ ಮೇಲೆ ಕಣ್ಣೀರನ್ನಷ್ಟನ್ನೇ ಸುರಿಸಿ ಕೃತಕೃತ್ಯವಾದವು. ತಾವು ಪೋಲೆಂಡಿಗೆ ಸಹಾಯವೀಯಲು ಭರವಸೆಯನ್ನಿತ್ತಷ್ಟು ನಿಜವಾದರೂ ಪೋಲೆಂಡಿನ ಭೌಗೋಳಿಕ ರಚನೆಯೇ ತಮಗೆ ಸಹಾಯ ಮಾಡದಂತೆ ಅಡ್ಡವಾಯಿತೆಂದು ಸಾರಿದವು. ಸುಮ್ಮನೆ ಕೈಕಟ್ಟಿ ಕುಳಿತು ಪ್ರಕೃತಿ ರಚನೆಯಲ್ಲಿ ತಪ್ಪು ಕಂಡುಹಿಡಿದು ಕುಳಿತವು. ಪ್ರಜಾಪ್ರಭುತ್ವರಾಷ್ಟ್ರಗಳು ಪೋಲೆಂಡಿಗೆ ಸಹಾಯ ಮಾಡದಿರಲು ಅಲ್ಲಿಗೆ ಸಾಮಾನುಸಾಹಿತ್ಯಗಳನ್ನು ಕಳುಹಿಸಲು ಅನುಕೂಲವಿಲ್ಲದಿರುವದೇ ಎಂಬುದು ಈ ರಾಷ್ಟ್ರಗಳ ಕೂಗಿನಿಂದ ತಿಳಿಯಬಂದಿದೆ. ಇರಲಿ, ಇದು 'ಒಲ್ಲದವನಿಗೆ ಮೊಸರಲ್ಲಿ ಕಲ್ಲು' ಎಂಬ ನಾಣ್ಣುಡಿಯಂತೆ ಆಯಿತು. ಇದು ಕಳೆದುಹೋದ ಘಟನೆಯ ಚಿತ್ರ.

ಫಿನ್‌ಲೇಂಡು.

ಇಂದು ಸ್ವಾತಂತ್ರ್ಯರಕ್ಷಣೆಯ ಮಹಾಕಾಂಕ್ಷೆಯಿಂದಲೇ ಉತ್ತರ ಯುರೋಪಿನಲ್ಲಿ ಫಿನ್ನರು ಜಗತ್ತಿನ ಅಸಮಾನ ಸೈನ್ಯವಾದ ರಷ್ಯನರನ್ನು ಎದುರಿಸುತ್ತಿರುವರು. ಪ್ರಜಾಪ್ರಭುತ್ವರಾಷ್ಟ್ರಗಳು ರೂಢಿಯಾದ ತಮ್ಮ ಮಾತಿನ ಸಹಾನುಭೂತಿಯನ್ನು ತೋರಿಸಿವೆ. ರಷ್ಯವನ್ನು ಎದುರಿಸುವ ಶಕ್ತಿ ಬ್ರಿಟಿಷರಿಗಾಗಲೀ ಫ್ರಾನ್ಸಿಗಾಗಲೀ ಉಂಟೇ ಎಂಬ ಸಂಶಯವಿರುವಾಗ ಫಿನ್ನರು ರಷ್ಯನರನ್ನು ಹುಡಿಗೂಡಿಸಿದ ಕಥೆಗಳನ್ನು ಬ್ರಿಟಿಷರು ಸವಿಗಿ ಹೇಳುತ್ತಿರುವರು. ಈ ಕಥೆ ಹೀಗೆಯೇ ಮುನ್ನಡೆದೀತೆ? ಇನ್ನು ಕೆಲಕಾಲದಲ್ಲಿ ಫಿನ್ನರ ಪರ್ಯವಸಾನವಾಗುವಾಗ ಈ ರಾಷ್ಟ್ರಗಳು ಯಾವ ಕಥೆಯನ್ನು ಹೇಳಿಯಾವು? ಫಿನ್‌ಲೇಂಡಿನ ನಿಕ್ಕಲ್ ಗಣಿಗಳಲ್ಲಿ ಮಿಲಿಯಾಂತರ ಹಣವನ್ನು ಸುರಿದು ವ್ಯಾಪಾರಮಾಡುತ್ತಿರುವ ಬ್ರಿಟಿಷರೂ, ಅವರನ್ನು ಸಮರ್ಥಿಸುವ ಪತ್ರಿಕಾಪ್ರತಿನಿಧಿಗಳು ಈ ಕಥೆಯನ್ನಲ್ಲದೆ ಮತ್ತೇನನ್ನು ಹೇಳಿಯಾರು? ಅಂತು ಫಿನ್‌ಲೇಂಡಿನ ನಿಕ್ಕಲ್ ಗಣಿಗಳನ್ನು ಬಿಟ್ಟು, ಓಡುವ ವಿಚಾರ ಬೇಗನೆ ಪ್ರಕಟವಾಗಿ, ರಷ್ಯವು ಬಾಲ್ಟಿಕ್ ಸಮುದ್ರದ ಮೇಲೆ ತನ್ನ ಅಧಿಕಾರ ನಡೆಸುವ ದಿನ ದೂರವಿಲ್ಲವೆಂದು ಇಂದಿನ ಘಟನೆಗಳಿಂದ ತಿಳಿದುಬರುತ್ತದೆ. ಫಿನ್‌ಲೇಂಡಿನಲ್ಲಿ ರಷ್ಯನರ ಕೈವಾಡವು ಹೆಚ್ಚಾಗಿ ಫಿನ್‌ಲೇಂಡಿನ ದುರಂತವು ಮುಕ್ತಾಯವಾಗುವ ಚಿಹ್ನೆಗಳು ಕಾಣುತ್ತಿವೆ. ಹೇಗೂ ಇರಲಿ, ಪ್ರಜಾಪ್ರಭುತ್ವರಾಷ್ಟ್ರಗಳ ಕಣ್ಣೀರಿನ ಮಧ್ಯದಲ್ಲೇ ಫಿನ್‌ಲೇಂಡಿನ ಸ್ವಾತಂತ್ರ್ಯವೂ ಕೊಚ್ಚಿಹೋಗುವದೆಂದು ಕೆಲವು ರಾಜಕಾರಣಿಗಳ ನಂಬಿಕೆಯಾಗಿದೆ.

ಜರ್ಮನಿಯ ಆಶೆ.

ಯುರೋಪಿನ ಪೂರ್ವಭಾಗೂ ಉತ್ತರ ಭಾಗಗಳನ್ನು ತನ್ನ ಅಂಕೆಗೆ ತಂದು ವಿಶಾಲ ಜರ್ಮನಿಯನ್ನು ರಚಿಸಬೇಕೆಂದಿದ್ದ ಮಹತ್ವಾಕಾಂಕ್ಷೆಗೆ ರಷ್ಯನರ ದಂಡಯಾತ್ರೆಯಿಂದ ಧಕ್ಕೆ ಬಂದಿದೆ. ಆದ್ದರಿಂದ ಜರ್ಮನಿಯ ಮುಂದಿನ ಯೋಜನೆಯು ಇಂದು ಬದಲಾಗಿರಬೇಕು. ಯುರೋಪಿನ ಉತ್ತರ ಹಾಗೂ ಪೂರ್ವಪ್ರದೇಶಗಳ ವಿಚಾರವನ್ನು ಅದು ರಷ್ಯಕ್ಕೆ ಬಿಡಬೇಕಾಗಿದೆ. ಯಾಕೆಂದರೆ ತನ್ನ ಮೇಲೆ ಯುದ್ಧ ಹೂಡಿರುವ ರಾಷ್ಟ್ರಗಳನ್ನು ಹುಡಿಗೂಡಿಸುವ ಯೋಜನೆಯು ಇಂದು ಜರ್ಮನಿಗೆ ಪ್ರಬಲವಾಗಿದೆ. ಹೀಗೆ ಅದರ ಯೋಜನೆಯು ಇದ್ದರೆ ಪ್ರಥಮತಃ ಅದು ಬೆಲ್ಜಿಯಮ್ಮಿನ ಮೇಲೆ ಧಾಳಿ ನಡೆಸಬೇಕು. ಬೆಲ್ಜಿಯಮ್ ಜರ್ಮನಿಯ ವಶವಾಯಿತೆಂದರೆ ಮುಂದೆ ಸಬ್‌ಮೆರಿನ್ ಹಾಗೂ ವಿಮಾನಗಳಿಗೆ ಬೇಕಾದ ಉತ್ತಮ ನಿಲ್ದಾಣವು ಜರ್ಮನಿಗೆ ಲಭಿಸಿದಂತಾಗುವದು. ಇದರಿಂದ ನಾವೆಗಳಿಗೆ ಬ್ರಿಟನಿನ ಮೇಲೆ ಕೈಮಾಡಲು ಅನುಕೂಲವಾಗುವದು. ಆದರೆ ಬೆಲ್ಜಿಯಮ್ಮನ್ನು ವಶಪಡಿಸಿಕೊಂಡರೆ ಆ ಮೂಲಕ 1914ರಲ್ಲಿ ನಡೆಸಿದಂತೆ ಜರ್ಮನಿಗೆ ಫ್ರಾನ್ಸಿನೊಳಗೆ ನುಗ್ಗಲಾಗುವದಿಲ್ಲ. ಬೆಲ್ಜಿಯಂ ಗಡಿಯಲ್ಲಿ ಫ್ರಾನ್ಸು ಭದ್ರವಾದ ತಡೆಯನ್ನು ಕಲ್ಪಿಸಿಕೊಂಡಿದೆ. ಆದ್ದರಿಂದ ಜರ್ಮನರು ಫ್ರಾನ್ಸಿನೊಳಗೆ ಕಾಲಿಕ್ಕಬೇಕಾದರೆ ಜರ್ಮನಿಯ ದಕ್ಷಿಣಕ್ಕಿರುವ ಸ್ವಿಜರ್‌ಲೇಂಡಿನ ಮೂಲಕ. ಆದರೆ ಸ್ವಿಜರ್‌ಲೇಂಡು 1914ರಲ್ಲಿ ಕಲಿತ ಪಾಠದಿಂದ ತಕ್ಕಷ್ಟು ತನ್ನ ಸೈನ್ಯವನ್ನು ತಯಾರುಮಾಡಿಕೊಂಡಿದೆ. ಆದ್ದರಿಂದ ಇಲ್ಲೂ ಜರ್ಮನಿಯು ಮುನ್ನುಗ್ಗುವದು ಕಷ್ಟವೇ. ಆದ್ದರಿಂದ ಉತ್ತರದಲ್ಲಿ ಬೆಲ್ಜಿಯಮ್ಮನ್ನು ಜಯಿಸದೆ ಇಲ್ಲವೆ ದಕ್ಷಿಣದಲ್ಲಿ ಸ್ವಿಜರ್‌ಲೇಂಡನ್ನು ಜಜ್ಜದೆ ಜರ್ಮನಿಗೆ ಪಶ್ಚಿಮಕ್ಕೆ ಮುನ್ನಡೆಯುವ ದಾರಿಯೇ ಇಲ್ಲ. ಪೂರ್ವ ಮತ್ತು ಉತ್ತರಗಳಲ್ಲಿ ರಷ್ಯವು ತನ್ನ ತಾಂಡವನೃತ್ಯವನ್ನು ತೊಡಗಿರುವದರಿಂದ ಜರ್ಮನಿಯು ಆ ಕಡೆ ನುಗ್ಗುವದು ಅಸಂಭವ. ಅಂದ ಮೇಲೆ ದಕ್ಷಿಣಕ್ಕೆ ಜರ್ಮನಿ ಬೆಳೆದುಕೊಳ್ಳಲು ಯೋಚಿಸಬಹುದೇ? ಹಾಗಾದರೆ ಏನಾಗುವದು ನೋಡುವ.

ದಕ್ಷಿಣದ ದಂಡಯಾತ್ರೆಯೆಂದರೆ ಹಂಗೇರಿಯವನ್ನು ನುಂಗಿ, ಬಾಲ್ಕನ್ ರಾಷ್ಟ್ರಗಳನ್ನು ಅಪಟಿಕೊಳ್ಳುವದು. ಜರ್ಮನಿಯ ಕರಾಳ ಹಸ್ತಕ್ಕೆ ಸಿಕ್ಕಿದ ಝೆಕೊಸ್ಲೊವಾಕಿಯಾದ ಸಂಕಟವನ್ನು ಕಂಡ ಬಾಲ್ಕನ್ ರಾಷ್ಟ್ರಗಳು ಇಂದು ಸುಸಂಘಟಿತವಾಗಿವೆ. ಅಲ್ಲದೆ ಈ ರಾಷ್ಟ್ರಗಳ ಹಿತವನ್ನು ಇಟಲಿ, ಟರ್ಕಿ, ರಷ್ಯಾ, ಬ್ರಿಟನುಗಳೂ ಬಯಸುತ್ತಿವೆ. ಜರ್ಮನಿಯು ಕಣ್ಣು ಈ ಕಡೆ ಬಂತೆಂದರೆ ಈ ರಾಷ್ಟ್ರಗಳು ಅದನ್ನು ಎದುರಿಸದಿರವು. ಬಾಲ್ಕನ್ ಪ್ರದೇಶದಲ್ಲಿ [illegible] ರಷ್ಯವೂ, ರೊಮೇನಿಯಾವನ್ನು ಹಾದು ಮುನ್ನಡೆಯಬಹುದು. ರಷ್ಯವು ಬಾಲ್ಕನಿಗೆ ನುಗ್ಗಿದರೆ ಬ್ರಿಟನಿಗೆ ಅದನ್ನು ಎದುರಿಸದೆ ಗತ್ಯಂತರವಿಲ್ಲ. ಹಾಗಾದರೆ [illegible] ಮಿತ್ರ ರಾಷ್ಟ್ರಗಳನ್ನು [illegible] ದಾಗಬಹುದು. ಪರಿಣಾಮವೇನು? ಪೂರಣ ಹೋಮ! ಯುರೋಪಿನ ಹಾಗೂ ಬಿಳಿ ಜನಾಂಗದ ಮಹಾಯಜ್ಞ.

ಇದರ ಪರಿಣಾಮವೇನಾದೀತು? ವಿವಿಧ ರಾಷ್ಟ್ರಗಳು ತಾವಾಗಿಯೇ ತಲೆಯೆತ್ತಿ ನಿಲ್ಲಲಾರವು. ಇದು ವರೆಗೆ ನಾಗರೀಕರೆಂದೆನಿಸಿಕೊಂಡಿದ್ದ ಬಿಳಿ ಜನಾಂಗದ ಪಾದದಡಿಯಲ್ಲಿ ನರಳುತ್ತಿದ್ದ ರಾಷ್ಟ್ರಗಳು ಎದ್ದು ನಿಲ್ಲಲಿವೆ. ಚೀನಾ, ಭಾರತ ಇವು ತಲೆಯೆತ್ತುವವು. ಆಧುನಿಕ ನಾಗರೀಕತೆಯ ಅತ್ಯುಚ್ಚ ಶಿಖರಕ್ಕೇರಿರುವ ಪಾಶ್ಚಾತ್ಯರಾಷ್ಟ್ರಗಳು ಆ ನಾಗರೀಕತೆಯಿಂದಾಗಿಯೇ ನಿರ್ನಾಮವಾಗುವವು. ಇದೀಗ ಇಂದಿನ ಹಾಗೂ ಮುಂದಿನ ಸಮರದ ವಿಹಂಗಮನೋಟ. ಕಾಲವಾಹಿನಿಯಲ್ಲಿ ಯಾವ ವಿಚಾರಗಳು ನಮ್ಮ ಮುಂದೆ ಬರುವವೋ ನಿರೀಕ್ಷಿಸುವಾ.

ಬಾತ್ಮಿ.

ಮುಸ್ಲಿಂ ಸಹೋದರರೇ,

ತಾರೀಕು 15-1-40ನೇ ಸೋಮವಾರ ನಾನು ಮಡಿಕೇರಿ ಲಸ್ಕರ್ ಮೊಹಲ್ಲದ ಮಸೀದಿಯನ್ನು ಹೋಗಿ ನೋಡಿದೆ. ಇದರ ಹೀನಸ್ಥಿತಿ ವಿಷಯ ನಾನು ವಿವರಿಸಲಾರೆ. ಇದನ್ನು ಬರೆಯಲು ನನಗೆ ತುಂಬಾ ನಾಚಿಕೆ ಮತ್ತು ವ್ಯಸನವಾಗುತ್ತೆ. ಮುಸ್ಲಿಂ ಲೀಗಿನವರು ಮುಸಲ್ಮಾನರ ಹಕ್ಕು ಬಾಧ್ಯತೆ ಕಾಪಾಡುವವರು. ಮಡಿಕೇರಿಯಲ್ಲಿ ಭಾರಿ ಕಾನ್ಫರೆನ್ಸ್ ಮಾಡಿಬಿಟ್ಟರು. ಆದರೆ ಈ ಮಸೀದಿಯನ್ನು ತಿರುಗಿ ನೋಡಲಿಲ್ಲವೆಂದು ಕಾಣುತ್ತದೆ. ಇವರಿಗೆ ನಂತರ ಹೆಸರಿನಲ್ಲಿ ಕಲಹ ಮಾತ್ರ ಬೇಕಾಗಿದೆ. ಅಲ್ಲದೆ ಮಡಿಕೇರಿ [illegible] ಮತ್ತು ಮಸೀದಿಗಳ ಮುಖಂಡರುಗಳು ಮತ್ತು ಇತರ ಮುಸಲ್ಮಾನ ಮುಖ್ಯಸ್ಥರು ಈ ಮಸೀದಿಯನ್ನು ತಿರುಗಿ ನೋಡಲಿಲ್ಲವೆಂದು ಕಾಣುತ್ತೆ. ನಾವು ಮುಸಲ್ಮಾನರು ಶಹೀದ್ ಗಂಜ್ ಮಸೀದಿ ಮತ್ತು ಶಿಕ್ಕರ್ ಮಸೀದಿಗಳ ವಿಷಯ ಚರ್ಚೆ ಮಾಡುವದರಲ್ಲಿ ಬಹು ಗಟ್ಟಿಗರು. ದೀಪದ ಕೆಳಗೆ ಕತ್ತಲೆ. ಲಸ್ಕರ್ ಮೊಹಲ್ಲದ ಮಸೀದಿ ಹಕ್ಕು ಬಾಧ್ಯತೆ ಕೇಳುವ ಕೋರ್ಟುಗಳು ಸಮೀಪದಲ್ಲೇ ಇವೆ.

ಆದ್ದರಿಂದ ದಯವಿಟ್ಟು ಈ ಮಸೀದಿಯನ್ನು ಕೂಡಲೆ ರಿಪೇರಿ ಮತ್ತು ವೈಟ್‌ವಾಷ್ ಮಾಡಿ, ಇದರ ಸುತ್ತಲೂ ಶುಚಿ ಮಾಡಿ ಬಂದೋಬಸ್ತು ಮಾಡಬೇಕಾಗಿ ಅತ್ಯಂತ ವಿನಯದಿಂದ ಅರಿಕೆ ಮಾಡುತ್ತೇನೆ.

ಅಬ್ದುಲ್ ಗಫೂರ್ ಖಾನ್.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ—ಅಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಅಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್.)
52-52 ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.

ಜಗತ್ತಿನಲ್ಲಿ ಸುಖವೇ ಇಲ್ಲ.

ಸುಖದ ಕನಸು ಸುಳ್ಳು.

ಹಿಂದೆ ಸುಖದ ಕಾಲವಿತ್ತು. ಅದು ಸತ್ಯಯುಗ. ನಾಲ್ಕು ಪಾದ ಧರ್ಮ ನೆಲೆಗೊಂಡಿತು. ಇಂದು ಹಾಗಲ್ಲ. ಹೊಸ ಹೊಸ ಶೋಧದಿಂದ ಮಾನವನ ಬುದ್ಧಿ ವಿಕಾಸಗೊಂಡಂತೆ ಆರಾಮುಚ್ಚೈಸಿ ಕಡೆಗೆ ಮನಸಿನ ಸೆಳೆತ ಹೆಚ್ಚಿತು. ಎಲ್ಲ ಮುಗಿದುಹೋಯಿತು ಆರೋಗ್ಯ ಕೆಟ್ಟಿರುತ್ತದೆ. ಮುಂತಾದ ಮಾತುಗಳನ್ನೆಲ್ಲ ನಾವು ಕೇಳಿರುತ್ತೇವೆ. ಮುಖ್ಯ ಅತೃಪ್ತಿಯೇ ಮನುಷ್ಯನ ಮನೋಭ್ರಾಂತಿಯ ಗುರಿ.

ಸುಖದ ಕಲ್ಪನೆಯು ನಾವು ಮಾಡಿಕೊಂಡಂತಿದೆ. ಸತ್ಯಯುಗದಲ್ಲಿ ಯುದ್ಧಗಳು ಆಗಿಲ್ಲವೆಂದಲ್ಲ. ಜಗತ್ತಿನ ಎಲ್ಲಾ ಭಾಗಗಳ ಇತಿಹಾಸದ ಪುಟ ಮಗುಚಿದರೆ ಇದ್ದುದರಲ್ಲಿ ತೃಪ್ತಿ ಪಡದೆ ಇಲ್ಲದುದನ್ನು ಅಪೇಕ್ಷಿಸಿ ಮೇರೆಯಿಲ್ಲದ ಸ್ವಪ್ನಗಳಲ್ಲಿ ಅಲೆಯುತ್ತಿರುವ ಮಾನವನ ಮನಸ್ಸಿಗೆ ಸುಖವೆಲ್ಲಿ? ಇಂಗ್ಲಂಡದ ಇತಿಹಾಸವನ್ನು ನೋಡಿದರೆ ಮೊಟ್ಟಮೊದಲು ರೋಮನರು ಆಪತ್ಕಾಲದಲ್ಲಿಯೇ ಧಾಳಿಯಿಟ್ಟರು. ಮಧ್ಯ ಯೂರೋಪದ ಇತಿಹಾಸವನ್ನು ಅವಲೋಕಿಸಿದರೆ ಜರ್ಮನರ ಧಾಳಿಯು ಅಲ್ಲಿಯ ಸಣ್ಣ ಪುಟ್ಟ ರಾಷ್ಟ್ರಗಳಿಗೆ ತಪ್ಪಿದ್ದಲ್ಲ. ರಶಿಯಾ ದೇಶದ ಇತಿಹಾಸದಲ್ಲಿಯೂ ಇದೇ ಬಗೆಯಾಗಿದೆ. ಅಮೇರಿಕದ ಇತಿಹಾಸವನ್ನು ತೆಗೆದರೆ, ಗುಳೆ ಕಟ್ಟಿಕೊಂಡು ಹೋದ ಐರೋಪ್ಯರು ಅಲ್ಲಿಯ ಮೂಲ ನಿವಾಸಿಗಳಾದ ಕೆಂಬಣ್ಣದ ಹಿಂದೀಯರನ್ನು ಯಾವ ತರದಲ್ಲಿ ಬೇಟೆಯಾಡಿ ಹೇಗೆ ಕೊನೆಗಾಣಿಸಿದರೆಂಬುದು ಸ್ಪಷ್ಟವಾಗದಿರದು.

ನಮ್ಮ ಭಾರತದ ಪುರಾಣೇತಿಹಾಸಗಳನ್ನೇ ಬಿಚ್ಚಿ ನೋಡೋಣ. ಕೃತಯುಗದಲ್ಲಿ ಅದೇ ಸತ್ಯಯುಗದಲ್ಲಿ ದೇವಾಸುರರ ಯುದ್ಧವಾಯಿತು. ಪರಶುರಾಮನು ಭೂಮಂಡಲದ ಮೇಲಿರುವ ಕ್ಷತ್ರಿಯರನ್ನು 21 ಸಲ ನಿಗ್ರಹಿಸಿ ಮಾನವನ ಮೇರೆ ಮೀರಿದ ಕ್ರೌರ್ಯದ ಪ್ರದರ್ಶನ ಮಾಡಿದನು. ತ್ರೇತೆಯಲ್ಲಿ ಮೂರು ಪಾದಗಳ ಧರ್ಮವು ನಿಂತಿರುವಾಗ ಇನ್ನಷ್ಟು ಅನಾಚಾರ, ಅತ್ಯಾಚಾರಗಳಾಗುವದು ಹೆಚ್ಚಿನದಲ್ಲ. ದ್ವಾಪರದಲ್ಲಿ ಕೌರವರ ಕಾಳಗ, ಕಲಿಯುಗದಲ್ಲಿ ಮನೆ ಮನೆ ಜಗಳ ನಾವು ನೋಡುತ್ತಿರುವೆವು.

ಅಂದಿನ ಮತ್ತು ಇಂದಿನ ಕಾಲಕ್ಕಿರುವ ವ್ಯತ್ಯಾಸವೇನು? ಎಂಬುದನ್ನು ವಿಚಾರಿಸುವ. ಅಂದಿನ ಮಾನವನ ಆಶೆ ಆಕಾಂಕ್ಷೆಗಳು ಇಷ್ಟು ಅಮಿತವಾಗಿರಲಿಲ್ಲ. ಶಕ್ಯವಿದ್ದಷ್ಟು ಸೌಹಾರ್ದತೆಯಿಂದ ಇರುವಂತೆ ಯತ್ನಿಸುತ್ತಿದ್ದರು. 'ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆ' ಯೇ ತಮ್ಮ ಧರ್ಮವೆಂದು ತಿಳಿದಿದ್ದರು. ಆದರೆ ದುಷ್ಟರನ್ನು ವಧಿಸಬೇಕಾದರೆ ಅಥವಾ ದಂಡಿಸಬೇಕಾದರೆ ಅಂದಿನ ಪ್ರಮಾಣದಿಂದ ಅದಕ್ಕೆ ತಕ್ಕುದಾದ ಧರ್ಮ ನಿಯಮವೊಂದನ್ನು ಇಟ್ಟಿದ್ದರು.

ಇಂದಾದರೂ ಧರ್ಮ ನಿಯಮವಿಲ್ಲವೆಂದಲ್ಲ. ನಾವೆಲ್ಲ ಅಂದರೆ ಇಂದಿನ ಜಗತ್ತಿನ ಯಾವತ್ತು ಮಾನವರು ವಿಶ್ವಬಂಧುತ್ವದ ಪುರಸ್ಕರ್ತರು. ಎಲ್ಲರನ್ನು ಸೋದರರೆಂದು ಕರೆಯಲು ಮುಂದೆ ಬಂದವರು, ಆದರೆ ಆರ್ಥಿಕ ಹಾಗೂ ನೈತಿಕ ದೃಷ್ಟಿಯಿಂದ ಉಳಿಯಬೇಕಾದ ಸಮಾಜ ಸ್ವಾಸ್ಥ್ಯವು ಇದೆಯೋ ಇಲ್ಲವೋ ಎಂಬುದು ಮುಖ್ಯ ಪ್ರಶ್ನೆ. ಹಿಂದಿನ ಕಾಲದಲ್ಲಿ ಆದೊಂದು ಬಗೆಯಿಂದ ಸಾಮಾಜಿಕ, ನೈತಿಕ ಹಾಗೂ ಆರ್ಥಿಕ ವಿಪತ್ಪರಂಪರೆಗಳಿಗೆ ತುತ್ತಾಗಿದ್ದರೆ ಇವತ್ತು ಇನ್ನೊಂದು ಬಗೆಯಿಂದ ಅಂಥಾ ಧಾಳಿಗೆ ಬಲಿ ಬೀಳುವದು ಕಂಡುಬರುತ್ತದೆ. ಆರ್ಥಿಕ ಹಾಗೂ ನೈತಿಕ ಪತನವು ಇಂದಾದರೂ ಸುಧಾರಿಸಿದೆ ಎಂದು ಅಂಕಿ ಸಂಖ್ಯೆಗಳ ಮೇಲೆ ಹೇಳಬರುವಂತಿಲ್ಲ. ಸಾಮಾನ್ಯವಾಗಿ ಪರಿಶೀಲಿಸಿದರೂ ನಾವು ಹೇಳಿಕೊಳ್ಳುವಷ್ಟು ಸ್ವಾಸ್ಥ್ಯವು ಇಂದಿನ ಸಮಾಜದಲ್ಲಿ ಆರ್ಥಿಕ ಹಾಗೂ ನೈತಿಕ ದೃಷ್ಟಿಯಿಂದ ಉಳಿದಿಲ್ಲವೆನ್ನಬೇಕಾಗುವದು. ಹಾಗಾದರೆ ಯಾವ ಕಾಲದಲ್ಲಿಯೂ ಸುಖವಿಲ್ಲವೆನ್ನುವದರಲ್ಲಿ ಸಂದೇಹವಿಲ್ಲ.

ಆದರೆ ಯಾವ ಕಾಲದಲ್ಲಿ ಯಾವ ಬಗೆಯಿಂದ ಸುಖದ ಹಾಗೂ ಕಷ್ಟದ ಪ್ರಮಾಣವಿತ್ತು ಎಂಬುದನ್ನು ವಿಚಾರಿಸಿದರೆ, ಕೆಲಕೆಲ ನಿಯಮಗಳು ಹಿಂದಿನ ಕಾಲದಲ್ಲಿ ಕೆಲಕೆಲ ಜನಾಂಗದವರಿಂದ ಪಾಲಿಸಲ್ಪಡುತ್ತಿದ್ದವು. ಭಾರತದಲ್ಲಿ ಹಾಗೂ ರೋಮ ರಾಜ್ಯದಲ್ಲಿ 'ಪಾತಿವ್ರತ್ಯ' ಕ್ಕೆ ವಿಶೇಷ ಮಹತ್ವವಿತ್ತು. ಭಾರತದಲ್ಲಿ ಸೀತೆಯ ಪಾತಿವ್ರತ್ಯವು ಜಗತ್ಪ್ರಸಿದ್ಧವಾಗಿದೆ.

ಎಲ್ಲ ಕಾಲದಲ್ಲಿಯೂ ಸಮಾಜ ಸ್ವಾಸ್ಥ್ಯಕ್ಕೆ ತಕ್ಕ ಶಿಸ್ತು ಬೇಕಾಗುತ್ತದೆ. ಜಾಣನು ದಡ್ಡನ ಸುಲಿಗೆ ಮಾಡುವದಾಗಲೀ, ಬಲಿಷ್ಠನು ಅಬಲನ ಸೂರೆ ಮಾಡುವದಾಗಲೀ ಸರ್ವಥಾ ನ್ಯಾಯವಲ್ಲ. ಇಂದಾದರೂ ಬುದ್ಧಿವಂತನು ಭೋಳೆ ಸ್ವಭಾವದವರ ಸರಳತನದ ಲಾಭವನ್ನು ಹೇಗೆ ಮಾಡಿಕೊಳ್ಳುತ್ತಿರುವರೆಂಬುದನ್ನು ನಾವು ನೋಡುತ್ತಿರುವೆವು.

ಓರ್ವ ಮಾನವನನ್ನು ಕೊಂದವನಿಗೆ ಫಾಶಿ ವಿಧಿಸುವದು ಜಗತ್ತಿನ ನಿಯಮವಿದ್ದರೂ ಅಸಂಖ್ಯ ಜನರ ಕೊಲೆ ಮಾಡುವ ಸರ್ವಾಧಿಕಾರಿಗಳನ್ನು ಯಾರೂ ಶಿಕ್ಷಿಸುವದಿಲ್ಲ. ದೈವವೇ ಶಿಕ್ಷಿಸಬೇಕು. ಅಥವಾ ಅವರ ಅಧಿಕ ಹಾಗೂ ಅಮಿತ ಕರ್ಮದ ಫಲದಿಂದ ಪ್ರತಿ ಕ್ರಿಯೆಯು ಹುಟ್ಟಿ ಅವರ ಸರ್ವನಾಶವಾಗಬೇಕಲ್ಲದೆ ಬೇರೆ ಮಾರ್ಗವಿಲ್ಲ.

ಸಮಾಜದಲ್ಲಿ ಎಲ್ಲರೂ ಸಮಾನರು. ಎಲ್ಲರಲ್ಲಿಯೂ ಗುಣದೋಷಗಳಿವೆ ಎಂಬುದನ್ನು ವಿಮರ್ಶಿಸುವಷ್ಟು ಸೌಹಾರ್ದತೆಯು ಎಂದಿನಂತೆ ಇಂದಿನ ಮಾನವನಲ್ಲಿಯೂ ಉಳಿದಿಲ್ಲ. ಜೀವನದಲ್ಲಿ ಸಣ್ಣ ನೌಕರನು ಎಷ್ಟೇ ಸಣ್ಣ ತಪ್ಪು ಮಾಡಿದರೂ ಅದಕ್ಕೆ 10 ಪಟ್ಟು ಶಿಕ್ಷೆ ವಿಧಿಸಲ್ಪಡುತ್ತದೆ. ದೊಡ್ಡ ನೌಕರನು ಪಾರಾಗುತ್ತಾನೆ. ಇದೇ ಮೇರೆಗೆ ಗಿರಣಿ, ದೊಡ್ಡ ದೊಡ್ಡ ಸಂಘ ಸಂಸ್ಥೆಗಳು; ಅಲ್ಲಿ ದೊಡ್ಡವರು ಅಂದರೆ ಮೇಲಿನವರು ಎಷ್ಟು ತಪ್ಪು ಮಾಡಿದರೂ ಮುಚ್ಚಿಹೋಗಿ ಕೆಳಗಿನವರನ್ನು ಮತ್ತಿಷ್ಟು ರಸಾತಳಕ್ಕೆ ಕುಸಿಯುವದು ಕಂಡುಬರುತ್ತಿದೆ ಮೇಲಿನವರಿಗೆ ಇದು ಗೊತ್ತಿಲ್ಲವೆಂದಲ್ಲ., ಆದರೆ ಆ ಪದ್ಧತಿಯಲ್ಲಿ ಬದಲಾವಣೆಯಾಗುವಷ್ಟು ಸಾಮೂಹಿಕ ಬುದ್ಧಿ ವಿಕಾಸವು ಜನರಲ್ಲಿ ಆಗಿಲ್ಲವೆನ್ನಬೇಕಾಗುವದು.

ಇಂದಿನ ಬ್ರಿಟನದ ಕಡೆಗೆ ದೃಷ್ಟಿಯನ್ನು ಹೊರಳಿಸುವ, ಭಾರತೀಯರ ಬೇಡಿಕೆಯು ನ್ಯಾಯವಾದದ್ದು ಎಂದು ಬ್ರಿಟನರಿಗೆ ಗೊತ್ತಿಲ್ಲವೆಂದಲ್ಲ. ತನ್ನ ಕೈಗೆ ಸಿಕ್ಕಿದ್ದನ್ನು ಬಿಟ್ಟುಕೊಡಲಿಕ್ಕೆ ಅವರಿಗೆ ಮನಸಿಲ್ಲ. ನೈತಿಕ ಹಾಗೂ ಮಾನವೀ ಸೌಜನ್ಯದಲ್ಲಿ ನಾವು ಅವರಿಗಿಂತ ಹೆಚ್ಚಿನವರು. ನಮ್ಮದು ಸತ್ಯಾಗ್ರಹ, ನಮ್ಮದು ಧರ್ಮ ಸಂಗರವೆಂದು ಗಾಂಧೀಜಿಯವರು ಜಗತ್ತಿಗೆ ಸಾರಿ ತೋರಿಸಿದ್ದರಿಂದ ನಮ್ಮ ಬೇಡಿಕೆಗೆ ಬ್ರಿಟನ್ನರ ದೃಷ್ಟಿಯಿಂದಲ್ಲವಾದರೂ ಜಗತ್ತಿನ ದೃಷ್ಟಿಯಿಂದ ಮನ್ನಣೆ ಸಿಕ್ಕಿದೆ.

'ಯೋಗ್ಯತೆಗೆ ತಕ್ಕ ಮನ್ನಣೆ' ಎಂಬುದು ನಾಣ್ಣುಡಿ. ಬ್ರಿಟಿಷರು ನಮ್ಮ ಅರ್ಹತೆದಾಸರಾಗಿರುವರೆಂದೇ ತಮ್ಮ ಭೇದತಂತ್ರದಿಂದ ಪುರಾವೆಗೊಟ್ಟು ರಾಜ್ಯವಾಳಲು ಹೊರಟಿದ್ದಾರೆ. ಎಂದಾದರೂ ಸ್ವರಾಜ್ಯ ಸಿಕ್ಕರೆ ನಮಗೆ ಸುಖವಿದೆ ಎಂಬುದು ನಿಜ. ನಮ್ಮದನ್ನು ನಾವು ಉಪಯೋಗಿಸಿ ಕೊಳ್ಳಬಹುದು.

ಇಂದಿನ ಜಗತ್ತು ಪ್ರಗತಿ ಹೊಂದುತ್ತಿದೆ. ಮುಂದೆ ನಾವೆಲ್ಲರೂ ಸುಖದ ಸಾಗರದಲ್ಲಿ ಮುಳುಗಬಹುದು. ಭೂಲೋಕವೇ ಸ್ವರ್ಗವಾಗಬಹುದು, ಎಂಬ ಮಾತು ಸುಳ್ಳು. ಈ ಮಾತು ನಮ್ಮಲ್ಲಿಯಂತೂ ಪಥ್ಯವಿಲ್ಲವೆಂಬಂತೆ ಭಾಸವಾಗುತ್ತದೆ. ಯುದ್ಧ ನಿಲ್ಲದಿರುವಾಗಲೇ ಒಕ್ಕಟ್ಟಿಲ್ಲದೆ ಪ್ರಗತಿಗಾಮಿಗಳಾಗಲು ಹೊರಟ ನಾವು ಮುಂದೆ ಏನನ್ನು ಮಾಡುವವೋ ಯಾರು ಬಲ್ಲರು. ಯಾವ ಕಾಲದಲ್ಲಿಯೂ ಎಲ್ಲಿಯೂ ಸುಖವಿಲ್ಲವೆಂಬ ಮಾತನ್ನು ತಿರುಗೊಮ್ಮೆ ಹೇಳಬೇಕಾಗುವದು. ಆದರೆ ಅಂಥ ಸುಖವು ದೊರಕಲಾರದೆಂದು ನಾವು ನಮ್ಮ ಸ್ವಾತಂತ್ರ್ಯದ ಹೋರಾಟದ ಕಡೆಗೆ ಹಾಗೂ ನಮ್ಮ ಅಸ್ತಿತ್ವದ ಕಡೆಗೆ ಲಕ್ಷ ಕೊಡದಿದ್ದರೆ ಮಾತ್ರ 'ಎಂದಾದರೂ ಮಾನವನಿಗೆ ಸಾವು ಕಟ್ಟಿಟ್ಟದ್ದು. ದುಡಿಯಬೇಕು ಏಕೆ?' ಎಂದು ಸುಮ್ಮನೆ ಕುಳಿತರೆ ಆತ್ಮಹತ್ಯೆ ಮಾಡಿಕೊಂಡಂತಾಗುವದೇನು ಬೇರೆ ಹೇಳಬೇಕಾಗಿಲ್ಲ.

ಕೆ. ವಿ.

ಮಾದರಿ ಮೈಸೂರಿನ ಒಂದು ಸ್ಯಾಂಪಲ್ .

ಲೇ. ನಿತ್ಯ ಕೃಷ್ಣಮೂರ್ತಿಯವರು.

ಮೊನ್ನೆ ಸೋಮವಾರಪೇಟೆಯಲ್ಲಿ ಒಂದು ಸತ್ಕಾರ ಕೂಟ ನಡೆಯಿತು. ಆ ಸಭೆಯ ಮಾನ್ಯ ಅಧ್ಯಕ್ಷರು ಕೊಡಗು ಮೈಸೂರಿಗೆ ಸೇರುವದು ಉಚಿತವೆಂದು ಅಭಿಪ್ರಾಯಪಟ್ಟರು. ಅದನ್ನು ನೋಡುವಾಗ ನನಗೆ ಆಶ್ಚರ್ಯವಾಯಿತು. ನಮ್ಮ ಕೆಲವು ಲೇಖಕರು ಮೈಸೂರು ಸಂಯೋಜನೆಯ ಲಾಭಾಲಾಭಗಳನ್ನು ಪರಿಷ್ಕಾರವಾಗಿ ಜನತೆಯ ಮುಂದಿಟ್ಟು ಮೈಸೂರು ಸಂಯೋಜನೆಯ ವಿಪ್ರಗಳನ್ನು ಸಮೂಲವಾಗಿ ಜನತೆಗೆ ನಿವೇದಿಸಿದ್ದರೂ, ಕೊಡಗನ್ನು ಮೈಸೂರಿಗೆ ಸೇರಿಸಬೇಕೆನ್ನುವ ಕೆಲವರ ಭ್ರಾಂತಿಯು ಬಿಟ್ಟಂತೆ ಕಾಣುವದಿಲ್ಲ. ಇದು ಆ ವ್ಯಕ್ತಿಗಳ ಸಂಕುಚಿತ ಭಾವನೆಯೋ, ಪತ್ರಿಕಾ ವಿಚಾರಗಳ ಮೇಲಿನ ಅನಾಸಕ್ತಿಯೋ ಯಾ ಮೈಸೂರಿನ ಮಾಯಾಜಾಲದ ಮರುಳುಬೂದಿಯೋ ತಿಳಿಯದು. ರಾಮರಾಜ್ಯವೆಂದು ಹೊಗಳುತ್ತಿರುವ ಮಾದರಿ ಮೈಸೂರಿನ ಒಂದು ಸ್ಯಾಂಪಲನ್ನು ಇವರ ಮುಂದಿಡುವದೇ ಈ ಲೇಖನದ ಉದ್ದೇಶ.

ಈಗ್ಯೆ ಕೆಲವು ದಿನಗಳಿಂದ ಮೈಸೂರು ದೇಶದ ಅನೇಕ ಆಸ್ಪತ್ರೆಗಳಲ್ಲಿ ಕಾಯಿಲಸ್ಥರಿಂದ ತಲಾ ಒಂದರ ಒಂದಾಣೆಯಂತೆ ಫೀಜು ವಸೂಲ್ಮಾಡುತ್ತಿರುವರೆಂದೂ, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತಲಾ ಎರಡಾಣೆಯಂತೆ ಸುಲ್ಕ ವಸೂಲ್ಮಾಡುತ್ತಿರುವರೆಂದೂ ತಿಳಿದುಬಂದಿದೆ. ಮೈಸೂರಿನಲ್ಲಿ ಬಡಜನತೆಯಿಂದ ಈ ರೀತಿ ಹಣ ಸಂಗ್ರಹಿಸುತ್ತಿರುವದು ನಮ್ಮ ಸಂಯೋಜನಾ ಧುರೀಣರಿಗೆ ತಿಳಿಯದೇನ.? ಈ ಫೀಜಿನಿಂದ ಬಡ ರೈತರಿಗೆ ಎಷ್ಟು ಕಷ್ಟವಾಗುತ್ತದೆಂದು ಮಹಡಿಯ ಮನೆಯಲ್ಲಿ ವಿಲಾಸಿಗಳಾಗಿ ಮೆರೆಯುವ ಈ ಸುಖಲೋಲುಪರಿಗೆ ಹ್ಯಾಗೆ ತಿಳಿಯಬೇಕು. ಬಡಪ್ರಜೆಗಳಿಂದ ಹಣ ಸುಲಿಗೆ ಮಾಡುವ ಮೈಸೂರಿನ ವಿಧಾನ ಇದೊಂದೇ ಅಲ್ಲ. ಕೊಡಗಿನೊಂದಿಗೆ ಹೋಲಿಸಿದರೆ ಮೈಸೂರಿನಲ್ಲಿ ಬಡರೈತನು ತನ್ನ ರಕ್ತದ ಹೊನಲನ್ನು ಹರಿಸಿ ಗಳಿಸಿದ ಹಣವನ್ನು ವ್ಯಯಮಾಡಿದಲ್ಲದೆ ಯಾವ ಸೌಲಭ್ಯವು ಆತನಿಗೆ ಲಭಿಸದೆಂದು ಹೇಳಬಹುದು. ಮಾದರಿ ಮೈಸೂರಿನ ಮಾದರಿ ವರ್ತನೆಯಿದು. ಹಳ್ಳಿ ಜನರಿಂದ ಕರ ಕಂದಾಯಗಳನ್ನು ಎತ್ತಿ ಪಟ್ಟಣಗಳನ್ನು ಮನರಂಜನವನ್ನಾಗಿ ಮಾಡಿ ಪಟ್ಟಣಿಗರ ಹಿತವನ್ನು ಬಯಸುವ ಮಾದರಿ ಮೈಸೂರಿನ ಮಾದರಿ ರಾಜನೀತಿಯು ವೈಖರಿಯಿದು. ಹೀಗೆ ಪ್ರತಿಯೊಂದು ದಿನವೆಂಬಂತೆ ಬಡರೈತನ ಮೇಲೆ ಕಂದಾಯದ ಭಾರವು ಹೇರಲ್ಪಡುತ್ತಿರುವ ಮಾದರಿ ಮೈಸೂರಿಗೆ ಕೊಡಗನ್ನು ಸೇರಿಸಿ ತಾವು ಉದ್ಯೋಗಗಳನ್ನೋ ಯಾ ಪ್ರಶಸ್ತಿಗಳನ್ನೋ ಗಳಿಸಿಕೊಳ್ಳಬೇಕೆಂಬುವ ಸಂಯೋಜಕರ ವರ್ತನೆಯು ಬಡವರ ಬಾಲಕರನ್ನು ಬಾವಿಗೆ ನೂಕಿ ಆಳ ನೋಡಲೆತ್ನಿಸುವ ಕುಹಕ ನೀತಿಯಲ್ಲದೆ ಬೇರಿಲ್ಲ. ಹೀಗೆ ಮಾದರಿ ಮೈಸೂರೆಂದು ಹೊರಗೆ ಹೆಗ್ಗಳಿಕೆಯನ್ನು ಕೊಚ್ಚಿಕೊಳ್ಳುವ ಮೈಸೂರು ಸರಕಾರದ ಅಂತರ್ಯವನ್ನರಿಯದೆ ಕೊಡಗನ್ನು ಸಂಯೋಜಿಸಲೆತ್ನಿಸುವ ಈ ಮುಖಂಡರಿಗೆ ಧಿಕ್ಕಾರವಿರಲಿ.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಒಡ್ಡಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ. ಪಿ. ಬಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಜಿ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ. ಕೆ. ನಾಗಪ್ಪನವರು.

ನಾಪೋಕ್ಲು—ಮೆ. ಬೆಳ್ಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಬಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟಾಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-18) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಶೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ಡಾಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಷರತ್ತುಗಳಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ವೀ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೇಲಿ, ಬೀಹಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಹೆಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-2

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.
ಸಂಪಾದಕ:— ಪಿ. ಐ. ಬೆಳ್ಯಪ್ಪ.
ವಾರ್ಷಿಕ ಚಂದಾ ರೂ. ೩—೮—೦
ತಾ. ೧೬—೨—೧೯೪೦.
ಸಂಪುಟ ೧೯] [ಸಂಚಿಕೆ ೩೮

MR. CAN'T : These are very hard days. No; I can't save anything.

MR. CAN. : I have opend a CUMULATIVE DEPOSIT a/c now in the CORPORATION; after this I find that **I CAN SAVE.**

From small amounts set apart every month fortunes can be built. It is not difficult to set apart a rupee (or multiple thereof) per month from one's earnings. Those who opened the CUMULATIVE DEPOSIT accounts know how easy it is to save.

Have you opened yours?

THE CANARA BANKING CORPORATION LIMITED.

(Incorporated in British India)

Estd. 1906.

52-8

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ,—ದ. ಕನ್ನಡ
(ಬ್ರಾಂಚ್: ಕುಮಟಾ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

52-13

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

(ಕೋ-ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ವೊಬಲಗು	–	47,810	0	0
ಜಮೂಬಂದ ಠೇವಣಾತಿ	–	2,13,262	0	4
ವಸೂಲಾದ ಕ್ಷೇಮನಿಧಿ	–	1,56,611	12	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	40,979	5	1
ತ್ರಿಫ್ಟ್ ಡಿಪಾಜಿಟ್ಟು	–	23,560	14	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೂನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೂನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದ ತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮಿ. ಎಸ್. ಎನ್. ರಾಮಶೆಟ್ಟಿಯವರು.

ತಾ. 1-1-1940

ಕೊಡಂದೇರ ಡಿ. ಮಾಚಯ್ಯ,

L. D. Sc. (College of Dentistry)
Ex-Supervisor, Laxmibai Patel Dental Hospital, Karachi.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ

ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (31) ನವೀನ ರೀತಿಯ ಚಿಕಿತ್ಸೆ.

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

[illegible] ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪೆನಿ,
(52-8) ಗಿರಗಾಂವ, ಮುಂಬಯಿ ೪,

ಮಾರಾಟಕ್ಕಿದೆ.

ಈ ಕೆಳಗೆ ಕಾಣಿಸಿದ ಸ್ವತ್ತುಗಳು ಮಾರಾಟ ಮಾಡಲ್ಪಡುವವು.

1. ವೀರರಾಜೇಂದ್ರಪೇಟೆ ಟೌನಿನಲ್ಲು ಅಂದರೆ ಬಸವನ ಗುಡಿ ಬೀದಿಯಲ್ಲಿ ಮಂಗಳೂರು ಹಂಚು ಹಾಕಿರುವ ಮು. ಸ. ನಂಬರು 52/1 ರ 8 ಸೆಂಟು ಮನೆ, ಇದಕ್ಕೆ ಸೇರಿದ 31 ಸೆಂಟು ಹಿತ್ತಾಡಿ, ಬಾವಿ ಸಹ ಇದೆ. ಇದಕ್ಕೆ ಸದ್ಯಕ್ಕೆ 15 ರೂಪಾಯಿ ಬಾಡಿಗೆ ಸಿಗುತ್ತೆ. ಇದರ ಅಂದಾಜು ಬೆಲೆ 3,000 ರೂಪಾಯಿಗಳು.

2. ಮಾರ್ಕೆಟ್ ಬಳಿ ಅಂದರೆ ಬಸ್‌ಸ್ಟ್ಯಾಂಡ್ ಕಡೆ ಎರಡು ಮಳಿಗೆಗಳೂ, ಕಣ್ಣಾನೂರು ರೋಡ್ ಕಡೆ ಮೂರು ಮಳಿಗೆಗಳೂ ಅಂತು ಜುಮ್ಲ ಐದು ಮಳಿಗೆಗಳು. ಸ. ನಂಬರು 56/2, 57/2, 55/1, 56/2, 57/1 ರಲ್ಲು 4 ಸೆಂಟಿನಲ್ಲು ಇರುವ ಮನೆಯ ಪೈಕಿ ಅರ್ಧ ಭಾಗ ಮತ್ತು 29 ಸೆಂಟಿನ ಹಿತ್ತಾಡಿ ಪೈಕಿ ಅರ್ಧ ಭಾಗ ಮಾತ್ರ. ಇದಕ್ಕೆ ಈಗ 32 ರೂಪಾಯಿಗಳು ಬಾಡಿಗೆ ಸಿಗುತ್ತೆ. ಇದರ ಅಂದಾಜು ಬೆಲೆ 4,500 ರೂಪಾಯಿಗಳು.

3. ಮಗ್ಗುಲ-ಐಮಂಗಲ ಗ್ರಾಮಕ್ಕೆ ಸೇರಿದ ಬೆಟ್ಟದಲ್ಲು ಇರುವ ಕಾಫಿ ತೋಟ. ಸ. ನಂಬರು 81/2, 81/3, 81/4, 81/5, 82/1, 82/2, 82/3, 82/4, 82/5ರ ಒಟ್ಟು ವಿಸ್ತೀರ್ಣ 43.49 ಎಕ್ರೆ. ಇದಕ್ಕೆ ಕೂಲಿ ಲೈನೂ, ಬಂಗ್ಲೆಯೂ ಮತ್ತು ಸೊಗಸಾದ ಕಣ ಸಹ ಇರುತ್ತೆ. ತೋಟಕ್ಕೆ ಹೋಗಲು ಗಾಡಿ ರಸ್ತೆ ಸಹ ಇದೆ. ಇದರ ಅಂದಾಜು ಬೆಲೆ 2,000 ರೂಪಾಯಿಗಳು.

ಖಾಯಸ್ ಮಾಡುವವರು ಈ ಕೆಳಗೆ ಕಾಣಿಸಿರುವವರಲ್ಲಿ ಎಲ್ಲಾ ವಿಚಾರಗಳನ್ನೂ ತಿಳಿಯಬಹುದು. ಅಲ್ಲದೆ ಕ್ರಯ ಹೆಚ್ಚು ಕಮ್ಮಿ ವಿಚಾರದಲ್ಲಿ ಈ ಅಡ್ರೆಸಿಗೆ ಪತ್ರವ್ಯವಹಾರ ಮಾಡಬಹುದು.

ವಿ. ಸಿ. ಜನ್ನಪ್ಪ,
ಕಂಟ್ರಾಕ್ಟರ್,
ನ್ಯೂ ಎಕ್ಸ್‌ಟೆನ್‌ಷನ್,
ಶಾಂತಿವಿಲಾಸ್, ಮಂಡ್ಯ.

4-1

Printed & Published by P. I. Belliappa, at 'Kodagu' Press Mercara for 'Kodagu' Ltd.

ಸ್ವತಂತ್ರ ಫಿನ್‌ಲೆಂಡು.

ಅನಾದಿಯಿಂದಲೂ ಸ್ವಾತಂತ್ರ್ಯವೇದಿಕೆಯಲ್ಲಿ ನಲಿದ ಫಿನ್ನರು. ಫ್ರಾನ್ಸಿನ ವಕ್ರದೃಷ್ಟಿಗೆ ಸಿಲುಕಿದರೂ ಸ್ವಾತಂತ್ರ್ಯವನ್ನು ಕಾಯ್ದುಕೊಂಡ ವೀರರು. ರಷ್ಯನರ ಕರಾಳ ಹಿಡಿತಕ್ಕೆ ಒಮ್ಮೆ ಸಿಲುಕಿದ್ದರೂ ಅದರಿಂದ ತಪ್ಪಿಸಿಕೊಂಡ ಧೀರರು. ಇಂದಾದರೂ ಸ್ವಾತಂತ್ರ್ಯ ರಕ್ಷಣೆಗಾಗಿ ರಷ್ಯಾವನ್ನು ಎದುರಿಸುವ ಯೋಧರು.

ಯೂರೋಪು ಚರಿತ್ರೆಯಲ್ಲಿ ಪ್ರಧಾನವಾಗಿ ಕಾಣುವ ದಿನಗಳು ಹಲವು. ಅವುಗಳಲ್ಲಿ ಹೋದ ವರ್ಷ ಅಂದರೆ 1939 ನೇ ಸೆಪ್ಟೆಂಬರು 1 ಮತ್ತು ನವಂಬರು 30 ಇವೆರಡೂ ಸದ್ಯಕ್ಕೆ ಬಹಳ ಮುಖ್ಯವಾದುವು. ಏಕೆಂದರೆ ಸೆಪ್ಟೆಂಬರು 1ನೇ ತಾರೀಕಿನ ದಿನ ಜರ್ಮನಿ ಪೋಲೆಂಡಿನ ಮೇಲೆ ಬಿತ್ತು. ನವಂಬರ್ 30 ನೇ ತಾರೀಕಿನ ರಷ್ಯಾ ಫಿನ್ಲೆಂಡ್ ಮೇಲೆ ಬಿತ್ತು. ಇವೆರಡು ಕೃತ್ಯಗಳಲ್ಲಿ ಮೊದಲನೆಯದು ಬ್ರಿಟಿಷ್ ಮತ್ತು ಫ್ರೆಂಚ್ ಚಕ್ರಾಧಿಪತ್ಯಗಳನ್ನು ಜರ್ಮನಿ ಮತ್ತು ಅದರ ಮಿತ್ರರ ಮೇಲೆ ತಿರುಗಿ ಬಿದ್ದು ಯುದ್ಧಕ್ಕೆ ಸಿದ್ಧರಾಗುವಂತೆ ಮಾಡಿತು. ಎರಡನೆಯದಾದ ಫಿನ್ಲೆಂಡ್ ಅಧ್ಯಾಯದಲ್ಲಿ ಜಗತ್ತಿನ ಎಲ್ಲ ಸ್ವತಂತ್ರ ರಾಷ್ಟ್ರಗಳೂ ಪಕ್ಷಾಂತರಗಳನ್ನು ಹಿಡಿದು ಸಂಗ್ರಾಮಕ್ಕೆ ಕೊಡೆತಟ್ಟುವಂತೆ ಬಲಾತ್ಕಾರ ಬರುತ್ತಿದೆ. ಆದರಿಂದ ಎರಡನೆಯದೇ ಬಲವತ್ತರವಾದುದೆನ್ನುವುದರಲ್ಲಿ ಸಂದೇಹವಿಲ್ಲ. ಅದರ ಪೂರ್ವೋತ್ತರಗಳನ್ನೆಲ್ಲಾ ತಿಳಿಯುವುದು ಕೂಡ ಅಂತೆಯೇ ಅವಶ್ಯಕ.

ಫಿನ್ನರು ರಷ್ಯನರಲ್ಲ.

ಫಿನ್ಲೆಂಡು ಪಶ್ಚಿಮೋತ್ತರ ರಷ್ಯಾ ಎಂಬುದೊಂದು ಸಾಮಾನ್ಯ ಭಾವನೆ. ಅದು ಪರ್ಯಾಯತ್ವೇನ ನಿಜವೂ ಹೌದು. ರಷ್ಯದ ವಾಯವ್ಯದಲ್ಲೇ ಅದಿರುವುದು. ಆದರೆ ಅದು ರಷ್ಯಾವೇ? ಎಂಬುದೊಂದು ಪ್ರಶ್ನೆ. ಅದು ರಷ್ಯಾವಲ್ಲ. ಆದಿಕಾಲದಿಂದ ರಷ್ಯಕ್ಕೂ ಅದಕ್ಕೂ ಸಂಬಂಧ ಅಷ್ಟಾಗಿ ಹೆಚ್ಚಾಗಿರಲಿಲ್ಲ. ನಾರ್ವೆ ಸ್ವೀಡನ್ನಿನ ಬೆಟ್ಟಗಾಡು ಉತ್ತರಕ್ಕೆ ಗುಡ್ಡಗಾಡಾಗಿ ಪರಿಣಮಿಸಿ ಫಿನ್ಲೆಂಡ್ ಪ್ರಸ್ಥಭೂಮಿಯಾಗಿದೆಯೆನ್ನಬಹುದು. ಫಿನ್ನರು ನಾರ್ಡಿಕ್ ಜನರು (ನಾರ್ವೇ ಜನರ ಕುಲದವರು.) ಈ ನಾರ್ಡಿಕ್ ಜನರು ನಾರ್ವೆ ಸ್ವೀಡನ್ನಿನಿಂದ ಮುಂದಕ್ಕೆ ಹೋಗಿ ಫಿನ್‌ಲೇಂಡ್ ಕ್ಷೇತ್ರದಲ್ಲಿ ನೆಲೆಸಲು ಆರಂಭಿಸಿದುದು 2000 ವರ್ಷ ಹಿಂದೆ. ಅದಕ್ಕೆ ಮುಂಚೆ ಅಲ್ಲಿ 'ಲಾಪ್' ಎಂಬ ಪಂಗಡದ ಜನರಿದ್ದರು. ಇವರೆಲ್ಲಾ ಬೆರೆತುಕೊಂಡು ಫಿನ್ಲೆಂಡನ್ನು ರಚಿಸಿದರು.

ಧರ್ಮದಾಸ.

ಫಿನ್ನರು ವಿಗ್ರಹಾರಾಧಕರಾಗಿ ಕ್ರಿಸ್ತಶಕ 12ನೇ ಶತಮಾನದ ವರೆಗೂ ಇದ್ದರು. ಆಗ ಸ್ವೀಡನ್ನಿಂದ ಕ್ರೈಸ್ತಮತವೂ ಅದರೊಡನೆಯೇ ಅಲ್ಲಿನ ರಾಜಪ್ರಭುತ್ವದ ಹೊರೆಯೂ ಫಿನ್ನರ ಮೇಲೆ ಧರ್ಮದಾನವಾಗಿ ಬಂದವು. ಆದರ ಪ್ರಭುತ್ವದ ಹೊರೆ ಫಿನ್ನರಿಗೆ ಗುಲಾಮಗಿರಿಯಾಗಿ ಬರಲಿಲ್ಲ. ಸಮಾನ ಮೈತ್ರಿಯಾಗಿ ಬಂತು. ಹಾಲು ನೀರು ಬೆರೆದಂತೆ ಹೊಸ ಫಿನ್ನರೂ ಹಳೇ ನಾರ್ಡಿಕ್ ಜನರೂ ಬೆರೆತು ತಮ್ಮ ಇಂದಿನ ನಾಗರಿಕತೆಯನ್ನು ಸೃಷ್ಟಿಸಿಕೊಂಡರು. ಅವರ ಇಂದಿನ ನಾಗರಿಕತೆ ಜಗತ್ತನ್ನೇ ಬೆರಗುಮಾಡುವಷ್ಟು ಮುಂದುವರಿದಿದೆ. ಫಿನ್ನರು ಸ್ವೀಡನ್ನಿನೊಡನಿದ್ದ 600-700 ವರ್ಷಗಳಲ್ಲೂ ಅವರಿಗೆ ಗುಲಾಮಗಿರಿಯಿರಲೇ ಇಲ್ಲ.

ರಷ್ಯನ್ ದಂಡಯಾತ್ರೆ.

ನೆಪೋಲಿಯನ್ನನ ಕಡೆಗಾಲಕ್ಕಾಗಿ ರಷ್ಯದ ಜಾರ್ ಮತ್ತು ಫ್ರಾನ್ಸಿನ ನೆಪೋಲಿಯನ್ ಇಬ್ಬರೂ ಫಿನ್ಲೆಂಡಿನ ಮೇಲೆ ವಕ್ರದೃಷ್ಟಿ ಹಾಕಿದರು. ಇದಕ್ಕೆ ಕಾರಣ ನೆಪೋಲಿಯನ್ನನಿಗೆ ಸ್ವೀಡನ್ ಮತ್ತು ಫಿನ್ನಿಷ್ ಜನರ ಮೇಲಿದ್ದ ಹೊಟ್ಟೆಯುರಿ. 'ಇಂಗ್ಲೆಂಡನ್ನು ಮುಟ್ಟಿ ಹಾಕೋಣ ನನ್ನ ಜೊತೆಗೆ ನೀವೂ ಒಪ್ಪಿ' ಅಂದನಂತೆ ನೆಪೋಲಿಯನ್. 'ಆಗದು' ಅಂದರಂತೆ ಸ್ವೀಡಿಷರೂ ಫಿನ್ನರೂ. ರಷ್ಯನ್ ಚಕ್ರವರ್ತಿಯನ್ನವನು ಎತ್ತಿಕಟ್ಟಿ ಮೇಲೆ ಕೆಡವಿದನಂತೆ. ಇದೀಗ ಆಗ ನಡೆದ ತಳತಂತ್ರ. ಇದಾದ್ದು 1809 ರಲ್ಲಿ. ಫಿನ್‌ಲೇಂಡ್ ಬಹು ಪರಾಕ್ರಮದಿಂದ ಹೋರಾಡಿ ಸೋತಿತು. ಅದರ ಪರಾಕ್ರಮಕ್ಕೆ ಒಂದು ಉತ್ತಮ ಫಲವೇ ದೊರೆಯಿತೆನ್ನಬಹುದು. ಏಕೆಂದರೆ ಆಗಿನ ಜಾರ್‌ಚಕ್ರವರ್ತಿಯೂ ಅದರ ರಾಷ್ಟ್ರಕ್ಕೆ ವಿಶಾಲ ತರದ ಆಂತರಸ್ವಾತಂತ್ರ್ಯವನ್ನು ಕಾಪಾಡಿಕೊಟ್ಟನು. ಅದು 1890 ರ ವರೆಗೂ ನಡೆದುಕೊಂಡು ಬಂತು. ಫಿನ್ನರು ತಮ್ಮ ನಾಗರಿಕತೆ, ಪ್ರಭುತ್ವ ಪ್ರತ್ಯೇಕತೆ ಎಲ್ಲವನ್ನೂ ಕಾಪಾಡಿಕೊಂಡು ಬಂದರು.

ದಬ್ಬಾಳಿಕೆ.

ಆದರೆ 1890 ರಲ್ಲಿ ಜಾರ್ ಆಗಿ ಬಂದ ಎರಡನೇ ನಿಕೊಲಾಸನ ಕಾಲಕ್ಕೆ ದಬ್ಬಾಳಿಕೆ ಆರಂಭವಾಯಿತು. ಫಿನ್ನಿಷ್ ಪಾರ್ಲಿಮೆಂಟಿನ ಒಪ್ಪಿಗೆಯಿಲ್ಲದೆ ರಷ್ಯಾವು ಫಿನ್ಲೆಂಡಿಗಾಗಿ ಏನು ಶಾಸನಗಳನ್ನು ಬೇಕಾದರೂ ಮಾಡಲು ಅವಕಾಶವಾಯಿತು. ಕಡೆಗೆ 1901 ರಲ್ಲಿ ಫಿನ್ನಿಷ್ ಸೈನ್ಯಗಳನ್ನು ಕೂಡ ತೆಗೆದು ಹಾಕಿ ಬಿಟ್ಟರು. ರಷ್ಯವೇ ರಕ್ಷಣಭಾರ ಪೂರ್ತಿ ವಹಿಸಿಕೊಂಡಿತು. ಅಂದಿನಿಂದೀಚೆಗೆ ಫಿನ್ನರಿಗೆ ದಾಸ್ಯದ ರುಚಿ ತಿಳಿಯಿತು.

ಸತ್ಯಾಗ್ರಹ.

ಸತ್ಯಾಗ್ರಹವಿಲ್ಲದಿದ್ದ ಕಾಲವೇ ಇಲ್ಲವೆನ್ನಲೂಬಹುದು; ದೇಶವೂ ಇಲ್ಲವೆನ್ನಲೂಬಹುದು. ಅಮೇರಿಕಾದಲ್ಲಿ ಸತ್ಯಾಗ್ರಹ ಬೇಕಾದಷ್ಟಾಗಿ ಸ್ವಲ್ಪ ಹಕ್ಕು ಹಕ್ಕುಗಳನ್ನು ಅಹಿಂಸೆ ಸಂಪಾದಿಸಿ ಕಡೆಗಾಲದಲ್ಲೇ ಘೋರ ಯುದ್ಧಕ್ಕಿಳಿಯದು? ಫಿನ್ನರೂ ರಷ್ಯನ್ ಶಾಸನಗಳನ್ನು ಎದುರಿಸಲು ಆರಂಭಿಸಿದರು. ನಾನಾ ತರದಲ್ಲಿ ಸತ್ಯಾಗ್ರಹ ಮಾಡಿದರು. ಆದರೆ ಅದು ಗಾಂಧಿ ಸತ್ಯಾಗ್ರಹದಷ್ಟು ಸಂಶೋಧನೆಗಳಾಗಿ ಶಾಸ್ತ್ರಸತ್ವಾಗಿರಲಿಲ್ಲ. ಫಿನ್ನರ ಸತ್ಯಾಗ್ರಹದಿಂದ ರಷ್ಯವು ವಿಧಿಯಿಲ್ಲದೆ ಫಿನ್ನರ ಸ್ವಾತಂತ್ರ್ಯವನ್ನೊಪ್ಪಿಕೊಂಡಿತು. ಆದರೂ ತನ್ನ ಕೈಬಿಗಿ ಪೂರ್ತಿ ಬಿಡಲಾರದೆ (ಕಂಡವರ ರಕ್ತದ ರುಚಿ ಕಂಡ ಪಶುಗಳಲ್ಲವೇ ಇವರು?) ತಮ್ಮ ಸೈನ್ಯವು ಮಾತ್ರ ಅಲ್ಲಿದ್ದು ಫಿನ್ಲೆಂಡಿನ ರಕ್ಷಣಭಾರ ವಹಿಸತಕ್ಕದೆಂದು ತೀರ್ಮಾನಿಸಿಬಿಟ್ಟರು. ಕಡೆಗೆ ಫಿನ್ನರು ಬಲವಂತವಾಗಿ ಅವರನ್ನು ಅಟ್ಟಿಬಿಟ್ಟಲ್ಲದೆ ಅವಕಾಶ ಉಳಿಯಲಿಲ್ಲ. 1906 ರಲ್ಲಿ ಸಾರ್ವತ್ರಿಕ ವೋಟು ಪಡೆದು ಬಂದ ಫಿನ್ನಿಷ್ ಸರಕಾರವು ಈ ಮಹಾಕಾರ್ಯವನ್ನು ಪೂರ್ಣಗೊಳಿಸಿತು. ಆದರೆ ಅದಕ್ಕಾಗಿ ಫಿನ್‌ಲೆಂಡ್ 12 ವರ್ಷ ಕಾಯಬೇಕಾಯಿತು. ರಷ್ಯದ ಕೈ ಪೂರ್ಣ ದುರ್ಬಲವಾಗಿ ಉಡುಗಿ ಅದರ ಅಂತರ್ವ್ಯವಸ್ಥೆ ಅಧ್ವಾನವಾಗುವ ಕಾಲ ಬರುವವನ್ನೇ ಕಾಯಬೇಕಾಯಿತು; ಏಕೆಂದರೆ ಅವರಾಗ ನಿರಸ್ತ್ರರಾದ ಬಡಪಾಯಿಗಳಾಗಿದ್ದರು. ರಷ್ಯವನ್ನು ಸೋಲಿಸಲು ಜರ್ಮನರೂ ಬೆಂಬಲವಾದರು. ಆದರೆ ಜರ್ಮನ್ ಸೈನ್ಯ ಬಂದುದು ಹಬ್ಬ ಕಳೆದ ಮೂರು ದಿನಕ್ಕೆ. ಆದರಿಂದ ಫಿನ್ನರ ಸ್ವಾತಂತ್ರ್ಯ ಸ್ವಯಾರ್ಜಿತವೆನ್ನಬೇಕು.

ಡಾರ್ಪಟ್ ಕೌಲು.

'ಹಳೆಯ ಗಡಿಗಳೇ ಇನ್ನು ಮುಂದೆ ಫಿನ್‌ಲೇಂಡಿನ ಗಡಿಗಳಾಗಿರತಕ್ಕದ್ದು. ಫಿನ್‌ಲೇಂಡಿಗೆ ಪೆಟ್ಸಾಮೊ ಪ್ರದೇಶವನ್ನು ರಷ್ಯಾ ಬಿಟ್ಟುಕೊಡತಕ್ಕದ್ದು. ಫಿನ್‌ಲೇಂಡ್ ಸರ್ವ ಸ್ವತಂತ್ರವಾಗಿದೆ' ಇವು ರಷ್ಯಕ್ಕೂ, ಫಿನ್‌ಲೇಂಡಿಗೂ 1920 ನೇ ಅಕ್ಟೋಬರ್ 14 ರಲ್ಲಾದ ಕರಾರಿನ ಷರತ್ತುಗಳು.

ಈಚಿನ ಫಿನ್‌ಲೇಂಡ್.

ಈ ಕೌಲಾದ ಮೇಲೆ ಫಿನ್ನರು ತಮ್ಮ ಸರ್ವತೋಮುಖವಾದ ಅಭಿವೃದ್ಧಿಯಲ್ಲಿ ಮನಸ್ಸಿಟ್ಟರು. ಯುದ್ಧಕಾಲದ ತಮ್ಮ ಸಾಲಸೋಲಗಳಿಗೆ ಕಂತುಗಳನ್ನು ತಪ್ಪದೆ ಕೊಟ್ಟುಕೊಂಡು ಬಂದಿರುವುದೆಂದರೆ ಫಿನ್‌ಲೇಂಡ್ ಒಂದೇ. ಅಮೇರಿಕದ ರೂಸ್ವೆಲ್ಟರು ಫಿನ್‌ಲೇಂಡಿಗೆ ಕೇಳಿದಷ್ಟು ಸಾಲ ಕೊಡಲು ಮುಂದೆ ಬಂದಿರುವುದರ ಗುಟ್ಟು ಅಲ್ಲಿದೆ. ಕ್ರಮವಾದ ಕಂತು ಕೊಡುವ ಗಿರಾಕಿ ಒಬ್ಬನಿದ್ದರೆ ಒಡನೆ ಸಾಲಕೊಟ್ಟು ಉದ್ಧಾರ ಮಾಡುವವರಷ್ಟು ಜನವಿಲ್ಲ? ಫಿನ್‌ಲೇಂಡಿನ ವ್ಯಾಪಾರ ಸರ್ವತೋಮುಖವಾಗಿ ಬೆಳೆದರೂ ರಷ್ಯ ಫಿನ್‌ಲೇಂಡ್ ವ್ಯವಹಾರ ಮಾತ್ರ ಸಲೀಸಾಗಲೇ ಇಲ್ಲ. ಅವರವರ ಬಾಂಧವ್ಯ ಸ್ವಲ್ಪ ಒಡನಾಟದ ಬೀಗರ ಲೆಕ್ಕದಲ್ಲೇ ನಿಂತಿತು. ರಾಜಾಜೋಕ್ ಎಂಬುದೊಂದು ನದಿ ರಷ್ಯಾ ಫಿನ್‌ಲೇಂಡ್‌ಗಳ ನಡುವೆ ಇದೆ. ಅದರ ಪಕ್ಕದಲ್ಲೇ ರಷ್ಯಾ ಫಿನ್‌ಲೇಂಡ್‌ಗಳನ್ನು ಕೂಡಿಸುವ ರೈಲುಮಾರ್ಗವಿರುವುದು. ಅದು ಅಫ್ಘಾನಿಸ್ಥಾನ ಭಾರತಗಳ ನಡುವೆ ಖೈಬರ್ ಕಣಿವೆಯಿದ್ದ ಹಾಗೆ ರಷ್ಯಾ ಫಿನ್‌ಲೇಂಡ್ ನಡುವಿನ ಏಕೈಕ ಮಾರ್ಗವಾಯಿತು. ಫಿನ್‌ಲೇಂಡಿನ ಒಟ್ಟು ರಫ್ತು ವ್ಯಾಪಾರದಲ್ಲಿ ಇನ್ನೂರರಲ್ಲಿ ಒಂದು ಪಾಲು ಮಾತ್ರ ರಷ್ಯದ ಕೂಡೆ ಆಗುತ್ತಿದ್ದುದು. ಫಿನ್‌ಲೇಂಡಿನ ಸರಕುಗಳು ಕಾಗದ, ಕಾಗದಕ್ಕೆ ಬೇಕಾಗುವ ಪಲ್ಪ್ (ಮರದ ಪುಡಿ,) ಕರಾವು, ಚೌಬೀನೆ, ಗಣಿ ಎಣ್ಣೆ ಮತ್ತು ಹಲವು ಲೋಹಗಳು. ಈ ಒಂದೊಂದೂ ಅಪಾರವಾಗಿ ಫಿನ್‌ಲೇಂಡಿನಿಂದ ರಫ್ತಾಗುತ್ತವೆ. ಅವಕ್ಕೆಲ್ಲಾ ಮುಖ್ಯ ಗಿರಾಕಿಯಾದುದು ಬ್ರಿಟನ್ ಮತ್ತು ಬ್ರಿಟಿಷ್ ಚಕ್ರಾಧಿಪತ್ಯ. ಹೀಗೆ ತನ್ನ ನೆರೆಯಲ್ಲಿದ್ದೂ ಕಂಡವರ ಬಾಂಧವ್ಯವನ್ನು ದೊಡ್ಡದು ಮಾಡಿಕೊಳ್ಳುತ್ತಿದ್ದ ಫಿನ್‌ಲೇಂಡ್ ಕಂಡರೆ ರಷ್ಯಕ್ಕೆ ರೇಗಬೇಡವೇ?

ಹೊಸ ಕೌಲು.

ಈ ನಡುವೆ 1934 ರಲ್ಲಿ ಒಂದು ಹೊಸ ಕರಾರು ಬೇರೆ ಆಯಿತು. ಅದರಲ್ಲಿ 'ನಮ್ಮ ನಮ್ಮ ನಡುವಿನ ಯಾವ ವ್ಯಾಜ್ಯವೇ ಇದ್ದರೂ ಒಬ್ಬೊಬ್ಬರ ಕಡೆಯಿಂದ ಇಬ್ಬಿಬ್ಬರು ಪಂಚಾಯತರನ್ನುಳ್ಳ ಸಭೆಯಲ್ಲಿಯೇ ಶಾಂತವಾಗಿ ತೀರ್ಮಾನವಾಗತಕ್ಕದ್ದು. ಉಭಯ ರಾಷ್ಟ್ರಗಳೂ ಯಾವುದೊಂದು ವ್ಯಾಜ್ಯ ತೀರ್ಮಾನಕ್ಕಾಗಿಯೂ ಕತ್ತಿ ಹಿಡಿಯಕೂಡದು. ಈ ಕೌಲು 1945 ರ ವರೆಗೆ ಜಾರಿಯಲ್ಲಿರತಕ್ಕದು.' ಈ ಷರತ್ತುಗಳಿದ್ದವು.

ರಷ್ಯದ ತೋಳತೀಟೆ.

1939 ವಿಷಮ ವರ್ಷ. ಅಂಕೆಯೂ ಕ್ರೂರವಲ್ಲ; ಪ್ರಪಂಚದ ಗ್ರಹಚಾರವೂ ಹಾಗೆಯೇ ಎಂಬುದು ಸ್ಪಷ್ಟವಾಯಿತಲ್ಲ! 5-10-39 ರಲ್ಲಿ ರಷ್ಯಾ ಸರಕಾರದಿಂದ ಫಿನ್‌ಲೇಂಡ್ ಸರಕಾರಕ್ಕೊಂದು ಆಮಂತ್ರಣ ಬಂತು. ಅದರಲ್ಲಿ 'ತುರ್ತು ರಾಜಕಾರಣ ಪರ್ಯಾಲೋಚನೆಗಾಗಿ ನಿಮ್ಮ ಪ್ರತಿನಿಧಿಯನ್ನು ಕಳುಹಿಸಿ' ಎಂದು ಆಹ್ವಾನಿಸಿತ್ತು. ಅದರ ಅರ್ಧ ಆಜ್ಞೆ ಅರ್ಧ ಚೇಷ್ಟೆ ಸ್ವರೂಪ ಫಿನ್ನರಿಗೆ ಹೊಳೆದುಹೋಯಿತು. ಅಷ್ಟು ಹೊತ್ತಿಗಾಗಲೇ ಲಿಟ್ವಿಯ, ಎಸ್ತೋನಿಯಾ ಲಿತ್ವೇನಿಯಾ, ಪೋಲೆಂಡ್ ವ್ಯವಹಾರವೆಲ್ಲಾ ಮುಗಿದಿತ್ತಷ್ಟೆ. ಫಿನ್‌ಲೇಂಡಿಗೆ ಸ್ವಲ್ಪ ಅಸಮಾಧಾನವೂ ಆಯಿತು. ಆದರೂ 'ರಾಜಕಾರಣ ಮರ್ಯಾದೆಗಾಗಿ' ತಮ್ಮ ಪ್ರತಿನಿಧಿ ಶ್ರೀ ಡಾ. ಪಾಕೀವಿಯನ್ನು ಕಳುಹಿಸುತ್ತಾ 'ನಾವು ತಟಸ್ಥರು. ಏನೇ ಆದರೂ ಆ ನೀತಿ ಬಿಡಲಾಗುದಿಲ್ಲ' ಎಂದು ಪ್ರಕಟಿಸಿದರು. 11-10-39 ರಲ್ಲಿ ಮಾಸ್ಕೋಗೆ (ರಷ್ಯ ರಾಜಧಾನಿ) ಫಿನ್ನಿಷ್ ನಿಯೋಗ ಬಂತು. ಮಾರನೆ ದಿನವೇ ಮಾತುಕತೆಗಳು ಮೊದಲಾದವು. ರಷ್ಯನರು ಕೇಳಿದ ಅಧಿಕಾರ, ಉಪಕಾರಗಳೆಲ್ಲಾ ಭೂಪಟದಲ್ಲೇ ಚಿತ್ರಿತವಾಗಿದೆ. ಲೆನಿನ್‌ಗ್ರಾಡ್ ಸುತ್ತಿನ ಭೂಮಿಯಲ್ಲೇ ಫಿನ್ನರ ನೆಲಗೋಟೆ ಮ್ಯಾನರ್ ಹೀಂಲೈನ್ ಇದೆ. ಅದೇ ಫಿನ್‌ಲೇಂಡಿನಲ್ಲೆಲ್ಲಾ ಅತ್ಯಂತ ಜನಭರಿತ ಪ್ರದೇಶ. ಅದು ರಷ್ಯನರ ಪಾ

ರಾಮಗಡದ ಪರಿಚಯ.

೫೩ ನೇ ಕಾಂಗ್ರೆಸ್ ಅಧಿವೇಶನ ನಡೆಯುವ ಹಳ್ಳಿಯಾದ ರಾಮಗಡದ ಗತ ವೈಭವ. ಒಂದು ಕಾಲಕ್ಕೆ ಅರಸರ ನಿವಾಸಸ್ಥಾನವಾಗಿದ್ದ ರಾಮಗಡವು ಇಂದು ಕೇವಲ ಒಂದು ಗ್ರಾಮವಾಗಿದೆ. ಬ್ರಿಟಿಷರ ಆಳಿಕೆಯಿಂದ ಕ್ಷಯಿಸಿ ಕುಗ್ರಾಮವಾಗಿರುವ ಈ ರಾಮಗಡದ ಪ್ರಕೃತಿ ವೈಭವ.

ಈ ವರ್ಷ ಅಖಿಲ ಭಾರತ ಕಾಂಗ್ರೆಸಿನ ಅಧಿವೇಶನವು ಬೀಹಾರ್ ಪ್ರಾಂತದ ರಾಮಗಡವೆಂಬ ಹಳ್ಳಿಯೊಂದರಲ್ಲಿ ನೆರವೇರಲಿರುವುದೆಂದು ಈಗಾಗಲೇ ಹಲವರಿಗೆ ತಿಳಿದಿರುವ ವಿಷಯವಾಗಿದೆ. ಇತ್ತೀಚೆಗೆ ಕಾಂಗ್ರೆಸು ಅಧಿವೇಶನಗಳನ್ನು ಹಳ್ಳಿಗಳಲ್ಲಿ ಕೂಡಿಸಿ, ದೇಶದ ಸ್ವಾತಂತ್ರ್ಯ ಸಿದ್ಧತೆಯ ವಿಷಯವನ್ನು ಹಳ್ಳಿಗರ ಹೃದಯದಲ್ಲಿ ನೆಲೆಯೂರುವಂತೆ ಮಾಡುವ ಮುಖಂಡರ ಅಪೇಕ್ಷೆಯಿಂದಾಗಿ, ಇಂದು ಹಲವು ಹಳ್ಳಿಗಳು ಭಾರತದ ಇತಿಹಾಸದಲ್ಲಿ ಎಂದೆಂದೂ ಅಚ್ಚಳಿಯದ ಹೆಸರನ್ನು ಪಡೆದಿವೆ. ಫೈಜಪುರ, ತ್ರಿಪುರಿ, ರಾಮಗಡ ಇವುಗಳನ್ನು ಮರೆಸ ಭಾರತೀಯನಾರು? ಈ ವರ್ಷದ ಸ್ವಾತಂತ್ರ್ಯ ಹಬ್ಬವು ನೆರವೇರಲಿರುವ ರಾಮಗಡದ ಇತಿಹಾಸ, ವೈಶಿಷ್ಟ್ಯಗಳನ್ನು ಇಲ್ಲಿ ವಿವರಿಸಲಾಗಿದೆ.

ಉಜ್ವಲ ಇತಿಹಾಸ.

ರಾಮಗಡವೆಂಬ ಈ ಹಳ್ಳಿಯು ಬಿಹಾರ ಪ್ರಾಂತಕ್ಕೆ ಸೇರಿದ ಛೋಟಾನಾಗಪುರದಲ್ಲಿದೆ. ಹಜಾರಿಬಾಗ ಎಂಬುದು ಛೋಟಾನಾಗಪುರದಲ್ಲಿನ ಒಂದು ನಗರ. ಈ ನಗರದಿಂದ ರಾಂಚಿಗೆ ಹೋಗುವ ಮಾರ್ಗದಲ್ಲಿ, ಹಜಾರಿಬಾಗಿನಿಂದ ಸುಮಾರು 20 ಮೈಲು ದೂರದಲ್ಲಿ ಈ ರಾಮಗಡ ಹಳ್ಳಿಯಿದೆ. ದಾಮೋದರ ನದಿಯು ಈ ಹಳ್ಳಿಯಲ್ಲಿ ಹರಿಯುತ್ತದೆ. ಅಲ್ಲಿ ಹಿಂದೆ ರಾಜವಂಶಗಳು ಆಳಿದ್ದವು. ಕೋಟೆಕೊತ್ತಳಗಳು ಇಂದೂ ಆ ವಿವರವನ್ನು ತಿಳಿಸುತ್ತವೆ. ಅಲ್ಲಿನ ರಾಜರ ಮೇಲೆ 1740ರಲ್ಲಿ ಮುಹಮ್ಮದೀಯರು ಆಕ್ರಮಣವನ್ನು ಮಾಡಿದರು. ಆದರೆ ದಕ್ಷಿಣದಲ್ಲಿ ಮರಾಠರ ಪ್ರಾಬಲ್ಯವು ಹೆಚ್ಚಾಗಲು ಮುಹಮ್ಮದೀಯ ರಾಜರು, ಅಲ್ಲಿನ ಆಕ್ರಮಣಬಿಟ್ಟು ಹಿಂತೆರಳಿದರು. ಆ ಮೇಲೆ ಲೆ. ಗೋರ್ಡನರ ಅಧೀನದಲ್ಲಿ ಬ್ರಿಟಿಷರು ಅಲ್ಲಿನ ಅರಸರ ಮೇಲೆ ಆಕ್ರಮಿಸಿ ರಾಮಗಡವನ್ನು ಕಿತ್ತುಕೊಂಡರು. ಅಲ್ಲಿನ ಅರಸರನ್ನು ಪಟ್ಟದಿಂದ ಇಳಿಹಾಕಿದರು. ಆ ಮೇಲೆ ದಿನದಿಂದ ದಿನಕ್ಕೆ ರಾಮಗಡವು ಕ್ಷೀಣವಾಗುತ್ತಾ ಬಂದು, ಒಂದು ಕುಗ್ರಾಮವೆನಿಸಿತು.

ಜನರು ಮತ್ತು ಭಾಷೆ.

ಈ ಜಿಲ್ಲೆಯಲ್ಲಿ ಬಹುಮಂದಿ ಜನರು ಹಿಂದುಗಳಾಗಿದ್ದಾರೆ. ಕ್ರೈಸ್ತರು, ಪಾದ್ರಿಗಳು, ಸಂತಾಳ, ಮುಂಡಾಲ ಮೊದಲಾದ ಲಕ್ಷಾವಧಿ ಮೂಲ ನಿವಾಸಿಗಳನ್ನು ಇತ್ತೀಚೆಗೆ ಕ್ರೈಸ್ತ ಮತಕ್ಕೆ ಪರಿವರ್ತಿಸಿದ್ದಾರೆ. ಇಲ್ಲಿನ ಹೆಚ್ಚಿನ ಜನರ ಭಾಷೆಯು ಮಗಹಿಯು. ದಕ್ಷಿಣ ಪೂರ್ವ ಭಾಗದಲ್ಲಿ ಕರ್ಮಾಲಿಯೆಂಬ ಭಾಷೆಯನ್ನೂ ಆಡುತ್ತಾರೆ. ಕೆಲವರು ಮುಂಡಾರಿಯೆಂಬ ಭಾಷೆಯನ್ನೂ ಆಡುತ್ತಾರೆ. ಇವೆಲ್ಲಾ ಬಂಗಾಳಿ ಮಿಶ್ರಿತ ಹಿಂದೀ ಭಾಷೆಗಳಾಗಿವೆ. ಕೆಲವರು ಇಲ್ಲಿ ದ್ರಾವಿಡ ಭಾಷೆಯನ್ನಾಡುವವರೂ ಇದ್ದಾರೆ.

ದರ್ಶನೀಯ ಸ್ಥಳಗಳು.

ರಾಂಚಿಯು ಛೋಟಾ ನಾಗಪುರದ ಪ್ರಧಾನ ನಗರ. ಬೀಹಾರ ಸರಕಾರದ ಗ್ರೀಷ್ಮಕಾಲದ ವಾಸಸ್ಥಾನವಿದು. ಈ ನಗರವು ಎತ್ತರವಾದ ಬೆಟ್ಟದ ಮೇಲೆ ಕಟ್ಟಲ್ಪಟ್ಟದ್ದು, ಭವ್ಯವಾಗಿದೆ. ಕೆಲ ಕಾಲ ಹಿಂದೆ ಅರಣ್ಯಗಳ ನೆಲವೀಡಾಗಿದ್ದು ಇಂದು ಜನವಾಸ ರಮಣೀಯವಾಗಿದೆ. ಇಲ್ಲಿರುವ ಮುರಾಬಾದ್ ಹಿಲ್ ಎಂಬ ಬೆಟ್ಟವೊಂದರ ಮೇಲೆ ಕವೀಂದ್ರ ರವೀಂದ್ರರ ಒಂದು ಸುಂದರ ಬಂಗಲೆಯಿದೆ. ರಾಂಚಿಯಲ್ಲಿ ಒಂದು ಪ್ರದರ್ಶನೀಯವಾದ ಸರೋವರವಿದೆ.

ರಾಂಚಿಯ ಆರು ಮೈಲು ದೂರದಲ್ಲಿ ಜಗನ್ನಾಥಪುರವೆಂಬ ನಗರವೊಂದಿದೆ. ಛೋಟನಾಗಪುರದಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ ಮತದವರಿದ್ದಾರೆ. ಇಲ್ಲಿ ಓರಾಮ ಎಂಬ ಮೂಲನಿವಾಸಿಗಳು ಛೋಟನಾಗಪುರವು ತಮ್ಮ ಮೂಲಸ್ಥಳವೆಂದೂ ಅಲ್ಲಿ ಇತರರಿಗೆ ಯಾವ ಅಧಿಕಾರವಿಲ್ಲವೆಂದೂ ಚಳವಳ ಹೂಡುತ್ತಿದ್ದಾರೆ. ಈ ಚಳವಳವು ಈಗೀಗ ಪ್ರಬಲವಾಗುತ್ತಿದೆ.

1831ರಲ್ಲಿ ಮೂಲನಿವಾಸಿಗಳು ಒಂದು ದಂಗೆಯೆಬ್ಬಿಸಿದ್ದರು. ಅನೇಕ ಹಿಂದು ಮುಸ್ಲಿಂ ಕ್ರೈಸ್ತರನ್ನು ಸುಟ್ಟುಬಿಟ್ಟಿದ್ದರು.

ಪ್ರಕೃತಿಯ ಪ್ರಸನ್ನತೆ.

ಇದು ಕಾಡು ಬೆಟ್ಟಗಳ ದೇಶ. ಇತ್ತೀಚೆಗೆ ಜನವಾಸ ಯೋಗ್ಯವಾಗಿ ಆಗಿದೆ. ಇಲ್ಲಿನ ಕಾಡುಗಳಲ್ಲಿ ಹುಲಿ, ಕರಡಿ, ಸಿಂಹಗಳೇ ಮೊದಲಾದ ಹಿಂಸ್ರ ಜಂತುಗಳಿವೆ.

ಖನಿಜಗಳು ಇಲ್ಲಿ ತುಂಬಾ ಸಿಗುತ್ತವೆ. ಅನೇಕ ಗಣಿಗಳಿವೆ. ಕಲ್ಲಿದ್ದಲು, ಅಭ್ರ, ತಾಮ್ರ, ಬಿಳಿಮಣ್ಣು, ರಕ್ತಮಣಿಗಳು ಇಲ್ಲಿ ದೊರೆಯುತ್ತವೆ. ಇಲ್ಲಿ ಒಂದು ಬಿಸಿ ನೀರಿನ ಪ್ರವಾಹವಿದೆ.

ಅಂತೂ ಈ ಸಲದ ಅಧಿವೇಶನದ ಸ್ಥಳವು ಬಹಳ ಪ್ರೇಕ್ಷಣೀಯವಾಗಿದ್ದು, ಭಾರತದ ಹಳ್ಳಿಯೊಂದರ ರಮಣೀಯ ದರ್ಶನವನ್ನು ಮಾಡಿಸುವಂತಿದೆ.

ಮಹತ್ವದ ಅಧಿವೇಶನ.

ಈ ಸಲದ ಕಾಂಗ್ರೆಸು ಅಧಿವೇಶನವು ಹಲವು ವಿಧಗಳಿಂದ ಮಹತ್ವವಿದೆ. ಅಖಿಲ ಪ್ರಚಂಡ ರಾಜಕೀಯ ವಾತಾವರಣವು ಇಂದು ಕೆಟ್ಟಿದೆ. ಪ್ರಪಂಚದ ಯುದ್ಧದಲ್ಲಿ ಬ್ರಿಟಿಷ್ ಸರಕಾರವು ಭಾಗಿಯಾಗಿದೆ. ತನ್ನ ಅಧೀನದಲ್ಲಿದೆಯೆಂಬುದರಿಂದ, ಇಂದು ಭಾರತವನ್ನು ಪ್ರಪಂಚ ಯುದ್ಧದಲ್ಲಿ ಸೇರಿಸಿದೆ. ಈ ಬಗ್ಗೆ ಭಾರತದ ಮುಖಂಡರು ತೀವ್ರ ಅಸಮಾಧಾನವನ್ನು ಸೂಚಿಸಿದ್ದು ಮಾತ್ರವಲ್ಲದೆ, ತಮ್ಮ ಅಸಮಾಧಾನದ ಗುರುತಾಗಿ ಇಂದು ಅಧಿಕಾರವನ್ನು ಬಿಟ್ಟುಕೊಟ್ಟು ಬಂದಿದ್ದಾರೆ. ಮುಂದಿನ ಹೆಜ್ಜೆಯು ಆಂದೋಲನವಾಗಬಹುದು. ಆ ಕುರಿತು ತೀವ್ರ ಚರ್ಚೆ ನಡೆದು ಅಲ್ಲಿ ನಿಷ್ಕರ್ಷೆಯಾಗಬಹುದು.

ಹಿಂದೂ ಮುಸ್ಲಿಂ ಐಕ್ಯ.

ಹಿಂದೂ ಮುಸ್ಲಿಂ ಐಕ್ಯದ ವಿಷಯವಾಗಿ ಕಾಂಗ್ರೆಸು ಹೊಸ ಧೋರಣೆಯನ್ನು ನಿಶ್ಚಯಿಸಿದೆಯೆಂದು ತಿಳಿಯುತ್ತದೆ. ಮುಸ್ಲಿಂ ಲೀಗಿನವರೊಡನೆ ಮುಂದಕ್ಕೆ ಮಾತುಕತೆಯಿಲ್ಲವೆಂದು ಸಾರಿದ ಕಾಂಗ್ರೆಸು ಮುಖಂಡರು ಹಿಂದೂ ಮುಸ್ಲಿಂ ಐಕ್ಯದ ಹೊಸ ಮಾರ್ಗವೊಂದನ್ನು ಕಂಡಿದ್ದಾರೆ. ಜನತಾ ಸಂಪರ್ಕ ಸಂಬಂಧಗಳನ್ನು ಕಾಂಗ್ರೆಸಿನಲ್ಲಿ ಹೆಚ್ಚಿಸಿ, ಅಖಿಲಭಾರತ ಮುಖಂಡರಾದ ಕಾಂಗ್ರೆಸಿನಲ್ಲಿರುವ ಮುಸ್ಲಿಂ ಮುಖಂಡರು ರಾಷ್ಟ್ರದಲ್ಲಿ ಸಂಚಾರ ಮಾಡುವಂತೆ ಬಿನ್ನಯಿಸಿಕೊಳ್ಳುವ ಸಂಭವವಿದೆ. ಇದೇ ದೃಷ್ಟಿಯಿಂದ ಈ ಸಲದ ಅಧ್ಯಕ್ಷ ಪೀಠವು ಮೌಲನಾ ಆಜಾದರಿಗೆ ಸಲ್ಲಬಹುದೆಂದು ಕಲ್ಪನೆಯಾಗಿದೆ.

'ಸ್ವ ಮಾ.'

ಲಾಗಬೇಕು. ರಷ್ಯನರ ಸಂಪತ್ಸಾಧನೆಗೆ ಫಿನ್‌ಲೇಂಡ್ ಪ್ರಾಣತೆರಬೇಕು. ಪೆಟ್‌ಸಮೋದಿಂದ ಅತ್ಯಂತ ಮುಖ್ಯ ಬಂದರನ್ನು ರಷ್ಯಕ್ಕೆ ಬಿಡಬೇಕು........ಹ್ಯಾಂಗೋ ಬಿಟ್ಟುಕೊಡಿ........ಬೋತ್ನಿಯಾ ಕೊಲ್ಲಿಯಲ್ಲಿ ಫಿನ್‌ಲೇಂಡಿನ ತೀರಕ್ಕೆಲ್ಲಾ ರಷ್ಯಾ ಒಡೆಕಾರ-ರಕ್ಷಕ ನಂತಿರಬೇಕು. ಇವೇ ಮೊದಲಾದ ಷರತ್ತುಗಳು ರಷ್ಯಾದ್ದು.

ಯಾರಾದರೂ ಹೀಗೆಂದರೆ?

ಖೈಬರ್, ಬೋಲಾನ್‌ದಾರಿಗಳ ರಕ್ಷಣೆ ನಮಗಿರಲಿ. ಕರಾಚಿ, ಬೊಂಬಾಯಿ, ಗೋವಾ, ಭಟ್ಕಳ್, ಮದರಾಸ್, ರಂಗೂನ್ ಇವಿಷ್ಟರ ಮೇಲಾಡಳಿತ ನಮ್ಮದಾಗಿರಲಿ. ಪರರಾಷ್ಟ್ರ ಸಂಬಂಧದಲ್ಲಿ ನೀವು ನಮ್ಮ 'ಷಾಗಿರ್ದ' ಫೈಲ್ವಾನ್ ಆಗಿರಿ; ಎಂದು ನಾಳೆ ಸ್ವತಂತ್ರ ಭಾರತಕ್ಕೆ ಯಾರಾದರೂ ಪರದೇಶಿಗಳು ಹೇಳಲು ಬಂದರೆ! ನಾವೇನನ್ನುದೇವು?

ಫಿನ್‌ಲೇಂಡಿನ ಉತ್ತರ.

ರಷ್ಯಕ್ಕೆ ಇಷ್ಟಬಂದ ಹಲವು ಪ್ರದೇಶಗಳಲ್ಲಿ ಸಹಾನುಭೂತಿಯೊಡನೆ ಪರಿಶೀಲಿಸಿ ಹಲ ಕೆಲವು ರಿಯಾಯಿತಿ ಕೊಡಲು ಫಿನ್ಲೇಂಡ್ ಸಿದ್ಧವಾಗಿದೆ. ಆದರೆ ರಷ್ಯಾ ಈಗ ಕೇಳುವುದು 'ಒಂದು ಸೇರೂವಾವತ್ತೂ ಕ ಎದೆಯ ಮಾಂಸ ಕೊಡಿ' ಎಂದು ಹಾಗಿದೆ. ಅದಾಗಲಾರದು-ಎಂದರು ಸರಿ, ಸಂಬಂಧ ಒಡೆಯಿತು. 15 ದಿನ ರಷ್ಯನರೂ ರೇಡಿಯೋ (ಆಕಾಶವಾಣಿ) ಪತ್ರಿಕೆಗಳಲ್ಲಿ ದುರಾರೋಪ, ಜಿಪರಿಕೆ, ಹಾಕಿ ನೋಡಿದರು ಫಿನ್ನರೂ ಜಗ್ಗಲಿಲ್ಲ. ಇಷ್ಟರಲ್ಲಿ ನವಂಬರೂ ಕಳೆಯುತ್ತ ಬಂದಿತ್ತು.

ನಗಾರಿ ಹೊಡೆದರು.

29-11-39 ರಲ್ಲಿ ರಷ್ಯ-ಫಿನ್ಲೇಂಡ್ ಗಡಿಯಲ್ಲಿ ಫಿನ್ನರು ಗುಂಡು ಹಾರಿಸಿ ರಷ್ಯನರನ್ನು ಕೊಂದರೆಂಬ ನೆಪಮಾಡಿ 'ನಮ್ಮ ಷರತ್ತಿಗೆ ಒಳಗಾಗುವಿರಾ; ನಿಮಗೆ ತಕ್ಕದ್ದು ಮಾಡೇಣವೇ?'' ಎಂದು ಶ್ರೀ ಮೊಲಟೋವ್ (ರಷ್ಯಾ) ಗರ್ಜಿಸಿದ. ಆದರೆ ಆಸನಾಟ ನಡೆಯಲಿಲ್ಲ. ಫಿನ್ನರೂ ಗುಂಡಿನಗಾಡಿ ಮುಂದಕ್ಕೆ ತಂದರು. ಇಂದು ಮಾರಣ ಹೋಮಗಳಾತ್ತಿವೆ. ಇಬ್ಬರೂ ಸುಸಜ್ಜಿತಗಿದ್ದಾರೆ. ಆದರೆ ಇಬ್ಬರ ಬಾಯೂ ಇನ್ನೂ ಕಹಿಬಾಗಿಯೇ ಇದೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:- ಅಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇನೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ

ಕೆ. ಸಿ. ಕೆ. ಪಣಿಕರ್,

ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್.)

52-53 **ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.**

ಕೊಡಗು ಜಿಲ್ಲಾ ಬೋರ್ಡು ಮೀಟಿಂಗು.

ಕೊಡಗು ಜಿಲ್ಲಾ ಬೋರ್ಡಿನ ಬಡ್ಜೆಟ್ ಮೀಟಿಂಗು ಈ ತಾರೀಕು 13 ಮತ್ತು 14 ರಲ್ಲಿ ಮಡಿಕೇರಿಯಲ್ಲಿ ಕೌನ್ಸಿಲು ಹಾಲ್‌ನಲ್ಲಿ ನಡೆಯಿತು. ಬೋರ್ಡಿನ ಪ್ರೆಸಿಡೆಂಟರಾದ ಶ್ರೀ ಸಿ. ಬಿ. ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ಪ್ರಾರಂಭದ ದಿನ ಬೆಳಗ್ಗೆ ಸಿವಿಲ್ ಸರ್ಜನರು ಮಧ್ಯಾಹ್ನದ ಮೇಲೆ ಶ್ರೀಗಳಾದ ಸಿ. ಯಂ. ಪೂಣಚ್ಚ, ಎ ಎಸ್ ಸೋಮಯ್ಯ ಮತ್ತು ಎಜಿರ್ನರ್‌ರವರುಗಳು ಗೈರ್ ಹಾಜರಾಗಿದ್ದರು. ರಾಷ್ಟ್ರೀಯ ಗೀತೆಯೊಂದಿಗೆ ಮೀಟಿಂಗು 11 ಗಂಟೆಗೆ ಪ್ರಾರಂಭವಾಯಿತು.

1. ಕಳೆದ ಮೀಟಿಂಗಿನ ನಡವಳಿಕೆಯು ಓದಿ ಒಪ್ಪಲಾಯಿತು.

2. ಅಂದಾಜು ಬಡ್ಜೆಟ್ಟಿನ ಚರ್ಚೆ ನಡೆದು ಅದನ್ನು ಬದಲಾವಣೆಗಳಿಂದ ಪಾಸು ಮಾಡಲಾಯಿತು.

ಅಂದಾಜು ಬಡ್ಜೆಟ್ಟಿನ ಸಾರಾಂಶ

ಆದಾಯ.

ಹಿಂದಿನ ಶಿಲ್ಕು	ರೂ. 22,906
ಮನೆ ತೆರಿಗೆ	,, 8,318
ಸೆಸ್ ಉತ್ಪತ್ತಿ	,, 64,313
ಪೊಲೀಸ್ (ಮೊಷ್ಟಿ ವಗೈರೆ)	,, 3,243
ವಿದ್ಯಾ ಇಲಾಖೆ ಉತ್ಪತ್ತಿ	,, 3,216
ಸರಕಾರದ ವಂತಿಗೆ	,, 17,720
ವೈದ್ಯ ಇಲಾಖೆ ಉತ್ಪತ್ತಿ	,, 4,759
ಸಿವಿಲ್ ವರ್ಕ್ಸ್, ಮಾರ್ಕೆಟ್ ವಗೈರೆ ಉತ್ಪತ್ತಿ	,, 20,869
ಸಿವಿಲ್ ವರ್ಕ್ಸ್	,, 4,719
ಸರ್ಕಾರಿ ವಂತಿಗೆ	,, 25,000
ಬಡ್ಡಿ	416
ಜುಮ್ಲಾ	1,75,479

ವೆಚ್ಚ.

ಸಿಬ್ಬಂದಿ ಖರ್ಚು	1,957
ಪ್ರಯಾಣ ಭತ್ಯ	,, 1,500
ಸಾದಿಲ್ವಾರು	,, 2,520
ಪೊಲೀಸು (ಮೊಷ್ಟಿ ವಗೈರೆ)	,, 1,370
ವಿದ್ಯಾ ಇಲಾಖೆ	,, 80,300
ವೈದ್ಯ ಇಲಾಖೆ	,, 33,480
ಆರೋಗ್ಯ ಇಲಾಖೆಗೆ ವಂತಿಗೆ	,, 3,000
ಆಯುರ್ವೇದಿಕ್ ಇಲಾಖೆ	,, 3,036
ಪೆನ್ಶನ್ ವಗೈರೆ	,, 5,420
ದೊಡ್ಡಿ, ದೀಪ ವಗೈರೆ	,, 2,775
ಸಿವಿಲ್ ವರ್ಕ್ಸ್ (ರೆ. ಇಲಾಖೆ)	,, 1,500
ಗ್ರಾಮಾಂತರ ರಸ್ತೆ	,, 11,000
ದೋಣಿ, ಪಾಲ ವಗೈರೆ	,, 7,450
ಸಿವಿಲ್ ವರ್ಕ್ಸ್ (P.W.D)	,, 12,150
ಗ್ರಾಮ ಸಂಚಾಯ್ತಿ ವಂತಿಗೆ	,, 1,000
ಕೋರ್ಟು ಖರ್ಚು	,, 1,000
ಸೆಸ್ ವಗೈರೆ ವಾಪ್ಸು	540
ಜುಮ್ಲಾ	1,69,998
ರಿಜರ್ವ್ ಬ್ಯಾಂಕಿನಲ್ಲಿ (ಖಾಯಮಾಗಿರಬೇಕಾದ ಶಿಲ್ಕು) ಡಿಪಾಜಿಟ್ಟು	13,500
ಒಟ್ಟು ಖರ್ಚು	1,83,498
ಆದಾಯಕ್ಕಿಂತಾ ಹೆಚ್ಚು ಖರ್ಚು	8,019

ಕೊಡಗು ಜಿಲ್ಲಾ ಬೋರ್ಡು ಬಡ್ಜೆಟ್ ಮೀಟಿಂಗು.

ಠರಾವುಗಳು.

3. ಕೊಡಗು ಸರ್ಕಾರದ ಸಬ್-ಡಿಸ್ಟ್ರಿಕ್ಟ್ ಸರ್ವಿಸಿನ ಪೆನ್ಶನ್, ಗ್ರಾಚ್ಯುಟಿ ವಗೈರೆಯ 1936 ರ ನಿಬಂಧನೆಯನ್ನು ಜಿಲ್ಲಾ ಬೋರ್ಡಿನ ಸಿಬ್ಬಂದಿಯವರಿಗೂ ಅನ್ವಯಿಸುವಂತೆ ತೀರ್ಮಾನಿಸಲಾಯಿತು.

4. ಸೋಮವಾರಪೇಟೆ ಅಲಿಕಟ್ಟೆ ರಸ್ತೆಯ ಸೇತುವೆ ರಿಪೇರಿಯ ಖರ್ಚನ್ನು ಪಟ್ಟಣಾಭಿವೃದ್ಧಿ ರಸ್ತೆ ರಿಪೇರಿ ಖರ್ಚಿನಲ್ಲಿ ಸೇರಿಸುವಂತೆ ತೀರ್ಮಾನಿಸಲಾಯಿತು.

5. ಅಮ್ಮತ್ತಿ ಹುಡುಗಿಯರ ಶಾಲಾ ಕಟ್ಟಡದ ರಿಪೇರಿ ಖರ್ಚನ್ನು ಮಂಜೂರು ಮಾಡಲಾಯಿತು.

6. ದೋಣಿಯಲ್ಲಿ ದಾಟುವ ಪ್ರಯಾಣಿಕರು ಮತ್ತು ಮೃಗಗಳಿಗೆ ಒಂದೊಂದು ಕಾಸು ಚಾರ್ಜು ಹಚ್ಚುವಂತೆ ತೀರ್ಮಾನಿಸಲಾಯಿತು.

7 ವಿದ್ಯಾ ಇಲಾಖೆಯಲ್ಲಿ ಖಾಲಿ ಇರುವ ಮೇಲ್ದರದ ಸಂಬಳದ ಖಾಲಿ ಸ್ಥಳಗಳನ್ನು ಭರ್ತಿಮಾಡುವಂತೆ ತೀರ್ಮಾನಿಸಲಾಯಿತು.

8 ಹತ್ತು ವರ್ಷಗಳ ಒಳಗಿನ ಸರ್ವಿಸಿನ ಜವಾನರಿಗೆ ರೂ. ಸಂಬಳ 13 ಕೊಡಬೇಕೆಂಬ ಚೀಫ್ ಕಮಿಷನರ ಪತ್ರ ಓದಿ ದಾಖಲ್ಲೆ ಮಾಡಲಾಯಿತು.

9. ಮದ್ರಾಸಿನ ರಾಮಕೃಷ್ಣ ಮಿಶಿನ್ ವಿದ್ಯಾರ್ಥಿಭವನಕ್ಕೆ ಕಳೆದ ವರ್ಷದಂತೆ ರೂ. 100 ವಂತಿಗೆ ಕೊಡುವಂತೆ ತೀರ್ಮಾನಿಸಲಾಯಿತು.

10 ಚೈಯ್ಯಂಡಾಣೆ ಕಟ್ಟೆ ರಸ್ತೆ ಸೇತುವೆ ರಿಪೇರಿಗೆ ರೂ. 50 ಕೊಡಲು ಮಂಜೂರಾಯಿತು.

11. ಉಪಾಧ್ಯಾಯರುಗಳ ಪ್ರಯಾಣದ ಭತ್ಯವನ್ನು ನಿಬಂಧನೆ ಪ್ರಕಾರ ಪೂರ್ತಿ ಕೊಡುವುದನ್ನು ಪುನಹ ಆಲೋಚಿಸಬೇಕಾಗಿ ಕಮಿಷನರು ಬರೆದ ಪತ್ರ ಓದಲಾಗಿ, ಬೋರ್ಡಿನ ಆರ್ಥಿಕ ಸ್ಥಿತಿಯು ಉತ್ತಮಗೊಂಡಾಗ ಆಲೋಚಿಸುವಂತೆ ತೀರ್ಮಾನವಾಯಿತು.

12. ಗಾಡಿ ಕಂದಾಯ ವಿಚಾರ ಚೀಫ್ ಕಮಿಷನರಿಂದ ಬಂದ ಪತ್ರ ಓದಲಾಗಿ ಈ ಮೊದಲು ನಿರ್ಧರಿಸಿದಂತೆ ಗಾಡಿ ಕಂದಾಯ ಹಾಕಲು ತೀರ್ಮಾನಿಸಲಾಯಿತು.

13 ನಾಪೋಕ್ಲು ಹುಡುಗಿಯರ ಶಾಲೆಯ ಕಟ್ಟಡವನ್ನು ಖಾಯಿಲಪ್ಪರಿರುವ ವಾರ್ಡಾಗಿ ಮಾಡಲು ಪಿ. ಡಬ್ಲ್ಯು. ಇಲಾಖೆಯ ಮೊಬಲಗಿನಲ್ಲಿ ಉಳಿದಿರುವ ರೂ. 1000 ಕೊಡಲಿ ಕೊಡುವಂತೆ ನಿಶ್ಚಯಿಸಲಾಯಿತು.

14. ಮೈಸೂರು ಆಯುರ್ವೇದಿಕ್ ಕಾಲೇಜಿನ ಪ್ರಿನ್ಸಿಪಾಲರ ಇನ್ಸ್‌ಪೆಕ್ಷನ್ ಸಲಹೆ ಮೇರೆ ಭಾಗಮಂಡಲದ ಆಯುರ್ವೇದ ಆಸ್ಪತ್ರೆಯನ್ನು ಇಟ್ಟುಕೊಳ್ಳಬಹುದೆಂದು ಚೀಫ್ ಕಮಿಷನರು ಬರೆದ ಪತ್ರ ಓದಿ ರಿಕಾರ್ಡು ಮಾಡಲಾಯಿತು.

15. ಮರ್ಕೆರಾ ಸ್ಕೂಲಿನ ಭೂಕಂಪ ಕಷ್ಟ ಪರಿಹಾರ ಫಂಡಿಗೆ ರೂ. 25 ಕಳುಹಿಸುವಂತೆ ತೀರ್ಮಾನಿಸಲಾಯಿತು.

16. ರಿಟೈರ್ಡ್ ಸೆಕ್ರೆಟರಿಯಾದ ಮಿ ಮುತ್ತಣ್ಣನವರ ಜೋಡಿ ಪ್ರವಾಸದ ರಜೆಯ ಸಂಬಳವನ್ನು ಕೊಡುವಂತೆ ಕಮಿಷನರು ಬರೆದ ಪತ್ರ ಓದಿ ಒಪ್ಪಲಾಯಿತು.

17 ಈ ಮೊದಲು ಮಂಜೂರಾಗಿರುವಂತೆ ಶ್ರೀಮಂಗಲ ಆಸ್ಪತ್ರೆಯ ಕಟ್ಟಡಕ್ಕೆ ಈ ವರ್ಷ ರೂ. 350 ಕೊಡುವಂತೆ ತೀರ್ಮಾನವಾಯಿತು.

18. ಸೋಮವಾರಪೇಟೆಯ ಪೆನ್ಶನ್ ಪ್ರದರ್ಶನಕ್ಕೆ ರೂ. 25 ಕೊಡುವಂತೆ ತೀರ್ಮಾನಿಸಲಾಯಿತು

19 ಸೋಮವಾರಪೇಟೆ ಕೂಡುವ ರಸ್ತೆ ರಿಪೇರಿಗೆ ರೂ. 35 ಮಂಜೂರು ಮಾಡಲಾಯಿತು.

20 ಹುಮ್ಮಡಿಯ ಗ್ರಾಮ ರಸ್ತೆಯ ರಿಪೇರಿಗೆ ರೂ 51 ಮಂಜೂರು ಮಾಡಲಾಯಿತು.

21. ದೊಡ್ಡಬೆಟ್ಟಗೇರಿ ಗ್ರಾಮದ ಜನರ ಬಾವಿ ರಿಪೇರಿಗೆ ರೂ. 25 ಮಂಜೂರು ಮಾಡಲಾಯಿತು.

22. ಗೌಡಳ್ಳಿ ಶಾಲಾ ಕಟ್ಟಡ ರಿಪೇರಿಗೆ ರೂ. 100 ಮಂಜೂರು ಮಾಡಲಾಯಿತು.

23. ಕಕ್ಕಬೆಯಲ್ಲಿ ಸ್ಕೂಲಿನ ಕಟ್ಟಡವು ಸುಭಿಕ್ಷವಾಗಿ ದೊರಕದೆ ಅಲ್ಲಿ ವಾರಕ್ಕೊಮ್ಮೆ ಆಸ್ಪತ್ರೆ ಇಡುವಂತೆ ನಿಶ್ಚಯಿಸಲಾಯಿತು.

24. ಸುಂಟಿಕೊಪ್ಪ ಮಾರ್ಕೆಟ್ ಕಂಟ್ರಾಕ್ಟರಿಂದ 35-36ನೇ ವರ್ಷಕ್ಕೆ ಬರಬೇಕಾದ ಬಾಕಿಯಾದ ರೂ. 94ನ್ನು ವಜಾ ಬಿಡುವಂತೆ ತೀರ್ಮಾನಿಸಲಾಯಿತು.

25 ಕಾಫಿ ತೋಟಗಳ ಆಳುಗಳಿಗೆ ಆಸ್ಪತ್ರೆಯಿಂದ ಕೊಡುವ ಔಷಧಗಳಿಗಾಗಿ ಅವರ ಮಾಲೀಕರಿಂದ ಹೊಂದಿಕೊಳ್ಳುತ್ತಿದ್ದ (ಏಕರಿಗೆ ಆರಾಣೆಯಂತೆ) ವಂತಿಗೆಯನ್ನು ವಜಾಮಾಡಿ ಇನ್ನು ಮುಂದಕ್ಕೆ ಅವರಿಂದ ಔಷಧಿಯ ನಿಜವಾದ ಕ್ರಯವನ್ನು ವಸೂಲ್ಮಾಡುವಂತೆ ತೀರ್ಮಾನಿಸಲಾಯಿತು.

26 ಆಸ್ಪತ್ರೆಗಳ ಖರ್ಚಿನ ಬಗ್ಗೆ ಸೋಮವಾರಪೇಟೆ ನೋಟಿಫೈಡ್ ಏರಿಯಾದವರು 750 ರೂ. ಮತ್ತು ಫ್ರೇಜರ್ ಪೇಟೆ ನೋಟಿಫೈಡ್ ಏರಿಯಾದವರ ರೂ. 250 ವಂತಿಗೆ ಬೋರ್ಡಿಗೆ ಕೊಡುವಂತೆ ಅವರನ್ನು ಕೇಳಲು ನಿಶ್ಚಯವಾಯಿತು.

27. ಸರ್ಕಾರದವರು ಸಿವಿಲ್ ವರ್ಕ್ಸಿಗಾಗಿ ಬೋರ್ಡಿಗೆ ಕೊಡುತ್ತಿರುವ 7000 ವಂತಿಗೆಯನ್ನು ರೂ. 10000 ಏರಿಸಬೇಕೆಂದು ಕೇಳಿಕೊಳ್ಳುವಂತೆ ನಿರ್ಧರಿಸಲಾಯಿತು.

28. ಮೋಟಾರು ಕಾರುಗಳ ತೆರಿಗೆಯ ಬಗ್ಗೆ ಸರಕಾರದವರು ಕೊಡುತ್ತಿರುವ ವಂತಿಗೆಯಲ್ಲಿ ರೂ 2000 ಕಡಮೆ ಮಾಡಿದನ್ನು ಸ್ಥಿರವಾಗಿ ಭರ್ತಿಮಾಡಿಕೊಡಬೇಕೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

29. ಸುಂಟಿಕೊಪ್ಪ ಚೆಟ್ಟಳ್ಳಿ ರಸ್ತೆ, ಮತ್ತು ಬಾಳೆಲೆ ರಸ್ತೆಗಳನ್ನು ಪ್ರಾಂತೀಕ ರಸ್ತೆಗಳಾಗಿ ಸರಕಾರದವರು ವಹಿಸಿಕೊಳ್ಳಬೇಕೆಂದು ಕೇಳಿಕೊಳ್ಳಲು ತೀರ್ಮಾನವಾಯಿತು.

30 ಆದಾಯವು ಕಡಿಮೆಯಾದ ಕಾರಣ ಸಿದ್ದಾಪುರ ಮತ್ತು ಫ್ರೇಜರ್‌ಪೇಟೆ ಮುನಿಸಿಪಲ್ ಬಂಗ್ಲೆಗಳನ್ನು ಮುಚ್ಚುವಂತೆ ತೀರ್ಮಾನಿಸಲಾಯಿತು.

31 ಆರೋಗ್ಯ ಇಲಾಖೆಗಾಗಿ ಬೋರ್ಡಿನಿಂದ ಸರಕಾರಕ್ಕೆ ಕೊಡುತ್ತಿರುವ ವಂತಿಗೆಯನ್ನು ಮುಂದಿನ ವರ್ಷದಿಂದ 5,000 ದಿಂದ 3,000ಕ್ಕೆ ಇಳಿಸಬೇಕೆಂದು ತೀರ್ಮಾನಿಸಲಾಯಿತು.

32 ಈ ಮೊದಲಿದ್ದ 11 ನಾಡುಗಳ ಪೈಕಿ 2 ನಾಡುಗಳ ಕಾರಣ ಡಿ. ಬೋರ್ಡಿನ ಚುನಾವಣೆ ಬಗ್ಗೆ ಮತದಾರ ಕ್ಷೇತ್ರ (ಕಾನ್ಸ್‌ಟಿಟ್ಯೂಯನ್ಸಿ)ವನ್ನು ಹಳೇ ನಾಡುಗಳ ಮೇರಿನ ಬದಲು ಹಿಸ್ಸೆಗಳಿಗೆ ಸೇರಿದ್ದ ಗ್ರಾಮಗಳ ಮೇರಿನಿಂದ ನಿರ್ಧರಿಸಿ 11 ಮತದ ಕ್ಷೇತ್ರಗಳನ್ನಾಗಿಯೇ ಇಟ್ಟುಕೊಳ್ಳತಕ್ಕದ್ದು ಎಂದು ತೀರ್ಮಾನಿಸಲಾಯಿತು.

33. ಕೊಡಗು ಬಾಲಕರ ಸಂಘಕ್ಕೆ ರೂ. 50 ಕೊಡಲು ನಿರ್ಧರಿಸಲಾಯಿತು.

34. ಸರ್ಕಾರಿ ಸರ್ವಿಸಿನ ಮತ್ತು ಬೋರ್ಡು ಸರ್ವಿಸಿನ ಉದ್ಯೋಗಸ್ಥರನ್ನು ಪರಸ್ಪರ ವರ್ಗಾವರ್ಗಿ ಮಾಡುವ ವಿಷಯ ಕಮಿಷನರು ಬರೆದ ಪತ್ರ ಓದಿ ಒಪ್ಪಲಾಯಿತು.

35. ನಾಪೋಕ್ಲು ಪಟ್ಟಣಕ್ಕೆ ಒಂದು ಪೆಟ್ರೋಲ ದೀಪವನ್ನು ಕೊಡಬೇಕೆಂಬ ಶ್ರೀ ಬಿ ಸಿ. ಮಾಚಯ್ಯನವರ ಠರಾವನ್ನು ಮಂಜೂರುಮಾಡಲಾಯಿತು.

ಸಕೇತ.

Shorthand, Typing etc.

ಶಾರ್ಟ್‌ಹೆಂಡ್, ಟೈಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಉತ್ಕೃಷ್ಟವಾದ ಶಿಕ್ಷಣವು ಬೇಕಾದವರು, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
52—32 Mercara.

ಕೊಡಗು

ಫೆಬ್ರವರಿ ತಾರೀಖು ೧೬ ನೇ ಶುಕ್ರವಾರ ೧೯೪೦.

ಇಂಡಿಯಾ ಸೆಕ್ರೆಟರಿಯವರ ಹೇಳಿಕೆ.

ಗಾಂಧಿ ವೈಸರಾಯರ ಸಂಭಾಷಣೆಯನ್ನು ಕುರಿತು ಮಹಾತ್ಮ ಗಾಂಧಿಯವರು ಹೊರಡಿಸಿದ ಹೇಳಿಕೆಯ ಮೇಲೆ ಇಂಡಿಯಾದ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಜೆಟ್‌ಲೆಂಡರವರು ತಮ್ಮ ಅಭಿಪ್ರಾಯವನ್ನು ಸೂಚಿಸಿರುವರು. ಪೂರ್ತಿ ಸ್ವಾತಂತ್ರ್ಯವೇ ಕಾಂಗ್ರೆಸಿನ ಗುರಿಯೆಂದೂ, ಹಿಂದೂಸ್ಥಾನದ ಆಡಳಿತ ಕ್ರಮವನ್ನು ರಚಿಸಿಕೊಳ್ಳುವ ಹಕ್ಕನ್ನು ಹಿಂದೀಯರಿಗೆ ಬಿಟ್ಟುಕೊಟ್ಟೊಡನೆ ಇಂಡಿಯಾದ ಸಂರಕ್ಷಣೆ, ಅಲ್ಪಪಕ್ಷೀಯರ ವಿವಾದ, ಆಶ್ರಿತರಾಜರುಗಳ ಮತ್ತು ಯೂರೋಪಿಯನರ ಹಿತಗಳನ್ನು ಕುರಿತ ಪ್ರಶ್ನೆಗಳು ಸುಲಭವಲ್ಲಿ ಬಗೆಹರಿಯುವವೆಂದೂ ಮಹಾತ್ಮರು ಸೂಚಿಸಿದ ಅಭಿಪ್ರಾಯವನ್ನು ಇಂಡಿಯಾ ಸೆಕ್ರೆಟರಿಯವರು ಅಲ್ಪವಾಗಿ ಗಣಿಸಿ ಇವು ಅಸಾಧ್ಯದ ವಿಷಯಗಳೆಂದು ಹೇಳಿರುವರು. ಮಾತ್ರವಲ್ಲ, ಕಾಂಗ್ರೆಸಿನ ಈ ರೀತಿಯ ವರ್ತನೆಯಿಂದ ಬ್ರಿಟಿಷ್ ಸರಕಾರಕ್ಕೂ, ಇಂಡಿಯಕ್ಕೂ ನ್ಯಾಯವಾದ ಒಪ್ಪಂದಕ್ಕೆ ಬರಲು ಅಡಚಣೆಯಾಗುವದೆಂದು ಹೇಳಿರುವರು.

ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಗಳಿಸುವದೇ ಕಾಂಗ್ರೆಸ್ ಸಂಸ್ಥೆಯ ಗುರಿಯೆಂದು ಹಲವು ವರ್ಷಗಳಿಂದ ನಿರ್ಧರಿಸಲ್ಪಡುತ್ತಾ ಬಂದಿರುವಲ್ಲಿ ಮಹಾತ್ಮರು ಇದಕ್ಕಿಂತಾ ಕಡಿಮೆಯ ಸುಧಾರಣೆಯನ್ನು ಕೇಳುವದಾದರೂ ಹೇಗೆ? ಈ ವಿಚಾರದಲ್ಲಿ ಮಿಲಿಯಗಟ್ಲೆ ಹಿಂದೀಯರ ನಿಜವಾದ ಕಾಂಕ್ಷೆಯನ್ನು ಗಾಂಧೀಜಿಯವರು ವೈಸರಾಯರಲ್ಲಿ ಒತ್ತಿ ಹೇಳಿರುವದೆಂಬುದರಲ್ಲಿ ಸಂದೇಹವಿಲ್ಲ. ಇದಕ್ಕಿಂತಾ ಕಡಿಮೆಯಾದ ಯಾವ ಕೋರಿಕೆಯೂ ಹಿಂದೀಯರನ್ನು ತೃಪ್ತಿಗೊಳಿಸಲಾರದು ಎಂಬುದನ್ನು ಬ್ರಿಟಿಷರು ಚೆನ್ನಾಗಿ ಅರಿತುಕೊಳ್ಳಬೇಕಾಗಿದೆ. ಹಿಂದಿಯರ ಒಗ್ಗಟ್ಟಿಗೆ ಇಂದು ಅಡ್ಡಿಯಾಗಿ ನಿಂತಿರುವ ಅತಿ ಮುಖ್ಯ ಪ್ರಶ್ನೆಯೆಂದರೆ ಹಿಂದೂ ಮುಸ್ಲಿಮರ ಸಮಸ್ಯೆಯಾಗಿದೆ. ಇದಾದರೂ ಬ್ರಿಟಿಷ್ ಸರಕಾರದವರಿಂದಲೇ ನಿರ್ಮಿಸಲ್ಪಟ್ಟು ಬೆಳೆಸಲ್ಪಡುತ್ತಿರುವ ಸಮಸ್ಯೆಯೆಂದು ಹಿಂದೀಯರ ಧುರೀಣರು ಆಗಿಂದಾಗ್ಯೆ ಒತ್ತಿ ಹೇಳಿರುವರು. ಇದನ್ನು ಪರಿಹರಿಸಲು ಹಿಂದೀಯ ಮುಖಂಡರೇ ತಮ್ಮ ತಮ್ಮೊಳಗೆ ಚರ್ಚೆ ನಡೆಸಬೇಕೆಂದು ಲಾರ್ಡ್ ಜೆಟ್‌ಲೆಂಡರವರು ಒಪ್ಪುತ್ತಾರೆ. ಅಂದ ಮೇಲೆ ಹಿಂದೀಯರಿಗೆ ತಮ್ಮ ದೇಶಾಡಳಿತೆಯನ್ನು ರಚಿಸುವ ಹಕ್ಕನ್ನು ಕೊಟ್ಟಕೂಡಲೆ ಇದನ್ನು ಬಗೆಹರಿಸಲು ಸಾಧ್ಯವಿಲ್ಲವೆಂದು ಹೇಳುವವರಲ್ಲಿ ಅರ್ಥವಿಲ್ಲ. ಈಗಲಾದರೂ ಬ್ರಿಟಿಷ್ ಸರಕಾರದವರು ಈ ವಿಚಾರವನ್ನು ಹಿಂದೀಯರಿಗೇನೇ ಬಿಟ್ಟ ಪಕ್ಷದಲ್ಲಿ ಇದು ಬೇಗನೆ ಬಗೆ ಹರಿಯುವದೆಂದು ಸಂಕೋಚವಿಲ್ಲದೆ ಹೇಳಬಹುದು. ಇದಕ್ಕೆ ಅಡ್ಡಿಯನ್ನು ತಂದೊಡ್ಡುತ್ತಿರುವ ಶ್ರೀ ಜಿನ್ನಾರವರ ವರ್ತನೆಯು ಹಿಂದೀ ಮುಖಂಡರಿಂದ ಮಾತ್ರವಲ್ಲ; ಮುಸ್ಲಿಂ ಲೀಗಿನ ಮುಖಂಡರಿಂದಲೂ ಕೂಡ ಖಂಡಿಸಲ್ಪಟ್ಟಿವೆ

ಇಂಡಿಯಾದ ರಕ್ಷಣೆಯ ವಿಚಾರವನ್ನು ಕುರಿತು ವಿಚಾರಿಸಿದಲ್ಲಿ ಹಿಂದೀಯರನ್ನು ಇಂದಿನ ಅಸಹಾಯಕ ಸ್ಥಿತಿಯಲ್ಲಿ ಇಟ್ಟಿರುವದಾದರೂ ಬ್ರಿಟಿಷ್ ಸರ್ಕಾರದ ಪದ್ಧತಿಯೆಂಬದನ್ನು ಯಾರೂ ಅಲ್ಲಗಳೆಯಲಾರರು. ಅಂದ ಮೇಲೆ ಹಿಂದೀಯರಿಗೆ ಸ್ವರಾಜ್ಯ ದೊರೆತಲ್ಲದೆ ಹಿಂದೂ ದೇಶದ ರಕ್ಷಣೆಯ ಏರ್ಪಾಡು ಬಲವಾಗಿ ಮಾಡಲ್ಪಡುವುದಿಲ್ಲವೆಂಬುವುದರಲ್ಲಿ ಸಂಶಯವಿಲ್ಲ. ಆಶ್ರಿತ ರಾಜರುಗಳ ಹಿತವನ್ನು ಕಾಯುವದಾದರೂ ಅಲ್ಲಿಯ ಪ್ರಜೆಗಳ ಅಭಿವೃದ್ಧಿಯನ್ನು ಮರೆಯಲು ಸಾಧ್ಯವಿಲ್ಲ. ಸಂಸ್ಥಾನಗಳ ಪ್ರಜೆಗಳು ದಿನೇ ದಿನೇ ಎಚ್ಚೆತ್ತುಗೊಂಡು ರಾಜ್ಯಭಾರ ಕ್ರಮದಲ್ಲಿ ತಮಗಿರಬೇಕಾದ ಹಕ್ಕು ಬಾಧ್ಯತೆಗಳನ್ನು ಪಡೆಯಲು ತೀವ್ರವಾದ ಚಳವಳಿ ನಡಿಸುತ್ತಿರುವಂಥಾ ಈ ಕಾಲದಲ್ಲಿ ಅಲ್ಲಿಯ ಅರಸರುಗಳ ಹಿತವನ್ನು ಮಾತ್ರ ಕಾಯಲು ಸಾಧ್ಯವಿಲ್ಲ. ಹಿಂದೂ ದೇಶದಲ್ಲಿರುವ ಅಲ್ಪ ಸಂಖ್ಯಾಕ ಯೂರೋಪಿಯನರಾದರೂ ತಮ್ಮ ಹಿತವನ್ನು ಹಿಂದೀಯರ ಹಿತದೊಂದಿಗೆ ಬೆರೆಸಿ ಅವರೊಂದಿಗೆ ಮಿಳಿತವಾಗಿ ಜೀವಿಸಲು ತಯಾರಾಗದಲ್ಲದೆ ಅವರ ಹಿತವನ್ನೇ ಪ್ರತ್ಯೇಕ ಕಾಪಾಡಲು ಯತ್ನಿಸುವದು ಪ್ರಜಾ ಸತ್ತಾತ್ಮಕ ರಾಜ್ಯ ಪದ್ಧತಿಯ ತತ್ವಕ್ಕೆ ಸರಿ ಹೋಗಲಾರದು. ಆದಕಾರಣ ಅವರೂ ಕೂಡ ಹಿಂದೂದೇಶದಲ್ಲಿರುವ ವರೆಗೆ ಒಟ್ಟಾರೆ ಹಿಂದೂ ದೇಶದ ಅಭಿವೃದ್ಧಿಯನ್ನೇ ಬಯಸುವಂತವರಾಗಬೇಕು. ಈ ದೃಷ್ಟಿಯಿಂದ ಮಹಾತ್ಮರು ಸೂಚಿಸಿದ ಅಭಿಪ್ರಾಯಗಳು ಹಿಂದೂ ದೇಶದ ಮಿಲಿಯ ಗಟ್ಲೆ ಜನರ ನಿಜವಾದ ಕಾಂಕ್ಷೆಯನ್ನು ಪ್ರತಿಬಿಂಬಿಸುತ್ತವೆ. ಬ್ರಿಟಿಷ್ ಸರ್ಕಾರದವರು ಇದನ್ನು ಚೆನ್ನಾಗಿ ಅರಿತು ಕಾಂಗ್ರೆಸ್ಸಿನೊಂದಿಗೆ ಒಪ್ಪಂದಕ್ಕೆ ಸಿದ್ಧರಾದರೇನೇ ಇಂಡಿಯಾ ಮತ್ತು ಬ್ರಿಟನಿನ ಮುಂದಿನ ಏಳಿಗೆಯನ್ನು ಸಾಧಿಸಿದಂತಾಗುವದೆಂಬದರಲ್ಲಿ ಸಂದೇಹವಿಲ್ಲ.

ಯುದ್ಧದ ಸಿಂಹಾವಲೋಕನ.

ರಾಜ್ಯವಿಸ್ತರಣಾ ರಾಕ್ಷಸಿ ಮಹತ್ವಾಕಾಂಕ್ಷೆ.
ಸ್ವಾತಂತ್ರ್ಯ ಸಮರದ ವೀರದೀಕ್ಷೆ.

ಇಂದು ಮೂರು ಕಡೆಗಳಲ್ಲಿ ತೀವ್ರ ಯುದ್ಧವು ನಡೆಯುತ್ತಿದೆ. ಪೂರ್ವಾಂತ್ಯದಲ್ಲಿ ಚೀನಾ ಜಪಾನು ಯುದ್ಧ ಪ್ರಾರಂಭವಾಗಿ ವರ್ಷಗಳೆರಡಾಗುತ್ತಾ ಬಂತು. ಅತ್ತ ಪಶ್ಚಿಮ ರಣರಂಗದಲ್ಲಿ ಬ್ರಿಟನ್ ಫ್ರಾನ್ಸ್ ಮತ್ತು ಜರ್ಮನಿ ಯುದ್ಧವು ಆರೇಳು ತಿಂಗಳುಗಳಿಂದ ನಡೆಯುತ್ತಿದೆ. ಇತ್ತ ಮಧ್ಯಯೂರೋಪದ ಫಿನ್ಲೆಂಡು ಕದನ ಪ್ರಾರಂಭವಾಗಿ ಹತ್ತು ವಾರಗಳು ಸಂದವು. ಈ ಮೂರು ಕಡೆಯ ಯುದ್ಧವು ಜಗತ್ತಿನ ಪ್ರಗತಿಗೇ ಧಕ್ಕೆ ತಂದು ಹಾಕಿದೆ. ಪೂರ್ವಾಂತ್ಯದಲ್ಲಿ ಜಪಾನರು ಯುದ್ಧ ಪ್ರಾರಂಭದಲ್ಲಿ ಯುದ್ಧ ನೈಪುಣ್ಯವಿಲ್ಲದ ಚೀನೀಯರನ್ನು ಬಗ್ಗುಬಡಿದು ಅನೇಕ ಪ್ರಾಂತಗಳನ್ನು ಆಕ್ರಮಿಸಿಕೊಂಡರು. ಆದರೆ ಕ್ರಮೇಣ ಚೀನಾವು ಕಾಲಕ್ಕೆ ತಕ್ಕಂತೆ ಸುಧಾರಿಸಿಕೊಂಡು ಯುದ್ಧ ಸಾಮಗ್ರಿಗಳ ಪೂರೈಕೆಯನ್ನು ಮಾಡಿಕೊಂಡು ಈಗ ಸುಸಜ್ಜಿತವಾಗಿದೆ. ಇತರ ರಾಷ್ಟ್ರಗಳ ಬೆಂಬಲವೂ ಚೀನೀಯರಿಗೆ ದೊರೆಯಿತು. ಈಗ ಚೀನಾ ಯುದ್ಧದಲ್ಲಿ ಚೀನೀಯರ ಕೈವಾಡ ಜೋರಾಗಿದೆ. ಮಾರ್ಷಲ್ ಚಿಯಾಂಗ್ ಕೈಶೇಕರಂಥಾ ಸ್ವದೇಶಾಭಿಮಾನಿಗಳ ನೇತೃತ್ವದಲ್ಲಿ ಚೀನವು ಕಳೆದುಂಬಿಕೊಳ್ಳುತ್ತಿದೆ. ಜಪಾನರು ಇಂದು ಸಂಧಿಯ ಪ್ರಸ್ತಾಪವನ್ನೆತ್ತುವಂಥಾಗಿದೆ. ಒಳ ಜಗಳಗಳಿಂದ ಬೇಧಭಾವಗಳನ್ನು ಕಳೆದು ಪಂಗಡಗಳಾಗಿ ಭಿನ್ನಭಿನ್ನವಾಗಿ ಹರಿದು ಹಂಚಿಹೋಗಿದ್ದ ಚೀನವು ಇಂದು ರಾಷ್ಟ್ರಹಿತದೃಷ್ಟಿಯಿಂದ ಒಂದಾಗಿದೆ. ಅಂತಃಕಲಹಗಳು ಈ ಯಾದವೀಕಲಹದಲ್ಲಿ ಮರೆಯಾಗಿ ಚೀನವು ಒಗ್ಗಟ್ಟಾಗಿ ನಿಂತಿದೆ. ಹೀಗೆ ಪೂರ್ವಾಂತ್ಯದಲ್ಲಿ ರಾಜ್ಯವಿಸ್ತರಣಾಪೇಕ್ಷೆಯಿಂದ ಮೇಲೆ ಬಿದ್ದ ಜಪಾನು ತನ್ನ ತಪ್ಪು ಹೆಜ್ಜೆಯನ್ನು ತಿದ್ದಿ ಹಿಂದಡಿಯಿಡಬೇಕಾದ ಸಂಭವ ಕಂಡು ಬರುತ್ತಿದೆ.

ಅತ್ತ ಫಿನ್ಲೆಂಡಿನಲ್ಲಿ ಯುದ್ಧ ಪ್ರಾರಂಭವಾಗಿ ಮೂರು ತಿಂಗಳಾಗುತ್ತಾ ಬಂತು. ಚಿಕ್ಕದೊಂದು ರಾಷ್ಟ್ರವಾದ ಫಿನ್ಲೆಂಡನ್ನು ಜಯಿಸಿ ತನ್ನ ಅಂಕೆಗೆ ತಂದುಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯಿಂದ ರಷ್ಯಾವು ಫಿನ್ಲೆಂಡಿನ ಧಾಳಿಯನ್ನು ಕೈಗೊಂಡಿತು. ಆದರೆ ಸ್ವತಂತ್ರ ಪ್ರಿಯರಾದ ಫಿನ್ನರು ಜಗದ್ವಿಖ್ಯಾತ ಬಲಶಾಲಿಯೆನಿಸಿದ ರಷ್ಯಾವು ತಮ್ಮ ಮೇಲೆ ಬಿದ್ದರೂ ಕಂಗೆಡದೆ ಅದನ್ನು ತೀವ್ರವಾಗಿ ಎದುರಿಸಿದರು. ಇತರ ರಾಷ್ಟ್ರಗಳನ್ನು ತಮ್ಮ ಸಹಾಯಕ್ಕೆ ಬರಬೇಕೆಂದು ಕೇಳಿಕೊಂಡು ಯುದ್ಧವನ್ನು ಮುಂದುವರಿಸಿದರು. ಅವರ ಕೇಳಿಕೆಯಂತೆ ಇತರ ರಾಷ್ಟ್ರಗಳು ಸಹಾಯ ತಕ್ಕಣ ಕೊಡಲಿಲ್ಲ. ಆದಿಂದ ಫಿನ್ಲೆಂಡು ಈ ಹತ್ತು ವಾರಗಳ ವರೆಗೆ ರಷ್ಯಾದ ಪ್ರಚಂಡ ಸೇನೆಯನ್ನು ಎದುರಿಸಬೇಕಾಯಿತು. ಈ ಸ್ವಾತಂತ್ರ್ಯಾಭಿಲಾಷೆಯನ್ನು ಪ್ರತಿಯೊಂದು ರಕ್ತಕಣದಲ್ಲೂ ಧರಿಸಿರುವ ಫಿನ್ನರು ರಷ್ಯಾವನ್ನು ಯಶಸ್ವಿಯಾಗಿ ಎದುರಿಸಿ ರಷ್ಯಾದ ಸೈನ್ಯಸಹಾಸವನ್ನು ಜಗತ್ತಿಗೆ ಎತ್ತಿ ತೋರಿಸಿರುವರು. ಫಿನ್ನರ ಈ ಶೌರ್ಯಸಾಹಸದಿಂದ ರಷ್ಯನರು ಬಳಲಿರುವರು. ಈಗ ಯುದ್ಧಾಸಕ್ತವಾಗಿರುವ ಈ ಎರಡು ರಾಷ್ಟ್ರಗಳೊಡನೆ ಸಂಧಾನ ಮಾಡಿಸುವ ಕಾರ್ಯಗಳಾಗುತ್ತಿವೆ. ಆದರೆ ಫಿನ್ನರು, ಫಿನ್ನರಿಗೆ ಯಾರೂ ಶಾಂತಿಸಲಹೆಗಳನ್ನು ಸೂಚಿಸಿ ಬಲಾತ್ಕರಿಸುವ ಆಗತ್ಯವಿಲ್ಲವೆಂದೂ, ಈ ಹತ್ತು ವಾರಗಳ ವರೆಗೆ ಅದು ಏಕಾಂಗಿಯಾಗಿ ರಷ್ಯಾವನ್ನು ಎದುರಿಸಿದೆಯೆಂದೂ, ಈಗ ಬೇರೆ ರಾಷ್ಟ್ರಗಳ ಸಹಾಯವು ಬರುತ್ತಿರಲಾಗಿ ಫಿನ್ಲೆಂಡು ತನ್ನ ಗೌರವವನ್ನು ಕಳೆದುಕೊಂಡು ಸಂಧಾನಕ್ಕೆ ಒಪ್ಪುವುದಿಲ್ಲವೆಂದೂ ಖಚಿತವಾಗಿ ಹೇಳಿಬಿಟ್ಟಿದ್ದಾರೆ. ಆದ್ದರಿಂದ ರಷ್ಯಾ ಯುದ್ಧವು ನಡೆದೇ ಇದೆ. ಮ್ಯಾನರ್ಹೀಂ ಕೋಟೆಯನ್ನು ವಶಪಡಿಸಿಕೊಳ್ಳುವ ದೃಷ್ಟಿಯಿಂದ ರಷ್ಯನರು ಪ್ರಯತ್ನಿಸುತ್ತಿರುವರು. ಆದರೆ ಫಿನ್ನರು ಅದನ್ನು ತೀವ್ರವಾಗಿ ಎದುರಿಸುತ್ತಿರುವರು. ಮೊನ್ನೆ ಮ್ಯಾನರ್ಹೀಂ ಕೋಟೆಯ ಸುತ್ತು ನಡೆದ ಯುದ್ಧದಲ್ಲಿ ರಷ್ಯನರಿಗೆ 30 ಟ್ಯಾಂಕುಗಳ ನಷ್ಟವಾಯಿತು. ಫಿನ್ಲೆಂಡಿನ ಯೋಧರು ಈಗ ಧೈರ್ಯದಿಂದ ಕಾದುತ್ತಿರುವರು.

ಇನ್ನು ಪಶ್ಚಿಮ ರಣರಂಗದಲ್ಲಿ ಹೆಚ್ಚಿನ ಚಟುವಟಿಕೆ ಕಾಣಿಸುವದಿಲ್ಲ. ಇತ್ತ ಜರ್ಮನರು ತಮ್ಮ ಸೀಜ್‌ಫ್ರೆಡ್ ಲೈನಿನಲ್ಲೂ, ಅತ್ತ ಬ್ರಿಟನ್ ಫ್ರಾನ್ಸುಗಳು ಮ್ಯಾಜಿನೋ ಲೈನಿನಲ್ಲೂ ಕಾದುಕೊಂಡು ಅವರು ಮೇಲೇರಿ ಬರಲಿ, ಆಗ ಎದುರಿಸುವ ಇಲ್ಲವೇ ಇವರು ಬರಲೀ ಎಂಬ ಈ ರೀತಿಯಿಂದಿರುವರೇ ವಿನಹ ಇನ್ನೂ ಜಾಡಾಜಾಡಿ ಯುದ್ಧವು ಪ್ರಾರಂಭವಾಗಿಲ್ಲವೆನ್ನಬಹುದು. ವಿಮಾನಗಳ ಮತ್ತು ನೌಕಾ ಚಟುವಟಿಕೆಯು ಮಾತ್ರ ಕಂಡುಬರುತ್ತಿದೆ. ಕಳೆದ ಶುಕ್ರವಾರ ಬ್ರಿಟಿಷರ ಎರಡು ಟ್ರಾಲರ್ ನೌಕೆಗಳು ಮುಳುಗಿಸಲ್ಪಟ್ಟವು. ವಿಮಾನ ಯುದ್ಧವು ನಡೆಯುತ್ತಿದೆ. ಜರ್ಮನಿಯು ಸಿಲ್ಟ್ ದ್ವೀಪದ ಮೇಲೆ ಧಾಳಿ ನಡೆಯಿತು. ಅಂತು ಪಶ್ಚಿಮ ರಣರಂಗದ ಕದನ ಅಷ್ಟು ಭೀಕರ ರೂಪವನ್ನು ತಳೆದಿರುವದಿಲ್ಲ. ಕಾಲವಾಹಿನಿಯಲ್ಲಿ ಯಾವ ಸಂಭವಗಳಾಗುವವೋ ನಿರೀಕ್ಷಿಸಬೇಕಿದೆ.

ವರ್ತಮಾನ ಸಂಗ್ರಹ.

ಒಳ ದೇಶ.

ಕಳೆದ ತಾರೀಕು 5ನೇ ಸೋಮವಾರ ಮಂಗಳೂರಿನ ಉಪಾಧ್ಯಾಯರ ಟ್ರೈನಿಂಗ್ ಶಾಲೆಯಲ್ಲಿ ವೃತ್ತಪತ್ರಿಕೆಗಳ ಮಹತ್ವವನ್ನು ಕುರಿತು ನಡೆದ ವಾಕ್‌ಸ್ಪರ್ಧೆಯಲ್ಲಿ ಶ್ರೀ ಮಾಚಿಮಾಡ ಯಂ ಮಾಚ್ಚಯ್ಯನವರು ಪ್ರಥಮ ಬಹುಮಾನವನ್ನು ಪಡೆದರೆಂದು ತಿಳಿಸಲು ಸಂತೋಷಪಡುತ್ತೇನೆ.

ಮಡಿಕೇರಿ.

ರೆಡ್‌ಕ್ರಾಸ್ ಸಂಘದ ಆಶ್ರಯದಲ್ಲಿ ಯುದ್ಧ ಫಂಡಿಗೆ ಇಲ್ಲಿ ರೂ. 842-8-0 ಸಂಗ್ರಹವಾಗಿದೆಯೆಂದು ತಿಳಿಯುತ್ತೇವೆ.

ಈ ವರ್ಷದ ಟೋಲ್‌ಗೇಟ್ ಹರಾಜಿನಲ್ಲಿ ಕಳೆದ ವರ್ಷಕ್ಕಿಂತಾ ರೂ. 200 ಹೆಚ್ಚಾಗಿದೆಯೆಂದು ತಿಳಿಯುತ್ತದೆ.

ಕೊಡಗು ಜಿಲ್ಲಾ ಬೋರ್ಡಿನ ಬಡ್ಜೆಟ್ ಮೀಟಿಂಗು ತಾರೀಕು 13 ಮತ್ತು 14 ರಲ್ಲಿ ಇಲ್ಲಿ ನಡೆಯಿತು.

ಈ ತಾರೀಕು 24ನೇ ಶನಿವಾರ ಕೊಡಗು ಶಾಲೆಗಳ ಟೆಕ್ಸ್ಟ್‌ಬುಕ್ ಕಮಿಟಿಯ ಮೀಟಿಂಗು ನಡೆಯುವದಾಗಿ ತಿಳಿಯುತ್ತೇವೆ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ವಾರ್ಷಿಕ ಮಹಾಸಭೆಯು ತಾರೀಕು 18ನೇ ಆದಿತ್ಯವಾರ ಇಲ್ಲಿಯ ಹೈಸ್ಕೂಲ್ ಹಾಲ್‌ನಲ್ಲಿ ನಡೆಯುವದು.

ಈ ವರ್ಷದ ಸೇಂದಿ ಸಾರಾಯಿ ಅಂಗಡಿಗಳ ಹರಾಜಿನಲ್ಲಿ ಸೇಂದಿಯಲ್ಲಿ ರೂ. 5000, ಸಾರಾಯಿಯಲ್ಲಿ ರೂ. 2000 ಅಂತೂ ರೂ. 7000 ಕಳೆದ ವರ್ಷಕ್ಕಿಂತಾ ಜಾಸ್ತಿಯಾಗಿರುವದೆಂದು ವಾರ್ತೆ.

ಕಗ್ಗೋಡ್ಲು ಗ್ರಾಮದ ಶ್ರೀ ಅಲ್ಲಾರಂಡ ಸೋಮಯ್ಯನೆಂಬವರನ್ನು ತಾ. 11ರ ರಾತ್ರಿ ಯಾರೋ ಹೊಡೆದು ಕೊಲೆ ಮಾಡಿರುವರೆಂದೂ, ಈ ಸಂಬಂಧ ಗೌಡುಗಳ ಕೃಷ್ಣಪ್ಪ ಮತ್ತು ತಿಮ್ಮಪ್ಪ ಎಂಬವರಿಬ್ಬರನ್ನು ಗುಮಾನಿಯಿಂದ ಹಿಡಿದು ರಿಮಾಂಡಿನಲ್ಲಿಟ್ಟಿರುವರೆಂದೂ ತಿಳಿದು ಬರುತ್ತದೆ.

ಈ ತಾರೀಕು 16-17 ಮತ್ತು 18 ಕೊಡಗು ಕರ್ನಾಟಕ ಸಂಘದ ವಾರ್ಷಿಕೋತ್ಸವವು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯವರಾದ ಶ್ರೀ ಸಿ. ಕೆ. ವೆಂಕಟರಾಮಯ್ಯ ಯಂ. ಎ. ಎಲ್. ಎಲ್. ಬಿ ಇವರ ಅಧ್ಯಕ್ಷತೆಯಲ್ಲಿ ನಡೆಯುವದೆಂದೂ, ತಾರೀಕು 16 ರಲ್ಲಿ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರರ ಭಾಷಣವಿರುವದೆಂದೂ, ಸರ್ವರಿಗೂ ಆಹ್ವಾನವಿದೆಯೆಂದೂ ತಿಳಿಯುತ್ತೇವೆ.

ಇಂಡಿಯಾ ಸರಕಾರದ ಮಾರ್ಕೆಟಿಂಗ್ ಆಫೀಸರಾದ ಮಿ. ಟಾಂಪ್‌ಸನ್‌ರವರು ತಾ. 12 ರಲ್ಲಿ ಇಲ್ಲಿಗೆ ಬಂದಿರುತ್ತಾರೆ. ಅವರು ಮಾರ್ಕೆಟಿಂಗ್ ಕಾರ್ಯಕ್ರಮದ ಬಗ್ಗೆ ವಿಶೇಷವಾಗಿ ಕಿತ್ತಳೆ ವ್ಯವಸಾಯೋತ್ಪತ್ತಿಯ ವಿಚಾರ ಪರಿಶೀಲಿಸಲು ಬಂದಿರುವರೆಂದೂ, ಅವರು ಸೋಮವಾರಪೇಟೆ, ವಿರಾಜಪೇಟೆ ಮೊದಲಾದ ಸ್ಥಳಗಳಲ್ಲಿ ಸಂಚರಿಸಿದರೆಂದೂ, ಇನ್ನೂ ಇಲ್ಲಿ ಕೆಲವು ದಿನ ಇದ್ದು ಉಳಿದಭಾಗಗಳನ್ನು ಸಂದರ್ಶಿಸಲಿರುವರೆಂದೂ ಸುದ್ದಿ.

ಶನಿವಾರಸಂತೆ.

ಇಲ್ಲಿ ತಾರೀಕು 10-2-40 ನೇ ಶನಿವಾರ ಈ ನಾಡಿನ ಸಹಕಾರಿ ಸಂಘಗಳ ಯೂನಿಯನ್ ಕಾನ್ಫರೆನ್ಸೂ ಮತ್ತು ಇದೇ ಯೂನಿಯನ್ನಿನ ಆಶ್ರಯದಲ್ಲಿ ಒಂದು ವಸ್ತು ಪ್ರದರ್ಶನವೂ ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರರವರ ಅಧ್ಯಕ್ಷತೆಯಲ್ಲಿ ಜಯಪ್ರದವಾಗಿ ನಡೆದು ಉತ್ತಮ ಸಾಮಾನು ಸಾಮಗ್ರಿಗಳಿಗೆ ಬಹುಮಾನ ವಿನಿಯೋಗವೂ ಆಯಿತೆಂದು ತಿಳಿಯುತ್ತೇವೆ.

ನಿಧನ ವಾರ್ತೆ.

ಮೈಸೂರು ಅರಮನೆಯ ರಿ. ರೇಂಜರಾಗಿದ್ದ ಶ್ರೀ ಪಾಂಡಂಡ ಮಾದಪ್ಪನವರು ತಾರೀಕು 8-2-40 ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಹಿಂದೂ ದೇಶ.

ರಾಮಘರ್ ಕಾಂಗ್ರೆಸ್ಸಿನ ಸ್ವಾಗತ ಕಮಿಟಿಯು ಇದುವರೆಗೆ 1 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದೆ.

ಇಂಡಿಯದ ಪ್ರತಿಯೊಂದು ಸಮಸ್ಯೆಯೂ ಬ್ರಿಟನಿನಿಂದಲೇ ನಿರ್ಮಾಣವಾದುದು"—ಹೀಗೆಂದು ಮಹಾತ್ಮಾಜಿಯವರು ಲಂಡನಿನ 'ಡೈಲಿ ಹೇರಾಲ್ಡಿ'ಗೆ ತಂತಿ ಕೊಟ್ಟಿದ್ದಾರೆ.

ಅಖಿಲ ಹಿಂದೂಸ್ಥಾನದ ನೆಯ್ಗೆಯವರ ಸಂಘವು ಅನುಮೋದಿಸಿದ ಖಾದಿಬಟ್ಟೆಗಳನ್ನು ಇಂದಿನಿಂದೊಳಗೆ ಮಾರಬಹುದೆಂದು ಆ ಸಂಸ್ಥಾನದ ಸರಕಾರದವರು ಅನುಮತಿ ಕೊಟ್ಟಿದ್ದಾರೆ.

ವ್ಯವಹಾರಗಳು ಮುಗಿದಿಲ್ಲ; ನಿರಾಶರಾಗಬೇಡಿ; ಸತ್ಯಾಗ್ರಹಕ್ಕೆ ಸಮಯವಿನ್ನೂ ಬಂದಿಲ್ಲ' ಎಂದು ಗಾಂಧಿಜಿಯವರು 'ಹರಿಜನ' ಪತ್ರಿಕೆಯಲ್ಲೊಂದು ಲೇಖನ ಬರೆಯುತ್ತ 'ಇಂಡಿಯದ ಗುರಿ ಏನು?' ಕಾಂಗ್ರೆಸ್ಸಿನವರ ಕರ್ತವ್ಯಗಳೇನು ಎಂಬ ಕುರಿತು ವಿಶದೀಕರಿಸಿರುವರು.

ಮದ್ರಾಸಿನಲ್ಲಿ ಪುನಹ ಬೆಂಕಿಯ ಹಾವಳಿ. 'ಇಂಡಿಯನ್ ಎಕ್ಸ್‌ಪ್ರೆಸ್' 'ಆಂಧ್ರ ಪ್ರಭಾ' ಮತ್ತು 'ದಿನಮಣಿ' ಪತ್ರಿಕೆಗಳಿದ್ದ ಆ ಕಾರ್ಯಾಲಯಗಳ ಎದುರಾಗಿದ್ದ ಜಾರ್ಜ್ ಟೌನಿನ ವಿಭಾಗದಲ್ಲಿ ಅಲ್ಲಿ ದೊಡ್ಡದೊಂದು ಉಗ್ರಾಣದಲ್ಲಿ ಶೇಖರಿಸಿಟ್ಟಿದ್ದ 'ನ್ಯೂಸ್ ಪ್ರಿಂಟ್' ಕಾಗದವೂ ಇತರ ಕೆಲವು ಉಪಕರಣಗಳೂ ನಷ್ಟವಾದವು. ಈ ಬೆಂಕಿ ಯಂತ್ರ ಭಾಗಗಳಿಗೆ ಹರಡುವಷ್ಟರಲ್ಲಿ ಅದನ್ನು ನಂದಿಸಲಾಯಿತು.

ಚೀನಾ ಜಪಾನ್ ಯುದ್ಧವು ಪ್ರಾರಂಭವಾದ ಎರಡುವರೆ ವರ್ಷಗಳಿಂದೀಚೆಗೆ ಜಪಾನಿನವರು ಆಕ್ರಮಿಸಿಕೊಂಡಿರುವ ಚೀನಾ ದೇಶದ ತೀರ ಪ್ರದೇಶಗಳಲ್ಲಿದ್ದ ಒಂದುವರೆ ಕೋಟಿ ಚೀನಾದ ಪ್ರಜೆಗಳು ಜಪಾನಿನವರ ರಾಜ್ಯಾದಳಿತದಲ್ಲಿ ಕಷ್ಟ ಸಂಕಟಗಳಿಗೆ ತುತ್ತಾಗುವದಕ್ಕಿಂದಲೂ ಸ್ವತಂತ್ರವಾಗಿರುವದೇ ಲೇಸೆಂದು, ತಮ್ಮ ಮನೆಮಠಗಳನ್ನೂ ಆಸ್ತಿಪಾಸ್ತಿಗಳನ್ನೂ ಬಿಟ್ಟು ಚೀನಾ ದೇಶದ ಪ್ರಾಂತಗಳಿಗೆ ಹೋಗಿ ನೆಲಸಿರುವರೆಂದು ಚೀನಾ ಸರಕಾರದವರು ಹೇಳುತ್ತಾರೆ.

ಇದೇ ಬರುವ ಮಾರ್ಚ್ ತಾ. 11ರಲ್ಲಿ ರಾಮಘರ್ ಕಾಂಗ್ರೆಸ್ ನಗರದಲ್ಲಿ ಮಹಾತ್ಮ ಗಾಂಧಿಯವರು ಸಮಗ್ರ ಭಾರತ ಹಿಂದಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರದರ್ಶನವನ್ನು ತೆರೆಯುವರು. ಇಲ್ಲಿ ಯಂತ್ರ ನಿರ್ಮಾಣದ ಯಾವ ಪದಾರ್ಥಕ್ಕೂ ಅವಕಾಶವಿರದು.

ಫೆಬ್ರವರಿ ತಾ. 1ರನಂತರ ಜರ್ಮನಿಯಲ್ಲಿ ಯಾರೂ ತಮ್ಮ ಇಷ್ಟಬಂದಂತೆ ಮೋಟಾರು ಕಾರುಗಳನ್ನು ಕೊಳ್ಳಕೂಡದಂತೆ. ಮೋಟಾರು ಕಾರನ್ನು ಕೊಳ್ಳಲಿಚ್ಛಿಸುವವರು ಮುಂದಾಗಿ ಸರಕಾರದವರ ಅಪ್ಪಣೆ ಪಡೆಯಬೇಕೆಂದು ಅಲ್ಲಿನ ನಾಜಿ ಸರಕಾರದವರು ಹೊಸ ಆಜ್ಞೆಯೊಂದನ್ನು ಹೊರಡಿಸಿರುತ್ತಾರೆ.

ನೋಟೀಸು.

ವಿಕ್ಟೋರಿಯಾ ರೂಪಾಯಿ ನಡೆಯುವದಿಲ್ಲವೆಂದು ಕೆಲವು ಅಂಗಡಿಯವರು ಅವನ್ನು ತೆಗೆದುಕೊಳ್ಳಲು ತಿರಸ್ಕರಿಸುವರೆಂಬುದು ನನಗೆ ತಿಳಿದುಬಂದಿದೆ. ವಿಕ್ಟೋರಿಯ ರೂಪಾಯಿಯು ಜಾರಿಯಲ್ಲಿ ನಡೆಯುವದೆಂದೂ, ಆದ್ದರಿಂದ ಪಬ್ಲಿಕಿನವರು ಅವನ್ನು ನಿರಾಕರಿಸಕೂಡದೆಂದೂ ಈ ಮೂಲಕ ಸೂಚಿಸಲಾಗಿದೆ. ಅವುಗಳನ್ನು ಸಾವರ್ ಖಜಾನೆಯಲ್ಲಾಗಲೀ ಯಾ ಇತರ ಖಜಾನೆಯಲ್ಲಾಗಲ್ಲಿ ಇಚ್ಛಿಸುವವರಿಗೆ ಬದಲಾಯಿಸಿಕೊಡಲಾಗುವದು.

ಜೆ. ಡಬ್ಲ್ಯೂ ಪ್ರಿಚರ್ಡ್.
ಕಮಿಷನರ್.

ಮಾರಾಟಕ್ಕಿದೆ.

ಗೋಣಿಕೊಪ್ಪಲಿಗೆ ಸಮೀಪದಲ್ಲಿರುವ ಹೆಬ್ಬಾಲೆ ಗ್ರಾಮಕ್ಕೆ ಸೇರಿದ ರಸ್ತೆ ಬಾಜಿನಲ್ಲಿರುವ ಹಸನಾದ ಭೂಮಿ 6 ಏಕರೆ 69 ಸೆಂಟು ಕಾಫಿ ಮತ್ತು ಇತರ ಜಾತಿಯ ಮರಗಳಿಂದ ತುಂಬಿರುವ 32 ಏಕರ 16 ಸೆಂಟಿನ ಬಾಣೆ ಜಾಗವೂ, ಬಿಟ್ಟಂಗಾಲದ ಸಮೀಪ ರಸ್ತೆಗೆ ಹತ್ತಿರವಾಗಿರುವ ಮಾನಿಕಾಡು ಎಂಬ ಸ್ಥಳದಲ್ಲಿ 4 ಏಕರೆ 64 ಸೆಂಟು ಭೂಮಿಯೂ, 28 ಏಕರು 80 ಸೆಂಟು ಮರಗಿಡಗಳಿಂದ ಕೂಡಿದ ಬಾಣೆ ಜಾಗವೂ ಮಾರಾಟಕ್ಕಿದೆ. ಸ್ವತ್ತು ನೋಡಲು ಇಷ್ಟಪಡುವವರು ಸಿ. ಮುರುವಂಡ ಅಣ್ಣಯ್ಯ, ಕೊಳತೋಡ ಬೈಗೋಡು ಗ್ರಾಮ, ಗೋಣಿಕೊಪ್ಪಲು ಅಡ್ರೆಸಿಗೆ ಬರೆದು ನೋಡಬಹುದು. ಅಪೇಕ್ಷಿಸುವವರು ಬೆಲೆ ಮತ್ತು ಹೆಚ್ಚಿನ ವಿಚಾರವನ್ನು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಮುರುವಂಡ ಸಿ. ಕುಟ್ಟಪ್ಪ,
C/o.
ಮನೆಯಪಂಡ ಜೋಯಪ್ಪ,
ನೇಷನಲ್ ಹೋಟೇಲ್,
ಮೈಸೂರು.

ಎಚ್ಚರಿಕೆ ನೋಟೀಸು.

ನಾಪೋಕ್ಲುನಾಡು ದೊಡ್ಡ ಪುಲಿಕೋಟು ಗ್ರಾಮದ ಪಬ್ಬಟ್ಟೀರ ಅಚ್ಚಪ್ಪನವರ 2ನೇ ಮಗ ಬೆಳ್ಯಪ್ಪನು ಈ ಮೂಲಕ ಸರ್ವರಿಗೂ ತಿಳಿಸುವದೇನೆಂದರೆ-

ನಾನು, ನನ್ನ ಅಣ್ಣ ಸೋಮಣ್ಣನು, ನಮ್ಮ ತಂದೆ ಅಚ್ಚಪ್ಪನವರ ಪ್ರಥಮ ಪತ್ನಿಯ ಮಕ್ಕಳು. ನಮ್ಮ ತಾಯಿಯು ಅವಸಾನಹೊಂದಿದ ನಂತರ ತಂದೆಯವರಿಗೆ ದ್ವಿತೀಯ ಭಾರ್ಯೆಯಾಯಿತು. ನಾನು ಮತ್ತು ನನ್ನ ಅಣ್ಣನು ತಂದೆಯವರ ಸಹಾಯದಿಂದ ಮಡಿಕೇರಿ ಹೈಸ್ಕೂಲಿನಲ್ಲಿ ಫಿಫ್ತ್‌ಫಾರಂ ವರೆಗೆ ಓದಿ ತಂದೆಯವರ ದರಿದ್ರಾವಸ್ಥೆಯಿಂದ ವಿದ್ಯೆ ಮುಂದರಿಸದೆ ತಂದೆಯವರ ಬಳಿ ಇದ್ದು ಸರಿಬಾರದೆ ಜೀವನಕ್ಕಾಗಿ ಅಣ್ಣ ಸೋಮಣ್ಣನು ಪರದೇಶದ ಯಾವ ಕಡೆಯೋ ಹೋಗಿ ವರ್ಷದ ಮೇಲಾಯಿತು. ನಾನು ಚಿಕ್ಕವನಾದ್ದರಿಂದ ನನ್ನ ಪ್ರಿಯ ಅಜ್ಜಂದ್ಯರಾದ ಹರದಾಸ ಅಪ್ಪಚ್ಚನವರಲ್ಲಿ ಜೀವನ ನಡಿಸುತ್ತಿದ್ದೇನೆ.

ನಮ್ಮ ತಂದೆಯ ತಂದೆಯಾದ ಅಜ್ಜ ಪಬ್ಬಟ್ಟೀರ ಕುಕ್ಕಪ್ಪನವರು ತುಂಬ ಐಶ್ವರ್ಯವಂತರಾಗಿದ್ದು ಯಾಲಕ್ಕಿ ಮಲೆ ಮತ್ತು ಮೂರು ಸ್ಥಳದಲ್ಲಿ ಭೂಮಿ ಸಂಪಾದಿಸಿರುತ್ತಾರೆ. ಮುಖ್ಯವಾದ ನಮ್ಮ ತಿಳುವಳಿಕೆ ಶಿವಾಯಿ ಎರಡು ಸ್ಥಳದ ಯೋಗ್ಯ ಭೂಮಿಗಳನ್ನು ತಂದೆ ಅಚ್ಚಪ್ಪನವರು ಈ ಮೊದಲೇ ಕ್ರಯಸಾಧನ ಮಾಡಿರುವ ಸಂಗತಿ ವೈನರಾದ ನಾನು ಈಚೆಗೆ ತಿಳಿದಿರುತ್ತೇನೆ. ನಾನು 16 ವರ್ಷ ಪ್ರಾಯದ ಮೈನರ್. ನಾನು ಮೆಜಾರ್ಟಿಗೆ ಬಂದ ಕೂಡ್ಲೆ ಈ ಭೂಮಿಗಳಿಗೆ ನನ್ನ ವ್ಯವಹಾರ ಇದ್ದೇ ಇದೆ. ಕೊಂಡುಕೊಂಡವರು ಹೆಚ್ಚು ಹಣ ಖರ್ಚು ಮಾಡದೆ ಜಟಿಸ್ಥರಾಗಿರಬೇಕಾಗಿ ತಿಳಿಸುವದಲ್ಲದೆ ಅಜ್ಜ ಸಂಪಾದಿಸಿದ ಇನ್ನೊಂದು ಪಟ್ಟೆಂಡ್ರ ಭೂಮಿಯನ್ನು ಸಹ ಪರಾಧೀನಮಾಡಲು ತಂದೆ ಅಚ್ಚಪ್ಪನವರು ಕಂದಾಯಕ್ಕಾಗಿ ಜಪ್ತಿ ಮಾಡಿಸಿ ಈ ಮಧ್ಯೆ ಹರಾಜಿಗೆ ಇಟ್ಟಿದ್ದರು. ನಾನು ಇದನ್ನು ತಿಳಿದು ಸರಕಾರಕ್ಕೆ ಅರ್ಜಿ ಬರೆದು ರದ್ದಾಗಿರುತ್ತೆ.

ಅಂಥಾ ಭೂಮಿಯನ್ನು ಮುರಾಲೋಚನೆಯಿಂದ ಕರವಂಡ ಗಣಪತಿಯವರಿಗೋ, ಕೋಪರೇಟಿವ್ ಫಂಡಿಗೋ, ನಾಪೋಕ್ಲು ಮಮ್ಮದೆ ಸಾವುಕಾರರಿಗೊ ಇಲ್ಲವೇ ಬೇರೆ ಯಾರಿಗೂ ಕ್ರಯಸಾಧನ, ಬೋಗ್ಯ, ಗಿರುವಿ ವಗೈರೆ ಕೊಡುತ್ತಾರೆಂಬ ವರ್ತಮಾನ ನಿರಾಧಾರವಾಗಿ ವೈನರಾಗಿರುವ ನಾನು ತಿಳಿದದ್ದರಿಂದ ನಮ್ಮ ಹಕ್ಕಾದ ಈ ಪಟ್ಟೆಂಡ್ರ ಭೂಮಿಯನ್ನು ಯಾರೊಬ್ಬರು ಯಾವ ವಿಧದಿಂದಾಗಲಿ ತೆಗೆದುಕೊಳ್ಳಕೂಡದಾಗಿ ಈ ಮೂಲಕ ತಿಳಿಸಿರುತ್ತೇನೆ. ಇದಕ್ಕೆ ವಿರೋಧವಾಗಿ ನಡೆದಲ್ಲಿ ಪದರಿ ಸೊತ್ತು ಅವರಿಗೆ ಊರ್ಜಿತವಾಗಲಾರದು. ಮತ್ತು ಇದರಿಂದ ಆಗುವ ಎಲ್ಲಾ ನಷ್ಟಕ್ಕೂ ಅವರೇ ಜವಾಬ್ದಾರರಾಗಿರಬೇಕು.

15.2.40 ಮೈನರ್,
ಪಿ. ಎ. ಬೆಳ್ಯಪ್ಪ.

ವರ್ಷಗಳಿಂದ ಕೆಲವು ಜನರ ಹಿಸ್ಮೃತ್ತಿನಿಂ ನಾವು ದೇವರ ತಕ್ಕರೆಂದು, '1840ರಲ್ಲಿ ಮೆ. ಅಪ್ಪಾರಂಡ ದಿವಾನ್ ಬೋಪಣ್ಣನವರು ತಕ್ಕ ಮೇದಯ್ಯನಿಗೆ ಕೊಟ್ಟ ಸಂಬಳ' ಎಂಬದೊಂದು ದಾಕ್ಲೆಯಿಂದ ಈಗಿನ ತೀರ್ಮಾನ ತಂದರು. ಹೀಗೆ ಸಂಬಳಕಾರರು ಸದರಿ ದೇವಸ್ಥಾನದಲ್ಲಿ ಅನೇಕರು ಇರುವರು. ಅಯ್ಯೋ, ಕೊಡಗಿನಲ್ಲಿ ಮೇಲೆ ಕಾಣಿಸಿದ 4ತರದ ತಕ್ಕರಿಗೆ ಸಂಬಳವಿದೆಯೊ? ಸಂಬಳ ಹೊಂದುವವರು ತಕ್ಕರೋ? ಎಂಬದನ್ನು ಈ ಮಧ್ಯೆ 22-12-39ರಲ್ಲಿ ಪರದಂಡ ಕುಟುಂಬಸ್ಥರು ಪಾಡಿದೇವಸ್ಥಾನದಲ್ಲಿ ಇವರ ಪಂಚಾಯಿತಿಯ ದಿನ ಹಾಜರ್ ಮಾಡಿದ ಒಂದು ಅರ್ಜಿಯನ್ನು ಸದರಿ ಪಂಚಾಯಿತರು ಯಾ ತಕ್ಕಮುಖ್ಯಸ್ಥರು, ಯಾವ ರೀತಿ ವಿಲೇವಾರಿಪಡಿಸಿದರು? ಸದರಿ ಇವರು ಹೊ ತೆಗೆದು ವಿಲೆಪಡಿಸಿದ ದಿನ 60 ಜನರಿದ್ದರೆಂದು ಬರೆದಿರುವರು. ಪಾಡಿನಾಲ್ಕು ನಾಡಿನಲ್ಲಿ 60 ಜನರೇ ಇರುವರೋ? ಇವರು ಎಲ್ಲ ಕುಳಕ್ಕೆ ತಿಳಿಸಿರುವರೊ? ಅಥವ ಇದ್ದ 60 ಜನರು ಸಹ ಇವರಿಗೆ ರೂಬು ರೂಬು ಹಾಜರು ಮಾಡಿದ ಕೋಂಗಂಡ ಮುದ್ದಯ್ಯ ಸುಭೇದಾರರು ಈ 2 ನಾಡಿನ ತಕ್ಕಮುಖ್ಯಸ್ಥರನ್ನು ವಿಚಾರ ಮಾಡಿ ತೀರ್ಮಾನ ಮಾಡಿದ ಆರ್ಡರನ್ನು ಶ್ರೀ ಕೇಟೋಳಿರ ಚೆಂಗಪ್ಪ ದಿವಾನ್ ಬಹದೂರ್‌ರವರು ಯಾವ ವಿಷಯದಿಂದ ರದ್ದು ಮಾಡಿ, ಹೊ ತೆಗೆಯಲಿಕ್ಕೆ ಕಾರಣ? ಕೊಡಗು ಚರಿತ್ರೆ, ಮತ್ತು ನಡಿಕೇರಿಯಂಡ ಚಿಣ್ಣಪ್ಪನವರ ಪಟ್ಟೋಲೆಪಳಮೆ ಇವು ದೇಶದ ಜನಾಂಗ ಒಪ್ಪಿದ, ಸರಕಾರ ಒಪ್ಪಿದ ಪುಸ್ತಕಗಳು. ಇವುಗಳಲ್ಲಿರುವ ಪರದಂಡ ಹಕ್ಕನ್ನು ಹ್ಯಾಗೆ ರದ್ದು ಮಾಡಿದರು? 'ಎಲ್ಲಾ ನಾಡು ತಕ್ಕಮುಖ್ಯಸ್ಥರನ್ನು ವಿಚಾರಿಸಿದಲ್ಲಿ ಯಾರಿಗೂ ಕಂಡಿತ ಹೇಳಲು ಸಾಧ್ಯವಾಗದ್ದರಿಂದ ಹೊ ತೆಗೆಯಲಾಯಿತು' ಎಂಬದಾಗಿ ಬರೆದಿರುವರು. ಇಂಥಾ ಮೇಲೆ ಹೇಳಲ್ಪಟ್ಟ ದಾಕ್ಲೆ ಅನುಭವಗಳು ಆ ದಿನ ಇವರು ವಿಚಾರಿಸಿ ಪ್ರಸ್ತಾಪಕ್ಕೆ ಬರಲಿಲ್ಲವೇ? ಮಧ್ಯೆ ಶ್ರೀ ಅಲ್ಲಾರಂಡ ಸೋಮಣ್ಣ 93 ವರ್ಷ ಪ್ರಾಯದವರು ತಮ್ಮ ಅನುಭವದಲ್ಲಿ ಕೇಳಿ ತಿಳಿದವನ್ನೂ, ಶ್ರೀಗಳಾದ ಕಾಂಡಂಡ ಮುತ್ತಣ್ಣ, ಮೇರಿಯಂಡ ಸುಬ್ಬಯ್ಯ ವಗೈರೆ ತಮ್ಮ ತಮ್ಮ ಅನುಭವವನ್ನೂ ಹೇಳಿದ್ದು ಸರಿಯಷ್ಟೆ. ಇದನ್ನು ಯಾವ ರೀತಿ ವಿವೇಚಿಸಿದರು? ಸದರಿ ಹೊ ತೆಗೆಯಲಿಕ್ಕೆ ಉಭಯ ಕಡೆಯವರ ಒಪ್ಪಿಗೆಯೆಂದು ಹಾಜರಿದ್ದವರು ಬರೆದಿರುತ್ತಾರೆ. ಯಾವ ಒಪ್ಪಂದ, ಯಾವ ದಾಕ್ಲೆ? ಅಗ್ಗೈಪರಂಡ ಮನೆಯವರು ಏನು ಹೇಳಿದರೆಂಬುದನ್ನು ಯಾಕೆ ಬಚ್ಚಿಡುವಿರಿ? ದಿವಾನರು ತಕ್ಕ ಮೇದೈಯ್ಯನಿಗೆ ಕೊಟ್ಟ ಸಂಬಳಯೆಂಬದೊಂದು ದಾಕ್ಲೆಯಿಂದ ನಂಬಡಮಂಡ ಮನೆಯವರು ತಕ್ಕರೆಂದು ಹೊ ತೆಗೆಯಲಿಕ್ಕೆ ಕಾರಣವಾಯಿತಲ್ಲವೇ? ಹಾಗಾದರೆ 5-7 ರುಪಾಯಿ ಸಂಬಳ ಹೊಂದುವವರು ತಂತ್ರಿ ದಕ್ಷಿಣೆ ಕೊಡುವದಕ್ಕಿಂತ ಆ ದೇವಸ್ಥಾನದಲ್ಲಿ 18 ರೂಪಾಯಿ ಸಂಬಳ ಹೊಂದುವವರು ತಂತ್ರಿದಕ್ಷಿಣೆಕೊಟ್ಟರೆ ಒಳ್ಳೆಯದಲ್ಲವೋ? ಕೊಡಗಿನಲ್ಲಿ ಮಣ್ಣಿಗೆ ತಕ್ಕಾಮೆಯೋ, ಆಳಿಗೆ ತಕ್ಕಾಮೆಯೋ? 1840ರಲ್ಲಿ ಬರೆದ ಈ ನಂಬಡಮಂಡ ಮೇದೈಯ್ಯನ ಸಂಬಳ ಆತನ ಮಗ ಅಪ್ಪಯ್ಯ, ಆತನ ಮಗ ಮೇದಪ್ಪ ಇವರಲ್ಲದೆ ನಂಬಡಮಂಡ ಕುಳಕ್ಕೆ ಇದೆಯೋ? ಆ ರೀತಿ ನೋಡಿದಲ್ಲಿ ಪ್ರಾಕ್ತತಕ್ಕಮೆಯೋ ಆಳುತಕ್ಕಮೆಯೋ? ಶ್ರೀ ಕೇಟೋಳಿರ ಚೆಂಗಪ್ಪ ದಿವಾನ್ ಬಹದೂರ್‌ರವರು ಇವನ್ನೆಲ್ಲ ನೋಡಿಯೇ ನಂಬಡಮಂಡ ಮನೆಯವರು ವಸ್ತುವಾರಿ ತಕ್ಕರೆಂದು ಬರೆದದ್ದಾಗಿದೆ. ಇದನ್ನೆಲ್ಲ ಕಂಡು ಕಾಣದಂತೆ ಬಚ್ಚಿಟ್ಟು, ದಿವಾನರ ತಸ್ತೀಕಿನಲ್ಲಿ ಸಂಬಳ ತಕ್ಕ ಮೇದೈಯ್ಯನಿಗೆಯೆಂಬ ತಕ್ಕಮೆ ಹಿಡಿದು ಮತ್ತು ಹೊ ತೆಗೆದು ನಂಬಡಮಂಡ ಮನೆಯವರು ತಕ್ಕರೆಂದು ತೀರ್ಮಾನಮಾಡಿದ್ದು ಪೂರಾ ಪಕ್ಷಪಾತ. ಮತ್ತು ದೇವರ ಪದ್ಧತಿಗೆ ವಿರೋಧವಾಗಿದೆ. ಆದುದರಿಂದ ನೀವು ಕೆಲವು ಜನರು ಈ ರೀತಿ ಪಾಡಿದೇವಸ್ಥಾನದಲ್ಲಿ ಮಾಡಿದ ತೀರ್ಮಾನವು ಯಾವ ಬಾಬಿನಲ್ಲೂ ಮಂಜೂರಾಗಲಿಕ್ಕಿಲ್ಲ. ಒಂದುವೇಳೆ ಸರಿಯವರು ತಂತ್ರಿ ದಕ್ಷಿಣೆ ಕೊಡುವ ದಿನ ಇವರ ಮನೆಯಲ್ಲು ಸೂತಕವಾದರೆ ಇವರು ದೇವರ ನಡೆಯಲ್ಲಿ ನಿಂತು ತಂತ್ರಿದಕ್ಷಿಣೆ ಕೊಡಬೇಕಷ್ಟೆ. ಅಂಗಳಕ್ಕೆ ಇಳಿಯಲಾರದವರು ತಂತ್ರಿದಕ್ಷಿಣೆ ಹ್ಯಾಗೆ ಕೊಡುವರು? ಎಲ್ಲಿ ಕೊಡುವದು? ಇದಕ್ಕಾಗಿಯೇ ಪರದಂಡ ಮನೆಯವರಿಗೆ ಸೂತಕವಿಲ್ಲವೆಂದು ದೇವರ ಕಟ್ಟು ಇರುವದಾಗಿದೆ. ಹಾಜರಿದ್ದವರೇ, ಈ ರೀತಿ ಪಂಚಾಯಿತಿಗೆ ಮಾಡಿ ಹಳ್ಳಿಯ ಊರು ದೇವಸ್ಥಾನಗಳೆಲ್ಲಾ ಮಾಲೀಪಾಲಾಗಿವೆ. ಇಗ್ಗುತಪ್ಪ ದೇವಸ್ಥಾನದಲ್ಲಿ ಈ ರೀತಿ ಅನಾಹುತ ಆಚರಿಸಿ ಇಗ್ಗುತಪ್ಪದೇವರ ಯಾತ್ರೆ-ಘರ್ಕ್ಕೆ ಕಂಟಕ ತರಬೇಡಿರಿ. ಕೊಡಗಿನ ತಕ್ಕರಲ್ಲಿ, ಕೋಂಬಲೆ, ಕೋಯಿಮ, ನಜುದುಮುತ್ತೆಗಳಿಲ್ಲದ ತಕ್ಕರು ಇದ್ದಾರೋ? ಎಂಬದನ್ನು ನಿಮಗೆ ವಿಚಾರಿಸಲಿಕ್ಕೆ ಎಡೆ ಸಿಕ್ಕದಕ್ಕೆ ವ್ಯಸನಪಡುತ್ತೇವೆ. ಆದುದರಿಂದ ದೇಶದ ಮಹನೀಯರು ಮೇಲ್ಕಂಡ ಸಂಗತಿಗಳನ್ನು ವಿಚಾರಿಸಿ ಪಾಡಿದೇವಸ್ಥಾನದಲ್ಲಿ ಕೆಲವೆ ಜನ ತಕ್ಕಮುಖ್ಯಸ್ಥರು ಮಾಡಿದ ತೀರ್ಮಾನಗಳನ್ನು ರದ್ದುಪಡಿಸಬೇಕಾಗಿ ಎಲ್ಲಾ ಊರುತಕ್ಕ, ನಾಡುತಕ್ಕ, ದೇಶತಕ್ಕರಲ್ಲಿಯೂ, ಮಹನೀಯರಲ್ಲಿಯೂ, ವಿನಂತಿ ಮಾಡಿದ್ದಾಗಿದೆ.

'ಪರದಂಡ ಕುಟುಂಬಸ್ಥರು.'

ಕರ್ನಾಟಕ ಪ್ರಾಂತಿಯ ಕಾಂಗ್ರೆಸ್ ಸಮಿತಿ.

ಚರಖಾ ಸಂಘದ ಖಾದಿಯು ತುಟ್ಟಿ ಯಾಕೆ?

ಖಾದಿ ಪ್ರಕಟಣೆ 10

ಸ್ವತಃ ನೂತ ನೂಲಿನಿಂದ ಸಿದ್ಧಗೊಳಿಸುವ ಬಟ್ಟೆ ಹಾಗೂ ಚರಖಾ ಸಂಘದವರು ಸಿದ್ಧಗೊಳಿಸುವ ಬಟ್ಟೆ ಮಾತ್ರ ಕಾಂಗ್ರೆಸದ ದೃಷ್ಟಿಯಿಂದ ಅಧಿಕೃತ ಖಾದಿ ಎನಿಸುವದು. ಸ್ವತಃ ನೂತ ಬಟ್ಟೆಯನ್ನು ನೇಯಿಸಿಕೊಂಡರೆ ಅದು ತುಟ್ಟಿಯಾಗುವದಿಲ್ಲ. ಆದರೆ ಎಲ್ಲರಿಗೆ ಇದು ಸಾಧ್ಯವಿರದಿದ್ದರೆ ಚರಖಾ ಸಂಘದಿಂದ ಹೊರಡುವ ಖಾದಿಯನ್ನು ಮಾತ್ರ ಕಾಂಗ್ರೆಸದ ಅಭಿಮಾನಿಗಳು ಕೊಳ್ಳಬೇಕು. ಈ ಚರಖಾ ಸಂಘದ ಖಾದಿಯು ತುಟ್ಟಿಯಾಗುವ ಕಾರಣಗಳು ಕೆಳಗಿನಂತಿವೆ:-

ಚರಖಾ ಸಂಘವು ನೂಲುವವರ ಸಂಘವು. ಕರ್ನಾಟಕದಲ್ಲಿ ನೂಲುವವರಿಗೆ ಬೇಕಾಗುವ ಆಹಾರ ಹಾಗೂ ಬೇರೆ ಬೇರೆ ಕಾರಣಗಳಿಗಾಗಿ ಬೇಕಾಗುವ ಬಿಡುವಿನ ದಿನಗಳ ಲೆಕ್ಕ ಹಾಕಿದರೆ ಪ್ರತಿಯೊಬ್ಬನಿಗೆ ದಿನಾಲು 3 ಆಣೆ ಕೂಲಿ ದೊರೆಯುವದು ಅವಶ್ಯವೆಂದು ಕಂಡು ಬಂತು. ಅದರಂತೆ ತಾಸಿಗೆ ಸುಮಾರು 400 ಗಜದಂತೆ (ಇದು ಹೆಚ್ಚಿನ ವೇಗವು.) ದಿನಾಲು 8 ತಾಸು ನೂಲುವವರಿಗೆ ಚರಖಾ ಸಂಘದವರು 3 ಆಣೆ ಕೂಲಿಯನ್ನು ಕೊಡುವರು.

ಇದರಂತೆ ಹತ್ತಿ ಆರಿಯುವವರು, ಹಂಜೀ ಹಾಕುವವರು, ನೇಕಾರರು, ನೇಯ್ಗೆಲಸಕ್ಕೆ ಅವಶ್ಯವಿರುವ ಇತರ ಕೆಲಸಗಾರರು, ಅಗಸರು, ಬಣಗಾರರು ಮುಂತಾದವರಿಗೆ ಸಹ ದಿನದ ದುಡಿಮೆಯಿಂದ ಹೊಟ್ಟೆ ತುಂಬುವಂತೆ ಚರಖಾ ಸಂಘದವರು ಕೂಲಿಯನ್ನು ಕೊಡುವರು. ಇದರಿಂದಲೇ ಖಾದಿಯು ತುಟ್ಟಿಯಾಗುವದು. ಗಿರಣಿಗಳಲ್ಲಿ ಈ ಎಲ್ಲಾ ಕೆಲಸಗಳನ್ನು ತೀರ ಸ್ವಲ್ಪ ಜನರ ಸಹಾಯದಿಂದ ಯಂತ್ರಗಳೇ ಮಾಡುವವು. ಜನಸಾಮಾನ್ಯರ ಹೊರೆಯನ್ನು ಕಸಿದುಕೊಂಡು ಯಂತ್ರಗಳಿಗೆ ಕೊಟ್ಟು ಪರದೇಶದ ಯಂತ್ರದ ಕಾರಖಾನೆಗಳಿಗೂ ಇಲ್ಲಿಯ ಕೇವಲ ಬಂಡವಲುಗಾರರಿಗೂ ಹೇರಳವಾದ ಲಾಭವನ್ನು ಕೊಡುವ ಉದ್ದೇಶದಿಂದ ಗಿರಣಿಯ ಬಟ್ಟೆಯನ್ನು ಕೊಳ್ಳುವದು ವಿಹಿತವೊ ಅಥವಾ ನಮ್ಮ ಬಡ ದೇಶಭಾಂಧವರಿಗೆ ದುಡಿಮೆಯನ್ನು ಕಲ್ಪಿಸಿಕೊಟ್ಟು ಅವರಿಗೆ ಹೊಟ್ಟೆ ತುಂಬುವಂತೆ ಕೂಲಿಯನ್ನು ದೊರಕಿಸಿಕೊಡುವ ಖಾದಿಯನ್ನು ಕೊಳ್ಳುವದು ವಿಹಿತವೊ ಎಂಬದನ್ನು ಕರ್ನಾಟಕದ ಬಂಧು ಭಗಿನಿಯರು ವಿಚಾರ ಮಾಡಬೇಕು. ನಯವಾಗಿಯೂ ಅಗ್ಗವಾಗಿಯೂ ಕಾಣುವ ಗಿರಣಿ ಬಟ್ಟೆಗೆ ಒಮ್ಮೆಲೆ ಮರುಳಾಗಬಾರದು.

ಖಾದಿಯ ಈ ಆರ್ಥಿಕ ಮಹತ್ವವನ್ನರಿತೇ ಅದರ ಮಾರಾಟವನ್ನು ಜೋರಿನಿಂದ ಮುಂದರಿಸಲು ಪ್ರಾಂತೀಯ ಕಾರ್ಯಕಾರಿಮಂಡಲದವರು ಇದೇ 15ನೇ ಮಾರ್ಚದೊಳಗಾಗಿ 50,000 ರುಪಾಯಿಯ ಖಾದಿಯು ಮಾರಾಟವಾಗುವಂತೆ ಪ್ರಾಂತವನ್ನು ಕೇಳಿಕೊಂಡಿರುವರು. ಕಾರಣ ಎಲ್ಲರೂ ಖಾದಿಯ ಮಾರಾಟಕ್ಕಾಗಿ ಎಲ್ಲ ರೀತಿಯಿಂದ ಪ್ರಯತ್ನಿಸಬೇಕು.

ಖಾದಿ ಪ್ರಚಾರವು ರಾಷ್ಟ್ರೀಯ ಧರ್ಮ.

ಕರ್ನಾಟಕ ಪ್ರಾಂತೀಯ- ಕಾಂಗ್ರೆಸ್ ಸಮಿತಿಯ ಪ್ರಕಟಣೆ ೧೧.

ರಾಷ್ಟ್ರೀಯ ಮಹಾಸಭೆಯೂ, ಮಹಾತ್ಮ ಗಾಂಧಿಯವರೂ, ಖಾದಿಯೇ ಸ್ವರಾಜ್ಯದ ಹಾದಿ ಎಂದು ಹೇಳುವರು. ಅದೇಕೆ? ಬ್ರಿಟಿಷರ ಆಳ್ವಿಕೆಯಿಂದೀಚೆಗೆ ಹಡಗು ಪಡೆ ಹಾಗೂ ಕಲ್ಲಿದ್ದಲ್ಲಿ ಯಂತ್ರಗಳ ಭೂಮಿಯಾದ ಇಂಗ್ಲೆಂಡಿನ ಸರಕುಗಳು ಈ ದೇಶದಲ್ಲಿ ಅಗ್ಗವಾಗಿ ದೊರೆಯ ಹತ್ತಿದುವು. ಇಂಥಾ ವ್ಯಾಪಾರವನ್ನು ಮುಂದುವರಿಸುವದೇ ನಮ್ಮ ಪರಕೀಯ ಸರಕಾರದ ಉದ್ದೇಶವಾಯಿತು. ಈ ಅನ್ಯಾಯದ ಹೋರಾಟದಿಂದ ಕೃಷಿಯ ತರುವಾಯ ಅತ್ಯಂತ ದೊಡ್ಡದಾದ ಬಟ್ಟೆಯ ತಂದರೆ ನೂಲುವ ಹಾಗೂ ನೇಯುವ ಉದ್ಯೋಗವುಕೆಟ್ಟುಹೋಯಿತು. ಇಂಗ್ಲೆಂಡು ಅಂಥವಾ ಪರದೇಶಗಳ ಗಿರಣಿ ಬಟ್ಟೆಗಳು ಬರುವ ಪೂರ್ವದಲ್ಲಿ ಹಿಂದೀಯರಿಗೆ ಬೇಕಾಗುವ ಎಲ್ಲ ವಸ್ತ್ರಗಳು ಇದೇ ದೇಶದಲ್ಲಿ ಸಿದ್ಧವಾಗುತ್ತಿದ್ದದ್ದಲ್ಲದೆ ಪರದೇಶಗಳಿಗೆ ಕೂಡ ಕೆಲವು ಮಟ್ಟಿಗೆ ಅವನ್ನು ಪೂರೈಸಲಾಗುತ್ತಿತ್ತು. ಈಗ ಪರಕೀಯರ ಅಂತರಾಷ್ಟ್ರೀಯ ಧೋರಣದಿಂದ ಸಾರ್ವತ್ರಿಕವಾದ ಇಂಥ ದೊಡ್ಡ ವ್ಯವಸಾಯವು ನೆಲ್ಲಗೆ ಬಿದ್ದು ಜನರು ಹೊಟ್ಟೆಗಿಲ್ಲದೆ ಕಂಗಾಲಾಗತೊಡಗಿರುವರು. ಈ ಕಂಗಾಲ ಸ್ಥಿತಿಯನ್ನು ದೂರಮಾಡುವ ಹಂಚಿಕೆಗಳ ಯೋಜನೆಗಾಗಿಯೇ 1881 ರಲ್ಲಿ ರಾಷ್ಟ್ರೀಯ ಮಹಾಸಭೆಯು ಜನ್ಮವೆತ್ತಿ 1920 ರಲ್ಲಿ ಖಾದಿಯ ದಿವ್ಯಾಸ್ತ್ರವನ್ನು ಅಮಲಿನಲ್ಲಿ ತಂದರು. ಆಗಿನಿಂದ ಈಗಿನ ವರೆಗೆ ಖಾದಿಯು ನಮ್ಮ ಸ್ವರಾಜ್ಯದ ಹೋರಾಟದ ಅಡಿಗಲ್ಲಾಗಿದೆ. ನಾವು ಉಪಯೋಗಿಸುವ ಇತರ ವಸ್ತುಗಳಾದರೂ ಸ್ವದೇಶಿಯವೇ ಇರಬೇಕೆಂದು ಬೇರೆ ಹೇಳಬೇಕಾಗಿಲ್ಲ. ಹೀಗೆ ಪ್ರಾಮುಖ್ಯವ್ಯವಸಾಯವಾದ ಖಾದಿಯ ಸುತ್ತಲೂ ಇತರ ಉದ್ಯೋಗಗಳಿಗೆ ಆಸ್ಪದ ಉಂಟಾಗಿ ಹೊಟ್ಟೆಗಿಲ್ಲದೆ ಅಲೆದಾಡುತ್ತಿರುವ ನಮ್ಮ ಬಡ ಬಾಂಧವರಿಗೆ ಉಪಜೀವನದ ಮಾರ್ಗವಾಗುವದು.

ಅನ್ನ ಹಾಗೂ ವಸ್ತ್ರಗಳಿಲ್ಲದೆ ಮನುಷ್ಯನು ಜೀವಿಸಲಾರನು. ಇವೆರಡನ್ನು ಒದಗಿಸಿ ಕೊಡುವ ಖಾದೀ ಪ್ರಸಾರವು ನಮ್ಮ ರಾಷ್ಟ್ರ ಧರ್ಮವಲ್ಲದೆ ಮತ್ತೇನು? ಕೃಷಿ ಪ್ರಧಾನ ಹಿಂದೂಸ್ಥಾನದಲ್ಲಿ ಒಕ್ಕಲಿತನವು ವರ್ಷದಲ್ಲಿ 6 ತಿಂಗಳು 8 ತಿಂಗಳು ನಡೆಯುವ ರೂಢಿಯು. ಅಲ್ಲದೆ ಒಕ್ಕಲತನದಲ್ಲಿ ನಿಶ್ಚಿತವಾದ ಪ್ರಾಪ್ತಿ ಇಲ್ಲ, ಇಂಥವುದರಲ್ಲಿ ನೂಲುವ ಹಾಗೂ ನೇಯುವ ವ್ಯವಸಾಯದಂಥ ಸಾರ್ವತ್ರಿಕವೂ, ವ್ಯಾಪಕವೂ ಆದ ವ್ಯವಸಾಯವೇ ಜನರ ಜೀವನಾಧಾರವು. ಇಂಥಾ ಅಮೋಘವಾದ ಉದ್ಯೋಗವನ್ನು ಎಲ್ಲ ವಿಧದಿಂದಲೂ ಪ್ರೋತ್ಸಾಹಿಸುವದೇ ಪ್ರತಿಯೊಬ್ಬ ದೇಶಹಿತ ಚಿಂತಕನ ಪರಮಧರ್ಮವಿದ್ದು 15 ನೇ ಮಾರ್ಚನೊಳಗಾಗಿ ರೂ. 50,000 ಬೆಲೆಯ ಹೆಚ್ಚಿನ ಖಾದಿಯನ್ನು ಮಾರಾಟಮಾಡಬೇಕೆಂದು ಮಾಡಿರುವ ಗೊತ್ತುವಳಿಯನ್ನು ಯಶಸ್ವೀಮಾಡಲು ಮನಮುಟ್ಟಿ ಯತ್ನಿಸಬೇಕು.

ಧಾರವಾಡ, 10.2.40. — ನಾ. ಸು. ಹರ್ಡೀಕರ್, ಗೌ. ಕಾರ್ಯದರ್ಶಿ.

ವರ್ಷಗಳಿಂದ ಕೆಲವು ಜನರ ಹಿಮ್ಮತ್ತಿನಿಂ ನಾವು ದೇವರ ತಕ್ಕರೆಂದು, '1840ರಲ್ಲಿ ಮೆ. ಅಪ್ಪಾರಂಡ ದಿವಾನ್ ಬೋಪಣ್ಣನವರು ತಕ್ಕ ಮೇದಯ್ಯನಿಗೆ ಕೊಟ್ಟ ಸಂಬಳ' ಎಂಬದೊಂದು ದಾಖ್ಲೆಯಿಂದ ಈಗಿನ ೀರ್ಮಾನ ತಂದರು. ಹೀಗೆ ಸಂಬಳಕಾರು ಸದರಿ ದೇವಸ್ಥಾನದಲ್ಲಿ ಅನೇಕರು ರುವರು. ಅಯ್ಯೋ, ಕೊಡಗಿನಲ್ಲಿ ಮೇ ಕಾಣಿಸಿದ 4 ತರದ ತಕ್ಕರಿಗೆ ಸಂಬಳವಿದೆ ೋ? ಸಂಬಳ ಹೊಂದುವವರು ತಕ್ಕರೋ? ಂಬಿದನ್ನು ಈ ಮಧ್ಯೆ 22-12-39ರಲ್ಲಿ ರವಂಡ ಕುಟುಂಬಸ್ಥರು ಪಾಡಿದೇವಸ್ಥಾ ದಲ್ಲಿ ಇವರ ಪಂಚಾಯಿತಿಯ ದಿನ ಾಜರ್ ಮಾಡಿದ ಒಂದು ಅರ್ಜಿಯನ್ನು ದರಿ ಪಂಚಾಯಿತರು ಯಾ ತಕ್ಕಮುಖ್ಯ ರು, ಯಾವ ರೀತಿ ವಿಲೇವಾರಿಪಡಿಸಿದರು? ದರಿ ಇವರು ಹೊ ತೆಗೆದು ವಿಲೆಪಡಿಸಿದ ನ 60 ಜನರಿದ್ದರೆಂದು ಬರೆದಿರುವರು. ಾಡಿನಾಲ್ಕು ನಾಡಿನಲ್ಲಿ 60 ಜನರೇ ಇರು ರೋ? ಇವರು ಎಲ್ಲಿ ಕುಳಕ್ಕೆ ತಿಳಿಸಿರುವ ೋ? ಅಥವ ಇದ್ದ 60 ಜನರು ಸಹ ಇ ರಿಗೆ ರೂಬು ರೂಬು ಹಾಜರು ಮಾಡಿದ ೂಂಗಂಡ ಮುದ್ದಯ್ಯ ಸುಭೆದಾರರು ಈ ನಾಡಿನ ತಕ್ಕಮುಖ್ಯಸ್ಥರನ್ನು ವಿಚಾರ ಾಡಿ ತೀರ್ಮಾನ ಮಾಡಿದ ಆರ್ಡರನ್ನು ್ರೀ ಕೇಟೋಳಿರ ಚಂಗಪ್ಪ ದಿವಾನ್ ಬ ದೂರ್‌ರವರು ಯಾವ ವಿಷಯದಿಂದ ರ ್ದು ಮಾಡಿ, ಹೊ ತೆಗೆಯಲಿಕ್ಕೆ ಕಾರಣ? ೊಡಗು ಚರಿತ್ರೆ, ಮತ್ತು ನಡಿಕೇರಿಯಂ ಚಿಣ್ಣಪ್ಪನವರ ಪಟ್ಟೋಲೆಪಳಮೆ ಇ ್ರ ದೇಶದ ಜನಾಂಗ ಒಪ್ಪಿದ, ಸರಕಾರ ಒಪ್ಪಿದ ಪುಸ್ತಕಗಳು. ಇವುಗಳಲ್ಲಿರುವ ರವಂಡ ಹಕ್ಕನ್ನು ಹ್ಯಾಗೆ ರದ್ದು ಮಾಡಿ ರು? 'ಎಲ್ಲಾ ನಾಡು ತಕ್ಕಮುಖ್ಯಸ್ಥರ ನ್ನು ವಿಚಾರಿಸಿದಲ್ಲು ಯಾರಿಗೂ ಕಂಡಿತ ಕೇಳಲು ಸಾಧ್ಯವಾಗದ್ದರಿಂದ ಹೊ ತೆಗೆ ಯಲಾಯಿತು' ಎಂಬದಾಗಿ ಬರೆದಿರುವ ೆ. ಇಂಥಾ ಮೇಲೆ ಹೇಳಲ್ಪಟ್ಟ ದಾ ್ಲೆ ಅನುಭವಗಳು ಆ ದಿನ ಇವರು ವಿಚಾ ರಿಸಿ ಪ್ರಸ್ತಾಪಕ್ಕೆ ಬರಲಿಲ್ಲವೇ? ಮಧ್ಯೆ ್ರೀ ಅಲ್ಲಾರಂಡ ಸೋಮಣ್ಣ 93 ವರ್ಷ ್ರಾಯದವರು ತಮ್ಮ ಅನುಭವದಲ್ಲಿ ೇಳಿ ತಿಳಿದದನ್ನೂ, ಶ್ರೀಗಳಾದ ಕಾಂಡಂ ಡ ಮುತ್ತಣ್ಣ, ಮೇರಿಯಂಡ ಸುಬ್ಬಯ್ಯ ್ಯರೆ ತಮ್ಮ ತಮ್ಮ ಅನುಭವವನ್ನೂ ಹೇ ಿದ್ದು ಸರಿಯಷ್ಟೆ. ಇದನ್ನು ಯಾವ ರೀ ವಿವೇಚಿಸಿದರು? ಸದರಿ ಹೊ ತೆಗೆಯು ಕ್ಕೆ ಉಭಯ ಕಡೆಯವರ ಒಪ್ಪಿಗೆಯಿಂ ಹಾಜರಿದ್ದವರು ಬರೆದಿರುತ್ತಾರೆ. ಯಾವ ಒಪ್ಪಂದ, ಯಾವ ದಾಕ್ಲೆ? ಆಗ್ಯೆ ಪ ವಂಡ ಮನೆಯವರು ಏನು ಹೇಳಿದರೆಂ ಬದನ್ನು ಯಾಕೆ ಬಚ್ಚಿಡುವರಿ? ದಿವಾನ ರ ತಕ್ಕ ಮೇದೈಯ್ಯನಿಗೆ ಕೊಟ್ಟ ಸಂಬಳ ವೆಂಬವೊಂದು ದಾಕ್ಲೆಯಿಂದ ನಂಬಡ ಮಂಡ ಮನೆಯವರು ತಕ್ಕರೆಂದು ಹೊ ತೆ ಗೆಯಲಿಕ್ಕೆ ಕಾರಣವಾಯಿತಲ್ಲವೇ? ಹಾ ಗಾದರೆ 5-7 ರುಪಾಯಿ ಸಂಬಳ ಹೊಂ ದುವವರು ತಂತ್ರಿ ದಕ್ಷಿಣೆ ಕೊಡುವದ ಕ್ಕಿಂತ ಆ ದೇವಸ್ಥಾನದಲ್ಲಿ 18 ರೂಪಾ ಯಿ ಸಂಬಳ ಹೊಂದುವವರು ತಂತ್ರಿದಕ್ಷಿ ಣೆಕೊಟ್ಟರೆ ಒಳ್ಳೆಯದಲ್ಲವೋ? ಕೊಡಗಿನಲ್ಲಿ ಮಣ್ಣಿಗೆ ತಕ್ಕನೆಯೋ, ಆಳಿಗೆ ತಕ್ಕಾನೆಯೋ? 1840ರಲ್ಲಿ ಬರೆದ ಈ ನಂಬಡಮಂಡ ಮೇದೈಯ್ಯನ ಸಂಬಳ ಆವನ ಮಗ ತಿಪ್ಪಯ್ಯ, ಅವನ ಮಗ ಮೇದಪ್ಪ ಇವರಲ್ಲದೆ ನಂಬಡಮಂಡ ಕುಳಕ್ಕೆ ಇದೆಯೋ? ಆ ರೀತಿ ನೋಡಿದಲ್ಲಿ ಪೂಕ್ಕತಕ್ಕನೆಯೋ ಆಳುತಕ್ಕನೆಯೋ? ಶ್ರೀ ಕೇಟೋಳಿರ ಚಂಗಪ್ಪ ದಿವಾನ್ ಬಹದೂರ್‌ರವರು ಇವನ್ನೆಲ್ಲ ನೋಡಿಯೇ ನಂಬಡಮಂಡ ಮನೆಯವರು ವಸ್ತುಶಾ ತಕ್ಕರೆಂದು ಬರೆದದ್ದಾಗಿದೆ. ಇದನ್ನೆಲ್ಲ ಕಂಡು ಕಾಣದಂತೆ ಬಚ್ಚಿಟ್ಟು, ದಿವಾನರ ತಸ್ಕೀಕಿನಲ್ಲು ಸಂಬಳ ತಕ್ಕ ಮೇದೈಯ್ಯನಿಗೆಯೆಂಬ ತಕ್ಕನೆ ಹಿಡಿದು ಮತ್ತು ಹೊ ತೆಗೆದು ನಂಬಡಮಂಡ ಮನೆಯವರು ತಕ್ಕರೆಂದು ತೀರ್ಮಾನಮಾಡಿದ್ದು ಪೂರಾ ಪಕ್ಷಪಾತ. ಮತ್ತು ದೇವರ ಪದ್ಧತಿಗೆ ವಿರೋಧವಾಗಿದೆ. ಆದುದರಿಂದ ನೀವು ಕೆಲವು ಜನರು ಈ ರೀತಿ ಪಾಡಿದೇವಸ್ಥಾನದಲ್ಲು ಮಾಡಿದ ತೀರ್ಮಾನವು ಯಾವ ಬಾಬಿನಲ್ಲೂ ಮಂಜೂರಾಗಲಿಕ್ಕಿಲ್ಲ. ಒಂದುವೇಳೆ ಸದರಿಯವರು ತಂತ್ರಿ ದಕ್ಷಿಣೆ ಕೊಡುವ ದಿನ ಇವರ ಮನೆಯಲ್ಲು ಸೂತಕವಾದರೆ ಇವರು ದೇವರ ನಡೆಯಲ್ಲಿ ನಿಂತು ತಂತ್ರಿದಕ್ಷಿಣೆ ಕೊಡಬೇಕಷ್ಟೆ. ಅಂಗಳಕ್ಕೆ ಇಳಿಯಲಾರದವರು ತಂತ್ರಿದಕ್ಷಿಣೆ ಹ್ಯಾಗೆ ಕೊಡುವರು? ಎಲ್ಲಿ ಕೊಡುವದು? ಇದಕ್ಕಾಗಿಯೇ ಪರದಂಡ ಮನೆಯವರಿಗೆ ಸೂತಕವಿಲ್ಲವೆಂದು ದೇವರ ಕಟ್ಟು ಇರುವದಾಗಿದೆ. ಹಾಜರಿದ್ದವರೇ, ಈ ರೀತಿ ಪಂಚಾಯಿತಿಗೆ ಮಾಡಿ ಹಳ್ಳಿಯ ಊರು ದೇವಸ್ಥಾನಗಳೆಲ್ಲಾ ಮೂಲೆಪಾಲಾಗಿವೆ. ಇಗ್ಗುತಪ್ಪ ದೇವಸ್ಥಾನದಲ್ಲು ಈ ರೀತಿ ಅನಾಹುತ ಆಚರಿಸಿ ಇಗ್ಗುತಪ್ಪದೇವರ ಯಾತಾರ್ಥಕ್ಕೆ ಕಂಟಕ ತರಬೇಡಿರಿ. ಕೊಡಗಿನ ತಕ್ಕರಲ್ಲಿ, ಕೋಂವಳೆ, ಕೋಯಿಮ, ನಜುರುಮುಚ್ಚಿಗಳಿಲ್ಲದ ತಕ್ಕರು ಇದ್ದಾರೋ? ಎಂಬವನ್ನು ನಿಮಗೆ ವಿಚಾರಿಸಲಿಕ್ಕೆ ಎಡೆ ಸಿಕ್ಕದಕ್ಕೆ ವ್ಯಸನಪಡುತ್ತೇವೆ. ಆದುದರಿಂದ ದೇವರ ಮಹನೀಯರು ಮೇಲ್ಕಂಡ ಸಂಗತಿಗಳನ್ನು ವಿಚಾರಿಸಿ ಪಾಡಿದೇವಸ್ಥಾನದಲ್ಲು ಕೆಲವು ಜನ ತಕ್ಕಮುಖ್ಯಸ್ಥರು ಮಾಡಿದ ತೀರ್ಮಾನಗಳನ್ನು ರದ್ದುಪಡಿಸಬೇಕಾಗಿ ಎಲ್ಲಾ ಊರುತಕ್ಕ, ನಾಡುತಕ್ಕ, ದೇಶತಕ್ಕರಲ್ಲಿಯೂ, ಮಹನೀಯರಲ್ಲಿಯೂ, ವಿನಂತಿ ಮಾಡಿದ್ದಾಗಿದೆ.

'ಪರದಂಡ ಕುಟುಂಬಸ್ಥರು.'

ಕರ್ನಾಟಕ ಪ್ರಾಂತಿಯ ಕಾಂಗ್ರೆಸ್ ಸಮಿತಿ.

ಚರಖಾ ಸಂಘದ ಖಾದಿಯು ತುಟ್ಟಿಯಾಕೆ?

ಖಾದಿ ಪ್ರಕಟಣೆ 10

ಸ್ವತಃ ನೂತ ನೂಲಿನಿಂದ ಸಿದ್ಧಗೊಳಿಸುವ ಬಟ್ಟೆ ಹಾಗೂ ಚರಖಾ ಸಂಘದವರು ಸಿದ್ಧಗೊಳಿಸುವ ಬಟ್ಟೆ ಮಾತ್ರ ಕಾಂಗ್ರೆಸದ ದೃಷ್ಟಿಯಿಂದ ಅಧಿಕೃತ ಖಾದಿ ಎನಿಸುವದು. ಸ್ವತಃ ನೂತು ಬಟ್ಟೆಯನ್ನು ನೇಯಿಸಿಕೊಂಡರೆ ಅದು ತುಟ್ಟಿಯಾಗುವದಿಲ್ಲ. ಆದರೆ ಎಲ್ಲರಿಗೆ ಇದು ಸಾಧ್ಯವಿರದಿದ್ದರೆ ಚರಖಾ ಸಂಘದಿಂದ ಹೊರಡುವ ಖಾದಿಯನ್ನು ಮಾತ್ರ ಕಾಂಗ್ರೆಸದ ಅಭಿಮಾನಿಗಳು ಕೊಳ್ಳಬೇಕು. ಈ ಚರಖಾ ಸಂಘದ ಖಾದಿಯು ತುಟ್ಟಿಯಾಗುವ ಕಾರಣಗಳು ಕೆಳಗಿನಂತಿವೆ:-

ಚರಖಾ ಸಂಘವು ನೂಲುವವರ ಸಂಘವು. ಕರ್ನಾಟಕದಲ್ಲಿ ನೂಲುವವರಿಗೆ ಬೇಕಾಗುವ ಆಹಾರ ಹಾಗೂ ಬೇರೆ ಬೇರೆ ಕಾರಣಗಳಿಗಾಗಿ ಬೇಕಾಗುವ ಬಿಡುವಿನ ದಿನಗಳ ಲೆಕ್ಕ ಹಾಕಿದರೆ ಪ್ರತಿಯೊಬ್ಬನಿಗೆ ದಿನಾಲು 3 ಆಣೆ ಕೂಲಿ ದೊರೆಯುವದು ಅವಶ್ಯವೆಂದು ಕಂಡು ಬಂತು. ಆದರಂತೆ ತಾಸಿಗೆ ಸುಮಾರು 400 ಗಜದಂತೆ (ಇದು ಹೆಚ್ಚಿನ ವೇಗವು.)ದಿನಾಲು 8 ತಾಸು ನೂಲುವವರಿಗೆ ಚರಖಾ ಸಂಘದವರು 3 ಆಣೆ ಕೂಲಿಯನ್ನು ಕೊಡುವರು.

ಇದರಂತೆ ಹತ್ತಿ ಆರಿಯುವವರು, ಹಂಜೀ ಹಾಕುವವರು, ನೇಕಾರರು, ನೇಯ್ಗೆಲಸಕ್ಕೆ ಆವಶ್ಯವಿರುವ ಇತರ ಕೆಲಸಗಾರರು, ಆಗಸರು, ಬಣಗಾರರು ಮುಂತಾದವರಿಗೆ ಸಹ ದಿನದ ದುಡಿಮೆಯಿಂದ ಹೊಟ್ಟೆ ತುಂಬುವಂತೆ ಚರಖಾ ಸಂಘದವರು ಕೂಲಿಯನ್ನು ಕೊಡುವರು. ಇದರಿಂದಲೇ ಖಾದಿಯು ತುಟ್ಟಿಯಾಗುವದು. ಗಿರಣಿಗಳಲ್ಲಿ ಈ ಎಲ್ಲಾ ಕೆಲಸಗಳನ್ನು ತೀರ ಸ್ವಲ್ಪ ಜನರ ಸಹಾಯದಿಂದ ಯಂತ್ರಗಳೇ ಮಾಡುವವು. ಜನಸಾಮಾನ್ಯರ ಹೊರೆಯನ್ನು ಕಸಿದುಕೊಂಡು ಯಂತ್ರಗಳಿಗೆ ಕೊಟ್ಟು ಪರದೇಶದ ಯಂತ್ರದ ಕಾರಖಾನೆಗಳಿಗೂ ಇಲ್ಲಿಯ ಕೇವಲ ಬಂಡವಲುಗಾರರಿಗೂ ಹೇರಳವಾದ ಲಾಭವನ್ನು ಕೊಡುವ ಉದ್ದೇಶದಿಂದ ಗಿರಣಿಯ ಬಟ್ಟೆಯನ್ನು ಕೊಳ್ಳುವದು ಹಿತವೋ ಅಥವಾ ನಮ್ಮ ಬಡ ದೇಶಭಾಂಧವರಿಗೆ ದುಡಿಮೆಯನ್ನು ಕಲ್ಪಿಸಿಕೊಟ್ಟು ಅವರಿಗೆ ಹೊಟ್ಟೆ ತುಂಬುವಂತೆ ಕೂಲಿಯನ್ನು ದೊರಕಿಸಿಕೊಡುವ ಖಾದಿಯನ್ನು ಕೊಳ್ಳುವದು ಹಿತವೋ ಎಂಬವನ್ನು ಕರ್ನಾಟಕದ ಬಂಧು ಭಗಿನಿಯರು ವಿಚಾರ ಮಾಡಬೇಕು. ನಯವಾಗಿಯೂ ಆಗ್ಗವಾಗಿಯೂ ಕಾಣುವ ಗಿರಣಿ ಬಟ್ಟೆಗೆ ಒಮ್ಮೆಲೆ ಮರುಳಾಗಬಾರದು.

ಖಾದಿಯು ಈ ಆರ್ಥಿಕ ಮಹತ್ವವನ್ನರಿತೇ ಅದರ ಮಾರಾಟವನ್ನು ಜೋರಿನಿಂದ ಮುಂದರಿಸಲು ಪ್ರಾಂತೀಯ ಕಾರ್ಯಕಾರಿಮಂಡಲದವರು ಇದೇ 15ನೇ ಮಾರ್ಚದೊಳಗಾಗಿ 50,000 ರುಪಾಯಿಯ ಖಾದಿಯು ಮಾರಾಟವಾಗುವಂತೆ ಪ್ರಾಂತವನ್ನು ಕೇಳಿಕೊಂಡಿರುವರು. ಕಾರಣ ಎಲ್ಲರೂ ಖಾದಿಯ ಮಾರಾಟಕ್ಕಾಗಿ ಎಲ್ಲ ರೀತಿಯಿಂದ ಪ್ರಯತ್ನಿಸಬೇಕು.

ಖಾದಿ ಪ್ರಚಾರವು ರಾಷ್ಟ್ರೀಯ ಧರ್ಮ.

ಕರ್ನಾಟಕ ಪ್ರಾಂತೀಯ. ಕಾಂಗ್ರೆಸ್ ಸಮಿತಿಯ ಪ್ರಕಟಣೆ ೧೧.

ರಾಷ್ಟ್ರೀಯ ಮಹಾಸಭೆಯೂ, ಮಹಾತ್ಮ ಗಾಂಧಿಯವರೂ, ಖಾದಿಯೇ ಸ್ವರಾಜ್ಯದ ಹಾದಿ ಎಂದು ಹೇಳುವರು. ಅದೇಕೆ? ಬ್ರಿಟಿಷರ ಆಳ್ವಿಕೆಯಿಂದೀಚೆಗೆ ಹಡಗು ಪಡೆ ಹಾಗೂ ಕಲ್ಲಿದ್ದಲ್ಲಿ ಯಂತ್ರಗಳ ಭೂಮಿಯಾದ ಇಂಗ್ಲಂಡಿನ ಸರಕುಗಳು ಈ ದೇಶದಲ್ಲಿ ಅಗ್ಗವಾಗಿ ದೊರೆಯ ಹತ್ತಿರುವವು. ಇಂಥಾ ವ್ಯಾಪಾರವನ್ನು ಮುಂದುವರಿಸುವದೇ ನಮ್ಮ ಪರಕೀಯ ಸರಕಾರದ ಉದ್ದೇಶವಾಯಿತು. ಈ ಅನ್ಯಾಯದ ಮೇಲಾಟದಿಂದ ಕೃಷಿಯ ತರುವಾಯ ಅತ್ಯಂತ ದೊಡ್ಡದಾದ ಬಟ್ಟೆಯ ಅಂದರೆ ನೂಲುವ ಹಾಗೂ ನೇಯುವ ಉದ್ಯೋಗವು ಕೆಟ್ಟು ಹೋಯಿತು. ಇಂಗ್ಲಂಡು ಅಂಥವಾ ಪರದೇಶಗಳ ಗಿರಣಿ ಬಟ್ಟೆಗಳು ಬರುವ ಪೂರ್ವದಲ್ಲಿ ಹಿಂದೀಯರಿಗೆ ಬೇಕಾಗುವ ಎಲ್ಲ ವಸ್ತ್ರಗಳು ಇದೇ ದೇಶದಲ್ಲಿ ಸಿದ್ಧವಾಗುತ್ತಿದ್ದದ್ದಲ್ಲದೆ ಪರದೇಶಗಳಿಗೆ ಕೂಡ ಕೆಲವು ಮಟ್ಟಿಗೆ ಅವನ್ನು ಪೂರೈಸಲಾಗುತ್ತಿತ್ತು. ಈಗ ಪರಕೀಯದ ಅಂತರಾಷ್ಟ್ರೀಯ ಧೋರಣದಿಂದ ಸಾರ್ವತ್ರಿಕವಾದ ಇಂಥ ದೊಡ್ಡ ವ್ಯವಸಾಯವು ನೆಲ್ಲಿಗೆ ಬಿದ್ದು ಜನರು ಹೊಟ್ಟೆಗಿಲ್ಲದೆ ಕಂಗಾಲಾಗತೊಡಗಿರುವರು. ಈ ಕಂಗಾಲ ಸ್ಥಿತಿಯನ್ನು ದೂರಮಾಡುವ ಹಂಚಿಕೆಗಳ ಯೋಜನೆಗಾಗಿಯೇ 1881 ರಲ್ಲಿ ರಾಷ್ಟ್ರೀಯ ಮಹಾಸಭೆಯು ಜನ್ಮವೆತ್ತಿ 1920 ರಲ್ಲಿ ಖಾದಿಯ ದಿವ್ಯಾಸ್ತ್ರವನ್ನು ಅಮಲಿನಲ್ಲಿ ತಂದರು. ಆಗಿನಿಂದ ಈಗಿನ ವರೆಗೆ ಖಾದಿಯು ನಮ್ಮ ಸ್ವರಾಜ್ಯದ ಹೋರಾಟದ ಅಡಿಗಲ್ಲಾಗಿದೆ. ನಾವು ಉಪಯೋಗಿಸುವ ಇತರ ವಸ್ತ್ರಗಳಾದರೂ ಸ್ವದೇಶಿಯವೇ ಇರಬೇಕೆಂದು ಬೇರೆ ಹೇಳಬೇಕಾಗಿಲ್ಲ. ಹೀಗೆ ಪ್ರಾಮುಖ್ಯವ್ಯವಸಾಯವಾದ ಖಾದಿಯು ಸುತ್ತಲೂ ಇತರ ಉದ್ಯೋಗಗಳಿಗೆ ಆಸ್ಪದ ಉಂಟಾಗಿ ಹೊಟ್ಟೆಗಿಲ್ಲದೆ ಅಲೆದಾಡುತ್ತಿರುವ ನಮ್ಮ ಬಡ ಬಾಂಧವರಿಗೆ ಉಪಜೀವನದ ಮಾರ್ಗವಾಗುವದು.

ಅನ್ನ ಹಾಗೂ ವಸ್ತ್ರಗಳಿಲ್ಲದೆ ಮನುಷ್ಯನು ಜೀವಿಸಲಾರನು. ಇವೆರಡನ್ನು ಒದಗಿಸಿ ಕೊಡುವ ಖಾದೀ ಪ್ರಸಾರವು ನಮ್ಮ ರಾಷ್ಟ್ರ ಧರ್ಮವಲ್ಲದೆ ಮತ್ತೇನು? ಕೃಷಿ ಪ್ರಧಾನ ಹಿಂದೂಸ್ಥಾನದಲ್ಲಿ ಒಕ್ಕಲಿತನವು ವರ್ಷದಲ್ಲಿ 6 ತಿಂಗಳು 8 ತಿಂಗಳು ನಡೆಯುವ ರೂಢಿಯು. ಅಲ್ಲದೆ ಒಕ್ಕಲತನದಲ್ಲಿ ನಿಶ್ಚಿತವಾದ ಪ್ರಾಪ್ತಿ ಇಲ್ಲ, ಇಂಥವುದರಲ್ಲಿ ನೂಲುವ ಹಾಗೂ ನೇಯುವ ವ್ಯವಸಾಯದಂಥ ಸಾರ್ವತ್ರಿಕವೂ, ವ್ಯಾಪಕವೂ ಆದ ವ್ಯವಸಾಯವೇ ಜನರ ಜೀವನಾಧಾರವು. ಇಂಥಾ ಅಮೋಘವಾದ ಉದ್ಯೋಗವನ್ನು ಎಲ್ಲ ವಿಧದಿಂದಲೂ ಪ್ರೋತ್ಸಾಹಿಸುವದೇ ಪ್ರತಿಯೊಬ್ಬ ದೇಶಹಿತ ಚಿಂತಕನ ಪರಮ ಧರ್ಮವಿದ್ದು 15 ನೇ ಮಾರ್ಚನೊಳಗಾಗಿ ರೂ. 50,000 ಬೆಲೆಯ ಹೆಚ್ಚಿನ ಖಾದಿಯನ್ನು ಮಾರಾಟಮಾಡಬೇಕೆಂದು ಮಾಡಿರುವ ಗೊತ್ತುವಳಿಯನ್ನು ಯಶಸ್ವೀಮಾಡಲು ಮನಮುಟ್ಟಿ ಯತ್ನಿಸಬೇಕು.

ಧಾರವಾಡ, 10.2.40.

ನಾ. ಸು. ಹರ್ಡೀಕರ್, ಗೌ. ಕಾರ್ಯದರ್ಶಿ.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ ಪಿ. ಜಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮ. ಅಪ್ಪಾಮಾಡ ಮಾದಪ್ಪನವರು ಮತ್ತು ಮ. ಜಿ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ ಕೆ. ಮೊಗಪ್ಪನವರು.

ನಾಪೋಕ್ಲು—ಮ. ಬೆಳ್ಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ. ಎಚ್. ಎಂ. ಕುಪ್ಪಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ: — (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟಾಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-19) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ಡಾಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ್ಷಿಪಕ್ಕಾಗಿಯೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್ ...ಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಸಿಲ್ಹೆಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.

52-3

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ತಾ. ೨೩—೨—೧೯೪೦.

ವಾರ್ಷಿಕ ಚಂದಾ ರೂ. ೩–೮–೦

ಸಂಪುಟ ೧೯] [ಸಂಚಿಕೆ ೩೯

MR. CAN'T. : These are very hard days. No, I can't save anything.

MR. CAN. : I have opend a CUMULATIVE D... ac now in the CORPORATION; after this I find that **I CAN SAVE.**

From small amounts set apart every month fortunes can be built. It is not difficult to set apart a rupee (or multiple thereof) per month from one's earnings. Those who opened the CUMULATIVE DEPOSIT accounts know how easy it is to save.

Have you opened yours?

THE CANARA BANKING CORPORATION LIMITED.

(Incorporated in British India)

Estd. 1906.

52-9

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್,

ಕಟಪಾಡಿ,—ದ. ಕನ್ನಡ.

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

52-15

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜೆ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಏಜೆಂಟರಾಗಿ ನೇಮಿಸಲ್ಪಟ್ಟಿರುವರು. ಅವರನು ಏಜೆಂಟರುಗಳಾಗಿ ನೇಮಿಸಿ ರಶೀದಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀದಿ ಪುಸ್ತಕಗಳು ಕೊಡಲಾಗಿವೆ. ಪಯಬಿಟ್ಟು ಚಂದಾದಾರರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀದಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮೊಣ್ಣಪ್ಪನವರು

ಪೊನ್ನಂಪೇಟೆ ನಾಡು—ಮೆ. ಸಿ. ಕೆ. ಸುಬ್ಬಮ್ಮಯ್ಯನವರು.

ಹಾಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಬಿ.
ಜಿ. ಮೊಣ್ಣಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು.

ನಾಪೋಕ್ಲು—ಮೆ. ಚೆಟ್ಟಿಪಂಡ ಯಂ. ಪೂಣಚ್ಚನವರು
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು

ಸೂಚನೆ — ಪ್ರಿಂಟೆಡ್ ರಶೀತಿ ಹೊಂದಿರುವವರಲ್ಲದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ಣ ಶಾಸ್ತ್ರೀಯ ರೀತಿಯಲ್ಲಿ ಆಯುರ್ವೇದ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗುಲ್ಮ ರೋಗವನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:—	(ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:—	(ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ: —	(ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(53 20)

ZANDU

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್.

ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮುಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮಪತ್ರ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52—4

ಕೃತ್ರಿಮ ಜಗತ್ತು.

ಲೇಖಕ:- ಬಕದೃಷ್ಟಿ.

ಇಂದಿನದು ನಾಗರೀಕತೆಯ ಕಾಲವೆಂದೆನ್ನುತ್ತಾರೆ. ಯಂತ್ರಸಾಮಗ್ರಿಗಳ ಸೃಷ್ಟಿಯಿಂದಾಗಲೀ, ನವನಾಗರೀಕತೆಯ ಪ್ರವೇಶನೆಯಿಂದಾಗಲೀ, ಅಥವಾ ಇನ್ನಾವ ಕಲಾಕೌಶಲದ ವಿಚಾರದಿಂದಲಾಗಲೀ ಇಂದಿನ ಯುಗವು ವಿವಿಧ ಸಂಸ್ಕೃತಿಗಳ ಉಚ್ಚ ಶಿಖರವನ್ನೇರಿದೆ ಎಂದು ಹೇಳುತ್ತಾರೆ. ಈ ನಾಗರೀಕತೆಯೊಂದಿಗೆ ಮಾನವನ ಆಚಾರ ವಿಚಾರವಾಗಲೀ, ನೀತಿ ವ್ಯವಹಾರವಾಗಲೀ ಬೆಳೆಯದೇ ಇಲ್ಲ; ಮಾನವನ ಜೀವನದಲ್ಲೇ ಸುಧಾರಣೆಯಿಲ್ಲ; ಅಥವಾ ಆತನ ದಿನಚರಿ ವ್ಯವಹಾರದಲ್ಲಿ ಅಭಿವೃದ್ಧಿಯಿಲ್ಲ; ಆತನ ಉಡಿಗೆ, ತೊಡಿಗೆ, ನಡತೆ, ನೀತಿ, ತಿಂಡಿ, ತಿನಸು, ಯಾಕೆ? ಮಾನವನ ವಿವಿಧ ಕ್ಷೇತ್ರಗಳಲ್ಲೆಲ್ಲ ಸುಧಾರಣಾಕ್ರಾಂತಿಯು ನಡೆದಿದೆ. ಎಂದುಸುರುತ್ತಾರೆ. ನಿಜವಿರಬಹುದು! ಆದರೆ ಸತ್ಪಥದಲ್ಲಿ ಹೇಗೋ ಹಾಗೇ ದುರ್ಮಾರ್ಗದಲ್ಲೂ ಸುಧಾರಣೆ(?)ಗಳಾಗುತ್ತವೆ. ನವೀನ ರೀತಿಯ ಕಳವುಗಳು, ವಿಚಿತ್ರ ಮೋಸಗಳು, ದಂಗು ಬಡಿಸುವ ಕೃತ್ರಿಮ ರೋಗಗಳು, ಇವು ತಡೆಯಿಲ್ಲದೆ ಮುಂದರಿದಿವೆ. ಇವರೊಂದಿಗೆಯೇ ಮಾನವನ ಅನುಕರಣ ಶಕ್ತಿಯು ಬೆಳೆದಿದೆಯೆಂದು ಬೇರೆ ಹೇಳಬೇಕಿಲ್ಲ. ಪೂರ್ವಾಪರ ವಿವೇಚನೆಯಿಲ್ಲದೆ, ಬೇಕು ಬೇಡಿಕೆಗಳ ಪರಿವೆಯಿಲ್ಲದೆ ಅನುಕರಣವು ನಡೆದಿದೆ. ಶೀತ ದೇಶದವರು ಚಳಿಗಾಗಿ ಉಣ್ಣೆ ಬಟ್ಟೆ ಧರಿಸುವರೆಂದರೆ ಉಷ್ಣ ದೇಶದವರು ಅದರ ವಿಚಾರವಿಲ್ಲದೆ ಶೋಕಿಗಾಗಿ ಅದನ್ನು ಧರಿಸಿ ಬೆವರಿಳಿಸಿಕೊಂಡು ಓಡಾಡುವರು. ಇದೀಗ ಅಂಧಾನುಕರಣೆಯೆಂದೆನಿಸುವದು ಇರಲಿ, ಇಂದು ಯಾವನೊಬ್ಬನಾದರೂ ಜನತೆಯ ಬಹಿರ್ವ್ಯಾಪಾರವನ್ನು ಗಮನಿಸಿದರೆ ಅವರಲ್ಲಿ ಸ್ವಾತಂತ್ರ್ಯದಾಹವು ಹುಟ್ಟಿ ಜೀವನದ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯ ಸಂಪಾದನೆಗೇ ಜೀವಮಾನವನ್ನು ನಿಕ್ಷೇಪಿಸಿಟ್ಟಂತೆ ಕಾಣುವದು. ಬಾಯಲ್ಲಿ ಬರುವ ಸ್ವಾತಂತ್ರ್ಯಘೋಷಣಗಳಿಂದ ಕೂಡಿದ ವಾಕ್ಸರಣೆ, ಹೊರಗೆ ತೋರಿಸುತ್ತಿರುವ ಅವನ ತ್ಯಾಗಬುದ್ಧಿಯನ್ನು ನೋಡಿದರೆ ಅವನಲ್ಲಿ ರಾಷ್ಟ್ರೀಯ ಜಾಗೃತಿ ಎಷ್ಟು ಉಚ್ಛ ಮಟ್ಟಕ್ಕೇರಿದೆಯೋ ಎಂಬ ಶಂಕೆಯುಂಟಾಗುವದು. ಆದರೆ ಪರಿಸ್ಥಿತಿಯನ್ನು ಕೂಲಂಕಷ ವಿಚಾರಿಸಿದರೆ ಅವರೊಳಗಿನ ಟೊಳ್ಳುತನ, ಒಡೆದು ಕಾಣುವದು. ವಾಚಕರ ತಾಳ್ಮೆಗೆಡದಿದ್ದರೆ ಮೇಲ್ಕಂಡ ನನ್ನ ಉದ್ಗಾರದ ಸ್ಪಷ್ಟೀಕರಣದ ಬಗ್ಗೆ ನಮ್ಮೂರಲ್ಲಿ ಆಗಾಗ್ಯೆ ನಡೆಯುತ್ತಿರುವ ಅನೇಕ ಕಾರ್ಯಗಳಲ್ಲಿ ಒಂದು ಸ್ಯಾಂಪಲನ್ನು ಎತ್ತಿ ಹೇಳುವೆನು. 'ನಮ್ಮೂರು' ಎಂದ ಮೇಲೆ ಅದರ ಪರಿಚಯ ಒಂದಿಷ್ಟು ನಿಮಗೆ ಬೇಡವೇ? ಒಂದೇ ವಾಕ್ಯದಲ್ಲಿ ನಿಮಗೆ ಹೇಳುವದಾದರೆ ಪ್ರಕೃತಿ ಸೌಂದರ್ಯದ ನೆಲೆವೀಡು ಅದು. ಜನತೆಯ ಪರಿಚಯವೆಂದರೆ ಎಲ್ಲರೂ ಬಾಯಲ್ಲಿ ಸ್ವಾತಂತ್ರ್ಯ ಶಬ್ದ ಧರಿಸಿದವರೇ ಅಲ್ಲ; ಸ್ವಾತಂತ್ರ್ಯದ ಮೂರ್ತಿಗಳು. ಪ್ರಗತಿ ಪ್ರತಿಷ್ಠೆಗಳನ್ನು ಪಡೆದು ತಾನೇ ತಾನಾಗಿ ಮೆರೆಯಬೇಕೆಂಬ ಮಹತ್ವಾಕಾಂಕ್ಷಿಗಳು. ಮೇಲಾಗಿ ಎಲ್ಲರೂ ಹಿಡಿದ ಧ್ಯೇಯಕ್ಕಾಗಿ ಪ್ರಾಣ ಕೊಡಲೂ ತಯಾರಿರುವ ಖಂಡಿತವಾದಿಗಳು. ಇಂಥಾ ನಮ್ಮ ನಾಡಿಗೆ ಪರಊರಿನ ಸಂಗೀತಗಾರರೊಬ್ಬರು ಬಂದರು. ಒಂದು ಖಚೇರಿ ನಡೆಸುವ ಏರ್ಪಾಡು ಮಾಡಲು ಒಬ್ಬರ ಆಶ್ರಯವನ್ನು ಹಿಡಿದು ಕಾರ್ಯ ಮಾಡತೊಡಗಿದರು. ಆಶ್ರಯದಾತರು ದೇಶೀಯನೆಂಬ ಈ ಮನುಷ್ಯನಿಂದ ಕಷ್ಟಗಳನ್ನು ಸಹಿಸಿ ಸಂಗೀತ ಕಚೇರಿಯ ಏರ್ಪಾಡು ಮಾಡಲುಪಕ್ರಮಿಸಿದರು. ಆದಾಗಲೇ ಒಬ್ಬ ಪ್ರತಿಸ್ಪರ್ಧಾಕಾಂಕ್ಷಿಯಲ್ಲಿ ಸೇಡಿನ ಬೀಜ ಉದ್ಭವವಾಯಿತು. 'ಸಂಗೀತವನ್ನು ನನ್ನ ಆಶ್ರಯ ಪಡೆದು ಕಾರ್ಯ ಮಾಡದೆ ಇತರರನ್ನು ಆಶ್ರಯಿಸಿರುವನಲ್ಲಾ; ಊರಿನಲ್ಲಿ ನನ್ನ ಪ್ರತಿಷ್ಠೆಗೆ ಕುಂದು ತಂದನಲ್ಲಾ; ಇರಲಿ, ಸಾಧಿಸಿಯೇ ನೋಡಬೇಕೆ' ಎಂದು ಪ್ರತೀಕಾರದ ಬೆಂಬಿನ ಪ್ರಯೋಗಕ್ಕೆ ಕೈಹಾಕಿದರು. ಸಂಗೀತ ಖಚೇರಿಗೆ ಜನರು ಬರಬಾರದೆಂದೂ ಪ್ರಚಾರ ಕೈಕೊಂಡರು. ಇದರಿಂದ ಸಂಗೀತ ಖಚೇರಿಯ ಯಶಸ್ವಿತೆಗೆ ಸ್ವಲ್ಪ ಧಕ್ಕೆ ಬಂದರೂ ಹೇಗೂ ಸಂಗೀತಗಾರರ ಅದೃಷ್ಟದಿಂದಲೂ ಯಾ ಪ್ರೋತ್ಸಾಹಕರ ಶ್ರಮದಿಂದಲೋ ಖಚೇರಿಯು ಸಾಂಗವಾಗಿ ನಡೆಯಿತು. ದೇಶಪ್ರೇಮ, ದೇಶೀಯರ ಉನ್ನತಿಯ ಹಾರೈಕೆ ಈ ಸೋಗುಗಳಿಂದ ವರ್ತಿಸುವ ಹಾಗೂ ಮುಂದಿನ ಪೀಳಿಗೆಗೆ ಮಾರ್ಗದರ್ಶಿಗಳೆಂದುಕೊಳ್ಳುವ ಮಹನೀಯರ ಈ ರೀತಿಯ ಬೆಳಕಿನಲ್ಲಿ ಸಭ್ಯರಂತೆ ವರ್ತಿಸಿ ಕತ್ತಲೆಯಲ್ಲಿ ಕತ್ತಿ ಬೀಸುವ ಕಾರ್ಯಗಳೂ ನಾಗರೀಕತೆಯ ಹೊಸ ವಿಧಾನಗಳೇ. ಇದು ಒಂದು ಮಾದರಿ.

ತನ್ನಲ್ಲಿ ಅರ್ಹತೆ ಇಲ್ಲದಿದ್ದರೂ ಇತರರ ವಸ್ತುಗಳಿಂದ ಜನತೆಯ ಕಣ್ಣು ಕಟ್ಟಿ ತನ್ನ ಹಿರಿಮೆಯನ್ನು ಸಾಧಿಸಿಕೊಳ್ಳುವ ಮಹನೀಯರಿಗೂ ನಮ್ಮೂರು ಆಶ್ರಯ ಕೊಟ್ಟಿದೆ. ಮೊನ್ನೆ ಮೊನ್ನೆ ನಮ್ಮೂರಿನಲ್ಲಿ ಒಂದು ಪ್ರದರ್ಶನ ನಡೆಯಿತು. ಅನೇಕರು ಕಷ್ಟಪಟ್ಟು ಬೆಳೆಸಿದ ತರಕಾರಿ, ಹಣ್ಣು ಹಂಪಲುಗಳನ್ನೂ ಪ್ರದರ್ಶಿಸಿದ್ದರು. ಈ ಮಧ್ಯೆ ಸಂತೆಗೆ ಮಾರಲು ಬಂದ ತರಕಾರಿಯನ್ನು ಕ್ರಯಕ್ಕೆ ಪಡೆದು ಪ್ರದರ್ಶನದಲ್ಲಿ ಇಟ್ಟು ತಾನು ವ್ಯವಸಾಯ ಚತುರನೆಂದೂ, ತನ್ನ ಹೆಗ್ಗಳಿಕೆಯನ್ನು ಜನತೆಯಲ್ಲಿ, ಕೊಚ್ಚಿಕೊಂಡು ಬಹುಮಾನ ಪಡಕೊಂಡ ನಮ್ಮ ಊರಿನ ವಿಭೂತಿಗಳ ಕುಟಿಲ ನೀತಿಯು ನಾಗರೀಕತೆಯ ಮುನ್ನಡೆಯ ಚಿಹ್ನೆಯೇ. ಕೃತ್ರಿಮ ಜಗತ್ತಿನ ಅನುಭವವೇ ಕಿವಿದರೆ ಮುಂದೆ 'ಬಕದೃಷ್ಟಿ'ಗೆ ಬರೆಯಿರಿ. ಅಂಥಾ ಕೊನೆಯದಾಗಿ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ಮೊನ್ನೆ ನಮ್ಮೂರಿನಲ್ಲಿ ಚುನಾವಣೆಯ ಪ್ರಸಂಗ ಒಂದು ಬಂದಿತು. ಚುನಾವಣೆಯೆಂದ ಮೇಲೆ ಓಟಿನ ಬೇಟೆ, ಪಕ್ಷಪಾಲನ ಮುಂತಾದ ಪ್ರಯೋಗ, ಉಮೇದ್ವಾರರ ಕಣ್ಣು ಕಟ್ಟುವ ಯೋಗ್ಯತಾ ಪ್ರದರ್ಶನ ಇವುಗಳ ಪ್ರತ್ಯೇಕ ವಿವರಣೆಯಗತ್ಯವಿಲ್ಲ. ಇವು ಒಂದು ಕಡೆ. ಮತಕ್ಕೊಂದರಂತೆ ನಿಮಗೆ ನನ್ನ ಅಮೂಲ್ಯ ಓಟನ್ನು ಕೊಡುವೆನೆಂದು ಒಬ್ಬ ಉಮೇದ್ವಾರನಲ್ಲಿಯೂ, ತನಗೆ ಕೊಡುವೆನೆಂದು ಇನ್ನೊಬ್ಬನಲ್ಲಿಯೂ ಮಳ್ಳಾಡಿ, ವಿವಿಧ ಪಾತ್ರಗಳನ್ನು ವಹಿಸಿ ಎಲ್ಲರಿಗೂ ಸಭ್ಯನಾಗಿ ವರ್ತಿಸಬೇಕೆಂದು ಪ್ರಯತ್ನಿಸುತ್ತಿದ್ದ ಮಹಾಶಯನನ್ನು ನೋಡಿ ಮನ ಕರಗಿತು. ತನ್ನ ವ್ಯಕ್ತಿತ್ವವನ್ನು ಮಾರಿಕೊಂಡು ತನ್ನ ವಿವೇಚನಾ ಶಕ್ತಿಯನ್ನು ಉಪಯೋಗಿಸದೆ ವರ್ತಿಸುತ್ತಿದ್ದ ನಾಗರೀಕ ಜನತೆಯ ವರ್ತನೆಯು ಸೊಗಸಿತ್ತು. ಕಾಂಗ್ರೆಸಿಗರು ಬಂದು ಓಟುಕೊಡಬೇಕೆಂದಾಗ ಅಚ್ಚ ಕಾಂಗ್ರೆಸಿಗನಂತೆ ಮಹತ್ಕರ ಬಿಸ್ಸ ಸಂದೇಶಗಳನ್ನು ಸಾರುವ ವೈಖರಿ ಬೇರೆ. ವಿರೋಧ ಪಕ್ಷದವರು ಬಂದಾಗ ಕಾಂಗ್ರೆಸನ್ನು ಬಹಿಷ್ಕರಿಸಿ ಅವನ್ನು ರಸಾತಳಕ್ಕೆ ತುಳಿಯುವ ರೌದ್ರಾವೇಶವಿನ್ನೊಂದೆಡೆ, ಎಂಥಾ ವಿಚಿತ್ರ ನಟನೆ! ಕೃತ್ರಿಮ ಜಗತ್ತಿನ ವಿಲಾಸವಿದು.

ನಿರಕ್ಷರ ಕುಕ್ಷಿಗಳಾದರೂ ಜೇಬಿನಲ್ಲಿ ಲೇಖನಿ (ಪೆನ್) ಗಳನ್ನು ನಾಲ್ಕಾಗಿ ಸಿಕ್ಕಿಸಿ ಮೆರೆಯುವ ವೈಖರಿ, ಓದಲು ಬರದಿದ್ದರೂ ಕೈಯ್ಯಲ್ಲಿ ಪತ್ರಿಕೆ ಹಿಡಿದು ತಿರುಗುವ ಭರ್ಜರಿ, ಸಾರ್ವಜನಿಕ ಸಭೆಗಳಲ್ಲಿ ಸಭಾ ಕಂಪದ ಚಳಿಯಿಂದ ನಡುಗಿ ಬಾಯಿ ಬಿಡಲಾಗದವರೂ ಅಖಂಡ ಮುಖಂಡರಂತೆ ವರ್ತಿಸುವ ಮಾದರಿ ಇವೆಲ್ಲಾ ಕೃತ್ರಿಮ ಜಗತ್ತಿನ ಸೋಗುಗಳು. ಈ ಕೃತ್ರಿಮ ಜಗತ್ತಿನಲ್ಲಿ ಸ್ತ್ರೀ ಪ್ರಪಂಚದ ವರ್ಣನೆಯ ಹವ್ಯಾಸಕ್ಕೆ ಈ ಲೇಖನದಲ್ಲಿ ನಾನು ಕೈಯಿಕ್ಕಲಾರೆ. ಅದು ಸ್ವತಂತ್ರ ರಾಮಾಯಣವೇ ಆದೀತು. ಒಟ್ಟಾರೆ ಇಂದಿನ ಕೃತ್ರಿಮ ಜಗತ್ತಿನ ಮಾದರಿಯನ್ನು ವಿವರಿಸುತ್ತಾ ನಡೆದರೆ ಪುರಾತನ ಕಾಲಗಳಲ್ಲಿ ರಾಕ್ಷಸರು ಮಾಡುತ್ತಿದ್ದ ಮಾಯಾ ಜಾಲದ ಕೃತ್ಯಗಳು ಯೋಚನೆಗೆ ಬರುತ್ತವೆ. ಹೊರಗೆ ನೋಟಕ್ಕೆ ಶೀಲವಂತರು, ಸುಗುಣಶಾಲಿಗಳು ಪರಮಪವಿತ್ರರು, ದೈವೀ ಸ್ವಭಾವದವರು! ಆದರೆ ಒಳಗೆ? ಕ್ರೂರತನ, ಮತ್ಸರ, ದಂಭ, ಸುಳ್ಳು, ಮಿಥ್ಯಾಚರಣೆ, ದುರ್ಗುಣಗಳು. ಹೊರಗೆ ಕಾಲು ಮುಗಿದು ಪೂಜಿಸುವ ಮಹಾ ಮಹಿಮರು. ಒಳಗೆ ಕತ್ತು ಹಿಸುಕಲು ಹಿಂಜರಿಯದ ಪಾಷಾಣ ಹೃದಯರು. ಎಲ್ಲಾ ಕೃತ್ರಿಮ ಜಗತ್ತಿನ ಲೀಲಾಜಾಲವಿದು! ಹರಾಮಿ ಪ್ರಪಂಚದ ವೈಶಿಷ್ಟ್ಯವಿದು!! ಆಧುನಿಕ ನಾಗರೀಕತೆಯ ಟೊಳ್ಳುತನವಿದು!!! ನಿಸರ್ಗವನ್ನು ಬಿಟ್ಟು ಬಹು ದೂರ ಮುಂದರಿದಿರುವೆವೆಂದೆನ್ನುವ ನಾಗರೀಕರ ಮಿಥ್ಯಾಚರ್ಯೆಯಿದು!!!!

ಹೊಸ ರಾಷ್ಟ್ರಪತಿಗಳ ಘೋಷಣೆ.

ಸತ್ಯಾಗ್ರಹವೇ ಮುಂದಿನ ಹೆಜ್ಜೆ.

ಕಾಂಗ್ರೆಸಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವ ಮೌಲಾನಾ ಅಬುಲ್ ಕಲಾಂ ಆಝಾದರವರು ಈ ಕೆಳಗಿನ ಘೋಷಣೆಯೊಂದನ್ನು ಹೊರಡಿಸಿರುವರು. **'ಪ್ರತಿಯೊಂದು ದಿನವೂ ಮುಂದೆ ನಾವು ಕೈ**ಕೊಳ್ಳಬೇಕಾದ ಘೋರ ಸಂಗ್ರಾಮದೆಡೆಗೆ ನಮ್ಮನ್ನು ಕರದೊಯ್ಯುತ್ತಿದೆ. ಇಂದಿನ ಸ್ಥಿತಿಯನ್ನು ಹೀಗೆಯೇ ಉಳಿಯನೀಡುವದು ಸಾಧ್ಯವಿಲ್ಲ. ರಾಮಗಢ ಅಧಿವೇಶನ ಕಳೆದ ನಂತರ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಸ್ವರೂಪ ಕೊಡುವ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ಹೋರಾಟಕ್ಕೆ ಹೊಸ ಸ್ವರೂಪವನ್ನು ಕೊಡುವದೆಂದರೆ ಸತ್ಯಾಗ್ರಹವನ್ನು ಕೈಕೊಳ್ಳುವದೇ ಆಗಿದೆ.' ಎಂದು ಹೇಳಿರುವರು. ಮುಂದುವರಿಸುತ್ತಾ, ಅಧ್ಯಕ್ಷ ಚುನಾವಣೆಯ ಫಲಿತಾಂಶದ ವಿಚಾರ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ 'ಗಾಂಧೀಜಿಯವರ ನಾಯಕತ್ವದಲ್ಲಿ ದೇಶವು ಇಟ್ಟಿರುವ ವಿಶ್ವಾಸ, ಅವರ ಕಾರ್ಯವಿಧಾನಕ್ಕೆ ಅವಕ್ಕಿರುವ ಸಮ್ಮತಿಗಳನ್ನು ಸೂಚಿಸುವದಕ್ಕಾಗಿಯೇ ದೇಶವು ನನ್ನನ್ನು ಅಧ್ಯಕ್ಷತೆಗೆ ಚುನಾಯಿಸಿತು.' ಎಂದು ತಿಳಿಸಿದ್ದಾರೆ. ಕಾಂಗ್ರೆಸ್ ಅಧ್ಯಕ್ಷಪದದ ಗುರುತರ ಜವಾಬ್ದಾರಿಯನ್ನು ತಾವು ವಹಿಸಿಕೊಳ್ಳಲು ಇದ್ದ ಕಾರಣಗಳನ್ನು ವಿವರಿಸುತ್ತಾ 'ಎರಡು ವರ್ಷಗಳಿಂದ ಕಾಂಗ್ರೆಸಿನ ಅಧ್ಯಕ್ಷನಾಗುವಂತೆ ನನ್ನನ್ನು ಬಲಾತ್ಕರಿಸಲಾಗುತ್ತಿದೆ. ಆದರೆ ಕಾಂಗ್ರೆಸು ಆಗ ಪಾರ್ಲಿಮೆಂಟರಿ ಕಾರ್ಯಕ್ರಮಗಳಲ್ಲಿ ತೊಡಗಿದ್ದುದರಿಂದ ನಾನು ಆ ಸಲಹೆಯನ್ನು ನಿರಾಕರಿಸಿದೆ. ಯೂರೋಪಿನ ಯುದ್ಧದಿಂದ ಪರಿಸ್ಥಿತಿಯು ಬದಲಾಯಿಸಿರುವದರಿಂದ ನಾನು ಈ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಒಪ್ಪಿದ್ದೇನೆ. ಭಾರತದಲ್ಲಿ ಇಂದಿರುವ ಪರಿಸ್ಥಿತಿಯನ್ನು ಉಂಟುಮಾಡಲಿಕ್ಕೆ ನಾನು ಕಾರಣನಾಗಿದ್ದೇನೆ. ಆದುದರಿಂದ ಜವಾಬ್ದಾರಿಯನ್ನು ವಹಿಸಿಕೊಳ್ಳಲು ನಾನೂ ಹಿಂದೆಗೆಯಲಿಲ್ಲ.' ಎಂದಿರುವರು. ಸತ್ಯಾಗ್ರಹ ಚಳವಳಿಯನ್ನು ಪ್ರಾರಂಭಿಸುವದಕ್ಕೆ ಸೂಕ್ತ ಸಮಯಸನ್ನಿವೇಶಗಳು ಒದಗಬೇಕಾದುದು ಅಗತ್ಯವಾದರೂ ಸತ್ಯಾಗ್ರಹ ಪ್ರಾರಂಭದಿಂದ ಕೋಮುವಾರು ಘರ್ಷಣೆ ಉಂಟಾಗುವದೆಂಬುವನ್ನು ತಾನು ಒಪ್ಪುವದಿಲ್ಲವೆಂದೂ, ಭಾರತವನ್ನು ಎರಡು ರಾಷ್ಟ್ರಗಳಾಗಿ ಮಾಡಬೇಕೆನ್ನುವ ಮಿ. ಜಿನ್ನಾರವರ ಅಭಿಪ್ರಾಯವನ್ನು ತಾವು ಮನ್ನಿಸುವದಿಲ್ಲವೆಂದೂ, 1935ನೇ ಇಸವಿಯ ಇಂಡಿಯಾ ರಾಜ್ಯಾಂಗಕ್ಕನುಗುಣವಾಗಿ ಕಾಂಗ್ರೆಸ್ ಅಧಿಕಾರ ಸ್ವೀಕಾರವೂ ಮನಸು ಕನಸಿನಲ್ಲಿಯೂ ಸುಳ್ಳು ಎಂದೂ ಕಾಂಗ್ರೆಸು ಎಲ್ಲರಿಗೂ ತೆರೆದಿಟ್ಟ ಸಂಸ್ಥೆಯೆಂದೂ, ಯಾವ ಮತದವನೇ ಆಗಲೀ, ಯಾವ ಪಂಗಡದವನೇ ಆಗಲೀ, ಆತನನ್ನು ಸ್ವಾಗತಿಸುವ ರಾಷ್ಟ್ರೀಯ ಸಂಸ್ಥೆ ಕಾಂಗ್ರೆಸೆಂದೂ, ಕಾಂಗ್ರೆಸಿಗರಿಂದ ಯಾರಿಗೂ ಯಾವ ಕಾಲಕ್ಕೂ ತೊಂದರೆಯಾಗದೆಂದೂ, ಕಾಂಗ್ರೆಸ್ ಮಂತ್ರಿಮಂಡಲಗಳ ಅಧಿಕಾರ ಸಮಯದಲ್ಲಿ ಮುಸ್ಲಿಂ ಹಿತಕ್ಕೆ ಧಕ್ಕೆ ಬಂದಿದೆಯೆಂಬುವದನ್ನು ತಾನು ಒಪ್ಪುವದಿಲ್ಲವೆಂದೂ ಆದ್ದರಿಂದ ಮುಸ್ಲಿಮರು ಕಾಂಗ್ರೆಸಿಗೆ ಸಹಸ್ರ ಸಂಖ್ಯೆಯಿಂದ ಸೇರಿ ದೇಶದ ಹಿತವನ್ನು ಸಾಧಿಸಬೇಕೆಂದೂ ಹೇಳಿರುವರು.

ಸ್ವಾತಂತ್ರ್ಯ ಹಾಗೂ ವಸಾಹತು ಸ್ವರಾಜ್ಯ.

ಇವೆರಡರಲ್ಲಿಯ ಭೇದವೇನು?

(ಶ್ರೀ. ಎನ್. ಆರ್. ಸರಕಾರ, ಬಂಗಾಳದ ಮಾಜಿ ಅರ್ಥಸಚಿವರು.)

● ○ ●

ಮೊನ್ನೆ ಮೊನ್ನೆ ವೈಸರಾಯರು ಒಂದು ಘೋಷಣೆ ಮಾಡಿ ವೆಸ್ಟಮಿನಿಸ್ಟರ ಕಾಯಿದೆಯಲ್ಲಿ ಹೇಳಿದಂತೆ ವಸಾಹತು ಸ್ವರಾಜ್ಯವನ್ನು ಹಿಂದುಸ್ಥಾನಕ್ಕೆ ಕೊಡುವದೇ ಬ್ರಿಟಿಷ್ ಸರಕಾರದ ಗುರಿಯೆಂದು ಸಾರಿದರು. ಇದರಿಂದ ಹಿಂದೀಯರು ತಮ್ಮ ಗುರಿಯನ್ನು ಪೂರ್ಣ ಸ್ವಾತಂತ್ರ್ಯವನ್ನು ಗಟ್ಟಿಗೊಳ್ಳಬೇಕೋ ಅಥವಾ ಅದನ್ನು ವಸಾಹತು ರಾಜ್ಯಕ್ಕೆ ಬದಲಿಸಬೇಕೋ ಎಂಬ ಪ್ರಶ್ನೆಯ ಬಗ್ಗೆ ರಾಜಕೀಯ ರಂಗದಲ್ಲಿ ವಿಶೇಷ ಚರ್ಚೆ ನಡೆದಿದೆ. ಆದರೆ ವೈಸರಾಯರು ಹೇಳಿರುವ ವಸಾಹತು ಸ್ವರಾಜ್ಯವೆಂದರೇನು ಎಂಬದನ್ನು ಪೂರ್ಣ ಪರೀಕ್ಷಿಸಿ ಅದಕ್ಕೂ ಪೂರ್ಣ ಸ್ವಾತಂತ್ರ್ಯಕ್ಕೂ ಇರುವ ಭೇದವನ್ನು ಅರಿಯದೆ ವೈಸರಾಯರ ಕೊಡುಗೆ (offer) ಯನ್ನು ನಿರಾಕರಿಸುವದು ಯೋಗ್ಯವಾಗದು. ಯಾಕಂದರೆ ವಸಾಹತು ಸ್ವರಾಜ್ಯದಿಂದ ನಮ್ಮ ಸ್ವಾತಂತ್ರ್ಯದ ಗುರಿಗಳೆಲ್ಲ ಸಾಧಿಸುತ್ತಿದ್ದರೆ ನಾವು 'ಸ್ವಾತಂತ್ರ್ಯ' ಎಂಬ ಶಬ್ದದ ಬಗ್ಗೆ ಇಲ್ಲದ ಗೊಂದಲವೆಬ್ಬಿಸಿ ಬ್ರಿಟಿಷ್ ಸಾಮ್ರಾಜ್ಯದ ಒಂದು ಅಂಗವಾಗುವದರಿಂದ ನಮಗೆ ಸಿಗುವ ಸ್ವಲ್ಪ ವರೂ ಲಾಭಗಳಿಗೆ ನಾವೇಕೆ ಎರವಾಗಬೇಕು? ನಾವು 'ಸ್ವಾತಂತ್ರ್ಯ'ವೆಂದನ್ನುವಾಗ ಎಷ್ಟು ಘನವಾದ ವರವಾಗದೆ ಯಾವದೊಂದು ನಿರ್ದಿಷ್ಟ ತತ್ವದ ಪ್ರಕಾರ ನಡೆಯಬೇಕೆಂದು ನಾನು ನನ್ನ ಬಾಂಧವರಿಗೆ ಆಗ್ರಹಪೂರ್ವಕವಾಗಿ ಪ್ರಾರ್ಥಿಸುವೆ. ಹಿಂದಕ್ಕೆ ಭವೀಪುರದಲ್ಲಿ ದೇಶಬಂಧು ದಾಸರು ಈ ಬಗ್ಗೆ ನುಡಿದ ಆಗಿನ ಹಲವು ಶಬ್ದಗಳು ಈ ಸಂಬಂಧದಲ್ಲಿ ಈಗ ನನ್ನ ನೆನಪಿಗೆ ಬರುತ್ತವೆ.

'ಬ್ರಿಟಿಷ್ ಸಾಮ್ರಾಜ್ಯವು ಹಿಂದೀಯರ ಹಕ್ಕುಗಳನ್ನು ಮನ್ನಿಸಿದಲ್ಲಿ ಹಿಂದುಸ್ಥಾನವು ಸಾಮ್ರಾಜ್ಯದ ಒಂದು ಅಂಗವಾಗಿ ಉಳಿಯುವದು ಇಲ್ಲದಿದ್ದರೆ ಅದು ಹೊರಬೀಳುವದು.'

ಇದು ಈಗಿನ ಪರಿಸ್ಥಿತಿಗೆ ಸಹ ಸರಿಹೋಗುವದೆಂದು ನನಗನಿಸುತ್ತದೆ. ನಮಗೆ ಯೋಗ್ಯವಾಗಿ ಜೀವಿಸಲು—ಅಂದರೆ ಆತ್ಮ ಜ್ಞಾನ, ಆತ್ಮೋನ್ನತಿ, ಆತ್ಮಪರಿಪೂರ್ಣತೆ—ಪಡೆಯಲು—ಸಾಕಷ್ಟು ಅನುಕೂಲತೆಗಳಿರಬೇಕು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಹಿಂದೀಯರಆಶೆ ಆಕಾಂಕ್ಷೆಗಳು ಬಳೆದು ಫಲಿಸುವಂತಿದ್ದರೆ ಸಾಮ್ರಾಜ್ಯದ ಒಂದು ಭಾಗವಾಗಿರಲು ಏನೂ ಅಡ್ಡಿಯಿಲ್ಲ. ಆದರೆ ಸಾಮ್ರಾಜ್ಯದ ಮದ್ದಾನೆಯು ಓಡುವಾಗ ಕಾಲಲ್ಲಿ ಸಿಕ್ಕವನ್ನೆಲ್ಲ ತುಳಿದು ಹಾಕುವಂತೆ, ನಮ್ಮ ಜೀವನವನ್ನು ಹಾಳು ಮಾಡಿದರೆ ಮಾತ್ರ ನಾವು ಅದರಿಂದ ಹೊರಬೀಳಲೇಬೇಕು.

ವೆಸ್ಟಮಿನಿಸ್ಟರ ಕಾಯಿದೆ.

ವಸಾಹತು ರಾಜ್ಯದ ಕಾಯಿದೆಯ ಉಪಯೋಗ ಹೇಗಾಗಬೇಕೆಂಬದನ್ನು ವಿಚಾರಿಸಲು ಕೆಲವು ತಜ್ಞರ ಕಮಿಟಿಯೊಂದನ್ನು 1929 ರಲ್ಲಿ ನಿಯಮಿಸಲಾಯಿತು. ಈ ಕಮಿಟಿಯವರು ವಸಾಹತು ರಾಜ್ಯಗಳು ಮಾಡಬಹುದಾದ ಕಾಯಿದೆಗಳು ಮತ್ತು ಇನ್ನಿತರ ವಿಷಯಗಳ ಬಗ್ಗೆ ಒಂದು ಕಚ್ಚಾ ಮಸೂದೆಯನ್ನು ಸಿದ್ಧಪಡಿಸಿ 30 ರಲ್ಲಿ ಇಂಪೀರಿಯಲ್ ಕಾನ್ಫರೆನ್ಸಿನ ಮುಂದಿಟ್ಟರು. ಈ ಕೌನ್ಸಿಲಿನವರು ಬಿಲ್ಲಿಗೆ ತಮ್ಮ ಒಪ್ಪಿಗೆಯನ್ನಿತ್ತ ನಂತರ ವಸಾಹತುಗಳ ಶಾಯದೆ ಮಂಡಲಗಳು ಕೆಲ ಕೆಲವು ಬದಲಾವಣೆಗಳೊಡನೆ ಅದನ್ನು ಪಾಸು ಮಾಡಿದವು. ಹೀಗೆ ಪಾಸಾದ ಮಸೂದೆಯು ಬ್ರಿಟಿಷ್ ಪಾರ್ಲಿಮೆಂಟಿನ ಎರಡೂ ಗೃಹಗಳಲ್ಲಿ 1931 ರಲ್ಲಿ ಪಾಸಾಗಿ ವೆಸ್ಟಮಿನಿಸ್ಟರ ಸ್ಟ್ಯಾಚ್ಯೂಟವಾಯಿತು. ಇದರಿಂದ ಬ್ರಿಟಿಷ್ ಸಾಮ್ರಾಜ್ಯದಲ್ಲಿಯ ಎಲ್ಲ ವಸಾಹತುಗಳಿಗೆ ಪೂರ್ಣ ಸ್ವಾತಂತ್ರ್ಯ ಸಿಕ್ಕಂತಾಯಿತು. ಇದಕ್ಕೂ ಮೊದಲು ವಸಾಹತುಗಳಿಗೆ ಬ್ರಿಟನದ ಯಾವದೇ ಕಾಯದೆಗೆ ವಿರುದ್ಧವಾದ ಕಾಯದೆ ಮಾಡಲು ಅಧಿಕಾರವಿಲ್ಲ. ಆದರೆ 1931 ರ ನಂತರ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪಾಸಾದ ಅಥವಾ ಪಾಸಾಗಬಹುದಾದ ಕಾಯದೆಗಳ ಆಧ್ವ ಬರುವಂಥ ಕಾಯದೆಯನ್ನು ಬಳಿಕೆಯಲ್ಲಿ ತರಲು ಅವುಗಳಿಗೆ ಪ್ರತಿಬಂಧವಿಲ್ಲದಾಯಿತು.

ವಸಾಹತು ಕಾಯಿದೆ ಮಂಡಳಗಳ ಅಧಿಕಾರ.

ಇನ್ನೊಂದು ಮುಖ್ಯ ಸಂಗತಿ. ವಸಾಹತು ರಾಜ್ಯದ ಕಾಯಿದೆ ಮಂಡಲಗಳಿಗೆ ತಮ್ಮ ವಸಾಹತಿನ ಘಟನೆಯನ್ನು ರದ್ದುಪಡಿಸಲು ಬರುವದೆ? ಮತ್ತು ತಮಗೆ ಬೇಕೆನಿಸಿದಾಗ ಬ್ರಿಟಿಷ್ ಸಾಮ್ರಾಜ್ಯದ ಅಂಗವು ತಾನಲ್ಲವೆಂದು ಸಾರಲು ಅವಕ್ಕೆ ಅಧಿಕಾರವಿದೆಯೇ? ಎಂಬ ಎರಡು ಪ್ರಶ್ನೆಗಳುದ್ಭವಿಸುವವು. ಬ್ರಿಟಿಷ್ ಸಾಮ್ರಾಜ್ಯದಲ್ಲಿರುವ ಕೆಲವು ವಸಾಹತುಗಳನ್ನು ಬಿಟ್ಟರೆ ಉಳಿದವುಗಳಿಗೆ ತಮ್ಮ ಘಟನೆಯನ್ನು ರದ್ದುಪಡಿಸುವ ಅಧಿಕಾರವಿದೆ. ಸಾರ್ವಭೌಮ ಸರಕಾರದ ಇಚ್ಛೆಗೆ ವಿರುದ್ಧವಾದ ಕಾಯದೆಯನ್ನು ಪಾಸು ಮಾಡುವ ಹಕ್ಕು ವಸಾಹತುಗಳಿಗೆ ಇದೆಯೆಂದು ಅನೇಕ ಘಟನೆಗಳಿಂದ ಕಂಡು ಬರುವದು. ಇದರಿಂದ ಬ್ರಿಟಿಷ್ ಸಾಮ್ರಾಜ್ಯದಿಂದ ಸಿಡಿದು ಹೋಗುವ ಅಧಿಕಾರವೂ ವಸಾಹತುಗಳಿಗುಂಟೆಂದು ಹೇಳಬಹುದು.

1931 ರ ಮೊದಲು ವಸಾಹತುಗಳಿಗೆ ತಮ್ಮ ಅಧೀನದಲ್ಲಿಯ ಪ್ರದೇಶದ ಹೊರಗೆ ತಮ್ಮ ಕಾಯದೆಗಳನ್ನು ಜಾರಿಯಲ್ಲಿ ತರಲು ಅಧಿಕಾರವಿರಲಿಲ್ಲ.

ಆದರೆ ಈಗ ಮಾತ್ರ ಈ ಎಲ್ಲ ಅಧಿಕಾರಗಳೂ ವಸಾಹತುಗಳಿಗಿವೆ. ಪರರಾಷ್ಟ್ರಗಳೊಡನೆ ಒಪ್ಪಂದ ಕರಾರುಗಳನ್ನು ಮಾಡಿಕೊಳ್ಳಲು ಸಹ ಅವುಗಳಿಗೆ ಅವಕಾಶವಿದೆ. ಇಂಗ್ಲೆಂಡದಲ್ಲಿ ಪಾಸಾದ ಕಾಯಿದೆಯು ತನ್ನಿಂದ ತಾನೆ ವಸಾಹತುಗಳಿಗೆ ಅನ್ವಯಿಸುವದಲ್ಲ. ಅವಕ್ಕೆ ವಸಾಹತುಗಳ ಒಪ್ಪಿಗೆಯೂ ಬೇಕಾಗುವದು. ಈ ಸಂಗತಿಗಳನ್ನು ಪರಿಶೀಲಿಸಿದಲ್ಲಿ ವೆಸ್ಟಮಿನಿಸ್ಟರ ಕಾಯಿದೆಯಿಂದ ವಸಾಹತುಗಳಿಗೆ ಇಂಗ್ಲೆಂಡದ ಕೂಡ ಸಮಾನತೆ ಸಿಕ್ಕಿರುವದಲ್ಲದೆ ಅವು ತಮಗೆ ಯೋಗ್ಯವೆನಿಸಿದ ರೀತಿಯಲ್ಲಿ ನಡೆದುಕೊಳ್ಳಲು ಸ್ವತಂತ್ರವಿದೆಯೆಂದು ಕಂಡು ಬರುವದು.

ಇದಲ್ಲದೆ ಗವ್ಹರ್ನರ ಜನರಲ್ಲರ ನಿಯಮನ ಮತ್ತು ಕೆಲವು ಮಸೂದೆಗಳನ್ನು ಸಾರ್ವಭೌಮರ ಒಪ್ಪಿಗೆಗಾಗಿ ಕಾಯ್ದಿಡುವಲ್ಲಿ ಸಹ ವಸಾಹತುಗಳಿಗೆ ಪೂರ್ಣ ಸ್ವಾತಂತ್ರ್ಯವಿದೆ. ವಸಾಹತುಗಳ ಒಪ್ಪಿಗೆಪಡೆದ ಮೇಲೆಯೇ ಬ್ರಿಟನ್ನದ ರಾಜರು ಗವ್ಹರ್ನರ ಜನರಲ್ಲರನ್ನು ನಿಯಮಿಸುತ್ತಾರೆ. ಗವ್ಹರ್ನರ ಜನರಲ್ಲರು ಕೆಲವು ಮಸೂದೆಗಳನ್ನು ಕಾಯ್ದಿಡುವದು ನಿಂತು ಹೋಗಿ ಬಹಳ ದಿನಗಳಾಗಿದ್ದು ಈ ಕ್ರಮವೇ ಇತ್ತೀಚೆಗೆ ನಿಂತು ಹೋಗಿದೆಯೆನ್ನಬಹುದು.

ಇನ್ನು ಕೊನೆಯದೆಂದರೆ ಸಾಮ್ರಾಜ್ಯದ ಕಟ್ಟಿನೊಳಗಿಂದ ಹೊರಬೀಳುವ ಅಧಿಕಾರ ಕಾಯಿದೆ ದೃಷ್ಟಿಯಿಂದ ಪರಿಸ್ಥಿತಿಯು ಏನಿದ್ದರೂ ಬಿ. ಕೀಥರವರು ಹೇಳುವಂತೆ:—

'ಯಾವದಾದರೊಂದು ವಸಾಹತು ಸಾಮ್ರಾಜ್ಯ ಬಂಧನದೊಳಗಿಂದ ಹೊರಬೀಳುವ ಇಚ್ಛೆ ವ್ಯಕ್ತಪಡಿಸಿದರೆ ಅದನ್ನು ಹಾಗೇ ಮಾಡಗೊಡದಿರಲು ಸಾಮ್ರಾಜ್ಯದ ಉಳಿದ ಭಾಗಗಳು ಶಸ್ತ್ರಬಲದಿಂದ ಪ್ರಯತ್ನಿಸುವದು ಅಯೋಗ್ಯವು.'

ಈ ಮಾತಿಗೆ ಐರಿಷ್ ಫ್ರೀಸ್ಟೇಟಿನವರು ಬ್ರಿಟಿಷ್ ಸರಕಾರದವರಿಗೆ ಕೊಡಬೇಕಾದ ವಾರ್ಷಿಕ ಕಪ್ಪ ಮುಂತಾದವುಗಳನ್ನು ನಿಲ್ಲಿಸಿ ಬೆಂಬಲ ಕೊಟ್ಟಿದ್ದಾರೆ. ಇನ್ನು ಮೇಲೆ ಐರ್ಲಂಡದವರು ತಮ್ಮ ದೇಶವು ಪ್ರಜಾಸತ್ತಾತ್ಮಕವೆಂದರೆ ಸಹ ಬ್ರಿಟನ್ನವು ಅದಕ್ಕೆ ಒಪ್ಪಬೇಕಾಗುವದು.

ವಸಾಹತು ಸ್ವರಾಜ್ಯ ಮತ್ತು ಪೂರ್ಣ ಸ್ವಾತಂತ್ರ್ಯಗಳಲ್ಲಿ ಅಂತರ.

ಇಷ್ಟೆಲ್ಲಾ ಅಧಿಕಾರಗಳನ್ನು ವಸಾಹತುಗಳಿಗೆ ಕೊಟ್ಟ ಮೇಲೆ ವಸಾಹತು ಸ್ವರಾಜ್ಯ ಮತ್ತು ಪೂರ್ಣ ಸ್ವಾತಂತ್ರ್ಯಗಳಲ್ಲಿ ಭೇದವೇನೆಂದು ಕೆಲವರು ಕೇಳಬಹುದು. ಅಂತರ್ಗತ ವ್ಯವಹಾರಗಳಲ್ಲಿ ವಸಾಹತುಗಳಿಗೆ ಪೂರ್ಣ ಸ್ವಾತಂತ್ರ್ಯವಿದೆ. ಮತ್ತು ಯಾವದೊಂದು ಸ್ವಾತಂತ್ರ್ಯ ರಾಷ್ಟ್ರದಂತೆ ನಡೆಯಲು ಅವಕ್ಕೆ ಅಧಿಕಾರವಿದೆ

ಆದರೆ ಸ್ವತಂತ್ರ ರಾಷ್ಟ್ರಗಳಿರುವಂತೆ ವಸಾಹತಿಗೆ ಯುದ್ಧ ಹೂಡಲು, ಒಪ್ಪಂದ ಮಾಡಿಕೊಳ್ಳಲು, ಮತ್ತು ಪರದೇಶಗಳಲ್ಲಿ ತನ್ನ ಪ್ರತಿನಿಧಿಯನ್ನಿಡಲು ಅಧಿಕಾರವಿದೆಯೋ?

ವಸಾಹತುಗಳಿಗೆ ಒಪ್ಪಂದ ಮಾಡಿಕೊಳ್ಳಲು ಅಧಿಕಾರವಿದೆ. ಅನೇಕ ವಸಾಹತುಗಳು ಬ್ರಿಟನನ್ನು ಕೇಳದೆ ಒಪ್ಪಂದ ಮಾಡಿಕೊಂಡಿವೆ. ಆದರೆ ಈ ಒಪ್ಪಂದದ ಸಂಬಂಧವು ಬ್ರಿಟನ್ನ ಅಥವಾ ಉಳಿದ ಆ ದರೆ ವಸಾಹತುಗಳಿಗೆ ಒತ್ತಿದ್ದರೆ ಮಾತ್ರ ಆಯಾ ವಸಾಹತುಗಳನ್ನು ಮಾಡಲು ವಿಚಾರಿಸಿ ಒಪ್ಪಂದ ಮಾಡಿಕೊಳ್ಳಬೇಕೆಂಬ ತಿಳುವಳಿಕೆ ಇದೆ.

ಎಲ್ಲ ವಸಾಹತುಗಳೂ ತಮ್ಮ ತಮ್ಮ ಪ್ರತಿನಿಧಿಗಳನ್ನು ಪರದೇಶಗಳಲ್ಲಿಟ್ಟಿವೆ.

ಎಷ್ಟು ಯುದ್ಧ ಮಾಡುವದು ಅಥವಾ ತಟಸ್ಥ ವಹಿಸುವದು ಸಹ ಬಹಳ ಮಟ್ಟಿಗೆ ಆಯಾ ವಸಾಹತುಗಳ ಇಚ್ಛೆಯ ಮೇಲೆಯೇ ಅವಲಂಬಿಸಿದೆ. ಈ ಯುದ್ಧದಲ್ಲಿ ಐರ್ಲಂಡವು ತಟಸ್ಥವಾಗಿ ಉಳಿಯುವ ಅಧಿಕಾರವಿದೆಯೆಂದು ತೋರಿಸಿದೆ. ಈಗಿನ ಯುದ್ಧದಲ್ಲಿ ಸಹ ಬ್ರಿಟನ್ನು ಯುದ್ಧ ಮಾಡಿದೊಡನೆ ಅದರ ಎಲ್ಲ ವಸಾಹತುಗಳೂ ಯುದ್ಧದಲ್ಲಿ ಬೀಳಲಿಲ್ಲ. ಪ್ರತಿಯೊಂದು ವಸಾಹತುಗಳು ತಾನು ಯುದ್ಧದಲ್ಲಿ ಬೀಳುವದರಬಗ್ಗೆ ಸ್ವತಂತ್ರವಾದ ಗೊತ್ತುವಳಿ ಪಾಸುಮಾಡಿಕೊಂಡು ಆ ಮೇಲೆ ಯುದ್ಧದಲ್ಲಿ ಭಾಗವಹಿಸಿತು.

ವೆಸ್ಟಮಿನಿಸ್ಟರ ಕಾಯಿದೆಯಲ್ಲಿ ಹೇಳಿದ ಪ್ರಕಾರದ ವಸಾಹತು ರಾಜ್ಯವು ಹಿಂದುಸ್ಥಾನಕ್ಕೆ ಸಿಕ್ಕ ಕೂಡಲೆ ನಮಗೆ ಮೇಲೆ ಹೇಳಿದ ಅಂತರ್ಗತ ಮತ್ತು ಪರದೇಶ ಸಂಬಂಧದ ಎಲ್ಲ ಅಧಿಕಾರಗಳೂ ಅದಕ್ಕೂ ಪ್ರಾಪ್ತವಾಗುವವು. ಹಿಂದೀಯರ ರಾಜಕೀಯ ಹಕ್ಕುಗಳ ಮೇಲೆ ಹೊಸ ಸುಧಾರಣಾ ಕಾಯದೆಯನ್ವಯ ಸಹ ಎಷ್ಟು ನಿಯಂತ್ರಣವಿದೆಯೆಂಬುದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಹಿಂದೀಯರಿಗೆ ಯಾವ ಕಡೆಗೂ ಎಷ್ಟು ಸರಿದಾಡಲು ಬರುವಂತಿಲ್ಲ.

ನಮ್ಮ ಮೇಲಿರುವ ನೂರಾರು ನಿರ್ಬಂಧಗಳು ವಸಾಹತುಗಳ ಮೇಲೆ ಇಲ್ಲವೆಂಬುದನ್ನು ನಾವು ನೋಡುತ್ತಿದ್ದೇವೆ. ನಾವು ವಸಾಹತು ಸ್ವರಾಜ್ಯವನ್ನು ಪಡೆದಲ್ಲಿ ಅವು ಈಗ ಹೋರಾಡುತ್ತಿರುವ ಎಲ್ಲ ಹಕ್ಕುಗಳು ನಮಗೆ ಸಹಜವಾಗಿ ಪ್ರಾಪ್ತವಾಗುವವು. ವೈಸ್ರಾಯರೆ ನಮ್ಮ ಅಧೀನದ ಆಳಿಗೆ ಬರುವರು, ಆದ್ದರಿಂದ ನಮಗೆ ವಸಾಹತು ರಾಜ್ಯ ಸಿಕ್ಕಿತೆಂದರೆ ಪೂರ್ಣ ಸ್ವಾತಂತ್ರ್ಯ ಸಿಕ್ಕಂತೆಯೇ, ಈಗ ಹಿಂದೀ ಕಾಯದೆ ಮಂಡಲದ ಮೇಲೆ ಇರುವ ಆತಂಕಗಳೆಲ್ಲ ಹೋಗಿ ಅದು ಸಹ ಪೂರ್ಣ ಸ್ವತಂತ್ರವಾಗುವದು.

ಈಗ ನಾವು ವಸಾಹತು ರಾಜ್ಯವನ್ನು ಸ್ವೀಕರಿಸಿ ವಸಾಹತಿನಂತೆ ನಡೆದುಕೊಳ್ಳಬೇಕು. ಆ ಮೇಲೆ ಪರಿಸ್ಥಿತಿ ಸಮಾಧಾನಕರವೆನಿಸದಿದ್ದರೆ ಹೊರಬೀಳುವ ಅಧಿಕಾರವನ್ನು ಉಪಯೋಗಿಸಿ ಪೂರ್ಣ ಸ್ವಾತಂತ್ರ್ಯವನ್ನು ನಾವು ಬೇಕಾದಾಗ ಪಡೆಯಬಹುದಲ್ಲವೇ?

'ಕ. ವಿ.'

ಕೊಡಗು ಜಿಲ್ಲಾ ಬೋರ್ಡು

ಬಜೆಟ್ ಮೀಟಿಂಗು.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

36. ಮೂರ್ನಾಡು ಶಾಲೆಯ ಆಟದ ಮೈದಾನದ ಕಂಟ್ರಾಕ್ಟರಾದ ಶ್ರೀ ಪಿ. ಸಿ. ಕಾಳಯ್ಯನವರಿಗೆ ಸಂಭವಿಸಿದ ನಷ್ಟ ರೂ. 275ನ್ನು ಭರ್ತಿ ಮಾಡಿ ಕೊಡಬೇಕೆಂಬ ಠರಾವನ್ನು ಓದಿ ಹಣದ ಅಭಾವದ ಕಾರಣ ರೂ. 150 ಕೊಡುವಂತೆ ತೀರ್ಮಾನವಾಯಿತು.

37. ತಿರಂಗಾಲದಲ್ಲಿ ವಾರಕ್ಕೊಮ್ಮೆ ಆಸ್ಪತ್ರೆ ತೆರೆಯಬೇಕೆಂಬ ಕಮಿಶನರ ಪತ್ರ ಓದಿ ಮಂಜೂರು ಮಾಡಲಾಯಿತು.

38. ಸೂರ್ಲಬಿ ಶಾಲೆಯ ಕಟ್ಟಡವನ್ನು ರಿಪೇರಿ ಮಾಡಬೇಕೆಂಬ ಶ್ರೀ ಸಿ. ಎಂ. ಪೂಣಚ್ಚನವರ ಠರಾವನ್ನು ಓದಿ ಅಂಗೀಕರಿಸಲಾಯಿತು.

39. ಒಂದೇ ಶಾಲೆಯಲ್ಲಿ ಎಂಟು ವರ್ಗಗಳ ಸರ್ಕಾರಿ [illegible] ಉಪಾಧ್ಯಾಯರನ್ನು ಈ ವರ್ಷ ವರ್ಗಾಯಿಸಬೇಕೆಂದು [illegible] ವರ್ಷ ಮಂಜೂರಾದ ಠರಾವಿನಲ್ಲಿ 'ಈ ವರ್ಷ' ಎಂಬುವುದನ್ನು ತೆಗೆದು ಹಾಕುವಂತೆಯೂ 'ಆಡಳಿತ ಅನುಕೂಲತೆಯ ದೃಷ್ಟಿಯಿಂದ' ಎಂಬ ವಾಕ್ಯವನ್ನು ಠರಾವಿಗೆ ಸೇರಿಸುವಂತೆಯೂ ತೀರ್ಮಾನವಾಯಿತು.

40. ಮಧ್ಯರಾತ್ರಿಯಿಂದ ಒಂದು ದಿನದಲ್ಲಿ ಒಂದಕ್ಕಿಂತ ಹೆಚ್ಚು ಸಾರಿ ಹಾದುಹೋಗುವ ಟೋಲ್‌ಗೇಟಿನ್ನು [illegible] ಪ್ರಾಣಿಗಳಿಗೂ, ಇತರ ವಾಹನಗಳಿಗೂ [illegible] ಹಾಕಬೇಕೆಂಬ ಶ್ರೀ ಪುಷ್ಪಣ್ಣನವರ ಠರಾವು ಓದಿ ಮಂಜೂರಾಗಲಿಲ್ಲ.

41. ಗಂಧದ [illegible] ಬರುವ ಗಳಿಂದ ಫಾರೆಸ್ಟು ಇಲಾಖೆಗೆ [illegible] ವೃತ್ತಿಯ [illegible] ಫಾರೆಸ್ಟು ಇಲಾಖೆಯವರು ಲೋಕಲ್ ಫಂಡ್ ರಸ್ತೆಗಳನ್ನು ವಹಿವಾಟಿಗೆ ಉಪಯೋಗಿಸುವ ಪ್ರಯುಕ್ತ ಬೋರ್ಡಿಗೆ ಕೊಡಬೇಕೆಂಬ ಶ್ರೀ ಪುಷ್ಪಣ್ಣನವರ ಠರಾವು ಬಹುಮತದಿಂದ ಮಂಜೂರಾಯಿತು.

42. ನಿಡ್ತ ಮತ್ತು ಬೆಟ್ಟದಳ್ಳಿ ಗ್ರಾಮಗಳಿಗೆ ಮಾರ್ಗ ಸೌಕರ್ಯವನ್ನು ಕಲ್ಪಿಸಬೇಕೆಂಬ ಶ್ರೀ ಪುಷ್ಪಣ್ಣನವರ ಠರಾವನ್ನು ಅಜಮಾಯಿಸುವಂತೆ ತೀರ್ಮಾನವಾಯಿತು.

43. 1940–41ನೇ ವರ್ಷದ ಟೋಲ್‌ಗೇಟ್ ಹರಾಜಿನ ಈ ಕೆಳಗಿನ ಮೌಲ್ಯಗಳನ್ನು ಮಂಜೂರ್ಮಾಡಲಾಯಿತು. ಮೂವತ್ತೊಕ್ಲು ರೂ. 655, ಅನೆಚೌಕೂರು ರೂಪಾಯಿ 3,810, ಸಿದ್ದೇಶ್ವರ ಗದ್ದಿಗೆ ರೂ. 965, ಕುಟ್ಟ ರೂ. 400, ಸಂಪಾಜೆ ರೂ. 710, ಫ್ರೇಜರ್‌ಪೇಟೆ 395, ಶಿರಂಗಾಲ ರೂ. 1375, ಹೆಬ್ಬಾಲೆ ರೂ. 695, ಎಡವೆಳ್ಳಿ ರೂ. 320, ಮತ್ತು ಸಿದ್ದಾಪುರ ರೂ. 2110.

44. ಬಿಳಿಗುಂದ ಗ್ರಾಂಟು ಮುಸ್ಲಿಂ ಶಾಲೆಯನ್ನು ಬೋರ್ಡಿನ ಅಧೀನಕ್ಕೆ ತೆಗೆದುಕೊಳ್ಳಬೇಕೆಂದೂ, ಅದರ ಉಪಾಧ್ಯಾಯರಿಗೆ ರೂ. 20ಸಂಬಳ ಕೊಡಬೇಕೆಂದೂ ಶ್ರೀ ಯಂ. ಎಸ್. ಸೋಮಯ್ಯನವರು ಕಂದ ಠರಾವನ್ನು ಓದಿ ಬಿಳಿಗುಂದದ ಗ್ರಾಂಟ್‌ಸ್ಕೂಲನ್ನು ಅಲ್ಲಿಯ ಲೋಕಲ್ ಫಂಡ್ ಶಾಲೆಯೊಂದಿಗೆ ಸಂಯೋಜಿಸಿರುವದರಿಂದ ಆ ಶಾಲೆಗೆ ಕೊಡುತ್ತಿದ್ದ ರೂ. 10ರ ಗ್ರಾಂಟನ್ನು ವಜಾ ಮಾಡಿ ತಾರೀಕು 1-4-40 ರಿಂದ ಮುಸ್ಲಿಂ ಶಾಲೆಯ ಉಪಾಧ್ಯಾಯರಿಗೆ ರೂ. 12 ಸಂಬಳ ಕೊಡುವಂತೆ ತೀರ್ಮಾನವಾಯಿತು.

45. ಗುಂಡ್ಸ ಗುಂಪಾಗಿ ಮನೆ ಇರುವಲ್ಲಿ ಸರಕಾರದ ಖರ್ಚಿನಿಂದ ಬೋರ್ ಹೋಲ್ ಲೆಕ್ಕಸ್ ಗುಂಡಿಗಳನ್ನು ಮಾಡಬೇಕೆಂದು ಆರೋಗ್ಯ ಇಲಾಖೆಯವರನ್ನು ಕೇಳಿಕೊಳ್ಳಬೇಕೆಂಬ ಶ್ರೀ ಕೆ. ಕೆ. ಗಣಪತಿಯವರ ಠರಾವು ಬಹುಮತದಿಂದ ಮಂಜೂರಾಯಿತು.

46. [illegible] ಬಾಳಾಜಿ ರಸ್ತೆ ರಿಪೇರಿಗೆ ರೂ. 30 ಮಂಜೂರ್ಮಾಡಬೇಕೆಂಬ ಶ್ರೀ ಎ. ಎಸ್. ಪೊನ್ನಪ್ಪನವರ ಠರಾವನ್ನು ಓದಿ 1940–41 ರ ಗ್ರಾಮ ರಸ್ತೆಗಳ ರಿಪೇರಿಯೊಡನೆ ಇದನ್ನು ಸೇರಿಸುವಂತೆ [illegible] ಯಿತು.

47. [illegible] – ಕಿರುಗೂರು – ಕೊಟ್ಟೂರು ರಸ್ತೆ ರಿಪೇರಿಗೆ ರೂ. 30 ಕೊಡಬೇಕೆಂಬ ಶ್ರೀ ಎ. ಎಸ್. ಪೊನ್ನಪ್ಪನವರ ಠರಾವನ್ನು ಓದಿ 1940–41 ರ ಗ್ರಾಮ ರಸ್ತೆಗಳ ರಿಪೇರಿಯೊಡನೆ ಇದನ್ನು ಸೇರಿಸುವಂತೆ ತೀರ್ಮಾನವಾಯಿತು.

48. [illegible] – [illegible] ರಸ್ತೆಗಳ ರಿಪೇರಿ ಬಗ್ಗೆ ರೂ. 35 ಕೊಡಬೇಕೆಂಬ ಶ್ರೀ ಎ. ಪೊನ್ನಪ್ಪನವರ ಠರಾವನ್ನು ಓದಿ 1940–41 ರ ಗ್ರಾಮ ರಸ್ತೆಗಳ ರಿಪೇರಿಯೊಂದಿಗೆ ಇದನ್ನು ಸೇರಿಸಲು ತೀರ್ಮಾನವಾಯಿತು.

49. ಮಾಯಮುಡಿ–ಧನುಗಾಲ–ಕಿರುಗೂರು ರಸ್ತೆ ರಿಪೇರಿಗೆ ರೂ. 100 ಕೊಡಬೇಕೆಂಬ ಶ್ರೀ ಪೊನ್ನಪ್ಪನವರ ಠರಾವು ಓದಿ ಎಕೌಂಟೆಂಟ್ ಜನರಲರವರ ಆಕ್ಷೇಪ ಇಲ್ಲದಿದ್ದರೆ ರೂ. 50 ಕೊಡುವಂತೆ ಮಂಜೂರ್ಮಾಡಲಾಯಿತು.

50. ಅರಮನೆಬಾಣೆ ಸಿಟ್ಟೂರು ರಸ್ತೆಯನ್ನು ಬೋರ್ಡಿನ ಅಧೀನಕ್ಕೆ ತೆಗೆದುಕೊಂಡು ಅದರ ರಿಪೇರಿಗೆ ರೂ. 50 1940-41 ರ ಬಜೆಟ್ಟಿನಲ್ಲಿ ಇಡಬೇಕೆಂಬ ಶ್ರೀ ಪೊನ್ನಪ್ಪನವರ ಠರಾವನ್ನು ಓದಿ ಈ ಖರ್ಚನ್ನು ಗ್ರಾಮಾಂತರ ರಸ್ತೆಗಳ ಖರ್ಚಿಗಾಗಿ ಇಟ್ಟ ಹಣದಿಂದ ನಿರ್ವಹಿಸುವಂತೆ ತೀರ್ಮಾನವಾಯಿತು.

51. ವಿದ್ಯಾ ಇಲಾಖೆಯ ಬಗ್ಗೆ ಕೊಡುತ್ತಿದ್ದ ಸರಕಾರಿ ವಂತಿಗೆಯಲ್ಲಿ ಮಾಡಿರುವ ರೂ. 5000 ದ ಕೋತೆಯನ್ನು ವಜಾ ಮಾಡಿ ಪೂರ್ತಿ ವಂತಿಗೆ ಕೊಡಬೇಕೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳಬೇಕೆಂಬ ಠರಾವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

52. ಶನಿವಾರಸಂತೆ ನಯಿಗೆ ಶಾಲೆಯ ವಿದ್ಯಾರ್ಥಿಗಳಿಗೆ ಮಾಹೆಯಾನ ಕೊಡುತ್ತಿರುವ ರೂ. 5 ರ ವೇತನವನ್ನು ರೂ. 3ಕ್ಕೆ ಇಳಿಸಬೇಕೆಂಬ ಠರಾವು ಓದಲ್ಪಟ್ಟಿತು. ವಿದ್ಯಾರ್ಥಿವೇತನವನ್ನು ರೂ. 4 ಕ್ಕೆ ಇಳಿಸುವಂತೆಯೂ, ವರ್ಷದಲ್ಲಿ 10 ತಿಂಗಳ ಮಾತ್ರ ಇದನ್ನು ಕೊಡುವಂತೆಯೂ ತೀರ್ಮಾನವಾಯಿತು.

53. ಶಾಲಾ ಕಟ್ಟಡಗಳ ಮತ್ತು ಗ್ರಾಮ ರಸ್ತೆಗಳ ರಿಪೇರಿಯ ಮೇಲ್ವಿಚಾರಕೆ ಬಗ್ಗೆ ಎರಡು ತಿಂಗಳ ವರೆಗೆ ಮಾಸಿಕ ರೂ. 20 ರಲ್ಲಿ ನಾಡುಮಾಡು ನೇಮಿಸಲ್ಪಡುವ ಮೇಲ್ವಿಚಾರಕರನ್ನು [illegible] ಮತ್ತು [illegible] ತಿಂಗಳುಗಳ ಬದಲು [illegible] ತಿಂಗಳುಗಳಲ್ಲಿ ನೇಮಿಸತಕ್ಕದ್ದು ಎಂಬ ಠರಾವು ಓದಿ ಅಂಗೀಕರಿಸಲ್ಪಟ್ಟಿತು.

54. ಜಿಲ್ಲಾ ಬೋರ್ಡಿನ ರಿಕಾರ್ಡುಗಳನ್ನು ವ್ಯವಸ್ಥಿತ ರೀತಿಯಲ್ಲಿಡಲು ಎರಡು ತಿಂಗಳಿಗೆ ಮೀರದಷ್ಟು ಮಾಸಿಕ ರೂ. 20 ರ ವೇತನದಲ್ಲಿ ಒಬ್ಬ ರಿಕಾರ್ಡ್ ಕೀಪರನ್ನು ನೇಮಿಸತಕ್ಕದ್ದು ಎಂಬ ಠರಾವು [illegible] ಅಂಗೀಕರಿಸಲ್ಪಟ್ಟಿತು.

55. ಬ[illegible] ರಸ್ತೆಗಾಗಿ ಕಂಟ್ರಾಕ್ಟರು [illegible] ದಾಖಲು ಮಾಡಲು ರೂ. 1000 ಇಡಬೇಕೆಂಬ ಠರಾವನ್ನು ಓದಿ 1939–40 ಕ್ಕೆ ರೂ. 300 ನ್ನು ಬೋರ್ಡಿನ ಇತರ ಖರ್ಚುಗಳ ಬಾಬತ್ತು ಹಣದಿಂದ ಒದಗಿಸಿಕೊಳ್ಳುವಂತೆಯೂ, 1940-41 ರ ಬಜೆಟ್ಟಿನಲ್ಲಿ ರೂ. 1000 ಇಡುವಂತೆಯೂ ತೀರ್ಮಾನವಾಯಿತು.

56. ಡಾಕ್ಟರ್ ಸಿ. ಬಿ. ಚಿಟ್ಟಿಯಪ್ಪನವರ ನಿವೃತ್ತಿ ವೇತನಕ್ಕಾಗಿ ಕೊಟ್ಟಿರುವ ರೂ. 3,264 ನ್ನು ಮಂಜೂರ್ಮಾಡಲಾಯಿತು.

ಮುಂದರಿಸಲ್ಪಟ್ಟ ಹಿಂತೆಗೆದುಕೊಂಡ, ಯಾ ನಾಪಾಸಾದ ಠರಾವುಗಳು.

57. ಮಡಿಕೇರಿ–ಕೊಡ್ಲಿಪೇಟೆ ರಸ್ತೆಯಿಂದ ಶನಿವಾರ ಸಂತೆಗೆ ಹೋಗುವ ಹತ್ತಿರದ ಮಾರ್ಗದ ರಿಪೇರಿಗೆ ರೂ 20 ಮಂಜೂರ್ಮಾಡಬೇಕೆಂಬ ಉತ್ತರಕೊಡಗು ಸುಭೇದಾರರ ಪತ್ರ ಓದಿ ಬೋರ್ಡಿನ ಆರ್ಥಿಕ ಸ್ಥಿತಿಯು ಅಭಿವೃದ್ಧಿಗೊಂಡಾಗ ಇದನ್ನು ಯೋಚಿಸಬಹುದೆಂದು ತೀರ್ಮಾನವಾಯಿತು.

58. ಶನಿವಾರಸಂತೆಯ ಪಬ್ಲಿಕ್ ವರ್ಕ್ಸನವರ ಬಿಡಾರದ ರಿಪೇರಿ ಬಗ್ಗೆ ಹಣ ವಿಡಬೇಕೆಂಬ ಸೂಚನೆಯನ್ನು ಚರ್ಚಿಸಿ ಬೋರ್ಡಿನ ಆರ್ಥಿಕ ಸ್ಥಿತಿ ಅಭಿವೃದ್ಧಿಗೊಂಡಾಗ ಈ ವಿಚಾರ ಆಲೋಚಿಸಲು ತೀರ್ಮಾನವಾಯಿತು.

59. ಶನಿವಾರಸಂತೆ ಪಟ್ಟಣದ ನಿವಾಸಿಗಳ ಉಪಯೋಗಕ್ಕಾಗಿ ಅಲ್ಲಿ ಎರಡು ಬಾವಿಗಳನ್ನು ತೋಡುವ ಬಗ್ಗೆ ರೂ 200 ಮಂಜೂರ್ಮಾಡಬೇಕೆಂಬ ಪ. ಕಮಿಷನರ ಶಿಫಾರಸ್ಸನ್ನು ಓದಿ ಇದನ್ನು ಗ್ರಾಮಾಭಿವೃದ್ಧಿ ಕಮಿಟಿಯವರ ಆಲೋಚನೆಗೆ ಬಿಡುವಂತೆ ನಿರ್ಧರಿಸಲಾಯಿತು.

60. ಬೆಸಗೂರು ಶಾಲೆಯ ಕಟ್ಟಡಕ್ಕೆ ಹೆಚ್ಚಾಗಿ ಖರ್ಚಾದ ರೂ. 69–2–9 ನ್ನು ಕೊಡಬೇಕೆಂಬ ಅರ್ಜಿಯನ್ನು ಓದಿ ಹಣದ ಅಭಾವದಿಂದ ತಿರಸ್ಕರಿಸಲಾಯಿತು.

61. ಹೆಬ್ಬಾಲೆ ಟೋಲ್‌ಗೇಟ್ ಕಂಟ್ರಾಕ್ಟರಿಗೆ ಗುತ್ತಿಗೆ ಹಣದಲ್ಲಿ ಸ್ವಲ್ಪ ಮಾಫಿ ಬಿಡಬೇಕೆಂಬ ಅರ್ಜಿ ಓದಿ ತಿರಸ್ಕರಿಸಲಾಯಿತು.

62. ಕಡಗದಾಳು–ಬೋಯಿಕೇರಿ ರಸ್ತೆಯಲ್ಲಿರುವ ಹೊಳೆಗೆ ಪಾಲ ಹಾಕಲು ರೂ. 10 ಮಂಜೂರು ಮಾಡಬೇಕೆಂಬ ಶ್ರೀ ಸಿ. ಎಂ. ಪೂಣಚ್ಚನವರ ಠರಾವನ್ನು ಸೂಚಕರು ಗೈರ್ಹಾಜರಾದ ಕಾರಣ ಮುಂದರಿಸಲಾಯಿತು.

63. ಕೆರೆ ರಿಪೇರಿಗೆ ಬೋರ್ಡಿನಿಂದ ಹಣ ಕೊಡುವುದಿಲ್ಲವಾದ ಕಾರಣ [illegible] ಗ್ರಾಮದ ಕೆರೆ ರಿಪೇರಿಗೆ ರೂ. 40 ಕೊಡಬೇಕೆಂಬ ಶ್ರೀ [illegible] ಠರಾವನ್ನು ತಿರಸ್ಕರಿಸಲಾಯಿತು.

64. ಮಾದಾಪುರ ಪೌನಿಗೆ ಬೀದಿ ದೀಪಗಳನ್ನು ಕೊಡಬೇಕೆಂಬ ಶ್ರೀ ಎ. [illegible] ಠರಾವನ್ನು ಸೂಚಕರು [illegible] ದಿಂದ ಅಂಗೀಕರಿಸಲಿಲ್ಲ.

65. [illegible] (10ನೇ ಮೈಲು) ಗೆ [illegible] ದೀಪ ಕೊಡಬೇಕೆಂಬ ಶ್ರೀ ಎ. ಎಸ್. ಸೂಚಯ್ಯನವರ ಠರಾವನ್ನು ಸೂಚಕರು ಗೈರ್ಹಾಜರಾದ ಕಾರಣ [illegible].

66. [illegible] ಮಕ್ಕಳ ಉಪಯೋಗಾರ್ಥವಾಗಿ ಶಾಲೆಯ ಮುಂಗಡೆ ಒಂದು ಬಾವಿಯನ್ನು ತೋಡುವ ಬಗ್ಗೆ ರೂ. 100 ಮಂಜೂರು ಮಾಡಬೇಕೆಂಬ ಶ್ರೀ ಪಿ. ಪಿ. ಮಾದಯ್ಯನವರ ಠರಾವು ಹಣದ ಅಭಾವದಿಂದ ವಾಪಸು ತೆಗೆದುಕೊಳ್ಳಲ್ಪಟ್ಟಿತು.

67. ಮಡಿನಾಡಿನ ಪಯಸ್ವಿನಿ ಶಾಲೆಯಲ್ಲಿ ಒಂದು ಪಶು ಆಸ್ಪತ್ರೆಯನ್ನು ತೆರೆಯುವ ಬಗ್ಗೆ 1940–41ರ ಬಜೆಟ್ಟಿನಲ್ಲಿ ಹಣವಿಡಬೇಕೆಂಬ ಶ್ರೀ ಕೆ. ಕೆ. ಗಣಪತಿಯವರ ಠರಾವನ್ನು ಬೋರ್ಡಿನ ಆರ್ಥಿಕ ಅಭಿವೃದ್ಧಿಯಾಗುವಾಗ ಆಲೋಚಿಸುವಂತೆ ಮುಂದರಿಸಲಾಯಿತು.

68. ಗೆಜ್ಜೆಹಣಕೋಡು ಖಾಸಗಿ ಶಾಲೆಗೆ ಮಾಹೆಯಾನ ರೂ. 10ರ ಗ್ರಾಂಟು ಕೊಡಬೇಕೆಂಬ ಶ್ರೀ ಎಸ್. ಮಾದಪ್ಪನವರ ಠರಾವನ್ನು ಓದಿ ಮುಂದರಿಸಲಾಯಿತು. ಅಲ್ಲದೆ ಬೋರ್ಡಿನ ವಿದ್ಯಾ ಸಮಿತಿಯವರ ವರದಿ ಮೇಲೆ ಒಡನೆ ಹುಕುಂ ಪಾಸು ಮಾಡುವ ಬಗ್ಗೆ ಚೀಫ್ ಕಮಿಷನರನ್ನು ಪುನಹ ಜ್ಞಾಪಿಸುವಂತೆ ತೀರ್ಮಾನವಾಯಿತು.

69. ಬಾಳೆಲೆ ಶಾಲೆಗೆ ಒಬ್ಬ ಪಾಲಂಟೀಯರ್ ಉಪಾಧ್ಯಾಯರನ್ನು ಕೊಡಬೇಕೆಂಬ ಶ್ರೀ ಎ ಎಸ್. ಪೊನ್ನಪ್ಪನವರ ಠರಾವನ್ನು ಓದಿ ಮುಂದರಿಸಲಾಯಿತು.

70. ಹೆಬ್ಬಾಲೆಯ ಹಯರ್ ಎಲಿಮೆಂಟರಿ ಶಾಲೆಯನ್ನು ವಜಾ ಮಾಡಿರುವ ಪ್ರಯುಕ್ತ ಫ್ರೇಜರ್‌ಪೇಟೆ ಶಾಲೆಯನ್ನು ಹಯರ್ ಎಲಿಮೆಂಟರಿ ಶಾಲೆಯಾಗಿ ಮಾ

(೫ ನೇ ಪುಟ ನೋಡಿ)

ಕೊಡಗು

ಫೆಬ್ರವರಿ ತಾರೀಕು ೨೩ ನೇ ಶುಕ್ರವಾರ ೧೯೪೦.

ಡಿಸ್ಟ್ರಿಕ್ಟ್ ಬೋರ್ಡಿನ ಬಜೆಟ್.

ಕೊಡಗು ಜಿಲ್ಲಾ ಬೋರ್ಡಿನ ಬಜೆಟ್ ಮೀಟಿಂಗು ಈ ತಾರೀಕು 13,14 ರಲ್ಲಿ ನಡೆದುದರ ವಿವರವನ್ನು ಕಳೆದ ವಾರವೂ, ಈ ವಾರವೂ ಪ್ರಕಟಿಸಲಾಗಿದೆ. ಅಂದಾಜು ಬಜೆಟಿನ ಅಂಕೆಗಳನ್ನು ಪರಿಶೀಲಿಸಿದಲ್ಲಿ ಬೋರ್ಡಿನ ಆರ್ಥಿಕ ಸ್ಥಿತಿಯು ಶೋಚನೀಯವಾಗಿರುವುದು ಕಂಡು ಬರುವದು. ಬೋರ್ಡಿನ ಸಾಧಾರಣ ಕೆಲಸಗಳನ್ನು ಮತ್ತು ಕಳೆದ ಬಜೆಟ್ ಮೀಟಿಂಗಿನ ನಂತರ ಆಚೆಗೆ ಮಂಜೂರ್ಮಾಡಿದ ಹೊಸ ಕೆಲಸಗಳನ್ನು ಸೇರಿಸಿ ತಯಾರಿಸಿದ ಮೊಟ್ಟ ಮೊದಲಿನ ಬಜೆಟ್ಟಿನಲ್ಲಿ ವೆಚ್ಚವು ಆದಾಯವನ್ನು ಸುಮಾರು 24000 ದಷ್ಟು ಮೀರಿತ್ತು. ಆದ್ದರಿಂದ ಬೋರ್ಡಿನ ಮುಖ್ಯಾಧಿಕಾರಿಗಳು ಇಲಾಖಾ ಮೇಲಧಿಕಾರಿಗಳನ್ನು ಸೇರಿಸಿ ಬಜೆಟ್ ಚರ್ಚೆಮಾಡಿ ಇಷ್ಟರ ವರೆಗೆ ಮಂಜೂರು ಮಾಡಿದ ಹೊಸ ಕೆಲಸಗಳನ್ನೆಲ್ಲಾ ಬಾಕಿ ಮಾಡಿ ವಾಡಿಕೆ ಕೆಲಸಗಳಲ್ಲಿ ಕೂಡ ಕೆಲವನ್ನು ನಿಲ್ಲಿಸಿ ಖರ್ಚನ್ನು ಸುಮಾರು 16 ಸಾವಿರದಷ್ಟು ಕಡಿಮೆ ಮಾಡಿದರು. ನಂತರ ಬೋರ್ಡಿನ ಮೀಟಿಂಗಿನಲ್ಲಿ ಎಲ್ಲವೂ ಕೂಲಂಕುಷವಾಗಿ ಚರ್ಚಿಸಲ್ಪಟ್ಟು ಖರ್ಚನ್ನು ಸಾಧ್ಯವಾದಷ್ಟು ಮಟ್ಟಿಗೆ ಶೋತೆ ಮಾಡಿದರೂ ಕೂಡ ಖರ್ಚು ಆದಾಯವನ್ನು 8000 ದಷ್ಟು ಮೀರಿದಯಾಗಿ ಕಂಡು ಬರುತ್ತೆ. ಮೆಂಬರುಗಳು ಈ ಮೀಟಿಂಗಿನಲ್ಲಿ ಗ್ರಾಮಾಭಿವೃದ್ಧಿಗೆ ಅವಶ್ಯವಾದ ಹಲವು ಹೊಸ ಕೆಲಸಗಳಿಗೆ ಹಣವಿಡಬೇಕೆಂದು ರಿಸೊಲ್ಯೂಶನನ್ನು ಕಳುಹಿಸಿದ್ದರು. ಆದರೆ ವಾಡಿಕೆಯ ಕೆಲಸಗಳನ್ನೇ ಸಂಪೂರ್ಣವಾಗಿ ನಡೆಸಲು ಹಣವಿಲ್ಲದಿರುವಾಗ ಹೊಸ ಕೆಲಸಗಳಿಗೆ ಹಣ ಮಂಜೂರ್ಮಾಡಲು ಸಾಧ್ಯವಾಗುವದು ತಾನೆ ಹೇಗೆ?

ಬೋರ್ಡಿನ ಮುಖ್ಯ ಕೆಲಸಗಳೆಂದರೆ ಜನಸಮುದಾಯಕ್ಕೆ ವೈದ್ಯ ಚಿಕಿತ್ಸೆಯು, ವಿದ್ಯಾಭ್ಯಾಸದ, ಮತ್ತು ಗ್ರಾಮಾಂತರ ವಹಿವಾಟುಗಳಿಗೆ ಬೇಕಾದ ರಸ್ತೆಗಳ ಅನುಕೂಲತೆಗಳನ್ನು ಮಾಡಿಕೊಡುವದೇ ಆಗಿದೆ. ಕಾಲವು ಕಳೆಯುತ್ತಾ ಬಂದ ಹಾಗೆ ಈ ಅವಶ್ಯಕತೆಗಳು ಹೆಚ್ಚುತ್ತಾ ಬರುತ್ತವೆ. ಅವುಗಳನ್ನು ನಿರ್ವಹಿಸಲು ಬೋರ್ಡಿನ ಉತ್ಪತ್ತಿಯು ಹೆಚ್ಚುತ್ತಾ ಬರಬೇಕಿದೆ. ಆದರೆ ಬೋರ್ಡಿನ ಆದಾಯವನ್ನು ಹೆಚ್ಚಿಸಿಕೊಳ್ಳಲಿರುವ ಅವಕಾಶವೇ ಕಡಿಮೆ. ಅದಕ್ಕೆ ಅಧಿಕಾರವಿರುವಷ್ಟು ಅಂದರೆ ರೂಪಾಯಿಗೆ ಎರಡಾಣೆಯಷ್ಟು ಸೆಸ್ಸನ್ನು ವಿಧಿಸಿದೆ. ಇದೇ ಬೋರ್ಡಿನ ಮುಖ್ಯ ಉತ್ಪತ್ತಿ. ಸುಂಕದ ಕಟ್ಟೆ ಮತ್ತು ಮೋಟಾರುಗಳ ಸುಂಕ ವಸೂಲಾತಿಯು ಹೆಚ್ಚುತ್ತಿಲ್ಲ. ಮೋಟರು ಮತ್ತು ಲಾರಿ ವಹಿವಾಟುಗಳು ಹೆಚ್ಚಿ ಗಾಡಿ ವಹಿವಾಟುಗಳು ಕಡಿಮೆಯಾಗುತ್ತಿರುವದೇ ಇದಕ್ಕೆ ಕಾರಣವಾಗಿದೆ. ಈ ಮೊದಲು ಮೋಟಾರು ವಾಹನಗಳ ಮೇಲಿನ ಸುಂಕವು ಬೋರ್ಡಿಗೆ ಬರುತ್ತಿತ್ತು. ಇತ್ತೀಚೆಗೆ ಅದು ಸರ್ಕಾರದ ಪಾಲಾಗಿದೆ. ಸರಕಾರಕ್ಕೆ ಈ ಬಾಬಿನ ಉತ್ಪತ್ತಿಯು ವರ್ಷೇ ವರ್ಷೇ ಹೆಚ್ಚುತ್ತಿದ್ದರೂ ಕೂಡ ಬೋರ್ಡಿನವರಿಗೆ ಸರ್ಕಾರದವರು ಈ ಸಂಬಂಧ ಉಂಟಾಗುತ್ತಿರುವ ನಷ್ಟಕ್ಕಾಗಿ ಕೊಡುವ ವಂತಿಗೆಯನ್ನು ಕಡಿಮೆ ಮಾಡುತ್ತಿರುವದು ನ್ಯಾಯವಲ್ಲ. ವಿದ್ಯಾಭ್ಯಾಸವು ದಿನೇ ದಿನೇ ಮುಂದರಿಯುತ್ತಿರುವ ಈ ಕಾಲದಲ್ಲಿ ಸರಕಾರದವರು ಈ ಉದ್ದೇಶಕ್ಕಾಗಿ ಕೊಡುತ್ತಿರುವ ವಂತಿಗೆಯಲ್ಲಿ 5,000 ಕಡಿಮೆ ಮಾಡಿರುವದು ಬಹು ವಿಷಾದಕರ. ಬೋರ್ಡಿನ ಈಗಿನ ಆರ್ಥಿಕ ಸ್ಥಿತಿಯಲ್ಲಿ ಬಜೆಟನ್ನು ಸರಿಗಟ್ಟಬೇಕಾದರೆ ಈಗಿರುವ ಆಸ್ಪತ್ರೆಗಳಲ್ಲಿ, ಶಾಲೆಗಳಲ್ಲಿ ಮತ್ತು ಗ್ರಾಮಾಂತರ ರಸ್ತೆಗಳಲ್ಲಿ ಕೆಲವನ್ನು ಮುಚ್ಚಬೇಕಾಗುವದು. ಇಲ್ಲವಾದರೆ ಸರಕಾರದವರು ಬೋರ್ಡಿಗೆ ತಕ್ಕಷ್ಟು ಧನ ಸಹಾಯ ಮಾಡಬೇಕಾಗಿದೆ. ಅಂದರೆ ಅವರು ಈ ಮೊದಲು ಬೋರ್ಡಿಗೆ ಕೊಡುತ್ತಿದ್ದ ವಂತಿಗೆಯಲ್ಲಿ ಕಡಿಮೆ ಮಾಡಿದ ರೂ. 7000 ವನ್ನು ಭರ್ತಿಮಾಡಿಕೊಡುವದಲ್ಲದೆ ಇನ್ನೂ ಜೊತೆಗೆ ವಂತಿಗೆಯನ್ನು ಹೆಚ್ಚಿಸಬೇಕೆಂದೂ, ಆರೋಗ್ಯ ಇಲಾಖೆಗೆ ಬೋರ್ಡಿನಿಂದ ಕೊಡುತ್ತಿರುವ ಗ್ರಾಂಟಿನಲ್ಲಿ ಕನಿಷ್ಠ ಮಾಡುವಂತೆಯೂ ಬೋರ್ಡಿನವರು ಠರಾವುಗಳನ್ನು ಪಾಸುಮಾಡಿದ್ದಾರೆ. ಸರಕಾರದವರು ಬೋರ್ಡಿನ ಈ ತೀರ್ಮಾನಗಳನ್ನು ಮನ್ನಿಸುವರಾಗಿ ನಂಬುತ್ತೇವೆ. ಇತರ ಎಲ್ಲಾ ಜಿಲ್ಲಾ ಬೋರ್ಡುಗಳಲ್ಲಿಯೂ ಆರ್ಥಿಕ ಸ್ಥಿತಿಯು ಹೀಗೆ ಇದ್ದು ಪ್ರಾಂತೀಕ ಸರಕಾರಗಳ ಸಹಾಯದಿಂದಲೇ ಅವರ ಕಾರ್ಯಕಲಾಪಗಳು ತೃಪ್ತಿಕರವಾಗಿ ನಡೆಸಲ್ಪಡುತ್ತಿವೆ. ಅಂದ ಮೇಲೆ ಇಲ್ಲಿಯ ಸರಕಾರದವರೂ ಕೂಡ ಜಿಲ್ಲಾ ಬೋರ್ಡಿನ ಸಹಾಯಕ್ಕೆ ಬರಬೇಕಾದುದು ಅವರ ಕರ್ತವ್ಯವಾಗಿದೆ. ಇಲ್ಲವಾದರೆ ಹಲವು ವಿಚಾರಗಳಲ್ಲಿ ಮುಂದರಿದಿರುವ ಇಲ್ಲಿಯ ಬೋರ್ಡಿನ ಕಾರ್ಯಕಲಾಪಗಳಿಗೆ ಅಡ್ಡಿ ತಂದು ಬೋರ್ಡಿನ ಪ್ರಗತಿಯನ್ನು ಹಿಂದಕ್ಕೆ ತಳ್ಳಿದಂಥಾ ಜವಾಬ್ದಾರಿಯು ಸರಕಾರದ ಮೇಲೆ ಬೀಳುವದು. ಆದ ಕಾರಣ ಸರಕಾರದವರು ಈ ವಿಚಾರಕ್ಕೆ ತುಂಬಾ ಗಮನಕೊಡುವರಾಗಿ ಆಶಿಸುತ್ತೇವೆ.

ರಾಷ್ಟ್ರಪತಿಗಳ ಚುನಾವಣೆ.

ಶ್ರೀ ಅಬುಲ್ ಕಲಂ ಅಜಾದರವರು ಕಾಂಗ್ರೆಸಿನ 53 ನೇ ಮಹಾಸಭೆಯ ಅಧ್ಯಕ್ಷರಾಗಿ ಬಹು ಬೊಕ್ಕ ಬಹುಮತದಿಂದ ಚುನಾಯಿಸಲ್ಪಟ್ಟದ್ದು ಭಾರತೀಯರೆಲ್ಲರಿಗೂ ಆನಂದವನ್ನುಂಟುಮಾಡತಕ್ಕದು. ಸ್ವರಾಜ್ಯ ಹೋರಾಟದ ಈ ಬಿಕ್ಕಟ್ಟಿನ ಸಮಯದಲ್ಲಿ ರಾಷ್ಟ್ರಪತಿಯ ಸ್ಥಾನವನ್ನು ವಹಿಸಲು ಇವರಷ್ಟು ಯೋಗ್ಯರಾದವರು ಬೇರೊಬ್ಬರಿಲ್ಲ. ಕಾಂಗ್ರೆಸಿನ ಹೋರಾಟದ ಅಂತ್ಯಕ್ಕೆ ತಲುಪುತಿರುವಂಥಾ ಈ ಕಾಲದಲ್ಲಿ ಹಿಂದೂ ಮುಸ್ಲಿಮರೊಳಗೆ ಇರುವ ಒಗ್ಗಟ್ಟನ್ನು ಕೆಡಿಸಲು ಮುಸ್ಲಿಂ ಲೀಗಿನ ಮುಂದಾಳಾದ ಮಿ. ಜಿನ್ನಾರವರು ಪ್ರಯತ್ನಮಾಡುತ್ತಿರುವ ಈ ಕಾಲದಲ್ಲಿಯೂ ಮತ್ತು ಬ್ರಿಟಿಷರು ಮುಸ್ಲಿಂ-ಹಿಂದೂ ಸಮಸ್ಯೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಿರುವಂಥಾ ಈ ಸಂದರ್ಭದಲ್ಲಿಯೂ ಒಬ್ಬ ಮುಸಲ್ಮಾನ ಮಹನೀಯರು ಕಾಂಗ್ರೆಸ್ ಮಹಾಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದು ಭಾರತದ ಭಾಗ್ಯವಂದೇ ಎಣಿಸಬೇಕಾಗಿದೆ. ಅಜಾದರವರು ಮುಸ್ಲಿಂ ಸಂಸ್ಕೃತಿಯಲ್ಲಿ ತುಂಬಾ ಪಾಂಡಿತ್ಯವನ್ನು ಪಡೆದವರಾಗಿಯೂ, ಮುಸ್ಲಿಂ ಜನರನ್ನು ದಾಯದ ಪ್ರೀತಿಗೆ ಪಾತ್ರರಾದವರಾಗಿಯೂ ಇರುವರು. ಕಾಂಗ್ರೆಸಿನಲ್ಲಿಯೂ ಇವರು ತುಂಬಾ ವಿಶ್ವಾಸವನ್ನು ಗಳಿಸಿರುವರು. ಇವರ ಆರಿಸುವಿಕೆಯಿಂದ ಗಾಂಧೀಜಿಯವರ ಮುಂದಾಳುತನಕ್ಕೆ ಜಯವುಂಟಾಗಿದೆಯೆಂಬುದೇ ಹಲವರ ಭಾವನೆ. ಆದ್ದರಿಂದ ಅಜಾದರವರು ಕಾಂಗ್ರೆಸ್ ಮುಖ್ಯಾಧಿಕಾರಿ ಸ್ಥಾನಕ್ಕೆ ಬಂದದ್ದರಿಂದ ಹಿಂದೂ ಮುಸ್ಲಿಂ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಬಹುದೆಂದು ಹೇಳಬಹುದು. ಈ ದೃಷ್ಟಿಯಿಂದ ಇವರ ಚುನಾವಣೆಯು ಹಿಂದುಗಳಿಗೂ ಹಾಗೆಯೇ ಮುಸಲ್ಮಾನರಿಗೂ ಪೂರ್ಣ ತೃಪ್ತಿಯನ್ನುಂಟುಮಾಡದಿರದು. ಇವರು ದೇಶಸೇವೆಯಲ್ಲಿ ಪಳಗಿದವರೂ ಕೂಡ ಸ್ವಾತಂತ್ರ್ಯಕ್ಕಾಗಿ ಇವರಿಗಿರುವ ಉತ್ಸಾಹವು ಇವರನ್ನು ದಿನೇ ದಿನೇ ಮುಂದೆ ತಳ್ಳುತ್ತಲಿದೆ. ಇವರ ಮುಂದಾಳುತನದಲ್ಲಿ ಭಾರತ ಭೂಮಿಯು ತನ್ನ ಗುರಿಯಾದ ಸ್ವಾತಂತ್ರ್ಯವನ್ನು ಪಡೆಯಲೆಂದೇ ನಮ್ಮ ಆಶಯವಾಗಿದೆ.

ಯುದ್ಧ ವಾರ್ತೆ.

ರಷ್ಯಾ - ಫಿನ್‌ಲ್ಯಾಂಡ್.

ಈ ಯುದ್ಧವು ತೀವ್ರವಾಗಿ ನಡೆಯುತ್ತಿದೆ. ಈಗ ಕೆಲವು ದಿನಗಳಿಂದ ಫಿನ್ನರ ಕೈಯೇ ಮೇಲಾಗಿದೆ. ಲಡೋಗ ಸರಸ್ಸಿಗೆ ಈಶಾನ್ಯದಲ್ಲಿ ರಷ್ಯನ್ ಸೇನೆಯು 18 ನೇ ಡಿವಿಜನ್ ಪಡೆ ಸಂಪೂರ್ಣವಾಗಿ ಫಿನ್ನರಿಂದ ನಾಶಮಾಡಲ್ಪಟ್ಟಿದೆ. ಸತ್ತ ಅಥವಾ ಸೆರೆ ಹಿಡಿಯಲ್ಪಟ್ಟ ರಷ್ಯನರ ಸೇನೆ 18,000 ಎಂದು ಅಂದಾಜು ಮಾಡಲಾಗಿದೆ. ತಾ. 18ನೇ ಭಾನುವಾರ ಫಿನ್ನರ ಯುದ್ಧ ವಿಮಾನಗಳು ರಷ್ಯನ್ ಪ್ರದೇಶದ ಮೇಲೆ ಹಾರಿ ಸ್ಥಳ ಪರಿಶೋಧನೆ ಮಾಡಿದ್ದಲ್ಲದೆ, ಕೆಲವೆಡೆ ಬಾಂಬು ಹಾಕಿದವು. ತಾ 19ರಲ್ಲಿ ಫಿನ್ನರ ಮೇಲೆ ರಷ್ಯನರು ಕೈಕೊಂಡ ವಿಮಾನ ಯುದ್ಧದಲ್ಲಿ ಫಿನ್ನರು ರಷ್ಯನರ 24 ವಿಮಾನಗಳನ್ನು ಕೆಡವಿರುವರೆಂದು ತಿಳಿದು ಬಂದಿದೆ. ರಷ್ಯನರು ಕೆಲವು ನಾಗರೀಕರ ಮೇಲೂ ಸಹ ಧಾಳಿ ಮಾಡುವ ಹವ್ಯಾಸದಲ್ಲಿದ್ದಾರಂತೆ. ಫಿನ್ಲೆಂಡ್ ಕೊಲ್ಲಿಗೂ, ಪ್ರೊಂಕೇ ಪ್ರದೇಶಕ್ಕೂ ಮಧ್ಯೆ ರಷ್ಯನರು ಮುತ್ತಿಗೆ ಹಾಕಿದ್ದರೂ ಫಿನ್ನರು ಇವರನ್ನು ತಡೆದು ಹಿಂದಟ್ಟಿರುವರು. ಸಾಲ್ಕಿನ್ ಪ್ರದೇಶದಲ್ಲಿ ಫಿನ್ನರಿಗೆ ಭಾರೀ ವಿಜಯವಾಗಿದೆ. ರಷ್ಯನರ 31 ಫಿರಂಗಿಗಳನ್ನು ಫಿನ್ನರು ವಶಮಾಡಿಕೊಂಡಿರುವರು. ಲಡೋಗ ಸರಸಿನ ಬಳಿ ಫಿನ್ನರು ರಷ್ಯನರ 20 ಟ್ಯಾಂಕುಗಳನ್ನೂ, 36 ಭಾರಿ ಫಿರಂಗಿಗಳನ್ನೂ, 17 ಟ್ರಾಕ್ಟರುಗಳನ್ನೂ ವಶಪಡಿಸಿಕೊಂಡಿರುವರು. ಕ್ಯಿವಿಲ್ ನದಿಯ ಹತ್ತಿರ ಈಗ ಇಕ್ಕಡೆಯವರಿಗೂ ತೀವ್ರ ಯುದ್ಧ ನಡೆಯುತ್ತಿದೆ.

ಫಿನ್ಲೆಂಡಿಗೆ ಸ್ವಸ್ಥ ಸಹಾಯವನ್ನು ಒದಗಿಸಲು ... ಸ್ವೀಡನ್ ... ಕಾರ್ಯ ... ಬಂದಿದೆ.

... ಸಂಗ್ರಹದಲ್ಲಿ ಯುದ್ಧ ... ಇಟಲಿಯ ... ಪಡೆಯ ನಾಯಕರಾದ ಜನರಲ್ ಕ್ಯಾಪಿಲೊ ಮಂದ ಬೀನಿಯವರ ನಾಯಕತ್ವದಲ್ಲಿ 10000 ಇಟಾಲಿಯನ್ ಸೈನಿಕರು ಫಿನ್‌ಲೆಂಡಿನ ಸಹಾಯಕ್ಕೆ ಹೊರಟಿರುವರಾಗಿ ತಿಳಿದುಬಂದಿದೆ.

ಪಶ್ಚಿಮ ರಣರಂಗ.

ಈಗ ಸ್ವಲ್ಪ ಸ್ವಲ್ಪ ಸ್ಥಳಗಳಿಂದ ಯುದ್ಧ ನಡೆಯುತ್ತಿದೆ. ತಾ. 19ರಲ್ಲಿ ಜರ್ಮನರು ... ಫ್ರೆಂಚ್ ಸೈನ್ಯವೊಂದನ್ನು ಒಳಗೆ ಸಿಕ್ಕುವ ಹಾಗೆ ಮಾಡಿ ಇಪ್ಪತ್ತು ಜನರನ್ನು ಕೊಲ್ಲುಹಾಕಿದರು. ಸ್ವಲ್ಪ ಪ್ರದೇಶದಲ್ಲಿ ಜರ್ಮನರು ಕಣ್ಕಟ್ಟಿನ ಬಲೆಯನ್ನು ರಚಿಸಿದ್ದರು. ಅಮೂಲ್ಯವಾದ ಸುದ್ದಿ ಸಮಾಚಾರಗಳನ್ನು ಸಂಗ್ರಹಿಸಿಕೊಂಡು ಬರೋಣವೆಂದು ಫ್ರೆಂಚ್ ತುಕಡಿಯೊಂದು ಹೊರಟಿತ್ತು. ಕಾಣದ ಅವರು ಈ ಕಣ್ಕಟ್ಟಿನ ಬಲೆಯ ಹತ್ತಿರ ಬರಲಾಗಿ ಜರ್ಮನರು ಫಿರಂಗಿಗಳನ್ನು ಹಾರಿಸಿದರು. ಫ್ರೆಂಚರು ದಿಕ್ಕೆಟ್ಟು ಓಡಲಾರದೆ ಗುಂಡಿಗೆ ಆಹುತಿಯಾದರು.

ತಾ. 18ರ ಬೆಳಿಗ್ಗೆ ಫ್ರೆಂಚ್ ಜರ್ಮನ್ ತುಕಡಿಗಳೊಳಗೆ ಕದನವಾಯಿತು. ಉಭಯಪಕ್ಷದವರೂ ಗುಂಡು ಹಾರಿಸಿದರೂ ಯಾರಿಗೂ ಹೆಚ್ಚು ನಷ್ಟವಾಗಲಿಲ್ಲ. ಸಾರ್ ಪ್ರಾಂತದಲ್ಲಿ ಜರ್ಮನ್ ತುಕಡಿಯೊಂದು ಫ್ರೆಂಚ್ ಕಾವಲು ಪ್ರದೇಶವೊಂದನ್ನು ಮುತ್ತಿಗೆ ಹಾಕಿಸಿದಾಗ ಫ್ರೆಂಚರು ಅವರನ್ನು ತೀವ್ರ ಎದುರಿಸಿದ ಪ್ರಯುಕ್ತ ಅನೇಕ ನಷ್ಟದೊಡನೆ ಅವರು ಹಿಮ್ಮೆಟ್ಟಬೇಕಾಯಿತು.

ನಾಲ್ಕು ಕಾನ್‌ವಾಯ್ ವ್ಯವಸ್ಥೆಯಲ್ಲಿದ್ದ ಬ್ರಿಟಿಷ್ ಜಹಜುಗಳನ್ನು ಮುಳುಗಿಸಲಾಯಿತೆಂದು ಜರ್ಮನರು ಪ್ರಕಟಿಸಿರುವರು. ಆದರೆ ಬ್ರಿಟಿಷರು ಇದು ನಿರಾಧಾರವೆಂದು ಹೇಳಿರುವರು.

'ಡೇರಿಂಗ್' ಎಂಬ ಬ್ರಿಟಿಷ್ ಡಿಸ್ಟ್ರಾಯರ್ ಜಹಜು ಟಾರ್ಪೆಡೋ ಮಾಡಿ

ಒಳದೇಶ.

ವಾಕ್ ಸ್ಪರ್ಧೆಯಲ್ಲಿ ಪ್ರಥಮ ಬರುವ ಹೆಂಗಸರಿಗಾಗಿ ಇಟ್ಟಿರುವ ಲೇಡಿ ಗೌಶಿನ್ಸ್ ಎಂಬ ಚಿನ್ನದ ಮದ್ರಾಸು ಯೂನಿವರ್ಸಿಟಿ ಮೆಡಲನ್ನು ಮಿಸ್ ಕೋಣೆಗಂಡ ಅಚ್ಚಯ್ಯನವರು ಪಡೆದರೆಂದು ಕೇಳಲು ಸಂತೋಷಪಡುತ್ತೇವೆ.

ಹೆಚ್ಚಿನ ತರಬೇತು ಹೊಂದಲು ರಜೆಯಲ್ಲಿ ಮದ್ರಾಸಿಗೆ ಹೋಗಿರುವ ಡಾ. ಕೋದಂಡ ಕಾರ್ಯಪ್ಪನವರು ರಜೆ ಮುಗಿದು ವಾಪ್ಸು ಬಂದ ಮೇಲೆ ಮೆ 1ರಲ್ಲಿ ಸೋಮವಾರಪೇಟೆಯ ಆಸ್ಪತ್ರೆ ಚಾರ್ಜಿನಲ್ಲಿರುವಂತೆಯೂ, ಡಾ. ಮಂಡೇಪಂಡ ಬೋಪಯ್ಯನವರು ಸೋಮವಾರಪೇಟೆಯಿಂದ ವೀರಾಜಪೇಟೆಗೂ, ಡಾ. ವೆಂಕಟಸುಬ್ಬಯ್ಯನವರು ವೀರಾಜಪೇಟೆಯಿಂದ ಮೂರ್ನಾಡಿಗೂ, ಡಾ. ಪಟ್ಟಮಾಡ ಅಪ್ಪಚ್ಚನವರು ಮೂರ್ನಾಡಿನಿಂದ ಬಾಳೆಲೆ ಆಸ್ಪತ್ರೆಗೂ ವರ್ಗಾಯಿಸಲ್ಪಡುವರೆಂದು ತಿಳಿಯಬರುತ್ತದೆ.

ಮದ್ರಾಸ್ ಗವರ್ನ್‌ಮೆಂಟ್ ಸೆಂಟ್ರಲ್ ಕೋ-ಆಪರೇಟಿವ್ ಇನ್‌ಸ್ಟಿಟ್ಯೂಟಿನಲ್ಲಿ ಕಳೆದ ಡಿಸೆಂಬರ್ ತಿಂಗಳಿನಲ್ಲಿ ನಡೆದ ಗವರ್ನ್‌ಮೆಂಟ್ ಬೋರ್ಡ್ ಪರೀಕ್ಷೆಯಲ್ಲಿ ಶ್ರೀ ಗಣಪತಿ ಕುಂಬೆರ ಅಪ್ಪಣ್ಣನವರು ನಾಲ್ಕು ಸಬ್‌ಜೆಕ್ಟುಗಳಲ್ಲಿಯೂ, ನೆರವಂಡ ಅಪ್ಪಯ್ಯನವರು ಬ್ಯಾಂಕಿಂಗ್, ಬುಕ್ ಕೀಪಿಂಗ್ ಮತ್ತು ಆಡಿಟ್ಟಿಂಗಿನಲ್ಲಿಯೂ ಚೋಡುಮಾಡ ಪೊನ್ನಪ್ಪನವರು ಆಡಿಟ್ಟಿಂಗ್ (ಒಂದನೇ ಕ್ಲಾಸಿನಲ್ಲಿ), ಬುಕ್ ಕೀಪಿಂಗ್, ಮತ್ತು ಕೋ-ಆಪರೇಶನಿನಲ್ಲಿಯೂ, ಕನ್ನಂಡ ಪೊನ್ನಪ್ಪನವರು ಕೋಪರೇಶನ್ ಮತ್ತು ಬ್ಯಾಂಕಿಂಗ್‌ನಲ್ಲಿಯೂ, ಮುರುವಂಡ ಮಾಚಯ್ಯನವರು ಆಡಿಟ್ಟಿಂ

ಮುಳುಗಿಸಲ್ಪಟ್ಟಿದೆ. ಇದರ ಒಬ್ಬ ಅಧಿಕಾರಿಯನ್ನೂ, 4 ಮಂದಿ ನಾವಿಕರನ್ನೂ ರಕ್ಷಿಸಲಾಗಿದೆ. 9 ಮಂದಿ ಅಧಿಕಾರಿಗಳ ಹಾಗೂ 148 ಮಂದಿ ನಾವಿಕರ ಪತ್ತೆ ಇಲ್ಲದಾಗಿದೆ.

'ಆಲ್ಟ್ ಮಾರ್ಕ್' ಎಂಬ ನಾಝಿ ಜಹಜು 400 ಜನ ಬ್ರಿಟಿಷ್ ನಾವಿಕರನ್ನು ಹಿಡಿದುಕೊಂಡು ಹೋಗುತ್ತಿರಲು ಬ್ರಿಟಿಷ್ ನೌಕಾಪಡೆಯವರು ತೀವ್ರವಾಗಿ ಹೋರಾಡಿ ಈ ಸೆರೆಯಾಳುಗಳನ್ನು ರಕ್ಷಿಸಿಕೊಂಡರೆಂದು ವಾರ್ತೆ.

ಚೈನಾ ಜಪಾನು ಯುದ್ಧ.

ಉಭಯ ಕಡೆಯವರಿಗೂ ಯುದ್ಧವು ಒಳ್ಳೇ ಪ್ರಖರವಾಗಿ ನಡೆಯುತ್ತಿದೆ. ಆದರೆ ನ್ಯಾಸಿಂಗ್ ಮತ್ತು ಕ್ವಾಂಗ್ಸಿ ಪ್ರಾಂತಗಳಲ್ಲಿ ಚೀನಿಯರ ಸೇನೆ ಅತ್ಯಧಿಕವಾಗಿ ಜಮಾಯಿಸುತ್ತಿದೆ. ಚೀನಿಯರಿಗೂ ಜಪಾನರಿಗೂ ಇಲ್ಲಿ ಬಲವಾದ ಘರ್ಷಣೆಯೊಂದು ಆಯಿತು. ಅವರಲ್ಲಿ 20,000 ಸೈನ್ಯಕರನ್ನು ಕಳಕೊಂಡು ಜಪಾನು ಸೈನ್ಯವು ಹಿಮ್ಮೆಟ್ಟಿತು.

ಯಾಂಗ್ಟ್ಸಿ ನದಿಯ ಮೇಲೆ ಸಂಚರಿಸುತ್ತಿದ್ದ ಜಪಾನಿಯುದ್ಧ ಜಹಜುಗಳನ್ನೂ, ಸಾಮಗ್ರಿ ವ್ಯವಸ್ಥೆಯ ನೌಕೆಗಳನ್ನೂ ಚೀನಿಗೋಲಂದಾಜು ಪಡೆಯವರು ಹಿಂದೋಡಿಸಿರುವರೆಂದು ಅವರ ಪ್ರಕಟಣೆ

ವರ್ತಮಾನ ಸಂಗ್ರಹ.

ಗ್ ಮತ್ತು ಬುಕ್ ಕೀಪಿಂಗ್‌ನಲ್ಲಿಯೂ, ಬಾಳೆಯಡ ಕಾರಪ್ಪನವರು ಬುಕ್ ಕೀಪಿಂಗ್ ಮತ್ತು ಆಡಿಟ್ಟಿಂಗಿನಲ್ಲಿಯೂ, ಪುಲಿಯಂಡ ಸೋಮಯ್ಯನವರು, ಕಲಿಯಂಡ ಪೂವಯ್ಯನವರು ಮತ್ತು ಪಿ. ವಿ. ಕಷ್ಟಪ್ಪನವರು ಆಡಿಟ್ಟಿಂಗಿನಲ್ಲಿಯೂ ಪಾಸಾಗಿರುವರೆಂದು ತಿಳಿಯಬರುತ್ತದೆ.

ಮಡಿಕೇರಿ.

ಇಲ್ಲಿ ಈ ವಾರ ಕಾಫಿ ಮೂಟೆಗೆ ರೂ. 160, ಏಲಕ್ಕಿ ಮಣಕ್ಕೆ ರೂ. 35 ಕ್ರಯವಿತ್ತು.

ಕೊಡಗು ಗ್ರಾಮಾಭಿವೃದ್ಧಿ ಫಂಡಿನ ಮೀಟಿಂಗು ತಾ. 26ರಲ್ಲಿ ಇಲ್ಲಿ ನಡೆಯುವದು.

ಮೂರನೇ ಫಾರಮಿನ ಪರೀಕ್ಷಾ ಬೋರ್ಡಿನವರ ಮೀಟಿಂಗೊಂದು ಈ ದಿನ ಇಲ್ಲಿ ನಡೆಯುತ್ತದೆ.

ಇಲ್ಲಿಯ ಕೊಡವ ಸಂಘದವರ ಮೀಟಿಂಗೊಂದು ಕೊಡವರ ಸಮಾಜ ಸುಧಾರಣೆಯ ಬಗ್ಗೆ ಬರುವ ತಾ. 3ನೇ ಆದಿತ್ಯವಾರ ಇಲ್ಲಿ ನಡೆಯುವದು.

ಕೊಡಗು ಕಂಪನಿಯ ಮೇಲೆ ಸಬಾರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ ಹೂಡಲ್ಪಟ್ಟಿದ್ದ ಮೊಕದ್ದಮೆಯು ವೀರಾಜಪೇಟೆ ಮುನ್ಸೀಫರ ಕೋರ್ಟಿಗೆ ವರ್ಗಾಯಿಸಲ್ಪಟ್ಟಿದೆ.

ರಾಮಪುರದಲ್ಲಿ ನಡೆದ ರಾಮಸ್ವಾಮಿ ಕಣಿವೆ ಮಾರ್ಕೆಟಿನ ಹರಾಜಿನಲ್ಲಿ ನ್ಯಾಯವಾದ ಬೆಲೆ ಸಿಕ್ಕದ್ದರಿಂದ ಅದರ ಹರಾಜನ್ನು ಪುನಃ ತಾ. 13-3-40ರಲ್ಲಿ ರಾಮಪುರದಲ್ಲಿ ನಡೆಸುವರೆಂದು ತಿಳಿಯುತ್ತೇವೆ.

ಕೊಡಗಿನಿಂದ ರಾಮಗಢ ಕಾಂಗ್ರೆಸಿಗೆ ಪ್ರತಿನಿಧಿಗಳಲ್ಲಿ ಒಬ್ಬರಾದ ಶ್ರೀ ಚೆಪ್ಪುಡಿರ ಪೂಣಚ್ಚನವರು ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿಯೂ, ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿಯೂ ಆರಿಸಲ್ಪಟ್ಟಿರುವರು.

ಶ್ರೀ ಕೊರವಂಡ ಕಾರ್ಯಪ್ಪ ಮೆಮೋರಿಯಲ್ ಫುಟ್‌ಬಾಲ್ ಶೀಲ್ಡಿನ ಪಂದ್ಯಾಟವು ತಾ. 21ರಲ್ಲಿ ಇಲ್ಲಿ ಪ್ರಾರಂಭವಾಗಿದೆ. ಪ್ರಥಮ ದಿನ ಇಲ್ಲಿಯ ಮುಸ್ಲಿಂ ಟೀಮಿನವರು ಹೈಸ್ಕೂಲಿನ ಬಿ ಟೀಮಿನವರನ್ನು ಗೆದ್ದಿದ್ದಾರೆ. ತಾ. 22ರಲ್ಲಿ ಸ್ಕೂಲ್ ಎ ಟೀಮಿನವರು ದಕ್ಷಿಣ ಕೊಡಗಿನ ಕ್ರೆಸೆಂಟ್ ಟೀಮಿನವರನ್ನು ಸೋಲಿಸಿರುವರು. ಈ ದಿನ ಇಲ್ಲಿಯ ಮುಸ್ಲಿಂ ಟೀಮಿನವರಿಗೂ, ಹೈಸ್ಕೂಲ್ ಎ ಟೀಮಿನವರಿಗೂ ಕೊನೆಯ ಆಟವು ನಡೆಯುವದು.

ಸೆಂಟ್ರಲ್ ಸಹಕಾರಿ ಬ್ಯಾಂಕಿನ ವಾರ್ಷಿಕ ಮಹಾಸಭೆಯು ಇಲ್ಲಿಯ ಹೈಸ್ಕೂಲ್ ಹಾಲ್‌ನಲ್ಲಿ ಈ ತಾ. 18ರಲ್ಲಿ ನಡೆದು ಶ್ರೀ ಪಿ. ಐ. ಬೆಳ್ಯಪ್ಪ, ಯಂ. ಎಲ್. ಸಿ. ಯವರು ಪ್ರೆಸಿಡೆಂಟರಾಗಿಯೂ, ಶ್ರೀಗಳಾದ ಕೊಳ್ಳಿಮಾಡ ಕರುಂಬಯ್ಯ, ಯಂ. ಯಲ್. ಸಿ., ಐನಂಡ ಕಾರ್ಯಪ್ಪ ಯಂ. ಯಲ್. ಸಿ., ಸಿ. ಜಿ. ಮುದ್ದಪ್ಪಯ್ಯ ಯಂ. ಎಲ್. ಸಿ., ಪಿ. ಜಿ. ಐಯ್ಯಪ್ಪ ಬಿ. ಎ. ಬಿ ಯಲ್., ರಾ. ಬ. ಸಿ. ದೇವಯ್ಯ, ಕಂಜಿತಂಡ ಕುಶಾಲಪ್ಪ, ಸಿ. ಯಂ. ಪೂಣಚ್ಚ, ಕಾಳೇಂಗಡ ಗಣಪತಿ, ಮಳಂಗಂಡ ಕರುಂಬಯ್ಯ, ಎಸ್. ಎನ್. ರಾಮಶೆಟ್ಟಿ, ಮುಕ್ಕಾಟಿರ ದೇವಯ್ಯ, ಎಚ್. ಯಂ ಪುಟ್ಟಪ್ಪ, ಮಂಡೇಪಂಡ ಸೋಮಯ್ಯ ಮತ್ತು ಬೊಟ್ಟೋಳಂಡ ಮಾಚಯ್ಯ ಇವರುಗಳು ಡೈರೆಕ್ಟರುಗಳಾಗಿಯೂ ಆರಿಸಲ್ಪಟ್ಟಿರುವರು.

ವೀರಾಜಪೇಟೆ.

ಶಂಕರಾಚಾರ್ಯರ ಜನ್ಮ ಸ್ಥಳವಾದ ಕಾಲಡಿಯಲ್ಲಿ ಕಳೆದ ಹತ್ತು ತಿಂಗಳಿಂದಲೂ ಇದ್ದ ಶೃಂಗೇರಿ ಜಗದ್ಗುರುಗಳು ಕಲ್ಲಿಕೋಟೆಮಾರ್ಗವಾಗಿ ತಾ. 21ರಲ್ಲಿ ಇಲ್ಲಿಗೆ ಬಂದು ಇಲ್ಲಿಯ ರಾಮತೀರ್ಥ ಮಠದಲ್ಲಿ ಪೂಜೆ ಮುಗಿಸಿಕೊಂಡು ಸಾಯಂಕಾಲ ಬಾಗಮಂಡಲಕ್ಕೆ ಹೋದರು. ನಾಳೆ ದಿನ ಸಾಯಂಕಾಲ ಮಡಿಕೇರಿಗಾಗಿ (ಮೈಸೂರಿನ) ಕೃಷ್ಣರಾಜಪೇಟೆಗೆ ಕೊಡ್ಲಿಪೇಟೆ ಮಾರ್ಗವಾಗಿ ಹೋಗುವರೆಂದು ತಿಳಿಯುತ್ತೇವೆ.

ಇಲ್ಲಿ ಈ ವಾರ ಭತ್ತ ಗಾಡಿಗೆ ರೂ. 46 ಕ್ರಯವಿತ್ತಾಗಿ ತಿಳಿಯುತ್ತೇವೆ.

ಪೊನ್ನಂಪೇಟೆ.

ಪೊನ್ನಂಪೇಟೆಯಲ್ಲಿದ್ದ ಪೋಲೀಸ್ ಔಟ್ ಪೋಸ್ಟನ್ನು ಮಾರ್ಚ್ 1ರಿಂದ ತಿತಿಮತಿಗೆ ವರ್ಗಾಯಿಸಲಾಗುವದೆಂದು ತಿಳಿದು ಬರುತ್ತೆ.

ನಿಧನವಾರ್ತೆ.

ಓಲಗದಲ್ಲಿ ಪ್ರಖ್ಯಾತನಾಗಿದ್ದ ಕುಂಞ ಗುರುವ ಓಲಗದ ಐಯ್ಯಪ್ಪ ಕಳೆದ ವಾರ ದೇಹಾಧೀನನಾದನೆಂದು ತಿಳಿಸಲು ವ್ಯಸನಪಡುತ್ತೇವೆ.

ಹಿಂದೂ ದೇಶ.

ಮಹಾತ್ಮ ಗಾಂಧಿಯವರು, ಶಾಂತಿನಿಕೇತನಕ್ಕೆ ಹೊರಟವರು, ಕಲ್ಕತ್ತೆಯಲ್ಲಿ ಇಳಿದು, ಅಲ್ಲಿ ಪ್ರೆಸಿಡೆನ್ಸಿ ಜನರಲ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೊಳಗಾಗಿದ್ದ ರೆವ. ಸಿ. ಎಫ್. ಎಂಡ್ರ್ಯೂಸ್‌ರವರನ್ನು ಕಂಡು ಅವರ ಯೋಗಕ್ಷೇಮವನ್ನು ವಿಚಾರಿಸಿದರು. ದರ್ಶನಾಭಿಲಾಷಿಗಳಾದ ಜನರಿಗೆ ದರ್ಶನಕೊಟ್ಟು ಶಾಂತಿನಿಕೇತನಕ್ಕೆ ತೆರಳಿದರು.

ಮಹಾತ್ಮರು ಪತ್ನೀಸಹಿತರಾಗಿ, ಶಾಂತಿನಿಕೇತನಕ್ಕೆ ತೆರಳಿ ಅಲ್ಲಿ 3 ದಿನಗಳನ್ನು ಕವಿರವೀಂದ್ರರೊಡನೆ ಕಳೆಯುವರು. ಇದೇ ತಾರೀಕು 20ರಲ್ಲಿ ಡಾಕಾ ಜಿಲ್ಲೆಯ ಮಾಲಿಕಂಡದ ಗಾಂಧಿ ಸೇವಾ ಸಂಘದ ಗ್ರಾಮ ಕೈಗಾರಿಕೆಗಳ ಪ್ರದರ್ಶನವನ್ನು ತೆರೆಯುವರು. ಇದೇ ತಾರೀಕು 20-26ರ ವರೆಗೆ ಅದೇ ಸಂಘದ ಕಾನ್ಫರೆನ್ಸಿನಲ್ಲಿಯೂ ಹಾಜರಿರುವರು.

ರಾಮಗಢ ಕಾಂಗ್ರೆಸಿನ ಚುನಾವಣೆ ಮೌಲಾನಾ ಅಜಾದ್ ಮತ್ತು ಶ್ರೀ. ಎಮ್. ಎನ್. ರಾಯಿಗಳೊಳಗೆ ನಡೆದು, ಮೊದಲನೆಯವರಿಗೆ, ಒಟ್ಟಿಗೆ 1864 ಓಟುಗಳೂ, ಎರಡನೆಯವರಿಗೆ 183 ಓಟುಗಳೂ ದೊರಕಿ ಮೌಲಾನರೇ ವಿಜಯಿಗಳಾದರು. ಬಂಗಾಳ ಮತ್ತು ಡಿಲ್ಲಿ ಪ್ರಾಂತಗಳಲ್ಲಿ ಮಾತ್ರ ಈ ಚುನಾವಣೆ ನಡೆಯಲಿಲ್ಲ. ಮಿಕ್ಕ ಪ್ರಾಂತಗಳಲ್ಲಿ ನಡೆದ ಚುನಾವಣೆಯ ಫಲಿತಾಂಶವದು. ಕರ್ನಾಟಕದಲ್ಲಿ ಮೌಲಾನರಿಗೆ 92 ರಾಯಿಗಳಿಗೆ 19 ಓಟುಗಳು ಸಿಕ್ಕಿದ್ದುವು.

ಸಂಯುಕ್ತ ಪ್ರಾಂತ್ಯಗಳ ಈಗಿನ ಸರ್ಕಾರದವರು ಕಾಂಗ್ರೆಸ್ ಮಂತ್ರಿ ಮಂಡಲಿಯವರ ನೀತಿ ಕಾರ್ಯಕ್ರಮಗಳಿಗೆ ವಿರೋಧವಾಗಿ ವರ್ತಿಸುತ್ತಲಿದ್ದಾರೆ ಎಂದು ಆ ಪ್ರಾಂತ್ಯದ ಮಾಜಿ ಮಂತ್ರಿಶ್ರೇಷ್ಠರಾದ ಪಂಡಿತ್ ಜಿ. ವಲ್ಲಭ ಪಂತ್‌ರವರು ಸಂಯುಕ್ತ ಪ್ರಾಂತ್ಯಗಳ ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದವರ ಕೂಟದಲ್ಲಿ ಭಾಷಣ ಮಾಡಿ ತಿಳಿಸಿದರು. ಸರ್ಕಾರದವರ ಕಾರ್ಯಕಲಾಪಗಳನ್ನು ವಿಮರ್ಶಿಸುವುದಕ್ಕಾಗಿ ಆ ಕೂಟದವರು ಒಂದು ಉಪಸಮಿತಿಯನ್ನು ನೇಮಕ ಮಾಡಿದರು.

ಸಿಂಧ್ ಪ್ರಾಂತದ ಪ್ರಧಾನರಾದ ಖಾನ್ ಬಹದೂರ್ ಅಲ್ಲಾ ಬಕ್ಷ್‌ರವರು ತಮ್ಮ ಮಂತ್ರಿ ಮಂಡಲದ ರಾಜೀನಾಮೆಯನ್ನು ಒಪ್ಪಿಸಿದರು. ಆದರೆ ಆಡಳಿತವನ್ನು ನಿರ್ವಹಿಸಲು ಸರಿಯಾದ ವ್ಯವಸ್ಥೆ ಏರ್ಪಡುಗಳನ್ನು ಮಾಡುವ ವರೆಗೆ, ಆ ಕಾರ್ಯಭಾರವನ್ನು ಆ ಮಂತ್ರಿ ಮಂಡಲವೇ ನಿರ್ವಹಿಸಲೆಂದು ಗವರ್ನರು ಆಜ್ಞೆ ಮಾಡಿರುವರು. ಇತ್ತ ಈ ರಾಜೀನಾಮೆಯ ಪರಿಣಾಮವಾಗಿ, ಅಲ್ಲಿನ ಎಸೆಂಬ್ಲಿಯ ಮುಸ್ಲಿಂಲೀಗ್ ಮೆಂಬರರೂ, ಹಿಂದೂ ಸ್ವತಂತ್ರ ಪಂಗಡದ ಸದಸ್ಯರೂ ಸೇರಿ, ಮುಂದಿನ ಮಂತ್ರಿ ಮಂಡಲದ ನಿರ್ಮಾಣದ ರಚನೆಯ ಕುರಿತು ಯೋಚಿಸುತ್ತಿರುವರು.

FOR SALE.

Dressed rose wood logs by the road side. Sawn rose wood planks 3 feet in breadth and other dimensions available. Preference to whole sale bussiness.

For further Particulars apply to:-

P. M. Appiah,
Pattycod Estate,
Madapur P. O.

ಜಿಲ್ಲಾ ಬೋರ್ಡ್ ಮೀಟಿಂಗು.

(೫ ನೇ ಪುಟದಿಂದ ಸಾಗಿದ್ದು.)

ಡಬೇಕೆಂಬ ಶ್ರೀ. ಎಸ್. ಎನ್. ರಾಮಶೆಟ್ಟಿಯವರ ಸೂಚನೆಯನ್ನು ಓದಿ ಮುಂದರಿಸಿಡಲಾಯಿತು.

71. ರಾಮಸ್ವಾಮಿ ಕಣಿವೆ ಶಾಲೆಗೆ ಒಂದು ಹೆಚ್ಚಿಗೆ ಉಪಾಧ್ಯಾಯರನ್ನು ಕೊಡಬೇಕೆಂಬ ಶ್ರೀ ರಾಮಶೆಟ್ಟಿಯವರ ಠರಾವನ್ನು ಓದಿ ಮುಂದರಿಸಿಡಲಾಯಿತು.

72. ಶನಿವಾರಸಂತೆಯ ಹುಲುಕೋಡು ಗ್ರಾಮದಲ್ಲಿಯ ಒಂದು ಬಾವಿಯನ್ನು ರಿಪೇರಿ ಮಾಡಲು ರೂ. 35 ಕೊಡಬೇಕೆಂಬ ಉತ್ತರಕೊಡಗು ಸುಭೇದಾರರ ಪತ್ರ ಓದಿ ಇದನ್ನು ಗ್ರಾಮಾಭಿವೃದ್ಧಿ ಕಮಿಟಿಯ ಆಲೋಚನೆಗೆ ಬಿಡುವಂತೆ ತೀರ್ಮಾನವಾಯಿತು.

73. ಒಬ್ಬನೇ ಉಪಾಧ್ಯಾಯನಿರುವ ಪ್ರತಿ ಶಾಲೆಗಳನ್ನೆಲ್ಲಾ 5 ತರಗತಿಗಳ ಬದಲು 3 ತರಗತಿಗಳ ಶಾಲೆಗಳಾಗಿ ಮಾಡಬೇಕೆಂಬ ಡಿ. ಎಜ್ಯುಕೇಶನಲ್ ಆಫೀಸರರ ಸೂಚನೆಯನ್ನು ಓದಿ ವಿದ್ಯಾಸಮಿತಿಯವರ ವರದಿಯು ಮೇಲೆ ಚೀಫ್ ಕಮಿಷನರ ಹುಕುಂ ಬರುವ ವರೆಗೆ ಇದನ್ನು ಮುಂದರಿಸಿಡಲು ತೀರ್ಮಾನವಾಯಿತು.

74. ಪೆರೂರು ಗ್ರಾಮದಲ್ಲಿರುವ ತಂಡ್ರಾ ಹೊಳೆಗೆ ಪಾಲಹಾಕಲು 200 ಅಡಿ ಉದ್ದದ ಮರವನ್ನು ಕೊಡಬೇಕೆಂಬ ಶ್ರೀ. ಬಿ. ಪಿ. ಮಾಚಯ್ಯನವರ ಠರಾವನ್ನು ಓದಿ ಇದನ್ನು ಗ್ರಾಮಾಭಿವೃದ್ಧಿ ಕಮಿಟಿಯ ಆಲೋಚನೆಗೆ ಬಿಡಲಾಯಿತು.

75. ವಿಯ್ಯಂಗೇರಿ ಖಾಸಾಗಿ ಶಾಲೆಗೆ ರೂ 10ರ ಮಾಸಿಕ ಗ್ರಾಂಟು ಕೊಡಬೇಕೆಂಬ ಶ್ರೀ ಬಿ ಪಿ. ಮಾಚಯ್ಯನವರ ಠರಾವನ್ನು ಓದಿ ವಿದ್ಯಾಸಮಿತಿಯ ವರದಿಯ ಮೇಲೆ ಚೀಫ್ ಕಮಿಷನರ ಹುಕುಂ ಬರುವ ವರೆಗೆ ಇದನ್ನು ಮುಂದರಿಸಿಡಲಾಯಿತು.

76. ಸುಂಟಿಕೊಪ್ಪ ಸ್ಕೂಲ್ ಕಟ್ಟಡದ ನೆಲವನ್ನು ದುರಸ್ತು ಗೊಳಿಸಲು ರೂ. 150 ಕೊಡಬೇಕೆಂಬ ಶ್ರೀ ಎ. ಎಸ್. ಮಾಚಯ್ಯನವರ ಠರಾವು ಸೂಚಕರು ಹಾಜರಿಲ್ಲದ್ದರಿಂದ ಅಂಗೀಕರಿಸಲ್ಪಡಲಿಲ್ಲ.

77. ಕಡಗದಾಳು ಮತ್ತು ಕೆವಕಲ್ ಪಟ್ಟಿಯಲ್ಲಿರುವ ಹೊಳೆಗೆ ಪಾಲಹಾಕಲು ರೂ. 10 ಕೊಡಬೇಕೆಂಬ ಶ್ರೀ ಮಾಚಯ್ಯನವರ ಠರಾವು ಸೂಚಕರ ಗೈರ್‌ಹಾಜರಾದ ಕಾರಣ ಚರ್ಚಿಸಲ್ಪಡಲಿಲ್ಲ.

78 ಬೇಗೂರಿನಲ್ಲಿ ಒಂದು ಬಾವಿಯನ್ನು ತೋಡಲು ರೂ. 100 ಕೊಡಬೇಕೆಂಬ ಶ್ರೀ ಕೆ. ಕೆ. ಗಣಪತಿಯವರ ಠರಾವು ಹಣದ ಅಭಾವದಿಂದ ಹಿಂತೆಗೆಯಲ್ಪಟ್ಟಿತು

79. ಶಿರಂಗಾಲ ಗ್ರಾಮಪಂಚಾಯಿತಿಗೆ ಕೊಡುತ್ತಿರುವ ರೂ. 250 ವಂತಿಗೆಯನ್ನು ರೂ. 300ಕ್ಕೆ ಏರಿಸಬೇಕೆಂಬ ಸೂಚನೆಯು ಮಂಜೂರಾಗಲಿಲ್ಲ.

80. ಕಿರುಗೂರು ಶಾಲೆಗೆ ತಿಂಗಳಿಗೆ ರೂ. 40 ವಂತಿಗೆ ಕೊಡಬೇಕೆಂಬ ಅರ್ಜಿ ಓದಿ ವಿದ್ಯಾಸಮಿತಿಯವರ ವರದಿಯ ಮೇಲೆ ಚೀಫ್ ಕಮಿಷನರ ಹುಕುಂ ಬರುವ ವರೆಗೆ ಇದನ್ನು ಮುಂದರಿಸಿಡುವಂತೆ ತೀರ್ಮಾನವಾಯಿತು.

81. ಎಮ್ಮೆಮಾಡು ಮತ್ತು ಕೊಟ್ಟಮುಡಿ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕೆಂಬ ಮುಸ್ಲಿಂ ಲೀಗಿನ ಠರಾವನ್ನು ಓದಿ ಕೊಟ್ಟಮುಡಿಯಲ್ಲಿ ಗ್ರಾಂಟ್ ಶಾಲೆ ಇರುವದರಿಂದ ಅಲ್ಲಿ ಶಾಲೆ ತೆರೆಯುವ ಅಗತ್ಯವಿಲ್ಲವೆಂದೂ ಎಮ್ಮೆಮಾಡಿನಲ್ಲಿ ಶಾಲೆ ತೆರೆಯುವ ಬಗ್ಗೆ ವಿದ್ಯಾಸಮಿತಿಯ ವರದಿಯ ಮೇಲೆ ಚೀಫ್ ಕಮಿಷನರ ಹುಕುಂ ಬರುವ ವರೆಗೆ ಕಾಯಬೇಕೆಂದೂ ಕಮಿಷನರಿಗೆ ತಿಳಿಸಲು ತೀರ್ಮಾನವಾಯಿತು.

82. ಕಿರುಗೂರು ಶಾಲೆಗೆ ರೂ. 15ರ ಹೆಚ್ಚಿನ ಗ್ರಾಂಟು ಕೊಡಬೇಕೆಂಬ ಶ್ರೀ ಪೂಣಚ್ಚನವರ ಸೂಚನೆಯನ್ನು ಓದಿ ವಿದ್ಯಾಸಮಿತಿಯ ವರದಿಯ ಮೇಲೆ ಚೀಫ್ ಕಮಿಷನರ ಹುಕುಂ ಬರುವ ವರೆಗೆ ಮುಂದರಿಸಿಡಲು ತೀರ್ಮಾನವಾಯಿತು.

83. ಪಾಸಗೋಡು ರಸ್ತೆಗೆ 6ನೇ ಮೈಲು ಕಲ್ಲಿನಲ್ಲಿರುವ ಸೇತುವೆಯ ರಿಪೇರಿಗೆ ರೂ. 50 ಕೊಡಬೇಕೆಂಬ ಶ್ರೀ ಸಿ. ಯಂ. ಪೂಣಾಚ್ಚನವರ ಠರಾವು ಸೂಚಕರು ಹಾಜರಿಲ್ಲದ್ದರಿಂದ ಚರ್ಚಿಸಲ್ಪಡಲಿಲ್ಲ

84 ಮದಿಕೇರಿ ನಾಡಿಗೆ ಸುಳ್ಯೋಡ್ಲು ಗ್ರಾಮದಲ್ಲಿರುವ ಸ್ವಂತ ಶಾಲೆಗೆ ರೂ. 10ರ ಗ್ರಾಂಟು ಕೊಡಬೇಕೆಂಬ ಶ್ರೀ ಪೂಣಚ್ಚನವರ ಠರಾವನ್ನು ಓದಿ ವಿದ್ಯಾಸಮಿತಿಯ ರಿಪೋರ್ಟಿನ ಮೇಲೆ ಚೀಫ್ ಕಮಿಷನರ ಹುಕುಮನ್ನು ಕಾಯಲು ತೀರ್ಮಾನವಾಯಿತು.

85. ಬೋಯಿಕೇರಿಯಿಂದ ಹಾಲೇರಿಗಾಗಿ ಮುಕ್ಕೊಡ್ಲೂರಿಗೆ ಹೋಗುವ ರಸ್ತೆಯನ್ನು ಬೋರ್ಡು ತನ್ನ ಅಧೀನಕ್ಕೆ ತೆಗೆದುಕೊಳ್ಳಬೇಕು ಎಂಬ ಪೂಣಚ್ಚನವರ ಠರಾವನ್ನು ಸೂಚಕರು ಹಾಜರಿಲ್ಲದ್ದರಿಂದ ತಿರಸ್ಕರಿಸಲಾಯಿತು.

86. ಫೈಯರ್ ಎಲಿಮೆಂಟರಿ ಶಾಲೆಗಳ ಲೆಕ್ಕಗಳನ್ನು ಪ್ರತಿ ವರ್ಷ ಆಡಿಟ್ ಮಾಡಿಸಬೇಕೆಂಬ ಶ್ರೀ ಪೂಣಚ್ಚನವರ ಠರಾವು ಸೂಚಕರು ಗೈರ್‌ಹಾಜರಾದ ಕಾರಣ ಚರ್ಚಿಸಲ್ಪಡಲಿಲ್ಲ.

87. ಹೊದ್ದೂರು ಶಾಲೆಯ ಆವರಣವನ್ನು ದುರಸ್ತಿ ಮಾಡಲು ಮತ್ತು ಮುಖ್ಯ ಕಟ್ಟಡದ ಬಾಗಿಲುಗಳನ್ನು ಸರಿಪಡಿಸಲು ರೂ. 40 ಮಂಜೂರು ಮಾಡಬೇಕು ಎಂಬ ಶ್ರೀ ಪೂಣಚ್ಚನವರ ಠರಾವಿನ ಬಗ್ಗೆ ಇತರ ಚಿಕ್ಕ ರಿಪೇರಿಗಳಿಗಾಗಿ ಬಡ್ಜೆಟ್ಟಿನಲ್ಲಿಟ್ಟಿರುವ ಹಣದಿಂದ ಕೊಡಬಹುದೆಂದು ಠರಾವನ್ನು ಚರ್ಚಿಸಲಿಲ್ಲ.

88. 1940–41ರ ಪಿ. ಡಬ್ಲ್ಯು. ಡಿ. ಅಂದಾಜು ಬಡ್ಜೆಟ್ಟಿನಲ್ಲಿ ಮೂರ್ನಾಡು ನಾಪೋಕ್ಲು ರಸ್ತೆ ರಿಪೇರಿಗಾಗಿ ಇಟ್ಟಿರುವ ರೂ. 1000ವನ್ನು ರೂ. 5000ಕ್ಕೆ ಏರಿಸಬೇಕೆಂಬ ಶ್ರೀ ಪೂಣಚ್ಚನವರ ಠರಾವು ಅವರು ಹಾಜರಿಲ್ಲದ್ದರಿಂದ ಅಂಗೀಕೃತವಾಗಲಿಲ್ಲ.

89. ಚೆಟ್ಟಳ್ಳಿಯಲ್ಲಿ ಒಂದು ಬಾವಿ ತೋಡಲು ರೂ. 100 ಕೊಡಬೇಕು ಎಂಬ ಶ್ರೀ ಪೂಣಚ್ಚನವರ ಠರಾವನ್ನು ಗ್ರಾಮಾಭಿವೃದ್ಧಿ ಕಮಿಟಿಯ ಆಲೋಚನೆಗೆ ಬಿಡುವಂತೆ ತೀರ್ಮಾನಿಸಲಾಯಿತು.

90. ಚೆಟ್ಟಳ್ಳಿ-ಕಾಂಡನಕೊಲ್ಲಿ ರಸ್ತೆಯು ವಿಶಾಲ ಮಾಡಲ್ಪಟ್ಟು ಅಲ್ಲಿರುವ ಕಲ್ಲುಗಳು ಒಡೆಯಲ್ಪಡಬೇಕೆಂಬ, ಚಕ್ಕನಳ್ಳಿ ರಸ್ತೆಯಲ್ಲಿಯ ಕಲ್ಲುಗಳನ್ನು ಒಡೆಯಬೇಕೆಂಬ ಮತ್ತು ಪೈಸಾರಿಗೆ ಹೋಗುವ ಕೂಡಿ ರಸ್ತೆಯು ವಿಶಾಲ ಮಾಡಲ್ಪಡಬೇಕು ಎಂಬ ಶ್ರೀ ಎಸ್. ಪೂವಪ್ಪನವರ ಠರಾವುಗಳನ್ನು ಓದಿ ಪಾರ್ಟಿತ ಇಷ್ಟರಲ್ಲಿ ಸಮಯದಲ್ಲಿ ಇವುಗಳನ್ನು ಕೈಕೊಳ್ಳಬಹುದಾದ್ದರಿಂದ ಅವಕ್ಕೆ ಪ್ರತ್ಯೇಕ ಗ್ರಾಂಟು ಅವಶ್ಯವಿಲ್ಲವೆಂದು ತೀರ್ಮಾನಿಸಲಾಯಿತು.

91. ತಿರಗಂದೂರು ಶಾಲೆಗೆ ಒಬ್ಬ ಹೆಚ್ಚಿನ ಉಪಾಧ್ಯಾಯನನ್ನು ಕೊಡಬೇಕೆಂಬ ಶ್ರೀ ಮಾದಪ್ಪನವರ ಠರಾವನ್ನು ಓದಿ ವಿದ್ಯಾ ಕಮಿಟಿಯವರ ವರದಿಯ ಮೇಲೆ ಚೀಫ್ ಕಮಿಷನರ ಹುಕುಂ ಬಂದ ಮೇಲೆ ಆಲೋಚಿಸಲು ತೀರ್ಮಾನವಾಯಿತು

92. ಶನಿವಾರಸಂತೆ ಮತ್ತು ಬಾಣಾವರ ರಸ್ತೆಯನ್ನು ಪಿ ಡಬ್ಲು. ಡಿ. ಯವರ ಅಧೀನಕ್ಕೆ ತೆಗೆದು ಕೊಳ್ಳಬೇಕು ಎಂಬ ಶ್ರೀ ಹೆಚ್. ಯಂ. ಪುಟ್ಟಣ್ಣನವರ ಠರಾವು ವಾಪಸು ತೆಗೆದುಕೊಳ್ಳಲ್ಪಟ್ಟಿತು

93. ಚಿಕ್ಕ ಕೊಂಡನಹಳ್ಳಿಯ ಖಾಸಗಿ ಶಾಲೆಗೆ ಗ್ರಾಂಟು ಕೊಡಬೇಕೆಂಬ, ಬೇಲೂರು ಶಾಲೆಯನ್ನು ಬೋರ್ಡಿನ ಅಧೀನಕ್ಕೆ ತೆಗೆದುಕೊಳ್ಳಬೇಕೆಂಬ ಮತ್ತು ಅಂಕನಳ್ಳಿ ಶಾಲೆಗೆ ಕೊಡುತ್ತಿರುವ ಗ್ರಾಂಟನ್ನು ರೂ. 20ಕ್ಕೆ ಏರಿಸಬೇಕು ಎಂಬ ಶ್ರೀ ಪುಟ್ಟಣ್ಣನವರ ಠರಾವುಗಳನ್ನು ಓದಿ ವಿದ್ಯಾಸಮಿತಿಯ ವರದಿಯ ಮೇಲೆ ಚೀಫ್ ಕಮಿಷನರ ಹುಕುಂ ಬಂದ ಮೇಲೆ ಅದನ್ನು ಆಲೋಚಿಸಲು ತೀರ್ಮಾನವಾಯಿತು.

94. ಮದ್ರಾಸಿನ ಶ್ರೀ ರಾಮಕೃಷ್ಣಾಶ್ರಮದ ವಿದ್ಯಾರ್ಥಿ ಭವನಕ್ಕೆ ರೂ. 200 ವಂತಿಗೆ ಕೊಡಬೇಕೆಂಬ ಶ್ರೀ ಕೆ. ಕೆ. ಗಣಪತಿಯವರ ಠರಾವು (ಮೊದಲೇ ತೀರ್ಮಾನವಾದ ಕಾರಣ) ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟಿತು.

95. ಹಾತೂರು ಶಾಲೆಗೆ ಒಬ್ಬ ವಾಲಂಟೀಯರ್ ಉಪಾಧ್ಯಾಯರನ್ನು ಕೊಡಬೇಕೆಂಬ ಶ್ರೀ ಎ ಎಸ್. ಪೊನ್ನಪ್ಪನವರ ಠರಾವನ್ನು ವಿದ್ಯಾ ಸಮಿತಿಯ ವರದಿಯ ಮೇಲೆ ಚೀಫ್ ಕಮಿಷನರ ಹುಕುಂ ಬಂದ ನಂತರ ಆಲೋಚಿಸಲು ತೀರ್ಮಾನವಾಯಿತು.

96. ಸೋಮವಾರಪೇಟೆ ರಾತ್ರಿ ಸ್ಕೂಲಿಗೆ ರೂ. 5ರ ಗ್ರಾಂಟು ಕೊಡಬೇಕೆಂಬ ಶ್ರೀ ರಾಮಶೆಟ್ಟಿಯವರ ಠರಾವನ್ನು ಮುಂದರಿಸಿಡಲಾಯಿತು.

ಪಿ. ಐ. ಬೆಳ್ಯಪ್ಪ,
ಪ್ರೆಸಿಡೆಂಟ್.

ಎಚ್ಚರಿಕೆ ನೋಟೀಸು.

ನಾಪೋಕ್ಲುನಾಡು ದೊಡ್ಡ ಪುಲಿಕೋಟು ಗ್ರಾಮದ ಪಟ್ಟೆಟ್ಟೀರ ಅಚ್ಚಪ್ಪನವರ 2ನೇ ಮಗ ಬೆಳ್ಯಪ್ಪನು ಈ ಮೂಲಕ ಸರ್ವರಿಗೂ ತಿಳಿಸುವದೇನೆಂದರೆ–

ನಾನು, ನನ್ನ ಅಣ್ಣ ಸೋಮಣ್ಣನು, ನಮ್ಮ ತಂದೆ ಅಚ್ಚಪ್ಪನವರ ಪ್ರಥಮ ಪತ್ನಿಯ ಮಕ್ಕಳು. ನಮ್ಮ ತಾಯಿಯು ಅವಸಾನಹೊಂದಿದ ನಂತರ ತಂದೆಯವರಿಗೆ ದ್ವಿತೀಯ ಭಾರ್ಯೆಯಾಯಿತು. ನಾನು ಮತ್ತು ನನ್ನ ಅಣ್ಣನು ತಂದೆಯವರ ಸಹಾಯದಿಂದ ಮಡಿಕೇರಿ ಹೈಸ್ಕೂಲಿನಲ್ಲಿ ಫಿಪ್ತ್‌ಫಾರಂ ವರೆಗೆ ಓದಿ ತಂದೆಯವರ ದರಿದ್ರಾವಸ್ಥೆಯಿಂದ ವಿದ್ಯೆ ಮುಂದರಿಸದೆ ತಂದೆಯವರ ಬಳಿ ಇದ್ದು ಸರಿಬಾರದೆ ಜೀವನಕ್ಕಾಗಿ ಅಣ್ಣ ಸೋಮಣ್ಣನು ಪರದೇಶದ ದೂರ ಕಡೆಯೋ ಹೋಗಿ ವಸವ ಮಾಡಲಾಯಿತು. ನಾನು ಚಿಕ್ಕನಿದ್ದರಿಂದ ನನ್ನ ಸ್ತ್ರೀಯ ಅಜ್ಜನವರಾದ ಪರದೇಶ ಅಪ್ಪಚ್ಚನವರಲ್ಲಿ ಜೀವನ ನಡಿಸುತ್ತಿದ್ದೇನೆ.

ನಮ್ಮ ತಂದೆಯ ತಂದೆಯಾದ ಅಜ್ಜ ಪಟ್ಟೆಟ್ಟೀರ ಚಂಗಪ್ಪನವರು ... ಐಕ್ಯರಾದನಂತರ ... ಮತ್ತು ಮೂರು ಸ್ಥಳದಲ್ಲಿ ಭೂಮಿ ... ಸಿರುತ್ತಾರೆ. ... ನಮ್ಮ ... ಸ್ಥಳದ ಯೋಗ್ಯ ಭೂಮಿಗಳನ್ನು ತಂದೆ ಅಚ್ಚಪ್ಪನವರು ಈ ಮೊದಲೇ ಕ್ರಯಸಾಧನ ಮಾಡಿರುವ ಸಂಗತಿ ಪ್ರಾಯಸ್ಥನಾದ ನಾನು ಈಚೆಗೆ ತಿಳಿದಿದ್ದೇನೆ. ನಾನು 16 ವರ್ಷ ಪ್ರಾಯದ ಮೈನರ್. ನಾನು ನಾವು ಅಜ್ಜನ ... ಡ್ಲೆ ಈ ಭೂಮಿಗಳಿಗೆ ನನ್ನ ಹಕ್ಕಿರುವದಾಗಿ ಇದ್ದೇ ಇದೆ. ಕೊಂಡುಕೊಂಡವರು ಹೆಚ್ಚು ಹಣ ಖರ್ಚು ಮಾಡದೆ ಕಟಿಸ್ತರಾಗಿರಬೇಕಾಗಿ ತಿಳಿಸುವದಲ್ಲದೆ ಅಜ್ಜ ಸಂಪಾದಿಸಿದ ಇನ್ನೊಂದು ಪಟ್ಟೇದಾರ ಭೂಮಿಯನ್ನು ಸಹ ಪರಾಧೀನಮಾಡಲು ತಂದೆ ಅಚ್ಚಪ್ಪನವರು ಕಂದಾಯಕ್ಕಾಗಿ ಜಪ್ತಿ ಮಾಡಿಸಿ ಈ ಮಧ್ಯೆ ಹರಾಜಿಗೆ ಇಟ್ಟಿದ್ದರು. ನಾನು ಇದನ್ನು ತಿಳಿದು ಸರಕಾರಕ್ಕೆ ಅರ್ಜಿ ಬರೆದು ರದ್ದಾಗಿರುತ್ತೆ.

ಅಂಥಾ ಭೂಮಿಯನ್ನು ದುರಾಲೋಚನೆಯಿಂದ ಕರಪಂಡ ಗಣಪತಿಯವರಿಗೋ, ಕೋಅಪರೇಟಿವ್ ಫಂಡಿಗೋ, ನಾಪೋಕ್ಲು ಮಮ್ಮದೆ ಸಾವುಕಾರರಿಗೊ ಇಲ್ಲವೇ ಬೇರೆಯಾರಿಗೂ ಕ್ರಯಸಾಧನ, ಬೋಗ್ಯ, ಗಿರುವಿ ವಗೈರೆ ಕೊಡುತ್ತಾರೆಂಬ ವರ್ತಮಾನ ನಿರಾಧಾರಿಯಾಗಿ ಮೈನರಾಗಿರುವ ನಾನು ತಿಳಿದದ್ದರಿಂದ ನನ್ನ ಹಕ್ಕಾದ ಈ ಪಟ್ಟೇದಾರ ಭೂಮಿಯನ್ನು ಯಾರೊಬ್ಬರು ಯಾವ ವಿಧದಿಂದಾಗಲಿ ತೆಗೆದುಕೊಳ್ಳಕೂಡದಾಗಿ ಈ ಮೂಲಕ ತಿಳಿಸಿರುತ್ತೇನೆ. ಇದಕ್ಕೆ ವಿರೋಧವಾಗಿ ನಡೆದಲ್ಲಿ ಸದರಿ ನಷ್ಟ ಅವರಿಗೆ ಊರ್ಜಿತವಾಗಲಾರದು. ಮತ್ತು ಇದರಿಂದ ಆಗುವ ಎಲ್ಲಾ ನಷ್ಟಕ್ಕೂ ಅವರೇ ಜವಾಬ್ದಾರರಾಗಿರಬೇಕು.

15–2–40.

ಮೈನರ್,
ಪಿ. ಎ. ಬೆಳ್ಯಪ್ಪ.

ಬಾತ್ಮಿ.

ಸೆಂಟ್ರಲ್ ಹೈಸ್ಕೂಲ್ ಬೋರ್ಡಿಂಗ್ ಮನೆ ಅಧಿಕಾರಿಗಳಲ್ಲಿ ವಿನಂತಿ.

'ಮಿಲ್ಲಿನಿಂದ ಕುಟ್ಟಿದ ಅಕ್ಕಿ ಮನುಷ್ಯನ ಆರೋಗ್ಯಕ್ಕೆ ಹಿತಕಾರಿಯಲ್ಲ; ಅಕ್ಕಿಯಲ್ಲಿ ಸತ್ವ ಪ್ರಯೋಜನಕ್ಕೆ ಸಲ್ಲುವುದಿಲ್ಲ; ಆದ್ದರಿಂದ ಮಿಲ್ ಅಕ್ಕಿಗಿಂತ ಕುಟ್ಟಿದಅಕ್ಕಿ (Hand pounded rice) ಮನುಷ್ಯನ ಆರೋಗ್ಯಕ್ಕೆ ಹಿತಕರ.' ಇದೀಗ ಮಹಾತ್ಮರ ಅಭಿಪ್ರಾಯ. ಈ ಅಭಿಪ್ರಾಯವು ಇಂದು ಜನಸಾಮಾನ್ಯರ ಬುದ್ಧಿಗೂ ಸಿಲುಕಿದ್ದೇ ಆಗಿದೆ. ಆದರೂ ಕೊಡಗಿನಂಥಾ ಹಳ್ಳಿಗಳ ನಡುವಿನಲ್ಲಿ ಮಿಲ್‌ಗಳು ಸ್ಥಾಪಿತವಾಗಿ, ಮಿಲ್ ಅಕ್ಕಿಯು ದೇಶದಲ್ಲೆಲ್ಲಾ ಪ್ರಚಾರವಾಗಿ ಮನುಷ್ಯನ ಆರೋಗ್ಯಕ್ಕೆ ಧಕ್ಕೆ ಬರುತ್ತಿರುವುದೂ, ಸರಕಾರದ ಸಿದ್ಧಾಂತವನ್ನು ತಿಳಿದೂ ಮಿಲ್ ಅಕ್ಕಿಗೆ ಪ್ರೋತ್ಸಾಹ ಕೊಡುತ್ತಿರುವುದೂ ವಿಷಾದದ ಸಂಗತಿ. ಇಷ್ಟೇ ಅಲ್ಲ; ಅಕ್ಕಿ ಕುಟ್ಟುವ ಕೆಲಸದಿಂದ ಜೀವನ ಹೊರೆಯುತ್ತಿದ್ದ ಬಡ ಕೂಲಿಯವರ ಅನ್ನಕ್ಕೆ ಕಲ್ಲು ಹಾಕಿಸಿದೆ ಈ ಮಿಲ್ ಅಕ್ಕಿ. ಬಡಜನರ ಈ ಕರುಣದ ಕೂಗು ಅಂತಃಕರಣವನ್ನು ಕೆರಳಿಸುತ್ತಿದ್ದರೂ ಕೂಡ ಅದರ ಪರಿವೆಯಿಲ್ಲದೆ ಮಿಲ್ ಅಕ್ಕಿಗೆ ಪ್ರೋತ್ಸಾಹ ಕೊಡುತ್ತಿರುವರು. ಇನ್ನಷ್ಟು ವಿಷಾದಕರ ಸಂಗತಿ. ಇಂಥಾ ಕರುಣಾಜನಕ ಚಿತ್ರಗಳು ಇರುವನಂತೆ ಮಿಲ್ ಅಕ್ಕಿಯನ್ನು ಬಹಿಷ್ಕರಿಸಿ, ದೇಶಿಯ ಬಡ ಜನರಿಗೆ ಕೆಲಸವನ್ನು ಒದಗಿಸಿಕೊಡುವುದೂ, ತಮ್ಮ ದಿನಚರಿ ಉಪಯೋಗದಲ್ಲಿ ಕುಟ್ಟಿದ ಅಕ್ಕಿಯನ್ನು ಬಳಕೆಗೆ ತರುವುದೂ ಇಂದು ನಾಗರೀಕರೆಂದೆನಿಸಿಕೊಳ್ಳುವ, ದೇಶಹಿತ ಚಿಂತಕರೆಂದೆನಿಸಿಕೊಳ್ಳುವವರ ಆದ್ಯ ಕರ್ತವ್ಯವಿದೆ.

ಆದರೆ ನಾಗರೀಕರೆನಿಸಿಕೊಂಡು, ಮುಂದಿನ ಪೀಳಿಗೆಗೆ ಮಾರ್ಗದರ್ಶಿಗಳೆಂದು ಎನಿಸಿಕೊಳ್ಳುವವರು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿನಿಲಯದ ಎಳೆ ಮಕ್ಕಳಿಗೆ ಈ ಮಿಲ್ ಅಕ್ಕಿಯ ಅನ್ನವನ್ನು ಇಕ್ಕುತ್ತಿರುವುದು ಶೋಚನೀಯ ಸಂಗತಿ. ಶರೀರ ಬಲಿತ ಪ್ರಾಯಸ್ಥರ ಆರೋಗ್ಯವನ್ನೇ ಹಾಳು ಮಾಡುವ ಈ ಮಿಲ್ ಅಕ್ಕಿಯ ಉಪಯೋಗದಿಂದ ಬೋರ್ಡಿಂಗ್ ಮನೆಯಲ್ಲಿರುವ ಹಸುಳೆಗಳ ಆರೋಗ್ಯವು ಹೇಗೆ ಉಳಿಯಬೇಕು? ಕೆಲವು ದಿನಗಳ ಹಿಂದೆ ಈ ವಿದ್ಯಾರ್ಥಿನಿಲಯದಲ್ಲಿ ಕುಟ್ಟಿದ ಅಕ್ಕಿಯನ್ನೇ ಉಪಯೋಗಿಸುತ್ತಿದ್ದರಂತೆ. ಆದರೆ ಇತ್ತಲಾಗಿ ಮಿಲ್ ಅಕ್ಕಿಯನ್ನು ಉಪಯೋಗಿಸುತ್ತಿರುವರಂತೆ. ಇದು ಮಕ್ಕಳ ಮೇಲಿನ ದ್ವೇಷವೋ, ಯಾ ಅಧಿಕಾರಿಗಳ ಕರ್ತವ್ಯಶೂನ್ಯತೆಯೋ ಅಲ್ಲ, ಲಾಭದ ದೃಷ್ಟಿಯೋ ತಿಳಿಯದು. ಹತ್ತಿರದಲ್ಲಿ ಶ್ರಮವಿಲ್ಲದೆ ಮಿಲ್ ಅಕ್ಕಿ ಕಮ್ಮಿ ದರದಲ್ಲಿ ದೊರೆಯುವದೆಂದು ಅಧಿಕಾರಿಗಳು ಯೋಚಿಸಿ ಕಾರ್ಯ ಕೊಂಡಿದ್ದರೆ ಕೇವಲ ಅಲ್ಪ ಲಾಭಕ್ಕಾಗಿ ಮುಂದಿನ ಜನಾಂಗದ ಆರೋಗ್ಯಕ್ಕೇ ಧಕ್ಕೆ ತರುವ ವಿಘಾತುಕ ಕಾರ್ಯವನ್ನು ಅವರು ಕೈಕೊಂಡಿರುವರೆಂದು ಹೇಳಬೇಕಾಗುವದು. ಕೊಡಗು ನಾಡಿನಲ್ಲಿ ಕುಟ್ಟಿದ ಅಕ್ಕಿ ವಿಪರೀತ ಸಿಗುತ್ತದೆ. ಆ ಪಕ್ಷಕ್ಕೆ ಸ್ವಲ್ಪ ಶ್ರಮ ವಹಿಸಬೇಕು ಅಷ್ಟೇ. ಆರೋಗ್ಯವರ್ಧಕವಾದ ಕುಟ್ಟಿದ ಅಕ್ಕಿಗೆ ಬೆಲೆಯಿಲ್ಲವಾಗಿ ಕೇವಲ ಲಾಭದ ದೃಷ್ಟಿಯಿಂದ ಮಿಲ್ ಅಕ್ಕಿಯನ್ನು ಪ್ರೋತ್ಸಾಹಿಸಿ ಮಿಲ್ ಒಡೆಯರಾದ ಧನಿಕರಿಗೆ ಇನ್ನಷ್ಟು ಧನ ಸಂಚಯ ಮಾಡಿ ಕೊಟ್ಟು ಬಡ ಜನರ ಜೀವನವನ್ನೇ ಹಾಳು ಮಾಡುತ್ತಿರುವ ಕಾರ್ಯಕ್ಕೆ ತಿಲಾಂಜಲಿಯಿತ್ತು ದೇಶದ ಏಳ್ಗೆ ಹಾಗೂ ಮುಂದಿನ ಜನತೆಯ ಅಭಿವೃದ್ಧಿಯನ್ನು ಮಾಡಬೇಕಿದೆ. ಪ್ರತಿ ಶುಕ್ರವಾರ ನಾಡು ಅಕ್ಕಿ ಮಡಿಕೇರಿಗೆ ಬೇಕಾದಷ್ಟು ಬರುತ್ತದೆ. ಅಲ್ಲದೆ ಮಡಿಕೇರಿ ಯೊಳಕ್ಕೆ ಖಾಸಗಿನ ಸಂಘದವರು ಕುಟ್ಟಿದ ಅಕ್ಕಿಯ ಮಾರಾಟವನ್ನು ಕೈಕೊಂಡಿರುವರೆಂಬ ವರ್ತಮಾನವೂ ಇದೆ. ಬೇಕಾದರೂ ಬೋರ್ಡಿಂಗ್ ಮನೆ ಅಧಿಕಾರಿಗಳು ಅಲ್ಲಿಂದಲಾದರೂ ಅಕ್ಕಿಯನ್ನು ಶ್ರಮವಿಲ್ಲದೆ ಪಡಕೊಳ್ಳಬಹುದು.

ಹಾಗೂ ಇನ್ನು ಮುಂದಾದರೂ ವಿದ್ಯಾರ್ಥಿ ನಿಲಯದ ಭವನದ ಅಧಿಕಾರಿಗಳು ಈ ಬಗೆಗೆ ಗಮನವಿಟ್ಟು, ಎಳೆಯ ಮಕ್ಕಳ ಆರೋಗ್ಯದ ದೃಷ್ಟಿಯಿಂದಲೂ, ಬಡ ಕೂಲಿಗಾರರ ಹಿತ ದೃಷ್ಟಿಯಿಂದಲೂ ಮಿಲ್ ಅಕ್ಕಿಯನ್ನು ಬಹಿಷ್ಕರಿಸಿ ಕುಟ್ಟಿದ ಅಕ್ಕಿಯನ್ನು ಉಪಯೋಗಿಸಬೇಕೆಂದು ಸೂಚಿಸುತ್ತೇನೆ.

'ಮಕ್ಕಳ ತಂದೆ.'

ವೀರಾಜಪೇಟೆ ಹೈಸ್ಕೂಲು.

ಹೈಸ್ಕೂಲುಗಳಲ್ಲಿ ಸ್ಕೂಲ್ ಫೀಜನ್ನು ಹೆಚ್ಚಿಸಬಾರದೆಂದೂ, ಸ್ಕಾಲರ್‌ಶಿಪ್ ಮತ್ತು ಫ್ರೀಶಿಪ್‌ಗಳನ್ನು ಹೆಚ್ಚಿಸಿ ೩ನೇ ಫಾರಂ ವರೆಗೆ ಹುಡುಗಿಯರಿಗೆ ಸ್ಕೂಲ್ ಫೀಜು ಮಾಫಿ ಮಾಡಿ ಅಲ್ಲಿಂದ 6 ನೇ ಫಾರಂ ವರೆಗೆ ಅರ್ಧ ಮಾಫಿ ಮಾಡಿ ಹುಡುಗ ಹುಡುಗಿಯರ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಡಬೇಕೆಂತಲೂ, ಎಷ್ಟು ವಿಧವಾಗಿ ಬಡ ತಂದೆ ತಾಯಿಗಳು ಘನ ಸರ್ಕಾರದವರಲ್ಲಿ ಮೊರೆ ಇಟ್ಟರೂ ಲಕ್ಷ್ಯವಿಲ್ಲದೆ ಫೀಜನ್ನು ಹೆಚ್ಚಿಸಿದ್ದಲ್ಲದೆ ಹುಡುಗಿಯರಿಗೆ ಮುಂಚೆ ಇದ್ದ ರಿಯಾಯಿತಿಯನ್ನು ಸಹ ತೆಗೆದು ಹಾಕಿದ್ದಕ್ಕೆ ಎಷ್ಟು ವಿಷಾದಿಸಿದರೂ ಸಾಲದು. ಇದು ನೋಡಿದರೆ ಕೊಡಗಿನಲ್ಲಿ ವಿದ್ಯಾಭ್ಯಾಸವು ಇನ್ನು ಮೂರು ನಾಲ್ಕು ವರ್ಷದಲ್ಲಿ ಯಾವ ದರ್ಜೆಗೆ ಇಳಿಯುತ್ತದೆಂಬುದನ್ನು ಹೇಳಲಿಕ್ಕಾಗುವದಿಲ್ಲ. 'ಆಗೆ ಕಂಡಕ್ಕಾಗಿಯು ಬೋಳಿಯ ಗುಣ' ಎಂಬಂತೆ ಇದರ ಪರಿಣಾಮವು ಈಗಾಗಲೇ ಅಲ್ಲಲ್ಲಿ ಕಾಣತೊಡಗಿದೆ.

ಇದರ ಹೊರೆ ಮತ್ತು ಬೇರೆ ಬೇರೆ ದಾದ ಅನೇಕ ಪುಸ್ತಕಗಳಿಗೆ ಖರ್ಚು ಮಾಡಬೇಕಾದ ಹೊರೆಗಳನ್ನೂ ಹೊರಲಾರದೆ ನರಳುತ್ತಿರುವ ಬಡ ರೈತರಿಗೆ ಅನ್ಯಾಯ ತೆರಿಗೆಯನ್ನು ಶಾಲಾಧಿಕಾರಿಗಳು ಹೇಗೆ ಹೊರಿಸುತ್ತಿದ್ದಾರೆಂಬುದನ್ನು ಸ್ವಲ್ಪ ನೋಡುವ.

(1) ಆಟದ ತೆರಿಗೆಯಂತೆ. ಇದು ಏನು? ಮುಂಚಿನ ಕಾಲದಲ್ಲಿ ಯಾವರೋ ಒಬ್ಬ ವಿದ್ಯಾರ್ಥಿಯಿಂದ ವರ್ಷಕ್ಕೆ ಮೂರು ನಾಲ್ಕಾಣೆ ವಸೂಲು ಮಾಡಿದರೆ ಆಯಿತು. ಅದರಲ್ಲಿ ಆಟಕ್ಕೆ ಬೇಕಾದ ಸಾಹಿತ್ಯ ಮತ್ತು ಮೂರು ನಾಲ್ಕು ಪರೀಕ್ಷೆಗೆ ಬರುವ ಕಾಗದ ಸಹ ಕೊಡುತ್ತಿದ್ದರು. ಈಗಲಾದರೋ ಎಷ್ಟೋ ತೆರಿಗೆಯನ್ನು ವಸೂಲು ಮಾಡಿದರೂ ಪರೀಕ್ಷೆಗೆ ಕಾಗದ ಅವರವರೇ ಕೊಂಡುಕೊಳ್ಳಬೇಕು. ಅದೂ ಸಾಲದೆಂದು ಪ್ರಶ್ನಾ ಪತ್ರ ಅಚ್ಚು ಹಾಕಿಸಲಿಕ್ಕೆ ಪ್ರತಿ ಮಕ್ಕಳಿಂದ ಎರಡರಿಂದ ನಾಲ್ಕು ಆಣೆ ವರೆಗೆ ಪ್ರತಿ ಪರೀಕ್ಷೆಗೂ ವಸೂಲು ಮಾಡುತ್ತಾರೆ. ಇದು ಯಾವ ನ್ಯಾಯ? ಸರಕಾರದವರು ಯಾಕೆ ಅಚ್ಚು ಹಾಕಿ ಕೊಡಬಾರದು ಮತ್ತು ಬಡ ವಿದ್ಯಾರ್ಥಿಗಳು ಹೆಚ್ಚಾದ ಸ್ಕೂಲ್ ಫೀಸ್ ತೆರುವಲ್ಲಿ ಆಟದ ಸಲಕರಣೆಗಳನ್ನು ಯಾಕೆ ಒದಗಿಸಿ ಕೊಡಬಾರದು?

(2) ಮಕ್ಕಳನ್ನು ಗೊತ್ತು ಹಚ್ಚಲಿಕ್ಕಾಗಿ ಪ್ರತಿಯೊಬ್ಬರಿಗೂ ಒಂದೊಂದು ಬ್ಯಾಡ್ಜ್ ಇಡಬೇಕಂತೆ. ಅದಕ್ಕೆ ಮೂರಾಣೆ ತೆರಿಗೆಯಂತೆ. ಇದು ಇಡದಿದ್ದರೆ ಹೈಸ್ಕೂಲು ವಿದ್ಯಾರ್ಥಿಯೆಂದು ತಿಳಿಯುವುದಿಲ್ಲವೋ? ಮಕ್ಕಳನ್ನು ಗೊತ್ತು ಹಚ್ಚಲು ಬಾರದಿದ್ದರೆ ಅಂಥಾ ಉಪಾಧ್ಯಾಯರುಗಳಿಂದ ಯಾವ ತರದ ಪಾಠ ನಡೆಯುತ್ತಿರಬಹುದೆಂಬುದನ್ನು ವಾಚಕ ಮಹಾಶಯರೇ ಊಹಿಸಿಕೊಳ್ಳಬಹುದು. ಒಬ್ಬನ ಹೈಸ್ಕೂಲು ವಿದ್ಯೆ ತೀರುವ ವರೆಗೆ ಎಷ್ಟು ಬ್ಯಾಡ್ಜ್ ಆಗಬೇಕು. ಇದಕ್ಕೆಲ್ಲಾ ಹಣ ಎಲ್ಲಿಂದ ಬರುವದು. ಸಾಮಾನ್ಯವಾಗಿ ಬಹಳ ಕ್ಲಿಷ್ಟದಿಂದ ಊಟ ಮಾಡುತ್ತಾ ಕಷ್ಟದಲ್ಲಿರುವ ಬಡ ರೈತರು ಯಾವ ಬಗೆಯಾಗಿ ಈ ತೆರಿಗೆಯನ್ನೆಲ್ಲಾ ತೆರಬಹುದು. ಹೀಗಾದ್ದರಿಂದಲ್ಲವೇ ಅನೇಕ 'ನೆಪೋಲಿಯನ' ಆಗಬಹುದಾದ ಮಕ್ಕಳು ವಿದ್ಯೆ ಕಲಿಯಲು ಸಾಧ್ಯವಿಲ್ಲದೆ ಕಾಡು ಪಾಲು ಆಗಿರುವುದು. ಉಪಾಧ್ಯಾಯರು ಸಹ ಬ್ಯಾಡ್ಜ್ ಇಟ್ಟುಕೊಳ್ಳುವದುಂಟೋ? ಇಲ್ಲದಿದ್ದರೆ ಅವರನ್ನು ಮಕ್ಕಳು ಗೊತ್ತು ಹಚ್ಚುವದು ಹೇಗೆ?

(3) ಸಿಕ್ನೆಸ್ ಫೀಜಂತೆ. ಇದು ಯಾವ ತರದ ಕಂದಾಯ. ಇಂಥಾ ಹಣ ಘೋಷಣೆ ಮಾಡಿದರೇನು ಮಕ್ಕಳೂ, ಉಪಾಧ್ಯಾಯರೂ ಎಂದು ತಿಳಿಯುವದೋ. ಮಕ್ಕಳಿಂದ ತಲೆ ಒಂದರ ನಾಲ್ಕಾಣೆ ಚಂದವಂತೆ. ಉಪಾಧ್ಯಾಯರ ಚಂದಾ ಏನು? ಇದೆಲ್ಲಾ ಶಾಲಾಧಿಕಾರಿಗಳ ಇರಾದೆಯಂತೆ ನಡೆಯುವದೋ, ಇಲ್ಲ ಸರಕಾರದವರಿಂದ ಈ ತೆರನಾದ ಕಂದಾಯವನ್ನು ಮಕ್ಕಳಿಂದ ವಸೂಲು ಮಾಡಬಹುದೆಂದು ಹುಕುಂ ಇದೆಯೋ? ಇದ್ದರೆ ಯಾಕೆ ಅದನ್ನು ಜನರ ತಿಳುವಳಿಕೆ ಬಗ್ಗೆ ಮೊದಲೇ ಪ್ರಕಟಿಸಲಿಲ್ಲ.

ಫೈನಲ್ ಪರೀಕ್ಷೆಗೆ ಧೀರ್ಘ ಕಾಲವಿಲ್ಲ. ಆದರೇನು? ಒಂದು ಕಡೆ ಸ್ಕೂಲ್ ಡೇ ಎಂದು ಮಕ್ಕಳಿಗೆ ನಾಟಕ ಅಭ್ಯಾಸ, ಇನ್ನೊಂದೆಡೆ ಹಾಕಿ ಪಸ್ತರಿ ಪಂದ್ಯಾಟ, ಮತ್ತೊಂದು ಕಡೆ ಸಿನೆಮಾದ ಗಲಾಟೆ, ಇದಕ್ಕೆಲ್ಲಾ ತಲೆ ಕೊಡಬೇಕಾದ ಉಪಾಧ್ಯಾಯರು ಹ್ಯಾಗೆ ತಾನೆ ಮಕ್ಕಳಿಗೆ ಸರಿಯಾಗಿ ಪಾಠ ಹೇಳಬಹುದು ಮತ್ತು ಇಂಥಾ ತಮಾಷೆಗಳಿಗೆ ಬಲಿ ಬಿದ್ದ ಮಕ್ಕಳು ಹ್ಯಾಗೆ ತಾನೇ ಸರಿಯಾಗಿ ಕಲಿಯಬಹುದು. ಪರೀಕ್ಷೆಯಲ್ಲಾದರೋ ಸರಿಯಾದ ಮಾರ್ಕು ತೆಗೆಯದಿದ್ದರೆ ವರ್ಷದ ಕೆಲಸವೇ ವ್ಯರ್ಥ. ಈಗಿನ ಕಾಲದಲ್ಲಿ ತಲೆ ಹುಟ್ಟು ಕಿರುಪ (born intelligent) ಮಕ್ಕಳೂ ಮತ್ತು ವಿದ್ಯಾವಂತ ತಂದೆ ತಾಯರ ಮಕ್ಕಳಲ್ಲದೆ ಸಾಧಾರಣದ ಅಂದರೆ ಅಭ್ಯಾಸದಿಂದ ಕಲಿಯಬಹುದೆಂದು ಹೇಳಬೇಕಾದ ಮಕ್ಕಳು ವಿದ್ಯೆ ಕಲಿಯುವದು ಅಸಾಧ್ಯವೆಂದರೆ ತಪ್ಪಾಗಲಿಕ್ಕಿಲ್ಲ. ನೂರಕ್ಕೆ ಎಪ್ಪತ್ತೈದು ಮಕ್ಕಳಿಗೆ ಈಗಿನ ಕಾಲದಲ್ಲಿ ಖರ್ಚು ಮಾಡುವದು ನೀರಿಗೆ ಹೋಮ ಮಾಡಿದಂತೆ ಆಗುವದೆಂದು ನನ್ನ ಅಭಿಪ್ರಾಯ.

ಮಕ್ಕಳ ವಿದ್ಯಾಭ್ಯಾಸವು ಈಗಿನ ಕಾಲದಲ್ಲಿ ಬಡ ತಂದೆ ತಾಯಿರಿಗೆ ದೊಡ್ಡ ಕಲ್ಲು ಹೊತ್ತಂತೆ ಆಗಿರುತ್ತೆ. ದೇಶದ ಅಭಿವೃದ್ಧಿಗೆ ಮುಂದಿನ ಜನಾಂಗದ ಏಳಿಗೆಯೇ ಕಾರಣ. ಅಂಥಾ ಜನಾಂಗವನ್ನು ಹಿಂದಕ್ಕೆ ಬಿಟ್ಟಂತೆ ಹೊರಲಾರದ ಹೊರೆ ಹೊರಿಸತೊಡಗಿದರೆ ದೇಶದ ಪಾಡೇನು? ವಾಚಕ ಮಹಾಶಯರೇ ಊಹಿಸಿಕೊಳ್ಳಿ.

ಘನ ಸರ್ಕಾರದವರು ಈ ಸಂಗತಿಗಳನ್ನೆಲ್ಲಾ ಚೆನ್ನಾಗಿ ಪರ್ಯಾಲೋಚಿಸಿ ಜನರ ತಿಳುವಳಿಕೆ ಬಗ್ಗೆ ಸ್ಥಳೀಕ ಪತ್ರಿಕೆಗಳಲ್ಲಿ ಒಂದು ಪ್ರಕಟಣೆ ಹೊರಡಿಸಬೇಕಾಗಿಯೂ, ಸಮ್ಬಂಧಪಟ್ಟ ಅಧಿಕಾರಿಗಳು ಮೇಲ್ಕಂಡ ಬಾತ್ಮಿಯಲ್ಲಿರುವ ಕೆಲವು ಪ್ರಶ್ನೆಗಳಿಗೆ ನ್ಯಾಯವಾದ ಜವಾಬನ್ನೀಯಬೇಕೆಂದೂ ವಿನಯದಿಂದ ಕೇಳಿಕೊಳ್ಳುವ,

ಬಡಪೈಕಿ.

ಗಾಂಧಿ-ರವೀಂದ್ರರ ಭೇಟಿ.

ರಾತ್ರಿ ಸಂಪೂರ್ಣ ವಿಶ್ರಾಂತಿ ಪಡೆದ ಗಾಂಧಿಜಿ ಮತ್ತು ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ತಾ. 18ನೇ ಪ್ರಾತಃಕಾಲ ವಿದ್ಯಾರ್ಥಿಗಳ ಸಾಮೂಹಿಕ ಪ್ರಾರ್ಥನಾ ಸಭೆಯಲ್ಲಿ ಭಾಗ ವಹಿಸಿದರು. ಅನಂತರ ಶಾಂತಿ ನಿಕೇತನದ ವಿವಿಧ ಶಾಖೆಗಳಿಗೆ ಗಾಂಧಿಜಿ ಭೇಟಿ ಕೊಟ್ಟು, ವಿದ್ಯಾರ್ಥಿಗಳ ಕಾರ್ಯದಲ್ಲಿ ತಮ್ಮ ಆಸಕ್ತಿಯನ್ನು ಪ್ರದರ್ಶಿಸಿದರು.

ಬಹು ಕಾಲದಿಂದ ಕಾಣದಿದ್ದ ಹಳೆಯ ಮಿತ್ರರನ್ನು ಗಾಂಧಿಜಿ ಶಾಂತಿ ನಿಕೇತನದಲ್ಲಿ ಕಂಡರು. ಅವರನ್ನು ಕಂಡಾಗ ಗಾಂಧಿಜಿಯ ಮುಖದಲ್ಲಿ ಸಂತೋಷವು ಹೊರ ಸೂಸುತಿತ್ತು. ಕೊನೆಯಲ್ಲಿ ಗಾಂಧಿಜಿ ರಾಜಕೀಯ ಮತ್ತು ರಾಜ್ಯಾಂಗ ಸಮಸ್ಯೆಗಳ ವಿಷಯವಾಗಿ ಸುಮಾರು 40 ನಿಮಿಷ ಕಾಲ ರವೀಂದ್ರನಾಥ ಠಾಕೂರರೊಡನೆ ಚರ್ಚಿಸಿದರು.

ಮಾಲಿಖಂಡಕ್ಕೆ ಪ್ರಯಾಣ ಬೆಳೆಸುವವರನೇಕರು ಈಗ ಶಾಂತಿನಿಕೇತನಕ್ಕೆ ಬಂದಿದ್ದಾರೆ. ಅವರು ಇಲ್ಲಿಂದ ಮಾಲಿಖಂಡಕ್ಕೆ, ಗಾಂಧಿ ಸೇವಾಸಂಘ ಸಮ್ಮೇಳನದ ಸಂಬಂಧದಲ್ಲಿ ಪ್ರಯಾಣ ಬೆಳೆಸುತ್ತಾರೆ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿಸಲ್ಪಟ್ಟಿದ್ದು 1921ರಲ್ಲಿ)

		ರೂ	ಆ	ಪೈ
ಶೇರ್ ಬಂಡವಾಳ	-	50,000	0	0
ವಸೂಲಾದ ಶೇರ್ ಮೊಬಲಗು	-	47 810	0	0
ಜಮೂಬಂದ ರೀವಣಾತಿ	-	2,13,262	0	4
[illegible]	-	1 56 611	12	0
ಸೇವಿಂಗ್ ಬ್ಯಾಂಕ್ ಡಿಪಾಜಿಟು	-	40 979	5	1
ತ್ರಿಫ್ಟ್ ಡಿಪಾಜಿಟ್ಟು	-	23,560	14	0

ಈ ಬ್ಯಾಂಕಿನಿಂದ [illegible] ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡಲಾಗು[illegible]

[illegible] ಸೇವಿಂಗ್ಸ್ ಬ್ಯಾಂಕ್ [illegible] ಡಿಪಾಜಿಟುಗಳಿಗೆ ಶೇಕಡ ವಾರ್ಷಿಕವಾಗಿ 3½ ದರದಲ್ಲಿಯೂ, [illegible] ಫಿಕ್ಸೆಡ್ ಡಿಪಾಜಿಟುಗಳಿಗೆ [illegible] 1-9-1937ರಿಂದ ಬಡ್ಡಿ [illegible]

ತಾ 1-10-1936ರಿಂದ [illegible] ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇವರ ವಿಷಯ ಹೆಚ್ಚಿನ [illegible] ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿ [illegible] 7-39ರಿಂದ [illegible] ನಿಲ್ಲಿಸಲಾಗಿದೆ

[illegible] ರಿಜಿಸ್ಟ್ರರವರು ಲೆಕ್ಕ [illegible]

[illegible] ಎಲ್ ಸಿ.
[illegible] ಪಿ ದೇ[illegible]ವರು
ಸೆಕ್ರೆಟರಿ —ಮ ಎಸ್ ಎನ್ ರಾಮಶೆಟ್ಟಿಯವರು

ತಾ 1-1-1940

ಕೊಡಂದೇರ ಡಿ. ಮಾಚಯ್ಯ,

L.D Sc. (COLLEGE OF DENTISTRY)

EX-SUPERVISOR LAXMIDAS PATEL DENTAL HOSPITAL KARACHI

ದಂತ ವೈದ್ಯರು

ಎಲ್ಲಾ ರೀತಿಯ [illegible]

ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ [illegible]

ಸುಲಭ ದರ. (39) [illegible]

---

೪೩ ವರ್ಷಗಳಿಂದ ಅನುಭವಕ್ಕೆ [illegible]

[illegible]

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ [illegible] ಔಷಧಿ
ಬಾಟ್ಲಿಗೆ 1 ರೂ ವಿ ಪಿ ಖರ್ಚು ಬೇರೆ

ಜ್ವರಗಡ್ಡೆ (ಅಡ್ಡಗ್ಯೆ) ಗುಳಿಗೆ.

[illegible] ಜ್ವರಗಡ್ಡೆ (ಅಡ್ಡಗ್ಯೆ) [illegible] ಗುಣವಾಗಿ [illegible]

ಗಣೇಶ ರಾಮಚಂದ್ರ ಪಳೆ. ಮತ್ತು ಕಂಪನಿ,

(52-9) ಗಿರಗಾಂ, [illegible],

ನೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ-ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ದಾವಾ ಮತ್ತು ಅಮಲ್ದಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ ಪಿ ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರಸಿಗೆ ಬರೆಯಿರಿ

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ

Shorthand, Typing etc.

ಶಾರ್ಟ್‌ಹೆಂಡ್, ಟೈಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಉತ್ಕೃಷ್ಟವು ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara.

52—3

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:- ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬೇರೆಗೆ ಸಿದ್ಧವಾಗಿವೆ

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುವು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇನೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಾಲಜರ್, (ರಿಜಿಸ್ಟರ್ಡ್)
52-2 **ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.**

Printed & Published by P. I. Belliappa, at 'Kodagu' Press Mercara for 'Kodagu' Ltd

ನಿಮ್ಮ

ಮುದ್ರಣ ಕೆಲಸಗಳನ್ನು

"ಕೊಡಗು"

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೧—೩—೧೯೪೦.

ಸಂಪುಟ ೧೯] [ಸಂಚಿಕೆ ೪೦

MR. CAN'T. : These are very hard days. No; I can't save anything.

MR. CAN. : I have opend a CUMULATIVE [illegible] a/c now in the CORPORATION; after this I find that **I CAN SAVE.**

From small amounts set apart every month [illegible] can be built. It is not difficult [illegible] rupee (or multiple thereof) per [illegible] earnings. Those who opened the [illegible] accounts know how easy it is to [illegible]

Have you opened yours?

THE CANARA BANKING CORPORATION LIMITED.

(Incorporated in British India)

Estd. 1906.

52-10

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ,—ದ. ಕನ್ನಡ.

(ಬ್ರಾಂಚ್: ಕುಮಟಾ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

52-16

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ನೋಟೀಸ್.

[illegible]

ಮಡಿಕೇರಿ

ಝಂಡು ರವರ 'ಸ್ಪ್ಲೀನೋಲ್'

[illegible] ಪರಿವರ್ತನ ರೋಗಗಳ ಅತ್ಯುತ್ತಮ ರಸಾಯನ [illegible] ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ರಕ್ಷಿಸುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ.— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟಾಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎಂ. ಎಸ್.
[illegible]

(..-21)

ZANDU

ವೀರಾಜಪೇಟೆಯ ಏಜೆಂಟರು-ಕೆ. ರಾಮಕೃಷ್ಣರಾವ್,
ವೀರಾಜಪೇಟೆ (ದ. ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಸ್ಥಾಪಿತವಾದ್ದು 1907.

ಹೆಡ್ಡಾಫೀಸ್—ಅಜ್ಮೀರ್.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ್ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ಸಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಸಿಲ್ಹಟ್, ಸಿಕಂದರಾಬಾದ್, ತ್ರಿಚನಾಪಳ್ಳಿ ಮತ್ತು ನೆಲ್ಲೂರು.

52-5

ಆಧುನಿಕ

ಯಂತ್ರ ಸಾಮಗ್ರಿಗಳ ಪೈಪೋಟಿ

●○●

ಯಂತ್ರ ಸಾಮಗ್ರಿಗಳ ಸ್ಪರ್ಧೆಯಲ್ಲಿ ಗ್ರಾಮಕೈಗಾರಿಕೆಗಳು ಹೇಳ ಹೆಸರಿಲ್ಲದಾಗಿವೆ. ಯಂತ್ರಗಳ ಹಾವಳಿಯಿಂದಾಗಿ ನಿರುದ್ಯೋಗವು ಹೆಚ್ಚುತ್ತಿದೆ. ಜನತೆಯಲ್ಲಿ ವೈಯಕ್ತಿಕ ಶಕ್ತಿಯು ಕುಗ್ಗಿ ಪರಾವಲಂಬನವು ಅದರಿಂದಾಗಿಯೇ ಬೆಳೆಯುತ್ತಿದೆ. ಯಂತ್ರಗಳು ಮಾನವನನ್ನು ನಿಸ್ಸಹಾಯಸ್ಥಿತಿಗೆ ತಂದೊಡ್ಡಿವೆ.

ಆಧುನಿಕ ಯಂತ್ರಗಳ ಸ್ಪರ್ಧೆಯಲ್ಲಿ ಗ್ರಾಮಗಳ ಕೈಗಾರಿಕೆಗಳು ನಿಲ್ಲಬಲ್ಲವೇ? ಈ ಪ್ರಶ್ನೆಯು ಈಗ ಒಂದು ವಿವಾದ ಗ್ರಸ್ತವಾದ ಸಮಸ್ಯೆಯಾಗಿದ್ದು, ಇದರ ವಿಚಾರದಲ್ಲಿ ಯಾವುದೇ ಒಂದು ನಿರ್ಣಯವನ್ನು ಸುಲಭವಾಗಿ ಮಾಡಲಾಗುವುದಿಲ್ಲ. ಇವನ್ನು ನಾವು ಅನೇಕ ದೃಷ್ಟಿಗಳಿಂದ ವಿಚಾರ ಮಾಡಿ ನಂತರ ಪರಿಣಾಮವನ್ನು ಕಂಡುಹಿಡಿಯಬೇಕಾಗಿದೆ. ಕೆಲವರು ಹೇಳುವುದೇನೆಂದರೆ–ಮನುಷ್ಯನ ಅನ್ವೇಷಣ ಬುದ್ಧಿಯು, ಪ್ರಕೃತಿಯು ಯಾವ ಯಾವ ಶಕ್ತಿಗಳನ್ನು ತನ್ನ ಅಧೀನವನ್ನಾಗಿ ಮಾಡಿಕೊಂಡಿರುವದೋ ಅವುಗಳ ಉಪಯೋಗ ಮಾಡಿಕೊಳ್ಳುವದರಲ್ಲಿಯೇ ಗ್ರಾಮಗಳ ಮುಕ್ತಿ ಇದೆ. ಅವರ ಅಭಿಪ್ರಾಯಕ್ಕನುಸಾರವಾಗಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಯಾವ ರೀತಿ ಜಲ, ವಾಯು ಎಣ್ಣೆ ಮತ್ತು ವಿದ್ಯುತ್ ಇವುಗಳ ಉಪಯೋಗವನ್ನು ಮಾಡಿಕೊಂಡಿರುವರೋ, ನೀವೂ ಸಹ ಅದೇ ರೀತಿ ಮಾಡಬೇಕು. ಅವರು ಹೇಳುವದೇನೆಂದರೆ– ಈಗ ಗೂಢ ಪ್ರಾಕೃತಿಕ ಶಕ್ತಿಗಳನ್ನು ಅಧಿಕಪಡಿಸಿಕೊಂಡಿರುವವರ ಕಾರಣದಿಂದಲೇ ಪ್ರತಿಯೊಬ್ಬ ಅಮೇರಿಕನ್ನನು ೩೦ ಮಂದಿ ಗುಲಾಮರನ್ನು ಇಟ್ಟುಕೊಳ್ಳಬಲ್ಲನು. ಅಂದರೆ ೩೦ ಮಂದಿ ಗುಲಾಮರ ಕೆಲಸವನ್ನು ಅವನು ಈ ಶಕ್ತಿಗಳ ಮೂಲಕ ಮಾಡಿಸುವನು.

ನಿರುದ್ಯೋಗತನದ ಮೂಲ.

ಇನ್ನೊಂದು ವಿಚಾರವೇನೆಂದರೆ– ಯಂತ್ರಗಳಿಂದ ಯಾವ ರೀತಿಯಲ್ಲಿ ಮಾನವನ ಜೀವನ ನಿರ್ವಾಹದ ಅನೇಕ ಅನುಕೂಲತೆಗಳು ಪ್ರಾಪ್ತವಾಗಿಯೋ ಅದೇ ರೀತಿ ಸಮಾಜದಲ್ಲಿ ಅವುಗಳಿಂದ ಒಂದು ವಿಷಮ ಪರಿಸ್ಥಿತಿಯೇ ಉಂಟಾಗುವದು. ಇವರ ತಾತ್ಕಾಲಿಕ ಪರಿಣಾಮವೆಂದರೆ, ಅನೇಕರು ನಿರುದ್ಯೋಗಿಗಳಾಗುವುದು. ಇದರ ವೇಗವು ತೀವ್ರವಾಗಿರುವುದರಿಂದ ಒಬ್ಬನೇ ವ್ಯಕ್ತಿಯು ಇವರ ಮೂಲಕ ಅನೇಕರು ಮಾಡುವ ಕೆಲಸವನ್ನೂ ಮಾಡಬಲ್ಲನು. ಈಗಂತೂ ಆಟೋಮ್ಯಾಟಿಕ್ ಯಂತ್ರಗಳೇ ಆಗಿ ಹೋಗಿ (ಇದಕ್ಕೆ ಮನುಷ್ಯನ ಆವಶ್ಯಕತೆಯೇನೋ ಇದ) ಕೌಶಲರಾದ ಕೆಲಸಗಾರರೇ ದೊರೆಯುವಂತಾಗಿದೆ. ಮನುಷ್ಯನು ಕೇವಲ ಸ್ವಿಚ್ ಬೋರ್ಡಿನ ಬಳಿ ಕುಳಿತು ಗುಂಡಿಯನ್ನು ಅಮುಕಿ, ವಿದ್ಯುತ್ತಿನ ಮೂಲಕ ಯಂತ್ರವನ್ನು ನಡೆಯಿಸುತ್ತಿರುವನು! ಇಂಥಾ ಸ್ಥಿತಿಯಲ್ಲಿ ಅನೇಕ ಜನರು ನಿರುದ್ಯೋಗಿಗಳಾಗುವದು ಸ್ವಾಭಾವಿಕವಲ್ಲವೇ? ಇವರೆಲ್ಲರಿಗೂ ಕೆಲಸವನ್ನು ಒದಗಿಸುವ ವಿಕಟ ಸಮಸ್ಯೆಯು ಸಮಾಜದ ಮುಂದೆ ಉಂಟಾಗುವುದು.

ಎರಡನೆಯ ಹಾನಿ ಏನೆಂದರೆ–ಯಂತ್ರಗಳ ಮೂಲಕ ವಸ್ತು ನಿರ್ಮಾಣವು ಮೊದಲಿಗಿಂತ ಅಧಿಕವಾಗುವದು. ಅಲ್ಲದೆ ಯಂತ್ರಗಳ ಸ್ವಾಮಿತ್ವವು ಭಿನ್ನ ಭಿನ್ನ ವ್ಯಕ್ತಿಗಳಿಗಿದ್ದು ಇವರು ಆವಶ್ಯಕತೆಯನ್ನು ಪರಿಶೀಲಿಸದೆಯೇ, ತಮ್ಮ ಲಾಭಕ್ಕಾಗಿ ಮಾತ್ರ ಕೆಲಸ ಮಾಡುವರು. ಇದರಿಂದ ತಯಾರಾಗಿರುವ ಮಾಲುಗಳ ವೃದ್ಧಿಯು ಅತಿ ಅಧಿಕವಾಗುತ್ತಲೇ ಹೋಗುವುದು. ವಸ್ತುಗಳು ರಾಶಿ ರಾಶಿಯಾಗಿ ಬಿದ್ದಿರುವವು. ಆದರೆ ಕೊಳ್ಳುವವರೇ ಇರುವುದಿಲ್ಲ. ಕಾರ್ಖಾನೆಯವರು ನಿರುಪಾಯರಾಗಿ, ಕೆಲಸವನ್ನು ನಿಲ್ಲಿಸಬೇಕಾಗಿ ಬರುವುದು. ಇದರಿಂದ ಲಕ್ಷಾಂತರ ಮನುಷ್ಯರು ನಿರುದ್ಯೋಗಿಗಳಾಗಿ ಸಮಾಜದಲ್ಲಿ ಅಶಾಂತಿಗೆ ಕಾರಣರಾಗುವರು.

ಅನಾರೋಗ್ಯಕ್ಕೂ ಕಾರಣ.

ಈ ದೃಷ್ಟಿಯಿಂದ ನಾವು ಭಾರತದ ವಿಚಾರವನ್ನು ಗಮನಿಸಿದರೆ ಇನ್ನೂ ಹೆಚ್ಚಿನ ಪರಸ್ಪರ ವಿರೋಧ ವಿಷಯಗಳೇ ಕಣ್ಣಿಗೆ ಬೀಳುವವು. ಇಲ್ಲಿ ಎರಡು ಗುಂಪಿನ ಜನರಿರುವರು. ಒಂದು ಗುಂಪಿನವರು ಯಂತ್ರಗಳ ಉಪಯೋಗವನ್ನು ವಿರೋಧಿಸುವರು. ಮತ್ತೊಂದು ಗುಂಪಿನವರು ಸಮರ್ಥಿಸುವರು. ಆದರೆ ಯಂತ್ರಗಳನ್ನು ವಿರೋಧಿಸಿದಂತೆಲ್ಲ ಅವುಗಳ ಪ್ರಚಾರವು ಅಧಿಕವಾಗುತ್ತಲೇ ಇವೆ. ಯಂತ್ರಗಳಿಂದ ಬೀಸಲ್ಪಟ್ಟ ಹಿಟ್ಟು ಆರೋಗ್ಯಕ್ಕೆ ಬಹಳ ಹಾನಿಕಾರಕವೆಂಬದನ್ನು ಎಲ್ಲರೂ ಬಲ್ಲರು. ಆದರೆ? ನಗರಗಳ ಮಾತಂತಿರಲಿ. ಸಣ್ಣ ಹಳ್ಳಿಗಳಲ್ಲಿ ಸಹ ಇವರ ಪ್ರಚಾರವು ಬಹಳವಾಗಿ ಆಗಿಹೋಗಿದೆ. ಹಳ್ಳಿಗಳ ಸ್ತ್ರೀಯರು ಮಾಡಲು ಕೆಲಸವಿಲ್ಲದಿದ್ದರೂ ಧಾನ್ಯವನ್ನು ನಗರಗಳ ಯಂತ್ರಗಳಿಗೆ ತೆಗೆದುಕೊಂಡು ಹೋಗುತ್ತಿರುವದು ದಿನ ದಿನಕ್ಕೂ ಹೆಚ್ಚುತ್ತಿರುವದು. ಭಾರತೀಯರ ಮುಂದೆ ಇದೊಂದು ಸಮಸ್ಯೆಯೇ ಆಗಿಂತಾಗಿದೆ. ಮನಸ್ಸಿನಿಂದ ಯಂತ್ರಗಳನ್ನು ವಿರೋಧಿಸುವವರೂ ಸಹ ಕಾರ್ಯ ರೂಪದಲ್ಲಿ ಅವರ ಅನುವರ್ತಿಗಳೇ ಆಗಬೇಕಾಗಿದೆ. ಅವುಗಳ ಸ್ಥಾನದಲ್ಲಿ ವಿದೇಶಿ ಕಾರ್ಖಾನೆಗಳು ಎದ್ದವು. ಕೈಯಿಂದಾದ ವಸ್ತು ವಿಶಿಷ್ಟ ಯಂತ್ರದ ವಸ್ತುವಿಗಾಗಿ ಭದ್ರವಾಗಿರುವುದಿಲ್ಲವೆಂದು ತಿಳಿದೂ ಸಹ ಜನರು ಅವುಗಳ ಕಡೆಗೇ ಆಕರ್ಷಿತರಾಗುತ್ತಿರುವರು.

ಇಂದಿನ ಭಾರತದ ಭಾವನೆ.

ಭಾರತದಲ್ಲಿ ದಿನ ದಿನವೂ ಆಗುತ್ತಿರುವ ಯಂತ್ರದ ವೃದ್ಧಿಯನ್ನು ಅಸ್ವಾಭಾವಿಕವೆಂದು ಹೇಳಲಾಗುವುದಿಲ್ಲ. ಏನೆಂದರೆ ಸಮಸ್ತ ವಿಶ್ವದ ಪ್ರವೃತ್ತಿಯೇ ಈ ರೀತಿಯಲ್ಲಿದೆ. ಈಗ ಯಾರು ಯಂತ್ರಗಳ ಸಂಬಂಧದಲ್ಲಿ ಹೆಚ್ಚು ಮುಂದುವರಿದಿರುವರೋ ಅವರು ಉನ್ನತಶೀಲರೆಂಬ ಭಾವನೆಯೇ ಹೆಚ್ಚುತ್ತಿದೆ. ಆಧುನಿಕ ಕಾರ್ಖಾನೆಗಳನ್ನು ಸ್ಥಾಪಿಸುವುದು, ದೇಶಸೇವಾ ಕಾರ್ಯವೆಂದು ಭಾವಿಸುವ ಸಮಯವೂ ಒಂದು ಕಾಲದಲ್ಲಿತ್ತು. ಆದರೆ ಈಗಿನ ಭಾವನೆಯೇ ಬೇರೆಯಾಗಿದೆ. ಈಗ ಕೈಯಿಂದಲೇ ಆಗುವ ವಸ್ತುಗಳ ಉನ್ನತಿ ಮತ್ತು ವೃದ್ಧಿಯು ಆಗುತ್ತದೆಂಬ ಭಾವನೆಯುಂಟಾಗಿದೆ. ಯಂತ್ರಗಳ ಪ್ರಚಾರದಿಂದ ಹಳ್ಳಿಗಳ ಉದ್ಯೋಗಗಳು, ಕೈಗಾರಿಕೆಗಳು ನಷ್ಟವಾಗುತ್ತ ಬಂದವು. ಯಂತ್ರದಿಂದ ಹತ್ತು ಮಂದಿಗೆ ಕೆಲಸ ದೊರೆತರೆ 100 ಮಂದಿ ನಿರುದ್ಯೋಗಿಗಳಾಗುವರು. ಅಲ್ಲದೆ ನಮ್ಮ ದೇಶದ ಕಾರ್ಖಾನೆಗಳಿಗೆ ವಿಶ್ವದಲ್ಲೆಲ್ಲಾ ತಮ್ಮ ವಸ್ತುಗಳನ್ನು ಮಾರಾಟ ಮಾಡುವ ಶಕ್ತಿಯೂ ಸಹ ಇಲ್ಲ. ಇದನ್ನು ವಿಶದವಾಗಿ ಬರೆಯುತ್ತ ಮಹಾತ್ಮ ಗಾಂಧಿಯವರು ಈ ರೀತಿ ವರ್ಣಿಸಿರುವರು

ಗ್ರಾಮವಾಸಿಗಳಿಗೇನೂ ಲಾಭವಿಲ್ಲ.

'ಉದ್ಯೋಗಗಳ ಯಂತ್ರೀಕರಣವನ್ನೇ ತೆಗೆದುಕೊಳ್ಳೋಣ. ಯಾವ ದೇಶದಲ್ಲಿ ಯಾವುದೇ ಒಂದು ನಿರ್ಧಾರವಾದ ಕೆಲಸವನ್ನು ಪೂರ್ತಿಯಾಗಿ ಮಾಡಲು ಸಾಕಷ್ಟು ಜನರಿರುವುದಿಲ್ಲವೋ ಅಂಥಾ ದೇಶದಲ್ಲಿ ಮಾತ್ರ ಯಂತ್ರಗಳ ಮೂಲಕ ಕೆಲಸ ಮಾಡಿಸುವದು ಒಳ್ಳೆಯದು. ಆದರೆ ಇಂಥಾ ಸ್ಥಿತಿಯು ಭಾರತದಲ್ಲಿ ಇಲ್ಲವೇ ಇಲ್ಲ. ಇಲ್ಲಿ ಕೆಲಸ ಮಾಡಲು ಎಷ್ಟು ಮಂದಿಯ ಅಗತ್ಯವಿದೆಯೋ ಅದಕ್ಕಿಂತ ಅಧಿಕ ಸಂಖ್ಯೆಯ ಜನರು ಕೆಲಸವಿಲ್ಲದೆ ಬಿದ್ದಿರುವರು. ಆದ್ದರಿಂದ ಯಂತ್ರಗಳಿಂದ ನಮ್ಮಲ್ಲಿ ನಿರುದ್ಯೋಗವು ಕಡಿಮೆಯಾಗುವುದೇ ಅಥವಾ ಹೆಚ್ಚುವುದೇ? ಕೆಲವು ಎಕರೆ ಭೂಮಿಯನ್ನು ಅಗೆಯಲು ನಾವು ನೇಗಿಲಿನ ಉಪಯೋಗ ಮಾಡುವುದಿಲ್ಲವೆಂಬುವುದು ಇಲ್ಲಿನ ಪ್ರಶ್ನೆ. ನಮ್ಮ ಗ್ರಾಮಗಳಲ್ಲಿರುವ ಲಕ್ಷಾಂತರ ಮಂದಿಯನ್ನು ಪರಿಶ್ರಮದಿಂದ ತಪ್ಪಿಸಿಬಿಡುವುದು ಹೇಗೆ? ಅವರಿಗೆ ವರ್ಷದಲ್ಲಿ ಆರು ತಿಂಗಳಂತೂ ಏನೇನೂ ಕೆಲಸವೇ ಇರುವುದಿಲ್ಲವಲ್ಲ. ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದೇ ನಮ್ಮ ಮುಂದಿರುವ ಪ್ರಶ್ನೆ. ಕೆಲವರಿಗೆ ಈ ಮಾತು ವಿಚಿತ್ರವಾಗಿ ತೋರಬಹುದಾದರೂ ಯಂತ್ರಗಳಿಂದ ಗ್ರಾಮವಾಸಿಗಳಿಗೇನೂ ಲಾಭವಿಲ್ಲವೆಂಬುವುದೇ ನಿಜವಾದ ವಿಚಾರ. ಈ ಯಂತ್ರಗಳು ಅವರ ಹೊಟ್ಟೆಗೆ ಕಲ್ಲು ಹಾಕುವದರಲ್ಲಿ ಏನೇನೂ ಸಂಶಯವಿಲ್ಲ.

ಯಂತ್ರದಿಂದಾದ ಬಟ್ಟೆಯು ಅಗ್ಗವಲ್ಲ.

ನಾನೇನೂ ಅಂಕೆಗಳನ್ನು ಸಂಗ್ರಹಿಸಿರುವುದಿಲ್ಲ. ಆದರೂ ಇಷ್ಟು ಮಾತ್ರ ಹೇಳಬಲ್ಲೆನು. ಏನೆಂದರೆ ಹಳ್ಳಿಗಳಲ್ಲಿ ಕುಳಿತುಕೊಂಡು ಕನಿಷ್ಠ ಪಕ್ಷ ಹತ್ತು ಮಂದಿ ಕೂಲಿಯವರು ಮಾಡುವ ಕೆಲಸವನ್ನು ಯಂತ್ರದ ಒಬ್ಬ ಕೂಲಿಯವನು ಮಾಡಬಲ್ಲನು. ಈ ರೀತಿ ನೂಲುವ ಮತ್ತು ನೇಯುವ ಯಂತ್ರಗಳು ಗ್ರಾಮಸ್ಥರ ಜೀವನದಲ್ಲಿ ಬಹಳ ಮುಖ್ಯವಾದುದೆಂದು ಪರಿಗಣಿಸಲ್ಪಟ್ಟ ಸಾಧನಗಳನ್ನೇ ನಾಶಪಡಿಸಿರುವವು. ಈ ಯಂತ್ರವು ಸಿದ್ಧಮಾಡುವ ಬಟ್ಟೆಗಳು ಉತ್ತಮವಾಗಿರುವವೆಂದೂ, ಕಡಿಮೆ ಬೆಲೆಗೆ ದೊರೆಯುವವೆಂದೂ ಹೇಳುವುದು ಮೇಲ್ಕಂಡ ಉದಾಹರಣೆಗೆ ಉತ್ತರವಾಗುವುದಿಲ್ಲ. ಕಾರಣವೇನೆಂದರೆ, ಈ ಯಂತ್ರಗಳು ಸಾವಿರಾರು ಜನರ ಬಾಯಿಗೆ ಮಣ್ಣು ಹಾಕಿ ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡಿರುವುದರಿಂದ ಅವುಗಳಲ್ಲಿನ ಅತ್ಯಂತ ಸುಲಭ ಬೆಲೆಯ ಬಟ್ಟೆಯೂ ಸಹ ಬಹಳ ಬೆಲೆ ಬಾಳುವ ಖಾದಿಗಿಂತಲೂ ಹೆಚ್ಚಿನ ಬೆಲೆಯದೇ. ಅದರಂತೆ ಕಲ್ಲಿದ್ದಲಿನ ಗಣಿಗಳಲ್ಲಿ ಕೆಲಸ ಮಾಡುವ ಕೂಲಿಯವರು ಎಲ್ಲಿರುವರೋ ಅಲ್ಲಿ ಅವರು ಅದನ್ನು ಉಪಯೋಗಿಸಬಹುದು. ಏಕೆಂದರೆ, ಅಲ್ಲಿ ಅದಕ್ಕೆ ಬಹಳ ಬೆಲೆ ಇರುವುದಿಲ್ಲ. ಅದರಂತೆ ಯಾವ ಹಳ್ಳಿಗರು ತಮ್ಮ ಆವಶ್ಯಕತೆಯ ಪೂರ್ತಿಗಾಗಿ ಖಾದಿಯನ್ನು ಮಾಡಿಕೊಳ್ಳುವರೋ, ಅವರಿಗೆ ಅದು ಹೆಚ್ಚಿನ ಬೆಲೆಯದಾಗುವುದಿಲ್ಲ.'

ಆಹಾರ ಪದಾರ್ಥಗಳ ಸತ್ವನಾಶ.

ಯಂತ್ರಗಳಿಂದ ದೇಶ ಮತ್ತು ಸಮಾಜದ ಆರ್ಥಿಕ ಸಂಘಟನೆಯಲ್ಲಿ ಉಂಟಾಗುವ ಗಡಿಬಿಡಿಯು ಸ್ವಲ್ಪ ಮಟ್ಟಿಗೆ ನಿರಾಕರಿಸಲ್ಪಡುವದಾದರೂ, ಯಂತ್ರದ ಮೂಲಕ ಮನುಷ್ಯನ ಆರೋಗ್ಯ ಮತ್ತು ತಿನ್ನುವ ಆಹಾರ ಪದಾರ್ಥಗಳೊಡನೆ ಸಂಬಂಧವಿರುವ ವಸ್ತುಗಳನ್ನು ವಿರೋಧಿಸಲೇಬೇಕು. ವಿಜ್ಞಾನಿಗಳು ದೀರ್ಘವಾಗಿ ಪರೀಕ್ಷಿಸಿ ವಿದ್ಯುತ್ ಮತ್ತು ಆವಿಯಿಂದ ನಡೆಸಲ್ಪಡುವ ಯಂತ್ರಗಳ ಕಾವಿನಿಂದ ವಸ್ತುಗಳ ಸಾರ ಮತ್ತು ಸತ್ವದ ಅಧಿಕಾಂಶವು ನಷ್ಟವಾಗುವುದೆಂದು ಸಿದ್ಧ ಮಾಡಿ ತೋರಿಸಿರುವರು. ಗಿರಣಿಯ ಹಿಟ್ಟು ಎಂದೆಂದಿಗೂ ಕೈಯಿಂದ ಬೀಸಿದ ಹಿಟ್ಟಿನೆದುರಿನಲ್ಲಿ ನಿಲ್ಲಲಾರದೆಂಬುವುದನ್ನು ಸಾಧಾರಣವಾದ ಮನುಷ್ಯನೂ ಸಹ ಬಲ್ಲನು. ನೋಡುವುದಕ್ಕೆ ಅದು ಎಷ್ಟೇ ನುಣ್ಣಗಿರಲಿ, ಎಷ್ಟೇ ಮೋಹಕವಾಗಿರಲಿ, ಕೈಲಿ ಬೀಸಿದ ಹಿಟ್ಟಿನಷ್ಟು ಶಕ್ತಿಯಾಗಲಿ, ರುಚಿಯಾಗಲಿ ಅದರಲ್ಲಿರುವುದಿಲ್ಲ. ಗಿರಣಿಯ ಅಕ್ಕಿಯಂತೂ ತೀರ ನಿಸ್ಸಾರವಾದುದು. ಈ ವಿಚಾರದಲ್ಲಿ ಮಹಾತ್ಮರು 'ಕಾಲಂ' ಮತ್ತು 'ಸಿಮ್ಮರಾಟ.' ಎಂಬಿಬ್ಬರು ವಿಶೇಷಜ್ಞರು ಬರೆದಿರುವ ಪುಸ್ತಕದಲ್ಲಿನ ಕೆಳಗಿನ ಭಾಗವನ್ನು ಉದ್ಧರಿಸಿರುವರು. ಅದು ಈ ರೀತಿಯಲ್ಲಿದೆ–

'ಅರ್ಧಕ್ಕಿಂತ ಅಧಿಕ ಮನುಷ್ಯ ಜಾತಿಯ ಆಹಾರದಲ್ಲಿ ಅಕ್ಕಿಯು ಎಲ್ಲಕ್ಕಿಂತ ಮಹತ್ವದ ಧಾನ್ಯವಾಗಿದೆ. ಜಂಗಲಿ ಮತ್ತು ಹಿಂದುಳಿದವರ ಜಾತಿಯಲ್ಲಿ ಕೈಯ್ಯಲ್ಲಿ ಕುಟ್ಟಿದ ಅಕ್ಕಿಯೇ ಉಪಯೋಗವಾಗಿದೆ. ಇದನ್ನೇ ಕೆಂಪು ಅಕ್ಕಿ ಎನ್ನುವರು.

ಇಂಥಾ ಆಕ್ಕಿಯಲ್ಲಿ ಖನಿಜ ಸತ್ವಗಳು ಅಧಿಕ ಮಾತ್ರದಲ್ಲಿರುವವು'

ಭಾರತ ಭೂಮಿಯ ಗುಣದೋಷ.

ಭಾರತದ ಮುಖ್ಯ ವೃತ್ತಿಯೆಂದರೆ ವ್ಯವಸಾಯವೇ. ಯಂತ್ರಗಳ ಅಭಾವವೇ ಈ ವ್ಯವಸಾಯದ ಶೋಚನೀಯ ಸ್ಥಿತಿಗೆ ಕಾರಣವೆಂದು ಕೆಲವರ ಮತ. ಅವರ ಅಭಿಪ್ರಾಯದಲ್ಲಿ ಅಮೇರಿಕ ಮತ್ತು ಯೂರೋಪಿಯನರು ಯಂತ್ರಗಳ ಮತ್ತು ವೈಜ್ಞಾನಿಕ ಗೊಬ್ಬರಗಳ ಮೂಲಕ ಕೃಷಿಯಲ್ಲಿ ಅಪೂರ್ವ ಪ್ರಗತಿಯನ್ನು ಹೊಂದಿರುವುದರಿಂದ ಭಾರತವು ಅವರನ್ನು ಅನುಸರಿಸಬೇಕು. ನೋಡುವುದಕ್ಕೇನೋ ಅವರ ಈ ವಾದವು ನ್ಯಾಯವಾಗಿಯೇ ತೋರುವುದು. ಆದರೆ ನಾವು ನಮ್ಮ ದೇಶದ ಸ್ಥಿತಿಗತಿಗಳನ್ನು ವಿವೇಚನೆಗೊಳಪಡಿಸಿ ತುಲನೆ ಮಾಡಿ ನೋಡಿದರೆ ಮೇಲ್ಕಂಡ ನಿರ್ಣಯವನ್ನು ಪುನರ್ವಿಚಾರ ಮಾಡಬೇಕಾಗಿ ಬರುವಂಥಾ ಎಷ್ಟೋ ವಿಷಯಗಳು ಮರೆಯಾಗಿರುವವು. ಇವನ್ನು ವಿಚಾರ ಮಾಡುವಾಗ ನಾವು ಭೂಮಿಯ ಗುಣ ದೋಷ ವಾಯುಗುಣ ಮತ್ತು ಕೃಷಿಕನಿಗಿರುವ ಸಾಧನೆಗಳು ಇವುಗಳನ್ನು ಸಹ ಗಮನಿಸಬೇಕಾಗುವುದು. ಬಹಳ ಕಾಲದಿಂದ ನಮ್ಮಲ್ಲಿ ಕೃಷಿಯೇ ಮುಖ್ಯವಾದ ವೃತ್ತಿಯಾಗಿರುವುದರಿಂದ ನಮ್ಮ ಭೂಮಿ ಸ್ವಭಾವವಾಗೇ ನಿಸ್ಸಾರವಾಗಿದೆ. ಆದುದರಿಂದ ಕೇವಲ ಒಂದೆರಡು ನೂರು ವರ್ಷಗಳಿಂದೀಚೆಗೆ ಕೃಷಿಯನ್ನು ಮಾಡುತ್ತಿರುವ ಅಮೇರಿಕ ಅಥವಾ ಆಸ್ಟ್ರೇಲಿಯಾದೊಡನೆ ನಮ್ಮ ಭೂಮಿಯನ್ನು ಹೋಲಿಸಬಾರದು. ಈ ವಿಚಾರವಲ್ಲಿ (Agricultural Tribune) ನಲ್ಲಿ ರಿಪೋರ್ಟಿನಲ್ಲಿ ಈ ರೀತಿ ಇದೆ—

'ಬೇಸಾಯ ಮಾಡದೇ ಇರುವ ಹೊಸ ಭೂಮಿಯಲ್ಲಿ ಪೈರುಗಳ ಪೋಷಣ ಶಕ್ತಿ ಬಹಳವಾಗಿರುವುದರಿಂದ ಅವುಗಳಲ್ಲಿ ಸ್ವಲ್ಪವೇ ಪರಿಶ್ರಮದಿಂದ ಹೆಚ್ಚು ಲಾಭ ಉಂಟಾಗುವುದು.

ಕೃಷಿ ಕಾರ್ಯ ಕಸೋಟಿಯು ಉತ್ಪತ್ತಿಯ ಪರಿಣಾಮದಲ್ಲಿ ರೈತನ ವಾಸ್ತವಿಕ ಉತ್ಪತ್ತಿ. ಇದರ ವಿಚಾರವಾಗಿ (Rural India ಗ್ರಾಮೀಣ ಭಾರತ) ಎಂಬ ಪುಸ್ತಕದಲ್ಲಿ ಈ ರೀತಿ ಇದೆ—

'ಒಬ್ಬ ರೈತನು ಪ್ರತಿ ಎಕರೆಗೂ 35 ರೂ. ಖರ್ಚು ಮಾಡಿ 15 ಮಣ ಗೋಧಿಯನ್ನು ಬೆಳೆದು 35 ರೂ. ಗೆ ಮಾರುವನೆಂದಿಟ್ಟುಕೊಳ್ಳಿ. ಅವನು 50 ರೂ. ಖರ್ಚು ಮಾಡಿ 30 ಮಣ ಗೋಧಿಯನ್ನು ಬೆಳೆಯಬಲ್ಲವನಾಗಿ, 70 ರೂ. ಗೆ ಮಾರಿದರೆ, 5 ರೂ. ನಷ್ಟವಾದಂತಾಯಿತು. ಆದುದರಿಂದ ರೈತನಿಗೆ ಬಹಳ ಸ್ವಲ್ಪ ವ್ಯಯದಿಂದ ಹೆಚ್ಚು ಬೆಳೆಯುವಂಥಾ ಸಲಹೆ ಕೊಡಬೇಕು. ಇಂಗ್ಲೆಂಡಿನಲ್ಲಿ 1913ರಲ್ಲಿ 3 ಲಕ್ಷ 9 ಸಾವಿರಕ್ಕಿಂತ ಹೆಚ್ಚು ಎಕರೆ ಭೂಮಿಯಲ್ಲಿ ಗೋಧಿಯನ್ನು ಬೆಳೆದರು. ಆದರೆ 1923ರಲ್ಲಿ 1 ಲಕ್ಷ 79 ಸಾವಿರವಾಯಿತು. ಭಾರತಕ್ಕಿಂತಲೂ ಅಲ್ಲಿ ಸರಾಸರಿ ಉತ್ಪತ್ತಿಯು ಅಧಿಕವೇ ಆಗಿದ್ದರೂ ಅವರಲ್ಲಿ ರೈತನಿಗೆ ಲಾಭ ತೋರದೇ ಹೋದಲ್ಲಿ ಆ ನೆಲವನ್ನು ಜಾನುವಾರುಗಳಿಗೆ ಮೇವಿಗಾಗಿ ಬಿಟ್ಟು ಬಿಡಬೇಕಾಗುವದು. ಅಂಥ ಮೇಲೆ ಇಂಗ್ಲೆಂಡಿನಲ್ಲಿ ಸಫಲವಾಗದೆ ಇರುವ ಯೋಜನೆಯು ಭಾರತದಲ್ಲಿ ಸಫಲವಾಗುವ ಸಂಭವವುಂಟೇ? ಎಂದಿಗೂ ಇಲ್ಲ.

ಆರ್ಥಿಕ ಸಂಘಟನೆ.

ಇವೆಲ್ಲವನ್ನು ವಿಚಾರ ಮಾಡಿದಾಗ ನಮಗೆ ತಿಳಿಯುವುದೇನೆಂದರೆ ಯಾವುದೇ ದೇಶದ ಸಾಧಾರಣ ಜನತೆಯ ಹಿತವು ಅಲ್ಲಿ ನಡೆಯುವ ಯಂತ್ರಗಳ ಕೆಲಸದ ಮೇಲಿಂದ ನಿರ್ಣಯಿಸಲ್ಪಡಬಾರದು. ವಿಚಾರ ಮಾಡಬೇಕಾದುದೇನೆಂದರೆ ಉತ್ಪತ್ತಿ ಮತ್ತು ಬೇಡಿಕೆಗಳಲ್ಲಿ ಸಾಮ್ಯವಿದೆಯೋ ಇಲ್ಲವೋ ಎಂಬುದನ್ನು. ಬೇಡಿಕೆಗಳಿಗಿಂತಲೂ ಉತ್ಪತ್ತಿಯೇ ಅಧಿಕವಾದರೆ ಅಥವಾ ಅಂಥಾ ಕಾರಣಗಳಿಂದ ಖರ್ಚು ಆಗದಷ್ಟು ಸರಕುಗಳ ಉತ್ಪತ್ತಿಯಾದರೆ ಆ ದೇಶದ ಸ್ಥಿತಿಯು ಅಸ್ತವ್ಯಸ್ತವಾಗಿಯೇ ಇರುವುದು. ಈಗಿನ ಕಾಲದಲ್ಲಿ ಪ್ರಾಯಶಃ ಪ್ರತಿಯೊಂದು ದೇಶದಲ್ಲಿಯೂ ಈ ಸ್ಥಿತಿ ಇದ್ದೇ ಇರುವುದು ಅಂದರೆ ಎಲ್ಲಾ ದೇಶಗಳಲ್ಲಿಯೂ ದರಿದ್ರವ್ಯಕ್ತಿಗಳಿಲ್ಲವೆಂದಲ್ಲ. ಇವರ ಅವರ ಜೀವನ ನಿರ್ವಾಹದ ಸಾಮಗ್ರಿಗಳ ಹಂಚಿಕೆಯ ನಿಯಮವು ತೃಪ್ತಿಕರವಾಗಿಲ್ಲವೆಂದೇ ಇದರ ಅರ್ಥ. ವಸ್ತುಗಳನ್ನು ನಷ್ಟ ಮಾಡಿದರೂ ಸಹ ಹಸಿದವರಿಗೆ ಕೊಡುವುದಿಲ್ಲ. ಇದರ ಆಧಾರದ ಮೇಲೆ ನಾವು ಈ ರೀತಿ ಹೇಳಬಹುದು. ಎಲ್ಲಿಯವರೆಗೆ ಸಮಾಜದಲ್ಲಿ ಇಂದಿನ ಆರ್ಥಿಕ ಸಂಘಟನೆಯಲ್ಲಿ ಇಂದಿನ ಆರ್ಥಿಕ ಸಂಘಟನೆಯಲ್ಲಿ ಪರಿವರ್ತನೆಯಾಗುವುದಿಲ್ಲವೋ, ಅಲ್ಲಿಯವರೆಗೆ ದೇಶದಲ್ಲಿ ಉತ್ಪನ್ನವಾಗುವ ಎಲ್ಲಾ ರೀತಿಯ ಸಾಮಗ್ರಿಗಳ ಪೈಕಿ ಎಲ್ಲರಿಗೂ ಅವುಗಳ ನ್ಯಾಯವಾಗಿ ದೊರೆಯಬೇಕಾದಷ್ಟು ದೊರೆಯುವುದಿಲ್ಲವೋ ಅಲ್ಲಿಯವರೆಗೂ ಯಂತ್ರಗಳಿಂದ ಏನೇನೂ ಲಾಭವಾಗುವುದಿಲ್ಲ. ಇದು ಖಂಡಿತವಾದ ಮಾತು.

ಸ್ತ್ರೀ ಸಮಾಜ ಸುಧಾರಣೆ.

ಲೇಖಕಿ:—ಸೊಸೆ.

ಕಳೆದ ವಾರ ವೀರರಾಜೇಂದ್ರಪೇಟೆಯಲ್ಲಿ ಒಂದು ಮಹಿಳಾ ಸಭೆಗೆ ಕಟ್ಟಡ ಕಟ್ಟಿಸಲು ಚಂದಾ ವಸೂಲು ಮಾಡಲು ಕೆಲವು ಸ್ತ್ರೀಯರು ಮನೆ ಮನೆ ಬಂದಿದ್ದರಷ್ಟೆ. ಅವರಲ್ಲಿ ನಮ್ಮತ್ತೆ ಒಬ್ಬರು. ಭಾನುವಾರ. ಸಾಯಂಕಾಲ ಸುಮಾರು ಆರು ಗಂಟೆ. ನಮ್ಮ ಮನೆ ಎದುರಿಗೆ ವೀರರಾಜೇಂದ್ರಪೇಟೆಯಿಂದ ಬಂದ ಬಸ್ಸು ನಿಂತಿತು. ಅತ್ತೆಯಮ್ಮನವರು ಚಂದಾ ಹಣ ವಸೂಲು ಮಾಡಲು ಬರುತ್ತಾರೆಂಬ ಸುದ್ದಿ ನಮಗೆಲ್ಲಾ ತಿಳಿದಿತ್ತು. ಅವರು ತಮ್ಮ ಕಿರಿಯ ಮಗಳನ್ನೂ ತಮ್ಮ ಸಂಗಡ ಕರೆದುಕೊಂಡು ಬಂದಿದ್ದರು. ಅತ್ತೆಯಮ್ಮನವರು ನಮ್ಮ ಜಾತಿಯ ಪದ್ಧತಿಗನುಸಾರವಾಗಿ ನೆರಿಗೆಯನ್ನು ಹಿಂದಕ್ಕಿಟ್ಟು ಬಲಭುಜದ ಪಕ್ಕದಲ್ಲಿ ಸೆರಗಿನ ಗಂಟು ಹಾಕಿ ಸೀರೆಯನ್ನುಟ್ಟಿದ್ದರು. ಎಂದರೆ ನಾವು ಕೊಡವರು. ಅವರ ಮಗಳಿಗೆ ನೆರಿಗೆ ಮುಂದಕ್ಕಿಟ್ಟು ಎಡಭುಜದ ಮೇಲೆ ಸೆರಗಿಟ್ಟು ಕನ್ನಡಿಗರ ಹಾಗೆ ಸೀರೆ ಉಡಿಸಿದ್ದರು. ಇದನ್ನು ಕಂಡೊಡನೆ ನನ್ನ ಮನಸ್ಸಿಗೆ ಅತ್ಯಂತ ನೋವು ಉಂಟಾಯಿತು. ನಮ್ಮ ಕುಟುಂಬದಲ್ಲಿ ಒಬ್ಬರು ಈ ರೀತಿ ಸಮಾಜದ ತತ್ವಕ್ಕೆ ವಿರೋಧವಾಗಿ ಹೋಗುವುದೆಂದರೆ ಏನು ನಾಚಿಕೆ ಕೇಡು. ಅದರಲ್ಲೂ ಕೊಡಗಿನಲ್ಲಿ ಸ್ತ್ರೀಸಮಾಜವನ್ನು ಸ್ಥಾಪಿಸುವವರಲ್ಲಿ ಮುಂದಾಳಾದ ನಮ್ಮತ್ತೆಯು ಹೀಗೆ ಉಳಿದವರಿಗೆ ದಾರಿ ತೋರಿಸಿದರೆ ನಾಳೆ ನಮ್ಮ ಸ್ತ್ರೀಯರ ಸ್ಥಿತಿಗತಿ ಏನಾಗಬೇಕು? ಕಾವೇರಿ ಮಾತೆಯ ಅನುಗ್ರಹದಿಂದಲ್ಲವೇ ನಮ್ಮ ಕೊಡವ ಸ್ತ್ರೀಯರಿಗೆ ಇಂಥಾ ಯೋಗ್ಯವಾದ ಉಡುವನ್ನು ಧರಿಸುವ ಪುಣ್ಯವು ಲಭಿಸಿದುದು? ಇಡೀ ಹಿಂದೂಸ್ಥಾನದಲ್ಲೆಲ್ಲಾ ಕೊಡವ ಸ್ತ್ರೀಯರ ಉಡುಪಿನ ಲಾವಣ್ಯವನ್ನು ಪ್ರತಿಯೊಂದು ಜನಾಂಗವೂ ಮೆಚ್ಚುವುದು. ಹೀಗಿರುವಲ್ಲಿ ನಮ್ಮ ಜಾತಿಯ ಪದ್ಧತಿಯ ಉಡುವನ್ನು ಬದಲಾಯಿಸುವುದು ಘೋರ ತಪ್ಪು. ಇದು ಸಾಮಾಜಿಕ ಚರ್ಚೆಗೆ ನಮ್ಮಂಥವರು ಪಟ್ಟ ವಿಷಯವು. ಈ ಹೊತ್ತು ಉಡುಪು ಬದಲಾಯಿಸಲು ಹಿಂಜರಿಯದ ಮಗುವು ನಾಳೆ ಜಾತಿಯನ್ನೇ ತ್ಯಜಿಸುವಳು. ಈ ಹೊತ್ತಿನ ಹೆಣ್ಣು ಮಗು ನಾಳೆಯ ಮಹಿಳೆ. ಆದ ಪ್ರಯುಕ್ತ ಕೊಡಗು ಸ್ತ್ರೀಸಮಾಜ ಸುಧಾರಣೆಗೆಂದು ಕಂಕಣಬದ್ಧರಾಗಿ ಹೊರಟಿರುವ ನಮ್ಮತ್ತೆಯವರು ಈ ರೀತಿಯ ಮಾದರಿಯನ್ನು ಪ್ರಾರಂಭದಲ್ಲೇ ನಮ್ಮ ಸ್ತ್ರೀಸಮಾಜಕ್ಕೆ ತೋರಿಸಿದರೆ ನಮ್ಮ ಸಮಾಜದ ಉದ್ಧಾರವು ಹೇಗಾದೀತೋ ಎಂಬುದು ಮನಸಿಗೆ ಸ್ವಲ್ಪ ತೊಂದರೆ ಕೊಡುವ ವಿಚಾರ. ಅತ್ತೆಯಮ್ಮನವರು ನನ್ನ ಅನೇಕ ತಪ್ಪುಗಳನ್ನು ನಿತ್ಯವೂ ತಿದ್ದುವರು. (ದೇವರು ಅವರನ್ನು ಆಶೀರ್ವದಿಸಲಿ) ಆದರೆ ನಾನು ಅವರಲ್ಲಿ ಕಂಡ ಈ ತಪ್ಪನ್ನು ತಿದ್ದುವವರ್ಯಾರು? ಮುಂದಾಳಾಗಿ ಹೊರಟವರಲ್ಲಿಯೇ ಈ ನ್ಯೂನತೆಯಿದ್ದರೆ ಅದನ್ನು ಸರಿಪಡಿಸುವರ್ಯಾರು? ಇದು ಅತ್ತೆಯವರ ವಿಚಾರ. ಇನ್ನು ಸಮಾಜದ ವಿಚಾರವೆಂದರೆ, ನಮ್ಮ ಅತ್ತೆಯವರು ಬಂದ ದಿನವೇ ನಮ್ಮ ಸೋದರಮಾವನವರು ಮನೆಗೆ ಬಂದಿದ್ದರು. ನಮ್ಮ ಮಾವಯ್ಯನೆಂದರೆ ನಮಗೆ ಹೆಮ್ಮೆ. ಯಂ. ಎಲ್. ಸಿ. ಕಾಂಗ್ರೆಸ್ ಮುಂದಾಳು. ಮಾವಯ್ಯನವರಿಗೆ ಪಟ್ಟಣದಲ್ಲಿ ಸ್ತ್ರೀಸಮಾಜ ಸ್ಥಾಪಿಸುವುದು ಸಮ್ಮತವಿಲ್ಲ. ಅದಕ್ಕಿಂತಲೂ ಹಳ್ಳಿಯ ನಿರ್ಮಾಣದ (Rural Reconstruction) ವಿಷಯ ಯೋಚಿಸಿರಿ ಅನ್ನುವರು. ಕೂಲಂಕುಶವಾಗಿ ವಿಚಾರಿಸಿದರೆ ಕೊಡವ ಸ್ತ್ರೀಯರಿಗೆ ಸಮಾಜದ ಅಗತ್ಯವಿಲ್ಲ. ನಮ್ಮ ಕೊಡವ ಸ್ತ್ರೀಯರಿಗೆ ಹಿಂದೂ ಸ್ತ್ರೀಯರ ಪೈಕಿ ಎಲ್ಲರಗಿಂತಲೂ ಸ್ವಾತಂತ್ರ್ಯವಿದೆ. ಅವಳ ಜೀವಮಾನವು ಬಹು ಉನ್ನತವಾದುದು. ಅವಳು ಇತರರ ಸುಖಕ್ಕಾಗಿ ದುಡಿಯುವಳು. ಇತರರ ಕ್ಷೇಮಕೋಸ್ಕರ ಕಷ್ಟಪಡುವಳು. ಅವಳ ಇಡೀ ಜೀವಮಾನದಲ್ಲಿ ಸ್ವಾರ್ಥಬುದ್ಧಿಯೇ ಕಂಡು ಬರುವುದಿಲ್ಲ. ಅವಳು ಅತ್ತೆಯ ಮನಸ್ಸಿನ ಇಚ್ಛಾನುಸಾರವಾಗಿ ನಡೆಯುವಳು. ಪತಿಗೆ ವಿರೋಧವಾಗಿ ಹೋಗಲಾರಳು. ಯಾವ ಹೊತ್ತಿನಲ್ಲೇ ಆಗಲಿ ನಾನಾ ಕಡೆಯಿಂದ ಬಂದ ಬಂಧುಬಳಗದವರನ್ನು ವಿನಯದಿಂದಲೂ ಪ್ರೀತಿಯಿಂದಲೂ ಸತ್ಕರಿಸುವಳು. ಹೀಗಿರುವಾಗ ಅವಳಿಗೆ ಸಮಾಜವೇಕೆ, ಸಂಘವೇಕೆ, ಕೂಟವೇಕೆ? ಇದೆಲ್ಲಾ ನಮ್ಮ ಮಾವಯ್ಯನವರ ವಾದಗಳು. ಇದರಲ್ಲಿ ನಿಜಾಂಶವೂ ಇರುವದು. ಆದರೆ ಮಾವಯ್ಯನವರೇ, ಮಕ್ಕಳಿಗೆ ಆಟವು ಬಹು ಪ್ರೀತಿಯಲ್ಲವೇ? ಅವರಿಗೆ ಬೇಕಾದ ಆಟದ ಸಾಮಾನು ಆಡಲಿಕ್ಕೆ ಯೋಗ್ಯವಾದ ಸ್ಥಳ, ಇವೆಲ್ಲವನ್ನು ಏರ್ಪಡಿಸುವುದು ಅವರ ಮಾತಾಪಿತೃಗಳ ಕರ್ತವ್ಯವಲ್ಲವೇ? ಇಲ್ಲದಿದ್ದರೆ ಅವರು ಬೀದಿಯಲ್ಲಿ ತಿರುಗಿ ದುರ್ಮಾರ್ಗವನ್ನು ಹಿಡಿಯುವುದು ಸ್ವಾಭಾವಿಕವಲ್ಲವೇ? ಅದೇ ರೀತಿ ಮನೆ ಕೆಲಸದಿಂದ ಬೇಸತ್ತ ಹೃದಯವನ್ನು ವಿನೋದ ಸಂತೋಷಗೊಳಿಸಿಕೊಳ್ಳಲು ಒಂದು ಸಮಾಜ ಬೇಕೆಂದು ನಮ್ಮ ಸಹೋದರಿಯರು ಹಂಬಲಿಸುತ್ತಿರುವಾಗ ಅದಕ್ಕೆ ನೀತಿ ಮಾರ್ಗದ ದಾರಿ ತೋರಿಸುವುದು ನಮ್ಮ ದೇಶದ ಪುರುಷರ ಕರ್ತವ್ಯವಲ್ಲವೇ? ಹಿಂದೂ ಸ್ತ್ರೀಯರು ಬಾಲ್ಯದಲ್ಲಿ ಮಾತಾಪಿತೃಗಳಿಂದಲೂ, ಯೌವನದಲ್ಲಿ ಪತಿಯಿಂದಲೂ ಮತ್ತು ವೃದ್ಧಾಪ್ಯದಲ್ಲಿ ಮಗನಿಂದಲೂ ಸಂರಕ್ಷಿಸಬೇಕಾದದ್ದು. ಆದ್ದರಿಂದ ಮಾವಯ್ಯನವರೆ, ನೀವು ನಮ್ಮ ಸ್ತ್ರೀಸಮಾಜದ ಕೋರಿಕೆಯನ್ನು ಮುರಿದೊತ್ತದೆ, ಕಾಲದ ಕರೆಗೆ ಸರಿಯಾಗಿ ಮುಂಬರಲು ಹೊರಟಿರುವ ಸ್ತ್ರೀಸಮಾಜಕ್ಕೆ ಪ್ರೋತ್ಸಾಹವನ್ನೀಯಬೇಕಾಗಿ ನನ್ನ ವಿನಂತಿ. ಮಾನವನ ಜೀವನದಲ್ಲಿ ಸ್ತ್ರೀಯೇ ಆತನ ಜೀವಾಳ. ಸ್ತ್ರೀಯು ಸುಶಿಕ್ಷಿತೆಯಾದರೆ ಸಂಸಾರ ಜೀವನವು ಸುಸೂತ್ರವಾಗಿ ನೆರವೇರುವದು. ಆದ ಪ್ರಯುಕ್ತ ಪ್ರತಿಯೊಬ್ಬನೂ, ಸ್ತ್ರೀಸಮಾಜದ ಏಳ್ಗೆಯನ್ನು ಬಯಸುವದು ದೇಶದ ಕಲ್ಯಾಣವನ್ನು ನೆನಸಿದಂತೆ ಅಲ್ಲವೇ? ಸ್ತ್ರೀಸಮಾಜದ ಮುಂದಾಳುಗಳಲ್ಲಿ ನನ್ನದೊಂದು ಮಾತು. ಸ್ತ್ರೀಸಮಾಜ ಸುಧಾರಣೆಯ ನಿಮ್ಮ ಕಾರ್ಯವು ಪೌಡರು, ಕ್ರೀಮ್‌ಗಳನ್ನು ಹೆಚ್ಚಿಸುವ, ಉಡಿಗೆ ತೊಡಿಗೆಗಳ ಅಲಂಕಾರ ಹೆಚ್ಚಿಸುವ ಈ ಕಾರ್ಯಗಳಲ್ಲಿ ಮುಳುಗಿ ಹೋಗದಂತೆ ಎಚ್ಚರಿಕೆಯಿಂದಿರಿ. ಮದ್ರಾಸಿನಂಥಾ ಬಿಸಿ ಪ್ರಾಂತ್ಯಗಳಲ್ಲಾದರೆ ಪೌಡರ್ ಆವಶ್ಯವೆಂದು ನಾನು ಒಪ್ಪುತ್ತೇನೆ. ಬೆವರಿನಿಂದ ನಾನಾ ತರದ ತುರಿಗಳು ಶರೀರದಲ್ಲುಂಟಾಗುವುದು. ಆದರೆ ಕೊಡಗಿನಂಥಾ ಶೀತ ಪ್ರದೇಶದಲ್ಲಿ ಹುಟ್ಟಿ ಬೆಳೆದವರಿಗೆ? ಹಾ! ಇದೀಗ ಕಲಿಯುಗದ ಮಹಿಮೆ! ಆದ್ದರಿಂದ ಈ ಸ್ತ್ರೀಸಮಾಜವು ಕಲಿಯುಗದ ಸ್ತ್ರೀಸಮಾಜವಾಗಬಾರದಾಗಿ ನನ್ನ ಆಶಯ.

ಇನ್ನು ಕಡೇಯ ಒಂದೇ ಮಾತು. ಅತ್ತೆಯಮ್ಮನವರನ್ನು ಸಮಾಜದ ಉದ್ದೇಶ್ಯವೇನೆಂದು ಕೇಳುವದರಲ್ಲಿ 'ಮಾನಸಿಕ, ಭೌತಿಕ, ಸಾಮಾಜಿಕ ಕರ್ತವ್ಯಗಳ ಸುಧಾ

ಯುದ್ಧ ವಾರ್ತೆ.

ರಷ್ಯಾ ಫಿನ್‌ಲೆಂಡ್ ಯುದ್ಧ.

ಕೋವಿಸ್ಟೋ ದ್ವೀಪದಲ್ಲಿದ್ದು ಶತ್ರುಗಳನ್ನೆದುರಿಸುತ್ತಿದ್ದ ಫಿನ್ನಿಷ್ ಸೇನೆಗಳು ಅಲ್ಲಿಂದ ಕಾಲ್ತೆಗೆದಿವೆ ಎಂಬುದಾಗಿ ಫಿನ್ಲೆಂಡಿನ ಪ್ರಕಟಣೆಯೊಂದು ತಿಳಿಸುತ್ತದೆ. ಈ ದ್ವೀಪಗಳಿಂದಲೇ ಫಿನ್ನಿಷ್ ಬ್ಯಾಟರಿಗಳು ಕಾರೇಲಿಯಾ ಭೂಶಿರ ಪ್ರಾಂತದಲ್ಲಿರುವ ರಷ್ಯನ್ ಸೈನ್ಯಗಳ ಮೇಲೆ ಫಿರಂಗಿಗಳನ್ನು ಉಡಾಯಿಸುತ್ತಿದ್ದರು.

ಸಾಲ್ಮೆಂನ್ನ [illegible] ದಿನದಲ್ಲಿ [illegible] ಲಿ ರಷ್ಯನ್ [illegible] ಅವರನ್ನು ಹಿಮ್ಮೆಟ್ಟಿ [illegible].

ಕಾರೇಲಿಯಾ [illegible] ಪ್ರ [illegible] ಟ [illegible] ತ [illegible] ಕಾರೇಲಿ [illegible] ಗಾಬಂದಾ [illegible] ಚಟುವಟಿಕೆಗಳಲ್ಲದೆ ಇಂದು ಇನ್ನೇನೂ ವರ್ತಮಾನವಿಲ್ಲ.

ಇಂದು ರಷ್ಯಾ [illegible] ಪ್ರತ್ಯೇಕ ಪ್ರತ್ಯೇಕವಾದ ಅನೇಕ ರಷ್ಯ [illegible] ಯಿತು.

[illegible]

[illegible] ರಷ್ಯನ್ನರು [illegible] ವೀಪ್ರರಿ ನಗರ [illegible] ಮೇಲೆ [illegible]

[illegible] ಸ್ಥಳಗಳ ಮೇಲೆ ರಷ್ಯನ್ [illegible] ಒಂದಾದ ಮೇಲೊಂದರಂತೆ [illegible] ಮುತ್ತಿಗೆಗಳನ್ನು ನಡೆಸುತ್ತಿದ್ದಾರೆ.

ಆದರೆ ಕಷ್ಟ ಸಿಬ್ಬಂದಿಯನ್ನು ಸಕಾಲದಲ್ಲಿ ಸಹಾಯಕ್ಕಿರುವ ಫಿನ್ನರು ಈ ಆಕ್ರಮಣಗಳನ್ನೆಲ್ಲಾ ತಡೆದು ನಿಲ್ಲಿಸುತ್ತಿದ್ದಾರೆ.

ಸೌಮುಸಾಲ್ಮಿ ರಣಾಂಗಣದಲ್ಲಿ ಫಿನ್ನರಿಗೆ ಭಾರಿ ವಿಜಯ ದೊರೆತುದರಿಂದ ಅಲ್ಲಿಂದ ಫಿನ್ನಿಷ್ ಸೇನೆ ದಕ್ಷಿಣಕ್ಕೆ ಬರಲು ಅವಕಾಶವಾಗಿದೆ.

ಕೋವಿಸ್ಟೋ ಪತನದಿಂದ ಫಿನ್ನರಿಗೆ ಕೈ ಮುರಿದಂತಾಗಿದೆ.

ಅಲ್ಲಿ ಫಿರಂಗಿಗಳನ್ನಿಟ್ಟುಕೊಂಡು ಫಿನ್ನರು ರಷ್ಯನ್ ಸೇನೆಗಳ ಮೇಲೆ ಅವುಗಳನ್ನು ಡಾಯಿಸುತ್ತಾ ಶತ್ರುವಿಗೆ ವಿಪರೀತ ನಷ್ಟಗಳನ್ನುಂಟುಮಾಡಿದುವರು. ವ್ಯೂಸರ್ಲಿಂಕೋಟೆಯ ಪಾರ್ಶ್ವವೊಂದನ್ನು ರಕ್ಷಿಸಿಕೊಂಡಿದ್ದಾರೆ.

ಫಿನ್ನರು ಈ ಪ್ರಾಂತದಲ್ಲಿ ಪ್ರದರ್ಶಿಸುತ್ತಿದ್ದ ಸಾಹಸದಿಂದಲೂ, ಅವರ ಸ್ಥಾನಬಲದಿಂದಲೂ ಸೋವಿಯಟ್ ನೌಕಾಪಡೆಯು ಹತ್ತಿರ ಬರಲು ಅವಕಾಶವಾಗುತ್ತಿರಲಿಲ್ಲ.

7 ರಷ್ಯನ್ ವಿಮಾನಗಳ ನಾಶ

ಹ್ಯಾಂಗೋವಿನ ಮೇಲೆ ಕೆಲವು ಬಾಂಬುಗಳು ಬಿದ್ದವೆ. ಯುದ್ಧ ಕ್ಷೇತ್ರದಲ್ಲಿ ವಿಮಾನ ಚಟುವಟಿಕೆ ಜೋರಾಗಿದೆ ಎಂದು ಫಿನ್ನಿಷ್ ಪ್ರಕಟಣೆ.

5 ಶತ್ರು ವಿಮಾನಗಳನ್ನು ಹೊಡೆದು ಕೆಡವಲಾಯಿತೆಂದು ಅಧಿಕಾರಯುಕವಾದ ಸುದ್ದಿ ಬಂದಿದೆ. ಇನ್ನೆರಡು ವಿಮಾನಗಳನ್ನೂ ಹೊಡೆದುರುಳಿಸಲಾಯಿತೆಂದು ಅಧಿಕಾರಿಯುಕವಾಗಿ ಸುದ್ದಿ ಬಂದಿದೆ.

28 ಕೋಟಿಗಳ ಆಕ್ರಮಣ?

ರಷ್ಯನ್ ಸೇನೆಗಳು ಫಿನ್ನರ ರಕ್ಷಣಾ ಸ ಘಟನೆಯನ್ನು ಭೇಧಿಸಿ 28 ಕೋಟಿ ಕೊತ್ತಲಗಳನ್ನು ವಶಪಡಿಸಿಕೊಂಡರೆಂದು ಮಾಸ್ಕೋ ಪ್ರಕಟನೆಯೊಂದು ತಿಳಿಸುತ್ತದೆ.

ಪಶ್ಚಿಮ ರಣರಂಗ.

ಜರ್ಮನಿ ಫ್ರಾನ್ಸ್-ಬ್ರಿಟನ್ ಯುದ್ಧ.

ಡೆನ್ಮಾರ್ಕಿನ ಗಡಿಯಲ್ಲಿ ಜರ್ಮನಿಯು ನೆಲಗೋಡೆಯನ್ನು ತಯಾರು ಮಾಡುತ್ತಿದೆ. ಡೆನ್ಮಾರ್ಕಿನ ದಕ್ಷಿಣ ಗಡಿಯಲ್ಲಿ ಜರ್ಮನ್ ಸರಹದ್ದಿಗೆ ಸ್ವಲ್ಪ ದೂರದಲ್ಲಿ ಜರ್ಮನಿಯು ಈ ರಕ್ಷಣಾ ಉಪಾಯವನ್ನು ಕೈಕೊಂಡಿದೆ. ಹೊಸ ರಕ್ಷಣಾ ಕ್ಷೇತ್ರಗಳಲ್ಲಿ ತಮ್ಮ ಸೈನ್ಯ ಸಂಗ್ರಹವನ್ನು ಜರ್ಮನರು ಮಾಡುತ್ತಿರುವರು.

ಪೆಟ್ಸಾಮೊ ಮತ್ತು ನಾರ್ವೇ ಪ್ರದೇಶಗಳಲ್ಲಿ ಹಲವು ಜರ್ಮನ್ ಸಬ್‌ಮೆರೀನುಗಳೂ, ಸಾಗರನೌಕೆಗಳೂ ಇರುವವು. ಬ್ರಿಟಿಷ್ ಯುದ್ಧ ನೌಕೆಗಳಾದರೂ ಪೆಟ್ಸಾಮೊ ಬಂದರದ ಒಳಗೆ ಕಾದಿರುವವು. ಧೃವ ಸಾಗರದಲ್ಲಿ ಮಂಜುಗಡ್ಡೆ ಕಟ್ಟಿಕೊಂಡಿರುವದರಿಂದ ಜಹಜುಗಳ ಓಡಾಟಕ್ಕೆ ತೊಂದರೆಯಾಗಿದೆ. ಆದ್ದರಿಂದ ಈಗ ಜರ್ಮನ್ ಜಹಜುಗಳು ಉತ್ತರಕ್ಕೆ ತಲೆ ತಪ್ಪಿಸಿಕೊಂಡು ಹೋಗುವದು ತುಂಬ ಕಷ್ಟವಾಗಿದೆ. 'ಲೋಕಸುದಿ' ಎಂಬ ಬ್ರಿಟಿಷರ ಜಹಜೊಂದು ಉತ್ತರ ಅಟ್ಲಾಂಟಿಕ್ ಸಾಗರದಲ್ಲಿ ಟಾರ್ಪಿಡೊ ಹೊಡಲ್ಪಟ್ಟು ಮುಳುಗಿಸಲ್ಪಟ್ಟಿತು. ನಾಲ್ಕು ಜನರು ನೀರಿನ ಪಾಲಾದರು. ಬಾಕಿಯವರನ್ನು ರಕ್ಷಿಸಲಾಯಿತು.

ಹರ್ಬರ್ಟ್ ಶ್ಯೂಲ್ಟ್ಸ ಎಂಬವನ ಆಧೀನದಲ್ಲಿದ್ದ ಜರ್ಮನ್ ಸಬ್‌ಮೆರೀನ್ ಒಂದು ಈ ವರೆಗೆ 16 ಜಹಜುಗಳನ್ನು ಮುಳುಗಿಸಿ ತನ್ನ ಪ್ರಯಾಣದಿಂದ ಹಿಂತಿರುಗಿ ಬಂದಿದೆಯೆಂದು ಜರ್ಮನರು ಪ್ರಕಟಿಸಿದ್ದಾರೆ.

ಫೆಬ್ರವರಿ ತಾ. 25ರ ವರೆಗೆ ಒಟ್ಟು 496 ಶತ್ರು ಮತ್ತು ತಟಸ್ಥ ರಾಷ್ಟ್ರಗಳ ಜಹಜುಗಳನ್ನು ಮುಳುಗಿಸಲಾಯಿತೆಂದೂ, ತಾರೀಕು 20ರ ವರೆಗೆ 308 ಜಹಜುಗಳನ್ನು ಮುಳುಗಿಸಲಾಗಿತ್ತೆಂದೂ ಅದರಲ್ಲಿ 155 ಬ್ರಿಟಿಷರವು, 139 ತಟಸ್ಥ ರಾಷ್ಟ್ರಗಳವು ಮತ್ತು 14 ಫ್ರೆಂಚರವು ಎಂದೂ ನಂತರ ಐದು ದಿವಸಗಳಲ್ಲಿ ಬಾಕಿ 188 ಹಡಗುಗಳನ್ನು ಮುಳುಗಿಸಲಾಯಿತೆಂದೂ ಜರ್ಮನರು ಹೇಳಿದರು.

ಸಿಲ್ಟ್ ದ್ವೀಪದ ಪ್ರದೇಶದಲ್ಲಿ ವಿಮಾನ ಯುದ್ಧವು ನಡೆಯುತ್ತಿದೆ. ವಿಶೇಷ ಚಟುವಟಿಕೆಯೇನೂ ಅಲ್ಲಿ ಕೇಳು ಬರುವದಿಲ್ಲ.

ಶ್ರೀ ಪರಮಹಂಸ ಸಚ್ಚಿದಾನಂದ ಯೋಗೀಶ್ವರರು.



ಈ ಯೋಗಿವರ್ಯರು ನಮ್ಮ ಕೊಡಗು ನಾಡಿಗೆ ಆಗಾಗ್ಗೆ ಭೇಟಿ ಕೊಡುತ್ತಿರುವದು ನಮ್ಮ ಪೂರ್ವ ಕರ್ಮ ಫಲವಾಗಿದೆ. ಕಳೆದ ವರ್ಷಾಪ್ರಥಮತಃ ಇವರು ಕೊಡಗಿಗೆ ಬಂದು ತಮ್ಮ ವಿಚಾರಪರಿಪ್ಲುತ ಭಾಷಣಗಳಿಂದಲೂ, ಮನೋಹ್ಲಾದಕರ ಹಾಸ್ಯ ಪ್ರವಚನಗಳಿಂದಲೂ, ಮೇಲಾಗಿ ಆಶ್ಚರ್ಯಕರವಾದ ತಮ್ಮ ಜಲಸ್ತಂಭ ವಿದ್ಯೆಯಿಂದಲೂ ಇಲ್ಲಿಯ ಜನರ ಮನವನ್ನಾಕರ್ಷಿಸಿರುವರು. ನೀರಿನಲ್ಲಿ ತೇಲಿಕೊಂಡು ಇವರು ಮಾಡುವ ಭಾಷಣ, ಪ್ರಾರ್ಥನೆ ಇವುಗಳು ನಿಜವಾಗಿಯೂ ಪ್ರೇಕ್ಷಣೀಯವಿದೆ. ಅವರು ಈ ವರ್ಷ ನಮ್ಮ ಪುಣ್ಯದಿಂದಲೋ ಎಂಬಂತೆ ಪುನಹ ಇಲ್ಲಿಗೆ ಬಂದಿರುವರು. ಜಿಲ್ಲೆಯೊಂದೆಡೆ ಕೊಟ್ಟಿರುವ ತಿಥಿಗಳಲ್ಲಿ ಅವರು ತಮ್ಮ ಪ್ರವಾಸ ಕಾರ್ಯಕ್ರಮವನ್ನು ಮಾಡಿರುವರು. ಯೋಗೀಶ್ವರರು ತಮ್ಮ ಉದಾರ ಹೃದಯ ವಿಕಾಸದಿಂದ ಇಡೀ ಜನತೆಯನ್ನೆ ಸನ್ಮಾರ್ಗದಲ್ಲಿ ಹಚ್ಚುವ ಈ ಕಾರ್ಯವನ್ನು ಕೈಗೊಂಡಿರುವದು ಶ್ಲಾಘನೀಯ. ಜನತೆಯೂ ದಾ ಸಾವಿನ ಸೇತುವೆ ದಾಟಿ ಸ್ವರ್ಗದ ಮಾರ್ಗವನ್ನು ಹಿಡಿಯಲನುಕೂಲವಾದ ಈ ಸಂದರ್ಭವನ್ನು ಕಳೆದುಕೊಳ್ಳಬಾರದಾಗಿ ನಮ್ಮ ಆಶಯ.

ಈ ಯೋಗೀಶ್ವರರು ದ್ರಾವಿಡ ದೇಶಸ್ಥರಾಗಿ, ಐಹಿಕ ಸುಖಭೋಗಗಳನ್ನೆಲ್ಲಾ ಅನುಭವಿಸಿ ಕೇವಲ ಪ್ರಾಪಂಚಿಕ ವ್ಯವಹಾರದಲ್ಲಿ ತನ್ನ ಹರೆಯವನ್ನು ಕಳೆದರೂ ಸಹ ಬಾಲ್ಯದಿಂದಲೇ ತಮ್ಮ ಹೃದಯದ ಅಂತರಾಳದಲ್ಲಿ 'ಹುದುಗಿದ್ದ ದೈವೀ ಭಕ್ತಿಯನ್ನು ಈ ಸಂಸಾರದ ಆಗುಹೋಗುಗಳ, ಕಷ್ಟ ಸುಖಗಳ ಪರಂಪರೆಯಲ್ಲಿ ಹೆಚ್ಚಿಸಿಕೊಂಡು ಕ್ರಮೇಣ ಜಗದ್ವಂದ್ಯ ಯೋಗೀಶ್ವರರ ಪಟ್ಟಕ್ಕೇರಿರುವರು. ಸಂಸಾರ ಬಂಧನದಲ್ಲಿದ್ದರೂ ಪಾರಮಾರ್ಥಿಕ ಜೀವನವನ್ನು ನಡೆಸಬಹುದೆಂದು ತಮ್ಮ ಉದಾಹರಣೆಯಿಂದಲೇ ಜನತೆಗೆ ವ್ಯಕ್ತಪಡಿಸಿರುವರು. ತಮ್ಮ ಅನುಭವಗಳ, ಹಾಗೂ ಯೋಗಾಭ್ಯಾಸಗಳ ವಿಚಾರ ಇವರು ಅಮೂಲ್ಯ ಗ್ರಂಥಗಳನ್ನು ಬರೆದು ಅನೇಕ ಸಾವಿರ ಜನರ ಉದ್ಧಾರಕ್ಕೆ ಕಾರಣೀಭೂತರಾಗಿರುವರು. ಯೋಗೀಶ್ವರರು ಚಿರಾಯುವಾಗಿ ತಮ್ಮ ಅವಿಚಲ ಶ್ರದ್ಧೆಯಿಂದ ದೇಶದ ಕಲ್ಯಾಣವನ್ನು ಸಾಧಿಸಲೆಂದು ಜಗನ್ನಿಯಾಮಕನಲ್ಲಿ ಪ್ರಾರ್ಥಿಸುತ್ತೇವೆ.

ರಿಸುವಿಕೆ' ಅಂದರು. ಭೌತಿಕ ಸೌಕ್ಯಸಿದ್ಧಿಲ್ಲಿ ಏನಿಟ್ಟಿದ್ದೀರಿ ಎಂದು ಕೇಳುವಾಗ್ಗೆ 'ಬ್ಯಾಡ್‌ಮಿಂಟನ್ ಅಗತ್ಯವಾಗಿ ಇಡಬೇಕೆಂದಿದ್ದೇವೆ' ಎಂದರು. ಇದರಿಂದ ತಟ್ಟನೆ ನನ್ನ ಮನಸ್ಸಿನಲ್ಲಿ 'ಅದಕ್ಕಿಂತ ಉತ್ತಮವಾದ ವ್ಯಾಯಾಮ ಮನೆಯಲ್ಲಿಲ್ಲವೇನು? ಎಂಬ ಪ್ರಶ್ನೆಯು ತೋರಿಯಿತು. ಆದ್ದರಿಂದ ನಮ್ಮ ಸಮಾಜ ಸುಧಾರಕರಿಗೆ ನನ್ನದೊಂದು ಸೂಚನೆ ಏನೆಂದರೆ–ಸಮಾಜದ ಕಟ್ಟಡವಾದ ನಂತರ ಎಸೆದು ಬೀಸುವ ಕಲ್ಲು ಪಕ್ಕದಲ್ಲಿ ಇಟ್ಟು ಬಿಡಿ, ನೆರೆಮನೆ ಬೊಳ್ಳಮ್ಮನವರಿಗೆ ಈ ವಾರ ಮಲೇರಿಯ ಜ್ವರ. ಮನೆಯಲ್ಲಿ ಅಕ್ಕಿ ಹುಡಿ ಇಲ್ಲ. ಬೀಸಲು ತ್ರಾಣವಿಲ್ಲ. ಆವಳ ಅಕ್ಕಿ ತಂದು ಸಮಾಜದವರು ಕೈಯಲ್ಲಿ ಕೂಡುವಷ್ಟು ಬೀಸಿ ಅಕ್ಕಿ ಹುಡಿ ಕಳುಹಿಸಿಬಿಡಿರಿ. ಪರರಿಗೆ ಕಷ್ಟ ಬಂದಾಗ ಸಹಾಯಮಾಡುವುದಕ್ಕಿಂತಲೂ ಉತ್ತಮವಾದುದು ಬೇರೆ ಯಾವುದಿದೆ. ಎಷ್ಟು ಕಷ್ಟಗಳನ್ನು ನಿವಾರಣೆಮಾಡಿದೆವೋ ಅಷ್ಟು ಸಂತೋಷವೇ ಸರಿ. ಹೀಗೆ ಎಷ್ಟೋ ಸ್ತ್ರೀಯರಿಗೆ ಎಷ್ಟೋ ತೊಂದರೆ ಇರಬಹುದು. ಅದನ್ನು ನಿವಾರಣೆ ಮಾಡುವುದು ಸಮಾಜದ ಕರ್ತವ್ಯವೆಂದು ಇಟ್ಟುಕೊಳ್ಳಿರಿ. ಬರುವ ವಾರ ಅಚೆ ಮನೆ ಮುತ್ತಮ್ಮನವರ ಹಿರೀ ಮಗಳ ಮದುವೆ. ಮುತ್ತಮ್ಮನವರು ವಿಧವೆ. ಮೂರು ಹೆಣ್ಣು ಮಕ್ಕಳ ಮಾತ್ರ. ಸ್ವಲ್ಪ ಹಣದ ತಾಪತ್ರೆ. ಇಂಥಾ ಸಂದರ್ಭ ಬಂದಾಗ ಲಗ್ನ ಮಾಡಲಿಕ್ಕೆ ಸಮಾಜದ ಕಟ್ಟಡವನ್ನು ಬಾಡಿಗೆ ಇಲ್ಲದೆ ಕೊಡುವದು; ಹೊಲಿಯುವ ಯಂತ್ರ ಇರುವ ಕೆಲವು ಸ್ತ್ರೀಯರು ಪೆಟ್ಟಿಗೆಗೆ ಹಾಕಲಿಕ್ಕಿರುವ ಹಲವು ಬಟ್ಟೆಗಳನ್ನು ಹೊಲಿಯುವ ಜವಾಬ್ದಾರಿಕೆಯನ್ನು ತೆಗೆದುಕೊಳ್ಳುವದು, ಈ ರೀತಿ ಕಾರ್ಯಮಾಡಬೇಕು. ಇವಲ್ಲವೇ ಸಮಾಜಸುಧಾರಣೆ? ನನ್ನ ಸೂಚನೆಗಳನ್ನು ಬರೇ ಸೂಚನೆಗಳನ್ನಾಗಿಯೇ ಉಳಿಯಗೊಡಬಾರದಾಗಿ ನಮ್ಮ ಸಮಾಜ ಜೀವಧಾತ್ರುಗಳಲ್ಲಿ ನನ್ನ ಕೇಳಿಕೆ.

ಅಂತೂ ಒಟ್ಟಾಗಿ ನಮ್ಮ ಈ ಸಮಾಜವು ತನ್ನ ಮುಂದಿನ ಜನಾಂಗವನ್ನು ಉನ್ನತಸ್ಥಿತಿಗೆ ತಂದು ದೇಶದ ಘನೋಭಿವೃದ್ಧಿಗೆ ಮಾರ್ಗದರ್ಶಿಯಾಗಲೆಂದೇ ನನ್ನ ಹಾರೈಕೆ.

ಕೊಡಗು

ಮಾರ್ಚಿ ತಾರೀಕು ೧ ನೇ ಶುಕ್ರವಾರ ೧೯೪೦.

ಇಂಡಿಯಾವೂ, ಬ್ರಿಟನೂ.

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಗುರಿಯನ್ನು ಮತ್ತು ಯುದ್ಧದ ಆಗುಹೋಗುಗಳನ್ನು ಕುರಿತು ಬ್ರಿಟನಿನ ಪ್ರಧಾನ ಮಂತ್ರಿಯಾದ ಮಿ. ಚೇಂಬರ್ಲೇನರವರೂ, ಜರ್ಮನಿಯ ಸರ್ವಾಧಿಕಾರಿ ಹರ್ ಹಿಟ್ಲರನೂ ಆಗಿಂದಾಗ್ಗೆ ಪ್ರಾಮುಖ್ಯ ಭಾಷಣಗಳನ್ನು ಮಾಡುತ್ತಿರುವರು. ಇಂಥ ಭಾಷಣಗಳಲ್ಲಿ ಮೊನ್ನೆ ತಾನೇ ಮಾಡಿದ ಭಾಷಣ ಒಂದರಲ್ಲಿ ಪೋಲೆಂಡ್ ಮತ್ತು ಜೆಕೊಸ್ಲೊವೇಕಿಯದ ಸ್ವಾತಂತ್ರ್ಯವು ಸ್ಥಾಪಿಸಲ್ಪಡಬೇಕು. ಜರ್ಮನಿಯು ಕೊಡುವ ಭರವಸೆಯನ್ನು ಅದು ನಡಸಿಕೊಡುವುದೆಂದು ನಮಗೆ ಭರವಸೆ ಉಂಟಾಗುವಂತಾಗಬೇಕು. ಆದರೇನೇ ರಾಜಿಗೆ ಅವಕಾಶವುಂಟಾಗುವುದು ಎಂದು ಬ್ರಿಟನಿನ ಪ್ರಧಾನ ಮಂತ್ರಿಗಳು ಹೇಳಿರುವರು. ಇನ್ನೊಂದು ಕಡೆ ಹಿಟ್ಲರನು ಭಾಷಣ ಮಾಡುತ್ತಾ—ಬ್ರಿಟನು ಕಳೆದ ಘೋರ ಯುದ್ಧದ ನಂತರ ಜರ್ಮನಿಯೊಂದನ್ನೇ ಮೋಸಗೊಳಿಸಿದ್ದಲ್ಲ, ಅರಬರನ್ನು, ಇಂಡಿಯನರನ್ನು, ಐರಿಷ್ ಮತ್ತು ಯೆಹೂದ್ಯರನ್ನು ಸಹ ಮೋಸಗೊಳಿಸಿರುವರು. ಕಳೆದ ಯುದ್ಧದಲ್ಲಿ ಜಯಗೊಂಡ ವರೆ ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡುವೆವೆಂದು ಹೇಳಿದ ಬ್ರಿಟನು ಅದನ್ನು ನಡೆಸಿಕೊಡಲಿಲ್ಲ. ಬ್ರಿಟನು ತನ್ನ ಒಪ್ಪಂದದ ಮೇರೆ ನಡೆದುಕೊಳ್ಳುವುದೆಂದು ಜರ್ಮನಿಯು ನಂಬಿ [illegible] ಮೋಸಹೋಯಿತು'. ಎಂದು ಅಂದಿರುವನು. ಇವೆರಡು ಹೇಳಿಕೆಗಳ ಸಾರಾಂಶವಾದರೂ ಒಂದೇ ಆಗಿದೆ. ಇಬ್ಬರು ಚಿಕ್ಕ ಜನಾಂಗಗಳ ಸ್ವಾತಂತ್ರ್ಯವನ್ನು ಕಾಪಾಡಬೇಕೆಂದೂ, ಕೊಟ್ಟ ಮಾತನ್ನು ಸರಿಯಾಗಿ ನಡೆಸಿಕೊಡಬೇಕೆಂದೂ ಒತ್ತಿ ಹೇಳುವರು. ಆದರೆ ಇವರೀರ್ವರ ನಡೆಯ ವರ ವರ್ತನೆಯು ಅವರು ಆಡುವ ಮಾತಿನಂತೆ ಇಲ್ಲವೆಂದು ಇವರಿಬ್ಬರ ಹಿಂದಿನ ರಾಜಕೀಯ ಕಾರ್ಯಗಳನ್ನು ಅರಿತರಿಗೆ ತಿಳಿಯುವದು. ಜರ್ಮನಿಯು—ಪ್ರಜಾ ಸತ್ತಾತ್ಮಕ ರಾಜ್ಯಭಾರ ಕ್ರಮವನ್ನು ಮುಂದುವರಿಯುತ್ತಾ ಬರುವ ಈ ಕಾಲದಲ್ಲಿ ತನ್ನ ಸುತ್ತ ಮುತ್ತಲಿನ ಚಿಕ್ಕ ಜನಾಂಗಗಳ ಸ್ವಾತಂತ್ರ್ಯ ಹರಣಮಾಡಿದ ಬ್ರಿಟನು ಅದನ್ನು ವಿರೋಧಿಸಿ ಜರ್ಮನಿಯ ಮೇಲೆ ಯುದ್ಧವನ್ನು ಹೂಡಿದ್ದರಿಂದಲೇ ಪ್ರಪಂಚದ ಹೆಚ್ಚಿನ ಜನಾಂಗಗಳ ಸಹಾನುಭೂತಿಯು ಬ್ರಿಟನಿನ ಕಡೆಗೂ ವಿರೋಧವು ಜರ್ಮನಿಯ ಮೇಲೆಯೂ ಉಂಟಾದ್ದಾಗಿದೆ.

ಜರ್ಮನಿಯು ಕಳಕೊಂಡಿರುವ ಸಹಾನುಭೂತಿಯನ್ನು ಪಡೆಯಲಿಕ್ಕಾಗಿ ಮಾಡುತ್ತಿರುವ ಪ್ರಯತ್ನದಲ್ಲಿ ಇಂಡಿಯಾಕ್ಕೆ ಬ್ರಿಟನು ಮಾಡಿದ ಅನ್ಯಾಯವನ್ನು ಹಿಟ್ಲರನು ಆಗಿಂದಾಗ್ಗೆ ಎತ್ತಿ ತೋರಿಸುತ್ತಿರುವನು. ಇವರಿಂದ ಹಿಟ್ಲರನಿಗೆ ಇಂಡಿಯಾದ ಮೇಲೆ ಮಮತೆಯಿದೆಯೆಂದಲ್ಲ. ಆದರೆ ತನ್ನ ಮೇಲೆ ಹೊರಿಸಿರುವಂಥಾ ಅಪರಾಧವನ್ನು ಬ್ರಿಟನು ಇಂಡಿಯಾದ ಮೇಲೆ ನಡಿಸಿದ. ಎಂದು ತೋರಿಸಲಿಕ್ಕಾಗಿಯೇ ಇಂಡಿಯಾದ ಉದಾಹರಣೆಯನ್ನು ಕೊಟ್ಟಿರುವನಾಗಿ. ಆದರೆ ಈ ಮಾತಿನಲ್ಲಿ ಸತ್ಯಾಂಶ ಇದೆಯೆಂಬುದು ಯಾರಿಗೂ ತಿಳಿಯದಲ್ಲ. ಬ್ರಿಟನಿಗೆ ಜರ್ಮನಿಯು ಹೊರಿಸುವಂಥಾ ಈ ಅಪರಾಧಕ್ಕೆ ಯೋಗ್ಯವಾದ ಜವಾಬು ಕೊಡಲು ಸಾಧ್ಯವಾಗಿಲ್ಲ. ಮಿ. ಚೇಂಬರ್ಲೇನರು ತನ್ನ ಯಾವದೊಂದು ಭಾಷಣದಲ್ಲಿಯೂ ಇದಕ್ಕೆ ಜವಾಬಿತ್ತಿರುವುದಿಲ್ಲ. ಇದೊಂದು ಕಲಂಕವಾದ ಸ್ಥಾನವೇ ಅವರಿಗೆ ತೋರಿ ಬಂದಿರುವುದೆಂದರೆ ಅತಿಶಯವಾಗದು. ಇಂಥಾ ಅಪವಾದವನ್ನು ನಿವಾರಿಸಿಕೊಳ್ಳಲು ಬ್ರಿಟನಿಗೆ ಇದೊಂದು ಯೋಗ್ಯವಾದ ಸಮಯವು ದೊರೆತಿದೆ. ಬ್ರಿಟನು ಯುದ್ಧದ ಗುರಿಯನ್ನು ಸ್ಪಷ್ಟಪಡಿಸಿ ಹಿಂದೂದೇಶದ ಸ್ವಾತಂತ್ರ್ಯವನ್ನು ಅದರೊಂದಿಗೆ ಸೇರಿಸುವದರಲ್ಲಿ ತಾನು ಕೊಡುವ ಮಾತನ್ನು ನಡಿಸಿಕೊಡುವದೆಂಬ ಭರವಸೆಯು ಹಿಂದೀಯರಲ್ಲಿ ಉಂಟಾಗುವಂತೆ ಮಾಡುವ ಪ್ರಯತ್ನ ನಡೆಸಬೇಕಾಗಿದೆ. ಹಿಂದೂದೇಶದ ಪರವಾಗಿ ಮಾತಾಡಬಹುದಾದ ಕಾಂಗ್ರೆಸ್ ಸಂಸ್ಥೆಯು ಈ ವಿಷಯದ ಆಗಿಂದಾಗ್ಗೆ ಬ್ರಿಟಿಷ್ ಸರಕಾರವನ್ನು ಕೇಳುತ್ತಾ ಬಂದಿದೆ. ಮಹಾತ್ಮಾಗಾಂಧಿಯವರು ವೈಸರಾಯರನ್ನು ಈ ಸಂಬಂಧದ ಕೆಲವು ಸಾರಿ ಭೇಟಿ ಮಾಡಿದರೂ ಕೂಡ ಯಾವದೊಂದೂ ತೀರ್ಮಾನಕ್ಕೆ ಬಾರದಿರುವದು ವ್ಯಸನಕರ. ಈ ಮಧ್ಯೆ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮಿ. ಜಿನ್ನಾರವರು ಇಂಥಾ ಒಪ್ಪಂದಕ್ಕೆ ಅಡ್ಡಿ ಬಂದರೆಂಬ ಅಭಿಪ್ರಾಯವು ಜನತೆಯಲ್ಲಿ ಪ್ರಬಲವಾಗತೊಡಗಿತು. ಹಿಂದೂ ಮುಸ್ಲಿಂಮರಲ್ಲಿ ಒಗ್ಗಟ್ಟಾಗುವ ಸಂಭವವು ದೂರವಾಗಿದೆಯೆಂದು ತೋರಿತು. ಆದರೆ ಈಗ ದೈವವಶಾತ್ ಒಬ್ಬ ಮುಸಲ್ಮಾನ ಧುರೀಣರಾದ ಅಬುಲ್ ಕಲಾಂ ಆಜಾದರವರು ಕಾಂಗ್ರೆಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವಾಗ ಇವರ ಮುಂದಾಳುತನದಲ್ಲಿ ಹಿಂದೂ ಮುಸ್ಲಿಂ ಸಮಸ್ಯೆಯು ಬಿಡಿಸಲ್ಪಡುವ ಸಂಭವವು ಹೆಚ್ಚಾಗಿದೆ. ಕಾಂಗ್ರೆಸ್ ಮಹಾಸಭೆಯು ಮಾರ್ಚಿ ತಿಂಗಳ ಮೂರನೆ ವಾರದಲ್ಲಿ ಸೇರಲಿದೆ. ವೈಸರಾಯರು ಕಾಂಗ್ರೆಸಿನ ಕೋರಿಕೆಯನ್ನು ಮನ್ನಿಸಿ ಇಂಡಿಯಾದೊಂದಿಗೆ ಒಂದು ಒಪ್ಪಂದಕ್ಕೆ ಬರಲು ದೊರಕಿರುವ ಈ ಉತ್ತಮ ಸಂದರ್ಭವನ್ನು [illegible] ಎಂಬ [illegible] ಯುವರು ಸರಿಯಲ್ಲ' ಎಂಬ ಮಾತನ್ನು [illegible]. [illegible] ಇಂಡಿಯಾದ [illegible] ಬ್ರಿಟನು [illegible] ತನ್ನ ಉಗ್ರ ಶತ್ರುವಿಗೂ ಕೂಡ ಅಪಹಾಸ್ಯ ಮಾಡಲು ಅವಕಾಶ ದೊರೆಯದಂತೆ ಮಾಡಿಕೊಳ್ಳುವರಾಗಿ ಆಶಿಸುತ್ತೇವೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು ತಾ. ೨೮ ರಂದು ಪಾಟ್ನಾದಲ್ಲಿ ನಡೆಯಿತು. ಪಾಟ್ನಾ ನಗರವು ಜನಸಂದಣಿಯಿಂದ ಕಿಕ್ಕಿರಿದು ನೆರೆದಿದೆ. ಇಡೀ ಪಾಟ್ನಾ ಉತ್ಸವದಿಂದ ತುಂಬಿದೆ. ಕಳೆದ ಸಾರಿ ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ಸೇರಿದ್ದಾಗ ಅಸಹಕಾರ ಚಳವಳಿಯನ್ನು ಹೂಡುವ ವಿಚಾರದ ಮಹಾಸಮಸ್ಯೆಯು ಅದರ ಮುಂದಿತ್ತು. ಅಂದಿನಿಂದ ಅಲ್ಲಿ ನಡೆದ ಪ್ರಥಮ ವರ್ಕಿಂಗ್ ಕಮಿಟಿ ಮೀಟಿಂಗಿದು ಇದೇ. ಆದರೆ ಈ ಸಾರಿ ಹಿಂದಿನ ಭಾರದ ಸಮಸ್ಯೆಯನ್ನು ಪರಿಹರಿಸಲು ಯಾವ ರೀತಿಯ ಧೋರಣೆಯನ್ನು ಕೈಗೊಳ್ಳಬೇಕೆಂಬ ಸಮಸ್ಯೆಯು ಅದರ ಮುಂದಿದೆ. ವರ್ಕಿಂಗ್ ಕಮಿಟಿ ಸಭೆಯು ಫೆಬ್ರವರಿ 1ನೇ ತಾರೀಕಿನ ಬಳಿಗೆ ನಡೆಯುವದು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರೂ, ಅನೇಕ ಮುಂದಾಳುಗಳೂ ಹಾಜರಿರುವರು. ಪ್ರಥಮ ದಿನ ಏನೂ ವಿಶೇಷ ಕಾರ್ಯಕ್ರಮಗಳು ಜರಗಲಿಲ್ಲ. ಪೂಜ್ಯ ಗಾಂಧೀಜಿಯವರು ಮೀಟಿಂಗಿಗೆ ಬಂದಿರುವರು. ಅವರು ತಮ್ಮ ಕಲ್ಕತ್ತಾ ಪ್ರವಾಸವನ್ನು ಮುಗಿಸಿ ಅದೇ ಪಾಟ್ನಾಕ್ಕೆ ಬಂದಿರುವರು. ಕಡೇ ಸಾರಿ ಅವರು ಪಾಟ್ನಾಕ್ಕೆ ಬಂದುದೆಂದರೆ ಐದು ವರ್ಷಗಳ ಹಿಂದೆ. ಆದ್ದರಿಂದ ಭಾರತದ ಕಣ್ಮಣಿಯಾದ ಪೂಜ್ಯ ಮಹಾತ್ಮರನ್ನು ಎದುರುಗೊಳ್ಳಲು ಜನತೆಯಲ್ಲಿ ಅಪೂರ್ವ ಉತ್ಸಾಹವು ಕಂಡು ಬಂದಿದೆ. ಅವರು ರೈಲುಗಾಡಿಯಿಂದ ತಮ್ಮ ಕಾರ್ಯದರ್ಶಿಯವರಾದ ಶ್ರೀ ಮಹದೇವದೇಸಾಯರೊಡಗೂಡಿ ಸ್ಟೇಷನಿನಲ್ಲಿ ಇಳಿದೊಡನೇ ಜನಸಂದಣಿಯು ಜಯಜಯಕಾರದಿಂದ ಅವರನ್ನು ಸ್ವಾಗತಿಸಿತು. ಅವರು ಕಾರಿನಲ್ಲಿ ಕುಳಿತು ಹೋಗುತ್ತಿದ್ದಾಗ್ಯೆ ರಸ್ತೆಯ ಇಕ್ಕಡೆಗಳಲ್ಲೂ ಜನಸಂದಣಿಯು ಕಿಕ್ಕಿರಿದು ನೆರೆದಿತ್ತು. ಮಹಾತ್ಮರಿಗೆ ಮುಂದರಿಯುವದು ಆ ಮಹಾಮಾನವ ಸಾಗರದಲ್ಲಿ ಕಷ್ಟವಾಯಿತು. ಆದರೂ ಕಷ್ಟದಿಂದ ಅವರು ಅಲ್ಲಿಯ ಕಾಂಗ್ರೆಸ್ ಭವನವಾದ ಸದಾಕತ್ ಆಶ್ರಮವನ್ನು ತಲುಪಿದರು. ದಾರಿಯಲ್ಲಿ ಯಾರೋ ದುರಾತ್ಮರು ಗಾಂಧಿಯವರ ಕಡೆಗೆ ಒಂದು ಪಾದರಕ್ಷೆಯನ್ನು ಎಸೆದರಂತೆ. ಆದರೆ ಅದು ಗುರಿತಪ್ಪಿ ಕಾರ್ಯದರ್ಶಿಯವರಾದ ಮಹದೇವದೇಸಾಯರಿಗೆ ತಗಲಿತಂತೆ. ಅವರು ಆ ಪಾದರಕ್ಷೆಯನ್ನು ತಮ್ಮೊಡನಿಟ್ಟುಕೊಂಡಿರುವರಂತೆ.

ಪಂಡಿತ ಜವಾಹರರ ಘೋಷಣೆ.

'ಕೆಲವು ಇಂಗ್ಲಿಷ್ ಪತ್ರಿಕೆಗಳು ಕಾಂಗ್ರೆಸ್ ಅಧ್ಯಕ್ಷರ ಆಯ್ಕೆಯ ವಿಚಾರದಲ್ಲಿ ಕಾಂಗ್ರೆಸ್, ಹಿಂದೂ-ಮುಸ್ಲಿಂ ಐಕ್ಯದಿಂದ ತನ್ನ ಗೆಲುವನ್ನು ಬೇಯಿಸಿಕೊಳ್ಳುವ ದೃಷ್ಟಿಯಿಂದ ಮೌಲಾನಾ ಅಬುಲ್ ಕಲಾಂ ಆಜಾದರನ್ನು ರಾಷ್ಟ್ರಪತಿತ್ವದ ಗದ್ದುಗೆಗೆ ಏರಿಸಿದೆಯೆಂದು' ಕೆಲವು ಇಂಗ್ಲಿಷ್ ಪತ್ರಿಕೆಗಳು ಅಭಿಪ್ರಾಯಪಡುತ್ತಿವೆ. ಇವುಗಳಿಗೆ ಉತ್ತರವಾಗಿ ಪಂಡಿತ ಜವಾಹರರು ಈ ರೀತಿಯಾಗಿ ಘೋಷಿಸಿದ್ದಾರೆ

'ಬ್ರಿಟಿಷ್ ಪತ್ರಿಕೆಗಳ ಹೇಳಿಕೆಯು ಕಾಂಗ್ರೆಸಿಗೆ ಹಾಗೂ ಮೌಲಾನಾ ಆಜಾದರಿಗೆ ಅವಮಾನಕರವಾದ್ದು. ಮೌಲಾನಾ ಅಬುಲ್ ಕಲಾಂ ಆಜಾದರು ಹಿಂದೂ ಮುಸ್ಲಿಂ ಪ್ರಶ್ನೆಯನ್ನು ' ಬಗೆಹರಿಸಲು ಪೂರ್ಣ ಶಕ್ತಿಯುತರಿರುವಾಗ ಆ ಸಂದರ್ಭವನ್ನು ಹೊಂದಿಕೊಳ್ಳುವದು ದೇಶೀಯರ ಕರ್ತವ್ಯವಾಗಿದೆ ಆದರೆ ಇಂದು ಕಾಂಗ್ರೆಸ್ ಪ್ರೆಸಿಡೆಂಟರುಗಳು ಅವರ ಭಾರವಾದ ಜವಾಬ್ದಾರಿಯನ್ನು ಹೊರಬೇಕಿದೆ. ಇಂದು ಆಜಾದರು ಈ ಜವಾಬ್ದಾರಿಯನ್ನು ಹೊರಲು ಶಕ್ತರಿರುವರೆಂದು ಕಾಂಗ್ರೆಸ್ ಪ್ರತಿನಿಧಿಗಳು ಅವರನ್ನು ಆರಿಸಿರುವದಾಗಿದೆ. ಭಾರತವು ಎಂದೂ ಕೇಳರಿಯದಂಥಾ ಬಿಕ್ಕಟ್ಟಿನ ಅಂತರ ರಾಷ್ಟ್ರೀಯ ಪರಿಸ್ಥಿತಿಯನ್ನು ಎದುರಿಸಬೇಕಿದೆ. ಕೋಮುವಾರು ಸಮಸ್ಯೆಯು ಅಲ್ಪವಲ್ಲದಿದ್ದರೂ ಈ ಅಂತರ ರಾಷ್ಟ್ರೀಯ ಸಮಸ್ಯೆಗಳ ಹಿಂದಿರುವ ಸಮಸ್ಯೆಯಾಗಿದೆ. ಆದ್ದರಿಂದ ಆಜಾದರಂಥಾ ಅಸಮಾನ ವ್ಯಕ್ತಿಯು ಗದ್ದುಗೆಗೇರುವದು ಭಾರತೀಯರಿಗೆ ಕೋಮುವಾರು ದೃಷ್ಟಿಯಿಂದ ಬೇಕಾದುದಲ್ಲ. ಭಾರತದ ಭವಿತವ್ಯದ ದೃಷ್ಟಿಯಿಂದ ಬೇಕಾದುದಾಗಿದೆ. ಕಾಂಗ್ರೆಸ್ ಪ್ರೆಸಿಡೆಂಟರುಗಳು ಎಂದೂ ಕೋಮುವಾರು ದೃಷ್ಟಿಯಿಂದ ಚುನಾಯಿಸಲ್ಪಟ್ಟಿಲ್ಲ. ಮುಂದೆ ಚುನಾಯಿಸಲ್ಪಡಲಿಕ್ಕೂ ಇಲ್ಲ. ಇದಕ್ಕೆ ಮೊದಲೇ ರಾಷ್ಟ್ರಪತಿತ್ವವು ಅವರ ಕರಗತವಾಗುತ್ತಿತ್ತು. ಆದರ ಅವರ ನಿರಾಕರಣೆಯು ಈ ವರೆಗೆ ಅವರನ್ನು ಹಿಂದಿಟ್ಟಿತು. ಆದರೆ ಇಂದಿನ ಭಾರತ ಪರಿಸ್ಥಿತಿ, ಹಾಗೂ ಅಂತರ ರಾಷ್ಟ್ರೀಯ ಸ್ಥಿತಿ ಇವುಗಳು ಅವರನ್ನು ತಮ್ಮ ಕರ್ತವ್ಯದೆಡೆಗೆ ಒಯ್ದಿವೆ. ಅವರು ಈ ಸಾರೆ ರಾಷ್ಟ್ರದ ಭಾರವನ್ನು ಹೊರಲು ಮುಂಬಂದಿರುವದಾಗಿದೆ' ಎಂದು ಹೇಳಿರುವರು.

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗು ಕಮಿಷನರು ತಾ. 4ರಲ್ಲಿ ಭಾಗಮಂಡಲಕ್ಕೆ ಹೋಗಿ 5ರಲ್ಲಿ ಅಲ್ಲಿದ್ದು ತಾ. 6ರಲ್ಲಿ ಹಿಂದಿರುಗುವರು.

ತೋಮರದಲ್ಲಿ ಅನೇಕ ದನಗಳನ್ನು ಹಿಡಿದು ನಾಶಮಾಡುತ್ತಾ ಕಳೆದ ವಾರದಲ್ಲಿ ಒಂದೇ ದಿನ ತನ್ನ ಎರಡು ಎತ್ತುಗಳನ್ನು ಹಿಡಿದು ಕೊಂದು ಹಾಕಿದ ದೊಡ್ಡ ಹೆಬ್ಬುಲಿಯೊಂದನ್ನು ತಾ. 23ನೇ ಶುಕ್ರವಾರ ದಿನ ಶ್ರೀ ಕೇಳಿಯಂಡ ಕರುಂಬಯ್ಯನವರು ಗುಂಡು ಹಾಕಿ ಕೊಂದಿರುತ್ತಾರೆಂದು ತಿಳಿಯುತ್ತೇವೆ.

ಕಡವಾದ ಶ್ರೀ ಪರಮಹಂಸ ಸಚ್ಚಿದಾನಂದ ಯೋಗೀಶ್ವರರು ಈ ತಾ. 3ನೇ ಆದಿತ್ಯವಾರ ಗೋಣಿಕೊಪ್ಪಲಲ್ಲೂ, ತಾ.4ನೇ ಸೋಮವಾರ ಹುದಿಕೇರಿಯಲ್ಲೂ, 5ನೇ ಮಂಗಳವಾರ ಪೊನ್ನಂಪೇಟೆಯಲ್ಲೂ, ಮತ್ತು 6ನೇ ಬುಧವಾರ ವೀರಾಜಪೇಟೆಯಲ್ಲೂ ಮಧ್ಯಾಹ್ನ 1 ಗಂಟೆಗೆ ವೇದಾಂತ ರಹಸ್ಯಗಳನ್ನು ಕುರಿತು ಭಾಷಣವನ್ನು ಮಾಡಿ, 2½ ಗಂಟೆಗೆ ಸಮೀಪದ ಕೆರೆಯ ನೀರಿನಲ್ಲಿ ಮುಳುಗಿಕೊಂಡು ಹೋಮಸೂತ್ರ ಮಾಡುವರಾಗಿ ತಿಳಿಯುತ್ತದೆ.

ಬಂಡಸ್ಸಿನ ಬ್ರಿಟಿಷ್ ಕೌನ್ಸಿಲಿನವರು ಇಂಡಿಯದ ವಿಶ್ವ ವಿದ್ಯಾಲಯಗಳಿಂದ ಚುನಾಯಿಲ್ಪಟ್ಟ ಒಬ್ಬ ಗ್ರಾಜ್ಯುಯೇಟರಿಗೆ ಇಂಗ್ಲೆಂಡಿನಲ್ಲಿ ರೀಸರ್ಚ್ ಕೆಲಸವನ್ನು ಅಭ್ಯಾಸಿಸಲು ಒಂದು ವರ್ಷಕ್ಕೆ 300 ಪೌಂಡು ವಿದ್ಯಾ ವೇತನವನ್ನು ಕೊಡುವರೆ ನಿಶ್ಚಯಿಸಿರುತ್ತಾರೆ. ಈ ವೇತನಕ್ಕೆ ಅರ್ಜಿ ಹಾಕಲು ಬಯಸುವ ಗ್ರಾಜ್ಯುಯೇಟರು ತಮ್ಮ ಅರ್ಜಿಗಳನ್ನು ಕೊಡಗು ಸ್ಕೂಲುಗಳ ಡಿ. ಎಜ್ಯುಕೇಷನಲ್ ಆಫೀಸರಿಗೆ ತಾ. 15-3-1340ರೊಳಗ ತಲುಪುವಂತೆ ರವಾನಿಸತಕ್ಕದ್ದು. ಈ ವಿಚಾರದ ನಿಬಂಧನೆ, ಅರ್ಜಿ ಬರೆಯಬೇಕಾದ ಕ್ರಮ ಇತ್ಯಾದಿ ವಿವರವಾದ ಸಂಗತಿಗಳನ್ನು ಡಿ. ಎಜ್ಯುಕೇಷನಲ್ ಆಫೀಸರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಮಡಿಕೇರಿ.

ಈ ವಾರ ಇಲ್ಲಿ ಕಾಫಿ ಖಂಡಿಗೆ ರೂ. 170 ಮತ್ತು ಏಲಕ್ಕಿ ಮಣಕ್ಕೆ ರೂ. 38 ಕ್ರಯವಿತ್ತು.

ರೈತರಿಗೆ ವ್ಯವಸಾಯ ಸಾಲ ಮಂಜೂರ್ಮಾಡುವ ಕಮಿಟಿಯ ಮೀಟಿಂಗು ಈ ದಿನ ಇಲ್ಲಿ ನಡೆಯಿತು.

ಶ್ರೀ ಕೊರವಂಡ ಕಾರ್ಯಪ್ಪನವರ ಜ್ಞಾಪಕಾರ್ಥವಾಗಿಟ್ಟ ಫುಟ್‌ಬಾಲ್ ಶೀಲ್ಡನ್ನು ತಾ. 26-2-40ರಲ್ಲಿ ನಡೆದ ಕಡೇ ಆಟದಲ್ಲಿ ಇಲ್ಲಿಯ ಹೈಸ್ಕೂಲ್ ಟೀಮಿನವರು ಗೆದ್ದು ಪಡೆದಿರುವರು.

ಶ್ರೀ ನೆರವಂಡ ಅಪ್ಪಚ್ಚನವರ ಮೆಮೋರಿಯಲ್ ಕಪ್ಪಿನ ಹಾಕಿ ಪಂದ್ಯಾಟವು ತಾ. 28ರಿಂದ ಪ್ರಾರಂಭವಾಗಿದೆ. ಪ್ರಥಮ ದಿನ ಹೈಸ್ಕೂಲಿನ ಬಿ. ಟೀಮಿನವರಿಗೂ, ಪೋಲೀಸ್ ಟೀಮಿನವರಿಗೂ ನಡೆದ ಆಟದಲ್ಲಿ ಪೋಲೀಸ್ ಟೀಮಿನವರು ಗೆದ್ದಿರುವರು.

ಶ್ರೀ ಸಚ್ಚಿದಾನಂದ ಯೋಗೀಶ್ವರರು ತಾ. 25-2-40ರಲ್ಲಿ ಜನಸ್ವಾರ್ಥದ ಸಂಘದ ಕಟ್ಟಡದ ಹಾಲ್‌ನಲ್ಲಿ ವೇದಾಂತ ರಹಸ್ಯವನ್ನು ಕುರಿತು ಭಾಷಣ ಮಾಡಿದರು. ಅವರು ತಮ್ಮ [illegible] ಮುಂದೆ [illegible], [illegible] ಭಾಗಗಳನ್ನು ಸುತ್ತಿ ಪುನಃ ಮಡಿಕೇರಿಗೆ ಬಂದು [illegible] ರ ಸಮೀಪ [illegible] ಲ್ಲಿ ಮುಳುಗಿಕೊಂಡು ಪದ್ಮಾಸನಹಾಕಿ ಪರಬ್ರಹ್ಮ ಸ್ತುತಿ ಮಾಡುವರೆಂದು ತಿಳಿಯುತ್ತೇವೆ.

ವೀರಾಜಪೇಟೆ

ಇಲ್ಲಿ ಬತ್ತ ಗಾಡಿಗೆ ರೂ. 47 ಕ್ರಯವಿರುವದಾಗಿ ತಿಳಿಯುತ್ತೇವೆ.

ಶ್ರೀ ಮಾಚಿಮಾಡ ಮುತ್ತಣ್ಣನವರ ಜ್ಞಾಪಕಾರ್ಥವಾಗಿಟ್ಟಿರುವ ಹಾಕಿ ಕಪ್ಪನ್ನು ದಕ್ಷಿಣಕೊಡಗಿನ ಹಾಕಿ ಕ್ಲಬ್ಬಿನವರು ತಾ. 21ರಲ್ಲಿ ಇಲ್ಲಿ ನಡೆದ ಕಡೇ ಆಟದಲ್ಲಿ ಗೆದ್ದರು. ಇವರು [illegible] ವರ್ಷಗಳ ವರೆಗೆ ಕಪ್ಪನ್ನು ಗೆದ್ದದ್ದರಿಂದ ಅದು ಅವರಿಗೇ ಖಾಯಂ ಆಯಿತೆಂದು ಹೇಳಿದೆ.

ಸೋಮವಾರಪೇಟೆ.

ತಾ. 27-2-40ರಲ್ಲಿ ಶ್ರೀ ಸಚ್ಚಿದಾನಂದ ಯೋಗೀಶ್ವರರು ಇಲ್ಲಿಯ ಚೆನ್ನಬಸಪ್ಪ ಹಾಲ್‌ನಲ್ಲಿ ಉಪನ್ಯಾಸವನ್ನು ಮಾಡಿದರು.

ನಾಪೋಕ್ಲು.

ಕೋಪಟ್ಟಿ ಸಹಕಾರ ಸಂಘದ ಮತ್ತು ವಿದ್ಯಾ ಭಂಡಾರದ ಆಶ್ರಯದಲ್ಲಿ ಕೋಪಟ್ಟಿ ಗ್ರಾಮದ ಬಾರಂಬಲದಲ್ಲಿ ವಿದ್ಯಾಹೀನರಿಗೆ ವಿದ್ಯೆಯನ್ನು ಕಲಿಸುವ ವ್ಯವಸ್ಥೆಯಿಂದ ಒಂದು ರಾತ್ರಿ ಶಾಲೆಯು ತಾ. 17-1-40ರಿಂದ ತೆರೆಯಲ್ಪಟ್ಟಿದೆಯಾಗಿ ತಿಳಿಯುತ್ತೇವೆ.

ಮೂರ್ನಾಡು

ಇಲ್ಲಿಯ ಮಹಾಜನರು ಕಟ್ಟಿಸಿರುವ 'ರಾಮ ಮಂದಿರ'ವನ್ನು ಕ್ರಮ ಪ್ರಕಾರ ತೆರೆಯುವ ಸಮಾರಂಭವನ್ನು ಇದೇ ಯುಗಾದೀಸಮಯದಲ್ಲಿ ನೆರವೇರಿಸುತ್ತಾರಾಗಿ ತಿಳಿಯಬರುತ್ತದೆ.

ಮೂರ್ನಾಡು ಶಾಲೆಯ ಪ್ರಯೋಜನಾರ್ಥವಾಗಿ ಶಾಲೆಯವರೂ ಮತ್ತು ಹಿತಚಿಂತಕರೂ ಸೇರಿ 'ರಾಮಾಂಜನೇಯ' ಮತ್ತು 'ದ್ರೌಪದಿ ಸ್ವಯಂವರ' ಎಂಬ ಎರಡು ನಾಟಕಗಳನ್ನು ಶಿವರಾತ್ರಿ ದಿನ ಅಭಿನಯಿಸುತ್ತಾರಾಗಿ ವರ್ತಮಾನ.

ಅಕ್ಕಸಾಲೆ ಕಾಳಯ್ಯ ಎಂಬವರು ತಮ್ಮ ತಂದೆ ಅಣ್ಣಾಚಾರಿಯವರ ಜ್ಞಾಪಕಾರ್ಥವಾಗಿ ಸಾಧಾರಣ 16 ರೂ. ಕ್ರಯದ ಒಂದು ಆಫೀಸ್ ಕ್ಲಾಕ್ (ಗೋಡೆಯಲ್ಲಿ ಇಡುವ ಗಡಿಯಾರ) ನ್ನು ಮೂರ್ನಾಡು ಆಸ್ಪತ್ರೆಗೆ ಉಚಿತವಾಗಿ ಕೊಟ್ಟಿರುತ್ತಾರೆ. ಇವರ ಉದಾರತ್ವವು ಮಾದರಿ ತರದ್ದೂ, ಸ್ತುತ್ಯವೂ ಆಗಿವೆ.

ನಿಧನವಾರ್ತೆ.

ಗವಾಳಿ ಶಾಲೆಯನ್ನು ವಿಸ್ತರಿಸಿಕೊಟ್ಟಿದ್ದ ಸವರಿ ಗ್ರಾಮದ ಶ್ರೀ ಗೀಜಿಗಂಡ ಉತ್ತಯ್ಯನವರು ತಾ. 24-2-40ರಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಪಡುತ್ತೇವೆ.

ಹಿಂದೂ ದೇಶ.

ಈ ತಿಂಗಳಲ್ಲಿ ಜರುಗಲಿರುವ ಸಮಗ್ರಭಾರತ ಮುಸ್ಲಿಂಲೀಗ್ ಪಾರ್ಟಿಗೆ ಅಧಿವೇಶನದ ಅಧ್ಯಕ್ಷರಾಗಿ ಶ್ರೀ. ಜಿನ್ನಾರವರು ಆರಿಸಲ್ಪಟ್ಟಿದ್ದಾರೆ.

ಗಾಂಧಿ ಸೇವಾ ಸಂಘದ ಸಮ್ಮೇಳನದ ಸ್ವಾಗತ ಸಮಿತಿಯ ಪರವಾಗಿ, ಗಾಂಧೀಜಿಯವರಿಗೆ 18 ಸಾವಿರ ರೂಪಾಯಿಗಳ ಒಂದು ಕಾಣಿಕೆಯ ಥೈಲಿಯು ಸಮರ್ಪಿಸಲ್ಪಡುವುದು.

ಈ ವಾರ ದ. ಕನ್ನಡದ ಮೂಡಬಿದ್ರೆಯ ಸಮೀಪ ಶಂಕರ್‌ವಿಠಲ್ ಮತ್ತು ಹನುಮಾನ್‌ಸರ್ವೀಸಿನ ಬಸ್ಸುಗಳೆರಡು ಡಿಕ್ಕಿ ಹೊಡೆದು ಮೂರು ಸ್ತ್ರೀಯರು ಮೃತರಾದರೆಂದೂ, ಕೆಲವರು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದೂ ವರ್ತಮಾನ.

ಗಾಂಧಿ ಸೇವಾಸಂಘದ ಹೊಸ ಕಾರ್ಯಕಾರಿ ಸಮಿತಿಯ ರಚನೆ ಮಲಿಕಂಡದಲ್ಲಿ ನಡೆದು, ಶ್ರೀಗಳಾದ ಕೃಷ್ಣದಾಸ ಜಾಜೂಯವರು ಪ್ರೆಸಿಡೆಂಟ್ ಮತ್ತು ಟ್ರಸ್ಟಿಗಳಾಗಿ ಆರ್. ಎಸ್. ಧೋತ್ರೆಯವರು ಸೆಕ್ರೆಟರಿ ಮತ್ತು ಟ್ರಸ್ಟಿಗಳಾಗಿ, ಕಿಶೋರ್ ಲಾಲ್ ಮಶ್ರೂವಾಲರು ಇನ್ನೊಬ್ಬ ಟ್ರಸ್ಟಿಗಳಾಗಿ ಆರಿಸಲ್ಪಟ್ಟಿರುವರು. ಕೆಲವು ಮಂದಿ ಸದಸ್ಯರ ಚುನಾವಣೆಯೂ ನಡೆದಿದೆ.

ಪಂಜಾಬಿನ ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಾರ್ಟಿಯ ಕಡೆಯಿಂದ ಬಂದ ಎರಡು ಠರಾವುಗಳಿಗೆ ಪ್ರವೇಶ ದೊರೆಯದೆ, ಆ ಸಂಬಂಧ ದಿವಾನ್ ಚಮನಲಾಲರು (ಕಾಂಗ್ರೆಸ್ ಪಾರ್ಟಿಯ ನಾಯಕರು) ಆಡಿದ ಮಾತುಗಳನ್ನು ಹಿಂದೆಗೆಯಬೇಕೆಂದು ಅಪೇಕ್ಷಿಸಿದರೂ, ಹಾಗೆ ಮಾಡದ ಕಾರಣ, ಕೊಂಚ ಗಲಭೆಯಾಗಿ ಕಾಂಗ್ರೆಸ್ ಮೆಂಬರರು ಸಭೆ ಬಿಟ್ಟು ನಡೆದರು.

ಹೊಸ ದಿಲ್ಲಿಯಲ್ಲಿ ಅರೇಬಿಕ್ ಕಾಲೇಜಿನಲ್ಲಿ ಶ್ರೀ. ಜಿನ್ನಾರವರು ದಿವಂಗತ ಮೌಲಾನಾ ಶೌಕತ್ಆಲಿಯವರ ಭಾವಚಿತ್ರ ಅನಾವರಣೋತ್ಸವವನ್ನು ನೆರವೇರಿಸುತ್ತ ಒಂದು ಭಾಷಣ ಮಾಡಿದರು. 'ಇಂಡಿಯವನ್ನು ಬ್ರಿಟನೂ ಆಳಬೇಕೆಂದಿದೆ; ಗಾಂಧಿಯವರೂ ಆಳಬೇಕೆಂದಿದ್ದಾರೆ. ಆದರೆ ಮುಸ್ಲಿಮರು ತಮ್ಮನ್ನಾಳಲು ಇವರಿಬ್ಬರನ್ನು ಅಥವಾ ಇಬ್ಬರಲ್ಲೊಬ್ಬರನ್ನೂ ಬಿಡಲಾರರು' ಎಂದರಲ್ಲದೆ, ಹಿಂದೂಗಳು ಮುಸ್ಲಿಮರಿಗಿಂತ ವಿದ್ಯಾ, ಸಂಪತ್ತುಗಳಲ್ಲಿ ಮಿಗಿಲಾದವರೆಂದು ಸೂಚಿಸಿ, ಮುಸ್ಲಿಮರಿಗೆ ವೃದ್ಧಿ ಸಾಧಕಗಳಾದ ಉಪಾಯಗಳಾವುವೆಂದೂ ವಿಶದೀಕರಿಸಿದರು.

ವಿಮಾನಗಳನ್ನು ಕೊಳ್ಳಲು ಅಮೇರಿಕವು ಫಿನ್‌ಲ್ಯಾಂಡಿಗೆ 20 ಮಿಲ್ಯ ಡಾಲರುಗಳನ್ನು ಸಾಲದ ಸಹಾಯವನ್ನು ನೀಡಿದೆ.

ಚೀನಾ-ಜಪಾನು ಯುದ್ಧ.

ಜಪಾನವು ಇತ್ತೀಚೆ ಯುದ್ಧದಲ್ಲಿ ಕಂಗೆಡತೊಡಗಿದೆ. ರಾಜಿಯ ಮಾತುಕತೆಗಳು ನಡೆಯುತ್ತಿವೆ. ಚೈನಾವು ಯುದ್ಧ ಸಂಧಾನವಾಗಬೇಕಾದರೆ ತಮ್ಮ ಕೆಲವು ಷರತುಗಳಿಗೆ ಜಪಾನರು ಒಪ್ಪಬೇಕೆಂದು ಹೇಳಿದ್ದಾರೆ. ಅವರ ಷರತುಗಳು ಹೀಗಿರುವವು:—

(1) ಚೀಣೀ ಪ್ರದೇಶಕ್ಕೆ ಎಳ್ಳಷ್ಟೂ ಚ್ಯುತಿ ಬರಕೂಡದು; ಮಂಚೂರಿಯಾವನ್ನು ಚೀನಕ್ಕೆ ವಾಪಸು ಕೊಡಬೇಕು. ಜಪಾನ್ ಚೀನಾದಿಂದ ಗುತ್ತಿಗೆಗಾಗಿ ಪಡೆದ ಡೈರೆನ್ ಮತ್ತು ಪೋರ್ಟ್ ಆರ್ಥರ್‌ಗಳನ್ನೂ ಅದಕ್ಕೆ ವಾಪ್ಸು ಕೊಡಬೇಕು.

(2) ಚೀನಾ-ಜಪಾನ್‌ಗಳಿಗೆ ಇರುವ ಅಸಮಾನ ಒಪ್ಪಂದಗಳು ರದ್ದಾಗಬೇಕು; ಜಪಾನಿಗೆ ಚೀನಾದಲ್ಲಿ ಕನ್‌ಸೆಷನ್‌ಗಳನ್ನೂ, ಫ್ಯಾಕ್ಟರಿಗಳನ್ನೂ ಸ್ಥಾಪಿಸುವ ಹಕ್ಕೂ ತೊಲಗಬೇಕು.

(3) ಚೀನಾದಲ್ಲಿರುವ ಜಪಾನಿಗಳು ಚೀನಾ ಶಾಸನಗಳಿಗೆ ಬದ್ಧರಾಗಬೇಕು.

(4) ಜಪಾನಿಗಳು ಮೊದಲಾದ ಹೊರಗಿನವರು ಚೀನಾಕ್ಕೆ ಸಹಾಯ ಮಾಡಲು ಧನ ಸಹಾಯ ಮಾಡುವುದಾದರೆ, ಅದನ್ನು ಸ್ವೀಕರಿಸಲು ಚೀನಾಕ್ಕೆ ಸಂತೋಷವಾಗುವುದು. ಆದರೆ ಜಪಾನು ಹಾಕುವ ಬಂಡವಾಳವು ಚೀನಾದ ನಿಯಮಗಳಿಗೆ ಬದ್ಧವಾಗಿ ಪುನರ್ನ್ಯಸ್ತವಾಗಬೇಕು.

(5) ಕೊರಿಯಾ ಮತ್ತು ಫಾರ್ಮೋಸಾ ಪ್ರದೇಶಗಳ ಸಮಸ್ಯೆಯನ್ನು, ಸಂಬಂಧಪಟ್ಟ ಆತ್ಮನಿರ್ಧಾರದ ತತ್ವದ ರೀತಿ ಪರಿಹರಿಸಬೇಕು.

FOR SALE.

A small Coffee and Cardomum Estate With nurseries buildings etc. Close to Mercara town.

For further particulars Apply to:-

'X'

C/o. 'Kodagu' Ltd.

1 Mercara.

FOR SALE.

Dressed rose wood logs by the road side. Sawn rose wood planks 3 feet in breadth and other dimensions available. Preference to whole sale bussiness.

For further Particulars apply to:-

P. M. Appiah,

Pattycod Estate,

2 Madapur P. O.

ಹಿಟ್ಲರನ ಭಾಷಣ.

ಬ್ರಿಟಿಷರು ಜರ್ಮನಿಯನ್ನೇ ಅಲ್ಲ; ಇಟಲಿಯೂನರನ್ನೂ, ಅರಬಿಯನರನ್ನೂ ಮೋಸಗೊಳಿಸಿರುವರು. ಜಗತ್ತನ್ನು ಜಗನ್ನಿಯಾಮಕನು ಬ್ರಿಟಿಷರಿಗಾಗಿಯೇ ಸೃಷ್ಟಿಸಿಲ್ಲ. ನಮಗಾದರೂ ಅಲ್ಲಿ ಹಕ್ಕಿದೆ, ನಮ್ಮ ಹಕ್ಕನ್ನು ಪಡೆಯುವವರೆಗೆ ಜರ್ಮನಿಯು ತಟಸ್ಥ ಕೈಕಟ್ಟಿ ಕುಳಿತುಕೊಳ್ಳದು.

ಬ್ರಿಟಿಷರು ಜರ್ಮನಿಯನ್ನೇ ಅಲ್ಲ; ಇಟಲಿಯೂನರನ್ನೂ, ಅರಬಿಯನರನ್ನೂ ಮೇಲಾಗಿ ಭಾರತಕ್ಕೆ ಸ್ವಾತಂತ್ರ್ಯ ಕೊಡುವೆವೆಂದು ವಾಗ್ದಾನ ಮಾಡಿ ಭಾರತೀಯರನ್ನೂ ಮೋಸಗೊಳಿಸಿರುವರು. ಜಗತ್ತನ್ನು ಜಗನ್ನಿಯಾಮಕನು ಬ್ರಿಟಿಷರಿಗಾಗಿಯೇ ಸೃಷ್ಟಿಸಿಲ್ಲ. ನಮಗಾದರೂ ಅಲ್ಲಿ ಹಕ್ಕಿದೆ, ನಮ್ಮ ಹಕ್ಕನ್ನು ಪಡೆಯುವವರೆಗೆ ಜರ್ಮನಿಯು ತಟಸ್ಥ ಕೈಕಟ್ಟಿ ಕುಳಿತುಕೊಳ್ಳದು.

ತಾರೀಕು 25ರಂದು ನಾಜಿ ಪಕ್ಷದ ಸ್ಥಾಪನೆಯ 20ನೇ ವಾರ್ಷಿಕೋತ್ಸವ ಮ್ಯೂನಿಕ್ ಮದ್ಯದ ಗಡಂಗಿನಲ್ಲೇ ನಾಜಿ ಪಕ್ಷದ ನೀತಿಯನ್ನು ಮೊದಲು ನಿರ್ಧರಿಸಿದುದು. ಅಲ್ಲೇ ಈ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹಿಟ್ಲರನು ಭಾಷಣ ಮಾಡಿದುದು. ಭಾಷಣ ಆಗುವ ಮೊದಲು ಬ್ರೆಮೆನ್ ರೇಡಿಯೋ ಬ್ರಾಡ್ ಕ್ಯಾಸ್ಟಿಂಗ್ ಸ್ಟೇಷನು ಮುಚ್ಚಲ್ಪಟ್ಟಿದ್ದಿತು. ಹಿಟ್ಲರನ ಭಾಷಣ ಆರಂಭವಾದ ಮೇಲೂ ಕೊಂಚ ಹೊತ್ತು ಅಲ್ಲಿಂದ ರೇಡಿಯೋ ಕೇಳಿಸಲಿಲ್ಲ. ಹಿಟ್ಲರ್ ತನ್ನ ಭಾಷಣದ ಆರಂಭದಲ್ಲಿ ಪೂರ್ವೇತಿಹಾಸವನ್ನು ಪ್ರಥಮತಃ ವಿವರಿಸಿ, ಜರ್ಮನಿಯು, 1914 ನೇ ಯುದ್ಧಾನಂತರ, ಭಾರಿ ಮೋಸಕ್ಕೊಳಗಾಯಿತೆಂದು ಹೇಳಿದನು. ನಾವೊಬ್ಬರೇ ಅಲ್ಲ ಮೋಸ ಹೋದುದು ಎಂಬುದು ನಿಜ. ಏಕೆಂದರೆ, ಇತರರೂ ನಮ್ಮಂತೆಯೇ ಮೋಸ ಹೋದರು. ಇಟಲಿಗೂ ಮೋಸವಾಯಿತು. ಭರತಖಂಡಕ್ಕೂ ಮೋಸವಾಯಿತು. ಏಕೆಂದರೆ, ಬ್ರಿಟನ್ನಿಗೆ ವಿಜಯವಾದರೆ, ಭಾರತೀಯರಿಗೆ ಸ್ವಾತಂತ್ರ್ಯ ಕೊಡುವುದಾಗಿ ವಾಗ್ದಾನ ಮಾಡಲ್ಪಟ್ಟಿದ್ದಿತು. ಅರಬರೂ ಮೋಸ ಹೋದರು, ಯೆಹೂದ್ಯರು ಮೋಸ ಹೋದರು. ಹೇಗೆಂದರೆ, ಅರಬ್ಬರಿಗೆ ಯಾವ ಪ್ರದೇಶವನ್ನು ಕೊಡುವುದಾಗಿ ವಾಗ್ದಾನ ಮಾಡಿದರೋ, ಅದೇ ಪ್ರದೇಶವನ್ನು ಯೆಹೂದ್ಯರಿಗೂ ಕೊಡುವುದಾಗಿಯೂ ವಾಗ್ದಾನ ಮಾಡಿದ್ದರು. ಬ್ರಿಟಿಷ್ ಮತ್ತು ಫ್ರೆಂಚ್ ಜನಾಂಗಗಳವರೂ ಮೋಸ ಹೋದರು. ಇವರೆಲ್ಲರಿಗಿಂತಲೂ ಮಿಗಿಲಾಗಿ ಮೋಸ ಹೋದವರೆಂದರೆ ಜರ್ಮನರು.

ನ್ಯಾಯ, ಶಸ್ತ್ರಸನ್ಯಾಸ, ಶಾಂತಿಯನ್ನೊಳಕೊಂಡ ನೂತನ ಪ್ರಪಂಚ ವ್ಯವಸ್ಥೆ ಮಾಡುವುದಾಗಿ ವಾಗ್ದಾನ ಮಾಡಿದ ತಮ್ಮ ಶತ್ರುಗಳ ಮಾತುಗಳನ್ನು ಜರ್ಮನರು ನಂಬಿ ಮುಟ್ಠಾಳರಾದರೆಂದು ಹಿಟ್ಲರನು ಘೋಷಿಸಿ, ಅನಂತರ ಹೀಗೆ ಹೇಳಿದ–

ಇಡೀ ಇಂಡಿಯಾ ದೇಶವೇ ಮಿ|| ಛೇಂಬರ್ಲೇನರನ್ನು ಎದುರಿಸಿ ನಿಂತಿರುವಾಗ, ಅರಬರು ಅವರನ್ನು ಎದುರಿಸಿ ನಿಂತಿರುವಾಗ, ತಾವು ಜಗತ್ತನ್ನು ಜರ್ಮನಿಯ ದಬ್ಬಾಳಿಕೆಯಿಂದ ಬಿಡಿಸಲು ಯುದ್ಧ ಮಾಡುತ್ತಿರುವುದಾಗಿ ಮಿ|| ಛೇಂಬರ್ಲೇನರು ನಟಿಸುತ್ತಿದ್ದಾರೆ.

ಭಗವಂತನು ಬ್ರಿಟಿಷರಿಗಾಗಿ ಜಗತ್ತನ್ನು ಸೃಷ್ಟಿಸಲಿಲ್ಲ. ತಮ್ಮವರಿಗೇ ಜೀವನಾಧಾರಗಳನ್ನು ಒದಗಿಸಿಕೊಡಲು ಅಸಮರ್ಥರಾಗಿರುವವರು, ಜಗತ್ತಿನ ಮುಕ್ಕಾಲು ಪಾಲು ವಿಸ್ತೀರ್ಣದ ಪ್ರದೇಶವನ್ನು ಆಳಬೇಕೆಂದು ಭಗವಂತನ ಇಚ್ಛೆಯಲ್ಲ [illegible] ಅಂತರ ರಾಷ್ಟ್ರೀಯ [illegible] ಮ್ಮಿಂದ ಕಸುಕೊಳ್ಳಲ್ಪಟ್ಟ ಪ್ರದೇಶವನ್ನು ನಮಗೆ ನಮಗೆ ವಾಪ್ಸು ಕೊಡಬೇಕೆಂಬುದು ನಮ್ಮ ಕೋರಿಕೆ.

ಅಂತರ ರಾಷ್ಟ್ರೀಯ ಮಹಾ ವ್ಯಕ್ತಿಗಳ ಕಡೆ ನಾನು ಗಮನಕೊಟ್ಟು ನೋಡಿದರೆ, ನಾನು ಯುದ್ಧ ಮಾಡ[illegible] ಅಲ್ಲದ ಸಂಗತಿಯೇ ಏನ[illegible] ಯೂ ಇಲ್ಲವೆಂದು ನಾನು ಹೇಳ[illegible]ಗಿನ ಈ ವ್ಯಕ್ತಿಗಳು ಜಗತ್ತಿನಲ್ಲಿ ಅತ್ಯಂತ ದೊಡ್ಡ ದಾಪ ಸಾಮ್ರಾಜ್ಯ[illegible] ಳುತ್ತಿದ್ದಾರೆ. ಅವರೂ ತಮ್ಮ [illegible] ನಿರುದ್ಯೋಗವನ್ನು ಪರಿಹರಿಸ[illegible] ರ್ಥರಾಗಿದ್ದಾರೆ [illegible] ಹಾಯ ಮಾಡುತ್ತಾರೆಂದು [illegible] ಲದವರ ಆಸೆ [illegible] ಕೊಂಚ ಮಟ್ಟಿಗೆ ಅಗಾಂಭೀರ್ಯ[illegible]ದು. ಏಕೆಂದರೆ, ಜಗತ್ತಿನಲ್ಲೆಲ್ಲಾ ಅವರಿಗೆ ಯೆಹೂದ್ಯರು ಸಾಮೀಲಾಗಿ ಇದ್ದಾರೆ. ಅವರೂ ಅವರ ಆಸೆ [illegible]ದುದು ನನ್ನನ್ನು ದ್ವೇಷಿಸುವುದಾಗಿ. ಮಿ|| ಚೆರ್ಚಿಲ್‌ರವರು ಹೇಳುವುದಾದರೆ ಅವರು ನನಗೊಂದು ಗೌರವ ಕೊಟ್ಟರೆಂದು ನಾನು ಅವರನ್ನು ವಂದಿಸುತ್ತೇನೆ. ನನ್ನನ್ನು ನಂಬುವದಿಲ್ಲವೆಂದು ಮಿ|| ಛೇಂಬರ್ಲೇನರು ಹೇಳುವುದೂ ನನಗೆ ಸಂತೋಷಕರ. ಏಕೆಂದರೆ, ನಾನು ಜರ್ಮನ್ ಜನಾಂಗಕ್ಕೆ ದ್ರೋಹಿ ಎಂದು ಅವರು ನನ್ನ ಮೇಲೆ ಅಪವಾದನೆ ಹೊರಿಸಲು ಆಗ ಅವರಿಗೆ ಅವಕಾಶವೇ ದೊರೆಯುವದಿಲ್ಲ. ಮಿ|| ಡಫ್,ಮಿ. ಹೋರ್ ಬೆಲಿಷಾ ಮುಂತಾದವರು ನನ್ನನ್ನು ತುಚ್ಛನೆಂದು ಕರೆದರೂ ನನಗೆ ಸಂತೋಷ. ಏಕೆಂದರೆ ಆಗ ನನ್ನನ್ನು ಅವರು ತಮ್ಮ ಮಿತ್ರನೆಂದು ಭಾವಿಸಲು ಸಾಧ್ಯವಿಲ್ಲ. ಇಟಲಿ ಜರ್ಮನಿಗಳೆರಡೂ ತಮ್ಮ ಭವಿಷ್ಯದ ವಿಚಾರದಲ್ಲಿ ಪರಸ್ಪರ ಅವಲಂಬಿಸ ಬೇಕಾಗಿರುವುದರಿಂದ ಇವೆರಡು ರಾಷ್ಟ್ರಗಳಿಗೂ ಪರಮ ಮೈತ್ರಿ ಉಂಟಾಗಿದೆ. ರಷ್ಯದೊಡನೆ ಮಾತ್ರ ನಮ್ಮ ವ್ಯವಹಾರ ಬದಲಾಯಿಸಿದೆ. ಲಂಡನ್ನಿನ ಯೆಹೂದ್ಯ ಸ್ಟಾಕ್ ಬ್ರೋಕರುಗಳ ಸಲುವಾಗಿ ಪರಸ್ಪರ ರಕ್ತಪಾತ ನಡೆಸಲು ರಷ್ಯಾ ಜರ್ಮನಿಗಳೆರಡೂ ಒಪ್ಪಲಾರವು. ಜಪಾನಿಗೂ ನಮಗೂ ಮಿತ್ರತ್ವ ಇದೆ. ಹೀಗಿರಲಾಗಿ ಬಲಾನ್ವಿತವಾದ ರಾಷ್ಟ್ರಗಳ ಸಂಯೋಜನೆ ಉಂಟಾಗಿದೆ.

ನಮ್ಮ ಸೇನೆಗೂ ನಮ್ಮ ನಾಯಕರಿಂದ ಸ್ಫೂರ್ತಿ ಉಂಟಾಗಿದೆ. ಆರ್ಥಿಕ ವಿಚಾರಗಳಲ್ಲಿ ನಮ್ಮ ಶತ್ರುಗಳಿಗಿಂತ ನಮ್ಮ ಸಿದ್ಧತೆಗಳೇ ಮೇಲಾಗಿವೆ. ನಮ್ಮ ಶತ್ರುಗಳು ಬ್ಲಾಕೇಡನ್ನೇ ನಂಬಿಕೊಂಡಿದ್ದಾರೆ. ಆ ಬ್ಲಾಕೇಡು ಸೋರುತ್ತಿದೆ. ಅವರ ನಮ್ಮಲ್ಲಿ ಸರ್ವಾಧಿಕಾರತ್ವವಿರುವದರಿಂದ ನಮಗೆ ಬ್ಲಾಕೇಡುಗಳಿಂದ ಭೀತಿಯಾಗುವದಿಲ್ಲ. ಇಲ್ಲಿ [illegible] ಆಗಿಯಾಗಲಿ [illegible] ಯನ್ನು ತುಂಡರಿಸುವದು ಅಸಾಧ್ಯ.

ಮಿ|| ಛೇಂಬರ್ಲೇನರ ಮಾತುಗಳು [illegible] ಪರಿಣಾಮಕಾರಿಯಾಗಬಹುದು [illegible] ಅಸ್ತ್ರಗಳು ಜ[illegible] ಮೇಲೆ ಯಾವ ಪರಿಣಾಮ [illegible] ಲ್ಲ [illegible] ಮನುಷ್ಯರೂ [illegible] ಅರ್ಥವಿಲ್ಲದ ಜರ್ಮನ್ [illegible] ಚೆನ್ನಾಗಿ ಗೊತ್ತು. ಅವರಾಡುವ ಇಂಗ್ಲೀಷ ಭಾಷೆ ಎಷ್ಟು ಚೆನ್ನಾಗಿ ದೆಯೋ ಅಷ್ಟೇ ಚೆನ್ನಾಗಿದೆ ಅವರಾಡುವ ಜರ್ಮನ್ ಭಾಷೆಯೂ.

ಈ ಹೋರಾಟದಲ್ಲಿ ಹೆರ್ ಹಿಟ್ಲರ್ [illegible] ಭಾಷಣ ಮಾಡಿ ಕೊನೆಗೆ ಈ ರೀತಿ [illegible]

[illegible] ವ್ಯಕ್ತಿಯಿಂದ ಜರ್ಮನಿಯು [illegible] ಎಂಬುದು ಇಲ್ಲದಿದ್ದಷ್ಟೇ [illegible] ಜಗತ್ತನ್ನು ಸೃಷ್ಟಿಸಿ, ಎಲ್ಲ [illegible] ನೀತಿಯಾದ [illegible] ನ [illegible] ದೇವರೊಬ್ಬನಿದ್ದಾನೆಂದು ನಾನು ನಂಬುತ್ತೇನೆ. ನನ್ನ ಜನಾಂಗವು ನಿರ್ಮೂಲವಾಗುವುದನ್ನು ಆ ದೇವರು ಸಮ್ಮತಿಸಲಾರ. 20 ವರ್ಷಗಳ ಹಿಂದೆ ಇದೇ ನನ್ನ ನಂಬಿಕೆಯಾಗಿದ್ದಿತು. ಈಗಲೂ ಅದೇ ನಂಬಿಕೆ ನನಗಿದೆ.

ಪ್ರಪಂಚವು ಮತ್ತು ಇದಕ್ಕೆ ವ್ಯತಿರಿಕ್ತವಾಗಿರಲಾರದು. ನಾವೇ ಜಯಶಾಲಿಗಳಾಗಬೇಕು. ಆದುದರಿಂದಲೇ ನಾವು ಜಯವಡದೇ ಪಡೆಯುತ್ತೇವೆ. ಇಷ್ಟು ಜಗತ್ತಿನಲ್ಲಿ ಸಿರಿ ಬಗೆಯಿಂದ ತುಂಬಿದ್ದರೂ, ನಾವು ಜಯ ಪಡೆಯುತ್ತೇವೆ.’

ಎಂದು ಹೆರ್ ಹಿಟ್ಲರ್ 1 ಗಂಟೆಕಾಲ ದೀರ್ಘ ಭಾಷಣ ಮಾಡಿ ಹೇಳಿದನು. ರಾತ್ರಿ 8-25 ಕ್ಕೆ ಅವನ ಭಾಷಣ ಮುಗಿಯಿತು.

ಬಾತ್ಮಿ.

ಕೊಡಗು ಸರಕಾರದಲ್ಲಿ ಶನಿವಾರಸಂತೆ ಪುರ ನಿವಾಸಿಗಳ ಮೊರೆ.

ಇದೇ ಶನಿವಾರಸಂತೆಯು ಪೇಟೆಯೊಳಗಿನ ರಸ್ತೆ ಬಹಳ ಚಿಕ್ಕದಾಗಿರುವುದು ಸರಕಾರಕ್ಕೆ ಗೊತ್ತೇ ಇದೆ. ಈ ರಸ್ತೆಯಲ್ಲಿ ಗಾಡಿ, ಜನಸಂದಣಿ, ಬಹಳವಾಗಿ ತಿರುಗುವದು ವೇದ್ಯವೇಯಿದೆ. ಇಂತಹ ಓಡಾಟವಿರುವ ರಸ್ತೆಯಲ್ಲಿ ಬಸ್ಸಿನವರು ಘಂಟೆಗೆ 20 ಮೈಲು ಸ್ಪೀಡಿನಲ್ಲಿ ಹೋಗುವವರಿಂದ ರಸ್ತೆಯ ಧೂಳಿನಿಂದ ಅಂಗಡಿಯವರೂ ತಿರುಗಾಡುವ ಜನರೂ ಬಹಳ ಸಂಕಟಪಡಬೇಕಾಗಿದೆ. ಮತ್ತು ರಸ್ತೆ ಬಹಳ ಚಿಕ್ಕದಿರುವುದರಿಂದ ಗಾಡಿಗಳನ್ನು ಬಾಜು ಮಾಡಲಿಕ್ಕೆ ಬಹಳ ತೊಂದರೆಯಿದೆ. ಅದ್ದರಿಂದ ಘನ ಸರಕಾರದವರು ಇಲ್ಲಿ ತಿರುಗುವ ಬಸ್ಸುಗಳು ಘಂಟೆಗೆ 5 ಮೈಲು ಮೇಲೆ ಹೋಗಬಾರದಾಗಿ ಒಸ್ಸಿನವರಿಗೆ ಹುಕುಂ ಮಾಡುವದಲ್ಲದೆ, ಪೇಟೆಗೆ ಬರುವ ರಸ್ತೆಯ ಪ್ರವೇಶ ದ್ವಾರದಲ್ಲಿ ಘಂಟೆ 1ಕ್ಕೆ 5 ಮೈಲು ಮೇಲೆ ಬಸ್ ಓಡಬಾರದಾಗಿ ಬೋರ್ಡ್ ಸಹ ಹಾಕಿ ಪುರ ನಿವಾಸಿಗಳಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಪ್ರಾರ್ಥನೆ.

‘ಒರ್ವ ಪುರ ನಿವಾಸಿ’

ಸಬ ಅಸಿಸ್ಟೆಂಟ್ ಸರ್ಜನರ ಮಡಿಕೇರಿ ಡ್ಯೂಟಿ

ಅಯ್ಯಾ,

ಫೆಬ್ರುವರಿ ತಿಂಗಳು ಮೊದಲುಗೊಂಡು ಪೊನ್ನಂಪೇಟೆ, ಸುಂಟಿಕೊಪ್ಪ ಮತ್ತು ಫ್ರೇಜರ್‌ಪೇಟೆ ಆಸ್ಪತ್ರೆಗಳ ಡಾಕ್ಟರುಗಳು ತಿಂಗಳಿನ ಕೆಲವೊಂದು ನಿಶ್ಚಿತ ದಿನಗಳಲ್ಲಿ ಮಡಿಕೇರಿ ಆಸ್ಪತ್ರೆಯಲ್ಲಿ ಡ್ಯೂಟಿಮಾಡಲು ಹೋಗುವದಾಗಿ ತಿಳಿದು ಬಂದಿದೆ. ಇದೇ ಕೆಲವು ದಿನಗಳಲ್ಲಿ ಈ ಸ್ಥಳಗಳ ಜನರ ಪಾಡು ಏನಾಗಬೇಕು? ಅದೇ ದಿನಗಳಲ್ಲಿ ಡಾಕ್ಟರವರ ಸಲಹೆ ಅತ್ಯಾವಶ್ಯವಿರತಕ್ಕ ನಿಮೋನಿಯಾ ಇತ್ಯಾದಿ ಕಠಿಣ ಖಾಯಿಲೆಗಳೂ, ಜಖಂ ಮೊದಲಾದ ಆಕಸ್ಮಾತುಗಳೂ ಆದ ಪಕ್ಷದಲ್ಲಿ ಯಾರು ಸುಧಾರಿಸಬೇಕು? ಮಡಿಕೇರಿ ಆಸ್ಪತ್ರೆಯ ಜನರ ಸೌಕರ್ಯವನ್ನು ಹೆಚ್ಚಿಸಲು ಇತರ ಕಡೆಯ ಜನರಿಗೆ ತೊಂದರೆಮಾಡುವದೇ? ('Rob Peter to pay Paul') ಎಂಬ ಗಾದೆಗೆ ಸರಿಯಾಯಿತು. ಮಡಿಕೇರಿಯಲ್ಲಾದರೆ ಸಿವಿಲ್ ಆಸ್ಪತ್ರೆಯ ಮೂರು ಡಾಕ್ಟರುಗಳಲ್ಲದೆ ಮಲೇರಿಯಾ ಡಾಕ್ಟರೊಬ್ಬರು ಇರುತ್ತಾರೆ. ಖಾಸಗೀ ಇಂಗ್ಲಿಷ್, ಆಯುರ್ವೇದಿಕ್ ಮತ್ತು ಯುನಾನಿ ಡಾಕ್ಟರುಗಳೂ ಸಹ ಇರುತ್ತಾರೆ. ಜನರಿಗೆ ಯಾರೊಬ್ಬರ ಸಹಾಯವನ್ನಾದರೂ ಪಡಕೊಳ್ಳಬಹುದು. ನಾಡಿನ ಜನರು ಏನುಮಾಡಬೇಕು? ಆಯಾ ಆಸ್ಪತ್ರೆಗಳ ಕಂಪೌಂಡರುಗಳಿಗೆ ಸಲಾಂ ಹೊಡಿಯಬೇಕು, ಅಷ್ಟೆ! ಹತ್ತು ಮೂರು ಹೋಗಲಾರದ ಖಾಯಿಲಸ್ಥನು ಮಡಿಕೇರಿ ಯಾ ವೀರರಾಜಪೇಟೆಗೆ ಹೋಗುವದು ಸಾಧ್ಯವೇ? ಈ ಮೊಗಲಿನ ತಿಂಗಳ ಸರದಿಯಲ್ಲಿಯೇ ಈ ಭಾಗದ ಜನರಿಗೆ ಉಂಟಾದ ಕಷ್ಟವನ್ನು ಕೇಳಿರುವೆನು. ಒಂದು ನಿಮೋನಿಯಾ ಕಾಯಿಲೆಯು ಬಹು ಕಷ್ಟಪಡಬೇಕಾಯಿತಂತೆ! ಒಂದು ಪಕ್ಷ ಡಾಕ್ಟರವರು ಕೆಲವು ದಿನಗಳು ಉಪಚರಿಸುತ್ತಿದ್ದು, ಹೋಗಿಬಿಟ್ಟರೆ ಗತಿ ಏನು? ‘ನಡು ನೀರೊಳು ಕೈಯಬಿಡುವರೆ’ ಎಂಬ ದಾಸರ ಪದಕ್ಕೆ ಹೋಲಿಕೆಯಾಗುವುದಿಲ್ಲವೇ?

ಹಳ್ಳಿಗಾಡಿನ ಜನರ ಸೌಕರ್ಯವನ್ನು ಹೆಚ್ಚಿಚ್ಚು ಮಾಡುವ ಮನೋಭಾವನೆಯುಳ್ಳ ಈ ಕಾಲದಲ್ಲಿ ಕೊಡಗಿನ ಸ್ಥಿತಿಯೇ ಒಂದು ವಿಧವಾಗಿದೆ. ಸಾಧಾರಣ ಕಮ್ಮಿಯೆಂದರೆ 150 ಜನ ಖಾಯಿಲಸ್ಥರು ಬರುವ ಆಸ್ಪತ್ರೆಯಲ್ಲಿ ಎಷ್ಟು ಜನರಿಗೆ ಡಾಕ್ಟರವರ ಸಲಹೆಯೇ ಅವಶ್ಯವಿರಬಹುದು? ಅಧಿಕಾರಿಗಳು ಇವನ್ನೆಲ್ಲಾ ಪುನರಾಲೋಚಿಸಿ ಇಂಥಾ ಏರ್ಪಾಡನ್ನು ಖಂಡಿತ ಮನ್ನಮಾಡಿ, ನಾಡಿನ ಅಸಹಾಯಕ ಜನರಿಗೆ ಒದಗಿದ ಸೌಕರ್ಯವನ್ನೂ ಕಡಿಮೆ ಮಾಡಬಾರದಾಗಿ ಕೇಳಿಕೊಳ್ಳೋಣವೇ?

‘ಪೊನ್ನಂಪೇಟೆ.’

[illegible]

[illegible] ಗಳಿಗೆ ಶ್ರೀ [illegible] ಐ. ಬೆಳ್ಳಿಯಪ್ಪನವರ ಅಧ್ಯಕ್ಷತೆಯಲ್ಲಿ [illegible] 1 [illegible] (ಗೌರವ ಕಾರ್ಯದರ್ಶಿ) 2 [illegible] (ಗೌರವ ಕಾರ್ಯದರ್ಶಿ) 3. [illegible] (ಖಜಾಂಚಿ) 4. ಕೆ. ಸಿ. ಕರುಂಬಯ್ಯನವರು, 5. ಐ. ಸಿ. ಕಾರ್ಯಪ್ಪನವರು, 6. ಸಿ. ಜಿ. ಅಯ್ಯಪ್ಪನವರು, 7 ಕೆ ಯಂ. [illegible], 8. [illegible] ಸೋಮಯ್ಯನವರು, 9. ಯಂ. ಯಸ್. ಸೋಮಯ್ಯನವರು, 10 [illegible] ಯ್ಯನವರು, 12. ಹೆಚ್. ಯಂ [illegible] ನವರು. 13 [illegible] ಯ್ಯನವರು. 14. [illegible] ಯ್ಯನವರು ಮತ್ತು 15. [illegible] ರಯ್ಯನವರು ಹಾಜರಿದ್ದರು.

1 ಜಿಲ್ಲಾ ಸಹಕಾರಿ ಸಂಘಗಳ ರಿಜಿಸ್ಟ್ರಾರ್‌ರವರು, 2 ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು, 3. ಇಂಡಿಯಾ ಸರಕಾರದ ಮಾರ್ಕೆಟಿಂಗ ಆಫೀಸರ್ ಶ್ರೀ. [illegible] ಸಹಕಾರಿ [illegible] ಶ್ರೀ. [illegible] ಹಾಜರಿದ್ದರು.

1. ಹಿಂದಿನ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಕಳೆದ ಮೀಟಿಂಗಿನ ನಂತರ ಪಿಜನು ಬೋರ್ಡಿನ ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

3. ಜನವರಿ ತಿಂಗಳ [illegible] ಮತ್ತು ಖರ್ಚಿನ ಲೆಕ್ಕ ಓದಿ ಒಪ್ಪಲಾಯಿತು.

ಹಿಂದಣ ಶಿಲ್ಕು	ರೂ. 21,915	6	4
ಜನವರಿ ತಿಂಗಳಲ್ಲಿ			
ವಸೂಲಿ	ರೂ. 28.319	7	0
ಜುಮ್ಲ	ರೂ. 50.234	13	4
ಸದರಿ ತಿಂಗಳಲ್ಲಿ			
ಖರ್ಚು	ರೂ. 31,066	9	0
ಬಾಕಿ ಶಿಲ್ಕು	ರೂ. 19,168	4	4

4. ಈ ಕೆಳಗಿನ ಸಂಘಗಳಿಗೆ ಸಾಲಗಳು ಮಂಜೂರಾದವು.

1. ಕಿಗ್ಗಟ್ಟುನಾಡು ಕ್ರೆಡಿಟ್ ಲೋನ್, ಸೇಲ್ ಮತ್ತು ಸಪ್ಲೈ ಸಂಘಕ್ಕೆ ರೂ. 6000, 2. ಕೈಕೇರಿ ಭತ್ತದ ಸ್ಟೋರಿಗೆ ರೂ. 3000, 3. ಅಮ್ಮತ್ತಿ ಭತ್ತದ ಸ್ಟೋರಿಗೆ ರೂ. 5000, 4. ನಡೀಕೇರಿ ಭತ್ತದ ಸ್ಟೋರಿಗೆ ರೂ. 2000, 5. ಮೂರ್ನಾಡು ಭತ್ತದ ಸ್ಟೋರಿಗೆ 3000, 6 ಮೂರ್ನಾಡು ಬಾಡಗ ಸಂಘಕ್ಕೆ ರೂ. 1000.

5. ಬಿಟ್ಟಂಗಾಲ ಸಂಘದ ಸಾಲದ ಅರ್ಜಿಯನ್ನು ವಸೂಲಾತಿಯು ತೃಪ್ತಿಕರವಿಲ್ಲದ್ದರಿಂದ ಮುಂದರಿಸಲಾಯಿತು.

6. ಕೊಡಗು ಮುಸ್ಲಿಂ ಸಂಘದ ಸಾಲದ ಅರ್ಜಿಯನ್ನು ಕಾರಣಾಂತರಗಳಿಂದ ಇನ್ನೊಂದು ಮೀಟಿಂಗಿಗೆ ಚರ್ಚೆಗೆ ಇಡಲಾಯಿತು.

7. ಬ್ಯಾಂಕಿನ ಅಸಿಸ್ಟೆಂಟ್ ಗುಮಾಸ್ತರಾದ ಮಂಡೆಯಂಡ ಬೋಪೈಯ್ಯನವರನ್ನು ಭಾಗಮಂಡ್ಲ ನಾಡಿನ ಸೂಪರ್‌ವೈಸರಾಗಿಯೂ ಅಲ್ಲಿಯ ಸೂಪರ್‌ವೈಸರಾಗಿದ್ದ ಮಾದಪ್ಪನವರನ್ನು ಬ್ಯಾಂಕಿನ ಅಸಿಸ್ಟೆಂಟ್ ಗುಮಾಸ್ತರಾಗಿಯೂ, ಸು[illegible] ಬೋರ್ಡಿನ ಡೈರೆಕ್ಟರಗಳು ತಾ. 21-1-40 ರ ಮೀಟಿಂಗಿನಲ್ಲಿ ತೀರ್ಮಾನಿಸಿದ್ದನ್ನು ಮಂಜೂರು ಮಾಡಲಾಯಿತು

8. ಅಸಿಸ್ಟೆಂಟ್ ಗುಮಾಸ್ತರಾದ ಮೂರ್ನಾಡು ಚಿಣ್ಣಪ್ಪನವರಿಗೆ ಅವರ ಈಗಿನ ಸಂಬಳವನ್ನು ಬ್ಯಾಂಕಿನಿಂದ ಕೊಡುವಂತೆ ಮಂಜೂರು ಮಾಡಲಾಯಿತು.

9. ಸೌತ್ ಇಂಡಿಯಾ ಕೋಪರೇಟಿವ್ ಇನ್ಸೂರನ್ಸ್ ಸೊಸೈಟಿಯವರು ಈ ಬ್ಯಾಂಕಿನ ಮೇಲೆ ಮದರಾಸಿನ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರ ಕೋರ್ಟಿನಲ್ಲಿ ದಾವೆ ದಾಖಲು ಮಾಡಿದ್ದನ್ನು ಬ್ಯಾಂಕಿನ ಪರ ವಾದಿಸಲಿಕ್ಕೆ ನೇಮಕ ಮಾಡಿದ ಮದರಾಸಿನ [illegible] ಬ್ಯಾಂಕಿನಿಂದ 75 ರೂಪಾಯಿ [illegible] ಕೊಡುವಂತೆ ತೀರ್ಮಾನಿಸಲಾಯಿತು.

10. ಈ ಕೆಳಗಿನ ಮೆಂಬರು ಸಂಘಗಳನ್ನು ಮತ್ತು ಬಿಡಿ ಮೆಂಬರುಗಳನ್ನು ಬ್ಯಾಂಕಿನ ಮೆಂಬರುಗಳನ್ನಾಗಿ ಆರಿಸಲಾಯಿತು

ಕರನರೆ ಭಗವತಿ ಜಿ. ಬಿ. (2) ವೆ[illegible] ಸಿ. ಸಿ. ಯಸ್. (3) ಮ. ಗಳಾದ ಸಣ್ಣದ [illegible] ಪ್ಪನವರು, (4) ಕೆ. ಯಂ. ಸುಬ್ರಾಯರು, (5) ಮಾಳೇಟಿರ [illegible] ಯ್ಯನವರು, (6) ಕುಟ್ಟಂಡ [illegible] ಯ್ಯನವರು ಮತ್ತು (7) ನಡಿಕೇರಿಯಂಡ ಸಿ. ಸುಬ್ಬಯ್ಯನವರು.

11 ಒಬ್ಬ ಮಹಿಳೆಯರು ತನ್ನ ಹೆಸರಿನಲ್ಲಿರುವ ಡಿಪಾಜಿಟ್ಟು ಮೊಬಲಗನ್ನು ತನ್ನ ಮಕ್ಕಳ ಹೆಸರಿಗೆ ವರ್ಗಾಯಿಸಬೇಕೆಂದು ಬರಕೊಂಡ ಅರ್ಜಿ ಮೇರೆ ವರ್ಗಾಯಿಸಲು ಮಂಜೂರು ಮಾಡಲಾಯಿತು.

12 ಮದ್ರಾಸಿನಲ್ಲಿ ತಾರೀಕು 27-10 39 ರಲ್ಲಿ ನಡೆದ ಇಂಡಿಯನ್ ಪ್ರೊವಿನ್ಶಿಯಲ್ ಕೋಪರೇಟಿವ್ ಬ್ಯಾಂಕಿನ ಸ್ಟಾಂಡಿಂಗ್ ಕಮಿಟಿಯ ಮತ್ತು ಆಲ್ ಇಂಡಿಯಾ ಕೋಪರೇಟಿವ್ ಇನ್‌ಸ್ಟಿಟ್ಯೂಟ್ ಎಸೋಸಿಯೇಶನ್ನಿನ ಕಾನ್ಫರೆನ್ಸಿಗೆ ಹೋದ ಮ. ಐ. ಸಿ ಕಾರ್ಯಪ್ಪನವರ ರಿಪೋರ್ಟನ್ನು ಓದಿ ರಿಕಾರ್ಡು ಮಾಡಲಾಯಿತು.

13 ಇಂಡಿಯನ್ ಬ್ಯಾಂಕು ಆಕ್ಟಿನ ಸೂಚನೆಯನ್ನು ಅನುಸರಿಸಿ ರಿಜಿಸ್ಟ್ರಾರರವರಿಂದ ಬಂದ ಪತ್ರವನ್ನು ಆಲೋಚನೆ ಬಗ್ಗೆ ಇನ್ನೊಂದು ಮೀಟಿಂಗಿಗೆ ಇಡಲಾಯಿತು.

14. ಡೈರೆಕ್ಟರುಗಳ ನಂಬ್ರ 5132 ತಾ. 20-1-40ರ ತೀರ್ಮಾನಕ್ಕೆ ಬದಲಾಗಿ ಸೌತ್ ಇಂಡಿಯಾ ಇನ್ಸೂರೆನ್ಸ್ ಸೊಸೈಟಿಯ ಕೊಡಗು ಲೋಕಲ್ ಬೋರ್ಡಿನ ಮಾಜಿ ಪ್ರೆಸಿಡೆಂಟರಾದ ಮ. ಐಚೆಟ್ಟಿರ ಸುಬ್ಬಯ್ಯನವರು ಮತ್ತು ಮಾಜಿ ಕನ್‌ವೀನರ್ ಮ. ಯಂ. ಯಂ. ಬೆಳ್ಯಪ್ಪನವರ ಮೇಲೆ ಈ ಬ್ಯಾಂಕಿಗೆ ಸದರಿ ಇನ್ಸೂರೆನ್ಸ್ ಸೊಸೈಟಿಯಿಂದ ಬರಬೇಕಾದ ಕಮಿಷನ್ ಮತ್ತು ಸದರಿ ಲೋಕಲ್ ಬೋರ್ಡಿನ ಲೆಕ್ಕ ಮತ್ತು ಕರೆಸ್‌ಪಾಂಡೆನ್ಸ್ ವಗೈರೆಗಳನ್ನು ವಸೂಲಾತಿ ಬಗ್ಗೆ ಕೊಡಗು ಅಸಿಸ್ಟೆಂಟ್ ರಿಜಿಸ್ಟ್ರಾರರವರ ಕೋರ್ಟಿನಲ್ಲಿ ದಾವೆ ಹೂಡುವಂತೆ ತೀರ್ಮಾನಿಸಲಾಯಿತು.

15. ಒಬ್ಬ ಮಹಿಳೆಯಳು ತನ್ನ ಗಂಡನ ಬಾಪ್ತು ಮೊಬಲಗನ್ನು ಸದರಿಯವರಿಗೆ ಸ್ಥಿರಬುದ್ಧಿ ಇಲ್ಲದ್ದರಿಂದ ಇನ್ನೊಬ್ಬ ಮಹಿಳೆಯರ ಹೆಸರಿನಲ್ಲಿ ಡಿಪಾಜಿಟ್ಟು ಇಟ್ಟಿದ್ದನ್ನು ಸದರಿಯವರು ಪೌತಾದ್ದರಿಂದ ಹಣ ತನಗೆ ಕೊಡಿಸಿಕೊಡಬೇಕಾಗಿ ಈ ಮೊದಲೇ ಅರ್ಜಿ ಬರೆದುಕೊಂಡದ್ದಕ್ಕೆ ನಂಬ್ರ 5028 ತಾ. 26-8-39 ರ ತೀರ್ಮಾನದ ಮೇರೆ ಸಕ್ಸೆಸನ್ ಸರ್ಟಿಫಿಕೇಟ್ ಹಾಜರುಪಡಿಸಬೇಕಾಗಿ ತಿಳಿಸಿದ ಪ್ರಕಾರ ಈಗ ಅದನ್ನು ಹಾಜರುಪಡಿಸಿರುವುದರಿಂದ ಸದರಿ ಮೊಬಲಗನ್ನು ತನಗೆ ಕೊಡಬೇಕಾಗಿ ಅರ್ಜಿ ಬರೆದುಕೊಂಡದ್ದಕ್ಕೆ ಫಿಕ್ಸೆಡ್ ಡಿಪಾಜಿಟ್ಟು ರಶೀತಿ ಹಾಜರುಪಡಿಸಿ ಹಣ ಹೊಂದಿಕೊಳ್ಳಬಹುದೆಂದು ತೀರ್ಮಾನಿಸಲಾಯಿತು.

16. ನಾಗಿಕೆ ತಕ್ಕಳ್ಳಿ ಸೊಸೈಟಿಯ ಪ್ರೆಸಿಡೆಂಟರು ಬ್ಯಾಂಕಿಗೆ ಪಾವತಿ ಮಾಡಲು ಬಾಕಿ ಇರುವ ಸಾಲದ ಮೊಬಲಗಿಗೆ ಹೆಚ್ಚಿನ ಕಂತು ಕೊಡಬೇಕಾಗಿ ಬರಕೊಂಡ ಅರ್ಜಿಯನ್ನು ಡೈರೆಕ್ಟರುಗಳ ನಂಬ್ರ 5123 ತಾ. 20-1-40ರ ತೀರ್ಮಾನದ ಮೇರೆ ಅಸಿಸ್ಟೆಂಟ್ ರಿಜಿಸ್ಟ್ರಾರರವರಿಗೆ ಕಳುಹಿಸಿದ ಪ್ರಕಾರ ಸದರಿ ಸೊಸೈಟಿಯ ಸ್ಥಿತಿಗತಿಯನ್ನನುಸರಿಸಿ ನಂಬ್ರ 1788 ತಾ. 12-2-40ರ ಪತ್ರ ಬಂದದ್ದನ್ನು ಓದಲಾಯಿತು.

ಆ ಸಂಘದ ವಸೂಲಾತಿಯು ಅಭಿವೃದ್ಧಿಯನ್ನು ಹೊಂದುವ ಪವಕಾಶವಾಗಿ ತಾ. 25-3-40ರ ವಳಗೆ ಬರೆದು ಕಳುಹಿಸುವಂತೆ ಸದರಿ ಅರ್ಜಿಯನ್ನು ಆ ಸರ್ಕಲಿನ ಸುಪರ್‌ವೈಜರಿಗೆ ಕಳುಹಿಸುವಂತೆ ತೀರ್ಮಾನಿಸಲಾಯಿತು.

17. ಸಾಲನಿವಾರಣೆ ಬೋರ್ಡಿನವರ ಶಿಫಾರಸ್ಸು ಮೇರೆ ಬ್ಯಾಂಕಿನವರು ಕಿರುಂಡಾಡು ಸಂಘದ ಮೆಂಬರಾದ ಕಡಿಯಂಡ ಸೋಮಯ್ಯನವರಿಗೆ ಸಾಲ ಮಂಜೂರು ಮಾಡಿರುವುದರಿಂದ ಸದರಿ ಮೊಬಲಗಿನಲ್ಲಿ ಮೇಲ್ಕಂಡ ಅಪ್ಪನೆರವಂಡ ಮುಂದಪ್ಪನವರಿಗೆ ಸೋಮಯ್ಯನವರು ಕೊಡಲಿಕ್ಕಿರುವ ಸಾಲದ ಮೊಬಲಗಿಗೆ ಸದರಿ ಮುಂದಪ್ಪನವರು ಕೆ. ಪೂವಯ್ಯ ವಗೈರರಿಗೆ ಸಾಲ ಕೊಡಲಿಕ್ಕಿರುವುದರಿಂದ ಮಡಿಕೇರಿ ಮುನ್‌ಸೀಫ್ ಕೋರ್ಟಿನಿಂದ ಸದರಿ ಮೊಬಲಗಿಗೆ ತಡೆ ನೋಟೀಸು ಬಂದದ್ದನ್ನು ಓದಲಾಯಿತು.

ಮೇಲ್ಕಂಡ ನೋಟೀಸಿಗೆ ಮುಂದಪ್ಪನವರ ಅಭಿಪ್ರಾಯವನ್ನು ಬರೆದು ಕೇಳಬೇಕಾಗಿ ತೀರ್ಮಾನಿಸಲಾಯಿತು.

18. ಸೌತ್ ಇಂಡಿಯಾ ಕೋಆಪರೇಟಿವ್ ಇನ್ಸೂರೆನ್ಸ್ ಸೊಸೈಟಿಯವರು ಮದರಾಸಿನಲ್ಲಿ ಈ ಬ್ಯಾಂಕಿನ ಮೇಲೆ ದಾವೆ ಹೂಡಿರುವುದರಿಂದ ಬ್ಯಾಂಕಿನವರು ಏರ್ಪಾಡು ಮಾಡಿದ ಅಲ್ಲಿಯ ಲಾಯರಾದ ಶ್ರೀ. ಆರ್. ರಾಮಮೂರ್ತಿ ಅಯ್ಯರ್ ಯಂ. ಎ. ಯಂ. ಎಲ್. ರವರು ಅವರ ಫೀಜು ಸಂಬಂಧಿಸಿ ಬರೆದುದರಿಂದ ಪತ್ರ ವಿಷಯ ನಂ. 5147 ತಾ. 17-2-40 ರ ಠರಾವು ಮೇರೆ ತೀರ್ಮಾನಿಸಿರುವುದರಿಂದ ಬಾಕಿ ಮಾಡಲಾಯಿತು.

19 ತಾವಳಗೆರೆ ಸಹಕಾರ [illegible] ಸಂಗಳ [illegible] ಲಿಂಗಪ್ಪ ಮತ್ತು ವೀರಪ್ಪನವರು ಸಹ ಆಕಸ್ಮಿಕವಾಗಿ ಎಮ್ಮೆ ಮನೆ [illegible] ಹೋಗಿರುವ ಕಾರಣ ಬ್ಯಾಂಕಿನಿಂದ ಧನ ಸಹಾಯ ಕೊಡಬೇಕಾಗಿ ಬರಕೊಂಡ ಅರ್ಜಿಯನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

20. ಸಂಘಗಳಿಂದ ಮೆಂಬರುಗಳಿಗೆ ಕೊಡುವ ಸಾಲವು ಆಯಾಯ ಮೆಂಬರುಗಳ ಗಿರವಿ ಇಡುವ ಭೂಮಿಯ ಕ್ರಮ ಪ್ರಕಾರ ಸಾಲ ಕೊಡಬೇಕೆಂದು ಅಸಿಸ್ಟೆಂಟಾಗಿ ರಿಜಿಸ್ಟ್ರಾರ್‌ರವರು ಬರೆದ ನಂ. 2498 ತಾ. 2 2-40 ರ ಪತ್ರವನ್ನು ಇನ್ನೊಂದು ಮೀಟಿಂಗಿಗೆ ಚರ್ಚೆ ಬಗ್ಗೆ ಇಡಲಾಯಿತು.

21. ಇಂಡಿಯನ್ ಕೋಪರೇಟಿವ್ ಮಿಶನರಿ ಸೊಸೈಟಿಯ ಸೇರುವ ರೂಲ್ಸುಗಳನ್ನು ಇನ್ನೊಂದು ಮೀಟಿಂಗಿನಲ್ಲಿ ಚರ್ಚೆ ಬಗ್ಗೆ ಇಡುವಂತೆ ತೀರ್ಮಾನಿಸಲಾಯಿತು.

22. ಸೌತ್ ಇಂಡಿಯಾ ಕೋಪರೇಟಿವ್ ಇನ್ಸೂರೆನ್ಸ್ ಕೇಸಿನ ಹಿಯರಿಂಗ್ ಮದ್ರಾಸಿನಲ್ಲಿ ತಾ. 5-3-40 ರಲ್ಲಿ ಇಟ್ಟಿರುವುದರಿಂದ ಅದಕ್ಕೆ ಬ್ಯಾಂಕಿನ ಪ್ರೆಸಿಡೆಂಟರು ಹೋಗಬೇಕೆಂದು ತೀರ್ಮಾನವಾಯಿತು.

23. ಬ್ಯಾಂಕಿನ ಜನರಲ್ ಮೀಟಿಂಗಿನ ಅಧ್ಯಕ್ಷರಾಗಿ ತನಗೆ ಬರಲು ಅನುಕೂಲವಾಗಿ ಕೃಷ್ಣಮೂರ್ತಿ [illegible] ಪತ್ರ ಬರೆದಿರುವುದರಿಂದ ಬೈಲಾ ಪ್ರಕಾರ ಬ್ಯಾಂಕಿನ ಪ್ರೆಸಿಡೆಂಟರೇ ತಾ. 18-2-40 ರಲ್ಲಿ ನಡೆಯುವ ಬ್ಯಾಂಕಿನ ಜನರಲ್ ಮೀಟಿಂಗಿಗೆ ಅಧ್ಯಕ್ಷರಾಗಬೇಕೆಂತ ತೀರ್ಮಾನಿಸಲಾಯಿತು.

24. ಬ್ಯಾಂಕಿನ ಆಶ್ರಯದಲ್ಲಿ ಏರ್ಪಡಿಸಿರುವ ವಸ್ತುಪ್ರದರ್ಶನವನ್ನು ತಾರೀಕು 18-2-40 ರಲ್ಲಿ ತೆರೆಯುವಂತೆ ಸಹಕಾರಿ ಸಂಘಗಳ ರಿಜಿಸ್ಟ್ರಾರ್‌ರವರನ್ನು ಕೇಳಿಕೊಳ್ಳುವಂತ ತೀರ್ಮಾನವಾಯಿತು.

25. ಈ ವಸ್ತುಪ್ರದರ್ಶನದಲ್ಲಿ ಉತ್ತಮವಾದುದಕ್ಕೆ ಬಹುಮಾನ ಕೊಡಲು ಜನರಲ್ ಬಾಡಿಯವರ ಮಂಜೂರಾತಿ ನಿರೀಕ್ಷಣೆ ಮೇರೆ ಕಾಮನ್‌ಗುಡ್ ಫಂಡಿನಿಂದ ರೂ. 50 ಖರ್ಚು ಮಾಡುವಂತೆ ತೀರ್ಮಾನಿಸಲಾಯಿತು.

26. ಮೇಲ್ಕಂಡ ವಸ್ತುಪ್ರದರ್ಶನದ ಏರ್ಪಾಡು ಬಗ್ಗೆ ಈ ಕೆಳಗಿನ ಮೆಂಬರುಗಳನ್ನು ಸಬ್ ಕಮಿಟಿಯವರನ್ನಾಗಿ ನೇಮಿಸಲಾಯಿತು-(1) ಮ. ಗಳಾದ ಯಂ. ಯಸ್. ಸೋಮಯ್ಯನವರು, (2) ಎನ್. ಬಿ. ಸೋಮಯ್ಯನವರು, (3) ಹೆಚ್. ಯಂ. ಕೃಷ್ಣಣ್ಣನವರು, (4) ಸಿ. ಯಂ. ಪೊನ್ನಪ್ಪನವರು ಮತ್ತು (5) ಕೆ. ಎ. ಸೋಮಯ್ಯನವರು. (ಕೋ-ಆಪರೇಟಿವ್ ಇನ್ಸ್‌ಪೆಕ್ಟರುಗಳು.)

ಸಿ. ಐ ಬೆಳ್ಯಪ್ಪ,
(ಅಧ್ಯಕ್ಷರು.)

———

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	-	50,000	0	0
ವಸೂಲಾದ ಶೇರ್ ಮೊಬಲಗು	-	47,810	0	0
ಜಮೂಬಂದ ಠೇವಣಾತಿ	-	2,13,262	0	4
ವಸೂಲಾದ ಕ್ಷೇಮನಿಧಿ	-	1,56,611	12	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	-	40,979	5	1
ಥ್ರಿಫ್ಟ್ ಡಿಪಾಜಿಟ್ಟು	-	23,560	14	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೊನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೊನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ಥ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಥ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ಠೇವಣಿ ಸ್ವೀಕರಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂದ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯನವರು.
ಸೆಕ್ರೆಟರಿ:—ಸಿ. ಎಸ್. ಎನ್. ರಾಮಶೆಟ್ಟಿಯವರು.

ತಾ 1-1-1940

ಕೊಡಂದೇರ ಡಿ. ಮಾಚಯ್ಯ,
L.D Sc. (COLLEGE OF DENTISTRY)
EX-SUPERVISOR LAXMIDAS PATEL DENTAL HOSPITAL KARACHI

ದಂತ ವೈದ್ಯರು

[illegible]

ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ [illegible]

DENTAL CLINIC

ನಲ್ಲಿ [illegible]

ಸುಲಭ ದರ. (33) [illegible] ಚಿಕಿತ್ಸೆ.

[illegible]

ಜ್ವರದ ಗು[illegible]

[illegible]

ಬಾಟ್ಲಿಗೆ 1 ರೂ. [illegible]

ಜ್ವರಗಡ್ಡೆ ([illegible]) [illegible]

ಎಷ್ಟು ವರ್ಷದ ಜ್ವರಗಡ್ಡೆ ([illegible]) [illegible] ಗುಣವಾಗಿ [illegible]

[illegible]

(52-10) [illegible]

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ-ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜನ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ದಾವಾ ಮತ್ತು ಅಮಲ್ಜಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ ಪಿ ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಯ್‌ಪ್ರೈಟಿಂಗ್ ಮೊದಲಾದ ವಿಷಯಗಳಲ್ಲಿ **ಕಡಿಮೆ ಫೀಸಿನಲ್ಲಿ** ಉತ್ಕೃಷ್ಟವು ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ **ಆೖಡಿಯಲ್ ಟ್ಯುಟೋರಿಯಲ್ ಸ್ಕೂಲ್** ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara.

52—34

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ-ಅವನಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಪಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬೇಕಾದಷ್ಟು ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುವು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇನೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್.)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-3

Printed & Published by P. I. Belliappa, at 'Kodagu' Press Mercara for 'Kodagu' Ltd

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೬—೩—೧೯೪೮.

ಸಂಪುಟ ೧೯] [ಸಂಚಿಕೆ ೪೭

MR. CAN'T. : These are very hard days. No; I can't save anything.

MR. CAN. : I have opend a CUMULATIVE DEPOSIT a/c now in the CORPORATION; after this I find that **I CAN SAVE.**

From small amounts set apart every month fortunes can be built. It is not difficult to set apart a rupee (or multiple thereof) per month from one's earnings. Those who opened the CUMULATIVE DEPOSIT accounts know how easy it is to save.

Have you opened yours?

THE CANARA BANKING CORPORATION LIMITED.

(Incorporated in British India)

Estd. 1906.

52-11

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್,

ಕಟಪಾಡಿ,—ದ. ಕನ್ನಡ.

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

52-17

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಯ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮುಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ. ಪಿ. ಜಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಜಿ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ. ಕೆ. ಪೊಗಪ್ಪನವರು.

ನಾಪೋಕ್ಲು—ಮ. ಬೆಳ್ಳಿಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:—	(ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:—	(ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:—	(ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ಸಂಜುಂಡೇಶ್ವರ, ಎಲ್. ಎ. ಎಂ. ಎಸ್
(52-22) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು—ಕೆ. ರಾಮಕೃಷ್ಣರಾವ್,
ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು— ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ್ಷಿಪ್ ಶರತುಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡೆಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-6

ಕಾಂಗ್ರೆಸ್

ಕಾರ್ಯಕಾರಿ ಮಂಡಳಿ.

ಅಗತ್ಯ ಬಿದ್ದಾಗ ಸತ್ಯಾಗ್ರಹ.

ರಾಮಗಡದಲ್ಲಿ ಇದರ ವಿಸ್ತೃತ ಚರ್ಚೆ.

ಮಾರ್ಚಿ ತಿಂಗಳ ತಾರೀಕು 29 ಮತ್ತು 1ರಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗಿನಲ್ಲಿ ಹಲವು ಮಹತ್ವದ ಗೊತ್ತುವಳಿಗಳು ಅಂಗೀಕೃತವಾಗಿರುವವು ಅವುಗಳನ್ನು ಇಲ್ಲಿ ಕೊಟ್ಟಿರುವೆವು.

(1) 'ಕಾಂಗ್ರೆಸ್ ಅಂಗ ನಿಬಂಧನೆಯ 13ನೇ ವಿಧಿಯ ರೀತಿಯಲ್ಲಿ ಅಂಗ ಸಂಸ್ಥೆಯಾದ ಬಂಗಾಳ ಪ್ರಾಂತೀಯ ಕಾಂಗ್ರೆಸ್ ಸಮಿತಿಯನ್ನು ಯಾಕೆ ಪ್ರತ್ಯೇಕಿಸಕೂಡದೆಂಬುವುದಕ್ಕೆ ಬಂಗಾಳ ಕಾಂಗ್ರೆಸು ಕಾರಣ ತೋರಿಸಬೇಕೆಂದು ವರ್ಕಿಂಗ್ ಕಮಿಟಿಗೆ ತೋರಿದೆ. ಬಂಗಾಳದ ಕಾಂಗ್ರೆಸು ಕೊಡುವ ಯಾವ ಸಮಜಾಯಿಷಿಯನ್ನೇ ಆಗಲಿ, ಅಧ್ಯಕ್ಷರು ಪರಿಶೀಲಿಸಿ ಇದರ ಮೇಲೆ ಹುಕುಂ ಹೊರಡಿಸುವ ತನಕ ಬಂಗಾಳ ಪ್ರಾಂತಿಕ ಕಾಂಗ್ರೆಸೂ, ಅದರ ಕಾರ್ಯಕಾರಿ ಮಂಡಳಿಯೂ ಸಸ್ಪೆಂಡ್ ಮಾಡಲ್ಪಟ್ಟಿದೆ. ಅವುಗಳ ಕಾರ್ಯವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನೇಮಿಸಿದ ಎಲೆಕ್ಷನ್ ಕಮಿಟಿಯು ನಿರ್ವಹಿಸತಕ್ಕದ್ದಾಗಿದೆ.'

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಯುದ್ಧದ ಸಂಬಂಧದ ತನ್ನ ಅಭಿಪ್ರಾಯವನ್ನು ಮೂರು ದಿನಗಳಿಂದ ಚರ್ಚಿಸಿ ಈ ರೀತಿಯ ಠರಾವನ್ನು ಅಂಗೀಕರಿಸಿದೆ.

(2) 'ಭಾರತೀಯರ ಅಂಗೀಕಾರ ಪಡೆಯದೆ ಭರತಖಂಡವು ಒಂದು ಯುದ್ಧಭಾಗಿ ರಾಷ್ಟ್ರವೆಂದು ಬ್ರಿಟಿಷ್ ಸರ್ಕಾರದವರು ಉದ್ಘೋಷಿಸಿರುವದೂ, ಈ ಯುದ್ಧದಲ್ಲಿ ಭಾರತದ ಸಂಪತ್ತನ್ನು ಉಪಯೋಗ ಮಾಡಿಕೊಳ್ಳುತ್ತಿರುವದೂ ಭಾರತೀಯರಿಂದ ಸಹಿಸಲಾಗುವುದಿಲ್ಲ.

ಇತ್ತೀಚೆಗೆ ಸರ್ಕಾರದಿಂದ ಮಾಡಲ್ಪಟ್ಟಿರುವ ಎಲ್ಲಾ ಹೇಳಿಕೆಗಳೂ ಬ್ರಿಟಿಷ್ ಸರ್ಕಾರವು ಸಾಮ್ರಾಜ್ಯವಾದೀ ತತ್ವಪಾಲನೆಗಾಗಿಯೂ, ಬ್ರಿಟಿಷ್ ಸಾಮ್ರಾಜ್ಯೋದ್ಧಾರಕ್ಕಾಗಿಯೂ ಯುದ್ಧ ಹೂಡಿದೆಯೆಂಬುದನ್ನೂ ವ್ಯಕ್ತಪಡಿಸುತ್ತವೆ. ಈ ಧ್ಯೇಯ ಸಾಧನೆಗಾಗಿ ಬ್ರಿಟನು ಭಾರತೀಯರ ಹಾಗೂ ಆಫ್ರಿಕಾ ದೇಶೀಯರ ಸುಲಿಗೆ ಮಾಡಲಿರುವದು ಸ್ಪಷ್ಟವಾಗಿಯೇ ಇದೆ. ಈ ಬಗೆಯ ನೀತಿಯುಳ್ಳ ಬ್ರಿಟನಿನ ಯುದ್ಧದಲ್ಲಿ ಕಾಂಗ್ರೆಸು ಸಹಭಾಗಿಯಾಗಿ ಸೇರಲಿಚ್ಛಿಸುವುದಿಲ್ಲ. ಭಾರತೀಯರ ಸೈನಿಕರು ಬ್ರಿಟಿಷ್ ಸರಕಾರಕ್ಕಾಗಿ ಹೋರಾಡುವವನ್ನೂ ಯುದ್ಧಕ್ಕಾಗಿ ಭಾರತದಿಂದ ಜನ ಧನ ಸಹಾಯಗಳನ್ನೊಗಿಸುವದನ್ನೂ ಕಾಂಗ್ರೆಸ್ ಒಪ್ಪುವುದಿಲ್ಲ.

ಭಾರತೀಯರ ಸ್ವಾತಂತ್ರ್ಯವು **ಸಾಮ್ರಾಜ್ಯವಾದದ ಮತ್ತು ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಆವರಣದೊಳಗಾಗಲೀ ಅಥವಾ ಇನ್ನಾವ ರಚನೆಯೊಳಗಾಗಲೀ ಬಾಳಲು ಸಾಧ್ಯವಿಲ್ಲ. ಇದರಿಂದ ಭಾರತವು ಬ್ರಿಟನಿನ ಅನೇಕ ತೊಡಕುಗಳಿಗೆ ಸಿಕ್ಕಿ ಬಿದ್ದಿರುವಂತಾಗುತ್ತದೆ. ಆದ್ದರಿಂದ **ಭಾರತೀಯರು ಪೂರ್ಣ ಸ್ವಾತಂತ್ರ್ಯವನ್ನಲ್ಲದೆ ಅದಕ್ಕೆ ಕೂಡ ಲೆಳೆಯಷ್ಟು ಕಡಮೆಯಾದ ಯಾವ ನಿರ್ಧಾರವನ್ನೂ ಅಂಗೀಕರಿಸಲಾರರು.**

'ಭಾರತೀಯರೊಬ್ಬರೇ ತಮ್ಮ ಗೃಹಕೃತ್ಯವನ್ನು ಚೆನ್ನಾಗಿ ನೋಡಿಕೊಳ್ಳಲು ಸಮರ್ಥರಿದ್ದಾರೆ. ಅವರ ರಾಜ್ಯಾಂಗ ವ್ಯವಸ್ಥೆಯನ್ನು ಅವರೇ ರೂಪಿಸಿಕೊಳ್ಳಬಲ್ಲವರಿದ್ದಾರೆ. ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯ ಸಾಧನದಿಂದ ಈ ಕೆಲಸವನ್ನು ಭಾರತೀಯರು ನಿರ್ವಹಿಸಲು ಶಕ್ತರಿದ್ದಾರೆ.

(3) 'ಕೋಮುವಾರು ಸೌಹಾರ್ದವನ್ನು ಸ್ಥಾಪಿಸಲು ಕಾಂಗ್ರೆಸು ಯಾವಾಗಲೂ ಸಿದ್ಧವಿರುವದಾದರೂ ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯೊಂದೇ ಸಮಸ್ಯಾ ಪರಿಹಾರಕ್ಕೆ ಪ್ರಧಾನ ಮಾರ್ಗ. ಅಂಥ ಜನಾಂಗ ಶಾಸನ ಸಭೆಯಲ್ಲಿ ಎಲ್ಲ ಸಂಖ್ಯಾತ ಕೋಮುಗಳ ಹಿತವೂ ರಕ್ಷಿಸಲ್ಪಡಬಹುದಾಗಿದೆ. ಭಾರತೀಯ ರಾಜ್ಯಾಂಗವು ಸ್ವಾತಂತ್ರ್ಯ, ಪ್ರಜಾಸತ್ತೆ ಮತ್ತು ರಾಷ್ಟ್ರೀಯ ಐಕ್ಯಮತ್ಯ ಇವುಗಳ ಮೇಲೆ ದೃಢವಾಗಿ ನಿಲ್ಲಬೇಕಾಗಿದೆ. ಭಾರತವನ್ನು ವಿಭಜಿಸುವ ಕೆಲಸದ ಪ್ರಯತ್ನವನ್ನು ಕಾಂಗ್ರೆಸು ಅಲ್ಲಗಳೆದಿದೆ. ಕಾಂಗ್ರೆಸು ಎಲ್ಲ ವರ್ಗಗಳನ್ನೂ ಪ್ರತಿನಿಧಿಸಿ ಎಲ್ಲಾ ಕೋಮುಗಳನ್ನೂ ಭಿನ್ನಭೇದವಿಲ್ಲದೆ ಕೆಲಸ ಮಾಡುವ ಅಭಿಲಾಷೆಯನ್ನು ತಳೆದಿದೆ. ಆದ್ದರಿಂದ ಎಲ್ಲಾ ಕೋಮುಗಳು ಕಾಂಗ್ರೆಸಿನೊಡನೆ ಒಂದಾಗುವದೆಂದು ನಿರೀಕ್ಷಿಸಲಾಗಿದೆ. ಆದ್ದರಿಂದ ಕಾಂಗ್ರೆಸು ಅಖಿಲಭಾರತ ಕಾಂಗ್ರೆಸ್ ಕಮಿಟಿಗೂ, ವರ್ಕಿಂಗ್ ಕಮಿಟಿಗೂ ಅಧಿಕಾರ ಕೊಟ್ಟು ಈ ನಿರ್ಣಯವನ್ನು ಕಾರ್ಯ ರೂಪಕ್ಕೆ ತರಬೇಕಾದ ಉಚಿತವಾದ ಕೆಲಸಗಳನ್ನು ಆಗಾಗ್ಯೆ ಕೈಗೊಳ್ಳಬೇಕೆಂದು ಸೂಚಿಸುತ್ತದೆ.

(4) 'ದೇಶೀಯ ಸಂಸ್ಥಾನಗಳಲ್ಲೇ ಆಗಲಿ, ಬ್ರಿಟಿಷ್ ಭಾರತದಲ್ಲೇ ಆಗಲಿ ಪ್ರಜಾಪೇಕ್ಷೆಯೇ ಪರಮೋತ್ಕೃಷ್ಟವಾಗಿರಬೇಕು. ಉಳಿದೆಲ್ಲಾ ಹಿತಗಳೂ ಅದಕ್ಕೆ ಬದ್ಧವಾಗಿರಬೇಕು. ಸ್ವಾತಂತ್ರ್ಯಕ್ಕೆ ನರೇಂದ್ರರ ಹಕ್ಕುಗಳು ಅಡ್ಡಿಯಾಗಬಾರದು. ಸಂಸ್ಥಾನಗಳ ಸಂಬಂಧವಾಗಿ ತಲೆದೋರಿರುವ ಸಮಸ್ಯೆ ಬ್ರಿಟಿಷರ ಕಲ್ಪನೆಯೇ ಹೊರತು ಬೇರಿಲ್ಲ. **ವಿದೇಶಿಯರ ಆಡಳಿತ ಭಾರವು ತಪ್ಪಿದ ಹೊರತು ಈ** ಎಲ್ಲಾ ಸಮಸ್ಯೆಗಳ ನಿವಾರಣೆಯಾಗದು.

ಭಾರತವನ್ನು ಯುದ್ಧದಿಂದ ದೂರವಿರಿಸಲಿಕ್ಕೂ, ವಿದೇಶಿಯರ ಆಡಳಿತದಿಂದ ಭಾರತವನ್ನು ಬಿಡಿಸಿಕೊಳ್ಳುವದಕ್ಕಾಗಿಯೂ ಕಾಂಗ್ರೆಸ್ ಮಂತ್ರಿ ಮಂಡಲಗಳಿಗೆ ರಾಜಿನಾಮೆಯಿತ್ತಿತು. **ಈ ರೀತಿ ನಾವು ಮಾಡಿರುವದು ಮುಂದೆ ಸತ್ಯಾಗ್ರಹ ನಡೆಸುವುದಕ್ಕೆ ಪೀಠಿಕಾ ಪ್ರಕರಣವೆಂದು ಭಾವಿಸಬಹುದು. ಕಾಂಗ್ರೆಸ್ ಸಂಸ್ಥೆಯು ಆ ಕೆಲಸಕ್ಕೆ ಅರ್ಹವಾಗಿದೆಯೆಂದು ಭಾವಿಸಿದ ಕೂಡಲೇ ಸತ್ಯಾಗ್ರಹವನ್ನು ಆರಂಭಿಸಲಾಗುವದು.'**

ರಾಮಘಡದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮತ್ತೆ ಈ ತಿಂಗಳು 15ನೇ ತಾರೀಕಿನಲ್ಲಿ ಸೇರತಕ್ಕದಿದೆ.

ಹಿಟ್ಲರನ ದೃಷ್ಟಿಯೆತ್ತ?

ಹಿಟ್ಲರನು ಈಗ ತತ್ಕಾಲ ತಟಸ್ಥನಾಗಿರುವನು. ಅವನು ತನ್ನ ದಿಗ್ವಿಜಯ ಯಾತ್ರೆಯನ್ನು ಒಡನೇ ಕೈಕೊಳ್ಳುವನೇ? ಕೈಕೊಂಡರೆ ಯಾವ ಮಾರ್ಗವಾಗಿ! ಅವನು ಮುನ್ನುಗ್ಗಬಹುದು? ಆ ದಾರಿಯು ಕಡುಕೇನು?

ಪಶ್ಚಿಮ ರಣಭೂಮಿಯಲ್ಲಿ ಹರ್ ಹಿಟ್ಲರನು ಒಂದು ಸಲ ಭೀಕರ ಯುದ್ಧವನ್ನು ಪ್ರಾರಂಭಿಸಬಹುದು. ಆದರೆ ಎಲ್ಲಿ? ಯಾವಾಗ? ವಸಂತಋತುವಿನ ಪ್ರಾರಂಭದಲ್ಲಿ ಆತನು ಯುದ್ಧ ಹೂಡಬಹುದೆಂದು ಊಹಿಸಬಹುದು. ಆದರೆ ಹಾಲೆಂಡಿಂದ ಆಲಪ್ಸ್ ಪರ್ವತದ ವರೆಗೆ ಹಬ್ಬಿದ ಯುದ್ಧಾಸಕ್ತ ಪ್ರದೇಶದಲ್ಲಿ ಯಾವ ಸ್ಥಳದಿಂದ ಯುದ್ಧ ಪ್ರಾರಂಭವಾಗಬಹುದೆಂಬದನ್ನು ಊಹಿಸುವದು ಕಷ್ಟ.

ಮ್ಯಾಜಿನೋ ವ್ಯೂಹ.

ಮ್ಯಾಜಿನೋ ವ್ಯೂಹದ ಮೇಲೆ ಧಾಳಿ ಮಾಡುವದು ಜರ್ಮನಿಗೆ ಸಾಧ್ಯವಿಲ್ಲೆಂದೆನಿಸುತ್ತದೆ. ಇಂಥಾ ಭದ್ರವಾದ ಕೋಟೆಯ ಮೇಲೇರಿ ಹೋಗುವದು ಅದರಲ್ಲಿಯೂ ರ್‍ಹೈನ್ ನದಿ ಸಮಾಂತರದಲ್ಲಿರುವ ವ್ಯೂಹದ ಮೇಲೆ ಹಲ್ಲೆ ಮಾಡುವದಂತೂ ತೀರ ಅಸಂಭವ. ಮ್ಯಾಜಿನೋ ವ್ಯೂಹದ ಮೇಲೆ ಎತ್ತ ಕಡೆಯಿಂದ ಹಲ್ಲೆ ಮಾಡಿದರೂ ಶತ್ರುಗಳು ಫ್ರೆಂಚ್ ತೋಪುಗಳ ಬೆಂಕಿಯ ಪ್ರಳಯಾಗ್ನಿಗೆ ಬಲಿಯಾಗಬೇಕಾಗುವದು. ರ್‍ಹೈನ್ ದಾಟುವ ಹವ್ಯಾಸದಲ್ಲಂತೂ ಶತ್ರುಗಳಿಗೆ ಪ್ರಾರಂಭದಿಂದಲೇ ಅಪಜಯವೂ, ಜನರ ನಾಶವೂ ಕಟ್ಟಿಟ್ಟದ್ದೆಂದು ನಿರ್ವಿವಾದವಾಗಿ ಹೇಳಬಹುದು. ಆದರೆ ಈ ಉಕ್ಕಿನ ಕೋಟೆಯ ಉತ್ತರ ದಕ್ಷಿಣಗಳಲ್ಲಿ ವಿಸ್ತಾರವಾದ ತಟಸ್ಥ ಪ್ರದೇಶಗಳಿರುವದರಿಂದ ನಾಝಿ ಸೈನಿಕರು ಅತ್ತ ಕಡೆಯಿಂದ ಏರಿ ಬಂದರೂ ಬರಬಹುದು. ಹೋಗುವ ಸಂಭವವಿದೆ.

ಹಾಲೆಂಡು.

ಪಶ್ಚಿಮದಲ್ಲಿ ನಾಝಿಗಳ ಧಾಳಿಯ ಭಯವಿದ್ದ ರಾಷ್ಟ್ರಗಳಲ್ಲಿ ಹಾಲೆಂಡವು ಪ್ರವೇಶ ಸಾಧ್ಯವಾದ ದೇಶವೆಂದು ಹೇಳಬಹುದು. ಹಾಲೆಂಡವನ್ನಾಕ್ರಮಿಸಿದಲ್ಲಿ ಜರ್ಮನಿಗೆ ಡಚ್ ಪ್ರದೇಶಗಳಲ್ಲಿ ಮುಂದಿನ ಕೇಂದ್ರಗಳನ್ನು, ಅಂತರ್ಜಲನಾವೆಗಳ ನಿಲ್ದಾಣಗಳನ್ನೂ, ಕಲ್ಪಿಸಬಹುದು. ಹಾಗೆ ಮಾಡಿದಲ್ಲಿ ಬ್ರಿಟಿಷರ ವಿರುದ್ಧ ಹೋ

ರಾಡಲು ಅವನಿಗೆ ಅನುಕೂಲವೂ ಆಗುವದು. ಕಳೆದ ನವಂಬರದಲ್ಲಿ ಒಂದೆರಡು ವಾರ ಹಾಲೆಂಡು ಧಾಳಿಯು ಈಗೋ ಇನ್ನೊಂದು ಕ್ಷಣಕ್ಕೋ ಎಂದೆನಿಸಿತು. ಆದರೆ ಹಾಲೆಂಡು ಮಾತ್ರ ತನ್ನ ಸ್ಥೈರ್ಯವನ್ನು ಕಾಯ್ದುಕೊಂಡಿತು. ಎಂತಹ ಗಂಡಾಂತರಗಳು ಬಂದರೂ ಅವುಗಳನ್ನೆದುರಿಸಲು ಹಾಲೆಂಡವು ಸಿದ್ಧವಿರುವದಾಗಿಯೂ, ಪ್ರಸಂಗ ಬಂದರೆ ಒಡ್ಡುಗಳನ್ನೊಡೆದು ಯಾಂತ್ರಿಕ ಶಸ್ತ್ರ ಸನ್ನದ್ಧವಾದ ಜರ್ಮನ್ ಸೈನಿಕರ ಮಾರ್ಗಕ್ರಮಣವೇ ನಿಂತು ಹೋಗುವಂತೆ ನೀರು ಕಟ್ಟುವದಾಗಿ ಹಾಲೆಂಡವು ಸಾರಿದೆ. ಈ ಜಲಕೋಟೆಯ ಹಿಂದೆ, ದೇಶದಲ್ಲಿ ಒಂದು ಹನಿ ರಕ್ತವಿರುವ ವರೆಗೆ ಕಲಿತನದಿಂದ ಹೋರಾಡುವ ಪ್ರತಿಜ್ಞೆ ಮಾಡಿದ 2,50.000 ವೀರ ಸೈನಿಕರ ಭದ್ರ ಕಾವಲಿದೆ! ಜನವರಿ ತಿಂಗಳ ಪ್ರಾರಂಭದಲ್ಲಿ ಡಚ್ ಗಡಿಯಿಂದ ಕೇವಲ 40 ಮೈಲುಗಳಲ್ಲಿ—ಡ್ಯಾಕ್ಲಿಂಗ ಹಾಸನದಲ್ಲಿ—ಜರ್ಮನರು ನೌಕಾ ಕೇಂದ್ರವನ್ನು ನಿರ್ಮಿಸಿರುವರೆಂದೂ ಎಮ್ಡನ್‌ದಿಂದ ಆಚೆನ ವರೆಗೆ ಅನೇಕ ಕಡೆಯಲ್ಲಿ ವಿಮಾನ ನಿಲ್ದಾಣ ಹಾಗು ತೋಪು ಕಟ್ಟೆಗಳನ್ನು ಕಟ್ಟಿರುವರೆಂದೂ ಹುಯಿಲೆದ್ದಿತು. ಈ ಸುದ್ದಿಯನ್ನು ಕೇಳಿಯೋ ಏನೋ ಹಾಲೆಂಡದ ರಾಣಿಯಾದ ವಿಲ್ಹೆಲ್ಮಿನಾ ಇವರು ಎಂದಿನಂತೆ ಪುನಃ ಎಚ್ಚರಿಕೆ ಕೊಟ್ಟರು. ಡಚ್ ಪ್ರದೇಶದ ಮೇಲೆ ಯಾವುದೇ ರೀತಿಯಲ್ಲಿ ಏರಿ ಬಂದರೆ ಅದನ್ನು ಪ್ರಬಲವಾಗಿ ತಡೆಯಲಾಗುವದೆಂದೂ ಜರ್ಮನಿಗೆ ಸೂಚಿಸಿದರು.

ಬೆಲ್ಜಿಯಂ.

ಇನ್ನು ಹಾಲೆಂಡಿಕ್ಕಿಂತಲೂ ಬೆಲಿಜ್ಯಮ್ಮಿನ ಮೇಲೆ ಧಾಳಿ ಮಾಡುವದು ಹಿಟ್ಲ

ರರಿಗೆ ಸುಲಭವೆನಿಸಿದರೂ ಅನಿಸಬಹುದು. ಆದರೆ ಹಿಟ್ಲರಗೆ ಅನಿಸಿದಷ್ಟು ಈ ಕೆಲಸವು ಹಗುರಾದದ್ದಲ್ಲ. ಯಾಕೆಂದರೆ ಬೆಲ್ಜಿಯಂ ಸಂರಕ್ಷಣಾಮಂಡಳದ ಅಧ್ಯಕ್ಷರಾದ ಸಿನೇಟರ ಪಾಲ ಕ್ರೊಕಾರ್ಟ ಇವರು ಒಂದೊಂದು ಇಂಚಿಗೂ ನಾವು ಶಸ್ತ್ರಗಳನ್ನು ನಿಕರದಿಂದ ತಡೆಯುವೆವು. ನಮ್ಮನ್ನು ಕೆಣಕಿದವರಿಗೆ ಚೆನ್ನಾಗಿ ಬುದ್ಧಿ ಕಲಿಸುವೆವು. ಎಂದು ಸಾರಿದ್ದಾರೆ. ಇಂದಿನಷ್ಟು ಸೈನ್ಯವು ಬಲಾಢ್ಯವಾಗಿ ಎಂದೂ ಇರಲಿಲ್ಲ. 6,50,000 ಸೈನಿಕರನ್ನೊಳಗೊಂಡ ಬೆಲ್ಜಿಯಂ ಸೈನ್ಯವು ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಿದೆ. ಯುದ್ಧವನ್ನು ಹೂಡಿದಲ್ಲಿ ಸೈನ್ಯದಲ್ಲಿ ಸೇರಲು ಸಾವಿರಾರು ತರುಣರು ಇನ್ನೂ ಸಿದ್ಧರಿರುವರು. ಮೂರು ವ್ಯೂಹಗಳು ರಚಿಸಲ್ಪಟ್ಟಿದ್ದು ಅವರ ತೋಫಖಾನೆಯು 1814–18 ರ ಕ್ಕಿಂತಲೂ ಕ್ರೂರವಾಗಿದೆ!

ಲಕ್ಸೆಂಬರ್ಗ್.

ಆದರೆ ಲಕ್ಸೆಂಬರ್ಗದತ್ತ ಹಿಟ್ಲರನು ಸಾಗಿ ಬಂದರೆ ಅದು ಅವನನ್ನು ತಡೆಯಬಹುದೇ? ಲಕ್ಸೆಂಬರ್ಗದ ಕ್ಷೇತ್ರವು 999 ಚ. ಮೈಲಿದೆ. ಕೇವಲ 250 ಜನರ 'ಸೈನ್ಯವೂ ಅದಕ್ಕಿದೆ. ಜರ್ಮನಿಯ ತೋಫುಗಳೂ, ಕಾಲ್ಬಲವೂ ಲಕ್ಸೆಂಬರ್ಗದ ಗಡಿಯನ್ನು ಒಂದೇ ಹಾಂಕೆಗೆ ದಾಟಬಹುದಲ್ಲವೇ? ಆದರೆ ಮುಂದೆ ಎತ್ತ? ಫ್ರಾನ್ಸದ ತೋಫುಗಳಿಂದ ಭದ್ರವಾಗಿ ಕಾಯಲ್ಪಟ್ಟ ಫ್ರೆಂಚ್ ಗಡಿಯು ಅಲ್ಲಿಯೇ ಇರುವದು. ಮ್ಯಾಜಿನೊವ್ಯೂಹದ ಈ ಭಾಗವು ರ್‍ಹಾಯಿನ ನದಿಯ ಹತ್ತರ ಇರುವಷ್ಟು ಭದ್ರವಿಲ್ಲದಿರಬಹುದು. ಆದರೂ ತನ್ನ ಮೇಲಾದ ಧಾಳಿಯನ್ನು ನಿಕರದಿಂದ ಎದುರಿಸಿ ಹಿಂದಕ್ಕಟ್ಟುವ ಸಾಮರ್ಥ್ಯವು ಅದರಲ್ಲಿದೆ. ಆದುದರಿಂದ ಈ ಮಾರ್ಗವಾಗಿ ಧಾಳಿಮಾಡಲೆತ್ನಿಸುವದೂ ಹಿಟ್ಲರನಿಗೆ ಅಷ್ಟೊಂದು ಯುಕ್ತವೆನಿಸದು.

ಸ್ವಿಝರ್ಲಂಡ್.

ಬಾಸ್ಲೆ ಎಂಬಲ್ಲಿ ಫ್ರಾನ್ಸ ಜರ್ಮನಿ ಮತ್ತು ಸ್ವಿಝರ್ಲಂಡುಗಳ ಗಡಿಗಳು ಕೂಡಿವೆ ಮತ್ತು ಇದು ಫ್ರಾನ್ಸವ್ಯೂಹದಲ್ಲಿ ನಿರ್ಬಲಸ್ಥಾನ. ಹನಿಂಗ ಎಂಬಲ್ಲಿ ಸ್ವಿಸ್ ಪ್ರದೇಶದೊಳಗೆ ನುಗ್ಗಿ ಮ್ಯಾಜಿನೊವ್ಯೂಹದ ತೀರ ದಕ್ಷಿಣತುದಿಯನ್ನು ಒಡೆಯಬಲ್ಲೆವೆಂದು ಜರ್ಮನರು ಕನಸು ಕಾಣುತ್ತಿರಬಹುದು. ಅಥವಾ ಡೌಬ ಕಣಿವೆಯ ಕೆಳಗೆ ಏರಿ ಹೋಗಿ ದಕ್ಷಿಣಕ್ಕೆ ಲಿಯೊನ್ಸ ಅಥವಾ ಉತ್ತರಕ್ಕೆ ಪ್ಯಾರಿಸದತ್ತ ಸಾಗಿ ಹೋಗಬಹುದೆಂದೂ ಅವರು ಎಣಿಕೆ ಹಾಕುತ್ತಿರಬಹುದು. ಆದರೆ ಹಾಗೆ ಸಾಗಿ ಹೋಗುವ ಮೊದಲು ಫ್ರಾನ್ಸದ ಅಭೇದ್ಯ ಬೆಲ್ಫೋರ್ಟ ಕೋಟೆಯನ್ನು ನಾಶಮಾಡದೆ ಜರ್ಮನಿಗೆ ಮಾರ್ಗವಿಲ್ಲ.

ಇವೆಲ್ಲ ಬಿಟ್ಟರೆ ಸ್ವಿಝರ್ಲಂಡದ ಮಧ್ಯ ಕಣಿವೆಯ ಮಾರ್ಗವಾಗಿ ಇಳಿದು ಹೋಗಲು ಜರ್ಮನಿಗೆ ಅವಕಾಶವಿದೆ. ಅಲ್ಲಿ ಅವರು ಜುರಾ ಪರ್ವತಾವಳಿಯನ್ನು ದಾಟಬೇಕು. ಇಕ್ಕಟ್ಟಾದ ಮಾರ್ಗ! ಅಲ್ಲಲ್ಲಿ ಬಿಕ್ಕಟ್ಟಿನ ಕಾವಲು!

ಎತ್ತ ಕಡೆಯಿಂದ ದಾಳಿಯಾದರೂ ಸ್ವಿಸ್ ಜನರು ಅದನ್ನು ತಡೆಯಲು ಸಮರ್ಥರಿರುವರು. ಸ್ವಿಝರ್ಲಂಡವು ಕಳೆದ ಕೆಲವು ತಿಂಗಳುಗಳಿಂದ ಸೈನ್ಯಸಂಗ್ರಹ ನಡೆಸಿದೆ. ಈಗ ಅದರ ಸೈನ್ಯದಲ್ಲಿ 6,50,000 ಸೈನಿಕರಿರುವರು ಅದಕ್ಕೆ ಫಿನ್ಲೆಂಡದಂತೆ ನಿಸರ್ಗ ಸಹಾಯವೂ ಅದೆ. ಈ ಬಗ್ಗೆ ಜರ್ಮನ್ ಸೈನ್ಯಾಧಿಕಾರಿಗಳೂ ಲೆಕ್ಕ ಹಾಕಿರುವರೆಂದು ತಿಳಿಯುತ್ತದೆ. ಸ್ವಿಝರ್ಲಂಡದಲ್ಲಿ ನುಗ್ಗಲು 40 ದಿನಗಳು ಬೇಕಾಗುವವೆಂದೂ ಪ್ರತಿಯೊಬ್ಬ ಸ್ವಿಸ್‌ನಿಗೆ ಐವರು ಜರ್ಮನ್ನರಂತೆ ಸೈನ್ಯ ಸಂಗ್ರಹ ಮಾಡಬೇಕೆಂದೂ ಅವರು ಅಂದಾಜು ಮಾಡಿರುವದಾಗಿ ತಿಳಿಯುತ್ತದೆ.

ಒಟ್ಟಿನ ಮೇಲೆ ಹಿಟ್ಲರನಿಗೆ ಸ್ವಿಝರ್ಲಂಡದ ಮಾರ್ಗವೂ ಅಷ್ಟೊಂದು ಸರಳವಾಗಿಲ್ಲೆಂದು ಹೇಳಬಹುದು. ಅಂದ ಬಳಿಕ ಹಿಟ್ಲರನ ಮುಂದಿನ ಧಾಳಿಯು ಎಲ್ಲಿ ಹೇಗೆ ಎಂಬ ಪ್ರಶ್ನೆಯ ಉತ್ತರವೇನು?

ಹಿಟ್ಲರನು ದಾಳಿಯನ್ನೇ ಹೂಡಲಿಕ್ಕಿಲ್ಲವೇನು?

ಈ ಪ್ರಶ್ನೆಗಳನ್ನೂ ಅವುಗಳ ಉತ್ತರಗಳನ್ನೂ ಹಿಟ್ಲರನಿಗೇ ಬಿಟ್ಟು ಬಿಡುವೆವು.

'ಕ. ವಿ.'

ನಮಸ್ಕಾರ ಜಿಜ್ಞಾಸೆ.

● ○ ●

'ನಮಸ್ಕಾರ ಸ್ವಾಮಿಾ!'–ಎಂಬುದು ಸಾಮಾನ್ಯವಾಗಿ ಅಲ್ಲಲ್ಲಿ ನಿತ್ಯವೂ ಕೇಳಿಸುತ್ತಿದೆ. ಒಂದೊಂದು ನಮಸ್ಕಾರಕ್ಕೆ ಒಂದೊಂದು ರೀತಿಯ ವೈಶಿಷ್ಟ್ಯವಿದೆ. ಮೋಹರಂ ನಮಸ್ಕಾರವೊಂದು–ಕ್ರಿಸ್ಮಸ್ ನಮಸ್ಕಾರವೊಂದು–ಬೇಸರದ, ಸಂತೋಷದ, ನಮಸ್ಕಾರಗಳು...... ನಾನಾ ರೀತಿಯ ನಮಸ್ಕಾರಗಳಿವೆ. ನಮಸ್ಕಾರವೂ ಒಂದು ಕಲೆ. ಭಕ್ತಾಗ್ರೇಸರ ಹನುಮಂತನು ಈ ಕಲೆಯನ್ನು ಚೆನ್ನಾಗಿ ಪ್ರದರ್ಶಿಸಿರುವನು........ನಮಸ್ಕಾರದ ವಿಷಯದಲ್ಲಿ ಈ ಲೇಖಕರು ಏನು ಹೇಳುವರೋ ಅದೆಲ್ಲಾ ಸುಸ್ವಾರಸ್ಯವುಳ್ಳದಾಗಿದೆ.

ದೇಶದ ಪ್ರಾಚೀನ ವೈಭವ ಸ್ವರೂಪಗಳನ್ನು ತಿಳಿದುಕೊಳ್ಳಲು ಶಿಲಾಶಾಸನ, ಗ್ರಂಥಭಂಡಾರ, ಹಾಗೂ ಶಿಲ್ಪಕಲೆ ಮೊದಲಾದವುಗಳು ಬಹುಮಟ್ಟಿಗೆ ಸಹಕಾರಿಗಳಾಗುವವು ಎಂಬುದನ್ನು ಯಾವ ವಿಮರ್ಶಕನಾದರೂ ಒಪ್ಪಲೇಬೇಕು. ನಾವಾದರೂ ನಮಸ್ಕಾರದ ಇತಿಹಾಸವನ್ನು ಶೋಧಿಸುತ್ತ ಇರುವಾಗ ಹನುಮಂತ ಗರುಡರೀರ್ವರು ನಮಗೆ ಬಹಳ ಸಹಕಾರಿಗಳಾದರು. ನಮಸ್ಕಾರದ ಪೂರ್ಣತೆಯನ್ನು ಅವರಿಬ್ಬರಲ್ಲಿ ನಾವು ಜೀವಂತವಾಗಿ ಕಾಣಬಹುದು. ಬೆರಳಿಗೆ ಬೆರಳನ್ನು ಆತುಕೊಂಡು ಎರಡು ಕೈಗಳನ್ನು ಜೋಡಿಸಿ ಮುಕುಲಿತ ಪದ್ಮದಂತೆ ಭಾವಗರ್ಭಿತವಾಗಿರುವ ನಮಸ್ಕಾರವೇ ನಮಸ್ಕಾರವೆನಿಸಲ್ಪಡುವದು. ಭಕ್ತಾಗ್ರೇಸರನಾದ ಆಂಜನೇಯನ ವ್ಯಕ್ತಿತ್ವವು ಅವನ ನಮಸ್ಕಾರದಲ್ಲಿ ಉಜ್ವಲವಾಗಿ ತೋರುವದಲ್ಲವೆ?

ಪಾಶ್ಚಾತ್ಯರು ನಗೆಯನ್ನು ಒಂದು ಕಲೆಯಾಗಿ ಪರಿಗಣಿಸಿ ಅದರ ವಿವಿಧ ಸ್ವರೂಪಗಳನ್ನು ಹಲವು ಲೇಖಗಳಲ್ಲಿ ವಿವರಿಸಿದ್ದಾರೆ. ನಗೆಯಂತೆ ನಮಸ್ಕಾರವೂ ನಮ್ಮ ದೇಶದಲ್ಲಿ ಅನಿವಾರ್ಯ ಕಲೆಯಾಗಿದೆ. ನಮಸ್ಕಾರದ ಕಲೆಯನ್ನು ನಮ್ಮಲ್ಲಿ ಪ್ರತಿಯೊಬ್ಬನೂ ತಿಳಿದಿರಲಿಕ್ಕೇ ಬೇಕು. ಆಜನ್ಮ ನಗಲಾರನೆಂಬ ಭೀಷ್ಮ ಪ್ರತಿಜ್ಞೆ ಒಮ್ಮೆ ಕೈಗೂಡಿದರೂ ನಮಸ್ಕಾರಕ್ಕೆ ಮಾತ್ರ ಬಹಿಷ್ಕಾರ ಹಾಕಲು ಸಾಧ್ಯವೇ ಇಲ್ಲ. ನಮಸ್ಕಾರವು ಸಾರ್ವಜನಿಕ ಸೊತ್ತಾಗಿ ಯಾರೂ ಯಾವಾಗಲಾದರೂ ಉಪಯೋಗಕ್ಕೆ ತಂದುಕೊಳ್ಳುವಂತಿದೆ. ನಮಸ್ಕಾರಕ್ಕೆ ಪ್ರತಿವಂದನೆ ಮಾಡದೆ ಇರುವದು ಬಹಳ ಅಸಭ್ಯ ವರ್ತನೆಯೆಂದು ಪರಿಗಣಿಸಲ್ಪಟ್ಟಿದೆ. ಆಗಲಾದರೂ ಆಗ್ರಹಪೂರ್ವಕವಾಗಿ ನಮಸ್ಕಾರ ಮಾಡಲಾರನೆಂಬ ವ್ರತಭಂಗವಾಗದೆ ಇರುವದಲ್ಲ.

ಗಾಂಧಿಜೀಯವರ ನಗೆಯೆಷ್ಟು ಪ್ರಧಾನ್ಯವೋ ಅಷ್ಟೇ ನಮಸ್ಕಾರವೂ ಸಹ.

ನಗೆಯು ಸಾರ್ವತ್ರಿಕವಾಗಿ ಕಲೆಯಾಗಿ ಬಾಳಲಾರದು. ದೃಶ್ಯ, ವಸ್ತು, ಪ್ರೇಕ್ಷಕರೊಳಗಿನ ಸೌಂದರ್ಯ ದರ್ಶನದ ಸಮೀಕರಣವನ್ನು ಕಲೆಯೆನ್ನುತ್ತಾರೆ. ನಗೆಯು ಎಲ್ಲ ಮಟ್ಟದಲ್ಲಿಯೂ ಚೆಲುವಿಲ್ಲ. ಅಟ್ಟಹಾಸ, ಎದ್ದು ಬಿದ್ದು ನಗುವದು ಇವೆಲ್ಲ ಕಲೆಯ ಸಾಲಿಗೆ ಸೇರಲು ಯೋಗ್ಯವಲ್ಲ. ನಡಿಗೆಯಲ್ಲೂ ಇದೇ ಕ್ರಮವಿದೆ. ಉಷ್ಟ್ರಗಮನ, ಬಕಗಮನ, ಗಜಗಮನ ಮೊದಲಾದ ಗಮನ ಭೇದಗಳಲ್ಲಿ ಗಜಗಮನಕ್ಕೆ ಮಾತ್ರ ಕವಿಗಳ ಒಪ್ಪಿಗೆ ದೊರೆತಿದೆ. ಹಾಗೆಯೇ ಕಣ್ಣನ್ನು ಕೊರೆದು ನುಂಗುವ ತೀಕ್ಷ್ಣ ದೃಷ್ಟಿ ಪ್ರಸಾರವು ಕಲೆಯಲ್ಲ. ದೃಷ್ಟಿಯಲ್ಲಿ ಚಾಂಚಲ್ಯ ಹೇಗೋ ಹಾಗೇ ಒಲವು ಬೆರತಿದ್ದರೆ ಮಾತ್ರ ಅದು ಕಲಾಮಯವಾಗಿರುವದು.

ನಮಸ್ಕಾರವಾಗುವಾಗಲೂ ಇದೇ ಹೆದ್ದಾರಿಯಲ್ಲಿ ನಾವು ಮುಂದರಿದರೆ ಅದು ಪೂರ್ಣವಾಗಿದ್ದು ಕಲಾತ್ಮಕವಾಗಿದ್ದರೆ ಮಾತ್ರ ಸೊಗಸೆಂಬುದು ತಿಳಿದುಬರುವದು. ನಮಸ್ಕಾರದ ಪೂರ್ಣ ಸ್ವರೂಪವು ಈಗೀಗ ವಿಕಲವಾಗಿ ನಡೆದಿದೆ. ಬರೇ ತಲೆಯಾಡಿಸುವದು; ಎಡ ಮೇಲೆ ಕೈಯಿಡುವದು; ಖುಶಿಯಾದರೆ ಬಲಗೈಯೆತ್ತುವದು; ಇಲ್ಲವಿದ್ದರೆ ಎಡಗೈ ಮಾತ್ರ. ಹೀಗೆ ಸಂಕೋಚವಾಗಿ ತನ್ನ ಪೂರ್ಣತೆಯನ್ನು ಕಳೆದುಕೊಂಡಿದ್ದಾನೆ. ನಮಸ್ಕಾರದ ಗತವೈಭವಗಳನ್ನು ಹನುಮಂತ ಇಲ್ಲವೆ ಗರುಡನ ಶಿಲಾಮಯ ಬಿಂಬಗಳು ಮಾತ್ರ ಸ್ಮರಣೆಗೆ ತಂದು ಕೊಡುವವು. ನಮಸ್ಕಾರ ಕಲಾ ಪ್ರೇಮಿಗಳು ಕಲೆಯ ಕೊಲೆಯಾಗಬಾರದೆಂದಾದರೂ ಆ ಪ್ರತಿಮೆಗಳನ್ನು ಜೋಪಾನವಾಗಿಟ್ಟಿರಬೇಕು. ಮಾನವನಿಗೆ ಮಾತ್ರವಲ್ಲದೆ ಕೆಲವು ದೇವತೆಗಳಿಗೂ ನಮಸ್ಕಾರದಲ್ಲಿ ಬಹಳ ಆದರವಿದೆ. ಭಗವಾನ್ ಚಂಡರಶ್ಮಿ ಭಾಸ್ಕರನಿಗೆ ನಮಸ್ಕಾರವು ಅತೀವ ಪ್ರಿಯವಾದುದೆಂದು ಪುರಾಣಪ್ರತೀತಿಯಿದೆ. ಮಂದಿಯ ನಮಸ್ಕಾರಗಳಿಗೆ ಪ್ರತಿ ನಮಸ್ಕಾರಗಳನ್ನು ಕೊಡಲು ಅವನಿಗೆ ಸಹಸ್ರ ಕರ ಕೈಗಳಿವೆ. ಅನಂತ ಕಿರಣಗಳಿಂದ ನಮ್ಮೆಲ್ಲರ ಪ್ರಣಾಮಗಳನ್ನೂ ಅವನು ಸ್ವೀಕರಿಸುತ್ತಾನೆ.

ನಮಸ್ಕಾರದ ಸ್ವರೂಪ ವಿಚಾರಾನಂತರ ಅದರ ಬೆಲೆಯೇನೆಂದು ಸ್ವಲ್ಪ ಈ ಕಡೆ ಗಮನಿಸುವಾ. ನಮ್ಮಲ್ಲಿ ನಮಸ್ಕಾರ ಮಾಡುವವರ ಸಂಖ್ಯೆ ಬಹಳ ಜಾಸ್ತಿಯಾಗಿಹೋಗಿದೆ. ಅದರ ಬೆಲೆಯನ್ನು ಕಂಡುಕೊಂಡವರು ಕೆಲವೆ ಮಂದಿ ಇರುವರು. ಅದರ ಬೆಲೆ ಸ್ವರೂಪಗಳನ್ನರಿತೇ ಅದನ್ನು ಆಚರಣೆಗೆ ತರಬೇಕೆಂಬ ಕಟ್ಟು ನಿಟ್ಟು ನಮ್ಮಲ್ಲಿ ಯಾವುದರಲ್ಲೂ ಇರುವದಿಲ್ಲ. ಹಾಗಿರುವಾಗ ನಮಸ್ಕಾರಕ್ಕಾದರೂ ಬೆಲೆಯರಿತೇ ಮಾಡಬೇಕೆಂಬ ನಿಯಮವಾದರೂ ಹೇಗೆ 'ಲಾಗೂ' ಆಗುವದು? ದೇವರಿಗೆ 'ಅಣೋರಣಿಯಾನ್' 'ಮಹತೋ ಮಹಿಯಾನ್' ಅಣುವಿಗಿಂತಲೂ ಸೂಕ್ಷ್ಮ; ಆನೆಗಿಂತಲೂ ಸ್ಥೂಲ' ಎಂದೇನೊ ಅನ್ನುತಾರಲ್ಲ. ನಮಸ್ಕಾರದ ಬೆಲೆಯೂ ಒಮ್ಮೆ ಮಹತ್ವರಿಮಾಣಕ್ಕೇರಿದಾಗ ಆನೆಗಿಂತಲೂ ಬೃಹತ್ ಆಗಿ ಬೆಳೆದುಕೊಳ್ಳುವದುಂಟು. ಸುಮ್ಮಗೆ ದಾರಿಯಲ್ಲಿ ಹೋಗುತ್ತಿರುವಾಗ ನಮನಕ್ಕು ಕೈಯೆತ್ತುವಲ್ಲಿ ಅಣುವಿಗಿಂತಲೂ ಕಿರಿದಾಗಿ ಅದರ ಬೆಲೆಯೇ ಕಣ್ಣಿಗೆ ಕಾಣಿಸುವದಿಲ್ಲ. ನಮಸ್ಕಾರದ ಬೆಲೆಯನ್ನು ಸ್ಥೂಲದೃಷ್ಟಿಯಿಂದ ನಿರ್ಣಯಿಸುವದು ಬಹಳ ಸಾಹಸವಾಗಿದೆ. ಸೂಕ್ಷ್ಮವಾಗಿ ಅದನ್ನು ಪರಾಂಬರಿಸಬೇಕು.

ನಾಟಕ, ಸ್ಕೂಲ್ ಡೇ, ಹರಿಕಥೆ, ಆರೋಗ್ಯಸಪ್ತಾಹ, ಮೊದಲಾದವುಗಳ ನೆವ ಹಿಡಿದುಕೊಂಡು ಮಧುಕರೀವೃತ್ತಿ ಅವಲಂಬಿಸಿ ಮನೆಯಿಂದ ಮನೆಗೆ ಹೋಗುವ ವ್ಯಕ್ತಿಗಳು ನಮ್ಮಲ್ಲಿ ಬಂದಾಗ ಕೊಡುವ ನಮಸ್ಕಾರವು ಶಾಖಮಾಪಕ ಯಂತ್ರದಂತಿರುವದು. ಇವರ ಗೌರವಯಾಚನೆಯನ್ನು ನಿರಾಕರಿಸಲಿಕ್ಕೆ ಬಾರದೆ ನಮ್ಮ ಅಂತರಂಗದ ಕಷ್ಟನಷ್ಟಗಳನ್ನು ಅವರ ಮುಂದೆ ಪ್ರಕಾಶಪಡಿಸಬೇಕಾಗಿ ಬರುತ್ತದೆ.

ಹೊರಗಿಂದ ಹೊರಗೆ ನಾವು ಪ್ರತಿಷ್ಠಿತರಂತೆ ಒಳಗಿನ ರಹಸ್ಯಗಳನ್ನೆಲ್ಲ ಬಚ್ಚಿಟ್ಟಿರುತ್ತೇವೆ. ಇಂಥ ರಹಸ್ಯಗಳನ್ನು ಇವು ನಿರ್ದಾಕ್ಷಿಣ್ಯವಾಗಿ ಅಳೆದು ನೋಡುವದರಿಂದ ಇವುಗಳು ಶಾಖಮಾಪಕ ಯಂತ್ರಗಳೆಂದು ಹೇಳಿದೆವು. ಕಾರು ಗೀರು ಹಿಡಕೊಂಡು ಓಡಾಡುವ ಏನೂ ಏಜಂಟನ ನಿರ್ವ್ಯಾಜ ನಮಸ್ಕಾರ ಪರಂಪರೆಗಳೂ ಇದೇ ಜಾತಿಗೆ ಸೇರಿದವುಗಳು. ದೊಡ್ಡವರು ಗೌರವ ವ್ಯಕ್ತಿಗಳೆನಿಸಿಕೊಂಡವರು ಟೊಂಕ ಕಟ್ಟಿ ಬೇಡುವ ಕೆಲಸ ಆರಂಭಿಸಿದಾಗ ಶಾಖಮಾಪಕ ಯಂತ್ರಗಳ ಬೆಲೆಯನ್ನು ಸುಲಭವಾಗಿ ನಾವು ಕಂಡುಕೊಳ್ಳಬಹುದು.

ಕೆಲವು ನಮಸ್ಕಾರಗಳ ಬೆಲೆ ಏನೆಂದು ವಿಚಾರ ಮಾಡಲು ತಿಳಿದಿರುವದೇ ಇಲ್ಲ. ಕೊನೆಗೆ ಅದರ ಸ್ವರೂಪ ವ್ಯಕ್ತವಾಗುವದು. ಕೆಲವೊಮ್ಮೆ ನಾವು ಅತ್ತಿತ್ತ ಹೋಗುವಾಗ ಅಪರಿಚಿತ ವ್ಯಕ್ತಿಯಿಂದ ನಮಸ್ಕಾರಗಳು ಎಡೆಬಿಡದೆ ದೊರೆಯುತ್ತವೆ. ಸ್ವಲ್ಪ ಸಮಯ ಕಳೆದ ಮೇಲೆ ಸಮೀಪ ಬಂಧುವಿನಂತೆ ನಗೆಯಿಂದ ಆತನು ಐದೋ, ಹತ್ತೋ ರೂಪಾಯಿಗಳನ್ನು ಕೇಳುವನು. ಅವನು ಕೇಳುವ ಮೊಬಲಗು ನಮ್ಮ ವ್ಯಕ್ತಿತ್ವಕ್ಕೆ ಮೀರಿದ್ದರೂ ಅವನು ಕೊಟ್ಟ ನಮಸ್ಕಾರಗಳ ಜಾತಾ ಮೊತ್ತಕ್ಕೆ ಯಾವ ರೀತಿ ಕಳೆದು ತೂಗಿಸಿದರೂ ಸರಿಹೋಗಿ ಎನಿಸುವದಿಲ್ಲ. ಗೊತ್ತು ಗುರುತಿಲ್ಲದ ವ್ಯಕ್ತಿಗಳಿಂದ ಎಸೆಯಲ್ಪಟ್ಟ ನಮಸ್ಕಾರಗಳನ್ನು ತೆಗೆದುಕೊಳ್ಳುವಾಗ ನಾವು ಬಹಳ ಜಾಗರೂಕರಾಗಿರಬೇಕು.

ಮೊಹರಂ, ರಂಜಾನ್, ಕ್ರಿಸ್‌ಮಸ್ ಮೊದಲಾದ ಹಬ್ಬದ ದಿನಗಳಲ್ಲಿ ಕೋರ್ಟುಕಛೇರಿ ಜವಾನರಿಂದ ಹೊಡೆಯಲ್ಪಟ್ಟ ನಮಸ್ಕಾರದ ಬೆಲೆಯನ್ನು ಉಳಿದ ಅಧಿಕಾರಿ ವರ್ಗದವರು ತಿಳಿಯಬೇಕಾಗಿದೆ. ಅವರ ಸವಿನಯ ನಮಸ್ಕಾರಗಳಿಗೆ ಪ್ರತಿ ನಮಸ್ಕಾರ ಕೊಟ್ಟು ಸುಮ್ಮನಿದ್ದು ಹೋಗುವದು ಸಭ್ಯತನವಲ್ಲ. ಯೋಗ್ಯತೆಗೆ ತಕ್ಕಂತೆ ಕಿಂಚಿತ್ ಮೌಲ್ಯ (ಅವರು ಎದುರಿಗಿಟ್ಟ ಲಿಂಬೆ ಹಣ್ಣಿನ ಕ್ರಯಕ್ಕಿಂತ ಸ್ವಲ್ಪವಾದರೂ ಹೆಚ್ಚಾಗಿ) ಪ್ರತಿಪಾದಿಸಬೇಕು. ಹಾಗೆ ಕೊಡುವ ಎಷ್ಟೇ ಆದರೂ ಐವೇಜು, ಸನ್ಮಾನ ನಮಸ್ಕಾರಕ್ಕೆ ಸಿಕ್ಕಿದಂತಾಗಿದೆ.

ಒಂದೆರಡು ಘಂಟೆ ಶ್ರಮಪಟ್ಟು ಕೆಲಸ ಮಾಡಿ ಕೊಟ್ಟನಂತರ ಉಪಕಾರ ಹೊಂದಿದ ವ್ಯಕ್ತಿಯು ಆಭಾರ ಸೂಚನೆಗಾಗಿ ಕೊಡುವ ನಮಸ್ಕಾರವು ತುಂಬ ನಿರಾಶಾಜನಕವಾಗಿದೆ. ತಮ್ಮ ಬಂಧುಗಳೆನಿಸಿಕೊಂಡವರಿಗೆ ಔಷಧ ಕೊಡುವ ಡಾಕ್ಟರನಿಗೆ ಈ ನಮಸ್ಕಾರಗಳ ಪರಿಚಯವು ತುಂಬ ಇರುತ್ತದೆ. ಈಗೀಗ ಜ್ಯೋತಿಷ್ಯರಿಗೂ ಇಂಥಹ ನಮಸ್ಕಾರಗಳಿಂದ ಅಪಾರ ನಷ್ಟವಿದೆ. ಅಲ್ಲದೆ ಸಾಲ ಹೊಂದಿದೊಂದ ಮಾತ್ರ ವ್ಯಕ್ತಿಗಳಿಂದ ಸಾಲ ಕೇಳುವ ಬಗೆಗಾದರೂ ಅವರು ರಸ್ತೆಯಲ್ಲಿ ಹೋಗುತ್ತಿದ್ದಾಗ್ಯೂ ಕೂಗಿ ನಮಸ್ಕರಿಸಿ ಎಚ್ಚರಿಸುವರು.

ಹೀಗೆ ನಮಸ್ಕಾರದ ಬೆಲೆಯು ಕಾಲ ಕಾಲಕ್ಕೆ ವ್ಯಕ್ತಿ ಸಂದರ್ಭಕ್ಕನುಸಾರ ಬೇರೆ ಬೇರೆ ರೀತಿಯಲ್ಲಿದ್ದು ಅದನ್ನು ನಿರ್ಣಯಿಸುವದು ದೊಡ್ಡ ವಿದ್ಯೆಯೆಂದು ನಾವು ಎಣಿಸುತ್ತೇವೆ. ನಮಸ್ಕಾರಕ್ಷೇತ್ರವು ಇನ್ನೂ ವಿಸ್ತಾರವಾಗುತ್ತ ನಡೆದಿದೆ. ಅದನ್ನೆಲ್ಲ ಬರೆಯುತ್ತ ಲೇಖನವನ್ನು ಲಂಬವಾಗಿಸುವದು ನಮ್ಮ ಉದ್ದೇಶವಲ್ಲ. ಅನಾಯಾಸವಾಗಿ ದೊರಕುವ ನಮಸ್ಕಾರಗಳ ಬೆಲೆ ಹಾಗೂ ಸ್ವರೂಪಗಳನ್ನು 'ಬೃಹತ್' ವ್ಯಕ್ತಿಗಳು ಕಾಲೋಚಿತವಾಗಿ ಬರೆದಿರಬೇಕೆಂದು ಬಿನ್ನಯಿಸಿಕೊಳ್ಳುತ್ತೇನೆ.

'ಪ್ರ. ಶ.'

ಯುದ್ಧ ವಾರ್ತೆ.

ಆರ್ಸಿನೋ (1176 ಟನ್) ಎಂಬ ಸಾಮಾನುಗಳ ಬ್ರಿಟಿಷ್ ಜಹಜು ವೈರಿಗೆ ಸಿಕ್ಕಿ ಉತ್ತರ ಸಮುದ್ರದಲ್ಲಿ ಮುಳುಗಿದೆ. ಜಹಜಿನಲ್ಲಿದ್ದ 20 ಮಂದಿ ನಾವಿಕರನ್ನು ಒಂದು ಬ್ರಿಟಿಷ್ ಯುದ್ಧ ಜಹಜೂ, ಒಂದು ಟ್ರಾಲರ್ ನೌಕೆಯೂ ಸಂರಕ್ಷಿಸಿದುವು. ನಾಲ್ವರಿಗೆ ಗಾಯಗಳಾಗಿವೆ.

ಟ್ರೋಜಾ (2390 ಟನ್) ಎಂಬ ಜರ್ಮನ್ ಜಹಜನ್ನು ಡಚ್ ವೆಸ್ಟ್ ಇಂಡೀಸ್ ಅರುಬಾ ದ್ವೀಪದ ಬಳಿ ಬ್ರಿಟಿಷ್ ಯುದ್ಧ ಜಹಜೊಂದು ತಡೆದು ನಿಲ್ಲಿಸಲು 'ಟ್ರೋಜಾ' ಅಗ್ನಿಗೆ ಗುರಿಮಾಡಿಕೊಂಡಿತು.

ಸ್ಕಾಟ್ ಲೆಂಡಿನ [illegible] ನೌಕೆಗಳನ್ನು ನಿನ್ನೆ ಬೆಳಗಿನ ಜಾವ ಎರಡು ಶತ್ರು ವಿಮಾನಗಳು [illegible] ನೌಕೆಗಳ ಮೇಲೆ [illegible] ಮೊದಲೇ ಮಿಷಿನ್‌ಗನ್‌ಗಳಿಂದ ವಿಮಾನಗಳು ಗುಂಡು ಹಾರಿಸಿದವೆಂದು ತಿಳಿಸಿದೆ.

ಈ ಬೆಳಗ್ಗೆ ಆರು ಘಂಟೆಗೆ ಡೋವರ್ ಬಳಿ ಒಂದು ಭಾರಿ ಫಿರಂಗಿ ಸದ್ದು ಕೇಳಬಂದಿತು. ಈ ಫಿರಂಗಿಗಳು ಯಾರುದೆಂಬ [illegible] ಪ್ರತಿಧ್ವನಿಯು ತೀರ ಪ್ರದೇಶದವರೆಲ್ಲ ಕೇಳುತ್ತಿತ್ತು.

ಡೋವರ್ ನಗರದ ನಿವಾಸಿಗಳು ಯಾವುದೋ ಭಾರಿ ನೌಕಾ ಯುದ್ಧವು ನಡೆಯುತ್ತಿದೆಯೆಂದು ಭಾವಿಸಿ ತೀರ ಪ್ರದೇಶದಿಂದ ಅದನ್ನು ನೋಡಲು ತಮ್ಮ ಹಾಸಿಗೆಗಳಿಂದ ಎಳುತ್ತಿದ್ದರು.

'ಸಮುದ್ರದಲ್ಲಿ ಫಿರಂಗಿ ಸದ್ದು ಕೇಳಿ ಬಂದು ಆಗಾಗ್ಗೆ ಥಳಥಳನೆ ಪ್ರಭೆ ತೋರಿ ಬರುತ್ತಿತ್ತು. ಆದರೆ ಕತ್ತಲು ಇನ್ನೂ ಹೆಚ್ಚಾಗಿಯೇ ಇದ್ದುದರಿಂದ ಎಷ್ಟು ಜಹಜುಗಳು ಈ ನೌಕಾಯುದ್ಧದಲ್ಲಿ ಸೇರಿವೆಯೆಂಬುದನ್ನು ಗೊತ್ತು ಮಾಡುವದಕ್ಕೆ ಆಗಲಿಲ್ಲ.

ಬೆಳಗಿನ ಜಾವ 4 ಘಂಟೆಯಲ್ಲಿ ನಾರ್ತಂಬರ್ಲೆಂಡಿನ ತೀರದಾಚೆ ಫಿರಂಗಿಗಳ ಸದ್ದು ಕೇಳಬಂದಿತು. ಸಮುದ್ರದಲ್ಲಿ ಬ್ರಿಟಿಷ್ ಜಹಜುಗಳನ್ನು ಶತ್ರುವಿಮಾನಗಳು ಧಾಳಿಮಾಡಿ ಬಾಂಬು ಹಾಕಿ ಬರಬಹುದೆಂದು ಸಂದೇಹಿಸಲಾಗಿದೆ. ಬ್ರಿಟಿಷ್ ವಿಮಾನಗಳು ಮೇಲೇರಿ ಪರಿಶೋಧನೆ ನಡೆಸಿಕೊಂಡು ಬಂದುವು.

ಸೌತ್ ಗೇಟ್ ಎಂಬ ಲಂಡನ್ ಜಹಜು ಇರುವ ಸ್ಥಳವನ್ನು ಅಮೇರಿಕಾ ವಿಮಾನಗಳು ಪತ್ತೆಹಚ್ಚಿರುತ್ತವೆ. ಈ ಜಹಜು ಯಾವ ಅಪಾಯಕ್ಕೂ ಸಿಕ್ಕದೆ ಸುರಕ್ಷಿತವಾಗಿದೆ. ಅಮೇರಿಕಾ ಸಬ್‌ಮೇರಿನ್ ಒಂದನ್ನು ಇದು ಕಂಡು ಅದು ಶತ್ರು ಸಬ್‌ಮೆರಿನೆಂದು ಭಾವಿಸಿತ್ತು. ಸಹಾಯದ ಪ್ರಾರ್ಥನೆ ಬರಲಾಗಿ ಅಮೇರಿಕಾ ವಿಮಾನಗಳು ಸ್ಥಳಕ್ಕೆ ಹೋಗಿದ್ದವು.

ಈ ಬೆಳಗಿನ ಜಾವ ಜರ್ಮನ್ ಕಲ್ಲಿದ್ದಲನ್ನು ತೆಗೆದುಕೊಂಡು ಹೊರಟ ನಾಲ್ಕು ಇಟಾಲಿಯನ್ ಜಹಜುಗಳು [illegible] ಬಂದವು. ಬ್ರಿಟಿಷ್ ಹಕೋಟೆಯ ಕ್ಷೇತ್ರಗಳನ್ನು ಅಂಸ್ಟರ್‌ಡಾಮಿನಲ್ಲಿ [illegible] ಕಲ್ಲಿದ್ದಲು ಸಾಗಿಸುವ ಜಹಜುಗಳೂ ಹಾದುಹೋಗಲು ಇಟಾಲಿಯನ್ನರು ಬ್ರಿಟಿಷ್ ಅನುಮತಿ ಪಡೆಯಬೇಕೆಂದಿದ್ದಿತು.

ಜರ್ಮನಿಯಿಂದ ಇಟಲಿಗೆ ರಪ್ತಾಗಿ ಬರತಕ್ಕ ಸಾಮಗ್ರಿಗಳನ್ನು ಮುಖ್ಯವಾಗಿ ಕಲ್ಲಿದ್ದಲನ್ನು ತಡೆಯಬೇಕೆಂದು ಬ್ರಿಟನು ಮಾಡಿರುವ ನಿರ್ಧಾರವನ್ನು ಪ್ರತಿಭಟಿಸಬೇಕೆಂದು ಇಟಲಿ ನಿರ್ಧರಿಸಿದೆ.

ಬ್ರಿಟಿಷ್ ನಿರ್ಧಾರವನ್ನು ಪ್ರತಿಭಟಿಸಿ ಇಟಲಿಯು ಕಳಿಸಿದ್ದ ಪ್ರತಿಭಟನಾ ಪತ್ರವು ಈ ದಿನ ರೋಮ್ ನಗರದಲ್ಲಿರುವ ಬ್ರಿಟಿಷ್ ರಾಯಭಾರಿ ಕಛೇರಿಗೆ ತಲುಪಿಸಲ್ಪಟ್ಟಿತು. ಇದೇ ಪ್ರತಿಯನ್ನು ಲಂಡನ್ನಿಗೆ ಕಳಿಸಲಾಗುವದೋ ಅಥವಾ ಇಲ್ಲವೋ ಎಂಬುದಿನ್ನೂ ಗೊತ್ತಾಗಿಲ್ಲ.

ಇಂಗ್ಲಿಷ್ ಕಡಲ್ಗಾಲುವೆಯಲ್ಲಿ ಬಾಂಬು ಮಾಡಲ್ಪಟ್ಟ 'ಡೋಮಾಲ' ಜಹಜಿನ ಹಲವು ನಾವಿಕರು ಸಮುದ್ರ ಮಧ್ಯೆ ಪಟ್ಟ ಕಷ್ಟದ ವಿವರಗಳು ಹೃದಯ ವಿದ್ರಾವಕವಾಗಿವೆ. ಅನೇಕರು ನೀರಿನಲ್ಲಿ ಕೇಲಬಾರದೆ ಸುಸ್ತಾಗಿ ಮುಳುಗಿದ್ದಾರೆ. ಅನೇಕರು ಕೈಕಾಲು ಮುರಿದುಕೊಂಡು ಸಂರಕ್ಷಿಸುವುದರೊಳಗಾಗಿ ಮೃತರಾಗಿದ್ದಾರೆ. ಭಾರತೀಯ ನಾವಿಕರೇ ಹೆಚ್ಚು ಮಂದಿ. 88 ಮಂದಿ ಭಾರತೀಯ ನಾವಿಕರು ಜಲಸಮಾಧಿ ಹೊಂದಿರಬಹುದೆಂದು ಶಂಕಿಸಲಾಗಿದೆ.

ಇತರ ಜಹಜುಗಳಿಂದ ಇದುವರೆಗೆ 121 ಮಂದಿ ಭಾರತೀಯ ನಾವಿಕರು ರಕ್ಷಿಸಲ್ಪಟ್ಟಿರುವದಾಗಿ ಗೊತ್ತಾಗಿದೆ. ಅನೇಕರು ಇಂಗ್ಲೆಂಡಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹಲವರಿಗೆ ಬಟ್ಟೆ ಬರೆಗಳೇ ಇಲ್ಲದೆ ಅವುಗಳನ್ನು ಡಚ್ ಜಹಜೊಂದು ಒದಗಿಸಿ ಸಹಾಯ ಮಾಡಿತು. ಡೆಕ್‌ಗಳ ಕೆಳಭಾಗದಲ್ಲಿದ್ದ ಪಂಜಾಬ್ ಮತ್ತು ಗಡಿನಾಡಿನ ಭಾರತೀಯ ನಾವಿಕರೇ ಹೆಚ್ಚಾಗಿ ಬಲಿಯಾದರು. ಇವರೆಲ್ಲಾ ಜರ್ಮನಿಯ ಬಂಧನದಿಂದ ಪಾರಾಗಿ ಬಂದು, ಈ ಕೋಟಲೆಗೆ ಸಿಕ್ಕಿದರು.

ಹಿಟ್ಲರನ ಶಾಂತಿ ಶರತುಗಳು.

1. ಬೊಹೀಮಿಯಾ, ಮೋರೇವಿಯಾ, ಪೋಲೆಂಡುಗಳ ಮೇಲೆ ಖಾಯಮಾಗಿ ಜರ್ಮನಿಗೆ ಅಧಿಕಾರವಿರತಕ್ಕದು (ಆಸ್ಟ್ರಿಯಾವನ್ನು ಜರ್ಮನಿ ತನ್ನಧೀನದಲ್ಲೇ ಉಳಿಸಿಕೊಳ್ಳುವದರ ವಿಚಾರದಲ್ಲಿ ಏನೂ ಸಂದೇಹವಿಲ್ಲ.

2. ಸ್ಕಾಂಡಿನೇವಿಯಾ ರಾಷ್ಟ್ರಗಳ ಮೇಲೆ 'ಪ್ರಭಾವವನ್ನು ಬೀರಲು ಅಥವಾ ಅಲ್ಲಿ ಒಳಸಂಚು ನಡೆಸಲು' ತನಗೆ ಹಕ್ಕಿದೆಯೆಂದು ಬ್ರಿಟನ್ನು ಹೇಳಿಕೊಳ್ಳುತ್ತಿದೆ. ಆ ಹಕ್ಕನ್ನು ಅದು ಬಿಟ್ಟುಕೊಡತಕ್ಕದ್ದು.

3. ಮಾಲ್ಟಾ, ಜಿಬ್ರಾಲ್ಟರ್, ಸಿಂಗಪುರಗಳಲ್ಲಿ ಬ್ರಿಟನ್ನು ಇಟ್ಟುಕೊಂಡಿರುವ 'ಸಮುದ್ರ ಚೋರ ಬಿಡದಿಗಳು', ಮಾಯವಾಗತಕ್ಕದು.

4. ಅಮೇರಿಕೆಗೆ ದಕ್ಷಿಣ ಅಮೇರಿಕಾ ರಾಜ್ಯಗಳಲ್ಲಿ 'ಮನ್‌ರೋ ಡಾಕ್ಟ್ರಿನ್' ಎಂಬ ಸಿದ್ಧಾಂತದಿಂದ ಎಂಥ ಹಕ್ಕು ಬಾಧ್ಯತೆಗಳು ಲಭಿಸಿವೆಯೋ, ಹಾಗೆ ಮಧ್ಯ ಯೂರೋಪಿನಲ್ಲಿ ಜರ್ಮನಿಗೆ ಹಕ್ಕುಬಾಧ್ಯತೆಗಳು ಲಭಿಸುವಂತೆ ಒಂದು ಏರ್ಪಾಡು ಜಾರಿಗೆ ಬರಬೇಕು.

5. ಜರ್ಮನಿಗೆ ಅದರ ಹಿಂದಿನ ವಸಾಹತುಗಳೆಲ್ಲವನ್ನೂ ವಾಪಸ್ಸು ಸಿಕ್ಕತಕ್ಕದ್ದು.

ಈ ಐದು ಷರತ್ತುಗಳನ್ನು ಹೆರ್ ಹಿಟ್ಲರ್ ಮಿಸ್ಟರ್ ಸಮ್ನರ್ ವೆಲ್ಸ್‌ರಿಗೆ ಸೂಚಿಸಿ, ಈ ಷರತ್ತುಗಳಿಗೆ ಮಿತ್ರಮಂಡಳಿಯವರು ಒಪ್ಪಿದರೆ ತಾನು ಯುದ್ಧವನ್ನು ನಿಲ್ಲಿಸುವದಾಗಿಯೂ ಹೇಳಿದನೆಂದು, ಟೆಲಿಗ್ರಾಫ್ ಪತ್ರಿಕೆಯ ಬರ್ಲಿನ್ ಬಾತ್ಮೀದಾರರು ತಿಳಿಸಿದ್ದಾರೆ.

ಫಿನ್‌ಲೇಂಡ್ ಯುದ್ಧ.

ವೀಪೂರಿಯ ಮುಖ್ಯಭಾಗವಿನ್ನೂ ಫಿನ್ನರ ವಶದಲ್ಲೇ ಇರುವುದಾಗಿ ಹೆಲ್ಸಿಂಕಿ ವರ್ತಮಾನಗಳು ಸೂಚಿಸುತ್ತವೆ.

ನಗರದ ಒಳಭಾಗದಲ್ಲಿ ಹೊಸ ಹೊಸ ಹಳ್ಳಗಳನ್ನು (ಟ್ರೆಂಚ್‌ಗಳನ್ನು) ತೋಡಿಕೊಂಡು ಫಿನ್ನರು ಅಲ್ಲಿ ನೆಲಸಿದ್ದಾರೆ.

ವೀಪೂರಿಯ ವಿಚಾರದಲ್ಲೂ, ಫಿನ್ನಿಷ್ ಯುದ್ಧದ ವಿಚಾರದಲ್ಲೂ ಫಿನ್ನರಿಗೆ ಕಳವಳ ಉಂಟಾಗಿದ್ದಿತು. ಆದರೆ ರಷ್ಯನರು ನೌಕ್ಕೆಯಿಂದ ಹಿಮ್ಮೆಟ್ಟಿರುವುದೂ, ಕೊಲ್ಲಾನ್ ಜೋಕಿ ಮೊದಲಾದೆಡೆಗಳಲ್ಲಿ ರಷ್ಯನರಿಗೆ ಸೋಲಾಗಿರುವದೂ, ಮಾರ್ಚ್ ತಿಂಗಳ ಮಂಜು ಬೀಳುತ್ತಿರುವದೆಂಬ ಸುದ್ದಿಯೂ ಎಲ್ಲಾ ಸೇರಿ ಫಿನ್ನರಿಗೆ ಉತ್ಸಾಹವನ್ನುಂಟುಮಾಡಿದೆ. ಹೆಲ್ಸಿಂಕಿಯಲ್ಲಿ ಧೈರ್ಯ ಉಂಟಾಗಿದೆ.

ವೀಪೂರಿ ಕೊಲ್ಲಿ ಮಾರ್ಗವಾಗಿ ಮುನ್ನುಗ್ಗಲೂ, ವೀಪೂರಿ ಕೊಲ್ಲಿ ಮತ್ತು ಫೌಕ್ಸ್‌ಗಳ ನಡುವೆ ಮುತ್ತಿಗೆ ಹಾಕಲೂ ರಷ್ಯನರು ಮಾಡಿದ ಪ್ರಯತ್ನಗಳು ವಿಫಲವಾದುವು.

ಕೊಡಗು

ಮಾರ್ಚಿ ತಾರೀಕು ೮ ನೇ ಶುಕ್ರವಾರ ೧೯೪೦.

ಕಾಂಗ್ರೆಸಿನ ತೀರ್ಮಾನ.

ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಳೆದ ತಾ. 28 ರಿಂದ ಈ ತಾ. 1ರ ವರೆಗೆ ಪಾಟ್ನಾದಲ್ಲಿ ನಡೆದ ಮೀಟಿಂಗಿನಲ್ಲಿ ಯುದ್ಧ ಧೋರಣೆಯ ವಿಚಾರ ತನ್ನ ಧ್ಯೇಯವನ್ನು ವ್ಯಕ್ತಪಡಿಸಿದೆ. ಈ ಠರಾವಾದರೂ ಮುಂದೆ ಜರಗಲಿರುವ ಕಾಂಗ್ರೆಸ್ ಅಧಿವೇಶನದಲ್ಲಿ ವಿಮರ್ಶಿಸಲ್ಪಡುವದು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಇಂದು ಅಂಗೀಕರಿಸಿರುವ ಠರಾವು ಈ ಮೊದಲು ತಾನು ವ್ಯಕ್ತಪಡಿಸಿದ ಧೋರಣೆಯ ಪುಷ್ಟೀಕರಣವೇ ಆಗಿದೆ. ಕಳೆದ ವರ್ಕಿಂಗ್ ಕಮಿಟಿ ಸಭೆಯ ನಂತರ ನಡೆದ ಗಾಂಧಿ ವೈಸರಾಯರ ಭೇಟಿ ಮತ್ತು ಬ್ರಿಟಿಷ್ ರಾಜನೀತಿಜ್ಞರ ಘೋಷಣೆ ಇವುಗಳಿಂದ ಯಾವದೊಂದು ತೀರ್ಮಾನವಾಗದೆ ಇರುವ ಭಾರತ ಸಮಸ್ಯೆಯ ವಿಚಾರ ಕಾಂಗ್ರೆಸು ತನ್ನ ನಿರ್ದಿಷ್ಟ ಅಭಿಪ್ರಾಯವನ್ನು ಪುನರಪಿ ಘೋಷಿಸಿರುವದು ಯೋಗ್ಯವದೆ. ಲಾರ್ಡ್ ಜೆಟ್ಲೆಂಡರಂಥವರ ಹೇಳಿಕೆಯು ಕಾಂಗ್ರೆಸ್ ಹಾಗೂ ಬ್ರಿಟಿಷರೊಳಗಾಗಬಹುದಾದ ಸಂಧಾನಕ್ಕೆ ಧಕ್ಕೆ ತಂದಿರುವದೇ ಅಲ್ಲ; ಕಾಂಗ್ರೆಸ್ಸಿಗರ ಸಹನ ಶಕ್ತಿಯನ್ನಾದರೂ ಕೆರಳಿಸುವಂತಹುದೇ ಇರುವದು. ಕಾಂಗ್ರೆಸು ಈ ರಾಜಕೀಯ ಆಂದೋಲನದ ಪ್ರಾರಂಭದಿಂದಲೂ ತಾಳ್ಮೆಯಿಂದ ವರ್ತಿಸಿದೆಯೆಂಬದನ್ನು ಯಾವ ನಿಷ್ಪಕ್ಷಪಾತಿ ವಿಮರ್ಶಕನಾದರೂ ಹೇಳಬಲ್ಲ. ಬ್ರಿಟಿಷರು ಕಾಂಗ್ರೆಸ್ಸಿನ ಈ ಸಹನೆಯನ್ನು ಉಪಯೋಗಿಸಿಕೊಂಡು ರಾಷ್ಟ್ರೀಯ ಬಿಕ್ಕಟ್ಟನ್ನು ಪರಿಹರಿಸುವದನ್ನು ಬಿಟ್ಟು ಈ ತಾಳ್ಮೆಯೇ ತಮ್ಮ ಸಾಮ್ರಾಜ್ಯತ್ವವನ್ನು ಮುಂದೆ ನಡೆಸಲು ಅವಕಾಶವೆಂದು ತಟಸ್ಥ ಕುಳಿತಿರುವದು ಶೋಭಿಸುವ ಕಾರ್ಯವಾಗದು. ಭಾರತೀಯರು ಇದೇ ರೀತಿಯಲ್ಲಿ ಇನ್ನು ಹೆಚ್ಚು ಕಾಲ ತಾಳ್ಮೆಯಿಂದಿರುವದು ಶಕ್ಯವಿಲ್ಲ. ಒಂದಲ್ಲೊಂದು ದಿನ ಅವರು ತೀವ್ರ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿ ಬರುವದು. ಹೀಗೆ ದಿನ ಸರಿದಂತೆ ಬ್ರಿಟಿಷರ ಮತ್ತು ಭಾರತೀಯರ ಸಂಬಂಧವು ದೂರವಾಗುವ ಸಂಭವ ಹೆಚ್ಚುತ್ತಿರುವಂಥಾ ಸಂದರ್ಭದಲ್ಲಿ ಬ್ರಿಟಿಷ್ ರಾಜಕೀಯ ಧುರೀಣರು ಎಚ್ಚೆತ್ತು ಯುಕ್ತೋಚಿತ ವರ್ತಿಸುವದು ಅಗತ್ಯ ಬೇಕಿದೆ.

ಭಾರತೀಯರ ಕೇಳಿಕೆಯು ತೀರಾ ಅಲ್ಪವಾದುದು. ಬ್ರಿಟಿಷ್ ಸಾರ್ವಭೌಮ ಸರಕಾರವು ಮನಸು ಮಾಡಿದರೆ ಕೆಲವೇ ದಿನಗಳಲ್ಲಿ ಭಾರತೀಯರ ಹಾಗೂ ಬ್ರಿಟಿಷರ ಮುಂದಿರುವ ಇಂದಿನ ಜಟಿಲ ಸಮಸ್ಯೆಯು ಬಗೆ ಹರಿಯುವದು. ಭಾರತವನ್ನು ಬ್ರಿಟಿಷರು ತಮ್ಮ ಸಮಾನ ರಾಷ್ಟ್ರವೆಂದು ಭಾವಿಸಬೇಕು. ಆದಕ್ಕಾಗಿಯೇ ಭಾರತದ ಭವಿತವ್ಯದ ರಚನೆಯು ಭಾರತೀಯರಿಂದಲೇ ಆಗಬೇಕೆಂದು ಕಾಂಗ್ರೆಸು ಕೇಳುತ್ತಿದೆ. ಬ್ರಿಟಿಷ್ ಸರ್ಕಾರವು ಸಣ್ಣ ಹಾಗೂ ಅಬಲ ರಾಷ್ಟ್ರಗಳ ಹಿತಕ್ಕೆಂದು ಯುದ್ಧಕ್ಕೆ ಇಳಿದಿದೆ. ಭಾರತವು ವಿಶಾಲ ರಾಷ್ಟ್ರ. ತನ್ನ ಮುಂದಿನ ವ್ಯವಸ್ಥೆಯನ್ನು ಸುಗಮವಾಗಿ ನಡೆಸಿಕೊಳ್ಳುವಷ್ಟು ಶಕ್ತಿ ಸಂಪನ್ನವಾಗಿರುವ ರಾಷ್ಟ್ರ. ಅಂಥಾ ರಾಷ್ಟ್ರವನ್ನು ತನ್ನೊಳಗಿಟ್ಟುಕೊಂಡು ಅದರ ಭವಿತವ್ಯವು ತನ್ನ ಕೈಯೊಳಗಿರಬೇಕೆಂದು ವಾದಿಸುವ ಬ್ರಿಟಿಷ್ ಮುತ್ಸದ್ದಿಗಳ ಹೇಳಿಕೆಯು ಅವರ ಯುದ್ಧ ಧೋರಣೆಗೇ ವಿರೋಧವಾಗುವದು. ಆದ್ದರಿಂದ ಭಾರತದ ಭವಿತವ್ಯದ ಜವಾಬ್ದಾರಿಯನ್ನು ಭಾರತೀಯರಿಗೇ ವಹಿಸಿ ಬ್ರಿಟನು ನಿಶ್ಚಿಂತನಾಗಿರಬೇಕಿದೆ. ಕಾಂಗ್ರೆಸ್ಸಿನ ಅಧಿಕಾರಿ ವರ್ಗವು ಅತ್ಯಧಿಕವಾಗಿರುವ ತಮ್ಮ ಜವಾಬ್ದಾರಿಯನ್ನು ಎಚ್ಚರಿಕೆಯಿಂದ ನಿರ್ವಹಿಸುತ್ತಿದೆ. ಕಾಂಗ್ರೆಸ್ಸಿನೊಳಗಿನ ಅನೇಕ ಪಂಗಡಗಳು ತೀವ್ರ ಹೋರಾಟವೇ ರಾಷ್ಟ್ರೀಯ ಸಮಸ್ಯೆಯನ್ನು ಬಗೆಹರಿಸುವ ಸುಲಭ ಸಾಧನವೆಂದು ಸಾರಿ ಹೇಳಿ ಅಧಿಕಾರಿ ವರ್ಗದ ಅಪ್ಪಣೆ ಬೇಡುತ್ತಿದ್ದರೂ ಕಾಂಗ್ರೆಸ್ ತತ್ಕಾಲಕ್ಕೆ ಅವರನ್ನು ಶಾಂತಿಯಿಂದಿರಿಸಿದೆ. ನಿಧಾಯಕ ಕಾರ್ಯಕ್ರಮವನ್ನು ಅವರ ಕೈಗೆ ಕೊಟ್ಟಿದೆ. ಗಾಂಧೀಜೀಯವರು ದೇಶವು ಮುಂದಿನ ಯುದ್ಧಕ್ಕೆ ತಯಾರಾಗಿಲ್ಲವೆಂದು ಹೇಳಿದ್ದಾರೆ. ಇದನ್ನು ಅಧಿಕಾರಿ ವರ್ಗವಾದರೂ ಅಂಗೀಕರಿಸಿ ಗಾಂಧಿಯವರನ್ನು ತಮ್ಮ ಮಾರ್ಗದರ್ಶಿಯಾಗಿ ನಿಶ್ಚಯಿಸಿದೆ. ಭಾರತದ ಹೃದಯ ಕ್ರಿಯೆಯನ್ನು ಮಹಾತ್ಮರು ಚೆನ್ನಾಗಿ ತಿಳಿದಿರುವರು. ಆದ್ದರಿಂದಲೇ ದೇಶವು ಇಂದು ಸತ್ಯಾಗ್ರಹಕ್ಕೆ ತಯಾರಿಲ್ಲವೆಂದು ಅವರು ಘೋಷಿಸಿದ್ದಾರೆ. ಬ್ರಿಟಿಷರು ಈ ಘೋಷಣೆಯಿಂದ ಸಂತೃಪ್ತರಾಗಿ ಭಾರತ ಸಮಸ್ಯೆಯನ್ನು ಹೀಗೆಯೇ ಮುಂದೆ ಹಾಕುತ್ತಾ ಹೋಗಬಹುದೆಂದು ಭಾವಿಸಿ ಅನಾಸಕ್ತಿಯಿಂದ ವರ್ತಿಸುತ್ತಿರುವದು ಉಚಿತವಲ್ಲ. ಮಹಾತ್ಮರು ರಾಷ್ಟ್ರದ ಶಿಬಿಕಾಣ ಹಿಡಿದು ರಣರಂಗಕ್ಕೆ ಕುದುರೆಯನ್ನು ಬಿಡುವ ದಿನಗಳು ದೂರವಿಲ್ಲ. ಇಂದು ನಾಳೆ ಎನ್ನುವಂತಿದೆ ಈ ಪ್ರಸಂಗ. ಆದ ಪ್ರಯುಕ್ತ ಬ್ರಿಟಿಷರು ಕಾಂಗ್ರೆಸ್ಸಿಗರ ತಾಳ್ಮೆಯನ್ನು ತಮ್ಮದೊಂದೊಂದು ಸಾಧನವಾಗಿ ಪರಿಗಣಿಸಿದರೆ ಮುಂದೆ ಕಾಂಗ್ರೆಸ್ ಹಾಗೂ ಬ್ರಿಟಿಷರೊಳಗೆ ಬರುವ ತಿಕ್ಕಾಟ, ಸಾರ್ವತ್ರಿಕ ಆಂದೋಲನ ಇವುಗಳಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಯೇ ಹೊಣೆಯಾಗಬೇಕಾಗುವದು. ಕಾಂಗ್ರೆಸಿಗರು ತಾಳ್ಮೆಯಿಂದ ಭಾರತ ಸಮಸ್ಯೆಯನ್ನು ಪರಿಹರಿಸಲು ಅಚಲ ಪ್ರಯತ್ನ ಮಾಡುತ್ತಿರುವಾಗ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಾರುಸತ್ವ ವಹಿಸಿದರು ಹೊರಡಿಸುವ ಘೋಷಣೆಗಳು ದಿನೇ ದಿನೇ ಭಾರತೀಯರ ತಾಳ್ಮೆಗೆಡಿಸುತ್ತಿವೆ. ಆದರೆ ಇನ್ನೂ ಕಾಲವು ಮೀರಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿಯು ಸಕಾಲದಲ್ಲಿ ಎಚ್ಚೆತ್ತು ಮುಂಬರುವ ಆಂದೋಲನವನ್ನು ನಿವಾರಿಸಿ ತನ್ನ ಹಾಗೂ ಭಾರತದ ಉನ್ನತಿಗೆ ಕಾರಣವಾಗಬೇಕೆಂಬುವುದೇ ನಮ್ಮ ಸದಾಶಯ.

ಕಾಂಗ್ರೆಸ್ ಠರಾವಿನ ವಿಚಾರ ಗಾಂಧಿಯವರ ಅಭಿಪ್ರಾಯ.

ಕಾಂಗ್ರೆಸ್ ಠರಾವಿನ ವಿಚಾರದಲ್ಲಿ, ಕಾಂಗ್ರೆಸು ಮುಂದೆ ಬ್ರಿಟಿಷ್ ಸರಕಾರದೊಡನೆ ಸಂಧಾನ ಕೈಕೊಳ್ಳುವ ಸಾಧ್ಯತೆಯಿಲ್ಲವೇ? ಬ್ರಿಟಿಷ್ ಹಾಗೂ ಕಾಂಗ್ರೆಸಿನೊಡನಾಗಬೇಕಾದ ಸಂಧಾನದ ಬಾಗಿಲನ್ನು ಕಾಂಗ್ರೆಸು ಈ ಠರಾವಿನಿಂದ ಮುಚ್ಚಿಬಿಟ್ಟಿತೇ? ಎಂಬಿತ್ಯಾದಿ ವಿಚಾರ ಅನೇಕ ಬ್ರಿಟಿಷರು ಗಾಂಧೀಜಿಯವರನ್ನು ಕೇಳಿದ್ದಕ್ಕೆ ಪ್ರತ್ಯುತ್ತರವಾಗಿ ಗಾಂಧೀಜಿಯವರು ಈ ಉತ್ತರ ಕೊಟ್ಟಿರುವರು.

'ಕಾಂಗ್ರೆಸ್ ಠರಾವಿನನ್ವಯ ಸಂಧಾನಕ್ಕೆ ಯಾವ ಆತಂಕವೂ ಇಲ್ಲ. ಠರಾವು ಅಂಥಾ ವಿಚಾರಗಳನ್ನೊಳಗೊಂಡಿಲ್ಲ. ಲಾರ್ಡ್ ಜೆಟ್ಲೆಂಡರವರೇ ತಮ್ಮ ಹೇಳಿಕೆಯಲ್ಲಿ ಇಂಥಾ ಸಂಧಾನಗಳ ಸಾಧ್ಯತೆಗೆ ಆತಂಕ ತಂದಿರುವರು. ಅವರ ಹೇಳಿಕೆಯ ನಂತರ ಕಾಂಗ್ರೆಸಿಗೆ ಸಂಧಾನ ಮಾಡುವದು ಶಕ್ಯವಿಲ್ಲ. ಭಾರತವು ತನ್ನ ಆರ್ಥಿಕ ಹಾಗೂ ಸಾಮಾಜಿಕ ಅಧಃಪತನಕ್ಕೆ ಕಾರಣವಾದ ಯುದ್ಧದಲ್ಲಿ ಬ್ರಿಟಿಷರೊಡನೆ ಸಹಕರಿಸಲಾರದು. ಭಾರತವು ಬ್ರಿಟನಿನಂತೆಯೇ ಸ್ವತಂತ್ರ್ಯವಾಗುವ ವರೆಗೆ ಭಾರತವು ಸುಮ್ಮನಿರದು. ಭಾರತವು ಅಹಿಂಸೆಯನ್ನು ತನ್ನ ತತ್ವವಾಗಿ ಅಂಗೀಕರಿಸಿದರೆ ಬ್ರಿಟನಿಗಿಂತಾ ಅದು ಸ್ವತಂತ್ರವಾಗುವದು. ಕಡಲ್ಗಳ್ಳಿ ಎನಿಸಿದ ಬ್ರಿಟನು ತನ್ನ ಉಚ್ಛಪದವಿಯನ್ನು ಕಳೆದುಕೊಳ್ಳುವ ದಿನಗಳು ಸಮೀಪಿಸುತ್ತಿವೆ.

ಕಾಂಗ್ರೆಸಿನ ಠರಾವು ವಿಶದವಾಗಿ ವ್ಯಕ್ತಪಡಿಸುವ ವಿಚಾರವೆಂದರೆ ಭಾರತ ಸ್ವಾತಂತ್ರ್ಯವಲ್ಲದೆ ಅದಕ್ಕಿಂತ ಒಂದು ಅಣು ಸಹ ಕಮ್ಮಿ ಇರುವ ಯಾವದಾದರೊಪ್ಪಂದಕ್ಕೆ ಕಾಂಗ್ರೆಸು ಸಹಕರಿಸದು. ಅಲ್ಲದೆ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಹಿಡಿತವನ್ನು ಬಲಗೊಳಿಸುವದು ಬ್ರಿಟಿಷರ ಈ ಯುದ್ಧ ಧ್ಯೇಯವಾಗಿ ಕಂಡು ಬರುವ ಕಾರಣ ಭಾರತವು ಇಂಥಾ ಸ್ವಾರ್ಥಯುದ್ಧದಲ್ಲಿ ಭಾಗಿಯಾಗಲಾರದು. ಆದುದರಿಂದ ಭಾರತದ ಆತ್ಮಸಹಾಯವು ಬ್ರಿಟನಿಗೆ ಈ ಯುದ್ಧದಲ್ಲಿ ಸಿಗಲಾರದು. ಕಡೆಯದಾಗಿ ಮುಂದಿನ ಸತ್ಯಾಗ್ರಹ ಸಮರಪ್ರಾರಂಭವಾದಾಗ ಭಾರತವು ಪೂರ್ಣ ಅಹಿಂಸಾತತ್ವವನ್ನೂ ಕಠಿಣವಾದ ಶಿಸ್ತನ್ನೂ ಪಾಲಿಸುವದು. ಶಿಸ್ತಿನಿಂದ ಯುದ್ಧವನ್ನು ಕೈಕೊಂಡು ಭಾರತ ಸಮಸ್ಯೆಯ ಪರಿಹಾರದ ವರೆಗೆ ಅಚಲವಾಗಿ ಹೋರಾಡುವದು. ಆದ್ದರಿಂದ ಭಾರತವನ್ನು ಜೈಲಿನ ಮನೆಯಾಗಿ ಮಾರ್ಪಡಿಸುವ ಇಲ್ಲವೇ ಅದನ್ನು ಸ್ವತಂತ್ರ ಭಾಗ್ಯಾಕಾಶದಲ್ಲಿ ನಲಿಸುವ ವಿಚಾರವು ಬ್ರಿಟಿಷ್ ಸಾಮ್ರಾಜ್ಯಶಾಹಿಗೇ ಸೇರಿದ್ದಾಗಿದೆ. ಭಾರತೀಯರು ತಮ್ಮ ರಾಷ್ಟ್ರವು ಸತತ ಗುಲಾಮಗಿರಿಯಲ್ಲಿ ಬಿದ್ದಿರುವದಕ್ಕಿಂಥಾ ಅದರ ಉದ್ಧಾರಕ್ಕಾಗಿ ಪ್ರಚಂಡ ತ್ಯಾಗ ಹಾಗೂ ತೊಂದರೆಗಳನ್ನನುಭವಿಸಲು ಸದಾ ಸಿದ್ಧರಾಗಿರುವರು.'

ಮಯೂರ ರಥದಲ್ಲಿ ರಾಷ್ಟ್ರಪತಿಗಳ ಮೆರವಣಿಗೆ.

ಕಳೆದ ವರ್ಷ ತ್ರಿಪುರಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಸಮಯಕ್ಕೆ ರಾಷ್ಟ್ರಪತಿಗಳನ್ನು ಮೆರವಣಿಗೆಯಿಂದ ಕರದೊಯ್ಯಲು 52 ಆನೆಗಳನ್ನು ಕಟ್ಟಿದ ರಥವನ್ನು ಏರ್ಪಡಿಸಲಾಗಿತ್ತು. ಆದರೆ ಈ ಸಾರೆಯ ಏರ್ಪಾಡು ಭಿನ್ನವಾಗಿದೆ. ಈ ಸಾರಿ ಅಧ್ಯಕ್ಷರನ್ನು ಮಯೂರ ರಥದಲ್ಲಿ ಮೆರವಣಿಗೆ ಮಾಡುವ ಯೋಜನೆಯಾಗಿದೆ. ಈ ಮೆರವಣಿಗೆಯು ಈ ತಾರೀಕು 15 ರಲ್ಲಿ ನಡೆಯುವದು. ರಾಂಚಿರೋಡಿನಿಂದ ಮಹಾದೇವಪುರಿ ವರೆಗೆ ಮೆರವಣಿಗೆಯು ಹೋಗುವದು.

ಮಯೂರ ರಥದ ಅಲಂಕಾರ ವೈಖರಿಯು ಈ ರೀತಿಯಿದೆ. ಪ್ರಥಮತಃ ಒಂದು ಮೋಟಾರುಕಾರನ್ನು ಪುಷ್ಪಗಳಿಂದ ಅಲಂಕರಿಸಿ ಕಾರಿನ ಮುಂಭಾಗದಲ್ಲಿ ನಾನಾ ಬಗೆಯ ಪುಷ್ಪಗಳಿಂದ ನವಿಲಿನ ಆಕೃತಿಯನ್ನು ಮಾಡುವರು.

ಈ ರಥದ ಹಿಂದೆ ವಾದ್ಯಗಾರರು ನಡೆಯುವರು. ರಥವನ್ನು ನಿಧಾನವಾಗಿ ಬಿಟ್ಟುಕೊಂಡು ಹೋಗಲಾಗುವದು. ಈ ಮೆರವಣಿಗೆಯ ವಿಶಿಷ್ಟ ಕಾರ್ಯಕಲಾಪಗಳು ಶ್ರೀ ರಾಮನಾರಾಯಣ ಸಿಂಗರ ನೇತೃತ್ವದಲ್ಲಿ ನಡೆಯುವದು. ತ್ರಿಪುರಿಯ ಎಲ್ಲಾ ಸಿದ್ಧತೆಗಳೂ ಈಗಾಗಲೇ ಪೂರ್ತಿಯಾಗಿವೆ.

ಕೃತಜ್ಞತಾ ಪತ್ರ.

ಶಿವಾಧೀನ ಹೊಂದಿದ ನನ್ನ ಪ್ರಿಯ ಪತಿಯವರ ಮರಣವಾರ್ತೆಯನ್ನು ಕೇಳಿ ನನ್ನ ಬಂಧು ಬಳಗದವರೂ ಮತ್ತು ಪ್ರಿಯ ಮಿತ್ರರೂ ಸಂತಾಪ ಸೂಚಿಸಿದ್ದಕ್ಕೆ ನಾನು ಬಹಳ ಕೃತಜ್ಞತೆಯುಳ್ಳವಳಾಗಿರುವುದಲ್ಲದೆ ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ಜವಾಬು ಕೊಡಲು ಅನುಕೂಲವಿಲ್ಲದ ಕಾರಣ ನಾನು ಅವರೆಲ್ಲರನ್ನೂ ಈ ಮೂಲಕ ವಂದಿಸುತ್ತೇನೆ.

ಮಿಸೆಸ್. ಪಿ. ಬಿ. ಮಾದಪ್ಪ,
103, ದಿವಾನಿ ರೋಡ್,
ಮೈಸೂರು.

ವರ್ತಮಾನ ಸಂಗ್ರಹ.

ವಿಶೇಷ.

ಬೊಂಬಾಯಿ ಕೊಡವ ಸಂಘದವರ ವಾರ್ಷಿಕ ಮಹಾ ಸಭೆಯು ಮಿಸ್. ಸ್ವಾತಿ ಪೂವಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ಗಳಾದ ಯಂ. ಪಿ. ಬೆಳ್ಯಪ್ಪ (ಪ್ರೆಸಿಡೆಂಟ್) (2) ಪಿ. ಯಂ. ಸುಬ್ಬಯ್ಯ (ಕಾರ್ಯದರ್ಶಿ) (3) ಬಿ. ಕೆ. ಪೂಚಯ್ಯ (ಖಜಾಂಚಿ), (4) ಪಿ. ಎಸ್. ಮಂದಣ್ಣ, (5) ಕೆ. ಎ. ಚೆಂಗಪ್ಪ ಮತ್ತು (6) ಮಿಸ್ ಲತಾ ಪೂವಯ್ಯನವರುಗಳನ್ನು ಈ ವರ್ಷಕ್ಕೆ ಕಾರ್ಯಕಾರಿ ಮಂಡಳಿಯಾಗಿ ಆರಿಸಿದ್ದಲ್ಲದೆ ವೀರಾಜಪೇಟೆ ಮಹಿಳಾ ಸಮಾಜದ ಕೇಳಿಕೆ ಮೇರೆ ಸಮಾಜದ ಕಟ್ಟಡಕ್ಕೆ ರೂ. 25 ಮಂಜೂರು ಮಾಡಿರುವರೆಂದು ತಿಳಿಯುತ್ತೇವೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 180 ರ ವರೆಗೂ ಏಲಕ್ಕಿ ಮಣಕ್ಕೆ ರೂ. 37 ರ ವರೆಗೂ ಕ್ರಯವಿತ್ತು.

ಕೊಡಗಿನ ಚೀಫ್ ಕಮಿಷನರು ಕೌನ್ಸಿಲು ಅಧಿವೇಶನದ ಪ್ರಯುಕ್ತ ತಾ. 5 ರಲ್ಲಿ ಇಲ್ಲಿಗೆ ಬಂದಿರುವರು.

ಕೊಡಗು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ತಾ. 13 ರಿಂದ ಇಲ್ಲಿಯ ಕೌನ್ಸಿಲು ಹಾಲ್‌ನಲ್ಲಿ ಪ್ರಾರಂಭವಾಗುವದು.

ಯುದ್ಧ ನಿಧಿಗೆ ಹಾಗೂ ಸೆಂಟ್ ಡನ್‌ಸ್ಟನ್ ಹಾಸ್ಟೆಲಿನ ಕೇಳಿಕೆಗಾಗಿ ಈ ತಿಂಗಳಲ್ಲಿ ರೂ. 159-12-0 ವಸೂಲಾಗಿವೆಯೆಂದು ಫಂಡಿನ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಕಡವಾದ ಸಚ್ಚಿದಾನಂದ ಸ್ವಾಮಿಗಳು ತಮ್ಮ ದಕ್ಷಿಣ ಕೊಡಗಿನ ಪ್ರವಾಸವನ್ನು ಮುಗಿಸಿ ತಾ. 9ರಲ್ಲಿ ಇಲ್ಲಿಗೆ ಸಾಯಂಕಾಲ ಬಂದು ಇಲ್ಲಿಯ ಪ್ರೈಸ್ಕೂಲ್ ಹಾಲ್‌ನಲ್ಲಿ ಒಂದು ಭಾಷಣ ಮಾಡುವರೆಂದೂ, ಮಾರನೇ ದಿನ ಬೆಳಿಗ್ಗೆ 10 ಗಂಟೆಗೆ ಇಲ್ಲಿಯ ಓಂಕಾರೇಶ್ವರ ಕೆರೆಯ ನೀರಿನಲ್ಲಿ ತೇಲಿಕೊಂಡು ದೇವರ ಸ್ತುತಿ ಮಾಡುವರೆಂದೂ ತಿಳಿಯುತ್ತೇವೆ.

ಇದೇ ತಾರೀಕು 11 ರಿಂದ 17 ರ ವರೆಗೆ ಇಲ್ಲಿಯ ವೇದಾಂತ ಸಂಘದ ಆಶ್ರಯವಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಜಯಂತ್ಯುತ್ಸವವು ನಡೆಯುವದೆಂದೂ, ಪ್ರತಿ ದಿನ ಸಾಯಂಕಾಲ 6 ಗಂಟೆಯಿಂದ ಅದ್ಯ ಮಹನೀಯರಿಂದ ಪಾರಮಾರ್ಥಿಕ ವಿಚಾರದ ಭಾಷಣಗಳು ಮಾಡಲ್ಪಡುವವೆಂದೂ ಎಲ್ಲರಿಗೂ ಸುಸ್ವಾಗತವಿದೆಯೆಂದೂ ತಿಳಿಯುತ್ತೇವೆ.

ಶ್ರೀ ನೆರವಂಡ ಅಪ್ಪಚ್ಚು ಮೆಮೋರಿಯಲ್ ಕಪ್ಪಿನ ಹಾಕಿ ಪಂದ್ಯಾಟದ ಕೊನೆ ಆಟವು ತಾರೀಕು 6 ರಲ್ಲಿ ನಡೆಯಿತು. ಸೌತ್ ಕೂರ್ಗ್-ಟೀಮಿನವರು ಪೋಲೀಸ್ ಟೀಮಿನವರನ್ನು ಸೋಲಿಸಿ ಕಪ್ಪನ್ನು ಗೆದ್ದರು. ಗೆದ್ದ ಟೀಮಿನ ಪ್ರತಿಯೊಬ್ಬ ಆಟಗಾರರಿಗೂ ಇಡಲ್ಪಟ್ಟಿದ್ದ ಪ್ರತ್ಯೇಕ ಸಣ್ಣ ಕಪ್ಪುಗಳನ್ನೂ (ಈ ರೀತಿ ಆಟಗಾರರಿಗೆ ಕಪ್ಪಿಟ್ಟದ್ದು ಇದೇ ಪ್ರಥಮ) ಮತ್ತು ಆಟದ ದೊಡ್ಡ ಕಪ್ಪನ್ನೂ ಕೊಡುವ ಕಾರ್ಯವನ್ನು ಡಾ. ಕೊಂಗೆಟ್ಟಿರ ಮಂದಣ್ಣನವರು ನೆರವೇರಿಸಿದರು.

ವೀರಾಜಪೇಟೆ

ಇಲ್ಲಿಯ ಕಪ್ರಸ್, ಲೋನ್ ಸೇಲ್ ಮತ್ತು ಸಪ್ಲೈ ಸಂಘದ ವಾರ್ಷಿಕ ಮಹಾ ಸಭೆಯು ತಾರೀಕು 2-3-40ರಲ್ಲಿ ಸಂಘದ ಆಫೀಸಿನಲ್ಲಿ ನಡೆದು ಹೊಸ ಕಮಿಟಿ ಪ್ರೆಸಿಡೆಂಟರನ್ನು ಚುನಾಯಿಸಲಾಯಿತು. ಶ್ರೀ ಚೋಂಟಿರ ಬಿದ್ದಯ್ಯನವರು ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿದ್ದಾರೆ.

ಸೋಮವಾರಪೇಟೆ.

ಇಲ್ಲಿ ಕೆಲವು ದಿನಗಳಿಂದ ಪ್ಲೇಗು ರೋಗವು ಹಬ್ಬಿದೆಯೆಂದೂ ಈಗಾಗಲೇ ಕೆಲವರು ಮೃತ್ಯುವಶವಾಗಿರುವರೆಂದೂ, ರೋಗ ನಿವಾರಣಾ ಕಾರ್ಯವು ಜಾಗರೂಕತೆಯಿಂದ ಕೈಕೊಳ್ಳಲ್ಪಟ್ಟಿದೆಯೆಂದೂ ತಿಳಿಯುತ್ತೇವೆ.

ನಿಧನ ವಾರ್ತೆ.

ಕಳೆದ ವಾರ ಶನಿವಾರಸಂತೆ ಹೋಬಳಿಗೆ ಸೇರಿದ ಗಾನೂರು ಎಂಬ ಗ್ರಾಮದ ಶ್ರೀ ಸಿಂಗೇಗೌಡರೆಂಬುವವರು ತಮ್ಮ 116ನೇ ವರ್ಷ ಪ್ರಾಯವಲ್ಲಿಯೂ, ತಾರೀಕು 7ರಲ್ಲಿ ಕಾಂಡನಕೊಲ್ಲಿ ಗ್ರಾಮದ ಶ್ರೀ ಮುದ್ದುರ ಬೆಳ್ಯಪ್ಪನವರು ತಮ್ಮ 75ನೇ ವಯಸಿನಲ್ಲಿಯೂ, ದೇವನೂರು ಗ್ರಾಮದ ಶ್ರೀ ಆಲೇಂಗಡ ಪೂವಯ್ಯನವರೂ ಕಾಲಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಹಿಂದೂ ದೇಶ.

ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ತನ್ನ ಅಧಿಕಾರಕ್ಕೆ ಸೇರಿದ 3 ಜಿಲ್ಲಾ ಕಾಂಗ್ರೆಸ್ ಕಮಿಟಿಗಳು, ಎಡ್ ಹೊಕ್ ಕಮಿಟಿಯೊಂದಿಗೆ ಸಹಕರಿಸಿತೆಂಬುದರಿಂದ, ಅವನ್ನು ರದ್ದು ಹಾಕುವ ಮೂಲಕ, ಇನ್ನೊಮ್ಮೆಯೂ ಕಾಂಗ್ರೆಸ್ ಕಾರ್ಯಕಾರಿ ಸಂಘಕ್ಕೆ ಅವಿಧೇಯವಾಗಿ ನಡೆಯಿತೆಂಬ ಕಾರಣದಿಂದ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಆ ಪ್ರಾಂತಿಕ ಸಂಸ್ಥೆಯನ್ನೇ ಸಸ್ಪೆಂಡ್ ಮಾಡಿದೆ.

ಮೈಸೂರು ಡಿಸ್ಟ್ರಿಕ್ಟ್ ಕೃಷ್ಣರಾಜನಗರದ ತಾಲೂಕಿಗೆ ಸೇರಿದ 'ಕಪ್ಪಡಿ'ಯೆಂಬ ಸಿದ್ಧಾಶ್ರಮದ ಶ್ರೀ ರಾಚಪ್ಪಾಜಿಗಳವರ ಜಾತ್ರೆಯು ತಾ. 7-3-40 ರಿಂದ ಬರುವ ತಾ. 3-4-40ರ ವರೆಗೆ ನಡೆಯುವದು. ತಾ. 11ರಲ್ಲಿ ಮುಡಿ ಸೇವೆ ಮತ್ತು ಏಪ್ರಿಲ್ 2 ಮತ್ತು 3ರಲ್ಲಿ ಮೊದಲಿಸೇವೆ ಮತ್ತು ಮಹಾಭಿಷೇಕ ನಡೆಯುವವು.

ಯುದ್ಧದ ಹಾಗೂ ಆರ್ಥಿಕ ಮುಗ್ಗಟ್ಟಿನ ಈ ಕಾಲದಲ್ಲಿಯೂ ಅಜಮೀರಿನ ದಿ. ಜನರಲ್ ಇನ್ಶೂರನ್ಸ್ ಸೊಸೈಟಿಯು 80,70,000 ರೂಪಾಯಿಯ ಹೊಸ ಬ್ಯುಸಿನೆಸನ್ನು ಮಾಡಿದೆ. ಕಳೆದ ವರ್ಷಕ್ಕಿಂತಾ ಇದು 6,69,000 ಜಾಸ್ತಿಯಾಗಿದೆ. ಅಲ್ಲದೆ ಕಂಪನಿಯ ಖರ್ಚಿನ ಸಂಖ್ಯೆಯೂವರೂ ಕಳೆದ ವರ್ಷದಂತೇ ಶೇಕಡ ರೂ. 27.9 ಆಗಿರುವದು. ಈ ವಿಚಾರಗಳು ಕಂಪನಿಯ ಭದ್ರತೆಯನ್ನು ತಿಳಿಸುತ್ತಿವೆಯೆಂದು ಬೇರೆ ಹೇಳಬೇಕಿಲ್ಲ.

ಇಂಪೀರಿಯಲ್ ಏರ್ ವೇಸಿನ ಭೂ ವಿಮಾನವಾದ 'ಹನ್ನಿಬಾಲ್', ಇಂಡಿಯದ ಟಪ್ಪಾಲನ್ನೂ, 4 ಮಂದಿ ಪ್ರಯಾಣಿಕರನ್ನೂ 4 ಮಂದಿ ವಿಮಾನದ ಸಿಬ್ಬಂದಿಯನ್ನೂ ತೆಗೆದುಕೊಂಡು ಕರಾಚಿಯಿಂದ ಹೊರಟಿದು ಹೇಗೋ ಅಪಗಡಕ್ಕೆ ಸಿಲುಕಿ ನಾಶವಾಗಿದೆ. ಈ ವಿಮಾನ ಹೊರಟುದು ಲಂಡನಿಗೆ. ಇದು ನಾಲ್ಕು ಇಂಜಿನುಗಳ ಬ್ಯಾ ಪ್ಲೇನು. ಇದರಲ್ಲಿ ಸರ್ ಎ. ಟಿ. ಪನ್ನೀರ್‌ಸೆಲ್ವಂರವರೂ, ವಿಮಾನ ಸೇನಾಪತಿ ವಿಸ್ಲರರೂ, ಸೇನಾಪತಿ ಬಯರ್ನರೂ, ಮಿ. ಹಚಿನ್‌ಸನ್‌ರೂ ಪ್ರಯಾಣಿಕರಾಗಿದ್ದರು.

ಹಿಂದುಸ್ತಾನದ ಆಯವ್ಯಯದ ಅಂದಾಜಿನ ಲೆಕ್ಕಾಚಾರವೀಗ ಪ್ರಕಟಗೊಂಡಿದೆ. ಚಾಲ್ತಿ ವರ್ಷದಲ್ಲಿ 91 ಲಕ್ಷ ರೂಪಾಯಿಗಳ ಉಳಿತಾಯವಾಗಿದೆ. 1940-41 ರಲ್ಲಿ 7.16 ಕೋಟಿ ರೂಪಾಯಿಗಳ ಅಂದಾಜಿನ ನಷ್ಟವಾದೀತೆಂದು ಲೆಕ್ಕಾಚಾರವಾಗಿದ್ದು ಅದನ್ನು ತುಂಬಿಕೊಳ್ಳಲು ಏರ್ಪಡಿಸಿದ ಹಲವು ಉಪಾಯಗಳ ಪರಿಣಾಮವಾಗಿ, ಸಕ್ಕರೆ ಹಾಗೂ ಪೆಟ್ರೋಲಿನ ಮೇಲಿನ ಸುಂಕವೇರಿದೆ. ದೇಶದ ರಕ್ಷಣಾರ್ಥವಾಗಿ 8.39 ಕೋಟಿ ರೂಪಾಯಿಗಳ ಹೆಚ್ಚಿನ ವೆಚ್ಚ ಮಂಜೂರಾಗಿದೆ. 1939-40 ರಲ್ಲಿ ಪೋಸ್ಟ್ ಮತ್ತು ಟೆಲಿಗ್ರಾಫ್ ಶಾಖೆಯ ಆದಾಯವು ಸುಮಾರು 86 ಲಕ್ಷವೆಂದು ತಿಳಿದು ಬರುತ್ತಿದೆ.

ಪುನಃ ಜಿನ್ನರಿಗೇ ಮುಸ್ಲಿಂ ಲೀಗಿನ ಪಟ್ಟ ಕಟ್ಟುವ ನಿರ್ಧಾರವಾಯಿತು. ಆದರೆ ಜಿನ್ನರ ವಿರುದ್ಧವಾಗಿಯೂ ಕೆಲವರ ಮಾತು ಕೇಳಿ ಬಂತೆಂದು ತಿಳಿಯುತ್ತದೆ. ತರುಣ ಮುಸಲ್ಮಾನರ ಪಕ್ಷವು 'ಕಾಂಗ್ರೆಸ್ಸಿನೊಡನೆ ಒಪ್ಪಂದ ಮಾಡುವುದಕ್ಕೆ ಅನುಕೂಲವಾಗಿದೆ' ಎಂದು ರಾಜಾ ಅಲಿಗಳು ಹೇಳಿದಾಗ ಜಿನ್ನರು ಕೋಪಿಸಿದರು. ಗಡಿನಾಡಿನಲ್ಲೀಗ ಪುಂಡರು ಅನಾಹುತ ಮಾಡುತ್ತಿರುವರಷ್ಟೆ! ದಿನಂಪ್ರತಿ ಮಾರೆ ಸುಲಿಗೆಗೊಳಗಾಗುವ ಅಲ್ಲಿಯ ಪ್ರಜೆಗಳನ್ನು ಕಾಪಾಡುವದಕ್ಕಾಗಿ ಬ್ರಿಟಿಷ ಸರಕಾರದವರು ಸೈನಿಕರನ್ನು ಕಳುಹಿಸಿ ಪುಂಡರನ್ನು ದಮಿಸುತ್ತಿರುವರೂ ಲೀಗಿನವರಿಗೆ ಅಸಹ್ಯವಾಗಿ ತೋರಿದೆ. ಜಿನ್ನರ ಅಸಾಧ್ಯವಾದ ಕೇಳಿಕೆಗಳನ್ನು ಬ್ರಿಟಿಷರು ಮನ್ನಿಸುತ್ತಿದ್ದರೆ ಇಂಥಹ ಆಕ್ಷೇಪಕ್ಕೆ ಎಡೆ ದೊರೆಯುತ್ತಿರಲಿಲ್ಲ.

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಲಿಮಿಟೆಡ್, ಇದರ ವರ್ಷಾವಧಿ ಜನರಲ್ ಬಾಡಿ ಮೀಟಿಂಗು, ಇದೇ ಫೆಬ್ರವರಿ ತಾ. 25ರಲ್ಲು ಉಡುಪಿಯಲ್ಲಿ ಸದರಿ ಬ್ಯಾಂಕಿನ ಹೆಡ್ಡಾಫೀಸಿನಲ್ಲಿ, ಎಂದಿನಂತೆ ಜರಗಿತು. ಕಳೆದ ವರ್ಷದ ಬ್ಯಾಲೆನ್ಸ್ ಶೀಟು ಮತ್ತು ಲಾಭ ನಷ್ಟಗಳ ಪಟ್ಟಿಯನ್ನೂ ಪಾಸ್ ಮಾಡಲಾಯಿತು. ಶೇರುದಾರರಿಗೆ 9ರ ಸರಿಯಲ್ಲಿ ಲಾಭ ಪಂಚಲಡಬೇಕೆಂದೂ ಠರಾವಾಯಿತು. ಅವರ ಡೈರೆಕ್ಟರ ಮಂಡಳಿಗೆ ಮಂಗಳೂರಿನ ಕೆಥೋಲಿಕ್ ವರ್ಗದವರೂ, ಸುಪ್ರಸಿದ್ಧ ಶ್ರೀಮಂತ ಕುಲದವರೂ ಮತ್ತು ಹಂಚು ಕಾರಖಾನೆಯ ಮಾಲಿಕರೂ ಆದ ಮಿ. ಎಫ್. ಎಕ್ಸ್. ಡಿ. ಪಿಂಟೋರವರನ್ನು ಹೊಸ ಡೈರೆಕ್ಟರಾಗಿ ಚುನಾಯಿಸಿರುವರೆಂದೂ ತಿಳಿಸಲು ಸಂತೋಷಪಡುತ್ತೇವೆ.

ವಿದೇಶ.

ಬ್ರಿಟಿಷ್ ಸರಕಾರದ ಮಾಜಿ ಸೇನಾ ಮಂತ್ರಿಗಳಾದ ಹೋರ್ ಬೆಲೀಶರಿಗೆ ಚೇಂಬರ್‌ಲೀನರು ಅರ್ಧಚಂದ್ರ ಪ್ರಯೋಗ ಮಾಡಿದುದರ ಕಾರಣ ಹೊರಬೀಳುತ್ತಿದೆ. ಅವರ ಘೋರಣವು ಉಗ್ರ. ರಷ್ಯಕ್ಕೆ ಕೂಡಲೇ ಬುದ್ಧಿ ಕಲಿಸಬೇಕೆನ್ನುವ ಬಿಸಿ ರಕ್ತದವರು ಅವರು. ಇಂತಹ ಸ್ವಸ್ಥ, ಘೋರಣವೂ ಧೈರ್ಯವೂ ಚೇಂಬರ್ಲೇನರಿಗೆ ಬೇಕಾಗಿರಲಿಲ್ಲ. ಅವರು ಬರೆದ ಒಂದು ಲೇಖನದಲ್ಲಿ ಫಿನ್‌ಲೆಂಡಿಗೆ ಬ್ರಿಟಿಷ್ ಸೇನೆಗಳನ್ನು ಕಳುಹಿಸಬೇಕು ಎಂದಿದ್ದ ಕೆಲ ವಾಕ್ಯಗಳ ಪ್ರಕಟನೆಗೆ ಸರಕಾರದವರು ಒಪ್ಪಿಗೆ ಕೊಡಲಿಲ್ಲ. ಆ ಮಾತುಗಳನ್ನು ಲೋಪಿಸಿಯೆ ಪತ್ರಿಕೆಗಳು ಪ್ರಕಟಿಸಬೇಕಾಯಿತು. ಹೋರ್ ಬೆಲೀಶರು ಮಂತ್ರಿಮಂಡಲದೊಳಗೂ ಹೋರಾಡಿ ಹೊರಬಿದ್ದರು. ಯುದ್ಧ ಮಂತ್ರಿಗಳೆಂಬ ಹೆಸರನ್ನು ಸಾರ್ಥಕಗೊಳಿಸಿದರು.

CHIEF FOREST OFFICE, COORG
Mercara, the 2nd March 1940.

NOTICE.

Applications are invited from candidates for filling up a vacancy in the post of a temporary Forester, Minimum qualification is passed S. S. L. C. good physique and good credentials. Last day for receipt of the applications is 10th March 1940 when the Chief Forest Officer will interview the candidate at 11 A. M. in his office on 11-3-1940.

M. S. RANGASWAMI,
Ag. Chief Forest Officer,
Coorg.

FOR SALE.

Dressed rose wood logs by the road side. Sawn rose wood planks 3 feet in breadth and other dimensions available. Preference to whole sale bussiness.

For further Particulars apply to:-
P. M. Appiah.
Pattycod Estate,
3 Madapur P. O.

ಬಾತ್ಮಿ.

ಸಂಬಂಧಪಟ್ಟವರು ಗಮನಿಸುವರೇ?

ಸೌದೆಯನ್ನು ಸಾಗಿಸಲು ರಹದಾರಿಯನ್ನು ಕೊಡುವ ಅಧಿಕಾರವು ಈ ಮೊದಲು ಆಯಾಯ ನಾಡಿನ ಪಾರುಪತ್ಯಗಾರರಿಗಿತ್ತು. ಆದರೆ ಇತ್ತಲಾಗಿ ಈ ಅಧಿಕಾರವನ್ನು ಸುಭೇದಾರರಿಗೆ ವರ್ಗಾಯಿಸಿರುವರಂತೆ. ಇದು ನಿಜವಿದ್ದರೆ ಎಷ್ಟರ ಮಟ್ಟಿಗೆ ಇದು ಅಬದ್ಧವಾಗಿದೆಯೆಂದು ಬೇರೆ ಹೇಳಬೇಕಿಲ್ಲ. ಕೊಡಗಿನ ಮೂಲೆ ಮೂಲೆಗಳಲ್ಲಿ ವಾಸಿಸುವವರು ಕೊಡಗಿಗಿರುವ ಎರಡು ಸುಭೇದಾರರುಗಳಿಂದ ಈ ರಹದಾರಿಗಳನ್ನು ಪಡೆಯುವದು ತುಂಬಾ ಕಷ್ಟಕರವಾಗಿದೆ. ಅನೇಕ ಮೈಲುಗಳ ದೂರದಲ್ಲಿರುವವರು ಈ ರಹದಾರಿಯನ್ನು ಪಡೆಯುವದು ಒಂದು ಸಮಸ್ಯೆಯೇ ಆಗುವದು. ಇರಲಿ, ಅದಕ್ಕೆ ಸಮಯವಾದರೂ ಬರೀ 15 ದಿನಗಳಂತೆ. ರಹದಾರಿ ತೆಗೆಯುವ ವ್ಯವಹಾರದಲ್ಲಿಯೇ ಮುಕ್ಕಾಲು ಸಮಯವು ಕಳಕೊಳ್ಳಬೇಕಾಗುವ ಪ್ರಯುಕ್ತ ಈಗಿನ ಈ ರಹದಾರಿಯ ಕ್ರಮದಿಂದ ಜನರಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಸಮಯವನ್ನು ಒಂದು ತಿಂಗಳಿಗೆ ಹೆಚ್ಚಿಸುವದು ಪೂರಾ ಅಗತ್ಯ. ರಹದಾರಿ ಕೊಡುವ ಅಧಿಕಾರನಾದರೂ ಸುಭೇದಾರರಿಗೇ ಅಲ್ಲ, ಪಾರುಪತ್ಯಗಾರರಿಗೂ, ಅವಶ್ಯ ಬಿದ್ದಲ್ಲಿ ಶಾನುಭೋಗರಿಗೂ ಇರಬೇಕಾದುದು ಅತ್ಯಗತ್ಯ. ಈ ವಿಚಾರದಲ್ಲಿ ಸಂಬಂಧಪಟ್ಟವರು ಎಚ್ಚೆತ್ತು ವರ್ತಿಸುವರೇ?

'ತೊಂದರೆ ಪಟ್ಟವ'

ಮಡಿಕೇರಿ ಕೊಡವ ಸಂಘ.

ಮೇಲ್ಕಂಡ ಅಭಿದಾನದ ಒಂದು ಸಂಘವು ಕೊಡವ ಸಮಾಜ ಸುಧಾರಣೆಯ ಹಾಗೂ ಕೊಡವರ ವೈಶಿಷ್ಟ್ಯಗಳನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಅನೇಕ ವರ್ಷಗಳ ಹಿಂದೆಯೇ ಸ್ಥಾಪಿತವಾಗಿದೆ. ಆಧುನಿಕ ನಾಗರೀಕತೆಯ ಮಧ್ಯದಲ್ಲೂ, ನಾನಾ ರೀತಿಯ ಕಷ್ಟ ಪರಂಪರೆಗಳಲ್ಲೂ ಅದು ತನ್ನ ಪ್ರತಿಷ್ಠೆಯನ್ನು ಕಳೆದುಕೊಳ್ಳದೆ ಮುಂದರಿದಿದೆ. ಆದರೆ ಇತ್ತೀತ್ತಲಾಗಿ ಯಾವ ಕಾರಣದಿಂದಲೋ ಅದರ ಪ್ರಭಾವಕ್ಕೆ ಹಾಗೂ ಯಶಸ್ವಿತೆಗೆ ಧಕ್ಕೆ ಬರುವಂಥಾ ಕಾರ್ಯಗಳು ನಡೆಯುತ್ತಿವೆ. ಈ ವಿಚಾರದಲ್ಲಿ ಅಧಿಕಾರಿ ವರ್ಗವನ್ನು ಸಕಾಲದಲ್ಲಿ ಎಚ್ಚರಿಸಿ ಅವರ ಕರ್ತವ್ಯಪಥವನ್ನು ತೋರಿಸುವದೇ ಈ ಲೇಖನದ ಧ್ಯೇಯ.

ಕೊಡವ ಸಮಾಜಕ್ಕೆ ಒಂದು ಸಂಘವಿರುವದು ಶೋಭಿಸುವಂಥಾ ವಿಚಾರವೇ. ಆ ಶೋಭೆಗೆ ತಕ್ಕಂತೆ ಅದು ಸಮಾಜದ ಹಿತಚಿಂತನೆಯನ್ನೂ ಮಾಡಬೇಕು. ಕೊಡವರ ಸಾಮಾಜಿಕ, ಆರ್ಥಿಕ, ನೈತಿಕ ಮೊದಲಾದ ಆದಿ ಭೌತಿಕ ಸುಧಾರಣೆಗಳನ್ನು ಮಾಡುವ ಕಾರ್ಯವು ನಮ್ಮ ಈ ಸಂಘದ ವ್ಯವಹಾರ ಕ್ಷೇತ್ರವಾಗಿದೆ. ಆದರೆ ನಮ್ಮ ಸಂಘವು ಈ ವಿಚಾರಕ್ಕೆ ಬೆನ್ನು ಹಾಕಿದೆಯೆಂದರೆ ಅತ್ಯುಕ್ತಿಯಾಗದು. ನನ್ನ ಹೇಳಿಕೆಯನ್ನು ಸ್ಪಷ್ಟಪಡಿಸಲು ಕೆಲವು ವಿಚಾರಗಳನ್ನು ಮುಂದಿಡಬೇಕಿದೆ. ಸಂಘವು ಸ್ಥಾಪಿತವಾಗಿ ವರ್ಷಗಳು ಅನೇಕ ಗತಿಸಿದರೂ ಅದು ಅಭಿವೃದ್ಧಿಗೊಂಡು ಅದರ ವ್ಯವಹಾರ ಕ್ಷೇತ್ರದಲ್ಲಿ ಸಮಂಜಸವಾದ ಕೆಲಸ ಮಾಡುವ ಸಂಭವ ಕಾಣುವದಿಲ್ಲ. ಸಂಘವು ಹಿರಿಯ ಪ್ರಾಯಸ್ಥನಾಗಿದ್ದರೂ ಸಹ ಮಡಿಕೇರಿಯಲ್ಲೇ ಕೊಡವ ಸಂಘವೆಂಬುದೊಂದಿದೆಯೆಂದು ತಿಳಿಯದ ಅನೇಕ ಕೊಡವರಿರುವರೆಂದರೆ ಸಂಘದ ಕಾರ್ಯಕ್ರಮವು ಎಷ್ಟು ಕ್ರಮ ಪ್ರಕಾರ ನಡೆಯುತ್ತಿದೆಯೆಂಬವನ್ನು ಬೇರೆ ಹೇಳಬೇಕಿಲ್ಲ. ಸಂಘಕ್ಕೆ ಸದಸ್ಯರಾಗುವಂತೆ ತನ್ನ ವ್ಯವಹಾರ ಕ್ಷೇತ್ರದಲ್ಲಿರುವ ಕೊಡವರನ್ನು ಕೇಳುವದು ಅಧಿಕಾರವನ್ನು ಹೊತ್ತ ಭೂಷಣ ಪುರುಷರ ಗೌರವಕ್ಕೆ ಕಡಿಮೆ. ಸದಸ್ಯರಾದವರಿಗೆ ಸಂಘದ ಮೀಟಿಂಗುಗಳ ಮತ್ತು ಇತರ ವಿಶೇಷ ಸಮಾರಂಭಗಳ ಅರುಹಿಕೆ ಕೊಡುವದು ಅವರ ಪ್ರಧಾನ್ಯತೆಗೆ ಕುಂದು. ಅಂದ ಮೇಲೆ ಸಂಘದ ಕಾರ್ಯಕಲಾಪಗಳು ಹೇಗೆ ನಡೆಯಬೇಕು. 'ಬೇಲಿಯೇ ಹೊಲವನ್ನು ಮೇಯಿತೆಂಬ' ನಾಣ್ಣುಡಿಯಂತೆ ಸಂಘದ ಆಧಾರಸ್ತಂಭವಂತಿರುವ ಅಧಿಕಾರ ಹೊತ್ತ ಜವಾಬ್ದಾರಿ ಮಹನೀಯರೇ ಇಂಥಾ ಉಪೇಕ್ಷೆಯನ್ನು ತೋರಿದರೆ ಸಂಘದ ಪ್ರಗತಿ, ಪ್ರತಿಷ್ಠೆಯೆಂಬುದು ಕನಸಿನ ವಿಚಾರವಲ್ಲವೇ? ಇತ್ತೀಚೆಗಾಗಿ ಸಮಾಜ ಸುಧಾರಣೆಯೆಂಬ ನೆಪದಿಂದ ಆಗಾಗ್ಯೆ ಚಂದಾ ಎತ್ತಿ ಭೂರಿ ಭೋಜನ ಮಾಡುವ ಅನುಕೂಲತೆಯೊಂದನ್ನು ಮಾಡಿಕೊಂಡಂತೆ ಕಾಣುತ್ತದೆ. ಈಗಾಗಲೇ ಇಂಥ ಎರಡು ಮೂರು ಕೂಟಗಳು ನಡೆದವು. ಇಂಥಾದ್ದರಲ್ಲಿ ಒಂದು ತಾ|| 3ರಲ್ಲಿ ನಡೆಯಿತು. ಅದರಲ್ಲಿ ಕೊಡವ ಸಂಘಕ್ಕೆ ಸೇರದ ಕೊಡವರನ್ನು ಮುಂದೆ ದೂರವಿರಿಸುವ ಮಾತುಗಳು ನಡೆದವಂತೆ. ಇಂಥಾ ವಿಚಾರ ಬಂದದ್ದು ನಕ್ಕು ಅದು ತಿಳಿಗೇಡಿತನವೆಂದಷ್ಟೇ ಅಲ್ಲ; ಸಂಘದ ಸ್ವೀಕರೆಂದು ಹೇಳಿಸಿಕೊಂಡು ಗಂಭೀರವಾಗಿ ಮೆರೆಯುವ ಸಂಘದ ಹಿತಕಾಂಕ್ಷಿಗಳು ಸಂಘದ ಬುಡಕ್ಕೇ ಕೊಡಲಿ ಹಾಕುವ ಕಾರ್ಯವೆಂದು ಹೇಳಬೇಕಾಗುವದು. ಸಂಘಕ್ಕೆ ಸೇರದವರನ್ನು ಸಂಘದ ಧ್ಯೇಯವನ್ನು ವಿವರಿಸಿ ಸೇರಿಸುವ ಪ್ರಯತ್ನ ಮಾಡುವ ಬದಲು ಈ ರೀತಿಯ ಕೃತಿಯಿಂದ ಸಂಘಕ್ಕೆ ಘಾತಕವನ್ನುಂಟುಮಾಡುವದು ಅಧಿಕಾರ ಹೊತ್ತವರ ಕರ್ತವ್ಯ ನ್ಯೂನತೆಯೆಂದೆನ್ನಬೇಕಾಗಿದೆ. ಸಂಘದಲ್ಲಿ ವಿಶೇಷ ಕಾರ್ಯಗಳನ್ನು ಮಾಡುವ ಯಾ ಮೀಟಿಂಗುಗಳನ್ನು ಸೇರಿಸುವ ಸಂದರ್ಭದಲ್ಲಿ ನಮ್ಮ ಅಧಿಕಾರಿ ವರ್ಗವು ಸಂಘದ ಸದಸ್ಯರಲ್ಲಿ ಕೆಲವನ್ನು (ಅವರ ಮನಸಿಗೆ ಹೊಳೆದಂತೆ) ತಮ್ಮ ಅಧಿಕಾರ ದರ್ಪದ ಮೇಲೋ, ಧನಬಲದ ಮೇಲೋ ನಿಶ್ಚಯಿಸಿ ಅವರವರಿಗೆ ಪಾತ್ರ ಪಟ್ಟಿಯನ್ನು ತೋರಿಸಿದರೆ ಉಳಿದ ನನ್ನಂಥಾ ಬಡಪಾಯಿಗೆ ಆ ಪಟ್ಟಿಯನ್ನು ನೋಡುವ ಅವಕಾಶವಾದರೂ ಎಲ್ಲಿಂದ ಬರಬೇಕು? ಸಂಘದ ಆಶ್ರಯದಲ್ಲಿ ನಡೆಯುವ ವಿಚಾರಗಳು ನನಗೆ ಹೇಗೆ ತಿಳಿಯಬೇಕು? ಮೀಟಿಂಗುಗಳಲ್ಲಾದ ನಿರ್ಣಯಗಳನ್ನು ಸ್ಥಳೀಯ ಪತ್ರಿಕೆಗಳಲ್ಲಿ ಹಾಕಿದರೆ ಅದನ್ನಾದರೂ ಓದಿ ನಮ್ಮ ಕರ್ತವ್ಯ ಮಾಡಬಹುದು. ಇದು ಯಾವುದೂ ಇಲ್ಲದೆ ಅಧಿಕಾರದಲ್ಲಿರುವ ವರೆಗೆ ತಮ್ಮ ಬೇಳೆ ಬೇಯಿಸಿಬಿಡಬೇಕೆಂದು ಅಧಿಕಾರ ಬಲದಿಂದ ಠರಾವುಗಳನ್ನು ಮಂಡಿಸಿ, ವಿಚಾರವಿಹೀನವಾದ ತೀರ್ಮಾನಗಳನ್ನು ಮಾಡುವದರಿಂದ ಸಂಘದ ಅಭಿವೃದ್ಧಿಯನ್ನು ಬಯಸಿದಂತಾಗಲಿಲ್ಲ. ಇನ್ನಾದರೂ ಅಧಿಕಾರಿ ವರ್ಗವು ತಮ್ಮ ಕರ್ತವ್ಯವನ್ನು ಸಂಘದ ಪುರೋಭಿವೃದ್ಧಿಯ ದೃಷ್ಟಿಯಿಂದ ನಡೆಸಿ, ಸದಸ್ಯರು ಅವರ ಮೇಲೆ ಹೊರಿಸಿದ ಗೌರವಕ್ಕೆ ಅರ್ಹರೆಂದೆನಿಸಿಕೊಳ್ಳುವದು ಬೇಕಿದೆ. ಆದರಿಂದ ಇನ್ನಾದರೂ ಅಧಿಕಾರಿ ವರ್ಗವು ಎಚ್ಚತ್ತು ವ್ಯವಸ್ಥಿತ ರೀತಿಯಿಂದ ಕಾರ್ಯ ಸಾಗಿಸಿ ಕೊಡವ ಸಂಘದ ಧ್ಯೇಯ ಸಾಫಲ್ಯಕ್ಕೆ ಯತ್ನಿಸುವರೇ?

ಎಂ. ಎ. ಜಿ.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 1-3-40 ರಲ್ಲು ಬೆಳಿಗ್ಗೆ 11 ಗಂಟೆಗೆ ಬ್ಯಾಂಕು ಆಫೀಸಿನಲ್ಲು ಶ್ರೀಮಾನ್ ಪಂದ್ಯಂಡ ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹಾಜರಿದ್ದ ಡೈರೆಕ್ಟರುಗಳು.

1. ದಿ. ಗಳಾದ ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು) 2. ಸಿ. ಪಿ. ಕರುಂಬಯ್ಯನವರು, 3. ಪಿ. ಜಿ. ಅಯ್ಯಪ್ಪನವರು, 4. ಐ. ಪಿ. ಕಾರ್ಯಪ್ಪನವರು, 5. ಕೆ. ಎಂ. ಕುಶಾಲಪ್ಪನವರು, 6. ಎಂ. ಎಸ್. ಸೋಮಯ್ಯನವರು, 7. ಸಿ. ಎಂ. ಪೂಣಚ್ಚನವರು, 8. ಪಿ. ಸಿ. ಕರುಂಬಯ್ಯನವರು, 9. ಕೆ. ಕೆ. ಗಣಪತಿಯವರು, 10. ಬಿ. ಸಿ. ಮಾಚಯ್ಯನವರು, 11. ಎಂ. ಸಿ. ದೇವಯ್ಯನವರು, 12. ಎಸ್. ಎನ್. ರಾಮಶೆಟ್ಟಿಯವರು (ಗೌರವ ಕಾರ್ಯದರ್ಶಿ) 13. ಸಿ. ಜಿ. ಮುದ್ದಮ್ಮಯ್ಯನವರು.

ಅಸಿಸ್ಟೆಂಟ್ ರಿಜಿಸ್ಟ್ರಾರವರು ಸಹ ಹಾಜರಿದ್ದರು.

ಗೈರಾಜರಾದ ಡೈರೆಕ್ಟರುಗಳು.

1. ರಾ. ಬ. ಪಿ. ದೇವಯ್ಯನವರು (ಖಜಾಂಚಿ) 2. ಮೆ. ಹೆಚ್. ಎಂ. ಪುಟ್ಟಣ್ಣನವರು.

1. ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ಹೇಳಿ ಒಪ್ಪಲಾಯಿತು.

2. ಸುಪರ್‌ವಿಜನು ಬೋರ್ಡಿನ ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ಹೇಳಿ ರಿಕಾರ್ಡು ಮಾಡಲಾಯಿತು.

3. ಫೆಬ್ರವರಿ ತಿಂಗಳ ಲೆಕ್ಕವನ್ನು ಓದಿ ಹೇಳಿ ಒಪ್ಪಲಾಯಿತು.

ಹಿಂದಿನ ಶಿಲ್ಕು	ರೂ.	19,168	4	4
ಜನವರಿ ತಿಂಗಳಲ್ಲಿ				
ವಸೂಲಿ	ರೂ.	34,859	5	0
ಜುಮ್ಲಾ	ರೂ.	54,027	9	4
ಸದರಿ ತಿಂಗಳಲ್ಲಿ				
ಖರ್ಚು	ರೂ.	36,073	3	3
ಬಾಕಿ ಶಿಲ್ಕು	ರೂ.	17,954	6	1

4. ಈ ಕೆಳಗಿನ ಸಂಘಗಳಿಗೆ ಸಾಲಗಳು ಮಂಜೂರಾದವು.

1. ಬಲ್ಲತ್ನಾಡು ಸೊಸೈಟಿಗೆ 500 ರೂ. 2. ಕಿಗ್ಗಟ್ನಾಡು ಕ್ರೆಡಿಟ್, ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಗೆ 5000 ರೂ. 3. ವೀರಾಜಪೇಟೆ ಕ್ರೆಡಿಟ್ ಲೋನ್, ಸೇಲ್ ಅಂಡ್ ಸಪ್ಲೈ ಸೊಸೈಟಿಗೆ 3000 ರೂ.

5. ರಿಜಿಸ್ಟ್ರಾರವರಿಂದ ಇಂಡಿಯನ್ ಬ್ಯಾಂಕು ಆಕ್ಟು ವಿಷಯ ಬಂದ ನಂಬ್ರ 2457 ತಾ. 29-1-40 ರ ಪತ್ರ ಓದಲಾಯಿತು.

ಈ ಬಾಬಿನಲ್ಲು ಬರುವ ಮೀಟಿಂಗಿನೊಳಗೆ ರಿಪೋರ್ಟು ಮಾಡುವ ಬಗ್ಗೆ ಮೆ. ಗಳಾದ ಪಿ. ಐ. ಬೆಳ್ಯಪ್ಪನವರು, ಪಿ. ಜಿ. ಅಯ್ಯಪ್ಪನವರು, ಮತ್ತು ಎಸ್. ಎನ್. ರಾಮಶೆಟ್ಟಿಯವರಿಂದ ಕೂಡಿದ ಒಂದು ಸಬ್ ಕಮಿಟಿಯನ್ನು ನೇಮಕ ಮಾಡಲಾಯಿತು.

6. ಒಕ್ಕಲಿಗರ ದೇವಲಿಂಗಪ್ಪ ಮತ್ತು ವೀರಪ್ಪನವರು ತಮ್ಮ ಮನೆ ಆಕಸ್ಮಾತ್ತಾಗಿ ಬೆಂದು ಹೋದ ಬಗ್ಗೆ ಬ್ಯಾಂಕಿನಿಂದ ಧನ ಸಹಾಯ ಮಾಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಈ ಅರ್ಜಿಯನ್ನು ಹೆಚ್ಚಿನ ತನಿಕೆಯಿಂದ ಎಷ್ಟರ ಮಟ್ಟಿಗೆ ನಷ್ಟವುಂಟಾಗಿದೆ ಎಂಬದಾಗಿ ರಿಪೋರ್ಟು ಮಾಡುವ ಬಗ್ಗೆ ಯೂನಿಯನು ಮೂಲಕ ಸುಪರ್‌ವೈಸರಿಗೆ ಕಳುಹಿಸುವಂತೆ ತೀರ್ಮಾನಿಸಲಾಯಿತು.

7. ಇಂಡಿಯನ್ ಕೋಪರೇಟಿವ್ ಮಿಶನಿನ ಸಾಸೈಟಿಯ ಕರಡು ನಿಬಂಧನೆಗಳನ್ನು ಓದಲಾಗಿ, ಇದನ್ನು ಸಹ ಇಂಡಿಯನ್ ಬ್ಯಾಂಕು ಆಕ್ಟಿನ ವಿಷಯ ರಿಪೋರ್ಟು ಮಾಡುವ ಬಗ್ಗೆ ಚುನಾಯಿಸಿದ ಸಬ್ ಕಮಿಟಿಯವರಿಗೆ ರಿಪೋರ್ಟು ಬಗ್ಗೆ ಬಿಡಲಾಯಿತು.

8. ಮೆಂಬರುಗಳು ಗಿರ್ವಿ ಕೊಡುವ ಆಸ್ತಿಯ ತರಂ ಪ್ರಕಾರ ಅವರಿಗೆ ಸಂಘಗಳಿಂದ ಸಾಲ ಮಂಜೂರ್ಮಾಡಬೇಕೆಂಬದಾಗಿ ರಿಜಿಸ್ಟ್ರಾರವರು ಕಳುಹಿಸಿದ ನಂಬ್ರ 2498 ತಾ. 2-2-40 ರ ಪತ್ರ ಓದಲಾಯಿತು.

ಗಿರ್ವಿ ಕೊಡುವ ಆಸ್ತಿಯ ಮೌಲ್ಯಗಳನ್ನು ನಿರ್ಧಾರ ಮಾಡಲು ಅವುಗಳ ತರಂಗಳನ್ನೇ ಒಂದು ಆಧಾರವಾಗಿಟ್ಟುಕೊಳ್ಳುವದು ಸರಿಯಲ್ಲವೆಂತಲೂ, ಸಂಘಗಳು ಅಂಥಾ ಆಸ್ತಿಗಳ ಬೆಲೆಗಳನ್ನು ನಿರ್ಧಾರಮಾಡುವಾಗಲೇ ಕೋಪರೇಟಿವ್ ಸೊಸೈಟಿಯ ಆಕ್ಟಿನ 48 ಸೆಕ್ಷನಿನ ಅಂಶಗಳಿಗೆ ಲಕ್ಷ್ಯವಿಟ್ಟು ಅವುಗಳ ತರಂಗಳನ್ನೂ ಪಬ್ಲಿಕ್ ರಸ್ತೆಗಳಿಗೆ ಇರುವ ಸಾಮೀಪ್ಯವನ್ನೂ, ಸ್ಥಳೀಯ ಸ್ಥಿತಿಗತಿಗಳಿಗನುಸಾರವಾಗಿ ಅವುಗಳಿಗಿರುವಂತ ಬೆಲೆಯನ್ನೂ, ಗಮನಕ್ಕೆ ತೆಗೆದುಕೊಳ್ಳಬೇಕಾಗಿ ಒಂದು ಸರ್ಕ್ಯುಲರನ್ನು ಹೊರಡಿಸಿದರೆ ಹೆಚ್ಚಿನ ಪ್ರಯೋಜನಕಾರಿಯಾದೀತೆಂಬದನ್ನು ರಿಜಿಸ್ಟ್ರಾರವರಿಗೆ ಜವಾಬು ಕಳುಹಿಸುವಂತೆ ತೀರ್ಮಾನಿಸಲಾಯಿತು.

9. ಬ್ಯಾಂಕಿಗೆ ಮೆಂಬರಾಗಲು ಡಾಕ್ಟರು ಜೇರಂಡ ಅಚ್ಚಯ್ಯನವರು ಮತ್ತು

ಮೆ ಬಲ್ಲಚಂಡ ಎಸ್ ಚಂಗಪ್ಪನವರು ಬರಕೊಂಡ ಅರ್ಜಿಗಳನ್ನು ಓದಲಾಯಿತು.

ಅವರುಗಳನ್ನು ಮೆಂಬರುಗಳನ್ನಾಗಿ ತೆಗೆದುಕೊಳ್ಳಲಾಯಿತು

10. ಸುಪರ್‌ವೈಜರುಗಳು ತಾ 18-2-40 ರಲ್ಲಿ ಬ್ಯಾಂಕಿನ ಜನರಲ್ ಮೀಟಿಂಗಿಗೆ ಬಂದ ಉದ್ದೇಶ್ಯ ಅವರಿಗೆ ಕೊಟ್ಟ ಬಸ್ಸು ಚಾರ್ಜು ಮತ್ತು ದಿನ ಭತ್ಯ ಮಂಜೂರ್ಮಾಡಲಾಯಿತು.

11 ಸುಪರ್‌ವೈಜರುಗಳು ತಾರೀಖು 18 12-38 ರಲ್ಲಿ ಅಂದರೆ ಕಳೆದ ವರ್ಷದ ಕಾನ್ಫರೆನ್ಸಿಗೆ ವೀರಾಜಪೇಟೆಗೆ ಹಾಜರಾದ್ದರಿಂದ ಸದರಿ ಕಾನ್ಫರೆನ್ಸಿನ ಫಂಡಿನಿಂದ ಅವರಿಗೆ ಕೊಟ್ಟ ಬಸ್ಸು ಚಾರ್ಜು ಮತ್ತು ದಿನ ಭತ್ಯ ಮಂಜೂರ್ಮಾಡಲಾಯಿತು.

12 ಗಾಳಿಬೀಡು ಗ್ರಾಮದ ಪಾಂಡಿರ ಕಾಳಪ್ಪನವರ ಮನೆ ಬೆಂದು ಹೋದ ಉದ್ದೇಶ್ಯ ಬ್ಯಾಂಕಿನಿಂದ ಧನ ಸಹಾಯ ಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಇವರ ಅರ್ಜಿಯನ್ನು ಹೆಚ್ಚಿನ ತನಿಖೆಯಿಂದ ಅವರಿಗುಂಟಾದ ನಷ್ಟವನ್ನು ರಿಪೋರ್ಟು ಮಾಡುವಂತೆ ಯೂನಿಯನು ಮೂಲಕ ಸುಪರ್‌ವೈಸರಿಗೆ ಕಳುಹಿಸುವಂತೆ ತೀರ್ಮಾನಿಸಲಾಯಿತು

13 ಸುಪರ್‌ವೈಸರಾಗಿದ್ದ ಕೆ. ಕ ಸೋಮಯ್ಯನವರು ಬ್ಯಾಂಕಿನಲ್ಲಿ ತಾನು ವಾಲಂಟಿಯರಾಗಿ ಕೆಲಸ ಮಾಡಲು ಹುಕುಂ ಕೊಡಬೇಕಾಗಿ ಬರಕೊಂಡ ಅರ್ಜಿಯನ್ನು ಓದಲಾಗಿ ಹಾಗೆ ಕೆಲಸ ಮಾಡಲು ಬಿಡಕೂಡದಾಗಿ ತೀರ್ಮಾನವಾಯಿತು.

14 ಒಬ್ಬ ಸಾಹುಕಾರಿಯವರು ತನ್ನ ಗಂಡನಿಗಾಗಿ ಇನ್ನೊಬ್ಬ ಮಹನೀಯರ ಹೆಸರಿನಲ್ಲಿರುವ ನಿರಖು ಠೇವಣಾತಿ ಹಣವನ್ನು ಕೊಡಬೇಕೆಂಬುದಾಗಿ ಈ ಮೊದಲೇ ಅರ್ಜಿ ಬರೆದುಕೊಂಡದಕ್ಕೆ ಡೈರೆಕ್ಟರುಗಳ ನಂಬ್ರು 5153 ತಾ 17-2-40 ರ ತೀರ್ಮಾನದ ಮೇರೆ ಸೆಕ್ಯೂರಿಟಿ ಹಾಜರುಪಡಿಸಬೇಕಾಗಿ ತಿಳಿಸಿದ ಪ್ರಕಾರ ಸದರಿ ರಶೀತಿ ಹಾಳಾಗಿ ಹೋದದ್ದರಿಂದ ಮೇಲ್ಕಂಡ ಮೊಬಲಗನ್ನು ತಾನು ಕಳುಹಿಸಿದ ಇಂಡೆಮ್ನಿಟಿ ಪತ್ರದ ಮೇರೆ ತನಗೆ ಕೊಡಬೇಕಾಗಿ ಬರಕೊಂಡ ಪತ್ರ ಓದಲಾಯಿತು

ಅರ್ಜಿದಾರಳು ಹಾಜರು ಪಡಿಸಿದ ಸರ್ಕಸನ್ನು ಸರ್ಟಿಫಿಕೇಟಿನಲ್ಲಿ ನಂಬ್ರು 7196 ತಾ 11-7-32 ರ ನಿರಖು ಠೇವಣಾತಿ ರಶೀತಿ ಮೇರೆ ಹಣವನ್ನು ಹೊಂದಿಕೊಳ್ಳುವುದಕ್ಕೆ ಅಧಿಕಾರ ಹೊಂದಿಕೊಂಡದ್ದಾಗಿರುತ್ತೆ ಆದರೆ ನಮ್ಮ ರಿಕಾರ್ಡು ದಾಕ್ಲೆ ಮೇರೆ ಇವರ ಗಂಡನಿಗೆ ಸಿಕ್ಕಬೇಕಾದ ಹಣವು ನಂಬ್ರು 4755 ರ ನಿರಖು ಠೇವಣಾತಿ ರಶೀತಿ ಮೇರೆ ಆಗಿರುತ್ತೆ ಆದುದರಿಂದ ಈ ಹಣವನ್ನು ವಸೂಲ್ಮಾಡುವುದಕ್ಕೆ ಮೊದಲಾಗಿ ಇವರು ಸದರಿ ಸರ್ಟಿಫಿಕೇಟನ್ನು ತಿದ್ದುಪಡಿ ಮಾಡಿಸಿಕೊಳ್ಳುವಂತೆಯೂ, ಫಿಕ್ಸೆಡ್ ಡಿಪಾಜಿಟ್ಟಿನ ರಶೀತಿಯು ಹಾಳಾಗಿ ಹೋಗಿದ್ದ ಪಕ್ಷದಲ್ಲಿ ಇವರು ಜ ಹಾಕಾಗದದಲ್ಲಿ ಇಂಡೆಮ್ನಿಟಿ ಬಾಂಡು ಬರೆದು ಮೇಜಿಸ್ಟ್ರೇಟರ ರೂಬುರೂಬು ನ್ಯಾಸಮಾಡಿ ಕೋರ್ಟು ಸ್ಟಾಂಪು ನೋಡನೆ ಸ್ಟಾಂಪು ರಶೀತಿ ಸಮೇತ ಹಾಜರುಪಡಿಸಬೇಕಾಗಿ ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು

15 ತಾರೀಖು 18-2-40 ರಲ್ಲಿ ನಡೆದ ಬ್ಯಾಂಕಿನ ಜನರಲ್ ಮೀಟಿಂಗಿನ ಖರ್ಚಿನ ಲೆಕ್ಕಗಳನ್ನು ಆಡಿಟು ಮಾಡಲಿಕ್ಕೆ ಮೆ. ಗಳಾದ ಕೆ. ಸಿ ಕರುಂಬಯ್ಯನವರನ್ನು ಮತ್ತು ಐ. ಪಿ. ಕಾರ್ಯಪ್ಪನವರನ್ನೂ ನೇಮಿಸಲಾಯಿತು.

16. ಗೌರವ ಕಾರ್ಯದರ್ಶಿಯವರ ಚುನಾವಣೆಯನ್ನು ಕೈಕೊಳ್ಳಲಾಯಿತು

ಮೆ. ಕೆ ಕೆ ಗಣಪತಿಯವರು ಮೆ. ಕೆ. ಸಿ. ಕರುಂಬೈಯ್ಯನವರ ಹೆಸರನ್ನು ಸೂಚಿಸಿದರು ಮೆ ಸಿ. ಯಂ ಪೂಣಚ್ಚನವರು ಅನುಮೋದಿಸಿದರು

ಮೆ ಯಂ ಸಿ ದೇವಯ್ಯನವರು ಮೆ. ಪಿ ಜಿ ಅಯ್ಯಪ್ಪನವರ ಹೆಸರನ್ನು ಸೂಚಿಸಿದರು ಮೆ ಪಿ ಸಿ ಕರುಂಬಯ್ಯನವರು ಅನುಮೋದಿಸಿದರು

ಬ್ಯಾಲೆಟ್ ಮೂಲಕ ಓಟು ತೆಗೆಯಲಾಗಿ ಮೆ ಕರುಂಬಯ್ಯನವರಿಗೆ 8 ಓಟುಗಳೂ, ಮೆ ಅಯ್ಯಪ್ಪನವರಿಗೆ 3 ಓಟುಗಳೂ ಸಿಕ್ಕಿದ್ದರಿಂದ ಮೆ ಕೆ ಸಿ. ಕರುಂಬಯ್ಯನವರು ಬ್ಯಾಂಕಿನ 1939-40 ನೇ ಸಂವತ್ಸರಕ್ಕೆ ಬಹುಮತದಿಂದ ಗೌರವ ಕಾರ್ಯದರ್ಶಿಯಾಗಿ ಚುನಾಯಿಸಲ್ಪಟ್ಟರು.

17 1939-40 ನೇ ಸಂವತ್ಸರಕ್ಕೆ ಬ್ಯಾಂಕಿನ ಖಜಾನ್ಜಿಯವರನ್ನಾಗಿ ರಾ ಬ ಪಿ ದೇವಯ್ಯನವರನ್ನು ಸರ್ವಸಮ್ಮತದಿಂದ ಚುನಾಯಿಸಲಾಯಿತು.

18 1939-40 ನೇ ಸಂವತ್ಸರಕ್ಕೆ ಬ್ಯಾಂಕಿನ ಸುಪರ್‌ವಿಜನ್ನು ಬೋರ್ಡಿಗೆ ಈ ಕೆಳಗಿನ ಮಹನೀಯರುಗಳ ಹೆಸರುಗಳನ್ನು ಸೂಚಿಸಲಾಯಿತು

1 ಮೆ ಗಳಾದ ಐ ಪಿ ಕಾರ್ಯಪ್ಪನವರು, 2 ಪಿ ಜಿ ಮುದ್ದಯ್ಯನವರು, 3. ರಾ ಬ ಸಿ ದೇವಯ್ಯನವರು, 4. ಕೆ. ಯಂ. ಕುಶಾಲಪ್ಪನವರು, 5. ಹೆಚ್. ಯಂ ಪುಷ್ಪಣ್ಣನವರು, 6. ಪಿ. ಸಿ. ಕರುಂಬಯ್ಯನವರು, ಮತ್ತು 7. ಬಿ ಪಿ. ಮಾಚೈಯ್ಯನವರು

ಬ್ಯಾಲೆಟ್ ಮೂಲಕ ಓಟು ತೆಗೆಯಲಾಗಿ ಈ ಕೆಳಗಿನ ಮಹನೀಯರುಗಳನ್ನು ಬಹುಮತದಿಂದ ಚುನಾಯಿಸಲಾಯಿತು.

1 ಮೆ. ಗಳಾದ ಐ. ಪಿ ಕಾರ್ಯಪ್ಪನವರು, 2 ರಾ ಬ. ಪಿ ದೇವೈಯ್ಯನವರು, 3. ಕೆ. ಯಂ ಕುಶಾಲಪ್ಪನವರು, 4 ಪಿ ಜಿ ಮುದ್ದಮ್ಮಯ್ಯನವರು, 5. ಹೆಚ್ ಯಂ. ಪುಷ್ಪಣ್ಣನವರು.

ಬ್ಯಾಂಕಿನ ಪ್ರೆಸಿಡೆಂಟರಾದ ಮೆ. ಪಿ. ಐ. ಬೆಳ್ಯಪ್ಪನವರು ಮತ್ತು ಗೌರವ ಕಾರ್ಯದರ್ಶಿಯವರಾದ ಮೆ. ಕೆ. ಸಿ ಕರುಂಬಯ್ಯನವರನ್ನು ಈ ಬೋರ್ಡಿನ ಪ್ರಸಿಡೆಂಟರು ಮತ್ತು ಕಾರ್ಯದರ್ಶಿಯವರನ್ನಾಗಿ ಚುನಾಯಿಸಲಾಯಿತು.

19. 1939 40ನೇ ಸಂವತ್ಸರಕ್ಕೆ ಬ್ಯಾಂಕಿನ ಸಾಲ ನಿವಾರಣೆ ಬೋರ್ಡಿಗೆ ಈ ಕೆಳಗಿನ ಮಹನೀಯರುಗಳನ್ನು ಡೈರೆಕ್ಟರುಗಳನ್ನಾಗಿ ಆರಿಸಲಾಯಿತು

1 ಮೆ. ಗಳಾದ ಐ. ಪಿ ಕಾರ್ಯಪ್ಪನವರು, 2 ಕೆ. ಯಂ ಕುಶಾಲಪ್ಪನವರು, 3 ಯಂ ಯಸ್. ಸೋಮೈಯ್ಯನವರು, 4 ಬಿ. ಸಿ ಮಾಚೈಯ್ಯನವರು, 5 ಕೆ ಕೆ. ಗಣಪತಿಯವರು, 6 ಪಿ ಐ ಬೆಳ್ಯಪ್ಪನವರು, 7. ಮತ್ತು ಕೆ ಸಿ. ಕರುಂಬಯ್ಯನವರು (ಗೌರವ ಕಾರ್ಯದರ್ಶಿ.)

ಪಿ. ಐ ಬೆಳ್ಯಪ್ಪ,
(ಅಧ್ಯಕ್ಷರು)

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಕಶಾಲಿ ಚತುರ ಜನರು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅನೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

" ಓರಿಯಂಟಲ್ "

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ನೆಲೆಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(62-2)

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	47,810	0	0
ಜಮೂಬಂದ ರೇವಣಾತಿ	–	2,13,262	0	4
ವಸೂಲಾದ ಕ್ಷೇಮನಿಧಿ	–	1,56,611	12	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	40,979	5	1
ಫ್ರಿಕ್ಸ್ಡ್ ಡಿಪಾಜಿಟ್ಟು	–	23,560	14	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1–9–1937ರಿಂದ ಬಡ್ಡಿ ದೊರೆಯುತ್ತೆ.

ತಾ. 1–10–1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ಫ್ರಿಕ್ಸ್ಡ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಫ್ರಿಕ್ಸ್ಡ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1–4–1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1–8–38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಅದರೆ ಪುನಹ ತಾ. 29–7–39ರಿಂದ ತಾತ್ಕಾಲಿಕ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಅಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ತನಿಖೆ ಮಾಡುತ್ತಾರೆ.

ಪ್ರಸಿಡೆಂಟ್:–ಪಂದ್ಯಂಡ ಐ. ಬೆಳ್ಳಿಯಪ್ಪನವರು ಎಂ. ಎಲ್. ಸಿ.
ಟ್ರೆಜರರ್—ರಾವ್ ಬಹದ್ದೂರ್ ಪಿ ದೇವಯ್ಯನವರು.
ಸೆಕ್ರೆಟರಿ:—ಮೆ. ಎಸ್. ಎನ್. ರಾಮಶೆಟ್ಟಿಯವರು.

ತಾ. 1–1–1940

ಕೊಡಂದೇರ ಡಿ. ಮಾಚಯ್ಯ,
L.D Sc. (COLLEGE OF DENTISTRY)
EX-SUPERVISOR LAXMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (34) ನವೀನ ರೀತಿಯ ಚಿಕಿತ್ಸೆ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

[illegible]

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವುದು. ಬಾಟ್ಲಿಗೆ 1 ರೂ

ಗಣೇಶ ರಾಮಚಂದ್ರ ಶೆಟಿ. ಮತ್ತು ಕಂಪೆನಿ,
(52–11) ಗಿರಗಾಂವ, ಮುಂಬಯಿ ೪.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ–ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸುಗಳೂ, ಫೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ದಾವಾ ಮತ್ತು ಅಮಲ್ಜಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ **ಕಡಿಮೆ ಫೀಸಿನಲ್ಲಿ** ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ **ಐಡಿಯಲ್ ಟ್ಯುಟೋರಿಯಲ್ ಸ್ಕೂಲ್** ಇವರಲ್ಲಿ ವಿಚಾರಿಸಿರಿ

The Manager,
Tutorial School,
Mercara, and Virajpet.

52—35

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ
'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ
ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್
ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:–ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬೇಗನೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52–4

Printed & Published by P. I. Belliappa, at 'Kodagu' Press Mercara for 'Kodagu' Ltd

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg. No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ತಾ. ೧೫—೩—೧೯೪೦.

ವಾರ್ಷಿಕ ಚಂದಾ ರೂ. ೩—೮—೦

ಸಂಪುಟ ೧೯] [ಸಂಚಿಕೆ ೪೨

MR. CAN'T. : These are very hard days. No; I can't save anything.

MR. CAN. : I have opend a CUMULATIVE DEPOSIT a c now in the CORPORATION; after this I find that **I CAN SAVE.**

From small amounts set apart every month fortunes can be built. It is not difficult to set apart a rupee (or multiple thereof) per month from one's earnings. Those who opened the CUMULATIVE DEPOSIT accounts know how easy it is to save.

Have you opened yours?

THE CANARA BANKING CORPORATION LIMITED.

(Incorporated in Briti h India)

Estd. 1906.

52-12

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವರಕ್ತವನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ,—ದ. ಕನ್ನಡ.
(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

52-18

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಬೋಯಪ್ಪನವರು.

ಜಾಲಮ್ಮನ ಕರ್ತಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ. ಪಿ. ಕೆ. ಮುತ್ತಮ್ಮಯ್ಯನವರು.

ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಕೆ. ಮಾದಮ್ಮಯ್ಯನವರು.

ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ. ಕೆ. ನಾಗಪ್ಪನವರು.

ನಾಪೋಕ್ಲು—ಮೆ. ಬೆಳ್ಯನಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟು ಆದ ರಶೀತಿ ನೋಡಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52–23) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು—ಕೆ. ರಾಮಕೃಷ್ಣರಾವ್,
ವೀರಾಜಪೇಟೆ (ದ. ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಶೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ಡಾಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಸಮಾಚಾರಕ್ಕೂ, ಏಜೆಂಟರ್ಸ್ ಶರತ್ತುಗಳಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆರೈಲಿ, ಬೀವಾರ್, ಬೆನಾರೀಸ್, ಬೆಳ್ಗಾವಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.

52–7

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ
21ನೇ ವಾರ್ಷಿಕ ಮಹಾ ಸಭೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ 21ನೇ ವಾರ್ಷಿಕ ಮಹಾಸಭೆಯು ತಾ. 18-2-1040ನೇ ಆದಿತ್ಯವಾರ ದಿನ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ಬೆಳಗ್ಗೆ 11 ಗಂಟೆಗೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮಾನ್ ಪಂದ್ಯಂಡ ಬೆಳ್ಯಪ್ಪ ಯಂ. ಯಲ್. ಸಿ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಬ್ಯಾಂಕಿನ ಮೆಂಬರು ಸಂಘಗಳಿಂದ ಕಳುಹಿಸಲ್ಪಟ್ಟ 253 ಪ್ರತಿನಿಧಿಗಳೂ ಮತ್ತು 99 ಬಿಡು ಮೆಂಬರುಗಳೂ ಹಾಜರಿದ್ದ ಜಲ್ಲೆಯ ಕೋಆಪರೇಟಿವ್ ರಿಜಿಸ್ಟ್ರಾರವರೂ, ಅಸಿಸ್ಟೆಂಟ್ ರಿಜಿಸ್ಟ್ರಾರವರೂ ಕೋ-ಆಪರೇಟಿವ್ ಇನ್ಸ್‌ಪೆಕ್ಟರುಗಳೂ, ಸುಪರ್‌ವೈಜರುಗಳೂ, ಇಂಡಿಯಾ ಸರಕಾರದ ಮಾರ್ಕೇಟಿಂಗ್ ಆಫೀಸರಾದ ಶ್ರೀಯುತ ಟಾಂಡನ್‌ರವರೂ ಬೊಂಬಾಯಿ ಕೋ-ಆಪರೇಟಿವ್ ವಿಮೆ ಸಂಘದ ಏಜಂಟರೂ ಮತ್ತು ಕೆಲವು ಪ್ರೇಕ್ಷಕರೂ ಸಹ ಹಾಜರಿದ್ದರು.

ಮೀಟಿಂಗು ಪ್ರಾರಂಭವಾಗುವದಕ್ಕೆ ಮೊದಲು ರಿಜಿಸ್ಟ್ರಾರವರಾದ ರಾವ್ ಸಾಹೇಬ್ ಯಂ. ಯಸ್. ಮಂದಣ್ಣನವರು ವ್ಯವಸಾಯದ ಪ್ರಾಮುಖ್ಯತೆ, ಕೈಗಾರಿಕೆಯ ಅವಶ್ಯಕತೆ ವಗೈರೆಗಳನ್ನು ಜನರಿಗೆ ವಿವರಿಸಿ, ಬ್ಯಾಂಕಿನ ಆಶ್ರಯದಲ್ಲಿ ಏರ್ಪಡಿಸಿದ್ದ ವ್ಯವಸಾಯ ಮತ್ತು ಕೈಗಾರಿಕೆಯ ಪ್ರದರ್ಶನವನ್ನು ತೆರೆದರು.

ಬಿಡು ಮೆಂಬರುಗಳ ಮತ್ತು ಪ್ರತಿನಿಧಿಗಳ ಹೆಸರುಗಳನ್ನು ಗೌರವ ಸೆಕ್ರೆಟರಿಯವರು ಓದಿ ಆದನಂತರ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮಾನ್. ಪಿ. ಐ. ಬೆಳ್ಯಪ್ಪ ಯಂ. ಯಲ್. ಸಿ. ಯವರು ನೆರೆದಿದ್ದ ಸಭಿಕರಿಗೆ ಸ್ವಾಗತವನ್ನಿತ್ತು ಈ ದಿನದ ಮೀಟಿಂಗಿಗೆ ಅಧ್ಯಕ್ಷರನ್ನಾಗಿ ದಕ್ಷಿಣ ಕನ್ನಡ ಸಹಕಾರಿ ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷರೂ ಮತ್ತು ಅಡ್ವೋಕೇಟ್ ಆದ ಶ್ರೀಮಾನ್ ಯಂ. ಶಿವರಾವರನ್ನು ಆಹ್ವಾನಿಸಿದಲ್ಲು ಸವರಿಯವರು ತನಗೆ ಮೀಟಿಂಗಿಗೆ ಬರಲು ಅನಾನುಕೂಲವೆಂದು ತಿಳಿಸಿದ್ದರಿಂದ ಈ ದಿನದ ಅಧ್ಯಕ್ಷಸ್ಥಾನವನ್ನು ಉಪನಿಬಂಧನೆ ಪ್ರಕಾರ ತಾನು ವಹಿಸಿಕೊಳ್ಳಬೇಕಾಗಿದೆಯೆಂತ ಹೇಳಿ, ವರದಿ ವರ್ಷದಲ್ಲಿ ನಡೆದ ಬ್ಯಾಂಕಿನ ಕಾರ್ಯಕಲಾಪಗಳನ್ನೂ, ತಿರುವಾಂಕೂರು ಬ್ಯಾಂಕು ಮುಚ್ಚಿದ್ದರಿಂದ ಬ್ಯಾಂಕಿಗೆ ಉಂಟಾದ ವಿಪತ್ತನ್ನೂ, ಸಂಕ್ಷಿಪ್ತವಾಗಿ ವಿವರಿಸಿದಲ್ಲದೆ ಸರಕಾರದವರೊಂದಿಗೂ, ಇಂಡಿಯಾ ಸರಕಾರದ ಪರವಾಗಿ ಕೊಡಗಿಗೆ ಬಂದಿದ್ದ ಡಾಕ್ಟರ್ ಬರ್ನ್ಸ್, ಸರ್ ಜಗದೀಶ ಪ್ರಸಾದ್, ಕಾರೆಫಾಟ್ ವಗೈರೆಯವರೊಂದಿಗೂ ಬ್ಯಾಂಕಿನ ಅವಶ್ಯಕತೆಗಳನ್ನೂ ವಿವರಿಸಿ ಧನ ಸಹಾಯಕೊಡಬೇಕು ವಗೈರೆಯಾಗಿ ಕೇಳಿಕೊಂಡದ್ದನ್ನು ತಪಶೀಲಾಗಿ ಹೇಳಿ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು.

1. ಗೌರವ ಕಾರ್ಯದರ್ಶಿಯವರಾದ ಶ್ರೀ ಯಸ್. ಯನ್. ರಾಮಶೆಟ್ಟಿಯವರು ಕಳೆದ ವರ್ಷದ ಮಹಾಸಭೆಯ ನಡವಳಿಕೆಯನ್ನು ಓದಿದ ನಂತರ ಅದನ್ನು ಒಪ್ಪಬಹುದೆಂದು ಶ್ರೀಮಾನ್ ಕೀತಿಯಂಡ ಕುಟ್ಟಪ್ಪನವರು ಸೂಚಿಸಿದನ್ನು ಶ್ರೀ ಕೊಳ್ಳಿಮಾಡ ಕರುಂಬಯ್ಯನವರು ಅನುಮೋದಿಸಿದರು.

ಕೆಲವು ಮೆಂಬರುಗಳು ಕಳೆದ ವರ್ಷದ ನಡವಳಿಕೆಯ ವಿಷಯ ಪ್ರಶ್ನೆ ಕೇಳಿದಲ್ಲಿ ಅದಕ್ಕೆ ಸರಿಯಾಗಿ ಅಧ್ಯಕ್ಷರು ಜವಾಬನ್ನಿತ್ತನಂತರ ವಿರೋಧವಿಲ್ಲದೆ ಒಪ್ಪಲಾಯಿತು.

ಮಧ್ಯಾಹ್ನದ ಊಟಕೋಸ್ಕರ ಮೀಟಿಂಗನ್ನು 12-45 ಗಂಟೆಯಿಂದ ಬರಕಾಸ್ತು ಮಾಡಿ 2-15 ಗಂಟೆಗೆ ಪುನಃ ಪ್ರಾರಂಭಿಸಲಾಯಿತು.

2. ಬ್ಯಾಂಕಿನ 38-39ನೇ ಇಸವಿಯ ಜೂನ್ 30ಕ್ಕೆ ಅಂತ್ಯವಾದ ಅಸಿಸ್ಟೆಂಟ್ ರಿಜಿಸ್ಟ್ರಾರವರ ಆಡಿಟ್ ವರದಿ ಮತ್ತು ರಿಜಿಸ್ಟ್ರಾರವರ ಟೆಸ್ಟ್ ಆಡಿಟ್ ವರದಿಯನ್ನು ಕುರಿತು ಪ್ರಶ್ನೆಗಳೇನಾದರೂ ಇದ್ದರೆ ಕೇಳಬಹುದೆಂದು ಅಧ್ಯಕ್ಷರು ಸೂಚಿಸಿದರು.

ಆಡಿಟ್ ರಿಪೋರ್ಟು ಸಿಕ್ಕಲು ತಡವಾಗಲು ಕಾರಣವೇನು? ಕ್ಷೇಮನಿಧಿ ಡಿಪಾಜಿಟ್ಟುಗಳನ್ನು ಕೆಲವು ಧನದ ಭಂಡಾರಗಳಿಗೆ ವಾಪಸು ಕೊಡದಿರಲು ಕಾರಣವೇನು? ತಿರುವಾಂಕೂರು ಬ್ಯಾಂಕಿನಿಂದ ಡಿವಿಡೆಂಡ್ ಕಡಿಮೆ ಸಿಕ್ಕಲು ಕಾರಣವೇನು? ವಾಯಿದೆ ಮೀರಿದ ಸಾಲದ ವಸೂಲಾತಿಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ? ಸೌತ್ ಇಂಡಿಯಾ ಇನ್ಶೂರೆನ್ಸ್ ಸೊಸೈಟಿಯಲ್ಲಿ ನಡೆಕೊಂಡಿರುವ ಪಾಲುಗಳ ಮತ್ತು ಅದರ ಡಿಪಾಜಿಟ್ಟಿನ ವಿಷಯ, ಡಿಪಾಜಿಟ್ಟುದಾರರಿಗೆ ಡೈರೆಕ್ಟರು ತನದಲ್ಲಿ ಸ್ಥಳ ಕೊಡಬೇಕೆಂಬ ವಿಷಯ, ತಿರುವಾಂಕೂರು ಬ್ಯಾಂಕು ಮುಚ್ಚಿದ ಮೇಲೆ ಎಷ್ಟು ವ್ಯಕ್ತಿಗಳು ಎಷ್ಟು ಠೇವಣಾತಿ ಮೊಬಲಗು ವಾಪಸು ಪಡಕೊಂಡರೆಂಬ, ವಿಷಯ ಸಾಲದ ಹೊರೆಯನ್ನು ತಪ್ಪಿಸಲು ಇಂಡಿಯಾ ಸರಕಾರದಿಂದ 3 ಲಕ್ಷ ರೂಪಾಯಿಗಳ ಸಾಲವನ್ನು ಕೇಳಿದಕ್ಕೆ ಸಿಕ್ಕಿದ ಜವಾಬು, ಬ್ಯಾಂಕಿನ ಶಿಲ್ಕು ಹಣದ ವಿಷಯ, ಬ್ಯಾಂಕಿನಲ್ಲಿ ಡಿಪಾಜಿಟ್ಟು ಮಾಡಲಿಕ್ಕೆ ಬಾಕಿ ಇರುವ ಕ್ಷೇಮನಿಧಿ ವಿಷಯ, ವಾಯಿದೆ ಮೀರಿದ ಬಾಕಿದಾರರಾದ ಮೆಂಬರುಗಳನ್ನು ಡೆಲಿಗೇಟರುಗಳಾಗಿ ಕಳುಹಿಸಕೂಡದೆಂಬ ವಿಷಯ, ಮ್ಯಾನೇಜರನ್ನು ನೇಮಕಮಾಡುವ ವಿಷಯವು ಇವೇ ಮೊದಲಾದುವುಗಳನ್ನು ಕುರಿತು ಮೆಂಬರುಗಳು ಪ್ರಶ್ನೆ ಕೇಳಿದ್ದಕ್ಕೆ ಅಧ್ಯಕ್ಷರೂ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರವರೂ ತಕ್ಕ ಜವಾಬು ಕೊಟ್ಟರು.

2. (1) ಸುಪರ್‌ವಿಜನ್ ಬೋರ್ಡಿನ ಆಡಿಟ್ ವರದಿಯ ವಿಷಯ ಕೆಲವು ಪ್ರಶ್ನೆ ಕೇಳಿದ್ದಕ್ಕೆ ಅಧ್ಯಕ್ಷರು ಸಮರ್ಪಕವಾದ ಜವಾಬು ಕೊಟ್ಟರು, ತದನಂತರ ಬ್ಯಾಂಕಿನ ಮತ್ತು ಸುಪರ್‌ವಿಜನ್ ಬೋರ್ಡಿನ ಆಡಿಟ್ ವರದಿಯನ್ನು ರಿಕಾರ್ಡು ಮಾಡಲಾಯಿತು.

3. ತದನಂತರ ಡೈರೆಕ್ಟರುಗಳ ವರದಿಯ ಮೇಲೆ ಚರ್ಚೆ ನಡೆಯಿತು. ಮಡಿಕೇರಿನಾಡು ಸರ್ಕಲಿನಲ್ಲಿ ಇಷ್ಟು ದೊಡ್ಡ ವಾಯಿದೆ ಮೀರಿದ ಸಾಲ ಬಾಕಿ ಇರಲು ಕಾರಣವೇನು? ನಾಲ್ಕು ಸ್ಟೋರುಗಳಿಂದ ಬರಬೇಕಾದ ವಾಯಿದೆ ಮೀರಿದ ಸಾಲವೆಷ್ಟು? ಇವರಲ್ಲಿ ವಸೂಲಾಗುವ ಸಂಭವವೇನಾದರೂ ಇದೆಯೋ? ಗೌರವ ಕಾರ್ಯದರ್ಶಿಯವರಿಗೆ ಪೋಸ್ಟೇಜ್ ಕೊಡುವುದು ಯಾತಕ್ಕೆ? ಟ್ರಾವನ್‌ಕೂರ್ ಬ್ಯಾಂಕಿನ ವಿಚಾರವಾಗಿ ಪ್ರೆಸಿಡೆಂಟರು ಮದ್ರಾಸಿಗೆ ಹೋದದ್ದರ ಫಲಿತಾಂಶವೇನು? ಇನ್ಶೂರೆನ್ಸ್ ಕೇಸಿಗೆ ಮದ್ರಾಸಿಗೆ ಹೋದುದಕ್ಕೆ ಭತ್ಯವೆಷ್ಟು ಕೊಡಲಾಗಿದೆ ವಗೈರೆ ಪ್ರಶ್ನೆ ಕೇಳಿದಕ್ಕೆ ಅಧ್ಯಕ್ಷರು ಜವಾಬು ಕೊಟ್ಟರು.

3. (1) ಗೌರವ ಕಾರ್ಯದರ್ಶಿಯವರಿಗೆ ಡೈರೆಕ್ಟರುಗಳ ರಿಪೋರ್ಟು ಮೇರೆ ಮರ್ಯಾದೆ ಧನ ಕೊಡಕೂಡದಾಗಿ ಮೆ. ಚೆಂಬಾಂಡ ಪೂವಪ್ಪನವರು ಸೂಚಿಸಿದರು. ಮೆ. ಕೊಂಗಂಡ ಕಾರ್ಯಪ್ಪನವರು ಅನುಮೋದಿಸಿದರು.

ಮೆ. ಗಳಾದ ಪಳಂಗಂಡ ನಂಜಪ್ಪನವರು, ಸಿ. ಜಿ. ಮುತ್ತಣ್ಣಯ್ಯನವರು, ಕೋಟಿಂಪ್ರೈಲು ಅಪ್ಪಣ್ಣನವರು, ಕೆ. ಸಿ. ಕರುಂಬಯ್ಯನವರು ಮತ್ತು ಬಿದ್ದಂಡ ನಂಜಪ್ಪನವರು ಗೌರವ ಕಾರ್ಯದರ್ಶಿಯವರು ಮಾಡಿದ ಗೌರವಾರ್ಥ ಕೆಲಸಕ್ಕೆ 330 ರೂಪಾಯಿ ಮರ್ಯಾದೆ ಧನ ಕೊಡಬೇಕು ವಗೈರೆ ಮಾತಾಡಿದರು.

ಮೆ. ಗಳಾದ ಕೆ. ಕೆ. ಬೆಳ್ಯಪ್ಪನವರು, ಕೊಂಗಂಡ ಕಾರ್ಯಪ್ಪನವರು, ಚೆಂಬಾಂಡ ಪೂವಪ್ಪನವರು, ಕೂತಂಡ ಗಣಪತಿಯವರು, ಬಲ್ಲಡಿಚಂಡ ಬೋಪಯ್ಯನವರು, ಮತ್ತು ಕೆ. ಯಸ್. ಮುತ್ತಣ್ಣನವರು ಒತ್ತಾಸೆಯಾಗಿ ಮಾತಾಡಿದರು.

ಈ ವಿಷಯ ಓಟಿಗೆ ಹಾಕಲಾಗಿ ದೊಡ್ಡ ಬಹುಮತದಿಂದ ರೂ. 330 ಮರ್ಯಾದೆ ಧನ ಕೊಡಬಹುದೆಂದು ತೀರ್ಮಾನಿಸಲಾಯಿತು.

3. (2) ಸುಪರ್‌ವಿಜನ್ ಬೋರ್ಡಿನ ಡೈರೆಕ್ಟರುಗಳ ವರದಿಯನ್ನು ಚರ್ಚಿಸಲಾಯಿತು.

ರುಚಿಕ್ತ ಕಮಿಟಿಯ ವಿಷಯ, ಈ ವರ್ಷ ಅಸ್ಸೆಂಬ್ಲಿಯಲ್ಲಿ ಹುಟ್ಟಿದ ಭೂಮಿ ಪರಾಧಾಮದರ ವಿಷಯ, ಕರೆ ಫಸಲಿನ ವಿಷಯ, ತಕಾವಿ ಸಾಲಕ್ಕೂ, ಕೋ-ಆಪರೇಟಿವ್ ಸಾಲಕ್ಕೂ ಒಂದೇ ಭೂಮಿಯನ್ನು ಗಿರ್ವಿ ಕೊಡುವ ವಿಷಯ ಸಹ ಪ್ರಶ್ನೆ ಕೇಳಿದಕ್ಕೆ ಅಧ್ಯಕ್ಷರು ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರವರು ತಕ್ಕ ಜವಾಬನ್ನು ಕೊಟ್ಟರು.

3. (3) ವರದಿಯಲ್ಲಿ ನಮೂದಿಸಿರುವ ಮೇರೆ ಮೆ. ಕಲಿಯಂಡ ಸೋಮಯ್ಯನವರಿಗೆ 125 ರೂಪಾಯಿ ಗ್ರಾಚ್ಯುಟಿ ಕೊಡಕೂಡದಾಗಿ ಮೆ. ಪಳಂಗಂಡ ನಂಜಪ್ಪನವರು ಸೂಚಿಸಿದ್ದಕ್ಕೆ ಮೆ. ಕೊಂಗಂಡ ಕಾರ್ಯಪ್ಪನವರು ಅನುಮೋದಿಸಿದರು.

ಮೆ. ಗಳಾದ ಚೆಂಬಾಂಡ ಪೂವಪ್ಪನವರು, ಕುಂಞಪಂಡ ಚಿಣ್ಣಪ್ಪನವರು, ಬಲ್ಲಡಿಚಂಡ ಬೋಪಯ್ಯನವರು ಮತ್ತು ಕೀತಿಯಂಡ ಕುಟ್ಟಪ್ಪನವರು ಠರಾವಿಗೆ ಒತ್ತಾಸೆಯಾಗಿ ಮಾತಾಡಿದರು.

ಅಧ್ಯಕ್ಷರು ಮತ್ತು ಮೆ. ಕೊಳ್ಳಿಮಾಡ ಕರುಂಬಯ್ಯನವರು ಠರಾವಿಗೆ ವಿರೋಧವಾಗಿ ಮಾತಾಡಿದರು.

ಮೇಲ್ಕಂಡ ಠರಾವನ್ನು ಓಟಿಗೆ ಹಾಕಲಾಗಿ 94 ಓಟುಗಳು ಪರವಾಗಿಯೂ, 121 ಓಟುಗಳು ವಿರೋಧವಾಗಿಯೂ ಸಿಕ್ಕಿದ್ದರಿಂದ 125 ರೂಪಾಯಿ ಗ್ರಾಚ್ಯುಟಿ ಕೊಡಬಹುದೆಂದು ತೀರ್ಮಾನವಾಯಿತು.

ತದನಂತರ ಬ್ಯಾಂಕಿನ ಡೈರೆಕ್ಟರುಗಳ ಮತ್ತು ಸುಪರ್‌ವಿಜನ್ ಬೋರ್ಡಿನ ಡೈರೆಕ್ಟರುಗಳ ವರದಿ ಒಪ್ಪಲಾಯಿತು.

4. ಬ್ಯಾಂಕಿನ 1939-40ನೇ ಸಂವತ್ಸರದ ಅಂದಾಜು ಬಡ್ಜೆಟ್ಟನ್ನು ಚರ್ಚಿಸಲಾಯಿತು. ಈ ಬಾಬಿನಲ್ಲಿ ಕೆಲವು ಪ್ರಶ್ನೆ ಕೇಳಿದ್ದಕ್ಕೆ ಅಧ್ಯಕ್ಷರು ಜವಾಬು ಕೊಟ್ಟನಂತರ ಬಡ್ಜೆಟ್ ಮಂಜೂರುಮಾಡಲಾಯಿತು.

5. ಕೊಡಗು ಕಾಫಿ ಪ್ಲಾಂಟರುಗಳ ಸಂಘದ ಪರ ಡೆಲಿಗೇಟರಾಗಿ ಬಂದ ರಾ. ಬ. ಕೋಡಿಮಣಿಯಂಡ ಸುಬ್ಬಯ್ಯನವರು ಪ್ಲಾಂಟರುಗಳ ಈಗಿನ ಆರ್ಥಿಕ ಸ್ಥಿತಿಯು ಕೆಟ್ಟು ಹೋಗಿ ಬೆಳೆಸಿದ ಕಾಫಿ ಫಸಲಿಗೆ ನ್ಯಾಯವಾದ ಬೆಲೆ ಇಲ್ಲದೆಯೂ ಮತ್ತು ಕಾಫಿ ಫಸಲು ಕಮ್ಮಿಯಾದುದರಿಂದಲೂ ಬ್ಯಾಂಕಿಗೆ ಪಾವತಿ ಮಾಡಲು ವಾಯಿದೆ ಮೀರಿದ ಬಾಕಿ ಹತ್ತು ಸಾವಿರದ ಮೇಲ್ಪಟ್ಟು ಮೊಬಲಗು ಇರುವುದರಿಂದ ಹತ್ತು ವರ್ಷದ ಕಂತುಗಳನ್ನು ಕೊಟ್ಟು ಮೆಂಬರುಗಳ ಆಸ್ತಿಯನ್ನು ಹರಾಜು ಮಾಡದೆ ಉಳಿಸಬೇಕು ವಗೈರೆಯಾಗಿ ಮಹಾಸಭೆಯವರಿಗೆ ವಿನಂತಿ ಮಾಡಿಕೊಂಡರು.

ಸಾಯಂಕಾಲ 4-15ಕ್ಕೆ ಕಾಫಿ ಕುಡಿಯಲು ಸಭೆಯನ್ನು ಬರಕಾಸ್ತು ಮಾಡಿ 5 ಗಂಟೆಗೆ ಪುನಃ ಸಭೆ ಸೇರಲಾಯಿತು.

ಠರಾವು ಮತ್ತು ಬೈಲಾ ತಿದ್ದುಪಡಿ.

6. ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಶೂರೆನ್ಸ್ ಸೊಸೈಟಿಯವರು ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಸಹಾಯದಿಂದ ಸುಮಾರು 6½ ಲಕ್ಷ ರೂಪಾಯಿಗಳ ವಿಮೆ ಕೆಲಸ ಮಾಡಿಸಿದ್ದಕ್ಕಾಗಿ ಬ್ಯಾಂಕಿಗೆ ಬರಬೇಕಾದ ಸುಮಾರು 6,000 ರೂಪಾಯಿ ಕಮಿಷನ್ ಕೊಡದೆ ನಷ್ಟಪಡಿಸಿದ್ದನ್ನೂ ಮತ್ತು ಬ್ಯಾಂಕಿಗೆ 250 ರೂಪಾಯಿ ಶೇರುಗಳನ್ನು ವಾಪಸು ಕೊಡದೆ ನಷ್ಟಪಡಿಸಿದ್ದನ್ನೂ ವಸೂಲಾತಿ ಬಗ್ಗೆ ಡೈರೆಕ್ಟರುಗಳು ಕ್ರಮ ಜರುಗಿಸಲು ಆಲೋಚಿಸಬೇಕೆಂತ ಮ. ಜಮ್ಮಡ ಮೊದಪ್ಪನವರು ಸೂಚಿಸಿದ್ದನ್ನು ಮ. ಉದಿಯಂಡ ಪೊನ್ನಯ್ಯನವರು ಅನುಮೋದಿಸಿದರು

ನಿನ್ನೆ ದಿನ ಈ ಬಾಬಿನಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರವರ ಕೋರ್ಟಿನಲ್ಲಿ ಸ್ಥಳೀಯ ಲೋಕಲ್ ಬೋರ್ಡಿನ ಮಾಜಿ ಅಧ್ಯಕ್ಷರಾದ ಶ್ರೀ ಐ. ಸಿ. ಸುಬ್ಬಯ್ಯನವರ ಮೇಲೂ, ಮಾಜಿ ಕಮಿಷನರಾದ ಶ್ರೀ ಯಂ. ಯಂ. ಬೆಳ್ಯಪ್ಪನವರ ಮೇಲೂ ದಾವಾ ದಾಖಲು ಮಾಡಿರುವದರಿಂದ ಈ ವಿಷ

ಯು ಹೆಚ್ಚಿನ ಚರ್ಚೆ ಮಾಡುವದು ಯುಕ್ತವಲ್ಲವೆಂದು ಗೌರವ ಕಾರ್ಯದರ್ಶಿಯವರು ಸೂಚಿಸಿದರು.

ಮೆ. ಗಳಾದ ಐಚೆಟ್ಟಿರ ಸುಬ್ಬಯ್ಯನವರು, ಮನೆಯಪಂಡ ಬೆಳ್ಯಪ್ಪನವರು, ಸಿದ್ಧ್ಯಮಲೆ ಸೋಮಣ್ಣನವರು ಮತ್ತು ಕೆ. ಕೆ. ಬೆಳ್ಯಪ್ಪನವರು ಠರಾವಿಗೆ ವಿರೋಧವಾಗಿ ಮಾತಾಡಿದರು.

ಮೆ. ಗಳಾದ ಪಿ. ಜಿ. ಐಯ್ಯಪ್ಪನವರು ಮತ್ತು ನಡಿಕೇರಿಯಂಡ ಸುಬ್ಬಯ್ಯನವರು ಠರಾವಿಗೆ ಒತ್ತಾಸೆಯಾಗಿ ಮಾತಾಡಿದರು.

ಅಧ್ಯಕ್ಷರು—ಈ ದವಸ ಈ ಚರ್ಚೆಯಲ್ಲಿ ಭಾಗಿಗಳಾಗಿರುವವರು ಕಳೆದ ಮಹಾ ಸಭೆಯಲ್ಲಿ ಆದ ಚರ್ಚೆಯಲ್ಲಿಯೂ ಹಾಜರಿದ್ದುದರಿಂದ ಆಗಲೇ ಈ ಬಾಬಿನಲ್ಲಿ ದೀರ್ಘ ಚರ್ಚೆಯಾಗಿ ಈ ವಿಚಾರದಲ್ಲಿ ಮುಂದೆ ಕ್ರಮ ಜರುಗಿಸಬೇಕೆಂತ ತೀರ್ಮಾನಿಸಿದ್ದರಿಂದ ಮದ್ರಾಸಿನಲ್ಲಿ ನಮ್ಮ ಬ್ಯಾಂಕಿನ ಮೇಲೆ ದಾವ ಹೂಡಿರುವ ಕಾರಣ, ಈ ಬ್ಯಾಂಕಿನ ಹಿತವನ್ನು ಕಾಪಾಡಲು ಇಲ್ಲಿಯೂ ಸಂಬಂಧಪಟ್ಟವರ ಮೇಲೆ ದಾವ ಹೂಡಬೇಕಾಯಿತೆಂದೂ, ಆದಕಾರಣ ಈಗ ಈ ಬಾಬಿನಲ್ಲಿ ಹೆಚ್ಚಿನ ಚರ್ಚೆ ಮಾಡುವದು ಉಚಿತವಲ್ಲವೆಂದೂ ಹೇಳಿದ್ದರಿಂದ ಸೂಚಕರು ಠರಾವನ್ನು ವಾಪಸು ತೆಗೆದುಕೊಂಡರು.

ಬ್ಯಾಂಕಿನವರು ಈಗ ಅಸಿಸ್ಟಾಂಟ್ ರಿಜಿಸ್ಟ್ರಾರವರ ಕೋರ್ಟಿನಲ್ಲಿ ಮಾಜಿ ಲೋಕಲ್ ಬೋರ್ಡಿನವರ ಮೇಲೆ ಹೂಡಿರುವ ದಾವಕ್ಕೆ ಮಹಾ ಸಭೆಯವರ ಒಪ್ಪಿಗೆ ಇದೆಯೋ ಎಂದು ಅಧ್ಯಕ್ಷರು ಕೇಳಿದರು. ಅದಕ್ಕೆ ಶ್ರೀ ನಡಿಕೇರಿಯಂಡ ಸುಬ್ಬಯ್ಯನವರು ಈ ವಿಚಾರದಲ್ಲಿ ತಕ್ಕ ಕ್ರಮ ಜರುಗಿಸಬೇಕೆಂದು ಕಳೆದ ಮಹಾಸಭೆಯಲ್ಲೇ ತೀರ್ಮಾನವಾಗಿರುವುದರಿಂದ ಪುನಹ ಈ ವಿಷಯ ಮಹಾಸಭೆಯ ಅಭಿಪ್ರಾಯ ಕೇಳುವ ಅವಶ್ಯಕತೆ ಇಲ್ಲವೆಂದೂ ಆ ತೀರ್ಮಾನದಂತೆ ವರ್ತಿಸತಕ್ಕದ್ದೆಂದೂ ಹೇಳಿದರು. ಅಧ್ಯಕ್ಷರು ಮೇಲ್ಕಂಡ ಪ್ರಶ್ನೆಗೆ ಯಾರೂ ವಿರೋಧಿಸದೆ ಒಪ್ಪಿಗೆಯನ್ನಿತ್ತರು.

7. ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಸೂರೆನ್ಸ್ ಸೊಸೈಟಿಯ ಮಾಜಿ ಕೊಡಗು ಲೋಕಲ್ ಬೋರ್ಡಿನ ಮೆಂಬರುಗಳಾದ (1) ಮೆ. ಯಂ. ಯಂ. ಬೆಳ್ಯಪ್ಪನವರು, (2) ಮೆ. ಐ. ಸಿ. ಸುಬ್ಬಯ್ಯನವರು, (3) ಡಾಕ್ಟರ್ ಪಿ. ಬಿ. ಮೇದಪ್ಪನವರು ಮತ್ತು (4) ಮೆ. ಪಿ. ಯಂ. ಉತ್ತಪ್ಪನವರುಗಳ ಮೇಲೆ ಲೋಕಲ್ ಬೋರ್ಡಿನ ಲೆಕ್ಕಚಾರ ಮತ್ತು ಅವರಿಂದ ಬರತಕ್ಕ ಮೊಬಲಗನ್ನು ವಸೂಲ್ಮಾಡುವ ಬಗ್ಗೆ ತಕ್ಕ ಕ್ರಮ ಜರುಗಿಸಬೇಕಾಗಿ ಡೈರೆಕ್ಟರುಗಳನ್ನು ಕೇಳಿಕೊಳ್ಳುತ್ತದೆ ಎಂಬ ಠರಾವನ್ನು ಸೂಚಕರಾದ ಮೆ. ಕಾಳೇಂಗಡ ಚೆಣ್ಣಪ್ಪನವರು ಈ ಮೊದಲೇ ಸದರಿ ಬಾಬಿನಲ್ಲಿ ದೀರ್ಘ ಚರ್ಚೆಯಾದ್ದರಿಂದಲೂ ಮತ್ತು ಡೈರೆಕ್ಟರುಗಳು ಮೆ. ಗಳಾದ ಐ. ಸಿ. ಸುಬ್ಬಯ್ಯನವರ ಮತ್ತು ಯಂ. ಬೆಳ್ಯಪ್ಪನವರ ಮೇಲೆ ದಾವ ಹೂಡಿರುವುದನ್ನು ಮಹಾಸಭೆಯವರು ಒಪ್ಪಿರುವುದರಿಂದಲೂ ಠರಾವನ್ನು ವಾಪಸು ತೆಗೆದುಕೊಂಡರು.

8. ಬ್ಯಾಂಕಿನ ಬೈಲಾ ನಂಬರು 5ರಲ್ಲಿ ಹಾಲು ಭಂಡವಾಳವು 50,00,000 (ಐವತ್ತು ಸಾವಿರ) ರೂಪಾಯಿಗಳೆಂಬದನ್ನು 'ಒಂದು ಲಕ್ಷ ರೂಪಾಯಿ' ಎಂದು ತಿದ್ದುಪಡಿ ಮಾಡಬೇಕೆಂತ ಬ್ಯಾಂಕಿನ ಸೆಕ್ರೆಟರಿಯವರು ಸೂಚಿಸಿದ್ದನ್ನು ಮೆ. ಕೊಳ್ಳಿಮಾಡ ಕರುಂಬಯ್ಯನವರು ಅನುಮೋದಿಸಿದನಂತರ ಸರ್ವಸಮ್ಮತದಿಂದ ಮಂಜೂರಾಯಿತು.

9. ಬೈಲಾ ನಂಬರು 49 (1) ರಲ್ಲಿ ಬ್ಯಾಂಕಿನ ನಿವ್ವಳ ಲಾಭದಿಂದ ಶೇಕಡ 25 ಕ್ಷೇಮನಿಧಿಗೆ ಜಮೆಗೆ ತೆಗೆದುಕೊಳ್ಳಬೇಕು' ಎಂಬದರ ಬದಲು 'ಶೇಕಡ 33⅓' ಎಂದು ತಿದ್ದುಪಡಿ ಮಾಡತಕ್ಕದ್ದು ಎಂಬ ಠರಾವನ್ನು ಬ್ಯಾಂಕಿನ ಸೆಕ್ರೆಟರಿಯವರು ಸೂಚಿಸಿದರು.

ಮೆ. ತೋಟಂಬೈಲು ಅಪ್ಪನವರು ಅನುಮೋದಿಸಿದರು.

ಮೆ. ಎನ್. ಸಿ. ಸುಬ್ಬಯ್ಯನವರು ವಿರೋಧಿಸಿದರು.

ಅಸಿಸ್ಟಾಂಟ್ ರಿಜಿಸ್ಟ್ರಾರವರು ಇದರ ಕಾರಣವನ್ನು ವಿವರಿಸಿ ಒತ್ತಾಸೆಯಾಗಿ ಮಾತಾಡಿದರು.

ಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು.

10. ಬೈಲಾ ನಂಬರ 49 (4)ರಲ್ಲಿ 'ನಿವ್ವಳ ಲಾಭದ ಶೇಕಡ 7½ಗೆ ಮೀರದೆ ಸಮುದಾಯದ ಪ್ರಯೋಜನದ ಫಂಡೆಂತ ತೆಗೆದಿಡಬೇಕು' ಎಂಬುದರ ಬದಲು 'ಶೇಕಡ 2½' ಎಂದು ತಿದ್ದುಪಡಿ ಮಾಡತಕ್ಕದೆಂತ ಬ್ಯಾಂಕಿನ ಸೆಕ್ರೆಟರಿಯವರು ಸೂಚಿಸಿದರು.

ಮೆ ಐ. ಪಿ ಕಾರ್ಯಪ್ಪನವರು ಅನುಮೋದಿಸಿದರು.

ಮೆ. ನಡಿಕೇರಿಯಂಡ ಸುಬ್ಬಯ್ಯನವರು ಬ್ಯಾಂಕಿನ ಮುಂದಿನ ಅಭಿವೃದ್ಧಿಗೆ ಕುಂದಕ ಬರಬಹುದಾದ್ದರಿಂದ ಶೇಕಡ 7½ ವರದಲ್ಲಿಯೇ ಇರಬೇಕಾಗಿ ಹೇಳಿ ಠರಾವನ್ನು ವಿರೋಧಿಸಿದರು.

ಮೆ. ಪಿ. ಯಂ. ಉತ್ತಪ್ಪನವರು ಶೇಕಡ 7½ಯಿಂದ 2½ಗೆ ಇಳಿಸುವುದರ ಬದಲು 5ಕ್ಕೆ ಇಳಿಸುವುದು ಒಳ್ಳೆಯದೆಂದಾಗಿ ಉಪ ಠರಾವು ತಂದರು.

ಮೆ. ಕಾಕಮಾಡ ಗಣಪತಿಯವರು ಅನುಮೋದಿಸಿದರು.

ಮೆ. ಕೆ. ಜೆ. ಕುಟ್ಟಪ್ಪನವರು ವಿರೋಧಿಸಿದರು.

ಬ್ಯಾಂಕಿನ ಸೆಕ್ರೆಟರಿಯವರು ಮತ್ತು ಅಸಿಸ್ಟಾಂಟ್ ರಿಜಿಸ್ಟ್ರಾರವರು ಉಪ ಠರಾವಿಗೆ ಒತ್ತಾಸೆಯಾಗಿ ಮಾತಾಡಿದರು.

ಬಹುಮತದಿಂದ ಠರಾವು ಮಂಜೂರಾಯಿತು.

11. ಬ್ಯಾಂಕಿನ ಬೈಲಾ ನಂಬ್ರು 35ರ ನಂತರ 35 (1) ಮತ್ತು (2) ಆಗಿ ಈ ಕೆಳಗಿನದನ್ನು ಸೇರಿಸಕ್ಕದ್ದು.

(1) ಬ್ಯಾಂಕಿಗೆ ಸಂಯೋಜಿತವಾದ ಸಂಘಗಳು ಪಾವತಿ ಮಾಡುವ ಹಣದಲ್ಲಿ ಮೊದಲು ಸುಪರ್‌ವಿಜನ್ ಫಂಡಿಗೆ ಬರತಕ್ಕ ಹಣವನ್ನು ವಜ ಮಾಡಿಕೊಂಡು ಆನಂತರ ಬ್ಯಾಂಕಿನ ಸಾಲಕ್ಕೆ ಸಲ್ಲಿ ತೆಗೆದುಕೊಳ್ಳತಕ್ಕದ್ದು ಎಂತಲೂ,

(2) ಬ್ಯಾಂಕಿನಿಂದ ಸಾಲ ಪಡೆಯುವ ಸಂಘಗಳು ಸುಪರ್‌ವಿಜನ್ ಫಂಡು ಚಂದಾ ಪಾವತಿ ಮಾಡಲು ತಪ್ಪಿದಲ್ಲಿ ರಿಜಿಸ್ಟ್ರಾರವರ ಕೋರ್ಟಿನಲ್ಲಿ ದಾವ ದಾಖಲು ಮಾಡಿ ವಸೂಲು ಮಾಡತಕ್ಕದ್ದು ಎಂತಲೂ ಈ ಎರಡು ಠರಾವುಗಳನ್ನು ಜೊತೆಗೆ ಸೇರಿಸಿ ಮೆ. ಪಿ. ಜಿ. ಐಯ್ಯಪ್ಪನವರು ಸೂಚಿಸಿದರು.

ಮೆ. ಯಂ. ಯಸ್. ಸೋಮಯ್ಯನವರು ಅನುಮೋದಿಸಿದರು.

ಮೆ. ಗಳಾದ (1) ಪಿ. ಸಿ. ಕರುಂಬಯ್ಯನವರು, (2) ಪಿ. ಸಿ. ಪೊನ್ನಪ್ಪನವರು, (3) ಐ. ಪಿ. ಕಾರ್ಯಪ್ಪನವರು (4) ಬಲ್ಲಡಿಚಂಡ ಬೋಪಯ್ಯನವರು, (5) ವಳಂಗಂಡ ನಂಜಪ್ಪನವರು ಮತ್ತು (6) ಅಸಿಸ್ಟಾಂಟ್ ರಿಜಿಸ್ಟ್ರಾರವರೂ ಒತ್ತಾಸೆಯಾಗಿ ಮಾತಾಡಿದರು.

ಮೆ. ಗಳಾದ ಯಂ. ಯಂ. ಬೆಳ್ಯಪ್ಪನವರು, ಕೆ. ಕೆ. ಬೆಳ್ಯಪ್ಪನವರು, ಪಿ. ಎಂ. ಉತ್ತಪ್ಪನವರು, ಎನ್. ಬಿ. ಸೋಮಯ್ಯನವರು ಮತ್ತು ನಾಯಡ ಚಿಣ್ಣಪ್ಪನವರು ವಿರೋಧಿಸಿ ಮಾತಾಡಿದರು.

ಒಂದನೇ ಠರಾವನ್ನು ಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು.

ಎರಡನೇ ಠರಾವಿಗೆ ಖಾನೂನು ಮಾಡಲು ಬ್ಯಾಂಕಿಗೆ ಅಧಿಕಾರವಿಲ್ಲವಾಗಿ ಅಸಿಸ್ಟಂಟ್ ರಿಜಿಸ್ಟ್ರಾರವರು ಹೇಳಿದುದರಿಂದ ಠರಾವನ್ನು ಸೂಚಕರು ವಾಪಸು ತೆಗೆದುಕೊಂಡರು.

12. ಸರಕಾರದವರು ಸುಪರ್‌ವಿಜನ್ ಫಂಡಿಗೆ ಕೊಡುತ್ತಿದ್ದ ವಾರ್ಷಿಕ ವಂತಿಗೆ 1000 ರೂಪಾಯಿಯನ್ನು ಈ ವರ್ಷ ನಿಲ್ಲಿಸಿದ್ದಕ್ಕೆ ಈ ಸಭೆಯು ತುಂಬಾ ವಿಷಾದಿಸುವುದಲ್ಲದೆ ಸದರಿ ವಂತಿಗೆಯನ್ನು ಈ ಮೊದಲಿನಂತೆ ಕೊಡುತ್ತಾ ಬರಬೇಕಾಗಿ ಒತ್ತಾಯ ಪೂರ್ವಕವಾಗಿ ಈ ಸಭೆಯು ಕೇಳಿಕೊಳ್ಳುತ್ತದೆಂತ ಮೆ. ಐ. ಪಿ. ಕಾರ್ಯಪ್ಪನವರು ಸೂಚಿಸಿದರು.

ಮೆ. ಉದಿಯಂಡ ಮಾಚೈಯ್ಯನವರು ಅನುಮೋದಿಸಿದರು. ಸರ್ವಸಮ್ಮತದಿಂದ ಮಂಜೂರಾಯಿತು.

13. ಸಂಘಗಳಿಗೆ ದೀರ್ಘ ಕಂತಿನ ಸಾಲ ಕೊಡುವ ಉದ್ದೇಶ್ಯ ಇಂಡಿಯಾ ಸರಕಾರದಿಂದ 3 ಲಕ್ಷ ರೂಪಾಯಿಗಳನ್ನು ಶೇಕಡ ಕಾಲಿಯೊನ 3 ರೂಪಾಯಿ ಬಡ್ಡಿಯಲ್ಲಿ ದೀರ್ಘ ಕಂತಿನಲ್ಲಿ ಕೊಡಬೇಕೆಂತ ಸರಕಾರದವರನ್ನು ಈ ಸಭೆಯು ಕೇಳಿಕೊಳ್ಳುತ್ತದೆಂದು ಮೆ. ಪಿ. ಜಿ. ಐಯ್ಯಪ್ಪನವರು ಸೂಚಿಸಿದರು.

ಮೆ. ಪಿ. ಯಂ. ಉತ್ತಪ್ಪನವರು ಅನುಮೋದಿಸಿದರು. ಠರಾವು ಸರ್ವಸಮ್ಮತದಿಂದ ಮಂಜೂರಾಯಿತು

14. ಛತ್ರದ ಸ್ಟೋರುಗಳ ಕಟ್ಟಡಗಳಿಗೆ ಸರಕಾರದಿಂದ ಕೊಟ್ಟಿರುವ ಮತ್ತು ಮುಂದೆ ಕೊಡಲಿಕ್ಕಿರುವ ಸಾಲದಲ್ಲಿ ಶೇಕಡ 25 ರಷ್ಟನ್ನು ಮಾಫಿ ಬಿಡಬೇಕಾಗಿ ಸರಕಾರದವರನ್ನು ಈ ಸಭೆಯು ಕೇಳಿಕೊಳ್ಳುತ್ತದೆಂತ ಮೆ. ಕೊಳ್ಳಿಮಾಡ ಕರುಂಬಯ್ಯನವರು ಸೂಚಿಸಿದರು.

ಮೆ. ನಡಿಕೇರಿಯಂಡ ಸೋಮೈಯ್ಯನವರು ಅನುಮೋದಿಸಿದರು.

ಮೆ. ಪಿ. ಯಂ. ಉತ್ತಪ್ಪನವರು ಛತ್ರದ ಸ್ಟೋರು ಎಂಬುದನ್ನು ತೆಗೆದು ಎಲ್ಲಾ ಸ್ಟೋರುಗಳಿಗೆ' ಎಂದು ತಿದ್ದುಪಡಿ ಮಾಡಬೇಕಾಗಿ ಉಪ ಠರಾವನ್ನು ತಂದರು.

ಮೆ. ಐ. ಪಿ. ಕಾರ್ಯಪ್ಪನವರು ಅನುಮೋದಿಸಿದರು. ಸರ್ವಸಮ್ಮತದಿಂದ ತಿದ್ದುಪಡಿಯಾದ ಠರಾವು ಮಂಜೂರಾಯಿತು.

15. ಸೆಂಟ್ರಲ್ ಬ್ಯಾಂಕಿನಿಂದ ಸ್ಟೋರು ಸಂಘಗಳಿಗೆ ಕೊಟ್ಟ ಸಾಲದಲ್ಲಿ ಈಗ ಉಂಟಾಗಿರುವ ಮತ್ತು ಮುಂದೆ ಉಂಟಾಗಬಹುದಾದ ನಷ್ಟವನ್ನು ಸರಕಾರದವರು ಭರ್ತಿಮಾಡಿ ಕೊಡಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ ಎಂತ ಮೆ. ಕಾಕಮಾಡ ಗಣಪತಿಯವರು ಸೂಚಿಸಿದನ್ನು ಮೆ. ಐ. ಪಿ. ಕಾರ್ಯಪ್ಪನವರು ಅನುಮೋದಿಸಿದ ನಂತರ ಸರ್ವಸಮ್ಮತದಿಂದ ಮಂಜೂರಾಯಿತು

16. ಬ್ಯಾಂಕಿನ ವಿಷಯದಲ್ಲಿ ಕೌನ್ಸಿಲ್ ಮೆಂಬರಾದ ಮತ್ತು ಬ್ಯಾಂಕಿನ ಒಬ್ಬ ಶೇರುದಾರರಾದ ಶ್ರಿ. ಅಜ್ಜಮಾಡ ಮಾದಪ್ಪನವರು ಕೇಳಿದ ಪ್ರಶ್ನೆಗಳಿಗೆ ಸರಕಾರದವರು ಉತ್ತರ ಕೊಡಲು ನಿರಾಕರಿಸಿದ್ದಕ್ಕೆ ಈ ಸಭೆಯು ವಿಷಾದಿಸುತ್ತದೆಂತ ಮೆ. ಪಿ. ಜಿ. ಐಯ್ಯಪ್ಪನವರು ಸೂಚಿಸಿದ್ದಕ್ಕೆ ಮೆ. ಕೆ. ಸಿ. ಕರುಂಬಯ್ಯನವರು ಅನುಮೋದಿಸಿದ ನಂತರ ಸರ್ವಸಮ್ಮತದಿಂದ ಪಾಸಾಯಿತು.

17. ಸರಕಾರದವರು ಸಹಕಾರದಲ್ಲಿ ಯೋಗ್ಯರಾದ ತರಬೇತು ಹೊಂದಿದ ಮತ್ತು ಅನುಭವಸ್ಥರಾದವರನ್ನು ಅಸಿಸ್ಟೆಂಟ್ ರಿಜಿಸ್ಟ್ರಾರಾಗಿ ನೇಮಿಸಿ, ಮತ್ತು ಸಹಕಾರ ಇಲಾಖೆಗೆ ಪ್ರತ್ಯೇಕ ಆಫೀಸರನ್ನು ಕೊಟ್ಟ ತತ್ವವನ್ನು ಈ ಸಭೆಯು ಮೆಚ್ಚುತ್ತದೆಂತ ಮೆ. ಕೆ. ಸಿ ಕರುಂಬಯ್ಯನವರು ಸೂಚಿಸಿದರು.

ಮೆ. ಉದಿಯಂಡ ಮಾಚೈಯ್ಯನವರು ಅನುಮೋದಿಸಿದರು. ಸರ್ವಸಮ್ಮತದಿಂದ ಪಾಸಾಯಿತು.

18 ಸಹಕಾರದ ಮೂಲತತ್ವಗಳ ಪ್ರಚಾರವು ಪ್ರಚಂಡವಾಗಿ ನಡೆದು ದೇಶದಲ್ಲಿ ಸಹಕಾರ ಕ್ರಾಂತಿಯುಂಟಾಗಬೇಕೆಂಬ ದೃಷ್ಟಿಯಿಂದ ಸಹಕಾರದ ಮಾಸ ಪತ್ರಿಕೆಯೊಂದನ್ನು ಹೊರಡಿಸುವ ಕಾರ್ಯವನ್ನು ಸೆಂಟ್ರಲ್ ಬ್ಯಾಂಕಿನ ಆಶ್ರಯದಲ್ಲಿ ಕೈಕೊಳ್ಳಬೇಕೆಂದು ಈ ಸಭೆಯು ನಿರ್ಣಯಿಸುತ್ತದೆಯೆಂತ ಮೆ. ಬಿ. ಡಿ. ಗಣಪತಿಯವರು ಸೂಚಿಸಿದರು.

ಮೆ. ಕುಟ್ಟಂಡ ಕಾರ್ಯಪ್ಪನವರು ಅನುಮೋದಿಸಿದರು. ಸರ್ವಸಮ್ಮತದಿಂದ ಪಾಸಾಯಿತು.

19. ಸಹಕಾರದ ಮಾಸ ಪತ್ರಿಕೆಯನ್ನು ನಡಿಸಲಿಕ್ಕಾಗಿ ಸರಕಾರದವರು ಗ್ರಾಮಾಭಿವೃದ್ಧಿ ಫಂಡಿನಿಂದ ಸಹಕಾರಿ ವಿದ್ಯಾಭಿವೃದ್ಧಿಗೋಸ್ಕರ ಕೊಟ್ಟಿರುವ 20,000 ರೂಪಾಯಿಯಲ್ಲಿ ಉಳಿಕೆ ಇರುವ ಮೊಬಲಗಿನಿಂದ 1500 ರೂಪಾಯಿಗಳನ್ನು ಕೊಡಬೇಕೆಂದು ಸರಕಾರದವರನ್ನು ಈ ಸಭೆಯು ಕೇಳಿಕೊಳ್ಳುತ್ತದೆ. ಎಂತ ಮೆ. ಕೆ. ಸಿ. ಕರುಂಬಯ್ಯನವರು ಸೂಚಿಸಿದರು.

ಮೆ. ಕಾಡ್ಯಮಾಡ ಐಯ್ಯಮ್ಮನವರು ಅನುಮೋದಿಸಿದರು. ಸರ್ವಸಮ್ಮತದಿಂದ ಮಂಜೂರಾಯಿತು.

(ಮುಂದುವರಿಯುವದು.)

ಕೌನ್ಸಿಲು ಬಡ್ಜೆಟ್ ಮೀಟಿಂಗು.

ಕೊಡಗು ನ್ಯಾಯ ವಿಧಾಯಕ ಸಭೆ ಬಡ್ಜೆಟ್ ಅಧಿವೇಶನವು ಕೌನ್ಸಿಲ್ ಹಾಲ್‌ನಲ್ಲಿ ತಾರೀಖು 13ರಿಂದ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ.

ಪ್ರಥಮ ದಿನ.

ಹೊಸ ಮೆಂಬರರಾದ ಜೆ. ಡಬ್ಲ್ಯು. ಪ್ರಿಚಾರ್ಡ್‌ರವರು (ಕಮಿಷನರು) ತಮ್ಮ ಪ್ರತಿಜ್ಞಾ ವಿಧಿಯನ್ನು ನಡೆಸಿದ ನಂತರ ಕೌನ್ಸಿಲ್ ಕಾರ್ಯ ಕಲಾಪಗಳು ಪ್ರಾರಂಭವಾದವು.

ಅಧ್ಯಕ್ಷರು ತಮ್ಮ ಪ್ರಾರಂಭದ ಭಾಷಣವನ್ನು ಮಾಡಿದರು. (ಇದರ ವಿವರ ಬರುವ ವಾರ ಕೊಡಲಾಗುವದು) ನಂತರ ಪ್ರಶ್ನೋತ್ತರಗಳು ನಡೆದು 49 ಪ್ರಶ್ನೆಗಳಿಗೆ ಉತ್ತರ ಕೊಡಲಾಯಿತು.

ಕೌನ್ಸಿಲಿನ ರೂಲುಗಳ ಮೇರೆ ಸರಕಾರದ ಹುಕುಂ ವಗೈರೆ ಪತ್ರಗಳನ್ನು ಕಾರ್ಯದರ್ಶಿಯವರು ಸಭೆಯ ಮುಂದಿರಿಸಿದರು.

1940–41ನೇ ವರ್ಷದ ಕೊಡಗು ಬಡ್ಜೆಟ್ಟನ್ನು ಫೈನಾನ್ಸ್ ಮೆಂಬರರು ತಮ್ಮ ಹೃದಯಂಗಮವಾದ ಭಾಷಣದೊಡನೆ ಸಭೆಯ ಮುಂದಿಟ್ಟರು. (ಭಾಷಣದ ಸಾರಾಂಶವನ್ನು ಮುಂದಿನವಾರ ಕೊಡಲಾಗುವುದು.)

ಬಡ್ಜೆಟ್ಟಿನ ಮೇಲೆ ಪ್ರತಿನಿಧಿಗಳ ಚರ್ಚೆಯು ಹೀಗೆ ನಡೆಯಿತು.

ಶ್ರೀ ಸಿ. ಬಿ. ಚಿಣ್ಣಪ್ಪನವರು

'ಈ ವರ್ಷ ನಮ್ಮ ಮುಂದೆ ಇಡಲಾಗಿರುವ ಬಡ್ಜೆಟ್ ಗತ ವರ್ಷದವುಗಳಿಗಿಂತ ಸ್ವಲ್ಪ ಭಿನ್ನವಾಗಿದೆ. [illegible] ಬದಲಾವಣೆಯು ಕಂಡುಬರುತ್ತಿದೆ. ಕೌನ್ಸಿಲು ಸ್ಥಾಪಿತವಾದಂದಿನಿಂದ ಜನರ ಪ್ರತಿನಿಧಿಗಳು ಇಲ್ಲಿ ಸೂಚಿಸಿದ ವಿಚಾರಗಳು ಈಗಲಾದರೂ ಕಾರ್ಯರೂಪಕ್ಕೆ ಬಂದು ಪ್ರಾಂತದ ಆಡಂಬರದ ಅನವಶ್ಯ ಖರ್ಚಿನಲ್ಲಿ ಯೋಚನೆಯಾಗಿರುವದು ಶುಭ ಚಿಹ್ನೆಯಾಗಿದೆ. ಆರ್ಥಿಕ ಪರಿಶೋಧನೆಯ ಬಗ್ಗೆ ಇಂಡಿಯಾ ಸರಕಾರದವರು ಆರ್ಥಿಕ ತಜ್ಞರನ್ನು ಇಲ್ಲಿಗೆ ಕಳುಹಿಸಿದುದಕ್ಕೆ ದೇಶವು ಅವರಿಗೆ ಕೃತಜ್ಞರಾಗಿರಬೇಕು. ಖರ್ಚನ್ನು ಕಮ್ಮಿ ಮಾಡಲು ಕೈಕೊಂಡ ಸಿಬ್ಬಂದಿ ಯೋಚನೆಯ ವಿಧಾನವು ಎಲ್ಲರಿಗೆ ಸಮ್ಮತವಾದ ತೃಪ್ತಿಯನ್ನುಂಟುಮಾಡಿಲ್ಲ. ಕೆಳ ದರ್ಜೆಯ ನೌಕರರಲ್ಲಿ ಕಡಿಮೆಯಿಲ್ಲದ ಸಿಬ್ಬಂದಿ ಯೋಚನೆಯು ಕೈಕೊಳ್ಳಲ್ಪಟ್ಟಿದೆ. ಅವರ ಹೆಚ್ಚು ವೇತನ ತೆಗೆಯುವ ಎಲ್ಲಾ ದೊಡ್ಡ ಹುದ್ದೆಗಳ ಸಲ್ಲಿಕೆಯು ಇನ್ನೂ ನಡೆದಿಲ್ಲ. ಉದಾಹರಣೆಗೆ ಹೆಚ್ಚು ವೇತನ ಪಡೆಯುವ ಚೀಫ್ ಫಾರೆಸ್ಟ್ ಆಫೀಸರರ ವೇತನ ಕಡಿಮೆಯಾಗಬೇಕಿದೆ. ಮತ್ತು ಅಸಿಸ್ಟೆಂಟ್ ಕಮಿಷನರ ಹುದ್ದೆ ಹೋಗಬೇಕಿದೆ. ಈ ಹುದ್ದೆಗಳ ಸಂಬಳದ ವಿಚಾರದಲ್ಲಿ ಸರ್ಕಾರದ ತೀರ್ಮಾನವನ್ನು ಮಾನ್ಯ ಫೈನಾನ್ಸ್ ಮೆಂಬರರು ತಿಳಿಸುವರೆಂದು ಆಶಿಸುತ್ತೇನೆ. ಸಭೆಯ ಮುಂದೆ ಬರಲಿರುವ ನಿರ್ಣಯಗಳಲ್ಲಿ ಈಗಿರುವ ಸಬಾರ್ಡಿನೇಟ್ ಜಡ್ಜರ ಹುದ್ದೆಯನ್ನು ತೆಗೆದುಹಾಕಿ, ಡಿ. ಜಡ್ಜರ ಹುದ್ದೆಯನ್ನು ನಿವರಿ ಬಡ್ಜೆಟ್ಟಿನಲ್ಲಿ ಈ ವಿಚಾರದಲ್ಲಿ ಉಳಿಕೆಯಾಗುವ ಹಣದ ವಿಚಾರ ನಮೂದಿಸಿಲ್ಲ. ಜಿಲ್ಲಾ ಡಿ. ಜಡ್ಜರ ಹುದ್ದೆಯ ಅವಧಿಯು ಹೆಚ್ಚಾದರೆ ಮೂರು ವರ್ಷಗಳವರೆಗೆ ಮಾತ್ರ ಇಡಬೇಕೆಂಬ ಬಗ್ಗೆ ದೇಶದಲ್ಲಿ ಆಂದೋಲನ ನಡೆದರೂ ಆ ಬಗ್ಗೆ ಯಾವ ವಿಚಾರವನ್ನು ಮಂಡಿಸಿರುವದಿಲ್ಲ. ಮೂರು ವರ್ಷ ಕಾಲ ಮಾತ್ರ ಕೆಲಸ ಮಾಡಲು ಸರಕಾರ ಸರ್ವಿಸಿನಿಂದ ಜನರು ಇಲ್ಲಿ ಸಿಗದಿದ್ದರೆ ಲಾಯರು ವರ್ಗದಲ್ಲಿ ಅನುಭವ ಹೊಂದಿದವರನ್ನೇ ಯಾ ನಿವೃತ್ತರಾದ ಜ್ಯುಡಿಶ್ಯಲ್ ಉದ್ಯೋಗಸ್ಥರನ್ನೇ ನೇಮಿಸಬಹುದು. ಇಲ್ಲವಾದರೆ ನೆರೆ ಜಿಲ್ಲೆಯೊಂದಿಗೆ ವರ್ಗಾವರ್ಗಿ ಏರ್ಪಡಿಸಬಹುದು.

ಆರ್ಥಿಕ ತಜ್ಞರು ಸೂಚಿಸಿರುವ ರೀತಿ ಕಾರ್ಯ ನಡೆಸಿದರೆ ಕೊಡಗಿನ ಬಡ್ಜೆಟ್ಟನ್ನು ಸಮತೂಗಿಸಿ ದಿನಚರಿ ಕೆಲಸವನ್ನು ಮುನ್ನಡೆಸಬಹುದೆಂಬುದು ವ್ಯಕ್ತವಾಗುತ್ತಿದೆ. ಈ ಸಂದರ್ಭದಲ್ಲಿ ರಾಷ್ಟ್ರಾಭಿವೃದ್ಧಿಯ ಕಾರ್ಯಗಳೆಲ್ಲ ಹಣವಿಲ್ಲದೆ [illegible] ಉಪಸ್ಥಿತವಾಗುವುದು. [illegible] ಪ್ರಯುಕ್ತವೇ ನಾವು [illegible] ಸರಕಾರದ ಸಹಕಾರವನ್ನು ಪಡೆಯಬೇಕಾಗುವದಾಗಿದೆ. ಇಂಡಿಯಾ ಸರಕಾರವು ಮಾತ್ರ [illegible] ತೀರ್ಮಾನವನ್ನು ಮಾಡಿಲ್ಲ. ಆರ್ಥಿಕ ತಜ್ಞರು ಅವರ [illegible] ಕೊಡಗಿನ ನಿಜಸ್ಥಿತಿಯನ್ನು ಇಟ್ಟಿರುವರು. ಅದರಿಂದ ಹೊಸ ಮಂತ್ರಿಗಳು ನಮ್ಮ ಕೋರಿಕೆಯನ್ನು ಅನಾದರಿಸಲಾರರು. ಕೊಡಗಿನ ಆರ್ಥಿಕ ತೊಂದರೆಯನ್ನು ನಿವಾರಿಸಲು ಕೊಡಗನ್ನು ದೊಡ್ಡ ಪ್ರಾಂತ್ಯದೊಂದಿಗೆ ಸೇರಿಸುವದೊಂದೇ ದಾರಿಯೆಂದು ತಿಳಿದಿರುವ ನನ್ನ ಸ್ನೇಹಿತರಿಗೆ ನಮ್ಮ ಮುಂದಿಡಲ್ಪಟ್ಟ ಬಡ್ಜೆಟ್ಟಿನಿಂದ ಕೊಡಗು ಆರ್ಥಿಕ ವಿಚಾರಕ್ಕಾಗಿ ಬೇರೆ ರಾಜ್ಯದೊಡನೆ ಸಂಯೋಜನೆಯಾಗುವ ಆಗತ್ಯವಿಲ್ಲವೆಂದು ಹೊಳೆಯದಿರದು. ಈಗಿನ ಪರಿಸ್ಥಿತಿಯಿಂದ ಅಮಲ್ಗಮೇಶನ್ ಸಮಸ್ಯೆಯು ನಿರ್ಜೀವವಾಗಿದೆ. 1924ರ ವರೆಗೆ ಇಂಡಿಯಾ ಸರಕಾರವು ಈ ಪ್ರಾಂತದ ಸುಮಾರು 1 ಕೋಟಿ ರೂಪಾಯಿಯನ್ನು ಕೊಂಡೊಯ್ದಿರುವ ಪ್ರಯುಕ್ತ ನಾವು ಈ ಪ್ರಾಂತಕ್ಕೆ ಮಂತಿಗೆಯನ್ನು ಕೇಳಲು ನ್ಯಾಯಬದ್ಧವಾದ ಹಕ್ಕಿದೆ. ಮಧ್ಯವರ್ತಿ ಸರ್ಕಾರವು ಸಿಂಧ್, ಒರಿಸಾ, ಡೆಲ್ಲಿ, ಗವರ್ನರ ಪ್ರಾಂತ್ಯ ಮೊದಲಾದ ಪ್ರಾಂತಗಳಿಗೆ ಸಹಾಯ ಕೊಟ್ಟಿರುವಾಗ್ಯೂ ನಮಗಾದರೂ ದೊರಕುವುದಿಲ್ಲವೆಂಬ ನಿಲ್ಲಿಪೆಟ್ಟಿನ ಅರ್ಥವಿಲ್ಲ. ಅವಕ್ಕೆ ಬೇಕಾದುದು ಜನತೆಯ ಹಾಗೂ ಸರಕಾರದ ಮನಃಪೂರ್ವಕ ಪ್ರಯತ್ನ. ಸರಕಾರದ ಆರ್ಥಿಕ ಸ್ಥಿತಿಯು ಸರಿಯಾದರೆ ಮುಂದೆ ಕೊಡಗಿಗೆ ಸುಧಾರಣೆ ಕೊಡಲಾಗುವದೆಂದು ಈ ಮೊದಲು ಸರಕಾರದವರು ಹೇಳಿರುವರು. ಇಂದು ದೇಶದ ಆರ್ಥಿಕ ಪರಿಸ್ಥಿತಿ ಸರಿಗಟ್ಟಲ್ಪಟ್ಟಿದೆ. ಅದರಿಂದ ಒಡನೆಯೇ ಸುಧಾರಣೆಗಳನ್ನು ಕೊಡುವದು ಸರಕಾರದ ಇದೀಗ ಭರತ ಖಂಡವೇ ಜಾಗೃತಗೊಂಡು ಮುನ್ನಡೆಯುತ್ತಿದೆ. ಈ ವಿಚಾರದಲ್ಲಿ ಕೊಡಗು ಹಿಂದೆಬಿದ್ದಿಲ್ಲ. ಸರ್ಕಾರವು ಸಕಾಲದಲ್ಲಿ ಎಚ್ಚೆತ್ತು ವರ್ತಿಸದಿದ್ದರೆ ಮುಂದೆ ಉಂಟಾಗಬಹುದಾದ ಕ್ಷೋಭೆಗೆ ಸರಕಾರವು ಜವಾಬ್ದಾರಿಯಾಗುವುದು.

ಬಡ್ಜೆಟ್ಟಿನ ವಿಚಾರದಲ್ಲಿ ಡಿ. ಬೋರ್ಡಿಗೆ ಕೊಡುತ್ತಿದ್ದ ವಂತಿಗೆಗಳನ್ನು ಸಿಬ್ಬಂದಿ ಯೋಚನೆಯ ನೆವದಿಂದ ನಿಲ್ಲಿಸಿರುವದು ವಿಷಾದದ ಸಂಗತಿ. ಇದರಿಂದ ಬೋರ್ಡಿನ ಆರ್ಥಿಕ ಸ್ಥಿತಿಗೆ ಭಯಂಕರ ಆಘಾತವಾಗಿದೆ. ಈ ಕಾರಣ ದೇಶದ ಪ್ರಾಥಮಿಕ ವಿದ್ಯಾಭ್ಯಾಸವು ಹಿಂದೆ ಬೀಳುವ ಸಂಭವವಿದೆ.

ಸಹಕಾರ ಇಲಾಖೆಯು ದಿನದಿಂದ ದಿನಕ್ಕೆ ವಿಸ್ತಾರಗೊಳ್ಳುತ್ತಿದೆ. ಹಾಗಿರುವದರಿಂದ ಅದಕ್ಕೆ ತಮ್ಮ [illegible] ಉಪಯೋಗಿಸುವ ರೇಜಿಸ್ಟ್ರಾರ್ ಒಬ್ಬನ ಅವಶ್ಯಕತೆ ಹೆಚ್ಚುತ್ತಿದೆ. ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನವರು [illegible] ಪ್ರಸಾದ ತಾಸಹ ಕೇಳಿಕೊಂಡರೂ [illegible] ಬ್ಯಾಂಕಿನ [illegible] ಹಣ ಸಹಾಯ ಕೊಡದಿರುವದು ನಿಷ್ಠಾವಂತ. ವ್ಯವಸಾಯ ಇಲಾಖೆಯನ್ನು ಪ್ರಾಮಾಣ್ಯಕ್ಕೆ ಗೊಳಿಸುವ ತಾಯಿಯ ಬೆಂಗ ಕೈಗೊಳ್ಳಬೇಕಾಗಿದೆ. ಕೊಡಗಿನ ಪ್ಲಾಂಟರುಗಳು ಕಾಫಿ ಸೆಸ್ ಸುಂಕವನ್ನು ಕಟ್ಟಿರುವರು. ಸರಕಾರವು ಆ ಹಣವನ್ನು 10 ಸ್ಯಾಂಪಲ್ ನವಿಕ್ರಿ ಅನೇಕ ತೋಟಗಳು ನಾಶವಾಗಲು ಇದರಲ್ಲಿ ಸಂಶಯವಿಲ್ಲ. ಸರ್ಕಾರಿ ಉದ್ಯೋಗದಲ್ಲಿ ಕೋಮುವಾರು ತತ್ವವನ್ನು ಒಳಗೊಂಡ ಸರ್ಕಾರದ ಹುಕುಂ ನಿಜವಾಗಿ ಜನರಲ್ಲಿ ಕೋಮುವಾರು ವೈಮನಸ್ಯವನ್ನು ಹುಟ್ಟಿಸುತ್ತಿದೆ. ಇದು ಕ್ರಮೇಣ ಗ್ರಾಮಕ್ಕೆ ಹಬ್ಬುವದು. ಇದನ್ನು ಕೂಡಲೆ ತಡೆಯಬೇಕು. ಒಟ್ಟಿನಲ್ಲಿ ದೇಶದ ಹಿತವನ್ನು ಬಯಸಲು ಸರ್ಕಾರಕ್ಕೆ ಇದೊಂದು ಒಳ್ಳೇ ಸಮಯವಾಗಿದೆ. ಕೊಡಗಿಗೆ ಇಂಡಿಯಾ ಸರ್ಕಾರದಿಂದ ವಂತಿಗೆ ದೊರೆತು ಇಲ್ಲಿಯ ಆರ್ಥಿಕ ಸ್ಥಿತಿ ಮತ್ತೂ ಭದ್ರಪಡಿಸಲಾಗಿ, ಕೊಡಗಿಗೆ ಕೂಡಲೆ ಜವಾಬ್ದಾರಿ ಸರ್ಕಾರ ದೊರೆಯಲೆಂದು ಬಯಸುತ್ತೇನೆ.'

ಶ್ರೀ ಐ. ಪಿ. ಕಾರ್ಯಪ್ಪನವರು.

ಈ ವರ್ಷ ಜನತೆಯ ಕೋರಿಕೆಯನ್ನು ಮನ್ನಿಸಿ ಅವಶ್ಯಕ ಖರ್ಚನ್ನು ಕಮ್ಮಿ ಮಾಡಿರುವ ಈ ಬಡ್ಜೆಟ್ಟಿನ ವಿಚಾರ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಆನಂದವೆನಿಸುತ್ತದೆ. ಸರಕಾರವು ಈ ರೀತಿಯ ಧೋರಣೆಯನ್ನು ಪ್ರಾರಂಭದಿಂದಲೇ ತಳೆದಿದ್ದರೆ ಕೊಡಗು ಪ್ರಾಂತವು ಒಂದು ಮಾದರಿ ದೇಶವಾಗಿ ಇಂದು ವಿರಾಜಿಸುತ್ತಿತ್ತು. ಈಗಲಾದರೂ ತಡವಾಗಿಲ್ಲ. ಸರಕಾರವು ಜನತೆಯ ಹಿತದೃಷ್ಟಿಯಿಂದ ವರ್ತಿಸಿದರೆ ದಿನಚರಿ ಖರ್ಚಿಗೇ ಅಲ್ಲ; ವೇತನ ಇತರ ಹೆಚ್ಚಿನ ಜನೋಪಯೋಗಿ ಕಾ[illegible] ಎರಡು ಮೂರು ವರ್ಷಗಳಿಗೊಮ್ಮೆ ಈ ರೀತಿಯಲ್ಲಿ ಖರ್ಚು ಕಮ್ಮಿ ಮಾಡಿದರೂ ಸರಕಾರವು ಪುನಃ ಖರ್ಚನ್ನು ಹೆಚ್ಚಿಸುತ್ತಾ ನಡೆಯುತ್ತಿರುವ ಅನುಭವವು ನಮಗಿದೆ. ಈ ನ್ಯೂನತೆಯನ್ನು ಸರಕಾರವು ಮುಂದೆ ವರ್ಜಿಸಬೇಕಾಗಿದೆ.

ಈಗೀಗ ಇಂಡಿಯಾ ಸರಕಾರವು ತಜ್ಞರನ್ನು ಕಳುಹಿಸಿ ಕೊಡಗಿನ ಸ್ಥಿತಿಗತಿಗಳನ್ನು ಅರಿತುಕೊಳ್ಳುತ್ತಿರುವದನ್ನು ನೋಡಿದರೆ ಮುಂದೆ ವಂತಿಗೆಯನ್ನೂ, ಸುಧಾರಣೆಗಳನ್ನೂ ಪಡೆಯುವ ಸಂಭವ ನಮಗಿದೆಯೆಂದು ಗೋಚರವಾಗುವದು. ಅಂಥಾ ಸಂದರ್ಭದಲ್ಲಿ ಕೊಡಗಿನ ಸರಕಾರವೂ ಕೊಡಗಿನ ಸ್ಥಿತಿಯನ್ನು ವಿವರಿಸಿ ಕೊಡಗಿಗೆ ಸಲ್ಲತಕ್ಕದ್ದಿರುವ ಸುಧಾರಣೆಗಳಿಗೂ, ವಂತಿಗೆಗೂ ಪ್ರಯತ್ನಿಸಬೇಕಿದೆ. ಈ ಸರಕಾರದ ಅನಾಸಕ್ತಿಯೇ ನಮ್ಮ ಸಹನೆಯ ಗೆರೆ ಮೀರುತ್ತಿದೆ.

ಬೇರೆ ಪ್ರಾಂತಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಜವಾಬ್ದಾರಿ ವಹಿಸಿರುವಾಗ ನಮ್ಮ ಸರಕಾರವು ಅದಕ್ಕೆ ವ್ಯತಿರಿಕ್ತ ವರ್ತಿಸುತ್ತಿದೆ. ಡಿ. ಬೋರ್ಡಿನ ಗ್ರಾಂಟನ್ನು ನಿಲ್ಲಿಸಿ ಯೋಚನೆಯಿಂದ ದೇಶದ ಪ್ರಾಥಮಿಕ ವಿದ್ಯೆಯು ಬುಡಕ್ಕೇ ಕೊಡಲಿ ಹಾಕಿದೆ. ಇದು ಸರಕಾರಕ್ಕೆ ಶೋಭಿಸುವಂಥದ್ದಲ್ಲ.

ವ್ಯವಸಾಯದ ವಿಚಾರದಲ್ಲಿ ಸರಕಾರವು ಮತ್ತಷ್ಟು ಮುತುವರ್ಜಿ ವಹಿಸಬೇಕಿದೆ. ಕೆಲವು ಕಡೆಗಳಲ್ಲಿ ನಾಡುಗಳಲ್ಲಿ ಬೆಳೆಯುವದಕ್ಕೆ ವಿಪರೀತ ಅನಾನುಕೂಲತೆಯಿದೆ. ಉದಾಹರಣೆಗೆ ಪಿರಿಯಾಪಟ್ಟಣದಲ್ಲಿ ಇಂಥಾ ಒಂದು ಅನುಕೂಲತೆ ಸ್ಥಾಪನೆ ಇದೆ. ವ್ಯವಸಾಯ ಇಲಾಖೆಯವರು ಸರಕಾರದಿಂದ ನಿಲ್ಲಿಸಲ್ಪಟ್ಟಿದೆ. ರೈತರಿಗೆ ಗೊಬ್ಬರದ, ಬೀಜದ ಸಹಾಯವನ್ನು ವಿತರಿಸುತ್ತಿಲ್ಲ. ಇದಕ್ಕಾಗಿ ವ್ಯವಸಾಯ ಇಲಾಖೆಯು ವ್ಯವಸ್ಥಿತವಾದ ಕಾರ್ಯ ನಡೆಸುತ್ತಿಲ್ಲ. ಸಹಕಾರ ಇಲಾಖೆಯವರೂ ಸರಕಾರದಿಂದ ಯಾವ ಹೇಳಿಕೊಳ್ಳಬಹುದಾದ ಸಹಾಯವನ್ನು ಪಡೆದಿಲ್ಲ. ದಿನ ಹೋದಂತೆ ರೈತನ ಸ್ಥಿತಿಯು ಚಿಂತಾಜನಕವಾಗತೊಡಗಿದೆ. ಕಾಫಿ ಪ್ಲಾಂಟರುಗಳ ಸ್ಥಿತಿಯೂ ವಿಷಮಸ್ಥಿತಿಗೆ ತಲುಪಿದೆ. ಇವರ ಸಹಾಯಕ್ಕೆ ಸರಕಾರವು ಒಡನೆ ಬಾರದ ಪಕ್ಷ ಕೊಡಗಿನಲ್ಲಿ ಕಾಫಿ ವ್ಯವಸಾಯವು ನಾಶವಾಗುವದರಲ್ಲಿ ಸಂಶಯವಿಲ್ಲ.

ವ್ಯವಸಾಯೋತ್ಪತ್ತಿಗಳಿಗೆ ಕ್ರಯ ಒದಗಿಸಿ ಕೊಡುವ ಯಾವದೊಂದು ಯೋಜನೆಯು ಸರಕಾರದಿಂದ ಕೈಕೊಳ್ಳಲ್ಪಟ್ಟಿಲ್ಲ. ಸರಕಾರವು ಇವುಗಳನ್ನು ಚಿತ್ತವಿಟ್ಟು ಯಥೋಚಿತ ವರ್ತಿಸಬೇಕು.'

ಶ್ರೀ ಯಂ. ಯಂ. ಬೆಳ್ಳಿಯಪ್ಪನವರು.

'ಈ ವರೆಗೆ ಚೀಫ್ ಕಮಿಷನರಾಗಿಯೂ, ಕೌನ್ಸಿಲಿನ ಅಧ್ಯಕ್ಷರಾಗಿಯೂ ಇದ್ದು ನಮಗೆ ಯಥೋಚಿತ ಸಲಹೆಗಳನ್ನಿತ್ತು ನಮ್ಮನ್ನು ಸಾಗಿಸುವಾದ ಹಾದಿಯಲ್ಲಿ ಮುನ್ನಡೆಸುತ್ತಿದ್ದ ಚೀಫ್ ಕಮಿಷನರವರು ಇನ್ನು ಮುಂದೆ ನಮ್ಮೊಡನಿರಲಾರರೆಂಬುದು ವಿಷಾದದ ಸಂಗತಿ. ನಮ್ಮನ್ನಗಲುವ ಈ ಸಂದರ್ಭದಲ್ಲಿ ಅವರಿಗೆ ನಮ್ಮ

ಕೊಡಗು

[illegible]

ಕೌನ್ಸಿಲು ಬಜೆಟ್ ಮೀಟಿಂಗು.

ಕೊಡಗು ನ್ಯಾಯವಿಧಾಯಕ ಸಭೆಯ ಬಜೆಟ್ ಮೀಟಿಂಗು ಈ ತಾ. 13ರಲ್ಲಿ ಪ್ರಾರಂಭವಾಗಿದೆ. ಅಂದಾಜು ಬಜೆಟ್ಟಿನ ಮೇರೆ 1940-41ನೇ ವರ್ಷದಲ್ಲಿ ಕೊಡಗು ಸರಕಾರದ ಆದಾಯವು ರೂ. 12,32,000, ಹಿಂದಿನ ಉಳುವರಿ ರೂ. 3,31,000, ಜುಮ್ಲಾ ರೂ. 15,63,000 ಆಗಿದೆ. ಖರ್ಚು ರೂ. 12,15,000 ಖರ್ಚು ಕಳೆದು ಉಳುವರಿ ರೂ. 3,48,000 ಆಗಿದೆ. ಆದಾಯದಲ್ಲಿ ಇಂಡಿಯಾ ಸರಕಾರದವರು ಕೊಡುವ ವಂತಿಗೆ 60,800 ರೂಪಾಯಿ ಸೇರಿದೆ. ಇಷ್ಟರ ವರೆಗಿನ ಏರ್ಪಾಡಿನ ಪ್ರಕಾರ ಮಧ್ಯವರ್ತಿ ಸರಕಾರದಿಂದ ವಂತಿಗೆ ಪಡೆಯುವ ಇದೇ ಕಡೇ ವರ್ಷವಾಗಿದೆ. ಮುಂದರಿಂದ ಈ ವಂತಿಗೆಯನ್ನು ಮತ್ತು ಹಿಂದಿನ ವರ್ಷದ ಶಿಲ್ಕನ್ನೂ ಬಿಟ್ಟು ಬಜೆಟ್ ವರ್ಷದ ಆದಾಯ ವೆಚ್ಚವನ್ನು ಮಾತ್ರ ಲೆಕ್ಕ ಹಾಕಿದಲ್ಲಿ ಸುಮಾರು ರೂ. 44,000 ಖರ್ಚು ಉತ್ಪತ್ತಿಗಿಂಥಾ ಹೆಚ್ಚಾಗುತ್ತೆ. ಆದರೆ ಈ ವರ್ಷದಲ್ಲಿ ವೀರಾಜಪೇಟೆ ನೀರಾವರಿ ಕಾಮಗಾರಿಗಾಗಿ ಇಟ್ಟಿರುವ ರೂ. 28,000 ಮುಂದಿನ ವರ್ಷಗಳಲ್ಲಿ ಕೊಡಲ್ಪಡುವ ಸಂಭವವಿಲ್ಲವಾದ ಕಾರಣ ಈ ಮೊಬಲಗಿನ ಮಟ್ಟಿಗೆ ಮುಂದಿನ ವರ್ಷ ಖರ್ಚು ಕಮ್ಮಿಯಾಗುವದು. ಅಲ್ಲದೆ ಕಮಿಷನರವರ ಹುದ್ದೆಯನ್ನು ರಜಾಮಾಡಿ ಚೀಫ್ ಕಮಿಷನರು ಕೊಡಗಿನಲ್ಲಿ ವಾಸಿಯಾಗಿ ಇರುವಂತೆ ಮಾಡುವ ಏರ್ಪಾಡಿನ ಖರ್ಚು ಕೋತೆಯ ಪೂರ್ತಿ ಫಲಿತಾಂಶವು ಈ ಬಜೆಟ್ಟಿಗೆ ಸೇರಿಸಲ್ಪಟ್ಟಿರುವದಿಲ್ಲ. ಯಾಕೆಂದರೆ ಈ ಹೊಸ ಏರ್ಪಾಡು ಜುಲೈ ಸಂಬರದಲ್ಲೇ ನಡೆಯುವದಾಗಿದೆ. ಅಲ್ಲಿಯ ವರೆಗೆ ಈಗಿನ ಹಳೇ ಏರ್ಪಾಡಿಗಿರುವ ಖರ್ಚೇ ಇಡಲ್ಪಟ್ಟಿದೆ. ಮಾತ್ರವಲ್ಲದೆ ದೊಡ್ಡ ಹುದ್ದೆಗಳ ಪೈಕಿ, ಅ. ಕಮಿಷನರ ಸಂಬಳದ ಕೋತೆಯು ಇನ್ನೂ ಮಾಡಲ್ಪಡಬೇಕಿದೆ. ಈಗಿನ ಅಸಿಸ್ಟೆಂಟ್ ಕಮಿಷನರು ಬಜೆಟ್ ವರ್ಷದಲ್ಲೇ ನಿವೃತ್ತರಾಗುವ ಕಾರಣ ಈ ಹುದ್ದೆಯ ಸಂಬಳದಲ್ಲೂ ಕೋತೆ ಮಾಡುವ ಅವಕಾಶವಿದೆ. ಆದ ಕಾರಣ 1941-42ನೇ ವರ್ಷದಲ್ಲಿ ಕೊಡಗಿನ ಆದಾಯವೂ, ವೆಚ್ಚವೂ ಸಮಗಟ್ಟಲ್ಪಡುವದರಲ್ಲಿ ಸಂದೇಹವಿಲ್ಲ. 1924ರಲ್ಲಿ ಕೌನ್ಸಿಲು ಸರಕಾರವು ಪ್ರಾರಂಭವಾದಾಗ್ಯೂ ಇಂಡಿಯಾ ಸರಕಾರವು ಕೊಡಗಿಗೆ ಯಾವದೊಂದೂ ಉಳುವರಿಯನ್ನು ಕೊಡಲಿಲ್ಲವಾದರೂ 1929ರ ವರೆಗೆ ಸುಮಾರು 6 ಲಕ್ಷ ರೂಪಾಯಿಯ ವರೆಗೆ ಖರ್ಚು ಕಳೆದು ಉಳುವರಿ ಉಂಟಾಗಿತ್ತು. ಆದರೆ ನಂತರ ಬಳಿಕದ ಸರಕಾರದ ದುಂದುಗಾರಿಕೆಯ ಪರಿಣಾಮ 1937ರಲ್ಲಿ ಹಿಂದಿನ ಶಿಲ್ಕು 6 ಲಕ್ಷ ರೂಪಾಯಿ ಖರ್ಚಾಗಿದ್ದಲ್ಲದೆ ಇಂಡಿಯಾ ಸರಕಾರದಿಂದ ಸುಮಾರು 9 ಲಕ್ಷ ರೂಪಾಯಿ ಸಾಲವಾಗಿ ಹೋಗಿತ್ತು. ಈ ಪರಿಸ್ಥಿತಿಯನ್ನು ನೋಡಿ ಮಧ್ಯವರ್ತಿ ಸರಕಾರದವರು ಅವರು ಕೊಟ್ಟಿದ್ದ ಸಾಲವನ್ನು ವಜಾಮಾಡಿದ್ದಲ್ಲದೆ ಐದು ಲಕ್ಷ ರೂಪಾಯಿ ವಂತಿಗೆಯನ್ನು ಕೊಡಲು ನಿರ್ಧರಿಸಿದರು. ಆ ವಂತಿಗೆಯು ಬಜೆಟ್ ವರ್ಷಕ್ಕೆ ಅಂತ್ಯವಾಗುತ್ತದೆ. ಕಳೆದ ಹಲವು ವರ್ಷಗಳಿಂದ ಕೊಡಗಿನ ಸರಕಾರದ ಖರ್ಚು ಆದಾಯವನ್ನು ಮೀರುತ್ತಾ ಬಂದ ಕಾರಣ ಕೊಡಗಿನ ಬಜೆಟ್ಟನ್ನು ಸಮಗಟ್ಟಲು ಮತ್ತು ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿಟ್ಟುಕೊಳ್ಳಲು ಸಾಧ್ಯವಿಲ್ಲವೆಂದು ಹಲವರಿಗೆ ತೋರಿತು. ಆದರೆ ಕೊಡಗು ಸರಕಾರದ ದುಂದುಗಾರಿಕೆಯ ವೆಚ್ಚವನ್ನು ಕೋತೆಮಾಡಲು ದೇಶದ ಜನರೂ ಅವರ ಪ್ರತಿನಿಧಿಗಳೂ ಈಗ ಹಲವು ವರ್ಷಗಳಿಂದ ಚಳವಳ ನಡೆಸುತ್ತಾ ಬಂದುದರಿಂದಲೂ, ಇಂಡಿಯಾ ಸರಕಾರದಿಂದ ಸಾಲವು ಹೆಚ್ಚುತ್ತಾ ಬಂದುದರಿಂದಲೂ ಕೊಡಗಿನ ಸರಕಾರದ ಆರ್ಥಿಕ ಸ್ಥಿತಿಯನ್ನು ಅಜಮಾಯಿಸಲು ಒಬ್ಬ ಆರ್ಥಿಕ ತಜ್ಞರು ಇಂಡಿಯಾ ಸರಕಾರದಿಂದ ನೇಮಿಸಲ್ಪಟ್ಟರು. ಇವರ ವರದಿಯಲ್ಲಿ ಸೂಚಿಸಿರುವ ಹೆಚ್ಚಿನ ಶಿಫಾರಸ್ಸುಗಳನ್ನು ಇಂಡಿಯಾ ಸರಕಾರದವರು ಒಪ್ಪಿ ಇಲ್ಲಿ ಜಾರಿಗೆ ತಂದ ಕಾರಣ ಸುಮಾರು ಎರಡು ಲಕ್ಷ ರೂಪಾಯಿ ಖರ್ಚು ಕೋತೆ ಮಾಡಲಾಗಿದೆಯೆಂದು ತಿಳಿಯಬರುತ್ತೆ. ಬರುವ ವರ್ಷದಿಂದ ಸರಕಾರದ ದಿನಚರಿ ಕೆಲಸಗಳನ್ನು ನಡೆಸಲಿಕ್ಕಿರುವ ಬಜೆಟನ್ನು ಸಮಗಟ್ಟಲು ಸಾಧ್ಯವಾಗಬಹುದು. ಆದರೆ ದೇಶಾಭಿವೃದ್ಧಿಯ ಕಾರ್ಯಗಳನ್ನು ಮಾಡಲು ಹಣವು ಎಲ್ಲಿಂದ ದೊರೆಯುವದೆಂಬ ಪ್ರಶ್ನೆಯು ಹುಟ್ಟುವದು. ಇದಕ್ಕಾಗಿಯೇ ಸ್ಥಳೀಯ ಸರಕಾರದವರು ಇಂಡಿಯಾ ಸರಕಾರದ ಸಹಾಯವನ್ನು ಕೇಳಬೇಕಾದ್ದಾಗಿದೆ. ಹಾಗೆಯೇ ಇಂಡಿಯಾ ಸರಕಾರದಿಂದ ವಂತಿಗೆ ಪಡೆಯುವ ಹಕ್ಕು ಕೊಡಗಿಗಿದೆ. ಯಾಕೆಂದರೆ 1924ರ ವರೆಗೆ ಹಿಂದಿನ ಅರುವತ್ತು ವರ್ಷಗಳ ವರೆಗಿನ ಕೊಡಗಿನ ಉಳಿಕೆ ರೂಪಾಯಿ ಸುಮಾರು ಒಂದು ಕೋಟಿಯಷ್ಟು ಇಂಡಿಯಾ ಸರಕಾರದವರು ಕೊಂಡು ಹೋಗಿದ್ದರೂ ಕೂಡ ಈ ಪ್ರಾಂತಕ್ಕೆ ಕೌನ್ಸಿಲು ಕೊಡಲ್ಪಟ್ಟಾಗ್ಯೆ ಏನೊಂದೂ ಉಳುವರಿಯನ್ನು ಕೊಡಲಿಲ್ಲ. ಅಲ್ಲದೆ ಸಿಂಧ್, ಒರಿಸಾ, ಗಡಿ ಪ್ರಾಂತ, ಡೆಲ್ಲಿ ಮುಂತಾದ ಪ್ರಾಂತಗಳಿಗೆ ಇಂಡಿಯಾ ಸರಕಾರದವರು ದೊಡ್ಡ ವಂತಿಗೆಯನ್ನು ವರ್ಷಂಪ್ರತಿ ಕೊಡುತ್ತಿರುವರು. ಕೊಡಗಿನ ಸ್ಥಿತಿಯು ಈ ಪ್ರಾಂತಗಳದ್ದಕ್ಕಿಂಥಾ ಬೇರೆಯಾಗಿಲ್ಲ. ಇದರೊಂದಿಗೆ ಇಂಡಿಯಾ ಸರಕಾರದವರಿಂದಲೇ ನೇಮಿಸಲ್ಪಟ್ಟ ಫೈನಾನ್ಶಿಯಲ್ ಆಫೀಸರರು ಇಲ್ಲಿಯ ಆರ್ಥಿಕ ಸ್ಥಿತಿಯನ್ನು ಅಜಮಾಯಿಸಿ ಅವರಿಗೆ ವಿಶದಪಡಿಸಿರುವರು. ಇವೆಲ್ಲಾ ಕಾರಣಗಳಿಂದ ಕೊಡಗಿಗೆ ಮಧ್ಯವರ್ತಿ ಸರಕಾರದಿಂದ ವಂತಿಗೆ ದೊರೆಯುವ ಸಂಭವ ಹೆಚ್ಚಾಗಿದೆ. ಆದರೆ ಈ ತರದ ಧನ ಸಹಾಯ ಮಾಡಲು ಸ್ಥಳೀಯ ಸರಕಾರದವರೂ, ಇಲ್ಲಿಯ ಜನರೂ ಎಡೆ ಬಿಡದೆ ಸಾಕಷ್ಟು ಪ್ರಯತ್ನ ನಡೆಸಬೇಕಾಗಿದೆ.

ಬಜೆಟ್ ವರ್ಷದ ಆದಾಯ ವೆಚ್ಚವನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ ಖರ್ಚು ಹೆಚ್ಚಿಗೆಯು ಕಂಡು ಬಂದರೂ ಹಿಂದಿನ ಶಿಲ್ಕು ಸಹ ಲೆಕ್ಕಕ್ಕೆ ತೆಗೆದುಕೊಂಡಲ್ಲಿ 3,48,000 ರೂಪಾಯಿ ಉಳುವರಿ ನಿಲ್ಲುತ್ತೆ. ಇಷ್ಟು ದೊಡ್ಡ ಉಳುವರಿಯಿರುವಾಗ ರೂಪಾಯಿ ಬಚ್ಚಿಟ್ಟದಲ್ಲಿ ಗ್ರಾಮಾಭಿವೃದ್ಧಿಯ ಹೊಸ ಕೆಲಸಗಳಿಗೆ ಯಾವದೂ ಕೈ ಹಾಕದಿದ್ದದ್ದು ಶೋಚನೀಯ. ಈ ಉಳುವರಿ ಮೊಬಲಗನ್ನು ವರ್ಷಂಪ್ರತಿ ಖರ್ಚು ಮಾಡಬೇಕಾದ ಕೆಲಸಗಳಿಗಾಗಿ ವ್ಯಯಮಾಡಲು ಸಾಧ್ಯವಿಲ್ಲದಿದ್ದರೂ ಒಂದೇ ಸಾರಿ ಖರ್ಚು ಮಾಡಬಹುದಾದ ದೇಶಾಭಿವೃದ್ಧಿಯ ಕಾರ್ಯಗಳಿಗೆ ಉಪಯೋಗಿಸಲ್ಪಡಬಹುದಾಗಿದೆ. ಈ ವಿಚಾರಕ್ಕೆ ಅಧಿಕಾರಗಳು ಸಾಕಷ್ಟು ಗಮನಕೊಡದ್ದನ್ನು ಎಷ್ಟು ಖಂಡಿಸಿದರೂ ಸಾಲದು.

ಈ ಲೇಖನದಲ್ಲಿ ಕೊಡಗಿನ ಸರಕಾರದ ಆರ್ಥಿಕ ಸ್ಥಿತಿಯನ್ನು ಮಾತ್ರ ಕುರಿತು ಟೀಕಿಸಿದ್ದಾಯಿತು. ಮುಂದಿನ ವಾರದಲ್ಲಿ ಕೊಡಗಿನ ರಾಜಕೀಯ ಸುಧಾರಣೆಯನ್ನು ಕುರಿತು ಬರೆಯಲಾಗುವದು.

ರಷ್ಯಾ-ಫಿನ್ಲೆಂಡ್ ಸಂಧಾನ.

ಮೂರುವರೆ ತಿಂಗಳುಗಳ ವರೆಗೆ ರಷ್ಯಾ ಫಿನ್ಲೆಂಡುಗಳೊಳಗೆ ಬಿರುಸಾಗಿ ನಡೆದ ಯುದ್ಧವು ತಾರೀಕು 13ರಲ್ಲಿ ತನ್ನ ಅಂತ್ಯವನ್ನು ಕಂಡಿತು. ಇಕ್ಕಡೆಯವರೂ ರಷ್ಯದ ಮುಖ್ಯ ಪಟ್ಟಣವಾದ ಮಾಸ್ಕೋದಲ್ಲಿ ಕಲೆತು ಸಂಧಾನ ಮಾಡಿಕೊಂಡಿರುವರು. ಫಿನ್ಲೆಂಡಿನವರು ಈ ಒಪ್ಪಂದವನ್ನು ಸ್ಥಿರೀಕರಿಸುವದೊಂದೇ ಬಾಕಿ ಇದೆ. ಫಿನ್ನರ ಪರವಾಗಿ ಪ್ರಧಾನ ಮಂತ್ರಿ ರಾಯಿಟಿರವರು ಒಪ್ಪಂದದ ಮಸೂದೆಗೆ ಸಹಿ ಹಾಕಿರುವರು. ಫಿನ್ನ್ ಜನರ ಪ್ರತಿನಿಧಿಗಳಾದವರೂ ಈ ಸಂಧಾನವನ್ನು ಅಂಗೀಕರಿಸುವರೆಂಬುವದರಲ್ಲಿ ಸಂಶಯವಿಲ್ಲ. ಈ ಸಂಧಾನದಿಂದ ಯುದ್ಧಕ್ಕೆ ನೊಂದಿದ್ದ ಫಿನ್ನರ ಸ್ವಾತಂತ್ರ್ಯಕ್ಕೆ ಅಲ್ಪ ಸ್ವಲ್ಪ ಕುಂದು ಬಂದರೂ ಕಳೆದ ನೂರು ದಿನಗಳ ಅವಿಚ್ಛಿನ್ನವಾದ ಹೋರಾಟದಲ್ಲಿ ಈ ರಾಷ್ಟ್ರಾಭಿಮಾನಿಗಳು ಅಮೋಘವಾದ ಫಲಿತಾಂಶವನ್ನು ಹೊಂದಿರುವರು. ಅವರು ತಮ್ಮ ಸ್ವೀಯ ಸಾಫಲ್ಯಕ್ಕಾಗಿ ಪ್ರಾಣಸಹಿತ ತೆರಬೇಕಾಗಿ ಕಂಡು ಶತ್ರುವನ್ನು ಅದ್ಭುತ ನಷ್ಟಗಳಿಗೊಳಗುಮಾಡಿದರು. ಕಡೆಗಾದರೂ ಅವರು ರಷ್ಯರಿಂದ ಜಯಿಸಲ್ಪಡಲಿಲ್ಲ. ಅವರ ಅಸಾಮಾನ್ಯವಾದ ಧೈರ್ಯ, ಅವರ್ಣನೀಯವಾದ ಶೌರ್ಯ ಇವುಗಳಿಂದಾಗಿ ರಷ್ಯದಂಥಾ ಪ್ರಚಂಡ ರಾಷ್ಟ್ರವು ಇವರ ಮುಂದೆ ತಲೆಬಾಗಬೇಕಾಯಿತು. ಮೂರುವರೆ ಮಿಲಿಯ ಜನತೆ ಇರುವ ಫಿನ್ಲೆಂಡಿನಂಥಾ ಒಂದು ಚಿಕ್ಕ ರಾಷ್ಟ್ರವು 170 ಮಿಲಿಯ ಜನಸಂಖ್ಯೆಯ ರಷ್ಯದಂಥಾ ವಿಶಾಲ ರಾಷ್ಟ್ರವನ್ನು ಈ ರೀತಿ ಹಣ್ಣು ಮಾಡಿರುವದಾದರೂ ಯಾವನಾದರೂ ಹೊಗಳಿಕೊಳ್ಳತಕ್ಕಂಥಾ ವಿಚಾರವೇ.

ಫಿನ್ನರು ಯುದ್ಧ ಪ್ರಾರಂಭದಿಂದಲೂ ಸಂಧಾನದ ಬಗ್ಗೆ ತಮ್ಮ ತಯಾರಿಯನ್ನು ವ್ಯಕ್ತಪಡಿಸುತ್ತಾ ಬಂದಿರುವರು. ಆದರೆ ರಷ್ಯವು ಈ ಕೇಳಿಕೆಗಳನ್ನು ಬದಿಗೊತ್ತಿ ಮತ್ತಗಜದಂತೆ ವರ್ತಿಸಿತು. ಆದರೆ ಫಿನ್ಲೆಂಡು ಅದಕ್ಕೆ ತಕ್ಕ ಬುದ್ಧಿಗಲಿಸಿ ಅದನ್ನು ಪ್ರಶ್ನೆಗೆ ಕರೆದು ಫಿನ್ನರ ಈ ಶೌರ್ಯ ಸಾಹಸಗಳು ಜಗತ್ಪ್ರಸಿದ್ಧವಾಗಿವೆ. ಅಷ್ಟೇ ಅಲ್ಲ; ಆತ್ಮ ಪ್ರೇರಣೆಯಿಂದ ತಮ್ಮ ಧ್ಯೇಯ ಸಾಫಲ್ಯಕ್ಕೆ ಟೊಂಕ ಕಟ್ಟಿ ನಿಂತ ಅಲ್ಪ ಜನಾಂಗವನ್ನಾದರೂ ಒಂದು ರಾಷ್ಟ್ರವು ಬಗ್ಗು ಬಡಿಯಲಾರದೆಂಬ ಪಾಠವನ್ನು ಇಂದು ಫಿನ್ನರ ಉದಾಹರಣೆಯು ಜಗತ್ತಿಗೆ ಸಾರುತ್ತಿದೆ. ಇರಲಿ, ಸಂಧಾನದ ಶರತುಗಳನ್ನು ಪರೀಶೀಲಿಸಿದರೆ ರಷ್ಯಾದಂಥಾ ಬಲಾಢ್ಯ ರಾಷ್ಟ್ರವು ಫಿನ್ನರನ್ನು ತನ್ನ ಇಚ್ಛೆಗೆ ಆಧೀನ ನಡೆಯುವಂತೆ ಬಲಾತ್ಕರಿಸಿರುವದು ಕಂಡು ಬರುತ್ತದೆ. ಈ ಒಪ್ಪಂದದಿಂದಾಗಿ ಫಿನ್ಲೆಂಡು ವಿದೇಶಗಳೊಡನೆ ಸ್ವಂತ ಜವಾಬ್ದಾರಿಯಿಂದ ಒಪ್ಪಂದ ಶರತುಗಳನ್ನು ಮಾಡಿಕೊಳ್ಳಕೂಡದಾಗಿದೆ. ರಷ್ಯನರು ಫಿನ್ನರಂಥಾ ವೀರ ಜನಾಂಗಕ್ಕೆ ಇಷ್ಟು ಉಪಚಾರವು ಅನೂನವೆಂದು ಟೀಕಿಸಲ್ಪಡುವದು. ಫಿನ್ಲೆಂಡಿನ ಈ ಸಂಧಾನದಿಂದ ಜಗದ್ವ್ಯಾಪಿಯಾದ ಘೋರ ಯುದ್ಧವು ನಡೆಯುವದೆಂಬ ಭಯ ಕಮ್ಮಿಯಾಗಿದೆ. ಈ ಸಂಧಾನದಿಂದ ಮಿತ್ರ ರಾಷ್ಟ್ರಗಳಾದ ಬ್ರಿಟನ್ ಫ್ರಾನ್ಸುಗಳಿಗೆ ಮಂಗ ಬಡಿದಂತಾಗಿದೆ. ಅವರ ಕಾರ್ಯ ಕಲಾಪಗಳು ಮೂಲೆ ಸೇರಿವೆ. ಆದರೆ ಈ ಸಣ್ಣ ರಾಷ್ಟ್ರಗಳನ್ನು ಇದಕ್ಕಾಗಿ ದೂಷಿಸುವದು ಸಾಧ್ಯವಿಲ್ಲ. ಫಿನ್ಲೆಂಡಿನ ಯುದ್ಧ ಕೊನೆಗೊಂಡ ಪ್ರಯುಕ್ತ ಹಿಟ್ಲರನ ಹೊಟ್ಟೆಗೆ ಹಾಲು ಬಿದ್ದಂತಾಗಿದೆ. ಯುದ್ಧದ ಪ್ರಯುಕ್ತ ರಷ್ಯದಿಂದ ಆತನಿಗೆ ಯಾವ ಕಚ್ಚಾ ಮಾಲೂ ಸಿಗುತ್ತಿರಲಿಲ್ಲ. ಆದ ಪ್ರಯುಕ್ತವೇ ಆತನು ಫಿನ್ಲೆಂಡ್ ಯುದ್ಧ ಬೇಗ ಕೊನೆಗೊಳ್ಳಬೇಕೆಂದು ಹಾರೈಸುತ್ತಿದ್ದ. ಎಲ್ಲವೂ ಆತನು ಯೋಚಿಸಿದಂತೆಯೇ ನಡೆದವು. ಇನ್ನು ಮುಂದೆ ಬ್ರಿಟನ್, ಫ್ರಾನ್ಸ್, ಜರ್ಮನಿ, ಯುದ್ಧವು ಪ್ರಖರವಾಗಿ ನಡೆಯಬಹುದು. ಮುಂದೆ ರಷ್ಯಾವಾಗಲೀ, ಜರ್ಮನಿಯಾಗಲೀ ಯಾವ ಕಾರ್ಯಕ್ರಮ ಕೈಕೊಳ್ಳುವರೆಂಬುದು ಕಾಲವಾಹಿನಿಯಲ್ಲಡಗಿರುವ ಪ್ರಯುಕ್ತ ಮುಂದೆ ನಿರೀಕ್ಷಿಸುತ್ತಿರೋಣ.

ವರ್ತಮಾನ ಸಂಗ್ರಹ.

ಪ್ರದೇಶ.

ಸೌತ್ ಇಂಡಿಯಾ ಕೋಆಪರೇಟಿವ್ ಇನ್ಸೂರೆನ್ಸ್ ಸೊಸೈಟಿಯವರು ಕೊಡಗಿನ ಲೋಕಲ್ ಸೆಕ್ರೆಟರಿಯವರ ಮೇಲೆ ಸೆಂಟ್ರಲ್ ಬ್ಯಾಂಕಿನಲ್ಲಿ ಇದ್ದಂತಹ ಹಣವನ್ನು ಕೊಡಬಾರದೆಂದು ಸಬ್ ರಿಜಿಸ್ಟ್ರಾರರ ಕೋರ್ಟಿನಲ್ಲಿ ಹೂಡಿದ್ದ ದಾವೆಯು ಈ ತಾರೀಕು 11ರಲ್ಲಿ ಆ ಕೋರ್ಟಿನವರಿಗೆ ವಿಚಾರಿಸಲು ಅಧಿಕಾರವಿಲ್ಲವೆಂದು ತೀರ್ಮಾನವಾಗಿದೆ.

ಕೊಡಗಿನಲ್ಲಿ ಸಂಚಾರ ಮಾಡಿ ಪಾರಮಾರ್ಥಿಕ ವಿಚಾರದಲ್ಲಿ ಭಾಷಣಗಳನ್ನಿತ್ತ ಕಡಪಾದ ಸಚಿದಾನಂದ ಸ್ವಾಮಿಗಳು ನಾಳೆ ದಿನ ಬೆಂಗಳೂರಿಗೆ ಹೋಗುವರೆಂದು ತಿಳಿಯುತ್ತೇವೆ.

ಮಡಿಕೇರಿ.

ಚೀಫ್ ಕಮಿಷನರು ತಾರೀಕು 17ರಲ್ಲಿ ಇಲ್ಲಿಂದ ಬೆಂಗಳೂರಿಗೆ ಹೊರಡುವರೆಂದು ತಿಳಿಯಬರುತ್ತದೆ.

ಇಲ್ಲಿ ಕಾಫಿ ಖಂಡಿಗೆ ರೂ. 180ರ ವರೆಗೂ, ರೋಬಸ್ಟಾ ಖಂಡಿಗೆ ರೂ. 95ರ ವರೆಗೂ ಕ್ರಯವಿದೆ.

ಕೊಡಗು ಸಾಹಿತ್ಯ ಸಭೆ ವಾರ್ಷಿಕ ಅಧಿವೇಶನವು ತಾ. 13ರಂದ ಕೌನ್ಸಿಲ್ ಹಾಲ್‌ನಲ್ಲಿ ನಡೆಯುತ್ತದೆ.

ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ವಾರ್ಷಿಕ ಮಹಾಸಭೆಯು ಇದೇ ತಾರೀಕು 19ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯುವದು.

ಸಬ್ ಜಡ್ಜರ ಕೋರ್ಟಿನ ಹಂಗಾಮಿ ಶಿರಸ್ತೇದಾರರಾಗಿರುವ ಶ್ರೀ ಸರವಂತ ಕುಟ್ಟಪ್ಪ ಬಿ. ಎ. ಯವರು ಕಳೆದ ತಿಂಗಳಲ್ಲಿ ನಡೆದ ಜುಡಿಶ್ಯಲ್ ಟೆಸ್ಟ್ (ಕ್ರಿಮಿನಲ್ ಲಾ) ನಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ.

ಜಪ್ತಿ ಮಾಡಲ್ಪಟ್ಟ ಹಾಗೂ ಮುಟ್ಟುಗೋಲು ಹಾಕಲ್ಪಟ್ಟ 4 ಜೋಡು ಕೋವಿಗಳು ಮತ್ತು 10 ಒಂಟಿ ನಳಿಗೆಯ ಮದ್ದು ತುಂಬಿಸುವ ಕೋವಿಗಳು ತಾರೀಕು 29-3-40ರಲ್ಲಿ ಕೊಡಗು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಆಫೀಸಿನ ಎದುರು ಹರಾಜು ಮಾಡಲ್ಪಡುವವೆಂದು ತಿಳಿಯುತ್ತೇವೆ.

ವಸಂತ ಸಾಹಿತ್ಯೋತ್ಸವವು ದಕ್ಷಿಣ ಕರ್ನಾಟಕ ಪ್ರಾಂತೀಯ ಸಮಿತಿಯ ನೇತೃತ್ವದಲ್ಲಿ ಕೊಡಗು ಕರ್ನಾಟಕ ಸಂಘದ ಆಶ್ರಯದಲ್ಲಿ ಇದೇ ತಿಂಗಳು 23ನೇ ಶುಕ್ರವಾರ ಸಾಯಂಕಾಲ 4-30 ಗಂಟೆಗೆ ಪ್ರಾರಂಭವಾಗಿ 24ನೇ ಭಾನುವಾರ ಮಧ್ಯಾಹ್ನದ ವರೆಗೆ ಇಲ್ಲಿಯ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ನಡೆಯುವದೆಂದೂ ಮೈಸೂರು ಹಾಗೂ ಮಂಗಳೂರಿನ ಪ್ರಮುಖ ಸಾಹಿತಿಗಳಾದ ಶ್ರೀ ಗೋವಿಂದ ಪೈ, ಸಿ. ರಾಜರತ್ನಂ, ಕೆ. ಕೃಷ್ಣರಾಯರು, ಕೊ. ಶಿ ಕಾರಂತರು ಇವರೇ ಮೊದಲಾದವರು ಉಪನ್ಯಾಸ, ವಾಚನ, ಮೊದಲಾದುವನ್ನು ಮಾಡುವರೆಂದೂ, ಸರ್ವರಿಗೂ ಆಮಂತ್ರಣವಿದೆಯೆಂದೂ, ಪ್ರತಿ ದಿನದ ಕಾರ್ಯ ಕಲಾಪಗಳ ವಿವರವನ್ನು ಆಗಿಂದಾಗಲೇ ತಿಳಿಸಲಾಗುವದೆಂದೂ ವಾರ್ತೆ.

ಸೌತ್ ಇಂಡಿಯಾ ಕೋಆಪರೇಟಿವ್ ಇನ್ಸೂರೆನ್ಸ್ ಸೊಸೈಟಿಯ ಕೆಲಸ ನಡೆಸಲು ಸೆಂಟ್ರಲ್ ಬ್ಯಾಂಕಿನವರು ನೇಮಿಸಿದ ಕೊಡಗು ಲೋಕಲ್ ಬೋರ್ಡಿನ ಏಜಂಟ ಶ್ರೀ ಸುತ್ತು ಕಾರ್ಯದರ್ಶಿಯಾದ ಶ್ರೀಮಾನ್ ಐಚೆಟ್ಟಿರ ಸುಬ್ಬಯ್ಯ ಮತ್ತು ಸಾಲನೆಯಂತ ಕೆಲ ಸ್ವಸ್ಥ್ಯಾಗಾರರುಗಳ ಮೇಲೆ ಸೆಂಟ್ರಲ್ ಬ್ಯಾಂಕಿನವರು ಇನ್ಸೂರೆನ್ಸ್ ಕೆಲಸಕ್ಕೆ ಸಂಬಂಧಪಟ್ಟ ಲೆಕ್ಕಾಚಾರಗಳನ್ನು, ದಾಖಲೆ ಪತ್ರಗಳನ್ನೂ, ನಲ್ಲಿರತ್ತಕ ಕಮಿಷನ ಹಣವನ್ನೂ ತಮಗೆ ಕೊಡದ್ದರಿಂದ ಅ. ರಿಜಿಸ್ಟ್ರಾರರ ಕೋರ್ಟಿನಲ್ಲಿ ದಾವೆ ಹೂಡಿರುವರೆಂದೂ, ಇವರ ಪ್ರಥಮ ವಿಚಾರವು ಈ ತಾರೀಕು 11ರಲ್ಲಿ ನಡೆದು ಮುಂದಿನ ವಿಚಾರಕ್ಕೆ ಏಪ್ರಿಲ್ 2ಕ್ಕೆ ಇಡಲಾಗಿದೆಯೆಂದೂ ತಿಳಿಯಬರುತ್ತದೆ.

ವೀರಾಜಪೇಟೆ

ನೆಕ್ಸ್ಟ್ ಫ್ರೆಂಡ್ ಡೆಪ್ಯುಟೇಶನ್ ಹಾಗೂ ಸೆಂಟ್ ಡನ್‌ಸ್ಟನ್ ದಕ್ಷಿಣ ಕೊಡಗು ಉಪಸಮಿತಿಯ ಆಶ್ರಯದಲ್ಲಿ ಇಲ್ಲಿ ಒಂದು ಟೂರ್ನಮೆಂಟ್ ತಾ 18ರಲ್ಲಿ ನಡೆಯುವದೆಂದು ತಿಳಿಯ ಬರುತ್ತದೆ.

ಪೊನ್ನಂಪೇಟೆ

ಹೊದ್ದೂರು ಗ್ರಾಮದ ಚಟ್ಟಮಾಡ ಐನ್ ಮನೆಗೆ ಈ ತಾ. 11ರಲ್ಲಿ ಬೆಂಕಿ ಸ್ಪರ್ಶವಾಗಿ ಬೆಂದುಹೋಗಿ, ಸುಮಾರು 1,500 ರೂಪಾಯಿಗಳ ನಷ್ಟವಾಗಿದೆಯೆಂದು ವರ್ತಮಾನ.

ಹಿಂದೂ ದೇಶ.

ಕಲಕತ್ತಾ ಕಾರ್ಪರೇಶನದ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನವರು ಭಾಗ ವಹಿಸಬಾರದಾಗಿ ಕಾಂಗ್ರೆಸು ವರ್ಕಿಂಗ್ ಕಮಿಟಿಯವರು ನೇಮಿಸಿದ ಬಂಗಾಲ ಚುನಾವಣೆ ಮಂಡಳಿಯವರು ನಿರ್ಧರಿಸಿದ್ದಾರೆ.

ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ನೂಲುವ ಸ್ಪರ್ಧೆ ಏರ್ಪಡಿಸಲಾಗುವದು. ಉತ್ಕೃಷ್ಟ ನೂಲು ತೆಗೆಯುವವರಿಗೆ ಮಹಾತ್ಮರ ಹಸ್ತದಿಂದ ಬಂಗಾರದ ಪದಕಗಳನ್ನು ಕೊಡಲ್ಪಡುವವು.

ಸರಕಾರಿ ನೌಕರರುಗಳನ್ನು ಸಾರ್ವಜನಿಕ ಸಭೆಗಳನ್ನು ಕೊಡಬೇಕೆಂದು ಸಿಂಧ ಸರಕಾರದವರು ನಿರ್ಧರಿಸಿದ್ದಾರೆ. ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹನ ಕೊಡುವ ಉದ್ದೇಶದಿಂದಲೇ ಈ ಉಪಕ್ರಮ ಕೈಕೊಳ್ಳಲಾಗಿದೆಯಂತೆ.

ಮೈಸೂರು ಯುವರಾಜರಾಗಿದ್ದ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರು ಸಿಮೋನಿಯಾ ಕಾಯಿಲೆಯಿಂದ ತಾ 11ರಲ್ಲಿ ಬೊಂಬಾಯಿಯಲ್ಲಿ ಪರಂಧಾಮವನ್ನೈದಿದರು.

ಮುಂಬಯಿ ಪಟ್ಟಣ ಕೂಲಿಗಾರರು ಹೂಡಿದ ಮುಷ್ಕರ ದಿನದಿನಕ್ಕೆ ಬಲಿಯುತ್ತಿದೆ. ಬಹುತರ ಎಲ್ಲ ಗಿರಣಿಗಳು ಮುಚ್ಚಿದಂತಾಗಿವೆ. ಸ್ತ್ರೀಪುರುಷರು ಒಳ್ಳೇ ದಕ್ಷತೆಯಿಂದ ಪಿಕೆಟಿಂಗ್ ನಡೆಸಿರುವರು. ಈ ಕಷ್ಟದಿಂದಾಗುವ ಭಯಂಕರ ಹಾನಿಯನ್ನು ತಪ್ಪಿಸುವದಕ್ಕಾಗಿ ಕೂಡಲೆ ಒಪ್ಪಂದ ಮಾಡುವ ಪ್ರಯತ್ನಗಳು ನಡೆದಿವೆ.

ಬ್ರಿಟಿಷ್ ಸರಕಾರದ ಅಸಮಾಧಾನಕರ ಧೋರಣದ ನಿಮಿತ್ತ ಕಾಂಗ್ರೆಸ್ ಪಕ್ಷದವರು ಕೇಂದ್ರ ಅಸೆಂಬ್ಲಿಯ ಈ ಸಲದ ಅಧಿವೇಶನಕ್ಕೆ ಬಹಿಷ್ಕಾರ ಹಾಕಿರುವರಷ್ಟೆ. ಆದರೆ ಸದಸ್ಯತ್ವವನ್ನುಳಿಸಿಕೊಳ್ಳಲು ಒಂದು ದಿನದ ಮಟ್ಟಿಗೆ ಅವರು ಅಸೆಂಬ್ಲಿಗೆ ಹೋಗಬೇಕಾದ್ದರಿಂದ ಗಿನೇ ತಾರೀಕಿಗೆ ಸಭೆಗೆ ಹೋಗಿದ್ದರು. ಆದರೆ ಕಾರ್ಯಕಲಾಪಗಳಲ್ಲಿ ಯಾವದೇ ಬಗೆಯಿಂದ ಭಾಗ ವಹಿಸಲಿಲ್ಲ.

ಕಾಂಗ್ರೆಸ್ ಮಂತ್ರಿಮಂಡಳವು ರಾಜಿನಾಮೆ ಕೊಟ್ಟ ಬಳಿಕ ರಾಜಕೀಯ ಕಾರಣಕ್ಕಾಗಿ ಮತ್ತು ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗ ವಹಿಸಿದ್ದಕ್ಕಾಗಿ ಬಗೆ ಬಗೆಯ ಕಷ್ಟ ನಷ್ಟಗಳಿಗೊಳಗಾದವರ ಯಾದಿಯನ್ನು ಸಿದ್ಧ ಪಡಿಸಬೇಕೆಂದು ಎ. ಐ. ಸಿ. ಸಿ. ಜನರಲ್ ಸೆಕ್ರೆಟರಿಗಳು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಗೆ ಪರಿಪತ್ರ ಕಳಿಸಿದ್ದಾರೆಂದು ತಿಳಿಯುತ್ತದೆ.

ಕಾಂಗ್ರೆಸ್ ಸೋಶ್ಯಾಲಿಸ್ಟ್ ಪಕ್ಷದ ಜನರಲ್ ಸೆಕ್ರೆಟರಿಗಳಾದ ಶ್ರೀ. ಜಯಪ್ರಕಾಶ ನಾರಾಯಣರನ್ನು ಹಿಂದೂಸ್ಥಾನದ ಸಂರಕ್ಷಕ ಕಾಯಿದೆಯ ನ್ಯಾಯನೆರೆ ಹಿಡಿದಿದ್ದಾರೆ. ಕಾಮರೇಡ್ ಜಯಪ್ರಕಾಶರು ಸೆರೆ ಹಿಡಿಯಲ್ಪಡುವ ಮೊದಲು ಒಂದು ಪ್ರಕಟಣೆಯನ್ನು ಹೊರಡಿಸಿ ಕಾಂಗ್ರೆಸ್ಸಿನಲ್ಲಿ ಐಕ್ಯವನ್ನುಂಟುಮಾಡುವದಕ್ಕಾಗಿ ಪ್ರಯತ್ನಿಸಬೇಕೆಂದು ಉಗ್ರ ವಾದಿಗಳಿಗೆ ಬಿನ್ನವಿಸಿಕೊಂಡಿದ್ದಾರೆ.

ಡೆಲ್ಲಿ ಮುನ್ಸಿಪಾಲಿಟಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿರುವ ಶ್ರೀ ಆಸಾಫ್ ಅಲಿಯವರು ತಮ್ಮ ವಿರೋಧ ನಿಂತಿದ್ದ ಮುಸ್ಲಿಂ ಲೀಗಿನ ಪ್ರತಿನಿಧಿಯನ್ನು ಸೋಲಿಸಿ ಜಯವನ್ನು ಪಡೆದಿರುವರು. ಮುಸ್ಲಿಂ ಲೀಗಿನ ಒಂಬಾಲಕರನೇಕರು ತಮ್ಮ ಪ್ರತಿನಿಧಿಯ ಪರ ಕೆಲಸಮಾಡಿದರೂ ಆಸಾಫ್ ಅಲಿಯವರು ದೊಡ್ಡ ಬಹುಮತದಿಂದ ಆರಿಸಿ ಬಂದದ್ದು ಮುಸ್ಲಿಂ ಲೀಗಿನ ಬಗ್ಗೆ ಮುಸಲ್ಮಾನರಲ್ಲಿ ಅವಿಶ್ವಾಸ ಹುಟ್ಟಿದುದೆಂದು ಹೇಳಲಾಗುತ್ತಿದೆ.

ತಾ. 11ರಂದ ಸಹರಾನಪುರದಲ್ಲಿ ಅತಿವೃಷ್ಟಿಯಾಗಿ ಧಾರಾಕಾರವಾಗಿ ಮಳೆ ಸುರಿಯುತ್ತಿದೆಯಲ್ಲದೆ ಆಲಿಕಲ್ಲುಗಳೂ ಬೀಳುತ್ತಿವೆ. ಕಾಂಗ್ರೆಸ್ ನಗರದಲ್ಲೂ ಬೀದಿಗಳಲ್ಲೆಲ್ಲಾ ನೀರು ನಿಂತಿದ್ದಿವೆ. ವಿದ್ಯುಚ್ಛಕ್ತಿಯ ಸರಬರಾಯಿಯು ನಿಂತು ಹೋದ್ದರಿಂದ ಆ ದಿನ ರಾತ್ರಿ ನಗರವು ಅಂಧಕಾರದಲ್ಲಿ ಮುಳುಗಿತ್ತು. ಇನ್ನಾದರೂ ಗುಡಿಸಲುಗಳಿಗೇನೂ ಅಪಾಯವಾಗಿಲ್ಲ. ಮಳೆ ಇನ್ನೂ ನಿಂತಿಲ್ಲ. ಹೋದ ತಿಂಗಳಲ್ಲಿ ಈ ರೀತಿಯ ಮಳೆಯು ರಾಮಘಡದಲ್ಲಿ ಒಂದೆರಡು ಆಗಿರಲಿಲ್ಲ.

ಕಳೆದ ವಾರ ಬೆಂಗಳೂರಿನ ಪ್ರಸಿದ್ಧ ಅಡ್ವೊಕೇಟರಾಗಿದ್ದ ಶ್ರೀ ಮೋಕ್ಷಗುಂಡಂ ಕೃಷ್ಣಮೂರ್ತಿಯವರ ಕೊಲೆ ನಡೆಯಿತು. ಈ ಸಂದರ್ಭದಲ್ಲಿ ತನಿಖೆ ಕ್ರಮ ಜೋರಾಗಿ ನಡೆಯುತ್ತಿರುವದು. 5 ಜನರ ದಸ್ತಗಿರಿಯಾಗಿದೆ. ಬೆಂಗಳೂರಿನ ಪ್ರಸಿದ್ಧ ಬಿಜಿನೆಸ್‌ದಾರರಾದ ನಾರಾಯಣ ರೆಡ್ಡಿಯವರೂ, ಅಡ್ವೊಕೇಟರಾದ ವೆಂಕಟರಂಗಯ್ಯಂಗಾರ್ ಎಂಬವರು ವಶಕ್ಕೆ ತೊಗೊಳ್ಳಲ್ಪಟ್ಟಿದ್ದಾರೆ.

ಮಾರಾಟಕ್ಕಿದೆ.

ವೀರಾಜಪೇಟೆನಾಡು ವೈತಾಡಿ ಗ್ರಾಮದ ಒಕ್ಕಲಿಗರ ಸಿಂಗೇಗೌಡ್ರ ಮಗ ದೇವಣ್ಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ತುಳ ನಂ. 38ರ ಸಾಗಿನ ಸ. ನ. 150/1ರ 16.70 ಏಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ತ ಕೋಟೆನ 3. 90 ಯೇಕ್ರದ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕಿತ್ತ ಕೋಟನ .80 ಸೆಂಟಿನ ಪೈಕಿ .64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಏಕ್ರೆಯ ಜಾಡೆಯ ಪೈಕಿ 6.95 ಸೆಂಟನ್ನು ಮತ್ತು ಸ. ನ. 150/2ರ 0.03 ಸೆಂಟಿನ ಕರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸುದಾರರು ಹೆಚ್ಚಿನ ಹಕೀಕತ್ತನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತ ವ್ಯವಸಾಯಕ್ಕೆ ಫಲವತ್ತಾದ ಜಾಗೆ ಜಾಗಗಳು.

ವಿ. ಯಂನ್. ದೇವಣ್ಣ,
ವೈತಾಡಿಗ್ರಾಮ,
12-1 ಮೂರ್ನಾಡು.

FOR SALE.

Dressed rose wood logs by the road side. Sawn rose wood planks 3 feet in breadth and other dimensions available. Preference to whole sale bussiness.

For further Particulars apply to:-

P. M. Appiah,
Pattycol Estate,
4 Madapur P. O.

FOR SALE.

A small Coffee and Cardomum Estate With nurseries buildings etc. Close to Mercara town.

For further particulars Apply to:-

'X'
C/o. 'Kodagu' Ltd.
2 Mercara.

ಕೌನ್ಸಿಲು ಬಡ್ಜೆಟ್ ಮೀಟಿಂಗು.

(5 ನೇ ಪುಟದಿಂದ ಸಾಗಿದ್ದು)

ಅನಂತವಾದ ಧನ್ಯವಾದಗಳನ್ನು ಅರ್ಪಿಸಬೇಕಿದೆ.

ನನಗಿಂತ ಮೊದಲು ಮಾತನಾಡಿದ ಮಾನ್ಯ ಮೆಂಬರು ಶ್ರೀ ಸಿ. ವಿ. ಬೆಳ್ಳಿಯಪ್ಪನವರು ಬಡ್ಜೆಟ್ಟಿನಲ್ಲಿರುವ ಎಕ್ಸೈಸ ಉತ್ಪತ್ತಿಯನ್ನು ಕಂಡು ಸಂತೋಷಗೊಂಡಿರುವರು. ಈ ಬೆಳ್ಳಿಯಪ್ಪನವರೇ ಪ್ರಥಮತಃ ದೇಶದಲ್ಲಿ ಪಾನ ನಿರೋಧವು ನಡೆಯಬೇಕೆಂದು ಸೂಚಿಸಿದವರು. ಇಂದು ಇವರು ಕಾಂಗ್ರೆಸ್ ಪಕ್ಷದ ಮುಖಂಡರಾಗಿ ಎಕ್ಸೈಸ್ ಉತ್ಪತ್ತಿಯನ್ನು ಹೊಗಳುತ್ತಿರುವರು. ಹಿಂದಾಳಿದ ಸಂಗಡದವರ ಎಲ್ಲಗಾಗಿ ಈ ವರೆಗೆ ಯಾರೂ ಯಾವ ಕಾರ್ಯವನ್ನೂ ಮಾಡಿಲ್ಲ. ದೇಶದಲ್ಲಿ ಪಾನ ನಿರೋಧವನ್ನು ಸಂಧಿಸುವ ಬಗ್ಗೆ ಪ್ರಚಾರ ಕಾರ್ಯಕ್ಕಾಗಿ [illegible] ಮಾಡಿ [illegible] ಸ್ಥಾಪಿಸಿಬೇಕು. ದೇಶದ ವ್ಯವಸಾಯದ ಸ್ಥಿತಿ [illegible] ಶೋಚನೀಯವಾದಸ್ಥಿತಿಯಲ್ಲಿದೆ. ಈ ಸಂಸ್ಥೆಯು ಪುನರ್ರಚಿಸಲ್ಪಡಬೇಕು. ದೇಶೀಯ ರೈತರ ಸ್ಥಿತಿಯು ಅವರ್ಣನೀಯವಾಗಿದೆ. ಅವರಿಗೆ ಕೊಡುತ್ತಿರುವ ವ್ಯವಸಾಯ [illegible] ಸಾಲ [illegible] ವಾಗಿ ಹೆಚ್ಚಿಸಬೇಕು. ಕೇವಲ ಸಿವಿಲ ಪೋಲೀಸಿನಿಂದ ದೇಶದ ಆಡಳಿತವನ್ನು ನಡೆಸುವುದು ಅಸಾಧ್ಯ. ವಿದ್ಯಾಭಿವೃದ್ಧಿಗೆ ಬಡ್ಜೆಟ್ಟಿನಲ್ಲಿ [illegible] ಯು ಪ್ರೋತ್ಸಾಹವೂ ಕೊಡಲ್ಪಟ್ಟಿರುವದಿಲ್ಲ. ಯಾವುದೊಂದು ಸುಧಾರಣೆಯಾಗಲೀ, ಸಮಸ್ಯೆಯಾಗಲಿ ಜನರಿಂದ ಪ್ರತ್ಯಕ್ಷವಾಗಿ ತೀರ್ಮಾನಿಸಲ್ಪಡಬೇಕಿಲ್ಲ. ಒಂದು ವರ್ಗದವರಿಂದ ಇಲ್ಲವೆ ವ್ಯಕ್ತಿಗಳ ದೃಷ್ಟಿಯಿಂದ ತೀರ್ಮಾನಿಸಲ್ಪಡಕೂಡದು. ಸಹಕಾರ ಇಲಾಖೆಯು ಒಬ್ಬ ಜವಾಬ್ದಾರಿ ಉದ್ಯೋಗಸ್ಥನ ಹತೋಟಿಯಲ್ಲಿಡಲ್ಪಡಬೇಕು. ಇಂದಿನ ರೀತಿಯು ಅರ್ಥ ಪ್ರಯತ್ನಗಳಿಂದ ಈ ಇಲಾಖೆಯು ಅಭಿವೃದ್ಧಿಗೊಳ್ಳಲಾರದು.'

ಶ್ರೀ ಎಚ್. ಬಿ. ಸಿದ್ದಯ್ಯನವರು.

'ನಮ್ಮ ಮುಂದಿಡಲ್ಪಟ್ಟಿರುವ ಬಡ್ಜೆಟ್ಟಿನಲ್ಲಿ ಇಂದು ಉಳಿತಾಯವಿದೆ. ಈ ಮೊದಲು ಜನತಾ ಪ್ರತಿನಿಧಿಗಳಾದ ನಾವು ಸಭೆಯಲ್ಲಿ ಮಾಡಿಕೊಂಡ ಶಿಫಾರಸುಗಳಿಗೆ ಹಣದ ಅಭಾವವೆಂಬ ಉತ್ತರವೇ ಸಿಗುತ್ತಿದ್ದರು. ಆದರೆ ಇಂದು ಬಡ್ಜೆಟ್ಟು ಸಮಗ್ರವಲ್ಲಪಟ್ಟಿದೆ. ಹೀಗಿರಲು ಈ ವರ್ಷ ನಾವು ಸರಕಾರಕ್ಕೆ ಸೂಚಿಸಿದ ವಿಚಾರಗಳನ್ನೆಲ್ಲಾ ಕಸದ ಬುಟ್ಟಿಗೆ ಯಾವ ಕಾರಣದಿಂದ ಎಸೆದರೆಂಬುದು ಗೊತ್ತಾಗದು. ಜನತಾ ಪ್ರತಿನಿಧಿಗಳ ವಿಚಾರಸರಣಿಯ ಬಗ್ಗೆ ಸರಕಾರವು ತೋರಿಸುತ್ತಿರುವ ನಿರ್ಲಜ್ಜೆಯು ಉಪೇಕ್ಷೆಯು ನಮಗೆ ಆಶಾಭಂಗವನ್ನುಂಟುಮಾಡಿದೆ. ಯಾವದೊಂದು ಸರಕಾರವಾದರೂ ತನ್ನ ಉತ್ಪತ್ತಿಯ ಬಗ್ಗೆ ಪ್ರಜೆಗಳ ಹಿತಚಿಂತನೆಯನ್ನು ಪರಿಶೀಲಿಸಿ ವ್ಯರ್ಥ ಗೊಳಿಸದೆ ದೇಶದ ಅಭಿವೃದ್ಧಿಯನ್ನು ಯೋಚಿಸುವದು ಕರ್ತವ್ಯ. ಕೊಡಗಿಗೆ ಕೌನ್ಸಿಲನ್ನು ಪ್ರಥಮತಃ ಕೊಟ್ಟಾಗ ಜನತೆಯಲ್ಲಿ ಒಂದು ವಿಧದ ಆಶೆಯು ನೆಲೆಸಿತ್ತು. ಆದರೆ ಅದು ಇಂದು ಭಗ್ನವಾಗಿ ಈ ಕೌನ್ಸಿಲು ಒಂದ ಜನತೆಯ ಕೈಯಲ್ಲಿರುವ ಬಳೆ ಆನಿಯಂತಾಗಿದೆ. ಆದ್ದರಿಂದ ಇನ್ನಾದರೂ ಸರಕಾರವು ಯಥೋಚಿತ ವರ್ತಿಸಬೇಕಾಗಿದೆ. ಇಲ್ಲವೆ ಜನತಾ ಪ್ರತಿನಿಧಿಗಳಾದ ನಾವು ಕೌನ್ಸಿಲಿನ ನಿಷ್ಪ್ರಯೋಜಕತೆಯನ್ನು ಜನತೆಯಲ್ಲಿ ವಿವರಿಸಿ ನಮ್ಮ ಜವಾಬ್ದಾರಿಯನ್ನು ತಿಳಿಸಬೇಕಾಗುತ್ತದೆ. ವ್ಯವಸಾಯದ ವಿಚಾರ ಆಲೋಚಿಸಿದರೆ ಸರಕಾರವು ತೋರಿಸುತ್ತಿರುವ ಅನಾಸಕ್ತಿಯು ಸಹಿಸಲಸಾಧ್ಯವಾಗಿದೆ. ವ್ಯವಸಾಯ ಉತ್ಪತ್ತಿಗಳಿಗೆ ಬೆಲೆ ಇಲ್ಲದ ಪ್ರಯುಕ್ತವೂ, ಸರಕಾರದ ಈ ತರದ ನಿರ್ಲಕ್ಷ್ಯಭಾವನೆಯಿಂದಲೂ ರೈತನು ನಿಸ್ತೇಜಗೊಳಗಾಗಿದ್ದಾನೆ. ಕಳೆದ ನಾಲ್ಕೈದು ವರ್ಷಗಳಿಂದ ಮಳೆ ಇಲ್ಲದ ದೇಶವೇ ಕಷ್ಟಪರಂಪರೆಯಲ್ಲಿ ಸಿಲುಕಿ ತತ್ತರಿಸುತ್ತಿರುವಾಗ ಸರಕಾರವು ತನ್ನ ಕರಾಳ ಹಸ್ತದಿಂದ ಯಥಾ ವಿಧಿ ಕಂದಾಯ ವಸೂಲ್ಮಾಡುತ್ತಿರುವದು ಅಸಹನೀಯ. ಸರಕಾರವಾದರೂ ಕೋಟೆಗಾರನು ಗಿಡಾನ್ನು ಸಂಯಾಗಿ [illegible] ಆದುದರ ಬೆಳೆದ ಫಲವನ್ನು ಅವಕ್ಕೆ ಹಿಂಸೆಯಿಲ್ಲದ ಪಡೆಯುವ ರೀತಿ ರೈತನಿಗೆ ಸಕಲ ಸೌಕರ್ಯವನ್ನಿತ್ತು ಕಂದಾಯ ವಸೂಲುಮಾಡ [illegible] ಬೇಕು. [illegible] ವಿದ್ಯೆಯು ಮನುಷ್ಯನಿಗೆ [illegible] ಸುಳಿವಿಲ್ಲ [illegible] ವಿಸ್ತರಿಸುವ [illegible] ಷ್ಟಿಯಿಂದ ಕೊಡಗಿನ ರಾಜರುಗಳು ತಾವು ಮಠವನ್ನು ಸ್ಥಾಪಿಸಿಕೊಂಡನಂತರ [illegible] ಗಳು [illegible] ವಿದ್ಯಾಸಂಸ್ಥೆಯಾಗಿ [illegible] ಕೃಪೆ [illegible] ಯ [illegible] ವಿದ್ಯಾಸಂಸ್ಥೆಗಳನ್ನು ಸಾಧಿಸಿ [illegible] ರು. ಅದೇ ರೀತಿಯಲ್ಲಿ ನಮ್ಮ ಸರಕಾರವು ಶಿಕ್ಷಣ [illegible] ಫೀಜನ್ನು ಹೆಚ್ಚಿಸಿ ವಿದ್ಯೆಯನ್ನು ಜನರಿಗೆ ಅಪರ್ಣನೀಯವಾದ ಧಕ್ಕೆ ತಂದಿರುವರು. ವಿದ್ಯಾ ಪ್ರೋತ್ಸಾಹದ ಚಿನ್ಹೆಯೇ ಇಲ್ಲ. ಹೆಚ್ಚೇಕೆ? ಕೌನ್ಸಿಲು ಇಂದು ಕೇವಲ ಜನತೆಯ ಕಣ್ಣು ಕಟ್ಟುವ ಸಾಧನವಾಗಿ ಪರಿಣಮಿಸಿದೆ. ಸರಕಾರವಾದರೂ ಒಂದಡೆ ತನ್ನ ನಿರಂಕುಶಾಧಿಕಾರವನ್ನು ನಡೆಸುತ್ತಲೇ ಇದೆ.'

(ಮುಂದುವರಿಯುವದು)

ಚಾತ್ರಿ.

ನಕಲಿ ಕೌನ್ಸಿಲು.

ನನ್ನ ಅನುಭವ.

ಕೊಡಗು ನ್ಯಾಯವಿಧಾಯಕ ಸಭೆಯ ಬಡ್ಜೆಟ್ ಅಧಿವೇಶನವು ತಾ 13 ರಲ್ಲಿ ಪ್ರಾರಂಭವಾಯಿತು. ಕೊಡಗಿನ ಪ್ರಮುಖ್ಯ ಜನತಾ ಪ್ರತಿನಿಧಿ ಸಂಸ್ಥೆಯಿಂದೂ, ಅದಕ್ಕೆ ನಾವು ಮತವಿತ್ತು ಕಳುಹಿಸಿದ ಪ್ರತಿನಿಧಿಗಳು ನಮ್ಮ ಹಿತಚಿಂತನೆಯನ್ನು ಬಯಸುವರೆಂದೂ ಕುತೂಹಲದಿಂದ ಕೌನ್ಸಿಲಿನ ಅಧಿವೇಶನಕ್ಕೆ ಪ್ರೇಕ್ಷಕನಾಗಿ ನಾನು ಹೋಗಿದ್ದೆ. ಹಳ್ಳಿಗನಾದ ನಾನು ಇಂಥಾ ಒಂದು ಸಭೆಯನ್ನು ಕಾಣುವದು ಇದೇ ಮೊದಲು. ಎಲ್ಲಾ ಸದಸ್ಯರೂ ಮೇಲಾಗಿ ಅಧ್ಯಕ್ಷರೂ ಅಲಂಕಾರ ಮೂರ್ತಿಗಳಾಗಿ ಸೊಗಸಾದ ಕುರ್ಚಿಯ ಮೇಲೆ ಮಂಡಿಸಿದ್ದರು. ಹಳ್ಳಿಗನಾದ ನನಗೂ ಕೌನ್ಸಿಲ್ ಹಾಲಿನ ಪ್ರೇಕ್ಷಕರ ಗೆಲರಿಯಲ್ಲಿ ಒಂದು ಸೊಗಸಾದ ಕುರ್ಚಿ ಸಿಕ್ಕಿತು. ಇದು ನನ್ನ ಸೌಭಾಗ್ಯವೇ. ಇರಲಿ, ಸಭೆಯ ಕಾರ್ಯಕಲಾಪಗಳು ಪ್ರಾರಂಭವಾದವು. ಹಳ್ಳಿಗನಾದರೂ ಇಂಗ್ರೇಜಿ ಭಾಷೆಯ ಪರಿಚಯವು ನನಗಿದ್ದುದರಿಂದ ಮೀಟಿಂಗಿನ ಕಾರ್ಯಕಲಾಪಗಳನ್ನು ಗ್ರಹಿಸಲು ನನಗೆ ಕಷ್ಟವಾಗಲಿಲ್ಲ. ಅಧ್ಯಕ್ಷರ ಭಾಷಣವಾಗಿ ಬಡ್ಜೆಟ್ಟಿನ ಚರ್ಚೆಯು ಪ್ರಾರಂಭವಾಯಿತು. ಪ್ರಥಮತ ಎರಡು ಜನರು ಹೃದಯಂಗಮವಾದ ಹಾಗೂ ಭೋಧಪ್ರದವಾದ ಭಾಷಣಗಳನ್ನು ಮಾಡಿದರು. ಇವರಿಂದ ಹಳ್ಳಿಗನಾದ ನನಗೆ ನಮ್ಮ ಪ್ರತಿನಿಧಿಗಳೆಂದೆನಿಸಿದ ಈ ಸದಸ್ಯರು ಹ್ಯಾಗೂ ನಮ್ಮ ಹಿತಕ್ಕಾಗಿ ಪ್ರಯತ್ನಿಸುವರೆಂಬ ಭಾವನೆಯು ಹುಟ್ಟಿತು. ನಂತರ ನಮ್ಮ ನಾಡಿನ ಪ್ರತಿನಿಧಿಯಾದ ಶ್ರೀ ಯಂ. ಯಂ. ಬೆಳ್ಳಿಯಪ್ಪನವರು ಭಾಷಣ ಮಾಡಲು ಎದ್ದು ನಿಂತರು. ನಮ್ಮ ನಾಡಿನ ಕಷ್ಟಸುಖಗಳನ್ನು ನಿವೇದಿಸುವರೆಂಬ ಆತುರದೃಷ್ಟಿಯಿಂದ ಭಾಷಣವನ್ನು ಕೇಳಲು ಕಾತುರನಾಗಿದ್ದೆನು. ಪ್ರಥಮತಃ ಚೀಫ ಕಮಿಷನರನ್ನು ಕೂತಗನ್ನು ಬಿಟ್ಟು ಹೋಗುವ ಬಗ್ಗೆ ಅನ್ನಿಸಿಲ್ಲೆಂದು [illegible] ಶೋಕ ಹಾಗೂ ಮುಂದಿನ ದೇಶದ ಆಡಳಿತ ಹೇಗೆ ನಡೆಯಬೇಕೆಂಬ ಕೆಲವು ಇವುಗಳನ್ನು ಅವರು ಸೂಚಿಸಿದರು. ಆಗಲೇ ಬಡ್ಜೆಟ್ ಭಾಷಣದಲ್ಲಿ ಈ ರೀತಿ ಯಾವ [illegible] ಎಂದು ನನಗನಿಸಿತು. ಸ್ವಲ್ಪ ಸಮಾಧಾನ [illegible]. ಇನ್ನು [illegible] ಮಾತ ಡಿದ [illegible] ನಮ್ಮ ಪ್ರತಿನಿಧಿ ಬೆಳ್ಳಿಯಪ್ಪನವರಿಂದ [illegible] ಕಾಂಗ್ರೆಸ್ ಪಕ್ಷದವರ [illegible] ಆರಂಭವಾಯಿತು. ನಾನು ಕಾಂಗ್ರೆಸಿನವನಲ್ಲದ ಹಳ್ಳಿಗನಾದರೂ ಏನೋ ಒಂದು ಮಾನಸಿಕ ಖಿನ್ನತೆಯು ನನಗೆ ಕಾಂಗ್ರೆಸಿನವನಲ್ಲದ ವಿದ್ಯಾವಂತರಾದ ನಮ್ಮ ಪ್ರತಿನಿಧಿಯಾದ ಈ ಮಹಾನುಭಾವರು ಈ ರೀತಿ ಯಾಕೆ ವರ್ತಿಸುತ್ತಾರೆಂದು ನನಗೆ ತಿಳಿಯದಾಯಿತು. ನಮ್ಮ ನಾಡಿನ ಪ್ರತಿನಿಧಿಯಾದ ಪ್ರಯುಕ್ತ ಅವರು ಚುನಾಯಿತ ದೇಶೀಯ ಮೆಂಬರೆಂದು ನನಗೆ ತಿಳಿದಿದೆ. ಬೇರೆ ಅವರನ್ನು ತಿಳಿಯದವನಾವನಾದರೂ ಅವರ ಭಾಷಣದಿಂದ ಅವರು ಸರಕಾರಿ ಮೆಂಬರನೆಂದು ಹೇಳಬೇಕಾಗುವದು. ಅವರ ಭಾಷಣದ ವೈಖರಿ ಹಾಗೂ ಮಧ್ಯ ಮಧ್ಯದಲ್ಲಿ ಅವರು ಸೇರಿಸುವ 'ಸರ್' ಎಂಬ ಶಬ್ದದ ಮೂದಲಿ ಇವನ್ನು ನೋಡುವಾಗ ನಿರುದ್ಯೋಗದಿಂದ ನರಳುವ ಯುವಕನು ಉದ್ಯೋಗವನ್ನು ಕಾಂಕ್ಷಿಸಿ ಮೇಲಧಿಕಾರಿಗಳನ್ನು ಭೇಟಿಯಾಗುವ ಸಂದರ್ಭದಲ್ಲಿ ಆತನು ವರ್ತಿಸುವ ರೀತಿ ನನ್ನ ಯೋಚನೆಗೆ ಬಂತು. ಹೀಗಿದ್ದ ನಮ್ಮ ಪ್ರತಿನಿಧಿ ಬೆಳ್ಳಿಯಪ್ಪನವರ ಮನಸ್ಸು ಕ್ಷಣ ಚಪಲವಾಗಿ ಅಮೋಘ ನನಿರೋಧದ ಸಂಚಾಲಕರಂತೆ ಭಾಷಣ ಮಾಡತೊಡಗಿದರು. ನಾನು ಹಳ್ಳಿಯವನಾದರೂ ಒಮ್ಮೊಮ್ಮೆ ಗಜೆಟನ್ನು ನೋಡುವ ಅಭ್ಯಾಸವಿದೆ. ಕಳೆದೊಂದು ಮೀಟಿಂಗಿನಲ್ಲಿ ಕಾಂಗ್ರೆಸಿನ ಮುಂದಾಳಾದ ಶ್ರೀ ಸಿ. ಐ. ಬೆಳ್ಳಿಯಪ್ಪನವರು ತಂದ ಪಾನನಿರೋಧದ ಠರಾವನ್ನು ತೀವ್ರವಾಗಿ ವಿರೋಧಿಸಿದ ಶ್ರೀ ಯಂ. ಯಂ. ಬೆಳ್ಳಿಯಪ್ಪನವರ ಅಂದಿನ ಆ ಭಾಷಣವು ಇಂದು ಒಡನೇ ನನ್ನ ಕಣ್ಣು ಮುಂದೆ ನಿಂತಂತಾಯಿತು. ನನಗೆ ಇವರ ಅಂತರ್ಯ ತಿಳಿಯಲಾರದಾಯಿತು. ಸ್ವಲ್ಪ ಯೋಚಿಸಿದಾಗ ಟ್ಟ ಗೊತ್ತಾಯಿತು. ಅಂದು ನಮ್ಮ ಪ್ರತಿನಿಧಿ ಬೆಳ್ಳಿಯಪ್ಪನವರು ಠರಾವಿಗೆ ವಿರೋಧಿಸುವಾಗ ಚುನಾವಣೆ ಆಗ ತಾನೇ ಮುಗಿದಿತ್ತು. ಆದ್ದರಿಂದ ಇಂಥಾ ಠರಾವುಗಳು ಪಾಸಾಗುವದು ಅವರಿಗೆ ರುಚಿಸಲಿಲ್ಲ. ಆದರೆ ಇಂದು ಮುಂದಿನ ಚುನಾವಣೆಯು ಸಮೀಪಿಸುತ್ತಿದೆಯಲ್ಲವೇ? ಜನತೆಯ ಹಿತಚಿಂತಕನೆಂದು ಅನ್ನಿಸಿಕೊಂಡು ಚುನಾವಣೆಯಲ್ಲಿ ಜಯಭೇರಿಯನ್ನು ಹೊಡೆಸಿಬಿಡಬೇಕೆಂಬ ಮಹತ್ವಾಕಾಂಕ್ಷೆಯು ಅವರಲ್ಲಿ ಇಂದು ಮೂಡ ಹತ್ತಿರಬೇಕು. ಅದೇ ಇಂದು ಅವರು ಪಾನನಿರೋಧದ ಬೆಂಬಲ ಮಾತಾಡಿ ಜನತೆಯನ್ನು ತನ್ನ ನೋಗಿನಿಂದ ಮರುಳು ಮಾಡಲು ಯತ್ನಿಸಿದ್ದಾರೆ. ಭೇಷ್, ಎಂದಿನ ಚಾಣಾಕ್ಷತೆ ಇದು. ಜನತಾ ಪ್ರತಿನಿಧಿಯಾಗಿ ಕೌನ್ಸಿಲಿನಲ್ಲಿ ಕೂರುವದು ಸಾರ್ಥಕವಾಯಿತಲ್ಲವೆ? ಒಬ್ಬರ ಇವರ ಬಡ್ಜೆಟ್ ಭಾಷಣದಲ್ಲಿ ಈ ರೀತಿಯ ತನ್ನ ಕಾರ್ಯಸಾಧನೆಯೇ ತುಂಬಿತ್ತು. ಇನ್ನು ಇವರಲ್ಲೇ ಏನು? ಬಾಯಾರು ಮೆಂಬರುಗಳು ಎಲ್ಲಿಗೆ ಹೋಗಬೇಕು? ನನಗೆ ನಾಡಲ್ಲಿ ಬಾಯಾರುಗಳಲ್ಲಿ ತುಂಬಾ ಅಭಿಮಾನ ನಮ್ಮಂಥ ಹಳ್ಳಿಗರಿಗೆ ಸಿದ್ದಿಯ ನೂರು [illegible] ಭರವಸ ಆದರೆ ನನ್ನ ಈ ಅತಿ [illegible] ವೊನ್ನೆ [illegible] ಗೊಂಡವು. ಹಳ್ಳಿಗರ ಕಷ್ಟಗಳನ್ನು ಸರಕಾರಕ್ಕೆ ನಿವೇದಿಸುವ ಬಾಲು ಇದೆ ಸದಸ್ಯರ ಭಾಷಣಗ [illegible] ಮೆಂಬರುಗಳ ಇನ್ನ ರೀತಿ ಇವರ [illegible] ಚಾತುರ್ಯ ಪ್ರದರ್ಶನವನ್ನು ಮಾಡುತ್ತಿದ್ದರು. ಹೀಗೆ ಪರಸ್ಪರರು ವಿರೋಧಿಸಿಕೊಂಡು, ವರ್ತಿಸುವದನ್ನು ಕಂಡು 'ಎರಡಾಳಿಗೆ ಗುದ್ದಾಟ, ಮೂರನೆಯವನಿಗೆ ಲಾಭ' ವೆಂಬ ನಾಣ್ಣುಡಿ ನನಪಿಗೆ ಬಂತು. ವಿದ್ಯಾವಂತರೆಂದು ಯೋಗ್ಯರೆಂದು, ಹಾಗೂ ಜನತಾ ಪ್ರತಿನಿಧಿಗಳೆಂದು ಸಾರಿಯುವ ಈ ಅಲಂಕಾರದ ಮೂರ್ತಿಗಳು ತಮ್ಮಲ್ಲಿ ಐಕ್ಯತೆಯನ್ನು ಸಾಧಿಸಿಕೊಳ್ಳಲಾರದೆ ವರ್ತಿಸುತ್ತಿರುವದು ಖೇದಾಸ್ಪದವಾದ ಸಂಗತಿ. 'ಹಳ್ಳಿಗನಾದ ನನಗೆ ನಮ್ಮ ಗೋಷ್ಠಿ ಯಾಕೆ? ಆ ನಿರಕ್ಷರ ಕುಕ್ಷಿ ನಮ್ಮನ್ನು ಠೀಕಿಸುವದೇ'? ಎಂದು ನಮ್ಮ ಪ್ರತಿನಿಧಿಗಳು ನನ್ನ ಮೇಲೆ ಸಿಡಿಮಿಡಿಗೊಂಡಾರು. ಆದರೆ ಹಳ್ಳಿಗರ ಬುದ್ಧಿ ಸಾಮರ್ಥ್ಯವನ್ನು ಪ್ರದರ್ಶಿಸುವ ಕಾಲ ಹತ್ತಿರ ಬಂದಿದೆ. ಹಳ್ಳಿಗರಿಗೆ ತಮ್ಮ ಹಿತವನ್ನು ಸಾಧಿಸಿಕೊಳ್ಳಬಹುದಾದ ಸಂದರ್ಭವು ಸನ್ನಿಹಿತವಾಗುತ್ತಿದೆ. ಆದ್ದರಿಂದ ನಾನು ದೇಶೋಪಯೋಗಕ್ಕಾಗಿ ಜನ್ಮವೆತ್ತಿರುವ ಕೌನ್ಸಿಲಿನಲ್ಲಿ ಒಂದು ದಿನದಲ್ಲಿ ಪಡೆದ ಅನುಭವವನ್ನು ನನ್ನ ಸಹೋದರ ಹಳ್ಳಿಗರಿಗೂ ತಿಳಿಸುವ ದೃಷ್ಟಿಯಿಂದ ಈ ಲೇಖನಿ ಬರೆದ್ದಾಗಿದೆ. ನಾನು ಹಳ್ಳಿಗನಾದ ಪ್ರಯುಕ್ತ ಸಂತೆ ಕೇರಿಲ್ಲಿ ಒಂದು ದಿನಕ್ಕೆ ಹೆಚ್ಚು [illegible] ಲ್ಲ. ಈ ಮೇಲೆ ಒಡೆದಿದ್ದು ನನ್ನ ಪ್ರಥಮ ದಿನದ ಅನುಭವ. ನಂತರದ ದಿನಗಳಲ್ಲಿ ಏನೇನು ನಡೆದವೊ, ಬಲ್ಲವರಾರು?

'ಹಳ್ಳಿಗ'

ರೈತರಲ್ಲಿ ಬೇರೂರಿರುವ ಅಜ್ಞಾನವನ್ನು ಹೋಗಲಾಡಿಸಿ ಅವರ ಜೀವನವು ಸುಲಭವಾಗಿ ಜರುಗುವಂತಾಗಲು ಸಾರ್ವತ್ರಿಕ ಪ್ರಚಾರ ದೃಷ್ಟಿಯಿಂದ ಈಚೆಗೆ ಅನೇಕ ಉತ್ತಮ ಸಲಹೆಗಳು ದೊರೆಯುತ್ತಿರುವುದು ನಮ್ಮ ರೈತರ ಶ್ರೇಯೋಭಿವೃದ್ಧಿಯ ಶುಭಚಿಹ್ನೆಯಾಗಿದೆ. ಗೋರೂರಿನ ಗ್ರಾಮಸೇವಾ ಸಂಘದವರು ಗ್ರಾಮನೈರ್ಮಲ್ಯ ವಿಚಾರದಲ್ಲಿ ಪಾಯಿಖಾನೆಯ ಗೊಬ್ಬರ ವಿಷಯದಲ್ಲಿ ರೈತರಿಗೆ ತಿಳುವಳಿಕೆಯನ್ನು ಕೊಡುವ ಸಾರ್ವಜನಿಕ ಪ್ರಕಟಣೆಗಳನ್ನು ಹೊರಡಿಸುತ್ತಿರುವುದೂ, ರೈತರ ಮೇಲ್ಮೆಗಾಗಿ ನಾನಾ ರೀತಿಯಲ್ಲಿ ನಾನಾ ರೂಪದಲ್ಲಿ ದುಡಿಯುತ್ತಿರುವುದೂ ದೇಶದ ಏಳಿಗೆಗಾಗಿ ಅತ್ಯುತ್ತಮವಾದ ಕೆಲಸಗಳೆಂದು ಹೇಳಬೇಕಾಗಿದೆ.

ರೈತರನ್ನು ಅಜ್ಞಾನವು ಎಷ್ಟರಮಟ್ಟಿಗೆ ಆವರಿಸಿಕೊಂಡಿದೆಯೆಂಬುದಕ್ಕೆ ಈ ಸಂದರ್ಭದಲ್ಲಿ ಕಣ್ಣಾರೆ ಕಂಡ ಒಂದು ದೃಶ್ಯವನ್ನು ಹೇಳದೆ ತೀರದಾಗಿದೆ.

ಕಣ್ಣಾರೆ ಕಂಡ ಸುದ್ದಿ.

ಹಳ್ಳಿಗಾಡಿನವರು "ಶಕ್ಕಸು" ಎಂಬುದನ್ನು ಅರಿಯರು. ಒಂದು ಹಾಳು ಗೋಡೆಯ ಮರೆಯಲ್ಲೋ, ಒಂದು ಮುರಿ ಜಾಲಿ ಗಿಡದ ಮರೆಯಲ್ಲೋ, ಊರಂಚಿನ ಸಂಧ್ಯೆಯೊಳಗೂ ಸರಿ ನಿರ್ಭೀತಿಯಿಂದ, ನಿರ್ಲಜ್ಜೆಯಿಂದ ತಮ್ಮ ದೇಹಬಾಧೆಯನ್ನು ನೀಗಿಸಿಕೊಂಡುಬಿಡುವರು. ಗಂಡಸಿಗಂತೂ ಈ ವಿಚಾರದಲ್ಲಿ ಎಗ್ಗೇ ಇಲ್ಲ. ಎಲ್ಲಿ ಕೂತರೆ ಅಲ್ಲೇ. ಅಷ್ಟೇ ಅಲ್ಲ, ಪಾಯಖಾನೆಗೆ ಹೋಗಿಬಂದ ಮೇಲೆ ತನ್ನ ಹೆಂಡತಿ ಅಥವ ಹೆಣ್ಣು ಮಗಳ ಕೈಯಿಂದಲೋ "ಮುಟ್ಟಿಕೊಳ್ಳೋಕೆ ಎರಡು ನೀರು ಬಿಡಮ್ಮ" ಅಂತ ನೀರನ್ನು ಹಾಕಿಸಿಕೊಂಡು ಅವಳೆದುರಿಗೇ ತೊಳೆದುಕೊಳ್ಳುತ್ತಾನೆ. ಈಗಲೂ ಈ ಅಸಹ್ಯಕರವಾ[illegible]ಲ್ಲಿದೆ. ಈ ಬೀಕಾರ ಇಲ್ಲಿಗೆ ಸಾಕು. ಇದ್ದುದರಲ್ಲಿ ಹೆಂಗಸರು ಲಜ್ಜೆಯಿಂದ ಕೂಡಿದವರು. ಮನೆಗಳ ಸಮೀಪದಲ್ಲಿ ಪಾಯಖಾನೆಗೆ ಅನುಕೂಲವಿಲ್ಲದಿರುವ ಪ್ರಯುಕ್ತ, [illegible] ಕೊಂಡು ಕತ್ತಲು ಮುಸುಕಿದೊಡನೆಯೇ, ಊರುಸುತ್ತ ಓಣಿಗುಂಟ ಹೋಗಿಬಿಡುತ್ತಾರೆ. ಬೆಳಕು ಹರಿದೊಡನೆಯೇ ತಾವೇ ಎಮ್ಮೆಗಳನ್ನು ಹೊಡೆದುಕೊಂಡು ಓಣಿ ಉದ್ದಕ್ಕೂ ಬಿಟ್ಟುಕೊಂಡು ಮೇಯಿಸುತ್ತಾರೆ. ಕೆಲವು ಹಸುಗಳಿಗೂ ಈ ಅಭ್ಯಾಸವು ರೂಢಿಯಾಗಿರುವುದಾಗಿ ಕೇಳಿದ್ದೇನೆ. ಇದಕ್ಕೆ ರೈತನು ಅಜ್ಞಾನಾಂಧಕಾರದಲ್ಲಿ ಮುಳುಗಿದ್ದಾನೆಂದು ಹೇಳೋಣವೇ? ನಾರಕ ಕೂಪದಲ್ಲಿ ಮುಳುಗಿದ್ದಾನೆಂದು ಹೇಳೋಣವೇ? ಈ ಗೋವುಗಳ ಕ್ಷೀರವನ್ನು ಅಮೃತೋಪಾದಿಯಲ್ಲಿ ಮಾನವನು, ಪಂಚಗವ್ಯ ಪ್ರಾಯಶ್ಚಿತ್ತ ಮೊದಲುಗೊಂಡು ತನ್ನ ನಿತ್ಯಜೀವನದಲ್ಲಿ ಯಥೇಚ್ಛವಾಗಿ ಉಪಯೋಗಮಾಡುವನು. ಇಂತಹ ಅಮೃತದಿಂದ ಮಾನವನು ಪರಿಶುದ್ಧನಾಗುವುದು ಎಂತೋ ತಿಳಿಯಲಾಗದು. ರೈತನ ಮೌಢ್ಯತೆ ಈ ಪರಮಾವಧಿಯನ್ನು ಮುಟ್ಟಿದೆ–

ಮನುಷ್ಯನ ಗೊಬ್ಬರವು
ಕೃಷಿಗೆ ಅತ್ಯಂತ ಸಾಧಕವಾಗುವುದು.
ವಿದ್ಯಾವಂತರು ಬದಲಾವಣೆ ಹೊಂದಬೇಕು.

ಬಾಯಾಡಂಬರ ಸಾಕು.

ಈ ಉತ್ಕಟ ಪರಿಸ್ಥಿತಿಯಲ್ಲಿ ಬಾಯಿಮಾತಿನಲ್ಲಿ ತಿಳಿಸುವ ಯಾವ ಕೆಲಸವನ್ನಾದರೂ ಮಾಡುವ ಸ್ಥಿತಿಯಲ್ಲಿಲ್ಲ, ಇಂದು ನಮ್ಮ ರೈತ. ಪ್ರತಿಯೊಬ್ಬ ರೈತನೂ ತಾನೇ ಸ್ವತಃ ಮಾಡಿಕೊಳ್ಳುವಂತಹ ಮಾರ್ಗಗಳನ್ನು ಅವನ ತಿಳುವಳಿಕೆಗೆ ತರುವುದಲ್ಲದೆ ನವನಾಗರೀಕರೆನಿಸಿಕೊಂಡ ನಾವೂ ಕೂಡ ಅವನಲ್ಲಿ ಬೆರೆತು ಕಲೆತು ಹೀನ ಕೆಲಸವೆಂದು ಗಣಿಸಲ್ಪಟ್ಟಿರುವ ಇಂತಹ ವಿಚಾರಗಳಲ್ಲಿ ಬಾಯಾಡಂಬರವನ್ನು ಬಿಟ್ಟು ಅವನ ಕಣ್ಣಿಗೆ ಕಟ್ಟುವಂತೆ ಅವನ ಮನಸ್ಸು ಒಲಿಯುವಂತೆ ಮೇಲ್ಪಂಕ್ತಿಯಾಗಿ ನಿಂತ ಹೊರತು, ಸಹನಾತೀತವಾದ ಎಲ್ಲೆ ಮೀರಿದ ರೈತನ ಮೌಢ್ಯತೆ ಖಂಡಿತವಾಗಿಯೂ ತೊಲಗುವುದಿಲ್ಲ. ಹಳ್ಳಿಗಳ ಸ್ಥಿತಿಗತಿಗಳು ಬದಲಾವಣೆಯಾಗುವುದಿಲ್ಲ. ಹಳ್ಳಿಗಳಿಗೆ ಬಡಿದಿರುವ ಜಡ್ಡು ಹೋಗುವುದಿಲ್ಲ.

ಪುರಾತನ ರೈತ.

ಪೂರ್ವದಲ್ಲಿ ರೈತರು ಪಾಯಿಖಾನೆಯಿಂದ ಊರಿನ ಹವಾ ಕೆಡದಂತೆ ತಕ್ಕ ಏರ್ಪಾಡು ಮಾಡಿಕೊಂಡಿದ್ದುದಲ್ಲದೆ ತಮ್ಮ ಮುಖ್ಯ ಕಸುಬಾದ ಭೂಮಿಯನ್ನು ಸಾಗುವಳಿ ಮಾಡಿ ಬಿತ್ತಿ ಬೆಳೆಯುವ ಬೇಸಾಯದಲ್ಲಿ ಅದನ್ನು ಉಪಯೋಗ ಮಾಡಿಕೊಳ್ಳದೆ ಈ ಶ್ರೇಷ್ಠವಾದ ಗೊಬ್ಬರವನ್ನು ಕಳೆದುಕೊಳ್ಳುತ್ತಿರಲಿಲ್ಲ. ಈ ಗೊಬ್ಬರದ ಉಪಯೋಗ ರೈತರಿಗೆ ಹೊಸದಲ್ಲ. 'ಹೇಲು ಹೊಗೆ ತಾಳ ಹಾಕು' (ಹೊಗೆ ಸೊಪ್ಪಿನ ಪೈರು) ಮತ್ತು 'ಕಬ್ಬು ಹೊಲ ಹೇಲೋಕೆ ಬಲು ಸಲೀಸು' ಎಂಬ ಗಾದೆಗಳನ್ನು ಮಾಡಿಯೇ ಇಟ್ಟಿದ್ದಾರೆ. [illegible] ರಾಜ್ಯಾನಲ್ಲಿಯೂ ಮುಖ್ಯ, ನಾಗಪುರ [illegible] ಉತ್ತರ [illegible] ಪಾಯಖಾನೆಯ ಗೊಬ್ಬರದ ಉಪಯೋಗವನ್ನೇ ನಮ್ಮ ರೈತರು ಮರೆತಿದ್ದಾರೆ. ರೈತರಿಗೆ ಈಗ ಅದರ ಸಾರಾಂಶವನ್ನು ತಿಳಿಸಲು ಹೋದರೆ ನಾವೇ ಪರಿಹಾಸ್ಯಕ್ಕೀಡಾಗುವ ಪರಿಸ್ಥಿತಿ ಉಂಟಾಗಿದೆ.

ರೈತನ ಮೊದಲಿನ ಕರ್ತವ್ಯ.

ರೈತನ ಜೀವನವು ಸುಲಭವಾಗಿ ಜರುಗುವಂತಾಗಬೇಕಾದರೆ ಹೊಲದ ಬೆಳೆ ಒಂದರಿಂದ ಆಗದು. ಇವುಗಳ ಜೊತೆಗೆ ಚಿಲ್ಲರೆ ಬೆಳೆಗಳಲ್ಲಿಯೇ ರೈತನಿಗೆ ಕಾಸು ಹುಟ್ಟುವುದು. ಪುಡಿಕಾಸು ಇದ್ದರೇನೇ ಉಪ್ಪು, ಮೆಣಸಿನಕಾಯಿ, ಅಡಕೆಲೆ, ಸೀಮೆಯೆಣ್ಣೆ ಮತ್ತು ಅಂದಾಯ–ಇವುಗಳಿಗೆ ಸಲೀಸಾಗಿ ಕೊಡುವುದಕ್ಕಾಗುವುದು. ರೈತನು ಚಿಲ್ಲರೆ ಬೆಳೆಯನ್ನು ತೆಗೆಯಲು ಇನ್ನೂ ಹೆಚ್ಚು ಪ್ರಚಾರ ಕಾರ್ಯ ನಡೆಯಬೇಕಾಗಿದೆ. ಚಿಲ್ಲರೆ ಬೆಳೆಗೆ ಮನುಷ್ಯನ ಗೊಬ್ಬರ ಒಳ್ಳೆ ಸಾರವತ್ತಾದ ಗೊಬ್ಬರ. ಆಲೂಗಡ್ಡೆ, ಕೋಸು, ಸೀಮೆಬದನೆ, ಚಪ್ಪರ ಬದನೆ (ಟೊಮೊಟೊ) ಹೊಗೇತಾಳ, ಕಲ್ಲಂಗಡಿ ಮತ್ತು ಮುಸುಕಿನ ಜೋಳ–ಇವುಗಳೇ ಮೊದಲಾದ ಪೈರುಗಳ ಬುಡಕ್ಕೆ ಮನುಷ್ಯನ ಗೊಬ್ಬರವನ್ನು ಕೊಟ್ಟುಬಿಟ್ಟರಂತೂ ಗಿಡಗಳು 'ವಂಟಿನ ದಂಡ್ನಂಗೆ' ಎದೆಮಟ್ಟ ಬೆಳೆಯುತ್ತವೆ. ಸಾಕಷ್ಟು ಗೊಬ್ಬರ ಇದ್ದರೆ ಅರ್ಧ ಫಸಲು ರೈತನ ಮನೆಯಲ್ಲಿದ್ದಂತೆ ಲೆಕ್ಕ. ಆದ ಕಾರಣದಿಂದ ಆರೋಗ್ಯದೃಷ್ಟಿಯಿಂದಲೂ, ನೈರ್ಮಲ್ಯ ದೃಷ್ಟಿಯಿಂದಲೂ, ಆರ್ಥಿಕ ದೃಷ್ಟಿಯಿಂದಲೂ ಪಾಯಿಖಾನೆಯನ್ನು ಯಾವ ವಿಧದಲ್ಲಿಯೂ ಪೋಲುಮಾಡದಂತೆ ನೋಡಿಕೊಳ್ಳಬೇಕಾದುದು ರೈತನ ಮೊಟ್ಟಮೊದಲಿನ ಕೆಲಸ.

ಗೊಬ್ಬರ ಸಂಗ್ರಹ ವಿಧಾನ.

ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಪ್ರತಿಯೊಬ್ಬ ರೈತನೂ ತನ್ನ ಮನೆ ಕಸ, ಕಡ್ಡಿ, ಕೊಪ್ಪೆ ಮೊದಲಾದುವುಗಳನ್ನು ಕೂಡಿಡಲು ತನ್ನದೇ ಆದ ಒಂದು 'ತಿಪ್ಪೆ'ಯನ್ನು ಮಾಡಿಕೊಂಡಿರುತ್ತಾನೆ. ಇದಕ್ಕೆ ಸೇರಿದಂತೆಯೋ ಅಥವಾ ಮನೆಯ ಹಿತ್ತಲಿನಲ್ಲಿಯೋ ಎಲೆ ಕೊಟ್ಟನಿಂದ (ಸನಿಕೆಯಿಂದ) ಆದರ ನಾಲಿಗೆಯಷ್ಟಗಲ ಮಾತ್ರ 'ಹರಿ ಒಳೆ' ಇದ್ದಷ್ಟುಂದ 4–5 ಅಡಿ ಉದ್ದಕ್ಕೂ ಎರಡಡಿ ಆಳವಾಗಿಯೂ ಗುಳಿಯನ್ನು ತೋಡುವರು. ತೋಡಿದ ಮಣ್ಣನ್ನು ಎರಡು ಪಾರ್ಶ್ವ ಉದ್ದಕ್ಕೂ ನೆಲದ ಮೇಲೆ ಹಾಕುವುದು. ಈ ಗುಳಿಯಲ್ಲಿ ಪಾಯಖಾನೆ ಮಾಡಿ [illegible] ಗುಳಿಯ ಮಣ್ಣನ್ನೇ ಒಂದು ಒಡಕು ಓಡಿನಿಂದ ತಳ್ಳಿಕೊಂಡು ಅದರ ಮೇಲೆ ಎಳೆಯುವುದು. ಒಲೆ ಬೂದಿಯನ್ನು ಗುಳಿಯಲ್ಲಿ ಚೆಲ್ಲಿದರೆ ದುರ್ವಾಸನೆ [illegible] ಮಾತ್ರ ಇರಬೇಕು. ಗುಳಿ ಮೇಲೆ ಮೂತ್ರ ನೀರು ಬೀಳಬಾರದು. ಪಕ್ಕಕ್ಕೆ ಬಂದು ನೀರು ಮುಟ್ಟಿಕೊಳ್ಳಬೇಕು. ಗುಳಿಯಲ್ಲಿ ನೀರು ಬಿದ್ದರೆ ಕೆಟ್ಟ ವಾಸನೆ ಹುಟ್ಟುವುದು–

ಒಂದು ಗುಳಿ ತುಂಬಿದ ಮೇಲೆ ಪಕ್ಕದಲ್ಲೇ ಮತ್ತೊಂದನ್ನು ತೆಗೆಯಬಹುದು. 6–7 ತಿಂಗಳ ವೇಳೆಗೆ ಈ ಗೊಬ್ಬರವು ಮಣ್ಣಿನೊಡನೆ ಬೆರೆತು ವಾಸನೆ ಇಲ್ಲದಾಗಿ ಹೆಚ್ಚು ಕಡಿಮೆ, ಬೂದಿಯ ಬಣ್ಣಕ್ಕೆ ತಿರುಗಿರುತ್ತದೆ. ತಿಪ್ಪೆಗೊಬ್ಬರದ ಜೊತೆಯಲ್ಲಿಯೋ ಇದನ್ನೂ ಹೊಲಗಳಿಗೆ ಸಾಗಿಸಬಹುದು. ಪುನಃ ಈ ಗುಳಿಗಳೇ ಉಪಯೋಗಕ್ಕೆ ಬರುತ್ತವೆ. ಹಿತ್ತಲಲ್ಲೆ ಗುಳಿ ತೋಡಿದ್ದರೆ ಅದರ ಮೇಲೆಯೇ ಪೈರನ್ನು ತೆಗೆಯಬಹುದು.

ಒಂದು ವೇಳೆ 'ಹೊರಗಡೆ' ಹೋಗುವಾಗ ಮರೆ ಬೇಕಾದರೆ ಹಳ್ಳಿಗಳಲ್ಲಿ ಅವನ್ನೂ ಸುಲಭವಾಗಿ ಮಾಡಿಕೊಳ್ಳಬಹುದು. ಹಂಗರಿಕೆ ಕಡ್ಡಿ, ಭೂತಾಳೆಗಿಡ್ಡೆ, ಈಚಲುಗರಿ ಮತ್ತು ತೆಂಗಿನ ಸೋಗು–ಇವುಗಳಲ್ಲಿ ಯಾವುದನ್ನಾದರೂ ಸರಿಯೆ ತೆಗೆದು ಒಂದು 2–3 ಬಿದಿರು ಪಟ್ಟಿ ಆ ಸರಿಯಿಂದ ತಡಿಕೆಗಳನ್ನು ಮಾಡಿಕೊಳ್ಳಬಹುದು. ಈಚಲ ದಪ್ಪ ತಡಿಕೆ ಇದಕ್ಕಿಂತಲೂ ಹೆಚ್ಚು ಭದ್ರ ಮತ್ತು ಹೆಚ್ಚು ಕಾಲ ಕೂಡಿಬರುವುದು. ಹಳ್ಳಿಗಾಡಿನಲ್ಲಿ ಈಚಲ ಸೋಗಿನಿಂದ ಚಾಪೆ ನೇಯುವವರು ಸೋಗನ್ನು ಜವರಿಕೊಂಡು ಉಳಿದ ದಬ್ಬೆಯಿಂದ ತಡಿಕೆಗಳನ್ನು ನೇಯುವರು. ಈ ತಡಿಕೆಗಳು ಒತ್ತಾಗಿ ದಪ್ಪವಾಗಿರುವುದರಿಂದ ಮನೆಗಳಲ್ಲಿ ಅಡ್ಡಗೋಡೆಯ ಬದಲಾಗಿ ಇವುಗಳನ್ನು ವಿಶೇಷವಾಗಿ ಉಪಯೋಗಿಸುವುದುಂಟು. ಈ ತಡಿಕೆಗಳನ್ನು ಮರೆಯಾಗಿಯೂ ಉಪಯೋಗ ಮಾಡಬಹುದು.

ಮೇಲ್ಕಂಡ ಕ್ರಮವು ಬಡವನಹಾಳು ಕೇಂದ್ರದಲ್ಲಿ 10–12 ವರ್ಷಗಳ ಹಿಂದಿನಿಂದಲೇ ಆಚರಣೆಯಲ್ಲಿದ್ದು ಆ ಪ್ರಾಂತ್ಯದ ಜನರ ತಿಳುವಳಿಕೆಗೆ ಬರುತ್ತಲಿವೆ.

ಜಮೀನಿನ ಅಭಿವೃದ್ಧಿಗೆ ಅತ್ಯುತ್ತಮವಾದ ಗೊಬ್ಬರವನ್ನು ಮೇಲ್ಕಂಡ ರೀತಿಯಲ್ಲಿ ರೈತನು ತಾನಾಗಿಯೇ ಒದಗಿಸಿಕೊಳ್ಳಬಹುದು. ರೈತನ ಭೂಮಿಯ ಫಲವತ್ತಾಗುವುದಕ್ಕೆ ಮನುಷ್ಯನ ಗೊಬ್ಬರವು ಅತ್ಯಂತ ಸಾಧಕವಾಗುವುದು.

ಇದೆಲ್ಲವನ್ನೂ ನಮ್ಮ ರೈತನು ಸಾಂಗವಾಗಿ ಕೈಗೊಳ್ಳಬೇಕಾಗಿದ್ದರೆ, ಮೊಟ್ಟಮೊದಲು ಹಳ್ಳಿಗಳಲ್ಲಿರತಕ್ಕ ವಿದ್ಯಾವಂತರ ಮನೋಭಾವ ಬದಲಾವಣೆ ಹೊಂದಿ, ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ಪ್ರತಿಯೊಂದು ಕಾರ್ಯದಲ್ಲಿಯೂ ಅವರು ಆದರ್ಶರಾಗಿ ಮುಂದೆ ಬಾರದ ಹೊರತು ನಾವು ಎಷ್ಟೇ ಬೊಬ್ಬೆ ಇಟ್ಟರೂ ರೈತನಿಗೆ ನಮ್ಮ ಕೂಗು ಮುಟ್ಟುವುದಿಲ್ಲ.

'ವಿ. ಕ.'

ಎತ್ತರ ಬೆಳೆಯಬೇಕಾದರೆ 16 ಗಂಟೆಗಳ ವರೆಗೆ ಮಲಗಿ.

ಕಾನ್ಸಾಸ್ ನಗರದ ಕಾಲೇಜಿನ ಹುಡುಗಿಯೊಬ್ಬಳ ದೃಷ್ಟಾಂತ ಕುತೂಹಲ ಕೆರಳಿಸಿದ ವಿಷಯವಾಗಿದೆ. ಕ್ಯಾಥರಿನ್ ಎಂಬ ಈ ಹುಡುಗಿಯು ವಿಮಾನದಲ್ಲಿ ಹಾರಲು ಅನುಮತಿ ಕೇಳಿದಳು. ಅವಳು ಒಂದು ಇಂಚು ಉದ್ದ ಕಡಿಮೆ ಎಂದು ಅಧಿಕಾರಿಗಳು ತಿರಸ್ಕರಿಸಿದರು. ತಲೆಕೂದಲನ್ನು ಒಂದು ಇಂಚು ಎತ್ತರಿಸಿ ಅಧಿಕಾರಿಗಳ ಕಣ್ಣಿಗೆ ಮಣ್ಣೆರಚಲು ಮಾಡಿದ ಪ್ರಯತ್ನವೂ ಸಫಲವಾಗಲಿಲ್ಲ. ಆಮೇಲೆ ಮೂರು ವಾರಗಳ ವರೆಗೆ ಕಾಲ ಚಟುವಟಿಕೆಗಳಲ್ಲಿ ನಡೆದು ಅರ್ಧ ಇಂಚು ಎತ್ತರ ಹೆಚ್ಚಿಸಿಕೊಂಡಳು. ಅರ್ಧ ಇಂಚು ಇನ್ನೂ ಬೇಕು; ಇದು ಕೂಡ 16 ಗಂಟೆಯೊಳಗೆ ಆಗಬೇಕು, ಮತ್ತೆ ಅವಕಾಶವೇ ಇಲ್ಲ. ಸರಿ, ವೈದ್ಯರಿಗೆ ಪೀಡೆ ಕೊಟ್ಟಳು. '16 ಗಂಟೆಗಳ ವರೆಗೆ ಹಾಸಿಗೆಯಲ್ಲಿ ಸುಮ್ಮನೆ ಮಲಗಿಕೋ' ಎಂದರು ವೈದ್ಯರು. 16 ಗಂಟೆ ಕಳೆದು ಪರೀಕ್ಷೆಗೆ ಹೋದಾಗ ಅವಳು ಬೇಕಾದಷ್ಟು ಎತ್ತರವಾಗಿದ್ದಳಂತೆ!

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	48,470	0	0
ಜಮಾಬಂದ ರೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ಕ್ರಿಸ್ಟ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆಲ್ಲ ಹೆಚ್ಚು ಸಾಲ ಕೊಡಲ್ಪಟ್ಟದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಿಗಳಿಗೆ ನೂರಕ್ಕೆ ಶಾಲಿಯಾನ 3½ ಪರವಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಿಗಳಿಗೆ ನೂರಕ್ಕೆ ಶಾಲಿಯಾನ 4ರ ಪರವಲ್ಲಿಯೂ ತಾ. 1–9–1937ರಿಂದ ಬಡ್ಡಿ ದೊರೆಯುತ್ತೆ.

ತಾ. 1–10–1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಕ್ರಿಸ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಕ್ರಿಸ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1–4–1937ರಲ್ಲಿ ನಿಲ್ಲಿಸಿದ್ದನ್ನು ಪುನಃ ತಾ. 1–8–38ರಿಂದ ಹೊಂದಿಕೊಳ್ಳುವಂತೆ ಶುರುಮಾಡಿಸಲಾಗಿತ್ತು. ಆದರೆ ಪುನಹ ತಾ. 29–7–39ರಿಂದ ತಾತ್ಕಾಲಿಕ್ಕ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಕುಂಬ್ಯಾಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಸಿ. ದೇವಯ್ಯನವರು.
ಸೆಕ್ರೆಟರಿ:—ಮಿ. ಕೆ. ಸುಬ್ರಮಣ್ಯಯ್ಯನವರು ಎಂ. ಎಲ್. ಸಿ.

ತಾ. 1–3–1940

ಕೊಡಂದೇರ ಡಿ. ಮಾಚಯ್ಯ,
L.D Sc. (COLLEGE OF DENTISTRY)
EX-SUPERVISOR, LAKHMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (35) ನವೀನ ರೀತಿಯ ಚಿಕಿತ್ಸೆ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

[illegible]

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಡಬ್ಬಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವುದು. ಡಬ್ಬಿಗೆ 1 ರೂ.

ಗಣೇಶ ರಾಮಚಂದ್ರ ಶೆಟ್. ಮತ್ತು ಕಂಪೆನಿ,
(52-12) ಗಿರಗಾಂವ್, ಮುಂಬಯಿ ೪,

ನೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ–ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜನ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ದಾಖಾ ಮತ್ತು ಅಮಲ್ದಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಯ್‌ಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ **ಕಡಿಮೆ ಫೀಸಿನಲ್ಲಿ** ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಟ್ಯುಟೋರಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
52—39 **Mercara, and Virajpet.**

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ
'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ
ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್
ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:–ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ **ಔಷಧಾಲಯದಲ್ಲಿ ರೋಗಿಗಳಿಗೆ** ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್)
52-5 **ಮೆಡಿಲ್ ಪ್ರಾಕ್ಟೀಶನರ್, ವೀರಾಜಪೇಟೆ.**

Printed & Published by P. I. Belliappa, at 'Kodagu' Press Mercara for 'Kodagu' Ltd

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಸಿ. ಬಿ. ಬೆಳ್ಳಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೨೨—೩—೧೯೪೦.

ಸಂಪುಟ ೧೯] [ಸಂಚಿಕೆ ೪೩.

ಭದ್ರತೆ! ವಿಶ್ವಾಸಾರ್ಹತೆ!! ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ ಭದ್ರತೆಯನ್ನು ಪದೇ ಪದೇ ತೋರಿಸಿ, ಠೇವಣಿದಾರರಿಗೆ ಸುರಕ್ಷಿತತೆಯನ್ನು ಕೊಟ್ಟು,
ಸರ್ವರ ವಿಶ್ವಾಸಕ್ಕೆ ಪಾತ್ರವಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಬೇಂಕಿಂಗ್ ಸಂಸ್ಥೆ.

ನಿರಖು ಠೇವಣಾತಿ ಒಂದು ವರ್ಷಕ್ಕೆ 3½% (ಸಾಲಿಯಾನ ಸೇಕಡ)
ಬಡ್ಡಿ ದರಗಳು: ಎರಡು ವರ್ಷಕ್ಕೆ } 4% ,,
ಮೂರು ವರ್ಷಕ್ಕೆ }

ಒಂದು ವರ್ಷಕ್ಕಿಂತ ಕಡಿಮೆ ವಾಯಿದೆಯ, ಅಲ್ಪಾವಧಿಯ, ಠೇವಣಾತಿಗಳನ್ನು
ಅವಧಿಗೆ ತಕ್ಕ ಬಡ್ಡಿ ದರಗಳಲ್ಲಿ ಪಡೆಯಬಹುದು.

[illegible]
15 [illegible]
ಸೇವಿಂಗ್ಸ್ ಬೇಂಕ್ ಡಿಪಾಜಿಟ್ಸ್: [illegible] 5,000 [illegible]
ಸಾಲಿಯಾನ ಸೇಕಡಾ 2½ ಸಲೆಯಲ್ಲಿ ಬಡ್ಡಿ [illegible]
ಕರೆಂಟ್ [illegible]

[illegible], ಮಂಗಳೂರು ಮುಂತಾದ
ಅನೇಕ ಸ್ಥಳಗಳ ಮೇಲೆ ಡ್ರಾಪ್ಟುಗಳನ್ನೂ ಚೆಕ್ಕುಗಳನ್ನೂ ಕೊಡಬಹುದು; ವಸೂಲಿಯಿಸಲೂ ಬಹುದು.

52-13 ಚಿನ್ನಾಭರಣಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ,—ದ. ಕನ್ನಡ.
(ಬ್ರಾಂಚ್: ಕುಮುಟ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

52-19

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಲಿ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು.
ಮ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ—ಮ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ. ಸಿ. ಟಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮ. ಅಜ್ಜವಾಡ ಮಾಡಪ್ಪನವರು ಮತ್ತು ಮ. ಜಿ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಪೂಚಯ್ಯನವರು.

ಸೋಮವಾರಪೇಟೆ—ಮ. ಕೆ. ಮೊಗಪ್ಪನವರು

ನಾಪೋಕ್ಲು—ಮ. ಬಲ್ಲಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ. ಎಚ್. ಎಂ. ಕೃಷ್ಣಪ್ಪನವರು

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಬಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— **(ದಿನಕ್ಕೆ ಮೂರು ವೇಳೆ)**
ಗರ್ಭಿಣಿಯರಿಗೆ:— **(ದಿನಕ್ಕೆ ಮೂರು ವೇಳೆ)**
ಮಕ್ಕಳಿಗೆ:— **(ವೈದ್ಯರ ಸಲಹೆಯಂತೆ)**

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ಸಂಜುಂಡೇಶ್ವರ, ಎಲ್. ಎ. ಎಂ. ಎಸ್
(52-24) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು—ಕೆ. ರಾಮಕೃಷ್ಣರಾವ್,
ವೀರಾಜಪೇಟೆ (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಸ್ಥಾಪಿತವಾದ್ದು 1907.

ಹೆಡ್ ಆಫೀಸು—ಅಜ್ಮೀರ್.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—**ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.**

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚು ವಿವರಗಳಿಗೂ, ಏಜೆಂಟರ್ಷಿಪ್ ಷರತ್ತುಗಳಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ಸಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀರಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚನಾಪಳ್ಳಿ ಮತ್ತು ನೆಲ್ಲೂರು.

52-8

20. ಕಾಗದ ತಯಾರಿಸುವಿಕೆ, ಕೊಜೆಮಣ್ಣಿನಿಂದ ಭಕ್ಷ್ಯಪಾತ್ರೆಗಳನ್ನು ತಯಾರಿಸುವಿಕೆ, ಎಣ್ಣೆ ತಯಾರಿಸುವಿಕೆ ಮತ್ತು ನೂಲುವ ಕಾಮಗಾರಿಗಳನ್ನು ಕೈಕೊಳ್ಳುವುದಕ್ಕೆ ಕೊಡಗಿನಲ್ಲಿ ಸಂಘಗಳನ್ನು ಸ್ಥಾಪಿಸುವ ಉದ್ದೇಶ್ಯ ಬ್ಯಾಂಕಿನಿಂದಾಗಲಿ, ಸರಕಾರದಿಂದಾಗಲಿ ಇಬ್ಬರನ್ನು ತರಬೇತಿಗೆ ಕಳುಹಿಸಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆಯೆಂತ ಮೆ. ಬಿ. ಡಿ. ಗಣಪತ್ತಿಯವರು ಸೂಚಿಸಿದರು.

ಮೆ. ಕುಟ್ಟಂಡ ಕಾರ್ಯಪ್ಪನವರು ಅನುಮೋದಿಸಿದರು.

ಮೆ. ಐ. ಪಿ. ಕಾರ್ಯಪ್ಪನವರು ಬ್ಯಾಂಕಿನಿಂದಾಗಲೀ ಎಂಬುದನ್ನು ತೆಗೆಯಬೇಕಾಗಿ ಉಪ ಠರಾವು ತಂದರು.

ಮೆ. ಗಳಾದ ಸಿ. ಕೆ. ಗಣಪತಿಯವರು, ಕೆ. ಕೆ. ಬೆಳ್ಯಪ್ಪನವರು, ಪಿ. ಜಿ. ಐಯ್ಯಪ್ಪನವರು ಉಪ ಠರಾವಿಗೆ ಒತ್ತಾಸೆಯಾಗಿ ಮಾತನಾಡಿದರು. ಈ ವಿಷಯದಲ್ಲಿ ದೀರ್ಘ ಚರ್ಚೆಯಾದ ನಂತರ ಉಪ ಠರಾವುಗಳನ್ನು ಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು.

21. ಪ್ರತಿಯೊಂದು ಯೂನಿಯನ್ನಿಗೂ ಒಬ್ಬೊಬ್ಬ ಸುಪರ್‌ವೈಜರನ್ನು ನೇಮಿಸತಕ್ಕದ್ದೆಂದು ಈ ಸಭೆಯು ತೀರ್ಮಾನಿಸುತ್ತದೆಯೆಂತ ಮೆ. ಹೆಚ್. ಯಂ. ಪುಷ್ಪಣ್ಣನವರು ಸೂಚಿಸಿದರು.

ಮೆ. ಅಜ್ಜಮಾಡ ಮಾದಪ್ಪನವರು ಅನುಮೋದಿಸಿದರು.

ಮೆ. ಪಿ. ಜಿ. ಐಯ್ಯಪ್ಪನವರು ವಿರೋಧಿಸಿ 'ಸಾಧ್ಯವಾದಷ್ಟು ಮಟ್ಟಿಗೆ' ಯೆಂದು ಸೇರಿಸಬೇಕೆಂದು ತಿದ್ದುಪಡಿ ಠರಾವನ್ನು ತಂದರು. ಸೂಚಕರ ಒಪ್ಪಿಗೆಯಿಂದ 'ಸಾಧ್ಯವಾದಷ್ಟು ಮಟ್ಟಿಗೆ'ಯೆಂದು ಸೇರಿಸಿದ ನಂತರ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

22. ಸುಪರ್‌ವಿಜನ್ ಫಂಡಿನ ಚಂದಾವನ್ನು ಕೆಲವು ಸಂಘಗಳಿಂದ ಮಿತಿ ಇಟ್ಟು ಉಳಿದವುಗಳಿಂದ ಮಿತಿಯಿಲ್ಲದೆಯೂ ವಸೂಲು ಮಾಡುತ್ತಿರುವುದನ್ನು ನಿಲ್ಲಿಸಬೇಕು ಎಂಬದಾಗಿ ಮೆ. ಕುಂಞಾಪಂಡ ಚಿಣ್ಣಪ್ಪನವರು ಸೂಚಿಸಿದರು.

ಮೆ. ಉದಿಯಂಡ ಮಾಚಯ್ಯನವರು ಅನುಮೋದಿಸಿದರು.

ಮೆ. ಪಿ. ಜಿ. ಐಯ್ಯಪ್ಪನವರು ವಿರೋಧಿಸಿದರು. ಸೂಚಕರು ಠರಾವನ್ನು ವಾಪಸು ತೆಗೆದುಕೊಂಡರು.

23. ಸುಪರ್‌ವೈಜರರ ಸೈಕಲ್ ಎಲೋವೆನ್ಸ್‌ನ್ನು ಮತ್ತು ಸಂಬಳದಲ್ಲಿ ಶೇಕಡ 25 ರಷ್ಟು ಕಮ್ಮಿ ಮಾಡಿ, ಸಂಘದ ಮೇಲುಸ್ತುವಾರಿಕೆ ತೆರಿಗೆಯನ್ನು ಶೇಕಡ 0-12-0 ಆಣೆಯಿಂದ 0-8-0 ಆಣೆಗೆ ಇಳಿಸಬೇಕೆಂದು ಈ ಸಭೆಯು ತೀರ್ಮಾನಿಸುತ್ತದೆಯೆಂಬ ಠರಾವನ್ನು ಸೂಚಕರಾದ ಮೆ. ಪಳಂಗಂಡ ನಂಜಪ್ಪನವರು ವಾಪಸು ತೆಗೆದುಕೊಂಡರು.

24. ಈಗ ಇರುವ ಸುಪರ್‌ವಿಜನ್ ಫಂಡಿನ ದರವನ್ನು 0-12-0 ಆಣೆಯಿಂದ 0-8-0 ಆಣೆಗೆ ಇಳಿಸತಕ್ಕದ್ದು ಎಂಬ ಠರಾವನ್ನು ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸುವುದಕ್ಕೆ ಮೊದಲು

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ

21 ನೇ ವಾರ್ಷಿಕ ಮಹಾ ಸಭೆ.

0-8-0 ಆಣೆಯ ಬದಲು 0-10-0 ಆಣೆ ಎಂಬದಾಗಿ ತಿದ್ದುಪಡಿ ಮಾಡಿ ಠರಾವನ್ನು ಸೂಚಿಸಿದರು.

ಮೆ. ಹಬಿಬುಲ್ಲಾ ಖಾನ್‌ರವರು ಅನುಮೋದಿಸಿದರು.

ಮೆಗಳಾದ ಯಸ್. ಯನ್. ರಾಮಚೆಟ್ಟಿಯವರು, ಕೆ. ಸಿ. ಕರುಂಬಯ್ಯನವರು ಮತ್ತು ಮುಂಡೀರಯಡ ಕುಟ್ಟಪ್ಪನವರು ಠರಾವನ್ನು ವಿರೋಧಿಸಿದರು.

ಅಧ್ಯಕ್ಷರು ಸುಪರ್‌ವಿಜನ್ ಫಂಡಿನ ಆದಾಯವೆಚ್ಚದ ಪಟ್ಟಿಯನ್ನು ವಿವರಿಸಿದರು. ಮೆ. ಕೊತಂಡ ಗಣಪತ್ತಿಯವರು ಸುಪರ್‌ವೈಜರುಗಳ ಸಂಖ್ಯೆಯನ್ನು ಕಮ್ಮಿ ಮಾಡಬೇಕೆಂದು ಹೇಳಿ ಠರಾವನ್ನು ಒತ್ತಾಸೆಮಾಡಿದರು.

ಠರಾವನ್ನು ಸೂಚಕರು ವಾಪಸು ತೆಗೆದುಕೊಂಡರು.

25. ಸುಪರ್‌ವಿಜನ್‌ಫಂಡು ವಸೂಲಾತಿಯನ್ನು 12 ಆಣೆಯಿಂದ 9 ಆಣೆಗೆ ಇಳಿಸತಕ್ಕದೆಂಬದಾಗಿ ಮೆ. ಮುಬ್ಬುಮ್ಮಂಡ ಈರಪ್ಪನವರು ಸೂಚಿಸಿದರು.

ಅನುಮೋದಕರು ಇಲ್ಲದ್ದರಿಂದ ಠರಾವು ಬಿದ್ದುಹೋಯಿತು.

26. ಬ್ಯಾಂಕಿನ ಮಹಾ ಸಭೆಯ ವರದಿಯ ಯಥಾ ನಕಲನ್ನು ಬ್ಯಾಂಕಿಗೆ ಸಂಯೋಜನೆಯಾದಂಥಾ ಸಂಘಗಳಿಗೆಲ್ಲಾ ಮಹಾಸಭೆ ಕಳೆದು 15 ದಿನಗಳೊಳಗೆ ಕಳುಹಿಸತಕ್ಕದ್ದು ಎಂತ ಮೆ. ಪಳಂಗಂಡ ನಂಜಪ್ಪನವರು ಸೂಚಿಸಿದರು.

ಮೆ. ತೋಟಂಬೈಲು ಅಪ್ಪಣ್ಣನವರು ಅನುಮೋದಿಸಿದರು.

ಬ್ಯಾಂಕಿನ ಸೆಕ್ರಟರಿಯವರು '15 ದಿವಸದೊಳಗೆ ಎಂಬುದರ ಬದಲು 'ಒಂದು ತಿಂಗಳು' ಎಂಬದಾಗಿ ತಿದ್ದುಪಡಿ ಠರಾವು ತಂದರು.

ಸೂಚಕರು ತಿದ್ದುಪಡಿಗೆ ಒಪ್ಪಿದರು.

ಮೆ. ನಾಯಡ ಚಿಣ್ಣಪ್ಪನವರು ಮತ್ತು ಕೊತಂಡ ಗಣಪತ್ತಿಯವರು ಠರಾವಿಗೆ ವಿರೋಧಿಸಿದರು.

ಮೆ. ಗಳಾದ ಸಿ. ಯಂ. ಉತ್ತಪ್ಪನವರು ಮತ್ತು ಮಡೆಯಂಡ ದೇವಯ್ಯನವರು ಠರಾವಿಗೆ ಒತ್ತಾಸೆಯಾಗಿ ಮಾತಾಡಿದರು.

ತಿದ್ದುಪಡಿಯಾದ ಠರಾವನ್ನು ಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು.

27. 'ಸ್ಟೋರುಸಂಘಗಳನ್ನು ಇನ್ಸ್‌ಪೆಕ್ಟರು ಆಡಿಟ್ ಮಾಡಿದ್ದಕ್ಕೆ ಆಡಿಟ್ ಫೀಜು ಕೊಡಲೇಬೇಕಾಗಿರುವುದರಿಂದ ಆ ಬಗ್ಗೆ ಸುಫರ್‌ವಿಜನ್‌ಫಂಡು ವಸೂಲು ಮಾಡಕೂಡದು' ಎಂಬದಾಗಿ ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸಿದರು.

ಮೆ. ಕೆ. ಜಿ. ಕುಟ್ಟಪ್ಪನವರು ಅನುಮೋದಿಸಿದರು.

'ಸ್ಟೋರು ಸಂಘಗಳು ಆಡಿಟ್ ಫೀಜು ಮತ್ತು ಸುಫರ್‌ವಿಜನ್ ಫಂಡು ಕೊಡಬೇಕಾಗಿರುವದರಿಂದ ಆಡಿಟ್ ಫೀಜನ್ನು ವಜಮಾತಬೇಕು' ಎಂಬದಾಗಿ ಮೆ. ಕೆ. ಸಿ. ಕರುಂಬಯ್ಯನವರು ಉಪ ಠರಾವು ತಂದರು.

ಮೆ. ಐ. ಪಿ. ಕಾರ್ಯಪ್ಪನವರು ಅನುಮೋದಿಸಿದರು. ಸೂಚಕರಾದ ಮೆ. ಕೆ. ಕೆ. ಬೆಳ್ಯಪ್ಪನವರು ಉಪ ಠರಾವಿಗೆ ಒಪ್ಪಿಕೊಂಡರು.

ಠರಾವು ಓಟಿಗೆ ಹಾಕಲಾಗಿ ಸರ್ವಸಮ್ಮತದಿಂದ ಪಾಸಾಯಿತು.

28. 'ಈಗ ಕರೆಯುವ ಸುಫರ್‌ವೈಜರ್ ಎಂಬುದರ ಬದಲು ಕೋ-ಆಪರೇಟಿವ್ ಸಬ್ ಇನ್ಸ್‌ಪೆಕ್ಟರು ಎಂದು ಕರೆಯತಕ್ಕದ್ದು' ಎಂಬದಾಗಿ ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸಿದರು.

ಮೆ. ಚೌರೀರ ಅಪ್ಪಯ್ಯನವರು ಅನುಮೋದಿಸಿದರು.

ಮೆ. ಐ. ಪಿ. ಕಾರ್ಯಪ್ಪನವರು ಠರಾವನ್ನು ವಿರೋಧಿಸಿದರು.

ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

29. ಕೋ-ಆಪರೇಟಿವ್ ಸುಪರ್‌ವೈಜರುಗಳಿಗೆ ಒಂದೇ ತರಹದ ಯೂನಿಫಾರಂ ಕೊಡಬೇಕು. ಅಲ್ಲದೆ ಕೂರ್ಗ್ ಕೋ-ಆಪರೇಟಿವ್ ಸರ್ವಿಸ್ ಎಂಬ ಬ್ಯಾಜನ್ನು ಸಹ ಕೊಡತಕ್ಕದ್ದು' ಎಂಬದಾಗಿ ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸಿದರು.

ಮೆ. ಕೊತಂಡ ಗಣಪತ್ತಿಯವರು ಅನುಮೋದಿಸಿದರು.

ಮೆ. ಗಳಾದ ಕೆ. ಸಿ. ಕರುಂಬಯ್ಯನವರು, ಪಳಂಗಂಡ ನಂಜಪ್ಪನವರು ತೋಟಂಬೈಲು ಅಪ್ಪಣ್ಣನವರು ಮತ್ತು ಚೆಂಬಾಂಡ ಮಾದಪ್ಪನವರು ವಿರೋಧಿಸಿದರು.

ಮೆ. ಪಿ. ಯಂ. ಉತ್ತಪ್ಪನವರು ಯೂನಿಫಾರಂಮಿನ ಬದಲು ಸಹಕಾರ ಬ್ಯಾಜ್ಜನ್ನು ಕೊಡುವದು ಒಳ್ಳೆಯದೆಂತ ಸೂಚಿಸಿದರು.

ದೀರ್ಘ ಚರ್ಚೆ ನಡೆದ ನಂತರ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

30. ಬ್ಯಾಂಕಿನಿಂದ ಸಂಘಗಳಿಗೆ ಕೊಡುವ ಸಾಲದ ಬಡ್ಡಿಯನ್ನು ಶೇಕಡ 6¼ ಯಿಂದ 6ಕ್ಕೆ ಇಳಿಸತಕ್ಕದ್ದು' ಎಂಬದಾಗಿ ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸಿದರು.

ಮೆ. ಕೆ. ಯಂ. ಸುಬ್ಬಯ್ಯನವರು ಅನುಮೋದಿಸಿದರು.

ಮೆ. ಗಳಾದ ಕೆ. ಸಿ. ಕರುಂಬಯ್ಯನವರು, ಪಳಂಗಂಡ ನಂಜಪ್ಪನವರು ಮತ್ತು ಪಟ್ಟಡ ಉತ್ತಪ್ಪನವರು ಬಡ್ಡಿ ಕಮ್ಮಿಮಾಡುವದು ಮಹಾಸಭೆಯು ತೀರ್ಮಾನಿಸುವ ವಿಷಯವಲ್ಲ. ಬೈಲಾ ಮೇರೆ ಡೈರೆಕ್ಟರುಗಳಿಗೆ ಬಿಡಬೇಕಾಗಿದೆ ಎನ್ನುವ ರೀತಿಯಾಗಿ ಮಾತಾಡಿ ಠರಾವನ್ನು ವಿರೋಧಿಸಿದರು

ಮೆ. ನಡಿಕೇರಿಯಂಡ ಸೋಮಯ್ಯನವರು ಶೇಕಡ 6¼ ಯಿಂದ 6⅛ಕ್ಕೆ ಇಳಿಸಬೇಕಾಗಿ ತಿದ್ದುಪಡಿ ಠರಾವು ತಂದರು.

ಮೆ. ಕೇತಿಯಂಡ ಕುಟ್ಟಪ್ಪನವರು ಅನುಮೋದಿಸಿದರು.

ಸೂಚಕರು ಈ ವಿಚಾರವನ್ನು ಡೈರೆಕ್ಟರುಗಳ ತೀರ್ಮಾನಕ್ಕೆ ಬಿಡಲು ಒಪ್ಪಿ ಠರಾವನ್ನು ವಾಪಸು ತೆಗೆದುಕೊಂಡರು.

31. ಬೇರೆ ಕಡೆಯಲ್ಲಿ ನಡೆಯುವ ಸಹಕಾರ ಕಾನ್ಫರೆನ್ಸಿಗೆ ಬ್ಯಾಂಕಿನ ಡೈರೆಕ್ಟರುಗಳನ್ನೇ ಡೈರೆಕ್ಟರುಗಳು ಆರಿಸಿ ಕಳುಹಿಸುವವರ ಬದಲು ದೇಶದಲ್ಲಿ ಸಹಕಾರದಲ್ಲಿ ಅನುಭವವಿರುವವರನ್ನು ಮಹಾಸಭೆಯಲ್ಲಿ ಚುನಾಯಿಸತಕ್ಕದ್ದು' ಎಂಬದಾಗಿ ಮೆ. ಕಂಬೀರಂಡ ಬೆಳ್ಯಪ್ಪನವರು ಸೂಚಿಸಿದರು.

ಮೆ. ಕೇತಿಯಂಡ ಕುಟ್ಟಪ್ಪನವರು ಅನುಮೋದಿಸಿದರು.

ಮೆ. ಗಳಾದ ಪಿ. ಯಂ. ಉತ್ತಪ್ಪನವರು, ಕೊತಂಡ ಗಣಪತ್ತಿಯವರು ತೋಟಂಬೈಲು ಅಪ್ಪಣ್ಣನವರು ಸಿ. ಕೆ. ಸುಬ್ಬಯ್ಯನವರು, ಬಲ್ಲಡಿಚಂಡ ಬೋಪಯ್ಯನವರು, ಸಿ. ಕೆ. ಗಣಪತ್ತಿಯವರು ಮತ್ತು ಚೆಂಬಾಂಡ ಮಾದಪ್ಪನವರು ಠರಾವಿಗೆ ಒತ್ತಾಸೆಯಾಗಿ ಮಾತಾಡಿದರು.

ಮೆ. ಗಳಾದ ಜಮ್ಮಡ ಮಾದಪ್ಪನವರು, ಕೆ. ಸಿ. ಕರುಂಬಯ್ಯನವರು, ನಾಯಡ ಚಿಣ್ಣಪ್ಪನವರು, ಯಸ್. ಸಿ. ಸುಬ್ಬಯ್ಯನವರು, ಪಳಂಗಂಡ ನಂಜಪ್ಪನವರು ಮತ್ತು ಪಿ. ಜಿ. ಐಯ್ಯಪ್ಪನವರು ಠರಾವಿಗೆ ವಿರೋಧಿಸಿದರು.

ಠರಾವನ್ನು ಓಟಿಗೆ ಹಾಕಲಾಗಿ ಬಹುಮತದಿಂದ ಠರಾವು ಬಿದ್ದು ಹೋಯಿತು.

32. 39-40ನೇ ಸಂವತ್ಸರಕ್ಕೆ ಅಧ್ಯಕ್ಷರ ಚುನಾವಣೆ ಕಾರ್ಯವು ಕೈಕೊಳ್ಳಲಾಯಿತು.

ಬ್ಯಾಂಕಿನ ಅಧ್ಯಕ್ಷ ಪದವಿಗೆ ಮಾ. ಶ್ರೀ. ಪಂದ್ಯಂಡ ಬೆಳ್ಯಪ್ಪನವರ ಹೆಸರನ್ನು ಮೆ. ಸಿ. ಜಿ. ಮುದ್ದಮ್ಮಯ್ಯನವರು ಸೂಚಿಸಿದರು.

ಮೆ. ಅಜ್ಜನಮಾಡ ಗಣಪ್ಪಯ್ಯನವರು ಅನುಮೋದಿಸಿದರು.

ಮಾ. ಶ್ರೀ. ಚೆಪ್ಪುಡಿರ ಪೂಣಚ್ಚನವರ ಹೆಸರನ್ನು ಮೆ. ಕೊಂಗಂಡ ಕಾರ್ಯಪ್ಪನವರು ಸೂಚಿಸಿದರು.

ಚೆಪ್ಪುಡಿರ ಸುಬ್ಬಯ್ಯನವರು ಅನುಮೋದಿಸಿದರು.

ಬ್ಯಾಲೆಟ್ ಮೂಲಕ ಓಟಿಗೆ ಹಾಕಲಾಗಿ ಮಾ. ಶ್ರೀ. ಪಂದ್ಯಂಡ ಬೆಳ್ಯಪ್ಪನವರಿಗೆ 176 ಓಟುಗಳೂ, ಮಾ. ಶ್ರೀ. ಚೆಪ್ಪುಡಿರ ಪೂಣಚ್ಚನವರಿಗೆ 130 ಓಟುಗಳೂ ಸಿಕ್ಕಿದ್ದರಿಂದ ಮಾ. ಶ್ರೀ. ಪಂದ್ಯಂಡ ಬೆಳ್ಯಪ್ಪನವರು ಪ್ರೆಸಿಡೆಂಟರಾಗಿ ಬಹುಮತದಿಂದ ಚುನಾಯಿತರಾದರು.

ಪ್ರೆಸಿಡೆಂಟರಾದ ಶ್ರೀ. ಪಂದ್ಯಂಡ ಬೆಳ್ಯಪ್ಪನವರು ಬಿಡು ಮೆಂಬರೂ, ಸಂಘದ ಪ್ರತಿನಿಧಿಯೂ ಆದ ಕಾರಣ ಅವರ ಬದಲು ಒಂದು ಪದ ಸ್ಥಳಕ್ಕೆ ಖಾಲಿಯಾಗಿರಬೇಕೆಂಬುದಕ್ಕೆ ಠರಾವು ಬಳಿಮ್ಮಾರ್ ಸಿ. ದೇವಯ್ಯನವರು ಚೀಟಿ ಎತ್ತಲಾಗಿ ಬಿಡು ಮೆಂಬರ

ರ ಪರ ಡೈರೆಕ್ಟರೆಂದು ನಿಶ್ಚೈಯಿಸಲಾಯಿತು.

33. 1939-40ನೇ ಸಂವತ್ಸರದ ಡೈರೆಕ್ಟರುಗಳ ಚುನಾವಣೆಯು 4 ಸ್ಥಳಕ್ಕೆ ಈ ಕೆಳಗಿನ ಮಹನೀಯರುಗಳ ಹೆಸರುಗಳನ್ನು ಬಿಡು ಮೆಂಬರುಗಳ ಪರವಾಗಿ ಸೂಚಿಸಿ ಅನುಮೋದಿಸಲಾಯಿತು.

ಓಟುಗಳು.

1. ಮೆ. ಗಳಾದ ಕಂಜಿತಂಡ ಕುಶಾಲಪ್ಪನವರು 39, (2) ರಾವ್‌ಬಹದೂರ್ ಪಿ. ದೇವಯ್ಯನವರು 43, (3) ಕೊಳ್ಳಿಮಾಡ ಕರುಂಬಯ್ಯನವರು 31, (4) ಪುಲಿಯಂಡ ಅಯ್ಯಪ್ಪನವರು 42, (5) ಕುಟ್ಟೇಡ ಎ ತಮ್ಮಯ್ಯನವರು 22, (6) ನಡಿಕೇರಿಯಂಡ ಸೋಮಯ್ಯನವರು 9, (7) ಚೆಪ್ಪುಡಿರ ಪೂಣಚ್ಚನವರು 32, (8) ಬೆಟ್ಟೋಳಂಡ್ರ ಮಾಚಯ್ಯನವರು 2, (9) ಮನೆಯಪಂಡ ಬೆಳ್ಯಪ್ಪನವರು 21, (10) ಮೆ. ಪಳಂಗಂಡ ಕರುಂಬಯ್ಯನವರು 10, (11) ಸಿ. ಯನ್. ವೆಂಕಪ್ಪಯ್ಯನವರು 22, (12) ಕೀತಿಯಂಡ್ರ ಬೆಳ್ಯಪ್ಪನವರು 2.

ಬ್ಯಾಲೆಟ್ ಮೂಲಕ ಓಟು ತೆಗೆಯಲಾಗಿ ಈ ಕೆಳಗಿನ 4 ಮಹನೀಯರುಗಳನ್ನು ಬಿಡು ಮೆಂಬರುಗಳ ಪರವಾಗಿ ಡೈರೆಕ್ಟರಾಗಿ ಚುನಾಯಿಸಲಾಯಿತು.

(1) ರಾವ್ ಬಹದ್ದೂರ್ ಪಿ. ದೇವಯ್ಯನವರು 43, (2) ಮೆ. ಪುಲಿಯಂಡ ಐಯ್ಯಪ್ಪನವರು 42, (3) ಕಂಜಿತಂಡ ಕುಶಾಲಪ್ಪನವರು 39, (4) ಚೆಪ್ಪುಡಿರ ಪೂಣಚ್ಚನವರು 32,

34. ಸಂಘಗಳ ಪರವಾಗಿ ಈ ಕೆಳಗಿನ ಮಹನೀಯರುಗಳ ಹೆಸರುಗಳನ್ನು ಹತ್ತು ಡೈರೆಕ್ಟರುಗಳ ಸ್ಥಳಕ್ಕೆ ಸೂಚಿಸಿ ಅನುಮೋದಿಸಲಾಯಿತು.

ಓಟುಗಳು.

(1) ಮೆ. ಗಳಾದ ಕೊಳ್ಳಿಮಾಡ ಕರುಂಬಯ್ಯನವರು 144, (2) ಐನಂಡ ಕಾರ್ಯಪ್ಪನವರು 139, (3) ಯಸ್. ಯನ್. ರಾಮಚೆಟ್ಟಿಯವರು 124, (4) ಮಡೆಯಂಡ ದೇವೈಯ್ಯನವರು 114, (5) ಪಿ. ಜಿ. ಮುದ್ದಮ್ಮಯ್ಯನವರು 118, (6) ಕುಟ್ಟಿರ ಪೊನ್ನಪ್ಪನವರು 83, (7) ಕಾಕಮಾಡ ಗಣಪತಿಯವರು 106, (8) ಮಂಡೇಪಂಡ ಸೋಮೈಯ್ಯನವರು 90, (9) ಹೆಚ್. ಯಂ. ಪುಪ್ಪಣ್ಣನವರು 93, (10) ಚೌರಿರ ಮಂದಣ್ಣನವರು 72, (11) ಬಲ್ಲಡಿಚಂಡ ಬೋಪೈಯ್ಯನವರು 58, (12) ಚೆಂಬಾಂಡ ಮಾಪಪ್ಪನವರು 33, (13) ತೋಟಂಬೈಲು ಅಪ್ಪಣ್ಣನವರು 36, (14) ಕೊಕ್ಕಲೆರ ತಿಂಮ್ಮಯ್ಯನವರು 16, (15) ನಡಿಕೇರಿಯಂಡ ಸೋಮಯ್ಯನವರು 82, (16) ಕೀತಿಯಂಡ ಕುಟ್ಟಪ್ಪನವರು 62, (17) ಮನೆಯಪಂಡ ಬೆಳ್ಯಪ್ಪನವರು 71, (18) ಕಾಡ್ಯಮಾಡ ಐಯ್ಯಮ್ಮನವರು 46, (19) ಬೆಟ್ಟೋಳಂಡ ಮಾಚೈಯ್ಯನವರು 74, (20) ಪಳಂಗಂಡ ಕರುಂಬಯ್ಯನವರು 73, (21) ಅಬ್ದುಲ್ ರಹಿಮಾನ್ ಖಾನ್‌ರವರು 13, (22) **ಕೆಕ್ಕಡ ಪೂವೈಯ್ಯನವರು** 43, (23) ಜೆ. ಬಿ. ವೀರಭದ್ರಯ್ಯನವರು 12, (24) ಕಾಳೇಂಗಡ ಚಿಣ್ಣಪ್ಪನವರು 23, (25) ಕೋಂಗಂಡ ಕಾರ್ಯಪ್ಪನವರು 15, (26) ಬಿ ಆರ್. ಸುಬ್ರಾಯನವರು 6, (27) ಕುಂಞಮಂಡ ಚಿಣ್ಣಪ್ಪನವರು 12, (28) ಯನ್. ಶಂಕರೈಯ್ಯನವರು 15.

ಬ್ಯಾಲೆಟ್ ಮೂಲಕ ಓಟು ತೆಗೆಯಲಾಗಿ ಈ ಕೆಳಗಿನ ಮಹನೀಯರುಗಳನ್ನು ಸಂಘಗಳ ಪರ ಬ್ಯಾಂಕಿನ ಡೈರೆಕ್ಟರುಗಳಕ್ಕೆ ಚುನಾಯಿಸಲಾಯಿತು.

ಓಟುಗಳು.

(1) ಮೆ. ಗಳಾದ ಕೊಳ್ಳಿಮಾಡ ಕರುಂಬಯ್ಯನವರು 144, (2) ಐನಂಡ ಕಾರ್ಯಪ್ಪನವರು 139, (3) ಯಸ್. ಯನ್. ರಾಮಸೆಟ್ಟಿಯವರು 124, (4) ಪುತ್ತಮನೆ ಮುದ್ದಪ್ಪಯ್ಯನವರು 118, (5) ಮಡೆಯಂಡ ದೇವೈಯ್ಯನವರು 114, (6) ಕಾಕಮಾಡ ಗಣಪತಿಯವರು 106, (7) ಹೆಚ್. ಯಂ. ಪುಪ್ಪಣ್ಣನವರು 93, (8) ಮಂಡೇಪಂಡ ಸೋಮೈಯ್ಯನವರು 90, (9) ಬೆಟ್ಟೋಳಂಡ ಮಾಚೈಯ್ಯನವರು 74, (10) ಪಳಂಗಂಡ ಕರುಂಬಯ್ಯನವರು 73.

ಬ್ಯಾಂಕಿನ ಬೈಲಾ ನಂಬರು 27 ರ ಮೇರೆ ಪೋಲ್ಕಂಡ ಹತ್ತು ಡೈರೆಕ್ಟರುಗಳ ಪೈಕಿ ಒಂದರಿಂದ ಐದರ ವರೆಗೆ ಮೆಂಬರು ಸಂಘಗಳ ಪ್ರತಿನಿಧಿಗಳೆಲ್ಲರೂ ಸೇರಿ ತಮ್ಮೊಳಗೆ ಹೆಚ್ಚಿನ ಓಟು ದೊರೆತ ಐದು ಜನರನ್ನೂ (1) ಕಿಗ್ಗಟ್ಟುನಾಡು ತಾಲೋಕಿಗೆ ಮೆ. ಕಾಕಮಾಡ ಗಣಪತಿಯವರನ್ನೂ, (2) ಎಡೆನಾಲ್ಕುನಾಡು ತಾಲೋಕಿಗೆ ಮೆ ಮಂಡೇಪಂಡ ಸೋಮೈಯ್ಯನವರನ್ನೂ, (3) ಪಾಡಿನಾಲ್ಕುನಾಡು ತಾಲೋಕಿಗೆ ಮೆ. ಬೆಟ್ಟೋಳಂಡ ಮಾಚೈಯ್ಯನವರನ್ನೂ, (4) ಮಡಿಕೇರಿನಾಡು ತಾಲೋಕಿಗೆ ಮೆ. ಪಳಂಗಂಡ ಕರುಂಬಯ್ಯನವರನ್ನೂ, (5) ಯಲಸೂರರಾಜಪಟ್ಟಣ ತಾಲೋಕಿಗೆ ಮೆ. ಹೆಚ್. ಯಂ. ಪುಪ್ಪಣ್ಣನವರನ್ನೂ ಚುನಾಯಿಸಲಾಯಿತು.

ಅಧ್ಯಕ್ಷರ ಅನುಮತಿ ಮೇರೆ ಇತರ ವಿಷಯುಗಳು.

35. ಕೈಕೇರಿ ಹರಿಜನ ಸಂಘದವರು ಅವರಿಗೊಂದು ರಾತ್ರಿ ಶಾಲೆ ಕಟ್ಟಲಿಕ್ಕಾಗಿ ಬ್ಯಾಂಕಿನ ಕಾಮನ್ ಗುಡ್ ಫಂಡಿನಿಂದ 200 ರೂಪಾಯಿಗಳನ್ನು ಉಚಿತಾರ್ಥವಾಧನ ಸಹಾಯ ಕೊಡಬೇಕೆಂದು ಬರಕೊಂಡ ಅರ್ಜಿ ಓದಲಾಯಿತು.

ಆ ಅರ್ಜಿಯ ಪ್ರಕಾರ ಹಣ ಕೊಡಕೂಡದೆಂದು ಮೆ. ಕೆ. ಕೆ. ಬೆಳ್ಯಪ್ಪನವರು ವಿರೋಧಿಸಿದರು.

ಮೆ. ಪಿ. ಜಿ. ಮುದ್ದಮ್ಮಯ್ಯನವರು 50 ರೂಪಾಯಿ ಕೊಡಬಹುದೆಂದು ಸೂಚಿಸಿದರು.

ಮೆ. ಗಳಾದ ನಾಯಡ ಚಿಣ್ಣಪ್ಪನವರು, ಕೆ. ಜಿ. ಕುಟ್ಟಪ್ಪನವರು, ಜಮ್ಮಡ ಮಾದಪ್ಪನವರು ಮತ್ತು ತೋಟಂಬೈಲು ಅಪ್ಪಣ್ಣನವರು ಒತ್ತಾಸೆಯಾಗಿ ಮಾತಾಡಿದರು

ಮೆ. ಮಡೆಯಂಡ ದೇವೈಯ್ಯನವರು 150 ರೂಪಾಯಿ ಕೊಡಬೇಕೆಂದು ಹೇಳಿದರು.

ಮೆ. ಪಳಂಗಂಡ ನಂಜಪ್ಪನವರು ಕಟ್ಟಡದ ವಿಷಯವನ್ನು ವಿಚಾರಿಸದೆ ಕೊಡಲು ನಾನು ವಿರೋಧಿಸುತ್ತೇನೆಂದೂ ಹಾಗೆ ವಿಚಾರಿಸಿ ಕೊಡಲು ನನ್ನ ಆಕ್ಷೇಪಣೆ ಇಲ್ಲವೆಂದೂ ಹೇಳಿದರು.

ಮೆ. ನಡಿಕೇರಿಯಂಡ ಸುಬ್ಬಯ್ಯನವರು ಮತ್ತು ಚೆಪ್ಪುಡಿರ ಸುಬ್ಬಯ್ಯನವರು 100 ರೂಪಾಯಿ ಕೊಡಬೇಕೆಂದು ಹೇಳಿದರು.

ಮೆ. ಪಿ. ಜಿ. ಮುದ್ದಮ್ಮಯ್ಯನವರು ಸೂಚಿಸಿದ 50 ರೂಪಾಯಿ ಎಂಬದನ್ನು ವಾಪಸು ತೆಗೆದುಕೊಂಡರು.

ಈ ಬಾಬಿನಲ್ಲಿ ಓಟಿಗೆ ಹಾಕಲಾಗಿ 100 ರೂಪಾಯಿ ಕೊಡಬೇಕೆಂದು ಬಹುಮತದಿಂದ ತೀರ್ಮಾನಿಸಲಾಯಿತು.

36. ಬ್ಯಾಂಕಿನ ಇಂಗ್ಲಿಷಿನಲ್ಲಿ ತರ್ಜುಮೆ ಮಾಡಿದ ಬೈಲಾವನ್ನು ಹೊಸ ಡೈರೆಕ್ಟರುಗಳ ಮಂಜೂರಾತಿಯಿಂದ ಪ್ರಿಂಟು ಮಾಡಿಸುವಂತೆ ತೀರ್ಮಾನಿಸಲಾಯಿತು.

37. ಬ್ಯಾಂಕಿನ ಕಾಮನ್ ಗುಡ್ ಫಂಡಿನಿಂದ ಜನರಲ್ ಬಾಡಿಯವರ ಮಂಜೂರಾತಿ ನಿರೀಕ್ಷಣೆ ಮೇರೆ ಖರ್ಚು ಮಾಡಿದ ಈ ಕೆಳಗಿನ ಮೊಬಲಗುಗಳನ್ನು ಮಂಜೂರ್ ಮಾಡಲಾಯಿತು.

(1) ಈ ದಿನದ ಜನರಲ್ ಮೀಟಿಂಗಿಗೆ ರೂ. 250 (2) ವೀರಾಜಪೇಟೆನಾಡು ದನಗಳ ಪ್ರದರ್ಶನಕ್ಕೆ ರೂ. 10 (3) ಅಜ್ಜನೆಟ್ಟಿರ ಗಣಪತಿಯವರ ಮನೆ ಬೆಂದು ಹೋದುದಕ್ಕೆ ರೂ. 15 (4) ಕೂಡಿಗೆ ರಾತ್ರಿ ಶಾಲೆಗೆ ರೂ. 20 (5) ಹಾಲು ಮಾರುವ ಸಂಘದ ದನಗಳ ಪ್ರದರ್ಶನಕ್ಕೆ ರೂ. 5 (6) ಈ ದಿನದ ವಸ್ತು ಪ್ರದರ್ಶನಕ್ಕೆ ರೂ. 50 ಜುಮ್ಲ ರೂ. 340.

38. ಉತ್ತಮವಾಗಿ ಕರಿ ಪಸಲು ಬೆಳೆಸಿದವರಿಗೂ ಮತ್ತು ಮನೆ ಮಾರುಗಳನ್ನು ಶುಚಿಯಾಗಿಟ್ಟುಕೊಂಡವರಿಗೂ, ಪ್ರತಿಯೊಂದು ಯೂನಿಯನ್ನಿಗೆ ಒಂದೊಂದು ಬಹುಮಾನ ಕೊಡುವಂತೆ ಮೆ. ಕೆ. ಕೆ. ಬೆಳ್ಯಪ್ಪನವರು ತಂದ ಸೂಚನೆಯು ಬಹುಮತದಿಂದ ಪಾಸಾಯಿತು.

ಈ ದಿನದ ವಸ್ತು ಪ್ರದರ್ಶನದಲ್ಲಿ ಉತ್ತಮವಾದ ವಸ್ತುಗಳಿಗೆ ಅಧ್ಯಕ್ಷರು ಇನಾಂಗಳನ್ನು ಹಂಚಿದರು.

ಅಧ್ಯಕ್ಷರ ಭಾಷಣ.

ಬ್ಯಾಂಕಿನ ಪ್ರೆಸಿಡೆಂಟರಾಗಿ ಪುನಹ ನನ್ನನ್ನು ಚುನಾಯಿಸಿದ್ದಕ್ಕೆ ನಿಮಗೆಲ್ಲರಿಗೂ ವಂದಿಸುತ್ತೇನೆ.

'ಈ ಬ್ಯಾಂಕು ಹಿಂದಣ ವರ್ಷದ ಬಿಕ್ಕಟಿನಲ್ಲಿ ಕಷ್ಟಕ್ಕೆ ಈಡಾಗಿದ್ದರೂ ಈಗ ಹಿಂದಕ್ಕೆ ಹೆಜ್ಜೆ ಹಾಕದೆ ಮುಂದರಿಯುತ್ತಿರುವುದು ತೃಪ್ತಿಕರವೆಂದೂ, ಡೆಲ್ಲಿಯಲ್ಲಿ ನಡೆದ ರಿಜಿಸ್ಟ್ರಾರರ ಕಾನ್ಫರೆನ್ಸಿನಲ್ಲಿ ಕೊಡಗಿನ ಸಹಕಾರಿ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡುತ್ತಿವೆಯೆಂದು ಹೇಳಲು ನನಗೆ ಅವಕಾಶ ದೊರೆಯಿತೆಂದೂ ನಿಮಗೆ ತಿಳಿಸಲು ನಾನು ತುಂಬಾ ಸಂತೋಷಪಡುತ್ತೇನೆಂತ ಹೇಳಿ ತಮ್ಮ ಭಾಷಣವನ್ನು ಅಂತ್ಯಮಾಡಿ ರಿಜಿಸ್ಟ್ರಾರವರಿಗೂ, ಅವರ ಶಾಭೆದಾರರಿಗೂ, ಮಾರ್ಕೆಟಿಂಗ್ ಆಫೀಸರರಿಗೂ, ಈ ಶಾಲೆಯನ್ನು ಈ ದಿನದ ಮೀಟಿಂಗಿಗೆ ಬಿಟ್ಟುಕೊಟ್ಟ ಕಮಿಷನರರವರಿಗೂ ಮತ್ತು ಹೆಡ್. ಮಾಸ್ಟರವರಿಗೂ ವಂದಿಸಿದರು.

ಈ ದಿನದ ಊಟ ಉಪಚಾರದ ವಿಷಯದಲ್ಲಿ ತೊಂದರೆ ತೆಗೆದುಕೊಂಡ ಯುವಕರಿಗೂ, ನಿವೃತ್ತರಾದ ಡೈರೆಕ್ಟರುಗಳಿಗೂ ವಂದಿಸಿ ಹೊಸಬರನ್ನು ಅಭಿನಂದಿಸಿದರು.

ಅಧ್ಯಕ್ಷರ ದೇಶಾಭಿಮಾನವನ್ನು ಮತ್ತು ಅವರ ಗುಣಗಳನ್ನು ವರ್ಣಿಸಿ ಅವರು ಈ ದಿನದ ಮೀಟಿಂಗನ್ನು ಸಾಂಗವಾಗಿ ನಡಿಸಿದಕ್ಕೆ ಸಭೆಯ ಪರವಾಗಿ ಮೆ. ಪಳಂಗಂಡ ನಂಜಪ್ಪನವರು ಅವರನ್ನು ವಂದಿಸಿದರು.

ಗೌರವ ಕಾರ್ಯದರ್ಶಿಯವರು ಕಳೆದ ಒಂದು ವರ್ಷದಿಂದ ಬ್ಯಾಂಕಿನ ಕೆಲಸವನ್ನು ತೃಪ್ತಿಕರವಾಗಿ ನಡಿಸಿಕೊಟ್ಟದ್ದಕ್ಕೆ ಮೆ. ಪಳಂಗಂಡ ನಂಜಪ್ಪನವರು ಸಭೆಯ ಪರವಾಗಿ ಅವರನ್ನು ವಂದಿಸಿದರು.

ಮೆ. ಮಡೆಯಂಡ ದೇವೈಯ್ಯನವರು ಮತ್ತು ಟೆಂಪಲ್ ಫಂಡು ಕಮಿಟಿಯ ಪ್ರೆಸಿಡೆಂಟರು ಈ ದಿನದ ಅಡಿಗೆಗೆ ಪಾತ್ರೆ ವಗೈರೆಗಳನ್ನು ಕೊಟ್ಟದ್ದಕ್ಕೂ, ಮೆ. ಸಂಕೈಯ್ಯ ಪಟೇಲರು ಊಟಕ್ಕೆ ಬಾಳೆ ಎಲೆಗಳನ್ನು ಮುಫತ್ತಾಗಿ ಕೊಟ್ಟದ್ದಕ್ಕೂ, ಮೆ. ಐನಂಡ ಕಾರ್ಯಪ್ಪನವರು ಸಭೆಯ ಪರವಾಗಿ ವಂದಿಸಿದರು.

ಅಧ್ಯಕ್ಷರಿಗೆ ವಂದನೆಯೊಂದಿಗೆ ಸಭೆಯು ಮಧ್ಯಾಹ್ನ 1 ಗಂಟೆಗೆ ಬರಕಾಸ್ತಾಯಿತು.

ಮಡಿಕೇರಿ, ಪಿ. ಐ. ಬೆಳ್ಯಪ್ಪ,
18-2-40. ಅಧ್ಯಕ್ಷರು.

ಮಾರಾಟಕ್ಕಿದೆ.

ವೀರಾಜಪೇಟೆನಾಡು ಮೈತಾಡಿ ಗ್ರಾಮದ ಒಕ್ಕಲಿಗರ ಸಿಂಗೇಗೌಡ್ರ ಮಗ ಸೇವಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕುಳ ನಂ. 38ರ ಸಾಗಿನ ಸ. ನ. 150/1ರ 16.70 ಏಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಚಿಕ್ಲೆ ತೋಟದ 3. 90 ಏಕ್ರೆಯ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ 155/4ರ ಚಿಕ್ಲೆ ತೋಟದ .80 ಸೆಂಟಿನ ಪೈಕಿ 64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಏಕ್ರೆಯ ಬಾಣೆಯ ಪೈಕಿ 6.95 ಸೆಂಟನ್ನೂ ಮತ್ತು, ಸ. ನ. 150/2ರ 0.03 ಸೆಂಟಿನ ಕೆರೆಯನ್ನು ಸಹ ವಿಕ್ರಯಿಸಲಾಗುತ್ತೆ. ಖರೀದಿದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು ಕಾಫಿ ವ್ಯವಸ್ಥೆ ಚಿಕ್ಲೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯನ್. ದೇವಣ್ಣ,
ಮೈತಾಡಿಗ್ರಾಮ,
12-1 ಮಾರ್ನಾಡು.

ಕಾಂಗ್ರೆಸ್ ವಿಷಯನಿಯಾಮಕ ಸಭೆ.

ಮಹಾತ್ಮರ ಬೋಧಪೂರ್ಣವಾದ ಭಾಷಣ.

ಪಾಟ್ನಾ ಠರಾವಿನ ಸಮರ್ಥನೆ.

ಕಾಂಗ್ರೆಸಿನ 53 ನೇ ಅಧಿವೇಶನವು ಈ ತಾ. 17, 18, 19 ಹಾಗೂ 20 ರಲ್ಲಿ ರಾಮಗಡದಲ್ಲಿ ನಡೆಯಿತು. ಈ ಸಾರಿಯ ಅಧಿವೇಶನವು ಕೆಲವು ವಿಶಿಷ್ಟ ರೀತಿಯಿಂದ ಕೂಡಿತ್ತು. ತಾರೀಕು 17 ರಲ್ಲಿ ಅಧ್ಯಕ್ಷರಾದ ಮೌಲಾನಾ ಅಬುಲ್ ಕಲಾಂ ಆಜಾದರಿಗೆ ಅಭೂತ ಪೂರ್ವ ಸ್ವಾಗತವಿತ್ತು. ಮಯೂರಾಕಾರದಲ್ಲಿ ಅಲಂಕೃತವಾಗಿದ್ದ ರಥದಲ್ಲಿ ಅವರ ಮೆರವಣಿಗೆ ನಡೆಯಿತು. ಲಕ್ಷೋಪಲಕ್ಷ ಜನರು ಇದರಲ್ಲಿ ಭಾಗವಹಿಸಿದ್ದರು. ಒಂದು ಕಾಲಕ್ಕೆ ಹಳ್ಳಿಗಾಡಾಗಿದ್ದ ರಾಮಗಡದ ಚಿತ್ರವು ಇಂದು ಅವರ್ಣನೀಯವಾಗಿರುವುದು. ಪಟ್ಟಣದ ಮಹಾದ್ವಾರಗಳಿಂದ ಒಳ ಹೊಕ್ಕು ಬರುತಿತ್ತು. ಎಲ್ಲಿ ನೋಡಿದರೂ ಜನಸಮೂಹವೇ ಕಾಣಿಸುತ್ತಿತ್ತು. ಅಲ್ಲಲ್ಲಿ ಗಗನದಲ್ಲಿ ಹಾರಾಡುವ ರಾಷ್ಟ್ರೀಯ ಪತಾಕೆಗಳು, ಎಲ್ಲೆಡೆಯ ಖಾದಿ ವಸ್ತ್ರ ಧಾರಿಯವರಲ್ಲೇ ಸ್ವಯಂಸೇವಕರ ದಳ, ಅರಸನ ಸೇನೆಗಳನ್ನಟ್ಟು ಅನಿಚ್ಛಿನ್ನವಾಗಿ ನಡೆಯುತ್ತಿರುವ ಸ್ವಯಂ ಸೇವಾದಳದ ದೃಶ್ಯ, ಮೂಲೆಯಾಗಿ ಕುಟೀರಗಳಿಂದ ರಾರಾಜಿಸುತ್ತಿರುವ ಆ ಹಳ್ಳಿಯ ನೋಟ, ಲಕ್ಷೋಪಲಕ್ಷ ಜನರನ್ನು ತನ್ನಂಗದಲ್ಲಿ ಹುಳ್ಳಗಿಸಿಕೊಳ್ಳುವಂತೆ ರಚಿಸಲ್ಪಟ್ಟಿರುವ ಚಪ್ಪರಗಳು, ತ್ರಿವರ್ಣದಿಂದ ಕೂಡಿದ ಆವುಗಳ ಸೊಲ್ಕಟ್ಟು ಇವೆಲ್ಲ ನಿಜವಾಗಿಯೂ ಕಣ್ಣಾರೆ ನೋಡಿ ಆನಂದ ಪಡಬೇಕಾದ ದೃಶ್ಯಗಳು. ಅಲ್ಲದೆ ವಿವಿಧ ರೀತಿಯ ವಸ್ತುಗಳ ಪ್ರದರ್ಶನ ಶಾಲೆ, ಅನೇಕ ರೀತಿಯ ಕಲಾಕೌಶಲ್ಯಗಳನ್ನೊಳಗೊಂಡು ತಯಾರಾಗಿರುವ ಖಾದಿ ಭಂಡಾರಗಳು, ಅನ್ನ ನೀರನ್ನು ಕೊಡುವ ಖಾದಿ ವ್ಯಾಪಾರದಲ್ಲೇ ಬಿಡುವಿಲ್ಲದೆ ನಿರತರಾಗಿರುವ ಭಾಂಡಾರಿಗಳು, ಪತ್ರಿಕಾಪ್ರತಿನಿಧಿಗಳ ಪಡೆ, ಇವುಗಳು ಕಿಕ್ಕಿರಿದು ನೆರೆದ ಪ್ರೇಕ್ಷಕರ ದೃಶ್ಯ, ಹೆಚ್ಚೇಕೆ? ಈ ಬಡ ಲೇಖನಿಯು ರಾಮಗಡದ ಉತ್ಸವದ ಹಾಗೂ ರಂಜಿಸುವಂಥಾ ದೃಶ್ಯವನ್ನು ವರ್ಣಿಸಲಾರದು. ಇಂಥಾ ಆಮೋದ ಸಾಗರದಲ್ಲಿ ಮುಖಂಡರು ಸಭಾಪ್ರವೇಶ ಮಾಡುವ ಜಯಜಯಕಾರವನ್ನು ಬೇರೆ ವರ್ಣಿಸಬೇಕೇ?

ಅಂತು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ತಾ. 17 ರಲ್ಲಿ (ವಿಷಯನಿಯಾಮಕ ಸಮಿತಿ) ಪ್ರಾರಂಭವಾಯಿತು. ಇಷ್ಟು ವರ್ಷಗಳಂತೆ ಹೆಚ್ಚಿನ ಠರಾವುಗಳು ಈ ವರ್ಷ ಇರಲಿಲ್ಲ. ಒಂದೇ ಒಂದು ಠರಾವಿತ್ತು. ಒಂದು ವರ್ಕಿಂಗ್ ಕಮಿಟಿಯು ತನ್ನ ಪಾಟ್ನಾದಲ್ಲಿ ನಡೆದ ಸಭೆಯಲ್ಲಿ ಅಂತರರಾಷ್ಟ್ರೀಯ ಹಾಗೂ ಭಾರತ ಭವಿತವ್ಯದ ಬಗ್ಗೆ ಸೂಚಿಸಿದ ಒಂದು ಠರಾವು ಮಾತ್ರ. ಮಾಜಿ ರಾಷ್ಟ್ರಪತಿಗಳಾದ ರಾಜೇಂದ್ರ ಬಾಬುಗಳಿಂದ ಮಂಡಿಸಲ್ಪಟ್ಟಿತು. ಠರಾವನ್ನು ಮಂಡಿಸಿ ರಾಜನ್ ಬಾಬುಗಳು ಮಾಡಿದ ಭಾಷಣದ ಸಾರ ಹೀಗಿದೆ.

'ಯುದ್ಧ ಪ್ರಾರಂಭವಾದಾಗಲೇ ಬ್ರಿಟಿಷರು ತಾವು ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯ ರಕ್ಷಣೆಗಾಗಿ ಯುದ್ಧದಲ್ಲಿ ತೊಡಗಿರುವೆನೆಂದು ಘೋಷಿಸಿ, ಭಾರತವೂ ಸಹ ಯುದ್ಧ ಭಾಗಿ ಆಗಬೇಕೆಂದು ಸಾರಿತು. ಬ್ರಿಟಿಷರು ಈ ಧ್ಯೇಯದಿಂದ ಯುದ್ಧ ಮಾಡುವುದಾದರೆ ಭಾರತದ ಸ್ಥಾನವೂ ನಿಗದಿಯಾಗಬೇಕು? ಎಂಬ ವಿಚಾರ ಕಾಂಗ್ರೆಸು ಬ್ರಿಟಿಷ್ ಸರಕಾರವನ್ನು ಕೇಳಿತು. ಇದು ಯುದ್ಧದ ಕಾಲ. ಈಗ ಬ್ರಿಟಿಷ್ ರಾಜನೀತಿಜ್ಞರು ಎಂಥಾ ಬಿಕಟ್ಟಿನಲ್ಲಿ ಸಿಲುಕಿರುವರು ನಮಗೆ ತಿಳಿದಿದೆ. ಅದಕ್ಕಾಗಿಯೇ ಪೂರ್ಣ ಸ್ವಾತಂತ್ರ್ಯವೇ ನಮಗೆ ಬೇಕಾದರೂ ಕಾಂಗ್ರೆಸು ಸ್ವಾತಂತ್ರ್ಯದ ಘೋಷಣೆ ಮಾಡಬೇಕೆಂದು ... ಮಾಡಿದಲ್ಲಿ ಕಾಂಗ್ರೆಸು ಬ್ರಿಟಿಷರ ಪಕ್ಷದಲ್ಲಿ ನಿಲ್ಲುವುದು. 'ಸ್ವಾತಂತ್ರ್ಯ ಕೊಡುವುದಿಲ್ಲ' ಎಂದು ಹೇಳಲಿಲ್ಲ. ಒದಲಾಗಿ ಯುದ್ಧದ ನಂತರ ಸ್ವರಾಜ್ಯ ಕೊಡಲ್ಪಡುವುದೆಂದು ಮಾತ್ರ ಕೊಡುವೆವೆಂದು ಹೇಳಿತು. ಆದರೆ ಬ್ರಿಟಿಷರ ಹೇಳಿಕೆಗಳು ನಮ್ಮನ್ನು ನಿರಾಶರನ್ನಾಗಿ ಮಾಡಿವೆ. ನಾವು ನಿಮ್ಮ ಧ್ಯೇಯಸಾಧನೆಯ ಮಾರ್ಗದಲ್ಲಿ ಬರುವ ವ್ಯಕ್ತಿಗಳನ್ನು ದಾಟಿ ಹೋಗಬೇಕೆಂದು ಆಶಿಸಿದರೆ ಅದು ಬೇಡ, ಇದು ಹೀಗಾಗಿ ಹೋಗಿ ಎಂದು ಬ್ರಿಟಿಷರು ಹೇಳುತ್ತಾರೆ. ಬ್ರಿಟಿಷರಿಗೆ ನಾವು ಯಾವ ರೀತಿ ಸಹಾಯ ಮಾಡೋಣ? ... ಅವರನ್ನು ಹುಡುಕಿ ತಾವು ನೋಡಬೇಕೆಂದು ನಮ್ಮ ಆಶೆಯಿಲ್ಲ. ನಾವು ಉದ್ಧಾರವಾಗುವುದರಲ್ಲಿ ಅವರು ಪತನರಾದರೆ ಅದನ್ನು ತಡೆಯುವುದಾದರೂ ಹೇಗೆ? ನಾವು ವಿನಾಶಕಾರಿಯಾದ ಪರಿಸ್ಥಿತಿಯಲ್ಲಿರುವಂಥಾ ಪರಿಸ್ಥಿತಿ ಬ್ರಿಟನಿಗೆ ಬಂದಿದೆಯೇ? ಬ್ರಿಟಿಷರು ಸ್ವತಂತ್ರರು. ನಾವಾದರೂ ಅವರ ದಾಸ್ಯದಲ್ಲಿರುವ ಗುಲಾಮರು. ಗುಲಾಮರಾಗಿ ನಾವು ಬೇರೆ ಜನಾಂಗಗಳಿಂದ ಬಂದು ನಮ್ಮನ್ನು ಗುಲಾಮರನ್ನಾಗಿ ಮಾಡುವ ವಿಚಾರವೇ ಕೆಲಸವಲ್ಲವಾಗಿದೆ. ಪರಿಸ್ಥಿತಿ ಹೀಗಿರುವಾಗ ನಮಗೆ ಉಳಿದಿರುವ ಒಂದೇ ಮಾರ್ಗವೆಂದರೆ ಸತ್ಯಾಗ್ರಹ. ಒಬ್ಬರು ಇಬ್ಬರು ಸತ್ಯಾಗ್ರಹ ಮಾಡುವುದು ನಮಗೆ ಬೇಕಿಲ್ಲ. ಅವ್ಯವಸ್ಥೆಯಿಂದ ಸತ್ಯಾಗ್ರಹ ಹೂಡುವುದೂ ಬೇಡ. ಅದು ಪ್ರಚಂಡವಾಗಿ ನಡೆಯಬೇಕು. ಕಾಂಗ್ರೆಸಿನ ಗೌರವಕ್ಕೆ ತಕ್ಕಂತೆ ನಡೆಯಬೇಕು. ಅಹಿಂಸೆಯು ಮೂರ್ತಿಮತ್ತಾಗಿರಬೇಕು. ಆದ್ದರಿಂದ ಅಂಥಾ ಸತ್ಯಾಗ್ರಹಕ್ಕೆ ನಾವು ಸದಾ ಸಿದ್ಧರಾಗಿರಬೇಕು.'

ನಂತರ ಪಂಡಿತ ಜವಾಹರರು ಠರಾವನ್ನು ಸಮರ್ಥಿಸಿ ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯು ಭಾರತದ ಸಮಸ್ಯಾ ಪರಿಹಾರಿಯೆಂದೂ, ಈ ಏರ್ಪಾಡಿಗೆ ಕೋಮು ವಾರು ಸಮಸ್ಯೆಯು ತೊಡಕೆಂದು ಹಲವರನ್ನುವರೆಂದೂ, ಆದರೆ ಮಾರಣೆಯವರ, ಅದಲಿತವು ಇಲ್ಲಿ ಕೊನೆಗೊಳ್ಳದ ವಿನಹ ಐಕ್ಯತೆಯು ಇಲ್ಲಿ ನೆಲಸದೆಂದೂ ಹೇಳಿದರು. ಅನೇಕ ತಿದ್ದುಪಡಿಗಳು ಠರಾವಿಗೆ ಸೂಚಿಸಲ್ಪಟ್ಟವು. ಆದರೆ ವಿಷಯವಾದ ಚರ್ಚೆಯಾದ ನಂತರ ಪಾಟ್ನಾದಲ್ಲಿ ಪಾಸಾದ ಠರಾವೇ ಅಂಗೀಕೃತವಾಯಿತು. ಈ ಸಾರಿ ಗಾಂಧೀಜಿಯವರು ಅಧಿವೇಶನದಲ್ಲಿ ಸ್ವಯಂ ಭಾಗವಹಿಸುತ್ತಿರುವರು. ಕಾಂಗ್ರೆಸ್ ಸಮಾಪತಿಯಲ್ಲಿ ಈ ವರ್ಷ ಅವರು ಇಂದಿನ ಬಿಕ್ಕಟ್ಟು ಹಾಗೂ ಮುಂದಿನ ಧೋರಣೆಯ ವಿಚಾರ ಭಾಷಣ ಮಾಡಿದರು. ಇಲ್ಲದೆ ಪ್ರತಿನಿಧಿಗಳ ಗುಪ್ತ ಸಭೆಯೊಂದು ನಡೆಯಿತು ಇದರಿಂದಾಗಿದೆ ಅವರಲ್ಲಿ ಮಹಾತ್ಮರು ಪ್ರಧಾನ ಪಾತ್ರವಹಿಸುವರು.

ವಿಷಯ ನಿಯಾಮಕ ತಾ. 19 ರಲ್ಲಿ ಸಭೆಯು ತಿರುಗಿ ಸೇರಿದಾಗ ಅಧ್ಯಕ್ಷರ ಅನುಜ್ಞೆಯಂತೆ ಗಾಂಧೀಜಿ ಮಾತನಾಡಲು ಎದ್ದರು.

... ಕಾಂಗ್ರೆಸ್ ಸಮಿತಿಯಲ್ಲಿ ಮಹಾತ್ಮರ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ—

'ಕಾಂಗ್ರೆಸ್ ಅಧಿವೇಶನ ಮತ್ತು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ನಾನು ಭಾಷಣ ಮಾಡಬೇಕೆಂದು ಅಧ್ಯಕ್ಷರಿಗೆ ತಿಳಿಸಿದೆ. ಪಾಟ್ನಾದಲ್ಲಿ ಪಾಸಾದ ಗೊತ್ತುವಳಿಯು ಇಲ್ಲಿ ಅಂಗೀಕೃತವಾದ ನಂತರ ಭಾಷಣ ಮಾಡಬಹುದೆಂದು ಅವರು ಒಪ್ಪಿಗೆ ಇತ್ತರು. ಅದೇ ಪ್ರಕಾರ ನಾನು ಭಾಷಣ ಮಾಡುವವನಿದ್ದೇನೆ. ಕಳೆದ ಮೂರುವರೆ ವರ್ಷದಿಂದಲೂ ಸಹ ನಾನು ಕಾಂಗ್ರೆಸಿನಿಂದ ಹೊರಗಾಗಿದ್ದರೂ ನಾನೇನೂ ದೂರ ಉಳಿದಿಲ್ಲ. ನನಗೂ ನಿಮಗೂ ಸಂಪರ್ಕವಿದ್ದೇ ಇದೆ. ನಿಮ್ಮನ್ನು ಬ್ಯಾಸಿಸಿಕೊಳ್ಳಲು ನನಗೇನೂ ಕಷ್ಟವಿಲ್ಲ. ಇಂದು ನೀವು ಚರಕಾ ಕೌಶಲ್ಯದಲ್ಲಾ ಮತ್ತು ಇಂಥ ಅಧಿವೇಶನಗಳನ್ನು ಮುಂದಿಡುವ ರೀತಿಯಲ್ಲಿ ಸ್ಪರ್ಧಿಸುವ ರೀತಿಯನ್ನಿಂದು ಈ ವರದಲು ನಡೆದ ಪಾಟ್ನಾ ಠರಾವಿನ ಚರ್ಚೆಯು ನನಗೆ ಗೊತ್ತು ನಡಸಿದೆ. ಇದೆಲ್ಲ ಸಂಕೋಚದ ವಿಚಾರ. ಇದು ಪ್ರಜಾತಂತ್ರಾತ್ಮಕ ರಾಷ್ಟ್ರಕ್ಕೆ ಬೇಕಾದ ಅವಶ್ಯಕಗಳು. ನೀವು ಠರಾವನ್ನು ಬಹುಮತದಿಂದ ಅಂಗೀಕರಿಸಿರುವಿರಿ. ಸಂಕೋಚದ ವಿಚಾರ. ನಾನು ಹಾಕಿರುವ ಶರತುಗಳಲ್ಲಿ ನಂಬಿಕೆಯಿಲ್ಲದ ವಿದ್ದರೂ ಸತ್ಯಾಗ್ರಹವನ್ನಾರಂಭಿಸಲು ಒಪ್ಪಿದ ಕಾಲವಿತ್ತು. ಆದರೆ ಇಂದು ಹಾಗಿಲ್ಲ. ನಾನು ಬಹಳ ಕಟ್ಟುನಿಟ್ಟಾಗಿದ್ದೇನೆ. ನಿಮ್ಮ ಮೇಲೆ ಕಾಠಿಣ್ಯದಿಂದ ವರ್ತಿಸಬೇಕೆಂದಿಲ್ಲ. ನಾನು ನಿಮ್ಮ ನಾಯಕನಾಗಬೇಕಾದರೆ ನನ್ನ ಶರತುಗಳನ್ನು ಮುಂದಿಡುವದು ನನ್ನ ಕರ್ತವ್ಯ. ಭಾರತೀಯರಾದ ನಮಗೆ ಬೇಕಾದುದೇನೆಂದು ನಾವು ವಿಶದವಾಗಿ ತಿಳಿಸಿರುವೆವು. ಇದಕ್ಕಿಂತಾ ಹೆಚ್ಚು ವಿಶದವಾಗಿ ಸ್ಪಷ್ಟೀಕರಿಸುವದು ಅಸಾಧ್ಯ. ಬ್ರಿಟಿಷ್ ಸರಕಾರದವರೂ ತನ್ನ ಧೋರಣೆಯನ್ನು ಘೋಷಿಸಿದೆ. ಯುದ್ಧದಲ್ಲಿ ಧುಮುಕಿರುವ ಬ್ರಿಟನನ್ನು ನಾವೀಗ ಎದುರಿಸಿದರೆ ಅದಕ್ಕೆ ಕಷ್ಟ ಒದಗುತ್ತದೆ. ಈ ವಿಚಾರವಿರಲಿ, ಆದರೆ ಕಾಂಗ್ರೆಸಿನ ಶಕ್ತಿಯನ್ನು ಕಂಡು ಅನೇಕರು ತಮ್ಮ ಸ್ವಾರ್ಥಕ್ಕೆ ಬೇರೆ ಬೇರೆ ಯಿಸಲು ಕಾಂಗ್ರೆಸಿನ ಸೇರಿರುವರು. ಅಂಥವರನ್ನು ಎದುರಿಸುವ ಸಾಮರ್ಥ್ಯ ಸಂಸ್ಥೆಗೆ ಬರಬೇಕು. ಶಿಸ್ತು ಬೇಕು. ಭಿನ್ನತೆಗಳು ಪರಿಹಾರವಾಗಬೇಕು.

ನನ್ನನ್ನು ನೀವು ನಿಮ್ಮ ನಾಯಕನನ್ನಾಗಿ ಚುನಾಯಿಸಿಕೊಂಡರೆ ನನ್ನ ಇಷ್ಟದಂತೆ ನೀವು ನಡೆಯಬೇಕು. ನನಗೆ ಯಾರ ಮೇಲೂ ದ್ವೇಷವಿಲ್ಲ. ಎಲ್ಲರೂ ನನ್ನ ಮಿತ್ರರು. ಜನ್ನಾರ ನಿಮ್ಮ ನನ್ನ ಸ್ನೇಹಿತರು. ನನ್ನ ಮುಂದೆ ಎಲ್ಲರೂ ಒಂದೇ. ನಾನೇನೂ ಮಹಾತ್ಮನೆಂದು ಹೇಳಿಕೊಳ್ಳುವದಿಲ್ಲ. ನಾನು ಒಬ್ಬ ಮನುಷ್ಯ. ತಪ್ಪು ಮಾಡುತ್ತೇನೆ. ತಪ್ಪು ಮಾಡುತ್ತೇನೆ. ಎಲ್ಲರೂ ನನ್ನಂತೆಯೇ. ಉರ್ದು ಪತ್ರಿಕೆಗಳಲ್ಲಿ ನನ್ನ ಬಗ್ಗೆ ಬೈಗಳ ಸುರಿಮಳೆಯಾಗುವುದು. ಆದರೆ ನನಗೆ ತೋಚುವುದಿಲ್ಲ. ಹಿಂದೂ ಮುಸ್ಲಿಂ ಐಕ್ಯವಿಲ್ಲದೆ ಸ್ವಾತಂತ್ರ್ಯ ಸಾಧ್ಯವಿಲ್ಲವೆಂದು ನನಗೆ ಖಚಿತವಿದೆ. ನಾವಿಂದು ಹೋರಾಟ ಮಾಡಬೇಕಾದ್ದು ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಗಾಗಿ. ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಗೆ ಮುಸ್ಲಿಂ ಓಟುಗಳಿಂದ ಬರತಕ್ಕವರು ಹಿಂದೂ ಮುಸ್ಲಿಮರ ಸಂಬಂಧ ವಿಷಯದ ಸಂಬಂಧದಲ್ಲಿ ... ನಾನು ಅವರೊಡನೆ ಚರ್ಚೆ ನಡೆಸುತ್ತೇನೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ನಾನು ವಿರೋಧಿಸುತ್ತಿರುವೆನಾದರೂ ನನಗೆ ಬ್ರಿಟಿಷರ ಬಗ್ಗೆ ದ್ವೇಷವಿಲ್ಲ. ಅವರನ್ನು ನಾಶ ಮಾಡಬೇಕೆಂದು ನನ್ನ ಇಚ್ಛೆಯಿಲ್ಲ. ನಾನೇನಾದರೂ ರಾಜಿಮಾಡಿಕೊಂಡರೆ ಭಾರತ ದೇಶವನ್ನು ಮಾರಿಬಿಡುತ್ತೇನೆಂದು ತಿಳಿದುಕೊಳ್ಳಬೇಡಿ. ನಮ್ಮ ದೇಶದ ಬಲವನ್ನು ಹೆಚ್ಚಿಸಲು ನಾನು ಹಾಗೆ ಮಾಡುತ್ತೇನೆಂದು ತಿಳಿಯಿರಿ. ಒಟ್ಟಿಗೆ ಈ ದೇಶಕ್ಕೆ, ಜಗತ್ತಿಗೂ ಹಿತವನ್ನುಂಟುಮಾಡುವ ಸಾರ್ವತ್ರಿಕ ಸತ್ಯಾಗ್ರಹವೇ ನನ್ನ ದೃಷ್ಟಿಯಲ್ಲಿದೆ. ಸತ್ಯಾಗ್ರಹದಲ್ಲಿ ಪ್ರತಿಯೊಂದು ಕಾಂಗ್ರೆಸ್ ಸಮಿತಿಯೂ ಒಂದು ಅಂಗವಾಗಿರಬೇಕು. ನಮ್ಮ ಸಂಸ್ಥೆಯಂಥಾ ಒಂದು ಬೇರೆ ಸಂಸ್ಥೆಯು ನನ್ನ ಶರತುಗಳನ್ನು ಕೂಲಂಕಷ ಪಾಲಿಸಬೇಕಾಗುತ್ತೆ. ಇಲ್ಲವಾದರೆ ಕೋಟ್ಯಾಂತರ ಪ್ರಜೆಗಳ ಪ್ರಾಣ ಹಾನಿಯಾಗೀತು. ಭಾರತ ಬಿಂದಕ್ಕೆ ಮಾಡಿರುವ ಶಕ್ತಿಯನ್ನು ಉಳಿಸಿಕೊಳ್ಳಲು ನಾನೇ ನನ್ನ ಜೀವವನ್ನು ತೆರಬೇಕಾಗಿ ಬಂದೀತು. ನಾನು ನಿಮ್ಮ ನಾಯಕನಾಗಬೇಕಾದರೆ ನೀವು ನನಗೆ ಪೂರ್ತಿ ಸಹಯೋಗಬೇಕು. ಸತ್ಯಾಗ್ರಹ ಈಗಲೇ ಮಾಡಬೇಕೆಂದು ಯಾರಾದರೂ ಹೆರಪಡಿಸಿದರೆ ಅದಕ್ಕೆ ನನ್ನ ಅಡ್ಡಿಯಿಲ್ಲ. ಅವರು ಕಾಂಗ್ರೆಸಿನ ಹೊರಗಡೆ ಸತ್ಯಾಗ್ರಹಮಾಡಬೇಕು. ಕಾಂಗ್ರೆಸಿನಲ್ಲಿದ್ದೂ ಕಾಂಗ್ರೆಸ್ ಆಜ್ಞೆಯನ್ನು ಉಲ್ಲಂಘಿಸುವದು ಸಾಧುವಿದೆ. ಆದರೆ ಅದು ಸತ್ಯಾಗ್ರಹ ಮಾರ್ಗದಲ್ಲಿ ಆಗಲಾರದು. ಸತ್ಯಾಗ್ರಹದಲ್ಲಿ ಎಷ್ಟು ಶಕ್ತಿ ಇದೆಯೆಂದರೆ ಅದನ್ನು ಪಯೋಗಿಸುವವನಿಗೆ ಅದು ಯಾವ ಕೆಡಕನ್ನೂ ಮಾಡಲಾರದು. ನೀವು ಬೇಕಾದರೆ ಬೇರೆ ನೀತಿಯ ಉಪಾಯವನ್ನು ಕಂಡುಹಿಡಿಯಬಹುದು. ಆದರೆ ನನಗಿರುವುದು ಒಂದೇ ದಾರಿ. ಈಗಲೂ ನೀವು ನನಗೆ ನಿಮ್ಮ ಪೂರ್ಣ ಬೆಂಬಲವನ್ನೂ, ಸಹಕಾರವನ್ನೂ ಕೊಟ್ಟರೆ ಇನ್ನೊಂದು ತಿಂಗಳಲ್ಲೇ ಅದರ ಫಲವೇನೆಂಬುದು ನಿಮಗೆ ಗೊತ್ತಾಗುವದು.'

ಕೊಡಗು

ಮಾರ್ಚಿ ತಾರೀಕು ೨೨ ನೇ ಶುಕ್ರವಾರ ೧೯೪೦.

ಕೊಡಗಿನ ಮುಂದಿನ ಆಡಳಿತ ಕ್ರಮ.

ಹಿಂದೂಸ್ಥಾನದ ಇತರ ಭಾಗಗಳಂತೆಯೇ ಕೊಡಗಿನವರೂ ರಾಜಕೀಯ ವಿಚಾರದಲ್ಲಿ ಜಾಗೃತಿಗೊಂಡಿರುವರು. ತಮ್ಮ ಪ್ರಾಂತ್ಯದ ಆಡಳಿತವು ತಮ್ಮ ಪ್ರತಿನಿಧಿಯಿಂದ ನಡೆಸಲ್ಪಡಬೇಕೆಂಬ ಕಾಂಕ್ಷೆಯು ಇಲ್ಲಿಯವರಲ್ಲಿ ಹುಟ್ಟಿ ಈ ಕಾಂಕ್ಷೆಯನ್ನು ನೆರವೇರಿಸಿಕೊಡಲು ಸುಮಾರು ಇಪ್ಪತ್ತು ವರ್ಷಗಳಿಂದೀಚೆ ಚಳವಳ ನಡೆಸುತ್ತಾ ಬಂದಿರುವರು. ಈ ಮೊದಲು ಇಲ್ಲಿಯ ನಿವಾಸಿಗಳು ವಿಶೇಷ ರಾಜಭಕ್ತರೆಂದೆನ್ನಿಸಿಕೊಂಡಿದ್ದರು. ಆದರೆ ಹಿಂದೂಸ್ಥಾನದಲ್ಲಿ ಮಹಾತ್ಮ ಗಾಂಧಿಯವರಿಂದ ಅಸಹಕಾರ ಚಳವಳವು ಪ್ರಾರಂಭಿಸಲ್ಪಟ್ಟಾಗ್ಯೆ ಇಲ್ಲಿಯ ಯುವಕರೂ ಕಣ್ತೆರೆದು ಭಾರತ ಭೂಮಿಯ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವನ್ನು ವಹಿಸಿ ತಮ್ಮ ದೇಶಭಕ್ತಿಯನ್ನು ಪ್ರದರ್ಶಿಸಿದರು. ಜನರ ಹೋರಾಟದ ಫಲಿತಾಂಶವಾಗಿ 1924 ರಲ್ಲಿ ದೊರೆತ ನ್ಯಾಯನಿರ್ಧಾಯಕ ಸಭೆಯಲ್ಲಿಯೂ, ಸರಕಾರದ ಇತರ ಆಡಳಿತದಲ್ಲಿಯೂ ಇಲ್ಲಿಯ ದೇಶೀಯರು ಭಾಗವಹಿಸಿ ಆಡಳಿತೆ ನಡೆಸುವದರಲ್ಲಿ ತಮಗಿರುವ ಶಕ್ತಿ ಸಾಮರ್ಥ್ಯವನ್ನು ಬಹಿರಂಗ ಪಡಿಸಿರುವರು. ಇತ್ತೀಚಿಗ ರಾಷ್ಟ್ರೋದ್ಧಾರದ ಯಾವ ಚಳವಳದಲ್ಲೂ ಕೊಡಗಿನವರು ಹಿಂದೆ ಬಿದ್ದಿರುವದಿಲ್ಲ. ಆದರೆ ಹಿಂದೂ ದೇಶದ ಇತರ ದೊಡ್ಡ ಪ್ರಾಂತಗಳಿಗೆ ರಾಜಕೀಯ ಸುಧಾರಣೆಗಳನ್ನು ಆಗಿಂದಾಗ್ಯ ಕೊಡುತ್ತಾ ಬಂದರೂ ಈ ಚಿಕ್ಕ ಪ್ರಾಂತದವರ ಕೂಗಿಗೆ ಸರಕಾರದವರು ಸ್ವಲ್ಪವೂ ಗಮನ ಕೊಡಲಿಲ್ಲ. ಸತ್ಯಾಗ್ರಹ ಸಮರವು ಮುಗಿದ ನಂತರ ಇಲ್ಲಿಯ ನಿವಾಸಿಗಳು ತಮಗೂ ಜವಾಬ್ದಾರಿ ಸರ್ಕಾರ ಕೊಡಬೇಕೆಂದು ಆಂದೋಲನ ನಡೆಸಿದಾಗ್ಯೆ ಇಲ್ಲಿಯ ಸರಕಾರವನ್ನು ನಡೆಸಲು ಹಣದ ಅಭಾವವು ಅಡ್ಡಿಯಾಗುತ್ತಿರುವದರಿಂದ ಇವನ್ನು ಸರಿಗಟ್ಟಿದ ಕೂಡಲೇ ಸುಧಾರಣೆಯ ವಿಚಾರ ಆಲೋಚಿಸವಾಗುವದೆಂದು ಈ ಮಹತ್ವದ ಪ್ರಶ್ನೆಯನ್ನು ಸರಕಾರದವರು ಮುಂದೆ ಹಾಕುತ್ತಾ ಬಂದರು. ಅವರ ವಾದಕ್ಕನುಗುಣವಾಗಿ ಈಗ ಸುಮಾರು ಹತ್ತು ವರ್ಷಗಳಿಂದ ಕೊಡಗಿನ ಆದಾಯವೆಚ್ಚ ಪಟ್ಟಿಯಲ್ಲಿ ಖರ್ಚು ಉತ್ಪತ್ತಿಯನ್ನು ಮೀರುತ್ತಾ ಬರುತಿತ್ತು. ಈ ಕಾರಣ ಸರಕಾರದ ವಾದಕ್ಕೂ ಬಲವಿತ್ತು. ಹಣದ ಅಭಾವದಿಂದ ಇಲ್ಲಿ ಪ್ರತ್ಯೇಕ ಜವಾಬ್ದಾರಿ ಸರಕಾರವನ್ನು ನಡೆಸಲು ಸಾಧ್ಯವಿಲ್ಲವೆಂತಲೂ ಆ ದೆಸೆಯಿಂದ ಈ ಪ್ರಾಂತವನ್ನು ಮದ್ರಾಸ್ ಪ್ರಾಂತಕ್ಕಾಗಲೀ ಮೈಸೂರು ಸಂಸ್ಥಾನಕ್ಕಾಗಲೀ ಸೇರಿಸಬೇಕೆಂಬ ಚಳವಳವು ಕೆಲವರಿಂದ ನಡೆಸಲ್ಪಟ್ಟಿತು. ಕೊಡಗಿನ ತಲೆಭಾರ ಸರಕಾರದ ದುಂದುಗಾರಿಕೆಯ ಖರ್ಚನ್ನು ಕೋತೆಮಾಡಿದ್ದೇ ಆದರೆ ಇಲ್ಲಿಯ ಬಡ್ಜೆಟ್ಟನ್ನು ಸರಿಗಟ್ಟಲು ಮಾತ್ರವಲ್ಲ; ಇಲ್ಲಿ ಪೂರ್ಣ ಜವಾಬ್ದಾರಿ ಸರಕಾರ ನಡೆಸಲು ಸಾಧ್ಯವಿದೆಯೆಂದೂ, ಇದಕ್ಕಾಗಿ ದೊಡ್ಡ ಪ್ರಾಂತಕ್ಕೆ ಸೇರಿಸುವ ಆವಶ್ಯಕತೆಯೂ ಇಲ್ಲ; ಆದರಿಂದ ಪ್ರಯೋಜನವೂ ಇಲ್ಲವೆಂದೂ ಇನ್ನೊಂದು ಪಕ್ಷದವರು ಚಳವಳವನ್ನು ನಡೆಸಿದರು.

ಈ ಮಧ್ಯೆ ಮಧ್ಯವರ್ತಿ ಸರ್ಕಾರದವರಿಂದ ನೇಮಿಸಲ್ಪಟ್ಟ ಫೈನಾನ್ಸು ಆಫೀಸರವರು ಇಲ್ಲಿಯ ಸರಕಾರದ ಆರ್ಥಿಕ ಸ್ಥಿತಿಯನ್ನು ಅಜಮಾಯಿಸಿ ಮಾಡಿದ ಮಿಬ್ಬಂದಿಮೊತೆಯ ಸೂಚನೆಗಳನ್ನು ಸರಕಾರದವರು ಈಗ ಜಾರಿಗೆ ತಂದದರ ಫಲಿತಾಂಶವಾಗಿ ಕೊಡಗಿನ ಬಡ್ಜೆಟ್ಟನ್ನು ಸರಿಗಟ್ಟಲು ಸಾಧ್ಯವಾಗಿದೆ. ಎಂಬ ವಿಚಾರ ಕಳೆದ ವಾರ ಬರೆಯಲ್ಪಟ್ಟಿತ್ತು. ಆದ ಕಾರಣ ಹಣದ ಅಭಾವದ ನೆಪದಿಂದ ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಲಿಕ್ಕಾಗಲೀ, ಕೊಡಗಿಗೆ ಸಂಪೂರ್ಣ ಜವಾಬ್ದಾರಿ ಸರಕಾರ ಕೊಡಲಿಕ್ಕಾಗಲೀ ಅಡ್ಡಿ ಬರುವಂತಿಲ್ಲವೆಂಬುದು ಸ್ಪಷ್ಟವಾಗಿದೆ. ದಿನಚರ್ಯೆಯ ಆಡಳಿತ ಖರ್ಚಿಗೆ ಹಣವಿದ್ದರೂ ಕೂಡ ರಾಷ್ಟ್ರಾಭಿವೃದ್ಧಿಯ ಕಾರ್ಯಗಳಿಗೆ ಹಣವು ಬೇಕಾಗಿದೆ; ಅದಕ್ಕಾಗಿ ಮಧ್ಯವರ್ತಿ ಸರಕಾರದ ಸಹಾಯವನ್ನು ಪಡೆಯಬೇಕೆಂದೂ ಹಾಗೆ ಪಡೆಯಲು ಕೊಡಗಿಗೆ ಸಾಕಷ್ಟು ಹಕ್ಕಿದೆಯೆಂದೂ ಹಿಂದಿನ ವಾರದ ಲೇಖನದಲ್ಲಿ ಸೂಚಿಸಲಾಗಿತ್ತು. ಅಲ್ಲದೆ ಜವಾಬ್ದಾರಿ ಸರಕಾರವು ದೊರೆತ ಮೇಲೆ ಇನ್ನೂ ಖರ್ಚು ಕಡಿಮೆಮಾಡುವ ಅವಕಾಶವು ಇರಬಹುದು. ಹೇಗೂ ಕೊಡಗಿಗೆ ಜವಾಬ್ದಾರಿ ಸರಕಾರವನ್ನು ಕೊಡದೆ ಬಾಕಿ ಮಾಡಲು ಸರಕಾರದವರಿಗೆ ಇನ್ನು ಮುಂದೆ ಯಾವ ನ್ಯಾಯವಾದ ಕಾರಣವೂ ಇರುವದಿಲ್ಲ. ದೇಶೀಯರು ಈ ವಿಚಾರದಲ್ಲಿ ಕಾದು ಕಾದು ಬೇಸತ್ತಿರುವರು. ಜನಸಮುದಾಯದಲ್ಲಿ ದಿನೇದಿನೇ ಅತೃಪ್ತಿಯೂ, ಅಸಮಾಧಾನವೂ ಹೆಚ್ಚುತ್ತಿದೆ. ಯುವಕ ಪಂಗಡದಲ್ಲಿ ಅಸಮಾಧಾನವು ಮಿತಿ ಮೀರುವ ಚಿಹ್ನೆಗಳೂ ಕಂಡುಬರುತ್ತಿವೆ. ಹಿಂದೂಸ್ಥಾನದ ರಾಜಕೀಯ ವಾತಾವರಣವು ಈ ಪರಿಸ್ಥಿತಿಗೆ ಉತ್ತೇಜನಕೊಡುತ್ತಿದೆ. ಸರಕಾರದವರು ಈಗಿನ ಜನಸಮುದಾಯದ ನಿಜವಾದ ಮನೋಭಿಪ್ರಾಯವನ್ನು ಅರಿತುಕೊಂಡು ಅದನ್ನು ತೃಪ್ತಿಪಡಿಸಲು ಯತ್ನಿಸದಿದ್ದರೆ ಮುಂದೆ ಉಂಟಾಗಬಹುದಾದ ವಿಶೇಷ ಪರಿಸ್ಥಿತಿಗೆ ಅವರೇ ಕಾರಣಭೂತರಾಗುವರು. ಸ್ವಾತಂತ್ರ್ಯಕ್ಕಾಗಿ ಜನರಲ್ಲಿ ಉಕ್ಕಿ ಹೊರಡುತ್ತಿರುವ ಉತ್ಸಾಹವನ್ನು ತಡೆಯಲು ಯಾರಿಗೂ ಸಾಧ್ಯವಾಗಲಾರದು. ಒಂದಲ್ಲ ಒಂದುದಿನ ಅದು ಕಾರ್ಯರೂಪಗೊಂಡು ಫಲಿತಾಂಶವನ್ನು ಪಡೆಯದಿರದು. ಆದ್ದರಿಂದ ಸರಕಾರದವರು ದೇಶೀಯರ ಹುಟ್ಟು ಹಕ್ಕಾದ ಪೂರ್ಣ ಜವಾಬ್ದಾರಿ ಸರಕಾರವನ್ನು ಕೊಡಲು ಶೀಘ್ರದಲ್ಲೇ ತಕ್ಕ ಏರ್ಪಾಡು ಮಾಡಿ ದೇಶದಲ್ಲಿ ಹಬ್ಬುತ್ತಿರುವ ಅಸಮಾಧಾನವನ್ನು ನೀಗುವರಾಗಿ ನಂಬುತ್ತೇವೆ.

ಕೇಕ್ಸ್‌ಟನ್ ಹಾಲ್‌ನಲ್ಲಿ ಹತ್ಯಾಕಾಂಡ.

ಸರ್. ಮೈಕೇಲ್ ಒಡ್ವಯರರ ಕೊಲೆ!

ಉದ್ಧಾಮ ಸಿಂಗನ ಸೆರೆ.

ಲಂಡನಿನ ಕೇಕ್ಸ್‌ಟನ್ ಹಾಲ್‌ನಲ್ಲಿ ತಾರೀಕು 13 ರಲ್ಲಿ ಒಂದು ಖಾಸಗಿ ಸಭೆಯು ಸೇರಿದಿತ್ತು. ಲಂಡನಿನ ಆಧ್ಯಮಹಾಶಿಯರು ನೆರೆದಿದ್ದರು. ಅನೇಕ ಪತ್ರಿಕಾ ಪ್ರತಿನಿಧಿಗಳೂ, ಪ್ರೇಕ್ಷಕರೂ ನೆರೆದಿದ್ದರು. ಅವರಲ್ಲಿ ಉದ್ಧಾಮಸಿಂಗನೆಂಬ ಹಿಂದೀಯನು ಪತ್ರಿಕಾ ಪ್ರತಿನಿಧಿಯಂತೆ ನಟಿಸಿ ಹಾಲ್‌ನೊಳಗೆ ಪ್ರವೇಶಿಸಿದನು. ಮೀಟಿಂಗು ನಡೆಯುತ್ತಿದ್ದಂತೆ ತಮ್ಮ ಭಾಷಣ ಮಾಡಲು ಸರ್ ಮೈಕೇಲ್ ಒಡ್ವಯರರು ಭಾಷಣವೇದಿಕೆಗೆ ಬಂದರು. ಆ ಸಮಯದಲ್ಲಿ ಹಾಲ್‌ನ ಕೊನೆಯಲ್ಲಿ ನಿಂತಿದ್ದ ಈ ಉದ್ಧಾಮಸಿಂಗ್ ಎಂಬ ಯುವಕನು ತನ್ನೊಳಗೆ ಅಡಗಿಸಿಟ್ಟಿದ್ದ ಪಿಸ್ತೂಲನ್ನು ತೆಗೆದುಕೊಂಡು 'ದಾರಿಬಿಡಿ, ದಾರಿಬಿಡಿ' ಎಂದು ಕೂಗಿಕೊಂಡು ಮುಂದಕ್ಕೆ ಬಂದು ಸರ್ ಒಡ್ವಯರರಿಗೆ ಎರಡು ಗುಂಡುಗಳನ್ನು ಹಾರಿಸಿದನು. ಇದರಿಂದ ಅವರು ಕೆಳಗೆ ಬಿದ್ದು ಮೃತರಾದರು. ನಂತರ ಯುವಕನು ಇಂಡಿಯಾ ಸೆಕ್ರೆಟರಿಯವರಾದ ಲಾರ್ಡ್ ಜೆಟ್ಲೆಂಡರವರಿಗೂ, ಪಂಜಾಬಿನ ಗ[illegible]ರಾಗಿದ್ದ ಸರ್ ಲೂಯಿಡೆನ್‌ರಿಗೂ, ಬೊಂಬಾಯಿ ಪ್ರಾಂತದ ಗವರ್ನರಾಗಿದ್ದ ಲಾರ್ಡ್ ಲ್ಯಾಮಿಂಗ್‌ಟನ್‌ರವರಿಗೂ ಗುಂಡು ಹಾರಿಸಿದನು. ಇವರೆಲ್ಲರಿಗೂ ಘಾಯಗಳಾದರೂ ಅದೃಷ್ಟವಶಾತ್ ಮೃತ್ಯುವಿಂದ ಪಾರಾಗಿರುವರು. ಇವರುಗಳೆಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಭಾರತ ಸೆಕ್ರೆಟರಿಗಳಾದ ಲಾರ್ಡ್ ಜೆಟ್ಲೆಂಡರವರು ಚಿಕಿತ್ಸೆ ಹೊಂದಿ ತಮ್ಮ ಕಾರ್ಯಕ್ಕೆ ಹಾಜರಾಗಿರುವರು. ಈ ಅತ್ಯಾಚಾರದ ಸಂಬಂಧ ಉದ್ಧಾಮಸಿಂಗ್ ಎಂಬ ಭಾರತೀಯನನ್ನು ವಶ್ಯಗಿರಿ ಮಾಡಿರುವರಂತೆ. 1919 ರಲ್ಲಿ ಅಮೃತಸರದಲ್ಲಿ ನಡೆದ ಹತ್ಯಾಕಾಂಡದ ಸಂದರ್ಭದಲ್ಲಿ ಆಗ ಪಂಜಾಬಿನ ಗವರ್ನರರಾಗಿದ್ದ ಈ ಸರ್ ಮೈಕೇಲ್ ಒಡ್ವಯರರವರು ಈ ಉದ್ಧಾಮ ಸಿಂಗನ ಸಹೋದರನ ಮರಣಕ್ಕೆ ಕಾರಣರಾದರೆಂದೂ ಅದ ಪ್ರಯುಕ್ತ ಈ ರೀತಿ ಆತನು ಸೇಡು ತೀರಿಸಿಕೊಂಡಿರುವನೆಂದೂ ಊಹಾಪೋಹಗಳು ಹೊರಟಿವೆ. ಆತನು ಲಂಡನ್ ನಗರಕ್ಕೆ ಆರ ಹೊಸಬನೆಂದೂ ಅಲ್ಲಿರುವ ಯಾವ ಹಿಂದೀಯನಿಗೂ ಆತನ ಗುರುತಿಲ್ಲವೆಂದೂ, ಆತನು ಆರು ತಿಂಗಳ ಮೊದಲೇ ಇಂಗ್ಲೆಂಡಿಗೆ ಹೋಗಿ ಅಲ್ಲಿಯ ಹಳ್ಳಿಗಳಲ್ಲಿದ್ದು ನಗರಕ್ಕೆ ಪ್ರಥಮತಃ ತಾ. 13 ರಲ್ಲೇ ಬಂದಿರುವದೆಂದೂ ಊಹಿಸಲಾಗಿದೆಯಂತೆ. ಆರೋಪಿಯು ಸಂತೋಷದಿಂದಿರುವುದಾಗಿ ತಿಳಿದು ಬಂದಿದೆ. ಅವನ ವಿಚಾರಣೆಯು ಬರುವ ತಿಂಗಳ ಪ್ರಥಮದಲ್ಲಿ ನಡೆಯುವದೆಂದು ತಿಳಿಯುತ್ತದೆ.

ಹಿಂದೀಯರ ಅನುತಾಪ.

ಕೊಲೆಯ ವಿಚಾರದಲ್ಲಿ ಮಹಾತ್ಮ ಗಾಂಧಿಯವರು ತಮ್ಮ ಅನುತಾಪವನ್ನು ವ್ಯಕ್ತಪಡಿಸುತ್ತಾ ಈ ಅತ್ಯಾಚಾರವು ಹುಚ್ಚನ ಹುಚ್ಚುತನವೆಂದೂ, ಇದರಿಂದ ಯಾವ ಉದ್ದೇಶವೂ ಸಾಧಿಸದೆಂದೂ, ಇದರಿಂದ ರಾಜಕೀಯ ವಿಚಾರದಲ್ಲಿ ಯಾವುದೇ ವಿಧದ ವ್ಯತ್ಯಾಸವಾಗಲಿಕ್ಕಿಲ್ಲವೆಂದೂ ಹೇಳಿರುವರು. ಪಂಡಿತ ಜವಾಹಿರ್‌ಲಾಲ್, ಬಾಲಗಂಗಾಧರ ಖೇರ್, ಅಲ್ಲದೆ ರಾಷ್ಟ್ರಪತಿಗಳಾಗಿದ್ದ ರಾಜೇಂದ್ರ ಪ್ರಸಾದ್ ಮೊದಲಾದ ರಾಜಕೀಯ ಮುಖಂಡರೂ, ಇಂಗ್ಲೆಂಡಿನಲ್ಲಿರುವ ಎಲ್ಲಾ ಹಿಂದೀಯ ಸಂಸ್ಥೆಗಳೂ, ಬಂಗಾಳ, ಮಧ್ಯ ಸರಕಾರ ಎಸೆಂಬ್ಲಿಗಳೂ ತಮ್ಮ ನಿಷೇಧವನ್ನು ವ್ಯಕ್ತಪಡಿಸಿವೆ. ರಾಮಘರ ಕಾಂಗ್ರೆಸಿನಲ್ಲಿ ಸೇರಿದ ಕಾಂಗ್ರೆಸ್ ಅಧಿಕಾರ ಮಂಡಳಿಯವರೂ ಮಹಾತ್ಮರ ಪ್ರೇರಣೆಯಂತೆ ಈ ಬಗ್ಗೆ ತಮ್ಮ ಅನುತಾಪವನ್ನು ಸೂಚಿಸುವ ಒಂದು ಠರಾವನ್ನು ಪಾಸು ಮಾಡಿರುವರು. ಈ ಕೊಲೆಯಿಂದಾಗಿ ಭಾರತದ ಅಹಿಂಸಾ ಯುದ್ಧವಾದ ಸ್ವಾತಂತ್ರ್ಯ ಹೋರಾಟವು ಕಳೆಗುಂದಿದೆಯೆಂದು ಕೆಲವರು ಅಭಿಪ್ರಾಯ ವ್ಯಕ್ತಮಾಡಿರುವರು.

ಕಾಂಗ್ರೆಸ್ ಬಹಿರಂಗ ಅಧಿವೇಶನ.

ತಾರೀಕು 19 ರಲ್ಲಿ ನಡೆಯಬೇಕಿದ್ದ ಈ ಬಹಿರಂಗ ಅಧಿವೇಶನವು ಮಳೆಯ ತೊಂದರೆಯಿಂದಾಗಿ ಒಂದು ದಿನ ಮುಂದರಿಸಲ್ಪಡಬೇಕಾಯಿತು. ತಾರೀಕು 20 ರಲ್ಲಿ ಅಧಿವೇಶನವು ನಡೆಯಿತು. ವಿಷಯನಿಯಾಮಕ ಸಭೆಯಲ್ಲಿ ಪಾಸಾದ ಯುದ್ಧ ಘೋರಣೆಯ ಹಾಗೂ, ಭಾರತದ ಮುಂದಿನ ಧ್ಯೇಯದ ಠರಾವನ್ನು ಅಂಗೀಕರಿಸಲಾಯಿತು. ಮಹಾತ್ಮ ಗಾಂಧಿಯವರು ಬೋಧಪ್ರದವಾದ ಭಾಷಣವನ್ನು ಮಾಡಿದರು. ಇದರ ವಿವರವಾದ ವಿಚಾರ ಮುಂದಿನ ವಾರ ಪ್ರಕಟಿಸಲ್ಪಡುವದು.

ವರ್ತಮಾನ ಸಂಗ್ರಹ.

ಒ ಕ್ಕ ಪೇ ಟೆ.

ಈಸ್ಟರ್ ಹಬ್ಬದ ಬಗ್ಗೆ ಮಾರ್ಚ ತಾ. 22ರಿಂದ 25ರ ವರೆಗೆ ಬ್ಯಾಂಕುಗಳಿಗೆ ನಾಲ್ಕು ದಿನಗಳ ರಜೆ ಇರುವದು.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 170ರ ವರೆಗೂ ಏಲಕ್ಕಿ ಮಣಕ್ಕೆ ರೂ. 30ರ ವರೆಗೂ ಕ್ರಯವಿದೆ.

ಸಹಕಾರಿ ಇನ್ಸ್ಪೆಕ್ಟರುಗಳಿಗೂ ಮತ್ತು ಸುಪರ್‌ವೈಜರುಗಳಿಗೂ ಸಹಕಾರದ ವಿಚಾರ ಪುನರ್ಮನನದ ತರಬೇತು ಬರುವ ತಾ. 3ರಿಂದ 14ರ ವರೆಗೆ ಇಲ್ಲಿ ನಡೆಯುವದು.

ಚೀಫ್ ಕಮಿಷನರು ಕೌನ್ಸಿಲ್ ಮೀಟಿಂಗು ಮುಗಿಸಿಕೊಂಡು ತಾ. 17ರಲ್ಲಿ ಬೆಂಗಳೂರಿಗೆ ವಾಪಸು ಹೋದರು.

ಕೊಡಗು ರೆಡ್‌ಕ್ರಾಸ್ ಸಂಘದ ಮಡಿಕೇರಿ ಶಾಖೆಯಲ್ಲಿ ಈ ವಾರ ಯುದ್ಧ ಹಾಗೂ ಸೆಂಟ್ ಡನ್‌ಸ್ಟನ್ ಫಂಡಿಗಾಗಿ 133 ರೂ. ಜಮೆಯಾಗಿದೆ.

ವೀರಾಜಪೇಟೆ

ಇಲ್ಲಿಯ ಜಾನುವಾರುಗಳ ಜಾತ್ರೆಯು ತಾರೀಕು 16ರಿಂದ 19ರ ವರೆಗೆ ಜಯಪ್ರದವಾಗಿ ನಡೆಯಿತು.

ತಲಚೇರಿ ಖಾದಿ ವಸ್ತ್ರಾಲಯದವರು ಖಾದಿ ಬಟ್ಟೆಯನ್ನು ವಿಕ್ರಯಿಸಲು ವೀರಾಜಪೇಟೆಗೆ ತಾ. 13-3-40ರಲ್ಲಿ ಬಂದಿರುವರೆಂದು ತಿಳಿದುಬರುತ್ತದೆ.

ಇಲ್ಲಿ ಕಳೆದವಾರ ನಡೆದ ನ್ಯೂ ವಿಕ್ಟೋರಿಯಾ ಬೇಡ್‌ಮಿಂಟನ್, ಆಶ್ರಯದಲ್ಲಿ ನಡೆದ ಟೂರ್ನಮೆಂಟಿನ ಕಡೆಯ ಆಟವು ನ್ಯೂ ವಿಕ್ಟೋರಿಯಾ ಟೀಮಿಗೂ, ಹೈಸ್ಕೂಲ್ ಟೀಮಿಗೂ ನಡೆದು ನ್ಯೂ ವಿಕ್ಟೋರಿಯ ಟೀಮಿನವರು ಹೈಸ್ಕೂಲ್ ಟೀಮಿನವರನ್ನು ಸೋಲಿಸಿ ಕಪ್ಪನ್ನು ಪಡೆದರೆಂದು ತಿಳಿದುಬರುತ್ತದೆ.

ಬೇತರಿ.

ಇಲ್ಲಿ ಕಳೆದ ವರ್ಷ ನಡೆದಂತೆಯೇ ತಾರೀಕು 23ರಿಂದ ನಾಲ್ಕು ದಿವಸಗಳ ವರೆಗೆ ಜಾತ್ರೆ ನಡೆಯುವದೆಂದೂ, ಪೂಜೆ ಪುರಸ್ಕಾರಗಳೂ, ದನಗಳ ಪ್ರದರ್ಶನವೂ ನಡೆಯುವದೆಂದೂ ತಿಳಿದು ಬರುತ್ತದೆ.

ಮೂರ್ನಾಡು

ಆದಿ ಶ್ರೀ ಕಾವೇರಿ ಬಸ್ ಸರ್ವಿಸಿನ ಇನ್ನೊಂದು ಲೈನು ತಾರೀಕು 13-3-40 ರಿಂದ ಮಡಿಕೇರಿ-ಮೂರ್ನಾಡು-ವೀರಾಜಪೇಟೆ ಮಾರ್ಗದಲ್ಲಿ ಓಡಾಡಲು ಪ್ರಾರಂಭವಾಗಿದೆ. (ಈ ಲೈನಿನ ವಿಚಾರ ಒಂದು ಬಾತ್ಮಿ ಬಂದಿದೆ. ಸ್ಥಳಾಭಾವದಿಂದ ಈ ವಾರ ಪ್ರಕಟಿಸಲಾಗಲಿಲ್ಲ.)

ಸೋಮವಾರಪೇಟೆ.

ಇಲ್ಲಿ ಹಾಗೂ ತೊರೆನೂರಿನಲ್ಲಿ ಪ್ಲೇಗು ರೋಗ ಅಂಟಿದೆಯಾಗಿಯೂ, ಅದನ್ನು ನಿವಾರಿಸುವ ಪ್ರಚಂಡ ಪ್ರಯತ್ನಗಳಾಗುತ್ತಿವೆಯೆಂದೂ ತಿಳಿಯಬರುತ್ತದೆ.

ಶನಿವಾರಸಂತೆ.

ತಾ. 15-3-40ನೇ ಶುಕ್ರವಾರ ರಾತ್ರಿ 9 ಘಂಟೆ ಸಮಯದಲ್ಲಿ ಬಾಣವಾರಕ್ಕೆ ಹೋಗುವ ರಸ್ತೆ ಸಮೀಪ ಗ್ರಾಮವಾದ ಮಾಲಂಬಿ ಹತ್ತಿರ ಶ್ರೀಯುತ ಮುಂಡಿಯೋಳಂಡ ಕುಟ್ಟಪ್ಪನವರು (ಕಾರಗೋಡು ಘಾರಸ್ಟರು) ಒಂದು ದೊಡ್ಡ ಹೆಬ್ಬುಲಿಯನ್ನು ಗುಂಡು ಹೊಡೆದು ಕೊಂದಿದ್ದಾರೆ. ಇವರ ಹಾಗೂ ಈ ಹುಲಿಯ ಮೆರವಣಿಗೆ ತಾ. 16ರಲ್ಲಿ ಶನಿವಾರಸಂತೆ ಪೇಟೆಯಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿತು. ಈ ವರೆಗೆ ಈ ಮಹನೀಯರು 4 ಹುಲಿಗಳನ್ನು ಕೊಂದಿದ್ದಾರಂತೆ.

ನಿಧನ ವಾರ್ತೆ.

ತಾರೀಕು 15-3-40ರಲ್ಲಿ ಅಮ್ಮತ್ತಿ ಗ್ರಾಮದ ಶ್ರೀ ಮಾಚಿಮಾಡ ಅಪ್ಪಚ್ಚನವರ ಪತ್ನಿ ತಂಗವ್ವನವರು ತಮ್ಮ 79ನೇ ವಯಸ್ಸಿನಲ್ಲೂ, ತಾ. 20ರಲ್ಲಿ ರಿಟಯರ್ಡ್ ಪಾರುಪತ್ಯಗಾರರಾಗಿ ಮಡಿಕೇರಿಯಲ್ಲಿದ್ದ ಶ್ರೀ ಮುಂಡೇಮಂಡ ಅಪ್ಪಚ್ಚನವರೂ ಸ್ವರ್ಗಸ್ಥರಾದರೆಂದು ತಿಳಿಯುತ್ತೇವೆ.

ಹಿಂದೂದೇಶ.

ಡಾಲ್ಮಿಯ ನಗರದಲ್ಲಿನ ಮುಷ್ಕರದ ಸಂಬಂಧ ಶ್ರೀ. ಎಚ್. ರಹಮಾನ್ ಮತ್ತು 20 ಮಂದಿಯನ್ನು ಕೈದು ಮಾಡಿರುವರು.

ಶಿವಮೊಗ್ಗದಲ್ಲಿ ನಡೆಯಲಿರುವ ಮೈಸೂರು ಕಾಂಗ್ರೆಸ್ ತೃತೀಯ ಅಧಿವೇಶನದ ಅಧ್ಯಕ್ಷರ ಸ್ಥಾನಕ್ಕೆ ಶ್ರೀ. ಕೆ. ಟಿ. ಭಾಷ್ಯಂ ಐಯ್ಯಂಗಾರರವರ ಹೆಸರನ್ನು ಸೂಚಿಸಲಾಗಿದೆ.

ಲಾಹೋರಿನಲ್ಲಿ ಖಾಕ್‌ಸಾರರಿಗೂ, ಪೋಲೀಸಿನವರಿಗೂ ತಿಕ್ಕಾಟ ನಡೆದು ಪೋಲೀಸರು ಗುಂಡು ಹಾರಿಸಬೇಕಾಗಿ ಬಂತು. ಆ ಪ್ರಯುಕ್ತ 28 ಜನರು ಮೃತರಾದುದಲ್ಲದೆ 39 ಜನರಿಗೆ ಜಖಂ ಆಗಿದೆ.

ಬರುವ ವರ್ಷದ ಕಾಂಗ್ರೆಸ್ ಅಧಿವೇಶನವನ್ನು ತಮ್ಮ ಪ್ರಾಂತದಲ್ಲಿ ನಡೆಸಬೇಕೆಂದು ಮದ್ರಾಸ್, ಗಡೀನಾಡು, ಪಂಜಾಬು, ಸಂಯುಕ್ತ ಪ್ರಾಂತದವರು ಆಹ್ವಾನಿಸಿರುವರು. ಈ ಬಗ್ಗೆ ತೀರ್ಮಾನ ಮಾಡಲು ವರ್ಕಿಂಗ್ ಕಮಿಟಿಗೆ ಅಧಿಕಾರ ಕೊಡಲಾಗಿದೆ.

ಮೈಸೂರು ಹೈಕೋರ್ಟಿನವರು ಶ್ರೀಗಳಾದ ಕೆ. ಟಿ. ಭಾಷ್ಯಂ, ಸಂಜೀವಿರಾಮಯ್ಯ, ಸಿದ್ದಾಭಿರಾಮನ್, ರಾಮಾನುಜಾಚಾರ್‌ರವರ ಹೆಸರುಗಳನ್ನು ವಕೀಲರ ಪಟ್ಟಿಯಿಂದ ಹೊಡೆದು ಹಾಕಿ, ಇನ್ನು ಮುಂದೆ ಸಂಸ್ಥಾನದ ಯಾವ ಕೋರ್ಟಿನಲ್ಲೂ ವಕಾಲತ್ತನ್ನು ನಡಿಸಕೂಡದೆಂದು ಆರ್ಡರು ಮಾಡಿದ್ದಾರೆ.

ಬೊಂಬಾಯಿ ಮಿಲ್ಲಿನ ಮಾಲಕರು ಮುಷ್ಕರ ಹೂಡಿದ ಕೆಲಸಗಾರರಿಗೆ ಈ ಯುದ್ಧ ಕಾಲದಲ್ಲಿ ತಾವು ಯಾವ ನಿರ್ದಿಷ್ಟವಾದ ಭರವಸೆಯನ್ನೂ ಕೊಡಲಾರೆವೆಂದಿದ್ದಾರೆ. ಮುಷ್ಕರವನ್ನು ಬಗೆ ಹರಿಸಲೆತ್ನಿಸಿದ ಬೊಂಬಾಯಿಯ ಕಾರ್ಪರೇಷನ್ ಮೇಯರರ ಪ್ರಯತ್ನಗಳೆಲ್ಲ ನಿಷ್ಫಲವಾಗಿವೆ.

ಕಾಲೇಜು ಕ್ಲಾಸುಗಳಿಗೆ ಪ್ರವೇಶ ದೊರಕಿಸಿ ಕೊಡಲಿರುವ ಮೆಟ್ರಿಕ್ಯುಲೇಶನ್ ಪರೀಕ್ಷೆಯೊಂದು ಹೊಸದಾಗಿ ಮದ್ರಾಸಿನಲ್ಲಿ ಏರ್ಪಡಲಿದೆ. ಇದು 1943 ರಿಂದ ಜಾರಿಗೆ ಬರುವುದಾದರೂ ಬರುವ ವರ್ಷದಿಂದ ನಾಲ್ಕನೆಯ ಫಾರ್ಮಿನಲ್ಲಿ ಇದರ ಶಿಕ್ಷಣೆಯಾಗಿದೆ. ಸೆಕೆಂಡರಿ ಶಿಕ್ಷಣದಲ್ಲಿ ಇದೊಂದು ಹೊಸ ಬದಲಾವಣೆ.

ಈ ವರ್ಷದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಗೆ ಈ ಕೆಳಗಿನ ಹೆಸರುಗಳನ್ನು ರಾಷ್ಟ್ರಪತಿಗಳು ಆರಿಸಿರುವರು. ಶ್ರೀಗಳಾದ ಪಂಡಿತ ಜವಾಹರಲಾಲ್‌ನೆಹರೂ, ಜಮ್ನಾಲಾಲ್‌ಬಜಾಜ್, ಕೃಪಾಲಿನಿ, ಬುಲಾಭಾಯಿ ದೇಸಾಯಿ, ಸಿ. ರಾಜಗೋಪಾಲಚಾರಿ. ಆಸಾಫ್ ಅಲಿ, ಸರೋಜಿನಿ ನಾಯಡು, ರಾಜೇಂದ್ರಪ್ರಸಾದ್, ಅಬ್ದುಲ್ ಗಫೂರ್‌ಖಾನ್, ಪಿ. ಸಿ. ಘೋಷ್, ಶಂಕರರಾವ್‌ದೇವ್, ಸಯ್ಯದ್ ಮಹಮ್ಮದ್, ಸರ್ದಾರ್ ಪಟೇಲ್.

ಸಿಂಧ್ ಪ್ರಾಂತದ ಮಂತ್ರಿ ಮಂಡಳದಲ್ಲಿ ಪುನಃ ಗಡಿಬಿಡಿಯುಂಟಾಗಿದೆ. ಅಲ್ಲಿನ ಎಸೆಂಬ್ಲಿಯಲ್ಲಿ ಬಜೆಟ್ ಅಧಿವೇಶನ ಕಾಲದಲ್ಲಿ ಮಂತ್ರಿಮಂಡಳದ ಕೋರಿಕೆಯನ್ನು, ಆ ಸಭಾ ಮೆಂಬರರ ಬಹು ಸಂಖ್ಯಾಕರು ತಿರಸ್ಕರಿಸಿದ ಕಾರಣ, ಪ್ರಧಾನರಾದ ಶ್ರೀ ಅಲ್ಲಾಬಕ್ಷರು, ಮುಂದಿನ ಕೋರಿಕೆಗಳನ್ನು ಮುಂದಿಡಿಸಿ, ಎಸೆಂಬ್ಲಿಯ ಮೀಟಿಂಗನ್ನು ಕಾಲ ನಿರ್ಧಾರವಿಲ್ಲದಂತೆ, ಮುಂದರಿಸಿದರು. ಈಗ ಇನ್ನೊಂದು ಮಂತ್ರಿಮಂಡಳದ ರಚನೆಯ ಏರ್ಪಾಡಿಗಾಗಿ, ಅಲ್ಲಿನ ಗವರ್ನರರು, ಎದುರು ಪಕ್ಷದ ಮುಖಂಡರಾದ ಬಂಡೇ ಅಲೀಖಾನ್‌ರವರನ್ನು ಕರೆಸಿಕೊಂಡು ಮಾತಾಡಿದರು. ಅವರು ಮಂಡಲದ ರಚನೆಗೆ ಒಪ್ಪಿರುವರು.

ವಿದೇಶ.

ಟರ್ಕಿ ದೇಶದಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕಂಪದ ದೆಸೆಯಿಂದ ನೆಲಸಮವಾದ ಊರು ಕೇರಿಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಆ ದೇಶದ ಸರ್ಕಾರದವರು 80 ಸಾವಿರ ಹೊಸ ಮನೆಗಳನ್ನು ಕಟ್ಟುವ ಯೋಚನೆ ಮಾಡಿರುತ್ತಾರೆ.

ರಷ್ಯ-ಫಿನ್ ಲ್ಯಾಂಡಿನ ಒಪ್ಪಂದದ ಪರಿಣಾಮವಾಗಿ ಫಿನ್‌ಲೆಂಡಿನ 10 ಲಕ್ಷ ಮಂದಿ ಪ್ರಜೆಗಳು ಕೆಲ ಭಾಗಗಳಿಂದ ಹೊರಡಬೇಕಾಗಿದೆ. ಹಲವು ಮಂದಿ ಪ್ರಜೆಗಳು ಊರು ಬಿಟ್ಟಿದ್ದವರು ಈಗ ಸ್ವಗೃಹಗಳಿಗೆ ಹಿಂದಿರುಗುತ್ತಲಿದ್ದಾರೆ.

ಈ ವರ್ಷದ ಅಂತ್ಯದೊಳಗಾಗಿ ಪಶ್ಚಿಮ ರಣರಂಗದ ವಿಚಾರದ ಕುರಿತು ಒಂದು ತೀರ್ಮಾನಕ್ಕೆ ಬರುವಂತೆ ಹಿಟ್ಲರ್ ಪ್ರಬಲವಾದ ಯುದ್ಧ ಸಿದ್ಧತೆ ಮಾಡುತ್ತಿರುವದಾಗಿ ಸುದ್ದಿ.

ದಕ್ಷಿಣ ಯುರೋಪಿಯ ದೇಶಗಳೊಳಗೆ ಒಂದು ಸಂಧಾನದ ಕರಾರು ಆಗಬಹುದೆಂಬ ಪ್ರಬಲ ವಾರ್ತೆ ಹರಡಿದೆ.

ಫಿನ್‌ಲೆಂಡಿನ ಕೈಗೊಂಬೆ ಸರಕಾರದ ಮುಖ್ಯಾಧಿಕಾರಿಯಾದ ಒಟ್ಟೋ ಕುಸ್ಸಿನ್ ಇನ್ನೂ ನನ್ನು ಹೆಲ್ಸಿಂಕಿಯಲ್ಲಿ ವಧಿಸಿರುವದಾಗಿ ಸುದ್ದಿ ಹರಡಿದೆ. ಯುದ್ಧಕ್ಕೆ ಪೂರ್ವದಲ್ಲಿ ಆತನು ಫಿನ್‌ಲೆಂಡಿನ ಕುರಿತು ತಪ್ಪು ಗ್ರಹಿಕೆಗೆ ಅವಕಾಶ ಕೊಡುವ ಸುದ್ದಿಗಳನ್ನು ರಷ್ಯದವರಿಗೆ ಕೊಟ್ಟಿದ್ದನೆಂದೂ, ಅದರಿಂದ ಕೋಪಗೊಂಡ ಸ್ಟಾಲೀನನೇ ಈ ವಧೆಗೆ ಅಪ್ಪಣೆ ಮಾಡಿದನೆಂದೂ ಪ್ರಕಟವಾಗಿದೆ.

ಫಿನ್‌ಲೆಂಡಿನ ಒಟ್ಟು ವಿಸ್ತೀರ್ಣವಾದ 150, 000 ಚದರ ಮೈಲುಗಳಲ್ಲಿ ಹತ್ತನೇ ಒಂದಂಶವು ಈಗ ಕೈತಪ್ಪಿ ಹೋಯಿತೆಂದು ತಿಳಿದುಬರುತ್ತಿದೆ.

ಜಪಾನು ಚೀನದ ಸ್ವಾತಂತ್ರ್ಯವನ್ನು ಮನ್ನಿಸುವನು. ಆದರೆ ಮಾರ್ಷಲ್ ಚಾಂಗ್-ಕೈ-ಷೇಕರ ಸರಕಾರದ ಮೇಲಿನ ಚಳವಳವನ್ನು ಬಿಡಲಾರದು.' ಹೀಗೆಂದು ಜಪಾನಿನ ಪ್ರಧಾನರ ಹೇಳಿಕೆ.

ಯುದ್ಧ ಮತ್ತು ರಾಜಿಯ ಪರಿಣಾಮವಾಗಿ ಫಿನ್‌ಲೆಂಡಿನ 4 ಲಕ್ಷ ಮಂದಿ ಮನೆಮಠಗಳನ್ನು ಕಳೆದುಕೊಂಡ ಅನಾಥರಾಗಿರುತ್ತಾರೆ.

ಇಲ್ಲಿ 10 ಲಕ್ಷ ಮಂದಿ ತರುಣರ ಸೈನ್ಯವೊಂದು ಬೇಕಾದಾಗಲೂ ಯುದ್ಧಕ್ಕೆ ಸಿದ್ಧವಾಗಿದೆ ಎಂದು ಅಲ್ಲಿನ ಯುದ್ಧದ ಅಂಡರ್ ಸ್ಟೇಟ್ ಸೆಕ್ರೆಟರಿಗಳ ಹೇಳಿಕೆ. ಸದ್ಯ ರೋಮಿನಲ್ಲಿ ಯಾವತ್ತು ಗೇಟುಗಳ ಕಬ್ಬಿಣದ ಕೈಪಿಡಿ ಹಾಗೂ ಇತರ ಕಬ್ಬಿಣದ ಯೋಗ್ಯ ಸಾಧನಗಳನ್ನು ಸಂಗ್ರಹಿಸುವಂತೆ ರಾಜಾಜ್ಞೆಯಾಗಿದೆ.

ತಾಮ್ರ, ಹಿತ್ತಾಳೆ, ತವರ ಮೊದಲಾದ ಕೆಲ ಕೆಲವು ಲೋಹಗಳನ್ನು, ಅದಷ್ಟು ಮಟ್ಟಿಗೆ ಸಂಗ್ರಹಿಸಿಕೊಡಬೇಕಾಗಿ, ಫೀಲ್ಡ್ ಮಾರ್ಷಲ್ ಜನರಲ್ ಗೋರಿಂಗರು ಜರ್ಮನ್ ಜನಾಂಗಿಕರಲ್ಲಿ ವಿನಂತಿಮಾಡಿಕೊಂಡಿದ್ದಾರೆ. ಎಪ್ರಿಲ್ ತಾ. 20 ಹಿಟ್ಲರ್ ಹುಟ್ಟಿದ ಹಬ್ಬವಾಗಿದ್ದು, ಅಂದು ಈ ಸಂಗ್ರಹಕಾರ್ಯ ನಡೆಯಬೇಕಾಗಿದೆ.

PUBLICATION.

Applications are invited from natives of Coorg (by birth or domicile) up to 1-4-1940 for a temporay vacancy for a post of a draftsman in the office of the Executive Engineer, P. W. D. Mercara. The minimum qualification required of the applicant is that he should have passed the lower Subordinate Examination of the College of Engineering Guindy (Madras University) or an equivalent Examination of the Mysore Engineering Course. The scale of pay is 50-4/2-90.

For further particulars please address the Manager Executive Engineer's office, Mercara.

M. N. KAMATH,
Executive Engineer,
Coorg.

ಕೌನ್ಸಿಲು ಬಡ್ಜೆಟ್ ಮೀಟಿಂಗು.

ಕಳೆದ ಸಂಚಿಕೆಯಿಂದ ಮುಂದುವರಿದದ್ದು

ಶ್ರೀ ಎಸ್. ಎಸ್. ರಾಮಮೂರ್ತಿಯವರು.

'ನಮ್ಮ ಮುಂದಿರುವ ಬಡ್ಜೆಟ್ಟು ಸ್ವಲ್ಪ ಮಟ್ಟಿಗೆ ನಮಗೆ ತೃಪ್ತಿಯನ್ನುಂಟುಮಾಡುತ್ತಿದೆ. ಕೊಡಗಿನದ್ದು ತಲೆಭಾರ ಸರ್ಕಾರವೆಂದು ಹೆಸರಾಗಿತ್ತು. ಜನತೆಯೂ ವರೂ ಈ ತಲೆಭಾರ ಸರ್ಕಾರವನ್ನು ನಿಷೇಧಿಸಿ ಆಂದೋಲನ ಎಬ್ಬಿಸಿದ್ದುಂಟು. ಆದರೆ ಈ ಕಳೆದ ಎರಡು ವರ್ಷಗಳಿಂದ ಒಂದು ವಿಧದ ಸಿಬ್ಬಂದಿ ಖೋತೆಯನ್ನು ಜಾರಿಗೆ ತಂದಿರುವರು. ಇದರಿಂದ ಕೊಡಗಿನ ತಲೆಭಾರದ ಖರ್ಚು ಕೆಲವು ಮಟ್ಟಿಗೆ ಕಮ್ಮಿಯಾಗಿದೆ. ಖರ್ಚು ಕಮ್ಮಿ ಮಾಡಲು ಕೈಕೊಂಡ ವಿಧಾನವನ್ನು ದೇಶದಲ್ಲಿ ಹಲರು ವಿರೋಧಿಸುತ್ತಿರುವರು. ಕೆಳ ತರಗತಿಯ ನೌಕರರನ್ನು ತೆಗೆದು ಹಾಕುವ ಸರ್ಕಾರದ ವಿಧಾನವು ನಿಜವಾಗಿಯೂ ಖಂಡನಾರ್ಹವಾದದ್ದು.'

ಶ್ರೀ ಕೆ. ಮಲ್ಲಪ್ಪನವರು.

'ನಮ್ಮ ಮುಂದಿರುವ ಬಡ್ಜೆಟ್ಟನ್ನು ಪರಿಶೀಲಿಸಿದರೆ ಈ ಪ್ರಾಂತದ ಭವಿಷ್ಯತ್ತು ಅಂಧಾಕಾರದಿಂದ ತುಂಬಿರುವಂತೆ ನನಗೆ ಭಾಸವಾಗುತ್ತದೆ. ಕರುಣೆಯಿಲ್ಲದ ಸಿಬ್ಬಂದಿ ಖೋತೆಯಿಂದ ಬಡ್ಜೆಟ್ಟನ್ನು ಸರಿಗಟ್ಟಿರುವದಾಗಿದೆ. ನನ್ನ ಅಭಿಪ್ರಾಯದಲ್ಲಿ ಬಡ್ಜೆಟ್ಟು ಭದ್ರವಾದ ತಳಹದಿಯಲ್ಲಿಲ್ಲವೆಂದು ಕಾಣುತ್ತೆ. ಅನುಭವಸ್ಥರಾದ ಚೀಫ್ ಕಮಿಶನರನ್ನು ವಜಾ ಮಾಡಿ ಬದಲು ಕೆಳ ದರ್ಜೆಯ ಐ. ಸಿ. ಯಸ್. ಆಫೀಸರನ್ನು ನೇಮಿಸುವದರಿಂದ ಖರ್ಚು ಕಮ್ಮಿಯಾಗುತ್ತದೇನೋ ನಿಜ. ಆದರೆ ಅದರಷ್ಟೇ ಆಡಳಿತದಲ್ಲಿ ನ್ಯೂನತೆಯುಂಟಾಗುವದು ನಿಜ. ಖಜೇರಿಗಳನ್ನು ನಾಶ ಮಾಡಿದ್ದು ಕಲವರ ದೃಷ್ಟಿಗೆ ತುಂಬಾ ಕಷ್ಟ ಉಂಟಾಗುತ್ತದೆ. ಕೊಡಗಿನಲ್ಲಿ ಪಾನ ನಿರೋಧವನ್ನು ತರುವ ಬಗ್ಗೆ ಅನೇಕ ಸಾರಿ ಇಲ್ಲಿ ತರ್ಕ ವಿತರ್ಕಗಳಾಗಿದೆ. ಸರ್ಕಾರದವರು ಬೇಗನೆ ಈ ಬಗ್ಗೆ ತೃಪ್ತಿ ಪಡಿಸುವದು ಅಗತ್ಯ. ರೈತ ಜನರ ಹಿತದೃಷ್ಟಿಯಿಂದ ಸರ್ಕಾರವು ಏನೂ ಮಾಡಿರುವದಿಲ್ಲ. ವ್ಯವಸಾಯಕ್ಕೆ ನೀರು ಸರಬರಾಯಿಯ ಬಗ್ಗೆ ಸರ್ಕಾರವು ಅನಾಸಕ್ತಿಯನ್ನು ತಳೆದಿದೆಯೆಂದರೆ ಅತ್ಯುಕ್ತಿಯಾಗದು. ಈ ಬಡ್ಜೆಟ್ಟು ಕೊಡಗು ಪ್ರತ್ಯೇಕ ಇರಬಹುದೆಂಬ ಸಾಧ್ಯತೆಯನ್ನು ತೋರಿಸುತ್ತದೆಯೆಂದು ಶ್ರೀ ಸಿ. ಐ. ಬೆಳ್ಯಪ್ಪನವರು ಹೇಳಿದರು. ನನ್ನ ಅಭಿಪ್ರಾಯದಲ್ಲಿ ನಿಜಕ್ಕೂ ಬೇರೆನ್ನೇ ನಿರ್ವಹಿಸುವದು ಇಂದು ಕಷ್ಟವಾಗಿದೆ. ಅಂದಮೇಲೆ ಮುಂದೆ ಜನತೆಯ ಶ್ರೇಯಸ್ಸನ್ನು ಬಯಸುವ ರಾಷ್ಟ್ರಾಭಿವೃದ್ಧಿಯ ಕಾರ್ಯಕಲಾಪಗಳನ್ನು ಕೈಕೊಳ್ಳಲು ಹಣ ಕೈ ತೋಂಪರ ಇರದು. ಮಧ್ಯ ಸರಕಾರದಿಂದ ಸಹಾಯ ಸಿಗುವದೆಂಬ ನಿರಾಧಾರದ ವಿಚಾರ. ಒರಿಸಾ, ಸಿಂಧ್, ಈ ಪ್ರಾಂತಗಳಿಗೆ ಸಹಾಯ ದೊರೆಯುತ್ತಿರುವದನ್ನು ನಾನು ಒಪ್ಪುತ್ತೇನೆ. ಆ ಪ್ರಾಂತಗಳ ಸ್ಥಿತಿಯೂ, ನಮ್ಮ ಕೊಡಗಿನ ಸ್ಥಿತಿಯೂ ತೀರಾ ಭಿನ್ನವಾಗಿದೆ. ಮೂರು [illegible] ಒಗ್ಗೊನ್ನು ಡಿ. ಜಡ್ಜರು ನಿವೃತ್ತರಾಗದೇ ಕೆಂಬ ಮುಖ್ಯ ಅರ್ಹತೆ ಪಡೆದವರು [illegible] ದಿವ್ಯರೆ ನಿವೃತ್ತ ಜ್ಯುಡಿಷ್ಯಲ್ ಹುದ್ದೆದಾರರನ್ನು ನೇಮಿಸಬಹುದೆಂತ ಶ್ರೀ ಸಿ. ಐ. ಬೆಳ್ಯಪ್ಪನವರ ಸೂಚನೆಯನ್ನು ಒಪ್ಪುವದು ಕಷ್ಟ. ಸಾಧಾರಣವಾಗಿ ನಿವೃತ್ತರಾಗುವದೆಂದರೆ ಕೆಲಸ ಮಾಡಲು ಶಕ್ತಿ ಇಲ್ಲದವರು ಎಂದು ಹೇಳಬಹುದು. ಆದ ಮೇಲೆ ಇಂಥಾ ಕೆಲಸ ಮಾಡಲು ಸಾಧ್ಯವಿಲ್ಲದವರನ್ನು ಡಿ. ಜಡ್ಜರ ಹುದ್ದೆಗೆ ತಂದರೆ ಸರಕಾರ ಹೇಗೆ ನಡೆದೀತು? ಆದ್ದರಿಂದ ಈ ಸೂಚನೆಯು ಒಪ್ಪತಕ್ಕಂಥಾದ್ದಲ್ಲ.'

ಶ್ರೀ ಎನ್. ಸೋಮಣ್ಣನವರು.

'ರಾಜಕೀಯ ಹಾಗೂ ಆರ್ಥಿಕ ತಳಹದಿಯ ಮೇಲೆ ವಿವಿಧ ಅಭಿಪ್ರಾಯಗಳು ಸೂಚಿತವಾಗಿದೆ. ಈ ಬಡ್ಜೆಟ್ಟನಲ್ಲಿ ಈ ಪ್ರಾಂತದ ರಾಜಕೀಯ ಭವಿತವ್ಯದ ವಿಚಾರ ಯಾವ ವಿಚಾರವೂ ನಡೆದಿಲ್ಲ. ಕಾಂಗ್ರೆಸ್ ಪಕ್ಷದವರು ಈ ಬಡ್ಜೆಟ್ಟನ್ನು ಹೊಗಳಿ ಮಾತಾಡುತ್ತಿರುವರು. ಆದರೆ ನಿಜವಾಗಿಯೂ ಈ ಬಡ್ಜೆಟ್ಟು ಯಾವ ಪಕ್ಷದವರಿಗೂ ಸಮಾಧಾನ ಉಂಟುಮಾಡುವಂತಿಲ್ಲ. ಕೋಮುವಾರು ಪ್ರತಿನಿಧ್ಯದಂತೆ ಸಂಕಾರ ಹುದ್ದೆಗೆ ಜನರನ್ನು ಆರಿಸುವ ಯೋಜನೆಯನ್ನು ತಂದ ಸರ್ಕಾರಕ್ಕೆ ನಾವು ವಂದನಹೇಳಿದೆ. ಆದರ ಕಾಂಗ್ರೆಸ್ ಪಕ್ಷದ ಮುಂದಾಳು ಈ ವಿಚಾರದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ವ್ಯಸನಪಡ ಬೇಕಿದೆ. ಮದ್ರಾಸು ಹಾಗೂ ಇತರ ಪ್ರಾಂತಗಳಲ್ಲಿ ಹಿಂದುಳಿದ ವರ್ಗದವರಿಗೆ ವಿಶೇಷ ಪ್ರಾತಿನಿಧ್ಯ ಕೊಡಲ್ಪಟ್ಟಿದೆ. ಕೊಡಗಿನಲ್ಲಿ ನಡೆದ ಸಿಬ್ಬಂದಿ ಖೋತೆ ಅನ್ಯಾಯವಾದುದಾಗಿದೆ. ಮುಂದೆಯೂ ಸಿಬ್ಬಂದಿ ಖೋತೆಗೆ ಸಾಧ್ಯವಿದೆ. ಇಷ್ಟರವರೆಗೆ ನಮ್ಮೊಡನಿದ್ದು ನಮಗೆ ಮಾರ್ಗದರ್ಶಿಯಂತಿದ್ದ ಚೀಫ್ ಕಮಿಷನರು ಹೋಗುವದು ವಿಷಾದದ ಸಂಗತಿ. ಈ ಸಂದರ್ಭದಲ್ಲಿ ನನ್ನ ಧನ್ಯವಾದಗಳನ್ನು ಅವರಿಗೆ ಅರ್ಪಿಸುವವನಿದ್ದೇನೆ.'

ಶ್ರೀ ಅಬ್ದುಲ್ ರಹಮಾನ್ ಖಾನ್ ರವರು.

'ಬಡ್ಜೆಟ್ಟಿನ ವಿಚಾರದಲ್ಲಿ ನನ್ನ ಅನೇಕ ಸಹ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. ಈ ಸಂದರ್ಭದಲ್ಲಿ ನಮ್ಮನ್ನಗಲಿ ಹೋಗುವ ಮಾನ್ಯ ಅಧ್ಯಕ್ಷರಿಗೆ ಹಿಂದುಳಿದ ವರ್ಗದ ಪರವಾಗಿ ನನ್ನ ಅನಂತ ವಂದನೆಗಳನ್ನು ಅರ್ಪಿಸಬೇಕಾಗಿದೆ. ನಮ್ಮೊಡನೆ ಭ್ರಾತೃಭಾವದಿಂದ ಈ ವರೆಗೆ ಸಹಕರಿಸಿ ನಮ್ಮನ್ನು ಸುಗಮವಾದ ಹಾದಿಯಲ್ಲಿ ಮುನ್ನಡೆಸುತ್ತಿದ್ದ ಇಂದು ನಮ್ಮನ್ನಗಲುವದೆಂದರೆ ವಿಷಾದದ ಸಂಗತಿ. ಅವರಿಗೆ ಆಯುರಾರೋಗ್ಯವನ್ನು ದಯಪಾಲಿಸಲೆಂದು ದೇವರಲ್ಲಿ ಬೇಡುತ್ತೇನೆ.'

ಶ್ರೀ ಬಿ. ಯಂ. ಬೆಳ್ಯಪ್ಪನವರು.

'ಸರ್ ಎಂದ್ರನಾಥ ಠಾಗೋರರವರು [illegible] ಯಾವ [illegible] ವೇ ಆಗಲಿ ನಮ್ಮ ಮುಂದಿನ ಜನಾಂಗದ ಭವಿಷ್ಯವನ್ನು ನಿರ್ಧರಿಸುವಂಥಾದ್ದಿರಬೇಕು ಅಂದಿರುವರು. ನಮ್ಮ ಈ ಕೊಡಗು ನಾಡನ್ನು ಬ್ರಿಟಿಷರಿಗೆ ಕೊಟ್ಟದ್ದಾಗಿದೆ. ಬ್ರಿಟಿಷರು ಈ ನಾಡನ್ನು ಗೆದ್ದಿಲ್ಲ. ಬ್ರಿಟಿಷ್ ಸರ್ಕಾರದ ಆಡಳಿತೆಯು ಕೊಡಗು [illegible] ಗಳು ಸಂದರೂ [illegible] ರುವದಿಲ್ಲ. [illegible] ಇಂಥಾ ರೀತಿಯ [illegible] ವಾಗಿದೆ. ಈ ರೀತಿಯ [illegible] ನತೆಯನ್ನು ಗುರುತಿಸಿಯಿಲ್ಲದಲು ಸರಕಾರವು ಮಾಡುವ ಮಾರ್ಗಗಳಿಂದು ಹೇಳಬಯಸುತ್ತೇನೆ. ಕೋಮುವಾರು ಸಮಸ್ಯೆಯು ಜನತೆಯ ಮುನ್ನಡೆಗೆ ಒಂದು ಕಂಟಕಪ್ರಾಯವಾಗಿದೆ. ಕೊಡಗಿನ ಚೀಫ್ ಕಮಿಷನರಾಗಿದ್ದ ಲೆಫ್ಟಿನೆಂಟ್ ಕರ್ನಲ್ [illegible] ರವರು [illegible] ಯಾವ ಸಂಸ್ಥೆಯಲ್ಲಿ ಕೊಡಗಿನಂಥಾ ರಾಷ್ಟ್ರವು ಭಾರತದಲ್ಲಿಲ್ಲ. ಇಲ್ಲಿಯ ಪ್ರಕೃತಿ ಹಾಗೂ [illegible] ಕೃತಿ ನಾಗರಿಕತೆಯ [illegible] ವರು [illegible] ಶತಮಾನದ ಬ್ರಿಟಿಷ್ ಸಾಮ್ರಾಜ್ಯದಲ್ಲಿ ನಮ್ಮ ಆರ್ಥಿಕ, ಸಾಮಾಜಿಕ, ನೈತಿಕ ಕ್ಷೇತ್ರದಲ್ಲಿ ನಡೆದು ಇಂದು ನಮ್ಮ ವಿವಿಧ ರೀತಿಯ ಕಷ್ಟಗಳಿಂದ ಪರಗಳಿಗೊಳಗಾಗಿರುವೆವು. ಭೂಮಿ ಕೆಲ ಭೂಮಿ ಇಲ್ಲವಾಗುತ್ತಿದ್ದೆ. ಜಮ್ಮ ಭೂಮಿಗಳು ಮಾಯವಾಗುತ್ತಿವೆ. ಬಡತನದ ಭಯಂಕರತೆಯೂ, ರೋಗತೆಯೂ ಗಳಿ ಜನತೆಯು ಕರುಳಿನ ಕೂಗನ್ನು ಹಿಂಗಿಸಲಾರವು. ನಿರಂಕುಶಾಧಿಕಾರವು ದಿನೇ ದಿನೇ ಬೆಳೆಯುತ್ತಿವೆ. ರಾಷ್ಟ್ರೀಯ ಅಭಿವೃದ್ಧಿಯ ಕಾರ್ಯಗಳನ್ನು ಮೂಲೆಗೊತ್ತಿ ಬಡ್ಜೆಟ್ಟನಲ್ಲಿ ಉಳಿವರು ತೋರಿಸಿರುವರು. ಇಂಥಾ ಕಣ್ಣು ಕಟ್ಟನಿಂದ ದೇಶದ ಪ್ರಗತಿಯು ಸಾಧಿಸದು. ಇಲ್ಲಿ ಈ ಮೊದಲು ಮಾತಾಡಿದ ಯಂ. ಯಂ. ಬೆಳ್ಯಪ್ಪನವರಿಗೆ ಜವಾಬನ್ನು ಕೊಡಬಯಸುತ್ತೇನೆ. ಈ ಮೊದಲು ಸಿ. ಐ. ಬೆಳ್ಯಪ್ಪನವರು ಪಾನ ನಿರೋಧದ ಠರಾವೊಂದನ್ನು ಮಂಡಿಸಿದಾಗ ಶ್ರೀ ಎಂ. ಎಂ. ಬೆಳ್ಯಪ್ಪನವರು ಅದನ್ನು ತೀವ್ರವಾಗಿ ವಿರೋಧಿಸಿ ಜನತೆಯ ಸಂಪ್ರದಾಯಕ್ಕೆ ಈ ರೀತಿಯ ವರ್ತನೆ ವಿರೋಧವೆಂದು ಮಾತಾಡಿದರು. ಆದರೆ ಇಂದು ಶ್ರೀ ಯಂ. ಯಂ. ಬೆಳ್ಯಪ್ಪನವರು ಪಾನ ನಿರೋಧದ ಬಗ್ಗೆ ವಹಿಸುತ್ತಿರುವ ಶ್ರಮವು ಶ್ಲಾಘನೀಯವಾದದ್ದೇ. ಅವರ ಮನೋಸ್ಥಿತಿಯು ಇಷ್ಟು ಬೇಗ ಬದಲಾದದ್ದು (ಅದರ ಹಿಂದಿನ ಗುಟ್ಟಿನ ಅರ್ಥವೇನೂ ಇಲ್ಲದಿದ್ದರೆ) ಸಂತೋಷವೇ.

ಇಂದಿನ ಸಿವಿಲ್ ಸರ್ಜನರಾದ ಕೆಪ್ಟನ್ ಚಾರ್ಲಿವುಡ್ ಐ. ಎಂ. ಎಸ್. ರವರು ಆಸ್ಪತ್ರೆಗಳ [illegible] ಕಮ್ಮಿ ಮಾಡಿರುವದಲ್ಲಿಗೆ ಕೆಲವ [illegible] ದಕ್ಷತೆಯಿಂದ ನಡೆಸುತ್ತಿದ್ದಾರೆ. ಕಡುಬಡವರವರೆಗೆ ಕರುಣೆಯನ್ನು ತೋರಿಸುತ್ತಿದ್ದಾರೆ. ಇದರಿಂದಾಗಿ ಆಸ್ಪತ್ರೆಗೆ ಹೋಗುವ ಕಾಯಿಲೆಯವರ ಸಂಖ್ಯೆ ಕಮ್ಮಿಯಾಗುತ್ತಿದೆ. ಇಂಥಾ ಮಾನ್ಯರಿಗೆ ಇಲ್ಲಿ ನನ್ನ ವಂದನೆಯನ್ನರ್ಪಿಸುತ್ತೇನೆ. ಕೊಡಗಿಗೆ ನಂತರ [illegible] ಬಹುದೆಂಬುದರಲ್ಲಿ ಹೆಚ್ಚು ಅನುಮಾನವಿಲ್ಲ. ಸರಕಾರವೂ, ಜನತೆಯೂ ಅದಕ್ಕೆ ಪ್ರಯತ್ನ ಮಾಡಬೇಕಿದೆ. ಇಷ್ಟು ದಿನಗಳ ವರೆಗೆ ನಮ್ಮೊಡನಾಡಿ [illegible] ಚೀಫ್ ಕಮಿಷನರು ಇನ್ನು [illegible] ನಮ್ಮೊಡನಿರುವದಿಲ್ಲ. ಅವರಿಗೆ ನಮ್ಮ ವಂದನೆ [illegible] ಆ ಮೇಲೆ ಆಳಿಕೆಯ [illegible] ಹೋಗಿಯುವವರೊಡನೆ [illegible] ಕೊಡಗಿನ [illegible] ವರನ್ನು [illegible] ಆಯುರಾರೋಗ್ಯವನ್ನು [illegible] ಯಾಗಿ ಬಾಳಿಯಲೆಂದು [illegible].'

ಶ್ರೀ ಕೆ. ಸಿ. ಕರುಂಬಯ್ಯನವರು.

ಕೊಡಗಿನ ಬಡ್ಜೆಟ್ಟನಲ್ಲಿ ಈ ಎರಡು ವರ್ಷಗಳಿಂದ ಉಳಿತಾಯವಾಗಿದ್ದರೂ ಅದರಲ್ಲಿ ಹೊಗಳಿಕೊಳ್ಳಬಹುದ ವಿಚಾರವೇನೂ ಇಲ್ಲ. ಈಗ ಬಾರಿಯಲ್ಲಿ ತಂದಿರುವ ಸಿಬ್ಬಂದಿ ಖೋತೆಯು ನ್ಯಾಯಬದ್ಧವಾಗಿಲ್ಲದಿದ್ದರೂ ಅದರ ಫಲಿತಾಂಶವು ಮುಂದ ಸಿಬ್ಬಂದಿ ಖೋತೆಯನ್ನು ಸಮರ್ಥಕವಾಗಿ ಜನತೆಯು ಕೇಳಿಕೆಯಂತೆ ನಡಿಸುವಗೆ ಬೆಳ್ಳಿನ ಉಳಿತಾಯವಾಗುವದೆಂಬುದನ್ನು ಸಾರುತ್ತಿದೆ. ಬಡ್ಜೆಟ್ಟನ್ನು ವಿವರವಾಗಿ ಪರಿಶೀಲಿಸಿದರೆ ರಾಷ್ಟ್ರೀಯ ಕಲ್ಯಾಣ ಕಾರ್ಯಗಳಿಗೆ ಹಣ ವಿನಿಯೋಗ ಮಾಡಿದ್ದು ಕಂಡು ಬರುವದಿಲ್ಲ. ಡಿ. ಬೋರ್ಡಿಗೆ ಕೊಡುತ್ತಿದ್ದ ವಂತಿಗೆಯನ್ನು ಕಮ್ಮಿ ಮಾಡಿ ರಾಷ್ಟ್ರ [illegible] ಧಕ್ಕೆ ತಂದಿರುವರು. ಬೇರೆ ಪ್ರಾಂತ್ಯಗಳಲ್ಲಿ ನಿರಕ್ಷರತಾ ನಿವಾರಣೆ ಕೈಕೊಂಡಿರುವಾಗ ನಮ್ಮ ಸರ್ಕಾರವು ಅದಕ್ಕೆ ವ್ಯತಿರಿಕ್ತ ವರ್ತಿಸುತ್ತಿದೆ. ವ್ಯವಸಾಯಗಾರರ ಸ್ಥಿತಿಯೂ ವರೂ ದಿನೇ ದಿನೇ ವಿಪನ್ನಾವಸ್ಥೆಗೆ ತಲಪುತ್ತಿದೆ. ಸರ್ಕಾರವು ಈ ಇಲಾಖೆಯ ಬಗ್ಗೆ ತೋರಿಸುತ್ತಿರುವ ಅನಾಸಕ್ತಿಯು ಹೇಳಲಾರದಲ್ಲ. ಆದ್ದರಿಂದ ರಾಷ್ಟ್ರದ ಬೆನ್ನೆಲುಬೆನಿಸಿರುವ ರೈತನ ಉತ್ಪಾದನಾ ಶಕ್ತಿಯು ಕುಗ್ಗಿ ಅವನು ನಿಸ್ತೇಜನಾಗಿದ್ದರೆ ಅದು ವಿಶೇಷವಲ್ಲ. ಪಶುವೈದ್ಯ ಇಲಾಖೆಯು ರೈತನ ಅಭಿವೃದ್ಧಿಗೆ ಪ್ರಥಮ ಸಾಧನ. ಇದುವರೂ ಸರಕಾರದಿಂದ ಸರಿಯಾದ ಸಹಾಯವನ್ನು ಪಡೆಯುತ್ತಿಲ್ಲ. ಸರಕಾರವು ಮಾಡುತ್ತಿರುವ ಇಂದಿನ ಅಲ್ಪದೆಯ ಪ್ರಯತ್ನವು ಹೊಗಳಲರ್ಹವಾಗಿಲ್ಲ. ಸಹಕಾರದ ಇಲಾಖೆಯೂ ವರೂ ಸರಕಾರದಿಂದ ಪ್ರೋತ್ಸಾಹವನ್ನು ಪಡೆದಿಲ್ಲ. ಬ್ಯಾಂಕಿಗಾಗಲೀ, ಬ್ಯಾಂಕಿನ ಮೇಲ್ವಿಚಾರಣಾ ರಾಜಿಗಾಗಲೀ ಸರ್ಕಾರವು ಸಹಾಯ ಮಾಡುವದು ಅಗತ್ಯ ಬೇಕು. [illegible] ಯಾಬಲ್ಲೂ ಜನತೆಯ ಆ

ರೋಗ್ಯದ ಬಗ್ಗೆ ಹೆಚ್ಚಿನ ನಿಗ ವಹಿಸಬೇಕಿದೆ. ಪೋಲೀಸು ಇಲಾಖೆಯ ವಿಚಾರ ನೋಡಿದರೆ ದಿನೇ ದಿನೇ ಖರ್ಚು ಕೆಲಸಗಳು ಹೆಚ್ಚುತ್ತಿರುವುದು ಕಂಡು ಬರುತ್ತದೆ. ಇಲಾಖೆಯ ಮೇಲಧಿಕಾರಿಗಳು ಇವುಗಳ ಬಗ್ಗೆ ಹೆಚ್ಚಿನ ಶ್ರಮ ವಹಿಸಬೇಕಿದೆ. ಸೀರಾಮರ ಯೋಜನೆಯು ಸರ್ಕಾರದ ಯೋಜನೆಯಲ್ಲೇ ಇಲ್ಲವೆಂಬಂತೆ ಭಾಸವಾಗುತ್ತದೆ. 1924ಂದ ಅಂದರೆ ಕೌನ್ಸಿಲು ಕೊಡಗಿಗೆ ಬಂದಂದಿನಿಂದ ದೇಶದ ಪರಿಸ್ಥಿತಿಯು ಏನೇನೂ ಸುಧಾರಿಸಿಲ್ಲ. ಕೊಡಗಿನಲ್ಲಿ ಕೋಮುವಾರು ಭಿನ್ನಭೇದವು ಹೆಚ್ಚಿಲ್ಲ. ಆದರೆ ಈಗ ಕೋಮುವಾರು ಪ್ರಾತಿನಿಧ್ಯದ ಯೋಜನೆಯು ಒಗ್ಗಟ್ಟಿನಲ್ಲಿದ್ದ ಈ ದೇಶದಲ್ಲಿ ಕೋಮುವಾರು ವಿಷಾಣುವನ್ನು ಬಿತ್ತಿದೆ. ಈ ಕೋಮುವಾರು ವಿಷದಿಂದ ಜನತೆಗಾಗಲೀ ಸರಕಾರಕ್ಕಾಗಲೀ ಹಿತವಾಗದು. ಆದರಿಂದ ಇದನ್ನು ಸರಕಾರವು ಒಡನೆ ತೆಗೆದು ಹಾಕಬೇಕು. ಕೊಡಗಿಗೆ ಸುಧಾರಣೆಗಳು ಈ ಮೊದಲೇ ಸಲ್ಲಬೇಕಿತ್ತು. ಇನ್ನಾದರೂ ತಡವಾಗಿಲ್ಲ. ಇಂಡಿಯಾ ಸರ್ಕಾರದಿಂದ ಸುಧಾರಣೆಯನ್ನೂ ಪಂಕ್ತಿಗೆಯನ್ನೂ ಪಡೆಯಲು ಸ್ಥಳೀಯ ಸರ್ಕಾರವು ಅಚಲ ಪ್ರಯತ್ನ ಪಡಬೇಕಿದೆ.'

ಲೆ. ಕರ್ನಲ್ ಮೂರ್ಲೆಸ್ಂಡ್‌ರವರು.

'ಕೊಡಗಿನ ಚೀಫ್ ಕಮಿಷನರಾಗಿಯೂ, ಕೌನ್ಸಿಲಿನ ಅಧ್ಯಕ್ಷರಾಗಿಯೂ ನಮ್ಮೊಡನಿದ್ದು ಕಾರ್ಯಭಾರಗಳನ್ನು ಸುವ್ಯವಸ್ಥಿತ ರೀತಿಯಿಂದ ನಡೆಸುತ್ತಿದ್ದ ನಮ್ಮ ಅಧ್ಯಕ್ಷರು ಇನ್ನು ಮುಂದೆ ನಮ್ಮೊಡನೆ ಇರಲಾರರಾದ್ದರಿಂದ ಅವರಿಗೆ ನನ್ನ ಮನದಾಳದ ವರ ವಂದನೆಗಳನ್ನರ್ಪಿಸುತ್ತೇನೆ. ಮುಂದೆ ಅವರಿಗೆ ಆಯುರಾರೋಗ್ಯವನ್ನು ಭಗವಂತನು ಕೊಡಲಿ.'

ಶ್ರೀ. ಅಜ್ಜಿಕುಟ್ಟೀರ ಸುಬ್ಬಯ್ಯನವರು.

'ನನ್ನ ಹಿಂದಿನವರು ಕಳೆದ [illegible] ಬೆನ ನಿರುದ್ಯೋಗ ಸಮಸ್ಯೆ ಮೊದಲು ಸರಕಾರದ ಸರ್ವಿಸಿನಲ್ಲಿಯ [illegible] ದು ಹುದ್ದೆಗಳನ್ನು [illegible] ದ ಬಗ್ಗೆ [illegible] ರಿಗೆ ಈ ಸಭೆಯಲ್ಲಿ ಹೇಳಿದ ನಾನು ಸದ್ಯ ದ ಗೊತ್ತುವಳಿಗಳನ್ನೇ [illegible] ಕಾಣಿಸಿರುವ ಸರಕಾರದ ಪತ್ರಿಕೆಯ [illegible] ನ ಪ್ರತಿನಿಧಿಗಳಾದ ನಮ್ಮ ಸ್ವೀಯರನ್ನು ಬಗ್ಗು ಬಡಿಯುವಂತಹ ಸಭೆಯಲ್ಲಿ [illegible] ನಹಿತಚಿಂತಕರ ಸೋಗಿನಲ್ಲಿ [illegible] ದ ಅಧಿಕಾರ ಬಲವಿದ್ದ ಸ್ವಾರ್ಥಸಾಧಕ ದುರುಳ [illegible] ವು ತನ್ನ ಮನಸ್ಸಿಗೆ ಹೊಳೆದಂತೆ [illegible] ಜ್ಯಶಾಹೀ ಹಿತವನ್ನು ನೋಡುವುದು ಇಲ್ಲಿ ನಿರಂಕುಶ ಅಧಿಕಾರವನ್ನು [illegible] ಬೋಧಿಸುವ ವಿಚಾರವಲ್ಲ. ಕೊಡಗಿನ ಸರಕಾರವು ಒಟ್ಟಿನ ವಿಚಾರದಲ್ಲಿ ಜಗತ್ತಿನ ಯಾವದೊಂದು ಸರಕಾರದೊಡನಾದರೂ ಸ್ಪರ್ಧಿಸಲಿಲ್ಲವು. ಅನ್ಯಾಯದ ರೀತಿಯಿಂದ ಸಿಬ್ಬಂದಿ ಹೋಕೆ ಮಾಡಿದ್ದ ರೂ ಬಜೆಟ್ಟಿನಲ್ಲಿ ಉಳಿತಾಯ ಕಂಡುಬರುತ್ತದೆ. ಆದ್ದರಿಂದ ಜನಪ್ರತಿನಿಧಿಗಳ ಸೂಚನೆಯಂತೆ ಸರಕಾರವು ವರ್ತಿಸಿ ಹೋಕೆ ಮಾಡಿದರೆ ಆರ್ಥಿಕ ವಿಚಾರದಲ್ಲಿ ಕೊಡಗು ಸಂಕಟಪಡಬೇಕಿಲ್ಲ. ಸರಕಾರವು ದೇಶದ ಬೆನ್ನೆಲುಬಿನಂತಿರುವ ವಿವಿಧ ಇಲಾಖೆಗಳನ್ನು ನಿರ್ಲಕ್ಷಿಸಿದೆ. ರೈತನಿಗೆ ತಲೆಭಾರದ ಕಂದಾಯ ಹೊರಿಸಿ ಆತನ ಉತ್ಪಾದನ ಶಕ್ತಿಯನ್ನು ಕುಂದಿಸಿದೆ. ಮಳೆಯ ಅಭಾವದಿಂದಾಗಿ ರೈತನು ಕಂಗೆಟ್ಟಿದ್ದಾನೆ. ನೀರಾವರಿ ಯೋಜನೆಯು ಸರಕಾರದ ಯೋಜನೆಯಲ್ಲೇ ಇಲ್ಲ. ಒಟ್ಟಾರೆ ನನ್ನ ಅಭಿಪ್ರಾಯದಲ್ಲಿ ಈ ಕೌನ್ಸಿಲು ಕೇವಲ ಬಡಜನತೆಯ ಆರ್ಥಿಕ ಶೋಷಣೆ ಮಾಡುವ ಒಂದು ವಿಧಾನವೆಂದು ಹೇಳಬೇಕಾಗಿದೆ. ಕರನಿರಾಕರಣೆ ಮಾಡುವ ನಮ್ಮ ಸಹೋದರರಿಗೆ ಕೌನ್ಸಿಲಿನಿಂದ ಒಂದಾದರೂ ಹೇಳಿಕೊಳ್ಳಬಹುದಾದ ಸುಧಾರಣೆಯನ್ನು ಕೊಡಿಸುವದು ಅಸಾಧ್ಯವಾಗಿರುವಾಗ, ದೇಶೀಯರ ಪ್ರತಿನಿಧಿಗಳನ್ನು ಕೌನ್ಸಿಲಿಗೆ ಕಳುಹಿಸುವದು ಕೇವಲ ನಕಲೀ ವಿಚಾರವೇ ಆಗಿದೆ.'

ಫೈನಾನ್ಸ್ ಮೆಂಬರು.

ಬಜೆಟ್ಟಿನ ವಿಚಾರದ ನನ್ನ ವಿವರವಾದ ಭಾಷಣವನ್ನು ಈ ಮೊದಲೇ ನಿಮ್ಮ ಮುಂದಿಟ್ಟಿರುವೆನು. ಈಗ ಸದ್ಯ ನಾನು ಹೇಳಬಯಸುವ ವಿಚಾರವೆಂದರೆ ಚೀಫ್ ಕಮಿಷನರ ಹುದ್ದೆಯ ವಿಚಾರ. [illegible] ಚೀಫ್ ಕಮಿಷನರ ಸ್ಥಳ ಬದಲಾಯಿಸುವದು ಕೆಲವರಿಗೆ ಅನುಚಿತವಾಗಿ ಕಂಡುಬಂದಿರಬಹುದು. ಆದರೆ ನನ್ನ ಅಭಿಪ್ರಾಯದಲ್ಲಿ ಕೊಡಗಿನ ಚೀಫ್‌ಕಮಿಷನರು ಕೊಡಗಿನಲ್ಲೇ ಇರಬೇಕಾದುದು ಅಗತ್ಯ. ಆದ್ದರಿಂದ ಬದಲಾವಣೆಯು ದೇಶ ಹಿತಕಾರಕವೆಂದೇ ಹೇಳಬಯಸುತ್ತೇನೆ. ಈಗಿನ ಚೀಫ್ ಕಮಿಷನರು ಶೀಘ್ರದಲ್ಲೇ ನಮ್ಮನ್ನಗಲುವ ಪ್ರಯುಕ್ತ ಅವರಿಗೆ ನಮ್ಮ ವಂದನೆಯನ್ನು ಈ ಮೂಲಕ ಅರ್ಪಿಸುತ್ತೇನೆ.'

(ಮುಂದುವರಿಯುವದು.)

ನಾಪುಗಡದಲ್ಲಿ ಕಳ್ಳ ಕೊರಮರ ಓಡಾಟ.

ಈಗಾಗಲೇ 18 ಮಂದಿಯ ದಸ್ತಗಿರಿ

ನಾಪುಗಡಕ್ಕೆ ಪ್ರಸಿದ್ಧ ಕಳ್ಳರೂ, ಪ್ರತಿನಿಧಿಗಳೂ ಕಾಂಗ್ರೆಸ್ ಪಕ್ಷದಿಂದ ಬಂದಿರುವ ತಿ ನಮ್ಮನ್ನು ಬರುತ್ತಿರುವಂತೆ ನಾನಾ ವೇಷ ಧಾರಿಗಳ ಕಳ್ಳ ಕೊರಮರೂ ಬಂದು ಕೈ ಚಳಕಕ್ಕೆ ಆರಂಭಿಸಿದ್ದಾರೆ.

ಈಗಾಗಲೇ ಸುಮಾರು [illegible] ಸಲ ಪೋಲೀಸ ಪ್ರದರ್ಶನದ 18 ಜನರ ದಿಂದ ಎಂದೂರು ಕಳ್ಳರನ್ನು (ಇವರ [illegible] ಮಂದಿ [illegible]) ದಸ್ತಗಿರಿ ಮಾಡಲಾಗಿದೆ. ಈ 18 ಮಂದಿಯೂ ಸೇರಿ ನಾಲ್ಕು ದಿನದ ಕೂಟಗಳ ಪ್ಲಸ್ ನಾಲ್ಕು ಫೌಂಟನ್ ಪೆನ್ ಗಳನ್ನೂ ಇತರ ಅನೇಕಾನೇಕ ಸಾಮಗ್ರಿಗಳನ್ನೂ ಕದ್ದಿದ್ದಾರೆ. ಇವರು ಇದೇ ಕಸಬಿನವರು ಕಾಂಗ್ರೆಸ್ ಅಧಿವೇಶನದಲ್ಲಿ ತಮ್ಮ ಅದೃಷ್ಟ ಪರೀಕ್ಷೆ ಮಾಡಿಕೊಳ್ಳಲು ಬಂದಿದ್ದಾರೆ.

ಇವರು ಕಾಂಗ್ರೆಸ್ ನಗರದ ಜನರ ದಣಿಯೊಡನೆ ಸೇರಿ ಓಡಾಡುತ್ತಾ ಬೇಕು ಬೇಕಾದ ಜನರ ಸಾಮಾನುಗಳನ್ನು ಎಗರಿಸುತ್ತಾ ಇದ್ದಾರೆ. ದಾಮೋದರ ನದಿ ತೀರದಲ್ಲಿ ಇವರ ಚಟುವಟಿಕೆ ಬಹಳ; ವಿಶೇಷ ಇಲ್ಲಿ ಜನರು ಸ್ನಾನ ಮಾಡಲು ತಮ್ಮ ಬಟ್ಟೆ ಬರೆಗಳನ್ನು ದಡದಲ್ಲಿ ಬಿಟ್ಟು ಹೋಗುವ ಸಮಯ ಕಾದು ಈ ಕಳ್ಳರು ತಮ್ಮ ಕೆಲಸ ನಡಿಸುತ್ತಾರೆ.

ಕೊಡಗು ನ್ಯಾಯ ವಿಧಾಯಕ ಸಭೆಯ ಅಧ್ಯಕ್ಷರ ಭಾಷಣ.

ಕೊಡಗನ್ನು ಬ್ರಿಟಿಷರ ಅಧೀನಕ್ಕೆ ತೆಗೆದುಕೊಂಡಂದಿನಿಂದ ಇಂದಿನ ವರೆಗೆ ರಾಜ್ಯಭಾರವು ಮೈಸೂರಿನಲ್ಲಿ ರೆಸಿಡೆಂಟರಾದ ಇಲ್ಲಿಯ ಚೀಫ್‌ಕಮಿಷನರ ಮೇಲ್ವಿಚಾರದಲ್ಲಿತ್ತು. ಅಂಥಾ ಸಂಬಂಧವು ಇನ್ನು ಕೆಲವೇ ದಿನಗಳಲ್ಲಿ ತಪ್ಪಿಹೋಗುವದೆಂದೂ, ಚೀಫ್‌ಕಮಿಷನರಾಗಿ ನಿಮ್ಮ ಮುಂದೆ ಇದೇ ನನ್ನ ಕಡೇ ಬಾರಿಯ ಭಾಷಣವೆಂದೂ ನಾನು ಹೇಳಬೇಕಾಗಿದೆ. ನಿಮ್ಮ ಪ್ರಾಂತದ ಮೇಲುಸ್ತುವಾರಿಯಲ್ಲಿ ಇನ್ನು ಮುಂದೆ ನಾನು ಇರಲಾರೆನೆಂದು ನಿಮಗೆ ನಾನು ಖೇದಪೂರ್ವಕವಾಗಿ ಹೇಳುತ್ತೇನೆ. ಕೊಡಗು ಸರಕಾರದಲ್ಲಿ ಮಾಡಿದ ಸಿಬ್ಬಂದಿ ಹೋಕೆಯು ಕೇವಲ ಕೆಳತರಗತಿಯ ಉದ್ಯೋಗಸ್ಥರನ್ನು ಮಾತ್ರ ತೊಂದರೆ ಪಡಿಸಿದೆಯೆಂದು ಕೌನ್ಸಿಲಿನ ಒಳಗೂ ಹೊರಗೂ ಪ್ರತಿಭಟನೆ [illegible]. ಆದರೆ ಈಗ ಮೇಲಧಿಕಾರಿಗಳಲ್ಲಿ ಹಾಗೂ ಕೆಳತರಗತಿಯ ನೌಕರರಲ್ಲಿ ಸಿಬ್ಬಂದಿ ಹೋಕೆಯೂ ನಿಮಗೆ ಕಂಡುಬರುವದು. ಆರ್ಥಿಕ ಪರಿಶೋಧನಾ ಆಫೀಸರರ ಶಿಫಾರಸ್ಸಿನ ಮೇಲೆ ಇಂಡಿಯಾ ಸರಕಾರದ ಆರ್ಡರುಗಳು ಬಂದಿವೆ. ನಿಜವಾಗಿಯೂ ಇನ್ನು ಕೆಲವು ವಿಚಾರಗಳಲ್ಲಿ ಅವರ ಆರ್ಡರುಗಳು ಬರಬೇಕಷ್ಟೇ ಇವೆ. ಈ ಆರ್ಥಿಕ ಪರಿಶೋಧನಾ ಕಮಿಟಿಯ ವರದಿಯಿಂದ ಕೊಡಗಿನ ಆರ್ಥಿಕ ಸ್ಥಿತಿಯು ಎಲ್ಲರಿಗೂ ಮನವರಿಕೆಯಾಗಿದೆ. ಇಂಡಿಯಾ ಸರಕಾರದಿಂದ ಪಂಕ್ತಿಗೆ ಸಿಕ್ಕುವದು ಇದೇ ಕಡೇ ವರ್ಷವಾಗಿದೆ. ಮುಂದಕ್ಕೆ ಪ್ರಾಂತವು ತನ್ನ ಆರ್ಥಿಕ ಬಲದಿಂದ ಮುನ್ನಡೆಯಬೇಕಾಗುವದು. ಸಿಬ್ಬಂದಿ ಹೋಕೆಯು ಪೂರ್ತಿಯಾದಾಗ ಕೊಡಗಿನ ಬಜೆಟ್ಟಿನಲ್ಲಿ ಆರ್ಥಿಕ ಅಭಾವವು ಕಂಡುಬರದೆಂದು ನಾನು ನಂಬುತ್ತೇನೆ. ಕೊಡಗು ದೇಶದ ಆಡಳಿತೆ ಯಾವ ಯಾವ ಶಿಳುವಯಿಂದ ನಂದಬಿರುವದೆಂದು ನನಗೆ ತಿಳಿದಿದೆ. ಅವುಗಳಲ್ಲಿ ವ್ಯವಸಾಯವು ಪ್ರಧಾನವಾದ್ದು. ಕೊಡಗಿನ ವ್ಯವಸಾಯ ಇಲಾಖೆಯು ನ್ಯಾಯ ಸಮರ್ಪಕವಾದ ರೀತಿಯಲ್ಲಿ ಮುಂದುವರಿಯಲ್ಲವೆಂದು ನಾನು ಒಪ್ಪುತ್ತೇನೆ. ಆದ್ದರಿಂದ ರೈತನಿಗೆ ಸರಿಯಾದ ಸಹಾಯವಾಗುತ್ತಿಲ್ಲವೆಂಬುದಾದರೂ ನನಗೆ ತಿಳಿದಿದೆ. ವ್ಯವಸಾಯವನ್ನು ಪುನರ್ರಚನೆ ಮಾಡಿ ಸಮರ್ಪಕ ಕಾರ್ಯ ನಡೆಸುವ ವಿಚಾರಗಳು ಬರಬೇಕು ಆಗುವವು. ಈ ಬಗೆಯ ಅಗ್ರಸ್ಥಾನದಲ್ಲಿ ಬ್ರಿಟಿಷ್ ಇಂಡಿಯಾದಿಂದ ಎರವು ಪಡೆದ ಬಟ್ಟ ಅಧಿಕಾರಿ ಇರುವನು. ಇದೇ ರೀತಿಯ ಅಧಿಕಾರಿಯು ವೆಟರಿನರಿ ಇಲಾಖೆಯಲ್ಲಿ ಆಗಬೇಕೆಂಬುದನ್ನು ನಾನು ಒಪ್ಪುತ್ತೇನೆ. ಇದರ ಅಭಿವೃದ್ಧಿಯ ಕಾರ್ಯಕ್ರಮಗಳು ದೇಶದ ಆರ್ಥಿಕ ಸ್ಥಿತಿಯನ್ನು ಸಂಪಸಿಸಿ [illegible]. ಸಹಕಾರ ಮಾರ್ಕೆಟಿಂಗ್ ವ್ಯವಸ್ಥೆಯಾದರೂ ಜರೂರಿದ್ದೇ ಇದೆ. ಈ ವಿಚಾರವು ಪರ್ಯಾಲೋಚಿಸಲ್ಪಡುತ್ತದೆ. ಫಾರೆಸ್ಟ್ ಇಲಾಖೆಯ ವಿಚಾರದಲ್ಲಿ ಇಂಡಿಯಾದ ಇನ್ಸ್‌ಪೆಕ್ಟರ್ ಜನರಲ್‌ರವರು ಹೇಗೆ ನಮಗೆ ಮಾಹಿತಿಯನ್ನು ಕೊಡುತ್ತಿದ್ದಾರೋ ಅದೇ ರೀತಿಯಲ್ಲಿ ವ್ಯವಸಾಯ, ವೆಟರಿನರಿ ಹಾಗೂ ಮಾರ್ಕೆಟಿಂಗ್ ವಿಚಾರದಲ್ಲಿ ಇಂಡಿಯಾ ಸರಕಾರದ ಅಧಿಕಾರಿಗಳು ಮುಂದಕ್ಕೆ ನಮಗೆ ಮಾರ್ಗದರ್ಶಿಗಳಾಗುವರೆಂದು ತಿಳಿಸಲು ಸಂತೋಷವೆನಿಸುತ್ತದೆ. ಈ ಮೊದಲು ಇಂಡಿಯಾ ಸರಕಾರದ ಪ್ರೇರಣೆಯಂತೆ ಬಂದು ಕೊಡಗಿನ ಸ್ಥಿತಿಗತಿಗಳನ್ನು ಪರಿಶೀಲಿಸಿ ಹೋದ ಅಧಿಕಾರಿಗಳಿಗೆ ನಾನು ವಂದಿಸುತ್ತೇನೆ. ಮಲೇರಿಯಾ ಪರಿಶೋಧನೆಗಾಗಿ ಇಂಡಿಯಾ ಪರಿಶೋಧನಾ ಸಂಸ್ಥೆಯವರು ಕೊಡಗಿನಲ್ಲಿ 25,000 ರೂಪಾಯಿಗಳನ್ನು [illegible] ಮಾಡುವಂತೆ ನಿರ್ಧರಿಸಿರುವರೆಂದು ತಿಳಿಸಲು ಸಂತೋಷವಾಗುತ್ತದೆ. ಇದರಿಂದ ಕೊಡಗಿಗೆ ಅವರ್ಣನೀಯವಾದ ಅನುಕೂಲತೆಯಾಗುವದರಲ್ಲಿ ಸಂದೇಹವಿಲ್ಲ. ರೈತರ ಸಾಲಪರಿಹಾರದ ಸಮಸ್ಯೆಯು ಪರ್ಯಾಲೋಚಿಸಲ್ಪಡುತ್ತಿದೆ. ಒಂದು ಸಾಲಪರಿಹಾರದ ಬೋರ್ಡನ್ನು ಈಗಿನ ಹೊಸ ಕಾಯಿದೆಯಿಂದ ಒಡನೆ ನಿರ್ಮಿಸಲ್ಪಡುವದು. ಫೈನಾನ್ಸ್ ಮೆಂಬರ ಸಾಲ ಕೊಡುವ ವಿಚಾರವಾದರೂ ಪರ್ಯಾಲೋಚನೆಯಲ್ಲಿದೆ. ಕಾರ್ಯ ನನ್ನ [illegible] ಕೈ ಬಿಟ್ಟು ಹೋಗುವುದರೊಳಗೆ ಈ ಬಿಲ್ಲು ಕಾನೂನಿನಲ್ಲಿ ಬರಬಹುದೆಂದು ಆಶಿಸುತ್ತೇನೆ. ಕೊಡಗಿನಲ್ಲಿ ರಾಜಕೀಯ ಬದಲಾವಣೆ ಏನಾದರಾಗುವ ಸಂಭವವಿದೆಯೋ ಎಂದು ನೀವು ಕಾತುರರಾಗಿರಬಹುದು. ಕೊಡಗು ಆರ್ಥಿಕ ತಳಹದಿಯು ಭದ್ರವಾಗುವ ವರೆಗೆ ಈ ವಿಚಾರ ಆಲೋಚಿಸಲ್ಪಡದು ಎಂದು ನಾನು ಮೊದಲೇ ಹೇಳಿದ್ದೇನೆ.

ಕಡೆಯದಾಗಿ ನಾನು, ಮಾನ್ಯ ಸದಸ್ಯರು ನನ್ನೊಡನೆ ಸಹಕರಿಸಿ ಸುಗಮವಾಗಿ ಆಡಳಿತ ರಥವನ್ನು ನಡೆಸಲು ಸಹಾಯಕರಾದುದಕ್ಕೆ ನಿಮಗೆ ವಂದನೆಗಳನ್ನರ್ಪಿಸುತ್ತೇನೆ. ನೀವು ಪ್ರಕೃತಿ ಸೌಂದರ್ಯದಿಂದ ತುಂಬಿ ತುಳುಕುವ ಪ್ರಾಂತದಲ್ಲಿರುವಿರಿ. ಇಲ್ಲಿ ಅನೇಕ ವಿಧದ ಅಭಿವೃದ್ಧಿಗಳಾಗುವ ಅನುಕೂಲತೆಗಳಿವೆ. ನಾನು ನಿಮ್ಮನ್ನು ಹೆಚ್ಚಿನ ಕಾಲ ನನ್ನ ಭಾಷಣದಲ್ಲೇ ಕಡಿದೆನು. ನಮ್ಮ ಮುಂದಿರುವ ಕಾರ್ಯಕಲಾಪಗಳ ಬಗ್ಗೆ ಈಗ ನಿಗವಹಿಸಬೇಕಾಗಿದೆ.'

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	48,470	0	0
ಜಮಾಬಂದ ಠೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ತ್ರಿಫ್ಟ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ [illegible] ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ [illegible] ವಿವರವಾಗಿ ಬರೆದು [illegible]ಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದ ತಾತ್ಕಾಲಿಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟ್:–ಕುಪ್ಪಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
[illegible] ಪಿ. ದೇವಯ್ಯನವರು.
ಸೆಕ್ರಟರಿ.— [illegible] ಎಂ. ಎಲ್. ಸಿ.

ತಾ. 1-3-1940

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಬೇಕಾದ ರಿಜಿಸ್ಟರುಗಳು ಅಂದರೆ ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು [illegible], ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು [illegible], [illegible] ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಒಪ್ಪಂದ ಜಮಾರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ [illegible], ಸ್ಟೋರ್ ಕೀಪರ್ ಬಾಂಡು ದಾವಾ ಮತ್ತು ಅಮಲ್ದಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ ಪಿ ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟೈಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara, and Virajapet.

3 - 10

ಕೊಡಂದೇರ ಡಿ. ಮಾಚಯ್ಯ,

L.D Sc. (COLLEGE OF DENTISTRY)
EX-SUPERVISOR LAXMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (36) **ನವೀನ ರೀತಿಯ ಚಿಕಿತ್ಸೆ.**

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

[illegible]

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. [illegible]

ಜ್ವರಗಡ್ಡೆ (ಅಡ್ಡಗ್ಗೆ) ಗುಳಿಗೆ.

ಎಷ್ಟು ವರ್ಷಗಳ ಜ್ವರಗಡ್ಡೆ (ಅಡ್ಡಗ್ಗೆ) ಆದರೂ ಇದರ ಸೇವನೆಯಿಂದ ಪೂರ್ಣ [illegible] ಬಾಟ್ಲಿಗೆ 1 ರೂ

[illegible]
(51 13) [illegible]

ನಿಮ್ಮ ಜಾಹೀರಾತುಗಳಿಗೆ [illegible]? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:–ಅಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಾಜರ್, (ರಿಜಿಸ್ಟರ್ಡ್.)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-6

Printed & Published by P. I. B. Bopanna, at 'Kodagu' Press Mercara for 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.
ಸಂಪಾದಕ.—ಪಿ. ಐ. ಬೆಳ್ಯಪ್ಪ.
ವಾರ್ಷಿಕ ಚಂದಾ ರೂ. ೩-೮-೦
ತಾ. ೨೯—೩—೧೯೪೦.
ಸಂಪುಟ ೧೯] [ಸಂಚಿಕೆ ೪೩.

ಭದ್ರತೆ! ವಿಶ್ವಾಸಾರ್ಹತೆ!! ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೋಪ್ರೋರೇಷನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ ಜನಪ್ರಿಯತೆಯನ್ನು ಸದೇ ಸದೇ ಹೋರಿಸಿ, ಠೇವಣಾತಿದಾರರಿಗೆ ಸುರಕ್ಷಿತತೆಯನ್ನು ಹೆಚ್ಚಿಸಿ,
ಸರ್ವರ ವಿಶ್ವಾಸಕ್ಕೆ ಪಾತ್ರನಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ದೇಶಿಯ ಸಂಸ್ಥೆ

ನಿರಖು ಠೇವಣಾತಿ ಬಡ್ಡಿ ದರಗಳು:
ಒಂದು ವರ್ಷಕ್ಕೆ 3½% ([illegible]
ಎರಡು ವರ್ಷಕ್ಕೆ } 4 % ,,
ಮೂರು ವರ್ಷಕ್ಕೆ }

ಒಂದು ವರ್ಷಕ್ಕಿಂತ ಕಡಿಮೆ ಮಾಯಿದೆಯ, ಅಲ್ಪಾವಧಿಯ, ಠೇವಣಾತಿಗಳನ್ನು
ಅನುಕೂಲಕ್ಕೆ ತಕ್ಕ ಬಡ್ಡಿ ದರಗಳಲ್ಲಿ ಇಡಬಹುದು.

ಮೂರು ವರ್ಷದ ಕೇಶ್ ಸರ್ಟಿಫಿಕೇಟುಗಳು: ಬಡ್ಡಿಯ ದರವು ಸಾಲಿಯಾನ ಶೇಕಡಾ 4 ರಲ್ಲಿ. ಮಾಯಿದೆಯ ಮೊದಲು, ಯಾವಾಗಲೂ 15 ದಿನಗಳ ನೋಟೀಸು ಕೊಟ್ಟಲ್ಲಿ ಹಣವನ್ನು ಹಿಂದಕ್ಕೆ ಪಡೆಯಬಹುದು
ಸೇವಿಂಗ್ಸ್ ಬೇಂಕ್ ಡಿಪಾಜಿಟ್ಸ್:—ಒಂದು ಲೆಕ್ಕದಲ್ಲಿ ರೂ. 5,000 ದ ವರೆಗೆ ಹಣ ಇಡಬಹುದು. ಚೆಕ್ಕು ಮುಖಾಂತರ ಹಿಂದೆ ತೆಗೆಯಬಹುದು. ಸಾಲಿಯಾನ ಶೇಕಡಾ 2½ ಸಲಯಲ್ಲಿ ಬಡ್ಡಿ ಸಿಗುವುದು.
ಕರೆಂಟ್ ಡಿಪಾಜಿಟ್ಸು, ಕ್ಯುಮ್ಯುಲೇಟಿವ್ ಡಿ ಪಾಜಿಟ್ಟು ಲೆಕ್ಕಗಳನ್ನು ತೆರೆಯಬಹುದು.

ಬೊಂಬಾಯಿ, ಕಲ್ಕತ್ತಾ, ಮದ್ರಾಸು, ಕಲ್ಲಿಕೋಟೆ, ಕಣ್ಣಾನೂರು, ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ
ಅನೇಕ ಸ್ಥಳಗಳ ಮೇಲೆ ಡ್ರಾಫ್ಟುಗಳನ್ನೂ ಚೆಕ್ಕುಗಳನ್ನೂ ಕೊಡಬಹುದು; ವಸೂಲಿಯಿಸಲೂ ಬಹುದು.

52–14 ಜನ್ನಾಭರಣಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

**ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ**

ಭುವನೇಂದ್ರ 'ಅಮೃತಪ್ರಾಶ'ವು

**ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.**

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್,

ಕಟಪಾಡಿ,—ದ. ಕನ್ನಡ.
(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

52–20

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜೆ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಾಗಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಬೋಯಪ್ಪನವರು.

ಬಾಚಮ್ಮನ ಕರ್ಗಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಎಂ. ಸುಬ್ಬಯ್ಯನವರು.

ಅಮ್ಮತ್ತಿ-ಸಿದ್ದಾಪುರ—ಮ. ಐನಂಡ ಮಾದಪ್ಪನವರು.

ಪೊನ್ನಂಪೇಟೆ ನಾಡು—ಮ. ಪಿ. ಜಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮ. ಅಪ್ಪನೇರ ಮಾದಪ್ಪನವರು ಮತ್ತು ಮ. ಜಿ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ. ಕೆ. ಬೋಗಪ್ಪನವರು.

ನಾಪೋಕ್ಲು—ಮ. ಚೆಕ್ಕೆರಂಡ ಎಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುವಿನ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುತ್ತದೆ.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣಶಕ್ತಿಯನ್ನೂ ಉಂಟುಮಾಡುವದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟಾಕಿಸ್ಟ್—
ಡಾ. ಬಿ. ಕೆ. ಸಂಜುಂಡೇಶ್ವರ, ಎಲ್. ಎ. ಎಂ. ಎಸ್
(52 25) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು ಕೆ. ರಾಮಕೃಷ್ಣರಾವ್,
ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಪಿ. ಸಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಫ್.ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್.
ಅಜ್ಮೀರ್

ಅಥವಾ, ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬೆನಾರೀಸ್, ಬೆಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಕಟಕ್, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಸಿಲ್ಹೆಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-9

'ವಿಹಾರ'ದಿಂದ 'ಬಿಹಾರ.'

ಬಿಹಾರವು ಹಿಂದುಳಿದ ಪ್ರಾಂತವೆಂದು ಭಾಸಿಸಲ್ಪಡುತ್ತಿದೆ. ಇಂದಿನ ಪರಿಸ್ಥಿತಿ ನೋಡಿದರೆ ಅದು ನಿಜವೆನಿಸುವದು. ಆದರೆ ಬಿಹಾರವು ಎಂದಿನಿಂದಲೂ ಈ ರೀತಿ ಹಿಂದುಳಿದಿದ್ದಾಗಿಲ್ಲ ಮತ್ತು ಮುಂದಾದರೂ ಅದು ಇದೇ ರೀತಿ ಉಳಿಯಲು ಬಯಸುವದಿಲ್ಲ. ಯಾಕಂದರೆ ದೇಶದ ಇಲ್ಲವೆ ಜನಾಂಗದ ಅಭಿವೃದ್ಧಿಗೆ ಅವಶ್ಯಕವಾದ ಯಾವತ್ತೂ ಸಾಧನಗಳಿಂದ ಬಿಹಾರವು ಯುಕ್ತವಾಗಿರುವದು. ಬಿಹಾರದ ವಿಸ್ತೃತವಾದ ಇತಿಹಾಸವನ್ನು ನಾನು ಇಲ್ಲಿ ಹೇಳುವದು ಯೋಗ್ಯವಾಗಲಾರದು. ಆದರೆ ನಾನು ಇಲ್ಲಿ ಇಷ್ಟೇ ಹೇಳಬಯಸುತ್ತೇನೆ. ಮಹಾಭಾರತ ಕಾಲದಿಂದ ಬಖ್ತ್ಯಾರಖಿಲಜಿಯ ಕಾಲದ ವರೆಗೆ ಈ ಪ್ರಾಂತಕ್ಕೆ ಹಿಂದುಸ್ಥಾನದ ಇತಿಹಾಸದಲ್ಲಿ ಉಚ್ಚವಾದ ಭವಿತವ್ಯವು ಬಿಹಾರವನ್ನು ಅವಲಂಬಿಸಿದ ಅನೇಕ ಪ್ರಸಂಗಗಳೂ ಇತಿಹಾಸದಲ್ಲಿ ಉಚ್ಚವಾದ ಸ್ಥಾನವಿತ್ತು. ಇಷ್ಟೇ ಅಲ್ಲದೆ ಹಿಂದುಸ್ಥಾನದ ಭವಿತವ್ಯವು ಬಿಹಾರವನ್ನು ಅವಲಂಬಿಸಿದ ಅನೇಕ ಪ್ರಸಂಗಗಳೂ ಇತಿಹಾಸದಲ್ಲಿ ಆಗಿ ಹೋದವು ಎಂದು ನಾನು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಶ್ರೀ. ಕೃಷ್ಣನನ್ನು ಅನೇಕ ಸಲ ಪರಾಭವಗೊಳಿಸಿದ ಜರಾಸಂಧನು ಬಿಹಾರದ ಅರಸನೇ ಆಗಿದ್ದನು. ಅವನ ಹೆಸರಿನ ಅವಶೇಷಗಳು ಇಂದೂ ನಮಗೆ ರಾಜಗೃಹದಲ್ಲಿ ಸಿಗುವವು. ಇವಲ್ಲದೆ ಬೌದ್ಧ ಮತ್ತು ಜೈನ ಧರ್ಮದ ಉಗಮಸ್ಥಾನವೂ ಬಿಹಾರವೇ ಇರುವದು. ಅವುಗಳ ವಿಹಾರಗಳಿಂದಲೇ ಈ ಪ್ರಾಂತಕ್ಕೆ ಬಿಹಾರ ಎಂಬ ಹೆಸರು ಬಂದಿದೆ. ಈ ಪ್ರಾಚೀನವಾದ ಪ್ರಾಂತದ ಪ್ರತಿಯೊಂದು ರಜಃಕಣವು ಗೌತಮಬುದ್ಧ ಹಾಗು ಮಹಾವೀರ ಇವರ ಪಾದಸ್ಪರ್ಶದಿಂದ ಪವಿತ್ರವಾಗಿದ್ದು ಅವರ ಸ್ಮಾರಕಗಳು ಇಂದೂ ಅಲ್ಲಲ್ಲಿ ನಮಗೆ ಸಂಶೋಧಕರ ಪ್ರಯತ್ನದ ಫಲವಾಗಿ ನೋಡಲು ಸಿಗುತ್ತವೆ. 1000 ವರ್ಷಗಳಿಗಿಂತ ಹೆಚ್ಚು ಕಾಲ ಬೌದ್ಧ ಮತವು ಈ ಪ್ರದೇಶದಲ್ಲಿ ಬೆಳೆದ ಹೂಬಿಟ್ಟಿದೆ ಮತ್ತು ಇಲ್ಲಿಂದಲೇ ಅದರ ಟೊಂಗೆಗಳು ದಕ್ಷಿಣದಿಂದ ಉತ್ತರಕ್ಕೂ ಪೂರ್ವದಿಂದ ಪಶ್ಚಿಮಕ್ಕೂ ದೂರದ ವರೆಗೆ ಹಬ್ಬಿದವು. ಮಹಾಬೋಧಿ ವೃಕ್ಷದ ಬೇರುಗಳು ಸಿಲೋನಕ್ಕೆ ಒಯ್ಯಲ್ಪಟ್ಟು ಅಲ್ಲಿ ಹಚ್ಚಲ್ಪಟ್ಟವು. ಮತ್ತು ಅನುರಾಧಪುರದಲ್ಲಿ ಇಂದಾದರೂ ನೀವು ಆ ವೃಕ್ಷದ ಶಾಖೆಯನ್ನು ನೋಡಬಹುದು ಮತ್ತು ಅಲ್ಲಿ ಹೊತ್ತಿಸಲ್ಪಟ್ಟ ದೀಪವು ಇಂದಾದರೂ ಬೆಳಗುತ್ತಿರುವದೆಂದು ಹೇಳಲಾಗುತ್ತದೆ. ಸಿಂಹಳದ ದಕ್ಷಿಣದಲ್ಲಿ ದಕ್ಷಿಣ ಧ್ರುವದ ವರೆಗೆ ಭೂಮಿಯೆಂಬುದು ಇಲ್ಲ. ಉತ್ತರದಲ್ಲಿ ಬೌದ್ಧ ಮತವು ನೇಪಾಳದಲ್ಲಿಯೂ ಹಬ್ಬಿ ತಿಬೇಟವನ್ನು ದಾಟಿ ಒಂದು ಕಡೆಗೆ ತುರ್ಕಸ್ಥಾನವನ್ನೂ ಎರಡನೇ ಕಡೆಗೆ ಚೀನಾ ಹಾಗು ಜಪಾನವನ್ನೂ ತನ್ನ ಕಡೆಗೆ ಸೆಳೆದುಕೊಂಡಿತು. ಇಂದು ಅದು ತನ್ನ ಜನ್ಮಭೂಮಿಯಲ್ಲಿ ಕೇವಲ ನಾಮಮಾತ್ರಕ್ಕೆ ಉಳಿದಿದ್ದರೂ ಜಗತ್ತಿನ ಮಾನವ ವರ್ಗದಲ್ಲಿ ತ್ರಿ

ಪ್ರೇಮ ಸಾಮ್ರಾಜ್ಯವೇ ಚಿರವಾಗಿ ಉಳಿಯುವುದು.

ಸ್ವಾಗತಾಧ್ಯಕ್ಷರಾದ ರಾಜೇಂದ್ರ ಪ್ರಸಾದರ ಭಾಷಣ.

ಭಾಗವನ್ನು ಜನತೆಯು ಇವರ ಆಶ್ರಯದಲ್ಲಿ ಸೌಖ್ಯ ಮತ್ತು ಸುಖ ಕೋರುತ್ತಿರುವರು.

ಸಾಮ್ರಾಜ್ಯಗಳು.

ಬಿಹಾರದ ಇತಿಹಾಸವು ಕೇವಲ ಧರ್ಮಗಳ ಧರ್ಮಭೂಮಿಯೆಂದಿಷ್ಟೇ ಖ್ಯಾತವಾಗಿಲ್ಲ. ಬಿಹಾರದಲ್ಲಿ ದೊಡ್ಡ ದೊಡ್ಡ ಸಾಮ್ರಾಜ್ಯಗಳೂ ಆಗಿ ಹೋದವು. ಆಗಿನ ಸಾಮ್ರಾಜ್ಯಗಳು ಈಗಿನಂತೆ ಇರದೆ ಬೇರೆ ಸ್ವರೂಪದವಿದ್ದವು. ಹಿಂದುಸ್ಥಾನಕ್ಕೆ ಲೋಕಸತ್ತಾತ್ಮಕ ಪದ್ಧತಿ ಗೊತ್ತಿರಲಿಲ್ಲವೆಂದೂ ಹಿಂದುಸ್ಥಾನದ ಭೂಗುಣ ಮತ್ತು ಹವಾಮಾನ ನೋಡಿದರೆ ಅಲ್ಲಿ ಸ್ವೇಚ್ಛಾವೃತ್ತಿ ಸರಕಾರದ ಹೊರತು ಇತರ ಪದ್ಧತಿ ಯಶಸ್ವಿಯಾಗುವದಿಲ್ಲವೆಂದೂ ಜನರು ಆಗಾಗ್ಗೆ ಟೀಕೆ ಮಾಡುತ್ತಿರುವರು. ಇದಕ್ಕೆ ಅವರ ಅಜ್ಞಾನವೇ ಕಾರಣವೆಂಬುವದಕ್ಕೆ ಬಿಹಾರ ಇತಿಹಾಸದಲ್ಲಿ ಅನೇಕ ಪುರಾವೆಗಳು ಸಿಗುವವು. ಗ್ರೀಕ ಪ್ರಜಾಸತ್ತಾತ್ಮಕ ರಾಜ್ಯಗಳು ತಮ್ಮ ತಮ್ಮಲ್ಲಿ ಬಡಿದಾಡುತ್ತಿರುವಾಗ, ಅಷ್ಟೇ ಏಕೆ, ಅದಕ್ಕೂ ಪೂರ್ವದಲ್ಲಿಯೇ ಈ ಪ್ರಾಂತದಲ್ಲಿ ಪ್ರಜಾಸತ್ತಾತ್ಮಕ ರಾಜ್ಯಗಳು ಅಭಿವೃದ್ಧಿ ಹೊಂದಿದ್ದವು. ಅವುಗಳ ಬಗ್ಗೆ ನಿಮಗೆ ಮಾಹಿತಿ ಬೇಕಾದರೆ ದಿವಂಗತ ಕಾಶೀಪ್ರಸಾದ ಜಯಸ್ವಾಲರು ಸಂಶೋಧನ ಮಾಡಿ ಬರೆದ ಗ್ರಂಥಗಳನ್ನು ನೀವು ನೋಡಬೇಕು. ಪ್ರಜಾಸತ್ತಾತ್ಮಕ ರಾಜ್ಯಗಳ ನಂತರದಲ್ಲಿ ಚಂದ್ರಗುಪ್ತನು ತನ್ನ ರಾಜ್ಯವನ್ನು ಸ್ಥಾಪಿಸಿದನು. ಮತ್ತು ಅವನ ತರುವಾಯ ಬಿಂದುಸಾರ ಹಾಗು ಅಶೋಕ ಇವರು ಆ ರಾಜ್ಯವನ್ನು ಇಡೀ ಹಿಂದುಸ್ಥಾನದಲ್ಲಿ ಬೆಳೆಸಿದರು. ಅಶೋಕನ ಸ್ತಂಭಗಳು ದೇಶದ ಎಲ್ಲ ಭಾಗಗಳಲ್ಲಿ ಇದ್ದು ಅವುಗಳಿಂದ ನಮಗೆ ಅವರ ಸಾಮ್ರಾಜ್ಯವಿಸ್ತಾರವು ಕಂಡು ಬರುವದಲ್ಲದೆ ಅವುಗಳ ಮೇಲಿನ ಬರಹಗಳಿಂದ ಹಿಂದುಸ್ಥಾನವು ಆ ಕಾಲದಲ್ಲಿ ಎಷ್ಟು ಉಚ್ಚ ಶಿಖರಕ್ಕೇರಿತ್ತೆಂಬುದೂ ತಿಳಿದುಬರುವದು. ಆ ಮೇಲೆ ಮೌರ್ಯ ಸಾಮ್ರಾಜ್ಯದ ನಂತರ ಗುಪ್ತ ಸಾಮ್ರಾಜ್ಯವು ಅಸ್ತಿತ್ವದಲ್ಲಿ ಬಂದು ಮತ್ತು ಅದಾದರೂ ಬಹುಶೀಘ್ರವಾಗಿ ಇಡೀ ಹಿಂದುಸ್ಥಾನವನ್ನೇ ವ್ಯಾಪಿಸಿತ್ತು. ಆ ಕಾಲದ ಉಚ್ಚ ಸಂಸ್ಕೃತಿ ಮತ್ತು ನಾಗರಿಕತೆಯನ್ನು ಯಾವತ್ತೂ ಇತಿಹಾಸಜ್ಞರು ಬಹುವಾಗಿ ಹೊಗಳಿದ್ದಾರೆ. ನಂತರ ಪಾಲ ವಂಶದವರು ರಾಜ್ಯವಾಳಹತ್ತಿದರು. ಅವರಲ್ಲಿಯೂ ಅನೇಕರು ಪ್ರಖ್ಯಾತರಾಗಿ ಹೋದರು.

ಕ್ರಾಂತಿಕಾಲ.

ಹಿಂದಕ್ಕೆ ಅಶೋಕನು ಅಮಾನುಷವಾದ ಯುದ್ಧದಿಂದ ಓರಿಸಾವನ್ನು ಗೆದ್ದ ನಂತರ ಮಾನವ ರಕ್ತವನ್ನು ಭೂಮಿಗೆ ಸುರಿಸುವದು ಮಹಾಪಾತಕವೆಂದು ಮನವರಿಕೆ ಮಾಡಿಕೊಂಡು ತನ್ನ ಸಾಮ್ರಾಜ್ಯದ ಸಂಪೂರ್ಣ ಮನೋವೃತ್ತಿಯನ್ನೇ ಬದಲು ಮಾಡಿದನು. ಮತ್ತು ಅಸ್ತ್ರವನ್ನು ಕೆಳಗಿಟ್ಟು ತನ್ನ ಮಗನನ್ನೂ ಮಗಳನ್ನೂ ಅತಿ ಬೇರೆ ತರದ ಸಾಮ್ರಾಜ್ಯವನ್ನು ಸ್ಥಾಪಿಸಲು ದೂರದ ದೇಶಗಳಿಗೆ ಕಳಿಸಿದ್ದನು. ಇಂದಾದರೂ ಅದೇ ರೀತಿ ಪರಿಸ್ಥಿತಿಯಿದೆ. ಜಗತ್ತಿನಲ್ಲಿಯೂ ಬಹು ಭಾಗವು ಸ್ವಾತಂತ್ರ್ಯ ಯುದ್ಧದಲ್ಲಿ ನಿರತವಾಗಿ ಮಾನವ ರಕ್ತವನ್ನು ಭೂಮಿಗೆ ಹರಿಸುತ್ತಿರುವದು. ಆದ್ದರಿಂದ ಈ ಕಾಲದಲ್ಲಿ ಅಶೋಕನಂಥವರು ಒಬ್ಬರು ಉದಯಿಸಿ ರಕ್ತಪಾತಕ್ಕೆ ತಡೆ ಹಾಕಿ ಶಾಂತತೆ ಹಾಗು ಪ್ರೇಮ ಸಾಮ್ರಾಜ್ಯ ಸ್ಥಾಪಿಸುವದು ಶಕ್ಯವಿಲ್ಲವೇ ಎಂದು ನಾವು ಆಶಿಸಿದರೆ ಅದು ಅಶಕ್ಯ ಕೋಟಿಯೊಳಗಿನದೆಂದು ತೋರಲಿಕ್ಕಿಲ್ಲವಷ್ಟೆ. ಅಶೋಕನು ತನ್ನ ಖಡ್ಗದಿಂದ ಸ್ಥಾಪಿಸಿದ ಸಾಮ್ರಾಜ್ಯವು 2000 ವರ್ಷಗಳ ಹಿಂದೆಯೆ ಅಳಿಸಿ ಹೋಗಿದೆ. ಆದರೆ ಪ್ರೀತಿಯ ಸುವರ್ಣ ರೇಷಿಮೆ ಎಳೆಯಿಂದ ಬೇರೆ ಬೇರೆ ದೇಶಗಳ ಜನರನ್ನು ಕೂಡಿಸಿ ಸ್ಥಾಪಿಸಿದ ಅವನ ಎರಡನೇ ಸಾಮ್ರಾಜ್ಯವು ಇನ್ನೂ ಊರ್ಜಿತಾವಸ್ಥೆ ಹೊಂದುತ್ತಿದ್ದು ಅದು ಹೀಗೆಯೇ ಊರ್ಜಿತಸ್ಥಿತಿ ಹೊಂದುತ್ತ ಹೋಗುವದು. ಅನಂತರ 2 ಸಾವಿರ ವರ್ಷಗಳ ಮೇಲೆ ಅದೇ ಸ್ಥಳದಲ್ಲಿ ನಮ್ಮ ಮುಖ್ಯ ಸೇನಾಪತಿಗಳು ಪರದೇಶದಿಂದ ತಿರುಗಿ ಬಂದ ನಂತರ ಸ್ವಾವಲಂಬಿ ಮಾರ್ಗವನ್ನು ನಮಗೆ ತೋರಿಸಿ ಕೊಡಲು ಪ್ರಯತ್ನ ಮಾಡಿದರು. ಇಲ್ಲಿಯೇ ಗಾಂಧೀಜಿಯವರು ನಮಗೆ ಸತ್ಯಾಗ್ರಹದ ಮೊದಲನೇ ಪಾಠ ಕಲಿಸಿದರು.

ಭೂ-ಖನಿಜ ಸಂಪತ್ತು.

ದೇವರ ದಯೆಯಿಂದ ಈ ಪ್ರಾಂತವು ಧನಾಢ್ಯವಾದದ್ದಿರುವದು. ಉತ್ತರ ಭಾಗದಲ್ಲಿಯ ಭೂಮಿಗಳು ಹಿಂದುಸ್ಥಾನದ ಇತರ ಭಾಗಗಳಂತೆ ಫಲವತ್ತಾಗಿರುವವು. ನಿಮ್ಮ ಮನಸ್ಸಿಗೆ ಬಂದ ಬೇಕಾದ ಬೆಳೆಯನ್ನೂ ಫಲಗಳನ್ನೂ ನೀವು ಬೆಳೆದುಕೊಳ್ಳಬಹುದು. ಇದರಂತೆ ದಕ್ಷಿಣ ಭಾಗದ ಭೂಮಿಯ ಒಡಲಲ್ಲಿ ಆ ಭಾಗದಲ್ಲಿ ಅತಿ ಅಮೌಲ್ಯವಾದ ಪದಾರ್ಥಗಳು ನಿಮಗೆ ದೊರೆಯುವವು. ಈ ದೇಶದಲ್ಲಿ ಸಿಗುತ್ತಿರುವ ಕಲ್ಲಿದ್ದಲಿಯಲ್ಲಿ 2|3 ಭಾಗವು ಈ ಪ್ರಾಂತಗಳಲ್ಲಿಯೇ ಹೊರಡುವದು. ಇದಲ್ಲದ ಕಬ್ಬಿಣ, ತಾಮ್ರ, ಸತವು ಮೊದಲಾದ ಲೋಹಗಳ ಗುತ್ತಿಗೆಯು ಇದೇ ಪ್ರಾಂತಕ್ಕಿರುವದೆಂದರೂ ಸಲ್ಲುವದು. ಉಳಿದ ಲೋಹಗಳಾದರೂ ವಿಪುಲವಾಗಿ ಇಲ್ಲಿ ಸಿಗುವವು. ಅರಣ್ಯ ಸಂಪತ್ತಾದರೂ ಹೇರಳವಾಗಿರುವದು. ಅರಗಾದರೂ ಇಲ್ಲಿ ಹೊರಡುವದು. ಇತರ ಪ್ರಾಂತಗಳಲ್ಲಿ ಇಲ್ಲಿಯಷ್ಟು ಅದು ದೊರೆಯುವದಿಲ್ಲ.

ಪರಮಾತ್ಮನಲ್ಲಿ ಪ್ರಾರ್ಥನೆ.

ಇಷ್ಟೆಲ್ಲ ಇದ್ದರೂ ಈ ಪ್ರಾಂತವು ಬಡ ಪ್ರಾಂತವಿರುತ್ತದೆ. ಶಿಕ್ಷಣದಲ್ಲಿ ಇದು ಹಿಂದುಳಿದಿದೆ. ಜಾಗತಿಕ ವ್ಯವಹಾರದ ಆಧುನಿಕ ಪದ್ಧತಿಯಲ್ಲಿ ಎರಡನೆಯವರೊಡನೆ ಸ್ಪರ್ಧಿಸಲು ನಾವು ಅಸಮರ್ಥರಿರುವೆವು. ಈ ಪ್ರಾಂತವು ಗಾಂಧೀಜಿಯವರ ಅಂಧ ಅನುಯಾಯಿಯಾಗಿರುವದೆಂದು ಜನರು ಆಗಾಗ್ಗೆ ಎನ್ನುವದು ನಮ್ಮ ಕೇಳಿಕೆಯಲ್ಲಿದೆ. ಅವರು ಎನ್ನುವದು ನಿಜವಾದದ್ದೇ ಇರುವದು. ಹಾಗೆ ಇದ್ದರೂ ಅದರಲ್ಲಿ ಏನು ತಪ್ಪಿದೆಯೊ ತಿಳಿಯದಾಗಿದೆ. ನಮ್ಮ ಮತ್ತು ಹಿಂದುಸ್ಥಾನದ ಉಳಿದ ಭಾಗಗಳ ಜನರ ಕಣ್ಣನ್ನು ತೆರೆದು ಇತ್ತೀಚೆಗೆ ನಮ್ಮಲ್ಲಿ ಜಾಗೃತಿಯನ್ನು ಹುಟ್ಟಿಸಿದವರು ಅವರೇ ಇದ್ದುದರಿಂದ ಅವರು ತೋರಿಸಿ ಕೊಟ್ಟ ಹಾದಿಯಲ್ಲಿ ಕೆಲಸ ಮಾಡುವದಕ್ಕೆ ನಮಗೆ ಅಭಿಮಾನವೇ ಎನಿಸುತ್ತದೆ. ಮತ್ತು ಅದರಂತೆ ಮಾಡಲು ನಮಗೆ ಪರಮಾತ್ಮನು ಶಕ್ತಿಯನ್ನು ದಯಪಾಲಿಸಲಿ ಎಂದು ನಾವು ಪ್ರಾರ್ಥಿಸುತ್ತಿರುವೆವು.

ಒಂದು ಘಟನೆ.

ನಾವು ಒಮ್ಮೊಮ್ಮೆ ಹಿಂದಿನ ಇತಿಹಾಸದಿಂದ ಪಾಠ ಕಲಿತು ಸ್ಫೂರ್ತಿಯನ್ನು ಪಡೆಯಬಹುದು. ಅಂತಹ ಒಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಿ ನಾನು ನನ್ನ ಭಾಷಣ ಮುಗಿಸುತ್ತೇನೆ. ದಕ್ಷಿಣ ಬಿಹಾರದಲ್ಲಿ ಅಜಾತಶತ್ರು ಎಂಬ ಅರಸನು ಆಳುತ್ತಿದ್ದಾಗ ಉತ್ತರ ಬಿಹಾರದಲ್ಲಿ ವಜ್ಜೀಜ ಎಂಬ ಪ್ರಜಾಸತ್ತಾತ್ಮಕ ರಾಜ್ಯವು ಇತ್ತು. ಅಜಾತಶತ್ರುವು ಅದನ್ನು ಗೆದ್ದು ಅದರ ದೇಶವನ್ನು ವಶಪಡಿಸಿಕೊಳ್ಳುವ ಇಚ್ಛೆಯುಳ್ಳವನಾಗಿದ್ದನು. ಗೌತಮ ಬುದ್ಧನು ಅಜಾತಶತ್ರುವಿನ ರಾಜಧಾನಿಯಾದ ರಾಜಗೃಹಕ್ಕೆ ಭೆಟ್ಟಿಕೊಟ್ಟು ಗೃಧ್ರಕೂಟ ಪರ್ವತದಲ್ಲಿ ಇರುತ್ತಿದ್ದನು. ವಜ್ಜೀ ಜನರ ರಾಜ್ಯವನ್ನು ವಶಪಡಿಸಿಕೊಳ್ಳುವ ತನ್ನ ಯೋಜನೆಯ ವಿಷಯವಾಗಿ ಅವರ ಅಭಿಪ್ರಾಯವೇನಿರುವದೆಂದು ತಿಳಿದುಕೊಳ್ಳಲು ಅಜಾತಶತ್ರುವು ಬುದ್ಧನಲ್ಲಿ ತನ್ನ ಮಂತ್ರಿಯನ್ನು ಕಳಿಸಿದನು. ಬುದ್ಧನಿಗೆ ಅಜಾತಶತ್ರುವಿನ ಉದ್ದೇಶ ತಿಳಿದು ಬಂದ ಕೂಡಲೆ ಅವನು ತನ್ನ ಶಿಷ್ಯನಾದ ಆನಂದನಿಗೆ 7 ಪ್ರಶ್ನೆಗಳನ್ನು ಮಾಡಿದನು. ಮತ್ತು ಅವುಗಳಿಗೆ ಉತ್ತರ ದೊರೆತ ಮೇಲೆ ಅಜಾತಶತ್ರುವಿನ ಪ್ರಶ್ನೆಗಳಿಗೆ ತನ್ನ ಉತ್ತರ ಕೊಟ್ಟನು. ಅವನು ಆನಂದನಿಗೆ 'ವಜ್ಜೀ ಜನರು ತಮ್ಮ ಅಸೆಂಬ್ಲಿಗಳನ್ನು ಆಗಾಗ್ಗ ಕೂಡಿಸುತ್ತಿರುವರೋ ಹೇಗೆ? ಕೂಡಿಸುತ್ತಿದ್ದರೆ ಅವುಗಳಿಗೆ ಸಾಕಷ್ಟು ಜನರು ಕೂಡುತ್ತಿರುವರೇನು' ಎಂದು ಕೇಳಿದನು. ಅದಕ್ಕೆ ಆನಂದನು ಅವರ ಅಸೆಂಬ್ಲಿಗಳು ಆಗಾಗ್ಗೆ ಕೂಡುತ್ತಿರುವವು. ಮತ್ತು ಜನರಾದರೂ ಸಾಕಷ್ಟು ಸೇರುತ್ತಿರುವರು' ಎಂದು ಉತ್ತರವಿತ್ತನು. ಈ ಉತ್ತರವನ್ನು ಕೇಳಿ

ಬುದ್ಧನು 'ಹಾಗಾದರೆ ಇದರಿಂದ ಅವರ ಪ್ರಗತಿಯೇ ವ್ಯಕ್ತವಾಗುತ್ತದೆ. ಅವರ ಮೇಲೆ ದಾಳಿ ಮಾಡುವ ಕಾರಣ ತೋರುವದಿಲ್ಲ' ಎಂದು ತಿಳಿಸಿದನು. ಇದೇ ರೀತಿ ಬುದ್ಧನು ಮತ್ತೆ 6 ಪ್ರಶ್ನೆಗಳನ್ನು ಮಾಡಿ ಅವುಗಳಿಗೆ ಸಮಾಧಾನಕರ ಉತ್ತರ ದೊರಕಿಸಿಕೊಂಡ ನಂತರ ಈ ರೀತಿ ನುಡಿದನು.

ವಜ್ಜೀ ಜನರು ಒಂದೇ ಕಡೆಗೆ ಸಮ್ಮಿಲಿತರಾಗಿ, ಸಹಕಾರದಿಂದ ಕಾರ್ಯ ಮಾಡಿ ತಮ್ಮ ರಾಷ್ಟ್ರೀಯ ಕರ್ತವ್ಯ ನೆರವೇರಿಸುತ್ತಿರುವ ವರೆಗೆ, ಕಾಯಿದೆ ಮಾಡಿ ಅದರಂತೆ ನಡೆಯುತ್ತಿರುವ ವರೆಗೆ ತಮ್ಮ ಹಿರಿಯರಿಗೆ ಆದರ ತೋರಿಸುತ್ತಿರುವ ವರೆಗೆ, ಅವರ ಸನ್ಮಾನ ಮಾಡುತ್ತಿರುವ ವರೆಗೆ, ಸ್ವೀಕರಿಸಲರ್ಹವಾದ ಅವರ ಉಪದೇಶ ಸ್ವೀಕರಿಸುತ್ತಿರುವ ವರೆಗೆ, ತಮ್ಮ ಸ್ತ್ರೀಯರೊಡನೆ ಯೋಗ್ಯ ರೀತಿ ನಡೆದುಕೊಳ್ಳುತ್ತಿರುವ ವರೆಗೆ, ತಮ್ಮ ಚೈತ್ಯಗಳಿಗೆ ಯೋಗ್ಯ ರೀತಿ ಹಿಂದಕ್ಕೆ ಕೊಡಲ್ಪಟ್ಟ ದತ್ತಿಗಳನ್ನು ಹಾಗೆಯೇ ಸಾಗಿಸಿಕೊಂಡು ಹೋಗುತ್ತಿರುವ ವರೆಗೆ, ತಮ್ಮ ಅರ್ಹತರಿಗೆ ಸಂರಕ್ಷಣೆ ಕೊಡುತ್ತಿರುವ ವರೆಗೆ, ಹೊರಗಿನ ಅರ್ಹತರಿಗೆ ದೇಶದಲ್ಲಿ ಕಾಲಿಡಲು ಅಸ್ಪದ ಕೊಡುತ್ತಿರುವ ವರೆಗೆ, ಮತ್ತು ತಮ್ಮಲ್ಲಿಯ ಅರ್ಹತರು ಸುಖದಿಂದ ಜೀವಿಸುವಂತೆ ನೋಡಿಕೊಳ್ಳುತ್ತಿರುವ ವರೆಗೆ, ನೀವು ಅವರಿಗೆ ಯಾವದೇ ರೀತಿ ಅಪಾಯ ಇಟ್ಟಿಸಲಾರರು' ಅಜಾತಶತ್ರುವು ಇವನ್ನೆಲ್ಲ ಕೇಳಿಕೊಂಡ ಮೇಲೆ ಅವನಿಗೆ ವಜ್ಜೀಜನರನ್ನು ಗೆಲ್ಲುವದು ಸಾಧ್ಯವಿಲ್ಲೆಂದು ಮನವರಿಕೆಯಾಯಿತು.

ಐಕ್ಯದ ಅವಶ್ಯಕತೆ.

ಕಾಂಗ್ರೆಸ್ ಸಂಬಂಧದಲ್ಲಿ ಇಂದು ನಾವು ಇದನ್ನೆ ಹೇಳಬಲ್ಲೆವೋ ಹೇಗೆ? ನಾವು ಒತ್ತಟ್ಟಿಗೆ ಸೇರಿ, ಸಹಕಾರದಿಂದ ಕಾರ್ಯಮಾಡಿ, ನಮ್ಮ ರಾಷ್ಟ್ರೀಯ ಕಾರ್ಯವನ್ನು ಒಮ್ಮತದಿಂದ ನೆರವೇರಿಸುತ್ತಿರುವೆವೇನು? ನಾವು ಮಾಡಿದ ನಿಯಮಗಳನ್ನು ನಾವು ಮುರಿಯುತ್ತಿರುವದಿಲ್ಲವೆಂದು ಹೇಳಬಲ್ಲೆವೆ, ಹೇಗೆ? ನಮ್ಮಿಂದಲೇ ನಿರ್ಧವಾದ ನಿಯಮಗಳನ್ನು ಸಾಮೂಹಿಕವಾಗಿ ನಾವು ಪಾಲಿಸುತ್ತಿರುವವೇನ? ನಾವು ನಮ್ಮ ಹಿರಿಯರನ್ನು ಸನ್ಮಾನಿಸುತ್ತಿರುವದಾಗಿಯೂ ಮತ್ತು ಅವರ ಯೋಗ್ಯವಾದ ಸಲಹೆ ಕೇಳಿಕೊಂಡು ಅದರಂತೆ ನಡೆಯುತ್ತಿರುವದಾಗಿಯೂ ವಿಶ್ವಾಸದಿಂದ ಹೇಳಬಲ್ಲೆವೇನು? ವಜ್ಜೀಜನರ ಬಲವು ಈ ಮೂಲಭೂತ ವಿಷಯಗಳಲ್ಲಿಯೇ ಅಡಕವಾಗಿತ್ತು. ನಾವೂ ಅವರಂತೆ ನಡೆದುಕೊಂಡರೆ ನಮ್ಮ ಬಲವೂ ಬೆಳೆಯುವದು. ಬುದ್ಧನು ಒಮ್ಮೆ ತಮ್ಮ ಭಿಕ್ಷುಗಳಿಗೆ ವಜ್ಜೀ ಜನರ ಅಸೆಂಬ್ಲಿಯನ್ನು ತೋರಿಸಿ 'ದೇವಸಭೆ' ಹೇಗಿರುವದು ಇದರಿಂದ ಕಲ್ಪನೆ ಮಾಡಿಕೊಳ್ಳಿರಿ ಎಂದು ಹೇಳಿದನು. ಆದ್ದರಿಂದ ಸಾಗಾದರೂ ನಮ್ಮ ರಾಷ್ಟ್ರೀಯ ಸಂಸ್ಥೆಯನ್ನು ಈ ರೀತಿ ಸಂಘಟಿಸಿ ನಡಿಸಿಕೊಂಡು ಹೋಗುವದು ಸಾಧ್ಯವಿಲ್ಲವೇ. ಹೇಗೆ? ಹಾಗೆ ನಾವು ಮಾಡಿದಲ್ಲಿ ಮಹಾತ್ಮ ಗಾಂಧಿಯವರಿಗೆ ಅವ್ಯವಸ್ಥೆ ಹಾಗು ಹಿಂಸೆಯು ತಕರಾರು ಮಾಡಲು ಅಸ್ಪದವೇ ಉಳಿಯುವದಿಲ್ಲ. ಅವರು ನಮ್ಮ ಸಂಸ್ಥೆಯನ್ನು ತಮ್ಮ ಆಶ್ರಮದ ಬಾಲಿಕಯರಿಗೆ ತೋರಿಸಿ ಬುದ್ಧನು ಭಿಕ್ಷು ಜನರಿಗೆ ಹೇಳಿದ್ದನ್ನೇ ಹೇಳಬಹುದು.

ಇಷ್ಟು ಹೇಳಿದ ಮೇಲೆ ಸದ್ಯದ ಪರಿಸ್ಥಿತಿ ನಿವೇದಿಸಿ ಅವರು ಅಧ್ಯಕ್ಷರಿಗೆ ಸ್ಥಾನಾಸನ್ನರಾಗಲು ವಿನಂತಿ ಮಾಡಿಕೊಂಡು ಭಾಷಣ ಮುಗಿಸಿದರು.

ರಾಷ್ಟ್ರಪತಿ ಅಝಾದರ ಅಧ್ಯಕ್ಷ ಭಾಷಣ.

(4ನೇ ಪುಟದಿಂದ ಸಾಗಿದ್ದು)

ಡೆ. ಸಂಯುಕ್ತ ಕೇಂದ್ರದಲ್ಲಿ ಅಖಿಲ ಭಾರತೀಯ ಸಂಬಂಧವಿರುವ ಸಾಮಾನ್ಯ ಪ್ರಶ್ನೆಗಳು ಸಮಾವಿಷ್ಟವಾಗುವವು. ಉದಾ:- ಪರರಾಷ್ಟ್ರೀಯ ಸಂಬಂಧ, ಸಂರಕ್ಷಣೆ, ಜಕಾತಿ ಕರಗಳು ಇತ್ಯಾದಿ ಇಂಥ ಪರಿಸ್ಥಿತಿಯಲ್ಲಿ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯ ಕಲ್ಪನೆಯುಳ್ಳವರಾದರೂ ಈ ಅಲ್ಪಸಂಖ್ಯಾಕ ಸಮಸ್ಯೆಗಳಿಂದ ಮೋಸ ಹೋಗಿ ಅಡ್ಡದಾರಿ ಹಿಡಿಯಲಾರರು. ಹಿಂದೂಸ್ಥಾನದ ಭಾವೀ ಚಿತ್ರದಲ್ಲಿ ಇಂಥ ಅಂಜಿಕೆಗೆ ಅಸ್ಪದವಿರುವದೆಂಬ ಮಾತನ್ನೂ ನಾನು ಒಂದು ಕ್ಷಣ ಮಾತ್ರವೂ ನಂಬಲಾರೆನು. ಐರ್ಲಂದ ಸಂಬಂಧದಲ್ಲಿ ಓರ್ವ ಬ್ರಿಟಿಶ ಮುತ್ಸದ್ದಿಯು ಹೇಳುವಂತೆ ನಾವಿನ್ನೂ ನದಿಯ ದಂಡೆಯಲ್ಲಿ ನಿಂತಿರುವೆವು. ಈಸಬೇಕೆನಿಸಿದರೂ ನೀರಲ್ಲಿ ಧುಮುಕುವ ಮನಸಿಲ್ಲ. ಇದಕ್ಕೊಂದೇ ಉಪಾಯ. ನಾವು ನಿರ್ಭೀತಿಯಿಂದ ಧುಡಂ ಪ್ರವೇಶ ಮಾಡಬೇಕು. ನಾವು ಹೀಗೆ ಹಾರುವದೊಂದೇ ತಡ ನಮ್ಮ ಭೀತಿ ಶಂಕೆ ಕುಶಂಕೆಗಳೆಲ್ಲವೂ ಎಷ್ಟು ಜೊಳ್ಳಾಗಿರುವವೆಂಬುದು ನಮಗೆ ತಾನೇ ಹೊಳೆಯುವದು.

ಹಿಂದೀ ಮುಸಲ್ಮಾನರಿಗೆ ಮುಖ್ಯ ಪ್ರಶ್ನೆಯು.

ಓರ್ವ ಹಿಂದೀ ಮುಸಲ್ಮಾನನೆಂದ್ಯ ನಾನು ಈ ಪ್ರಶ್ನೆಯನ್ನು ಮೂವತ್ತು ವರ್ಷಗಳ ಹಿಂದ ಪರಿಶೀಲಿಸಲೆತ್ನಿಸಿದನು. ಆಗ ಮುಸಲ್ಮಾನರಲ್ಲಿ ಬಹು ಜನರು ರಾಜಕೀಯ ಹೋರಾಟದಿಂದ ಸಂಪೂರ್ಣ ದೂರಿರುತ್ತಿದ್ದರು. 1818ರ ಪೂವಲನ ದ್ವೇಷಭಾವನೆ ಹಾಗು ದೂರತ್ವಗಳೇ ಅವರ ಮನಸ್ಸನ್ನು ಆವರಿಸಿದ್ದವು. ವಾತಾವರಣವು ಇಷ್ಟು ನಿರಾಶಾಜನಕವಿದ್ದರೂ ಈ ಪ್ರಶ್ನೆಯನ್ನು ಆಸ್ಥೆಯಿಂದ ಪರಿಶೀಲಿಸುವಲ್ಲಿ ನನಗೆ ಮಾತ್ರ ನಿರಾಶೆಯೆನಿಸಲಿಲ್ಲ. ನಾನು ತೀವ್ರವೇ ಒಂದು ನಿರ್ಧಾರಕ್ಕೆ ಬಂದೆನು. ನನ್ನ ನಂಬಿಗೆ ಹಾಗು ಕೃತಿಗಳ ಮೇಲೆ ಆ ನಿರ್ಧಾರದ ಪರಿಣಾಮವೂ ಆಯಿತು. ಭಾರತವು ತನ್ನ ಮೇಲೆ ಇರುವ ಅನೇಕ ಭಾರಗಳನ್ನು ಹೊತ್ತುಕೊಂಡೇ ತನ್ನ ಮುಂದಿನ ಸಂಕಲ್ಪದತ್ತ ಸಾಗಿದೆಯೆಂಬುದು ನನಗೆ ಕಾಣಿಸಿತು. ನಾವು ಈ ಹಡಗದಲ್ಲಿಯ ಜೊತೆ ಪ್ರಯಾಣಿಕರಂತಿದ್ದರೂ ನೀರಲ್ಲಿ ಅದು ಭರದಿಂದ ಸಾಗಿದ್ದನ್ನು ದುರ್ಲಕ್ಷಿಸುವದಾಗಲಿಲ್ಲ. ಅದುದರಿಂದಲೇ ಮುಂದಿನ ಕಾರ್ಯಪದ್ಧತಿಯ ಬಗ್ಗೆ ಒಂದು ಸ್ಪಷ್ಟ ಹಾಗು ಕೊನೆಯ ನಿರ್ಧಾರಕ್ಕೆ ಬರುವದು ನನಗೆ ಅತ್ಯವಶ್ಯವೆನಿಸಿತು. ಆದರೆ ಆ ನಿರ್ಧಾರಕ್ಕೆ ಬರುವದು ಹೇಗೆ? ಈ ಸಮಸ್ಯೆಯ ಮೇಲ್ಭಾಗವನ್ನು ಪರಿಶೀಲಿಸುವದರಿಂದ ಮಾತ್ರ ನಮ್ಮ ಕೆಲಸವಾಗದೆ ಬೇರುಗಳ ವರೆಗೆ ಇಳಿದು ಆ ಮೇಲೆ ನಮ್ಮ ಪರಿಸ್ಥಿತಿಯನ್ನು ಸಮಾಲೋಚಿಸಬೇಕಾಯಿತು. ನಾನು ಹಾಗೆ ಮಾಡಿದೆ. ಒಂದೇ ಒಂದು ಪ್ರಶ್ನೆಯ ಉತ್ತರದ ಮೇಲೆ ಈ ಇಡೀ ಸಮಸ್ಯೆಯು ಅವಲಂಬಿಸಿದೆಯೆಂದು ನನಗೆ ಆಗ ಹೊಳೆಯಿತು. ನಾವು ಭಾರತೀಯ ಮುಸಲ್ಮಾನರು-ಭಾವೀ ಸ್ವತಂತ್ರ ಹಿಂದೂಸ್ಥಾನವನ್ನು ಸಾಶಂಕ ಹಾಗೂ ಅವಿಶ್ವಾಸ ದೃಷ್ಟಿಯಿಂದ ನೋಡುತ್ತಿರುವೆವೋ? ನಮ್ಮ ದೃಷ್ಟಿಯು ಸಾಶಂಕವಾಗಿದ್ದರೊಂದು ಮಾರ್ಗವನ್ನೇ ಹಿಡಿಯಬೇಕು. ಸದ್ಯದ ಘೋಷಣೆಯಾಗಲಿ ಭವಿತವ್ಯದ ಆಶ್ವಾಸನೆನ್ನಾಗಲಿ ಘಟನಾಸಂರಕ್ಷಣೆಗಳಾಗಲಿ ನಮ್ಮ ಭೀತಿಬದ್ಧ ಸಂಶಯಗಳನ್ನು ದೂರ ಮಾಡಲಾರವು. ಆಗ ನಾವು ಮೂರನೆಯವರ ಅಸ್ತಿತ್ವವನ್ನು ಸಹಿಸಲೆಸಬೇಕಾಗುವದು. ಮೂರನೆಯವರು ಈಗಾಗಲೇ ಇಲ್ಲಿ ಭದ್ರವಾಗಿರುವರು. ಅವರಿಗೆ ಬಿಟ್ಟುಹೋಗುವ ಇಚ್ಛೆಯೇ ಇಲ್ಲ. ನಾವು ಅಂಜುತ್ತ ಕುಳಿತರ ಹಾಗೆಯೇ ಎಷ್ಟು ದಿವಸ ಕೊಡಬೇಕಾಗುವದೆಂಬುದನ್ನೂ ನಾವು ವಿಚಾರಮಾಡಬೇಕಾಗುವದು. ಆದರೆ ನಾವು ಸಂಶಯ ಬೆದರಿಕೆಗಳಿಗೆ ಎಡೆಗೊಡಲಾರೆವೆಂಬ ನಿರ್ಧಾರವು ನಮ್ಮಲ್ಲಿದ್ದರೆ ನಾವು ಆತ್ಮವಿಶ್ವಾಸದಿಂದಲೂ ಧೈರ್ಯದಿಂದಲೂ ಭವಿತವ್ಯವನ್ನು ನಿರೀಕ್ಷಿಸಬೇಕು. ಆಂದರೆ ನಮ್ಮ ಮುಂದಿನ ಮಾರ್ಗವು ನಮಗೆ ಸಂಪೂರ್ಣ ಸ್ಪಷ್ಟವಾಗುವದು. ಸಂಶಯ, ಬೆದರಿಕೆ, ಆಲಸ್ಯ, ದ್ವೇಷಗಳಿಂದ ಅಲಿಪ್ತವಾದ ನೂತನ ರಾಜ್ಯದಲ್ಲಿ ನಾವು ಪ್ರವೇಶಿಸುವೆವು. ಅಲ್ಲಿಯ ದೃಢನಿಶ್ಚಯ ಆತ್ಮವಿಶ್ವಾಸ, ಉತ್ಸಾಹ ಹಾಗು ಕ್ರಿಯಾಶಕ್ತಿಯು ಪ್ರಕಾಶವೆಂದಿಗೂ ಅಡಗುವದಿಲ್ಲ. ಕಾಲ ವೈಷಮ್ಯ, ನಮ್ಮ ಮಾರ್ಗದಲ್ಲಿ ಬರುವ ಏರಿಳಿತಗಳು, ನಮ್ಮ ದಿಶೆಯನ್ನು ಬದಲು ಮಾಡಲಾರವು. ಆದ್ದರಿಂದ ಹಿಂದೀಯರ ರಾಷ್ಟ್ರೀಯ ಧ್ಯೇಯದತ್ತ ನಾವು ಗಟ್ಟಿ ಹೆಜ್ಜೆಯಿಂದ ಸಾಗುವದು ನಮ್ಮ ಆದ್ಯ ಕರ್ತವ್ಯವಾಗಿದೆ.

ದೃಢ ನಿರ್ಧಾರ.

ಈ ದೃಢನಿರ್ಧಾರಕ್ಕೆ ನಾನೆನ್ನು ಅನುಮಾನಿಸದೆ ಬಂದು ಮುಟ್ಟಿದೆ. ಮಾದಲನೆಯ ಮಾರ್ಗದ ವಿಚಾರದಿಂದ ನನ್ನ ಮೈಯೆಲ್ಲ ಜುಮ್ಮೆಂದಿತು. ಕಲ್ಪನೆಯೇ ನನಗೆ ಸಹಿಸಲಸಾಧ್ಯವಾಯಿತು. ಯಾವ ಮುಸಲ್ಮಾನನೂ ಅದನ್ನು ಸಹಿಸನು. ಆದರೆ ಇಸ್ಲಾಂ ಧರ್ಮ ಭಾವನೆಯನ್ನೇ ಸಮೂಲ ಕಿತ್ತೊಗೆದವರ ಮಾತು ಬೇರೆ.

1912ರಲ್ಲಿ 'ಅಲ್ ಹಿಲಾಲ'ವನ್ನು ಪ್ರಾರಂಭಿಸಿ ನಾನು ಈ ನನ್ನ ನಿರ್ಧಾರವನ್ನು ಹಿಂದುಸ್ಥಾನದ ಮುಸಲ್ಮಾನರ ಮುಂದೆ ಮಂಡಿಸಿದೆನು. ಆದರೆ ನನ್ನ ಬಿನ್ನಹವು ಅರಣ್ಯರೋದನವಾಗಲಿಲ್ಲೆಂಬ ಮಾತನ್ನು ಪುನಃ ಇಲ್ಲಿ ತಮ್ಮ ಲಕ್ಷ್ಯಕ್ಕೆ ತರಬಯಸುವೆ. 1912-18ರ ಅವಧಿಯು ಮುಸಲ್ಮಾನರ ರಾಜಕೀಯ ಜಾಗ್ರತಿಯಲ್ಲಿ ನೂತನ ಸ್ವರೂಪವನ್ನು ಕೊಟ್ಟಿತು. 1920ರ ಕೊನೆಗೆ ನನ್ನ ನಾಲ್ಕು ವರ್ಷಗಳ ಕಾರಾವಾಸದ ನಂತರ ಮುಸ್ಲಿಂ ರಾಜಕೀಯ ಧ್ಯೇಯವು ತನ್ನ ಹಳೆಯ ರೂಪವನ್ನು ಬಿಸುಟು ನವಸ್ವರೂಪವನ್ನು ಧಾರಣ ಮಾಡುತ್ತಿರುವದು ನನಗೆ ಕಂಡು ಬಂದಿತು. ಅಂದಿನಿಂದ ಕಳೆದ ಇಪ್ಪತ್ತು ವರ್ಷಗಳಲ್ಲಿ ಅನೇಕ ಸ್ಥಿತ್ಯಂತರಗಳು ಸಂಭವಿಸಿವೆ. ನಮ್ಮನ್ನು ನೂತನ ವಿಚಾರಗಳು ಆವರಿಸಿವೆ. ಆದರ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಕೊಡದೆಂಬ ಸಾಮಾನ್ಯ ಮುಸ್ಲಿಂ ಅಭಿಪ್ರಾಯವು ಮಾತ್ರ ಮೊದಲಿದ್ದಂತೆಯೇ ಇದೆ.

ಇದು ನಿಜ. ಅವರು ಹಿಂದಕ್ಕೆ ಕಾಲಿಡಲು ಸಿದ್ಧರಿಲ್ಲ. ಆದರೆ ಮುಂದಿನ ಮಾರ್ಗದ ಬಗ್ಗೆ ಅವರಲ್ಲಿ ಪುನಃ ಸಂಶಯವುಂಟಾಗಿದೆ. ಇದಕ್ಕೆ ಕಾರಣಗಳೇನೆಂಬುದನ್ನು ನಾನು ವಿವೇಚಿಸುವದಿಲ್ಲ. ಆದರೆ ಅದರ ಪರಿಣಾಮವನ್ನು ಮಾತ್ರ ತಿಳಿದುಕೊಳ್ಳಲೆತ್ನಿಸುವೆ. 1912ರಲ್ಲಿ ಈ ಪ್ರಶ್ನೆಯನ್ನು ಕುರಿತು ನಾನು ಭಾಷಣ ಮಾಡಿದ್ದಾಗ ನಾನೆಲ್ಲಿದ್ದೆನೋ ಅಲ್ಲಿಯೇ ಈಗಲೂ ಇರುವೆನೆಂಬ ಮಾತನ್ನು ನನ್ನ ಧರ್ಮಬಾಂಧವರಿಗೆ ತಿಳಿಸಬಯಸುತ್ತೇನೆ. ಅಂದಿನಿಂದ ಇಲ್ಲಿಯ ವರೆಗೆ ಅಸಂಖ್ಯ ಘಟನೆಗಳನ್ನೆಲ್ಲ ನಾನು ಕೂಲಂಕುಷವಾಗಿ ತೂಗಿ ನೋಡಿದ್ದೇನೆ. ಪ್ರತ್ಯಕ್ಷ ಕಣ್ಣಿನಿಂದ ನಿರೀಕ್ಷಿಸಿದ್ದೇನೆ. ಈ ವಿಚಾರಗಳೇನೂ ಕೇವಲ ನನ್ನ ನಯನಕ್ಕೆ ಹಾಯ್ದು ಹೋಗಲಿಲ್ಲ. ಅವುಗಳ ಮಧ್ಯದಲ್ಲಿ ನಾನು ಒಳ ಹೊಕ್ಕು ಪ್ರತಿಯೊಂದು ಸನ್ನಿವೇಶವನ್ನೂ ನಾನು ಪರೀಕ್ಷಿಸಿದೆನು. ನಾನು ನೋಡಿದುದನ್ನು ನನಗೆ ಹೊಳೆದುದನ್ನು ನಾನು ನಂಬದಿರಲಾರೆ. ನನ್ನ ಸ್ವಂತ ನಿರ್ಧಾರದ ವಿಷಯಕ್ಕೆ ನಾನು ಶಂಕಿತನಾಗಲಾರೆ. ನನ್ನ ವಿವೇಕದ ವಾಣಿಯನ್ನು ಹತ್ತಿಕ್ಕಲಾರೆ. ಈ ಅವಧಿಯಲ್ಲಿ ನಾನು ಹೇಳುತ್ತ ಬಂದುದನ್ನು ಇನ್ನೊಮ್ಮೆ ಸಾರಿ ಹೇಳುವೆ. 1912ರಲ್ಲಿ ನಾನು ಅವರಿಗೆ ತೋರಿಸಿದ ಮಾರ್ಗವಲ್ಲದೆ ಮತ್ತಾವ ಮಾರ್ಗವೂ 9 ಕೋಟಿ ಹಿಂದೀ ಮುಸಲ್ಮಾನರಿಗೆ ಇರುವದಿಲ್ಲೆಂದು ನಾನು ಪುನಃ ಸಾರಿ ಹೇಳುತ್ತೇನೆ.

1912ರಲ್ಲಿ ನನ್ನ ನಿರ್ಧಾರವನ್ನು ಮನ್ನಿಸಿದ ನನ್ನ ಧರ್ಮಬಾಂಧವರಲ್ಲಿ ಕೆಲವರು ಇಂದು ನನ್ನ ಅಭಿಪ್ರಾಯಕ್ಕೆ ಸಮ್ಮತಿಸುವದಿಲ್ಲ. ಅವರಿಗೆ ದೋಷ ಕೊಡುವದು ನನ್ನ ಇಚ್ಛೆಯಿಲ್ಲ. ಆದರೆ ಅವರ ಪ್ರಾಮಾಣಿಕತನ ಮತ್ತು ಕಾರ್ಯಕ್ಷಮತೆಗಳನ್ನುದ್ದೇಶಿಸಿ ನಾನು ಪ್ರಾರ್ಥಿಸುವೆನು. ರಾಷ್ಟ್ರಗಳ ಹಾಗು ಜನತೆಯ ಭವಿತವ್ಯದ ಪ್ರಶ್ನೆಗೆ ನಾವು ಕೈ ಹಾಕಿದ್ದೇವೆ. ಕ್ಷಣಿಕ ಭಾವನೆಗಳಿಂದ ನಾವು ಉದ್ದೀಪಿತರಾದರೆ ನಾವು ಯೋಗ್ಯ ನಿರ್ಣಯಕ್ಕೆ ಬರಲಾರೆವು. ನಮ್ಮ ನಿರ್ಣಯವು ಜೀವನದ ಸತ್ಯ ಸಂಗತಿಗಳ ಗಟ್ಟಿಮುಟ್ಟಾದ ತಳಹದಿಯನ್ನು ಅವಲಂಬಿಸಿರಬೇಕು. ಇಂದು ಆಕಾಶದಲ್ಲಿ ಕಾರ್ಮೋಡಗಳು ಕ

ಕೌನ್ಸಿಲು ಬಡ್ಜೆಟ್ ಮೀಟಿಂಗು.

ಕಳೆದ ಸಂಚಿಕೆಯಿಂದ ಮುಂದುವರಿದುದು

ಎರಡನೆ ದಿನ. ತಾ. (14-3-40.)

ಶ್ರೀ ಪಿ. ಜಿ. ಮುದ್ದಮ್ಮಯ್ಯನವರು ಗೈರುಹಾಜರಾಗಿದ್ದರು.

ಕೌನ್ಸಿಲಿನ ಬಡ್ಜೆಟ್ ಅಧಿವೇಶನವು ಪುನಹ ಈ ದಿನ 11 ಗಂಟೆಗೆ ಪ್ರಾರಂಭವಾದವು. ಪ್ರಥಮದಲ್ಲಿ 46 ಪ್ರಶ್ನೆಗಳಿಗೆ ಉತ್ತರಗಳು ಕೊಡಲ್ಪಟ್ಟವು.

ಮಸೂದೆಗಳು.

(1) ಕೊಡಗಿನಲ್ಲಿ ಮಾರಾಟವಾಗುವ ಪೆಟ್ರೋಲಿಗೆ (ಗೆಲನ್ ಒಂದರ ಒಂದಾಣೆಯಂತೆ) ಸುಂಕ ಹಾಕಬೇಕೆಂಬ ಮಸೂದೆಯನ್ನು ಸಿಲೆಕ್ಟ್ ಕಮಿಟಿಯ ವರದಿಯೊಂದಿಗೆ ಫೈನಾನ್ಸ್ ಮೆಂಬರರು ಸಭೆಯ ಮುಂದಿಟ್ಟರು. ಶ್ರೀ ಎನ್. ಸೋಮಣ್ಣನವರು ವಿರೋಧಿಸಿದರು. ಮಸೂದೆಯನ್ನು ಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು.

(2) ಕೊಡಗಿನಲ್ಲಿ ತಂಬಾಕು ಬೆಳೆಯುವ ಹಕ್ಕನ್ನು ...... ಕಡೆಯಲಿಕ್ಕಾಗಿ ಒಂದು ಮಸೂದೆಯನ್ನು ಸಿಲೆಕ್ಟ್ ಕಮಿಟಿಯ ವರದಿಯೊಂದಿಗೆ ಫೈನಾನ್ಸ್ ಮೆಂಬರರು ಸಭೆಯ ಮುಂದಿಟ್ಟರು. ಮಸೂದೆಯು ವಿರೋಧವಿಲ್ಲದೆ ಪಾಸಾಯಿತು.

(3) ಕೊಡಗು ಮುನ್ಸಿಪಲ್ ರೆಗ್ಯುಲೇಶನನ್ನು (ಆಸ್ತಿ ಕೈ ಬಿಡುವ ಕೂಡಲೆ ಮುನ್ಸಿಪಲ್ ರಿಜಿಸ್ಟರಿನಲ್ಲಿ ದಾಖಲಾಗಬೇಕು) ಕೆಲವು ವಿಷಯ ತಿದ್ದುಪಡಿ ಮಾಡಬೇಕೆಂಬ ಮಸೂದೆಯು ಸರಕಾರದ ಮೆಂಬರರಿಂದ ಸೂಚಿಸಲ್ಪಟ್ಟು ಯಾರೂ ಬ್ಬರ ವಿರೋಧವಿಲ್ಲದ ಪಾಸಾಯಿತು.

(4) ಕೊಡಗು ಡಿಸ್ಟ್ರಿಕ್ಟ್ ಫಂಡ್ ರೆಗ್ಯುಲೇಶನನ್ನು) ...... ಮತ್ತು ಬಳಿಕ ಅನುಕೂಲತೆ ಶುಚಿತ್ವದ ಏರ್ಪಾಡು ಇರುವ ವೇಪ ಪ್ರದೇಶಗಳಲ್ಲಿ ಮನೆಗಂದಾಯ ಹಾಕುವ ಉದ್ದೇಶ್ಯ) ಕೆಲವು ಕಾರಣಗಳಿಗಾಗಿ ತಿದ್ದುಪಡಿಮಾಡಬೇಕೆಂಬ ಮಸೂದೆಯನ್ನು ಸರಕಾರಿ ಮೆಂಬರು ಸಭೆಯ ಮುಂದಿಟ್ಟರು. ಶ್ರೀ ಎನ್ ಸೋಮಣ್ಣನವರು ಪಬ್ಲಿಕನವರ ಅಭಿಪ್ರಾಯವನ್ನು ತಗಯಲು ಪಬ್ಲಿಕ್ ಸ್ಥಗಳಿಗ ಕಳುಹಿಸಬೇಕೆಂದು ಸೂಚಿಸಿದರು. ಇದನ್ನು ಸಿಲೆಕ್ಟ್ ಕಮಿಟಿಯವರ ಅಭಿಪ್ರಾಯಕ್ಕೆ ಬಿಡಬೇಕೆಂದು ಮ. ಪಿ. ಐ. ಬಳ್ಳಪ್ಪನವರು ಸೂಚಿಸಿದರು. ಓಟಿಗೆ ಹಾಕಲಾಗಿ ಮ. ಸೋಮಣ್ಣನವರ ಸೂಚನೆಯು ಅನಂಗೀಕೃತವಾಗಿ ಸಿಲೆಕ್ಟ್ ಕಮಿಟಿಗೆ ಬಿಡಬೇಕೆಂಬ ಸೂಚನೆಯು ಅಂಗೀಕಾರವಾಯಿತು.

ಫೈನಾನ್ಸ್ ಮೆಂಬರು, ಶ್ರೀ ಬಿ. ಯಂ. ಕಾರ್ಯಪ್ಪನವರು, ಮ. ಬುಲ್‌ರವರು ಮತ್ತು ಪಿ. ಐ. ಬೆಳ್ಯಪ್ಪನವರು ಸಿಲೆಕ್ಟ್ ಕಮಿಟಿಯ ಮೆಂಬರುಗಳಾಗಿ ಆರಿಸಲ್ಪಟ್ಟಿರುವರು.

ಬಡ್ಜೆಟ್ ಠರಾವುಗಳು.

(1) **ಕಾಫಿ ತೋಟದ ಮತ್ತು ಯಾಲಕ್ಕಿಮಲೆಯ ಕಂದಾಯದಲ್ಲಿ ಶೇಕಡ 25ರಷ್ಟು ಮಾಫಿ ಬಿಡಬೇಕು. ಎಂಬ ಮ. ಸಿ. ಕಾಳಪ್ಪನವರ ಠರಾವು ಬಹುಮತದಿಂದ ಪಾಸಾಯಿತು. ನಾಲ್ಕು ಉದ್ಯೋಗಸ್ಥ ಹಾಗೂ ಇಬ್ಬರು ಯೂರೋಪಿಯನ್ ಮೆಂಬರುಗಳು ಮತ್ತು ಅಬ್ದುಲ್ ರಹಮಾನ್ ಖಾನ್‌ರವರು ಮಾತ್ರ ವಿರೋಧ ಓಟುಮಾಡಿದರು.**

(2) **ಕಂದಾಯ ಕಟ್ಟಲು ಹೆಚ್ಚಿನ ಸ**ಮಯ ಕೊಡಬೇಕು ಮತ್ತು ಪ್ರೋಸೆಸ್ ಚಾರ್ಜು ವಸೂಲ್ಮಾಡಕೂಡದು ಎಂಬ ಠರಾವನ್ನು ಮ. ಯಂ. ಯಂ. ಬೆಳ್ಯಪ್ಪನವರು ಸೂಚಿಸಿದರು. ಮ. ಪಿ. ಐ. ಬೆಳ್ಯಪ್ಪನವರು ಅನುಮೋದಿಸಿದರು. ಸರಕಾರದ ಮೆಂಬರು ವಿರೋಧಿಸಿದರು. ಠರಾವು ಬಹುಮತದಿಂದ ಪಾಸಾಯಿತು.

(3) ಮಡಿಕೇರಿಯ ಸುತ್ತಮುತ್ತ ಪೈಸಾರಿ ಜಾಗವನ್ನು ಸೌದೆ ಸರಬರಾಯಿಗೆ ಕೊಡಬೇಕೆಂಬ ಠರಾವನ್ನು ಮ. ಯಂ. ಯಂ. ಬೆಳ್ಯಪ್ಪನವರು ವಾಪಾಸು ತೆಗೆದುಕೊಂಡರು.

(4) ನಾಲ್ಕುನಾಡು ಮತ್ತು ಕೊಡಗಿನ ಇತರ ಬೆಟ್ಟಪ್ರಾಂತಗಳಲ್ಲಿ ಕಂದಾಯ ಬಾಕಿಗಾಗಿ ಸರಕಾರದವರು ವಹಿಸಿಕೊಂಡಿರುವ ಜಮ್ಮದ ಮಲೆಗಳನ್ನೆಲ್ಲಾ ಮಾಲೀಕರಿಗೆ ವಾಪಸ್ಸು ಕೊಡಬೇಕೆಂಬ ಠರಾವನ್ನು ಮ. ಬಿದ್ದಂಡ ಕಾರ್ಯಪ್ಪನವರು ಸೂಚಿಸಿದರು. ಕಾಂಗ್ರೆಸ್ ಪಕ್ಷದವರಾದ ಶ್ರೀ. ಕೊಳ್ಳಿಮಾಡ ಸಿ. ಕರುಂಬಯ್ಯನವರು, ನಂಬ್ಯಂಡ ಬೆಳ್ಯಪ್ಪನವರು ಐನಂಡ ಪಿ ಕಾರ್ಯಪ್ಪನವರು, ಬಿದ್ದಂಡ ಕಾರ್ಯಪ್ಪನವರು, ಕೋರನ ದೇವಯ್ಯನವರು, ಹಾತೂರು ಸಿದ್ದಯ್ಯನವರು, ಅಜ್ಜಮಾಡ ಮಾದಪ್ಪನವರೂ, ಇತರರ ಪೈಕಿ ಮ. ಚೌಡ್ಲು ಕಾಳಪ್ಪನವರು ಪರವಾಗಿಯೂ ಶ್ರೀ. ಗಳಾದ ಎಸ್. ಸೋಮಣ್ಣ, ಕೆ. ಮಲ್ಲಪ್ಪ, ಎಸ್. ರಾಮಮೂರ್ತಿ, ಅಬ್ದುಲ್ ರಹಮಾನ್ ಖಾನ್, ಇಬ್ಬರು ಯೂರೋಪಿಯನರು ಮತ್ತು ನಾಲ್ಕು ಉದ್ಯೋಗಸ್ಥರು ವಿರೋಧವಾಗಿಯೂ ಓಟುಮಾಡಿದ್ದರಿಂದ ಠರಾವು ಬಿದ್ದು ಹೋಯಿತು. ಮ. ಮನೆಯಪಂಡ ಬೆಳ್ಯಪ್ಪನವರು ಯಾವ ಕಡೆಗೂ ಓಟು ಮಾಡಲಿಲ್ಲ.

(5) ರಿಜರ್ವ್ ಫಾರೆಸ್ಟಿನಲ್ಲಿ ದನಗಳನ್ನು ಮಾಫಿಯಾಗಿ ಮೇಯಿಸಲು ಬಿಡಬೇಕೆಂಬ ಠರಾವನ್ನು ಮ. ಸಿ. ಕಾಳಪ್ಪನವರು ಸೂಚಿಸಿ ಚರ್ಚೆಯಾದ ನಂತರ ವಾಪಸ್ಸು ತೆಗೆದುಕೊಂಡರು.

6. **ಯಾಲಕ್ಕಿ** ಗೇಣಿ ಮಲೆಗಳನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಗೇಣಿಗೆ ಕೊಡಬೇಕೆಂಬ ಠರಾವನ್ನು ಮ. ಎಂ. ಎಂ. ಬೆಳ್ಯಪ್ಪನವರು ಸೂಚಿಸಿದ್ದು ಬಹುಮತದಿಂದ ಪಾಸಾಯಿತು.

7. **ಯಾಲಕ್ಕಿ** ಮಲೆಗಳ 39-40ನೇ ಇಸವಿಯ ಕಂದಾಯದಲ್ಲಿ ಶೇಕಡ 50ರಷ್ಟು ಮಾಫಿಬಿಡಬೇಕು. ಎಂಬ ಠರಾವನ್ನು ಮ. ಎನ್. ಸೋಮಣ್ಣನವರು ಸೂಚಿಸಿದರು. ಮೂವರು ಲಾಯರುಗಳು ಮ. ಯಂ. ಬೆಳ್ಯಪ್ಪನವರು ಮತ್ತು ಸಿ. ಕಾಳಪ್ಪನವರು ಮಾತ್ರ ಪರವಾಗಿಯೂ ಬಾಕಿಯವರು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಅಂಗೀಕಾರವಾಗಲಿಲ್ಲ.

8. **ಯಾಲಕ್ಕಿ** ಮಲೆಗಳ ಕಂದಾಯದಲ್ಲಿ ಶೇಕಡ 25ರಷ್ಟು ಮಾಫಿ ಬಿಡಬೇಕೆಂಬ ಠರಾವನ್ನು ಮ. ಬಿ. ಯಂ. ಕಾರ್ಯಪ್ಪನವರು ಈ ರೀತಿಯ ಒಂದು ಠರಾವು ಪಾಸಾದ ಕಾರಣ ವಾಪಸು ತೆಗೆದುಕೊಂಡರು.

9. ಎಲ್ಲರಿಗಿಂತಲೂ ಹೆಚ್ಚಿನ ಸರ್ವಿಸಾದ ರೇಂಜರನ್ನು ಚೀಫ್ ಫಾರೆಸ್ಟ್ ಆಫೀಸರಿಗೆ ಪರ್ಸನಲ್ ಅಸಿಸ್ಟೆಂಟ್ ಆಗಿ ನೇಮಿಸಬೇಕು. ಎಂಬ ಮ. ಯಂ. ಯಂ ಬೆಳ್ಯಪ್ಪನವರ ಠರಾವು ವಿರೋಧವಿಲ್ಲದೆ ಪಾಸಾಯಿತು.

10. ಚೀಫ್ ಫಾರೆಸ್ಟ್ ಆಫೀಸರ ಹುದ್ದೆಯನ್ನು ತೆಗೆದುಹಾಕಬೇಕು ಎಂಬ ಠರಾವನ್ನು ಶ್ರೀ ಎನ್. ಸೋಮಣ್ಣನವರು ವಾಪಸು ತೆಗೆದುಕೊಂಡರು.

11. ಉತ್ತರ ಕೊಡಗಿನ ಕೆರೆಗಳನ್ನು ದುರಸ್ತಿ ಮಾಡಬೇಕು ಎಂಬ ಮ. ಸಿ. ಕಾಳಪ್ಪನವರ ಠರಾವು ಬಹುಮತದಿಂದ ಪಾಸಾಯಿತು.

12. ಚಿಕ್ಕ ನೀರಿನ ಕಾಮಗಾರಿಗಳಿಗೆ ಹೆಚ್ಚಿನ ಹಣವಿಡಬೇಕು ಎಂಬ ಶ್ರೀ ಯಂ. ಯಂ ಬೆಳ್ಯಪ್ಪನವರ ಠರಾವು ಬಹುಮತದಿಂದ ಪಾಸಾಯಿತು.

13. ಕೊಡಗಿನಲ್ಲಿ ಅನಾವಶ್ಯವಾಗಿ ಹರಿದು ಹೋಗುತ್ತಿರುವ ನೀರನ್ನು ವ್ಯವಸಾಯ ಕಾರ್ಯಕ್ಕೆ ಉಪಯೋಗಿಸಲು ತಕ್ಕ ಏರ್ಪಾಡು ಮಾಡಲು, ಉದ್ಯೋಗಸ್ಥರಲ್ಲದವರ ಸಮಿತಿಯೊಂದನ್ನು ನೇಮಿಸಬೇಕೆಂಬ ಶ್ರೀ ಐ. ಪಿ ಕಾರ್ಯಪ್ಪನವರ ಠರಾವು ಬಹುಮತದಿಂದ ಪಾಸಾಯಿತು.

14. ನಾಲ್ಕುನಾಡು ಮತ್ತು ಕೊಡಗಿನ ಇತರ ಬೆಟ್ಟ ಪ್ರದೇಶಗಳಲ್ಲಿರುವ ಗದ್ದೆಗಳಿಗೆ ನೀರು ಹಾಯಿಸಲು ಅಲ್ಲಲ್ಲಿಯ ತೋಡುಗಳಿಗೆ ಕಟ್ಟೆ ಹಾಕಿ ಕಾಲುವೆ ತೋಡಬೇಕು. ಎಂಬ ಮ. ಬಿದ್ದಂಡ ಕಾರ್ಯಪ್ಪನವರ ಠರಾವು ಬಹುಮತದಿಂದ ಪಾಸಾಯಿತು.

15. ಫಾರೆಸ್ಟ್ ಕನ್ಸರ್ವೆನ್ಸಿ ಮತ್ತು ವರ್ಕ್ಸ್ ಬಾಬಿನಿಂದ ರೂ. 2500 ತೆಗೆದು ಪೊನ್ನಂಪೇಟೆ ನಾಡು ಮಲ್ಲೂರು ಗ್ರಾಮದ ನಿಟ್ಟೂರು ಹೊಳೆಗೆ ಕಟ್ಟೆ ಹಾಕಲು ಉಪಯೋಗಿಸಬೇಕೆಂಬ ಶ್ರೀ ಕೆ. ಸಿ. ಕರುಂಬಯ್ಯನವರ ಠರಾವಿಗೆ ಕಾಂಗ್ರೆಸ್ ಪಕ್ಷದ ಏಳು ಮೆಂಬರುಗಳು ಪರವಾಗಿಯೂ, ನಾಲ್ಕು ಉದ್ಯೋಗಸ್ಥರು ಮತ್ತು ಯೂರೋಪಿಯನ್ ಮೆಂಬರುಗಳು ವಿರೋಧವಾಗಿಯೂ ಓಟು ಮಾಡಿ ಉಳಿದವರು ಯಾವ ಕಡೆಗೂ ಓಟು ಮಾಡದ್ದರಿಂದ ಠರಾವು ಪಾಸಾಯಿತು.

16. ಫೈನಾನ್ಶಿಯಲ್ ಎಡ್ವೈಸರ ಹುದ್ದೆಗೆ ಸ್ಥಳೀಕರನ್ನೇ ನೇಮಿಸತಕ್ಕದ್ದು ಎಂಬ ಮ. ಸೋಮಣ್ಣನವರ ಠರಾವು ಬಹುಮತದಿಂದ ಪಾಸಾಯಿತು. ಕಾಂಗ್ರೆಸ್ ಪಕ್ಷದ ಏಳು ಮೆಂಬರುಗಳೂ, ಮ. ಗಳಾದ ಎನ್. ಸೋಮಣ್ಣನವರೂ, ಯಂ. ಯಂ. ಬೆಳ್ಯಪ್ಪನವರೂ ಮತ್ತು ಸಿ. ಕಾಳಪ್ಪನವರೂ ಪರವಾಗಿಯೂ, ಶ್ರೀ ಗಳಾದ ಎಸ್. ರಾಮಮೂರ್ತಿಯವರು ಮತ್ತು ಕೆ. ಮಲ್ಲಪ್ಪನವರು ಯಾವ ಕಡೆಗೂ ಓಟು ಮಾಡದೆಯೂ ಉಳಿದ ಏಳು ಜನರು ವಿರೋಧವಾಗಿಯೂ ಓಟು ಮಾಡಿದರು.

ಮೂರನೇ ದಿನ (15-3-40)

ಬಿಲ್ಲುಗಳು.

ಬೆಳಿಗ್ಗೆ 11 ಗಂಟೆಗೆ ಕೆಲವು ಪ್ರಶ್ನೋತ್ತರಗಳು ನಡೆದ ಮೇಲೆ ಫೈನಾನ್ಸ್ ಮೆಂಬರು-ಕೊಡಗಿನ ಕೋರ್ಟುಗಳ ರೆಗ್ಯುಲೇಶನನ್ನು (ಒಂದು ಪ್ರತ್ಯೇಕ ಡಿ. ಜಡ್ಜ್ ಹುದ್ದೆಯನ್ನು ಏರ್ಪಡಿಸುವ ಉದ್ದೇಶ್ಯ) ಕೆಲವು ಉದ್ದೇಶ್ಯಗಳಿಗಾಗಿ ತಿದ್ದುಪಡಿ ಮಾಡಬೇಕೆಂಬ ಮಸೂದೆಯನ್ನು ಸಭೆಯ ಮುಂದಿಟ್ಟರು. ಹೆಚ್ಚಿನ ಚರ್ಚೆ ಇಲ್ಲದೆ ಈ ಮಸೂದೆಯು ಪಾಸಾಯಿತು.

(ಕಮೀಶನರ ಹುದ್ದೆಯು ವಜಾ ಆಗಿ ಅವರ ಅಧಿಕಾರವು ಚೀಫ್ ಕಮಿಷನರಿಗೂ, ಡಿ. ಕಮಿಷನರಿಗೂ ಹಂಚಲ್ಪಡುವದರಿಂದ) ಕೊಡಗಿನ ಆಕ್ಟುಗಳಲ್ಲಿ ಬೇಕಾದ ತಿದ್ದುಪಡಿಗಳನ್ನು ಮಾಡಲಿಕ್ಕಾಗಿ ಒಂದು ಮಸೂದೆಯನ್ನು ಫೈನಾನ್ಸ್ ಮೆಂಬರು ಸೂಚಿಸಿ ಆಡಳಿತೆಯ ಬದಲಾವಣೆಯ ಅನುಕೂಲತೆಗಾಗಿಯೂ, ಖರ್ಚು ಮೋತೆಗಾಗಿಯೂ ಇದನ್ನು ಕೂಡಲೇ ಪಾಸು ಮಾಡುವದು ಅಗತ್ಯವೆಂದು ಹೇಳಿದರು. ಅಸಿಸ್ಟೆಂಟ್ ಕಮೀಶನರೊಬ್ಬರಿಗೆ ಹೆಚ್ಚಿನ ಅಧಿಕಾರ ದೊರೆಯುವದೆಂದೂ ಈ ಮಸೂದೆಯಿಂದ ಕೊಡಗಿನ ಆಡಳಿತದಲ್ಲಿ ವಿಶೇಷ ಬದಲಾವಣೆಗಳಾಗುವದರಿಂದಲೂ ಈ ಮಸೂದೆಯನ್ನು ಸಿಲೆಕ್ಟ್ ಕಮಿಟಿಗೆ ಬಿಡಬೇಕೆಂದು ಮ. ಎನ್. ಸೋಮಣ್ಣನವರು ಸೂಚಿಸಿದರು. ಈ ಮಸೂದೆಯಿಂದ ಈಗಿರುವ ಕಮಿಷನರ ಅಧಿಕಾರವನ್ನು ಡಿ. ಕಮಿಷನರಿಗೂ, ಚೀಫ್ ಕಮಿಷನರಿಗೂ ಹಂಚುವದಲ್ಲದೆ ಹೊಸ ಅಧಿಕಾರವನ್ನೇನೂ ಕೊಡುವಂತಿಲ್ಲವಾದ್ದರಿಂದಲೂ ಇದನ್ನು ತಡ ಮಾಡಿದರೆ ಆಡಳಿತದ ಖರ್ಚು ಹೆಚ್ಚಾಗುವದರಿಂದಲೂ ಅವಶ್ಯ ಬಿದ್ದಾಗ್ಯೆ ಈ ಮಸೂದೆಯಲ್ಲಿ ಬದಲಾವಣೆ ಮಾಡಿಕೊಳ್ಳಬಹುದಾಗಿರುವದರಿಂದಲೂ ಮಸೂದೆಯನ್ನು ಮುಂದಕ್ಕೆ ತಳ್ಳಿ ಹಾಕದೆ ಈಗಲೇ ಪಾಸಿಗೆ ತರುವದು ಉತ್ತಮವೆಂದು ಶ್ರೀ ಪಿ. ಐ. ಬೆಳ್ಯಪ್ಪನವರು ಸೂಚಿಸಿದರು. ಖರ್ಚು ಮೋತೆಯ ದೃಷ್ಟಿಯಿಂದಲೂ ಆಡಳಿತ ಅನುಕೂಲತೆಯಿಂದಲೂ ಈ ಮಸೂದೆಯನ್ನು ಪಾಸು ಮಾಡುವದು ಉತ್ತಮವೆಂದು ಮ. ಬುಲ್‌ರವರು ಸೂಚಿಸಿದರು. ಮ. ಸೋಮಣ್ಣನವರ ಸೂಚನೆಗೆ ಮೂವರು ಲಾಯರುಗಳೂ, ಶ್ರೀ ಯಂ. ಯಂ. ಬೆಳ್ಯಪ್ಪನವರು ಮಾತ್ರ ಓಟು ಮಾಡಿದ್ದರಿಂದ ಆ ಸೂಚನೆಯು ಬಿದ್ದು ಹೋಯಿತು. ಮಸೂದೆಯನ್ನು ಓಟಿಗೆ ಹಾಕಲು ಮೇಲಿನ ಐವರಲ್ಲದೆ ಉಳಿದವರು ಪರವಾಗಿ ಓಟು ಮಾಡಿದ್ದರಿಂದ ಮಸೂದೆಯು ಪಾಸಾಯಿತು.

ಕೊಡಗು ಲೇಂಡ್ ಮತ್ತು ರೆವಿನ್ಯೂ ರೆಗ್ಯುಲೇಶನನ್ನು (ಕಂದಾಯ ಬಾಕಿಗಾಗಿ ಭೂಮಿ ಜಪ್ತಿ ಮಾಡುವದು, ಹರಾಜು ಮಾಡುವದು ಮತ್ತು ಸ್ವಾಧೀನ ತೆಗೆದುಕೊಳ್ಳುವದನ್ನು ಆಸ್ತಿ ಬಳಿ ಸಾರುವದನ್ನು ನಿಲ್ಲಿಸುವದಕ್ಕಾಗಿ) ತಿದ್ದುಪಡಿ ಮಾಡಬೇಕೆಂಬ ಮಸೂದೆಯನ್ನು ಫೈನಾನ್ಸ್ ಮೆಂಬರು ಸೂಚಿಸಿದರು. ಸಾರುವದು ಆಗತ್ಯವೆಂದೂ, ಭೂಮಾಲಿಕರಿಗೆ ಸಾಕಷ್ಟು ತಿಳುವಳಿಕೆ ಕೊಡದೆ ಹರಾಜು ಮಾಡುವದು ಅನ್ಯಾಯವೆಂದು ಮಸೂದೆಯನ್ನು ಮ. ಪಿ. ಐ. ಬೆಳ್ಯಪ್ಪನವರು ವಿರೋಧಿಸಿದರು. ಮ. ಮಲ್ಲಪ್ಪನವರು ಬೆಳ್ಯಪ್ಪನವರಿಗೆ ಒತ್ತಾಸೆಯಾಗಿ ಮಾತಾಡಿದರು. ಮಸೂದೆಯನ್ನು ಓಟಿಗೆ ಹಾಕಲಾಗಿ ಉದ್ಯೋಗಸ್ಥರೂ ಯೂರೋಪಿಯನ್ ಮೆಂಬರುಗಳು ಪರವಾಗಿಯೂ ಉಳಿದವರೆಲ್ಲರು ವಿರೋಧವಾಗಿಯೂ ಓಟು ಮಾಡಿದ್ದರಿಂದ ಮಸೂದೆಯು ಪಾಸಾಗಲಿಲ್ಲ.

(ಮುಂದುವರಿಯುವುದು).

ಕೊಡಗು

ಮಾರ್ಚಿ ತಾರೀಕು ೨೯ ನೇ ಶುಕ್ರವಾರ ೧೯೪೦.

ರಾಮಗಡ ಕಾಂಗ್ರೆಸ್.

ರಾಮಗಡದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸಿನ ಐವತ್ತಮೂರನೇ ಅಧಿವೇಶನವು ವಿವಿಧ ರೀತಿಗಳಿಂದ ಮಹತ್ವದ್ದೆನಿಸಿಕೊಂಡಿದೆ. ಈ ಅಧಿವೇಶನವು ಹಿಂದಿನವುಗಳಿಗಿಂತಾ ಒಂದು ವೈಶಿಷ್ಟ್ಯವನ್ನು ತಳೆದಿತ್ತು. ಅಧಿವೇಶನಕ್ಕೆ ಈ ವೈಶಿಷ್ಟ್ಯತೆಯನ್ನಾದರೂ ಇಂದಿನ ಪರಿಸ್ಥಿತಿಯೇ ಕೊಟ್ಟಿದೆ. ಭೀಕರ ಯುದ್ಧದ ಕಾರ್ಮೋಡದಿಂದ ಕತ್ತಲು ಕವಿದಿರುವ ಅಂತರರಾಷ್ಟ್ರೀಯ ಸಮಸ್ಯೆ; ತಾನು ಧುಮುಕಿರುವ ಯುದ್ಧದಲ್ಲಿ ಭಾರತವೂ ಭಾಗಿಯೆಂದು ಸಾರಿದ ಬ್ರಿಟಿಷ್ ಘೋಷಣೆ, ಕಾಂಗ್ರೆಸಿನ ಕೇಳಿಕೆಗೆ ಬ್ರಿಟಿಷರು ತೋರಿಸಿದ ಧೋರಣೆ, ಇವೇ ಅಧಿವೇಶನಕ್ಕೆ ವೈಶಿಷ್ಟ್ಯತೆ ಹಾಗೂ ಮಹತ್ವವನ್ನು ತಂದಿದ್ದಾಗಿವೆ. ಇಂದಿನ ಈ ಬಿಕ್ಕಟ್ಟಿನ ಸಂದರ್ಭವನ್ನರಿತೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಬಹಿರಂಗ ಅಧಿವೇಶನದಲ್ಲಿ ಇಡೀ ಭಾರತೀಯರ ಏಕಮೇವ ಅಭಿಪ್ರಾಯವನ್ನು ವ್ಯಕ್ತಪಡಿಸುವ ಒಂದೇ ಒಂದು ಠರಾವಿರಬೇಕೆಂದೂ, ಆದ್ದರಿಂದ ಬೇರೆ ಠರಾವುಗಳನ್ನು ಮಂಡಿಸುವದು ಬೇಡವೆಂದೂ ಅಭಿಪ್ರಾಯಪಟ್ಟಿತು. ಅಂತೆಯೇ ಅಧಿಕಾರಿ ವರ್ಗದ ಕರೆಯನ್ನು ಜನತೆಯು ಮನ್ನಿಸಿ ತಮ್ಮ ಸಹನಶಕ್ತಿಯನ್ನು ಪ್ರದರ್ಶಿಸಿತು. ತತ್ಪರಿಣಾಮದಿಂದ ಅಧಿವೇಶನವು ಒಂದೇ ಒಂದು ದಿನದಲ್ಲಿಯೇ ಮುಕ್ತಾಯಗೊಂಡು ಕಾಂಗ್ರೆಸ್ ಅಧಿವೇಶನಗಳಲ್ಲಿ ಚಿಕ್ಕದೆಂದೆನಿಸಿಕೊಂಡಿತು. ಅಧಿವೇಶನವು ಸಂಕ್ಷಿಪ್ತದಲ್ಲಿ ಕೊನೆಗೊಂಡರೂ, ಒಂದೇ ಒಂದು ಠರಾವು ಅದರಲ್ಲಿ ಅಂಗೀಕರಿಸಲ್ಪಟ್ಟರೂ ರಾಮಗಡ ಕಾಂಗ್ರೆಸನ್ನು ಇತಿಹಾಸ ಪ್ರಸಿದ್ಧ ಅಧಿವೇಶನವನ್ನಲು ಅಡ್ಡಿಯಿಲ್ಲ. ಭಾರತೀಯರು ತಮ್ಮ ಅಂತರ್ವ್ಯವಹಾರಗಳನ್ನು ಮರೆತು ದೇಶದ ಉನ್ನತಿಗಾಗಿ ಒಗ್ಗಟ್ಟಿನಿಂದ; ಒಂದೇ ಕಂಠದಿಂದ ಸಂಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸಿನ ಧ್ಯೇಯವೆಂದು ಸಾರಿದ, ಪರದೇಶಿ ಸರಕಾರವು ಭಾರತ ಭವಿತವ್ಯವನ್ನು ರೂಪಿಸುವದಲ್ಲ, ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯೇ ದಾರಿ ಎಂದು ಘೋಷಿಸಿದ ಹಾಗೂ ಮಹಾತ್ಮಾ ಗಾಂಧೀಯವರ ಮುಂದಾಳುತನದಲ್ಲಿ ಅವರ ಸೂಚನೆಗಳಂತೆ ವರ್ತಿಸಿ ಭಾರತ ಸ್ವಾತಂತ್ರ್ಯವನ್ನು ಕರಗತಮಾಡಿಕೊಳ್ಳುತ್ತೇವೆಂದು ಉದ್ಗರಿಸಿದ ಆ ಗೊತ್ತುವಳಿಯು ಜಗತ್ತಿಗೇ ಭಾರತದ ಸ್ಥಿತಿಯನ್ನು ವಿಶದಪಡಿಸುತ್ತಿದೆ.

ಇಷ್ಟರ ವರೆಗೆ ಅಧಿವೇಶನಗಳಲ್ಲಿ ಹೆಚ್ಚಿನ ಭಾಗವಹಿಸದಿದ್ದ ಗಾಂಧೀಜಿಯವರು ಇಂದು ಬಹಿರಂಗ ಸಭೆಯಲ್ಲಿ ಭಾಷಣಮಾಡಿದ್ದನ್ನು ನೋಡಿದರೆ ಇಂದಿನ ರಾಜಕೀಯ ಸ್ಥಿತಿ ಎಷ್ಟು ತೀಕ್ಷ್ಣ ಪರಿಸ್ಥಿತಿಗೆ ತಲಪಿದೆಯೆಂಬುದು ಮನವರಿಕೆಯಾಗದಿರದು. ಅಧ್ಯಕ್ಷರಾದ ಮೌಲಾನಾ ಅಬುಲ್ ಕಲಾಂ ಆಜಾದರು ತಮ್ಮ ಅಧ್ಯಕ್ಷ ಭಾಷಣದಲ್ಲಿ ದೇಶಕ್ಕೆ ಕೊಟ್ಟಿರುವ ಸಂದೇಶವು ಯಾವನೊಬ್ಬನ ರಕ್ತ ಧಮನಿಯಲ್ಲಿಯೂ ಹುರುಪನ್ನು ಹುಟ್ಟಿಸದಿರದು. ಬ್ರಿಟಿಷರ ಇಂದಿನ ಈ ಮನೋವೃತ್ತಿಯನ್ನು ಹೆಚ್ಚಿನ ಕಾಲ ಸಹಿಸುವದು ಅಸಾಧ್ಯವೆಂದು ಸರಕಾರವನ್ನು ಎಚ್ಚರಿಸಿರುವರು. ಜೊತೆಯಲ್ಲೇ ದೇಶೀಯರಾದ ನಾವು ಇಂದಿನ ಅಂತರ್ಜಗಳಗಳನ್ನು ಬಿಟ್ಟು ರಾಷ್ಟ್ರದ ಕಲ್ಯಾಣಕ್ಕಾಗಿ ಕಂಕಣಬದ್ಧರಾಗಬೇಕೆಂದೂ, ಗಾಂಧೀಜಿಯವರು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ ಶರತುಗಳನ್ನು ಪ್ರತಿಯೊಬ್ಬನೂ ಶಿರಸಾವಹಿಸಿ ಅವರ ಮುಖಂಡತ್ವವನ್ನು ಪಾಲಿಸಿಕೊಳ್ಳಬೇಕೆಂದೂ, ಭಾರತಕ್ಕೆ ಸ್ವರಾಜ್ಯಬೇಕೆಂದು ಹಂಬಲಿಸುವ ಪ್ರತಿಯೊಬ್ಬ ಭಾರತೀಯನೂ ತಮ್ಮ ತಮ್ಮಲ್ಲಿಯ ಲೋಪದೋಷಗಳನ್ನು ಕಿತ್ತೊಗೆದು ಕಾಂಗ್ರೆಸ್ ಸಂಸ್ಥೆಯನ್ನು ಪವಿತ್ರವನ್ನಾಗಿ ಮಾಡಬೇಕೆಂದೂ, ಮೇಲಾಗಿ ಶಿಸ್ತು, ಐಕ್ಯತೆ ಹಾಗೂ ಮಹಾತ್ಮರಲ್ಲಿ ನಂಬಿಕೆಯಿಂದ ಎಲ್ಲರೂ ವರ್ತಿಸಬೇಕೆಂದೂ ಸೂಚಿಸಿರುವರು. ಅಲ್ಲದೆ ನಮ್ಮ ಗತಪ್ರತಾಪ ಪ್ರತಿಷ್ಠೆಗಳಾದರೂ ಪ್ರಾಜ್ಯಮಹತ್ಕಾರ ಅಖಂಡ ಮುಖಂಡತ್ವದಿಂದಲೇ ನಮಗೆ ಬಂದಿರುವುದಾಗಿವೆಯೆಂದೂ ಸಾರಿರುವರು. ಆದ್ದರಿಂದ ನಮ್ಮ ಪರೀಕ್ಷಾಕಾಲವಾದ ಇಂದಿನ ಬಿಕ್ಕಟ್ಟಿನಲ್ಲಿ ಎಚ್ಚತ್ತು ನಮ್ಮ ಮಾರ್ಗದರ್ಶಿಗಳ ಕರೆಯಂತೆ ವರ್ತಿಸಿ ದೇಶದ ಬಂಧವಿಮೋಚನೆಗೆ ಸಹಕಾರಿಗಳಾಗೋಣ.

ಮಾಜಿ ಮಂತ್ರಿ ಯಾಕೂಬ್ ಹಸೆನ್.

ಮದ್ರಾಸ್ ಕಾಂಗ್ರೆಸ್ ಮಂತ್ರಿ ಮಂಡಳದಲ್ಲಿ ಒಬ್ಬರಾಗಿದ್ದ ಮೌಲಾನಾ ಯಾಕೂಬ್ ಹಸೆನ್‌ರವರು ಇದೇ ತಾರೀಕು 23ರಲ್ಲಿ ಪರಂಧಾಮವನ್ನೈದಿದರೆಂಬ ಖೇದಾಸ್ಪದ ವಿಚಾರವು ಯಾರ ಹೃದಯವನ್ನು ತಾನೆ ತಳಮಳಗೊಳಿಸಲಿಕ್ಕಿಲ್ಲ? ಅರುವತ್ತೈದು ವರ್ಷ ಪ್ರಾಯಸ್ಥರಾದಾಗ್ಯೂ ತರುಣರಂತೆ ಕಾರ್ಯ ಮಾಡುತ್ತಿದ್ದ ಇವರ ಅಕಾಲ ಮರಣವು ವಿಷಾದಕರವೇ ಅಲ್ಲವೇ? ರಾಮಗಡ ಕಾಂಗ್ರೆಸ್ಸಿನಿಂದ ಹಿಂತಿರುಗಿದ ಇವರು ಹಠಾತ್ತಾಗಿ ದಿವಂಗತರಾದವನ್ನು ವಿಧಿವಿಲಾಸವೆಂದೇ ಹೇಳಬೇಕು. ಯಾಕೂಬ್ ಹಸೆನರು ತ್ಯಾಗಿಗಳು, ದೇಶಭಕ್ತರು ಮೇಲಾಗಿ ಶಾಂತಮೂರ್ತಿಗಳು. ಹಿಂದೂ–ಮುಸ್ಲಿಂ ಐಕ್ಯತೆಗೆ ಆಧಾರಸ್ತಂಭವೆನಿಸಿದ್ದವರು. ಇವರ ಪಾಂಡಿತ್ಯವು, ದಯಾಪ್ರವೃತ್ತಿಯೂ, ನಾಡಿನ ಸೇವೆಯೂ ಚಿರಸ್ಮರಣೀಯವಾಗಿದೆ. ಭಾರತದ ಬಿಕ್ಕಟ್ಟಿನ ಸಮಯದಲ್ಲಿ ಇವರ ಆವಶ್ಯಕತೆ ಪೂರಾ ಇತ್ತು. ಇಂಥಾ ಸಂದಿಗ್ಧ ಪರಿಸ್ಥಿತಿಯಲ್ಲಿ ಇವರ ಮರಣದಿಂದ ದೇಶಕ್ಕೆ ಅಪಾರ ನಷ್ಟವಾಗಿದೆ. ಮಂತ್ರಿ ಪದವಿಯಲ್ಲಿದ್ದಾಗ ಅವರು ನಮ್ಮ ನಾಡಿಗೂ ದಯಮಾಡಿಸಿ ಬೋಧಪ್ರದವಾದ ಭಾಷಣವನ್ನಿತ್ತಿದ್ದಾದರೂ ನಮ್ಮ ಸ್ಮೃತಿ ಪಥದಿಂದ ಇನ್ನೂ ಅಳಿಸಿಲ್ಲ. ಅದಾಗಲೇ ಅವರು ಮೃತ್ಯುವಿನ ಕರಾಳ ಹಸ್ತಕ್ಕೆ ಬಲಿಯಾದರೆಂದರೆ ನಾವು ದುರ್ದೈವಿಗಳೇ ಸರಿ. ತ್ಯಾಗವೀರರೂ, ದೇಶಭಕ್ತರೂ ಆದ ಮಂತ್ರಿವರ್ಯರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ.

ಅಧಿವೇಶನದಲ್ಲಿ ಗಾಂಧಿಯವರ ಭಾಷಣ.

ಗಾಂಧೀಜಿಯವರು ಕಾಂಗ್ರೆಸ್ ಬಹಿರಂಗ ಅಧಿವೇಶನದಲ್ಲಿ ಗಂಭೀರ ಧ್ವನಿಯಲ್ಲಿ ಭಾಷಣ ಮಾಡುತ್ತಾ ಈ ರೀತಿ ಹೇಳಿದರು

‘ನಾವು ಗುಲಾಮರು. ಗುಲಾಮಗಿರಿಯಲ್ಲಿ ಮುಳುಗಿದ್ದೇವೆ. ಆದರೆ ಈ ಗುಲಾಮಗಿರಿಯನ್ನು ಕಿತ್ತೊಗೆಯಲೇ ಬೇಕು. ಕಳ್ಳನು ನನ್ನ ಮನೆಗೆ ನುಗ್ಗಿದರೆ ಅವನನ್ನು ಹೊರಗೋಡಿಸುವದು ನನ್ನ ಧರ್ಮ. ಆದರೆ ಅವನು ನನ್ನನ್ನೇ ಹೊರಗೆ ಹಾಕಿದರೆ ಆಗ ನಾನು ಅವನನ್ನು ಹೊರಗೋಡಿಸಲು ಬೇರೆ ಉಪಾಯಗಳನ್ನು ಯೋಜಿಸಬೇಕಾಗುವದು.

ಆದರೆ ನಾವು ಇನ್ನೂ ಅದಕ್ಕೆ ಸಿದ್ಧರಿಲ್ಲ. ಈ ಮಾತನ್ನು ನಾನು ಈಗಾಗಲೇ ವಿಷಯ ನಿಯಾಮಕ ಸಭೆಯಲ್ಲಿ ಹೇಳಿದ್ದೇನೆ. ಇಲ್ಲಿಯೂ ಅದನ್ನೇ ಹೇಳುತ್ತೇನೆ. ನಾನು ನಿಮ್ಮ ನಾಯಕನಾದರೆ, ನಾನು ಹೇಳಿದಂತೆ ಕೇಳಬೇಕು. ನನ್ನ ಶರತುಗಳಿಗೆ ನೀವು ಒಪ್ಪಲೇ ಬೇಕು.

ನಾನು ನಾಯಕತ್ವ ವಹಿಸಿದ ಯಾವ ಸೈನ್ಯವೂ ಸೋತಿಲ್ಲ. ನನಗೆ ಎಂದೂ ಸೋಲಾಗಿಲ್ಲ. ಸೋಲೆಂಬುವುದೇ ನನಗೆ ಗೊತ್ತಿಲ್ಲ. ರಾಜಕೋಟೆಯಲ್ಲಿ ಸಹ ಸೋಲಾಗಲಿಲ್ಲ ಜಯವೇ ಆಯಿತು. ಆದ್ದರಿಂದ ನಿಮಗೆ ಸೋಲಾಗಬಾರದೆಂದು ನಾನು ಪ್ರಯತ್ನಿಸುತ್ತಿದ್ದೇನೆ. ನನಗೆ ಮತ್ತು ನಿಮಗೆ ಸೋಲಾದರೆ ಇಡೀ ಹಿಂದೂಸ್ಥಾನಕ್ಕೆ ಸೋಲಾದಂತೆ.

ಸ್ವಾತಂತ್ರ್ಯದ ಸಲುವಾಗಿ ಮತ್ತೆ ಸಂಗ್ರಾಮವನ್ನು ಹೂಡಲೇ ಬೇಕಾಗಿದೆಯೆಂದು ನನಗೂ ಅನಿಸಿದೆ. ಮುಂದಿನ ಹೆಜ್ಜೆಯನ್ನು ನಾವು ಈಗ ಇಡಲೇ ಬೇಕಾಗಿದೆ. ಆದರೆ ನಾವು ಸಿದ್ಧರಾದ ಮೇಲೆಯೇ ಆ ಹೆಜ್ಜೆಯನ್ನಿಡಬೇಕು. ಹೋರಾಟ ಹೂಡಿದರೆ ಪ್ರಚಂಡ ವಿಜಯವನ್ನು ಪಡೆಯಬೇಕಲ್ಲದೆ ಪರಾಜಯ ಹೊಂದಬಾರದು.

ಚರಕ ಮತ್ತು ಸತ್ಯಾಗ್ರಹಗಳಿಗೆ ನಿಕಟ ಸಂಬಂಧವಿದೆ. ನಿಮ್ಮ ನಾಯಕನಾದ ನನಗೆ ಅದು ಮನವರಿಕೆಯಾಗಿದೆ. ಇಪ್ಪತ್ತು ವರ್ಷಗಳಿಂದ ಅದೇ ನಮಗೆ ಯಶಸ್ಸನ್ನು ತಂದಿದೆ ನೀವಾದರೂ ಇದಕ್ಕೆ ಒಪ್ಪಲೇ ಬೇಕು’ ಎಂದು ಹೇಳಿದರು.

ಮುಸ್ಲಿಂಲೀಗ್ ಅಧಿವೇಶನದಲ್ಲಿ ಮಿ. ಜಿನ್ನಾರವರ ಪ್ರಲಾಪ.

‘ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ಭಾರತ ಜನತೆಯನ್ನು ಸುಖ ಶಾಂತಿಗಳಿಂದ ಇರುವಂತೆ ಬಯಸುವದಾದರೆ ಭಾರತ ದೇಶವನ್ನು ಹಿಂದೂ ಭಾರತ ಹಾಗೂ ಮುಸ್ಲಿಂ ಭಾರತವೆಂದು ಎರಡು ಭಾಗ ಮಾಡುವದೊಂದೇ ದಾರಿ.’ ಎಂದು ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮಿ. ಜಿನ್ನಾರವರು ಲೀಗಿನ ಅಧಿವೇಶನದಲ್ಲಿ ಹೇಳಿರುವರು. ಮುಂದುವರಿಸುತ್ತಾ ಅವರು ಹೇಳಿದ್ದೇನೆಂದರೆ ಭಾರತದ ಸಮಸ್ಯೆಯು ಕೋಮುವಾರು ವ್ಯವಹಾರದಲ್ಲಿ ಅಂತರ ರಾಷ್ಟ್ರೀಯ ಸಂಬಂಧದ ವಿಚಾರವೆಂದೂ, ಆದ್ದರಿಂದ ಭಾರತವನ್ನು ವಿಭಜಿಸುವದರಿಂದ ಎರಡು ಭಾಗಗಳೂ ಮುಂದೆ ಶಾಂತಿ ಸೌಹಾರ್ದದಿಂದ ಜೀವಿಸಲನುಕೂಲವಾಗುವದೆಂದೂ, ಹಿಂದೂ ಮುಸ್ಲಿಮರ ಐಕ್ಯವಾಗಿ ಭಾರತವು ಏಕರಾಷ್ಟ್ರವಾಗುವದೆಂಬುದು ಕೇವಲ ಮನಸಿನ ಕನಸೆಂದೂ, ಇಂದು ತೋರುತ್ತಿರುವ ಕೃತ್ರಿಮ ಐಕ್ಯತೆಯಾದರೂ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಖಡ್ಗ ಕಾಠಿಣ್ಯದಿಂದ ನೆಲೆಸಿರುವದಾಗಿದೆಯೆಂದೂ, ಕಳೆದ 1,200 ವರ್ಷಗಳಿಂದಲೇ ಭಾರತದಲ್ಲಿ ಐಕ್ಯತೆಯು ಸಾಧ್ಯವಾಗಲಿಲ್ಲವೆಂದೂ ಆದ್ದರಿಂದ ಇಂದಾದರೂ ಸಾಧ್ಯವಾಗುವದೆಂಬುದು ಕೇವಲ ಭ್ರಮೆಯೆಂದೂ ಹೇಳಿರುವರು.

ಬ್ಯಾರಿಸ್ಟರ್ ವಿ. ಡಿ. ಸಾವರ್ಕರರ ಭಾಷಣ.

ಅಖಿಲ ಭಾರತ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ವಿ. ಡಿ. ಸಾವರ್ಕರರವರು ‘ಭಾರತವು ಅವಿಭಾಜ್ಯವಾದ ಏಕರಾಷ್ಟ್ರ. ಅದನ್ನು ವಿಭಜಿಸಲು ಪ್ರಯತ್ನಿಸುವ ಯಾವ ಪಂಗಡ ಯಾ ವ್ಯಕ್ತಿಯನ್ನು ನಾವು ಎದುರಿಸದಿರೆವು’ ಎಂದಿರುವರು. ‘ಕಾಂಗ್ರೆಸು ದೇಶದಲ್ಲಿಯ ಅಲ್ಪಪಕ್ಷಿಯರಿಗೆ ಅನರ್ಹವಾದ - ಮರ್ಯಾದೆಯನ್ನು ಕೊಟ್ಟಿದೆ. ಅದ ಪ್ರಯುಕ್ತವೇ ಮುಸ್ಲಿಂ ಲೀಗು ಇಂದು ಭಾರತವನ್ನು ಎರಡು ಭಾಗವಾಗಿ ಹಂಚಬೇಕೆಂದು ಹಂಬಲಿಸುವಷ್ಟು ಧೈರ್ಯತಳೆದಿದೆ. ಕಾಂಗ್ರೆಸು ದೇಶೀಯ ಅಲ್ಪ ಪಕ್ಷೀಯರೊಡನೆ ಸಹಕರಿಸಿ ಕೆಲಸಮಾಡಬೇಕೆಂದೂ, ಹಿಂದು–ಮುಸ್ಲಿಮರ ಐಕ್ಯತೆಯನ್ನು ಸಾಗಿಸಬೇಕೆಂದೂ ಪ್ರಯತ್ನಿಸುತ್ತಿರಲಾಗಿ ಮುಸ್ಲಿಂ ಲೀಗು ಭಾರತವನ್ನು ಎರಡು ಪಂಗಡಗಳಾಗಿ ವಿಭಾಗಿಸಬೇಕೆಂದು ಹೇಳಿ ತನ್ನ ನಗ್ನ ಸ್ವರೂಪವನ್ನು ತೋರಿಸಿದೆ. ಇನ್ನಾದರೂ ಕಾಂಗ್ರೆಸು ಎಚ್ಚೆತ್ತುಕೊಳ್ಳಬೇಕಾಗಿದೆ. ಒಡನೆ ಭಾರತಕ್ಕೆ ಒಂದು ಸೈನ್ಯವನ್ನು ತಯಾರಿಸಬೇಕು. ಕೆಲವೇ ವರ್ಷಗಳಲ್ಲಿ ಭಾರತವು ಗುಂಡಿಗೆ ಗುಂಡಿನಿಂದ, ವಿಮಾನಕ್ಕೆ ವಿಮಾನದಿಂದ, ಬಾಂಬಿಗೆ ಬಾಂಬಿನಿಂದ ಉತ್ತರವನ್ನೀಯುವಷ್ಟು ಶಕ್ತಿಯುತವಾಗಬೇಕು’ ಎಂದು ಉದ್ಗರಿಸಿರುವರು.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ.

ಕೊಡಗು ಟೆರಿಟೋರಿಯಲ್ ಫೋರ್ಸಿನ ಹಳೇ ಸಿಪಾಯಿಗಳ ತರಬೇತು ಏಪ್ರಿಲ್ ತಾ. 2 ರಿಂದ ಪ್ರಾರಂಭವಾಗುತ್ತೆ.

ಇಲ್ಲಿ ಕಾಫಿ ಖಂಡಿಗೆ ರೂ. 180 ರ ವರೆಗೂ, ಏಲಕ್ಕಿ ಮಣಕ್ಕೆ ರೂ. 32ರ ವರೆಗೂ ಕ್ರಯವಿದೆ.

ರಾಮಗಢ ಕಾಂಗ್ರೆಸ್ಸಿಗೆ ಕೊಡಗಿನಿಂದ ಪ್ರತಿನಿಧಿಯಾಗಿ ಹೋಗಿದ್ದ ಶ್ರೀ ಸಿ. ಎಂ. ಪೂಣಚ್ಚನವರು ಹಿಂದಿರುಗಿ ಬಂದಿರುವರು.

ಕೊಡಗು ಕಮಿಷನರು ತಾರೀಕು 30ರಲ್ಲಿ ಪೊನ್ನಂಪೇಟೆಗೆ ಹೋಗಿ 1ನೇ ತಾರೀಕಿನ ವರೆಗೆ ಅಲ್ಲಿದ್ದು 2ನೇ ತಾರೀಕಿನಲ್ಲಿ ವೀರಾಜಪೇಟೆಗೆ ಬಂದು ಅಲ್ಲಿ ಒಂದು ದಿನವಿದ್ದು ತಾ. 4ರಲ್ಲಿ ಇಲ್ಲಿಗೆ ಬರುವರೆಂದು ಸುದ್ದಿ.

ಪರೀಕ್ಷಾರ್ಥವಾಗಿ ಫಾರೆಸ್ಟು ಇಲಾಖೆಯವರಿಂದ ನಡೆಸಲ್ಪಟ್ಟ ಹತ್ತು ಮೈಲು ದೂರದ ಓಟವನ್ನು (ಮೆರಾಥನ್ ರೇಸ್) ಶ್ರೀ ಮೋಕಯಿರ ಕಾರ್ಯಪ್ಪನವರು 70 ನಿಮಿಷಗಳಲ್ಲಿ ಓಡಿ ಪ್ರಥಮ ಬಂದಿರುವರಾಗಿ ತಿಳಿಯುತ್ತೇವೆ.

ಚೇರಳ ಶ್ರೀಮಂಗಲ ಸಂಘದ ಪ್ರೆಸಿಡೆಂಟರು ಹಾರಂಯ ಅಂಗಡಿಯನ್ನು ಹರಾಜಿನಲ್ಲಿ ಪಡೆದರೆಂದು ಆ ಸಂಘದ ಕಾರ್ಯನಿರ್ವಾಹಕ ಮಂಡಳಿಯವರು ಅವರ ಮೇಲೆ ಅವಿಶ್ವಾಸವನ್ನು ಸೂಚಿಸಿದ ಕಾರಣ ಪ್ರೆಸಿಡೆಂಟರು ತಮ್ಮ ಪದವಿಗೆ ರಾಜಿನಾಮೆಯಿತ್ತರಂತೆ. ಇಂತೆಯೇ ಎಲ್ಲಾ ಸಂಸ್ಥೆಗಳೂ ಜನರ ಹಿತ ದೃಷ್ಟಿಯಲ್ಲಿ ಮಾದರಿಯಾಗಿರುವುದು ಆವಶ್ಯಕ.

ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಪ್ರಾಥಮಿಕದಲ್ಲಿ ಶ್ರೀಮತಿಗಳಾದ ಸಿ. ಎ. ಪೊನ್ನಮ್ಮನವರು, ಸಿಸ್ಟರ್ ಮೇರಿ ಕೆಥೊಲಿನ್‌ರವರು ಮತ್ತು ಶ್ರೀಮಾನ್ ಕೆ. ಎಂ. ಪರಮೇಶ್ವರನವರು ಎರಡನೇ ತರಗತಿಯಲ್ಲಿಯೂ ಶ್ರೀಮತಿಯರಾದ ಲಕ್ಷ್ಮಿ ದೇವಮ್ಮ, ಸಿ. ಡಿ. ಬೋಳಮ್ಮ ಮತ್ತು ಸಂಟ್ ಜೋಸೆಫ್ ಮದರ್ ಐಸಿಯವರು ಎರಡನೇ ತರಗತಿಯಲ್ಲಿಯೂ, ಮಾಧ್ಯಮಿಕದಲ್ಲಿ ಶ್ರೀ ಗಳಾದ ನಾರಾಯಣಭಟ್ಟರವರು, ವಿ. ಅಬೂಬಕರವರು ಮತ್ತು ಶ್ರೀಮತಿ ಎ. ಆರ್. ಪಬೇರ್ ಪಾನ್‌ರವರೂ, ರಾಷ್ಟ್ರೀಯ ಪರೀಕ್ಷೆಯಲ್ಲಿ ಶ್ರೀಮಾನ್ ಕೇದಿಗ ಕೃಷ್ಣಾಚಾರ್ಯರೂ ಉತ್ತೀರ್ಣರಾಗಿರುವರು.

ವೀರಾಜಪೇಟೆ

ಇಲ್ಲಿ ಬತ್ತ ಗಾಡಿಗೆ ರೂ. 50 ಕ್ರಯವಿದೆಯೆಂದು ತಿಳಿಯುತ್ತೇವೆ.

ಕೊಡಗು ಕಂಪೆನಿಯ ಮೇಲೆ ಹೂಡಿರುವ ಮೊಕದ್ದಮೆಯ ವಿಚಾರಣೆಯು ಏಪ್ರಿಲ್ ತಾರೀಕು 16ರಲ್ಲಿ ಇಲ್ಲಿಯ ಮುನ್ಸೀಫ್ ಕೋರ್ಟಿನಲ್ಲಿ ನಡೆಯುವುದು.

ಇಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ಹಿಂದೀ ಪ್ರಾಥಮಿಕ ಪರೀಕ್ಷೆಯಲ್ಲಿ ಶ್ರೀ ಗಳಾದ ಪೆಟ್ರಿಕ್ ಗ್ರೇಸಿಯಸ್, ಎಂ. ಆರ್. ನರಸಿಂಹಯ್ಯ ಮತ್ತು ಬಿಜುವಮಂಡ ಅಪ್ಪಯ್ಯನವರೂ, ಮಾಧ್ಯಮಿಕ ಪರೀಕ್ಷೆಯಲ್ಲಿ ಶ್ರೀಮತಿಯರು ಯಂ. ಸಿ. ಪೊನ್ನಮ್ಮ ಮತ್ತು ಯಸ್. ಆರ್. ಸುಶೀಲಾಬಾಯಿಯವರೂ ಮತ್ತು ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಶ್ರೀಮಾನ್ ಎಂ. ಎಸ್. ರಾಮಚಂದ್ರ ಶರ್ಮರವರೂ ತೇರ್ಗಡೆಯಾಗಿರುವರಾಗಿ ತಿಳಿಯುತ್ತೇವೆ.

ಇಲ್ಲಿಯ ಬೆಟ್ಟಗೇರಿ ಗ್ರಾಮದ ಕಂಡ್ಯಾಲು ಕೇರಿಯಲ್ಲಿ ಶ್ರೀ ಕೆ. ಜಿ. ಪೂವಯ್ಯನವರೊಂದು ಈಜುವ ಸ್ಪರ್ಧೆಯನ್ನು ತಾ. 14ರಲ್ಲಿ ನಡೆಸಿ ಜಯಶಾಲಿಗಳಾದ ಶ್ರೀ ಕೆ. ಬಿ. ಮಾದಪ್ಪನವರಿಗೂ, ಶ್ರೀ ಕೆ. ಟಿ. ಮುದ್ದಪ್ಪನವರಿಗೂ, ಮತ್ತು ಶ್ರೀ ಕೆ. ಬಿ. ಕುಶಾಲಪ್ಪನವರಿಗೂ ಅನುಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ಕೊಟ್ಟರೆಂದೂ ನಂತರ ಉಪನ್ಯಾಸ, ಲಘು ಫಲಾಹಾರಗಳೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತೆಂದೂ ತಿಳಿಯುತ್ತೇವೆ.

ನಾಪೋಕ್ಲು.

ಇಲ್ಲಿಯ ದನಗಳ ಪ್ರದರ್ಶನವು ಕೊಟ್ಟಮುಡಿಯಲ್ಲಿ ಏಪ್ರಿಲ್ ತಾ. 19 ಮತ್ತು 20ರಲ್ಲಿ ಜರುಗುವದೆಂದು ತಿಳಿಯುತ್ತೇವೆ.

ನಿಧನ ವಾರ್ತೆ.

ನಟ್ಟಮಾಡ ಕುಟುಂಬದ ಮಹಿಳಾ ದವಸಭಂಡಾರದ ಪ್ರೆಸಿಡೆಂಟರಾಗಿದ್ದ ಲೇಟ್ ಗಣಪತ್ತಿಯವರ ಪತ್ನಿ ಸಂಜಪ್ಪನವರು ತಾ. 23ರಲ್ಲಿ ತಮ್ಮ 78ನೇ ವಯಸ್ಸಿನಲ್ಲಿ ಪರಂಧಾಮವನ್ನೈದಿದರು.

ಹಿಂದೂದೇಶ.

ಯುವರಾಜರ ಕುಮಾರರಾದ ಜಯಚಾಮರಾಜೇಂದ್ರ ಒಡೆಯರನ್ನು ಯುವರಾಜರನ್ನಾಗಿ ಒಡನೆ ನೇಮಿಸಲಾಗುವದೆಂದು ವಾರ್ತೆ.

ಬ್ರಿಟಿಷ್ ಸರ್ಕಾರವು ಸ್ಪೇನ್‌ಸರ್ಕಾರಕ್ಕೆ 2,000,000 ಪೌನಿನ ಬೆಲೆಯ ಹಣವನ್ನು ಅಡ್ವಾನ್ಸಾಗಿ ಕೊಟ್ಟು ಅದನ್ನು ಸ್ಪೇನಿನ ಲೆಕ್ಕಕ್ಕೆ ಜಮಾ ಕಟ್ಟಿಕೊಳ್ಳುವದು.

ಈ ಮೊದಲು ಒಂದು ಭಾಷಣ ಮಾಡಿದ್ದಕ್ಕಾಗಿ ವಸ್ತುಗಿರಿ ಮಾಡಲ್ಪಟ್ಟ ಸಮತಾವಾದಿ ಪಕ್ಷದ ಕಾರ್ಯದರ್ಶಿಯಾದ ಶ್ರೀ ಜಯಪ್ರಕಾಶನಾರಾಯಣರಿಗೆ 9 ತಿಂಗಳ ಕಠಿಣ ಸಜೆಯು ವಿಧಿಸಲ್ಪಟ್ಟಿದೆ.

ಕೌನ್ಸಿಲ್ ಆಫ್ ಸ್ಟೇಟಿನ ಲೀಡರಾಗಿದ್ದ ಸರ್ ಜಗದೀಶ ಪ್ರಸಾದರವರು ಈ ವಾರಾಂತ್ಯದಿಂದ ನಿವೃತ್ತರಾಗುವರೆಂದೂ, ಅವರ ಬದಲಿಗೆ ಸರ್ ರಿಜಿನಾಲ್ಡ್ ಮೇಕ್ಸ್‌ವೆಲ್ ಎಂಬವರು ನೇಮಕ ಹೊಂದುವರೆಂದೂ ವಾರ್ತೆ.

ಅಖಿಲ ಭಾರತ ಕಾಂಗ್ರೆಸಿನ ಜನರಲ್ ಸೆಕ್ರೆಟರಿಗಳಾದ ಶ್ರೀ ಕೃಪಾಲಿನಿಯವರು ಒಂದು ಪ್ರಕಟಣೆಯನ್ನು ಹೊರಡಿಸಿ ನಿತ್ಯ ಖಾದಿಧಾರಿಗಳ ಮತ್ತು ನೂಲುವವರ ಪಟ್ಟಿಗಳನ್ನು ತಯಾರಿಸಬೇಕೆಂದು ಪ್ರಾಂತೀಯ ಕಾಂಗ್ರೆಸ್ ಕಚೇರಿಗಳಿಗೆ ಸೂಚಿಸಿರುವದಲ್ಲದೆ ಪ್ರತಿಯೊಬ್ಬ ಮೆಂಬರನೂ ಜನತೆಯಲ್ಲಿ ಐಕ್ಯತೆಯನ್ನು ಬೆಳೆಸಿ ಮುಂದಿನ ಸತ್ಯಾಗ್ರಹಕ್ಕೆ ಜನತೆಯನ್ನು ತಯಾರುಮಾಡುವ ಕಾರ್ಯವನ್ನು ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ.

ಭರತಖಂಡವನ್ನು ಹಿಂದೂ ಇಂಡಿಯಾ ಮತ್ತು ಮುಸ್ಲಿಂ ಇಂಡಿಯಾ ಎಂದು ವಿಭಜಿಸುವದು ಮುಸ್ಲಿಮರಿಗಾಗಲಿ ಭಾರತಕ್ಕಾಗಲಿ ಕ್ಷೇಮವನ್ನುಂಟುಮಾಡುವದಿಲ್ಲ. ಇದರಿಂದ ಕೋಮುವಾರು ಸಮಸ್ಯೆ ಎಂದಿಗೂ ಸಾಧಿತವಾಗುವುದಿಲ್ಲ. ಎಂದು ಪ್ರತಿಭಟಿಸಿ ಮುಸ್ಲಿಂ ಲೀಗಿನ ಸದಸ್ಯರೂ ಭಾರತೀಯ ಪ್ರೋಗ್ರೆಸಿವ್ ಪಕ್ಷದ ಅಧ್ಯಕ್ಷರೂ ಆದ ಮಿ|| ಮಹಮದ್ ರಷೀದ್ ಅಲಿ ಬೇಗ್‌ರವರು ಮುಸ್ಲಿಂ ಲೀಗಿಗೆ ರಾಜೀನಾಮೆ ಕೊಟ್ಟಿದ್ದಾರೆ.

ರಾಮಘಡ ಕಾಂಗ್ರೆಸ್ ಅಧಿವೇಶನದ ವಿಷಯವಾಗಿ ಲಂಡನ್ನಿನ ಪತ್ರಿಕೆಗಳು ಹೆಚ್ಚು ಉತ್ಸಾಹವನ್ನೇನೂ ತೋರಿಲ್ಲ. ಲಂಡನ್ನಿನ ಟೈಂಸ್ ಪತ್ರಿಕೆಯು ಮೌಲಾನಾ ಆಜಾದರ ಭಾಷಣವನ್ನು ಕೇವಲ 6 ಪಂಕ್ತಿಗಳಲ್ಲಿ ಮುಕ್ತಾಯ ಮಾಡಿದೆ. ಅಧಿವೇಶನದಲ್ಲಿ ನಡೆದ ವಿಷಯವಾಗಿ ಬ್ರಿಟಿಷ್ ಪತ್ರಿಕೆಗಳು ಹೆಚ್ಚಾಗಿ ಏನನ್ನೂ ಬರೆಯದಿದ್ದರೂ ಅವುಗಳು ಕೊಟ್ಟಿರುವ ಅಭಿಧಾನಗಳು ಬಹಳ ಜೋರಾಗಿವೆ. 'ರಾಮಘಡದಲ್ಲಿ ಕಾಂಗ್ರೆಸಿಗರ ಆರ್ಭಟ!' 'ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಯಿತು ಕಾಂಗ್ರೆಸ್' ಎಂಬುದೇ ಆ ಅಭಿಧಾನಗಳು.

ರಾಮಘಡದಲ್ಲಿ ನಡೆದ ಅಖಿಲ ಹಿಂದೂಸ್ಥಾನದ ಕಾಂಗ್ರೆಸ್ ಅಧಿವೇಶನಕ್ಕೆ ಈ ವರ್ಷ ಮಳೆಯ ದೆಸೆಯಿಂದ ಅಪಾರವಾದ ನಷ್ಟವುಂಟಾಯಿತು. ಅಲ್ಲಿ ಪ್ರೇಕ್ಷಕರಿಗೂ, ಪ್ರತಿನಿಧಿಗಳಿಗೂ ಇಳಿದುಕೊಳ್ಳಲು ಸೌಕರ್ಯಗಳನ್ನು ಕಲ್ಪಿಸಿಕೊಡುವದಕ್ಕೂ ಮೊದಲಾದವುಗಳನ್ನು ಹಾಕಿಸುವದಕ್ಕೂ ಸುಮಾರು 2½ ಲಕ್ಷ ರೂಪಾಯಿಗಳು ಖರ್ಚಾಗಿದ್ದರೆ ಅದರಲ್ಲಿ ಕೊಟಡಿಗಳಿಗೂ ಮಹಾಧಿವೇಶನಕ್ಕೂ ಪ್ರೇಕ್ಷಕರು ಪ್ರವೇಶದ್ದನ್ನು ಕೊಟ್ಟಿದರ ಮೂಲಕ ವಸೂಲಾದುದು ಕೇವಲ 40,000 ರೂಪಾಯಿಗಳೆಂದೂ ಹೇಳಲಾಗಿದೆ. ಮಳೆಯು ಹೊಂದದೆ ಇಲ್ಲದೆ ಹೋಗಿದ್ದಲ್ಲಿ ಈ ವರ್ಷ ಸುಮಾರು ಎರಡು ಲಕ್ಷಕ್ಕಿಂತಲೂ ಹೆಚ್ಚು ಮಂದಿ ಕಾಂಗ್ರೆಸ್ ನಗರಕ್ಕೆ ಹೋಗಿದ್ದರೆಂದೂ ಹೇಳಲಾಗಿದೆ.

ವಿದೇಶ.

ಭಾನುವಾರ ಮತ್ತು ಸೋಮವಾರ ರಾತ್ರಿ ಬ್ರಿಟಿಷ್ ವಿಮಾನಗಳು ಜರ್ಮನಿಯ ನೈರುತ್ಯ ದಿಗ್ಭಾಗದ ಪ್ರದೇಶದ ಮೇಲೆ ಹಾರಿಬಂದಿದ್ದುವು.

ಭಾನುವಾರ ಮಧ್ಯರಾತ್ರಿಗೆ ಮುಕ್ತಾಯವಾದ ವಾರದಲ್ಲಿ ಒಂದಾದರೂ ಬ್ರಿಟಿಷ್ ಅಥವಾ ಮಿತ್ರಮಂಡಲದ ಹಡಗು ನಷ್ಟವಾಗಲಿಲ್ಲ. ಯುದ್ಧಾರಂಭವಾದಂದಿನಿಂದ ಇಂಥ ಪರಿಸ್ಥಿತಿ ಉಂಟಾದುದು ಇದೇ ಮೊದಲು.

ಫ್ರೆಂಚ್ ಸಚಿವರಾದ ಮಿ. ಡಲಾಡಿಯರು ಮಂತ್ರಿ ಮಂಡಲಕ್ಕೆ ರಾಜಿನಾಮೆಯಿತ್ತಿದ್ದಾರೆ. ಡಲಾಡಿಯರ್ ಮಂತ್ರಿ ಮಂಡಲದಲ್ಲಿ ಅರ್ಥಸಚಿವರಾಗಿದ್ದ ಮಿ. ರೇನೋರವರು ಮಂತ್ರಿಮಂಡಲವನ್ನೇರ್ಪಡಿಸುತ್ತಾರೆ. ಡಲಾಡಿಯರವರು ಈ ಮಂತ್ರಿಮಂಡಲದಲ್ಲಿ ಸೇರುವುದಿಲ್ಲವೆಂದು ಹೇಳಲಾಗಿದೆ.

ಭಾರತದ ಸೆಕ್ರೆಟರಿಗಳಾದ ಲಾರ್ಡ್ ಜೆಟ್ಲೆಂಡರವರು ತಮ್ಮ ಹುದ್ದೆಯಿಂದ ನಿವೃತ್ತರಾಗುವರೆಂದೂ ಅವರ ಬದಲು ಮಿ. ಆರ್. ಬಟ್ಲರ್ ಎಂಬವರನ್ನು ನೇಮಿಸಲಾಗುವದೆಂದೂ, ಭಾರತ ವೈಸರಾಯರಾದ ಲಾರ್ಡ್ ಲಿನ್‌ಲಿತ್ಗೋರವರ ಅಧಿಕಾರದ ಅವಧಿಯನ್ನು ಯುದ್ಧಾಂತ್ಯದ ವರೆಗೆ ಮುಂದರಿಸಲಾಗುವದೆಂದೂ ವರ್ತಮಾನ.

ರಷ್ಯಾ-ಫಿನ್‌ಲಾಂಡ್ ಯುದ್ಧದಲ್ಲಿ ಫಿನ್‌ಲ್ಯಾಂಡಿನ 15,000 ಮಂದಿ ಪ್ರಜೆಗಳು ಮಡಿದರೆಂದೂ 9,000 ಮಂದಿ ಹೆಂಗಸರು ವಿಧವೆಯರಾದರೆಂದೂ 25,000 ಮಂದಿ ಮಕ್ಕಳು ಅನಾಥರಾದರೆಂದೂ ಸುಮಾರು 5,000 ಮನೆಗಳು ರಷ್ಯಾದವರ ಸಿಡಿಮದ್ದುಗಳಿಂದ ನಾಶವಾದುವೆಂದೂ ಐದು ಲಕ್ಷ ಪ್ರಜೆಗಳಿಗೆ ವಾಸಕ್ಕೆ ಮನೆ ಇಲ್ಲದಂತಾಗಿದೆಯೆಂದೂ ಪ್ರಕಟವಾಗಿದೆ.

COORG FOREST DEPARTMENT

Mercara, 21st March 1940.

TIMBER SALE NOTICE.

Sealed tenders are invited by 12 noon on 8th April 1940 for the purchase of 2421 c. ft. of Teak, 9919 c. ft. of Mathi, 17728 c. ft. of Nandi, 139 c. ft. of Honne Branch Pieces, 63 c. ft. of Biti Branch pieces and 5140 Teak Poles lying in Ex-Forest Depots of Somwarpet Fraserpet, Thithimatti and Nagerhole Range..

For further particulars please apply to:--

The Chief Forest Officer,
Coorg, Mercara.

WANTED.

Three candidates for "Electric Pawer course.

Two candidates for complete accountancy course.

All with prospects of local employment.

For further particulars please apply to:-

The Ideal Tutorial School,
Mercara.

ವಸಂತ ಸಾಹಿತ್ಯೋತ್ಸವ.

ಲೇ. ಬಕವೃಷ್ಟಿ.

ಕನ್ನಡ ಸಾಹಿತ್ಯಪರಿಷತ್ತಿನ ವಸಂತ ಸಾಹಿತ್ಯೋತ್ಸವವು ಪ್ರಾಂತೀಕ ಕರ್ನಾಟಕ ಸಂಘದ ನೇತೃತ್ವದಲ್ಲಿ, ಸ್ಥಳೀಯ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. 22 ರಿಂದ ಮೂರು ದಿನಗಳ ವರೆಗೆ ಇಲ್ಲಿಯ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ನಡೆಯಿತು. ಜನತೆಯೊದರೂ ಕಿಕ್ಕಿರಿದು ನೆರೆದಿತ್ತು. ಪ್ರಾಂತೀಯ ಸಮಿತಿಯವರ ಸ್ವಾಗತ ಹಾಗೂ ಸ್ಥಳೀಕ ಸ್ವಾಗತಾಧ್ಯಕ್ಷರ ಭಾಷಣ ಇವುಗಳಿಂದ ಉತ್ಸವವು ಪ್ರಾರಂಭಗೊಂಡಿತು. ಶಕುಂತಳ ನಾಟಕದ ರಮ್ಯತೆಯ ವಿಚಾರ ಮಾತಾಡಿ ಕನ್ನಡ ಕವಿಸಾರ್ವಭೌಮ ಕಾಳಿದಾಸನ ಮಹತ್ವವನ್ನು ಜನತೆಯ ಮುಂದಿಟ್ಟ ಶ್ರೀ ಕಡಂಗೋಡ್ಲು ಶಂಕರಭಟ್ಟರ ಭಾಷಣವೂ, ತಮ್ಮ ವಾಚನ ಪ್ರಾವೀಣ್ಯತೆಯಿಂದ ಪ್ರಾಚೀನ ಪುರಾಣವಾದ ಭಾರತಕ್ಕೆ ಒಂದು ಕಳೆಯನ್ನು ತಂದರುವ ಶ್ರೀ ಕ. ಕೃಷ್ಣರಾಯರ ಸುಶ್ರಾವ್ಯವಾದ ವಾಚನವೂ, ನಗುನಗಡಲಲ್ಲಿ ಪ್ರೇಕ್ಷಕ ವೃಂದವನ್ನು ಮುಳುಗಿಸಿದ ಹಾಸ್ಯಕೇಸರಿಯಂತಿರುವ ಶ್ರೀ ಜಿ. ಪಿ. ರಾಜರತ್ನಂರವರ ಸಾಹಿತ್ಯ ವಿಡಂಬನೆಯ ವಿವರಣೆಯೂ, ಭಾರತದ ಇಂದಿನ ಪ್ರಬಲ ಸಮಸ್ಯೆಯಾದ ಗ್ರಾಮ ಜೀವನದ ಆರ್ಥಿಕ ಸಮಸ್ಯೆಗಳ ವಿಚಾರದ ಶ್ರೀ ಕೆ. ಎಸ್. ಕಾರಂತರವರ ಬೋಧಪೂರ್ಣ ಭಾಷಣವೂ, ನವೀನ ವಿದ್ಯಾಪದ್ಧತಿಗೆ ಸಿಲುಕಿ ವ್ಯಕ್ತಿತ್ವವನ್ನು ಕಳಕೊಂಡಿರುವ ಇಂದಿನ ವಿದ್ಯಾಭ್ಯಾಸ ಕ್ರಮದ ಪುನರ್ರಚನೆಯ ವಿಚಾರ ಶ್ರೀ ಮುಕುಂದರಾಯರು ಮಾಡಿದ ವಿಚಾರಪರಿಪ್ಲುತವಾಗಾಮೃತವೂ, ಸಾಹಿತ್ಯ, ಕಲೆ, ಸಂಸ್ಕೃತಿ ಇವುಗಳ ವಿಚಾರ ಹೃದಯಂಗಮವಾದ ಹಾಗೂ ವಿಚಾರೋದ್ರೇಕಗೊಳಿಸುವ ಶ್ರೀ ಸೀತಾರಾಮಯ್ಯನವರ ವಾಗ್ಧಾಟಿಯೂ, ಹಾಸ್ಯಪರಿಪ್ಲುತವಾದ ಹಾಗೂ ವಿಷಯಗರ್ಭಿತವಾದ ಶ್ರೀ ಕಾರಂತರ ನಾಟಕವಂಬ ನಾಟಕವೂ, ಇಂದಿನ ವೃತ್ತಪತ್ರಿಕಾ ಪ್ರಪಂಚದಲ್ಲಿ ತಾನೇ ತಾನಾಗಿರುವ ಚಿಕ್ಕ ಕಥೆಗಳ ಮಹತ್ವದ ವಿಚಾರ ಮಾತಾಡಿದ ಶ್ರೀ ಕೆ. ಗೋಪಾಲಕೃಷ್ಣರಾಯರ ಭಾಷಣವೂ, ಶ್ರೀ ಕೆ. ವಿ. ರಾಘವಾಚಾರ್ಯರ ಗ್ರೀಕ್ ನಾಟಕ ಪದ್ಧತಿಯ ವೈಶಿಷ್ಟ್ಯ ಹಾಗೂ ಅವರ ಕನ್ನಡವಾಙ್ಮಯವೂ, ನಿಜವಾಗಿಯೂ ಹೊಗಳುವ ವಿಚಾರಗಳೇ ಅಲ್ಲ; ಮನೋಲ್ಲಾಸ ಕಾರ್ಯಗಳೇ ಅಲ್ಲ; ಭವಿಷ್ಯದ ಬಾಗಿಲನ್ನು ತೆರೆಯಲು ಸಹಕರಿಸಬಹುದಾದ ಬೋಧನೆಗಳೂ ಆಗಿದ್ದವು.

ವಸಂತ ಸಾಹಿತ್ಯ ಅಂದರೆ ಇದೇ ಏನು? ಅಲ್ಲ; ಸ್ವಾಭಾವಿಕವಾಗಿ ಕಷ್ಟವಿರುವಲ್ಲಿ ಸುಖವೂ, ಸಜ್ಜನನಿರುವಲ್ಲಿ ದುರ್ಜನನೂ ಇರುವದು ನಿಸರ್ಗದ ನಿಯಮ. ಅಂತೆಯೇ ಇಲ್ಲಿಯೊದರೂ ಅಂಥಾ ವಿಚಾರಗಳಿಲ್ಲದೆ ಇರಲು ಸಾಧ್ಯವೇ? ಭಾಷಣಗಳನ್ನು ಕೇಳುತ್ತಾ ತಲ್ಲೀನನಾಗಿದ್ದ ನ್ನಾನು ಇದೊಮ್ಮೆ ಹೊರಳಿ ನೋಡಿದ್ದುಂಟು. ಆ ದೃಷ್ಟಿಪಥದಲ್ಲಿ ಕುರ್ಚಿಯ ಮುಂದುಗಡೆ ಪಾಜಿಸ್ಸಿಟ್ಟು ಭಾಷಣವನ್ನು ಬರೆದುಕೊಳ್ಳುವವರು ಕುಳಿತ್ತಿದ್ದರು. (ಇಲ್ಲಿ ಅವರನ್ನು ಟೀಕಿಸುವದು ನನ್ನ ಅಭಿಪ್ರಾಯವಲ್ಲ. ಇವು ನನಗೆ ಬಗೆಹರಿಯದ ಸಮಸ್ಯೆಗಳು, ಉತ್ತರಿಸಿಗುವವೇ ಎಂದು ನಾನು ಹಂಬಲಿಸಿದ ಪ್ರಯತ್ನವೇ ಈ ಲೇಖನ) ಇದೇ ರೀತಿ ಈ ಮೊದಲಿನ ಅನೇಕ ಸಂದರ್ಭಗಳಲ್ಲಿ ಇವರು ಮೇಜಿನ ಮುಂದೆ ಗಂಭೀರ ಕುಳಿತು ಬರೆಯುತ್ತಿರುವದನ್ನು ನಾನು ನೋಡಿರುವನು. ಆದರೆ ಇದಂದೂ ಯಾವ ಪತ್ರಿಕೆಯಲ್ಲೂ ಪ್ರಕಟಿಸಲ್ಪಟ್ಟ ಅರಿವು ನನಗಿಲ್ಲ. ಬಹುಶಃ ಇವರು ಬರೆಯುವದು ಅವರ ಸ್ವಂತ ಉಪಯೋಗದ ದೃಷ್ಟಿಯಿಂದಿರಬಹುದೇನೊ? ಅಂತೂ ಸಾರ್ವಜನಿಕ ಭಾಷಣವೇದಿಕೆಯಲ್ಲಿ ಗಣ್ಯಸ್ಥಾನದಲ್ಲಿ ಕುಳಿತು ಭಾಷಣಗಳನ್ನು ಬರೆದುಕೊಳ್ಳುವವರು ಸಾರ್ವಜನಿಕರ ಉಪಯೋಗಕ್ಕಾಗಿ ಅವನ್ನು ಪತ್ರಿಕೆಗಳಲ್ಲಿ ಪ್ರಕಟಿಸುವದು ಹಿತವೆಂದು ನನ್ನ ಅಭಿಪ್ರಾಯ. ಇದಲ್ಲದೆ, ಕಾರ್ಯಕಲಾಪಗಳನ್ನವಲೋಕಿಸುತ್ತಿದ್ದಂತೆಯೇ ಸ್ಥಳೀಯ ಕರ್ನಾಟಕ ಸಂಘದ ವಿಚಾರದ ಸಮಸ್ಯೆಯೊಂದು ನನ್ನ ಮುಂದೆ ಬಂತು. ಕರ್ನಾಟಕ ಸಂಘದ ಅಧಿಕಾರಿಗಳನ್ನು ಆರಿಸುವಾಗ ಇತರ ಕ್ಷೇತ್ರದಲ್ಲಿ, ಅಧಿಕಾರಿಗಳು, ಗಣನೀಯರು ಎಂಬ ದೃಷ್ಟಿಯಿಂದ ಅಧಿಕಾರ ಪಟ್ಟವನ್ನು ಕಟ್ಟುವದೋ ಯಾ ಕನ್ನಡದ ಮಮತೆ, ಕನ್ನಡದ ಜ್ಞಾನ ಹಾಗೂ ಕನ್ನಡದ ಹಿತಚಿಂತಕರನ್ನು ಆರಿಸುವದೋ? ಎಂಬುದೇ ನನ್ನ ಮುಂದೆ ಬಂದ ಸಮಸ್ಯೆ. ಇದು ಇನ್ನೂ ಬಗೆಹರಿದಿಲ್ಲ. ಯಾರಾದರೂ ಇದಕ್ಕೆ ಉತ್ತರ ಹುಡುಕುವವರಲ್ಲಿ ಸಹಾಯಮಾಡಿದರೆ ಋಣಿಯಾಗುತ್ತಿದ್ದೆ. ಅಯ್ಯೋ, ಮರೆತೆ! ಏನೋ ವಿಚಾರವೆಲ್ಲ ಹೊಡೆದು ಎಲ್ಲಿಯೋ ತಲಪಿದೆ. ಇದಲ್ಲ ಅಂತಪೀಠಗಳಿದ್ದಂತೆ. ನಮ್ಮ ಉತ್ಸವದ ಕಾರ್ಯಕಲಾಪಕ್ಕೆ ಹಿಂದಿರುಗುವಾ. ಶ್ರೀ ರಾಘವಾಚಾರ್ಯರ ಭಾಷಣವಾದ ನಂತರ ಪ್ರಾಂತೀಕ ಕರ್ನಾಟಕ ಸಂಘದ ಪರ ಅದರ ಸಕ್ರೆಟರಿಗಳೂ, ಕನ್ನಡ ಸಾಹಿತ್ಯ ಸಂಘದ ಪರ ಶ್ರೀ ಸೀತಾರಾಮಯ್ಯನವರೂ ಸ್ಥಳೀಯ ಕರ್ನಾಟಕ ಸಂಘದ ಪರ ಶ್ರೀ ಎನ್. ಮುದ್ದಪ್ಪನವರೂ ಮುಕ್ತಾಯ ಭಾಷಣಗಳನ್ನು ಮಾಡಿದರು. ಉತ್ಸವವು ತಾರೀಕು 24 ನೇ ಭಾನುವಾರ ಮಧ್ಯಾಹ್ನಕ್ಕೆ ಕೊನೆಗೊಂಡಿತು. ಕೊಡಗಿನಲ್ಲಿ ಈ ಉತ್ಸವವು ಜಯಪ್ರದವಾಗಿ ನೆರವೇರಿದ್ದಕ್ಕೆ ಕೊಡಗಿನವರಾದ ನಮಗೆಲ್ಲರಿಗೂ ಒಂದು ಹೆಮ್ಮೆ.

ಬಾತ್ಮಿ.

ಬಾತ್ಮಿದಾರರ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. (ಸಂ.)

ಜಡ್ಜಿಗಳೂ ಪಾರ್ಟಿಪಂಗಡಗಳೂ.

ಅಯ್ಯಾ,

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಮಹಾಸಭೆ ನಡೆದು ಸುಮಾರು ಒಂದು ತಿಂಗಳ ಮೇಲೆ ಆಯಿತು. ಅಲ್ಲಿ ವಿಶೇಷ ನಡವಳಿಕೆಯನ್ನು ಕುರಿತು ಬಾತ್ಮಿದಾರರಾಗಲೀ, ಸಂಪಾದಕರಾಗಲಿ ಟೀಕಿಸಿ ಬರೆಯುವರೆಂದು ಇಷ್ಟರ ವರೆಗೆ ಕಾದು ನೋಡಿದೆನು. ಇಷ್ಟರ ವರೆಗೆ ಏನೊಂದೂ ಹೊರಬೀಳದ್ದನ್ನು ನೋಡಿ ವ್ಯಸನದಿಂದ ಬಾತ್ಮಿ ಬರೆಯುವ ಅಭ್ಯಾಸವಿಲ್ಲದ ನಾನಾದರೂ ನಾಲ್ಕಾರು ಮಾತುಗಳನ್ನು ಅಧಿಕಾರಿಗಳ ಗಮನಕ್ಕೆ ತರಲು ಈ ಬಾತ್ಮಿಯನ್ನು ಬರೆದದ್ದಾಗಿದೆ.

ಬ್ಯಾಂಕಿನ ಕಳೆದ ಮಹಾಸಭೆಯಲ್ಲಿ ಠರಾವುಗಳಲ್ಲಿ ಪ್ರಥಮತಃ ಚರ್ಚೆಯನ್ನು ಸೌತ್ ಇಂಡಿಯಾ ಕೋಆಪರೇಟಿವ್ ಇನ್ಸೂರನ್ಸ್ ಸಂಘದ ಸಂಬಂಧಪಟ್ಟದಾಗಿದೆ. ಆಗ್ಯ ಈ ಇನ್ಸೂರೆನ್ಸ್ ಸಂಘದ ಹೆಡ್ ಆಫೀಸಿನವರು ನಮ್ಮ ಸೆಂಟ್ರಲ್ ಬ್ಯಾಂಕಿನ ಮೇಲೆ ಡಿಪಾಜಿಟ್ಟು ಹಣಕ್ಕಾಗಿ ಮದ್ರಾಸು ರಿಜಿಸ್ಟ್ರಾರವರ ಕೋರ್ಟಿನಲ್ಲಿ ಬ್ಯಾಂಕಿನವರು ದಾವ ಹೂಡಿರುವದನ್ನೂ ಅದರಿಂದಾಗಿ ಇಲ್ಲಿಯ ಲೋಕಲ್ ಬೋರ್ಡಿನ ಮಾಜಿ ಕಮಿಶನರುಗಳಾದ ಮಾ. ಐ. ಸಿ ಸುಬ್ಬಯ್ಯ ಮತ್ತು ಮನೆಯಪಂಡ ಬೆಳ್ಯಪ್ಪನವರುಗಳ ಮೇಲೆ ಇಲ್ಲಿಯ ಅ. ರಿಜಿಸ್ಟ್ರಾರವರ ಕೋರ್ಟಿನಲ್ಲಿ ಬ್ಯಾಂಕಿನವರು ದಾವ ಹೂಡಿರುವದನ್ನೂ ಬ್ಯಾಂಕಿನ ಸೆಕ್ರೆಟರಿಯವರು ಮಹಾಸಭೆಗೆ ತಿಳಿಸಿ ಈ ವಿಚಾರ ಕೋರ್ಟಿನಲ್ಲಿರುವದರಿಂದ ಚರ್ಚಿಸುವದು ಯುಕ್ತವಲ್ಲವೆಂದು ಹೇಳಿದರು. ಅದರೂ ಕೂಡ ಮಡಿಕೇರಿಯ ಮನ್ಸೀಫರಾದ ಮಾ. ಐ. ಸಿ. ಸುಬ್ಬಯ್ಯನವರೂ, ಅವರಿಗ ಒತ್ತಾಸೆಯಾಗಿ ಲಾಯರು ಎನ್. ಸೋಮಣ್ಣನವರೂ ಮದ್ರಾಸಿನ ಇನ್ಸೂರೆನ್ಸ್ ಸೊಸೈಟಿಯ ಪರವಾಗಿ ದೀರ್ಘ ಭಾಷಣ ಮಾಡಿದ್ದನ್ನೂ, ಅವರಿಗೆ ಸೌಂಜ್ಞೆಗಳ ಮೂಲಕ ಕುತೂಹಲದಿಂದಲೂ, ಉತ್ಸಾಹದಿಂದಲೂ ಮಡಿಕೇರಿಯ ಸಬ್‌ಜಡ್ಜಿಯವರಾದ ಶ್ರೀ ಎನ್. ಮುದ್ದಪ್ಪನವರು ಒತ್ತಾಸೆಯನ್ನೀಯುತ್ತಿದ್ದದನ್ನೂ ನೋಡಿ ನನಗಾಶ್ಚರ್ಯ ಉಂಟಾಯಿತು. ಇವರಿಬ್ಬರು ಜಡ್ಜರುಗಳು ನೆರೆದಿದ್ದ ಸಭಿಕರನ್ನೆಲ್ಲಾ ತೀಕ್ಷ್ಣ ದೃಷ್ಟಿಯಿಂದ ನೋಡುತ್ತಾ ಅವರನ್ನು ತಮ್ಮ ಕಡೆ ಓಟು ಕೊಡುವಂತೆ ಪ್ರೇರೇಪಿಸುತ್ತಿದ್ದರೋ ಎಂದು ಆಗ ಅವರ ಮುಖವನ್ನು ನೋಡುತ್ತಿದ್ದವರಿಗೆ ತೋರುತ್ತಿತ್ತು. ಅವರ ಉದ್ದೇಶ್ಯವು ಏನೇ ಇರಲಿ ಅವರ ವರ್ತನೆಯಿಂದ ಕೆಲವರು ಅವರಿಗೆ ಹೆದರಬೇಕಾಯಿತೆಂದರೆ ತಪ್ಪಾಗಲಾರದು. ದೊಡ್ಡ ಅಧಿಕಾರಿಗಳು ಅದರಲ್ಲೂ ಜ್ಯುಡಿಶ್ಯಲ್ ಅಧಿಕಾರಿಗಳು ಸಾರ್ವಜನಿಕ ಕೂಟಗಳಲ್ಲಿ ಪಕ್ಷವನ್ನು ವಹಿಸಿ ಹೀಗೆ ವರ್ತಿಸುವದು ಸರಿಯಲ್ಲವೆಂದು ನನಗನಿಸುತ್ತದೆ. ಈ ಮೊದಲು ಹೀಗೆ ಜ್ಯುಡಿಶ್ಯಲ್ ಅಧಿಕಾರಿಗಳು ಮೇಲ್ಕಂಡಂತೆ ವರ್ತಿಸಿದ್ದು ನನಗೆ ತಿಳಿಯ ಬಂದಿರುವುದಿಲ್ಲ. ಈ ರೀತಿ ಇವರುಗಳು ಭಾಗವನ್ನು ವಹಿಸಿದರೆ ಇವರ ಕೋರ್ಟುಗಳಿಗೆ ಹೋಗಬೇಕಾಗುವ ಜನರಿಗೆ ಭಯವುಂಟಾಗಿ ತಮ್ಮ ಅಭಿಪ್ರಾಯವನ್ನು ಸರಿಯಾಗಿ ಸೂಚಿಸಲು ಸಾಧ್ಯವಾಗಲಾರದು. ಸೂಚಿಸಿದವರಿಗೆ ಮುಂದೆ ಕಷ್ಟ ನಷ್ಟ ಉಂಟಾಗುವ ಭೀತಿಯುಂಟಾಗದಿರದು. ಮೇಲಧಿಕಾರಿಗಳು ಇದಕ್ಕೆ ತಕ್ಕಷ್ಟು ಗಮನಕೊಟ್ಟು ಇನ್ನು ಮುಂದೆ ಇಂಥಾ ದೊಡ್ಡ ಉದ್ಯೋಗಸ್ಥರು ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿ ಜನರಲ್ಲಿ ಭಯ ಉಂಟಾಗುವುದಕ್ಕೆ ಅವಕಾಶ ಕೊಡಲಿಕ್ಕಿಲ್ಲವಾಗಿ ಸ್ಥಳೀಕ ಸರಕಾರದಲ್ಲಿ ನನ್ನ ವಿನಂತಿ. ಬ್ಯಾಂಕಿನ ಡೈರೆಕ್ಟರುಗಳೂ ಈ ವಿಚಾರವನ್ನು ಕಮಿಷನರ ಮತ್ತು ಚೀಫ್ ಕಮಿಶನರ ತಿಳುವಳಿಕೆಗೆ ತಂದು ಮುಂದೆ ಇಂಥಾದ್ದಕ್ಕೆ ಎಡೆ ಇಲ್ಲದಂತೆ ಮಾಡಬೇಕಾಗಿ ನನ್ನ ಕೋರಿಕೆಯಾಗಿದೆ.

'ಬ್ಯಾಂಕಿನ ಮೆಂಬರು.'

ವೀರರಾಜಪೇಟೆ ತಾಲೂ.

ಕಳೆದ ಕೌನ್ಸಿಲು ಅಧಿವೇಶನದಲ್ಲಿ 5 ನೇ ಸ್ಟ್ಯಾಂಡರ್ಡ್ ಮತ್ತು 3,6ನೇ ಫಾರಂಗಳಿಗೆ ಸಲೆಕ್ಷನ್ ಪರೀಕ್ಷೆ ಇದೆಯೋ ಎಂದು ಪ್ರಶ್ನೆ ಕೇಳಿದಕ್ಕೆ 6ನೇ ಫಾರಂ ವಿನಃ ಉಳಿದುದಕ್ಕೆ ಇಲ್ಲವೆಂದು ಉತ್ತರ ದೊರೆತದ್ದು ಎಲ್ಲರ ತಿಳುವಳಿಕೆಗೆ ಬರಬೇಕಾಗಿ ನೆನಪಿಸುತ್ತೇನೆ. ಆದರೆ ಈ ವರ್ಷ ಇಲ್ಲಿ 5 ನೇ ಸ್ಟ್ಯಾಂಡರ್ಡಿಗೆ ಸೆಲೆಕ್ಷನ್ ಪರೀಕ್ಷೆ ಇದೆ ಎಂಬ ಸುದ್ದಿ ಹಬ್ಬಿದೆ. ಈಗಾಗಲೇ ಫೈನಲ್ ಪರೀಕ್ಷೆ ಸಮೀಪವಾಗುತ್ತ ಬಂತು. ಈ ಮಧ್ಯೆ ನಡವಳಿಕೆಗೆ ವ್ಯತಿರಿಕ್ತವಾಗಿ ಸಲೆಕ್ಷನ್ ಪರೀಕ್ಷೆ ಮಾಡಗುದವರಲ್ಲಿ ಅರ್ಥವಿಲ್ಲ. ಖಂಡಿತವಾಗಿಯೂ ಮಕ್ಕಳಿಗೆ ಅನಾವಶ್ಯ ತೊಂದರೆಕೊಟ್ಟಂತೆ ಆಗುತ್ತೆ. ಯಾವದಕ್ಕೂ ಸೆಲೆಕ್ಷನ್ ಪರೀಕ್ಷೆ ಇರಕೂಡದೆಂದು ಜನರು ಬಾಯಿಬಡಿಯುವಲ್ಲಿ ಈ ಕೆಳಗಿನ ದರಗತಿಗಳಿಗೆ ಮಾಡಗುವದೆಂದರೆ ಏನು?

ಸಮ್ಮಂಧಪಟ್ಟ ಅಧಿಕಾರಿಗಳು ವಡ್ನಿ ಈ ಸಂಗತಿ ವಿಚಾರಿಸಿ ಅದನ್ನು ನಿಲ್ಲಿಸಿ ಎಲ್ಲಾ ಮಕ್ಕಳನ್ನು ಫೈನಲ್ ಪರೀಕ್ಷೆಗೆ ಕಳುಹಿಸುವಂತೆ ಏರ್ಪಾಡು ಮಾಡಬೇಕಾಗಿ ಕೋರುವ.

'ಮಕ್ಕಳ ತಂದೆ.'

ಕೊಡಗು ವಿದ್ಯಾಭಿವೃದ್ಧಿ ಫಂಡು.

ತಾರೀಕು 6-3-40ರ 'ಜನ್ಮಭೂಮಿ' ಪತ್ರಿಕೆಯಲ್ಲಿ ಕೊಡಗು ವಿದ್ಯಾಭಿವೃದ್ಧಿ ಫಂಡಿನ ಪ್ರೆಸಿಡೆಂಟರು ಮತ್ತು ಕಮಿಟಿ ಮೆಂಬರುಗಳ ಅವಗಾಹನೆ ಬಗ್ಗೆ ಮನನೊಂದ ಚಂದಾದಾರರೊಬ್ಬರಿಂದ ಒಂದು ಬಾತ್ಮಿಯು ಬರೆಯಲ್ಪಟ್ಟಿತ್ತಷ್ಟೆ. ಅದರ ನಂತರ ಸಂಘದಿಂದ ಸಾಲ ಪಡಕೊಂಡವರನೇಕರು ತಮ್ಮ ಸಾಲ ಮರುಪಾವತಿ ಮಾಡುತ್ತಿರುವರು. ಶ್ರೀಮತಿ ನಡಿಕೇರಿಯಂಡ ಸುಬ್ಬಯ್ಯ ಪೂನ್ನಮ್ಮನವರು ತಮ್ಮ ಹೆಸರಿನಲ್ಲಿದ್ದ ರೂ 264 ನ್ನು ಒಂದೇ ಗಂಟಿನಿಂದ ಪಾವತಿ ಮಾಡಿರುತ್ತಾರೆ. ಸಂಘದಿಂದ ಸಾಲ ಪಡಕೊಂಡ ಪ್ರತಿಯೊಬ್ಬನೂ ಈ ಮಾದರಿಯನ್ನನುಸರಿಸಿ ಬಾಕಿಯನ್ನು ಪಾವತಿಮಾಡಿ ಸಂಘವನ್ನು ಸುಗಮವಾದ ಹಾದಿಯಲ್ಲಿ ಮುನ್ನಡೆಸಲು ಸಹಕಾರಿಗಳಾಗಬೇಕಾಗಿ ಆಶಿಸಲಾಗಿದೆ.

'ಕಮಿಟಿ ಮೆಂಬರು.'

ಭಾರತವು ಅವಿಭಾಜ್ಯ ಅಖಂಡ ರಾಷ್ಟ್ರ.

ಬ್ರಿಟಿಷರ ಭೇದ ನೀತಿಯೇ ಜಾತೀಯ ಕಲಹಗಳ ಮೂಲ.

ರಾಷ್ಟ್ರಪತಿ ಅಜ್ಝಾದರ ಅಧ್ಯಕ್ಷ ಭಾಷಣ.

ಗೆಳೆಯರೇ,

1923ರಲ್ಲಿ ನೀವು ಈ ರಾಷ್ಟ್ರೀಯ ಮಹಾಸಭೆಗೆ ನನ್ನನ್ನು ಅಧ್ಯಕ್ಷ್ಯನನ್ನಾಗಿ ಆರಿಸಿದ್ದೀರಿ. ಹದಿನೇಳು ವರ್ಷಗಳ ತರುವಾಯ ಈಗ ಮತ್ತೆ ಅದೇ ಗೌರವವನ್ನು ಕೊಟ್ಟಿರುವಿರಿ. ರಾಷ್ಟ್ರೀಯ ಹೋರಾಟಗಳ ಚರಿತ್ರೆಯಲ್ಲಿ ಹದಿನೇಳು ವರ್ಷಗಳೇನೂ ಬಹಳ ದೀರ್ಘ ಕಾಲವಲ್ಲ. ಆದರೆ ಈಗ ಕ್ಷಣಕ್ಕೊಂದು ಮಹತ್ವದ ಘಟನೆಗಳಾಗುತ್ತಿವೆ. ಜಗತ್ತು ಭರದಿಂದ ಬದಲಾಗುತ್ತಿದೆ. ಈಗ ನಾವು ಹಿಂದಿನಂತೆ ವಿಚಾರ ಮಾಡಿದರೆ ನಡೆಯದು.

ಈ ಹದಿನೇಳು ವರ್ಷಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ನಾನಾ ಬಗೆಯ ಪರಿಸ್ಥಿತಿಗೆ ನಾವು ಒಳಗಾದೆವು. ನಮ್ಮ ಪ್ರವಾಸವು ಬಹಳ ದೊಡ್ಡದಿತ್ತು. ಆದ್ದರಿಂದ ಅಲ್ಲಲ್ಲಿ ವಿಶ್ರಾಂತಿ ತೆಗೆದುಕೊಳ್ಳಬೇಕಾಯಿತು.

ನಮ್ಮ ಹಾದಿಯು ಸುಗಮವಾಗಿರಲಿಲ್ಲ. ಅದರ ತುಂಬ ಅಡ್ಡಿ ಆತಂಕಗಳಿದ್ದವು. ತೊಂದರೆಗಳಿದ್ದವು. ಹೆಜ್ಜೆ ಹೆಜ್ಜೆಗೂ ಹೊಸ ಹೊಸ ಕಷ್ಟಗಳು ಬರುತ್ತಿದ್ದವು. ನಾವು ಅಪೇಕ್ಷಿಸಿದಷ್ಟು ಜೋರಾಗಿ ಮುಂದಡಿ ಇಡಲು ನಮಗೆ ಸಾಧ್ಯವಾಗದಿರಬಹುದು. ಆದರೆ ಮುಂದಡಿ ಇಡುವುದನ್ನ ನಾವು ಎಂದಿಗೂ ನಿಲ್ಲಿಸಿಲ್ಲ.

1923-1940ರ ಕಾಲವನ್ನು ಸ್ವಲ್ಪ ನಿಮ್ಮ ಮನಸಿನಲ್ಲಿ ತಂದುಕೊಳ್ಳಿರಿ. 1923ನೇ ವರ್ಷವು ಅತಿ ದೂರದಲ್ಲಿ, ಇದ್ದರೂ ಇಲ್ಲದಂತೆ ಕಾಣಿಸುವದು. 1923ರಲ್ಲಿ ನಮ್ಮ ಗುರಿಯು ಬಹಳ ದೂರದಲ್ಲಿತ್ತು. ಹಾದಿಯೂ ಸರಿಯಾಗಿ ಕಾಣಿಸುತ್ತಿರಲಿಲ್ಲ. ಆದರೆ ಇಂದು ಮಾತ್ರ ಹಾಗಿಲ್ಲ. ಸ್ವಲ್ಪ ಕಣ್ತೆರದು ನೋಡಿರಿ. ಹಾದಿಯು ನಿಚ್ಚಳವಾಗಿ ಕಾಣಿಸುತ್ತಿದೆ. ಇಷ್ಟೇ ಅಲ್ಲ. ಗುರಿಯೂ ಬಹಳ ಸಮೀಪಿಸಿದೆ. ಗುರಿಯು ಸಮೀಪಿಸಿದಂತೇ ಹೋರಾಟವೂ ಜೋರಾಗ ಹತ್ತಿದೆ. ಇದು ಸ್ವಾಭಾವಿಕವು. ಹಿಂದಿನ ಹೋರಾಟದ ಫಲವಾಗಿ ನಾವು ಇಂದು ನಮ್ಮ ಗುರಿಯ ಹತ್ತಿರಕ್ಕೆ ಬಂದಿದ್ದೇವೆ. ಆದರೆ ಹತ್ತಿರಕ್ಕೆ ಬಂದಂತೆ ಕಷ್ಟಗಳೂ ಹೆಚ್ಚಾಗಿವೆ. ಅಡ್ಡಿ ಆತಂಕಗಳು ಅನಂತವಾಗಿವೆ. ಇಂದು ನಾವು ಭಾರಿ ಗಂಡಾಂತರ ಪರಿಸ್ಥಿತಿಯಲ್ಲಿದ್ದೇವೆ. ನಮ್ಮ ಮುಂದಿನ ಹೆಜ್ಜೆಯಿಂದ, ಇಡೀ ರಾಷ್ಟ್ರದ ಭವಿತವ್ಯವೇ ಬದಲಾಗುವುದು. 'ಅಡಿಯ ಮುಂದಡೆ ಸ್ವರ್ಗ, ಅಡಿಯ ಹಿಂದಡೆ ನರಕ' ಎಂಬಂಥಾ ಪರಿಸ್ಥಿತಿ ನಮಗೆ ಬಂದಿದೆ. ಸರಿಯಾದ ಹೆಜ್ಜೆಯನ್ನಿಟ್ಟರೆ ನಮ್ಮ ಗುರಿಯನ್ನು ಸುಲಭವಾಗಿ ಸೇರುವೆವು. ತಪ್ಪು ಹೆಜ್ಜೆಯಿಂದ ಕೋಟ್ಯಾಂತರ ಕಷ್ಟಗಳಿಗೆ ಒಳಗಾಗುವೆವು.

ಇಂದಿನ ಮುಖ್ಯ ಪ್ರಶ್ನೆ.

ಇನ್ನು ನಾವು ವಿಶೇಷ ಕಾಲಹರಣ ಮಾಡದೆ ಸದ್ಯಸ್ಥಿತಿಯನ್ನು ವಿಚಾರಿಸುವ.

ಕಳೆದ ವರ್ಷ ಸಪ್ಟೆಂಬರ್ 3ನೇ ತಾರೀಕಿನ ದಿನ ಯುದ್ಧ ಪ್ರಾರಂಭವಾದ ಮೇಲೆ ನಾವು ಒಂದು ವಿಶಿಷ್ಟ ಮಾರ್ಗವನ್ನು ಅನುಸರಿಸಿದೆವು. ಒಂದು ನಿರ್ದಿಷ್ಟ ಮಾರ್ಗವನ್ನು ಕೈಗೊಂಡೆವು. ಆ ಮಾರ್ಗವು ಮತ್ತು ಆ ಧೋರಣವು ನಮ್ಮನ್ನು ಎಲ್ಲಿಗೆ ಕೊಂಡೊಯ್ದುವು? ಈಗ ನಾವು ಎಲ್ಲಿದ್ದೇವೆ? ಇದೇ ನಮ್ಮ ಇಂದಿನ ಮುಖ್ಯ ಪ್ರಶ್ನೆ.

ಅಂತರ ರಾಷ್ಟ್ರೀಯ ಪರಿಸ್ಥಿತಿಯನ್ನು ಕುರಿತು ಕಾಂಗ್ರೆಸ್ಸಿನ ಧೋರಣವನ್ನು ತಿಳಿಸುವ ಒಂದು ಮಹತ್ವದ ಠರಾವು 1926ರಲ್ಲಿ ಲಖನೌದಲ್ಲಿ ಪಾಸಾಯಿತು. ಆ ಬಳಿಕ ಪ್ರತಿಯೊಂದು ಅಧಿವೇಶನದಲ್ಲಿಯೂ ಕಾಂಗ್ರೆಸ್ಸು ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ವಿಚಾರಿಸುತ್ತಿತ್ತಲ್ಲದೆ, ತನ್ನ ಧೋರಣವನ್ನೂ ಸ್ಪಷ್ಟ ಮಾಡುತ್ತಿತ್ತು.

ಬ್ರಿಟಿಷ್ ಸಾಮ್ರಾಜ್ಯ ಶಾಹಿ.

ಫ್ಯಾಸಿಝಂ ಮತ್ತು ನಾಝಿಝಂಗಳಿಂದ ಆಗುವ ಹಾನಿಯು ನಮಗೆ ಚೆನ್ನಾಗಿ ಗೊತ್ತಿದೆ. ಆದರೆ ನಮ್ಮ ಹಳೆಯ ವಿನಾಶಕಾರಿಯನ್ನು ನಾವು ಮರೆತಿಲ್ಲ. ಇಂದು ಕೇಳು ಬರುತ್ತಿರುವ ಫ್ಯಾಸಿಝಂ ಮೊದಲಾದ ಚಳವಳಿಗಿಂತಲೂ ಈ ಹಳೆಯ ಪ್ರತಿಗಾಮಿ ಶಕ್ತಿಯಿಂದಲೇ ಮಾನವ ಜನಾಂಗಕ್ಕೆ ಹೆಚ್ಚು ಹಾನಿಯಾಗುತ್ತದೆಂದು ನನ್ನ ಅಭಿಪ್ರಾಯ. ಆ ಶಕ್ತಿಯು ಬೇರೆ ಯಾವುದೂ ಅಲ್ಲ. ಬ್ರಿಟಿಷ್ ಸಾಮ್ರಾಜ್ಯ ಶಾಹಿ. ಫ್ಯಾಸಿಝಂ ಮೊದಲಾದ ಚಳವಳಿಗಳ ಪ್ರತ್ಯಕ್ಷ ಅನುಭವವು ನಮಗಿಲ್ಲ. ಆದರೆ ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ಹೇಗಿರುತ್ತದೆಂಬುದು ನಮಗೆಲ್ಲ ಪ್ರತ್ಯಕ್ಷ ಅನುಭವದಿಂದ ಗೊತ್ತಾಗಿದೆ. ಅದು ನಮ್ಮ ಮನೆಯನ್ನು ಮುತ್ತಿರುತ್ತದೆ. ನಮ್ಮ ಮೇಲೆ ಅಧಿಕಾರ ನಡೆಸುತ್ತದೆ. ಇದನ್ನು ಕಂಡೇ ನಾವು ಯುದ್ಧದ ಬಗ್ಗೆ ಇಷ್ಟೊಂದು ಸ್ಪಷ್ಟ ನುಡಿಗಳನ್ನಾಡಬೇಕಾಯಿತು. ಯುದ್ಧದಲ್ಲಿ ಹಿಂದುಸ್ಥಾನವು ಖಂಡಿತ ಭಾಗ ವಹಿಸುವುದಿಲ್ಲವೆಂದು ಹೇಳಬೇಕಾಯಿತು. ತನ್ನ ಮನಸಿಗೆ ತೋರಿದಂತೆ ನಿರ್ಣಯ ಮಾಡುವ ಅಧಿಕಾರ ಸಿಗುವ ವರೆಗೆ ಅದು ಖಂಡಿತ ಯುದ್ಧದಲ್ಲಿ ಭಾಗ ವಹಿಸಲಾರದು

ನಾಝೀ ವಾದದ ಏಳ್ಗೆಯನ್ನು ಹಿಂದುಸ್ಥಾನವು ಎಂದಿಗೂ ಸಹಿಸಲಾರದು. ಆದರೆ ಅದಕ್ಕಿಂತ ಹೆಚ್ಚಾಗಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ಅದು ಸಹಿಸಲಾರದು. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವಿಲ್ಲದಿದ್ದರೆ ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ಇನ್ನೂ ಉಚ್ಛ್ರಾಯ ಸ್ಥಿತಿಯಲ್ಲಿದೆಯೆಂದು ಕಂಡು ಬರುವದು. ಇಂಥಾ ಪರಿಸ್ಥಿತಿಯಲ್ಲಿ ಆ ಬ್ರಿಟಿಷ್ ಸಾಮ್ರಾಜ್ಯ ಶಾಹಿಗೆ ಹಿಂದುಸ್ಥಾನವು ಖಂಡಿತಾ ಸಹಾಯ ಮಾಡಲಾರದು. ಈ ಮತವನ್ನು ಕಾಂಗ್ರೆಸ್ಸು ಸ್ಪಷ್ಟವಾಗಿ ತಿಳಿಸಿರುವದು.

ಯುದ್ಧ ಸುರುವಾದಾಗ.

ಕೊನೆಗೊಮ್ಮೆ ಯುದ್ಧ ಸುರುವಾಗಾಯಿತು. ಆ ಕಾಲಕ್ಕೆ ನಮ್ಮ ದೇಶದ ಪರಿಸ್ಥಿತಿ ಹೇಗಿತ್ತೆಂಬುದನ್ನು ಸ್ವಲ್ಪ ವಿಚಾರ ಮಾಡಿರಿ. 1935ನೇ ಹಿಂದೀ ರಾಜ್ಯಘಟನೆಯನ್ನು ಒತ್ತಾಯದಿಂದ ಹೇರಲಾಯಿತೆಂಬುದು ನಿಮಗೆ ಗೊತ್ತಿದೆ. ಆದರೆ ಬ್ರಿಟಿಷ್ ಸರಕಾರದವರು ಮಾತ್ರ ಹಿಂದೂಸ್ಥಾನಕ್ಕೆ ದೊಡ್ಡ ವರದಾನ ಮಾಡಿದ್ದೇವೆಂದು ಪ್ರಚಾರ ಮಾಡಹತ್ತಿದರು. ಈ ರಾಜ್ಯ ಘಟನೆಯನ್ನು ನಡೆಬಡೆಯಬೇಕೆಂದು ಕಾಂಗ್ರೆಸು ನಿಶ್ಚಯಿಸಿತು. ಆದರೆ ಅಗಲೇ ಹೋರಾಟ ಮಾಡಲು ಅದು ಒಪ್ಪಲಿಲ್ಲ. ಕೊನೆಗೆ ಕಾಂಗ್ರೆಸ್ ಮಂತ್ರಿ ಮಂಡಲಗಳು ಅಸ್ತಿತ್ವದಲ್ಲಿ ಬಂದವು. 28 ತಿಂಗಳ ವರೆಗೆ ಕೆಲಸ ಮಾಡಿದವು. ಅವು ಮುಂದೆಯೂ ಇದೇ ರೀತಿ ಕೆಲಸ ಮಾಡುವದಕ್ಕೆ ಅವಕಾಶ ಕೊಡುವದು ಬ್ರಿಟನ್ನಿನ ಕೈಯಲ್ಲಿಯೇ ಇತ್ತು. ಆದರೆ ಈ ವಿಷಯದಲ್ಲಿ ಬ್ರಿಟಿಷ್ ಸರಕಾರವು ಹೇಗೆ ನಡೆದುಕೊಂಡಿತೆಂಬುದು ನಿಮಗೆ ಗೊತ್ತಿದೆ. 150 ವರ್ಷಗಳ ಹಿಂದೆ ವರ್ತಿಸಿದಂತೆಯೇ ಈಗಲೂ ಅದು ವರ್ತಿಸಿತು. ತನ್ನ ಮನಸಿಗೆ ಬಂದಂತೆ ನಡೆಯಿತು ಮತ್ತು ಹಿಂದುಸ್ಥಾನಕ್ಕೆ ಹೇಳದೆ, ಅದರ ಅಭಿಪ್ರಾಯವನ್ನು ಕೇಳದೆ ಹಿಂದೂಸ್ಥಾನವೂ ಯುದ್ಧದಲ್ಲಿ ಬಿದ್ದಿದೆಯೆಂದು ಸಾರಿತು. ಅಸೆಂಬ್ಲಿ ಮುಂತಾದಲ್ಲಿ ಸಹ ಈ ವಿಷಯದಲ್ಲಿ ತಮ್ಮ ಅಭಿಪ್ರಾಯ ತಿಳಿಸಲು ಅವಕಾಶ ದೊರೆಯಲಿಲ್ಲ.'

ಕಾಂಗ್ರೆಸ್ಸಿನ ಬೇಡಿಕೆ.

ಸಪ್ಟೆಂಬರ್ 3ನೇ ತಾರೀಕಿನ ದಿನ ಯುದ್ಧ ಪ್ರಾರಂಭವಾಯಿತು. ಕೂಡಲೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವರ್ಧಾದಲ್ಲಿ ಸಭೆಗೂಡಿ ಮುಂದೇನು ಮಾಡಬೇಕೆಂಬುದನ್ನು ವಿಚಾರಿಸಿತು. 1926ರಿಂದ ಕಾಂಗ್ರೆಸ್ಸು ಮಾಡಿದ ಘೋಷಣೆಗಳನ್ನೆಲ್ಲಾ ಅದು ಪರಿಶೀಲಿಸಿತು. ಬ್ರಿಟಿಷ್ ಸರಕಾರವು ಹಿಂದೆ ಮಾಡಿದ್ದನ್ನೆಲ್ಲ ಲಕ್ಷ್ಯಕ್ಕೆ ತಂದುಕೊಟ್ಟಿತು. ಕೊನೆಗೆ ಅದು ಸಾರಾಸಾರ ವಿಚಾರ ಮಾಡಿ ಇಂದು ಕೈಗೊಂಡಿರುವ ಮಾರ್ಗವನ್ನು ಕೈಗೊಂಡಿತು. ಹಿಂದೂಸ್ಥಾನವು ಯುದ್ಧದಲ್ಲಿ ಭಾಗ ವಹಿಸಬೇಕಾಗಿದ್ದರೆ ಈ ಯುದ್ಧದ ಉದ್ದೇಶವನ್ನು ತಿಳಿಸಬೇಕೆಂದು ಬ್ರಿಟಿಷ್ ಸರಕಾರವನ್ನು ಕೇಳಿತು. ಅದು ಹೀಗೆ ಕೇಳಿದ್ದು ಯೋಗ್ಯವೆಂದು ಇಡೀ ಜಗತ್ತೇ ಅನ್ನುತ್ತಿದೆ. ಏಕೆಂದರೆ, ಬ್ರಿಟಿಷ್ ಸರಕಾರದ ಯುದ್ಧ ನೀತಿಯ ಮೇಲೆಯೇ ಇಡೀ ಜಗತ್ತಿನ ಭವಿತವ್ಯವು ಅವಲಂಬಿಸಿದೆ. ಶಾಂತಿ ಸ್ವಾತಂತ್ರ್ಯಗಳ ಅಸ್ತಿತ್ವವಿದೆ. ಈ ಘೋರ ಯುದ್ಧದಲ್ಲಿ ನಾವು ಭಾಗ ವಹಿಸಬೇಕಾಗಿದ್ದರೆ, ಇದು ಏಕೆ ನಡೆಯು ನಡೆಯುತ್ತಿದೆ ಎಂಬುದನ್ನು ಕೇಳಬೇಡವೇ? ಈ ಯುದ್ಧದಿಂದ ಮುಂದೆ ಏನಾಗುತ್ತಿದೆಯೆಂಬುದನ್ನು ತಿಳಿದುಕೊಳ್ಳುವ ಅಧಿಕಾರವು ನಮಗಿಲ್ಲವೇ? ಈ ಅಧಿಕಾರವು ಖಂಡಿತ ನಮಗಿದೆಯೆಂದು ವರ್ಕಿಂಗ್ ಕಮಿಟಿಯು ಸಾರಿರುವದು.

ಈ ಯುದ್ಧವೇಕೆ?

ವರ್ಕಿಂಗ್ ಕಮಿಟಿಯು ಈ ಬೇಡಿಕೆಯನ್ನು ಸಪ್ಟೆಂಬರ್ 14ನೇ ತಾರೀಕಿನ ದಿನ ಒಂದು ಹೇಳಿಕೆಯ ರೂಪದಲ್ಲಿ ಪ್ರಸಿದ್ಧಿಸಿತು. ಈ ಹೇಳಿಕೆಯು ಹಿಂದೂಸ್ಥಾನದ ಅಧುನಿಕ ಇತಿಹಾಸದಲ್ಲಿ ಒಂದು ಮಹತ್ವದ ಸಂಗತಿಯಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇದು ಒಂದು ಚಿಕ್ಕ ಸರಳವಾದ ಹೇಳಿಕೆ. ಆದರೆ ಇದರಲ್ಲಿರುವ ಮಾತುಗಳನ್ನು ಯಾರೂ ಅಲ್ಲಗಳೆಯಲಾರರು. ಯಾಕೆಂದರೆ ಅವು ಅಕ್ಷರಶಃ ನಿಜವಾಗಿವೆ. ಶಸ್ತ್ರಬಲದಿಂದ ಮೈ ಮರೆತವರು ಮಾತ್ರ ಇದನ್ನು ಉಪೇಕ್ಷಿಸುವರು, ಉಳಿದವರು ಖಂಡಿತ ಇದನ್ನು ಮಾನ್ಯ ಮಾಡುವರು. ಈ ಮಹತ್ವದ ಬೇಡಿಕೆಯನ್ನು ಬೇಡಿದ್ದು ಹಿಂದೂಸ್ಥಾನದವರೂ, ಆ ಬೇಡಿಕೆ ಕೇವಲ ಹಿಂದೂಸ್ಥಾನದ ಸಲುವಾಗಿ ಇರಲಿಲ್ಲ. ಅನ್ಯಾಯ ಪರಂಪರೆಯಿಂದ ಬೆಂದ ಮಾನವ ಜನಾಂಗದ ಸಲುವಾಗಿ ಇತ್ತು. ಹಿಂದೆ ಅನೇಕ ಸಲ ನಿರಾಶೆಗೆ ಒಳಗಾಗಿ ನಿರ್ವಿಣ್ಣರಾದ ಮಾನವ ಕೋಟಿಯ ಸಲುವಾಗಿ ಇತ್ತು. ಇಪ್ಪತ್ತೈದು ವರ್ಷಗಳ ಹಿಂದೆ ಜಗತ್ತು ಒಂದು ಅತಿ ಭಯಾನಕ ಸಮರದಲ್ಲಿ ಧುಮುಕಿತು. ಆದರೆ ಅದು ಅಲ್ಲಿಗೇ ಕೊನೆಗಾಣಲಿಲ್ಲ. ಇನ್ನೂ ಹೆಚ್ಚು ಭಯಾನಕವಾದ ಅನರ್ಥಗಳಾಗುವದಕ್ಕೆ ಅದು ಹಾದಿ ಮಾಡಿ ಕೊಟ್ಟಿತು. ಚಿಕ್ಕ ದೇಶಗಳನ್ನು ಉಳಿಸಬೇಕು. ಸಾರ್ವತ್ರಿಕ ಭದ್ರತೆ ಇರಬೇಕು. ಸ್ವಯಂ ನಿರ್ಣಯ ಅಧಿಕಾರಬೇಕು. ಶಸ್ತ್ರ ಸನ್ಯಾಸವಾಗಬೇಕು. ಮುಂತಾದ ಕೂಗು ಕಿವಿ ಕೊರೆಯುವಂತೆ ಜಗತ್ತಿನಲ್ಲೆಲ್ಲಾ ತುಂಬಿದವು. ಆದರೆ ಕೊನೆಗೆ ಆದದ್ದೇನು? ಎಲ್ಲವೂ ವ್ಯರ್ಥ. ಎಲ್ಲೆಲ್ಲಿಯೂ ನಿರಾಶೆ, ಕನಸುಗಳೆಲ್ಲವೂ ಕಣ್ಮರೆಯಾದವು. ಆಶೆಗಳೆಲ್ಲ ನಿರಾಶೆಯಾದವು. 'ಈಗ ಮತ್ತೆ ಮಹಾ ಯುದ್ಧ ಸುರುವಾಗಿ

ಡಿ. ರಕ್ತದ ಕಾಲುವೆ ಹರಿಯುತ್ತಿದೆ; ದೇಶಗಳೆಲ್ಲ ಉರಿಯುತ್ತಿವೆ. ಜನರು ಒಬ್ಬೊಬ್ಬರೇ ಅದರಲ್ಲಿ ಧುಮುಕುತ್ತಿದ್ದಾರೆ. ಇಂಥಾ ಸಮಯದಲ್ಲಿ ಈ ಯುದ್ಧವೇಕೆ? ಈ ಅನ್ಯಾಯವೇಕೆ ಮತ್ತು ಅನರ್ಥವೇಕೆ ಎಂಬವನ್ನು ಸಹ ನಾವು ಕೇಳಬೇಡವೇ? ನಾವೇಕೆ ಈ ರಣ ಕುಂಡದಲ್ಲಿ ಬೀಳಬೇಕೆಂಬದನ್ನು ಸಹ ತಿಳುಕೊಳ್ಳಬೇಡವೇ?

ಬ್ರಿಟಿಷ್ ಸರ್ಕಾರದ ಉತ್ತರ.

ಕಾಂಗ್ರೆಸು ಮುಂದೆ ಮಾಡಿದ ಈ ಬೇಡಿಕೆಯ ಬಗ್ಗೆ ಬ್ರಿಟಿಷ್ ಸರ್ಕಾರದ ಪರವಾಗಿ ಇಂಗ್ಲೆಂಡಿನಲ್ಲಿ ಮತ್ತು ಹಿಂದುಸ್ತಾನದಲ್ಲಿ ಹಲವು ಪ್ರಕಟಣೆಗಳು ಹೊರಡಿಸಲ್ಪಟ್ಟವು. ಅಕ್ಟೋಬರ್ 17ನೇ ತಾರೀಕಿಗೆ ವೈಸರಾಯರು ಡಿಲ್ಲಿಯಿಂದ ಮೊದಲನೇ ಪ್ರಕಟಣೆಯನ್ನು ಹೊರಡಿಸಿದರು. ಈ ಪ್ರಕಟಣೆಯು ಬಹಳ ದೊಡ್ಡದಿದೆ. ಹಿಂದುಸ್ಥಾನ ಸರ್ಕಾರದ ಅಧಿಕೃತ ಸಾಹಿತ್ಯದ ಲಕ್ಷಣಗಳನ್ನು ಮತ್ತು ವಿಚಿತ್ರ ಬೇಸರ ಬರುವಂಥಾ ಬರಹ ಪದ್ಧತಿಯ ಮಾದರಿಯನ್ನೊಳಗೊಂಡಿದೆ. ಈ ಪ್ರಕಟಣೆಯ ಪುಟಗಳನ್ನು ತಿರುವುತ್ತ ನಡೆದ ನಂತರ ಕೊನೆಯಲ್ಲಿ ಪರದೆಯು ಸ್ವಲ್ಪ ಮಟ್ಟಿಗೆ ತೆರೆಯಲ್ಪಡುವದು. ನಮಗೆ ಮಿಣುಕು ಮಿಣುಕಾಗಿ ಅದರ ಅರ್ಥವು ಹೊಳೆಯ ಹತ್ತುವದು. ಯುದ್ಧೋದ್ದೇಶವನ್ನು ನಮಗೆ ತಿಳಿಯಕೊಳ್ಳಬೇಕಾದರೆ ಬ್ರಿಟನದ ಮುಖ್ಯ ಮಂತ್ರಿಗಳು ಮಾಡಿದ ಭಾಷಣವನ್ನು ಓದಬೇಕೆಂದು ಹೇಳಲಾಗಿದೆ. ಆದರೆ ಆ ಭಾಷಣದಲ್ಲಿ ಯುರೋಪಿನ ಶಾಂತತೆ ಮತ್ತು ಅಂತರರಾಷ್ಟ್ರೀಯ ಸಂಬಂಧಗಳನ್ನು ಸರಿಪಡಿಸುವ ಬಗ್ಗೆ ಮಾತ್ರ ವಿವರಿಸಲಾಗಿದೆ. ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಶಬ್ದಗಳು ಕೂಡ ವೈಸರಾಯರ ಪ್ರಕಟಣೆಯಲ್ಲಿರುವದಿಲ್ಲ. 1919ನೇ ಇಸವಿಯ ಹಿಂದುಸ್ಥಾನ ಸರಕಾರದ ಕಾಯಿದೆಯ ಪ್ರಸ್ತಾವನೆಯಲ್ಲಿ ಹೇಳಿದ ಧೋರಣೆಯನ್ನೇ ಇದರಲ್ಲಿ ಪುನಹ ಹೇಳಲಾಗಿದೆ. ಹಿಂದುಸ್ಥಾನ ಸರ್ಕಾರದ 1935ನೇ ಕಾಯಿದೆಯಲ್ಲಿಯೂ ಇದೇ ಧೋರಣವು ಉಲ್ಲೇಖಿತವಾಗಿದೆ. ಇಂದಿಗೂ ಅದೇ ಧೋರಣವಿದೆ. ಅದರಲ್ಲಿ ಯಾವುದೇ ಬಗೆಯ ಸುಧಾರಣೆಯಾಗಿಲ್ಲ. ಏನೂ ಹೆಚ್ಚಾಗಿ ಸೇರಿಸಲ್ಪಟ್ಟಿಲ್ಲ.

ಅಸಹಕಾರದ ಪ್ರಥಮ ಹೆಜ್ಜೆ.

ಅನಂತರ ಅಧ್ಯಕ್ಷರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಪಾಸು ಮಾಡಿದ ಗೊತ್ತುವಳಿ ಕಾಂಗ್ರೆಸ್ ಮಂತ್ರಿ ಮಂಡಳಗಳು ರಾಜಿನಾಮೆ ಕೊಟ್ಟದ್ದು ಆ ಮೇಲೆ ವೈಸರಾಯರು ಹೊರಡಿಸಿದ ಪ್ರಕಟಣೆ ಭಾರತ ಮಂತ್ರಿಗಳು ಮಾಡಿದ ಭಾಷಣ ಮುಂತಾದವುಗಳನ್ನೆಲ್ಲಾ ವಿವರಿಸಿರುವರು. ಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯ ಸಂರಕ್ಷಣೆಯೇ ಯುದ್ಧೋದ್ದೇಶವೆಂದು ಸಾರಲ್ಪಡುತ್ತಿದ್ದರೂ ಅದು ಯುರೋಪಿನ ಮಟ್ಟಿಗೆ ಮಾತ್ರ ಅನ್ವಯಿಸುವದು ಏಶಿಯಾ ಆಫ್ರಿಕಾವಲ್ಲಿಯ ಜನರು ಆ ಬಗೆಯ ಆಶೆ ತಾಳಬಾರದೆಂಬುವುದು ಮಿತ್ರರಾಷ್ಟ್ರಗಳ ಧೋರಣ. ಬರ್ಮಿಂಗ್ ಹ್ಯಾಮದಲ್ಲಿ ಚೇಂಬರ್ಲೇನರು ಫೆಬ್ರವರಿ 24ಕ್ಕೆ ಮಾಡಿದ ಭಾಷಣದಿಂದಲೂ ಇದು ಸ್ಪಷ್ಟವಾಗುವದು. ಯುರೋಪಿನಲ್ಲಿಯ ರಾಷ್ಟ್ರಗಳು ಬಾಯಿಂದ ಎಷ್ಟೇ ದೊಡ್ಡ ದೊಡ್ಡ ಮಾತುಗಳನ್ನು ಹಿಂದೆ ಹೇಳುತ್ತಾ ಬಂದದ್ದರೂ ಈ ಇಪ್ಪತ್ತನೇ ಶತಮಾನದಲ್ಲಿ ಅವೆಲ್ಲ ಬಹಳ ಬದಲಾವಣೆ ಹೊಂದಿವೆ. ಈ ಮಾತಿನ ಸತ್ಯತೆಯು ನಮಗಾದರೂ ಹೊಳೆದಿದೆ. 1917 ಮತ್ತು 1919ರಲ್ಲಿ ಬ್ರಿಟಿಷರ ಧೋರಣೆ ಬಗ್ಗೆ ನಮಗೆ ಒಳ್ಳೇ ಅನುಭವವಿದ್ದುದರಿಂದ 1939ರಲ್ಲಿ ಅದರಲ್ಲಿ ಏನಾದರೂ ಹೆಚ್ಚುಕಡಿಮೆಯಾಗಿದೆಯೋ ಹೇಗೆಂಬದನ್ನು ನಮಗೆ ತಿಳಿದುಕೊಳ್ಳಬೇಕಿತ್ತು. ಆದರೆ ಬ್ರಿಟಿಷರು ಬಹು ಆತುರರಿರುವದಾಗಿ ಹೇಳಲಾಯಿತು. ಇದನ್ನು ಬ್ರಿಟಿಷರು ಈ ಮೊದಲು ಎಂದೋ ಹೇಳಿದ್ದರು.

ಮುಖ್ಯ ಮಾತು.

ಆದರೆ ಹಿಂದೂಸ್ಥಾನದ ಭವಿತವ್ಯವನ್ನು ನಿರ್ಣಯಿಸುವ ಹಕ್ಕು ಹಿಂದೀಯರಿಗಿದೆಯೋ ಇಲ್ಲವೋ ಎಂಬುವುದೇ ಮುಖ್ಯ ಪ್ರಶ್ನೆ. ಈ ಪ್ರಶ್ನೆಯನ್ನು ಬಿಟ್ಟುಕೊಟ್ಟರೆ ಹಿಂದೂಸ್ಥಾನದ ರಾಷ್ಟ್ರೀಯತ್ವದ ಕಟ್ಟಡವೇ ಕಳಚಿ ಬೀಳುವದು. ಯುದ್ಧದ ಬಗ್ಗೆ ನಮ್ಮ ಧೋರಣವು ಸ್ಪಷ್ಟವಿದೆ. ಯುದ್ಧದಲ್ಲಿ ಭಾಗವಹಿಸಿ ಬ್ರಿಟಿಷ್ ಸಾಮ್ರಾಜ್ಯತ್ವವನ್ನು ವಿಜಯಿಯನ್ನಾಗಿ ಮಾಡಲು ನಾವು ಸಿದ್ಧರಿಲ್ಲ. ಬ್ರಿಟಿಷ್ ಸಾಮ್ರಾಜ್ಯತ್ವವನ್ನು ಹೆಚ್ಚು ಬಲಗೊಳಿಸಿ ನಮ್ಮ ದಾಸ್ಯವನ್ನು ಮತ್ತಷ್ಟು ಬಿಗಿ ಮಾಡಿಕೊಳ್ಳಲು ನಾವು ಸಿದ್ಧರಿಲ್ಲ. ನಾವು ಇದಕ್ಕೆ ವಿರುದ್ಧ ಮಾರ್ಗವನ್ನು ಸ್ವೀಕರಿಸಿರುವೆವು.

ಈ ರೀತಿಯಾಗಿ ನಾವು ಒಂದು ಬಗೆಯ ಮಾರ್ಗವನ್ನು ಸ್ವೀಕರಿಸಿರುವೆವು. 1937ರಲ್ಲಿ ಸ್ವೀಕರಿಸಿದ ಸಹಕಾರ ಧೋರಣವನ್ನು ಯುದ್ಧದ ನಂತರ ಬಿಟ್ಟುಗೊಟ್ಟಿರುವೆವು. ಅಸಹಕಾರ ಮಾರ್ಗದಲ್ಲಿ ನಾವು ಮುಂದೆ ಹೆಜ್ಜೆಯನ್ನಿಕ್ಕಿರುವೆವು. ಈ ರೀತಿ ನಾವು ಮುಂದೆ ಹಾಕಿದ ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೋ ಇಲ್ಲವೇ ಹಾಗೆಯೇ ಮುಂದೆ ಸಾಗಬೇಕೋ ಎಂಬುವುದೇ ನಮ್ಮ ಮುಂದಿನ ಸದ್ಯದ ಪ್ರಶ್ನೆ. ಇಲ್ಲಿಯೇ ತಡೆಯಿರೆಂದು ಹೇಳಿದರೆ ಹಿಂದಕ್ಕೆ ಹೋದಂತಾಗುವುದು. ಹಾಗೆ ಮಾಡಲು ನಾವು ಸಿದ್ಧರಿಲ್ಲ. ಆದುದರಿಂದ ನಾವು ಮುಂದೆಯೇ ಹೋಗತಕ್ಕವರು ಮುಂದೆ ಹೆಜ್ಜೆಯನ್ನಿಡಬೇಕೆಂಬ ನನ್ನ ಮಾತಿಗೆ ತಾವು ಬೆಂಬಲ ಕೊಡುವಿರಾಗಿ ನನಗೆ ನಿಸಂದೇಹವಾಗಿ ತೋರುತ್ತದೆ.

ಅಲ್ಪ ಸಂಖ್ಯಾಕರು ಮತ್ತು ಭಾರತದ ಭವಿತವ್ಯ.

ಈ ವರೆಗೆ ನಾನು ವಿವರಿಸಿದ್ದು ಒಳ್ಳೇ ಮಹತ್ವದ ಪ್ರಶ್ನೆ. ಇದನ್ನು ಬಿಟ್ಟರೆ ಉಳಿದೆಲ್ಲವು ಗೌಣ ಪ್ರಶ್ನೆ. ಇದಕ್ಕೆ ಸಹಾಯಕವಾದವು. ಈ ಮುಖ್ಯ ಪ್ರಶ್ನೆಯ ಸಲುವಾಗಿಯೇ ಕಾಂಗ್ರೆಸ್ಸು ಬ್ರಿಟಿಷ್ ಸರಕಾರಕ್ಕೆ ಸಪ್ಟೆಂಬರ್ ತಿಂಗಳಲ್ಲಿ ಸ್ಪಷ್ಟ ಮತ್ತು ಸರಳ ಬೇಡಿಕೆಯನ್ನು ಮಾಡಿತು. ಕಾಂಗ್ರೆಸ್ಸಿನ ಈ ಬೇಡಿಕೆಗೆ ಬಹುತರ ಯಾವ ಪಕ್ಷ ಪಂಗಡಗಳೂ ಆಕ್ಷೇಪಿಸಲಾರವು. ಈ ಸಂಬಂಧದಲ್ಲಿ ಜಾತೀಯ ಸಮಸ್ಯೆ ಮುಂದೆ ಮಾಡಲಾಗುವದೆಂದು ನಮ್ಮ ಕನಸು ಮನಸ್ಸಿನಲ್ಲಿರಲಿಲ್ಲ. ಕಾಂಗ್ರೆಸ್ಸಿನ ಈ ರಾಜಕೀಯ ಹೋರಾಟದಲ್ಲಿ ಬೀಳಲು ಇಲ್ಲವೆ ಅದರಷ್ಟೇ ಮುನ್ನೊಕಲು ಸಿದ್ಧವಿಲ್ಲದ ಪಕ್ಷ ಪಂಗಡಗಳು ಭಾರತದಲ್ಲಿವೆಂಬುದು ನಮಗೆ ಗೊತ್ತಿದೆ. ಹಿಂದುಸ್ಥಾನದಲ್ಲಿ ಬಹು ಸಂಖ್ಯಾಕ ಭಾರತೀಯರು ಒಪ್ಪಿದ ಪ್ರತ್ಯಕ್ಷ ಹೋರಾಟ ಹೂಡುವ ಪದ್ಧತಿಗೆ ಹಲವರು ಒಪ್ಪರೆಂಬುದೂ ನಮಗೆ ಗೊತ್ತಿದೆ ಆದರೆ ಹಿಂದುಸ್ಥಾನಕ್ಕೆ ಸ್ವತಂತ್ರವಾಗುವ ಹಕ್ಕು ಇದೆ. ಸ್ವರಾಜ್ಯವು ಹಿಂದುಸ್ಥಾನದ ಜನ್ಮ ಸಿದ್ಧ ಹಕ್ಕು ಎಂಬ ಬಗ್ಗೆ ಜಾಗ್ರತ ಮತ್ತು ಆತುರ ಭಾರತವು ಬಹಳ ಮುಂದೆ ಹೋಗಿದ್ದು ಅವರೀಬೇಡಿಕೆಯನ್ನು ಯಾರೂ ವಿರೋಧಿಸಲಾರರು. ತಮ್ಮ ವಿಶಿಷ್ಟ ಹಿತಸಂಬಂಧಗಳನ್ನು ರಕ್ಷಿಸಿಕೊಳ್ಳಬೇಕೆನ್ನುವವರು ಮತ್ತು ಏನಾದರೂ ಸ್ವಲ್ಪ ಬದಲಾವಣೆಯಾದರೆ ತಮ್ಮ ಹಿತಸಂಬಂಧಗಳಿಗೆ ಧಕ್ಕೆ ಬರಬಹುದೆಂಬ ಭೀತಿಯನ್ನು ತಳೆದವರು ಕೂಡ ಕಾಲಮಾನಕ್ಕನುಸರಿಸಿಯೇ ನಡೆಯಬೇಕಾದುದರಿಂದ ಅಸಹಾಯ ಸ್ಥಿತಿಯಲ್ಲಿರುವರು. ನಾವು ಇಟ್ಟುಕೊಂಡ ಧ್ಯೇಯಕ್ಕೆ ಅವರು ಒಪ್ಪಬೇಕಾಗಿದೆ.

ಕ್ರಾಂತಿಯ ಕಾಲವೆಂದರೆ ನಮ್ಮೆಲ್ಲರ ಸತ್ವ ಪರೀಕ್ಷೆಯ ಕಾಲವು. ಆದುದರಿಂದ ಸದ್ಯದ ಮಹತ್ವದ ಸಮಸ್ಯೆಯು ನಮ್ಮೆಲ್ಲರ ಸತ್ವ ಪರೀಕ್ಷೆಯನ್ನು ಮಾಡಿ, ಸದ್ಯದ ರಾಜಕಾರಣದಲ್ಲಿಯ ಅನೇಕ ಬಗೆಗಳನ್ನು ಬಹಿರಂಗ ಪಡಿಸಿದೆ. ಜಾತೀಯ ಸಮಸ್ಯೆಯ ನಿಜವಾದ ಮರ್ಮವೇನೆಂಬುದನ್ನೂ ಅದು ಪ್ರಕಟಪಡಿಸಿದೆ ಸದ್ಯದ ಮಹತ್ವದ ರಾಜಕೀಯ ಪ್ರಶ್ನೆ ಮತ್ತು ಈ ಜಾತೀಯ ಪ್ರಶ್ನೆಗಳಿಗೆ ಮುಳುಕು ಹಾಕಿ ಮುಖ್ಯ ಮತ್ತು ನಿಜ ಪ್ರಶ್ನೆಯನ್ನು ಹಿಂದಕ್ಕಟ್ಟಲು ಇಂಗ್ಲೆಂಡು ಮತ್ತು ಹಿಂದುಸ್ಥಾನದಲ್ಲಿ ಅನೇಕ ಸಲ ಪ್ರಯತ್ನ ಮಾಡಲಾಯಿತು. ಹಿಂದುಸ್ತಾನದ ರಾಜಕೀಯ ಸಮಸ್ಯೆಯನ್ನು ಯೋಗ್ಯ ರೀತಿಯಿಂದ ಬಿಡಿಸಲು ಈ ಅಲ್ಪ ಸಂಖ್ಯಾಕರ ಸಮಸ್ಯೆಯು ಪ್ರತಿಬಂಧಕವಾಗಿದೆಂಬುದಾಗಿ ಜಗತ್ತಿಗೆ ಮನವರಿಕೆ ಮಾಡಿಕೊಡಲು ಮೇಲಿಂದ ಮೇಲೆ ಪ್ರಯತ್ನ ಮಾಡಲಾಯಿತು.

ಅಲ್ಪ ಸಂಖ್ಯಾಕರೆಂದರೆ ಯಾರು?

ರಾಜಕೀಯ ದೃಷ್ಟಿಯಿಂದ, ಅಲ್ಪ ಸಂಖ್ಯಾಕ ಎಂಬುದರ ಅರ್ಥವು ಸಂಖ್ಯಾಬಲ ಕಡಿಮೆಯಿರುವ ಒಂದು ಗುಂಪೆಂದಾಗಲಿ ಅದಕ್ಕೆ ವಿಶಿಷ್ಟ ಸಂರಕ್ಷಣೆ ಇರಬೇಕೆಂದಾಗಲಿ ಎಂದಾಗುವದಿಲ್ಲ. ತನ್ನ ಸುತ್ತಲಿನ ಬಹು ಸಂಖ್ಯಾಕ ಸಮಾಜದಿಂದ ಆತ್ಮರಕ್ಷಣೆ ಮಾಡಿಕೊಳ್ಳಲಿಕ್ಕೆ ಅಸಮರ್ಥವಾಗುವಷ್ಟು ಚಿಕ್ಕದು ಹಾಗು ನಿರ್ಬಲವಿರುವ ಸಮಾಜವೇ ಅಲ್ಪಸಂಖ್ಯಾಕವೆಂದು ಅರ್ಥಮಾಡಬಹುದು. ಆ ಸಮಾಜವು ಪ್ರಮಾಣದಿಂದ ಚಿಕ್ಕದಿದ್ದ ಮಾತ್ರಕ್ಕೆ ಸಾಲದು. ಆದರೆ ಅದು ತನ್ನ ಹಿತಸಂಬಂಧಗಳನ್ನು ರಕ್ಷಿಸಿಕೊಳ್ಳಲಾರದಷ್ಟು ಅಸಮರ್ಥವೂ ಆಗಿರಬೇಕು. ಇದು ಕೇವಲ ಸಂಖ್ಯಾಬಲದ ಪ್ರಶ್ನೆಯಲ್ಲ; ಉಳಿದ ಅಂಶಗಳೂ ಇದರಲ್ಲಿ ಅಡಕವಾಗಿವೆ. ಒಂದು ದೇಶದಲ್ಲಿ 10 ಲಕ್ಷ ಹಾಗು 20 ಲಕ್ಷ ಸಂಖ್ಯಾಬಲವುಳ್ಳ ಎರಡು ಸಮಾಜಗಳಿದ್ದರೆ ಒಂದು ಮತ್ತೊಂದಕ್ಕಿಂತ ಅರ್ಧದಷ್ಟು ಚಿಕ್ಕದಿರುವದೆಂಬ ಕಾರಣದಿಂದ ಅದು ರಾಜಕೀಯ ಅಲ್ಪ ಸಂಖ್ಯಾಕ ಹಾಗೂ ದುರ್ಬಲ ಸಮಾಜವಾಗದು.

ಆತ್ಮವಂಚನೆ.

ಇದೇ ಯೋಗ್ಯ ಒರೆಗಲ್ಲಾಗಿದ್ದರೆ ಇದನ್ನೇ ಹಿಂದೂಸ್ಥಾನದ ಮುಸಲ್ಮಾನರಿಗೆ ಅನ್ವಯಿಸೋಣ. ಹೊರಳಿ ನೋಡಿದರೆ ಇಡೀ ದೇಶದಲ್ಲೆಲ್ಲ ಪಸರಿಸಿದ ಈ ಸಮಾಜವು ಕಣ್ಣಿಗೆ ಬೀಳುವದು. ಈ ಸಮಾಜವು ಎದೆ ಮುಂದೆಮಾಡಿ ಗಾಂಭೀರ್ಯದಿಂದ ನಿಂತಿದೆ. ಇಂಥ ಸಮಾಜವು ಅಸಹಾಯ ಹಾಗು ದೀನವಾಗಿದೆಯೆನ್ನುವದು ಆತ್ಮ ವಂಚನೆಯೇ ಸರಿ.

ಹಿಂದೂಸ್ಥಾನದಲ್ಲಿಯ ಮುಸಲ್ಮಾನರು 8ರಿಂದ 9 ಕೋಟಿ ಇರುವರು. ಉಳಿದ ಸಮಾಜದಲ್ಲಿಯ ಸಾಮಾಜಿಕ ಅಥವಾ ಜಾತೀಯ ಭೇದಭಾವಗಳು ಇವರಲ್ಲಿಲ್ಲ. ಸಾಮಾಜಿಕ ಭೇದಭಾವಗಳಿಂದುಂಟಾಗುವ ಲೋಪದೋಷಗಳಿಂದ, ಇಸ್ಲಾಂ ಧರ್ಮದ ಪ್ರಬಲ ಬಾಂಧವ್ಯವು ಇವರನ್ನು ಬಹುಮಟ್ಟಿಗೆ ರಕ್ಷಿಸಿದೆ. ಇಡೀ ಜನಸಂಖ್ಯೆಯ ¼ರಷ್ಟು ಇವರಿರುವದೇನೋ ನಿಜ. ಆದರೆ ಜನಸಂಖ್ಯೆಯ ಪ್ರಮಾಣವೊಂದೇ ಮುಖ್ಯ ಪ್ರಶ್ನೆಯಾಗಿರದೆ ಜನಬಲ ಹಾಗೂ ಅವರ ಸಾಮರ್ಥ್ಯಗಳು ಮುಖ್ಯವಾಗಿವೆ. ಇಂಥ ಪ್ರಚಂಡ ಮಾನವ ಸಮಾಜಕ್ಕೆ, ಸ್ವತಂತ್ರ ಹಾಗೂ ಪ್ರಜಾಸತ್ತಾತ್ಮಕ ಹಿಂದೂಸ್ಥಾನದಲ್ಲಿ ತನ್ನ ಹಿತಸಂಬಂಧಗಳನ್ನೂ ಸಂರಕ್ಷಿಸಲು ತಾನು ಅಸಮರ್ಥನಿರುವನೆಂಬ ಭೀತಿಯುಂಟಾಗಬಹುದೋ?

ಮುಸ್ಲಿಮರು ಅಲ್ಪ ಸಂಖ್ಯಾಕರಲ್ಲ.

ಈ ಸಂಖ್ಯೆಯು ಕೇವಲ ಒಂದು ವಿಶಿಷ್ಟ ಕ್ಷೇತ್ರದಲ್ಲಿರದೆ ದೇಶದಲ್ಲೆಲ್ಲ ಹರಡಿದೆ. ಹಿಂದೂಸ್ಥಾನದ 11 ಪ್ರಾಂತಗಳಲ್ಲಿಯ ನಾಲ್ಕು ಪ್ರಾಂತಗಳಲ್ಲಿ ಮುಸಲ್ಮಾನರಿಗೆ ಬಹುಮತವಿದೆ. ಉಳಿದ ಧರ್ಮೀಯರು ಅಲ್ಪ ಸಂಖ್ಯಾಕರಿರುವರು ಬಲುಚಿಸ್ಥಾನವೂ ಇವುಗಳಿಗೆ ಸೇರಿದಲ್ಲಿ ಐದು ಪ್ರಾಂತಗಳಾಗುವವು. ಈ ಪ್ರಶ್ನೆಯನ್ನು ಧಾರ್ಮಿಕ ವರ್ಗೀಕರಣ ದೃಷ್ಟಿಯಿಂದ ನಾವು ನಿರ್ವಾಹವಿಲ್ಲದೆ ವಿಚಾರಿಸಬೇಕಾದರೂ ಮುಸಲ್ಮಾನರ ಸ್ಥಾನವು ಅಲ್ಪ ಸಂಖ್ಯಾಕವಾಗದು. ಏಳು ಪ್ರಾಂತಗಳಲ್ಲಿ ಅವರು ಅಲ್ಪ ಸಂಖ್ಯಾಕರಿದ್ದರೆ ಐದು ಪ್ರಾಂತಗಳಲ್ಲಿ ಅವರು ಬಹು ಸಂಖ್ಯಾಕರಿರುವರು. ಎಂದ ಬಳಿಕ ಅವರಿಗೆ ತಾವು ಅಲ್ಪಸಂಖ್ಯಾಕರೆಂಬ ಭಾವನೆಯು ಏಕೆ ಪೀಡಿಸಬೇಕೋ ತಿಳಿಯದು.

ಹಿಂದೂಸ್ಥಾನದ ಭಾವೀ ರಾಜ್ಯಘಟನೆಯ ವಿವರಗಳೇನೇ ಇರಲಿ. ಅದು ಅಖಿಲ ಭಾರತೀಯವಾಗುವದೆಂಬುದನ್ನು ಮಾತ್ರ ನಾವು ಬಲ್ಲೆವು. ಅದು ಸಂಪೂರ್ಣ ಪ್ರಜಾಸತ್ತಾತ್ಮಕ ವಿರುವದಲ್ಲದೆ ಅದರಲ್ಲಿ ಅಂತರ್ಗತ ರಾಜ್ಯಘಟನೆಯಲ್ಲಿ ಪ್ರತಿಯೊಂದು ಘಟಕಕ್ಕೂ ಸ್ವಾಯತ್ತತೆಯು

10ನೇ ಪುಟ ನೋಡಿ.

ವಿದು ಕತ್ತಲೆಯಾಗಿರುವುದೇನೋ ನಿಜ. ಮುಸಲ್ಮಾನರು ಸತ್ಯದ ಪ್ರಕಾಶದಲ್ಲಿ ಪ್ರವೇಶಿಸಿರುವರು. ಅವರು ಇಂದು ಈ ಪ್ರಶ್ನೆಯನ್ನು ಸರ್ವವಿಧವಾಗಿ ಪುನಃ ಪರೀಕ್ಷಿಸಲಿ ಆಂದರೆ ಅವರಿಗೆ ಮತ್ತೊಂದು ಮಾರ್ಗವೇ ಇಲ್ಲೆಂಬುದು ತಾನೇ ಗೊತ್ತಾಗುವದು.

ಮುಸಲ್ಮಾನರು ಹಾಗು ಏಕೀಕೃತ ರಾಷ್ಟ್ರ.

ನಾನು ಮುಸಲ್ಮಾನನು. ಅದಕ್ಕಾಗಿ ನನಗೆ ಅಭಿಮಾನವೆನಿಸುತ್ತದೆ. 13 ನೂರು ವರ್ಷಗಳ ಶ್ರೇಷ್ಠ ಇಸ್ಲಾಂ ಸಾಂಪ್ರದಾಯಗಳು ನನಗೆ ಹಿರಿಯರಿಂದ ಬಂದಿವೆ. ಈ ನನ್ನ ಸೊತ್ತಿನಲ್ಲಿ ಕವಡೆಯಷ್ಟು ಕೂಡ ಕಳೆದುಕೊಳ್ಳಲು ನಾನು ಸಿದ್ಧನಿಲ್ಲ. ಇಸ್ಲಾಮಿನ ಇತಿಹಾಸ, ಉಪದೇಶ, ಕಲಾ, ಶಾಸ್ತ್ರ, ಹಾಗು ಸಂಸ್ಕೃತಿಗಳು ನನ್ನ ಸರ್ವಸಂಪತ್ತು. ಅವುಗಳನ್ನು ಸಂರಕ್ಷಿಸುವದು ನನ್ನ ಪವಿತ್ರ ಕರ್ತವ್ಯ. ಮುಸಲ್ಮಾನನೆಂದು ಇಸ್ಲಾಮು ಧರ್ಮ ಹಾಗು ಸಂಸ್ಕೃತಿಗಳಲ್ಲಿ ನನಗೆ ವಿಶಿಷ್ಟ ಹಿತಸಂಬಂಧಗಳಿವೆ. ಅವುಗಳಲ್ಲಿ ಬೇರೆಯವರು ಕೈಹಾಕುವದನ್ನು ನಾನು ಸಹಿಸಲಾರೆ. ಈ ನನ್ನ ಭಾವನೆಗಳೊಡನೆ ನನ್ನ ಜೀವನ ಕ್ರಮದ ಮೂಲಕ ನನ್ನಲ್ಲಿ ಜಾಗ್ರತವಾದ ಭಾವನೆಗಳೂ ಉಂಟು. ಇಸ್ಲಾಮು ಧರ್ಮದ ತತ್ವವು ಈ ನನ್ನ ಭಾವನೆಗಳಿಗೆ ಅಷ್ಟು ಬಲ ಕೊಡದು. ಅದು ನನಗೆ ಮಾರ್ಗದರ್ಶಕವಾಗಿದೆ. ನಾನು ಹಿಂದೀಯನಾಗಿರುವಲ್ಲಿ ನನಗೆ ತುಂಬಾ ಹೆಮ್ಮೆಯಿದೆ. ಹಿಂದೀ ರಾಷ್ಟ್ರೀಯತ್ವವೆಂಬ ಅಭೇದ್ಯ ಘಟಕದ ಒಂದು ಅವಯವವಾಗಿದ್ದೇನೆ. ಈ ಭವ್ಯಮಂದಿರದ ಕಟ್ಟಡಕ್ಕೆ ನನ್ನ ಅಗತ್ಯವಿದೆ. ನನ್ನ ಹೊರತು ಭಾರತದ ಈ ಸುಂದರ ಮಂದಿರವು ಪೂರ್ಣವಾಗದು. ಭಾರತದ ರಚನೆಗೆ ಕಾರಣವಾಗುವ ವಸ್ತುವು ನಾನು. ಈ ನನ್ನ ಹಕ್ಕನ್ನು ನಾನೆಂದಿಗೂ ಬಿಟ್ಟುಗೊಡಲಾರೆ.

ಅಸಂಖ್ಯ ಜನಾಂಗಗಳು ಅನೇಕ ಸಂಸ್ಕೃತಿಗಳು ವಿವಿಧ ಧರ್ಮಗಳು ಹಿಂದೂಸ್ಥಾನವನ್ನು ಹಿಡಿದು ಬಂದುದು ಭಾರತೀಯ ಪರಮೋಚ್ಚ ಭಾಗ್ಯವಾಗಿದೆ. ಅವರ ಸಂತತಿಗಳು ಮಂದಿರದಲ್ಲಿ ಅವುಗಳಿಗೆ ಆಶ್ರಯ ದೊರೆತಿದೆ. ಸಾಂಘಸ್ಥರೆಲ್ಲರೂ ಅಲ್ಲಿ ಒಪ್ಪಿಮಿಸುತ್ತಿರುವರು. ಇತಿಹಾಸವು ಸಾಕ್ಷಿ. ಅನೇಕ ಇಂಥ ಸಾಂಘಸ್ಥರು ಒಂದೇ ಸಮನೆ ಹೊಸಬರು ಹಿಂಡ ತಂಡವಾಗಿ ಆಶ್ರಯ ಹೊಂದುತ್ತಿದ್ದರು. ವಿಶಾಲ ಹಾಗೂ ಫಲವತ್ತಾದ ಭಾರತವು ಎಲ್ಲರನ್ನೂ ಸಂಭ್ರಮದಿಂದ ಸ್ವಾಗತಿಸಿತು. ತನ್ನ ಹೃದಯ ಮಂದಿರದಲ್ಲಿ ಅವರಿಗೆ ಆಶ್ರಯವಿತ್ತಿತು. ತನ್ನ ಪೂರ್ವಜರ ಹೆಜ್ಜೆಯನ್ನನುಸರಿಸಿ ಬಂದ ಇಂಥ ಸಾಂಘಸ್ಥರ ಗುಂಪಿನಲ್ಲಿ ಕೊನೆಯದೆಂದರೆ ಇಸ್ಲಾಮು ಧರ್ಮವು. ಇದು ಇಲ್ಲಿಗೆ ಬಂದು ನೆಲಸಿ ತನ್ನ ಕಲ್ಯಾಣವನ್ನು ಸಾಧಿಸಿತು. ಇದರಿಂದ ಉಭಯ ಸಂಸ್ಕೃತಿಗಳ ಸಂಗಮವಾಯಿತು. ಗಂಗಾ ಯಮುನೆಯಂತೆ ಕೆಲಹೊತ್ತು ಪ್ರತ್ಯೇಕವಾಗಿ ಹರಿದವು. ಆದರೆ ನಿಸರ್ಗ ಧರ್ಮಕ್ಕನುಸಾರವಾಗಿ ಉಭಯ ಸಂಸ್ಕೃತಿಗಳು ಒಂದನ್ನೊಂದು ಅಪ್ಪಿಕೊಂಡವು. ಈ ಸಮ್ಮಿಶ್ರಣ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯತಕ್ಕಂಥದಾಯಿತು. ಅಂದಿನಿಂದ ಪ್ರಾಚೀನ ಭಾರತದ ಸ್ಥಾನದಲ್ಲಿ ಆಧುನಿಕ ಭಾರತ ನಿರ್ಮಾಣ ಕಾರ್ಯವು ಮೌನವಾಗಿ ಸಾಗಿದೆ. ನಾವು ಬರುವಾಗ ನಮ್ಮ ಸಂಪತ್ತನ್ನೆಲ್ಲ ತಂದೆವು. ಭಾರತವು ಶಕ್ತಿ ಸಂಪೂರ್ಣವಾದ ಆಹಾರ ಸಂಪತ್ತು ಇತ್ತು. ನಮ್ಮ ಸಂಪತ್ತನ್ನು ನಾವು ಅದಕ್ಕೆ ಅರ್ಪಿಸಿದೆವು. ಅದೂ ತನ್ನ ಬೊಕ್ಕಸದ ಬಾಗಿಲನ್ನು ನಮಗಾಗಿ ಬರೆದಿಟ್ಟಳು. ಇಸ್ಲಾಂ ಸ್ಮೃತಿಯಲ್ಲಿ ಅವಳಿಗೆ ಅತ್ಯವಶ್ಯವಾದುವನ್ನು ಪ್ರಜಾ ಪ್ರಭುತ್ವ ಹಾಗು ಸರಿ ಸಮಾನತೆಗಳ ಸಂದೇಶವನ್ನು ಕಾಣಿಕೆಯೆಂದು ಸಮರ್ಪಿಸಿದೆವು.

ಭಾರತಭೂಮಿಯು ನಮ್ಮೆಲ್ಲರದು.

ಆ ಮಾತಿಗೆ ಈಗ ಹನ್ನೊಂದು ಶತಮಾನಗಳಾದವು. ಹಿಂದೂಸ್ಥಾನದ ಮೇಲೆ ಹಿಂದೂ ಧರ್ಮಕ್ಕೆ ಎಷ್ಟು ಹಕ್ಕುಬಾಧ್ಯತೆಗಳಿರುವವೋ ಅಷ್ಟೇ ಇಸ್ಲಾಮು ಧರ್ಮಕ್ಕೂ ಇರುವವು. ಹಿಂದು ಧರ್ಮವು ಇಲ್ಲಿಯ ಜನತೆಗೆ ಅನೇಕ ಸಹಸ್ರ ವರ್ಷಗಳ ಧರ್ಮವಾಗಿದೆ. ಹಿಂದು ಧರ್ಮವನ್ನನುಸರಿಸುತ್ತಿದ್ದರೂ ತಾನು ಹಿಂದೀಯನೆಂದು ಹೇಳುವಲ್ಲಿ ಹಿಂದುವಿಗೆಷ್ಟು ಅಭಿಮಾನವೆನಿಸುವದೋ ಅಷ್ಟೇ ಇಸ್ಲಾಮು ಧರ್ಮವನ್ನು ಅನುಸರಿಸುತ್ತ ನಮ್ಮನ್ನು ಹಿಂದೀಯರೆಂದು ಕರೆದುಕೊಳ್ಳುವಲ್ಲಿ ನಮಗೂ ಅಭಿಮಾನವೆನಿಸುತ್ತದೆ. ಈ ಮಾತನ್ನೇ ಇನ್ನಿಷ್ಟು ವಿಸ್ತರಿಸುವ. ಹಿಂದೂಸ್ಥಾನದ ಮತ್ತೊಂದು ಧರ್ಮ—ಕ್ರಿಸ್ತಿ ಧರ್ಮ—ವನ್ನು ಅನುಸರಿಸುವ ಕ್ರಿಶ್ಚಿಯನ್ನನಿಗೂ ತಾನು ಹಿಂದೀಯನೆಂದು ಕರೆದುಕೊಳ್ಳಲು ಹಕ್ಕು ಇದೆ.

ಉಪಸಂಹಾರ.

ಇನ್ನು ನಿಮ್ಮ ವೇಳೆಯನ್ನು ನಾನು ಕಳೆಯಲಾರೆ. ನನ್ನ ಭಾಷಣವು ಇಲ್ಲಿಗೆ ಮುಗಿಯುವದು. ಅದಕ್ಕೂ ಮೊದಲು ನಮ್ಮ ವಿಜಯವು ಮೂರು ಮಾತುಗಳನ್ನವಲಂಬಿಸಿದೆಯೆಂಬುದನ್ನು ಹೇಳಬಯಸುವೆ. ಐಕ್ಯ, ಶಿಸ್ತು ಹಾಗೂ ಮಹಾತ್ಮರ ಮುಂದಾಳುತ್ವದಲ್ಲಿ ಅಚಲ ವಿಶ್ವಾಸ, ಇವೇ ಆ ಮೂರು ಮಾತುಗಳು. ಹಿಂದಿನ ನಮ್ಮ ಗೌರವಾರ್ಹ ಚಟುವಟಿಕೆಗಳಿಗೆಲ್ಲ ಅವರ ನಾಯಕತ್ವವೇ ಕಾರಣವಾಗಿದೆ. ನಮ್ಮ ಭಾವೀ ಚಟುವಟಿಕೆಗಳಿಗೆ ಯಶಸ್ಸು ಪ್ರಾಪ್ತವಾಗುವದೂ ಅವರ ನೇತೃತ್ವದಲ್ಲಿಯೇ.

ನಮ್ಮ ಸತ್ವ ಪರೀಕ್ಷೆಯ ಕಾಲವು ನಮ್ಮ ಮುಂದಿದೆ. ಈಗಾಗಲೇ ಇಡೀ ಜಗತ್ತಿನ ದೃಷ್ಟಿಯನ್ನು ನಮ್ಮ ಕಡೆಗೆ ಹೊರಳಿಸಿದ್ದೇವೆ. ನಮ್ಮ ಕೀರ್ತಿ ಗೌರವಗಳಿಗೆ ತಕ್ಕಂತೆ ನಾವು ವರ್ತಿಸೋಣ.

"ವಂದೇ ಮಾತರಂ"

ಮಾರಾಟಕ್ಕಿದೆ.

ವೀರಾಜಪೇಟೆನಾಡು ಮೈತಾಡಿ ಗ್ರಾಮದ ವಕ್ಕಲಿಗರ ನಿಂಗೇಗೌಡ್ರ ಮಗ ದೇವಣ್ಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕುಲ ನಂ. 38ರ ಸಾಗಿನ ಸ. ನ. 150/1ರ 16.70 ಎಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ತಿ ಕೋಟೆದ 3.90 ಮೇಲ್ಪದ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕಿತ್ತಿ ಕೋಟೆದ .80 ಸೆಂಟಿನ ಪೈಕಿ .64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಎಕ್ರೆಯ ಜಾಗೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತಿ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯಸ್. ದೇವಣ್ಣ,
ಮೈತಾಡಿಗ್ರಾಮ,
12-2 ಮೂರ್ನಾಡು.

ಮಿತವ್ಯಯದ ಅಭ್ಯಾಸವನ್ನು ಚಿಕ್ಕಂದಿನಲ್ಲಿಯೇ ಪ್ರೋತ್ಸಾಹಿಸಿ ನಿಮ್ಮ ಮಕ್ಕಳ ಮುಂದಿನ ಪ್ರಾರಂಭಕಾಲಕ್ಕೆ ಸಾಕಾದಷ್ಟು ಅನುಕೂಲವನ್ನು ಕಲ್ಪಿಸಿ.

ಕೂಡಲೇ "ಚಿಲ್ಡ್ರನ್ಸ್ ಡಿಫರ್ಡ್ ಅಶ್ಯೂರೆನ್ಸ್" ನ ಒಂದು ಪಾಲಿಸಿಯನ್ನು

ಅತ್ಯಂತ ಭದ್ರವಾದ ಮತ್ತು ಜನಾದರಣೀಯವಾದ
ಭಾರತೀಯ ವಿಮಾ ಕಂಪೆನಿಯಾದ
"ಓರಿಯಂಟಲ್"
ನಲ್ಲಿ ತೆಗೆದುಕೊಳ್ಳಿರಿ.

ಚಿಲ್ಡ್ರನ್ಸ್ ಡಿಫರ್ಡ್ ಅಶ್ಯೂರೆನ್ಸ್—ಇದೊಂದು ಹೊಸ ರೀತಿಯ ಯೋಜನೆ. ಇದರ ಪ್ರಕಾರ [illegible] ಮಕ್ಕಳಿಗೆ ಸಂಬಂಧ [illegible] ಪ್ರೀಮಿಯಮ್ಮಿನ [illegible] ವಿಮಾ ಪಾಲಿಸಿಯನ್ನು [illegible]. ಇದರಲ್ಲಿ ಈ ಪಾಲಿಸಿಯು [illegible] 21 ವರ್ಷ ವಯಸ್ಸಿಗೆ [illegible] ಇಲ್ಲದ [illegible] ಬೋನಸ್ಸು [illegible] ಪ್ರಾರಂಭವಾಗುತ್ತದೆ.

52-4) ಮಾಹಿತಿಗೆ ಬರೆಯಿರಿ:— ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ-1874. ಹೆಡ್ ಆಫೀಸು ಬೊಂಬಾಯಿ. ಅಥವಾ ದಿ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ.	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	48,470	0	0
ಜಮೊಬಂದ ಠೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56.752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ತ್ರಿಫ್ಟ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4 ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು ಆದರೆ ಪುನಹ ತಾ 29-7-39ರಿಂದ ತತ್ಕಾಲಕ್ಕೆ ನಿಲ್ಲಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರಸಿಡೆಂಟ್:—ಪಂದ್ಯಂಡ ಐ ಬೆಳ್ಯಪ್ಪನವರು ಎಂ ಎಲ್. ಸಿ.

ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯನವರು

ಸಕ್ರೇಟರಿ:—ಮ ಕೆ ಸಿ ಕರುಂಬಯ್ಯನವರು ಎಂ ಎಲ್ ಸಿ

ತಾ 1-3-1940

ಕೊಡಂದೇರ ಡಿ. ಮಾಚಯ್ಯ,

L.D Sc. (COLLEGE OF DENTISTRY)

EX SUPERVISOR LAKSHIBAI PATEL DENTAL HOSPITAL, KARACHI

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ

ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (37) ನೂತನ ರೀತಿಯ ಚಿಕಿತ್ಸೆ.

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

[illegible] ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷದಿ.

ಬಾಟ್ಲಿಗೆ 1 ರೂ ವಿ ಪಿ ಖರ್ಚು ಬೇರೆ

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು ಬಾಟ್ಲಿಗೆ 1 ರೂ

ಗಣೇಶ ರಾಮಚಂದ್ರ ಕರ್ಣಿ. ಮತ್ತು ಕಂಪೆನಿ,

(52-14) ಗಿರಗಾಂವ, ಮುಂಬಯಿ ೪,

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಆಂವರೆ-ಜಮೊ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಪಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ದಾವಾ ಮತ್ತು ಅಮಲ್ದಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಇಂಡಿಯನ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,

Tutorial School,

52—41 **Mercara, and Virajpet.**

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇನೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ

ಕೆ. ಸಿ. ಕೆ. ಪಣಿಕರ್,

ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್)

52-7 **ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.**

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.
ಸಂಪಾದಕ:—ಸಿ. ಐ. ಚೆಟ್ಟ್ಯಪ್ಪ. ತಾ. ೫—೪—೧೯೪೦. ವಾರ್ಷಿಕ ಚಂದಾ ರೂ. ೩-೮-೦
ಸಂಪುಟ ೧೯] [ಸಂಚಿಕೆ ೪೩

ಭದ್ರತೆ! ವಿಶ್ವಾಸಾರ್ಹತೆ!! ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ ಭದ್ರತೆಯನ್ನು ವರ್ಷೇ ವರ್ಷೇ ಏರಿಸಿ, ಠೇವಣಾತಿದಾರರಿಗೆ ಸಂರಕ್ಷಣೆಯನ್ನು ಹೆಚ್ಚಿಸಿ,
ಸರ್ವರ ವಿಶ್ವಾಸಕ್ಕೆ ಪಾತ್ರವಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಬೇಂಕಿನ ಸಂಸ್ಥೆ.

ನಿರಖು ಠೇವಣಿ, ಒಂದು ವರ್ಷಕ್ಕೆ 3½% (ವಾರ್ಷಿಕ ಶೇಕಡ)
ಬಡ್ಡಿ ದರಗಳು: ಎರಡು ವರ್ಷಕ್ಕೆ / ಮೂರು ವರ್ಷಕ್ಕೆ } 4% ,,

ಒಂದು ವರ್ಷಕ್ಕಿಂತ ಕಡಿಮೆ ಮಾಯಿದೆಯ, ಅಲ್ಪಾವಧಿಯ, ಠೇವಣಾತಿಗಳನ್ನು
ಅವಧಿಗೆ ತಕ್ಕ ಬಡ್ಡಿ ದರಗಳಲ್ಲಿ ಪಡೆಯಬಹುದು.

ಮೂರು ವರ್ಷದ ಕೇಶ್ ಸರ್ಟಿಫಿಕೇಟುಗಳು:—[illegible] ವಾರ್ಷಿಕ ಶೇಕಡಾ 4 ರಲ್ಲಿ [illegible] ಮಾಯಿದೆಯ ಕೊನೆಯ, ಯಾವಾಗಲೂ 15 ದಿನಗಳ ನೋಟೀಸು ಕೊಟ್ಟಲ್ಲಿ ಹಣವನ್ನು ಹಿಂದಕ್ಕೆ ಪಡೆಯಬಹುದು.
ಸೇವಿಂಗ್ಸ್ ಬೇಂಕ್ ಡಿಪಾಜಿಟ್ಸ್:—ಒಂದು ಲೆಕ್ಕದಲ್ಲಿ ರೂ 5,000 ದ ವರೆಗೆ ಹಣ ಇಡಬಹುದು [illegible] ಹಣ ಹಿಂದೆ ತೆಗೆಯಬಹುದು.
ಶಾಲಿಯಾನ ಶೇಕಡಾ 2½ ದರದಲ್ಲಿ ಬಡ್ಡಿ ಕೊಡಲ್ಪಡುವುದು.
ಕರೆಂಟ್ ಡಿಪಾಜಿಟ್ಸ್, ಕ್ಯುಮ್ಯುಲೇಟಿವ್ ಡಿಪಾಜಿಟ್ಸ್ ಲೆಕ್ಕಗಳನ್ನು ತೆರೆಯಬಹುದು

ಬೊಂಬಾಯಿ, ಕಲ್ಕತ್ತಾ, ಮದ್ರಾಸ, ಕಲ್ಲಿಕೋಟೆ, ಹೈದ್ರಾಬಾದು, ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ
ಅನೇಕ ಸ್ಥಳಗಳ ಮೇಲೆ ಡ್ರಾಫ್ಟುಗಳನ್ನು ಚೆಕ್ಕುಗಳನ್ನೂ ಕೊಡುವುದು; [illegible] ಬಹುದು.

52–15 ಚಿನ್ನಾಭರಣಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಜಯಶಾಲಿಗಳಾಗಿ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

**ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ**

ಭುವನೇಂದ್ರ 'ಅಮೃತಪ್ರಾಶ'ವು

**ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.**

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್,

ಕಟಪಾಡಿ,—ದ. ಕನ್ನಡ.
(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಪಿ. ಕೆ. ಪಂಜುಂಡೇಶ್ವರ.

52–21

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಾಗಿರುವ ಸ್ಥಳದಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ ಮುಕ್ಕಾಟಿರ ಪೊಯ್ಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ ಯಂ ಸುಬ್ರಾಯನವರು

ಅಮ್ಮತ್ತಿ—ಸಿದ್ದಾಪುರ— ಮ ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ ಪಿ. ಜಿ ಮುದ್ದಮ್ಮಯ್ಯನವರು.

ಮಡಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಜಿ: ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ ಕೆ ಮೊಗಪ್ಪನವರು

ನಾಪೋಕ್ಲು—ಮ. ಬೆಳ್ಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ ಎಚ್. ಎಂ. ಪುಟ್ಟಣ್ಣನವರು

ಸೂಚನೆ.— ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋರ್'

ಪೂರ್ಣ ಶಕ್ತಿವುಳ್ಳ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52-26)

ZANDU

ವೀರಾಜಪೇಟೆಯ ಏಜೆಂಟರು—ಕೆ. ರಾಮಕೃಷ್ಣರಾವ್,
ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಸ್ಥಾಪಿತವಾದ್ದು 1907.

ಹೆಡ್ ಆಫೀಸು—ಅಜ್ಮೀರ್.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಸಮಾಚಾರಕ್ಕೂ, ಏಜೆಂಟರ ಶರತುಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಢಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚನಾಪಳ್ಳಿ ಮತ್ತು ವೆಲ್ಲೂರು.

52-10

ಕೌನ್ಸಿಲು ಬಡ್ಜೆಟ್ ಮೀಟಿಂಗು.

ಕಳೆದ ಸಂಚಿಕೆಯಿಂದ ಮುಂದುವರಿದದ್ದು

---

17. 'ಗ್ರಾಮಾಭಿವೃದ್ಧಿ ಫಂಡಿಗೆ 50 ಸಾವಿರ ರೂಪಾಯಿ ಇನ್ನೂ ಹೆಚ್ಚಿಗೆ ಕೊಡಬೇಕೆಂದು ಇಂಡಿಯಾ ಸರಕಾರವನ್ನು ಕೇಳಿಕೊಳ್ಳತಕ್ಕದ್ದು' ಎಂಬ ಠರಾವನ್ನು ಶ್ರೀ ಬಿ ಎಂ. ಕಾರ್ಯಪ್ಪನವರು ಸೂಚಿಸಿದರು. ಕಾಂಗ್ರೆಸ್ ಪಕ್ಷದ ಏಳು ಮೆಂಬರುಗಳೂ, ಇಬ್ಬರು ಯೂರೋಪಿಯನರೂ ಪರವಾಗಿಯೂ, ನಾಲ್ಕು ಉದ್ಯೋಗಸ್ಥರು, ಅಬ್ದುರಹಮಾನ್ ಖಾನರವರು ಮತ್ತು ಸಿ. ಕಾಳಪ್ಪನವರು ವಿರೋಧವಾಗಿಯೂ ಓಟು ಮಾಡಿ ಉಳಿದ ಮೂವರು ಆಯಾಮೆಂಬರುಗಳು ಶ್ರೀ ಯಂ. ಯಂ. ಬೆಳ್ಯಪ್ಪನವರು ಯಾವ ಕಡೆಗೂ ಓಟು ಮಾಡಲಿಲ್ಲ. ಠರಾವು ಪಾಸಾಯಿತು.

18. ಕೌನ್ಸಿಲು ಮೆಂಬರುಗಳಿಗೆ (ವಿಶ್ರಾಂತಿ ಕೋಣೆ) 'ಕ್ಲೋಕ್ ರೂಮು' ಮಾಡಲು ತಕ್ಕ ಏರ್ಪಾಡು ಮಾಡಬೇಕೆಂಬ ಠರಾವನ್ನು ಮೆ. ಯಂ. ಯಂ. ಬೆಳ್ಯಪ್ಪನವರು ಸೂಚಿಸಿ, ಫೈನಾನ್ಸು ಮೆಂಬರರು ಹಾಗೆ ಮಾಡಲಾಗುವದೆಂದು ಭರವಸೆಯಿತ್ತ ಮೇಲೆ ವಾಪಾಸು ತೆಗೆದುಕೊಂಡರು.

19. 'ಖರ್ಚು ಕಡಿಮೆ ಮಾಡುವ ಬುದ್ಧಿಯಿಂದ ಕೌನ್ಸಿಲು ರಿಪೋರ್ಟರರ ಮತ್ತು ಟ್ರೆಜರಿ ಆಫೀಸರರ ಹುದ್ದೆಯನ್ನು ಒಂದುಗೂಡಿಸಬೇಕೆಂಬ' ಠರಾವನ್ನು ಶ್ರೀ ಎನ್. ಸೋಮಣ್ಣನವರು ಸೂಚಿಸಿದರು. ಫೈನಾನ್ಸ್ ಆಫೀಸರು ಮತ್ತು ಟ್ರೆಜರಿ ಆಫೀಸರನ್ನು ಒಂದಾಗಿ ಮಾಡುವ ಈ ಏರ್ಪಾಡಿನಿಂದ ಖರ್ಚು ಹೆಚ್ಚಾಗುವ ಕಾರಣ ಸರ್ಕಾರದ ಮೆಂಬರು ಠರಾವನ್ನು ವಿರೋಧಿಸಿದರು. ಸ್ವಲ್ಪ ಚರ್ಚೆಯಾದ ನಂತರ ಠರಾವನ್ನು ಓಟಿಗೆ ಹಾಕಲಾಗಿ ಶ್ರೀ ಗಳಾದ ಎನ್. ಸೋಮಣ್ಣ, ಕೆ. ಮಲ್ಲಪ್ಪ, ಯಂ. ಯಂ. ಬೆಳ್ಯಪ್ಪ, ಚೌಡ್ಲು ಕಾಳಪ್ಪ, ಇವರು ಪರವಾಗಿಯೂ, ಕಾಂಗ್ರೆಸ್ ಏಳು ಜನರೂ, ಸರಕಾರಿ ಹಾಗೂ ಉಳಿದ ಮೆಂಬರುಗಳೂ ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಬಿದ್ದು ಹೋಯಿತು.

20. 'ಕೊಡವ ಪದ್ಧತಿಗಳನ್ನು ಕಾನೂನಾಗಿ ಮಾಡಬೇಕೆಂದು ಈ ಮೊದಲೊಮ್ಮೆ ಪಾಸು ಮಾಡಿದ ಠರಾವನ್ನು ಸರಕಾರವು ಜಾರಿಗೆ ತರಬೇಕೆಂದು' ಮೆ. ಯಂ. ಯಂ. ಬೆಳ್ಯಪ್ಪನವರು ಸೂಚಿಸಿದರು. ಸರಕಾರದವರು ಇದು ಸಾಧ್ಯವಿಲ್ಲ ಹಾಗೂ ಪ್ರಯೋಜನವೂ ಇಲ್ಲವೆಂದು ವಿರೋಧಿಸಿದರು. ಆರು ಕೊಡವ ಸದಸ್ಯರು ಪರವಾಗಿಯೂ, ನಾಲ್ಕು ಉದ್ಯೋಗಸ್ಥರು ವಿರೋಧವಾಗಿಯೂ, ಉಳಿದವರು ಯಾವ ಕಡೆಗೂ ಓಟು ಮಾಡಿದ್ದರಿಂದ ಠರಾವು ಪಾಸಾಯಿತು.

21. 'ಕೊಡಗಿನ ಸಬ್‌ಜಡ್ಜರು ಯಾ ಡಿಸ್ಟ್ರಿಕ್ಟ್ ಜಡ್ಜರನ್ನು ಮೂರು ವರ್ಷಕೊಮ್ಮೆ ಬದಲಾಯಿಸಬೇಕು ಎಂಬ ಠರಾವನ್ನು ಮೆ. ಕೆ. ಸಿ. ಕರುಂಬಯ್ಯನವರು ಸೂಚಿಸಿದರು. ಇದರ ತತ್ವವನ್ನು ಸರಕಾರದ ಮೆಂಬರು ಒಪ್ಪಿಕೊಂಡರು. ಠರಾವಿಗೆ ಪರವಾಗಿ ಮೆ. ಸಿ. ಐ. ಬೆಳ್ಯಪ್ಪನವರು ಮತ್ತು ಬಿ. ಯಂ. ಕಾರ್ಯಪ್ಪನವರೂ, ವಿರೋಧವಾಗಿ ಮೆ. ಎನ್. ಸೋಮಣ್ಣನವರು, ಯಂ. ಬೆಳ್ಯಪ್ಪನವರು, ಕೆ. ದೇವಯ್ಯನವರು ಮತ್ತು ಕೆ. ಮಲ್ಲಪ್ಪನವರೂ ಮಾತಾಡಿದರು. ಠರಾವನ್ನು ಓಟಿಗೆ ಹಾಕಿದಲ್ಲಿ ಕೋರನ ದೇವಯ್ಯನವರಲ್ಲದೆ ಉಳಿದ 6 ಕಾಂಗ್ರೆಸ್ ಮೆಂಬರುಗಳು ಪರವಾಗಿಯೂ, ಶ್ರೀ ಗಳಾದ ಯಂ ಯಂ. ಬೆಳ್ಯಪ್ಪ, ಎನ್. ಸೋಮಣ್ಣ, ಕೆ. ಮಲ್ಲಪ್ಪ, ಕೆ. ದೇವಯ್ಯ, ಚೌಡ್ಲು ಕಾಳಪ್ಪ ಮತ್ತು ಅಬ್ದುಲ್ ರಹಮಾನ್ ಖಾನರು ವಿರೋಧವಾಗಿಯೂ ಓಟುಮಾಡಿ, ಉಳಿದವರು ಯಾವ ಕಡೆಗೂ ಓಟು ಮಾಡದ್ದರಿಂದ ಅಧ್ಯಕ್ಷರ ಕ್ಯಾಸ್ಟಿಂಗ್ ಓಟಿನಿಂದ ಠರಾವು ಪಾಸಾಯಿತು.

23. 10. ಎ. ಫಾರೆಸ್ಟಿನಲ್ಲಿಯ ರೂ. 1,16,880 ರಿಂದ ರೂಪಾಯಿ 300 ಕಮ್ಮಿಮಾಡಿ ನಾಪೋಕ್ಲು ಶಾಲೆಯಲ್ಲಿ ಜಾನುವಾರು ಸಾಕುವ ಮತ್ತು ಕೋಳಿ ಸಾಕುವ ವ್ಯವಸ್ಥೆ ಮಾಡಲು 37. ಬಿ. ವಿದ್ಯೆಯಲ್ಲಿ ರೂ. 300 ಇಡಬೇಕೆಂಬ ಶ್ರೀ ಬಿ. ಯಂ. ಕಾರ್ಯಪ್ಪನವರ ಠರಾವಿಗೆ ಸರಕಾರಿ ಮೆಂಬರು–ಅವಕ್ಕಿರುವ ಹಣವನ್ನು ಕಂಡು ಹಿಡಿಯುವ ಪ್ರಯತ್ನ ಮಾಡುವ ಭರವಸೆ ಇತ್ತ ಪ್ರಯುಕ್ತ ಸೂಚಕರು ವಾಪಾಸು ತೆಗೆದುಕೊಂಡರು.

24. 10. ಬಿ. ಫಾರೆಸ್ಟಿನಲ್ಲಿರುವ ರೂ 81,460 ರಲ್ಲಿ ರೂಪಾಯಿ 3000 ವನ್ನು ಕಮ್ಮಿಮಾಡಿ, ವೀರಾಜಪೇಟೆಯಲ್ಲಿ ಒಂದು ಕೈಗಾರಿಕೆ ಶಾಲೆಯನ್ನು ತೆರೆಯುವ ಪ್ರಯುಕ್ತ 37. ಎ. ವಿದ್ಯೆಯಲ್ಲಿ ರೂ. 3000 ಹೆಚ್ಚಿಸಬೇಕೆಂಬ ಠರಾವನ್ನು ಶ್ರೀ ಐ. ಪಿ. ಕಾರ್ಯಪ್ಪನವರು ಸೂಚಿಸಿದರು. ವಿದ್ಯಾ ಇಲಾಖಾ ಮೆಂಬರು ವಿರೋಧಿಸಿದರು. ಮ. ಪಿ. ಐ. ಬೆಳ್ಯಪ್ಪನವರು ಠರಾವಿಗೆ ಪರವಾಗಿ ಮಾತಾಡಿದರು. ಓಟಿಗೆ ಹಾಕಲಾಗಿ ಕಾಂಗ್ರೆಸಿನ ಏಳು ಸದಸ್ಯರು ಪರವಾಗಿಯೂ, ನಾಲ್ಕು ಉದ್ಯೋಗಸ್ಥ ಮೆಂಬರರು, ಎರಡು ಯೂರೋಪಿಯನ್ ಮೆಂಬರುಗಳು ಮತ್ತು ಅಬ್ದುಲ್ ರಹಮಾನ್ ಖಾನರು ವಿರೋಧವಾಗಿಯೂ ಓಟುಮಾಡಿ ಉಳಿದವರು ಯಾವ ಕಡೆಗೂ ಓಟು ಮಾಡದ್ದರಿಂದ ವಿರೋಧ, ಪರ ಓಟುಗಳು ಸಮವಾದವು. ಅಧ್ಯಕ್ಷರು ತಮ್ಮ ಓಟನ್ನು ವಿರೋಧಮಾಡಿದ್ದರಿಂದ ಠರಾವು ಪಾಸಾಗಲಿಲ್ಲ.

25. 'ಬೆಂಗಳೂರು ಶಾಲಾ ಇನ್ಸ್‌ಪೆಕ್ಟರರು ಕೊಡಗಿನ ಶಾಲೆಗಳನ್ನು ಶೋಧಿಸಲಿಕ್ಕಾಗಿ ವರ್ಷಂಪ್ರತಿ ಖರ್ಚು ಮಾಡುವ ರೂ 500 ದುಂದುಗಾರಿಕೆಯಾಗಿದ' ಎಂಬ ಠರಾವನ್ನು ಶ್ರೀ ಪಿ. ಐ. ಬೆಳ್ಯಪ್ಪನವರು ಮಂಡಿಸಿದರು. ವಿದ್ಯಾ ಇಲಾಖಾ ಮೆಂಬರರು ವಿರೋಧಿಸಿದರು. ಶ್ರೀ ಐ. ಪಿ. ಕಾರ್ಯಪ್ಪನವರು ಪರವಾಗಿಯೂ ಮೆ. ಯಂ. ಯಂ. ಬೆಳ್ಯಪ್ಪನವರು ವಿರೋಧವಾಗಿಯೂ ಮಾತಾಡಿದ ನಂತರ ಠರಾವನ್ನು ಓಟಿಗೆ ಹಾಕಲಾಗಿ ಏಳು ಕಾಂಗ್ರೆಸ್ ಸದಸ್ಯರು ಮಾತ್ರ ಪರವಾಗಿಯೂ ಉಳಿದವರು ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಬಿದ್ದು ಹೋಯಿತು.

ನಾಲ್ಕನೆ ದಿನ (16-3-40)

26. ಸಿದ್ದಾಪುರದ ಪೋಲೀಸ್ ಸ್ಟೇಷನ ಹರಾಜನ್ನು ವಜಾಮಾಡಿ ಆ ಕಟ್ಟಡವನ್ನು ಅಲ್ಲಿಯ ಆಸ್ಪತ್ರೆಗೆ ಕಾಯಿಲಸ್ಥರನ್ನಿಡುವ ವಾರ್ಡಾಗಿ ಮಾಡಬೇಕೆಂದು' ಶ್ರೀ ಐ. ಪಿ. ಕಾರ್ಯಪ್ಪನವರು ಸೂಚಿಸಿದರು. ಸರಕಾರಿ ಮೆಂಬರು ವಿರೋಧಿಸಿದರು. ಸಿ. ಐ. ಬೆಳ್ಯಪ್ಪನವರು ಠರಾವಿಗೆ ಪರವಾಗಿ ಜವಾಬನ್ನಿತ್ತರು. ನಿಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು.

27. 'ಫಾರೆಸ್ಟ್ ಇಲಾಖೆಯ ಖರ್ಚಿನಿಂದ ರೂ. 1000 ಕಮ್ಮಿಮಾಡಿ, ಅದನ್ನು ನಾಪೋಕ್ಲು ಆಸ್ಪತ್ರೆಗೆ ಒಂದು ವಾರ್ಡು ಕಟ್ಟಲು ಉಪಯೋಗಿಸಬೇಕು' ಎಂದು ಶ್ರೀ ಬಿ. ಯಂ. ಕಾರ್ಯಪ್ಪನವರು ಸೂಚಿಸಿದರು. ಸರಕಾರಿ ಮೆಂಬರು ವಿರೋಧಿಸಿದರು. ಶ್ರೀ ಪಿ. ಐ. ಬೆಳ್ಯಪ್ಪನವರು ಪರವಾಗಿ ಮಾತಾಡಿದರು. ಮ. ಯಂ. ಯಂ. ಬೆಳ್ಯಪ್ಪನವರು ವಿರೋಧಿಸಿದರು. ಓಟಿಗೆ ಹಾಕಲಾಗಿ ಏಳು ಕಾಂಗ್ರೆಸ್ ಸದಸ್ಯರೂ, ಶ್ರೀ ಚೌಡ್ಲು ಕಾಳಪ್ಪನವರೂ ಪರವಾಗಿಯೂ, ಶ್ರೀಗಳಾದ ಯಂ. ಯಂ. ಬೆಳ್ಯಪ್ಪ, ಅಬ್ದುಲ್ ರಹಮಾನ್‌ಖಾನ್ ಮತ್ತು ನಾಲ್ಕು ಸರಕಾರಿ ಮೆಂಬರರು ವಿರೋಧವಾಗಿಯೂ, ಓಟು ಮಾಡಿ ಉಳಿದವರು ಯಾವ ಕಡೆಗೂ ಓಟು ಮಾಡದ್ದರಿಂದ ಠರಾವು ಪಾಸಾಯಿತು.

28. 'ಗ್ರಾಮಾಂತರಗಳಲ್ಲಿ ಸ್ತ್ರೀಯರನ್ನು ನೂಲಿಗಿಕ್ಕಿ ಕೆಲಸಕ್ಕೆ ತರಬೇಕು ಮಾಡಲು ಈಗ ಇಟ್ಟಿರುವ ರೂ. 500 ನ್ನು ಸಾವಿರ ರೂಪಾಯಿಗೆ ಏರಿಸಬೇಕೆಂಬ ಶ್ರೀ ಬಿ. ಯಂ. ಕಾರ್ಯಪ್ಪನವರ ಠರಾವನ್ನು ಸೂಚಿಸಿದ ಮೇಲೆ, ಸರಕಾರದವರು ಹಾಗೆ ಇಡುವಂತೆ ಭರವಸೆ ಕೊಟ್ಟ ಪ್ರಯುಕ್ತ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

29. 'ಮುನ್ಸಿಪಾಲಿಟಿ ಹಾಗೂ ನೋಟಿಫೈಡ್ ಏರಿಯಾದ ಸುತ್ತು ಮುತ್ತು ಐದು ಮೈಲುಗಳ ಆವರಣದಲ್ಲಿ ಮಲೇರಿಯಾ ನಿವಾರಣೆಯ ಕ್ರಮ ಕೈಗೊಳ್ಳಬೇಕೆಂಬ' ಶ್ರೀ ಚೌಡ್ಲು ಕಾಳಪ್ಪನವರ ಠರಾವು ಸ್ವಲ್ಪ ಚರ್ಚೆಯಾದ ನಂತರ ವಾಪಾಸು ತೆಗೆದುಕೊಳ್ಳಲ್ಪಟ್ಟಿತು.

30. 'ಒಬ್ಬ ಸ್ತ್ರೀ ಆರೋಗ್ಯ ಸಂದರ್ಶಕರನ್ನು ನೇಮಿಸಬೇಕೆಂದು' ಶ್ರೀ ಯಂ. ಯಂ. ಬೆಳ್ಯಪ್ಪನವರು ಒಂದು ಗೊತ್ತುವಳಿಯನ್ನು ಸೂಚಿಸಿದರು. ಸರಕಾರಿ ಮೆಂಬರರು ಈ ಬಗ್ಗೆ ಬಜೆಟ್ಟಿನಲ್ಲಿ ಹಣ ಇಡಲಾಗಿದೆಯೆಂದೂ ನೇಮಿಸಲ್ಪಡುವ ಸಂದರ್ಶಕರು ಸ್ತ್ರೀ, ಅಥವ ಪುರುಷರೆಂಬುದು ಇನ್ನು ನಿಶ್ಚಯವಾಗಿಲ್ಲವೆಂದೂ ಹೇಳಿದರು. ಶ್ರೀ ಪಿ. ಐ ಬೆಳ್ಯಪ್ಪನವರು ಈ ಸಂದರ್ಶಕರು ಗ್ರಾಮಾಂತರಗಳಲ್ಲಿ ಸುತ್ತುವದಾದರೆ ಪುರುಷ ಸಂದರ್ಶಕರೇ ಉತ್ತಮವೆಂದು ಹೇಳಿದರು. ಠರಾವನ್ನು ಓಟಿಗೆ ಹಾಕಲಾಗಿ ಶ್ರೀ ಗಳಾದ ಯಂ. ಯಂ. ಬೆಳ್ಯಪ್ಪ, ಎನ್. ಸೋಮಣ್ಣ, ಕೆ. ಮಲ್ಲಪ್ಪ ಮತ್ತು ಚೌಡ್ಲು ಕಾಳಪ್ಪನವರು ಪರವಾಗಿಯೂ, ನಾಲ್ಕು ಸರಕಾರದ ಮೆಂಬರುಗಳು, ಕೆ. ದೇವಯ್ಯನವರು ವಿರೋಧವಾಗಿಯೂ, ಉಳಿದವರು ಯಾವ ಕಡೆಗೂ ಓಟು ಮಾಡದ್ದರಿಂದ ಠರಾವು ಬಿದ್ದುಹೋಯಿತು.

31. 'ವ್ಯವಸಾಯ ಇಲಾಖೆಗೆ ಸಹಾಯಕವಾಗಿ ಒಂದು ಸಲಹೆಕೊಡುವ ಸಮಿತಿಯನ್ನು ನೇಮಿಸಬೇಕೆಂದು' ಶ್ರೀ ಯಂ. ಯಂ. ಬೆಳ್ಯಪ್ಪನವರು ಸೂಚಿಸಿದರು. ಸರಕಾರವು ಈ ತತ್ವವನ್ನು ಒಪ್ಪಿಕೊಂಡ ಮೇಲೆ ಠರಾವು ಸೂಚಕರಿಂದ ಹಿಂದೆಗೆಯಲ್ಪಟ್ಟಿತು.

32 'ಎಗ್ರಿಕಲ್ಚರ್ ಆಫೀಸರ ಹುದ್ದೆಗೆ ಸ್ಥಳೀಯರನ್ನು ನೇಮಿಸಬೇಕೆಂದು ಶ್ರೀ ಸೋಮಣ್ಣನವರು ಒಂದು ಠರಾವನ್ನು ತಂದರು. ಅದಕ್ಕೆ ಯೋಗ್ಯರಾದ ಮತ್ತು ಅನುಭವವಿರುವ ದೇಶೀಯರು ಈಗ ಇಲ್ಲವೆಂದು ಸರಕಾರದವರು ವಿರೋಧಿಸಿದರು. ಠರಾವನ್ನು ಓಟಿಗೆ ಹಾಕಲಾಗಿ ಬಹುಮತದಿಂದ ಪಾಸಾಯಿತು.

33. ಸಹಕಾರಿ ಸೆಂಟ್ರಲ್ ಬ್ಯಾಂಕು ಮತ್ತು 15,000ಕ್ಕಿಂತಾ ಹೆಚ್ಚಿನ ಬಂಡವಾಳದ ಸಹಕಾರಿ ಸಂಸ್ಥೆಗಳನ್ನು ರಿಜಿಸ್ಟ್ರಾರವರು ತಮ್ಮ ಖಾಸಾ ಮೇರೆಯ ಆಡಿಟನ್ನು ಇಟ್ಟುಕೊಂಡು, ಚಾರ್ಟರ್ಡ್ ಆಡಿಟರಿಂದ ಆಡಿಟ ಮಾಡಿಸಬೇಕೆಂದು ಶ್ರೀ ಯಂ. ಯಂ. ಬೆಳ್ಯಪ್ಪನವರು ಸೂಚಿಸಿದರು. ಇದನ್ನು ಆಲೋಚಿಸಲಾಗುವದೆಂದು ಫೈನಾನ್ಸು ಮೆಂಬರರು ಜವಾಬಿತ್ತ ಮೇಲೆ ಠರಾವನ್ನು ಸೂಚಕರು ವಾಪಾಸು ತೆಗೆದುಕೊಂಡರು.

34. ಸಹಕಾರಿ ಕಾಲನಿಯೊಂದನ್ನು ಸ್ಥಾಪಿಸಬೇಕು ಎಂದು ಶ್ರೀ ಯಂ. ಯಂ. ಬೆಳ್ಯಪ್ಪನವರು ಸೂಚಿಸಿದರು. ಸ್ವಲ್ಪ ಚರ್ಚಿಸಿದ ನಂತರ ಸೂಚಕರು ಠರಾವನ್ನು ವಾಪಸು ತೆಗೆದುಕೊಂಡರು.

35. 'ಹೆಚ್ಚಿನ ತಡಮಾಡದೆ ಕೌನ್ಸಿಲು ಪ್ರೊಸೀಡಿಂಗ್ಸನ್ನು ಮೆಂಬರರಿಗೆ ತಲಪಿಸಬೇಕೆಂದು' ಶ್ರೀ ಎನ್. ಸೋಮಣ್ಣನವರು ಸೂಚಿಸಿದರು. ಇದಕ್ಕೆ ಗಮನ ಕೊಡಲಾಗುವದೆಂದು ಸರಕಾರಿ ಮೆಂಬರರು ಭರವಸೆ ಕೊಟ್ಟ ನಂತರ ಸೂಚಕರು ಠರಾವನ್ನು ವಾಪಾಸು ತೆಗೆದುಕೊಂಡರು.

ಅಧ್ಯಕ್ಷರು ಕೌನ್ಸಿಲು ಕಾರುಬಾರುಗಳಲ್ಲಿ ಸದಸ್ಯರು ಸಹಕರಿಸಿದ್ದಕ್ಕೆ ವಂದಿಸಿ, ತನ್ನ ಕಡೇ ಅಧ್ಯಕ್ಷತನವು ಇದೇ ಎಂದೂ ಹೇಳಿದರು. ಮೀಟಿಂಗು ಮಧ್ಯಾಹ್ನ 1-30 ಗಂಟೆಗೆ ಮುಕ್ತಾಯಗೊಂಡಿತು.

ಪಂಡಿತ ಮಾಳವೀಯರ ಸಂದೇಶ.

ತಿರುಪತಿಯಲ್ಲಿ ಕಳೆದ ತಾರೀಕು 21ರಲ್ಲಿ ಪ್ರಾರಂಭವಾದ ಅಖಿಲ ಭಾರತ 'ಓರಿಯಂಟಲ್ ಕಾನ್‌ಫರೆನ್ಸ್'ನ ಹತ್ತನೇಯ ಅಧಿವೇಶನದ ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿಕೊಂಡಿದ್ದ ಪಂಡಿತ ಮದನ ಮೋಹನ ಮಾಳವೀಯರಿಗೆ ಅನಾರೋಗ್ಯದ ದೆಸೆಯಿಂದ ಅಲ್ಲಿಗೆ ಬರಲು ಸಾಧ್ಯವಾಗದ್ದರಿಂದ ಅವರು ಬರೆದು ಕಳುಹಿಸಿದ ಅಧ್ಯಕ್ಷ ಭಾಷಣವನ್ನು ಸ್ವಾಗತ ಕಮಿಟಿಯ ಅಧ್ಯಕ್ಷರು ಓದಿದರು. ಅದು ಅವರ ಜ್ಞಾನ, ಅನುಭವ ದೇಶಭಕ್ತಿ, ಧರ್ಮ, ಶ್ರದ್ಧೆ, ಸಂಸ್ಕೃತಿ ಪಕ್ಷ ಪಾತಗಳ ಸಂಕೇತವಾಗಿದೆ.

'ಐಕ್ಯಮತ್ಯ ಜೀವನದ ಸಂಕೇತವೆನಿಸಿದ, ಮಧುರ ಜೀವನದ ಉದಾಹರಣೆನೆನಿಸಿದ ಭಾರತ ಜನಾಂಗದ ಜೀವನವು ಬೆಳೆಯಬೇಕು. ಹಿಂದು, ಮುಸಲ್ಮಾನ, ಜೈನ, ಬೌದ್ಧ, ಸಿಖ್ಖ, ಪಾರಸೀ, ಈಸಾಯಿ ಎಲ್ಲರೂ ಎಲ್ಲರ ಇತಿಹಾಸಗಳನ್ನೂ ಓದಬೇಕು. ಎಲ್ಲರೂ ಎಲ್ಲ ಸಂಸ್ಕೃತಿಗಳ ಸಾರವನ್ನೂ ಸವಿದು ಸುಖಪಡಬೇಕು. ಈ ಪರಿಷತ್ತಿನ ಆದರ್ಶವಾದರೂ ಭಾರತೀಯರಲ್ಲಿ ಪ್ರೀತಿ ಗೌರವಭಾವದಿಂದ ತುಂಬಿದ ಬೀಜವನ್ನು ಬಿತ್ತುವುದೇ ಆಗಬೇಕು. ಸುರಸ ಜೀವನ ನಡೆಸಲು ತಕ್ಕ ವಾತಾವರಣವನ್ನು ಕಲ್ಪಿಸುವುದಾಗಬೇಕು' ಎಂಬದಾಗಿ ಹೇಳಿದರು. ಇಂಥಾ ಸುರಸ ಮತ್ತು ಪ್ರೇಮಜೀವನ ವಾತಾವರಣವನ್ನು ಈ ಭಾರತ ಭೂಮಿಯಲ್ಲಿ ಮಾತ್ರವಲ್ಲ, ಜಗತ್ತಿನೊಳಗೆಲ್ಲ ನಿರ್ಮಿಸಬೇಕಾದರೆ ಸರ್ವತೋಮುಖವಾದ ಸಂಸ್ಕೃತಿಯ ಅಧ್ಯಯನ ಮಾಡಿ, ನಹಿಸ್ಸ್ರುತಿಯ ಸಾಧಕರೆನಿಸಿ, ಶ್ರೇಯಸ್ಸನ್ನು ಧಿಕ್ಕರಿಸಿ, ಪ್ರೇಯಸ್ಸನ್ನು ಸಾಧಿಸುವ ಮಹಾ ಘಟ್ಟವನ್ನು ನಮ್ಮ ಪಂಡಿತರು ಮುಟ್ಟಬೇಕಾಗಿದೆ; ಎಂದು ಸಾರಿ ಸಾರಿ ಹೇಳಿದರು. ಪರಿಶೋಧಕರನ್ನು ಕುರಿತು ಅವರು ಮಾಡಿದ ಮುಖ್ಯ ಸಲಹೆಗಳಿವು:-(1) ಭರತ ಖಂಡ ನಿಜವಾದ ಇತಿಹಾಸ ರಚನೆ, (2) ಭಾರತೀಯ ಸಂಶೋಧಕರು ಹಿಂದೂಸಾಗರ ದ್ವೀಪ ಸ್ತೋಮ, ಮಧ್ಯ ಆಸಿಯಾ, ಈಜಿಪ್ಟ್ ಮೊದಲಾದ ಕಡೆ ಸ್ವತಃ ಹೋಗಿ ಪರಿಶೋಧನೆಗಳನ್ನು ನಡಿಸಬೇಕು. (3) ಮಧ್ಯ ಯುಗದ ಭಾರತ ದೇಶ ಭ. ಷಾ ಗ್ರಂಥಗಳ ಸಾರವನ್ನೆಲ್ಲಾ ಹಿಂದೀ ಮತ್ತು ಆಂಗ್ಲ ಭಾಷೆಗಳಿಗೆ ಪರಿವರ್ತಿಸಿ, ವಿಶಾಲ ಜಗತ್ತಿಗೆ ಅವುಗಳ ಪರಿಚಯವನ್ನು ಮಾಡಿಕೊಡಬೇಕು. (4) ದೇಶದ ಮೂಲೆ ಮೂಲೆಗಳಲ್ಲೆಲ್ಲ ಭಾರತೀಯರ ಪ್ರಾಚೀನ ವೈಭವದ ಸ್ಮಾರಕವಾಗಿರುವ (ಮ್ಯೂಸಿಯಂ) ವಸ್ತು ಪ್ರದರ್ಶ ಶಾಲೆಗಳನ್ನು ತೆರೆಯಬೇಕು.'

ರಾಷ್ಟ್ರೀಯ ಸಪ್ತಾಹ.

(ತಾ.6-4-40ರಿಂದ 13-4-4ರ ವರೆಗೆ)

ಪ್ರತಿ ವರ್ಷ ಏಪ್ರಿಲ್ 6ರಿಂದ 13ನೇ ತಾರೀಕಿನ ವರೆಗೆ ಏಳು ದಿವಸಗಳನ್ನು ರಾಷ್ಟ್ರೀಯ ವಾರವೆಂದು 1919ನೇ ಸಾಲಿನಿಂದ ಇಡೀ ಹಿಂದೂಸ್ಥಾನವು ಆಚರಿಸುತ್ತಾ ಬಂದಿದೆ. ಪ್ರತಿ ಸಲ ಈ ಸಮಯದಲ್ಲಿ ಸ್ವಾತಂತ್ರ್ಯ ಗಳಿಸುವ ನಮ್ಮ ಧ್ಯೇಯವನ್ನು ಪುನರುಚ್ಚರಿಸುತ್ತಾ ಹೋರಾಟದ ಸಿದ್ಧತೆಯನ್ನು ಮಾಡುತ್ತಾ ಬರಲಾಗಿದೆ. ಈ ಕಾರಣದಿಂದ ಈ ಸಪ್ತಾಹದ ಆಚರಣೆಯಲ್ಲಿ ವಿಧಾಯಕ ಕಾರ್ಯಕ್ರಮಗಳಿಗೆ ಪ್ರಾಮುಖ್ಯ ಸ್ಥಾನ ಕೊಡಲಾಗಿದೆ. ಬರಲಿರುವ ಹೋರಾಟ ಮತ್ತು ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮವನ್ನು ಯಶಸ್ವಿ ರೀತಿಯಲ್ಲಿ ಸಾಗಿಸಿದ ಹೊರತು ತಾವು ಯಾವುದೇ ಹೋರಾಟವನ್ನು ಪ್ರಾರಂಭಿಸಲು ತಯಾರಿಲ್ಲವೆಂಬದು ಗಾಂಧಿಜೀಯವರ ಸ್ಪಷ್ಟ ಅಭಿಪ್ರಾಯ. ಇವುಗಳಿಂದ ಈ ಸಲದ ರಾಷ್ಟ್ರೀಯ ಸಪ್ತಾಹಕ್ಕೆ ಹೆಚ್ಚಿನ ಮಹತ್ವ ಉಂಟಾಗಿರುವದು. ರಾಷ್ಟ್ರೀಯ ವಾರವನ್ನು ಯೋಗ್ಯ ರೀತಿಯಿಂದ ಆಚರಿಸುವದರ ಕುರಿತು ಗಾಂಧಿಜೀಯವರು ತಮ್ಮ 23-3-40ರ 'ಹರಿಜನ'ದಲ್ಲಿ ಕೆಳಗಿನಂತೆ ಬರೆದಿರುವರು.

'1919ನೇ ಸಾಲಿನ ಏಪ್ರಿಲ್ 6ನೇ ತಾರೀಕಿನ ದಿನ ಹಿಂದೂಸ್ಥಾನದ ಜನತೆಯು ತನ್ನ ಶಕ್ತಿಯನ್ನು ಅರಿತುಕೊಂಡಿತು. ಅಂದೇ ಸವಿನಯ ಕಾಯಿದೇ ಭಂಗವು ಪ್ರಾರಂಭವಾಗಿದ್ದವು. ಹಿಂದೆ ಎಂದೂ ತೋರಿ ಬಾರದ ಭಾಂಧವ್ಯವು ಹಿಂದೂ-ಮುಸಲ್ಮಾನರಲ್ಲಿ ತೋರಿ ಬಂತು. ಲಕ್ಷಾವಧಿ ಜನರು ಸ್ವದೇಶ ವ್ರತ ಕೈಕೊಂಡರು. ಅದೇ ಏಪ್ರಿಲ 13ಕ್ಕೆ ಜಲಿಯನ್‌ವಾಲಾಬಾಗಿನ ಹತ್ಯಾಕಾಂಡವಾಗಿ ಹಿಂದೂ-ಮುಸಲ್ಮಾನ-ಸೀಖರ ನೆತ್ತರವು ಒಂದುಗೂಡಿ ಹರಿಯಿತು. ರಾಷ್ಟ್ರೀಯ ವಾರವು ಅಂದಿನಿಂದ ಆತ್ಮಶುದ್ಧಿಯ ವಾರವೆಂದು ಆಚರಿಸಲ್ಪಡುತ್ತಿರುವದು. ಈ ಅವಧಿಯಲ್ಲಿ ಖಾದಿ ಹಾಗೂ ಗ್ರಾಮೋದ್ಯೋಗದ ಸರಕುಗಳನ್ನು ಸುಸಂಘಟಿತ ರೀತಿಯಿಂದ ಏರ್ಪಡಿಸುವದುಂಟು. ಖಾದಿ ಹಾಗೂ ಇತರ ಗ್ರಾಮೋದ್ಯೋಗ ಕೈಗಾರಿಕೆಗಳನ್ನುಳಿದು ಇನ್ನಾವುದರಿಂದಲೂ ಸಾಮಾನ್ಯ ಜನತೆಗೆ ಸ್ವರಾಜ್ಯವು ದೊರೆಯಲಾರದೆಂದು ಹಿಂದೆ ಎಷ್ಟೋ ಸಲ ಹೇಳಿರುವೆನು. ಈಗಲಾದರೂ ಅದನ್ನೇ ಸಾರಿ ಹೇಳುವೆನು. ವಿಧಾಯಕ ಕಾರ್ಯಕ್ರಮವನ್ನು ಸತತವಾಗಿ ತತ್ಪರತೆಯಿಂದ ಮುಂದುವರಿಸದಿದ್ದರೆ ಶಾಂತಿಮಯ ಸತ್ಯಾಗ್ರಹವು ಸಾಧಿಸಲಾರದು. ಪ್ರತಿದಿನ ಕಾರ್ಯ ಕರ್ತರಿಗೆ ಸಾಮಾನ್ಯ ಜನತೆಯೊಡನೆ ಸಂಬಂಧ ಬರುವಂಥಾ ಯಾವುದೊಂದು ವಿಧಾಯಕ ಕಾರ್ಯಕ್ರಮವನ್ನು ಕೈಕೊಳ್ಳದೆ ನಮ್ಮ ಜೀವನವು ಜನತೆಯ ಜೀವನದೊಡನೆ ಬೆರೆಯುವದು ಅಸಕ್ಯ. ಆದುದರಿಂದ ಹಂಬಲವಿದ್ದ ಎಲ್ಲಾ ಕಾರ್ಯಕರ್ತರೂ ಒಳ್ಳೆ ನಿಷ್ಠೆಯಿಂದ ಖಾದಿ ಹಾಗೂ ಗ್ರಾಮ ಕೈಗಾರಿಕೆಯ ವಸ್ತುಗಳ ಮಾರಾಟವನ್ನು ಹೆಚ್ಚಿಸಿ ಮುಂಬರುವ ರಾಷ್ಟ್ರೀಯ ಸಪ್ತಾಹವನ್ನು ಜರಗಿಸುವರೆಂದು ನನ್ನ ನಂಬಿಕೆ.'

ಗಾಂಧಿಜೀಯವರ ಮೇಲಿನ ಮಹತ್ವದ ವಾಕ್ಯಗಳನ್ನು ಮುಂದಿಟ್ಟುಕೊಂಡು ಈ ಸಲದ ರಾಷ್ಟ್ರೀಯ ಸಪ್ತಾಹವನ್ನು ಸ್ಥಳೀಯ ಸಮಿತಿಗಳು ನಿರ್ಧರಿಸಬೇಕು. ರಾಷ್ಟ್ರೀಯ ಸಪ್ತಾಹದ ಆಚರಣೆಯಲ್ಲಿ ಜನರು ಹೆಚ್ಚು ಹೆಚ್ಚು ಭಾಗ ವಹಿಸುವಂತೆ ಹಾಗೂ ಪ್ರಾಂತದಲ್ಲಿನ ಕಾಂಗ್ರೆಸ್‌ಸಮಿತಿಗಳು, ಕಾಂಗ್ರೆಸ್ಸಿಗರು ಮತ್ತು ಸಾರ್ವಜನಿಕರು ರಾಷ್ಟ್ರೀಯ ವಾರವನ್ನು ಅತ್ಯುತ್ತಮ ರೀತಿಯಿಂದ ಸಾಂಗಗೊಳಿಸಬೇಕೆಂದು ಸವಿನಯ ವಿನಂತಿ.

ಸಪ್ತಾಹದ ಆಚರಣೆಯ ವಿವರವಾದ ವರದಿಯನ್ನು ಪ್ರಾಂತೀಕ ಕಚೇರಿಗೆ ತಾ. 20-4-40ರೊಳಗೆ ಮುಟ್ಟುವಂತೆ ಕಳುಹಿಸಿಕೊಡಲು ತಪ್ಪಬಾರದು.

ಚನ್ನಬಸಪ್ಪ ಅಂಬಲಿ,
ಕಾರ್ಯದರ್ಶಿ,
ಕರ್ನಾಟಕ ಪ್ರಾಂತೀಕ ಕಾಂಗ್ರೆಸ್‌ಕಮಿಟಿ.
ಧಾರವಾಡ.

ವೀರಾಜಪೇಟೆನಾಡು ಮಲೆ ಮಹದೇವರ ಜಾನುವಾರು ಮತ್ತು ವಸ್ತು ಪ್ರದರ್ಶನ.

ತಾ. 16-3-40 ರಲ್ಲು ಬೆಳಿಗ್ಗೆ 7 ಗಂಟೆಗೆ ರಾಷ್ಟ್ರಧ್ವಜಾರೋಹಣವಾಯಿತು.

ಮಧ್ಯಾಹ್ನ 2 ಗಂಟೆಗೆ ದಕ್ಷಿಣ ಕೊಡಗಿನ ಸುಬೇದಾರರ ಅಧ್ಯಕ್ಷತೆಯಲ್ಲು ಪ್ರದರ್ಶನ ಕಮಿಟಿ ಅಧ್ಯಕ್ಷರು ತಮ್ಮ ಹೊಸದಾದ ಪ್ರದರ್ಶದ ನ್ಯೂನತೆಗಳನ್ನು ಅಧ್ಯಕ್ಷರಿಗೂ ನೆರೆದಿರುವ ಮಹಾಜನರುಗಳಿಗೂ ನಿವೇದಿಸಿದರು. ಅಧ್ಯಕ್ಷರ ಭಾಷಣ-ಪಶುಪಾಲನೆ, ಅವನ್ನು ಅನುಸರಿಸಿ ಕೃಷಿ. ಪಶುಪಾಲನೆಗೂ ಕೃಷಿಗೂ ನಿಕಟ ಬಾಂಧವ್ಯವಿಲ್ಲದಿದ್ದರೆ ದೇಶದ ಅಭ್ಯುದಯವೇ ಇಲ್ಲವೆಂಬದಾಗಿಯೂ, ದೇಶಭ್ಯುದಯವು ದನಗಳನ್ನು ಸಾಕುವವರಲ್ಲಿಯೂ ಕೃಷಿಯಲ್ಲಿಯೂ ಇದೆಯೆಂಬ ಸಾರಾಂಶವನ್ನೂ ವಿವರಿಸಿ ಹೇಳಿದರು. ತಮಗೆ ಸಮಯವಿಲ್ಲದರಿಂದ ಸಭೆಯವರಿಗೆ ಬೇರೊಬ್ಬ ಅಧ್ಯಕ್ಷರನ್ನು ಆರಿಸುವಂತೆ ಹೇಳಿ ಆರಿಸುವವರಿಗೆ ಅಲ್ಲೇ ಇದ್ದು, ಹೊರಟು ಹೋದರು. ಸಭೆಯ ಚುನಾಯಿತ ಅಧ್ಯರಾದ ಮೆ. ಶ್ರೀ. ಚೋಂಚಿರ ಬಿದ್ದಯ್ಯನವರ ಅಧ್ಯಕ್ಷತೆಯಲ್ಲು ಡಾಕ್ಟರು. ಮೆ. ಶ್ರಿ ಕೆ. ವೀರಪ್ಪಗೌಡ, ಜಿ. ಯಂ. ವಿ. ಸಿ. ಯವರು ದನಗಳ ಪೋಷಣೆ, ಪ್ರದರ್ಶನದಿಂದ ಆಗುವ ಪ್ರಯೋಜನ, ದನಗಳನ್ನು ಸಾಕುವ ಕ್ರಮ, ಕೊಟ್ಟಿಗೆ, ದನಗಳ ತಳಿಯ ಬದಲಾವಣೆ ಮುಂತಾದ ವಿಷಯಗಳನ್ನು ಕುರಿತು ಸ್ವಾರಸ್ಯವಾದ ಭಾಷಣ ಮಾಡಿದರು. ಶ್ರೀ ಯು. ಬಿ. ದೇವಯ್ಯನವರು ವ್ಯಾಕಾರದ ಉದ್ದೇಶವನ್ನು ಕುರಿತು ಭಾಷಣ ಮಾಡಿದರು. ಮೆ. ಶ್ರಿ. ಪಳಗಂಡ ಅಪ್ಪಯ್ಯನವರು ವೇದಾಂತ ವಿಷಯದಲ್ಲು ದೀರ್ಘ ಕಾಲ ಮನಸ್ಸು ಆಕರ್ಷಿಸುವಂತೆ ಅನೇಕ ತತ್ವಬೋಧನೆಗೊಳಗೊಂಡ ಉಪನ್ಯಾಸವನ್ನು ಮಾಡಿದರು. ಮಾ. ಶ್ರಿ. ಟಿ. ಯಂ. ಶ್ರೀನಿವಾಸಶಾಸ್ತ್ರಿಗಳು ಕಬೀರದಾಸ ಎಂಬ ಹರಿಕತೆಯನ್ನು ಮಾಡಿ ಜನರ ಮನಸಂತೋಷಪಡಿಸಿದರು.

ತಾ. 17-3-40 ರಲ್ಲು ಬೆಳಿಗ್ಗೆ 9½ ವರೆಗೆ ಶ್ರೀ ಎ. ಯಸ್. ರಾಮಯ್ಯನವರ ಅಧ್ಯಕ್ಷತೆಯಲ್ಲು ಮೆ. ಶ್ರಿ ಐ. ಪಿ. ಕಾರ್ಯಪ್ಪನವರು ಗ್ರಾಮ ಕೈಗಾರಿಕೆಯ ವಿಷಯವಾಗಿ ಅನೇಕ ವಿಷಯಗಳನ್ನು ಒಳಗೊಂಡ ಯುಕ್ತವಾದ ಭಾಷಣವನ್ನು ಮಾಡಿದರು. ಶ್ರೀ ಯನ್. ಚಿಣ್ಣಪ್ಪನವರು ಇದನ್ನು ಪುಷ್ಟೀಕರಿಸಿ ಮಾತನಾಡಿದರು. ಅಪರಾಹ್ನ 2 ಗಂಟೆಗೆ ಶ್ರೀಮತಿ ಜಾನಕಮ್ಮನವರ ಸಂಗೀತ ಕಚೇರಿ ಆಯಿತು.

ತಾ. 18-3-40ರಲ್ಲು ಬೆಳಿಗ್ಗೆ 11 ಗಂಟೆಗೆ ಶ್ರೀ ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಡಾಕ್ಟರ್ ಶ್ರೀ. ಎ. ಡಬ್ಲ್ಯು. ಕಾಳಯ್ಯನವರು ಆರೋಗ್ಯ ವಿಷಯವಾಗಿಯೂ, ಗರ್ಭಿಣಿ ಸ್ತ್ರೀಯರ ವಿಷಯವಾಗಿಯೂ, ಮಕ್ಕಳ ಪೋಷಣೆ ವಿಷಯವಾಗ್ಗಿಯೂ, ಅನೇಕ ತಿಳುವಳಿಕೆ ಹೇಳಿದರು. ನಂತರ ಶ್ರೀ ಬಿ. ಯಂ. ಕಾರ್ಯಪ್ಪನವರು ದೇಶದ ಬಡತನ ಮತ್ತು ವಿದ್ಯಾಭಿವೃದ್ಧಿ ಕುರಿತು ಕೊಡಗು ಭಾಷೆಯಲ್ಲು ಭಾಷಣ ಮಾಡಿದರು. ನಂತರ ಶ್ರಿ. ಪಿ. ಯಂ. ಚಂಗಪ್ಪನವರು ಗ್ರಾಮಾಭಿವೃದ್ಧಿಯ ಕುರಿತು ಗ್ರಾಮದವರು ಮಾಡಬೇಕಾದ ಅನೇಕ ಕರ್ತವ್ಯಗಳಲ್ಲಿನ ನ್ಯೂನತೆಗಳು ಇರುವದನ್ನೂ ವಿವರವಾಗಿ ವಿವರಿಸಿ ಅವರ ನಿವಾರೋಣಪಾಯಗಳನ್ನು ತಿಳಿಸಿದರು. ಅಧ್ಯಕ್ಷ ಶ್ರೀ ಪಿ. ಐ. ಬೆಳ್ಯಪ್ಪನವರು ಹರಿಜನೋದ್ಧಾರದ ವಿಷಯ ದೀರ್ಘವಾಗಿಯೂ, ಸ್ವಾರಸ್ಯವಾಗಿಯೂ ಭಾಷಣ ಮಾಡಿದಲ್ಲದೆ ಪ್ರದರ್ಶದ ಕಮಿಟಿ ಮತ್ತು ಪ್ರಸಿಡೆಂಟರಿಗೆ ವಂದನೆಗಳನ್ನು ಅರ್ಪಿಸಿ ಇನ್ನೂ ಮುಂದಕ್ಕೂ ಸಹ ಪ್ರದರ್ಶನವನ್ನು ಯಶಸ್ವಿಯಾಗಿ ನಡಿಸಿಕೊಂಡು ಹೋಗಬೇಕೆಂದು ಹೇಳಿ ಸಭೆಯನ್ನು ಬರಕಾಸ್ತು ಮಾಡಿದರು.

ಅಪರಾಹ್ನ ಮೂರುವರೆ ಗಂಟೆಗೆ ಸರಿಯಾಗಿ ರಾ. ಸಾ. ಯಂ. ಯಸ್. ಮಂದಣ್ಣನವರ (ಅಸಿಸ್ಟೆಂಟು ಕಮಿಷನರು) ಅಧ್ಯಕ್ಷತೆಯಲ್ಲು ಉತ್ತಮವಾದ ಜಾನುವಾರು ಮತ್ತು ವಸ್ತುಗಳಿಗೆ ಇನಾಮುಗಳನ್ನು ಹಂಚಿ ಇನ್ನು ಮುಂದಕ್ಕೂ ಸಹ ಇದೇ ರೀತಿ ಪ್ರದರ್ಶನವನ್ನು ಸುಗಮವಾಗಿ ನಡಿಸಿಕೊಂಡು ಹೋಗಬೇಕೆಂದು ಅವರು ಅನೇಕವಾದ ತಿಳುವಳಿಕೆಗಳನ್ನು ಹೇಳಿದರು. ನಂತರ ಸಭೆಯು ಬರಕಾಸ್ತಾಯಿತು.

ವಿ. ಆರ್. ತಮ್ಮಯ್ಯ,
ಗೌ. ಕಾರ್ಯದರ್ಶಿ.

ಶಾಂತಿ ಜೀವನಕ್ಕೆ ನೂಲುವುದೇ ಹಾದಿ.

ಕಳೆದ ಅಖಿಲ ಭಾರತ ಮಹಿಳಾ ಸಮ್ಮೇಳನದಲ್ಲಿ ಒಂದು ಮಹತ್ವದ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟದ್ದು ಅಭಿನಂದನೀಯ ವಿಷಯ.

'ಬಡತನದಲ್ಲಿರುವ ಭಗಿನಿಯರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಖಾದಿಯು ಒಂದು ಮುಖ್ಯ ಸಾಧನ'ವೆಂಬ ನಿರ್ಣಯದಲ್ಲಿ ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿ ತಮ್ಮ ಮನೆ ಮಠಗಳಲ್ಲಿಯೂ ಖಾದಿಯನ್ನೇ ಉಪಯೋಗಿಸುವಂತೆ ಪ್ರಮಾಣ ಮಾಡಿ ಅದರ ಪ್ರಚಾರ ಹೆಚ್ಚುವಂತೆ ಮಾಡಬೇಕೆನ್ನುವದೇ ಆ ಮಹತ್ವದ ನಿರ್ಣಯ.

ಮಾಡಿದ ನಿರ್ಣಯಗಳನ್ನು ಮರೆವುದು ಸಾಮಾನ್ಯವಾಗಿ ಎಲ್ಲ ಕಡೆಯೂ ಕಂಡು ಬರುವುದು. ಕೊಟ್ಟ ಭಾಷೆಯನ್ನೂ, ತೊಟ್ಟ ಪ್ರಮಾಣವನ್ನೂ ಮರೆಯುವ ಕಾಲವಿದು. ಅದಕ್ಕಾಗಿ ಶ್ರೀಮತಿ ರಾಜಕುಮಾರಿ ಅಮೃತ ಕೌರ್‌ರವರು, ಮಹಿಳೆಯರು ತಾವು ಕೈಕೊಂಡ ನಿರ್ಣಯವನ್ನು ಆಚರಣೆಗೆ ತಂದು ಭಾರತದ ಲಕ್ಷಾಂತರ ಬಡ ಭಗಿನಿಯರ ಜೀವನವನ್ನು ಸಹನೀಯವನ್ನಾಗಿ ಮಾಡಲೆಂದು 3 ಸಾವಿರ ತ್ಯಾಗಿ ಮಹಿಳೆಯರ ಪಡೆಯೊಂದನ್ನು ಕೂಡಿ ಸಲೆತ್ನಿಸಿದ್ದಾರೆ.

ವಿರಾಮ ವರ್ಗಕ್ಕೆ (ಸಿರಿವಂತ ಮನೆತನಕ್ಕೆ) ಸೇರಿದ ಮಹಿಳೆಯರು ಸ್ತ್ರೀ ಸಹಜವಾದ ತ್ಯಾಗವನ್ನು ತೋರಿಸಿ ತಮ್ಮ ವಿರಾಮ ವೇಳೆಯಲ್ಲಿ ನೂಲುವದನ್ನು ಕೈಗೊಳ್ಳಲಿ. ನೂಲುವದದೇ ಜೀವನವಾಗಿ ವುಳ್ಳ 7 ಲಕ್ಷ ಗ್ರಾಮಗಳ ಲಕ್ಷಾಂತರ ಮಹಿಳೆಯರಿಗೆ ಒಂದು ಹೊತ್ತು ಅನ್ನ ದೊರಕುವಂತಾಗುವುದೆಂಬುವುದಕ್ಕೆ ಈ ಕೆಳಗಿನ ಅಂಕೆ ಅಂಶಗಳೇ ಸಾಕ್ಷಿ.

ಒಬ್ಬ ಹೆಂಗಸು ದಿನಕ್ಕೆ ಒಂದು ಗಂಟೆಯಂತೆ 360 ದಿನಗಳಲ್ಲಿ (ಗಂಟೆಗೆ 280 ಗಜ ನೂಲಬಹುದೆಂದು ಸರಾಸರಿ ತೆಗೆದುಕೊಂಡರೆ) 360 ಗಂಟೆ ನೂಲಬಹುದು. ವಾರಕ್ಕೆ 2½ ಲಡಿ ನೂತರೆ 120 ಲಡಿ ದಾರ ನೂಲಬಹುದು. ಒಂದು ತಿಂಗಳಿನ ಶ್ರಮದ ಬೆಲೆ 12 ಆಣೆಯಿಂದ 14 ಆಣೆಯಾಗುತ್ತೆ. ವಿರಾಮ ವರ್ಗಕ್ಕೆ ಸೇರಿದ 3 ಸಾವಿರ ತ್ಯಾಗ ಬುದ್ಧಿ ಅಕ್ಕ ತಂಗಿಯರು ಮೇಲೆ ಹೇಳಿದಂತೆ ನೂತಲ್ಲಿ ತಿಂಗಳಿಗೆ 2,250 ರೂ. ನಂತೆ ವರ್ಷಕ್ಕೆ 27,900 ರೂ. ಬೆಲೆ ಬಾಳುವ ನೂಲನ್ನು ನೂತಂತಾಗುವುದು. (ಒಂದು ಗಂಟೆ ನೂಲುವ ಬಡ ಹೆಂಗಸಿಗೆ ಕೊಡುವ ಕೂಲಿ ಕಾಲಾಣೆ) ಆದರೆ ವಿರಾಮ ವರ್ಗಕ್ಕೆ ಸೇರಿದ ಮಹಿಳೆಯರು ಅಷ್ಟು ಬೆಲೆ ಬಾಳುವ ನೂಲನ್ನು ಉಚಿತವಾಗಿ ನೂತದ್ದರಿಂದ ಅದಕ್ಕೆ ಕೂಲಿ ಕೊಡಬೇಕಾಗಿಲ್ಲ. ಅದ್ದರಿಂದ ಅಷ್ಟರಷ್ಟು ಖಾದಿಯ ಬೆಲೆ ಕಡಿಮೆಯಾಗುದು.

'ನೂಲುವ ಕಷ್ಟವೇಕೆ? ಆ ನೂಲುವುದರಿಂದ ಬರುತಿದ್ದ ಹಣವಷ್ಟು ಚಂದಾ ಮೊಬಲಗನ್ನು ಕೊಟ್ಟರಾಗುವುದಿಲ್ಲವೇ?' ಎಂದು ಕೆಲವು ಮಹಿಳೆಯರು ಕೇಳಿದ್ದಕ್ಕೆ ಶ್ರೀಮತಿ ರಾಜಕುಮಾರಿಯವರು 'ನೂಲಲಿಕ್ಕೆ ಆಗದಿದ್ದವರು ಹಣ ಸಹಾಯ ಮಾಡಿದರೇನೂ ಅಭ್ಯಂತರವಿಲ್ಲ; ಆದರೆ ಬಡವರ ಕಷ್ಟ ಸುಖಗಳನ್ನರಿಯಲು ಶ್ರಮವಹಿಸಿ ಕೈಕೆಲಸ ಮಾಡುವುದರಲ್ಲಿರುವ (ಅವರಲ್ಲಿಯೂ ಸ್ತ್ರೀ ಕಾರ್ಯ) ಕಾರ್ಯ ಗೌರವ ತಿಳಿಯಲು, ಸ್ವಯಂ ರಕ್ಷಣೆ, ಸ್ವಾವಲಂಬನೆ ಮೊದಲಾದವನ್ನು ಪಡೆದು, ಆನಂದ ಪಡಲು, ಅಹಿಂಸೆ, ಸುಖವನ್ನರಿಯಲು ಸ್ವಹಸ್ತಗಳಿಂದ ನೂಲುವುದರ ವಿನಹ ಬೇರೆ ಮಾರ್ಗವೇ ಇಲ್ಲ' ಎಂದಿರುವರು.

ಅವರ ಪ್ರತಿಯೊಂದು ಮಾತು ಸತ್ಯ. ವಿಶ್ವ ವಿದ್ಯಾ ನಿಲಯದ ಅನೇಕ ಯುವತಿಯರು 'ನಾವು ಯಾವ ರೀತಿ ರಾಷ್ಟ್ರ ಸೇವೆ ಮಾಡಬಲ್ಲೆವು' ಎಂದು ಶ್ರೀಮತಿ ಕೌರ್‌ರವರನ್ನು ಕೇಳಿದರಂತೆ. ತ್ಯಾಗ ಬುದ್ಧಿಯಿಂದ ಕೂಡಿದವರಾಗಿ ದಿನಕ್ಕೊಂದು ಗಂಟೆ ನೂಲುವ ಮಹತ್ಕಾರ್ಯಕ್ಕೆ ಕೈ ಹಾಕುವದೇ ಸ್ವರಾಜ್ಯ ಸಂಗ್ರಾಮ ಸಹ್ರೋತ್ಕೃಷ್ಟ ಮಾರ್ಗವಲ್ಲವೇ?

ಮಾತೃಭೂಮಿಗೆ ತಮ್ಮ ಸೇವೆಯನ್ನು ಶಕ್ತ್ಯಾನುಸಾರ ಸಲ್ಲಿಸಬೇಕೆಂದು ಹಂಬಲಿಸುವ ಈ ನೇಕ ತಂಗಿಯರು ಅವರ ಜೀವನದ ಆಡಂಬರ ಬಗೆಗೆ ಒಲಿದು ಭಂಗವಮುಕ್ತರುವರು. ಸರಳ ಜೀವನದ ಸುಖ ಶಾಂತಿಗಳನ್ನು ಕಾಣಲು 'ನೂಲುವ ಸೇವೆಯು' ಮಹಾ ಸಾಧನವಾಗುವುದರಲ್ಲಿ ಸಂಶಯವಿಲ್ಲ. ಆಡಂಬರ ಜೀವನ, ದಾಂಭಿಕ ಜೀವನ, ಕೃತಕ ಜೀವನದಿಂದ ಜೀವಕ್ಕೆಂದೂ ಶಾಂತಿ ಇಲ್ಲ. ನಗರ ಜೀವನವೇ ನಾಗರೀಕ ಜೀವನ; ಕೃತಕ ಜೀವನದಿಂದ ಸ್ವಲ್ಪ ಕಾಲವಾದರೂ ದೂರವಿದ್ದು ತನು ಮನಗಳಿಗೆ ಶಾಂತಿಯನ್ನೀಯಬೇಕೆಂದಪೇಕ್ಷಿಸುವವರು ದಿನಕ್ಕೊಂದು ಗಂಟೆಯಾದರೂ ನೂಲುವ ಅಭ್ಯಾಸವನ್ನಿಟ್ಟುಕೊಳ್ಳಬೇಕು. ಅದರಿಂದ ಭಾರತವನ್ನು ಬಡತನದಿಂದ ಉದ್ಧರಿಸಲು ಸಹಾಯಕರಾಗುವದಲ್ಲದೆ ಆತ್ಮಕ್ಕೂ ಶಾಂತಿ ಸುಖ ದೊರೆಯುತ್ತದೆ.

'ನಿತ್ಯ ನೂಲುವ 3000 ದೇಶ ಸೇವಕಿಯರ ಪಡೆಯೊಂದನ್ನು ಸೇರಿಸಬೇಕೆಂಬ ಉದ್ದೇಶವನ್ನು ಯಶಸ್ವಿಯಾಗುವಂತೆ ಆಶೀರ್ವದಿಸಬೇಕು' ಎಂದು ಶ್ರೀಮತಿಯವರು ಮಹಾತ್ಮ ಗಾಂಧಿಯವರನ್ನು ಕೇಳಿಕೊಂಡಿದ್ದಾರೆ.

ಮಹಾತ್ಮರು ರಾಜಕುಮಾರಿಯವರ ಆಶಯಕ್ಕೆ ತಮ್ಮ ಹೃತ್ಪೂರ್ವಕ ಆಶೀರ್ವಾದವನ್ನೀಯುತ್ತಾ 'ಹೊಟ್ಟೆಗಿಲ್ಲದೆ ಸಾಯುತ್ತಿರುವ ಕೋಟ್ಯಾಂತರ ಜೀವಿಗಳಿಗೆ ಸೇವೆ ಸಲ್ಲಿಸಲು ಮೂರು ಸಾವಿರ ಸೋದರಿಯರಾದರೂ ಮುಂದೆ ಬರದೆ ಹೋದರೆ ನಾಚಿಗೇಡಾಗುತ್ತದೆ' ಎಂದಿರುವರು.

20 ಕೋಟಿ ಸ್ತ್ರೀಯರಿಂದ ಸಮೃದ್ಧಿಯಾಗಿರುವ ಭಾರತನಲ್ಲಿ ಕೇವಲ ಮೂರು ಸಾವಿರ ಮಂದಿ ಮಹಿಳೆಯರಾದರೂ ಮುಂದೆ ಬಾರದಿದ್ದಲ್ಲಿ ಸ್ವರಾಜ್ಯ ಸಂಪಾದನೆಯ ಮಹತ್ಕಾರ್ಯದಲ್ಲಿ ಮಹಿಳೆಯರು ಭಾಗವಹಿಸುವದು ನಿಜವೇ? ಸ್ವತಂತ್ರ ರಾಷ್ಟ್ರವೆನಿಸಿಕೊಂಡು ಭಾರತವು ತಲೆ ಎತ್ತಿ ವಿಶ್ವದಲ್ಲಿ ಮೆರೆಯುವುದು ಸಾಧ್ಯವೇ?

'ಎ. ಕ.'

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 30-3-40ರಲ್ಲು ಬ್ಯಾಂಕ್ ಆಫೀಸಿನಲ್ಲು ಶ್ರೀಯುತ ಸಂಪಾದಕ ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹಾಜರಿದ್ದ ಡೈರೆಕ್ಟರುಗಳು-(1) ಮಿ. ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು), (2) ರಾ. ಬಾ. ಸಿ ದೇವಯ್ಯನವರು (ಖಜಾಂಚಿ), (3) ಮಿ. ಗಳಾದ ಐ. ಪಿ. ಕಾರ್ಯಪ್ಪನವರು, (4) ಕೆ. ಎಂ. ಕುಶಾಲಪ್ಪನವರು, (5) ಸಿ. ಜಿ. ಮುದ್ದಮ್ಮಯ್ಯನವರು, (6) ಬಿ. ಸಿ. ಮಾಚಯ್ಯನವರು, (7) ಯಸ್. ಯನ್. ರಾಮಶೆಟ್ಟಿಯವರು, (8) ಕೆ. ಕೆ. ಗಣಪತಿಯವರು, (9) ಸಿ. ಯಂ. ಪೂಣಚ್ಚನವರು, (10) ಪಿ. ಸಿ. ಕರುಂಬಯ್ಯನವರು, (11) ಯಂ. ಯಸ್. ನಾಣಯ್ಯನವರು, (12) ಸಿ. ಜಿ. ಐಯ್ಯಪ್ಪನವರು, (13) ಕೆ. ಸಿ. ಕರುಂಬಯ್ಯನವರು (ಗೌ. ಕಾರ್ಯದರ್ಶಿ)

ಗೈರುಹಾಜರಾದವರು- (1) ಮಿ. ಗಳಾದ ಯಂ ಸಿ ದೇವಯ್ಯನವರು, (2) ಹೆಚ್. ಯಂ. ಪುಟ್ಟಣ್ಣನವರು.

(1) ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ಒಪ್ಪಲಾಯಿತು.

2. ಈ ಕೆಳಗಿನ ಸೊಸೈಟಿಗಳಿಗೆ ಸಾಲ ಮಂಜೂರಾಯಿತು. (1) ರವಿವಾರಸಂತೆ ಕ್ರಿಶ್ಚನ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ರೂ. 500, (2) ಕೋತೂರು ಸಂಘಕ್ಕೆ ರೂ 1,500, (3) ಮತ್ತೂರು ಸಹಕಾರ ಸಂಘಕ್ಕೆ ರೂ. 1,800, (4) ಹಳಿಗಟ್ಟು ಸಂಘಕ್ಕೆ ರೂ. 3,600, (5) ಕೈಕೇರಿ ಸಂಘಕ್ಕೆ ರೂ. 2000, (6) ಕೈಕೇರಿ ಹರಿಜನ ಸಂಘಕ್ಕೆ ರೂ. 300, (7) ಬೇಗೂರು ಸಂಘಕ್ಕೆ ರೂ. 3000, (8) ಕೊಡಗು ಮುಸ್ಲಿಂ ಸಂಘಕ್ಕೆ ರೂ. 1000 (9) ಕೊಣಗೇರಿ ಸಂಘಕ್ಕೆ ರೂ. 1500, (10) ನಾಪೋಕ್ಲು ಸಹಕಾರಿ ಸ್ಟೋರ್ಸ್‌ಗೆ ರೂ. 2000, (11) ಅಗ್ಗಾಲು ಐಕೊಳ ಸಂಘಕ್ಕೆ ರೂ 2000, (12) ಮತ್ತು ಬಾಳಾಜಿ ಸಂಘಕ್ಕೆ ರೂ. 1500

3. ಈ ಕೆಳಗಿನ ಸಂಘಗಳ ಸಾಲದ ಅರ್ಜಿಗಳನ್ನು ಕಾರಣಾಂತರಗಳಿಂದ ಮುಂದಿನ ಮೀಟಿಂಗಿಗೆ ಇಡಲಾಯಿತು.

(1) ಸಾಲೂರು ಸಂಘ, (2) ಪರಾಜೆ ಸಂಘ, (3) ಪಾರಾಣೆ ಸಂಘ, (4) ಕೊಳತಡಬೈಗೋಡು ಸಂಘ, (5) ಬಡಗರ ಕೇರಿ ಸಂಘ ಮತ್ತು (6) ಕಾರುಗುಂದ ಸಂಘ.

4. ಚೆಟ್ಟಿಮಾಡ ಕುಟುಂಬದವರು ತಮ್ಮ ಮನೆ ಬಂದು ಹೋದುದಕ್ಕೆ ಬ್ಯಾಂಕಿನಿಂದ ಧನಸಹಾಯಕೊಡಬೇಕೆಂದು ಬರಕೊಂಡ ಅರ್ಜಿ ಓದಲಾಯಿತು.

ಅವರ ಅರ್ಜಿ ಮೇರೆ ನಷ್ಟ ವಗೈರೆ ಕುರಿತು ಯೂನಿಯನ್ ಪ್ರೆಸಿಡೆಂಟರ ಮೂಲಕ ರಿಪೋರ್ಟು ಮಾಡುವ ಬಗ್ಗೆ ಸುಪರ್‌ವೈಜರಿಗೆ ಕಳುಹಿಸುವಂತೆ ತೀರ್ಮಾನಿಸಲಾಯಿತು.

5. ಮನೆಯಪಂಡ ನಾಚಯ್ಯನವರು ತನ್ನ ಹೆಸರಿನಲ್ಲಿ ಬ್ಯಾಂಕಿನಲ್ಲಿರುವ ಎರಡು ಶೇರನ್ನು ತನ್ನ ಮಗ ಗಣಪತಿಯವರ ಹೆಸರಿಗೆ ವರ್ಗಾಯಿಸಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಅವರ ಇರಾದೆ ಮೇರೆ ವರ್ಗಾಯಿಸುವಂತೆ ತೀರ್ಮಾನಿಸಲಾಯಿತು.

6. ಶ್ರೀ ಪಟ್ಟಮಾಡ ಐಯ್ಯಣ್ಣನವರು ಬ್ಯಾಂಕಿನ ಮೆಂಬರಾಗಲು ಬರಕೊಂಡ ಅರ್ಜಿ ಮೇರೆ ಅವರನ್ನು ಮೆಂಬರನಾಗಿ ಸೇರಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು.

7. ಚೆಟ್ಟಿಮಾಡ ಕುಟುಂಬದವರು ತಮ್ಮ ಮನೆ ಬಂದು ಹೋದುದಕ್ಕೋಸ್ಕರ ಕೊಡಗಿನ ಎಲ್ಲಾ ಸಂಘಗಳಿಂದಲೂ ಧನ ಸಹಾಯ ಕೊಡಿಸಿಕೊಡಬೇಕಾಗಿ ಅಸಿಸ್ಟಂಟ್ ರಿಜಿಸ್ಟ್ರಾರ್‌ರವರಿಗೆ ಬರಕೊಂಡ ಅರ್ಜಿ ಮೇರೆ ಅವರಿಂದ ಬಂದ ನಂಬ್ರು 2883 ತಾ. 16-3-40ರ ಇಂಡಾರ್ಸ್‌ಮೆಂಟ್ ಓದಲಾಯಿತು.

ಈ ಬಾಬಿನಲ್ಲಿ ಬ್ಯಾಂಕಿನವರು ಕೈ ಹಾಕುವದು ಉಚಿತವಲ್ಲವೆಂದು ಅಸಿಸ್ಟೆಂಟ್ ರಿಜಿಸ್ಟ್ರಾರರಿಗೆ ತಿಳಿಸುವಂತೆ ತೀರ್ಮಾನಿಸಲಾಯಿತು.

8. ಸೇವಿಂಗ್ಸ್ ಬ್ಯಾಂಕು ರೂಲ್ ನಂಬರು 7ರಲ್ಲಿ ಒಂದು ವಾರಕ್ಕೆ 500 ರೂ. ಮಾತ್ರ ವಾಪಸು ಕೊಡಲಾಗುವದೆಂಬುದನ್ನು ಸಂಸ್ಥೆಗಳಿಗೂ ಮತ್ತು ಸಂಘಗಳಿಗೂ ಒಂದು ವಾರಕ್ಕೆ 1000 ರೂ. ಕೊಡಬಹುದೆಂತ ತಿದ್ದುಪಡಿ ಮಾಡುವಂತೆ ತೀರ್ಮಾನಿಸಲಾಯಿತು.

9. ಬ್ಯಾಂಕಿನ ಇಂಗ್ಲಿಷ್ ಬೈಲಾದ ನಕಲನ್ನು ಪ್ರಿಂಟು ಮಾಡುವ ವಿಚಾರ ಇನ್ನೊಂದು ಸಾರಿಗೆ ಇಡುವಂತೆ ತೀರ್ಮಾನಿಸಲಾಯಿತು.

10. ಬ್ಯಾಂಕಿನ ಅಸಿಸ್ಟಂಟ್ ಗುಮಾಸ್ತರಾಗಿದ್ದ ಯಂ. ಬಿ. ಜೋಯಪ್ಪನವರು ಸುಪರ್‌ವೈಜರಾಗಿ ವರ್ಗವಾಗಿರುವುದರಿಂದ ತಾನು ಬ್ಯಾಂಕಿನಲ್ಲಿ ಡಿಪಾಜಿಟ್ಟು ಮಾಡಿದ ಕ್ಯಾಷ್ ಸೆಕ್ಯೂರಿಟಿಯನ್ನು ಬಡ್ಡಿ ಸಮೇತ ವಾಪಸು ಕೊಡಿಸಿಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಅವರ ಕೋರಿಕೆ ಮೇರೆ ಕ್ಯಾಷ್ ಸೆಕ್ಯೂರಿಟಿ ಡಿಪಾಜಿಟ್ಟನ್ನು ಬಡ್ಡಿ ಸಮೇತ ವಾಪಸು ಕೊಡಬಹುದೆಂದು ತೀರ್ಮಾನಿಸಲಾಯಿತು.

11. ಬ್ಯಾಂಕಿನ ಡೈರೆಕ್ಟರುಗಳ ನಂಬರು 5170 ಮತ್ತು 5174ರ ತೀರ್ಮಾನದ ಮೇರೆ ಏರ್ಪಾಡು ಮಾಡಲ್ಪಟ್ಟ ಸಬ್ ಕಮಿಟಿಯವರು ಇಂಡಿಯನ್ ಬ್ಯಾಂಕು ಆಕ್ಟಿನ ಮತ್ತು ಇಂಡಿಯನ್ ಕೋ-ಆಪರೇಟಿವ್ ಮಿಶನರಿ ಸೊಸೈಟಿಯ ಕರಡು ರೂಲ್ಸುಗಳ ವಿಷಯ ಬರಕೊಂಡ ರಿಪೋರ್ಟು ಓದಲಾಯಿತು.

ಮೇಲ್ಕಂಡ ಇಂಡಿಯನ್ ಬ್ಯಾಂಕು ಆಕ್ಟಿನ ಕರಡು ರೂಲ್ಸಿನ ಸೆಕ್ಷನ್ 3ರಲ್ಲಿ 1912ನೇ ಇಸವಿಯ ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಮೇರೆ ರಿಜಿಸ್ಟ್ರಾರಾದ ಎಲ್ಲಾ ಬ್ಯಾಂಕುಗಳು ಮೇಲ್ಕಂಡ ಬ್ಯಾಂಕಿನ ವ್ಯವಹಾರ ಕ್ಷೇತ್ರದಲ್ಲಿರಲು ಅವಶ್ಯವಿಲ್ಲದಿರುವುದರಿಂದ ಈ ವಿಷಯದಲ್ಲಿ ಈ ಬ್ಯಾಂಕಿನ ಪರವಾಗಿ ಯಾವ ಅಭಿಪ್ರಾಯ ಕೊಡಲು ಅವಶ್ಯವಿರುವುದಿಲ್ಲವೆಂದು ರಿಜಿಸ್ಟ್ರಾರವರಿಗೆ ಜವಾಬು ಬರೆಯುವಂತೆ ತೀರ್ಮಾನಿಸಲಾಯಿತು.

೮ನೇ ಪುಟ ನೋಡಿ.

ಕೊಡಗು

ಏಪ್ರಿಲ್ ತಾರೀಕು ೫ ನೇ ಶುಕ್ರವಾರ ೧೯೪೦.

ಹಿಂದೂಸ್ಥಾನವನ್ನು ಒಡೆಯಬೇಕೇ?

ಗುಲಾಮಗಿರಿಯಲ್ಲಿ ಬಿದ್ದು ನರಳುತ್ತಿರುವ ಭಾರತ ಮಾತೆಯು ಸ್ವಾತಂತ್ರ್ಯವನ್ನು ಪಡೆಯಲಿಕ್ಕಾಗಿ ಭಾರತ ನಿವಾಸಿಗಳೆಲ್ಲರೂ ಒಗ್ಗಟ್ಟಾಗಬೇಕು, ಹಿಂದೀಯರೆಲ್ಲರೂ ಒಂದು ಜನಾಂಗದಂತೆ ವರ್ತಿಸಬೇಕು ಎಂದು ಇಂಡಿಯಾದಲ್ಲಿರುವ ಎಲ್ಲಾ ಮತಗಳ ಮುಖಂಡರೂ ಧೀರ್ಘಕಾಲದಿಂದ ಸಾರುತ್ತಲೂ, ಹೋರಾಡುತ್ತಲೂ ಇರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಸ್ವಾತಂತ್ರ್ಯ ಹೋರಾಟವು ಬಹು ಮಟ್ಟಿಗೆ ಮುಂದರಿದು, ಗುರಿಯನ್ನು ಮುಟ್ಟುವ ಸಮಯವು ಸಮೀಪಿಸುತ್ತಿರುವ ಈ ಕಾಲದಲ್ಲಿ ಮುಸ್ಲಿಂ ಲೀಗಿನ ಮುಂದಾಳಾದ ಮಿ. ಜಿನ್ನಾರವರು ಒಂದು ಹೊಸ ಯೋಜನೆಯನ್ನು ದೇಶದ ಮುಂದಿಟ್ಟು ಭಾರತ ಭೂಮಿಯನ್ನು ವಿಭಾಗಿಸಲು ಯತ್ನಿಸುವುದು ತುಂಬಾ ಶೋಚನೀಯವಾಗಿದೆ. ಇವರು ಮೊನ್ನೆ ತಾನೇ ಲಾಹೋರಿನಲ್ಲಿ ನಡೆದ ಮುಸ್ಲಿಂ ಲೀಗಿನ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಸೂಚಿಸಿದ ಮೇರೆ ಹಿಂದೂಸ್ಥಾನವನ್ನು ಹಿಂದೂ ಇಂಡಿಯಾ ಮತ್ತು ಮುಸ್ಲಿಂ ಇಂಡಿಯಾ ಎಂಬದಾಗಿ ಎರಡು ಭಾಗಮಾಡುವುದು ಅವಶ್ಯವೆಂದೂ, ಇದರಿಂದ ಇವೆರಡು ಮತೀಯರೊಳಗಿರುವ ದ್ವೇಷಾಸೂಯೆಗಳನ್ನು ಹೋಗಲಾಡಿಸಿ, ಅನಂತರ ಮತ, ಸಂಸ್ಕೃತಿ, ಆರ್ಥಿಕ ಸ್ಥಿತಿ ಮೊದಲಾದವುಗಳನ್ನು ಅಭಿವೃದ್ಧಿಗೊಳಿಸಿ, ಅವರು ಒಳ್ಳೇ ನೆರೆಯ ಸ್ನೇಹಿತರಂತೆ ಜೀವಿಸಬಹುದೆಂದೂ ಗೊತ್ತುವಳಿಯನ್ನು ಮಂಜೂರು ಮಾಡಲಾಗಿದೆ. ಹಿಂದೂ ದೇಶದ ಅಭಿವೃದ್ಧಿಯನ್ನು ಕೋರುವ ಪ್ರತಿಯೊಬ್ಬನಿಗೂ ಇದೆಂಥಾ ಅಪಹಾಸ್ಯದ, ಅನರ್ಥಪರಿಣಾಮದ ಸೂಚನೆಯೆಂದು ತೋರದೆ ಇರದು. ಈ ಯೋಜನೆಯಿಂದ ಹಿಂದೂ ಮುಸ್ಲಿಮರೊಳಗೆ ಒಗ್ಗಟ್ಟು, ಶಾಂತಿ ಉಂಟಾಗುವುದರ ಬದಲು ದ್ವೇಷಾಸೂಯೆಗಳು ಹೆಚ್ಚುವುದರೆಂಬುದರಲ್ಲಿ ಸಂದೇಹವಿಲ್ಲ. ಇದರಿಂದ ಭಾರತಭೂಮಿಯ ಏಳಿಗೆಗೆ ಅಪಾರ ಕೆಡಕುಂಟಾಗುವುದು ಮಾತ್ರವಲ್ಲ, ಯಾವ ಮುಸಲ್ಮಾನರ ಹಿತದ ದೃಷ್ಟಿಯಿಂದ ಇದನ್ನು ಸಾಧಿಸಬೇಕೆಂದು ಜಿನ್ನಾರವರು ಹೇಳುತ್ತಿರುವರೋ ಅವರ ಅಭಿವೃದ್ಧಿಗೂ ಅಡಚಣೆ ಉಂಟಾಗುವುದು ಖಂಡಿತ. ಈಗಿರುವಂತೆಯೇ ಹಿಂದೂ ಮುಸಲ್ಮಾನರೊಳಗೆ ಅಲ್ಲಲ್ಲಿ ಕಂಡು ಬರುವ ಅಲ್ಪ ಸ್ವಲ್ಪ ಭಿನ್ನಾಭಿಪ್ರಾಯಗಳನ್ನು ಬೆಟ್ಟದಂತೆ ಮಾಡಿ ಪರದೇಶೀಯರು ಹಿಂದೂದೇಶದ ಮೇಲಿರುವ ತಮ್ಮ ಹಿಡಿತವನ್ನು ಬಿಗಿಮಾಡಲೆತ್ನಿಸುತ್ತಿರುವಲ್ಲಿ, ಮುಸ್ಲಿಂ ಲೀಗಿನ ಈ ಒಡಕಿನ ತೀರ್ಮಾನವಂತೂ ಇಂಡಿಯಾದ ಗುಲಾಮಗಿರಿಯನ್ನು ಖಾಯಂ ಮಾಡದೆ ಇರದು. ಎಷ್ಟು ಬುದ್ಧಿವಂತಿಕೆಯಿಂದ ಹಿಂದೂಸ್ಥಾನವನ್ನು ಎರಡು ಭಾಗಗಳಾಗಿ ಮಾಡಿದರೂ, ಅಲ್ಪ ಸಂಖ್ಯಾಕರ ಪ್ರಶ್ನೆಯು ಇದ್ದೇ ಇರುವುದು. ಸಿಖ್ಖರನ್ನೂ, ಕ್ರೈಸ್ತರನ್ನೂ, ಪಾರ್ಸಿ ಮೊದಲಾದವರನ್ನೂ ಇಂಡಿಯಾದಿಂದ ಹೊರಗೆ ಓಡಿಸಲು ಸಾಧ್ಯವಿಲ್ಲ. ಅಲ್ಲದೆ ಮುಸಲ್ಮಾನ ಇಂಡಿಯಾದಿಂದ ಹಿಂದೂಗಳನ್ನೂ, ಹಿಂದೂ ಇಂಡಿಯಾದಿಂದ ಮುಸಲ್ಮಾನರನ್ನೂ ಸಂಪೂರ್ಣ ಹೊರತಳ್ಳುವುದು ಅಸಾಧ್ಯ. ಅಂದ ಮೇಲೆ ಅಲ್ಪ ಸಂಖ್ಯಾಕರ ಪ್ರಶ್ನೆಯನ್ನು ಬಗೆಹರಿಸುವುದು ಇಂಡಿಯಾವನ್ನು ಒಡೆಯುವುದರಿಂದಲ್ಲ; ಇಂಡಿಯಾಕ್ಕೆ ಸಂಪೂರ್ಣ ಪ್ರಜಾಪ್ರತಿನಿಧಿ ಸರಕಾರವನ್ನು ಸಂಪಾದಿಸಿ ಅಲ್ಪ ಸಂಖ್ಯಾಕರ ಹಿತವನ್ನು ಕಾಯುವುದೇ ದಾರಿಯೆಂದು ಸ್ಪಷ್ಟವಾಗುತ್ತೆ. ಇದನ್ನರಿತೇ ಕಾಂಗ್ರೆಸು ಮುಖಂಡರು ಮಾತ್ರವಲ್ಲ, ಹಿಂದೂ, ಕ್ರೈಸ್ತ, ಪಾರ್ಸಿ ಧುರೀಣರೂ, ರಾಷ್ಟ್ರೀಯ ಪಕ್ಷದ ಮುಸಲ್ಮಾನರೂ ಈ ಯೋಜನೆಯನ್ನು ತೀವ್ರವಾಗಿ ಖಂಡಿಸಿರುವರು. ಯಾಕೆ, ಮುಸ್ಲಿಂ ಲೀಗಿನ ಕೆಲವು ಮುಂದಾಳುಗಳೂ ಈ ತೀರ್ಮಾನಕ್ಕೆ ತಮ್ಮ ಅಸಮ್ಮತಿಯನ್ನು ಸೂಚಿಸಿ, ಲೀಗಿನ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವರು. ರಾಷ್ಟ್ರಭಕ್ತಿ ಇರುವ ಯಾವನೊಬ್ಬನೂ ಇದನ್ನು ವಿರೋಧಿಸದೆ ಇರನು. ಇನ್ನಾದರೂ ಲೀಗಿನ ಧುರೀಣರು ಧೀರ್ಘಾಲೋಚನೆಮಾಡಿ ಕಲಹದ ಬೀಜದಂತಿರುವ ಈ ತೀರ್ಮಾನವನ್ನು ವಜಾ ಮಾಡುವರಾಗಿ ಆಶಿಸುತ್ತೇವೆ.

ಸತ್ಯಾಗ್ರಹಿಗಳ ತರಬೇತು.

ಕಾಂಗ್ರೆಸ್ ಸೆಕ್ರೆಟರಿಯವರ ಸರ್ಕ್ಯೂಲಾರ್.

'ತೋರಿಕೆಯ ಜನರಿಗೆ ಸ್ಥಳವಿಲ್ಲ.'

ಕಾಂಗ್ರೆಸ್ಸಿನ ಮುಖ್ಯ ಕಾರ್ಯದರ್ಶಿಯರಾದ ಆಚಾರ್ಯ ಕೃಪಾಲಿನಿಯವರು ಪ್ರಾಂತೀಯ ಕಾಂಗ್ರೆಸ್ ಕಮಿಟಿಗಳಿಗೆ—ಮುಂದೆ ಬರುವ ಹೋರಾಟಕ್ಕೆ ಸತ್ಯಾಗ್ರಹಿಗಳನ್ನು ತಯಾರಿಸಲು ಗಾಂಧಿಜೀಯವರ ಸಲಹೆಗಳನ್ನೊಳಗೊಂಡ ಸರ್ಕ್ಯೂಲಾರನ್ನು ಕಳುಹಿಸಿರುವರು. 'ಗಾಂಧಿಜೀಯವರ ಸಲಹೆಗಳನ್ನು ಸರಿಯಾಗಿ ಅನುಸರಿಸಿದರೆ ಪ್ರತಿಯೊಂದು ಕಾಂಗ್ರೆಸ್ ಸಮಿತಿಯು ಒಂದು ಸತ್ಯಾಗ್ರಹಿ ಸಮಿತಿಯಾಗುವುದು' ಎಂದು ಅದರಲ್ಲಿ ಹೇಳಿರುತ್ತಾರೆ.

'ಯಾವ ಪ್ರಾಂತ್ಯದ ಕಾಂಗ್ರೆಸ್ ಸಮಿತಿಯಲ್ಲಿ ಬಹುಮತ ಸದಸ್ಯರು ಸತ್ಯಾಗ್ರಹ ಕಾರ್ಯಕ್ಷೇತ್ರಕ್ಕೆ ಇಳಿಯಲು ತಯಾರಿಲ್ಲವೋ ಅಂಥಾ ಪ್ರಾಂತ್ಯದಲ್ಲಿ ಕಾರ್ಯಕ್ಷೇತ್ರಕ್ಕೆ ಇಳಿಯಲು ಸಿದ್ಧರಿರುವ ಸತ್ಯಾಗ್ರಹಿಗಳ ಸಮಿತಿಯನ್ನು ರಚಿಸಬೇಕು. ಇಂಥಾ ಸತ್ಯಾಗ್ರಹಿ ಸಮಿತಿಗೆ ಕಾಂಗ್ರೆಸ್ ಸಮಿತಿಗಳು ಸಹಾಯವನ್ನೀಡಬೇಕು. ಸತ್ಯಾಗ್ರಹ ಸಮಿತಿಗಳು ಸ್ವಾತಂತ್ರ್ಯ ಸಂಗ್ರಾಮಕ್ಕೆ ಅಗತ್ಯವಾದ ಸಿದ್ಧ ಕಾರ್ಯಗಳನ್ನು ಮಾಡಿಕೊಳ್ಳುವವು. ಕಾಂಗ್ರೆಸ್ ಸಮಿತಿಗಳು ಕಾಂಗ್ರೆಸ್ಸಿನ ದಿನಚರ್ಯೆ ಕಾರ್ಯಕ್ರಮಗಳನ್ನು ನೋಡಿಕೊಳ್ಳಬೇಕು. ಪ್ರತಿಯೊಂದು ಪ್ರಾಂತ ಕಾಂಗ್ರೆಸ್ ಸಮಿತಿಯಲ್ಲಿ ಚರಖಾ, ಅಲ್ಪ ಸಂಖ್ಯಾತರು, ಹರಿಜನರು ಮತ್ತು ಪ್ರಚಾರ – ಈ ಸಮ್ಮಂಧವಾದ ಶಾಖೆಗಳಿರಬೇಕು. ಹೆಚ್ಚಿನ ಶಾಖೆಗಳ ಅವಶ್ಯಕತೆ ಇದ್ದರೆ ಸೇರಿಸಿಕೊಳ್ಳಬಹುದು. ಅವಶ್ಯವಿರುವ ಭದ್ರತೆಯಿಂದ ತಮ್ಮ ಕೆಲಸಗಳನ್ನು ನಡೆಸಲಿಕ್ಕೆ ಈ ಶಾಖೆಗಳಿಗೆ ಹಣ ಸಂಗ್ರಹಿಸಲು ಅಧಿಕಾರ ಕೊಡಬಹುದು. ಈ ಶಾಖೆಗಳು ಒಂದಕ್ಕೊಂದು ಸಹಕರಿಸಿಯೇ ಕೆಲಸ ಮಾಡಬೇಕು. ಸತ್ಯಾಗ್ರಹಕ್ಕೆ ತಯಾರಿರುವವರು ಸತ್ಯಾಗ್ರಹದ ಮುಖ್ಯ ತತ್ವಗಳ ಪ್ರತಿಜ್ಞೆಗೆ ಸಹಿ ಹಾಕಬೇಕು. ಇದಕ್ಕಾಗಿ 1921ನೇ ಇಸವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅಂಗೀಕಾರವಾದ ಸ್ವಾತಂತ್ರ್ಯ ಪ್ರತಿಜ್ಞೆಯ ನಕಲನ್ನು ಸರ್ಕ್ಯೂಲಾರೊಂದಿಗೆ ಕಳುಹಿಸಲಾಗಿದೆ. ಈ ಪ್ರತಿಜ್ಞೆಯನ್ನು ಅನುಸರಿಸಿ ತಮ್ಮ ತಮ್ಮ ಪ್ರಾಂತ್ಯಗಳಿಗೆ ತಕ್ಕುದಾದ ಪ್ರತಿಜ್ಞೆಗಳನ್ನು ರಚಿಸಿಕೊಂಡು ಹೋರಾಡಲು ಸಿದ್ಧರಿರುವವರಿಂದ ಇದಕ್ಕೆ ಸಹಿ ಹಾಕಿಸಿಕೊಳ್ಳತಕ್ಕದ್ದು. ಆದರೆ 18 ವರ್ಷ ಪ್ರಾಯ ಮೀರಿದವರು ಮಾತ್ರ ಈ ಪ್ರತಿಜ್ಞೆಯನ್ನು ಮಾಡತಕ್ಕದ್ದು.

ಪ್ರಾಂತ ಸಮಿತಿಗಳು ಹಾಗೂ ಕೆಳಗಿನ ಸಮಿತಿಗಳು ಮಹಾತ್ಮ ಗಾಂಧಿಯವರ ಹೇಳಿಕೆಯನ್ನೂ, ಅವರು ಆಗಿಂದಾಗ್ಯೆ ಕೊಡುವ ಸಲಹೆಗಳನ್ನೂ ಚೆನ್ನಾಗಿ ಮನನ ಮಾಡಿಕೊಳ್ಳತಕ್ಕದ್ದು. ಮತ್ತು ಅವರು ಕೈಕೊಳ್ಳುವ ಕಾರ್ಯಗಳ ವರದಿಯನ್ನು ಎರಡು ವಾರಕ್ಕೊಮ್ಮೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ತಿಳಿಸತಕ್ಕದ್ದು.

ಆಶ್ರಮ ಮತ್ತು ಶಿಬಿರಗಳ ಸ್ಥಾಪನೆ.

ಸತ್ಯಾಗ್ರಹಕ್ಕೆ ಮನಸಿದ್ದರೆ ನಮ್ಮ ಮುಂದಾಳು ಹಾಕಿರುವ ಶರತುಗಳನ್ನು ನಡೆಸಲು ಕಷ್ಟವಾಗಲಾರದು. ಪ್ರತಿಯೊಬ್ಬ ಸ್ತ್ರೀಯೂ, ಪುರುಷನೂ ತಾನು ಜೈಲಿನಲ್ಲಿದ್ದೇನೆಂದು ನೆನಸಬೇಕು. ಅವರು ಕಾಂಗ್ರೆಸ್ ಸಂಸ್ಥೆಯ ಯಾ ಸತ್ಯಾಗ್ರಹ ಕಮಿಟಿಯ ಅಧೀನದಲ್ಲಿ ಜೊತೆಗೂಡಿ ಸತ್ಯಾಗ್ರಹ ತರಬೇತಿಗೆ ಅಗತ್ಯವಿರುವ ಕಾರ್ಯಗಳನ್ನು ಪ್ರತಿನಿತ್ಯ ನಡೆಸಲು ಆಶ್ರಮಗಳನ್ನೂ, ಶಿಬಿರಗಳನ್ನೂ ಮತ್ತು ಕ್ಯಾಂಪುಗಳನ್ನೂ ತೆರೆಯುವಂತಾಗಲಿ. ನಾವು ಈಗಲಿಂದಲೇ ನಮ್ಮ ಸ್ವಂತ ದಿನಚರ್ಯೆ ಕಾರ್ಯಗಳನ್ನು ಬಿಟ್ಟು ಹೋರಾಟದ ಸಿದ್ಧತೆ ಕಾರ್ಯಗಳನ್ನು ಮಾಡುವ. ಇಂಥಾ ಶಿಬಿರ ಯಾ ಆಶ್ರಮಗಳಲ್ಲಿ ವಾಲಂಟೀಯರ ತರಬೇತು, ಪ್ರಥಮ ಚಿಕಿತ್ಸೆ ಮುಂತಾದ ಕಾರ್ಯಗಳನ್ನು ನಡೆಸಬಹುದು. ಅವುಗಳಲ್ಲಿ ಇರುವವರೆಲ್ಲರೂ ಜೈಲು ಸೇರುವ ವರೆಗೆ ಈ ಸಂಸ್ಥೆಗಳು ನಡೆಯಲಿ. ಸತ್ಯಾಗ್ರಹಿಗಳು ಜೈಲುವಾಸಕ್ಕೆ ಗುರಿಮಾಡಲ್ಪಟ್ಟನಂತರ ಅನುಭವಿಸಬೇಕಾದ ಮಿತ ಮತ್ತು ಸರಳ ಜೀವನವನ್ನೇ ಈ ಶಿಬಿರಗಳಲ್ಲಿಯೂ ಅನುಭವಿಸುವವರಾಗಲಿ. ಹೀಗೆ ಮಾಡಲ್ಪಟ್ಟರೆ ಸತ್ಯಾಗ್ರಹದ ಹುಕುಂ ಗಾಂಧಿಜೀಯವರು ಆಶಿಸುವಂತೆ ಒಂದು ತಿಂಗಳೊಳಗೆ ಕೊಡಲ್ಪಡಬಹುದು.

ಮಹಾತ್ಮ ಗಾಂಧಿಯವರು ತೋರಿಕೆಯ ಯಾ ಸಂಶಯದ ಜನರಿಂದ ತೃಪ್ತರಾಗಲಾರರು. ಅವರಿಗೆ ಹಿಂಸೆಯ ವಾಸನೆ ಸಿಕ್ಕಿದ ಕೂಡಲೇ ಸಂಕೋಚವಿಲ್ಲದೆ ಹೋರಾಟವನ್ನು ನಿಲ್ಲಿಸಿಬಿಡುವರೆಂದು ಅವರು ಎಚ್ಚರಿಸಿರುವರು. ಮಹಾತ್ಮರು ಆಶಿಸುವದು ಅಹಿಂಸಾ ತತ್ವದ ಮೇಲೆ ನಂಬಿಗೆ ಇಲ್ಲದವರು—ಮುಖ್ಯವಾಗಿ ಗಾಂಧಿಜೀಯವರ ಮುಂದಾಳುತನದಲ್ಲಿ ಇಡೀ ಜನಾಂಗವು ಏಕ ಕಂಠದಿಂದ ವಿಶ್ವಾಸ ಮತ್ತು ಭಕ್ತಿಯನ್ನು ಸೂಚಿಸಿರುವಾಗ್ಯೆ—ಸತ್ಯಾಗ್ರಹಿಗಳಿಗೆ ಒಂದು ಅವಕಾಶವನ್ನು ಕೊಡುವಷ್ಟು ಸಮಾಧಾನವನ್ನು ಹೊಂದುವವರಾಗಿ ಆಶಿಸುತ್ತೇನೆ. ಹ್ಯಾಗೂ ಈ ದೇಶದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿ ಶಾಂತಿ ಮತ್ತು ನ್ಯಾಯ ಸ್ಥಾಪನೆಗೆ ಹೋರಾಡುವವರು ಆತುರರಾಗಿರಲಿಕ್ಕಿಲ್ಲ; ಮಾನುಷ ವರ್ಗವನ್ನು ಯುದ್ಧ, ಹಿಂಸೆ ಮತ್ತು ರಕ್ತಪಾತದಿಂದ ತಪ್ಪಿಸಲು ಎಲ್ಲಾ ರೀತಿಗಳಿಂದ ಪ್ರಯತ್ನಿಸುವದು ಅವರ ಕರ್ತವ್ಯವಾಗಿದೆ.'

ನೋಟೀಸು.

ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ ತಾ. 3-4-1940.

ಗ್ರಾಮನಿವಾಸಿಗಳ ಪ್ರಯೋಜನಕ್ಕಾಗಿ ಸೂಲಗಿತ್ತಿ ಕೆಲಸಕ್ಕೆ (midwife) ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ 6 ಜನರಿಗೆ ತರಬೇತು ಕೊಡಲಾಗುವುದು.

(1) ಪ್ರತಿಯೊಬ್ಬರಿಗೂ ತಿಂಗಳು ಒಂದರ 15 ರೂಪಾಯಿ ಮೇರೆ 6 ತಿಂಗಳ ವರೆಗೆ ವೇತನ (stipend) ಕೊಡಲಾಗುವುದು.

(2) ತರಬೇತಿನ ಅವಧಿ ವರೆಗೆ ಯೂನಿಫಾರಮಿಗೆ 10 ರೂಪಾಯಿ ಕೊಡಲಾಗುವದು.

(3) ತರಬೇತು ಮುಗಿದ ನಂತರ ಸೂಲಗಿತ್ತಿ ಕೆಲಸಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಳ್ಳಲು ಪ್ರತಿಯೊಬ್ಬರಿಗೂ ರೂ. 20 ಕೊಡಲಾಗುವುದು.

ಅಪ್ಲಿಕೇಶನುಗಳು ವಿದ್ಯಾಭ್ಯಾಸದ ಸರ್ಟಿಫಿಕೇಟುಗಳೊಡನೆ ತಾ. 15-4-40 ರಲ್ಲಿ ಅಥವಾ ಅದಕ್ಕೆ ಮೊದಲು ಸಿವಿಲ್ ಸರ್ಜನರ ಆಫೀಸಿಗೆ ತಲಪಬೇಕು. ಚುನಾವಣೆಯು ತಾ. 20-4-40 ರಲ್ಲಿ ನಡೆಯುವುದು. ತರಬೇತು ಕೂಡಲೇ ಮಡಿಕೇರಿ ಆಸ್ಪತ್ರೆಯಲ್ಲಿ ಶುರುವಾಗುವುದು. ಚುನಾಯಿತರಾದವರು ತಾ. 20-4-40 ರಿಂದ ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ ತರಬೇತು ಹೊಂದಲು ತಯಾರಾಗಿರಬೇಕು.

ತರಬೇತು ಪೂರ್ತಿಯಾದ ನಂತರ ಸರ್ಟಿಫಿಕೇಟು ಕೊಡಲಾಗುವುದು. ನಂತರ ಅವರವರ ಗ್ರಾಮಗಳಲ್ಲಿದ್ದು ಕೆಲಸ ಮಾಡಬೇಕು.

ಜಿ. ಪಿ. ಚಾಲ್ಕ್‌ವುಡ್,
ಕ್ಯಾಪ್ಟನ್ ಐ. ಎಂ. ಎಸ್.
ಸಿವಿಲ್ ಸರ್ಜನ್.

ಒಳದೇಶ.

1939ನೇ ಇಸವಿಯಲ್ಲಿ ಓರಿಯಂಟಲ್ ಜೀವವಿಮಾ ಕಂಪೆನಿಯವರು 7,73,10,040 ರೂ. ಗಳ 39,965 ಪಾಲಿಸಿಗಳನ್ನು ಹೊಸದಾಗಿ ಸೇರಿಸಿವರೆಂದು ತಿಳಿಯುತ್ತೇವೆ.

ತಾರೀಕು 15—4—40 ರಿಂದ 20-4-40 ರ ವರೆಗೆ ಈ ಕೆಳಗಿನ ಸೆಂಟರುಗಳಲ್ಲಿ ಸಹಕಾರಿ ಸಂಘಗಳ ಮೆಂಬರುಗಳಿಗೆ ತರಬೇತನ್ನು ಕೊಡಲು ಏರ್ಪಡಿಸಲಾಗಿದೆಯೆಂದು ತಿಳಿಯುತ್ತೇವೆ. ಶನಿವಾರಸಂತೆ, ಸೋಮವಾರಪೇಟೆ, ಸೂದಾಪುರ, ಫ್ರೇಜರ್‌ಪೇಟೆ, ಮಡಿಕೇರಿ, ಮೂರ್ನಾಡು, ನಾಪೋಕ್ಲು, ಕೊಟ್ಟೂರು, ಭಾಗಮಂಡಲ, ಪಾರಾಣೆ, ವೀರಾಜಪೇಟೆ, ಅಮ್ಮತ್ತಿ, ಪೊನ್ನಂಪೇಟೆ, ಬಿಟ್ಟಂಗಾಲ, ಹುದಿಕೇರಿ, ಮತ್ತು ಹಾತೂರು.

ಮಡಿಕೇರಿ.

ಈ ವಾರ ಇಲ್ಲಿ ಕಾಫಿ ಖಂಡಿಗೆ ರೂ. 170 ರ ವರೆಗೆ ಕ್ರಯವಿತ್ತು.

ಕೊಡಗು ಟೆರಿಟೋರಿಯಲ್ ಪಟಾಲಮಿನ ವಾರ್ಷಿಕ ತರಬೇತು ಈ ತಾ. 2ರಲ್ಲಿ ಇಲ್ಲಿ ಪ್ರಾರಂಭವಾಗಿದೆ.

ಇಲ್ಲಿಯ ಇನ್ನೊಂದು ಸಿನೇಮಾ ಕಂಪೆನಿಯವರಾದ ಕೊಡಗು ಪ್ರೊವಿನ್ಸಲ್ ಟಾಕೀಸ್‌ನವರು ತಮ್ಮ ಪ್ರದರ್ಶನವನ್ನು ಈ ತಾ. 6 ರ ಸಾಯಂಕಾಲ 7 ಗಂಟೆಗೆ ರಾ. ಬ. ಪಟ್ಟಮಾಡ ದೇವಯ್ಯನವರ ಅಧ್ಯಕ್ಷತೆಯಲ್ಲಿ ತೆರೆಯುವರು.

ಮೂರ್ನಾಡು

ಇಲ್ಲಿಯ ಪೋಸ್ಟು ಮಾಸ್ಟರಾಗಿರುವ ಮಿ. ಚೌರಿರ ನಾಣಯ್ಯನವರು ಕಳೆದ ಡಿಸೆಂಬರಿನಲ್ಲಿ ನಡೆದ 'ಕೇಂಬ್ರಿಡ್ಜ್ ಸೀನಿಯರ್' ಪರೀಕ್ಷೆಯಲ್ಲಿ ಪಾಸಾಗಿರುವರೆಂದು ತಿಳಿಯಬರುತ್ತದೆ.

ಇಲ್ಲಿ ಕಟ್ಟಲ್ಪಟ್ಟಿರುವ ಶ್ರೀರಾಮ ಮಂದಿರವು ಈ ತಾ. 8ನೇ ಸೋಮವಾರ ಅಪರಾಹ್ನ 3 ಗಂಟೆಗೆ ಶ್ರೀ ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಪಳಂಗಂಡ ಅಪ್ಪಯ್ಯನವರಿಂದ ತೆರೆಯಲ್ಪಡುವದೆಂದೂ, ಭಾಷಣಗಳೂ, ಹರಿಕಥೆಯೂ ನಡೆಯುವದೆಂದೂ, ಸರ್ವರಿಗೂ ಸ್ವಾಗತವಿದೆಯೆಂದೂ ಅದರ ಸೆಕ್ರೆಟರಿಯವರು ತಿಳಿಸುತ್ತಾರೆ.

ವೀರಾಜಪೇಟೆ

ಈ ವಾರ ಇಲ್ಲಿ ಭತ್ತ ಗಾಡಿಗೆ ರೂ. 49 ಕ್ರಯವಿತ್ತು. ಕ್ರಯವು ಏರುತ್ತಾ, ಇಳಿಯುತ್ತಾ ಇದೆ.

ರುದ್ರುಗುಪ್ಪೆ ಗ್ರಾಮದ ಶ್ರೀ ಕೊಂಗಂಡ ಕರುಂಬಯ್ಯನವರು ಈ ತಾ. 2 ರಲ್ಲಿಯೂ, ನಾಂಗಾಲಗ್ರಾಮದ ಶ್ರೀ ಗುತ್ತಾಂಡ ಐಯ್ಯಪ್ಪನವರು ತಾ. 3 ರ ರಾತ್ರಿಯೂ ಇಲ್ಲಿಯ ಆಸ್ಪತ್ರೆಯಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಈ ಮೊದಲು ಇಲ್ಲಿಂದ ಬೆಳಿಗ್ಗೆ 7 ಗಂಟೆಗೆ ಹೊರಟು ಮಡಿಕೇರಿಗೆ ಹೋಗಿ, ಅಲ್ಲಿಂದ ಸಾಯಂಕಾಲ 4 ಗಂಟೆಗೆ ವಾಪಸು ಹೊರಡುತ್ತಿದ್ದ ಇಗ್ಗುತಪ್ಪ ಬಸ್ಸ್ ಸರ್ವಿಸು ಈ ಮಧ್ಯೆ ನಿಂತು ಹೋಗಿದ್ದದ್ದು ಈಗ ಪುನಹ ನಡೆಯಲು ಸುರುವಾಗಿದೆ.

ವರ್ತಮಾನ ಸಂಗ್ರಹ.

ಅಮ್ಮತ್ತಿ.

ಇಲ್ಲಿಯ ಕಾರ್ಮಾಡು ಗ್ರಾಮದ ಮಿ. ಕುಟ್ಟಂಡ ಮಾಚಯ್ಯನವರ ಮನೆಗೆ ಕಳೆದ ತಾ. 31ರಲ್ಲು ಮಧ್ಯಾಹ್ನ ಆಕಸ್ಮಾತು ಬೆಂಕಿಬಿದ್ದು, ಅಂದಾಜು 800 ರೂ. ನಷ್ಟವಾಗಿದೆಯೆಂಬ ವರ್ತಮಾನ.

ನಾಪೋಕ್ಲು.

ಈ ನಾಡಿನ ದನಗಳ ಜಾತ್ರೆಯು ಮತ್ತು ತರಕಾರಿಗಳ ಪ್ರದರ್ಶನವು ಈ ತಾ 20ರಲ್ಲಿ ಕೊಟ್ಟಮುಡಿ ಪರಂಬಿನಲ್ಲಿ ನಡೆಯುವುದು.

ಶ್ರೀ ಭಗಂಡೇಶ್ವರ ಬಸ್ ಸರ್ವಿಸು ಇನ್ನುರ ವರೆಗೆ ಮಡಿಕೇರಿಯಿಂದ ಅಪರಾಹ್ನ 2½ ಗಂಟೆಗೆ ಹೊರಟು ನಾಪೋಕ್ಲಿಗೆ 4 ಗಂಟೆಗೆ ತಲುಪಿ ಅಲ್ಲೇ ನಿಲ್ಲುತ್ತಿತ್ತು. ಆದರೆ ಈಚೆಗೆ ಈ ಬಸ್ಸು 4 ಗಂಟೆಗೆ ನಾಪೋಕ್ಲಿನಿಂದ ಹೊರಟು ಕಕ್ಕಬೆಗೆ 5 ಗಂಟೆಗೆ ತಲುಪಿ ಮಾರನೆ ದಿನ 7½ ಗಂಟೆಗೆ ಹೊರಟು ಮಡಿಕೇರಿಗೆ 9½ ಗಂಟೆಗೆ ವಾಪಸು ಬಂದು ತಲುಪುತ್ತದೆಂದು ತಿಳಿಯಬರುತ್ತದೆ.

ಹುದಿಕೇರಿ.

ಈ ತಾ. 1ರಲ್ಲಿ ಇಲ್ಲಿಯ ರಾಮಮಂದಿರದಲ್ಲಿ ಶ್ರೀಮಾನ್ ಚೆಕ್ಕೆರ ಅಪ್ಪಯ್ಯನವರ ಸಂಗೀತ ಕಚೇರಿ ನಡಿಸಿ, ಅಲ್ಲಿಯ ಪಬ್ಲಿಕಿನವರು ಆವರಿಗೊಂದು ಚಿನ್ನದ ಪದಕವನ್ನು ಕೊಟ್ಟು ಅವರನ್ನು ಬಹುಮಾನಿಸಿದಲ್ಲದೆ, ಆ ದಿನ ಭಾಷಣಗಳೂ, ಹರಿಕೀರ್ತನೆಯೂ ನಡೆದವು.

ಕುಟ್ಟ.

ಈ ತಾ. 30 ರ ಮಧ್ಯಾಹ್ನ ಇಲ್ಲಿಯ ಪೇಟೆಯಲ್ಲಿ ಆಕಸ್ಮಾತು ಬೆಂಕಿ ಬಿದ್ದು ಕೆಲವು ಕಟ್ಟಡಗಳೂ, ಅವುಗಳಲ್ಲಿದ್ದ ಸಾಮಾನುಗಳೂ, ಬೆಂದು ಹೋಗಿ ಸುಮಾರು ರೂ. 4000 ದಷ್ಟು ನಷ್ಟ ಸಂಭವಿಸಿದೆ.

ಗಜೆಟ್.

ಕೊಡಗು ಪ್ರಾಂತೀಕ ಟ್ರಾನ್ಸ್‌ಪೋರ್ಟ್ ಬೋರ್ಡಿಗೆ ಕಮಿಷನರವರು (ಅಧ್ಯಕ್ಷರು) ಅಸಿಸ್ಟೆಂಟ್ ಕಮಿಷನರವರು, ಡಿಸ್ಟ್ರಿಕ್ಟ್ ಪೊಲೀಸು ಸುಪರಿಂಟೆಂಡೆಂಟರು (ಸೆಕ್ರೆಟರಿಯವರು,) ಎಗ್ಸಿಕ್ಯುಟಿವ್ ಇಂಜಿನೀಯರು, ಬಿ. ಟಿ. ಕೆ. ಚಂಗಪ್ಪನವರು, ಮಿ. ಜೆ. ಇ. ಯಫ್. ಮೋರಿಸ್‌ರವರು, ಡಿಸ್ಟ್ರಿಕ್ಟ್ ಬೋರ್ಡಿನ ಮತ್ತು ಅದರ ಅಧ್ಯಕ್ಷ ಶ್ರೀ ಪಿ. ಐ. ಬೆಳ್ಯಪ್ಪನವರು ಮತ್ತು ಮಡಿಕೇರಿ ಮತ್ತು ವೀರಾಜಪೇಟೆ ಮುನ್ಸಿಪಾಲಿಟಿಗಳ ಪರ ಮಡಿಕೇರಿ ಮುನ್ಸಿಪಾಲಿಟಿ ಕಮಿಟಿ ಮೆಂಬರು ಶ್ರೀ ಆರ್. ಯಂ. ಕರುಂಬಯ್ಯನವರು ಮೆಂಬರುಗಳಾಗಿ ನೇಮಿಸಲ್ಪಟ್ಟಿರುವರು.

ನಾಗರಹೊಳೆ ರೇಂಜಿನ ಕಲ್ಲಳ್ಳ ಫಾರೆಸ್ಟಿನಲ್ಲಿ ಆಗಾಗ್ಯೆ ಕಂಡುಬರುವ 'ಕಲ್ಲಳ್ಳ ರೋಗ್' ಆನೆಯನ್ನು ಗುಂಡು ಹೊಡೆಯಲು ಮೊಫ ಲೈಸನ್ಸಿಗೆ ಇಚ್ಛಿಸುವವರು ಅರ್ಜಿ ಬರೆಯಬಹುದೆಂದು ಪ್ರಕಟವಾಗಿದೆ.

ಕಳೆದ ಫೆಬ್ರವರಿ ತಿಂಗಳಲ್ಲಿ ಕೊಡಗಿನಲ್ಲಿ 306 ಜನನಗಳು ಮತ್ತು 237 ಮರಣಗಳು ಸಂಭವಿಸಿದವೆಂದು ಗಜೆಟಿನಲ್ಲಿ ಪ್ರಕಟಿಸಲ್ಪಟ್ಟಿದೆ.

ಬೇಸಿಗೆ ಕಾಲದ ರಜೆಗಾಗಿ ಕೊಡಗಿನ ಸಿವಿಲ್ ಕೋರ್ಟುಗಳು ಏಪ್ರಿಲ್ 22 ರಿಂದ ಜೂನ್ 2 ರ ವರೆಗೂ, ಜುಡಿಶ್ಯಲ್ ಕಮಿಶನರ ಕೋರ್ಟು ಏಪ್ರಿಲ್ 22ರಿಂದ ಜೂನ್ 21ರ ವರೆಗೂ ಮುಚ್ಚಲ್ಪಡವವು. ತುರಿತ ಕೆಲಸಗಳಿಗೆ ಏರ್ಪಾಡು ಮಾಡಲಾಗುವದು.

5 ಯೂ ಹೆಚ್ಚು ಬಸ್ಸುಗಳನ್ನು ಇಟ್ಟುಕೊಂಡಿರುವವರಿಗೆ 5ಕ್ಕೊಂದರಂತೆ (ಸ್ಪೇರ್) ಹೆಚ್ಚಿನ ಬಸ್ಸನ್ನು ಆರ್ಥ ಕೆರಿಗೆಯಲ್ಲಿ ಇಟ್ಟುಕೊಳ್ಳಲು ಬಿಡಲಾಗುವದೆಂದು ಸರಕಾರದವರು ತೀರ್ಮಾನಿಸಿರುವರು.

ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಸುವದೇನಂದರೆ—

ನಂಬ್ರು 77 ನೇ ಸೋಮವಾರಪೇಟೆ ಟಾನ್ ಅಗ್ರಿಕಲ್ಚರಲ್ ಕೋಆಪರೇಟಿವ್ ಕ್ರೆಡಿಟ್ ಲಿಮಿಟೆಡ್ ಸಂಘದಿಂದ—

ಈ ಕೆಳಗೆ ನಮೂದಿಸಿರುವ ಸಂಘದ ಮೆಂಬರುಗಳು ಸದರಿ ಸಂಘಕ್ಕೆ ಸಾಲಗಾರರಾಗಿರುವದರಿಂದ ಇವರುಗಳ ಮೇಲೆ ಜಾರಿ ನಡೆಸಿ ಅವರುಗಳ ಬಾಪ್ತು ಕಾಫಿ ತೋಟಗಳ 1940-41 ನೆ ಸಂವತ್ಸರದ ಕಾಫಿ ಪಸಲನ್ನು ಯಾರಿಗೂ ಗಿರ್ವಿ, ಭೋಗ್ಯ, ಕ್ರಯ, ವಗ್ಯೆರೆಯಾಗಿ ಪರಾಧೀನ ಮಾಡಕೂಡದೆಂಬದಾಗಿ ಕೋರ್ಟು ಮೂಲಕ ಕಡೇ ನೋಟೀಸು ಆಗಿರುವದರಿಂದ ಅವರುಗಳ ಬಾಪ್ತು ಕಾಫಿ ಪಸಲನ್ನು ಯಾರೂ ತೆಗೆದುಕೊಳ್ಳಬಾರದಾಗಿ ಈ ಮೂಲಕ ತಿಳಿಸೋಣಾಗಿದೆ. ಅಲ್ಲದೆ ಹಾಗೇನಾದರೂ ಯಾರೂ ಗಿರ್ವಿ, ಭೋಗ್ಯ, ಕ್ರಯ ವಗ್ಯೆರೆಯಾಗಿ ಪಡಕೊಂಡದ್ದೇ ಆದರೆ ಹಾಗೆ ಪಡಕೊಂಡವರು ಈ ಕೆಳಗೆ ಕಾಣಿಸಿರುವ ಆಯಾಯ ಮೆಂಬರುಗಳಿಂದ ಸಂಘಕ್ಕೆ ಬರಲಿಕ್ಕಿರುವ ಹಣವನ್ನು ಈ ಲಾಗಾಯಿತು ಅದಕ್ಕಾಗುವ ಬಡ್ಡಿಯನ್ನೂ ಸಹ ಸಂಘಕ್ಕೆ ಪಾವತಿ ಮಾಡಲು ಜವಾಬ್ದಾರರಾಗತಕ್ಕದ್ದು.

ಬಾಕಿದಾರರಾದ ಮೆಂಬರುಗಳ ಹೆಸರುಗಳು.	ತಾ. 20.3 10ಕ್ಕೆ ಬರತಕ್ಕ ಬಾಬಗು ರೂ. ಆ. ಪೈ.
ಮಿ. ಕೆ. ಯಸ್. ಮಲ್ಲು ಶೆಟ್ಟಪ್ಪನವರು ..	422- 0-0
,, ಬಿ. ಎಸ್. ರವಪ್ಪನವರು ..	424- 6-0
,, ಬಿ. ಮಾಲೆಮನೆ ಕರಿಯಪ್ಪ ಶೆಟ್ರು ..	466- 8-4
,, ಕೆಳ್ಳಾಮನೆ ಶಾಂತಮಲ್ಲಪ್ಪನವರು ..	721- 4-5
,, ಬೆಲ್ಲದ ಶಾಂತಮಲ್ಲಪ್ಪನವರು ..	103-10-3
,, ಬಿ. ಕೆ. ಶಿವಪ್ಪಶೆಟ್ರು	97-14-1
ಶ್ರೀ. ಕಡೇಮನೆ ಮಲ್ಲಮ್ಮನವರು ..	110- 8 3
,, ಬ್ರಾ. ಪುಟ್ಟುತಾಯಮ್ಮನವರು ..	92-11-6

ಎಸ್. ಟಿ. ವೀರಪ್ಪ,
2-1 ಗೌರವ ಕಾರ್ಯದರ್ಶಿ,
ಸೋಮವಾರಪೇಟೆ ಟೌನ್ ಸಿ. ಸಿ. ಯಸ್

ನೋಟೀಸು.

ಜಮೀನ್ದಾರರ ಸಂಘ, ತಾ. 2-4-'40.

ಕೊಡಗು ಜಮೀನ್ದಾರರ ಸಂಘದ ವಾರ್ಷಿಕ ಮಹಾ ಸಭೆಯನ್ನು ನಡಿಸಲು ಏರ್ಪಾಡು ಮಾಡುವುದನ್ನು ಕುರಿತು ಆಲೋಚಿಸಲು ಸದರಿ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗೊಂದು ಈ ತಾ. 10 ನೇ ಬುಧವಾರ ಬೆಳಿಗ್ಯೆ 10½ ಗಂಟೆಗೆ ವೀರಾಜಪೇಟೆ ಅಂಜುಮನ್ ಹಾಲ್‌ನಲ್ಲಿ ನಡೆಯುವುದು. ಮೆಂಬರುಗಳೆಲ್ಲರೂ ದಯಮಾಡಿಸಬೇಕಾಗಿ ಕೋರಿಕೆ.

ಪಿ. ಜಿ. ಐಯ್ಯಪ್ಪ,
(ಗೌ. ಕಾರ್ಯದರ್ಶಿ.)

ಖಾದಿ ಮಾರಾಟ.

ಅಖಿಲ ಭಾರತ ನೂಲುವ ಸಂಘದ ಕರ್ನಾಟಕ ಶಾಖೆಯವರು (ಬೆಂಗಳೂರಿನಿಂದ) ಕೊಡಗು ಜಿಲ್ಲಾ ಕಾಂಗ್ರೆಸು ಕಮಿಟಿಯವರ ಕೋರಿಕೆ ಮೇರೆ ಈ ಕೆಳಗಿನ ಸ್ಥಳಗಳಲ್ಲಿ ಕೈನೂಲಿನ ಖಾದಿ ಬಟ್ಟೆಯನ್ನು ಮಾರಾಟಕ್ಕೆ ಇಡುವರು. ಖಾದಿ ಮೊದಲಿನಿಂದ ತೆಗೆದುಕೊಂಡಿರುವವರೂ, ಇತರ ಎಲ್ಲಾ ದೇಶಾಭಿಮಾನಿಗಳೂ ಖಾದಿ ಬಟ್ಟೆಯನ್ನು ಕೊಂಡು ಕೊಂಡು ಅದನ್ನು ಉಪಯೋಗಿಸುವ ಬಡ ಸಹೋದರ, ಸಹೋದರಿಯರಿಗೆ ಹೊಟ್ಟೆಗೆ ಒಂದು ತುತ್ತು ಅನ್ನ ಕೊಡಲು ಸಹಾಯ ಮಾಡುವರೆಂದಾಗಿ ಕೋರಿಕೆ.

ಈ ತಾ. 8ನೇ ಸೋಮವಾರ ಮತ್ತು 9ನೇ ಮಂಗಳವಾರ .... ಅಮ್ಮತ್ತಿಯಲ್ಲಿ.
,, 10ನೇ ಬುಧವಾರದಿಂದ 13ನೇ ಶನಿವಾರದ ವರೆಗೆ .... ವೀರಾಜಪೇಟೆ.
,, 14ನೇ ಸೋಮವಾರ ಮತ್ತು 15ನೇ ಮಂಗಳವಾರ ಹುದಿಕೇರಿ, ಪೊನ್ನಂಪೇಟೆ.
,, 17ನೇ ಬುಧವಾರ .... ವೀರಾಜಪೇಟೆ.
,, 18ನೇ ಗುರುವಾರ .... ಮೂರ್ನಾಡು.
,, 19ನೇ ಶುಕ್ರವಾರದಿಂದ 26ನೇ ಶುಕ್ರವಾರದ ವರೆಗೆ .... ಮಡಿಕೇರಿ.

ಕೊ. ಜಿ. ಕಾಂಗ್ರೆಸ್ ಕಮಿಟಿ,
ಮಡಿಕೇರಿ, ತಾ. 4-4-'40.

ಬಿ. ಯಂ. ಕಾರ್ಯಪ್ಪ,
(ಗೌ. ಕಾರ್ಯದರ್ಶಿ)

ಸೆಂಟ್ರಲ್ ಬ್ಯಾಂಕು ಮೀಟಿಂಗು.

(5 ನೇ ಪುಟದಿಂದ ಸಾಗಿದ್ದು.)

ಅಲ್ಲದೆ ಇಂಡಿಯನ್ ಕೋ-ಆಪರೇಟಿವ್ ಮಿಶನರಿ ಸೊಸೈಟಿಯ ವಿಷಯ ಸಬ್ ಕಮಿಟಿಯವರು ಬರಕೊಂಡ ರಿಪೋರ್ಟು ಮಂಜೂರು ಮಾಡಲಾಯಿತು.

12. ಶ್ರೀಮತಿ ಬಡುವಂಡ ಅಮ್ಮವ್ವನವರು ಬ್ಯಾಂಕಿನಲ್ಲಿ ತನ್ನ ಹೆಸರಿನಲ್ಲಿರುವ 10 ಶೇರುಗಳ ಪೈಕಿ ಐದು ಶೇರುಗಳನ್ನು ತನ್ನ ಮಗ ಬೆಳ್ಯಪ್ಪನವರ ಹೆಸರಿಗೆ ವರ್ಗಾಯಿಸಬೇಕಾಗಿ ಬರಕೊಂಡ ಪತ್ರದ ಮೇರೆ ವರ್ಗಾಯಿಸುವಂತೆ ತೀರ್ಮಾನಿಸಲಾಯಿತು.

13. ಕುಂದಳ್ಳಿ ಕುಮರಳ್ಳಿ ಸಂಘದ ಪ್ರೆಸಿಡೆಂಟರು-ಬ್ಯಾಂಕಿಗೆ ಪಾವತಿ ಮಾಡಲು ಬಾಕಿ ಇರುವ ಒಟ್ಟು ಮೊಬಲಗಿಗೆ ಹತ್ತು ಕಂತು ಕೊಡಬೇಕಾಗಿ ಬರಕೊಂಡ ಅರ್ಜಿಯನ್ನು-ಆ ಸಂಘದ ಕೆಲಸ ಕಾರ್ಯಗಳ ವಿಷಯ ಯೂನಿಯನ್ ಪ್ರೆಸಿಡೆಂಟರಿಂದ ತಪಶೀಲ್ ರಿಪೋರ್ಟು ಬಗ್ಗೆ ಮುಂದಳ ಮೀಟಿಂಗಿಗೆ ಇಡಲಾಯಿತು.

14. ಕಣಗಾಲು ಸಂಘದ ಪ್ರೆಸಿಡೆಂಟರು-ಬ್ಯಾಂಕಿಗೆ ಪಾವತಿ ಮಾಡಲು ಬಾಕಿ ಇರುವ ಒಟ್ಟು ಮೊಬಲಗಿಗೆ ಹತ್ತು ಕಂತು ಕೊಡಬೇಕಾಗಿ ಬರಕೊಂಡ ಅರ್ಜಿ ಮೇರೆ ಶನಿವಾರಸಂತೆ ಯೂನಿಯನ್ ಪ್ರೆಸಿಡೆಂಟರು ತಾ. 31-3-40 ಕ್ಕೆ ಬಾಕಿ ಇರುವ ವಾಯಿದೆ ಮೀರಿದ ಸಾಲಕ್ಕೆ ತಾ. 31-3-41 ರ ವರೆಗೆ ವಾಯಿದೆ ಕೊಡಬಹುದಾಗಿ ಬರಕೊಂಡ ರಿಪೋರ್ಟು ಓದಲಾಯಿತು.

ಸದರಿ ರಿಪೋರ್ಟನ್ನು ಪುನಹ ಆ ಸಂಘದ ಹೆಚ್ಚಿನ ವಿವರದ ಬಗ್ಗೆ ಮುಂದಳ ಮೀಟಿಂಗಿಗೆ ಇಡುವಂತೆ ತೀರ್ಮಾನಿಸಲಾಯಿತು.

15. ಡೈರೆಕ್ಟರುಗಳ ನಂಬ್ರ 5154 ತಾ. 17-2-40 ರ ತೀರ್ಮಾನದ ಮೇರೆ ನೇಗಳೆ ಕರ್ಕಳ್ಳಿ ಸೊಸೈಟಿಯ ಕೆಲಸ ಕಾರ್ಯಗಳ ವಿಷಯ ರಿಪೋರ್ಟು ಮಾಡಬೇಕಾಗಿ ಸುಪರ್‌ವೈಜರಿಗೆ ಬರಕೊಂಡ ಮೇರೆ ಅವರಿಂದ ಬಂದ ರಿಪೋರ್ಟು ಓದಲಾಯಿತು.

ಈ ರಿಪೋರ್ಟನ್ನು ಸಂಘದ ಕೆಲಸ ಕಾರ್ಯಗಳ ವಿಷಯ ಹೆಚ್ಚಿನ ವಿವರ ಬಗ್ಗೆ ಇನ್ನೊಂದು ಮೀಟಿಂಗಿಗೆ ಮುಂದರಿಸಿಡಲಾಯಿತು.

16. ಬೆಕ್ಕೆಸೊಡ್ಲೂರು ಗ್ರಾಮದ ಪೋರಂಗಡ ಬಿದ್ದಯ್ಯನವರ ಮನೆಯು ಆಕಸ್ಮಾತ್ತಾಗಿ ಬೆಂದು ಹೋದ್ದರಿಂದ ಬ್ಯಾಂಕಿನಿಂದ ತನಗೆ ಧನ ಸಹಾಯಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ಸದರಿ ಅರ್ಜಿ ಮೇರೆ ನಷ್ಟ ವಗೈರೆ ಕುರಿತು ಯೂನಿಯನ್ ಮೂಲಕ ರಿಪೋರ್ಟು ಮಾಡುವಂತೆ ಸುಪರ್‌ವೈಸರಿಗೆ ಕಳುಹಿಸುವ ಹಾಗೆ ತೀರ್ಮಾನಿಸಲಾಯಿತು.

17. ಕೊಡಗಿನಲ್ಲಿ ಒಂದು ಕಿತ್ತಳೆ ಮಾರಾಟಮಾಡುವ ಸಂಘವನ್ನು ಏರ್ಪಡಿಸುವ ಏರ್ಪಾಡು ಮಾಡುವಂತೆ ರಿಜಸ್ಟ್ರಾರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

18. ಕೊಡಗು ಕಾಫಿ ಪ್ಲಾಂಟರುಗಳ ಸಂಘದ ಕಮಿಟಿಯನ್ನು 'ಸುಪರ್‌ಸೀಡ್' ಮಾಡಬೇಕಾಗಿ ಅನೇಕಾವೃತ್ತಿ ರಿಜಸ್ಟ್ರಾರವರನ್ನು ಕೇಳಿಕೊಂಡಾಗ್ಯೂ ಕೂಡ ರಿಜಸ್ಟ್ರಾರವರು ಅವರಿಗೆ ವಾಯಿದೆ ಕೊಟ್ಟಿರುವ ಸಂಗತಿ ನಮ್ಮ ತಿಳುವಳಿಕೆಗೆ ಬಂದಿದೆ; ಹಾಗೆ ವಾಯಿದೆ ಕೊಟ್ಟಿರುವ ಪಕ್ಷ ಅದು ರಿಜಸ್ಟ್ರಾರವರ ಸ್ವಂತ ಜವಾಬ್ದಾರಿಕೆ ಮೇರೆ ಕೊಟ್ಟಿದೆಂತ ಊಹಿಸಿಕೊಳ್ಳಲಾಗದೆಯೆಂತ ರಿಜಸ್ಟ್ರಾರವರಿಗೆ ತಿಳಿಸುವಂತೆ ತೀರ್ಮಾನಿಸಲಾಯಿತು.

19. ಗಜೆಟೆಡ್ ಆಫೀಸರು ಮುಖ್ಯವಾಗಿ ಜುಡಿಶ್ಯಲ್ ಆಫೀಸರುಗಳು ಬ್ಯಾಂಕಿನ ಮಹಾಸಭೆಯ ನಡವಳಿಕೆಗಳಲ್ಲಿ ಪ್ರಮುಖ್ಯ ಭಾಗವಹಿಸುವುದು ಇತರ ಮೆಂಬರುಗಳಿಗೆ ತಮ್ಮ ಅಭಿಪ್ರಾಯಗಳನ್ನು ಸ್ವೇಚ್ಛೆಯಾಗಿ ವ್ಯಕ್ತಪಡಿಸಲು ಅಡಚಣೆಯಾಗುತ್ತಿರುವ ಕಾರಣ ಅಂಥಾ ಆಫೀಸರುಗಳು ಇನ್ನು ಮುಂದೆ ಹಾಗೆ ಭಾಗವಹಿಸದಂತೆತಕ್ಕ ಏರ್ಪಾಡು ಮಾಡಲು ಕಮಿಷನರವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

20. ಕೈಕೇರಿ ಹರಿಜನರ ಸಂಘದವರು, ಬ್ಯಾಂಕಿನ ಜನರಲ್ ಮೀಟಿಂಗಿನಲ್ಲಿ ತಮಗೆ ರಾತ್ರಿ ಶಾಲೆ ಕಟ್ಟಲು ಮಂಜೂರ್ಮಾಡಿದ ನೂರು ರೂಪಾಯಿಗಳನ್ನು ಕೊಡಿಸಿಕೊಡಬೇಕಾಗಿ ಬರಕೊಂಡ ಅರ್ಜಿ ಮೇರೆ ಕೊಡಬಹುದೆಂತ ತೀರ್ಮಾನಿಸಲಾಯಿತು.

21. ಬ್ಯಾಂಕಿನ ಡೈರೆಕ್ಟರುಗಳ ಇನ್ನೊಂದು ಮೀಟಿಂಗನ್ನು ತಾ. 12-4-40 ರಲ್ಲು ನಡೆಸುವಂತೆ ತೀರ್ಮಾನಿಸಲಾಯಿತು.

ಪಿ. ಐ. ಬೆಳ್ಯಪ್ಪ,
(ಅಧ್ಯಕ್ಷರು)

ಬಾತ್ಮಿ.

ಡಿಸ್ಟ್ರಿಕ್ಟ್ ಜಡ್ಜರ ಹುದ್ದೆ.

ಅಯ್ಯಾ,

ಕೊಡಗಿಗೆ ಒಂದು ಪ್ರತ್ಯೇಕ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರ ಹುದ್ದೆಯು ಏರ್ಪಡಿಸಲ್ಪಡುವುದೆಂದು ಕಳೆದ ಕೌನ್ಸಿಲು ಮೀಟಿಂಗಿನಲ್ಲಿ ತಿಳಿಯಬಂತು. ಈ ಏರ್ಪಾಡನ್ನು ಜಾರಿಗೆ ತಂದರೆ ಕೊಡಗಿನಲ್ಲಿ ಮೂರು ಸಿವಿಲ್ ಕೋರ್ಟುಗಳಾಗುವವು. ಈ ಮೂರು ಕೋರ್ಟುಗಳಿಗೆ ಸಾಕಷ್ಟು ಕೆಲಸವಿದೆಯೋ ಎಂದು ಆಲೋಚಿಸಬೇಕಾಗಿದೆ.

ಹೊಸ ಕಮಿಷನರು ತಮ್ಮ ಫೈಲಿನಲ್ಲಿದ್ದ ಸಿವಿಲ್ ಕೇಸುಗಳನ್ನೆಲ್ಲಾ ತೀರ್ಮಾನಿಸಿರುವರೆಂದು ವರ್ತಮಾನ. ರೂ. 2500 ಕ್ಕಿಂತ ಹೆಚ್ಚು ಮೌಲ್ಯದ 4 ಯಾ 5 ಕೇಸುಗಳು ಮಾತ್ರ ಸಬಾರ್ಡಿನೇಟ್ ಜಡ್ಜರ ಫೈಲಿನಲ್ಲಿರಬಹುದು. ಡಿಸ್ಟ್ರಿಕ್ಟ್ ಜಡ್ಜರು ರೂ. 2500 ಕ್ಕಿಂತ ಹೆಚ್ಚು ಮೊಬಲಗಿನ ಕೇಸುಗಳನ್ನು ಮಾತ್ರ ವಿಚಾರಿಸುವರು. ಮುಂದೆ ಇಂಥಾ ಕೇಸುಗಳು ವರ್ಷಕ್ಕೆ 5 ಯಾ 6 ಕ್ಕೆ ಮೀರಲಾರವು. ಅವುಗಳಲ್ಲಿ ಅರ್ಧಕ್ಕಿಂತ ಹೆಚ್ಚು ವಿಚಾರವಿಲ್ಲದೆ ಯಾ ವಾದವಿಲ್ಲದೆ ತೀರ್ಮಾನಿಸಲ್ಪಡಬಹುದು. ಡಿ. ಜಡ್ಜರಿಗೆ ಉಳಿದ ಕೆಲಸವೆಂದರೆ ಅಪ್ಪೀಲುಗಳನ್ನು ಕೇಳುವುದು. ಜುಡಿಶ್ಯಲ್ ಕಮಿಷನರು ತೀರ್ಮಾನಿಸುವ ಅಪ್ಪೀಲುಗಳ ಲೆಖ್ಖದ ಮೇರೆ ಇವು (ರೆಗ್ಯುಲರ್ ಮತ್ತು ಮಿಸಲೇನಿಯಸ್) 25 ಕ್ಕೆ ಮೀರಲಾರವು. ಈ ಕೆಲಸವನ್ನು ಡಿ. ಜಡ್ಜರು ಒಂದು ವಾರದಲ್ಲಿ ಮುಗಿಸಬಹುದು. ಕೊಡಗಿನಲ್ಲಿ ಕ್ರಿಮಿನಲ್ ಕೇಸುಗಳು ಬಹು ಕಡಿಮೆ. ಮುನ್ಸೀಫರುಗಳು ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರುಗಳಾಗಿರುವುದರಿಂದ ವರ್ಷಕ್ಕೆ 6 ಕ್ಕಿಂತ ಹೆಚ್ಚು ಕ್ರಿಮಿನಲ್ ಅಪ್ಪೀಲುಗಳೂ, 6 ಕ್ಕಿಂತ ಹೆಚ್ಚು ಸೆಷನ್ಸ್ ಕೇಸುಗಳೂ ಇರಲಾರವು. ಇವಲ್ಲಕ್ಕೆ 3 ವಾರಗಳ ಸಮಯ ಹಿಡಿಯಬಹುದು. ಇವಕ್ಕೆ ಒಟ್ಟಾಗಿ ಡಿ. ಜಡ್ಜರಿಗೆ 6 ವಾರಗಳ ಕೆಲಸವಿರಬಹುದು; ಹೆಚ್ಚೆಂದರೆ 2 ತಿಂಗಳಿಗಿಂತ ಹೆಚ್ಚು ಕೆಲಸವಿಲ್ಲ. ಇಷ್ಟಕ್ಕಾಗಿ ಒಬ್ಬ ಪ್ರತ್ಯೇಕ ಡಿ. ಜಡ್ಜರನ್ನು ಇಡುವುದು ನ್ಯಾಯವೋ?

ಕಳೆದ ಕೌನ್ಸಿಲಿನ ಬಜೆಟ್ ಮೀಟಿಂಗಿನಲ್ಲಿ ಡಿ. ಜಡ್ಜರನ್ನು 3 ವರ್ಷಕ್ಕೊಮ್ಮೆ ಬದಲಾಯಿಸಬೇಕೆಂಬ ರಣವಿತ್ತು. 12 ಚುನಾಯಿತ ಮೆಂಬರುಗಳ ಪೈಕಿ 6 ಜನರು ಇದಕ್ಕೆ ಪರವಾಗಿ ಓಟು ಮಾಡಿದ್ದು ದೇಶದ ಜನರ ಅಭಿಪ್ರಾಯ ಹೇಗಿದೆಯೆಂದು ಸೂಚಿಸುತ್ತೆ. ವಿರೋಧ ಮಾಡಿದವರಲ್ಲಿ ಇಬ್ಬರು ಲಾಯರು ಮೆಂಬರುಗಳು; ಇವರು ತಮ್ಮ ವೃತ್ತಿಯಲ್ಲಿದ್ದವರಿಗೆ ಸಹಾಯ ಮಾಡದಿರುವುದು ಹೇಗೆ? ಚಿಕ್ಕ ಪ್ರಾಂತ್ಯದಲ್ಲಿ ವ್ಯಕ್ತಿಗತ ಸ್ನೇಹ ಮತ್ತು ದ್ವೇಷಗಳು ಹೆಚ್ಚಾಗಿದ್ದು, ಪಾರ್ಟಿಪಂಗಡಗಳನ್ನು ವಹಿಸುವ ಲಾಯರುಗಳ ಪೈಕಿ ಮಹನೀಯರನ್ನು ಜಡ್ಜ್ ಕೆಲಸಕ್ಕೆ ಆರಿಸುವ ಇಲ್ಲಿ ಒಬ್ಬರೇ ಮೂರು ವರ್ಷಕ್ಕಿಂತ ಹೆಚ್ಚು ಮುಖ್ಯ ಜಡ್ಜರಾಗಿರುವುದು ಅಪಾಯಕರವೇ ಸರಿ.

ಈ ತೊಂದರೆಗಳ ದೆಸೆಯಿಂದಲೂ, ಡಿ. ಜಡ್ಜರಿಗೆ ಕೆಲಸ ಬಹಳ ಕಡಿಮೆಯಾಗಿರುವುದರಿಂದಲೂ ಬೇರೆ ಕಡೆಯಿಂದ ಒಬ್ಬ ರಿಟೈಯರ್ಡ್ ಜಡ್ಜರನ್ನು ಡಿ. ಜ. ರಾಗಿ ನೇಮಿಸಬಹುದೆಂದು ಸೂಚಿಸಲಾಗಿದೆ. ಇಂಥವರ್ಯಾರಾದರೂ ರೂ. 300 ರಿಂದ 400 ಸಂಬಳಕ್ಕೆ ಸಿಕ್ಕಬಹುದು. ಇದು ಸಾಧ್ಯವಿಲ್ಲವಾದರೆ, ಮದ್ರಾಸಿನ ಡಿ. ಜಡ್ಜರೊಬ್ಬರನ್ನು 2 ತಿಂಗಳಿಗೊಮ್ಮೆ ಒಂದು ವಾರದ ಮಟ್ಟಿಗೆ ಇಲ್ಲಿಗೆ ಬರಮಾಡಿಕೊಳ್ಳುವ ಏರ್ಪಾಡು ಮಾಡಬಹುದು; ಅವರು ಇಲ್ಲಿಯ ಕೆಲಸವನ್ನು ಖಂಡಿತವಾಗಿ ಮುಗಿಸಬಹುದು. ಮದ್ರಾಸು ಸರ್ಕಾರದೊಂದಿಗೆ ಏರ್ಪಾಡು ಮಾಡಿದರೆ ಮಲಬಾರು ಯಾ ದ. ಕನ್ನಡದಿಂದ ಜಡ್ಜರನ್ನು ಬರಮಾಡಿಕೊಳ್ಳಬಹುದು; 2 ತಿಂಗಳಿಗೆ ಈ ಬಾಬಿನ ಖರ್ಚು ರೂ. 400 ಯಾ 500 ಕ್ಕಿಂತ ಹೆಚ್ಚಾಗಲಾರದು. ಸ್ವತಂತ್ರವಾದ ಮತ್ತು ಅರ್ಹತೆಯುಳ್ಳ ಜಡ್ಜರಾಗಬೇಕೆಂದು ಲಾಯರುಗಳೇ ಹೋರಾಡುತಿದ್ದರು; ಈಗ ಅವರು ಇದಕ್ಕೆ ವಿರೋಧಿಸಲಾರರು. ಕೋರ್ಟುಗಳಿಗೆ ಹೋಗುವವರಿಗೆ ಇದರಿಂದ ನ್ಯಾಯವಾದ ತೀರ್ಪು ದೊರೆಯನ್ನುದು. ಸರಕಾರದವರು ಒಮ್ಮೆ ಕಾಯಂ ಆದ ಉದ್ಯೋಗವನ್ನು ನೇಮಿಸಿದ ನಂತರ ಅದನ್ನು ಅವರಿಂದ ಬದಲಾಯಿಸಲು ಸಾಧ್ಯವಾಗಲಿಕ್ಕಿಲ್ಲ. ಆದ್ದರಿಂದ ಅವರು ಚೆನ್ನಾಗಿ ಆಲೋಚಿಸಿ ತೀರ್ಮಾನಿಸಬೇಕು. ಹೇಗೂ ಅವರು ಮಾಡುವ ಏರ್ಪಾಡು ಒಂದು ವರ್ಷದ ವರೆಗೆ ಹೇಗೆ ನಡೆಯುತ್ತದೆಂದು ನೋಡುವ ವರೆಗೆ ಉದ್ಯೋಗವನ್ನು ಖಾಯಂಮಾಡುವುದು ಉಚಿತವಲ್ಲ. ಸರಕಾರದವರು ಈ ಸೂಚನೆಗೆ ಗಮನಕೊಡುವುದು ಬುದ್ಧಿವಂತಿಕೆಯಾಗಿದೆ.

ಮುನ್ಸೀಫರುಗಳ ವಿಷಯ ಸ್ವಲ್ಪ ಹೇಳಬೇಕಾಗಿದೆ. ಕಳೆದ ಕೌನ್ಸಿಲು ಮೀಟಿಂಗಿನಲ್ಲಿ 602 ನೇ ಪ್ರಶ್ನೆಗೆ ಸರಕಾರದವರು ಕೊಟ್ಟ ಜವಾಬನ್ನು ಪಬ್ಲಿಕಿನವರು ಓದಿ ಅರ್ಥಮಾಡಿಕೊಳ್ಳಬೇಕಾಗಿದೆ. ಕೊಡಗಿನ ಎಲ್ಲಾ ಕೋರ್ಟುಗಳಲ್ಲಿ 1939 ನೇ ಇಸವಿಯಲ್ಲಿ 198 ಒರಿಜಿನಲ್ ಕೇಸುಗಳೂ, 787 ಸ್ಮಾಲ್‌ಕಾಸ್ ಕೇಸುಗಳೂ, 3328 ಎಗ್ಸಿಕ್ಯೂಶನ್‌ಗಳೂ ನಡೆದವು. ವೀರಾಜಪೇಟೆ ಮುನ್ಸೀಫ್ ಕೋರ್ಟು ಒಂದರಲ್ಲಿಯೇ 1931 ರಲ್ಲಿ ಒರಿಜಿನಲ್ ಕೇಸು 193, ಸ್ಮಾಲ್‌ಕಾಸ 1534 ಮತ್ತು ಎಗ್ಸಿಕ್ಯೂಶನ್‌ಗಳು 3843 ಇದಿದ್ದವು. ಇವುಗಳ ಪೈಕಿ ಸುಮಾರು ಅರ್ಧದಷ್ಟು ಎಕ್ಸ್‌ಪಾರ್ಟಿ ಯಾ ವಾದವಿಲ್ಲದೆ ತೀರ್ಮಾನವಾದವು. 1939 ರಲ್ಲಿ ಕೊಡಗಿನ ಎಲ್ಲಾ ಕೋರ್ಟುಗಳ ಒಟ್ಟು ಕೆಲಸವು 1931 ರಲ್ಲಿ ಒಂದು ಕೋರ್ಟಿನ ಕೆಲಸಕ್ಕಿಂತ ಕಡಿಮೆ ಎಂದ ಮೇಲೆ ಈಗ 3 ಕೋರ್ಟುಗಳನ್ನು ಇಟ್ಟುಕೊಳ್ಳುವುದರಲ್ಲಿ ಅರ್ಥವೇನಿದೆ? ಎಷ್ಟಾದರೂ ಕೊಡಗಿಗೆ ಇಬ್ಬರು ಮುನ್ಸೀಫರುಗಳ ಅವಶ್ಯಕತೆಯಾದರೂ ಏನು? ಈಗಿನ ಏರ್ಪಾಡು ಹಂಗಾಮಿಯದೆಂದು ತಿಳಿದು ಬರುತ್ತೆ. ಈ ನೇಮಕಗಳನ್ನು ಖಾಯಂ ಮಾಡುವ ಮುಂಚೆ ಸರಕಾರದವರು ದೀರ್ಘಾಲೋಚನೆ ಮಾಡಬೇಕು. 1936 ರಲ್ಲಿ ಒಂದು ಹೊಸ ಕೋರ್ಟನ್ನು ಸ್ಥಾಪಿಸಿದುದರಲ್ಲಿ ಅಧಿಕಾರಿಗಳು ದೊಡ್ಡ ತಪ್ಪನ್ನು ಮಾಡಿದರು. ಈಗ ಆ ಉದ್ಯೋಗಗಳನ್ನು ಖಾಯಂ ಮಾಡುವುದರಲ್ಲಿ ಪುನಃ ಅಂಥ ತಪ್ಪುಗಳನ್ನು ಮಾಡಬಾರದು. ಒಂದೇ ವರ್ಷದೊಳಗೆ ಎರಡು ಮುನ್ಸೀಫ್ ಉದ್ಯೋಗಗಳ ಅನಾವಶ್ಯಕತೆಯು ಯಾ ದುಂದುಗಾರಿಕೆಯು ಸರಕಾರಕ್ಕೆ ತಿಳಿಯದಿರದು. ಸಾಲಕೊಡುವವರ ಆಕ್ಟು, ಸಾಲನಿವಾರಣೆ ಬೋರ್ಡುಗಳ ಸ್ಥಾಪನೆ ಮತ್ತು ಹಳೇ ಸಾಲ ತೀರಿಸಲು ಸರಕಾರದವರು ದೀರ್ಘ ಕಂತಿನ ಸಾಲ ಕೊಡುವುದು-ಇವುಗಳು ಸಿವಿಲ್ ಕೇಸುಗಳ ಸಂಖ್ಯೆಯನ್ನು ಇನ್ನು ಮುಂದಕ್ಕೆ ಬಹು ಕಡಿಮೆ ಮಾಡುವುವು. ಮುನ್ಸೀಫರುಗಳಿಗೆ ಕ್ರಿಮಿನಲ್ ಕೆಲಸವೂ ಇರಬಹುದು ಆದರೆ ಇನ್ನೊಂದು ಪ್ರಶ್ನೆಗೆ ಕೊಟ್ಟ ಜವಾಬಿನಲ್ಲಿ ಕ್ರಿಮಿನಲ್ ಕೇಸುಗಳಲ್ಲಿ ಅರ್ಧದಷ್ಟು ಸ್ಥಳೀಯ ಕಾನೂನಿಗೆ ಸಮ್ಮಂದಪಟ್ಟು ಐದು ರೂಪಾಯಿ ಒಳಗಿನ ಜುಲ್ಮಾನೆ ವಿಧಿಸುವಂತವು. ಉಳಿದ ಕ್ರಿಮಿನಲ್ ಕೇಸುಗಳು ಸಾಧಾರಣದವು ಆಗಿದ್ದು 3ನೇ ಕ್ಲಾಸ್ ಮೇಜಿಸ್ಟ್ರೇಟರಿಂದ ಹೆಚ್ಚಾದರೆ 2ನೇ ಕ್ಲಾಸ್ ಮೇಜಿಸ್ಟ್ರೇಟರಿಂದ ವಿಚಾರಿಸತಕ್ಕಂತವು. ಇವುಗಳ ತೀರ್ಮಾನಕ್ಕಾಗಿ ರೂ. 230 ರಿಂದ 350ರ ವರೆಗಿನ ವೇತನದ ಮುನ್ಸೀಫರ ಆವಶ್ಯಕತೆಯಿಲ್ಲ. ಇಂತಹ ಕೇಸುಗಳನ್ನು ತೀರ್ಮಾನಿಸುವ ಮೇಜಿಸ್ಟ್ರೇಟರುಗಳಿಗೆ 100 ರೂಪಾಯಿಗಿಂತ ಹೆಚ್ಚು ಕೊಡಕೂಡದು.

ಮತ್ತು ಅಂಥಾ ಕೆಲಸವು ಇಷ್ಟರ ವರೆಗೆ ಬರೇ ಮೆಟ್ರಿಕ್ಯೂಲೇಟು ಪಾಸಾದವರಿಂದ ಚೆನ್ನಾಗಿ ನಡೆಸಲ್ಪಟ್ಟಿದೆ. ಈ ಬದಲಾವಣೆಗಳನ್ನು ಕೂಡಲೇ ಮಾಡಲು ಸಾಧ್ಯವಾಗದಿರಬಹುದು. ಆದರೆ ಈಗಿನ ಏರ್ಪಾಡನ್ನು ಖಾಯಂ ಮಾಡಿದ್ದೇ ಆದರೆ 10 ಯಾ 12 ವರ್ಷ ಕಳೆದ ನಂತರ ಸರಕಾರದವರು ಇಚ್ಛಿಸಿದರೂ ಕೂಡ ಬದಲಾವಣೆ ಮಾಡಲು ಸಾಧ್ಯವಾಗಲಿಕ್ಕಿಲ್ಲ. ಆದ್ದರಿಂದ ಸರ್ಕಾರದವರು ಈ ಮೇಲಿನ ಸೂಚನೆಗಳಿಗೆ ಸಾಕಷ್ಟು ಗಮನಕೊಡುವರಾಗಿ ನಂಬುತ್ತೇನೆ. 'ದಳೀಯ'

ಮಡಿಕೇರಿ ಹುಡುಗಿಯರ ಹೈಸ್ಕೂಲು ಅಧಿಕಾರಿಗಳಲ್ಲಿ ವಿನಯಶೀಲವಾದ ಅರಿಕೆ.

ಅಮ್ಮಾ,

ನಿಮ್ಮ ವಿದ್ಯಾಲಯದ ಉದ್ಯೋಗಸ್ಥರ ಮಂಡಳಿಯಲ್ಲಿ ಶೀಘ್ರದಲ್ಲಿಯೇ ಬದಲಾವಣೆಯಿದೆ ಎಂಬ ವಾರ್ತೆಯು ವಾತಾವರಣದಲ್ಲಿ ತುಂಬಿಕೊಂಡಿದೆ. ಅದು ತಮ್ಮ ಸಂಸ್ಥೆಯ ಪ್ರಗತಿ ಪುರೋಭಿವೃದ್ಧಿಗಾಗಿಯೋ ಯಾ ಅಲ್ಲವೋ ಎಂದು ಸದ್ಯದ ಪರಿಸ್ಥಿತಿಯಲ್ಲಿ ಸ್ಪಷ್ಟೀಕರಿಸಲು ಅಸಾಧ್ಯವಾದ ವಿಷಯ. ಆದರೆ ಮತ್ತೊಂದು ದೃಷ್ಟಿಯಿಂದ ಈಕ್ಷಿಸಿದಲ್ಲಿ ಇಲ್ಲಿನ ಉಪಾಧ್ಯಾಯರ ಉದ್ಯೋಗಕ್ಕೆ ಹೊರ ಪ್ರಾಂತ್ಯದಿಂದ ಜನರನ್ನು ತಂದು ಈ ಪ್ರಾಂತ್ಯದ ಉಪಾಧ್ಯಾಯಿನಿಯರ ಸ್ಥಳದಲ್ಲಿ ನೇಮಿಸುತ್ತಿರುವಿರಿ ಎಂಬ ಹೃದಯದ್ರಾವಕವಾದ ಸಂಗತಿಯು ತಿಳಿದು ಬಂತು. ಇದನ್ನು ಕೇಳಲು ನಾವೆಲ್ಲರೂ ಪೂರಾ ಮನನೊಂದವರಾಗಿರುತ್ತೇವೆ. ನಮ್ಮ ಈ ಸ್ಥಳೀಕ ಕಾನ್ವೆಂಟಿನಲ್ಲಿರುವ ಖಾಲಿ ಸ್ಥಳಕ್ಕೆ ಹೊಸ ಪ್ರಾಂತ್ಯದಿಂದ ಜನರನ್ನು ತಂದಿರಿಸುವ ಸಂಗತಿಯು ನನಗೆ ತುಂಬಾ ವೇದನೆಯನ್ನುಂಟುಮಾಡಿದೆ. ಯಾವುದಾದರೊಂದು ಸಂಸ್ಥೆಯು ತಾನು ಪಡೆದ ಅಷ್ಟೊಂದು ಅರ್ಹತೆಯುಳ್ಳ ಯುವತಿಯರನ್ನು ಬದಿಗಿರಿಸಿ ಮತ್ತೊಂದು ಪ್ರಾಂತ್ಯದ ಜನರನ್ನು ಅಲ್ಲಿಗೆ ತರುವುದು ತುಂಬಾ ವಿಷಾದಕರವಾದ ಸಂಗತಿಯೆಂದರೆ ಅತಿಶಯೋಕ್ತಿಯಾಗಲಾರದು. ಇದು, ಇಲ್ಲಿ ತರಬೇತು ಹೊಂದಿದ ವ್ಯಕ್ತಿಗಳು ಇಲ್ಲವೆಂದೇನು? ವ್ಯಸ್ಥಿತಿಯು ಹೀಗಿಲ್ಲವೆಂದು ಭಾವಿಸುತ್ತೇನೆ. ವಿಶ್ವವಿದ್ಯಾಲಯದ ಪದವಿ ಪಡೆದಿರುವ ಮತ್ತು ಸ್ಕೂಲುಫೈನಲ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಕೊಡಗು ಮಹಿಳೆಯರು ಈ ಪ್ರಾಂತ್ಯದಲ್ಲಿ ತುಂಬಾ ಇರುವರು. ಇವರೆಲ್ಲರೂ ಈ ವೃತ್ತಿಗೆ ಅರ್ಹತೆ ಉಳ್ಳವರೆ. ಕೇವಲ ಕೊಡವರ ಹಣದ ಸಹಾಯಾವಲಂಬನೆಯಲ್ಲಿ ಉಳ್ಳ ಈ ಸಂಸ್ಥೆಯು ತನ್ನ ದೇಶದ ಕೊಡವ ಸಹೋದರಿಯರನ್ನು ಮರೆತು ಪರಪ್ರಾಂತ್ಯದವರನ್ನು ಬಯಸುವುದು ಮನನೋಯಿಸುವ ಸಂಗತಿಯಾಗಿದೆ. ಹುಡುಗಿಯರಿಗೆ ಉದಾರ ವಿದ್ಯಾಭ್ಯಾಸವನ್ನು ಕೊಡುವ ನಮ್ಮದೇ ಸರಕಾರಿ ಸಂಸ್ಥೆಗಳಿದ್ದು ಕೂಡ ಇಂಥಾ ಸಂಸ್ಥೆಯೊಡನೆ ನಾವು ಸಹಕರಿಸುತ್ತಿರುವುದನ್ನು ಮನಸ್ಸಿಗೆ ತಂದುಕೊಂಡು ನಮ್ಮಲ್ಲಿ ದಯಾಪೂರ್ವಕವಾಗಿರುವುದು ನಿಮ್ಮ ಆದ್ಯಕರ್ತವ್ಯವಲ್ಲವೇ?

ವಿದ್ವಾಂಸರಾದ, ಕರುಣೆಯಿಂದದೂಡಗೂಡಿದ 'ತಾಯಿಯರ' ಸಹಾನುಭೂತಿಯುಕ್ತ ಹೃದಯವು ಈ ವಿಷಯವನ್ನು ವಿಮರ್ಶಿಸಿ ತಮ್ಮ ಸಂಸ್ಥೆಯಲ್ಲಿಯೇ ವಿದ್ಯೆಯನ್ನು ಪಡೆದ ಬಡ ಕೊಡಗು ಮಹಿಳೆಯರನ್ನು ಈ ಸ್ಥಳದಲ್ಲಿ ತಂದು ಇರಿಸಿ ಅವರ ಕಾನ್ವೆಂಟು ವಿದ್ಯಾಭ್ಯಾಸಕ್ಕಾಗಿ ತಮ್ಮ ಜೀವನವನ್ನು ಧಾರೆಯೆರೆದ ಬಡ ಮಾತಾಪಿತೃಗಳ ಕೃತಜ್ಞತೆಪಡೆಯುವಿರಾಗಿ ನಂಬುತ್ತೇನೆ.

'ಹುಡುಗಿಯರ ಬಡ ತಂದೆ.'

ಗಾಂಧೀವಾದವೆಂಬುದು ಉಂಟೇ?

ಮಹಾತ್ಮರ ಉತ್ತರ.

'ನೀವು ಗಾಂಧೀವಾದವೆಂಬುದೇ ಇಲ್ಲವೆನ್ನುತೀರಿ; ನಾನೊಬ್ಬ ಮುಸಲ್ಮಾನ ವಿದ್ಯಾರ್ಥಿ. ಇಸ್ಲಾಮಿನ ಸಾರವು ಗಾಂಧೀವಾದದಲ್ಲಿದೆ. ಹಿಂದೂ ಧರ್ಮದ ಶ್ರೇಷ್ಠತೆ, ಕ್ರಿಸ್ತೀ ಧರ್ಮದ ಸಾರಗಳು ಅದರಲ್ಲಿವೆ. ಪೌರಸ್ತ್ಯ ವೇದಾಂತದ ಸಾರಸರ್ವಸ್ವವೇ ಗಾಂಧೀ ವಾದವಾಗಿದೆ. ಭಾರತದ ಇತಿಹಾಸದಲ್ಲಿ ಇಂತಹ ವಾದವನ್ನು ನಾನು ಬೇರೆ ಕಂಡಿಲ್ಲ. ಇದು ಹೊಸದಲ್ಲವೆಂದು ನೀವು ಹೇಗೆ ಹೇಳುತ್ತೀರಿ? ಅದನ್ನು ನಂಬುವ ನನ್ನಂತವರ ಸಲುವಾಗಿಯಾದರೂ ಅದು ಇರಲಿ' ಹೀಗೆಂದು ಒಬ್ಬನು ಪ್ರಶ್ನಿಸಿದ್ದಕ್ಕೆ ಗಾಂಧಿಜಿಯವರು 'ಹರಿಜನ'ದಲ್ಲಿ ಕೆಳಗಿನ ಉತ್ತರವನ್ನು ಕೊಡುತ್ತಾರೆ.

'ಯಾವನಾದರೂ ಒಬ್ಬ ವ್ಯಕ್ತಿಯ ಹೆಸರಿನ ವಾದವು ನನಗೆ ಸೇರುವುದಿಲ್ಲ. ನೀವು ನನ್ನ ಕುರಿತು ಹೇಳುವ ವಿಷಯವು ನಿಜವಿದ್ದರೂ ನಾನು ಹೇಳುವುದು ಹೊಸತೊಂದು ತತ್ವವಲ್ಲ. ಹೊಸ ತತ್ವಗಳು, ವಾದಗಳು ಹುಟ್ಟಲು ಆಸ್ಪದ ಕೊಡಬಾರದು. ಹಳೆಯ ತತ್ವ ಹಾಗೂ ವಾದಗಳಲ್ಲಿಯೂ ಜನರನ್ನು ವಿಭಾಗಿಸುವಂತಹವುಗಳಿದ್ದರೆ ಅವುಗಳು ನಾಶವಾಗಬೇಕು. ಅದೇ ನನ್ನ ಬಯಕೆ.

ಅಹಿಂಸೆಗೂ, ಬೇರೆ ತತ್ವವೊಂದನ್ನು ಸ್ಥಾಪಿಸುವ ಯೋಚನೆಗೂ ಬಹಳ ದೂರದ ಸಂಬಂಧವಿದೆ. ಅಹಿಂಸೆಯು ಐಕ್ಯವನ್ನು ಹುಟ್ಟಿಸುತ್ತದೆ. ಅದರಿಂದ ವಿರೋಧವು ಸಾಧ್ಯವಾಗುವುದು. ನೀವು ಹೇಳುವ ತತ್ವಗಳು ಅಹಿಂಸೆಯ ಮೂಲಗಳು. ಹೊಸ ತತ್ವವೊಂದನ್ನು ಸ್ಥಾಪಿಸಲು ಹೋಗುವುದು ನನ್ನ ಅಹಿಂಸಾ ಮಾರ್ಗದಲ್ಲಿ ಅಡ್ಡ ದಾರಿ ಹಿಡಿದಂತೆ ಅದನ್ನು ನಾನು ಸಹಿಸಲಾರೆ. ಆದ ಕಾರಣ, ಗಾಂಧಿವಾದವೆಂಬುದು ಇಲ್ಲವೇ ಇಲ್ಲ.'

ಒಬ್ಬೊಬ್ಬ ಮಹಾಪುರುಷನ ತತ್ವ ಕಾರ್ಯಕ್ರಮಗಳಿಗೆ ಒಂದೊಂದು ವಾದವನ್ನು ಹುಟ್ಟಿಸುವ ಅಂಧಾನುಕರಣೆಗೆ ಮಹಾತ್ಮರು ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ.

ಮಾ ರಾ ಟ ಕ್ಕೆ ದೆ.

ವೀರಾಜಪೇಟೆನಾಡು ಪೈತಾಡಿ ಗ್ರಾಮದ ಪಕ್ಕಲಿಗರ ಸಿಂಗೇಗೌಡ್ರ ಮಗ ದೇವಣ್ಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕುಳ ನಂ. 38ರ ಸಾಗಿನ ಸ. ನ. 150/1ರ 16.70 ಏಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ತಲೆ ತೋಟದ 3. 90 ಯೇಕ್ರೆದ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕಿತ್ತಲೆ ತೋಟದ .80 ಸೆಂಟಿನ ಪೈಕಿ 64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಏಕ್ರೆಯ ಬಾಣೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತಲೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯಸ್. ದೇವಣ್ಣ,
ಪೈತಾಡಿಗ್ರಾಮ,
12-4 ಮೂರ್ನಾಡು.

ಮಿತವ್ಯಯದ ಅಭ್ಯಾಸವನ್ನು ಚಿಕ್ಕಂದಿನಲ್ಲಿಯೇ ಪ್ರೋತ್ಸಾಹಿಸಿ ನಿಮ್ಮ ಮಕ್ಕಳ ಮುಂದಿನ ಪ್ರಾದುರ್ಭಾವಕ್ಕೆ ಸಾಕಾವಷ್ಟು ಅನುಕೂಲವನ್ನು ಕಲ್ಪಿಸಿ.

ಕೂಡಲೇ "ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್"ನ ಒಂದು ಪಾಲಿಸಿಯನ್ನು

ಅತ್ಯಂತ ಭದ್ರವಾದ ಮತ್ತು ಜನಾದರಣೀಯವಾದ
ಭಾರತೀಯ ವಿಮಾ ಕಂಪೆನಿಯಾದ
"ಓ ರಿ ಯ ೦ ಟ ಲ್"
ನಲ್ಲಿ ತೆಗೆದುಕೊಳ್ಳಿರಿ.

ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್:- ಇದೊಂದು ಹೊಸ ರೀತಿಯ ಯೋಜನೆ. ಇದರ ಪ್ರಕಾರ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಸುಲಭ ದರದ ಪ್ರೀಮಿಯಮ್ಮಿನ ಲಿಮಿಟೆಡ್ ಹೋಲ್ ಲೈಫ್ ಅಥವಾ ಎಂಡೋಮೆಂಟ್ ವಿಮಾ ಪಾಲಿಸಿಯನ್ನು ಪಡೆಯಬಹುದು. ಇದರಲ್ಲಿ ಈ ಪಾಲಿಸಿಯ 'ರಿಸ್ಕ್' 22 ವರ್ಷ ವಯಸ್ಸಿಗೆ ಕಡಮೆ ಇಲ್ಲದ ಯಾವುದಾದರೊಂದು ಕ್ಲುಪ್ತ ಕಾಲದಿಂದ ಪ್ರಾರಂಭವಾಗುತ್ತದೆ.

52-5) ಮಾಹಿತಿಗೆ ಬರೆಯಿರಿ:— ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ-1874. ಹೆಡ್ ಆಫೀಸು ಬೊಂಬಾಯಿ. ಅಥವಾ ದಿ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	48,470	0	0
ಜಮೂಬಂದ ಠೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ತ್ರಿಫ್ಟ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು ಆದರೆ ಪುನಹ ತಾ. 29-7-39ರಿಂದ ತತ್ಕಾಲಕ್ಕೆ ನಿಲ್ಲಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರಸಿಡೆಂಟ್:—ಪಂದ್ಯಂಡ ಐ. ಬೆಳ್ಯಪ್ಪನವರು ಎಂ ಎಲ್. ಸಿ.
ಟ್ರೆಜರರ್:—ರಾವ ಬಹದ್ದೂರ್ ಪಿ [illegible]ಯ್ಯನವರು
ಸೆಕ್ರಟರಿ:—ಮ. ಕೆ [illegible]ಯ್ಯನವರು ಎಂ ಎಲ್. ಸಿ.

ತಾ. 1-3-1940

ಕೊಡಂದೇರ ಡಿ. ಮಾಚಯ್ಯ,

L.D Sc (COLLEGE OF DENTISTRY)
EX-SUPERVISOR LAKSHIBAI PATEL DENTAL HOSPITAL KARACHI

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ

ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (38) ನವೀನ ರೀತಿಯ ಚಿಕಿತ್ಸೆ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

[illegible]ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ
ಒ ಕ್ಲಿಗ 1 ರೂ ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗ್ಗೆ) ಗುಳಿಗೆ.

ಎಷ್ಟು [illegible] ಜ್ವರಗಡ್ಡೆ (ಅಡ್ಡಗ್ಗೆ) [illegible] ಗುಣವಾಗಿ [illegible] ಒ ಕ್ಲಿಗ 1 [illegible]

[illegible]

(52-15) [illegible]

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ನೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಬೇಕಾದ ರಿಜಿಸ್ಟರುಗಳು ಆಂದರೆ-ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಷನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಗಳೂ, ಬೈಲಾ ಪುಸ್ತಕಗಳೂ, ರಶೀದಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ ಕೀಪರ್ ಬಾಂಡು ದಾವಾ ಮತ್ತು ಅನುಬಂಧ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ ಪಿ ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರಸಿಗೆ ಬರೆಯಿರಿ.

ಮ್ಯಾನೇಜರ್,
'ಕೊಡಗು' ಲಿಮಿಟೆಡ್,
[illegible] ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರ್‍ಯಾಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara, and Virajapet.

52—42

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿಸುತ್ತವೆ—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು

ಜಾತಕ, ಪ್ರಶ್ನೆ, ಆರೂಢ ಪ್ರಶ್ನ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಸಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್)
ಮೆಡಿಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-8

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩—೮—೦

ತಾ. ೧೨—೪—೧೯೪೦. ಸಂಪುಟ ೧೯] [ಸಂಚಿಕೆ ೪೪

ನಿಮ್ಮ ಮುದ್ರಣ ಕೆಲಸಗಳನ್ನು "ಕೊಡಗು" ಪ್ರೆಸ್ಸಿನಲ್ಲೇ ಮುದ್ರಿಸಿರಿ.

ಭದ್ರತೆ!   ವಿಶ್ವಾಸಾರ್ಹತೆ!!   ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ ಭದ್ರತೆಯನ್ನು ಪದೇ ಪದೇ ತೋರಿಸಿ, ಠೇವಣಾತಿದಾರರಿಗೆ ಸುರಕ್ಷಿತತೆಯನ್ನು ಹೆಚ್ಚಿಸಿ,
ಸರ್ವರ ವಿಶ್ವಾಸಕ್ಕೆ ಪಾತ್ರವಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ದೇಶೀಯ ಸಂಸ್ಥೆ.

ನಿರಖು ಠೇವಣಾತಿ   ಒಂದು ವರ್ಷಕ್ಕೆ 3½% (ಶಾಲಿಯಾನ ರೀಕಡ)
ಬಡ್ಡಿ ದರಗಳು:   2 & 3 ವರ್ಷಕ್ಕೆ 4% ,,

ಒಂದು ವರ್ಷಕ್ಕಿಂತ ಕಡಿಮೆ ಮಾಯಿದೆಯು, ಅಲ್ಪಾವಧಿಯು, ಠೇವಣಾತಿಗಳನ್ನು ಅವಧಿಗೆ ತಕ್ಕ ಬಡ್ಡಿ ದರಗಳಲ್ಲಿ ಪಡೆಯಬಹುದು.

ಮೂರು ವರ್ಷದ ಕ್ಯಾಶ್ ಸರ್ಟಿಫಿಕೇಟುಗಳು:—ಬಡ್ಡಿಯ ದರವು [illegible] 4 ರಲ್ಲಿ. [illegible], ಯಾವಾಗಲೂ 15 ದಿನಗಳ ನೋಟೀಸು ಕೊಟ್ಟಲ್ಲಿ ಹಣವನ್ನು ಹಿಂದಕ್ಕೆ ಪಡೆಯಬಹುದು.
ಸೇವಿಂಗ್ಸ್ ಬೇಂಕ್ ಡಿಪಾಜಿಟ್ಸ್:—ಒಂದು ಲೆಕ್ಕದಲ್ಲಿ ರೂ. 5,000 ದ ವರೆಗೆ ಹಣ ಇಡಬಹುದು. ಚೆಕ್ಕು ಮೂಲಕ ಹಣ ಹಿಂದೆ ಪಡೆಯಬಹುದು.
ಶಾಲಿಯಾನ ರೀಕಡಾ 2½ ದರದಲ್ಲಿ ಬಡ್ಡಿ ಕೊಡಲ್ಪಡುವುದು.
ಕರೆಂಟ್ ಡಿಪಾಜಿಟ್ಟು, ಕ್ಯಾಷ್ ಕ್ರೆಡಿಟ್ [illegible] ಬಿಲ್ಲು [illegible]ಗಳನ್ನು ಸ್ವೀಕರಿಸಬಹುದು.

ಬೊಂಬಾಯಿ, ಕಲ್ಕತ್ತಾ, ಮದ್ರಾಸು, ಕಲ್ಲಿಕೋಟೆ, ಕಣ್ಣಾನೂರು, ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ
ಅನೇಕ ಸ್ಥಳಗಳ ಮೇಲೆ ಡ್ರಾಫ್ಟುಗಳನ್ನೂ ಚೆಕ್ಕುಗಳನ್ನೂ ಕೊಡಬಹುದು; ವಟಾಯಿಸಲೂ ಬಹುದು.

THE CANARA BANKING CORPORATION LIMITED.

52-16

ಚಿನ್ನಾಭರಣಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ,—ದ. ಕನ್ನಡ.
(ಬ್ರಾಂಚ್: ಕುಮಟ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ಸಂಜುಂಡೇಶ್ವರ.

52-22

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸಹಿ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರ ಗಳಿಗೆ ಏಜೆಂಟರವರ ಹಸ್ತಾಕ್ಷರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಪಂಡಿಪಂಡ ಸೋಮಯ್ಯನವರು,
ಮ ಕೆ ಯಂ ಸುಬ್ರಾಯನವರು

ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ. ಪಿ ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಜಿ. ಮಾದಮ್ಮಯ್ಯನವರು

ಸುಂಟಿಕೊಪ್ಪ—ಮ ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ ಕೆ ದೇವಪ್ಪನವರು.

ನಾಪೋಕ್ಲು—ಮ. ಬೆಳ್ಯಪಂಡ ಯಂ ಪೂಣಚ್ಚನವರು
(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ ಎಚ್ ಎಂ. ಪುಟ್ಟಣ್ಣನವರು.

ಸೂಚನೆ — ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪ್ರಾಚೀನ ಪಾಶ್ಚಿಮಾತ್ಯ ದೇಶಗಳ ಉತ್ಕೃಷ್ಟವಾದ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ದೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ—	(ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ—	(ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ—	(ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಜಿ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-27) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು—ಕೆ. ರಾಮಕೃಷ್ಣರಾವ್,
ವೀರಾಜಪೇಟೆ (ದ. ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ಡಾಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಸಮಾಚಾರಗೂ, ಏಜೆಂಟರ್ಶಿಪಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಶ್ರೀಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆಕ್ಕಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಸಿಲ್ಹಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.

52-11

ಸರ್ವಾಧಿಕಾರಿಗಳ ಮಿಲನ.

ಬಾಲ್ಕನ್ ದೇಶಗಳನ್ನು ಹಂಚಿಕೊಳ್ಳುವ ಸಂಚು?

ಇವರ ದರ್ಪಕ್ಕೆ ಬಲಿಯಾದ ತಟಸ್ಥ ರಾಷ್ಟ್ರಗಳು.

ಕಳೆದ ತಿಂಗಳ 18ನೇ ತಾರೀಕಿಗೆ ಹಿಟ್ಲರ್ ಮತ್ತು ಸ್ಟಾಲಿನ್ ಈ ಎರಡು ನಿರಂಕುಶ ಸರ್ವಾಧಿಕಾರಿಗಳು ಬ್ರೆನ್ನರ ಕಣಿವೆಯಲ್ಲಿ ಪರಸ್ಪರರನ್ನು ಭೆಟ್ಟಿಯಾದರು. ಎರಡು ತಾಸುಗಳ ವರೆಗೆ ಮಾತಾಡಿ ಉಪಹಾರ ತೀರಿಸಿ ತಂತಮ್ಮ ಸ್ಥಳಗಳಿಗೆ ಮರಳಿದರು.

ಆದರೆ ಅವರು ಏನೇನು ಮಾತಾಡಿದರೆಂಬುದು ಮಾತ್ರ ಬಯಲಿಗೆ ಬಂದಿಲ್ಲ. ಅವರ ಅವರ ಮಾತು ಕಥೆಗಳ ಬಗ್ಗೆ ನಾವು ಮಾಡುವ ಊಹೆಗಳಿಂದ ಸತ್ಯ ಸಂಗತಿಗಳ ಬಗ್ಗೆ ನಮಗೆ ವಿವೇಚನೆಯುಂಟಾಗದಿರದು.

ಇಂದು ಇವರೀರ್ವರ ಶಕ್ತಿಯು ಅಪ್ರತಿಹತವಾಗಿದೆ. ಇಂದಿನ ಜಗತ್ತಿನಲ್ಲಿ ಇವರನ್ನು ಮೀರಿಸುವ ವ್ಯಕ್ತಿಗಳು ಎಲ್ಲಿಯೂ ಇಲ್ಲ. ಇಚ್ಛಾಶಕ್ತಿ, ಕ್ರೌರ್ಯ, ಮತ್ತು ಸಂಘಟನಾ ಕೌಶಲ್ಯಗಳೇ ಇವರನ್ನು ಪ್ರಸಿದ್ಧಿಗೆ ತಂದವು. ಇವೇ ಶಕ್ತಿಗಳನ್ನೇ ನಾವಿಂದು ಎದುರಿಸಬೇಕಾಗಿದೆ. ಅಂತಹ ಸಾಮರ್ಥ್ಯವು ನಮ್ಮಲ್ಲಿದೆಯೇ?

ಸರ್ವಾಧಿಕಾರಿಗಳ ಆಪ್ತಾಲೋಚನೆ.

ಬ್ರೆನ್ನರ ಕಣಿವೆಯ ಮೇಲೆ ಕುಳಿತು ಇಡೀ ಯುರೋಪದ ಮೇಲೆ ದೃಷ್ಟಿ ಹರಿಸಿದರು. ಈ ಸರ್ವಾಧಿಕಾರಿಗಳು ಅಲ್ಲಿಂದ ಇಡೀ ಯುರೋಪವನ್ನು ನೋಡಿದರು. ಸೀಗಫ್ರೀಡ ವ್ಯೂಹದ ಪೂರ್ವಕ್ಕೆ ತಮ್ಮನ್ನು ತಡೆಗಟ್ಟುವವರಾರೂ ಇಲ್ಲೆಂದು ಅವರಿಗೆ ತೋರಿತು. ಪಶ್ಚಿಮಕ್ಕೆ ಎರಡು ನಿಶ್ಚೇತವಾದ ಸೈನ್ಯಗಳು (ಬ್ರಿಟನ್ ಮತ್ತು ಫ್ರಾನ್ಸ್) ಕಳೆದ ಆರು ತಿಂಗಳಿಂದ ಸುಮ್ಮನೆ ಬಿದ್ದುಕೊಂಡಿವೆ. ಆತ ಉತ್ತರಕ್ಕೆ ತಮ್ಮ ಗುಡುಗಿನಿಂದ ನಡುಗುತ್ತಿರುವ ಸ್ಕ್ಯಾಂಡಿನೇವಿಯಾ ರಾಷ್ಟ್ರಗಳು.

ಈ ಸ್ಕ್ಯಾಂಡಿನೇವಿಯಾ ರಾಷ್ಟ್ರಗಳು ಮಿತ್ರರಾಷ್ಟ್ರಗಳಿಗೆ ತಮ್ಮ ಬಂದರಗಳನ್ನು ಎಲ್ಲಿ ತೆರೆಯುವವೋ ಎಂದು ಈ ಸರ್ವಾಧಿಕಾರಿಗಳಿಗೆ ಭೀತಿಯುಂಟಾಗಿತ್ತು. ಆದರೆ ಆ ಸರಕಾರಗಳು ತಾವು ಹಾಗೆ ಮಾಡಿದರೆ ತಮ್ಮ ಗತಿಯೇನಾಗುವದೆಂಬುದರ ಬಗ್ಗೆ ಚೆನ್ನಾಗಿ ಅರಿತುಕೊಂಡಿದ್ದವು.

ಒಟ್ಟಿಗೆ ಹಿಟ್ಲರ-ಮುಸೋಲಿನಿ-ಸ್ಟಾಲಿನ್ನರ ಅಪೇಕ್ಷೆಯಂತೆಯೇ ಎಲ್ಲವೂ ನಡೆದು ಹೋಯಿತು. ಮಿತ್ರರಾಷ್ಟ್ರಗಳ ಬೆಂಬಲಕ್ಕಿಂದಲೂ ಸರ್ವಾಧಿಕಾರಿಗಳ ದರ್ಪವೇ ಮೇಲೆಂದು ಈ ಸ್ಕ್ಯಾಂಡಿನೇವಿಯನ್ ರಾಷ್ಟ್ರಗಳಿಗೆ ಅನಿಸಿತು. ಪೋಲೆಂಡ್ ಝೆಕೋಸ್ಲೋವ್ಹಾಕಿಯಾಗಳ ಪತನದಿಂದ ಇವುಗಳೂ ಬುದ್ಧಿಗಲಿತಿದ್ದವು. ಹೀಗಾಗಿ ಈ ಸರ್ವಾಧಿಕಾರಿಗಳಿಗೆ ಉತ್ತರ ದಿಕ್ಕಿನಲ್ಲಿ ಯಾವ ಭಯವೂ ಇಲ್ಲದಂತಾಗಿದೆ.

ಮಿತ್ರರಾಷ್ಟ್ರಗಳು ಯುದ್ಧದಲ್ಲಿ ಉಂಟಾದ ಬಿಕ್ಕಟ್ಟನ್ನು ನಿವಾರಿಸಲು ಮತ್ತು ಯುದ್ಧವನ್ನು ಪಸರಿಸಲು ಎರಡು ಮಾರ್ಗಗಳನ್ನು ಹುಡುಕಿದ್ದವು. ಸ್ಕ್ಯಾಂಡಿನೇವಿಯಾವನ್ನು ಯುದ್ಧರಂಗವಾಗಿ ಮಾಡುವದೊಂದು, ರುಮಾನಿಯಾ ಅಥವಾ ಕಾಕೇಸಸ್‌ದಲ್ಲಿ— ಅನತಿಪೂರ್ವದೇಶ—ಶತ್ರುಗಳನ್ನೆದುರಿಸಬೇಕೆಂಬುದು ಇನ್ನೊಂದು. ಈ ಎರಡನೆಯ ಮಾರ್ಗಕ್ಕೆ ಬೆದರಿಯೇ ಫ್ಯೂರರ್ (ಹಿಟ್ಲರ್) ಹಾಗು ಡ್ಯೂಸ (ಮುಸೋಲಿನಿ) ಇಬ್ಬರೂ ಬ್ರೆನ್ನರ ಕಣಿವೆಯಲ್ಲಿ ಆಪ್ತಾಲೋಚನೆ ನಡೆಸಿದರೆಂದು ಊಹಿಸಬಹುದು.

ಮಿತ್ರ ಸೈನ್ಯವು ಪೂರ್ವ ದೇಶಗಳಲ್ಲಿ ಈಗಾಗಲೇ ತಳವೂರಿದೆ. ಆದರೆ ರುಮಾನಿಯಾ ಆ ಸೈನ್ಯವನ್ನು ಸಹಾಯಕ್ಕೆ ಕರೆಯುತ್ತಿದ್ದಿಲ್ಲ. ತುರ್ಕರೂ ದಾರ್ಡನಲ್ಸ ಬಂದರವನ್ನು ಈ ಸೈನಿಕರಿಗಾಗಿ ತೆರೆದಿದುದಿಲ್ಲ. ಈ ಸಂಗತಿಗಳನ್ನು ನಮಾಲೋಚಿಸಿ ಸಿನ್‌ಲಂಡಕ್ಕೆ ಹೋಗಲಿದ್ದ ಬ್ರಿಟಿಷ್ ದಿಗ್ವಿಜಯಿ ಸೈನಿಕರಂತೆ ಈ ಮಿತ್ರ ಸೈನ್ಯವೂ ಎಂದೂ ಚಲಿಸದಂತೆ ಯಾವ ಉಪಾಯ ಮಾಡಬೇಕೆಂಬುದೇ ಈ ಸರ್ವಾಧಿಕಾರಿಗಳ ಮುಂದಿನ ಪ್ರಶ್ನೆಯಿದ್ದಿತು.

ಇಟಲಿಯ ಅಂತರಂಗ.

ಇಟಲಿಯು ಯುದ್ಧ ಮಾಡುತ್ತಿರುವದಿಲ್ಲವಾದರೂ ಅದು ತಟಸ್ಥ ರಾಷ್ಟ್ರವಲ್ಲೆಂದು ಹೇಳಲಾಗುತ್ತದೆ. ಮುಸೋಲಿನಿಯು ಈಗಲೂ ಜರ್ಮನಿಯ ಪ್ರಿಯಮಿತ್ರನಿರುವನು ಎಂದು ನಮಗೆ ಬರುವ ಸಮಾಚಾರಗಳಿಂದ ಊಹಿಸಬಹುದು. ರೋಮ್—ಬರ್ಲಿನ ಅಕ್ಷದ ಉದ್ದೇಶವು ಸಂಪೂರ್ಣ ಸಫಲವಾಗುವ ಸಮಯವು ಬಂದಾಗ್ಗೆ ಮಾತ್ರ ಇಟಲಿಯು ಯುದ್ಧರಂಗವನ್ನು ಪ್ರವೇಶಿಸುವದು. ಯುದ್ಧವು ಬಾಲ್ಕನ್ ರಾಷ್ಟ್ರಗಳಿಗೆ ಪಸರಿಸಿದಲ್ಲಿ ಮಾತ್ರ ಹೀಗಾಗಬಲ್ಲದು ಎಂದೂ ಹೇಳಲಾಗುತ್ತಿದೆ. ಆದರೆ ಇದು ಜರ್ಮನಿಯ ಬರಿ ಬಾಯಿಬಡಾಯಿ ಇರಲಿಕ್ಕಿಲ್ಲವೇ? ಯಾಕಂದರೆ ರೋಮವು ಈ ಬಗ್ಗೆ ಚಕಾರ ಶಬ್ದ ತೆಗೆದಿಲ್ಲ. ಇಟಲಿಯ ಸೈನಿಕರಾಗಲಿ, ಜನತೆಯಾಗಲಿ ಯುದ್ಧ ಮಾಡಲಿಚ್ಛಿಸುವದಿಲ್ಲೆಂಬುದು ಖಂಡಿತವಿದೆ.

ಅದರಂತೆ ಮಿತ್ರರಾಷ್ಟ್ರಗಳು ಸ್ನೇಹದ ಹಸ್ತವನ್ನು ಚಾಚಿದರೂ ಮುಸೋಲಿನಿಯು ಆ ಕುರಿತು ಒಲವು ತೋರಿಸಿಲ್ಲ. ಹೊರಗೆ ಆತನು ಜರ್ಮನಿಯ ನಿಸ್ಸೀಮ ಮಿತ್ರನಂತಿರುವನು. ಜರ್ಮನಿಗೆ ಜಯವಾಗುವದೆಂಬ ಆತನ ನಂಬಿಗೆಯೇ ಇದಕ್ಕೆ ಕಾರಣವಿರಬಹುದು.

ಆಂಗ್ಲೋ—ಇಟಾಲಿಯನ್ ವ್ಯಾಪಾರಿ ಒಪ್ಪಂದದ ಮಾತು ಕಥೆಗಳು ಅನೇಕ ದಿನಗಳಿಂದ ನಡೆದಿರುತ್ತವೆಯಾದರೂ ಮುಸೋಲಿನಿಯು ಅದಕ್ಕೆ ಇನ್ನೂ ಸಮ್ಮತಿಸಿರುವದಿಲ್ಲ. ಇದು ಗಮನಾರ್ಹವಿದೆ.

ಇಟಲಿಯ ಈ ಅನಿಶ್ಚಿತತೆಯ ಪರಿಣಾಮವು ಸ್ಪಷ್ಟವಿದೆ. ಪೂರ್ವ ಸೈನ್ಯವು ಮುಂದುವರಿಯಲಾರದು. ಯಾಕೆಂದರೆ ಭೂಮಧ್ಯ ಸಮುದ್ರದ ನೌಕಾಧಿಪತ್ಯದ ಮೇಲೆಯೇ ಆ ಸೈನ್ಯದ ಸುರಕ್ಷಿತತೆಯು ಅವಲಂಬಿಸಿದೆ. ಇಟಲಿಯು ಯುದ್ಧದಲ್ಲಿ ಸೇರಿದರೆ ಮುಸೋಲಿನಿಯು ಸಬ್ ಮೆರೀನುಗಳನ್ನು ಭೂಮಧ್ಯ ಸಮುದ್ರದಿಂದ ಓಡಿಸುವ ವರೆಗೆ, ಈ ಸೈನ್ಯಕ್ಕೆ ಆಹಾರ ಸಾಮಗ್ರಿಯು ದೊರೆಯುವದೇ ಕಠಿಣವಾಗುವದು.

ರುಮಾನಿಯಾ ಬೆದರಿದೆ!

ರುಮಾನಿಯಾ ಮಿತ್ರರಾಷ್ಟ್ರಗಳ ಸಹಾಯವನ್ನು ಅಪೇಕ್ಷಿಸುವದೆಂದು ಹಿಟ್ಲರನ ಮತವಿದೆ. ಕರೋಲ ಅರಸನು ಎಲ್ಲಿ ಜರ್ಮನಿಯ ಕಡೆಗೇ ಒಲವಿಕ್ಕಿದಂತೆ ತೋರುತ್ತದೆ. 'ಆಯರ್ನ ಗಾರ್ಡ್'ದ ಒಗೆ ಅವರು ಬೆಳೆದ ಸಮಾಧಾನಕಾರಕ ಧೋರಣದ ಅರ್ಥವನ್ನು ಹೀಗೆ ಮಾಡಿದರ ತಪ್ಪಾಗದು. ರುಮಾನಿಯಾ ಜರ್ಮನಿಯ ಮಿತ್ರನಲ್ಲ. ಆಗಲೂ ಬಯಸುವದಿಲ್ಲ. ಆದರ ಹಿರಿತ ಹಾಗೂ ಸ್ವೀಡನ ಜನರಿಂದ ಬುದ್ಧಿಗಲಿತ ಅದು ತನ್ನ ಒಕ್ಕಲತನದ ಬೆಳೆಯನ್ನೆಲ್ಲ ಜರ್ಮನಿಗೆ ಒಪ್ಪಿಸಲು ಮಾತ್ರ ಸಿದ್ಧವಿದೆ.

ಸರ್ವಾಧಿಕಾರಿಗಳ ಸಂಘಟನೆ.

ರಶಿಯಾ, ಇಟಲಿ, ಮತ್ತು ಜರ್ಮನಿಗಳು ಈಗಾಗಲೇ ಬಾಲ್ಕನ್ನದಲ್ಲಿ ತಂತಮಗೆ ಬೇಕಾದ ಪ್ರದೇಶಗಳನ್ನು ಗೊತ್ತುಪಡಿಸಿರುವವೆಂದು ಜರ್ಮನಿಯು ಸಾರುತ್ತದೆ. ಆದರೆ ಈ ಮಾತನ್ನು ನಂಬುವದು ಸಾಧ್ಯವಿಲ್ಲ. ಯಾಕೆಂದರೆ ಹಿಟ್ಲರ್—ರಿಬನ್ ಟ್ರಾಪರು ಮುಂದೇನು ಮಾಡುವರೆಂಬದನ್ನು ಮಾತ್ರ ಅದು ಹೇಳಿರುವದಿಲ್ಲ. ಮಧ್ಯ ಹಾಗೂ ಪೂರ್ವ ಯುರೋಪದಲ್ಲಿ ಪ್ರಭುತ್ವ ನಡೆಯಿಸಬಲ್ಲ ತಮ್ಮ ಮೂವರದೊಂದು ಪ್ರಚಂಡ ಆರ್ಥಿಕ ರಾಜಕೀಯ ಸಂಘಟನೆಯಾಗಿದೆಯೆಂದು ಜರ್ಮನಿಯ ತಿಳುವಳಿಕೆ.

ಈ ಮೂವರು ಜರ್ಮನ್ ಸರ್ವಾಧಿಕಾರತ್ವದ ನಾಯಕತ್ವದಲ್ಲಿ ಸಾಗಿದರೆ ತಟಸ್ಥ ರಾಷ್ಟ್ರಗಳು ಅವರ ಇಚ್ಛೆಯನ್ನು ವಿರೋಧಿಸಲ್ಲವೇ? ರುಮಾನಿಯಾ ಸ್ವೀಡನ್ನದಂತೆ ಸಭ್ಯವಾಗುವದು. ಈ 'ಮೂವರ' ಪ್ರಬಲ ಸಂಘಟನೆಯನ್ನು ಎದುರಿಸುವಾಗ ತುರ್ಕರು ಒಮ್ಮೆ ಬೆಚ್ಚಿ ಎರಡು ಸಲ ತಲೆ ತುರಿಸಿಕೊಳ್ಳಬೇಕಾಗುವದು.

ಮೇಲಿನ ವಿವೇಚನೆಯಿಂದ ಯುದ್ಧವು ಪೂರ್ವಕ್ಕೆ ಹೊರಳಬಹುದೆಂಬ ಮಿತ್ರರಾಷ್ಟ್ರಗಳ ಎಣಿಕೆಯು ತಪ್ಪಿಹೋಯಿತೆಂದು ಹೇಳಬಹುದು.

ನೆನೆಗುದಿ.

ಹೀಗಾಗಿ ಆರು ತಿಂಗಳ ಹಿಂದಿನ ಪರಿಸ್ಥಿತಿಯೇ ಪುನಃ ಪ್ರಾಪ್ತವಾಗಿದೆ. ಎಲ್ಲವೂ ನೆನೆಗುದಿಗೆ ಬಿದ್ದಿದೆ. ಒಬ್ಬರನ್ನೊಬ್ಬರು ಮುತ್ತಿರುವರು. ಪಾರಾಗುವ ಹಂಚಿಕೆಯೇ ತೋರದಾಗಿದೆ. ಉತ್ತರ ಹಾಗು ಪೂರ್ವ ಮಾರ್ಗಗಳು ಕಟ್ಟಾಗಿವೆ.

ಇಂದಿನ ಯುದ್ಧದಲ್ಲಿ ರಶಿಯಾ ಇಟಲಿಗಳು ಯುದ್ಧೋನ್ಮುಖ ರಾಷ್ಟ್ರಗಳೋ ಹೇಗೆಂಬುದು ಅಷ್ಟೊಂದು ಮಹತ್ವದ ಮಾತಲ್ಲ. ವಾಸ್ತವಿಕವಾಗಿ ಹೇಳಬೇಕೆಂದರೆ ಜರ್ಮನ್, ಫ್ರೆಂಚ್, ಬ್ರಿಟಿಷ್ ಸರಕಾರಗಳೂ ಯುದ್ಧದಲ್ಲಿ ಸೇರಿರುವವೆಂದು ಹೇಳಲು ಬರುವದಿಲ್ಲ. ಚಿಕ್ಕ ಪುಟ್ಟ ಬಡಿದಾಟಗಳು, ಉತ್ತರ ಸಮುದ್ರದಲ್ಲಿ ವಿನಾಶಿಕೆ ವಿಮಾನ ಸಬ್ ಮೆರೀನುಗಳ 'ಗೋರಿಲ್ಲಾ' ಯುದ್ಧಗಳ ಹೊರತು ಇವು ಹೆಚ್ಚೇನು ನಡೆಸಿವೆ?

ಎಲ್ಲ ರಾಷ್ಟ್ರಗಳೂ ಸೈನ್ಯ ಸಂಗ್ರಹ ಮಾಡಿವೆ. ತಟಸ್ಥ ರಾಷ್ಟ್ರಗಳನ್ನು ಬೆದರಿಸಲು ಎಲ್ಲರೂ ತಮ್ಮ ಸರ್ವಸಾಮರ್ಥ್ಯವನ್ನುಪಯೋಗಿಸುತ್ತಿರುವರು. ಈ ರಕ್ತರಹಿತ ಯುದ್ಧದಲ್ಲಿ ಇಲ್ಲಿಯ ವರೆಗೆ ಜರ್ಮನಿಗೇ ಜಯ ದೊರೆತಿದೆಯೆಂದೆನ್ನಬಹುದು.

ಆರ್ಥಿಕ ದಿಗ್ಬಂಧನದ ಪರಿಣಾಮವೇನು?

ನಾವು ನಂಬಿದ್ದ ಒಂದು ಶಸ್ತ್ರವನ್ನು ಒರೆ ಹಚ್ಚಿ ನೋಡುವ ಸಮಯವು ಈಗ ಬಂದಿದೆ. ರಶಿಯಾ, ರುಮಾನಿಯಾ, ಸ್ವೀಡನ್, ಇಟಲಿ ಮೊದಲಾದ ಚಿಕ್ಕ ಪುಟ್ಟ ತಟಸ್ಥ ರಾಷ್ಟ್ರಗಳನ್ನೆಲ್ಲ ಜರ್ಮನಿಯು ತನ್ನೆಡೆಗೆ ಮಾಡಿಕೊಳ್ಳಬಲ್ಲದಾದರೆ ನಮ್ಮ 'ದಿಗ್ಬಂಧನ'ದ ಹೆದರಿಕೆಯು ಅದಕ್ಕೆ ಉಳಿಯದು.

ಜರ್ಮನಿಯು ನಮ್ಮ ನಿಷ್ಕ್ರಿಯತೆಯನ್ನು ಬೇಕಾದ ಹಾಗೆ ಉಪಯೋಗಿಸಿಕೊಳ್ಳುತ್ತಿರುವದು. ನಮ್ಮ ದಿಗ್ಬಂಧನದ ಮೂಲಕ ಜರ್ಮನಿಗೆ ಎಣ್ಣೆಯು ದೊರೆಯಲಾರದೆಂಬದು ನಿಜ. ಆದರೆ ಈಗ ತನ್ನಲ್ಲಿದ್ದ ಎಣ್ಣೆಯನ್ನು ಅದು ವೆಚ್ಚಮಾಡುತ್ತಿರುವದೋ? ಅದರ ತೋಪುಗಳು ಚಲಿಸುವದಿಲ್ಲ. ಅದರ ವಿಮಾನಪಡೆಯು ನೆಲ ಬಿಟ್ಟು ಏಳುವದಿಲ್ಲ. ಯಾವಾಗಾದರೊಮ್ಮೆ ಒಂದೊಂದು ವಿಮಾನಗಳು ಮಾತ್ರ ಹಾರಾಡುವವು.

ಈ ಪರಸ್ಪರ ದಿಗ್ಬಂಧನ ಯುದ್ಧದಲ್ಲಿ ಯಾರಿಗೂ ಜಯವಾಗಲಾರದು. ಉಭಯ ಪಕ್ಷದವರು ಉಳಿದ ರಾಷ್ಟ್ರಗಳನ್ನು ತಮ್ಮ ಪಕ್ಷಕ್ಕೆ ಒಲಿಸಿಕೊಳ್ಳುವದರ ಮೇಲೆ, ತಟಸ್ಥ ರಾಷ್ಟ್ರಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವದರಲ್ಲಿಯೂ ಜಯವಿದೆ.

ಕ. ವಿ.

ಯುದ್ಧದ ಚಮತ್ಕಾರಗಳು!

ಯೋಚಿಸಿದೊಂದಾದರೆ, ಆಗುವದೊಂದು.

ಮ್ಯೂನಿಚಿನಲ್ಲಿ ಶಾಂತಿ ಒಪ್ಪಂದವಾಯಿತು. ಪರಿಣಾಮ ಯುದ್ಧದಲ್ಲಿ ಕೊನೆಗೊಂಡಿತು. ಬ್ರಿಟನು ರಷ್ಯಾದೊಡನೆ ಒಪ್ಪಂದ ಮಾಡಲೆಳಸಿತು. ಜರ್ಮನಿ-ರಷ್ಯಾ ಒಪ್ಪಂದವಾಯಿತು. ಅಂತು ಎಲ್ಲವೂ ಚಮತ್ಕಾರ ರೀತಿಯಿಂದ ನಡೆಯುತ್ತಿದೆ.

'ಚಮತ್ಕಾರ'ವು ಯುದ್ಧದ ವೈಶಿಷ್ಟ್ಯವೆಂದೆನ್ನಬಹುದು. ಯಾಕೆಂದರೆ ಯುದ್ಧದಲ್ಲಿ ಮೊದಲು ಯೋಚಿಸಿದ ಯೋಜನೆಯಂತೆ ಕೆಲಸವಾಗುವದು ಅಪರೂಪ. ಎಂದೂ ಆಗುವದಿಲ್ಲ. ಅನಿರೀಕ್ಷಿತವಾಗಿ ಹಿಂದೆಗೆಯುವದೂ ಒಂದು ಚಮತ್ಕಾರವೇ ಎಂದು ಹೇಳಲಾಗುತ್ತಿದೆ. ಕಳೆದ ಸಪ್ಟಂಬರ 3ನೇ ತಾರೀಕಿನ ದಿನ ಮಿತ್ರರಾಷ್ಟ್ರಗಳು ಜರ್ಮನಿಯು ಆಹ್ವಾನವನ್ನು ಸ್ವೀಕರಿಸಿ ಶಸ್ತ್ರವೆತ್ತುವಾಗ ಅವರು ತಮ್ಮ ಶತ್ರುವು ಯಾರೆಂದು ತಿಳಿದಿದ್ದರು ? ತಮ್ಮ ವೈರಿಯು ಹಿಟ್ಲರನಿರದೆ ಸ್ಟಾಲಿನ್ನನೆಂದು ಅವರಿಗೆ ಆಗ್ಯೆ ಹೊಳೆಯಲಿಲ್ಲ. ಆದರೆ ಹಿಟ್ಲರನು ತನ್ನ 'ಮೇನಕ್ಯಾಂಪ' ಪುಸ್ತಕದಲ್ಲಿ ಸ್ಟಾಲಿನ್ನ ಹಾಗು ಬೋಲ್ಶೆವಿಕರ ಬಗ್ಗೆ ಬೇಕಾದಷ್ಟು ಬಾಯಿತಿಂಡಿಯನ್ನು ತೀರಿಸಿಕೊಂಡಿದ್ದರೂ ಈ ಉಭಯ ಸರ್ವಾಧಿಕಾರಿಗಳ ಮಹತ್ವಾಕಾಂಕ್ಷೆಗಳು ಒಂದೇಯಾಗಹತ್ತಿವೆಯೆಂಬುದು ಮಾತ್ರ ಹಲಕೆಲವು ನಿರೀಕ್ಷಕರಿಗೆ ಗೊತ್ತಾಗದೆ ಹೋಗಲಿಲ್ಲ. ಇವರೀರ್ವರ ನಡುವೆ ಲೂಟಿಯ ಪಾಲುಗಾರಿಕೆಯ ಸಂಬಂಧವು ತೀರ ಸಂಭವನೀಯವೆಂದೂ ಅನಿಸಹತ್ತಿತು.

ಜನತೆಯ ಏಕಮೇವ ಪ್ರತಿನಿಧಿಯೆಂದು ಜಂಭಕೊಚ್ಚುವ ಸೋವ್ಹಿಯೆಟ್ ಸರ್ವಾಧಿಕಾರತ್ವದಿಂದ ಯಾವ ಲಾಭವೂ ಆಗಲಿಲ್ಲೆಂಬುದು ಈಗ ಐದು ವರ್ಷಗಳ ಹಿಂದೆಯೇ ಸ್ಪಷ್ಟ ನಿದರ್ಶನಕ್ಕೆ ಬಂದಿತು. ನಿರಂಕುಶ ಪ್ರಭುತ್ವಕ್ಕಾಗಿ ಹಾತೊರೆಯುವ ಅನಿಯಂತ್ರಿತ ಹಾಗೂ ನಿರ್ದಯ ಸರ್ವಾಧಿಕಾರಿಯೊಬ್ಬರು ಮಾತ್ರ ನಿರ್ಮಾಣವಾದರು. ಇತ್ತ ನಿಜವಾದ ಸರ್ವಾಧಿಕಾರಿಯ ಹಿಡಿತದಲ್ಲಿ ಸಿಕ್ಕ ಜರ್ಮನ ಪ್ರಜೆಗಳು ಅಂಜಿ ನಾಯಿಯಂತೆ ಆತನ ಬೆನ್ನಹತ್ತಿದರು. ದಕ್ಷಿಣೋತ್ತರ ಧ್ರುವಗಳಿಂದ ಹೊರಟ ಎರಡು ಧ್ಯೇಯವಾದಗಳು ಕೊನೆಗೆ ಸಮ್ಮಿಲಿತವಾದವು. ಇದು ಯುದ್ಧದಲ್ಲಿ ಸಂಭವಿಸದಿರುವ ಒಂದು ಚಮತ್ಕಾರವೆಂದೇ ಹೇಳಬಹುದು.

ಬೋಲ್ಶೆವಿಝಂ ತತ್ವದ ವಿರುದ್ಧ ಹೋರಾಡಲು ಜರ್ಮನಿ, ಇಟಲಿ ಹಾಗೂ ಜಪಾನಗಳು ಒಂದಾಗಿದ್ದವು—ಇಟಲಿ, ಜಪಾನ ಹಾಗು ರಾಷ್ಟ್ರೀಯ ಸ್ಪೇನಗಳಲ್ಲಿ ಅಂಥ ಪ್ರಯತ್ನವನ್ನೂ ಇವು ಮಾಡಿದವು. ಆದರೆ ಈ ಸ್ನೇಹ ಸಂಬಂಧವು ಇಟಲಿ, ಜಪಾನುಗಳ ಪರಿವೇ ಇಲ್ಲದೆ ರಶಿಯಾ–ಜರ್ಮನಿ ಸ್ನೇಹದಲ್ಲಿ ಪರಿವರ್ತನವಾದುದು ಮತ್ತೊಂದು ಚಮತ್ಕಾರವು. 1938 ನೇ ಸಪ್ಟಂಬರ 29ನೇ ತಾರೀಕಿಗೆ ಹಿಟ್ಲರ–ಚೇಂಬರ್ಲೇನರು ಮ್ಯುನಿಕ್ ಒಪ್ಪಂದಕ್ಕೆ ಸಹಿಮಾಡಿದ ಕಾಲದ ಪರಿಸ್ಥಿತಿಯನ್ನು ಲಕ್ಷ್ಯದಲ್ಲಿ ತಂದರೆ ಇದು ನಿಜವಾಗಿ ಒಂದು ಅದ್ಭುತ ಚಮತ್ಕಾರವೇ ಎಂದೆನಿಸುವದು.

ಸ್ಟಾಲಿನ್ನನು ಮನಸ್ಸು ಮಾಡಿದ್ದರೆ ಇಂದಿನ ಯುದ್ಧವು ತಪ್ಪಬಹುದಾಗಿತ್ತು. ರಶಿಯದ ಕೂಡ ಒಪ್ಪಂದ ಮಾಡಿಕೊಳ್ಳದಿದ್ದುದಕ್ಕೆ ಮಿ. ಚೇಂಬರಲೀನರನ್ನು ಟೀಕಿಸಲಾಯಿತು. ಆದರೆ ಇತ್ತ ಫ್ರಾನ್ಸ್ ಬ್ರಿಟನುಗಳು ಯುರೋಪದಲ್ಲಿ ಯುದ್ಧವನ್ನು ತಪ್ಪಿಸಲು ರಶಿಯದೊಡನೆ ಗೌರವಾರ್ಹ ಒಪ್ಪಂದ ಮಾಡಿಕೊಳ್ಳಲೆತ್ನಿಸುತ್ತಿರುವಾಗ ಅತ್ತ ಸ್ಟಾಲಿನ ಹಿಟ್ಲರರು ಯುರೋಪವನ್ನು ರಣಕುಂಡದಲ್ಲಿ ನೂಕುವ ಎತ್ತುಗಡೆ ನಡೆಸಿದ್ದರೆಂಬುದು ಟೀಕಾಕಾರರಿಗೇನು ಗೊತ್ತು ? ಇದು ಇತಿಹಾಸದಲ್ಲಿ ಅತ್ಯಾಶ್ಚರ್ಯಕರವಾದುದಲ್ಲವೇ ?

ಸ್ಟಾಲಿನ್ನನಿಲ್ಲದಿದ್ದರೆ ಪೋಲೆಂಡವು ಹಾಳಾಗುತಿದ್ದಿಲ್ಲ. ಹರಿದು ಹಂಚಿಹೋಗುತ್ತಿದ್ದಿಲ್ಲ. ಯಾಕೆಂದರೆ ಅಖಂಡ ರಶಿಯಾದ ಬೆಂಬಲವು ಏಕೀಕೃತವಾಗಿರುವ ಈ ಸರ್ವಾಧಿಕಾರಿಯು ನೆರವಿಲ್ಲದಿದ್ದರೆ ಹಿಟ್ಲರನು ಪೋಲಂಡದ ಮೇಲೆ ಧಾಳಿ ಮಾಡುವದೆಂದಿಗೂ ಸಾಧ್ಯವಿದ್ದಿಲ್ಲ. ಅದೂ ಪೋಲಂಡಕ್ಕೆ ಫ್ರಾನ್ಸ್ ಬ್ರಿಟನುಗಳ ಆಶ್ವಾಸನವಿತ್ತಿರುವಾಗ ಅವರ ಮೇಲೆ ಹಿಟ್ಲರನು ಏರಿ ಹೋಗುವನೆಂಬ ಕಲ್ಪನೆಗೆ ಸಹ ಅವಕಾಶವಿದ್ದಿಲ್ಲ! ಹಿಟ್ಲರ ಸ್ಟಾಲಿನ್ನರು ಒಟ್ಟಾಗದೆ ಇದ್ದರೆ ಪೋಲಂಡವು ಇನ್ನೂ ಜೀವಿಸಿರಬಹುದಾಗಿತ್ತು.

ಆದರೂ ಇಂದಿನ ಯುರೋಪವನ್ನು ಭೀಕರ ಗಂಡಾಂತರದಲ್ಲಿ 'ಅಪಥ್ಯ' ಯಾತನೆಯಲ್ಲಿ ನೂಕಿದ ಸಂಪೂರ್ಣ ಪಾಪವು ಹಿಟ್ಲರನಿಗೇ ತಗಲುವದು. ಜಾಗ್ರತಿಕ ಕ್ರಾಂತಿ ಸೋವ್ಹಿಯೆಟರ ಧ್ಯೇಯ, 'ಜಾಗ್ರತಿಕ ಪ್ರಭುತ್ವ'ವು ನಾಝಿಗಳ ಧ್ಯೇಯ ಇವೆರಡೂ ರಾಷ್ಟ್ರಗಳು ತಂತಮ್ಮ ಧ್ಯೇಯಕ್ಕೆ ಅಂಟಿಕೊಂಡು ಸಾಗಿದರೆ ಅವೆರಡರಲ್ಲಿಯೂ ಭೀಕರ ಯುದ್ಧ ಮಸಗಿ ಯಾರೊಬ್ಬರಾಗಲಿ, ಉಭಯತರಾಗಲಿ ನಾಶವಾಗಬಹುದು. ಹೀಗಾಗುವದೇನು ಕಪಿಲಾಷಷ್ಠಿ ಯೋಗವಲ್ಲ. ಅಲ್ಪಾವಧಿಯಲ್ಲಿಯೇ ಹೀಗಾಗುವ ಚಿಹ್ನಗಳು ಕಂಡುಬರಬಹುದು.

ರುಸೋ–ಫಿನಿಶ್ ಯುದ್ಧದ ಪರಿಣಾಮವು ಏನೇ ಆಗಿದ್ದರೂ ಒಂದು ಸಂಗತಿಯು ಮಾತ್ರ ಸ್ಪಷ್ಟವಾಯಿತು. ರಶಿಯದ ಸೈನ್ಯವು ಅಭೇದ್ಯವಿದೆ, ಅಸಂಖ್ಯವಿದೆ, ಅದನ್ನು ಸೋಲಿಸುವದು ಯಾರಿಗೂ ಸಾಧ್ಯವಿಲ್ಲೆಂಬಿವೇ ಮೊದಲಾದ ಮಾತುಗಳಲ್ಲಿ ಹುರುಳಿಲ್ಲವೆಂಬುದು ಸಿದ್ಧವಾಯ್ತು. ನಾಝಿ ಸೈನಿಕರು ನೆರವಿಗೆ ಬರದಿದ್ದರೆ ಬಂದಿರಲೇ ಬೇಕು—ಸ್ಟಾಲಿನ್ನನ ಗತಿಯೇನಾಗುತ್ತಿತ್ತೆಂಬದನ್ನು ಬೇರೆ ಹೇಳಲು ಬೇಡ. ಅದರಂತೆ ಫಿನ್ನರ ಕಲಿತನವು ಇಡೀ ಜಗತ್ತನ್ನು ದಂಗುಗೊಳಿಸಿತೆಂಬದನ್ನೂ ಯಾರೂ ಅಲ್ಲಗಳೆಯಲಾರರು.

ಸ್ಕಾಂಡಿನಾವಿಯಾ ಜನರೆಲ್ಲರು ಈ ಅರ್ಧ ಮಂಗೋಲಿಯನ್ ಸೋವ್ಹಿಯೆಟ್ ಜನರಿಗಿಂತ ಶೂರರು. ಅವರು ಸೋವ್ಹಿಯೆಟ್ಟರ ಬೆದರಿಕೆಗೆ ಸೊಪ್ಪು ಹಾಕರು. ಆದರೆ ಲೂಟಿಯ ಆಶೆಯಿಂದ ಸೋವ್ಹಿಯೆಟ್ಟರೊಡನೆ ಸ್ನೇಹ ಬೆಳೆಸಿದ ಹಿಟ್ಲರನ ಅಂಜಿಕೆಯು ಅವರಿಗೆ ಬಹಳವಾಗಿದೆ.

ಯುದ್ಧ ಪ್ರಾರಂಭಕ್ಕೆ ಪೋಲಂಡದ ಪತನವು ಮೊದಲನೇ ನಿರಾಶೆಯು. ಪ್ರಥಮ ಷಾಣ್ಮಾಸದ ಕೊನೆಗೆ ಫಿನ್ನರ ಅತುಲ ಪರಾಕ್ರಮವು ದೃಗ್ಗೋಚರವಾಯ್ತು. ಇವೆರಡರ ನಡುವಿನ ಅವಧಿಯಲ್ಲಿಯೂ ಅನೇಕ ಆಶ್ಚರ್ಯಕಾರಕ ಘಟನೆಗಳು ಸಂಭವಿಸಿರುವವು. ಅವಾವವೆಂದರೆ:–

1 ಧೂರ್ತ ಅಧಿಕಾರಿಗಳು ಸೂಚಿಸಿದಂತೆ ಪ್ರಚಂಡ ವೈಮಾನಿಕ ಧಾಳಿಯನ್ನು ಪ್ರಾರಂಭಿಸಲು ಅನುಮಾನಿಸಿದುದು.

2 ಸಮುದ್ರದ ಮೇಲೆ ಸಂಚರಿಸುವ ಹಡಗಗಳ ಮೇಲೆ ಹಲ್ಲೆ ಮಾಡಲು ವಿಮಾನಗಳು ಎಷ್ಟು ಮಾತ್ರವೂ ಉಪಯೋಗವಾಗಲಿಲ್ಲ. ಆದರೆ ಸಬ್‌ಮೆರೀನು ಮತ್ತು ನಿಶ್ಶಸ್ತ್ರ ಮೀನಗಾರ ಹಡಗಗಳಿಗೆ ಮಾತ್ರ ಅವು ಮಾರಕವಾದವು

3. ಪಶ್ಚಿಮ ರಣರಂಗದಲ್ಲಿ ಉಭಯ ಪಕ್ಷದವರೂ ಧರಿಸಿದ ಮೌನ.

4. ಗ್ರಾಫ್‌ಸ್ಪಿ ದುರಂತದಿಂದ ಬ್ರಿಟಿಷರ ನೌಕಾಬಲದ ಅಪಾರ ಸಾಮರ್ಥ್ಯವು ಬಯಲಿಗೆ ಬಂದು ನಾಝಿಗಳ ಮೋರೆ ಕೆಳಗಾಯಿತು.

5. ನಾಝಿ ಹಡಗಗಳ ಆತ್ಮಹತ್ಯೆ.

6. ಬ್ರಿಟಿಷ ಸೈನಿಕರೊಡನೆ ಹೆಗಲಿಗೆ ಹೆಗಲು ಹಚ್ಚಿ ಹೋರಾಡಲು ಕಾನಡಾದ ಸೈನಿಕರು ಬಂದುದು. ಅದರಂತೆ ಆಸ್ಟ್ರೇಲಿಯಾ ನ್ಯೂಝಿಲಂಡಗಳಿಂದ ಬಂದ ದಂಡಾಳುಗಳು ಸುಯೇಜ ಕಾಲುವೆಯ ಕ್ಷೇತ್ರದಲ್ಲಿ ಸನ್ನದ್ಧರಾದುದು.

7 ಇಟಲಿಯು ತನ್ನ ತೂಕವನ್ನು ಸಂಬಾಳಿಸುವಲ್ಲಿ ತೋರಿಸುವ ದಕ್ಷತೆ.

ಯುದ್ಧವು ದ್ವಿತೀಯ ಷಾಣ್ಮಾಸವನ್ನು ಪ್ರವೇಶಿಸಿದ ಬ್ರಿಟಿಷ್ ನೌಕಾಪಡೆಯು ಫ್ರಾನ್ಸ್ ನೌಕಾಬಲದ ಬೆಂಬಲದಿಂದ ಸಪ್ತಸಾಗರಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದು ಕೊನೆಗೆ ಮಿತ್ರರಾಷ್ಟ್ರಗಳಿಗೇ ಜಯವಾಗುವದೆಂದು ಖಂಡಿತ ಹೇಳಬಹುದು.

ಕ ವಿ.

ಸ್ವಾತಂತ್ರ್ಯವೀರನೋ, ಗೂಢಚಾರನೋ?

ಇಪಿ ಫಕೀರನ ಜೀವನ ರಹಸ್ಯ.

ಗಡಿನಾಡಿನಲ್ಲಿ ಹಲವು ಕಾಲಗಳಿಂದ ಅನೇಕ ಗಲಭೆಗಳುಂಟಾಗುತ್ತಿವೆಯೆಂದು ಪತ್ರಿಕೆಗಳನ್ನು ಓದುತ್ತಿರುವವರೆಲ್ಲರೂ ಬಲ್ಲರು. ಇವರ ಮೂಲ ಕಾರಣನಾದ ಇಪಿ ಫಕೀರನು–ಒಬ್ಬ ಸ್ವಾತಂತ್ರ್ಯವೀರನೆಂದು ಕೆಲವರೂ, ಬ್ರಿಟನಿನ ಗುಪ್ತಚಾರನೆಂದು ಹಲವರೂ, ಹಲವು ವಿಧವಾಗಿ ಹೇಳುತ್ತಿರುವರು. ಆದರೆ ಆತನ ಚಲನವಲನಗಳು ಆತನು ಒಬ್ಬ ಧ್ಯೇಯಸಾಧಕನಾದ ಪ್ರಭಾವಶಾಲಿ ಪುರುಷನೆಂಬುವುದನ್ನು ಸಾರುತ್ತವೆ.

ವಜೀರಿಸ್ತಾನದ ಇಪಿಯೆಂಬಲ್ಲಿ 'ಹಾಜಿ ಮಿರ್ಜಾ ಅಲಿಖಾನ್ ಸಾಹೇಬನು' ಬಹಳ ಪ್ರಭಾವಶಾಲಿಯಾಗಿರುವನು. ಆತನು ಆಜ್ಞೆಯನ್ನು ಮೀರಿ ನಡೆಯುವದೆಂದರೆ ಜೀವಕ್ಕೆ ಸಂಚಾಕಾರ ತಂದುಕೊಂಡಂತೆಯೇ. ಆದುದರಿಂದ ಜನರು ಆತನಿಗೆ ಬೆದರಿಯೇ ಅಲ್ಲಿ ವಿಧೇಯರಾಗಿರುವರು. ಗುಡ್ಡಗಾಡಿನ ಜನರನ್ನು ಕೂಡಿಸಿಕೊಂಡು ಆತನು ತನ್ನ ತುಂಟತನವನ್ನು ತನ್ನ ಸುತ್ತುಮುತ್ತಲಿನ ಜನರಲ್ಲಿ ಬಹಳವಾಗಿ ತೋರಿಸುತ್ತಿದ್ದಾನೆ.

ಉತ್ತರ ವಜೀರಿಸ್ಥಾನದಲ್ಲಿ ಆತನು ಇಪಿ ಎಂಬಲ್ಲಿ ಜನಿಸಿದನು. ಬನ್ನು ಜಿಲ್ಲೆಯಲ್ಲಿ ಆತನು ವಿದ್ಯಾಭ್ಯಾಸವನ್ನು ಪಡೆದನು. ಬಾಲ್ಯದ ದಿನಗಳನ್ನು ಆತನು ಬನ್ನುವಿನಲ್ಲಿ ಕಳೆದುದರಿಂದ ಅದರ ಸುತ್ತಲಿನ ಹಲವು ಜನರು ಆತನನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಆತನು ಬಹಳ ದುರ್ಬಲ ಶರೀರದವನೆಂದೂ, ಇತರರಂತೆ ಸಿಪಾಯಿ ಶರೀರದವನಲ್ಲವೆಂದೂ, ಹೆಚ್ಚಾಗಿ ಧಾರ್ಮಿಕ ಕೆಲಸಗಳಲ್ಲಿಯೇ ತೊಡಗಿರುವನೆಂದೂ ಆತನ ಪರಿಚಯವುಳ್ಳ ಜನರು ಆತನ ಕುರಿತು ಹೇಳುವರು. ಅವರು ಆತನಿಗೆ 35ರಿಂದ 45 ವರ್ಷ ಪ್ರಾಯದ ಒಳಗೆ ಆಗಬಹುದೆಂದು ಅಂದಾಜು ಹೇಳುತ್ತಾರೆ.

ಅದ್ಭುತ ಕಥೆಗಳು.

ಆತನ ಕುರಿತು ಜನರು ಹಲವು ಅದ್ಭುತ ಕಥೆಗಳನ್ನು ಹೇಳುವರು. ಆತನು ಒಂದೇ ಹೊತ್ತಿನಲ್ಲಿ ಅನೇಕ ಕಡೆಗಳಲ್ಲಿ ಇರುತ್ತಾನೆಂದು ಜನರು ಹೇಳುವರು. ಟೋಚಿ ಏಜೆನ್ಸಿಯು ಸ್ಥಾಪಿತವಾದ ಕಾಲದಲ್ಲಿ ಆತನ ಜನನವಾಯಿತು. ಹುಟ್ಟಿದ 40 ದಿನಗಳ ವರೆಗೆ ಆತನು ತಾಯಿಯ ಮೊಲೆ ಹಾಲು ಕುಡಿಯಲಿಲ್ಲವಂತೆ. ಇದು ಟೋಚಿಯನ್ನು ಬ್ರಿಟಿಷರು ಸ್ವಾಧೀನಪಡಿಸಿಕೊಂಡುದರ ನಿಷೇಧ ಸೂಚನೆಗಾಗಿಯಂತೆ. ಇದು ಬಹಳ ಅಸತ್ಯ ಸಂಗತಿಯಾಗಿ ನಮಗೆ ಕಂಡರೂ ಜನರು ಅದನ್ನು ಅಲ್ಲಿ ನಂಬುತ್ತಾರೆ.

ಆತನು 1930ರಲ್ಲಿ ಪ್ರಸಿದ್ಧನಾದನು. ಗಡಿನಾಡಿನ ಕಾಂಗ್ರೆಸ್ಸನ್ನು ಪ್ರೋತ್ಸಾಹಗೊಳಿಸುವ ಸಲುವಾಗಿ ಆತನ ಮೊದಲ ಚಟುವಟಿಕೆಗಳಿದ್ದವು.

ಆತನ ಅಸಂಖ್ಯ ಹಿಂಬಾಲಕರಿರುವರೆಂದು ಜನರು ಹೇಳುತ್ತಾರೆ. ಜನರ

ಹಿಟ್ಲರನ ಪಾಶವೀ ಲೀಲೆ!

ಡೆನ್ಮಾರ್ಕ್, ನಾರ್ವೆ ಸ್ವಾಹಾ.

ಪೋಲೆಂಡನ್ನು ಕರಗತಮಾಡಿಕೊಂಡು ಯೋಚನಾಪರವಶನಂತಿದ್ದ ಹಿಟ್ಲರನು ಇದೀಗ ಡೆನ್ಮಾರ್ಕ್, ನಾರ್ವೇಗಳ ಮೇಲೆ ತನ್ನ ಸೈನ್ಯವನ್ನು ನಡೆಸಿ ಅವುಗಳನ್ನು ಕೈವಶ ಮಾಡಿಕೊಂಡು ಅವುಗಳ ಪೋಷಕನೆಂದು ಸಾರಿಕೊಂಡಿರುವನು. ಈ ಶೀಘ್ರ ಹಾಗೂ ಅನಿರೀಕ್ಷಿತ ಯುದ್ಧದ ಕಾರಣಗಳಾವವರೂ ಹೀಗಿವೆ.

ಡೆನ್ಮಾರ್ಕ್, ನಾರ್ವೇಗಳು ಖನಿಜ ಹಾಗೂ ವನಸ್ಪತಿ ಸಂಪತ್ತಿನಿಂದ ಕೂಡಿದ ಫಲವತ್ತಾದ ರಾಷ್ಟ್ರಗಳು ಹಾಗೆಯೇ ವ್ಯಾಪಾರೋದ್ಯಮಕ್ಕೆ ಹೆಸರುಗೊಂಡ ಪ್ರಾಂತಗಳು. ಯುದ್ಧ ಪ್ರಾರಂಭವಾದಾಗ ಈ ರಾಷ್ಟ್ರಗಳು ತಾವು ಯಾವ ಪಂಗಡಕ್ಕೂ ಸೇರುವದಿಲ್ಲವೆಂದೂ, ತಾವು ಯುದ್ಧಾಂತ್ಯದ ವರೆಗೂ ತಟಸ್ಥವಾಗಿ ಉಳಿಯುವೆವೆಂದೂ ಸಾರಿದ್ದುವು. ಈ ಕಾರಣದಿಂದಲೇ ಇವು ಯಾವ ಪಕ್ಷಕ್ಕೂ ವಿರೋಧವಿರದ ಜರ್ಮನಿ, ಫ್ರಾನ್ಸ್, ಬ್ರಿಟನ್‌ಗಳೊಡನೆ ಏಕ ರೀತಿಯ ಬಾಂಧವ್ಯವನ್ನಿಟ್ಟುಕೊಂಡಿದ್ದುವು. ಆದ ಪ್ರಯುಕ್ತ ನಾರ್ವೆಯು ತನ್ನಲ್ಲಿ ವಿಪುಲವಾಗಿದ್ದ ಕಬ್ಬಿಣವನ್ನು ಜರ್ಮನಿಗೆ ರಫ್ತು ಮಾಡುತ್ತಿತ್ತು. ಇದರಿಂದ ಜರ್ಮನಿಗೆ ತನ್ನ ಯುದ್ಧೋಪಕರಣ ನಿರ್ಮಾಣದಲ್ಲಿ ಸಹಾಯವಾಗುತಿತ್ತು. ಆದ್ದರಿಂದ ಜರ್ಮನಿಯ ವಿರೋಧಿಯಾಗಿರುವ ಬ್ರಿಟನು ಈ ಸರಬರಾಯಿಯನ್ನು ತಪ್ಪಿಸಬೇಕೆಂದು ಹವಣಿಸಿತು. ಆದ ಪ್ರಯುಕ್ತವಾಗಿ ಅದು ನಾರ್ವೆಗೆ ಈ ರೀತಿಯ ಒಂದು ಪತ್ರವನ್ನು ಹಾಕಿತು. 'ಬ್ರಿಟಿಷ್ ಸಾಮ್ರಾಜ್ಯವಾದಿಯು ಅಬಲ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆಗಾಗಿ ಯುದ್ಧದಲ್ಲಿ ತೊಡಗಿದೆ. ಆದ್ದರಿಂದ ಈ ಚಿಕ್ಕ ತಟಸ್ಥ ರಾಷ್ಟ್ರಗಳು ವಿರೋಧಿಯಾದ ಜರ್ಮನಿಗೇ ಸಾಮಗ್ರಿ ಸರಬರಾಜು ಮಾಡುತ್ತಿರುವದು ಸಮರ್ಪಕವಲ್ಲ; ಆದ ಪ್ರಯುಕ್ತ ನಾರ್ವೆಯು ಜರ್ಮನಿಗೆ ಯಾವ ರೀತಿಯ ಮಾಲುಗಳನ್ನೂ ಕಳುಹಿಸಕೂಡದು.' ಹಾಗೆ ನಾರ್ವೆಯು ಈ ಪತ್ರವನ್ನು ಉಲ್ಲಂಘಿಸಿ ವರ್ತಿಸುವದಾದರೆ ಬ್ರಿಟನ್ ಮತ್ತು ಫ್ರಾನ್ಸ್‌ಗಳು ಡೆನ್ಮಾರ್ಕ್, ನಾರ್ವೆ ಹಾಗೂ ಜರ್ಮನಿಯ ಮಧ್ಯದ ಸಮುದ್ರದಲ್ಲಿಯೂ, ಇತರ ಪ್ರಮುಖ ಬಂದರಿನ ಕಡೆಗಳಲ್ಲಿಯೂ ಸಮುದ್ರದಲ್ಲಿ ಮೈನುಗಳನ್ನು ಹಾಕಿ ಹಡಗುಗಳ ಸಂಚಾರಕ್ಕೆ ಅಡ್ಡಿ ಮಾಡಬೇಕಾಗುವದು' ಎಂಬುದೇ ಅವರ ಪತ್ರವಾಗಿತ್ತು. ಇದಕ್ಕೆ ಉತ್ತರವಾಗಿ ನಾರ್ವೆಯ ವಿದೇಶಾಂಗ ಮಂತ್ರಿಗಳಾದ ಮಿ. ಕೋಟ್ಸರವರು ಈ ರೀತಿಯ ಉತ್ತರವಿತ್ತಿರುವರು. 'ನಾವು ಯುದ್ಧದಲ್ಲಿ ಭಾಗವಹಿಸದೆ ತಟಸ್ಥವಾಗಿರುವ ರಾಷ್ಟ್ರಗಳು. ನಾವು ನಮ್ಮ ಹಿತದೃಷ್ಟಿಯಿಂದಲೇ ಜರ್ಮನಿಯೊಡನೆ ವ್ಯಾಪಾರ ಮಾಡುವದಾಗಿದೆ. ನಮ್ಮ ಈ ಸರಬರಾಯಿಯಿಂದ ಮಿತ್ರರಾಷ್ಟ್ರಗಳಿಗೆ ತೊಂದರೆಯಾಗುವದಾದರೆ ನಮ್ಮಿಂದ ಅದನ್ನು ತಡೆಗಟ್ಟಲು ಸಾಧ್ಯವಿಲ್ಲ. ತಟಸ್ಥರಾಷ್ಟ್ರವಾಗಿ ನಾವು ಅಂತರರಾಷ್ಟ್ರೀಯ ಕಾನೂನುಗಳಿಗೆ ಬದ್ಧವಾಗಿ ನಡೆಯಬೇಕಿದೆ. ನಿಮ್ಮ ಹೇಳಿಕೆಯಂತೆ ನಾವು ನಮ್ಮ ಸಾಮಗ್ರಿ ಸರಬರಾಯಿಯನ್ನು ನಿಲ್ಲಿಸಿದರೆ ನಮ್ಮ ತಾಟಸ್ಥ್ಯವು ಹೇಗೆ ಉಳಿದೀತು? ನಿಮ್ಮ ಸೂಚನೆಯನ್ನು ನಾರ್ವೆ ಸರಕಾರವು ಅಂಗೀಕರಿಸಲಾರದು. ಪಶ್ಚಿಮದ ರಾಷ್ಟ್ರಗಳು ಈ ರೀತಿಯ ದಬ್ಬಾಳಿಕೆಯನ್ನು ಮಾಡುತ್ತಿರುವದು. ಅವುಗಳ ಅಧಿಕಾರ ಬಲದಿಂದಲೇ ಆಗಿದೆ. ಯುದ್ಧವನ್ನು ನಾರ್ವೆಯ ಮೇಲೆ ನೂಕಿ ಹಾಕಿ ಯುದ್ಧದಲ್ಲಿ ಜಯಶಾಲಿಗಳಾಗಬೇಕೆಂಬುದೇ ಮಿತ್ರರಾಷ್ಟ್ರಗಳ ಹಂಬಲವಿರಬಹುದು. ಆದ್ದರಿಂದ ಮಿತ್ರರಾಷ್ಟ್ರಗಳು ಅಂತರರಾಷ್ಟ್ರೀಯ ಕರಾರುಗಳನ್ನು ಉಲ್ಲಂಘಿಸಿ ಸಮುದ್ರದಲ್ಲಿ ಮೈನ್ ಹಾಕುವ ವಿಚಾರವು ಅಧಿಕಪ್ರಸಂಗವಾಗಿದೆ.' ಎಂದು ಅವರು ಘೋಷಿಸಿರುವರು. ಈ ಸಂದಿಗ್ಧ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸುತ್ತಿದ್ದ ಜರ್ಮನಿಯು ಈ ರೀತಿಯ ಹೇಳಿಕೆಯೊಂದನ್ನು ಹೊರಡಿಸಿ ಕಾರ್ಯಕ್ಕೆಗೊಂಡಿತು 'ಡೆನ್ಮಾರ್ಕ್ ಮತ್ತು ನಾರ್ವೆಗಳಲ್ಲಿ ಇತರ ರಾಷ್ಟ್ರಗಳು ಬಂದು ದಬ್ಬಾಳಿಕೆ ಮಾಡದಂತೆ ಮತ್ತು ಇತರ ರಾಷ್ಟ್ರಗಳು ಇವುಗಳ ಮೇಲೆ ಕೈ ಮಾಡದಂತೆ ಜರ್ಮನಿಯು ಈ ರಾಷ್ಟ್ರಗಳಿಗೆ ಆಶ್ರಯ ಕಲ್ಪಿಸಿದೆ. ಆದ್ದರಿಂದ ಜರ್ಮನಿಯ ಪ್ರಚಂಡ ಸೇನೆಯು ಈ ರಾಷ್ಟ್ರಗಳನ್ನು ವಶಪಡಿಸಿಕೊಳ್ಳಬೇಕಿದೆ. ಜರ್ಮನಿಯು ಬ್ರಿಟನಿನೊಂದಿಗೆ ಯುದ್ಧ ಮಾಡುವ ಕಾತುರತೆಯಿಂದಿಲ್ಲ. ಆ ಅಗತ್ಯವೂ ಇಲ್ಲ; ಬ್ರಿಟಿಷರು ಜರ್ಮನರನ್ನು ಬಲತ್ಕಾರದಿಂದ ರಣರಂಗಕ್ಕೆಳೆಸಿದರೆ ಮಾತ್ರ ಆ ಯುದ್ಧ ಮಾಡಬೇಕಾಗಿ ಬರುವದು.' ಎಂಬುವದೇ ಹೇಳಿಕೆಯಾಗಿದೆ. ಈ ಹೇಳಿಕೆಯನಂತರ ಜರ್ಮನಿಯು ತನ್ನ ಅತುಲ ಸೈನ್ಯವನ್ನು ಡೆನ್ಮಾರ್ಕ್, ಹಾಗೂ ನಾರ್ವೆಗೆ ಕಳುಹಿಸಿದೆ. ಜರ್ಮನಿಯು, ಡೆನ್ಮಾರ್ಕಿನ ಆಡಳಿತಕ್ಕೂ, ಸರಕಾರಕ್ಕೂ ಯಾವ ತೊಂದರೆಯನ್ನೂ ಮಾಡದೆಂದು ಸಾರಿದೆ. ಡೆನ್ಮಾರ್ಕಿನವರು ಜರ್ಮನರನ್ನು ಎದುರಿಸುವ ಸಂಭವವಿಲ್ಲ.

ಕೋಪನ್‌ಹೇಗನಿನ ಆಕ್ರಮಣ.

ಡೆನ್ಮಾರ್ಕಿನ ಪ್ರಧಾನ ಬಂದರೂ, ಮುಖ್ಯ ಪಟ್ಟಣವೂ ಆದ ಕೋಪನ್‌ಹೇಗನ

ನ್ನು ಜರ್ಮನರ ಸೈನ್ಯವು ಆಕ್ರಮಿಸಿಕೊಂಡು ಡೆನ್ಮಾರ್ಕ್ ಗಡಿ ದಾಟಿ ಮುಂದೆ ಸಾಗಿದೆಯಂತೆ. ಒಟ್ಟಾರೆ ಇಡೀ ಡೆನ್ಮಾರ್ಕೇ ಜರ್ಮನರ ಕೈವಶದಲ್ಲಿದೆಯೆಂದು ತಿಳಿದು ಬರುತ್ತಿದೆ.

ನಾರ್ವೇ ಪ್ರತಿಭಟನೆ.

ನಾರ್ವೆ ಸರ್ಕಾರವು ಜರ್ಮನರ ಈ ತೀವ್ರ ಕಾರ್ಯಕ್ರಮವನ್ನು ಪ್ರತಿಭಟಿಸಿದೆ. ನಾರ್ವೆಗೂ, ಜರ್ಮನಿಗೂ ಘರ್ಷಣೆಯಾಗುವ ಸಂದರ್ಭ ಕಂಡು ಬರುತ್ತಿದೆ ಜರ್ಮನರು ಆದಾಗಲೇ ಬರ್ಗೆನ್, ಮೊದಲಾದ ಪಟ್ಟಣಗಳನ್ನಾಕ್ರಮಿಸಿಕೊಂಡಿರುವರು. ನಾರ್ವೆ ಸರಕಾರವು ಓಸ್ಲೋವನ್ನು ಬಿಟ್ಟು ಮಧ್ಯ ನಾರ್ವೆಯಲ್ಲಿರುವ ಹಮಾರ್ ಎಂಬ ಪಟ್ಟಣಕ್ಕೆ ಹೋಗಿರುವರು. ಜರ್ಮನ್ ವಿದೇಶಾಂಗ್ಯಮಂತ್ರಿಯು ನಾರ್ವೆ ಸರಕಾರಕ್ಕೆ ಪತ್ರ ಬರೆದು ನಾರ್ವೆ ಸರಕಾರವು ಜರ್ಮರನ್ನು ಎದುರಿಸಬಾರದೆಂದೂ, ನಾರ್ವೆಯ ಹಿತದೃಷ್ಟಿಯಿಂದ ಜರ್ಮನಿಯು ಸೈನ್ಯ ಸಮೇತ ನಾರ್ವೆಗೆ ಬಂದಿರುವದೆಂದೂ, ಆದ್ದರಿಂದ ತನ್ನ ಹಿತದೃಷ್ಟಿಯಿಂದ ನಾರ್ವೆ ಸರಕಾರವು ಜರ್ಮನಿಯ ಅಡಿಯಲ್ಲಿ ಆಶ್ರಯಪಡೆಯಬೇಕೆಂದೂ ತಿಳಿಸಿದರು. ಆದರೆ ಇದನ್ನು ನಾರ್ವೆ ಸರಕಾರವು ಪರ್ಯಾಲೋಚಿಸಿ ಜರ್ಮನಿಯು ನಾರ್ವೆಯ ಅರಸುತನವನ್ನು ಹಾಗೂ ಸ್ವಾತಂತ್ರ್ಯವನ್ನು ಕಿತ್ತೊಗೆಯುವ ಈ ಕಾರ್ಯಕ್ರಮವನ್ನು ಕೈಕೊಂಡದಕ್ಕಾಗಿ ಜರ್ಮನಿಯನ್ನು ನಾರ್ವೆಯು ಎದುರಿಸಿಯೇ ತೀರಬೇಕೆಂದು ನಿರ್ಧರಿಸಿರುವದು. ನಾರ್ವೆಯು ತನ್ನ ಸೈನ್ಯ ಪಡೆಗೆ ಅಪ್ಪಣೆಯನ್ನಿತ್ತಿದೆ. ಓಸ್ಲೋವಲ್ಲಿ ತೀವ್ರ ಕದನವಾಗುವ ಸಂಭವವಿದೆ. ಓಸ್ಲೋವಿನಲ್ಲಿರುವ ನಾಗರೀಕ ಪ್ರಜೆಗಳನ್ನು ಸಾಗಿಸುವ ಕಾರ್ಯ ಕೈಕೊಳ್ಳಲಾಗಿದೆ.

ಜರ್ಮನರು ಸ್ವೀಡನಿನ ಸುತ್ತು ಸಮುದ್ರದಲ್ಲಿ ಮೈನ್‌ಗಳನ್ನು ಹಾಕಿರುವರಂತೆ. ಇಡೀ ಬಾಲ್ಟಿಕ್ ಸಮುದ್ರವೇ ಈ ಮಿತ್ರ ಹಾಗು ಶತ್ರು ರಾಷ್ಟ್ರಗಳ ಮೈನ್‌ಗಳಿಂದಾಗಿ ಸಂಚಾರಕ್ಕನುಕೂಲವಾಗಿಲ್ಲ. ಸ್ವೀಡನು ಜರ್ಮನರನ್ನು ಎದುರಿಸಲು ಕಟಿಬದ್ಧವಾಗಿ ನಿಂತಿದೆ. ತನ್ನ ಸೈನ್ಯಕ್ಕೆ ಅಪ್ಪಣೆಯನ್ನಿತ್ತಿದೆ. ಜರ್ಮನರನ್ನು ಈ ಎರಡು ರಾಷ್ಟ್ರಗಳು ಎದುರಿಸಬಹುದಾಗಿದೆ.

ಬ್ರಿಟಿಷರ ಧೋರಣೆ.

'ಉತ್ತರ ಗಡಿಯಲ್ಲಿ ಕದನವಾಗಬೇಕೆಂದು ಬ್ರಿಟನು ಇಚ್ಛಿಸಿಲ್ಲ. ಜರ್ಮನಿಯು ನಾರ್ವೆ, ಸ್ವೀಡನ್‌ಗಳಲ್ಲಿ ತನ್ನ ರಾಜ್ಯವಿಸ್ತರಣಾ ತೃಷೆಯನ್ನು ತೋರ್ಪಡಿಸುವದಾದರೆ ಅದನ್ನು ತೀವ್ರವಾಗಿ ಎದುರಿಸಲು ನಾವು ಸಿದ್ಧರಿರುವೆವು. ರಷ್ಯಾವು ಈ ಕಾರ್ಯ ಕೈಕೊಂಡರೆ ಅದಕ್ಕಾದರೂ ನಾವು ವಿರೋಧಿಸದಿರೆವು.' ಎಂದು ಬ್ರಿಟಿಷ್ ಸರಕಾರವು ಹೇಳಿರುವದು. ಮಿ. ಚೇಂಬರ್ಲೇನರು ಈ ಪರಿಸ್ಥಿತಿಯ ಬಗ್ಗೆ ಒಂದು ಪ್ರಕಟಣೆ ಹೊರಡಿಸಲಿರುವರು.

ಫ್ರೆಂಚರ ಮತ.

ಫ್ರೆಂಚರು ಜರ್ಮನರ ಕಾರ್ಯಕ್ರಮಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿರುವಂತೆ ಕಂಡು ಬರುವದಿಲ್ಲ. 'ಕಾದು, ನೋಡು' ಎಂಬ ನಾಣ್ನುಡಿಯಂತೆ ಅವರು ಪರಿಸ್ಥಿತಿಯನ್ನು ಪರಿಶೀಲಿಸುತ್ತಿರುವರು.

ನಾರ್ವೆ ಧಾಳಿ.

ಜರ್ಮನರ ಸೈನ್ಯವು ನಾರ್ವೆಯ ಫ್ರೈನ್ಸ್ ಬರ್ಗ್ ಮತ್ತು ಟಂಡರ್ನ್ ಮೊದಲಾದ ಪಟ್ಟಣಗಳಿಗೆ ನುಗ್ಗಿದೆ. ಅವರು ಉತ್ತರಕ್ಕೆ ಮುಂದರಿಯುತ್ತಿರುವರು. ಜರ್ಮನರು ಸ್ಟಾವೆಂಜರ್ ಮೊದಲಾದ ಪಟ್ಟಣಗಳನ್ನು ಆಕ್ರಮಿಸಿಕೊಂಡಿರುವರಲ್ಲದೆ ಸೀಲೆಂಡ್ ದ್ವೀಪವನ್ನೂ ವಶಪಡಿಸಿಕೊಂಡಿರುವರು.

ಬ್ರಿಟಿಷರ ಅಭಯ.

ಮಿತ್ರ ರಾಷ್ಟ್ರಗಳಾದ ಬ್ರಿಟನ್ ಮತ್ತು ಫ್ರಾನ್ಸುಗಳು ನಾರ್ವೆಗೆ ಯುದ್ಧದಲ್ಲಿ ಸಹಾಯ ಮಾಡುವದಾಗಿ ಭರವಸೆಯನ್ನಿತ್ತಿವೆ. ಈಗಾಗಲೇ ಸೈನ್ಯಗಳನ್ನು ಕಳುಹಿಸುವ ಏರ್ಪಾಡುಗಳಾಗುತ್ತಿವೆ.

ನ್ನು ಸುಲಿಗೆ ಮಾಡುವುದಾಗಲೀ, ಕೊಲುವದಾಗಲೀ ಕೂಡದೆಂದು ಆತನು ಕಠಿಣ ನಿಬಂಧನೆ ಇಟ್ಟಿರುವನಂತೆ. ಹಲವರು ಆತನಿಗೆ ಇಟಲಿ ಜರ್ಮನಿಗಳೊಡನೆ ಗುಪ್ತ ಸಂಬಂಧವಿದ್ದು ಅಲ್ಲಿಂದ ಬೇಕು ಬೇಕಾದ ಸಕಲ ಸಾಧನಗಳೂ ಬರುತ್ತಿವೆಯೆಂದೂ ಹೇಳುತ್ತಿರುವರು. 1935ರಲ್ಲಿ ಆತನ ಮನೆಯನ್ನು ಬ್ರಿಟಿಷರು ಸುಟ್ಟುಹಾಕಿದರು. ಆ ಮೇಲೆ ಆತನು ಅವರ ವಿರುದ್ಧ ದಂಗೆಯೆದ್ದಿರುವನು. ಆತನು ಹಲವು ಪ್ರಾಚೀನ ಮತ್ತು ನೂತನ ಯುದ್ಧೋಪಕರಣಗಳನ್ನು ಉಪಯೋಗಿಸುತ್ತಿರುವನು. ಭಯಂಕರ ಬಾಂಬುಗಳು ಅವನ ಸ್ವಾಧೀನವಲ್ಲಿವೆ. ಆತನು ಅವುಗಳಿಗೆ ಉಪಯೋಗಿಸುವ ಮದ್ದೂ ಬಹಳ ವಿಶೇಷ ತರದ್ದಾಗಿದೆ.

ಮೋಟಗಾರನೇ?

ವಜೀರಿಸ್ಥಾನದಲ್ಲಿ ಬ್ರಿಟಿಷ್ ಸಿಪಾಯಿಗಳನ್ನು ಆತನು ಆಗಾಗ ಸುಲಿಯುವನು. ತನ್ನ ಅನುಯಾಯಿಗಳು ಸರಿಯಲ್ಲಿದ್ದರೆ ಅವಕ್ಕಾಗಿ ದುಂಬಿ ಮಾಡುವನು. ತನ್ನ ಕುರಿತು ಕಾರಸ್ಥಾನ ಮಾಡುವವರನ್ನು ಸೀಡಿರುವನು. ಆತನು ತನ್ನ ಮೋಟಗಾರಿಕೆಯಿಂದಲೇ ಶತ್ರುಗಳನ್ನು ಕೊಲೆ ಹೊಡೆಯುವನೆಂದು ಜನರಾಡುತ್ತಿರುವರು. ಸುತ್ತುಮುತ್ತಲಿನ ನಿವಾಸಿಕರು ಆತನ ವಿಷಯ ಬಹಳ ಅಭಿಮಾನವುಳ್ಳವರಾಗಿರುವರು.

ಕೆಲವರು ಆತನು ಬ್ರಿಟಿಷರು ಇಟ್ಟ ಗೂಢಚಾರನೆಂದು ಹೇಳುವರು. ಕೆಲವರು ಅವನು ವಜೀರಿಸ್ಥಾನವನ್ನು ಮುಕ್ತಗೊಳಿಸಲು ಹೋರಾಡುವ ವೀರನೆನ್ನುವರು. ಹಲವರು ಆತನು ಭಾರತದ ಸ್ವಾತಂತ್ರ್ಯ ಧುರೀಣರೊಡನೆ ಸಂಬಂಧವಿಟ್ಟುಕೊಂಡಿರುವನೆಂಬರು. ಅಂತೂ ಇಪಿ ಫಕೀರನು ಮಹಾ ಪ್ರಭಾವಶಾಲಿಯಾದ ಒಬ್ಬ ರಹಸ್ಯ ವ್ಯಕ್ತಿಯಾಗಿರುವನು.

ಕೊಡಗು

ಏಪ್ರಿಲ್ ತಾರೀಕು ೧೨ ನೇ ಶುಕ್ರವಾರ ೧೯೪೦.

ಮತ್ತೆರಡು ಸ್ವತಂತ್ರ ರಾಷ್ಟ್ರಗಳ ಬಲಿ.

ಹಿಟ್ಲರನ ಸಾಮ್ರಾಜ್ಯವಿಸ್ತರಣಾಲಾಲಸೆಯು ಆತನನ್ನು ದಿನೇ ದಿನೇ ಹೆಚ್ಚಾಗಿ ಕ್ರೂರ ಕೃತ್ಯಗಳನ್ನು ಮಾಡಲು ತಳ್ಳುತ್ತಿದೆ. ಆತನ ಈ ಆಶೆಗಾಗಿ ಹಲವು ಸ್ವಾತಂತ್ರ್ಯ ಚಿಕ್ಕ ಜನಾಂಗಗಳು ಬಲಿಬೀಳುತ್ತಿವೆ. ಈ ಮೊದಲು ಆಸ್ಟ್ರಿಯಾ, ಜೆಕೊಸ್ಲೊವಾಕಿಯಾ, ನಂತರ ಪೋಲೆಂಡು ಹಿಟ್ಲರನ ಕ್ರೂರ ದೃಷ್ಟಿಗೆ ಬಿದ್ದು ತಮ್ಮ ಸ್ವಾತಂತ್ರ್ಯವನ್ನು ಕಳಕೊಂಡವು. ಇಂದು ಯಾರೂ ನಿರೀಕ್ಷಿಸದಿದ್ದಂಥಾ ಕಾಲದಲ್ಲಿ ಜರ್ಮನಿಯ ಸರ್ವಾಧಿಕಾರಿಯು ತನ್ನ ಸೈನ್ಯವನ್ನು ತನ್ನ ನೆರೆರಾಜ್ಯವಾದ ಡೆನ್ಮಾರ್ಕ್ ಮತ್ತು ನಾರ್ವೆ ದೇಶಗಳ ಮೇಲೆ ಮಿಂಚಿನಷ್ಟು ವೇಗವಾಗಿ ನಡೆಸಿ ಆವೆರಡು ರಾಜ್ಯಗಳನ್ನು ತನ್ನ ಸ್ವಾಧೀನಪಡಿಸಿಕೊಂಡಿರುವನು. ತನ್ನ ಈ ಕ್ರೂರ ಕೃತ್ಯಕ್ಕೆ ಕಾರಣವನ್ನು ಬ್ರಿಟಿಷರ ಮೇಲೆ ಹೊರಿಸಿರುವನು. ಇದಕ್ಕೆ ಒಂದು ದಿನಕ್ಕೆ ಮುಂಚಿತವಾಗಿ ಬ್ರಿಟಿಷರು ನಾರ್ವೆ ಸುತ್ತಲಿನ ಸಮುದ್ರದಲ್ಲಿ ಶತ್ರುಗಳ ಹಡಗುಗಳು ಚಲಿಸದಂತೆ ಮೈನ್‌ಗಳನ್ನು ಹರಡಿದ್ದರು. ಸ್ವೀಡನ್ ಮತ್ತು ನಾರ್ವೆಯಲ್ಲಿರುವ ಕಬ್ಬಿಣದ ಗನಿಗಳಿಂದ ಕಬ್ಬಿಣವನ್ನು ನಾರ್ವೆಯ ನಾರ್ವಿಕ್ ಬಂದರದ ಮೂಲಕ ಜರ್ಮನರು ತಮ್ಮ ದೇಶಕ್ಕೆ ಸಾಗಿಸುವದನ್ನು ತಡೆಯಲಿಕ್ಕಾಗಿ ಅಲ್ಲಿಯ ಸಮುದ್ರದಲ್ಲಿ ಮೈನ್‌ಗಳನ್ನು ಬ್ರಿಟಿಷರು ಹಾಕಿದ್ದಾಗಿದೆ. ಜರ್ಮನರು ಯುದ್ಧದ ಜಹಜುಗಳನ್ನೆಲ್ಲಾ ಮೂಲೆಗೊತ್ತಿ ಮಿತ್ರ ರಾಷ್ಟ್ರಗಳ ಹಡಗುಗಳನ್ನು ಮುಳುಗಿಸುತ್ತಿರುವಂಥಾದ್ದನ್ನು ತಡೆಯಲಿಕ್ಕಾಗಿ ಈ ವರ್ತನೆಯನ್ನು ಕೈಗೊಂಡದ್ದೆಂದು ಬ್ರಿಟಿಷರ ಹೇಳಿಕೆಯಾಗಿದೆ. ಆದರೆ ಜರ್ಮನರು ಈ ನೆಪವನ್ನು ಹೂಡುವದರಲ್ಲಿ ಅರ್ಥವೇನೂ ಇಲ್ಲ. ಇವೆರಡು ರಾಜ್ಯಗಳ ಮೇಲೆ ತಮ್ಮ ಸೈನ್ಯವನ್ನು ನಡೆಸಿ 24 ಗಂಟೆಗಳೊಳಗೆ ಅವುಗಳನ್ನು ಸ್ವಾಧೀನಪಡಿಸಿಕೊಳ್ಳಬೇಕಾದರೆ ಇದಕ್ಕೆ ತಕ್ಕ ಏರ್ಪಾಡುಗಳನ್ನು ಮೊದಲೇ ಜರ್ಮನಿಯು ಮಾಡಿದ್ದಿರಬೇಕು. ಈ ಏರ್ಪಾಡುಗಳನ್ನು ಒಂದೆರಡು ದಿನಗಳಲ್ಲಿ ಮಾಡಲು ಎಂದಿಗೂ ಸಾಧ್ಯವಲ್ಲ. ಹಿಟ್ಲರನು ಯಾರ ಗೋಜಿಗೂ ಹೋಗದಿರುವ ಚಿಕ್ಕ ಜನಾಂಗಗಳ ಸ್ವಾತಂತ್ರ್ಯಾಪಹರಣ ಮಾಡಿದ ಅನ್ಯಾಯದ ಕಾರ್ಯಕ್ಕಾಗಿ ಬ್ರಿಟಿಷರ ಈ ವರ್ತನೆಯನ್ನು ನೆಪವಾಗಿ ಒಡ್ಡಿರುವದಲ್ಲದೆ ಅನ್ಯಥಾ ಬೇರೆಯಲ್ಲ. ಜರ್ಮನಿಯ ಈ ಕ್ರೂರ ಕೃತ್ಯವನ್ನು ರಷ್ಯ ಮತ್ತು ಇಟಲಿ ಇವೆರಡು ದೇಶಗಳಲ್ಲದೆ ಪ್ರಪಂಚದ ಉಳಿದ ಜನಾಂಗಗಳೆಲ್ಲವೂ ತೀವ್ರವಾಗಿ ಖಂಡಿಸಿವೆ. ಜರ್ಮನಿಯ ಈ ಕ್ರೂರ ಕಾರ್ಯಗಳಿಂದ ಯುರೋಪಿನಲ್ಲಿ ಭಯಂಕರವಾದ ವಾತಾವರಣವು ಹರಡುತ್ತಿದೆ. ಯಾವ ಚಿಕ್ಕ ರಾಷ್ಟ್ರದ ಸ್ವಾತಂತ್ರ್ಯವೂ ಸುರಕ್ಷಿತವಾಗಿಲ್ಲವೆಂಬ ಭಾವನೆಯು ಎಲ್ಲರಲ್ಲಿಯೂ ಹುಟ್ಟಿರುತ್ತೆ.

ಮುಂದೇನಾಗುವದೆಂಬುದು ಮಿತ್ರ ರಾಜ್ಯಗಳ ನಿಶ್ಚಯವನ್ನು ಅವಲಂಬಿಸಿದೆ. ಈಗಾಗಲೇ ಬ್ರಿಟನ್ ಮತ್ತು ಫ್ರಾನ್ಸಿನ ಯುದ್ಧ ಸಮಿತಿಯು ಸೇರಿ ನಾರ್ವೆಗೆ ತಮ್ಮ ಸರ್ವಸಹಾಯವನ್ನೂ ಮಾಡುವದಾಗಿ ತೀರ್ಮಾನಿಸಿವೆ. ಅಲ್ಲದೆ ಅವರ ಹಡಗು ಪಡೆಯು ನಾರ್ವೆಯ ತೀರಕ್ಕೆ ತಲಪಿ ಅಲ್ಲಿ ಶತ್ರುಗಳ ನೌಕಾ ಸೈನ್ಯದೊಂದಿಗೆ ಯುದ್ಧವನ್ನು ಕೂಡಾ ಪ್ರಾರಂಭಿಸಿದೆ ಯೆಂದು ವಾರ್ತೆ ಬಂದಿದೆ. ಬ್ರಿಟನು ಈ ರೀತಿ ಕೂಡಲೆ ಕಾರ್ಯಕ್ಕೆ ಕೈಯಿಕ್ಕಿದ್ದು ಯುಕ್ತವಾಗಿದೆ. ಆದರೆ ಅವರು ಇದನ್ನು ಸಾಕಷ್ಟು ಬಲಯುತವಾಗಿ ಮುಂದರಿಸುವರೋ ಎಂದು ನೋಡಬೇಕಾಗಿದೆ. ಹಾಗೆ ಮುಂದರಿಸದಿದ್ದರೆ ಜರ್ಮನಿಯ ಧಾಳಿಯು ಮತ್ತಷ್ಟೂ ಹೆಚ್ಚುವದೆಂಬುದರಲ್ಲಿ ಸಂದೇಹವಿಲ್ಲ. ಇನ್ನೊಂದು ಕಡೆ ರಷ್ಯಾವು ಸ್ಕಾಂಡಿನೇವಿಯೊದಲ್ಲಿ ಜರ್ಮನರ ಪ್ರಾಬಲ್ಯವನ್ನು ಸಹಿಸುವದೋ? ಇಲ್ಲವೇ ರಷ್ಯಾವೂ, ಜರ್ಮನಿಯೂ ಸೇರಿ ಸ್ಕಾಂಡಿನೇವಿಯೊ ಪ್ರದೇಶವನ್ನು ತಮ್ಮೊಳಗೆ ಅಂದರೆ ಸ್ವೀಡನ್ ಮತ್ತು ಫಿನ್‌ಲೆಂಡ್ ರಷ್ಯಾಕ್ಕೂ, ನಾರ್ವೆ ಮತ್ತು ಡೆನ್ಮಾರ್ಕ ಜರ್ಮನಿಗೂ ಎಂದು ಹಂಚಿಕೊಳ್ಳುವವೋ ಎಂಬುದು ಇನ್ನೂ ಕೆಲವು ದಿವಸಗಳಲ್ಲಿಯೇ ಗೊತ್ತಾಗುವದು. ಹ್ಯಾಗೂ ಯುರೋಪಿನ ಯುದ್ಧವು ಮತ್ತೊಂದು ಭೀಕರವಾದ ಹೆಜ್ಜೆಯನ್ನು ಮುಂದಿಟ್ಟಿದೆ. ಯುದ್ಧವನ್ನು ದೀರ್ಘಕಾಲ ಸಾವಕಾಶಮಾಡುವದರಿಂದ ಜರ್ಮನಿಯ ಆರ್ಥಿಕ ಸ್ಥಿತಿಗೆ ಪೆಟ್ಟುಬೀಳುವದೆಂಬ ಭೀತಿಯಿಂದ ಹಿಟ್ಲರನು ಹೀಗೆ ಮುಂದಡಿಯಿಡುತ್ತಿರುವನೋ ತಿಳಿಯದು. ಯುರೋಪಿನ ಈಗಿನ ಪರಿಸ್ಥಿತಿಯು ಬಹು ಭಯಾನಕವಾಗಿದೆ. ಹಿಟ್ಲರನ ಹಿಂಸಾಕಾರ್ಯಗಳು ಪ್ರಾಬಲ್ಯವನ್ನು ಹೊಂದುತ್ತಿವೆ. ಜಗತ್ತಿನ ಶಾಂತಿಯನ್ನು ಒಯಿಸುವ ರಾಜ್ಯಗಳೆಲ್ಲವೂ ಕೂಡಲೇ ಒಂದುಗೂಡಿ ಇದನ್ನು ತಡೆಯದಿದ್ದರೆ ಮುಂದಿನ ಸ್ಥಿತಿಯು ಹೇಗಾಗುವದೆಂದು ಹೇಳಲಾಗುವದಲ್ಲ.

ಕೈಲಾಸವಾಸಿ ದೀನಬಂಧು ಸಿ. ಎಫ್. ಅಂಡ್ರೂಸ್.

ಆರು ಸಾವಿರ ಮೈಲುಗಳ ದೂರದಿಂದ ತನ್ನ ಉದರಂಭರಣಕ್ಕಾಗಿ ಅನೇಕ ಪಾಶ್ಚಿಮಾತ್ಯರಂತೆ ಭಾರತಕ್ಕೆ ಬಂದ ಬ್ರಿಟಿಷ್ ಪ್ರಜೆಗಳೊಬ್ಬರು ಭಾರತದಲ್ಲಿ ಬಡತನದ ಭಯಂಕರ ಪಾತಾಳದಲ್ಲಿ ನರಳುತ್ತಿರುವ ಕೋಟ್ಯಾಂತರ ದೀನರ ಅವಸ್ಥೆಯನ್ನು ಕಂಡು ಮರಮರನೆ ಮರುಗಿ ಮಹಾತ್ಮಾ ಏಸುವಿನ ಆದರ್ಶವನ್ನು ಕಣ್ಣು ಮುಂದೆ ಇಟ್ಟುಕೊಂಡು ಆಧುನಿಕ ಏಸು ಕ್ರಿಸ್ತರಾದರು. ಭಾರತದ ಆರ್ತರ, ದೀನರ ಸೇವೆಯೇ ತನ್ನ ಕರ್ತವ್ಯವೆಂದು ಆಹರ್ನಿಶಿ ಭಾರತೀಯರಾಗಿ ದುಡಿದು ಮಹಾತ್ಮಗಾಂಧೀಯವರ ಪರಮ ಭಕ್ತರಾಗಿ ಭಾರತೀಯರ ಪ್ರೇಮಕ್ಕೆ ಪಾತ್ರರಾಗಿ 'ದೀನಬಂಧು' ಎಂಬ ಬಿರುದನ್ನು ಮಹಾತ್ಮರಿಂದ ಪಡೆದು ಕಾಯವನ್ನುಳಿದರೂ ಕೀರ್ತಿಯನ್ನು ಭಾರತ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ನಿಲ್ಲಿಸಿದರು. ಇವರೇ ದೀನಬಂಧು ಆಂಡ್ರೂಸರು.

ಆಂಡ್ರೂಸರು ತಮ್ಮ ವಿದ್ಯಾಭ್ಯಾಸವನ್ನು ಮಾತೃಭೂಮಿಯಲ್ಲಿ ಮಾಡಿದರೂ, ಇವರ ಆದರ್ಶ ಕರ್ತವ್ಯದ ಆರಂಭವು ಆದುದು ಭಾರತಭೂಮಿಯಲ್ಲೇ. ಇಲ್ಲಿ ಅನಗು ಮಹಾತ್ಮರ ಅನುಯಾಯಿಗಳಾಗಿ ಪರದೇಶಗಳಲ್ಲಿರುವ ಭಾರತೀಯರ ವಿಚಾರಮಾಡಿದ ಕಾರ್ಯವು ಅವರ್ಣನೀಯವಿರುವದು. ದಕ್ಷಿಣ ಆಫ್ರಿಕದಲ್ಲಿ ಇವರು ಭಾರತೀಯರಿಗಾಗಿ ಮಾಡಿದ ಸೇವೆ, ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಷಾಹಿಗೆ ಕಳಂಕ ಪ್ರಾಯವಾಗಿರುವ ಬ್ರಿಟಿಷ್ ಅಧಿಕಾರಿಗಳ ವರ್ತನೆಯ ಖಂಡನೆ ಇವೆಲ್ಲಾ ಒಂದೆರಡು ವಾಕ್ಯಗಳಲ್ಲಿ ಹೇಳುವಂಥಾದ್ದಲ್ಲ. ಭಾರತೀಯ ರಾಜಕೀಯತ್ವಕ್ಕೆ ಧುಮುಕಿದರ ಫಲವಾಗಿ ಸೆರೆಮನೆ ವಾಸವು ಇವರಿಗೆ ಲಭಿಸಿತು. ದೀನಬಂಧುಗಳು ಭಾರತೀಯರಿಗೆ ಮಾಡಿದಷ್ಟು ಉಪಕಾರವನ್ನು ಆದಾವ ಬ್ರಿಟಿಷನೂ ಇದುವರೆಗೆ ಮಾಡಿಲ್ಲ. ಭಾರತೀಯರಿಗಾಗಿ ತನ್ನ ಸರ್ವಸ್ವವನ್ನು ತ್ಯಾಗಮಾಡಿ, ಮಹಾತ್ಮರ ಬಲಗೈಯಂತಿದ್ದ ದೀನಬಂಧುಗಳ ವಿಯೋಗವು ಇಡೀ ಭಾರತವನ್ನು ದುಃಖ ಸಮುದ್ರದಲ್ಲಿ ಮುಳುಗಿಸಿದೆ. ಕಾಂಗ್ರೆಸ್ಸು ಇವರ ಸೇವೆಯನ್ನು ವಿಧವಿಧವಾಗಿ ಪ್ರಶಂಸಿಸಿದೆ. ಇವರ ನಿಧನಕ್ಕಾಗಿ ಅಪಾರ ಕಣ್ಣೀರು ಚೆಲ್ಲಿದೆ. ಭಾರತೀಯರ ಭಾಗ್ಯದೇವತೆಯೂಗಿದ್ದ ಆಂಡ್ರೂಸರು ನಿಷ್ಕಲಂಕ ಹೃದಯಿಗಳು. ಪರಿಶುದ್ಧ ಆತ್ಮದ ಆದರ್ಶಮೂರ್ತಿಗಳು, ಜನತಾಸೇವಕರೂ, ವಿದ್ಯಾಪ್ರಚಾರಕರೂ ಮೇಲಾಗಿ ದೀನರ ಸೇವೆಯಲ್ಲೇ ಸ್ವರ್ಗವನ್ನು ಕಂಡವರೂ, ನಿರ್ಭಾಗ್ಯ ಭಾರತೀಯರಿಗೆ ದಿನಮಣಿಯಂತಿದ್ದವರೂ, ಪೂರ್ವಪಶ್ಚಿಮ ಸಂಬಂಧಕ್ಕೆ ಸೇತುವೆಯಂತಿದ್ದವರೂ ಆದ ಇವರ ಅಳಿವಿನಿಂದ ಭಾರತೀಯರ ಭಾಗ್ಯದೇವತೆಯೇ ಮಾಯವಾಯಿತು. ಬ್ರಿಟಿಷ್ ಹಾಗೂ ಭಾರತೀಯರಲ್ಲಿ ಭಾಂಧವ್ಯವನ್ನು ನಿಲಿಸುವ ಶಕ್ತಿ ಅಳಿಯಿತು. ಭಾರತಕ್ಕೆ ಎಂದೂ ದೊರೆಯದ ರತ್ನ ದೊರೆತೂ ಕಳಚಿ ಬಿದ್ದಿತು. ಹಾ! ನಿರ್ಭಾಗ್ಯ ಭಾರತಾಂಬೆ!!

ರಾಷ್ಟ್ರೀಯ ವಾರಾಚರಣೆ.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯು ಈ ತಾರೀಕು 7ರಲ್ಲಿ ವೀರಾಜಪೇಟೆಯಲ್ಲಿ ಸೇರಿ ಅದನ್ನು ಸತ್ಯಾಗ್ರಹ ಕಮಿಟಿಯಾಗಿ ಮಾರ್ಪಡಿಸಲಾಯಿತು. ಅಲ್ಲದೆ ಶ್ರೀಯುತರುಗಳಾದ ಕೆ. ಸಿ. ಕರುಂಬಯ್ಯ, ಬಿ. ಯಂ. ಕಾರ್ಯಪ್ಪ, ಐ. ಪಿ. ಕಾರ್ಯಪ್ಪ, ಸಿ. ಯಂ. ಪೂಣಚ್ಚ ಮತ್ತು ಪಿ. ಐ. ಬೆಳ್ಯಪ್ಪ ಇವರುಗಳಿಂದ ಕೂಡಿದ ಒಂದು ಕಾರ್ಯಕಾರಿ ಮಂಡಳಿಯನ್ನು ನೇಮಿಸಲಾಯಿತು. ತುರಿತದ ಕಾರ್ಯಭಾರಗಳನ್ನೆಲ್ಲಾ ನಡೆಸುವಂತೆ ಈ ಚಿಕ್ಕ ಮಂಡಳಿಗೆ ಅಧಿಕಾರ ಕೊಡಲಾಯಿತು. ರಾಷ್ಟ್ರೀಯ ವಾರವನ್ನು ಕೊಡಗಿನ ಎಲ್ಲಾ ಮುಖ್ಯ ಭಾಗಗಳಲ್ಲಿ ಆಚರಿಸುವಂತೆ ತೀರ್ಮಾನಿಸಲಾಯಿತು.

ಗೋಣಿಕೊಪ್ಪ.

ತಾರೀಕು 7 ರ ಮಧ್ಯಾಹ್ನ ಇಲ್ಲಿ ಕಾಂಗ್ರೆಸ್ ಕೆಲಸಗಾರರು ರಾಷ್ಟ್ರೀಯ ಧ್ವಜದೊಡನೆ ಮೆರವಣಿಗೆಯನ್ನು ನಡೆಸಿ ಆಸ್ಪತ್ರೆ ಬಳಿ ಮೈದಾನದಲ್ಲಿ ಸಾರ್ವಜನಿಕ ಸಭೆ ನೇರಿಸಲಾಯಿತು. ಶ್ರೀ ಬಿ. ಯಂ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಶ್ರೀಯುತರುಗಳಾದ ಪಿ. ಐ. ಬೆಳ್ಯಪ್ಪನವರು, ಕೆ. ಸಿ. ಕರುಂಬಯ್ಯನವರು, ಮತ್ತು ಸಿ. ಯಂ. ಪೂಣಚ್ಚನವರು ರಾಮಗಡ ಕಾಂಗ್ರೆಸಿನ ತೀರ್ಮಾನವನ್ನೂ ಸತ್ಯಾಗ್ರಹವನ್ನು ಹೂಡಲು ಮಹಾತ್ಮ ಗಾಂಧೀಯವರು ಹಾಕಿರುವ ಶರತುಗಳನ್ನೂ, ವಿವರಿಸಿ ಭಾಷಣ ಮಾಡಿದರು.

ವೀರಾಜಪೇಟೆ.

ತಾರೀಕು 9ನೇ ಬುಧವಾರ ರಾಷ್ಟ್ರಗೀತೆ, ಬಾವಟೆಗಳಿಂದ ಪೇಟೆಯ ಮುಖ್ಯ ಬೀದಿಯಲ್ಲಿ ಮೆರವಣಿಗೆಯು ನಡೆಸಲ್ಪಟ್ಟ ನಂತರ ವಿಕ್ಟೋರಿಯಾ ಕ್ಲಬ್ಬಿನ ಎದುರುಗಡೆ ಸಾರ್ವಜನಿಕ ಸಭೆ ನಡೆಸಲಾಯಿತು. ಶ್ರೀ ನಾಯಡ ಬೆಳ್ಯಪ್ಪನವರು ಅಧ್ಯಕ್ಷಸ್ಥಾನ ವಹಿಸಿದ್ದರು. ಭಾರತಭೂಮಿಯ ಇಂದಿನ ರಾಜಕೀಯ ವಾತಾವರಣ, ಮುಂದೆ ಹೂಡಬೇಕಾದ ಸತ್ಯಾಗ್ರಹ ಸಿದ್ಧತೆಗಾಗಿ ಮಹಾತ್ಮರ ಸೂಚನೆಯಂತೆ ನಡೆಸಬೇಕಾದ ಕಾರ್ಯಕ್ರಮ, ಅಂದರೆ ಖಾದಿ ಪ್ರಚಾರ, ಅಸ್ಪರ್ಶತಾನಿವಾರಣ, ನಿಷಾನಿಶೇಧ ಮತ್ತು ಹಿಂದು ಮುಸ್ಲಿಮರ ಒಗ್ಗಟ್ಟು ಇವುಗಳನ್ನು ಕುರಿತು ಶ್ರೀಯುತರುಗಳಾದ ಪಿ. ಐ. ಬೆಳ್ಯಪ್ಪನವರು, ಕೆ. ಸಿ. ಕರುಂಬಯ್ಯನವರು, ಐ. ಪಿ. ಕಾರ್ಯಪ್ಪನವರು, ಬಿ. ಯಂ. ಕಾರ್ಯಪ್ಪನವರು ಮತ್ತು ಸಿ. ಯಂ. ಪೂಣಚ್ಚನವರು ಉತ್ಸಾಹಭರಿತವಾದ ಭಾಷಣಗಳನ್ನು ಮಾಡಿದರು. ಮುಂದಿನ ಹೋರಾಟಕ್ಕೆ ಎಲ್ಲರೂ ಸಿದ್ಧರಾಗಬೇಕೆಂಬ ಅಧ್ಯಕ್ಷರ ಅಪೀಲಿನಿಂದ ಸಭೆಯು ಮುಕ್ತಾಯವಾಯಿತು.

ಬಿ. ಶೆಟ್ಟಿಗೇರಿ.

ಇಲ್ಲಿಯ ಮಹದೇವರ ದೇವಸ್ಥಾನದಲ್ಲಿ ತಾರೀಕು 9ರ ರಾತ್ರಿ ನಾಡಿನವರೆಲ್ಲರೂ ಸೇರಿದ್ದ ಸಂದರ್ಭದಲ್ಲಿ ಮೆ. ಪಿ. ಐ. ಬೆಳ್ಯಪ್ಪನವರು ಮತ್ತು ಕೆ. ಸಿ. ಕರುಂಬಯ್ಯನವರು ಹಿಂದೂದೇಶದ ಈಗಿನ ರಾಜಕೀಯ ಆಂದೋಲನವನ್ನು ಕುರಿತು ವಿವರಿಸಿ ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮವನ್ನು ಎಲ್ಲರೂ ಮನಪೂರ್ವಕವಾ

ವರ್ತಮಾನ ಸಂಗ್ರಹ.

ಒಳದೇಶ.

ಮಳೆಯ ಅಭಾವದಿಂದಾಗಿ ಕೊಡಗಿನ ಅನೇಕ ಭಾಗಗಳಲ್ಲಿ ಕುಡಿಯಲಿಕ್ಕೆ ನೀರಿಗೆ ತೊಂದರೆಯಾಗಿದೆ.

ಈ ವಾರ ಅಮ್ಮತ್ತಿ, ಪೊನ್ನಂಪೇಟೆ, ಕುಟ್ಟ ಮೊದಲಾದ ಕೊಡಗಿನ ಕೆಲವು ಭಾಗಗಳಿಗೆ ಮಳೆ ಬಿದ್ದಿದೆ.

ರಾಷ್ಟ್ರೀಯ ವಾರವನ್ನು ಕೊಡಗಿನ ಎಲ್ಲಾ ಪ್ರಾಮುಖ್ಯ ಭಾಗಗಳಲ್ಲೂ ಆಚರಿಸಲಾಯಿತು.

ಸಿಕಂದರಾಬಾದಿನಲ್ಲಿಯ ಆರನೇ ರಾಯಲ್ ಬೆಟಾಲಿಯನ್‌ನಲ್ಲಿ ಸೆಕೆಂಡ್ ಲೆಫ್ಟಿನೆಂಟರಾಗಿದ್ದ ಶ್ರೀ ಚೇಂದಮಾಡ ಮೊಣ್ಣಪ್ಪನವರನ್ನು ಲೆಫ್ಟಿನೆಂಟರಾಗಿ ನೇಮಕ ಮಾಡಿರುವರಾಗಿ ತಿಳಿಸಲು ಸಂತೋಷಪಡುತ್ತೇವೆ.

ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಯಿನ್ಸ್' ಇದರಲ್ಲಿ ವ್ಯಾಸಂಗ ಮಾಡುತ್ತಿರುವ ಶ್ರೀ ಮಲಚಿರ ಎನ್. ಮುತ್ತಣ್ಣನವರಿಗೆ 'ಎಸೋಸಿಯೇಟ್ ಆಫ್ ದಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸಯಿನ್ಸ್' (A. I. I. Sc.) ಎಂಬ ಪದವಿಯನ್ನು ಕೊಡಲಾಗಿದೆಯೆಂದು ತಿಳಿಸಲು ಸಂತೋಷಪಡುತ್ತೇವೆ.

ಮೈಸೂರಿನ ರೆಸಿಡೆಂಟರೂ ಕೊಡಗಿನ ಚೀಫ್ ಕಮಿಷನರೂ ಆದ ಲೆ. ಕರ್ನಲ್ ಜೆ. ಎಚ್. ಗಾರ್ಡನರವರು, ತಾತಾ ವಿಜ್ಞಾನ ಸಂಸ್ಥೆಯ ಹಿಂದಿನ ಅಸಿ. ಪ್ರೊಫೆಸರರಾದ ಶ್ರೀ. ಬಿಡೆಯವರಿಗೆ, ಇವರ ಅಪೇಕ್ಷೆಯ ಮೇರೆಗೆ ಭೇಟಿ ಕೊಟ್ಟ ಕಾಲದಲ್ಲಿ ಬಿಡೆಯವರು ರೆಸಿಡೆಂಟರನ್ನು, ಆ ಸಂಭಾಷಣೆಯಾಗುವಾಗ, ಆಕ್ರಮಿಸಿ ಹೊಡೆದರೆಂದೂ ಬಿಡೆಯವರ ಕೈದಾಗಿರುವುದಾಗಿ ಬೆಂಗಳೂರಿನ ವಾರ್ತೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 160ರ ವರೆಗೆ ಕ್ರಯವಿದೆ.

ಗಿ ನಡೆಸಬೇಕೆಂದು ನೆರೆದಿದ್ದವರಲ್ಲಿ ಅಪೀಲು ಮಾಡಿದರು.

ಮೂರ್ನಾಡು.

ತಾರೀಕು 11ರ ಮಧ್ಯಾಹ್ನ ಮೂರ್ನಾಡು ಪೇಟೆಯಲ್ಲಿ ಮೆರವಣಿಗೆಯಿಂದೊಡಗೂಡಿದ ಒಂದು ಸಾರ್ವಜನಿಕ ಸಭೆ ನಡೆಯಿತು. ಶ್ರೀ. ಕೆಂಬಡತಂಡ ಮೊಣ್ಣಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀ. ಸಿ. ಐ. ಬೆಳ್ಯಪ್ಪನವರೂ, ಬಿ. ಕೆ. ನಂಜುಂಡೇಶ್ವರನವರೂ ಮತ್ತು ಸಿ. ಯಂ. ಪೂಣಚ್ಚನವರೂ ರಾಷ್ಟ್ರೀಯ ವಾರಾಚರಣೆಯ ಉದ್ದೇಶ್ಯವನ್ನೂ, ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮವನ್ನೂ, ಮುಂದಿನ ಹೋರಾಟದ ಸಿದ್ಧತೆಯನ್ನೂ, ಕುರಿತು ಭಾಷಣ ಮಾಡಿದರು. ಅಧ್ಯಕ್ಷರ ಆಸ್ಫೈರ್ ಭಾಷಣದಿಂದ ಸಭೆ ಮುಕ್ತಾಯವಾಯಿತು.

ಕುಂಜಿಲಗೇರಿ.

ತಾರೀಕು 11ನೇ ಗುರುವಾರ ಇಲ್ಲಿ ಒಂದು ಸಾರ್ವಜನಿಕ ಸಭೆ ನೆರೆದಿತ್ತು. ಶ್ರೀ ಸಿ. ಯಂ. ಪೂಣಚ್ಚರವರು ಮುಂದಿನ ಹೋರಾಟದ ಸಿದ್ಧತೆಯ ವಿಚಾರ ಭಾಷಣ ಮಾಡಿದರು.

ಸೆಂಟ್ ಡನ್‌ಸ್ಟನ್ ಹಾಗೂ ಯುದ್ಧ ಫಂಡಿಗಾಗಿ ರೆಡ್‌ಕ್ರಾಸ್ ಸಂಘದ ಆಶ್ರಯದಲ್ಲಿ ರೂ. 613-13-0 ವಸೂಲಾಗಿದೆ.

ಸಹಕಾರ ಇನ್ಸ್‌ಪೆಕ್ಟರು ಹಾಗೂ ಸುಪರ್‌ವೈಜರುಗಳಿಗಾಗಿ ತಾರೀಕು 9ರಿಂದ ತೆರೆಯಲ್ಪಟ್ಟ ತರಬೇತು ಶಾಲೆಯು ತಾ. 14ರಲ್ಲಿ ಕೊನೆಗೊಳ್ಳುವದೆಂದು ತಿಳಿಯುತ್ತೇವೆ.

— ಕಳೆದ ಜನವರಿಯಲ್ಲಿ ಮೂರ್ನಾಡಿನಲ್ಲಿ ಐತ ಎಂಬ ಕುಕ್ಕ ಹೊಲೆಯನು ಆವನ ಹೆಂಡತಿಯನ್ನು ಖೂನಿ ಮಾಡಿದ ಮೊಕದ್ದಮೆಯಲ್ಲಿ ಆಕೆಯನ್ನು ಕೊಂದ ಸಮಯದಲ್ಲಿ ಆತನ ತಲೆ ಸರಿ ಇರಲಿಲ್ಲವೆಂಬ ತೀರ್ಮಾನದಿಂದ ಅಪರಾಧಿಯನ್ನು ಬಿಡುಗಡೆ ಮಾಡಲಾಗಿದೆ. ಅಪರಾಧಿಯ ಪರ ಶ್ರೀ ಕೆ. ಎಸ್. ಶಂಕರನಾರಾಯಣ ರಾಯರು ವಾದಿಸಿದರು.

ವೀರಾಜಪೇಟೆ

ಇಲ್ಲಿ ಬತ್ತ ಗಾಡಿಗೆ ರೂ. 50 ಕ್ರಯವಿದೆ.

ನಾಪೋಕ್ಲು.

ಕಿರುಂದಾಡು ಭಕ್ತ ಜನ ಸಂಘದ ಮತ್ತು ಸ್ತ್ರೀ ಸಮಾಜದ ಸಮ್ಮೇಳನವು ತಾ. 28-3-40ರಲ್ಲಿ ಕಿರುಂದಾಡು ಸಹಕಾರಿ ಸಂಘದ ಕಟ್ಟಡದಲ್ಲಿ ಶ್ರೀ ಪಳಂಗಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಬೋಧಪ್ರದವಾದ ಭಾಷಣ ಹರಿಕಥೆಯಾಯಿತೆಂದು ವಾರ್ತೆ.

ನಿಧನ ವಾರ್ತೆ.

ನಿವೃತ್ತ ಮುನ್ಸೀಫರಾಗಿದ್ದ ಮತ್ತು ಮಡಿಕೇರಿ ಪೌರ ಸಭೆಯ ಅಧ್ಯಕ್ಷರಾಗಿದ್ದ ಶ್ರೀ ಕೊರವಂಡ ಮುತ್ತಣ್ಣ ಬಾರ್ ಆಟ್ ಲಾರವರು ತಾರೀಕು 5ರ ರಾತ್ರಿಯೂ, ರಿ. ಪೊಲೀಸ್ ಸೈಟರಾದ ಶ್ರೀ ಅಣ್ಣರ ದೇವಯ್ಯನವರು ತಾ. 6ರಲ್ಲಿಯೂ, ಶ್ರೀ ಪುಚ್ಚಿಮಾಡ ಪೂವಯ್ಯನವರ ಪತ್ನಿಯವರು ತಾರೀಕು 9ರಲ್ಲಿ ವೀರಾಜಪೇಟೆ ಆಸ್ಪತ್ರೆಯಲ್ಲಿಯೂ ದಿವಂಗತರಾದರೆಂದು ತಿಳಿಸಲು ವ್ಯಸನಿಸುತ್ತೇವೆ.

ಹಿಂದೂದೇಶ.

ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಸತ್ಯಾಗ್ರಹ ಕಮಿಟಿಯಾಗಿ ಮಾರ್ಪಟ್ಟಿದೆ.

ಅಲ್ಲಹಾಬಾದಿನಲ್ಲಿ ಸತ್ಯಾಗ್ರಹ ಕಮಿಟಿಯೊಂದು ರಚಿಸಲ್ಪಟ್ಟು ಸತ್ಯಾಗ್ರಹಿಗಳು ಅದಕ್ಕೆ ಬಂದು ಸೇರುತ್ತಿದ್ದಾರೆ.

ಸ್ವತಂತ್ರ ದಿನಾಚರಣೆಯ ವಾರವು ಇಂಡಿಯಾದ ಎಲ್ಲ ಕಡೆಗಳಲ್ಲಿಯೂ ಆರಂಭವಾಗಿದ್ದು, ಅಲ್ಲಲ್ಲಿ ಸತ್ಯಾಗ್ರಹ ಸಭೆಗಳೂ ಏರ್ಪಟ್ಟಿವೆ

ಭಾರತವನ್ನು ಎರಡಾಗಿ ವಿಭಾಗಿಸಬೇಕೆನ್ನುವ ಲೀಗಿನ ಯೋಜನೆಯನ್ನು ಪ್ರತಿಭಟಿಸಲು ಶಿಯಾ ಜನಗಳೂ ಈಗ ಸೊಂಟ ಕಟ್ಟಿರುವರು.

ಸತ್ಯಾಗ್ರಹವನ್ನು ಪ್ರಾರಂಭಿಸುವ ಸಮಯದಲ್ಲಿ ಎಲ್ಲರಿಗಿಂತಲೂ ಮಹಾತ್ಮ ಗಾಂಧಿಯವರೇ ಹೆಚ್ಚು ಕುತೂಹಲರಾಗಿರುವರೆಂದು ಶ್ರೀ ಲೋಹಿಯಾರವರು ಅಭಿಪ್ರಾಯಪಟ್ಟಿರುವರು.

ಇನ್ನು ಆರು ತಿಂಗಳ ವರೆಗೆ ಯಾರೂ ಕೈಯ್ಯಲ್ಲಿ ಆಯುಧಗಳನ್ನಾಗಲಿ, ಲಾಠಿಗಳನ್ನಾಗಲಿ ಹಿಡಿದುಕೊಂಡು ಹೋಗಕೂಡದೆಂದು ಹೈದರಾಬಾದು ಸರ್ಕಾರದವರು ಆಜ್ಞೆ ಮಾಡಿರುವರು.

ಹರಿಜನೋದ್ಧಾರಕ್ಕಾಗಿ, ಸಂಯುಕ್ತ ಪ್ರಾಂತದ ಗವರ್ನರರು, ಅಲ್ಲಹಾಬಾದಿನ ಹರಿಜನ ಆಶ್ರಮಕ್ಕೆ 10,000 ರೂಪಾಯಿಗಳ ಒಂದು ಸ್ಪೆಶಲ್ ಗ್ರಾಂಟ್ ಕೊಡಿಸಿರುವರು.

ಕೊಲ್ಹಾಪುರದಲ್ಲಿ ಯುದ್ಧ ಕಾಲದ ಭತ್ತೆಯನ್ನು ಮಿಲ್ ಮಾಲಕರು ಕೆಲಸಗಾರರಿಗೆ ಕೊಡಲು ಒಪ್ಪಿ ಅವರೊಳಗೊಂದು ಸಂಧಾನವಾದ ಪ್ರಯುಕ್ತ, ಅಲ್ಲಿನ ಕೆಲಸಗಾರರ ಮುಷ್ಕರ ಕೊನೆಗಂಡಿತು.

ಶ್ರೀ. ಸಿ. ಎಫ್. ಎಂಡ್ರ್ಯೂಸರವರು, ಕೆಲ ಕಾಲದಿಂದ ಅಸ್ವಸ್ಥರಲ್ಲಿದ್ದು, ಶಸ್ತ್ರಕ್ರಿಯೆಗೂ ಒಳಗಾಗಿದ್ದವರು ಕಲ್ಕತ್ತೆಯಲ್ಲಿ ದಿವಂಗತರಾದರು. ಇವರ ದೇಶಸೇವೆಯ ಕುರಿತು ನಮ್ಮ ಮುಖಂಡರೂ ಇತರರೂ ವಿಶೇಷವಾಗಿ ಪ್ರಶಂಸಿಸುತ್ತಿರುವರು.

ಬೊಂಬಾಯಿಯ ಅರಳೆ ಕಾರ್ಖಾನೆಗಳ ಮುಷ್ಕರದ ಸ್ಥಿತಿ ಅದು ಆರಂಭವಾದ ದಿನದಲ್ಲಿ ಇದ್ದಂತೆಯೇ ಇನ್ನೂ ಇದೆ. ಕಾಂಗ್ರೆಸ್ ಪ್ರೆಸಿಡೆಂಟರು, ಮಿಲ್ ಮಾಲಕರೊಡನೆಯೂ, ಶ್ರಮಜೀವಿಗಳ ನಾಯಕರೊಡನೆಯೂ ಮಾತಾಡಿ ನೋಡಿರೆಂದು ಶ್ರೀ. ಭುಲಾಭಾಯಿ ದೇಸಾಯಿಗಳಿಗೆ ತಂತಿ ಬಿಟ್ಟಿದ್ದಾರೆ. ಈಗ ಬೊಂಬಾಯಿಯಲ್ಲಿ 27 ಮಿಲ್ಲುಗಳು ಕೆಲಸ ಮಾಡುತ್ತಿವೆಯೆಂದು ಸುದ್ದಿ.

ತಮ್ಮ ಅಧೀನರಿಂದ, ಖಾಸಗಿ ವ್ಯಕ್ತಿಗಳಿಂದ ಹಣ್ಣು ಮುಂತಾದ ಉಚಿತಗಳನ್ನು ಅಧಿಕಾರಿಗಳು ಸ್ವೀಕರಿಸುವುದಾಗಲಿ ಅಂಥವರಿಂದ ಏರ್ಪಡಿಸಲಾದ ಪಾರ್ಟಿಗಳು, ಎಟ್‌ಹೋಂ, ಡಿನ್ನರುಗಳಲ್ಲಿ ಭಾಗವಹಿಸುವುದಾಗಲೀ ಕೂಡದೆಂದು ಸಿಂಧ್ ಸರಕಾರವು ತನ್ನ ಪಬ್ಲಿಕ್ ವರ್ಕ್ಸ್ ಶಾಖಾಧಿಕಾರಿಗಳಿಗೆ ಆಜ್ಞೆ ಮಾಡಿದೆ. ಲಂಚ ಸಂಚಗಳನ್ನು ನಿರ್ಮೂಲಿಸಲು ಈ ಆಜ್ಞೆ!

ಪ್ರೌಢ ವಿದ್ಯಾಭ್ಯಾಸ ಮಾಡುವ ಇಂಡಿಯಾ ದೇಶದ ಎಲ್ಲಾ ಹರಿಜನ ವಿದ್ಯಾರ್ಥಿನಿಯರಿಗೂ ಠಕ್ಕರ್ ಜಯಂತಿಯ ವಿದ್ಯಾರ್ಥಿ ವೇತನವು ದೊರೆಯುತ್ತದೆಂಬುದಾಗಿ ಅಖಿಲ ಹಿಂದೂಸ್ಥಾನದ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳು ತಿಳಿಯಪಡಿಸುತ್ತಾರೆ. ಪ್ರೌಢ ವ್ಯಾಸಂಗಕ್ಕೆ ಹೋಗಲಿಕ್ಕಿರುವ ವಿದ್ಯಾರ್ಥಿನಿಯರು ಆ ವಿದ್ಯಾರ್ಥಿ ವೇತನವನ್ನು ಪಡೆಯಬೇಕಾದ ಪಕ್ಷದಲ್ಲಿ ಅಖಿಲ ಭಾರತ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳಿಗೆ 1940ನೆಯ ಇಸವಿ ಜೂನ್ ತಾ. 10 ರೊಳಗೆ ಬರೆದುಕೊಳ್ಳಬೇಕೆಂದು ಪ್ರಕಟವಾಗಿದೆ.

ವಿದೇಶ.

ಫ್ರಾನ್ಸಿನಲ್ಲಿ ಈಗ ಐದು ಲಕ್ಷಕ್ಕಿಂತ ಹೆಚ್ಚು ಬ್ರಿಟಿಷ್ ಸೈನ್ಯವು ಜರ್ಮನಿಯೊಂದಿಗೆ ಯುದ್ಧ ಮಾಡಲು ಸಿದ್ಧವಾಗಿದೆಯೆಂದು ಜಾನ್‌ಬುಲ್ ಪತ್ರಿಕೆಯು ತಿಳಿಸುತ್ತದೆ.

ಹಾಲೆಂಡಿನ ತೀರ ಪ್ರದೇಶ ಮತ್ತು ಗಡಿ ಪ್ರದೇಶಗಳಲ್ಲಿ ರಾಜ್ಯ ಮಾಡಿರುವ ಸೈನಿಕರಿಗೆ ಮಂಜೂರ್ಮಾಡಲಾಗಿದ್ದ ರಜವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಎಂದು ಜನರಲ್ ಹೆಡ್ ಕ್ವಾರ್ಟರ್ಸಿನ ಪ್ರಕಟಣೆ.

ಓಸ್ಲೊ ರೇಡಿಯೋ-ಬಹುಶಃ ಇದೀಗ ಜರ್ಮನರ ಅಧೀನದಲ್ಲಿದೆ-ನಾರ್ವೆಯಲ್ಲಿ ಹೊಸ ರಾಷ್ಟ್ರೀಯ ಪ್ರಭುತ್ವ ಏರ್ಪಟ್ಟಿರುವುದಾಗಿ ಪ್ರಕಟಿಸಿದೆ. ಮಂತ್ರಿಗಳೆಲ್ಲ ವಿಶ್ವವಿದ್ಯಾನಿಲಯ ಅಧ್ಯಾಪಕರುಗಳು ಇವರ ಹೆಸರುಗಳು ಅಂತರರಾಷ್ಟ್ರೀಯ ರಂಗದಲ್ಲಾರಿಗೂ ಪರಿಚಯವಾಗಿಲ್ಲ.

ನಾರ್ವೆಯಲ್ಲಿ ಜರ್ಮನರು ಮಹಾವಿಜಯ ಪಡೆಯುತ್ತಿದ್ದಾರೆಂದು ಜರ್ಮನ್ ವರ್ತಮಾನಗಳನ್ನು ಯಾರೂ ನಂಬಬಾರದೆಂದು ಪ್ಯಾರಿಸ್‌ನಲ್ಲಿ ಎಚ್ಚರಕೊಡಲ್ಪಟ್ಟಿದೆ. ತಟಸ್ಥ ರಾಷ್ಟ್ರಗಳಿಗೆ ಭಯೋತ್ಪಾದನೆ ಮಾಡುವುದೇ ಈ ವರ್ತಮಾನಗಳ ಒಳಮರ್ಮವೆಂದೂ ಹೇಳಲಾಗಿದೆ.

ನೋಟೀಸು.

ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ ತಾ. 3-4-1940.

ಗ್ರಾಮನಿವಾಸಿಗಳ ಪ್ರಯೋಜನಕ್ಕಾಗಿ ಸೂಲಗಿತ್ತಿ ಕೆಲಸಕ್ಕೆ (midwife) ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ 8 ಜನರಿಗೆ ತರಬೇತು ಕೊಡಲಾಗುವದು.

(1) ಪ್ರತಿಯೊಬ್ಬರಿಗೂ ತಿಂಗಳು ಒಂದರ 15 ರೂಪಾಯಿ ಮೇರೆ 6 ತಿಂಗಳ ವರೆಗೆ ವೇತನ (stipend) ಕೊಡಲಾಗುವದು.

(2) ತರಬೇತಿನ ಅವಧಿ ವರೆಗೆ ಯೂನಿಫಾರಮಿಗೆ 10 ರೂಪಾಯಿ ಕೊಡಲಾಗುವದು.

(3) ತರಬೇತು ಮುಗಿದನಂತರ ಸೂಲಗಿತ್ತಿ ಕೆಲಸಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಳ್ಳಲು ಪ್ರತಿಯೊಬ್ಬರಿಗೂ ರೂ. 20, ಕೊಡಲಾಗುವದು.

ಅಪ್ಲಿಕೇಶನುಗಳು ವಿದ್ಯಾಭ್ಯಾಸದ ಸರ್ಟಿಫಿಕೇಟುಗಳೊಡನೆ ತಾ. 15-3-40 ರಲ್ಲಿ ಅಥವಾ ಅದಕ್ಕೆ ಮೊದಲು ಸಿವಿಲ್ ಸರ್ಜನರ ಆಫೀಸಿಗೆ ತಲಪಬೇಕು. ಚುನಾವಣೆಯು ತಾ. 20-4-40ರಲ್ಲು ನಡೆಯುವದು. ತರಬೇತು ಕೂಡಲೇ ಮಡಿಕೇರಿ ಆಸ್ಪತ್ರೆಯಲ್ಲಿ ಸುರುವಾಗುವದು. ಚುನಾಯಿತರಾದವರು ತಾ. 20-3-40 ರಿಂದ ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ ತರಬೇತು ಹೊಂದಲು ತಯಾರಾಗಿರಬೇಕು.

ತರಬೇತು ಪೂರೈಸಿದನಂತರ ಸರ್ಟಿಫಿಕೇಟು ಕೊಡಲಾಗುವುದು. ನಂತರ ಅವರವರ ಗ್ರಾಮಗಳಲ್ಲಿದ್ದು ಕೆಲಸ ಮಾಡಬೇಕು.

ಜಿ. ಪಿ. ಚಾರ್ಲ್‌ವುಡ್,
ಕ್ಯಾಪ್ಟನ್ ಐ. ಎಂ. ಎಸ್.
ಸಿವಿಲ್ ಸರ್ಜನ್.

ಬಾತ್ಮಿ.

ಜಪ್ತಿಗಳೂ, ಪಾರ್ಟಿ ಪಂಗಡಗಳೂ.

ತಾ. 29-3-1940ರ 'ಕೊಡಗು' ಪತ್ರಿಕೆಯಲ್ಲಿ ಮೇಲಿನ ಶಿರೋನಾಮದಿಂದ ಸಹಕಾರಿ ಸೆಂಟ್ರಲ್ ಬ್ಯಾಂಕಿನ ಮೆಂಬರೊಬ್ಬರು ಬರೆದ ಬಾತ್ಮಿಯನ್ನು ನೋಡಿದೆನು. ಅದರಲ್ಲಿ ನಿಜಾಂಶವನ್ನು ಬಚ್ಚಿಟ್ಟು, ಅಸತ್ಯವನ್ನು ತುಂಬಿಸಿ ಸಾಲದ್ದಕ್ಕೆ ನನ್ನ ಹೆಸರನ್ನೂ ಎಳೆದುಕೊಂಡು ಕೇವಲ ಅಸೂಯೆಯನ್ನು ಮಾತ್ರ ತೋರಿಸಿರುವವರಿಂದ ಕೆಲವು ವಿಷಯಗಳನ್ನು ವಾಚಕರ ಮುಂದಿಡುವದು ನನ್ನ ಕರ್ತವ್ಯವಾಗಿದೆ. ಅದರಲ್ಲೂ 'ಕೊಡಗು' ಪತ್ರಿಕೆಯ ಸಂಪಾದಕರೂ ಮತ್ತು ಪ್ರಕಾಶಕರೂ ಆಗಿರುವ ಮೆ. ಪಂದ್ಯಂಡ ಬೆಳ್ಯಪ್ಪನವರೇ ಕಳೆದ ಸೆಂಟ್ರಲ್ ಬ್ಯಾಂಕಿನ ಶೇರುದಾರರ ಮೀಟಿಂಗಿನ ಅಧ್ಯಕ್ಷರಾಗಿದ್ದು ಇಂಥಾ ಸುಳ್ಳು ಪ್ರಚಾರದ ಬಾತ್ಮಿಯನ್ನು ಪ್ರಕಟಿಸಿದ್ದು ನೋಡಿದರೆ ಯಾರಿಗೆ ಆಶ್ಚರ್ಯವಾಗದಿರದು!

1. ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಸೂರೆನ್ಸ್ ಸಂಘದ ದಾವೆ ಮತ್ತು ಸೆಂಟ್ರಲ್ ಬ್ಯಾಂಕಿನವರು ಮೆ. ಐ. ಸಿ. ಸುಬ್ಬಯ್ಯ ಮತ್ತು ಮನೆಯಪಂಡ ಬೆಳ್ಯಪ್ಪನವರ ಮೇಲೆ ಹೂಡಿದ ದಾವೆಗಳ ವಿಷಯ ಚರ್ಚೆಗೆ ಕಾರಣರು ಮೆ. ಐ. ಸಿ. ಸುಬ್ಬಯ್ಯನವರಲ್ಲ. ಅವರ ಸಂಬಂಧವಾಗಿ ಮೆ. ಜಮ್ಮಡ ಮಾದಪ್ಪನವರು ಒಂದು ಠರಾವನ್ನು ಸಭೆಯ ಮುಂದಿಟ್ಟು ಮಾತಾಡಿದನಂತರ ಠರಾವು ಚರ್ಚೆಗೆ ಇಡಲ್ಪಟ್ಟಿತು. ಮೆ. ಐ. ಸಿ. ಸುಬ್ಬಯ್ಯನವರು ಮತ್ತು ಮನೆಯಪಂಡ ಬೆಳ್ಯಪ್ಪನವರು ಅದು ಅವರಿಗೆ ಸಂಬಂಧಪಟ್ಟ ವಿಷಯವಾದ್ದರಿಂದ ಕೆಲವು ವಿಷಯಗಳನ್ನು ಸಭಿಕರಿಗೆ ವಿವರಿಸಿದ್ದಾಗಿದೆ. ಈ ಚರ್ಚೆಯಲ್ಲಿ ಬ್ಯಾಂಕಿನ ಸೆಕ್ರೆಟರಿಯವರಾದ ಮೆ. ರಾಮಶೆಟ್ಟಿ ಏನೂ ಮಾತಾಡಲಿಲ್ಲ. ಬ್ಯಾಂಕಿನ ಪರವಾಗಿ ಮದ್ರಾಸಿಗೆ ಹೋದ ಲಾಯರು ಮೆ. ಪಿ. ಜಿ. ಐಯ್ಯಪ್ಪನವರು ಮಾತ್ರ ಈ ವಿಚಾರಗಳು ಕೋರ್ಟಿನಲ್ಲಿ ನಡೆಯುತ್ತಿರುವದರಿಂದ ಚರ್ಚಿಸುವುದು ಯುಕ್ತವಲ್ಲವೆಂದು ಹೇಳಿದರು. ಈ ಚರ್ಚೆಯಲ್ಲಿ ನಾನು ಮೆ. ಸುಬ್ಬಯ್ಯನವರಿಗೆ ಒತ್ತಾಸೆಯಾಗಿ ಮಾತಾಡಿದೆನೆಂದು ಹೇಳಿರುವುದು ಸುಳ್ಳು. ನಾನು ಕೋರ್ಟಿನಲ್ಲಿರುವ ವಿಷಯವಾದರೂ ಬ್ಯಾಂಕಿನ ಮೆಂಬರುಗಳೇ ವಾದಿ ಪ್ರತಿವಾದಿಯರಾಗಿರುವದರಿಂದ, ಕೆಲವು ವಿಷಯಗಳನ್ನು ನನಗೆ ತಿಳಿಸಬೇಕೆಂತಲೂ, ಅದರಲ್ಲಿ ಮುಖ್ಯವಾಗಿ ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಸೂರೆನ್ಸ್ ಸಂಘಕ್ಕೂ, ಸೆಂಟ್ರಲ್ ಬ್ಯಾಂಕಿಗೂ ಇರುವ ಸಂಬಂಧವೇನು? ಈ ವಿಷಯದಲ್ಲಿ ಬ್ಯಾಂಕಿನ ಹಕ್ಕು ಬಾಧ್ಯತೆಗಳು ಏನಿವೆಯೆಂಬುದನ್ನು ವಿವರಿಸಿ ಹೇಳಬೇಕೆಂದೂ, ಬ್ಯಾಂಕಿನ ಕೆಲವು ಡೈರೆಕ್ಟರುಗಳನ್ನೂ, ಮೆ. ಸುಬ್ಬಯ್ಯ ಮತ್ತು ಬ್ಯಾಂಕಿನವರನ್ನು ಕೇಳಿದ್ದಾಗಿದೆ. ಅಲ್ಲದೆ ಈ ವಿಚಾರದಲ್ಲಿ ನಾನು ದೀರ್ಘವಾದ ಭಾಷಣ ಮಾಡಿದೆನೆಂದು ಹೇಳುವುದು ಮತ್ತೊಂದು ಸುಳ್ಳು. ಅದು ಹಾಗಿರಲಿ.

2. ಈ 'ಬ್ಯಾಂಕಿನ ಮೆಂಬರು' ಅಷ್ಟಕ್ಕೆ ಸುಮ್ಮನಿರದೆ ನಿಷ್ಕಾರಣವಾಗಿ ಮೆ. ಎನ್. ಮುದ್ದಪ್ಪನವರ ಹೆಸರನ್ನೂ ಎತ್ತಿ ಅವರ ಮೇಲೆ ಕೆಲವು ಸುಳ್ಳು ಆರೋಪಣೆಗಳನ್ನು ಹೊರಿಸಿ ಬಾತ್ಮಿದಾರರು ತಮ್ಮ ಅಸೂಯೆಯನ್ನು ತೋರಿದ್ದಾರೆ. ಅವರಾಗಲಿ, ಮೆ. ಸುಬ್ಬಯ್ಯನವರಾಗಲಿ ಸಭಿಕರನ್ನು ತೀಕ್ಷ್ಣ ದೃಷ್ಟಿಯಿಂದ ನೋಡುತ್ತಿದ್ದರೆಂಬುದು ಕೇವಲ ಸುಳ್ಳು ಮತ್ತು ಅನ್ಯಾಯವಾದ ಆರೋಪಣೆಯೆಂತ ಅಲ್ಲಿ ನೆರೆದಿದ್ದವರೆಲ್ಲರು ಒಪ್ಪತಕ್ಕದ್ದಾಗಿದೆ. ಮೆ. ಮುದ್ದಪ್ಪನವರಿಗೆ ಸಭಿಕರನ್ನು ಯಾವುದಾದರೂ ಒಂದು ಪಂಗಡಕ್ಕೆ ಓಟುಮಾಡಿಸಬೇಕಾಗಿದ್ದರೆ ಅವರು ಹಾಗೆ ಮಾತಾಡಬಹುದಾಗಿತ್ತು. ತಮ್ಮ ಪ್ರೇರೇಪಣೆಯನ್ನು ಶಬ್ದಗಳ ಮುಖಾಂತರ ತೋರ್ಪಡಿಸಬಹುದಿತ್ತು. ಅವರು ಬ್ಯಾಂಕಿನ ಶೇರುದಾರರಾದ್ದರಿಂದ ಅವರಿಗೆ ಮಾತನಾಡುವ ಹಕ್ಕಿತ್ತು. ಮೆ. ಮುದ್ದಪ್ಪನವರು ಮತ್ತು ಸುಬ್ಬಯ್ಯನವರು ಬ್ಯಾಂಕಿನಲ್ಲಿ ಯಾವ ಪಂಗಡಕ್ಕೆ ಸೇರಿದವರು? ಬ್ಯಾಂಕಿನಲ್ಲಿ ಪಂಗಡವಿದೆಯೋ? ಅವರು ಯಾವುದಾದರೂ ಪಂಗಡಕ್ಕೆ ಸೇರಿದ್ದರೆ, ಡೈರೆಕ್ಟರುಗಳ ಚುನಾವಣೆ ಸಮಯದಲ್ಲಿ ಯಾಕೆ ಹಾಜರಿರಲಿಲ್ಲ? ಈ ವಿಷಯಗಳನ್ನು ಯೋಚಿಸಿದರೆ ನಮ್ಮ ಬಾತ್ಮಿದಾರರು ತನ್ನ ಮನಸ್ಸಿನ ಕಲ್ಮಶವನ್ನು ಹೊರಪಡಿಸುವುದಕ್ಕಾಗಿ ಮಾತ್ರ ತನ್ನ ಬಾತ್ಮಿಯನ್ನು ಬರೆದದ್ದಾಗಿಯೆಂತ ಸ್ಪಷ್ಟವಾಗುತ್ತದೆ. ಈ ಸಂದರ್ಭ ಇನ್ನೊಂದು ವಿಷಯ ನನ್ನ ಮನಸ್ಸಿಗೆ ಹೊಳೆಯುತ್ತದೆ. ಮೆ. ಪಂದ್ಯಂಡ ಬೆಳ್ಯಪ್ಪನವರು ಬ್ಯಾಂಕಿನ ಪರವಾಗಿ ಮೆ. ಸುಬ್ಬಯ್ಯ ಮತ್ತು ಬೆಳ್ಯಪ್ಪನವರ ಮೇಲೆ ಕೊಡಗಿನ ಅಸಿಸ್ಟೆಂಟ್ ರಿಜಿಸ್ಟ್ರಾರವರ ಕೋರ್ಟಿನಲ್ಲಿ ದಾವೆ ಹೂಡಿದ ವಿಷಯ ಚರ್ಚೆ ನಡೆದಾಗ ಅಸಿಸ್ಟೆಂಟ್ ರಿಜಿಸ್ಟ್ರಾರವರು ಸಭೆಯಲ್ಲಿದ್ದು ಚರ್ಚೆಯನ್ನು ಕೇಳುತ್ತಿದ್ದುದು ನಮ್ಮ ಬಾತ್ಮಿದಾರರಿಗೆ ಗೋಚರವಾಗಲಿಲ್ಲವೆ? ಇದು ಸರಿಯೆಂದು ಅವರು ಒಪ್ಪುತ್ತಾರೆಯೆ? ಅಸಿಸ್ಟೆಂಟ್ ರಿಜಿಸ್ಟ್ರಾರವರ ಕೋರ್ಟಿನಲ್ಲಿ ಮೀಟಿಂಗಿಗೆ ಮೊದಲೇ ದಾವೆ ದಾಖಲಾಗಿತ್ತು. ಅವರು ಆ ಕೇಸಿನಲ್ಲಿ ತೀರ್ಪು ಕೊಡತಕ್ಕವರು. ಅವರು ಸಭೆಯಲ್ಲಿದ್ದು ಚರ್ಚೆಯನ್ನು ಕೇಳುತ್ತಿದ್ದದನ್ನು ನಮ್ಮ ಬಾತ್ಮಿದಾರರು ಏಕೆ ಟೀಕಿಸಲಿಲ್ಲ.

3. ಇನ್ನೊಂದು ಕಡೆಯ ಮಾತು ಸೆಂಟ್ರಲ್ ಬ್ಯಾಂಕು ರಾಜಕೀಯ ಸಂಸ್ಥೆಯಲ್ಲ. ಸಹಕಾರಿ ಸಂಸ್ಥೆಗಳಲ್ಲಿ ಪಂಗಡಗಳಿಲ್ಲ. ಅದು ಬಡವನಿಗೂ, ದೊಡ್ಡವನಿಗೂ, ರೈತನಿಗೂ, ಉದ್ಯೋಗಸ್ಥನಿಗೂ, ಎಲ್ಲರಿಗೂ ಬೇಕಾದ ಸಂಸ್ಥೆ. ಅದಕ್ಕೆ ಎಲ್ಲರೂ ಸೇರಬೇಕು. ಅದಕ್ಕೆ ಸರಕಾರದ ಸಂಬಂಧವಿದೆ. ಸರಕಾರದ ಅಧಿಕಾರ ಮೇಲ್ವಿಚಾರಗಳಿಗೆ ಒಳಪಟ್ಟಿದೆ. ಅದರಲ್ಲಿ ಪ್ರತಿ ಒಬ್ಬ ಶೇರುದಾರನಿಗೂ ಭಾಗವಹಿಸುವ ಹಕ್ಕಿದೆ. ಸ್ವಾತಂತ್ರ್ಯವಿದೆ. ಸರಕಾರಿ ಉದ್ಯೋಗಸ್ಥನಾಗಲಿ, ಜಡ್ಜಿಯಾಗಲಿ, ಕಮಿಷನರಾಗಲಿ, ಅಸಿಸ್ಟೆಂಟ್ ಕಮಿಷನರಾಗಲಿ ಅದಕ್ಕೆ ಸೇರಬಾರದೆಂತ ಆತಂಕವಿದೆಯೋ? ಹಾಗೆ ಆತಂಕಪಡಿಸುವುದು ನ್ಯಾಯವೇ? ನ್ಯಾಯವಾದ ಸಹಕಾರ ತತ್ವವನ್ನು ಮೂಲೆಗೊತ್ತಿ ನಮ್ಮ ಬಾತ್ಮಿದಾರರು ತನ್ನ ಮನಸ್ಸಿನಲ್ಲಿರತಕ್ಕ ಕೋಮುವಾರು, ಪಂಗಡ ಪಾರ್ಟಿಭೇದಗಳನ್ನು ಹೊರಪಡಿಸುವುದು ಸಹಕಾರದ ಯಾ ಜನತೆಯ ಏಳಿಗೆಗೆ ಅಲ್ಲವೆಂಬುದನ್ನು ಅವರು ತಿಳಿದಿರಲಿ.

ಎಸ್. ಸೋಮಣ್ಣ,
ಇನ್ನೊಬ್ಬ ಬ್ಯಾಂಕಿನ ಮೆಂಬರು.

ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಸುವದೇನಂದರೆ–

ನಂಬ್ರು 77 ನೇ ಸೋಮವಾರಪೇಟೆ ನಾನ್ ಅಗ್ರಿಕಲ್ಚರಲ್ ಕೋಆಪರೇಟಿವ್ ಕ್ರೆಡಿಟ್ ಲಿಮಿಟೆಡ್ ಸಂಘದಿಂದ–

ಈ ಕೆಳಗೆ ನಮೂದಿಸಿರುವ ಸಂಘದ ಮೆಂಬರುಗಳು ಸದರಿ ಸಂಘಕ್ಕೆ ಸಾಲಗಾರರಾಗಿರುವದರಿಂದ ಇವರುಗಳ ಮೇಲೆ ಜಾರಿ ನಡೆಸಿ ಅವರುಗಳ ಬಾಪ್ತು ಕಾಫಿ ತೋಟಗಳ 1940-41 ನೆ ಸಂವತ್ಸರದ ಕಾಫಿ ಪಸಲನ್ನು ಯಾರಿಗೂ ಗಿರ್ವಿ, ಭೋಗ್ಯ, ಕ್ರಯ, ವಗೈರೆಯಾಗಿ ಪರಾಧೀನ ಮಾಡಕೂಡದೆಂಬದಾಗಿ ಕೋರ್ಟು ಮೂಲಕ ಕಡೇ ನೋಟೀಸ್ ಆಗಿರುವದರಿಂದ ಅವರುಗಳ ಬಾಪ್ತು ಕಾಫಿ ಪಸಲನ್ನು ಯಾರೂ ತೆಗೆದುಕೊಳ್ಳಬಾರದಾಗಿ ಈ ಮೂಲಕ ತಿಳಿಸಲಾಗಿದೆ. ಅಲ್ಲದೆ ಹಾಗೇನಾದರೂ ಯಾರೂ ಗಿರ್ವಿ, ಭೋಗ್ಯ, ಕ್ರಯ ವಗೈರೆಯಾಗಿ ಪಡಕೊಂಡದ್ದೇ ಆದರೆ ಹಾಗೆ ಪಡಕೊಂಡವರು ಈ ಕೆಳಗೆ ಕಾಣಿಸಿರುವ ಆಯಾಯ ಮೆಂಬರುಗಳಿಂದ ಸಂಘಕ್ಕೆ ಬರಲಿಕ್ಕಿರುವ ಹಣವನ್ನು ಈ ಲಾಗಾಯಿತು ಆದಕ್ಕಾಗುವ ಬಡ್ಡಿಯನ್ನೂ ಸದ ಸಂಘಕ್ಕೆ ಪಾವತಿ ಮಾಡಲು ಜವಾಬ್ದಾರರಾಗತಕ್ಕದ್ದು.

ಬಾಕಿದಾರರ ಮೆಂಬರುಗಳ ಹೆಸರುಗಳು	ತಾ. 20-3-'40ಕ್ಕೆ ಬರತಕ್ಕ ಬಾಕಿ ರೂ. ಆ. ಪೈ.
ಮೆ. ಕೆ. ಯಸ್. ಮಲ್ಲಿಶೆಟ್ಟಪ್ಪನವರು ..	422- 0-0
,, ಬಿ. ಎನ್. ರುದ್ರಪ್ಪನವರು .	424- 6-0
,, ಬಿ. ಮಾಳಿಮನೆ ಕರಿಯಪ್ಪ ಶೆಟ್ಟಿ ..	466- 8-4
,, ಕೆಳ್ಯಮನೆ ರಂಗ ಮಲ್ಲಪ್ಪನವರು .	721- 4-5
,, ಬೆಲ್ಲದ ಶಾಂತಮಲ್ಲಪ್ಪನವರು ..	103-10-3
,, ಬಿ. ಕೆ ಶಿವಪ್ಪಶೆಟ್ಟಿ	97-14-1
ಶ್ರೀ. ಕಡೇಮನೆ ಮಲ್ಲಮ್ಮನವರು ..	110- 8-3
,, ಬ್ರಾ. ಪುಟ್ಟತಾಯಮ್ಮನವರು ..	92-11-6

ಎಸ್. ಟಿ. ವೀರಪ್ಪ,
2-2 ಗೌರವ ಕಾರ್ಯದರ್ಶಿ,
ಸೋಮವಾರಪೇಟೆ ಟೌನ್ ಸಿ. ಸಿ. ಯಸ್.

ಮಾರಾಟಕ್ಕಿದೆ.

ವೀರಾಜಪೇಟೆನಾಡು ನ್ಯೈತಾಡಿ ಗ್ರಾಮದ ಒಕ್ಕಲಿಗರ ಸಿಂಗೇಗೌಡ್ರ ಮಗ ದೇವಣ್ಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕುಳ ನಂ. 38ರ ಸಾಗಿನ ಸ. ನ. 150/1ರ 16.70 ಎಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ತಳೆ ತೋಟದ 3.90 ಯೇಕ್ರೆಯ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕಿತ್ತಳೆ ತೋಟದ .80 ಸೆಂಟಿನ ಪೈಕಿ 64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಎಕ್ರೆಯ ಬಾಣೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತಳೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ಎ. ಯನ್. ದೇವಣ್ಣ,
ನ್ಯೈತಾಡಿಗ್ರಾಮ,
12-5 ಮೂರ್ನಾಡು.

ಖಾದಿ ಮಾರಾಟ.

ಅಖಿಲ ಭಾರತ ನೂಲುವ ಸಂಘದ ಕರ್ನಾಟಕ ಶಾಖೆಯವರು (ಬೆಂಗಳೂರಿನಿಂದ) ಕೊಡಗು ಜಿಲ್ಲಾ ಕಾಂಗ್ರೆಸು ಕಮಿಟಿಯವರ ಕೋರಿಕೆ ಮೇರೆ ಈ ಕೆಳಗಿನ ಸ್ಥಳಗಳಲ್ಲಿ ಕೈನೂಲಿನ ಖಾದಿ ಬಟ್ಟೆಯನ್ನು ಮಾರಾಟಕ್ಕೆ ಇಡುವರು. ಖಾದಿ ಹುಂಡಿಯನ್ನು ತೆಗೆದುಕೊಂಡಿರುವವರೂ, ಇತರ ಎಲ್ಲಾ ದೇಶಾಭಿಮಾನಿಗಳೂ ಖಾದಿ ಬಟ್ಟೆಯನ್ನು ಕೊಂಡು ಕೊಂಡು ಅದನ್ನು ತಯಾರಿಸುವ ಬಡ ಸಹೋದರ, ಸಹೋದರಿಯರಿಗೆ ಹೊಟ್ಟೆಗೆ ಒಂದು ತುತ್ತು ಅನ್ನ ಕೊಡಲು ಸಹಾಯ ಮಾಡುವರಾಗಿ ಕೋರಿಕೆ.

,, 14ನೇ ಸೋಮವಾರ ಮತ್ತು 15ನೇ ಮಂಗಳವಾರ ಹುದಿಕೇರಿ, ಪೊನ್ನಂಪೇಟೆ.
,, 17ನೇ ಬುಧವಾರ .... ವೀರಾಜಪೇಟೆ.
,, 18ನೇ ಗುರುವಾರ .... ಮೂರ್ನಾಡು.
,, 19ನೇ ಶುಕ್ರವಾರದಿಂದ 26ನೇ ಶುಕ್ರವಾರದ ವರೆಗೆ .... ಮಡಿಕೇರಿ.

ಕೊ. ಜಿ. ಕಾಂಗ್ರೆಸ್ ಕಮಿಟಿ, ಮಡಿಕೇರಿ, ತಾ. 4-4-'40.

ಬಿ. ಯಂ. ಕಾರ್ಯಪ್ಪ,
(ಗೌ. ಕಾರ್ಯದರ್ಶಿ)

ಮುನ್ನಡೆಯ ಪಕ್ಷದ ಚಳವಳ.

ಕಾಂಗ್ರೆಸಿನ ಎಡಪಕ್ಷದವರನ್ನೊಳಗೊಂಡು ಸ್ಥಾಪಿತವಾಗಿರುವ ಮುನ್ನಡೆಯ ಪಕ್ಷವು ರಾಮಗಡ ಕಾಂಗ್ರೆಸ್ ಅಧಿವೇಶನ ಕಾಲಕ್ಕೆ ರಾಮಗಡದಲ್ಲೇ ಸುಭಾಸ್ ಚಂದ್ರಬೋಸರವರ ಅಧ್ಯಕ್ಷತೆಯಲ್ಲಿ ಸಂಧಾನವಿರೋಧ ಸಮ್ಮೇಳನವನ್ನು ನಡೆಸಿತು. ಈ ಸಂದರ್ಭದಲ್ಲಿ ಗಾಂಧಿವಾದಿಗಳು ಕಾಂಗ್ರೆಸಿನಲ್ಲಿ ಸೇರಿದ್ದು, ಬ್ರಿಟಿಷ್ ಸರಕಾರದೊಡನೆ ಸಂಧಾನಮಾಡಿಕೊಳ್ಳುವರೆಂದು ಆಲೋಚಿಸಿರುವ ಬೋಸರು ಇಂದಿನ ಗಾಂಧೀಪಕ್ಷದವರನ್ನೂ, ವರ್ಕಿಂಗ್ ಕಮಿಟಿಯವರನ್ನೂ ಉಗ್ರವಾಗಿ ಟೀಕಿಸಿದರು. ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಸಂಧಾನ ಮಾಡುವ ಮನೋಭಾವವು ಕೊಡೆದು ಹೋದರೆ ಸಂಧಾನ ವಿರೋಧ ಸಮ್ಮೇಳನವು ಸಾರ್ಥಕವಾಯಿತೆಂದು ಸಾರಿದರು. ಆ ಬಗ್ಗೆ ತಮ್ಮ ಮನೋಭಿಪ್ರಾಯವನ್ನು ವ್ಯಕ್ತಪಡಿಸಿ ಠರಾವನ್ನು ಮಾಡಿರುವರು. ಅದರ ಪ್ರಕಾರ ಮುಂದೆ ಬ್ರಿಟಿಷ್ ಸಾರ್ವಭೌಮ ಸರಕಾರದೊಡನೆ ಸಂಧಾನ ಶರತುಗಳ ಮಾತನ್ನು ಬದಿಗೊತ್ತಿ ದೇಶದಲ್ಲಿ ಪ್ರಚಂಡವಾದ ಪ್ರಚಾರ ಕಾರ್ಯಕ್ರಮದಿಂದ ತೀವ್ರ ಜಾಗೃತಿಯನ್ನುಂಟುಮಾಡಿ ಭಾರತೀಯರ ಧ್ಯೇಯವಾದ ಸಂಪೂರ್ಣ ಸ್ವಾತಂತ್ರ್ಯ ಸಾಧನೆಯು ಸಫಲವಾಗುವ ವರೆಗೆ ದೇಶದಲ್ಲಿ ಆಂದೋಲನ ನಡೆಸುವದೇ ಕಾರ್ಯಕ್ರಮವಾಗಿದೆ. ಅದರಂತೆಯೇ ಮುನ್ನಡೆಯ ಪಕ್ಷವು ಪ್ರಚಂಡ ಕಾರ್ಯದಲ್ಲಿ ತೊಡಗಿ ಎಪ್ರಿಲ್ 6 ರಿಂದ ಸತ್ಯಾಗ್ರಹ ಸಮರ ಹೂಡಿದೆ. ಈಗಾಗಲೇ ಅನೇಕ ಮಹನೀಯರು ಸೆರೆಮನೆಗೆ ತೆರಳಿದ್ದಾರೆ. ಪರಿಸ್ಥಿತಿಯನ್ನು ಪರಿಶೀಲಿಸಿದರೆ ಅಖಿಲ ಭಾರತ ಕಿಸಾನ್ (ಕೃಷಿಕ) ಸಭೆಯೂ, ಕಾರ್ಮಿಕ ಸಂಘಗಳೂ ಮುನ್ನಡೆಯ ಪಕ್ಷದ ಮಾರ್ಗದಲ್ಲೇ ಕ್ರಮಿಸುತ್ತಿರುವಂತೆ ಭಾಸವಾಗುತ್ತಿದೆ. ಈಗಾಗಲೇ ಅಖಿಲ ಭಾರತ ಕಿಸಾನ್ ಸಂಘದ ಸಂಚಾಲಕರಾಗಿದ್ದ ಪ್ರೊ. ಎನ್. ಜಿ. ರಂಗರವರ ಮತ್ತು ಗಿರಣಿ ಕಾಮಗಾರ ಸಂಘದ ಸಕ್ರೆಟರಿಯಾಗಿದ್ದ ಶ್ರೀ ಎಸ್. ಎಸ್. ನಿಂಬ್‌ಕರ್‌ರವರ ದಸ್ತಗಿರಿಗಳು ನಡೆದಿವೆ. ಇನ್ನೂ ಅನೇಕಾನೇಕ ಮುಖಂಡರ ದಸ್ತಗಿರಿಗಳೂ ನಡೆದಿವೆ. ಮುನ್ನಡೆಯ ಪಕ್ಷವು ರಾಮಗಡದಲ್ಲಿ ಮಂಜೂರ್ಮಾಡಿರುವ ಸಂಧಾನ ವಿರೋಧ ಠರಾವನ್ನು ಜಾರಿಗೆ ತರಲು ಕಮಿಟಿಯೊಂದನ್ನು ಸ್ಥಾಪಿಸಿ ತೀವ್ರ ಕಾರ್ಯಕ್ರಮ ಕೈಕೊಂಡಿದೆ.

ಕಾರ್ಯಕ್ರಮ ಮತ್ತು ಕೈಸೆರೆ.

ಅಖಿಲ ಭಾರತ ಮುನ್ನಡೆಯ ಪಕ್ಷದ ಆಶ್ರಯದಲ್ಲಿ ಬೊಂಬಾಯಿಯಲ್ಲಿ ಒಂದು ಸಭೆಯು ಸೇರುವ ಕಾರ್ಯಕ್ರಮ ನಡೆದಿತ್ತು. ಅದಕ್ಕೆ ಅಧ್ಯಕ್ಷರಾಗ ಮಹಾರಾಷ್ಟ್ರದ ಮುಖಂಡರಾದ ಸೇನಾಪತಿ ಬಾಪಟರವರನ್ನು ಆಹ್ವಾನಿಸಲಾಗಿತ್ತು. ಆದರೆ ಬಾಪಟರವರು ಬೊಂಬಾಯಿ ಅವರ ಹದ್ದೊಳಗೆ ಬರಕೂಡದೆಂದು ಪೋಲೀಸರು ನೋಟೀಸು ಜಾರಿ ಮಾಡಿದ್ದರು. ಆದರೆ ಸಭೆ ನಡೆಯುವ ಕಾಲಕ್ಕೆ ಸೇನಾಪತಿ ಬಾಪಟರು ಪೋಲೀಸು ಹುಕುಂಮನ್ನು ಉಲ್ಲಂಘಿಸಿ ಸಭೆಗೆ ಬಂದು ಅಧ್ಯಕ್ಷಸ್ಥಾನ ವಹಿಸಿದರು. ಅವರು ಅಲ್ಲಿ ಮಾಡಿದ ಭಾಷಣದ ಸಾರ ಹೀಗಿದೆ, 'ದೇಶದ ಸ್ವಾತಂತ್ರ್ಯ ಸಂಪಾದನೆಗಾಗಿ ಪಟತೊಟ್ಟು ಇಳಿದಿರುವ ಭಾರತೀಯನು ಕೇವಲ ಸರಕಾರದ ಆಜ್ಞೆಯಿಂದ ಹಿಂದಿರುಗುವದು ಸಾಧ್ಯವಿಲ್ಲ. ಭಾರತೀಯನಾದ ನನಗೂ ಅಹಿಂಸಾತತ್ವದಲ್ಲಿ ನಂಬಿಕೆಯಿದೆ. ಅದರ ಮಹಾತ್ಮೆಯೂ ನನಗೆ ತಿಳಿದಿದೆ. ಆದರೆ ಅಹಿಂಸಾ ಎಂದು ಆಕಾರ ನೋಡಿ ಕುಳಿತರೆ ಕಾರ್ಯಸಾಧಿಸದು. ಭಗವದ್ಗೀತೆಯಲ್ಲಿ ವಿಶದೀಕೃತವಾಗಿರುವ ಕೆಲಸದಲ್ಲಿಯೂ ನನಗೂ ನಂಬಿಕೆಯುಂಟು. ಕಾರ್ಯಮಾಡದ ಫಲದೊರೆಯಬೇಕೆಂದು ಆಶಿಸುವದು ಭ್ರಮೆಯೆಂದು ಹೇಳಿ ಪೋಲೀಸರು ತನಗೆ ಜಾರಿ ಮಾಡಿದ ನಿರ್ಬಂಧಆಜ್ಞೆಯನ್ನು ಹರಿದು ಹಾಕಿದರು.

ಅಷ್ಟರಲ್ಲಿ ಅಖಿಲ ಭಾರತ ಫಾರ್ವರ್ಡ್‌ಬ್ಲಾಕಿನ ಜನರಲ್ ಸೆಕ್ರೆಟರಿಗಳಾದ ಶ್ರೀ ಎಚ್. ವಿ. ಕಾಮತ್‌ರವರು 'ಕೈಕಟ್ಟಿ ಕೂರುವ ಕಾಲವಿದಲ್ಲ. ದೇಶದ ಹೃದಯಪರೀಕ್ಷೆಯ ಕಾಲವಿದು. ಸಾಮ್ರಾಜ್ಯಶಾಹಿಯ ವಿರೋಧ ಚಳವಳ ಒಡನೆ ಕೈಗೊಳ್ಳಬೇಕೆಂದು ಸಾರಿದು.

ಈ ಸಂದರ್ಭದಲ್ಲಿ ಕೆಲವು ಪೋಲೀಸ್ ಅಧಿಕಾರಿಗಳು ಲಾಠಿ ಧಾರಿಗಳಾದ ಪೋಲೀಸ್ ಪಡೆಯೊಂದಿಗೆ ಸಭೆಗೆ ಪ್ರವೇಶಿಸಿ ಸೇನಾಪತಿ ಬಾಪಟರನ್ನೂ, ಎಚ್. ವಿ. ಕಾಮತರನ್ನೂ ಇನ್ನೂ ಹತ್ತು ಜನರನ್ನು ಸೆರೆ ಹಿಡಿದರು. ಜಾಮೀನಿನ ಮೇಲೆ ಎಚ್. ವಿ. ಕಾಮತರನ್ನು ಬಿಡುಗಡೆ ಮಾಡಿರುವರು. ಸೇನಾಪತಿ ಬಾಪಟರಿಗೆ 3 ತಿಂಗಳ ಕಠಿಣ ಸಜೆ ವಿಧಿಸಲಾಗಿದೆ.

ಅಲ್ಲಹಾಬಾದ್ ಶಾಖೆ.

ಮುನ್ನಡೆಯ ಪಕ್ಷದ ಅಲ್ಲಹಾಬಾದ್ ಶಾಖೆಯೂ ತೀವ್ರ ಕಾರ್ಯಕ್ರಮ ಕೈಗೊಂಡಿರುವ ಪ್ರಯುಕ್ತ ಅಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡಿನ 144ನೇ ಸೆಕ್ಷನನ್ನು ಜಾರಿ ಮಾಡಿದ್ದಾರೆ. ಆ ಪ್ರಯುಕ್ತ ತಾ. 6 ರಲ್ಲಿ ಮೂರು ದಸ್ತಗಿರಿಗಳೂ, ತಾರೀಕು 7 ರಲ್ಲಿ ಐದು ದಸ್ತಗಿರಿಗಳೂ ನಡೆದಿವೆ. ರಾಷ್ಟ್ರೀಯ ಸಪ್ತಾಹದ ಸಂದರ್ಭದಲ್ಲಿ ನೆರೆದಿದ್ದ ಸಭೆಯಲ್ಲಿ ಭಾಷಣ ಮಾಡಿದುದೇ ಈ ದಸ್ತಗಿರಿಗಳಿಗೆ ಕಾರಣ. ಮುನ್ನಡೆಯ ಪಕ್ಷದ ಮಹಾರಾಷ್ಟ್ರ ಶಾಖೆಯಲ್ಲೂ ದಸ್ತಗಿರಿಗಳು ನಡೆಯುತ್ತಿವೆ.

ಬೋಸರ ಕಾರ್ಯಕ್ರಮ.

ಮುನ್ನಡೆಯ ಪಕ್ಷದ ಅಧ್ಯಕ್ಷರಾದ ಸುಭಾಸ ಚಂದ್ರಬೋಸರು ತಾರೀಕು 7 ರಲ್ಲಿ ಕಲ್ಕತ್ತಾ ದೇಶಬಂಧು ಪಾರ್ಕಿನಲ್ಲಿ ನೆರೆದಿದ್ದ ಪ್ರಚಂಡ ಜನಸಮುದಾಯದಲ್ಲಿ ಮುನ್ನಡೆಯ ಪಕ್ಷದ ಕಾರ್ಯಕ್ರಮವನ್ನು ವಿವರಿಸಿದಲ್ಲದೆ, ರಾಮಗಡದಲ್ಲಿ ಪಾಸಾದ ಸಂಧಾನ ವಿರೋಧ ಠರಾವನ್ನು ವಿವರಿಸಿದರು. ಸಂಧಾನ ಪ್ರಯತ್ನಕರ ಒಂದು ಮೂರ್ತಿಯನ್ನು ಮಾಡಿ ಅದಕ್ಕೆ ಪರದೇಶೀ ಉಡಿಗೆಗಳನ್ನು ಹಾಕಿ ವಾದ್ಯಘೋಷಗಳೊಂದಿಗೆ ಅದನ್ನು ಅಲ್ಲಿ ಸುಡಲಾಯಿತು. ಇದನ್ನು ಸುಟ್ಟ ನಂತರ ಬೋಸರು ಭಾಷಣ ಮಾಡುತ್ತಾ ಈ ಸಂಧಾನ ಪ್ರಯತ್ನಕರ ಮೂರ್ತಿಯು ಭಸ್ಮವಾದಂದಿನಿಂದ ಮುನ್ನಡೆಯ ಪಕ್ಷದವರಾದ ನಮ್ಮ ಮನಸಿನಲ್ಲಿ ಶಾಂತಿ, ಸಂಧಾನ ಈ ಶಬ್ದಗಳೇ ಬರಲವಕಾಶವಿಲ್ಲ. ನಮ್ಮ ಧ್ಯೇಯವು ಕರಗತವಾಗುವ ವರೆಗೂ ಅಹಿಂಸಾತ್ಮಕ ಚಳವಳಿಯು ಸಾರ್ವತ್ರಿಕವಾಗಿ ನಡೆಯಬೇಕೆಂದು ಸಾರಿದರು. ಜಾಲಿಯನ್‌ವಾಲಾ ಬಾಗಿನಲ್ಲಿ ನಡೆಸಿದ ಪೈಶಾಚಿಕ ಅತ್ಯಾಚಾರ, ಸ್ವಾತಂತ್ರ್ಯ ಸಂಗ್ರಾಮವನ್ನು ಮುಂದೊತ್ತಲು ಜೀವವನ್ನು ತೃಣಪ್ರಾಯವಾಗಿ ಗಣಿಸಿ, ಸರ್ವಸ್ವವನ್ನು ಭಾರತಮಾತೆಗಾಗಿ ತ್ಯಾಗಮಾಡಿದ ವೀರಯೋಧರ ವಿಚಾರ ಬೋಸರು ಎರಡು ಗಂಟೆಗಳ ವರೆಗೆ ಭಾಷಣ ಮಾಡಿದರು. ಆ ತ್ಯಾಗಮೂರ್ತಿಗಳನ್ನು ನೆನೆದು ಅವರು ಮುಂದೊತ್ತಿಬಿಟ್ಟಿರುವ ಸಮರವನ್ನು ಕೈಕೊಂಡು ಗುರಿಯನ್ನು ಸಾರುವದು ಕರ್ತವ್ಯವೆಂದು ಸೂಚಿಸಿದರು.

ಪತ್ರಿಕೆಗಳ ಮೇಲೆ ನಿರ್ಬಂಧ.

ಸುಭಾಸ ಬೋಸರ ರಾಷ್ಟ್ರೀಯ ಸಪ್ತಾಹದ ಈ ಕಾರ್ಯಕ್ರಮಗಳನ್ನು ಯಾವ ಪತ್ರಿಕೆಯೂ ಬಂಗಾಳದಲ್ಲಿ ಪ್ರಕಟಿಸಕೂಡದೆಂದು ಅಲ್ಲಿಯ ಸರಕಾರವು ನಿರ್ಬಂಧ ಹಾಕಿದೆ. ಇದನ್ನು ಅನೇಕ ವಿರೋಧ್ಯರೇ ಪ್ರತಿಭಟಿಸಿರುವರು. ಪಾರ್ಲಿಮೆಂಟಿನ ಸದಸ್ಯರಾದ ಮಿ. ಸೊರೆನ್‌ಸೆನ್ ಎಂಬವರು ಇದರಿಂದ ಬ್ರಿಟಿಷ್ ಸಾರ್ವಭೌಮ ಸರಕಾರವು ತನ್ನ ಅಂತರ್ಯವನ್ನು ತೋರಿಸಿಕೊಡುತ್ತಿದೆಯೆಂದೂ ಇದಕ್ಕೆ ಸಮಜಾಯಿಸಿಯನ್ನು ಒಡನೆ ಕೊಡಬೇಕೆಂದು ಭಾರತ ಸೆಕ್ರೆಟರಿಗಳಾದ ಜೆಟ್ಲೆಂಡರನ್ನು ಕೇಳಿರುವದಲ್ಲದೆ ಈ ಪ್ರತಿಬಂಧವನ್ನು ತೊಡೆದು ಹಾಕಬೇಕೆಂದು ಹೇಳಿರುವರು.

ಬೋಸರ ಘೋಷಣೆ.

ರಾಷ್ಟ್ರೀಯ ಸಪ್ತಾಹ ಸಂದರ್ಭದಲ್ಲಿ ವರ್ಕಿಂಗ್ ಕಮಿಟಿಯಿಂದ ತತ್ಕಾಲ ತಿರಸ್ಕೃತವಾಗಿರುವ ಬಂಗಾಲ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ನಡೆದ ಒಂದು ಸಭೆಯಲ್ಲಿ ಮಾತಾಡುತ್ತಾ, ಶ್ರೀ ಸುಭಾಸಚಂದ್ರಬೋಸರು ಇಂದು ಒದಗಿರುವಂಥಾ ಅಂತರರಾಷ್ಟ್ರೀಯ ಪರಿಸ್ಥಿತಿಯು ಒಂದು ಜನಾಂಗದ ಜೀವಮಾನದಲ್ಲಿ ಹೆಚ್ಚು ಸಲ ಸಂಭವಿಸುವದಿಲ್ಲವೆಂದೂ, ಆದ್ದರಿಂದ ಭಾರತದ ಧ್ಯೇಯ ಸಾಧನೆಗೆ ಈ ಸುಸಂದರ್ಭವನ್ನು ಉಪಯೋಗಿಸಿಕೊಳ್ಳುವದು ವಿವೇಕವೆಂದೂ, ಈ ಸಂದರ್ಭದಲ್ಲಿ ಯಾವ ಪಾರ್ಟಿ ಸಂಗಡವೇ ಆಗಲಿ ಚಳವಳವನ್ನು ಕೈಗೊಂಡು ಹೋರಾಡಲು ಮುಂಬರಬೇಕಾದುದು ಅವಶ್ಯವೆಂದೂ, ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ಚಳವಳ ಹೂಡುವುದರಿಂದ ಭಾರತದ ಪ್ರತಿಷ್ಠೆಯು ಅಂತರ ರಾಷ್ಟ್ರೀಯ ದಿಗಂತದಲ್ಲಿ ವ್ಯಾಪಿಸುವದೇ ಅಲ್ಲ; ಭಾರತೀಯರ ಧ್ಯೇಯವನ್ನು ಖಂಡಿತಾ ಕರಗತ ಮಾಡುವದೆಂದೂ, ಹೇಳಿದರು. ಮುಂದುವರಿಸುತ್ತಾ ವಾಚಾಳಿಗಳ ಹೃದಯಂಗಮ ಭಾಷಣಗಳೂ, ಬರಹಗಾರರ ಕವಿತ ಕಲಾಯುತ ಬರಹಗಳೂ ಹೆಚ್ಚಿನ ಪ್ರಯೋಜನಕ್ಕೆ ಬಾರವೆಂದೂ, ಜಡ ಜನತೆಯನ್ನು ಈ ಕಾರ್ಯಕ್ರಮಗಳು ಉದ್ಧಾರ ಮಾಡಲಾರವೆಂದೂ ಈಗ ಬೇಕಾಗಿರುವದು ಕೆಲಸವಲ್ಲದೆ ಮಾತಲ್ಲವೆಂದೂ ಹೇಳಿದುದಲ್ಲದೆ ಮುನ್ನಡೆಯಪಕ್ಷದವರನೇಕರನ್ನು ಸೆರೆ ಹಿಡಿದ ವಿಚಾರ ಮಾತಾಡುತ್ತಾ ನಾವು ಹೂಡಿರುವ ಚಳವಳವನ್ನು ಮುಂದರಿಸುವದರಿಂದ ಸೆರೆಮನೆಗೆ ಸೇರಿರುವ ನಮ್ಮ ಸಹೋದರರಿಗೆ ನಮ್ಮ ಭಕ್ತಿಯನ್ನು ಪ್ರದರ್ಶಿಸಿದಂತಾಗುವದೆಂದೂ ಹೇಳಿದರು.

ದಸ್ತಗಿರಿಗಳು.

ಮುನ್ನಡೆಯ ಪಕ್ಷದವರ ದಸ್ತಗಿರಿಗಳು ನಡೆಯುತ್ತಲೇ ಇವೆ. ತಾರೀಕು 9 ರಲ್ಲಿ ಮುರ್ಶಿದಾಬಾದಿನಲ್ಲಿ ಎರಡು ದಸ್ತಗಿರಿಗಳೂ, ತಾ. 8 ರಲ್ಲಿ ಅಲ್ಲಹಾಬಾದಿನಲ್ಲಿ ಏಳು ದಸ್ತಗಿರಿಗಳೂ, ಲಕ್ನೋದಲ್ಲಿ ಒಂದು ದಸ್ತಗಿರಿಯೂ, ಕೌಲಾಸದಲ್ಲಿಯ ಮುನ್ನಡೆಯ ಪಕ್ಷದ ಅಧ್ಯಕ್ಷರಿಗೆ ಒಂದು ವರ್ಷದ ಕಠಿಣ ಸಜೆಯೂ ವಿಧಿಸಲಾಗಿದೆ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೆಂಬರರ ದಸ್ತಗಿರಿ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೆಂಬರರಾದ ಶ್ರೀ ಭೂಪೇಂದ್ರನಾಥ ಸನ್ಯಾಲ್‌ರವರನ್ನು ಭಾರತ ರಕ್ಷಣಾ ಕಾಯಿದೆಯ ರೀತ್ಯಾ ತಾರೀಕು 9ರಲ್ಲಿ ಅವರು ಸುಲ್ತಾನಪುರದಲ್ಲಿ ಒಂದು ಭಾಷಣ ಮಾಡಿದರೆಂಬ ನೆಪದಿಂದ ದಸ್ತಗಿರಿ ಮಾಡಲಾಗಿದೆ.

ಸ್ವಯಂಸೇವಕರ ತರಬೇತು.

ಮುಂಬರಬಹುದಾದ ಸತ್ಯಾಗ್ರಹ ಸಮರಕ್ಕೆ ಸ್ವಯಂಸೇವಕರನ್ನು ತರಬೇತು ಮಾಡುವ ಬಗ್ಗೆ ಆಚಾರ್ಯ ಕೃಪಾಲಿನಿಯವರು ಪ್ರಕಟಣೆ ಹೊರಡಿಸಿರುವರಷ್ಟೆ. ಆ ಮೇರೆ ಅನೇಕ ಭಾಗಗಳಲ್ಲಿ ತರಬೇತು ಕೇಂದ್ರಗಳು ತೆರೆಯಲ್ಪಟ್ಟಿವೆ. ಗಡಿನಾಡಿನಲ್ಲಿ ಆಗಲೇ ಒಂದು ಕೇಂದ್ರವು ತೆರೆಯಲ್ಪಟ್ಟು ತರಬೇತು ಕಾರ್ಯವು ನಡೆಯತೊಡಗಿದೆ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	48,470	0	0
ಜಮೂಬಂದ ಠೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ತ್ರಿಪ್ಟ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗ ಬ್ಯಾಂಕು ಆಫೀಸಿಗ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8 38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದ ತತ್ಕಾಲಕ್ಕೆ ನಿಲ್ಲಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂಡ್ಯಂಡ ಐ ಬೆಳ್ಳಿಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯವರು.
ಸಕ್ರೆಟರಿ:—ಮ. ಕೆ. ಸಿ ಕರುಂಬಯ್ಯವರು ಎಂ. ಎಲ್. ಸಿ.
ತಾ 1-3-1940

ಕೊಡಂದೇರ ಡಿ. ಮಾಚಯ್ಯ,
L.D Sc. (COLLEGE OF DENTISTRY)
EX-SUPERVISOR LAXMIBAI PATEL DENTAL HOSPITAL KARACHI

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (39) ನವೀನ ರೀತಿಯ ಚಿಕಿತ್ಸೆ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಣಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇವರ ಸೇವನೆಯಿಂದ ಪೂರ್ಣ ಗುಣವಾಗಿ ಒನ್ನಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಣ. ಮತ್ತು ಕಂಪೆನಿ,
(52-10) ಗಿರಗಾಂವ, ಮುಂಬಯಿ ೪,

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಜಂವರಿ-ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ದಾವಾ ಮತ್ತು ಅಮಲ್ದಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರ್ಯಾಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
52—43 Mercara, and Virajapet.

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ
'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ
ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:–ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕಿಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್.)
52-9 ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.

Printed & Published by P. I. Belliappa, at 'Kodagu' Press Mercara for 'Kodagu' Ltd

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಸಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೧೯—೪—೧೯೪೦.

ಸಂಪುಟ ೧೯] [ಸಂಚಿಕೆ ೪೫

ಭದ್ರತೆ! ವಿಶ್ವಾಸಾರ್ಹತೆ!! ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೊಫ್ರೊರೇಶನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ [illegible]ತೆಯನ್ನು ಪದೇ ಪದೇ ತೋರಿಸಿ, ಠೇವಣಾತಿದಾರರಿಗೆ ಸುರಕ್ಷಿತತೆಯನ್ನು [illegible],
ಸರ್ವರ ವಿಶ್ವಾಸಕ್ಕೆ ಪಾತ್ರವಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ [illegible] ಸಂಸ್ಥೆ.

ನಿರಖು ಠೇವಣಿ ಒಂದು ವರ್ಷಕ್ಕೆ 3½% (ಸಾಲಿಯಾನ [illegible])
ಬಡ್ಡಿ ದರ 2 & 3 ವರ್ಷಕ್ಕೆ 4% ,,

ಒಂದು ವರ್ಷಕ್ಕಿಂತ ಕಡಿಮೆ ವಾಯಿದೆಯ, ಅಲ್ಪಾವಧಿಯ, ಠೇವಣಾತಿಗಳನ್ನು
ಅವಧಿಗೆ ತಕ್ಕ ಬಡ್ಡಿ ದರಗಳಲ್ಲಿ ಪಡೆಯಬಹುದು.

ಮೂರು ವರ್ಷದ ಕ್ಯಾಶ್ ಸರ್ಟಿಫಿಕೇಟುಗಳು—ಬಡ್ಡಿಯ ದರವು ಸಾಲಿಯಾನ ಶೇಕಡಾ 4¼%. ವಾಯಿದೆಯ ಮೊದಲು, ಯಾವಾಗಲೂ 15 ದಿನಗಳ ನೋಟೀಸು ಕೊಟ್ಟಲ್ಲಿ ಹಣವನ್ನು ಒಂದಕ್ಕೆ ಪಡೆಯಬಹುದು.
ಸೇವಿಂಗ್ಸ್ ಬೇಂಕ್ ಡಿಪಾಜಿಟ್ಟು—ಒಂದು ಲೆಕ್ಕದಲ್ಲಿ ರೂ 5,000 ದ ವರೆಗೆ ಹಣ ಇಡಬಹುದು. ಚೆಕ್ಕು ಮೂಲಕ [illegible] ಹಣ ತೆಗೆಯಬಹುದು.
ಸಾಲಿಯಾನ ಶೇಕಡಾ 2½ ದರದಲ್ಲಿ ಬಡ್ಡಿ ಸಲ್ಲಿಸಲ್ಪಡುವುದು.
ಕರೆಂಟ್ ಡಿಪಾಜಿಟ್ಟು, ಕ್ಯುಮ್ಯುಲೇಟಿವ್ ಡಿಪಾಜಿಟ್ಟು ಲೆಕ್ಕಗಳನ್ನು ತೆರೆಯಬಹುದು.

ಬೊಂಬಾಯಿ, ಕಲ್ಕತ್ತ, ಮದ್ರಾಸು, ಕಲ್ಲಿಕೋಟೆ, ಕಣ್ಣಾನೂರು, [illegible], ಮೈಸೂರು, ಬೆಂಗಳೂರು ಮುಂತಾದ
ಅನೇಕ ಸ್ಥಳಗಳ ಮೇಲೆ ಡ್ರಾಫ್ಟುಗಳನ್ನೂ ಚೆಕ್ಕುಗಳನ್ನೂ ಕೊಡುವುದು; [illegible] ಬಹುದು

THE CANARA BANKING CORPORATION LIMITED.

52–17 ಚಿನ್ನಾಭರಣಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್,
ಕಟಪಾಡಿ,—ದ. ಕನ್ನಡ.
(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

52–23

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಬೋಯಪ್ಪನವರು.

ಬಾಚಮ್ಮನ ಕರ್ಣಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ. ಪಿ. ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಜಿ. ಮಾದಮ್ಮಯ್ಯನವರು.

ಗೋಣಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ ಕೆ. ಬೋಗಪ್ಪನವರು.

ನಾಪೋಕ್ಲು—ಮ. ಬೆಳ್ಯಪಂಡ ಯಂ. ಪೂಣಚ್ಚನವರು.
ನಾಪೋಕ್ಲು

ಶನಿವಾರಸಂತೆ—ಮ ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗೆಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುತ್ತದೆ. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-28) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು—ಕೆ. ರಾಮಕೃಷ್ಣರಾವ್,
ವೀರಾಜಪೇಟೆ. (ದ. ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಸಮಾಚಾರಗಳಿಗೂ, ಏಜೆಂಟರ ಷರತುಗಳಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಕ್ಷೇಮಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಢಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಸಿಲ್ಹೆಟ್, ಸಿಕಂದರಾಬಾದ್, ತ್ರಿಚನಾಪಳ್ಳಿ ಮತ್ತು ನೆಲ್ಲೂರು.

52-12

ಯಂತ್ರಮಯ ಅಮೇರಿಕ.

ಆಹಾರ ವಿಹಾರಗಳಲ್ಲಿಯೂ ಯಂತ್ರದ ಉಪಯೋಗ!

ಒಕ್ಕಲತನದಲ್ಲಾದ ಪ್ರಚಂಡ ಪ್ರಗತಿ.

(ಮಿ. ಸಿಡ್ನಿ. ಮ್ಯಾಕ್‌ಆಲಿಸ್ಟರ್ ಅಧ್ಯಕ್ಷ, ಇಂಟರ್‌ನ್ಯಾಶನಲ್ ಹಾರ್ವೆಸ್ಟರ್ ಕಂಪೆನಿ, ಇವರು ಅಮೇರಿಕದಲ್ಲಾದ ಯಂತ್ರಪ್ರಗತಿಯ ಬಗ್ಗೆ ಕೊಟ್ಟ ಅಭಿಪ್ರಾಯ.)

'ಒಕ್ಕಲತನದ ಸುಧಾರಣೆಯು ನಮ್ಮ ದೇಶದಲ್ಲಿ ಪ್ರಾರಂಭವಾದದ್ದು 87 ವರ್ಷಗಳ ಹಿಂದೆ ಅಂದರೆ 1850ನೇ ಇಸವಿಯಿಂದ. ಸಾಧಾರಣವಾಗಿ ಅಂದಿನಿಂದ ನಮ್ಮ ದೇಶದಲ್ಲಿ ಹೊಲಗಳಲ್ಲಿಯ ಕೈಕೆಲಸದ ಯುಗವು ಮುಗಿದು, ಯಂತ್ರಗಳ ಉಪಯೋಗದ ನವಯುಗವು ಪ್ರಾರಂಭವಾಯಿತೆನ್ನಬಹುದು.

ಆ ಕಾಲದಲ್ಲಿ ನಮ್ಮ ದೇಶದ ಜನಸಂಖ್ಯೆಯು 230 ಲಕ್ಷ ಇತ್ತು. ಅದರಲ್ಲಿ 100 ಕ್ಕೆ 80 ರಷ್ಟು ಅಥವಾ 185 ಲಕ್ಷ ಜನರು, ಆಗ ಪ್ರಚಲಿತವಿದ್ದ ಹಳೇ ಪದ್ಧತಿಯ ಸಾಧನಗಳ ಸಹಾಯದಿಂದ ಮೈಮುರಿದು ದುಡಿದು, ತಮ್ಮ ಜೀವನವನ್ನೂ ಅವರ ಜೊತೆಗೆ 45 ಲಕ್ಷ ಪಟ್ಟಣವಾಸಿಗಳ-ಅಂದರೆ ಈಗ ನ್ಯೂಯಾರ್ಕ್ ಪಟ್ಟಣದಲ್ಲಿ ವಾಸಿಸುತ್ತಿರುವ ಅರ್ಧದಷ್ಟು ಜನರ ಜೀವನವನ್ನೂ ಸಾಗಿಸುತ್ತಿದ್ದರು. ಪ್ರತಿಯೊಬ್ಬ ಒಕ್ಕಲಿಗನಿಗೆ ತಾನು ಬೆಳೆಯುತ್ತಿದ್ದ ಪ್ರತಿಯೊಂದು-ಕಾಳಿಗೆ ಒಂದು ಹನಿ ಬೆವರನ್ನು ಸುರಿಸಬೇಕಾಗುತ್ತಿತ್ತು.

ಆಧುನಿಕ ಸುಧಾರಿಸಿದ ಯಂತ್ರ ಸಾಮಗ್ರಿಗಳ ಸಹಾಯವಿಲ್ಲದ ಆಗಿನ ಜನಾಂಗಕ್ಕೆ, ಎರಡು ಎತ್ತುಗಳನ್ನು ತೆಗೆದುಕೊಂಡು ಹಳೇ ಪದ್ಧತಿಯ ರಂಟೆಯಿಂದ ಒಂದು ಎಕರೆ ಭೂಮಿಯನ್ನು ರಂಟೆಹೊಡೆಯುವದರ, ಅಥವಾ ಕುಡುಗೋಲಿನಿಂದ ಒಂದು ಎಕರೆ ಭೂಮಿಯೊಳಗಿನ ಪೈರನ್ನು ಕೊಯ್ಯುವದರ ಗೋಳು ಯಾವ ಪ್ರಕಾರದ್ದೆಂಬುವದರ ಕಲ್ಪನೆಯು ಕೂಡಾ ಬರಲಾರದು! ಹಾಗಾದರೆ ಆಗಿದ್ದ ಪರಿಸ್ಥಿತಿಯಾದರೂ ಏನು? 1840 ರಲ್ಲಿ, ನಮ್ಮ ದೇಶದ ಸರ್ವಜನರಿಗೆ ಸಾಕಾಗುವಷ್ಟು ಅನ್ನ ವಸ್ತ್ರವನ್ನು ಮತ್ತು ಅವರು ತಮ್ಮ ನಿತ್ಯ ಜೀವನವನ್ನು ಸಾಗಿಸಲು ಬೇಕಾಗುವ ವಸ್ತುಗಳನ್ನು ಒದಗಿಸಿ ಕೊಡಲು, ಪ್ರತಿನಿತ್ಯವೂ 185 ಲಕ್ಷ ಜನರು ದುಡಿಯಬೇಕಾಗುತ್ತಿತ್ತು. ಜೀವಿತದ ಮುಖ್ಯವಾದ ಎರಡು ವಸ್ತುಗಳು ಅಂದರೆ ಅನ್ನ ವಸ್ತ್ರಗಳ, ಉತ್ಪಾದನೆಯನ್ನು ಬಿಟ್ಟು ಉಳಿದ ವಸ್ತುಗಳನ್ನು ತಯಾರಿಸಲು 100 ಕ್ಕೆ 20 ರಷ್ಟು ಜನರು ಮಾತ್ರ ಆಗ ದೊರೆಯುತ್ತಿದ್ದರು.

ಆದರೆ ಈಗ 1938 ರಲ್ಲಿ 1300 ಲಕ್ಷ ಜನರಲ್ಲಿ 100 ಕ್ಕೆ 25 ರಷ್ಟು ಜನರು ಅಂದರೆ 325 ಲಕ್ಷ ಜನರು ಮಾತ್ರ ಹೊಲಗಳಲ್ಲಿ ದುಡಿದು ನಮ್ಮ ರಾಷ್ಟ್ರದ ಎಲ್ಲ ಜನರಿಗೆ ಬೇಕಾಗುವಷ್ಟು ಅನ್ನ ವಸ್ತುಗಳನ್ನು ಹುಟ್ಟಿಸುವದಲ್ಲದೆ ಪರದೇಶಕ್ಕೆ ಕಳುಹಲು ಕೂಡಾ ಸಾಕಾಗುವಷ್ಟು ಮಾಲಿನ ಉತ್ಪಾದನೆಯನ್ನು ಮಾಡುತ್ತಾರೆ. 1850 ರಿಂದ ಈಗಿನ ವರೆಗೆ 2 ಕೋಟಿ ಕೆಲಸಗಾರರು ಹೊಲದ ಕೆಲಸವನ್ನು ಬಿಟ್ಟು ಉಳಿದ ಉದ್ಯೋಗ ಧಂಧೆಗಳಲ್ಲಿ ಭಾಗವಹಿಸಲು ಶಕ್ಯರಾಗಿದ್ದಾರೆ.

1850 ರಲ್ಲಿ ಪ್ರಚಲಿತವಿದ್ದ ಒಕ್ಕಲತನದ ಸಾಧನಗಳು ಮತ್ತು ಪದ್ಧತಿಯು ಈಗಲೂ ಪ್ರಚಾರದಲ್ಲಿದ್ದದ್ದರೆ ನಮ್ಮ ಜನಾಂಗಕ್ಕೆ ಅನ್ನ ವಸ್ತ್ರಗಳನ್ನು ಪೂರೈಸಲು ಸದ್ಯಕ್ಕೆ ಕಾರಖಾನೆಗಳಲ್ಲಿ ಮತ್ತು ಪಟ್ಟಣದ ಇನ್ನಿತರ ಉದ್ಯೋಗ ಧಂದೆಗಳಲ್ಲಿ ಕೆಲಸ ಮಾಡುತ್ತಿರುವ 2 ಕೋಟಿ ಕೆಲಸಗಾರರು ತಮ್ಮ ಕೆಲಸಗಳನ್ನು ಬಿಟ್ಟು ಹೊಲಗಳಲ್ಲಿ ದುಡಿಯ ಹೋಗಬೇಕಾಗುತ್ತಿತ್ತು. ಆದರೆ ಆ ಮಾತು ಅದೇಕೆ, ಅದರ ವಿಚಾರವು ಕೂಡ ಸದ್ಯಕ್ಕೆ ಸಾಧ್ಯವಿಲ್ಲ.

ನಿಸರ್ಗಶಕ್ತಿಯನ್ನು ತಾನು ಉಪಯೋಗಮಾಡಿಕೊಳ್ಳಲು ಹೆಚ್ಚು ಹೆಚ್ಚು ದಕ್ಷನಾದಂತೆ ಮನುಷ್ಯನು ತನ್ನ ನಿತ್ಯ ಜೀವನಕ್ರಮವನ್ನು ಹೆಚ್ಚೆಚ್ಚು ಸುಧಾರಿಸಲು ಪ್ರಾರಂಭಮಾಡುತ್ತಾನೆ. ನಿಸರ್ಗದ ಶಕ್ತಿಭಾಂಡಾರದ ಮೇಲೆ ಮನುಷ್ಯನು ಪ್ರಭುತ್ವವನ್ನು ಪಡೆದುದು ಭೂಸಾಗುವಳಿಯಲ್ಲಿ ಯಂತ್ರಗಳ ಉಪಯೋಗವು ಪ್ರಾರಂಭವಾದಂದಿನಿಂದಲೇ ಎಂದೆನ್ನಲಡ್ಡಿಯಿಲ್ಲ.

ನಿಮ್ಮ ನಿತ್ಯಜೀವನ ಕ್ರಮವನ್ನು ಸುಧಾರಿಸಲು ಕಬ್ಬಿಣ ರಂಟೆಗಳು, ಕೊಯ್ಯುವ ಯಂತ್ರ, ತಿವುಡುಕಟ್ಟುವ ಯಂತ್ರ, ಒಕ್ಕುವ ಯಂತ್ರ ಮುಂತಾದವುಗಳು ಹೇಗೆ ಸಹಾಯಕವಾಗಿರುವವೆಂಬುವದರ ವಿಚಾರವನ್ನು ನೀವು ಎಂದಾದರೂ ಮಾಡಿರುವಿರಾ? ಹೊಲಗಳಲ್ಲಿ ಯಂತ್ರಗಳ ಉಪಯೋಗದ ಪ್ರಾರಂಭವೇ ನಿಮ್ಮ ನಿತ್ಯಜೀವನವನ್ನು 1850 ರಲ್ಲಿದ್ದ ನಿಮ್ಮ ಪೂರ್ವಜರ ಜೀವನಕ್ಕಿಂತ ಹೆಚ್ಚು ಸುಖಮಯವನ್ನಾಗಿ ಮಾಡಬಲ್ಲದು.

ಹೊಲಗಳಲ್ಲಿ ಯಂತ್ರಗಳ ಉಪಯೋಗವು ಪ್ರಾರಂಭವಾದಂದಿನಿಂದ 200 ಲಕ್ಷ ಜನರು ಒಕ್ಕಲತನವನ್ನು ಬಿಟ್ಟು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಲು ಶಕ್ತರಾಗಿದ್ದಾರೆ. ಈ 200 ಲಕ್ಷ ಜನರ ಉತ್ಪಾದನ ಶಕ್ತಿಯಿಂದ ನಮ್ಮ ಜನರಿಗೆ ಜೀವನಕ್ಕೆ ಅವಶ್ಯವಿದ್ದ ವಸ್ತುಗಳಲ್ಲದೆ ಬೇರೆ ಬೇರೆ ಸುಖಸಾಧನಗಳು ದೊರೆಯುತ್ತಿವೆ. ಈ 200 ಲಕ್ಷ ಜನರ ಶ್ರಮವೇ ನಮ್ಮ ಬಾಳನ್ನು ಉತ್ತಮ ತರಗತಿಯದನ್ನಾಗಿ ಮಾರ್ಪಡಿಸಲು ಮುಖ್ಯ ಕಾರಣವಾಗಿದೆ.

ಯಂತ್ರಗಳ ಉಪಯೋಗದಿಂದ ನಮ್ಮ ಸುಖಸೌಕರ್ಯಗಳು, ನಮ್ಮ ಆರೋಗ್ಯ ಅಥವಾ ಸುಖಮಯ ಜೀವನ ಇವುಗಳಂತೂ ಸಾಧ್ಯವಾಗಿಯೇ ಇವೆ ಇದಲ್ಲದೆ ಜಗತ್ತಿನ ಎಲ್ಲ ಜನಾಂಗದವರು ಉಪಭೋಗಿಸುವದಕ್ಕಿಂತಲೂ ವಿವಿಧಬಗೆಯ ಊಟ ಉಡಿಗೆಗಳನ್ನು ನಮ್ಮಲ್ಲಿಯ ಪಟ್ಟಣಿಗರು ಯಂತ್ರದ ಸಹಾಯದಿಂದಲೇ ಪಡೆದಿದ್ದಾರೆ. ಒಕ್ಕಲತನವಲ್ಲದೆ ಉಳಿದ ಕೈಗಾರಿಕೆಗಳೂ ಈ ಸೌಕರ್ಯಗಳನ್ನು ಒದಗಿಸಿಕೊಡಲು ಸಹಕಾರಿಯಾಗಿದ್ದರೂ ಒಕ್ಕಲತನವೇ ಅವುಗಳಲ್ಲಿ ಮುಖ್ಯ ಮತ್ತು ಮೂಲವಾದದ್ದು.

ಇದಲ್ಲದೆ ನಮ್ಮಲ್ಲಿಯ ಜನರಿಗೆ ಅವರಿಗೆ ಬೇಕಾಗುವ ಅನ್ನ ವಸ್ತುಗಳು ಜಗತ್ತಿನ ಬೇರೆ ಬೇರೆ ಭಾಗದ ಜನರಿಗೆ ಸಿಗುವ ಬೆಲೆಗಿಂತ ಕಡಿಮೆ ಬೆಲೆಗೆ ಸಿಗುತ್ತವೆ. ಉದಾಹರಣಾರ್ಥವಾಗಿ ಅಮೇರಿಕೆಯಲ್ಲಿ ಸರ್ವಸಾಧಾರಣವಾಗಿ ಒಂದು ಕುಟುಂಬಕ್ಕೆ ಕೆಲವು ದಿನಗಳ ವರೆಗೆ ಸಾಲುವಷ್ಟು ಆಹಾರ ಸಾಮಗ್ರಿಯನ್ನು ತೆಗೆದುಕೊಂಡರೆ ಆ ಆಹಾರ ಸಾಮಗ್ರಿಗೆ ಒಬ್ಬ ಕೆಲಸಗಾರನ 9 ತಾಸುಗಳ ದುಡಿತದ ವೇತನವು ಬೇಕಾಗುವದೆಂದು ತಿಳಿಯುವಾ. ಅಂದರೆ ಈಗಿನ ಕೂಲಿಯ ದರವನ್ನು ತೆಗೆದುಕೊಂಡರೆ ಆ ಆಹಾರವು ಬಹಳೇ ಕಡಿಮೆ ಬೆಲೆಗೆ ದೊರೆತಂತಾಯಿತು ಹೇಗೆಂದರೆ–

ಅಷ್ಟೇ ಆಹಾರವನ್ನು ದೊರಕಿಸಲು ಬೆಲ್ಜಿಯಂನಲ್ಲಿ ಒಬ್ಬನಿಗೆ 23 ತಾಸುಗಳ ವರೆಗೆ, ದುಡಿದು ಗಳಿಸಿದ ಹಣವನ್ನೂ, ಇಟಲಿಯವನು 29 ತಾಸುಗಳ ವರೆಗೆ, ಜರ್ಮನಿಯವನು 22 ತಾಸುಗಳ ವರೆಗೆ, ಫ್ರಾನ್ಸದವನು 20 ತಾಸುಗಳ ವರೆಗೆ, ಬ್ರಿಟನ್ನಿನವನು 15 ತಾಸುಗಳ ವರೆಗೆ, ಡಚ್ಚ ದೇಶದವನು 14 ತಾಸುಗಳ ವರೆಗೆ, ದುಡಿದು ಗಳಿಸಿದ ಹಣವನ್ನು ವೆಚ್ಚ ಮಾಡಬೇಕಾಗುವದು. ಅಂದರೆ ಕೆಲವು ದೇಶಗಳಲ್ಲಿ ಅಮೇರಿಕೆಯ ಕೆಲಸಗಾರನು ದೊರಕಿಸುವ ಅನ್ನವನ್ನು ದೊರಕಿಸಲು ಅವನಿಗಿಂತ ಎರಡಷ್ಟು ದುಡಿಯಬೇಕಾಗುವದು.

ನಮಗೆ ಹೊಟ್ಟೆ ಬಟ್ಟೆಗಳಿಗೆ ಬೇಕಾಗುವ ವಸ್ತ್ರಗಳಲ್ಲಿ ಬಹುಭಾಗವು ಭೂಮಿಯಿಂದ ದೊರೆಯುತ್ತದೆ. ಅವರಂತೆಯೆ ಈಗ ಯಂತ್ರದ ಸಹಾಯವಿಲ್ಲದೇ ಯಾವದೇ ಬೆಳೆಯ ಉತ್ಪತ್ತಿಯಿಲ್ಲ. ಅಂತೆಯೆ ನಮ್ಮ ಆಹಾರ ವಸ್ತ್ರಗಳು ನಮಗೆ ಕಡಿಮೆ ಬೆಲೆಗೆ ಸಿಗುತ್ತವೆ.

ಪ್ರತಿನಿತ್ಯವು ನಮ್ಮ ಕುಟುಂಬಕ್ಕೆ ಬೇಕಾಗುವ ಉತ್ತಮ ತರಗತಿಯ, ಹಣ್ಣು ಹಂಪಲ, ಕಾಯಿಪಲ್ಯ, ಹಾಲು, ಬೆಣ್ಣೆ, ತುಪ್ಪ, ಮಾಂಸ ಇವೆಲ್ಲ ವಸ್ತುಗಳು ಯಂತ್ರ ಸಹಾಯದಿಂದ ಹೇರಳವಾಗಿ ತಯಾರಾಗುತ್ತವೆ.

ನಮ್ಮ ಊಟ ಉಡಿಗೆಗಳಲ್ಲಿಯ ವೈವಿಧ್ಯತೆಗೆ ಕೂಡ ಈ ಯಂತ್ರಸಾಧನೆಯೇ ಮೂಲಕಾರಣವು ಹೊಲಗಳಲ್ಲಿ ಯಂತ್ರಗಳ ಉಪಯೋಗ, ಪರದೇಶಕ್ಕೆ ಸರಕುಗಳನ್ನು ಕಳುಹಿಸುವ ಸುಧಾರಿಸಿದ ಪದ್ಧತಿ ಮತ್ತು ಎಲ್ಲ ವಸ್ತ್ರಗಳನ್ನೂ ಅವು ನಾಶ ಹೊಂದದಂತೆ, ಬಹುಕಾಲ ಬಾಳುವಂತೆ, ಕಾಯ್ದಿಡುವ ಪದ್ಧತಿಗಳ ಮೂಲಕ ನಮಗೆ ಬೇಕಾದ ಋತುಗಳಲ್ಲಿ ಬೇಕಾದ ಹಣ್ಣು ಹಂಪಲ ಕಾಯಿಪಲ್ಯ, ಬೇಕಾದ ಹೊತ್ತಿಗೆ ಸಿಗುತ್ತವೆ.

ಹೊಲಗಳಲ್ಲಿ ಯಂತ್ರಗಳ ಉಪಯೋಗದಿಂದಲೇ ನಮ್ಮ ದೇಶದಲ್ಲಿ ಜಗತ್ತಿನ ಎಲ್ಲ ರಾಷ್ಟ್ರಗಳಿಗಿಂತ ಹೆಚ್ಚು ಆಹಾರ ಸಾಮಗ್ರಿಗಳ ಉತ್ಪಾದನೆಯಾಗುತ್ತದೆ. ಅಲ್ಲದೆ ಹೆಚ್ಚು ಜನರು ಉದ್ಯೋಗಗಳಲ್ಲಿ ತೊಡಗಿದ್ದಾರೆ. ಯಂತ್ರಸಾಧನಗಳ ಉಪಯೋಗಕ್ಕಿಂತ ಮೊದಲು ವ್ಯರ್ಥವಾಗಿ ವ್ಯಯವಾಗುತ್ತಿದ್ದ ಮನುಷ್ಯನ ಶಕ್ತಿಯು ಈಗ ಉಳಿತಾಯವಾಗಿ ನಮ್ಮ ದೇಶದ ಒಕ್ಕಲತನ ಮತ್ತು ಕೈಗಾರಿಕೆಗಳಲ್ಲಿ ಸಮತೋಲನೆಯುಂಟಾಗಿದೆ ಈ ಸಮತೋಲನೆಯ ಮೂಲಕ ನಮ್ಮ ದೇಶದ ಭಧ್ರತೆಯು ಹೆಚ್ಚಿದೆ, ಮತ್ತು ನಮ್ಮ ಸೌಕರ್ಯ, ಆರೋಗ್ಯಶಿಕ್ಷಣ, ಜೀವನ ಮುಂತಾದವುಗಳಲ್ಲಿ ಆಶ್ಚರ್ಯಕರವಾದ ಪ್ರಗತಿಯಾಗಿದೆ.

ಆದರೆ ಇಷ್ಟರಿಂದಲೇ ನಮ್ಮ ಕೆಲಸವು ಮುಗಿಯಲಿಲ್ಲ. ಅದು ಇದೀಗ ಪ್ರಾರಂಭವಾಗಿದೆ. ಯಂತ್ರಗಳ ಸಹಾಯದಿಂದ ಒಕ್ಕಲತನವನ್ನು ಸಾಗಿಸುವದರಿಂದ ಇನ್ನು ಮುಂದೆ ನಮಗೆ ಒದಗಬಹುದಾದ ಹೆಚ್ಚಿನ ಸುಖ ಸೌಕರ್ಯಗಳನ್ನು ಈಗಲೇ ನಿರ್ಧರಿಸಲಾರೆವು. ನಮ್ಮ ಆಹಾರ ಸಾಮಗ್ರಿಗಳಲ್ಲದೆ ಉಳಿದ ವಸ್ತುಗಳ ತಯಾರಿಕೆಗೆ ಬೇಕಾಗುವ ಸಾಧನೆಗಳು ಕೂಡ ನಮ್ಮ ಹೊಲಗಳಿಂದಲೇ ಆಗುವದು ಈಗಾಗಲೇ ಕಾಗದ, ಸಿನೇಮಾಫಿಲ್ಮ, ಚರ್ಮ, ಆಲ್ಕೊಹಾಲ, ಪ್ಲಾಸ್ಟಿಕ್ಸ ಮುಂತಾದ ಅನೇಕ ವಸ್ತುಗಳ ತಯಾರಿಕೆಗೆ ಬೇಕಾಗುವ ಕಚ್ಚಾ ಮಾಲನ್ನು ನಮ್ಮ ಒಕ್ಕಲಿಗನೇ ಪೂರೈಸುತ್ತಾನೆ. ಇದಲ್ಲದೆ ಕ್ಲೊರೊಫಾರ್ಮ, ನೀಲಿ ಮುಂತಾದ ವಸ್ತುಗಳ ನಿರ್ಮಾಣಕ್ಕೆ ಬೇಕಾಗುವ ಮೂಲು ಸಹ ಹೊಲಗಳಿಂದಲೇ ದೊರೆಯುತ್ತದೆ.

ಹೀಗೆ ನಮ್ಮ ಜೀವನಕ್ರಮದಲ್ಲಿ ಎಲ್ಲವೂ ಯಂತ್ರಮಯವಾಗಿದೆ.'

'ಕ. ವಿ.'

ಬೆಂಬಲವಿಲ್ಲದ ಹಿಟ್ಲರ್.

ಚುನಾವಣೆಗಳಲ್ಲಿ ನಾಝಿಗಳು ಮಾಡುವ ಜುಲುಮೆ!

ನಾಝಿ ಆಕ್ರಮಣಕ್ಕೆ ಬಲಿಯಾದ ರಾಷ್ಟ್ರಗಳ ಬವಣೆ.

ಹಿಟ್ಲರನು ತಾನು ಅಧಿಕಾರಕ್ಕೆ ಬಂದಾಗಿನಿಂದಲೂ ಜರ್ಮರನ್ನು ಒಂದುಗೂಡಿಸಲು, ಅವರಿಗೆ ಇರಲು ಸಾಕಷ್ಟು ಪ್ರದೇಶ ಕೊಡಿಸಲು ಅವರ ಸಂಸ್ಕೃತಿ ಹಾಳಾಗದಂತೆ ಕಾಯಲು, ಕಂಕಣಬದ್ಧನಾಗಿರುವೆನೆಂದು ಹೇಳುತ್ತಿದ್ದಾನೆ. ಪ್ರತಿಯೊಬ್ಬ ಜರ್ಮನನಿಗೂ ಮೇಲೆ ಹೇಳಿದ ಉದ್ದೇಶಗಳು ಸಾಧಿಸಿ ತನಗೆ ತಮ್ಮ ಬಾಂಧವರಿಗೆ ಸುಖಶಾಂತಿಗಳು ದೊರೆಯಬೇಕೆಂಬ ಇಚ್ಛೆಯಿರುವದು ಸಹಜ. ಅಂದ ಮೇಲೆ ಹಿಟ್ಲರನ ಮತ್ತು ಅವನ ಬೆಂಬಲಿಗರ ಕಾರ್ಯಕ್ರಮಕ್ಕೆ ಜರ್ಮನ್ ಜನರ ಸರ್ವವಿಧದ ಬೆಂಬಲವಿರುವದೂ ಅಷ್ಟೇ ಸಹಜ. ಆದರೆ ನಿಜವಾಗಿಯೂ ಹಿಟ್ಲರನಿಗೆ ಜರ್ಮನ್ ಜನತೆಯ ಬೆಂಬಲವಿದೆಯೇ ಎಂಬ ಬಗ್ಗೆ ಆಸ್ಟ್ರಿಯದಿಂದ ಓಡಿಬಂದವನೊಬ್ಬನ ಹೇಳಿಕೆಯನ್ನು ಕೆಳಗೆ ಕೊಡಲಾಗಿದೆ. ಹಿಟ್ಲರನು 1914-19ರ ಯುದ್ಧದ ಪೂರ್ವದಲ್ಲಿದ್ದ ಜರ್ಮನ್ ಸಾಮ್ರಾಜ್ಯವನ್ನು ಪುನರ್ಘಟಿಸಲು ಪ್ರಯತ್ನಿಸುತ್ತಿದ್ದಾನೆ.

ಪಟ್ಟಣಿಗರ ವಿರೋಧ.

ಆಸ್ಟ್ರಿಯಾ, ಹಂಗೆರಿ ಮುಂತಾದ ದೇಶಗಳಲ್ಲಿಯ ಜನರು ಉತ್ತರದಲ್ಲಿಯ ಜರ್ಮನರನ್ನು ದ್ವೇಷಿಸುತ್ತಿದ್ದಾರೆ. ಒಂದೇ ಜನಾಂಗದವರಿದ್ದರೂ ಒಂದೇ ಭಾಷೆಯಾಡುತ್ತಿದ್ದರೂ ಅವರಲ್ಲಿ ಬಣ್ಣಗಳಿರುವದು ಕಂಡು ಬರುವದು. ಉದಾಹರಣೆಗಾಗಿ ಇಟಲಿಯ ಮತ್ತು ಉತ್ತರ ದಕ್ಷಿಣ ಭಾಗಗಳ ಜನರಲ್ಲಿ ಭಿನ್ನಾಭಿಪ್ರಾಯವಿದೆ. ಜುಗೊಸ್ಲಾವಿಯದಲ್ಲಿ ಸರ್ಬಿಯನ್ನರು ಮತ್ತು ಕ್ರೋಟರು ಇವರೀರ್ವರ ಭಾಷೆ ಒಂದೇಯಾಗಿದ್ದರೂ ಸಹ ತೀವ್ರ ಜಗಳಗಳಿವೆ. ಹಿಟ್ಲರನಿಗೆ ಪಟ್ಟಣಗಳಲ್ಲಿ ವಿರೋಧವಿದೆ. ಯಾಕೆಂದರೆ ಹಿಟ್ಲರನ ಕಾರ್ಯಕ್ರಮವನ್ನನುಸರಿಸಿದುದರಿಂದ ಅವರಿಗೆ ಆಹಾರ ಸಾಮಗ್ರಿಗಳ ಕೊರತೆಯಾಗಿ ಅವರು ಬಹಳ ಕಷ್ಟವನ್ನನುಭವಿಸಿದ್ದಾರೆ. ಆದರೆ ಹಳ್ಳಿಗರ ಆಯುಷ್ಯಕ್ರಮದಲ್ಲಿ ವಿಶೇಷ ಹೆಚ್ಚು ಕಡಿಮೆಯಾಗಿಲ್ಲ. ಆದ್ದರಿಂದ ಅವರು ಹಿಟ್ಲರನ ದೊಡ್ಡ ದೊಡ್ಡ ಶಬ್ದಗಳಿಗೆ ಮರುಳಾಗಿ ಅವನಿಗೆ ಬೆಂಬಲ ಕೊಡುತ್ತಿದ್ದಾರೆ.

ನಾಝಿಗಳ ಬೆದರಿಕೆ.

ಪರದೇಶೀಯರು ಜರ್ಮನಿಗೆ ಬಂದು ಎಷ್ಟೋ ದಿವಸಗಳ ವರೆಗೆ ಅಲ್ಲಿದ್ದರೂ ಜರ್ಮನ ಜನತೆಯ ನಿಜವಾದ ವಿಚಾರಗಳನ್ನು ತಿಳಿದುಕೊಳ್ಳುವದು ಶಕ್ಯವಿಲ್ಲ. ಉತ್ತರ ಜರ್ಮನಿಯಲ್ಲಿ ರಾಜಕಾರಣವೆಂದರೆ ಜನರು ಗಡಗಡ ನಡುಗುತ್ತಾರೆ. ಅವರು ಮಾತನಾಡುವದೇ ಇಲ್ಲ. ಮಾತನಾಡಿದಾಗ ಎಲ್ಲರೂ ನಾಝೀ ಮುಖಂಡರ ಅಭಿಪ್ರಾಯಗಳಿಗೆ ವಿರುದ್ಧವಾಗದಂತೆ ಮಾತನಾಡುತ್ತಾರೆ. ಹಿಟ್ಲರನು ಆಸ್ಟ್ರಿಯಾವನ್ನು ವಶಮಾಡಿಕೊಳ್ಳುವಾಗ ನಾನು ಡೆನ್ಮಾರ್ಕಿಗೆ ಹೋಗಿ ಅಲ್ಲಿಂದ ತಿರುಗಿ ವ್ಹಿಯೆನ್ನಾಕ್ಕೆ ಬಂದೆ. ಆದರೆ ಇಷ್ಟು ದೊಡ್ಡ ಪ್ರವಾಸದಲ್ಲಿ ಹಿಟ್ಲರನ ವಿರುದ್ಧ ಒಂದು ಚಕಾರ ಶಬ್ದವೂ ನನ್ನ ಕಿವಿಗೆ ಬೀಳಲಿಲ್ಲ. ನನ್ನ ಮಿತ್ರರೊಡನೆ ನಾನು ಸಂಭಾಷಣೆ ಮಾಡಿದಾಗ ಮಾತ್ರ ಅವರು ತಮ್ಮಲ್ಲಿದ್ದ ನಿಜವಾದ ದುಃಖ ಮತ್ತು ಅಸಮಾಧಾನಗಳಿಗೆ ಅನುವುಗೊಡುತ್ತಿದ್ದರು.

ಇನ್ನು ಬಹಿರಂಗವಾಗಿ ಹಿಟ್ಲರನ ಆಳಿಕೆಗೆ ವಿರೋಧ ತೋರಿಸುವದಂತಿರಲಿ; ಅಂತರಂಗದಲ್ಲಿ ಎಷ್ಟೇ ವಿರೋಧವಿದ್ದರೂ ಬಹಿರಂಗವಾಗಿ ಹಿಟ್ಲರನ ಹಿತವನ್ನು ಪ್ರತಿ ಜರ್ಮನನೂ ಕೋರಲೇಬೇಕಾಗುತ್ತದೆ. ಉದಾಹರಿಸಬೇಕೆಂದರೆ ವ್ಹಿಯೆನ್ನಾದಲ್ಲಿಯ ಪ್ರಮುಖ ಕಾರಖಾನೆಯ ಒಡೆಯ ಮತ್ತು ವ್ಯವಸ್ಥಾಪಕರಿಬ್ಬರೂ ನನ್ನ ಆಪ್ತ ಮಿತ್ರರಿದ್ದಾರೆ. ಅವರೀರ್ವರೂ ಹಿಟ್ಲರನ ಆಳಿಕೆಯನ್ನು ತೀವ್ರವಾಗಿ ವಿರೋಧಿಸುತ್ತಾರೆ. ಆದರೆ ಅವರ ಕಾರಖಾನೆಯ ಪ್ರತಿ ಬಾಗಿಲಿನ ಮೇಲೆ ಹಿಟ್ಲರನಿಗೆ ಜಯವಾಗಲೆಂಬ ಶಬ್ದಗಳನ್ನು ಬರೆದುದು ಕಂಡು ಬರುತ್ತದೆ.

ಹಿಟ್ಲರನು ಯುದ್ಧ ಹೂಡಿಯೇ ಆಗಲಿ ಅಥವಾ ಇನ್ನಿತರ ಯಾವದೇ ರೀತಿಯಿಂದಾಗಲಿ ಅವನು ವಶಪಡಿಸಿಕೊಂಡ ರಾಷ್ಟ್ರಗಳೆಲ್ಲ ಅಸಮಾಧಾನ ಅಶಾಂತಿಗಳಿಂದ ತುಂಬಿ ತುಳುಕುತ್ತಿವೆ..

1938 ಮಾರ್ಚನಲ್ಲಿ ಹಿಟ್ಲರನು ಕಾಲಿಡುವ ಪೂರ್ವದಲ್ಲಿ ವ್ಹಿಯೆನ್ನಾದಲ್ಲಿ ಸುಖಶಾಂತಿಗಳು ನಲಿಸಿದ್ದವು. ಆಹಾರ ಸಾಮಗ್ರಿ ಸಾಕಷ್ಟಿದ್ದಿತು. ಆದರೆ ಜರ್ಮನರು ಬಂದ ಕೂಡಲೆ ಆಹಾರ ಸಾಮಗ್ರಿಯ ಕೊರತೆ ಬಿದ್ದು ಎಲ್ಲರಿಗೂ ಸಾಕಷ್ಟು ಆಹಾರವು ಶಾಂತಿ ಸಮಯದಲ್ಲಿಯೇ ಸಿಗದಂತಾಯಿತು. ಝೆಕೊಸ್ಲೊವಾಕಿಯಾದಲ್ಲಿಯೂ ಸಹ ಇದೇ ಚಿತ್ರವು ಎಲ್ಲೆಲ್ಲಿಯೂ ಕಂಡು ಬರುವದು.

ವ್ಹಿಯೆನ್ನಾದ ಜನರು ಸಭ್ಯಜನರೆಂದು ಹೆಸರಾಗಿದ್ದಾರೆ. ಆದರೆ ಅವರ ಮೇಲೆ ಕೈ ಎತ್ತಿದ ಜರ್ಮನರನ್ನು ಮಾತ್ರ ಅವರು ಚೆನ್ನಾಗಿ ಹೀಡಿಸಿದ್ದಾರೆ. ಆದ್ದರಿಂದ ವ್ಹಿಯೆನ್ನದ ಜನರ ಸಭ್ಯತೆಯ ಬಗ್ಗೆ ವಿಶ್ವಾಸ ಬಹಳ ಕಡಿಮೆಯಾಗಿದೆ. ವೇಳೆ ಸಿಕ್ಕಾಗೆಲ್ಲ ಜರ್ಮನರು ಆಸ್ಟ್ರಿಯಾದಲ್ಲಿ ತಮಗೆ ಬಂದ ಕಟು ಅನುಭವಗಳನ್ನು ಹೇಳುತ್ತಿರುತ್ತಾರೆ. ಇದರಂತೆ ಉಳಿದೆಲ್ಲ ಭಾಗಗಳಲ್ಲಿ ಸಹ ಜನರು ಹಿಟ್ಲರನನ್ನು ಮತ್ತು ಅವನ ಆಳಿಕೆಯನ್ನೂ ಹೃತ್ಪೂರ್ವಕವಾಗಿ ದ್ವೇಷಿಸುತ್ತಾರೆ.

ಸಾರ್ವತ್ರಿಕ ಅಯ್ಕೆ.

ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಗಳಲ್ಲಿ ಮತದಾನಕ್ಕೆ ಬಹಳ ಮಹತ್ವವಿದೆ. ಎಲ್ಲ ಪಕ್ಷ, ಉಪಪಕ್ಷಗಳ ಶಕ್ತಿಯನ್ನು ಅಳೆಯಲು ಚುನಾವಣೆಯು ಉಪಯೋಗ ಮಾಡಲಾಗುತ್ತದೆ.

ಜರ್ಮನಿಯಲ್ಲಿಯೂ ಚುನಾವಣೆಗಳು ನಡೆಯುತ್ತವೆ. ಆದರೆ ಅವುಗಳಲ್ಲಿ ಉಳಿದ ಪಕ್ಷಗಳಿಗೆ ಸಾಕಷ್ಟು ಸ್ಥಾನಗಳು ಸಿಗುವದಿಲ್ಲ. ಮತ್ತು ನಾಝಿ ಪಕ್ಷದ ವಿರುದ್ಧ ಯಾರೂ ಮತಕೊಡುವ ಧೈರ್ಯ ಮಾಡುವದಿಲ್ಲ. ಹೀಗಾಗಿ ನಾಝೀ ಪಕ್ಷವು ಆರಿಸಿಬರುವದು ನಿಶ್ಚಿತ ಮತ್ತು ನೂರಕ್ಕೆ 99 ರಷ್ಟು ಮತಗಳು ನಾಝೀ ಪಕ್ಷಕ್ಕೆ ಸಿಕ್ಕಿವೆಯೆಂದರೆ ಆ ಪಕ್ಷದವರು ಅಷ್ಟು ಜನ ಪ್ರೇಮಿಗಳೆಂದಲ್ಲ.

ನಾಝೀಪಕ್ಷದ ವಿರುದ್ಧ ಧ್ವನಿಯೆತ್ತುವ ಪ್ರತಿಯೊಬ್ಬನು 'ತನ್ನ ಜೀವನ' ಮನೆಮಾರು ಹೆಂಡಿರು ಮಕ್ಕಳಿಗೆ ಎರವಾಗಲು ಸಿದ್ಧನಿರಬೇಕು.

ಬರ್ಲಿನ ಮತ್ತು ಉಳಿದೆಲ್ಲ ಪ್ರದೇಶಗಳಲ್ಲಿಯೂ ಬರೀ ನಾಝೀ ಅಧಿಕಾರಿಗಳೇ ಚುನಾವಣೆಯನ್ನು ನಡೆಯಿಸುವರು. ಯಾವುದಾದರೊಂದು ಭಾಗದಲ್ಲಿ ನಾಝಿಗಳು ಸೋತರೂ ಸಹ ಅದನ್ನು ಬದಲಿಸಿ ನಾಝಿ ಪಕ್ಷಕ್ಕೆ ಜಯ ಸಿಗುವಂತೆ ಮಾಡಲಾಗುವದು.

ಹಿಟ್ಲರನಿಗೆ ಬೆಂಬಲವಿಲ್ಲ.

ಜರ್ಮನಿಯಲ್ಲಿಯ ಸ್ಥಾನಬದ್ಧರ ಶಿಬಿರಗಳು ತುಂಬಿಹೋಗಿವೆ. ನಾಝೀ ಆಡಳಿತದ ವಿರುದ್ಧ ಅಭಿಪ್ರಾಯವನ್ನು ಹತ್ತಿಕ್ಕಲು ಗೆಸ್ಟಾಪೋದಲ್ಲಿ, ಕರಿಯಂಗಿ ಮತ್ತು ಇನ್ನಿತರ ಸರಕಾರೀ ಪೊಲೀಸ್ ದಳಗಳು ಪ್ರಯತ್ನಿಸುತ್ತಿವೆ. ಪರದೇಶಿ ರೇಡಿಯೋ ಸ್ಟೇಶನುಗಳ ಉಪಯೋಗ ಮಾಡಿಕೊಳ್ಳುವ ಹಾಗಿಲ್ಲ. ಎಲ್ಲ ಪತ್ರಿಕೆಗಳೂ ಸರಕಾರದ ನಿಯಂತ್ರಣಕ್ಕೊಳಗಾಗಿವೆ. ನಿಜವಾಗಿಯೂ 99 ರಷ್ಟು ಜನರ ಬೆಂಬಲವಿದ್ದರೆ ನಾಝಿ ಸರಕಾರವು ಹೀಗೆ ಮಾಡಲು ಕಾರಣವಿರಲಿಲ್ಲ. ಅದು ಈ ರೀತಿ ಎಲ್ಲರ ಮೇಲೆಯೂ ಸಂಶಯ ತೆಗೆದುಕೊಳ್ಳುತ್ತದೆಂದರೆ ಅದಕ್ಕೆ ಸಾಕಷ್ಟು ಬೆಂಬಲವೇ ಇಲ್ಲೆಂದು ತೋರಿಸಿ ಕೊಟ್ಟಂತಾಯಿತು.

ಜರ್ಮನ್ ಜನರು ಉಳಿದ ದೇಶಗಳ ಜನರಿಗಿಂತ ಕ್ರೂರರು ಅಥವಾ ನೀಚರೆಂದಲ್ಲ. ಕಳೆದ ಯುದ್ಧವಾಗಿ 15 ವರ್ಷಗಳ ವರೆಗೆ ಅವರು ಪೂರ್ಣ ಶಾಂತತೆಯಿಂದಿದ್ದರು. ಅವರು ಬಡವರಿದ್ದುದೇನೋ ನಿಜ. ಆದರೆ ಅವರಿಗೆ ಸುಡೆಟಾನ ಪ್ರದೇಶ ಬೇಕಿರಲಿಲ್ಲ. ಡಾಂಝಿಗದ ಅವಶ್ಯಕತೆ ಇರಲಿಲ್ಲ. ರ್‍ಹಿನ್ ಪ್ರದೇಶಗಳಲ್ಲಿ ಸೈನ್ಯವನ್ನಿಡುವದು ಅಥವಾ ಸೈನ್ಯ ಶಿಕ್ಷಣ ಪಡೆಯಲೂ ಅವರ ಇಚ್ಛೆಯಾಗಿರಲಿಲ್ಲ.

ಅವರಲ್ಲಿ ಆಗ 60 ಲಕ್ಷ ಜನರು ನಿರುದ್ಯೋಗಿಗಳಾಗಿದ್ದರು. ಅವರಿಗೆ ಆಗ ಬೇಕಾಗಿದ್ದುದು ಆರ್ಥಿಕ ಸಹಾಯ. ಈ ಸಮಯಕ್ಕೆ ಸರಿಯಾಗಿ ಹಿಟ್ಲರ್ ಎದ್ದು ನಿಂತು ನಾವು ನಮ್ಮ ಸ್ಥಿತಿ ಸುಧಾರಿಸಿಕೊಳ್ಳಬೇಕಾದರೆ ಶಕ್ತಿಯನ್ನುಪಯೋಗಿಸಲೇಬೇಕು. ಇಲ್ಲದಿದ್ದರೆ ನಮ್ಮ ಉದ್ಧಾರವಿಲ್ಲ. ಎಂದು ಕಿವುಡರಿಗೂ ಸಹ ಕೇಳುವಂತೆ ಕೂಗಿಕೊಂಡ ಬಿದ್ದ ಜನರಿಗೆ ಏಳುವ ಹಾದಿಯೊಂದಿದೆ ಎಂದರೆ ಹಾಗೆ ಹೇಳುವವರ ಬೆನ್ನು ಹತ್ತುವದು ಸಹಜ. ಅದರಂತೆ ಹಿಟ್ಲರನಿಗೂ ಆಗ ಬೆಂಬಲಿಗರು ಸಿಕ್ಕದುದರಲ್ಲಿ ಆಶ್ಚರ್ಯವೇನು?

ಹಿಟ್ಲರನು ಜರ್ಮನರ ಏಕಮೇವ ಪ್ರತಿನಿಧಿಯೆಂದು ಕೊಚ್ಚಿಕೊಳ್ಳುತ್ತಾನೆ. ಅವನು ನಿಜವಾಗಿ ಜನರ ಪ್ರತಿನಿಧಿಯಾಗಿದ್ದರೆ. ಅವನೊಡನೆ ಶಾಂತ ಸಂಧಾನಗಳ ಮಾತುಕತೆ ಮಾಡಿ ಕೆಳಗಿನ ಕರಾರುಗಳನ್ನು ಹಾಕಬೇಕು. ಅಂದರೆ ಜರ್ಮನ್ ಜನತೆಯು ಎಷ್ಟರ ಮಟ್ಟಿಗೆ ಹಿಟ್ಲರನ ಬೆಂಬಲಕ್ಕಿದೆಯೆಂಬುದು ತಿಳಿಯುವದು ಅಂತರರಾಷ್ಟ್ರೀಯ ಮೇಲ್ವಿಚಾರಣೆಗೆ ಒಳಪಟ್ಟು ಈ ಕೆಳಗಿನ ಪ್ರಶ್ನೆಗಳ ಬಗ್ಗೆ ಜರ್ಮನರ ಮತಗಣನೆ ನಡೆಸಬೇಕು.

(1) ನಾಝಿ ಸರಕಾರ ಬೇಕೋ ಅಥವಾ ಪ್ರಜಾಸತ್ತಾತ್ಮಕ ಸರಕಾರ ಬೇಕೊ?

(2) ಝೆಕೊಸ್ಲೊವಾಕಿಯಾ ಪೋಲೆಂಡುಗಳು ಜರ್ಮನಿಯ ವಶದಲ್ಲಿರಬೇಕೆಂಬ ಇಚ್ಛೆ ಇದೆಯೋ ಇಲ್ಲವೋ?

(3) ಈ ದೇಶಗಳನ್ನು ಜರ್ಮನಿಯು ತನ್ನ ಕೈಯಲ್ಲಿಟ್ಟುಕೊಳ್ಳುವದಕ್ಕಾಗಿ ಯುದ್ಧ ಮುಂದರಿಸಲು ಸಿದ್ಧವಿದೆಯೋ ಹೇಗೆ? ಈ ಪ್ರಶ್ನೆಗಳಿಗೆ ಸರಿಯಾದ ನಿಜವಾದ ಒತ್ತಾಯವಿಲ್ಲದ ಉತ್ತರ ದೊರೆತರೆ ಹಿಟ್ಲರನಿಗಿರುವ ಬೆಂಬಲದ ಗುಟ್ಟು ಹೊರಬೀಳುವದು ಆದರೆ ಹಿಟ್ಲರನು ಈ ಕರಾರುಗಳಿಗೊಪ್ಪುವದು ಸಾಧ್ಯವೇ?

ಕ. ನಿ.

ಮಾರಾಟಕ್ಕಿದೆ.

ವೀರಾಜಪೇಟೆನಾಡು ನೈತಾಡಿ ಗ್ರಾಮದ ಒಕ್ಕಲಿಗರ ನಿಂಗೇಗೌಡ್ರ ಮಗ ದೇವಣ್ಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕುಳ ನಂ. 38ರ ಸಾಗಿನ ಸ. ನ. 150/1ರ 16.70 ಎಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ತೆ ತೋಟದ 3. 90 ಯೇಕ್ರ್ಯದ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕಿತ್ತೆ ತೋಟದ .80 ಸೆಂಟಿನ ಪೈಕಿ 64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಎಕ್ರೆಯ ಬಾಣೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯಸ್. ದೇವಣ್ಣ,
ನೈತಾಡಿಗ್ರಾಮ,
12–6 ಮೂರ್ನಾಡು.

ಡನ್ಮಾರ್ಕನ್ನು ತನ್ನ ಅಂಕೆಯಲ್ಲಿ ತಂದು ನಾರ್ವೆಗೆ ಜರ್ಮನಿಯು ನುಗ್ಗಿದೆಯಷ್ಟೆ. ನಾರ್ವೆಯ ಸ್ವತಂತ್ರಪ್ರಿಯ ವೀರಯೋಧರು ಈ ಜರ್ಮನರ ಮುನ್ನಡೆಯನ್ನು ತಡೆಯುತ್ತಿರುವರು. ಬ್ರಿಟಿಷರ ಹಾಗೂ ಫ್ರಾನ್ಸಿನ ಸಹಾಯವು ನಾರ್ವೆಗೆ ದೊರೆತಿರುವುದರಿಂದ ಆದ ಪ್ರಯುಕ್ತ ನಾರ್ವೆಯೇ ಮುಂದಿನ ಸುರ್ವತ್ರಿಕ ಯುದ್ಧರಂಗವಾಗಬಹುದು.

ಯುದ್ಧ ವಾರ್ತೆ.

ನಾರ್ವೆ ಕದನ.

- ಜರ್ಮನರ ನುಗ್ಗಾಟ!
- ಬಾಂಬುಗಳ ಹಾವಳಿಯು ವಿಹಂಗಮ ನೋಟ!!
- ನಾಗರೀಕ ಪ್ರಜೆಗಳ ಹೃದಯವಿದ್ರಾವಕ ಸಂಕಟ!!!

ನಾರ್ವೆಯ ಸಿದ್ಧತೆ.

ಜರ್ಮನರನ್ನು ತಡೆಗಟ್ಟಲು ನಾರ್ವೆಯು ಪ್ರಚಂಡ ಪ್ರಯತ್ನ ಮಾಡುತ್ತಿದೆ. ಹದಿನೈದು ವಯಸ್ಸಿಗೆ ಮೇಲ್ಪಟ್ಟವರನ್ನೆಲ್ಲಾ ಅದು ಸೈನ್ಯಕ್ಕೆ ಸೇರಿಸಿದೆ. ಓಸ್ಲೋ ನಾರ್ವಿಕ್ ಎಂಬಲ್ಲಿ ಯುದ್ಧ ನಡೆಯುತ್ತಿದೆ. ವಿಮಾನಗಳ ಪ್ರಚಂಡ ಬಾಂಬಿನ ಆಘಾತದಿಂದ ಇಲ್ಲಿ ಅನೇಕ ನಷ್ಟವು ಸಂಭವಿಸಿದೆ. ರಷ್ಯಾ, ಫಿನ್‌ಲೆಂಡ್, ಹಾಗೂ ಜರ್ಮನಿ ಪೋಲೆಂಡು ಯುದ್ಧಗಳಲ್ಲಿ ಆದ ಅನಾಹುತಕ್ಕಿಂತಲೂ ಹೆಚ್ಚಿನ ಹಾನಿಯನ್ನು ಇಲ್ಲಿ ಜರ್ಮನರು ಮಾಡಿರುವರು. ಸ್ವೀಡನ್ನಿನಲ್ಲಿ ನಾಗರೀಕರ ಮೇಲೆ ಜರ್ಮನರು ಬಾಂಬು ಹಾಕಿಗರೆಯುತ್ತಿರುವರು. ಸಹಸ್ರಾರು ಸಂತ್ರಸ್ತ ಪ್ರಜೆಗಳು ಚಿಂತಾಕ್ರಾಂತರಾಗಿರುತ್ತಾರೆ. ಜರ್ಮನರ ಈ ಅಮಾನುಷ ವರ್ತನೆಯನ್ನು ಸ್ವೀಡನ ಸರಕಾರವು ಬಲವಾಗಿ ಪ್ರತಿಭಟಿಸಿದೆ. ಜರ್ಮನರು ಮುಂದರಿಯುತ್ತ ನಾರ್ವೆಯ ರಾಜಧಾನಿಯಿಂದ ಓಸ್ಲೋವಿನ ಮಾರ್ಗವಾಗಿ ಸ್ವೀಡನ್ ಗಡಿಯ ಕಡೆ ಧಾವಿಸುತ್ತಿದ್ದಾರೆ. ನಾರ್ವೆಯನರು ಅವರನ್ನು ತೀವ್ರವಾಗಿ ತಡೆಗಟ್ಟುತ್ತಿದ್ದಾರೆ. ಸಾವಿರಾರು ನಾರ್ವೆಯನರು ಇದಕ್ಕಾಗಿ ಪ್ರಾಣ ತೆತ್ತಿದ್ದಾರೆ. ರಣರಂಗವು ಇಲ್ಲಿ ಭೀಕರ ರೂಪವನ್ನು ತಾಳಿದೆ.

ಜರ್ಮನರ ಪೆರಚೂಟ್ ಪಡೆ.

ಜರ್ಮನರು ಅಸಂಖ್ಯಾತರಿಂದ ನಾರ್ವೆಗೆ ನುಗ್ಗುತಿದ್ದಾರೆ. ಅವರ ಪರಚ್ಯೂಟ್ ಪಡೆ (ಅಂದರೆ ಅಂತರಿಕ್ಷದಿಂದ ಯುದ್ಧ ಮಾಡುತ್ತಿರುವಾಗ ಕೊಡೆಯೊಂದರ ಸಹಾಯದಿಂದ ಭೂಮಿಗಿಳಿದು ನೆಲಕದನವನ್ನೂ ಮಾಡಬಲ್ಲ ಪಡೆ)ಯೊಂದು ಇದೀಗ ನಾರ್ವೆಯಲ್ಲಿ ಬಂದು ಇಳಿದಿರುವದಾಗಿ ನಾರ್ವೆ ಪ್ರಕಟಣೆಯು ತಿಳಿಸುತ್ತದೆ.

ಜರ್ಮನರ ಜಯ.

ಜರ್ಮನರು ತೀವ್ರವಾಗಿ ಮುಂದಡಿಯಿಡುತ್ತಿರುವರು. ಕೋಯೆನಿಸಿಂಗರ್ ಎಂಬ ಪಟ್ಟಣವನ್ನು ಜರ್ಮನರು ಮುತ್ತಿರುವರು. ಜರ್ಮನರ ಹಾವಳಿಯಿಂದ ಇಲ್ಲಿಯ ಜನರು ನಿಸ್ತೇಜರಾಗಿರುವರು. ಈ ಪಟ್ಟಣವು ಒಡನೇ ಜರ್ಮನರ ವಶವಾಗಬಹುದೆಂದು ಊಹಿಸಲಾಗಿದೆ. ಜರ್ಮನರು ಹೀಗೆ ಮುಂದರಿಯುತ್ತಿದ್ದರೂ ಅವರಿಗೆ ಆಹಾರದ ಅಭಾವವಾಗುತ್ತಿದೆ. ವಿಮಾನಗಳಿಗೆ ಬೇಕಾದ ಎಣ್ಣೆ, ಕೌದಿಗಳೆಲ್ಲ ಬೆ ಎರಡು ವಿಮಾನಗಳು ಹಟಾತ್ತಾಗಿ ಕೆಳಗಿಳಿಯಬೇಕಾಯಿತಂತೆ.

೨೦೦೦ ನಾರ್ವೆಯನರು ಶರಣಾಗತರಾದರು.

ಕ್ರಿಸ್ಟಿಯನ್‌ಸೇಂಡ್ ಪ್ರಾಂತದಲ್ಲಿ ೨೦೦೦ ದ್ವಿಸಕರ ಒಂದು ಪಡೆಯು ಜರ್ಮನ ಸೈನ್ಯಕ್ಕೆ ಶರಣು ಹೋಗಿದೆಯೆಂದು ಜರ್ಮನರ ಹೇಳಿಕೆ.

ನಾರ್ವೆ ಅರಸರ ಘೋಷಣೆ.

ನಾರ್ವೆಯ ಅರಸರಾದ ಹಾಕನ್‌ರವರು ಒಂದು ಘೋಷಣೆಯನ್ನು ಹೊರಡಿಸಿ ಈ ರೀತಿ ಹೇಳಿರುವರು. 'ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಪ್ರತಿಯೊಬ್ಬ ನಾರ್ವೆಯನನೂ ತನ್ನ ಪ್ರಾಣವನ್ನಿತ್ತಾದರೂ ಪ್ರಾಣವಾಗಿ ಕಾದು ಯುದ್ಧ ಮಾಡಬೇಕಿದೆ. ಇಂದು ನಾವು ಜಗತ್ತಿನಲ್ಲೇ ಅತ್ಯಂತ ಕ್ರೂರವಾಸಿಸಿದ ಶಾತ್ರವ ಸರಕಾರದ ಉಪಟಳಕ್ಕೆ ಸಿಲುಕಿರುವೆವು. ಈ ಕ್ರೂರ ವೈರಿಯಿಂದ ನಾಡನ್ನು ರಕ್ಷಿಸಿಕೊಳ್ಳುವದು ಬೇಕಿದೆ. ಇಂದು ಜರ್ಮನರ ಅತ್ಯಾಚಾರಕ್ಕೊಳಗಾಗಿರುವ ಇಲ್ಲಿಯ ಜನ ಜಂಗುಳಿಯ ಸ್ಥಿತಿಯನ್ನು ಯೋಚಿಸಿದರೆ ಕಣ್ಣೀರು ಬರುತ್ತದೆ. ಜರ್ಮನಿಯ ಈ ಪೈಶಾಚಿಕ ಕೃತ್ಯಗಳಿಂದಾಗಿ ಇಂದು ನಿಮ್ಮ ಮುಂದಿರುವ, ನಿಮ್ಮ ಅರಸನಾಗಿರುವ ನಾನು ನಾಳೆ ಎಲ್ಲಿರುವೆನು, ಏನಾಗುವೆನು ಎಂದು ಹೇಳಲಾಗುವದಿಲ್ಲ.'

ನಾರ್ವೆ ಸರಕಾರದ ಹೇಳಿಕೆ.

ನಾರ್ವೆ ಸರಕಾರವು ತನ್ನ ಪ್ರಜೆಗಳಿಗೆ ಈ ರೀತಿಯ ಒಂದು ಹೇಳಿಕೆಯನ್ನು ಕೊಟ್ಟಿದೆ. 'ಯುದ್ಧ ಪ್ರಾರಂಭವಾದೊಡನೇ ಮಿತ್ರರಾಷ್ಟ್ರಗಳಾದ ಬ್ರಿಟನ್ ಫ್ರಾನ್ಸಗಳು ನಮಗೆ ಸಹಾಯ ನೀಡುತ್ತಿವೆ. ಅವರ ಸೈನ್ಯ ಸಾಹಿತ್ಯಗಳಿಂದಾಗಿ ನಮಗೆ ಹುರುಪು ಬಂದಿದೆ. ಜರ್ಮನರ ಕೈವಶವಾಗಿದ್ದ ನಾರ್ವಿಕ್ ಪಟ್ಟಣವು ಪುನಹ ನಮ್ಮ ಕರಗತವಾಗಿರುವದು ನಮಗೆ ಮತ್ತಷ್ಟು ಧೈರ್ಯಕೊಡುತ್ತಿದೆ. ಆದ್ದರಿಂದ ಜರ್ಮನರಿಗೆ ಶರಣಾಗತರಾಗುವ ಯೋಚನೆ ನಮಗಿಲ್ಲ. ಅವರನ್ನು ಎದುರಿಸಿ ಬಗ್ಗು ಬಡಿಯುವ ಪ್ರಯತ್ನ ಮಾಡಬೇಕಿದೆ.'

ನಾರ್ವೆಯಲ್ಲಿ ಮಿತ್ರ ರಾಷ್ಟ್ರಗಳ ಸೈನ್ಯ:

ಬ್ರಿಟಿಷ್ ಮತ್ತು ಫ್ರಾನ್ಸಿನ ಸೈನ್ಯಗಳು ನಾರ್ವೆಯ ಹಲವು ಭಾಗಗಳಲ್ಲಿ ಬಂದಿಳಿದಿವೆ. ಜರ್ಮನರು ವಶಪಡಿಸಿಕೊಂಡಿದ್ದ ನಾರ್ವಿಕ ಪಟ್ಟಣವನ್ನು ಬ್ರಿಟಿಷ್ ಯೋಧರು ಪುನಹ ವಶಪಡಿಸಿಕೊಂಡಿರುವರು. ಬ್ರಿಟಿಷ್ ಸೈನ್ಯಗಳು ನಾರ್ವೆಯ ಹಲವು ಭಾಗಗಳಲ್ಲಿ ಬಂದಿಳಿದಿರುವವೆಂದು ತಿಳಿದು ಬಂದಿದೆ. ಬ್ರಿಟಿಷರು ನಾರ್ವೆಯಲ್ಲಿ ಬಂದಿಳಿದ ಸುದ್ದಿಯು ಸ್ವೀಡನ್ನಿನವರಲ್ಲಿ ಹುರುಪನ್ನು ಹುಟ್ಟಿಸಿದೆ.

ಜರ್ಮನರ ಹೇಳಿಕೆ.

'ಬ್ರಿಟಿಷರ ಸೈನ್ಯವಡೆಯು ವಿವಿಧ ಸ್ಥಳಗಳಲ್ಲಿ ಬಂದಿಳಿದಿರುವದು ನಿಜ. ಆದರೆ ಈ ವರೆಗ ಅವರು ಯಾವ ಜಯವನ್ನೂ ಪಡೆದಿಲ್ಲ.' ಎಂದು ಹೇಳಿರುವರು

ನಾರ್ವಿಕ್‌ನಲ್ಲಿ ನಷ್ಟ.

ಜರ್ಮನರ ವಶವಾಗಿದ್ದ ಈ ಪಟ್ಟಣವನ್ನು ಬ್ರಿಟಿಷರು ವಶಮಾಡಿಕೊಂಡಿರುವದರಿಂದ ಜರ್ಮನರಿಗೆ ಆಮದಾಗುತ್ತಿದ್ದ ಕಬ್ಬಿಣದಲ್ಲಿ ⅓ ಅಂಶವು ನಿಂತಂತಾಗಿದೆ. ಇದರಿಂದ ಜರ್ಮನರ ಯುದ್ಧೋಪಕರಣ ತಯಾರಿಗೆ ತೊಂದರೆ ಬಂದದೆ.

ಇಟಲಿಯ ಧೋರಣೆ.

ತಟಸ್ಥ ರಾಷ್ಟ್ರವಾಗಿದ್ದ ಇಟಲಿಯು ಈಗ ಎಚ್ಚೆತ್ತಂತೆ ಕಂಡುಬರುತ್ತಿದೆ. ಇಟಲಿಯ ಹಡಗು ಪಡೆಯು ಸುಸಜ್ಜಿತವಾಗಿ ಓಡಾಡತೊಡಗಿವೆ. ಮಿತ್ರರಾಷ್ಟ್ರಗಳಿಗೆ ಒಂದಿಡೆ ಎಚ್ಚರಿಕೆಯನ್ನು ಕೊಟ್ಟಿದೆ. ಜರ್ಮನಿಗೆ ಒಡನೆ ಸಹಾಯ ಕಳುಹಿಸುವ ಸಾಧ್ಯತೆ ಕಂಡುಬರುತ್ತಿದೆ.

ಸೀನಿಯರ್ ಗಯೊಡರ ಹೇಳಿಕೆ.

ಸೀನಿಯರ್ ಗಯೊಡರವರು, 'ಫ್ರಾನ್ಸು ಇಟಲಿಯ ಹಿತಕ್ಕೆ ವಿರೋಧ ಮಾಡುತ್ತಿದೆ. ವರ್ಸೇಲ್ಸ್ ಒಪ್ಪಂದದ ನಂತರ ಈ ವರೆಗೂ ಫ್ರಾನ್ಸು ಅದೇ ಧೋರಣೆಯಿಂದ ವರ್ತಿಸುತ್ತಿದೆ. ಇಟಲಿಗಿಂತಾ ದುರ್ಬಲವಾದ ಫ್ರಾನ್ಸು ಇಟ್ಲಾಂಟಿಕ್ ಹಾಗೂ ಮೆಡಿಟರೇನಿಯನ್ ಸಮುದ್ರಗಳಲ್ಲಿ ಕಾರ್ಯ ಮಾಡುವ ಸವಲತ್ತನ್ನು ಪಡೆದಿದೆ. ಆದರೆ ಬಲಶಾಲಿಯಾದ ಇಟಲಿಯು ಮಾತ್ರ ಮೆಡಿಟರೇನಿಯನ್ ಸಮುದ್ರವನ್ನೇ ನಂಬಿಕೊಂಡಿರಬೇಕಾಗಿದೆ. ಇಂಥಾ ಪ್ರಾಮುಖ್ಯ ಸವಲತ್ತುಗಳು ಇಟಲಿಗಾದರೂ ಬೇಕಾಗಿದೆ.' ಎಂದಿರುವರು.

OFFICE OF THE ELECTION OFFICER.

Mercara, the 12th April 1940

NOTICE.

Under Rule 20 of the Chief Commissioner's Notification No 146 dated 17th November 1936.

As the term of office of the present Mercara Municipal Committee expires on 15-5-1940, it is hereby notified for general information that twelve members shall be elected by the several constituencies as set forth below:-

(1) One member by the Christian Constituency.

(2) Three members by the Coorg Constituency.

(3) Six members by the Constituency consisting Hindus and others, and

(4) Two members by the Mahamadan Constituency.

Intending Candidates should present their nomination papers to the Election Officer between the hours of eleven (11) A. M. and four (4) P. M. on the 24th April, 1940 at the Municipal Office, Mercara.

The nomination papers will be taken up for scrutiny by the Election Officer at four thirty (4-30) P. M. on the 24th instant at the Municipal Office.

If the number of Candidates exceeds that of the vacancies, the poll will be taken between the hours of 7-30 A. M. to 1 P. M. and 2 P. M. to 5 P. M. at the Mercara Municipal Office on 14th May 1940.

K. NarasimhaMurti,
Election Officer.
Mercara Municipality.

Coorg Civil Surgeon's Office
Mercara, the 16th April '40.

WANTED.

Applicants are required for training as Health Visitor to be employed in Coorg Health Department. Starting Rs. 60 per mensem.

Applicants must have S. S. L. C., or equivalent qualification and a registrable midwifery certificate.

G. P. Charlewood.
Captain, I. M. S.
Civil Surgeon, Coorg.

ಕೊಡಗು

ಏಪ್ರಿಲ್ ತಾರೀಕು ೧೯ ನೇ ಶುಕ್ರವಾರ ೧೯೪೦.

ಭಾರತ ವಿಭಜನಾ ದಿನಾಚರಣೆ?

ಮುಸ್ಲಿಂ ಲೀಗಿನ ಅಧ್ಯಕ್ಷರಾಗಿರುವ ಮಿ. ಮಹಮ್ಮದಾಲಿ ಜಿನ್ನಾರವರು ಅಂದೊಮ್ಮೆ ಕಾಂಗ್ರೆಸ್ ಸರ್ಕಾರಗಳಿಂದ ತಾವು ಬಿಡುಗಡೆ ಹೊಂದಿದೆವೆಂಬ ಸಂತೋಷ ಪ್ರದರ್ಶನಾರ್ಥವಾಗಿ 'ಬಂಧ ವಿಮೋಚನಾ ದಿನ'ವನ್ನು ಆಚರಿಸಲು ತಮ್ಮ ಅನುಯಾಯಿಗಳಿಗೆ ಹೇಳಿ ತಮ್ಮ ಮನಸಿನ ಭಾವನೆಯ ನಗ್ನ ಸ್ವರೂಪವನ್ನು ತೋರಿಸಿದರು. ಇಂದಾದರೂ ಅವರು ಮತ್ತೊಂದು ಅಗಾಧ ಕಾರ್ಯಕ್ರಮಕ್ಕೆ ಕೈಯಿಕ್ಕಿದಂತೆ ಕಂಡು ಬರುತ್ತದೆ. ಈ ದಿನ (ತಾ. 19) ವನ್ನು ಅವರು ಹಿಂದೂಸ್ಥಾನದ ವಿಭಜನಾ ದಿನವೆಂದು ಆಚರಿಸಬೇಕೆಂದು ತಮ್ಮ ಹಿಂಬಾಲಕರಲ್ಲಿ ನಿವೇದಿಸಿಕೊಂಡಿರುವರು. ಇದು ದೇಶದಲ್ಲಿ ಕ್ಷೋಭೆಯನ್ನುಂಟುಮಾಡುವಂಥಾ ಕಾರ್ಯ ಮಾತ್ರವೇ ಅಲ್ಲ, ಅನೇಕ ವರ್ಷಗಳಿಂದ ಹಿಂದು ಮುಸ್ಲಿಮರು ಐಕ್ಯತೆಯಿಂದ ಸಂಘಟಿತರಾಗಿ ಭಾರತ ಭಾಗ್ಯಾಕಾರದ ಅಡಿಯಲ್ಲಿ ನಲಿದು ಬಾಳಬೇಕೆಂದು ಪ್ರಯತ್ನಿಸಿದ ಅನೇಕಾನೇಕ ಹಿಂದೂ ಮುಸ್ಲಿಂ ಮುಖಂಡರ ಪ್ರಯತ್ನದ ಬುಡಕ್ಕೆ ಕೊಡಲಿ ಹಾಕುವ ವರ್ತನೆ ಇದಾಗಿದೆ. ಲಾಹೋರಿನಲ್ಲಿ ನಡೆದ ಮುಸ್ಲಿಂ ಲೀಗ್ ಸಭೆಯಲ್ಲಿ ಅಂಗೀಕರಿಸಿರುವ, ಭಾರತವನ್ನು ಹಿಂದೂ ಮತ್ತು ಮುಸ್ಲಿಂ ಭಾರತಗಳೆಂದು ವಿಂಗಡಿಸಬೇಕೆಂಬ ಠರಾವನ್ನು ಈ ವಿಭಜನಾ ದಿನಾಚರಣೆಯ ಸಭೆಗಳಲ್ಲಿ ಓದಿ ಜನತೆಗೆ ವಿವರಿಸಬೇಕೆಂದೀಗ ಜಿನ್ನಾರವರ ಈ ವ್ಯರ್ಥಾಲಾಪ. ಇದಕ್ಕೆ ರಾಷ್ಟ್ರೀಯತಾ ಭಾವನೆಯ ಮುಸ್ಲಿಮರು ಸರಿಯಾದ ಉತ್ತರವನ್ನಿತ್ತಿರುವರು. ಇವರು ಜಿನ್ನಾರವರ ವಿಭಜನಾ ದಿನಾಚರಣೆಗೆ ವಿರೋಧವಾಗಿ ಅಖಿಲಭಾರತ ಒಗ್ಗಟ್ಟು ದಿನಾಚರಣೆಯನ್ನು ಅದೇ ದಿನ ಆಚರಿಸಿ ಅದಕ್ಕೆ ವಿರೋಧ ಪ್ರದರ್ಶಿಸಿ ಈ ವಿಭಜನಾ ಸಮಸ್ಯೆಯು ಭಾರತ ವ್ಯಕ್ತಿತ್ವಕ್ಕೆ ಧಕ್ಕೆ ತರುವಂಥಾದ್ದೆಂದು ಜನತೆಯಲ್ಲಿ ಪ್ರಚಾರ ಮಾಡಲು ನಿಶ್ಚಯಿಸಿರುವರು. ಲಾಹೋರಿನಲ್ಲಿ ಪಾಸಾದ ಆ ಠರಾವನ್ನು ಈ ವರೆಗೆ ಅನೇಕ ಮುಸ್ಲಿಮರು ಟೀಕಿಸಿ ಅದು ಕೇವಲ ಮುಂದಾಲೋಚನೆಯಿಲ್ಲದ ಹಾಗೂ ಬೇಜವಾಬ್ದಾರಿಯ ವರ್ತನೆಯೆಂದು ಹೇಳಿರುವರು. ಜಿನ್ನಾರವರು ತಾನು ಹೇಳಿದಂತೆ ತನ್ನ ಅನುಯಾಯಿಗಳು ವರ್ತಿಸುತ್ತಿರುವರೆಂಬ ಭಾವನೆಯಿಂದ ಇಂಥಾ ಅಯೋಗ್ಯ ಹಾಗೂ ಹಾನಿಕಾರಕ ವಿಚಾರಗಳ ಆಚರಣೆಯ ಬಗ್ಗೆ ಅವರನ್ನು ಪ್ರೇರೇಪಿಸುತ್ತಿರುವರು. ಜಿನ್ನಾರವರ ಇಂಥಾ ವರ್ತನೆಯೇ ಅವರಿಗೆ ದಿನೇ ದಿನೇ ವಿರೋಧಿಗಳನ್ನು ಹೆಚ್ಚಿಸುತ್ತಿದೆ. ಸಿಕ್, ಕ್ರಿಶ್ಚಿಯನ್ ಮತ್ತು ಹಿಂದುಗಳೇ ಅಲ್ಲ ಮುಸ್ಲಿಮರೊಳಗಿನ ಅನೇಕ ಪ್ರಾಮುಖ್ಯ ಪಕ್ಷಗಳೇ ವಿರೋಧಿಸುತ್ತಿರುವರು. ಜಿನ್ನಾರವರ ಧೋರಣೆಯು ಅರಾಷ್ಟ್ರೀಯವೆಂದು ಸಾರುತ್ತಿರುವರು. ಮುಸ್ಲಿಂ ಲೀಗಿನ ಅಧ್ಯಕ್ಷರು ಮಾತ್ರ ಈ ವಿಚಾರಗಳನ್ನು ಮನಸಿಗೆ ಹಚ್ಚಿಕೊಂಡಂತಿಲ್ಲ. ಅಲ್ಪ ಪಕ್ಷೀಯರಾದ ಮುಸ್ಲಿಮರನ್ನು ಬಹು ಪಕ್ಷೀಯರಾದ ಹಿಂದುಗಳು ಕಾಂಗ್ರೆಸೆಂಬ ಹೆಸರಿನಿಂದ ಸುಲಿಗೆ ಮಾಡುತ್ತಿರುವರೆಂಬುದೇ ಜಿನ್ನಾರವರ ಪ್ರಲಾಪ. ಆದಕ್ಕಾಗಿಯೇ ಅವರ ಈ ಭಾರತ ವಿಭಜನಾ ಯೋಜನೆ. ಜಿನ್ನಾರವರ ಈ ವಿಚಾರಗಳನ್ನು ಆಲೋಚಿಸಿದರೆ ತಿರುಳಿಲ್ಲದ ಅವರ ಮಾತಿನ ಮಿಥ್ಯಾಚರ್ಯೆಯು ಒಡೆದು ಕಾಣುವದು. ಬಹುಮತದಲ್ಲಿರುವ ಹಿಂದೂಗಳಿಂದ ಹೆಚ್ಚಿನ ಸೌಕರ್ಯಗಳನ್ನು ಪಡೆದು ಹಿಂದೂ ಜನಾಂಗದ ಮೇಲೆ ಅಲ್ಪ ಪಕ್ಷವಾದ ಮುಸ್ಲಿಂ ಲೀಗು ತನ್ನ ಕೈವಾಡವನ್ನು ತೋರಿಸಬೇಕೆಂಬುದು ಜಿನ್ನಾರವರ ಇಚ್ಛೆ ಇರಬಹುದು. ಆದ ಪ್ರಯುಕ್ತವೇ ಭಾರತದ ಏಕಮೇವ ರಾಜಕೀಯ ಸಂಸ್ಥೆಯಾಗಿರುವ ಕಾಂಗ್ರೆಸ್ ಹಾಗೂ, ಪಾರ್ಟಿ ಪಂಗಡಗಳಿಗೆ ಮೀರಿದ ಪೂಜ್ಯ ಗಾಂಧೀಜಿಯವರು - ಮುಸ್ಲಿಮರಿಗೆ ನ್ಯಾಯವಾಗಿ ಸಲ್ಲತಕ್ಕ ಹಕ್ಕು ಬಾಧ್ಯತೆಗಳು ಸಲ್ಲಿಸಲ್ಪಡುವವು; ಆ ಬಗ್ಗೆ ಮುಸ್ಲಿಮರು ಕಾತುರಗೊಳ್ಳುವದು ಬೇಡವೆಂದು ಸಾರಿ ಹೇಳುತ್ತಿದ್ದರೂ ಜಿನ್ನಾರವರು ತಮ್ಮ ಅಸಹ್ಯ ವರ್ತನೆಯನ್ನು ತೋರಿಸುತ್ತಿರುವದು ಎಂದೂ ಶೋಭಿಸುವಂಥಾದ್ದಲ್ಲ. ಇರಲಿ, ಜಿನ್ನಾರವರ ಯೋಜನೆಯಂತೆಯೇ ಭಾರತವನ್ನು ವಿಭಾಗಿಸಿದರೂ ಅಲ್ಪ ಸಂಖ್ಯಾಕ ಹಾಗೂ ಬಹು ಸಂಖ್ಯಾಕರ ಸಮಸ್ಯೆ ಬಗೆಹರಿಯುವದೇನು? ಪ್ರತಿ ಜನಾಂಗಗಳಲ್ಲಿಯೂ ಈ ರೀತಿಯ ಭಾವನೆಯು ಬಂದರೆ ಇಡೀ ಭಾರತವು ನುಚ್ಚುನೂರಾಗಿ ಹರಿದು ಹಂಚಿಹೋಗುವುದಿಲ್ಲವೇ? ಜಿನ್ನಾರವರ ವಿಭಜನಾ ಸೂಚನೆಯು ರಾಷ್ಟ್ರ ವಿಘಾತವೆಂದೇ ಹೇಳಬೇಕಾಗಿದೆ.

ಈ ರೀತಿಯಾಗಿ ತಪ್ಪು ದಾರಿಯಲ್ಲಿ ಕ್ರಮಿಸುತ್ತಿರುವ ಮುಸ್ಲಿಂ ಲೀಗಿನ ತತ್ವಗಳನ್ನು ಅನೇಕ ಮುಸ್ಲಿಂ ಮುಖಂಡರು ಖಂಡಿಸುತ್ತಿರುವರು. ಅಲ್ಪಸಂಖ್ಯಾಕರ ಸಮಸ್ಯೆಯು ಬಗೆ ಹರಿಯಬೇಕಾದರೆ ಭಾರತವನ್ನು ವಿಭಜಿಸುವದರಿಂದಾಗದು. ನಾವು ಹಿಂದುಗಳು, ನಾವು ಮುಸ್ಲಿಮರೆಂಬ ಭೇದಭಾವವನ್ನಿಟ್ಟುಕೊಂಡು ವರ್ತಿಸಿದರಾಗದು. ಎಲ್ಲರೂ ಐಕ್ಯತೆಯಿಂದ ವರ್ತಿಸಬೇಕಿದೆ. ಅದ್ದರಿಂದ ಮಿಶ್ರ ಚುನಾವಣೆ (ಜಾಯಿಂಟ್ ಇಲೆಕ್ಟೋರೇಟ್) ಯೊಂದೇ ಈ ಸಮಸ್ಯಾ ಪರಿಹಾರಕ್ಕಿರುವ ದಾರಿಯೆಂಬದಾಗಿ ಸರ್ ಗುಲಾಂ ಹುಸೇನ್ ಮತ್ತು ಸರ್ ಸುಲ್ತಾನ್ ಅಹ್ಮದ್ ಮೊದಲಾದ ಮುಖಂಡರು ಉದ್ಗರಿಸಿರುವರು. ಆದ್ದರಿಂದ ಮುಸ್ಲಿಂ ಲೀಗಿನ ಹೊಸ ಕಾರ್ಯಕ್ರಮವಾದ ಭಾರತ ವಿಭಜನೆಯು ಅವರಿಗೆ ಹೆಚ್ಚಿನ ವಿರೋಧಿಗಳನ್ನು ಕಲ್ಪಿಸಿ ಕೊಡುವದೇ ವಿನಹ ಬೇರೆ ಪ್ರಯೋಜನವೇನೂ ಅದರಿಂದಾಗಲಿಕ್ಕಿಲ್ಲ.

ಅಂತು ಮುಸ್ಲಿಂ ಲೀಗಿನ ಅಧ್ಯಕ್ಷರು ಪರದೇಶೀ ಸರ್ಕಾರದ ಬವಣೆಗೆ ಸಿಲುಕಿಯೋ ಅಥವಾ ಮತ್ತಾವ ಕಾರಣದಿಂದಲೋ ತನ್ನ ಈ ವರೆಗಿನ ಕಾರ್ಯಕ್ರಮಗಳನ್ನು ಬದಿಗಿರಿಸಿ, ಅಸಾಧ್ಯ ಕಾರ್ಯಗಳಿಗೆ ಕೈಯಿಕ್ಕಿ ಮನುಷ್ಯನಾದರೂ ರೆಕ್ಕೆ ಕಟ್ಟಿ ಆಕಾಶದಲ್ಲಿ ಹಾರಬೇಕೆಂಬ ಕಾಂಕ್ಷೆಯಿಂದಿರುವಂತೆ ಕಂಡು ಬರುತ್ತದೆ. ಮುಸ್ಲಿಂ ಲೀಗನ್ನಾದರೂ ಜಿನ್ನಾರವರು ಅಂತರಿಕ್ಷದಲ್ಲಿ ಕೊಂಡೊಯ್ಯಬಯಸುತ್ತಿದ್ದಾರೆ. ಆದರೆ ಅವರು ತಮ್ಮ ಕೃತ್ರಿಮ ರೆಕ್ಕೆಯ ಸಹಾಯದಿಂದ ಅಂತರಿಕ್ಷದಲ್ಲಿ ನೆಗೆಯುವ ಕಾಲಕ್ಕೆ ತಮ್ಮ ಕಾಲಡಿಯಲ್ಲಿಯ ನೆಲವ ಹಿಡಿತ ತಪ್ಪೀತೆಂಬುವುದನ್ನು ಅವರು ಜ್ಞಾಪಕದಲ್ಲಿಡಬೇಕಿದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ.

ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ತಾರೀಕು 15ರಿಂದ ವರ್ಧಾದಲ್ಲಿ ಸೇರಿದೆ. ಇಂದು ನಮ್ಮ ಮುಂದಿರುವ ಬಿಕ್ಕಟ್ಟಿನ ಸಮಸ್ಯೆಗಳ ವಿಚಾರದ ಬಗ್ಗೆ ಅನೇಕ ರಾಜಕೀಯ ಮುಖಂಡರೂ ಮೀಟಿಂಗಿಗೆ ಆಹ್ವಾನಿಸಲ್ಪಟ್ಟಿದ್ದಾರೆ. ಗಾಂಧೀಜೀಯವರು ಮೀಟಿಂಗಿನಲ್ಲಿ ಭಾಗವಹಿಸುತ್ತಿದ್ದಾರೆ.

ಈ ವರೆಗೆ ನಡೆದ ಚರ್ಚೆಗಳಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನಲ್ಲಿ ಹೊಂಗನದದ್ದೊಂದು ಸತ್ಯಾಗ್ರಹೀ ಶಾಖೆಯನ್ನು ತೆರೆಯುವ ಮತ್ತು ಸತ್ಯಾಗ್ರಹಿಗಳ ತರಬೇತಿನ ಬಗ್ಗೆ ವಿಚಾರಿಸಿ ಎಲ್ಲಾ ಪ್ರಾಂತಗಳಲ್ಲೂ ಏಕರೀತಿಯ ತರಬೇತು ಕೊಡುವ ಬಗ್ಗೆ ಏರ್ಪಡಿಸುವ ವಿಚಾರಗಳು ಅಂಗೀಕೃತವಾಗಿವೆ. ಸತ್ಯಾಗ್ರಹದ ಮುಂದಿನ ಹೆಜ್ಜೆಯಾಗಿ ಸ್ಥಳೀಕ ಸಂಸ್ಥೆಗಳಲ್ಲಿರುವ (ಬಹುಮತವಿಲ್ಲದ) ಕಾಂಗ್ರೆಸ್ ಸದಸ್ಯರು ರಾಜಿನಾಮೆ ಕೊಡಬೇಕೆಂಬ ಸೂಚನೆಯು ಈ ಮೀಟಿಂಗಿನಲ್ಲಿ ಅಂಗೀಕರಿಸಲ್ಪಟ್ಟಿಲ್ಲ. ಮೀಟಿಂಗು ಇನ್ನೂ ನಡೆಯುತ್ತಲೇ ಇದೆ. ಮಹತ್ವದ ವಿಚಾರಗಳ ಚರ್ಚೆ ಆಗಲಿದೆ. ಇದು ಮುಂದಿನ ವಾರ ಪ್ರಕಟಿಸಲ್ಪಡುವದು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ.

ಸತ್ಯಾಗ್ರಹ ಶಿಬಿರ ಹಾಗೂ ಪ್ರತಿಜ್ಞೆ.

ಪರಿಪತ್ರ ನಂಬರು ೨.

ಈಗ ಅನಿವಾರ್ಯವಾಗಿ ರಾಷ್ಟ್ರಕ್ಕೆ ಸತ್ಯಾಗ್ರಹ ಯುದ್ಧವನ್ನು ಹೂಡಲೇಬೇಕಾಗುವ ಪ್ರಸಂಗ ಒದಗುವಂತಾಗಿದೆ. ಎಂದು ತೋರುತ್ತಿರುವದರಿಂದ ಎಲ್ಲ ಕಾಂಗ್ರೆಸ್ ಕೆಲಸಗಾರರು ಈ ವಿಷಯದಲ್ಲಿ ಹೆಚ್ಚು ಲಕ್ಷ್ಯವುಳ್ಳವರಾಗಿ ಇರಬೇಕಾಗಿದೆ. ಮತ್ತು ಆ ಸಂಬಂಧವಾಗಿ ದಕ್ಷತೆಯಿಂದ ಇಂದಿನಿಂದಲೇ ಎಲ್ಲರೂ ಆ ಕಾರ್ಯದಲ್ಲಿ ನಿರತರಾಗಿರುವದು ಅವಶ್ಯವಾಗಿದೆ. ಆದ್ದರಿಂದ ಈ ಸಂದರ್ಭದಲ್ಲಿ ನಾವು ತೆಗೆದುಕೊಳ್ಳಬೇಕಾದ ಸತ್ಯಾಗ್ರಹ ಪ್ರತಿಜ್ಞೆ ಹಾಗು ಪ್ರಾರಂಭಿಸಬೇಕಾದ ಸತ್ಯಾಗ್ರಹ ಶಿಬಿರಗಳ ವಿಷಯವಾಗಿ ಈ ಕೆಳಗೆ ಕೆಲ ಮಾಹಿತಿ ಕೊಡಲಾಗಿದೆ. ಇದನ್ನು ಎಲ್ಲ ಕಾಂಗ್ರೆಸ ಸಮಿತಿಗಳು ಕಾರ್ಯರೂಪದಲ್ಲಿ ತರುವದಕ್ಕಾಗಿ ಮನಃಪೂರ್ವಕ ಪ್ರಯತ್ನಿಸಬೇಕಾಗಿ ಬಿನ್ನಹ.

ಸತ್ಯಾಗ್ರಹಿಯ ಪ್ರತಿಜ್ಞೆ.

ಈಗ ಸತ್ಯಾಗ್ರಹಿಯ ಪ್ರತಿಜ್ಞಾಪತ್ರದ ಪ್ರತಿಗಳನ್ನು ಮುದ್ರಿಸಿ ಎಲ್ಲ ಜಿಲ್ಲಾ ಕಾಂಗ್ರೆಸ ಸಮಿತಿಗಳ ಕಡೆಗೆ ಕಳಿಸಿಕೊಡಲಾಗಿದೆ. ಎಲ್ಲ ಕಾಂಗ್ರೆಸ ಸಮಿತಿಗಳು ಸತ್ಯಾಗ್ರಹ ಸಮಿತಿಗಳಾಗಬೇಕಾದ್ದರಿಂದ ಆಯಾ ಸಮಿತಿಗಳ ಅಧಿಕಾರಿಗಳು ಹಾಗೂ ಸದಸ್ಯರು ಸತ್ಯಾಗ್ರಹಿಗಳಾಗಿ ಪ್ರತಿಜ್ಞಾಪತ್ರಕ್ಕೆ ಸಹಿ ಮಾಡಬೇಕಾಗುವದು. ಪ್ರತಿಜ್ಞೆಯಲ್ಲಿ ನಂಬಿಕೆ ಇದ್ದು ಸತ್ಯಾಗ್ರಹಿಗಳಾಗಲು ಇಚ್ಛೆ ಉಳ್ಳವರು ಈ ಪ್ರತಿಜ್ಞಾಪತ್ರದ ಮೇಲೆ ಸಹಿ ಮಾಡಬೇಕು. ಮತ್ತು ಸತ್ಯಾಗ್ರಹಿಗಳಾದವರು ಆ ಪ್ರತಿಜ್ಞೆಯ ಪ್ರಕಾರ ತಾವು ನಿತ್ಯ ಮಾಡುವ ರಚನಾತ್ಮಕ ಕೆಲಸದ ಬಗ್ಗೆ ಡೈರಿ ಇಡಬೇಕು. ಕಾಂಗ್ರೆಸಿನ ನಾಲ್ಕಾಣೆ ಸದಸ್ಯರು ಈ ಪ್ರತಿಜ್ಞೆಯನ್ನು ತೆಗೆದುಕೊಳ್ಳಬಹುದು. ಕಾಂಗ್ರೆಸ ಸದಸ್ಯರಿಲ್ಲದವರು ಸತ್ಯಾಗ್ರಹಿಗಳಾಗಲಿಚ್ಛಿಸಿದರೆ ಕಾಂಗ್ರೆಸ ಸದಸ್ಯರಾಗಿಯೇ ಪ್ರತಿಜ್ಞೆ ತೆಗೆದುಕೊಳ್ಳಬೇಕು. ಕಾರಣ ಎಲ್ಲ ಕಾಂಗ್ರೆಸ ಸಮಿತಿಗಳು ಹೆಚ್ಚು ಸತ್ಯಾಗ್ರಹಿಗಳನ್ನು ಕೂಡಿಸುವ ಕಾರ್ಯವನ್ನು ಮಾಡಬೇಕು.

ಸತ್ಯಾಗ್ರಹ ಶಿಬಿರ.

ಪ್ರತಿಯೊಂದು ತಾಲೂಕಿನಲ್ಲಿ ಶಕ್ಯವಾದ ಮಟ್ಟಿಗೆ ಎಷ್ಟು ಆಗಲಿ ಸತ್ಯಾಗ್ರಹ ಶಿಬಿರಗಳನ್ನು ಪ್ರಾರಂಭಿಸಬೇಕು. ಈ ಶಿಬಿರಗಳು ಶಕ್ಯವಿದ್ದ ಮಟ್ಟಿಗಾದರೂ ಸರಿಯಾಗಿ ನಡೆಯುವಂತೆ ಏರ್ಪಾಡು ಮಾಡಬೇಕು. ಇಂಥ ಶಿಬಿರಗಳಲ್ಲಿ ನೂಲುವ ಕಾರ್ಯವನ್ನು ನಡೆಯಿಸುತ್ತ ಅಲ್ಲಿಯ ಸತ್ಯಾಗ್ರಹಿಗಳಿಗೆ ಕವಾಯತು, ವ್ಯಾಖ್ಯಾನ ಇತ್ಯಾದಿಗಳ ಮೂಲಕ ರಾಷ್ಟ್ರೀಯ ಶಿಕ್ಷಣ ಕೊಡುವಂತೆ ಮಾಡಬೇಕು. ಶಿಬಿರದಲ್ಲಿಯ ಜೀವನವು ತೀರ ಸಾದಾ ತರದ್ದಾಗಿ ಇರತಕ್ಕದ್ದು. ರಾಷ್ಟ್ರದ ಸಲುವಾಗಿ ಬೇಕಾದ ಕಷ್ಟನಷ್ಟಗಳನ್ನು ಉದ್ರೇಕಗೊಳ್ಳದೆ ಸಹಿಸಬೇಕಾಗುವದೆಂಬ ಬಗ್ಗೆ ವಿಚಾರ ವಿನಿಮಯವು ನಡೆಯಬೇಕು. ಸತ್ಯಾಗ್ರಹಿಗಳು ಮನನ ಮಾಡಬೇಕಾಗುವಂಥ ಮಹಾತ್ಮರ ಉಪದೇಶ ಇತ್ಯಾದಿಗಳನ್ನೊಳಗೊಂಡ ಬುಲೆಟಿನ್ನುಗಳನ್ನು ಎಲ್ಲ ಶಿಬಿರ ಸಮಿತಿಗಳಾದರೂ ಕಾಲಕಾಲಕ್ಕೆ ಪ್ರಾಂತೀಯ ಸಮಿತಿಯಿಂದ ಪೂರೈಸುವಂತೆ ಮಾಡುವದು. ಈ ಶಿಬಿರಗಳ ರಚನೆಯ ವಿಷಯದಲ್ಲಿ ಜಿಲ್ಲಾ ಸಮಿತಿಯವರು ಯೋಗ್ಯ ಮೇಲ್ವಿಚಾರಣೆ ಮಾಡುತ್ತಿರಬೇಕು.

ಕಾರ್ಯದ ವರದಿ.

ಪ್ರತಿಯೊಂದು ತಾಲೂಕಾ ಕಾಂಗ್ರೆಸ ಸಮಿತಿಯವರು ಸಹಿಯಾದ ಸತ್ಯಾಗ್ರಹಿ

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ.

ಯುದ್ಧದ ನಿಮಿತ್ತ ಕಾಫಿಯ ಕ್ರಯ ಕಮ್ಮಿಯಾಗಿದೆ ಖಂಡಿಗೆ ರೂ. 140 ಈ ವಾರ ಇಲ್ಲಿ ಇದೆ.

ಬೇಸಿಗೆ ರಜಕ್ಕಾಗಿ ಇಲ್ಲಿಯ ಸೆಂಟ್ರಲ್ ಹೈಸ್ಕೂಲ್ ಈ ತಾ. 15 ರಿಂದ ಐದು ವಾರಗಳ ವರೆಗೆ ಮುಚ್ಚಲ್ಪಟ್ಟಿದೆ.

ನಿವೃತ್ತ ಡಾಕ್ಟರಾದ ಶ್ರೀ ಕಡೇಮಾಡ ಕರುಂಬಯ್ಯನವರು ಇಲ್ಲಿಯ ಗೀತಾಂಜಲಿ ಬಂಗ್ಲೆಯಲ್ಲಿ ತಮ್ಮ ವೈದ್ಯ ಶಾಲೆಯೊಂದನ್ನು ತೆರೆದಿರುವರು.

ಕೊಡಗು ಎತ್ಲೆಟಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ನಡೆದ ಟೆನ್ನಿಸ್ ಪಂದ್ಯಾಟದಲ್ಲಿ ಡಬ್ಬಲ್ಸ್‌ನಲ್ಲಿ '1926 ನೇ ಕ್ಲಬ್ಬಿ'ನ ಶ್ರೀ ಪಂತಲು ಮತ್ತು ಪಾರ್ಟೆಯವರೂ ಸಿಂಗಲ್ಸ್‌ನಲ್ಲಿ ಶ್ರೀ ಪಂತಲುರವರೂ ಗೆದ್ದು ಇನಾಮಿನ ಕಪ್ಪನ್ನು ಪಡೆದರು.

ಇಲ್ಲಿಯ ಮುನ್ಸಿಫಲ್ ಕಮಿಟಿಯ ಚುನಾವಣೆಯು ಮೇ ತಾ. 14 ರಲ್ಲಿ ನಡೆಯುವದೆಂದೂ, ಸ್ಪರ್ಧಿಸಬಿಚ್ಛಿಸುವ ಉಮೇದುವಾರರ ಅರ್ಜಿಯು ಈ ತಾ 24 ರಲ್ಲಿ ಚುನಾವಣಾ ಅಧಿಕಾರಿಯನ್ನು ತಲಪಬೇಕೆಂದೂ, ಅದೇ ದಿನ ನೇಮಕ ಪತ್ರಗಳ ಪರಿಶೋಧನೆಯು ನಡೆಯುವದೆಂದೂ ತಿಳಿಯಬರುತ್ತದೆ.

ಯ ಪ್ರತಿಜ್ಞಾಪತ್ರಗಳನ್ನೂ ಆವರೊಂದಿಗೆ ಆಂದಿನ ವರೆಗೆ ಆದ ಕಾರ್ಯದ ವರದಿಯನ್ನು ಪ್ರತಿ ತಿಂಗಳ 13ನೇ ತಾರೀಖಿನೊಳಗೊಮ್ಮೆ 27ನೇ ತಾರೀಖಿನೊಳಗಾಗಿ ಒಮ್ಮೆ ಜಿಲ್ಲಾ ಕಾಂಗ್ರೆಸ ಸಮಿತಿಗಳಿಗೆ ಮುಟ್ಟುವಂತೆ ಕಳಿಸಬೇಕು. ಮುಂದೆ ಜಿಲ್ಲಾ ಸಮಿತಿಯವರು ವಿಳಾಸ ಸಹಿತ ಸತ್ಯಾಗ್ರಹಿಗಳ ಯಾದಿಯನ್ನು ಸಿದ್ಧಮಾಡಿ ಪ್ರಾಂತೀಯ ಕಚೇರಿಗೆ ಪ್ರತಿ ತಿಂಗಳ 16ನೇ ತಾರೀಖಿಗೆ ಒಮ್ಮೆ ಹಾಗೂ 30ನೇ ತಾರೀಖಿನೊಳಗಾಗಿ ಒಮ್ಮೆ ತಲಪುವಂತೆ ತಪ್ಪದೆ ಕಳಿಸಿಕೊಡಬೇಕು. ಅದರೊಂದಿಗೆ ಕಾರ್ಯದ ಪೂರ್ಣ ವರದಿಯನ್ನು ಇಡಬೇಕು. ಎಲ್ಲ ಅಧೀನ ಸಮಿತಿಗಳು ಇಂಥ ಸಮಯದಲ್ಲಿ ವರದಿಯನ್ನು ಕಳಿಸಿಕೊಡುವದರ ಮಹತ್ವವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಕೆಲಸವೆಷ್ಟೇ ಆಗಿರಲಿ ಅದರ ವರದಿಯನ್ನು ತಿಳಿಸುವ ವಿಷಯದಲ್ಲಿ ಸ್ವಲ್ಪವೂ ಅಲಕ್ಷ್ಯ ಮಾಡಬಾರದು. ನಮ್ಮ ಕಚೇರಿಯಿಂದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಚೇರಿಗೆ ಪಾಕ್ಷಿಕ ವರದಿಯನ್ನು ಕಳಿಸಬೇಕಾಗಿದೆ. ಅಧೀನ ಸಮಿತಿಗಳ ಸಹಾಯವಿಲ್ಲದೇ ಈ ಕೆಲಸಮಾಡುವದು ಅಶಕ್ಯವಾಗುವದೆಂಬದನ್ನು ತಿಳಿದುಕೊಂಡು ಕಾರ್ಯ ಮಾಡಬೇಕಾಗಿ ಬಿನ್ನಹ.

ಈ ಕಾಲವು ರಾಷ್ಟ್ರದ ಸಲುವಾಗಿ ದುಡಿಯುವ ಹಾಗು ಸೇವೆ ಮಾಡುವ ಸುಸಂಧಿಯೆಂದು ಯೋಚಿಸಿ ಪ್ರತಿಯೊಬ್ಬ ಭಾರತೀಯನು ಈ ಮಹತ್ವದ ಕಾರ್ಯದಲ್ಲಿ ತೊಡಗುವ ಮನಸ್ಸು ಮಾಡುವದು ಮಹತ್ವಾಗಿರುವದು.

ಚನ್ನಬಸಪ್ಪ ಅಂಬಲಿ.
ಪ್ರಧಾನಕಾರ್ಯದರ್ಶಿ.

ವೀರರಾಜಪೇಟೆ

ಕಳೆದ ಡಿಸೆಂಬರು ತಿಂಗಳಲ್ಲಿ ನಡೆದ 'ಕೊಡಗು' ಕಂಪೆನಿಯ ವಾರ್ಷಿಕ ಮಹಾಸಭೆಯನ್ನು ಮಾಡಕೂಡದಾಗಿ ಸಬ್ ಜಡ್ಜರ ಕೋರ್ಟಿನಿಂದ ನೋಟೀಸು ಬಂದಿದ್ದರೂ ಕೂಡ ಜರುಗಿಸಿದರೆಂಬ ಬಗ್ಗೆ ಕೋರ್ಟಿನ ಹುಕುಂಮನ್ನು ಉಲ್ಲಂಘನೆ ಮಾಡಿದರೆಂಬ ತಕ್ರೀರಿನ ಮೇಲೆ ಮಡಿಕೇರಿ ಸಬ್ ಜಡ್ಜರ ಕೋರ್ಟಿನಲ್ಲಿ ಕೆಲವು ಡೈರೆಕ್ಟರು ಮತ್ತು ಶೇರುದಾರರು ಸೇರಿ 18 ಜನರ ಮೇಲೆ ಹೂಡಲ್ಪಟ್ಟಿದ್ದ ಕ್ರಿಮಿನಲ್ ಮೊಕದ್ದಮೆಯು ಇಲ್ಲಿಯ ಮುನ್ಸಿಫ್ ಕೋರ್ಟಿಗೆ ವರ್ಗವಾಗಿದ್ದು ತಾ. 16 ರಲ್ಲಿ ಅದು ಮುನ್ಸೀಫರಿಂದ ಡಿಸ್‌ಮಿಸ್ ಮಾಡಲ್ಪಟ್ಟಿತು.

ದೇವಣಗೇರಿಯ ಪುಗ್ಗೆರ ಮೊಡ್ಡ ಮನೆಯು ಅಕಸ್ಮಾತು ಬೆಂಕಿಬಿದ್ದು ಭಸ್ಮವಾಯಿತೆಂದೂ ಇದರಿಂದಾಗಿ ಸುಮಾರು ರೂ. 4000 ನಷ್ಟವಾಗಿದೆಯೆಂದು ತಿಳಿದುಬರುತ್ತದೆ.

ಇಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ ಮುನ್ಸಿಪಲ್ ಉರ್ದು ಹುಡುಗಿಯರ ಶಾಲೆಯನ್ನು ತೆರೆಯುವ ಸಮಾರಂಭವು ಕೊಡಗಿನ ಕಮಿಶನರಾದ ಮಿ. ಜೆ. ಡಬ್ಲ್ಯು. ಪ್ರಿಚಾರ್ಡ್ ಐ. ಸಿ. ಯಸ್ ರವರಿಂದ ತಾ. 8-4-40ರಲ್ಲಿ ನೆರವೇರಿಸಲ್ಪಟ್ಟಿತು.

ಕೊಡಗು ಕಂಪೆನಿಯ ಹತ್ತು ಡೈರೆಕ್ಟರುಗಳ ಹಾಗೂ ಮೇನೇಜರರ ಮೇಲೆ ತಮ್ಮ ಪಾಲು ವರ್ಗಾಯಿಸಲಿಲ್ಲ ಮೊದಲಾದ ಕಾರಣಗಳಿಂದ ಶ್ರೀ ಮುಕ್ಕಾಟಿರ ಅಪ್ಪಣ್ಣನವರು ಹೂಡಿದ ಮೊಕದ್ದಮೆಯು ಜುಲೈ ತಾರೀಕು 2 ಮತ್ತು 22ರಲ್ಲಿ ಇಲ್ಲಿಯ ಮುನ್ಸೀಫ್ ಕೋರ್ಟಿನಲ್ಲಿ ವಿಚಾರಿಸಲ್ಪಡುವದು.

ಗೋಣಿಕೊಪ್ಪಲು.

ಇಷ್ಟರ ವರೆಗೆ ಮೀನು ವ್ಯಾಪಾರ ಮಾಡುವವರು ಮೀನುಗಳನ್ನು ಧೂಳು ಮುಚ್ಚಿದ ನೆಲದ ಮೇಲಿಟ್ಟು ಮಾರಾಟ ಮಾಡುತ್ತಿದ್ದರಷ್ಟೆ. ಆರೋಗ್ಯ ದೃಷ್ಟಿಯಿಂದ ಇದು ತುಂಬಾ ಹಾನಿಕಾರಕವಾದ ಕಾರಣ ಇನ್ನು ಮುಂದೆ ಎತ್ತರಿಸಿದ ಬೆಂಚುಗಳ ಮೇಲೆ ಮಾರಾಟ ಮಾಡುವ ಬಗ್ಗೆ ಹುಕುಂ ಒಡನೆ ಬರುವದಾಗಿ ವದಂತಿ.

ಶ್ರೀಮಂಗಲ.

ಇಲ್ಲಿಯ ಕುಮುಟೂರು ಬಾಡಗ ಶಾಲೆಯ ವಾರ್ಷಿಕೋತ್ಸವವು ಈ ತಾ. 14 ರಲ್ಲಿ ಡಿ. ಎಜ್ಯುಕೇಶನಲ್ ಆಫೀಸರಾದ ಶ್ರೀ ಸಿ. ಯಂ. ರಾಮರಾವ್ ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು. ಅನೇಕ ಆಢ್ಯ ಮಹನೀಯರು ಈ ಸಂದರ್ಭಗಳಲ್ಲಿ ಭಾಷಣ ಮಾಡಿದರೆಂದೂ, ಗ್ರಾಮಸ್ಥರು ಕಟ್ಟಿಸಿದ ಹೊಸ ಶಾಲಾ ಕಟ್ಟಡದ ಪ್ರಾರಂಭೋತ್ಸವವೂ ಅದೇ ದಿನ ಜರಗಿಸಲ್ಪ

ಪೊನ್ನಂಪೇಟೆ.

ಇಲ್ಲಿಯ ಹೈಯರಿಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಈ ತಾ. 15 ರಲ್ಲಿ ಶ್ರೀಮಾನ್ ಸಿ. ಯಂ. ರಾಮರಾವ್, ಎಜ್ಯುಕೇಶನ್ ಆಫೀಸರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತೆಂದು ತಿಳಿಯುತ್ತೇವೆ.

ಇಲ್ಲಿಯ ವಿಲೇಜ್ ಪಂಚಾಯಿತಿ ಬೋರ್ಡಿನ ಈ ವರ್ಷದ ಚುನಾವಣೆಯಲ್ಲಿ ಈ ಕೆಳಗಿನ ಮಹನೀಯರುಗಳು ಬಹುಮತದಿಂದ ಚುನಾಯಿತರಾಗಿರುವರೆಂದು ತಿಳಿಯುತ್ತೇವೆ. ಮ. ಸಿ. ಜಿ. ಮುದ್ದಮ್ಮಯ್ಯನವರು, ಪಿ. ಕೆ. ಪೂವಯ್ಯನವರು, ಡಾಕ್ಟರ್ ಯಂ. ಬಿ. ಕಾರ್ಯಪ್ಪನವರು, ಪಿ. ಕರಿಯಣ್ಣನವರು, ಸಿ. ಅಬ್ದುಲರವರು, ಪಿ. ಮಮ್ಮನವರು, ಯು. ಅಬ್ಬುರವರು, ಯಂ. ಜೋಕ್ರನವರು. ಇವರ ಪೈಕಿ ಶ್ರೀ ಸಿ. ಜಿ. ಮುದ್ದಮ್ಮಯ್ಯನವರನ್ನು ಸದ್ರಿ ಮಂಡಳಿಯ ಪ್ರಸಿಡೆಂಟರಾಗಿ ಆರಿಸಲಾಗಿದೆ.

ಕಂಗಳತ್ತುನಾಡು ಸಂಘದ ಪ್ರೆಸಿಡೆಂಟರಾಗಿದ್ದ ಮ. ಚಿಪ್ಪುಡೀರ ಯಸ್. ಪೂವಯ್ಯನವರು ಸದ್ರಿ ಸಂಘದ ಹಣವನ್ನು ದುರುಪಯೋಗ ಪಡಿಸಿದರೆಂಬ ಅಪವಾದನೆ ಮೇಲೆ ಸಬ್ ಜಡ್ಜರ ಕೋರ್ಟಿನಲ್ಲಿ ಕೇಸು ನಡೆದು ತಾ. 17-4-40ರಲ್ಲಿ ಸದ್ರಿಯವರಿಗೆ 250 ರೂಪಾಯಿ ಜುಲ್ಮಾನೆ ವಿಧಿಸಿದ್ದಾರೆಂದು ತಿಳಿಯುತ್ತೇವೆ.

ತಾರೀಕು 14-4-40 ರಲ್ಲಿ ಕಿಗ್ಗಟ್ಟುನಾಡು ತಾಲೂಕು ಕಾಂಗ್ರೆಸ್ ಕಮಿಟಿಯ ಮೀಟಿಂಗು ನಡೆದು ತಾಲೂಕು ಕಾಂಗ್ರೆಸ್ ಕಮಿಟಿಯನ್ನು ಸತ್ಯಾಗ್ರಹ ಕಮಿಟಿಯಾಗಿ ಮಾರ್ಪಡಿಸಲಾಗಿದೆ.

ಫ್ರೇಜರ್‌ಪೇಟೆ

ಶಿರಂಗಾಲ ಪಂಚಾಯಿತ ಮತ್ತು ಸಹಕಾರಿಗಳ ಹಾಲನ್ನು ತೆರೆಯುವ ಸಮಾರಂಭವು ಕಳೆದ ತಾರೀಕು 6ರಲ್ಲಿ ಕಮಿಷನರಾದ ಜೆ ಡಬ್ಲ್ಯು ಪ್ರಿಚಾರ್ಡ್ ಐ. ಸಿ. ಎಸ್ ರವರಿಂದ ನಡೆಸಲ್ಪಟ್ಟಿತು.

ಮೂರ್ನಾಡು

ಇಲ್ಲಿ ಕಟ್ಟಲ್ಪಟ್ಟಿರುವ ಶ್ರೀರಾಮಮಂದಿರವನ್ನು ತಾ. 8ರಲ್ಲಿ ಶ್ರೀ ಸಿ. ಐ. ಬೆಳ್ಯಪ್ಪನವರು ತೆರೆದರೆಂದೂ, ಜೋಡಪ್ಪದ ಭಾಷಣಗಳೂ, ಹರಿಕಥಾ ಕಾಲಕ್ಷೇಪವೂ ನಡೆದವೆಂದೂ ತಿಳಿಯುತ್ತೇವೆ.

ಅಖಿಲ ಭಾರತ ಖಾದಿ ವಸ್ತ್ರಾಲಯದ ಕರ್ನಾಟಕ ಶಾಖೆಯವರು ಅನಿರೀಕ್ಷಿತ ಘಟನೆಗಳಿಂದಾಗಿ ತಮ್ಮ ಕಾರ್ಯಕ್ರಮವನ್ನು ಬದಲಾಯಿಸಿ ತಾ. 1-5-40 ರಿಂದ ಕೊಡಗಿನಲ್ಲಿ ಖಾದಿ ಮಾರಾಟಮಾಡುವರಾಗಿ ತಿಳಿಯುತ್ತೇವೆ.

ಹಿಂದೂದೇಶ.

ಬಂಗಾಳ ಎಸೆಂಬ್ಲಿಯಲ್ಲಿ ಶ್ರೀ ರಸಿಕಲಾಲ್ ವಿಶ್ವಾಸ ಎಂಬವರು ತಮ್ಮ ಪಂಗಡವಾದ ಕಾಂಗ್ರೆಸಿನ ಕಾರ್ಯ

ಖಂಡಿಸಿದರೆಂದೂ, ಮತ್ತೆ ಅದಕ್ಕಾಗಿ ವಿಷಾದವನ್ನು ಸೂಚಿಸಲಿಲ್ಲವೆಂದೂ ಅವರ ಮೇಲೆ ಶಿಕ್ಷಾರ್ಥ ಕ್ರಮ ಜರುಗಿಸಿ, ಅವರನ್ನು ಹೊರಮಾಡಿರುವರು.

ಶ್ರೀ. ಜಿನ್ನಾರವರ ಪಾಕಿಸ್ಥಾನದ ಯೋಜನೆಯನ್ನು ಪ್ರತಿಭಟಿಸಲು ಇಂಡಿಯದ ಎಲ್ಲ ಸ್ವತಂತ್ರ ಪಕ್ಷದ ಮುಸ್ಲಿಮರೂ ಇದೇ ಎಪ್ರಿಲ್ ತಾ. 19ರಲ್ಲಿ ಸಮಗ್ರ ಭಾರತದ 'ಹಿಂದೂಸ್ತಾನ ದಿನಾಚರಣೆ' ಮಾಡಬೇಕೆಂದು ಡಿಲ್ಲಿಯ ಜೆಮೈತ್ ಉಲ್ ಉಲೇಮಿಯದ ಜತೆ ಕಾರ್ಯದರ್ಶಿಗಳಾದ ಮೌಲಾನ ಎಚ್. ರಹಿಮಾನ್‌ರವರು ಅಪೀಲ್ ಮಾಡಿಕೊಂಡಿದ್ದಾರೆ.

ವಾಯುವ್ಯ ಪ್ರಾಂತದಲ್ಲಿರುವ ಬನ್ನು ಎಂಬಲ್ಲಿ ಒಂದು ಆಶ್ರಮದ ಹತ್ತಿರ ಸ್ವದೇಶದಲ್ಲೇ ತಯಾರಿಸಿದ್ದ ಒಂದು ಸಿಡಿಮದ್ದಿನ ಗುಂಡು ಆಸ್ಫೋಟನವಾಗಿ ಒಬ್ಬ ಹುಡುಗಿಯು ತಕ್ಷಣವೇ ಸತ್ತಳು. ಆರು ಮಂದಿ ಮಕ್ಕಳೂ ಇಬ್ಬರು ಸ್ತ್ರೀಯರೂ ಗಾಯಗೊಂಡಿದ್ದಾರೆ. ಆ ಸಿಡಿಮದ್ದು ಗಾಜಿನ ಚೂರುಗಳಿಂದಲೂ ತಗಡಿನ ಚೂಪಾದ ಮೊನೆಯ ಚೂರುಗಳಿಂದಲೂ ಸೇರಿ ಒಂದು ಹಳೆಯ ಸಿಗರೇಟಿನ ಡಬ್ಬಿಯಲ್ಲಿ ಇಡಲ್ಪಟ್ಟಿತ್ತೆಂಬುದಾಗಿ ತಿಳಿದು ಬಂದಿದೆ.

ವಿಶಾಖ ಪಟ್ಟಣದಲ್ಲಿರುವ ರಾಜಮಹೆಂದ್ರಕ್ಕೆ ಎರಡು ಮೈಲಿ ದೂರದಲ್ಲಿರುವ ಮಂಡಾಸ ಜಮೀನ್ದಾರಿಯ ಪಕ್ಕದ ಕಾಡಿನಿಂದ ಸೌದೆಗಾಗಿ ಕೆಲವು ಹಳ್ಳಿಯ ಜನರು ಕಾನೂನಿಗೆ ವಿರೋಧವಾಗಿ ಮರಗಳನ್ನು ಕಡಿದು ತರುತ್ತಿದ್ದರು. ಆದ್ದರಿಂದ ಹಾಗೆ ಮಾಡಿದ ಕೆಲವರನ್ನು ಪೋಲೀಸ್ ಅಧಿಕಾರಿಗಳು ದಸ್ತಗಿರಿ ಮಾಡಿದರು. ಅಕ್ಕಪಕ್ಕದ ಹಳ್ಳಿಯವರೆಲ್ಲಾ ಸೇರಿ ದಸ್ತಗಿರಿ ಮಾಡಲ್ಪಟ್ಟ ತಮ್ಮ ಜನರ ಕೈ ಬೇಡಿಗಳನ್ನು ಮುರಿದುಹಾಕಿ ಪೋಲೀಸಿನವರ ಮೇಲೆ ದಂಗೆ ಎದ್ದರು. ಆದ್ದರಿಂದ ಪೋಲೀಸಿನವರು ಆ ಹಳ್ಳಿಯವರ ಮೇಲೆ ಗುಂಡು ಹಾರಿಸಿದರು. ಇದರ ದೆಸೆಯಿಂದ ಐದು ಮಂದಿ ಕೊಲ್ಲಲ್ಪಟ್ಟು ಕೆಲವು ಮಂದಿ ಗಾಯಗೊಂಡರು. ಗಾಯಗೊಂಡವರ ಪೈಕಿ ಒಬ್ಬ ಪೋಲೀಸಿನವನೂ ಒಬ್ಬ ಹೆಂಗಸೂ ಇದ್ದಾರೆ. ಗಾಯಗೊಂಡವರೆಲ್ಲರೂ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಾರೆ. ಗಾಯಗೊಂಡ ಪೋಲೀಸಿನವನು ಬದುಕುವದು ಬಹಳ ಸಂಶಯಾಸ್ಪದವಾಗಿದೆ.

ವಿದೇಶ.

ಅಮೇರಿಕ ಸಂಯುಕ್ತ ಸಂಸ್ಥಾನಗಳ ಮುಕ್ಕಾಲು ಪ್ರಜೆಗಳಿಗೆಲ್ಲಾ ಈಗಿನ ಯುದ್ಧದಲ್ಲಿ ಮಿತ್ರಮಂಡಳಿಯವರೇ ಜಯ ಹೊಂದಬೇಕೆಂಬ ಅಪೇಕ್ಷೆ ಇರುತ್ತದೆ. ಎಲ್ಲಾ ಪ್ರಜೆಗಳ ಅಭಿಪ್ರಾಯವನ್ನು ತೆಗೆದುಕೊಳ್ಳಲು ನೇಕಡ 84 ಜನರ ಅಭಿಪ್ರಾಯವೆಲ್ಲವೂ ಮಿತ್ರಮಂಡಳಿಯವರೊಂದಿಗೆ ಸಹಕರಿಸಿದೆ. ಇವರೆಲ್ಲರೂ ಮಿತ್ರಮಂಡಲಿಯವರೇ ಜಯಶಾಲಿಗಳಾಗಲೆಂದು ಹಾರೈಸುತ್ತಾರೆ ಆದರೆ ಜರ್ಮನಿಯವರ ಕಡೆ ಸಹಾನುಭೂತಿಯನ್ನು ತೋರಿಸುವ ಸಂಯುಕ್ತ ಸಂಸ್ಥಾನಗಳ ಪ್ರಜೆಗಳ ಸಂಖ್ಯೆ ಶೇಕಡ 20ರ 1ಕ್ಕೆ ಇಳಿದಿದೆ.

ಭಾರತದಲ್ಲಿ
ಮುಸ್ಲಿಮರ ಹಕ್ಕೆಷ್ಟು?

'ಭಾರತೀಯ ಮುಸ್ಲಿಮರು ಸುಮಾರು ಸಾವಿರ ವರ್ಷಗಳ ತನಕ ಹಿಂದುಸ್ಥಾನದಲ್ಲಿ ರಾಜ್ಯಭಾರ ಮಾಡಿದ್ದರು. ಅವರು ಹಿಂದೂಸ್ಥಾನವನ್ನು ಗೆದ್ದು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದರು. ಆದ್ದರಿಂದ ಭಾರತದ ರಾಜಕೀಯ ಕ್ಷೇತ್ರದಲ್ಲಿ ಮುಸಲ್ಮಾನರಿಗೆ ವಿಶೇಷತರದ ಹಕ್ಕು ಅಧಿಕಾರಗಳಿವೆ' ಎಂದು ಕೆಲವರು ಆಡಿಕೊಳ್ಳುತ್ತಾರೆ. ಜನ್ನಾ ಸಾಹೇಬರು ಕೂಡ 'ಹಿಂದೂಸ್ಥಾನವನ್ನು ಮುಸಲ್ಮಾನರ ಹಿಂದೂಸ್ಥಾನ ಮತ್ತು ಹಿಂದುಗಳ ಹಿಂದೂಸ್ಥಾನವೆಂದು ಪಾಲುಮಾಡಿಕೊಳ್ಳಬೇಕು ಎಂಬ ಧೋರಣೆಯನ್ನು ಇಟ್ಟುಕೊಂಡಿರುವರು. ಆದರೆ ಇತರ ನಿವಾಸಿಗಳಿಗಿಲ್ಲದ ವಿಶೇಷ ತರದ ಹಕ್ಕುಗಳು ಮುಸಲ್ಮಾನರಿಗೆ ಎಲ್ಲಿಂದ ಬರುವವು? ಹಿಂದೂಸ್ಥಾನವನ್ನು ವಿಭಾಗಿಸುವ ಸ್ವಾತಂತ್ರ್ಯ ಮುಸಲ್ಮಾನರಿಗೆ ಎಷ್ಟು ಇದೆ? ಇದನ್ನು ವಿಚಾರದ ಒರೆಗಲ್ಲಿನಲ್ಲಿಟ್ಟುಕೊಂಡು ನೋಡಬೇಕು. ಇದನ್ನೀಗ ನಾವು ಆಲೋಚಿಸಬೇಕು.

ಮುಸಲ್ಮಾನರ ರಾಜಾಂಶಗಳುಂಟೆ?

ಅಫಘಾನಿಸ್ಥಾನದ ಕೆಲವು ರಾಜವಂಶೀಯರು, ಮತ್ತು ಮೊಗಲಾಯಿಗಳು ಹತ್ತನೇ ಶತಮಾನದಿಂದ ಆರಂಭಿಸಿ 16 ನೇ ಶತಮಾನದತನಕ ಹಿಂದೂಸ್ಥಾನದ ಮೇಲೆ ದಂಡೆತ್ತಿಬಂದು, ಸ್ವಲ್ಪ ಸ್ವಲ್ಪ ಸಮಯದ ತನಕ ರಾಜ್ಯವನ್ನಾಳಿದ್ದರೆಂಬುದು ನಿಜ. ಆದರೆ ಅವರ ಅಧಿಕಾರವು ಯಾವ ಸಮಯಕ್ಕೂ ಈ ದೇಶದಲ್ಲಿ ಪರಿಪೂರ್ಣವಾಗಿಯೂ ಇದ್ದಿರಲಿಲ್ಲ. ಆ ಎಲ್ಲಾ ರಾಜಕುಟುಂಬಗಳು ಈಗ ನಾಮಾವಶೇಷವಾಗಿವೆ.

ನಾದಿರಶಹ ಮತ್ತು ಅಹಮ್ಮದ ಶಹ ಎಂಬಿಬ್ಬರು ಹದಿನೆಂಟನೇ ಶತಮಾನದಲ್ಲಿ ಹಿಂದೂಸ್ಥಾನದ ಮೇಲೆ ದಂಡೆತ್ತಿ ಬಂದಿದ್ದರು. ಅವರು ಗೆದ್ದ ಪ್ರದೇಶಗಳನ್ನು ಆಳಿಕೊಂಡಿರಲಿಕ್ಕೆ ಅವರು ಯಾರನ್ನೂ ಇಟ್ಟುಹೋಗಲಿಲ್ಲ. ರೋಹಿಲರು, ಮೊಗಲರು, ಪರ್ಸಿಯನರು, ತುರುಕರು ಮತ್ತು ಅರಬರು ಎಂದುಕೊಂಡು ಇರುವ ಬರೆ ಒಂದೆರಡು ಲಕ್ಷ ಮುಸಲ್ಮಾನರನ್ನು ಬಿಟ್ಟರೆ, 8 ಕೋಟಿ ಭಾರತೀಯ ಮುಸಲ್ಮಾನರಲ್ಲಿ ಉಳಿದವರೆಲ್ಲ ಹಿಂದೂಧರ್ಮದಿಂದ ಮತಾಂತರ ಹೊಂದಿದ ಭಾರತೀಯರೇ ಆಗಿರುವರು. ಹಿಂದೂಸ್ಥಾನದಲ್ಲಿರುವ ಎಂಟು ಕೋಟಿ ಮುಸಲ್ಮಾನರಲ್ಲಿ ಸುಮಾರು 7½ ಕೋಟಿ ಮುಸಲ್ಮಾನರು ವಿದೇಶಿಯ ಮುಸ್ಲಿಂ ರಾಜ್ಯಭಾರಕ್ಕೆ ತಲೆ ಬಗ್ಗಿಸಿದ ಹಿಂದುಗಳ ವಂಶಜರಾಗಿದ್ದಾರೆ.

ಯಾರಿಂದ ಅಧಿಕಾರ ಹೋಯಿತು?

ಬ್ರಿಟಿಷರು ಮುಸಲ್ಮಾನರ ಕೈಯಿಂದ ಭಾರತದ ರಾಜಕೀಯ ಅಧಿಕಾರವನ್ನು ಕಿತ್ತುಕೊಂಡವರಾದುದರಿಂದ, ಅವರು ತಮ್ಮ ಆ ಅಧಿಕಾರವನ್ನು ಪುನಃ ಬಿಟ್ಟುಕೊಡುವದಾಗಿದ್ದರೆ, ಮುಸಲ್ಮಾನರಿಗೆ ವಿಶೇಷ ಅಧಿಕಾರ ಕೊಟ್ಟು ಬಿಟ್ಟು ಕೊಡತಕ್ಕದೆಂದು ಕೆಲವು ಜನ ಮುಸಲ್ಮಾನರು ಹೇಳುತ್ತಾರೆ. ಬ್ರಿಟಿಷರು ಮುಸಲ್ಮಾನರಿಂದ ಅಧಿಕಾರವನ್ನು ಕಿತ್ತುಕೊಂಡರೆಂಬುದು ಸುಳ್ಳು ಎಂದು ಇತಿಹಾಸ ತಿಳಿದವದರು ಬಲ್ಲರು. ಬ್ರಿಟಿಷರು ಇಲ್ಲಿ ನೆಲಸಿದ್ದ ಕಾಲಕ್ಕೆ ಭಾರತವನ್ನು ಆಳುತ್ತಿದ್ದವರು ಮರಾಠಾ ವಂಶಕ್ಕೆ ಸೇರಿದ ಪೇಶ್ವೆಯರು, ಭೋನ್ಸ್ಲೆಗಳು, ಗಾಯಕವಾಡರು, ಹೋಳ್ಕರರು, ಸಿಂಧಿಯರು, ಹಾಗೂ ರಾಜಪುತ್ರರು ಮತ್ತು ಸಿಖರೇ ಅಲ್ಲದೆ ಮುಸಲ್ಮಾನರಲ್ಲ. ಡಿಲ್ಲಿಯಲ್ಲಿ ಮುಸಲ್ಮಾನರ ಅಧಿಕಾರವು ಕೇವಲ ನಾಮಮಾತ್ರವಾಗಿದ್ದಿತು. ಬ್ರಿಟಿಷರು ಭಾರತೀಯರಿಂದ ರಾಜ್ಯಾಡಳಿತದ ಅಧಿಕಾರವನ್ನು ಕಿತ್ತುಕೊಂಡರೇ ಹೊರತು ಮುಸಲ್ಮಾನರಿಂದಲ್ಲ.

ಮುಸಲ್ಮಾನರ ಅಧಿಕಾರವೆಷ್ಟು?

ಆದುದರಿಂದ ಮುಸಲ್ಮಾನರು ಹಿಂದೂಸ್ಥಾನವನ್ನು ಸಾವಿರ ವರ್ಷಗಳ ತನಕ ಆಳಿಕೊಂಡಿದ್ದರೆಂಬುದು ಸುಳ್ಳು. ಒಂದೊಂದು ಕಾಲದಲ್ಲಿ ಒಂದೊಂದು ಕಡೆ ಆಳಿಕೊಂಡಿದ್ದ ಮುಸಲ್ಮಾನ ರಾಜಕುಟುಂಬಗಳು ಈಗ ನಾಶವಾಗಿರುವವು. ವಿದೇಶೀ ಮುಸಲ್ಮಾನರಿಗೆ ಭಾರತದಲ್ಲಿ ಪ್ರತ್ಯೇಕವಾದ ಅಸ್ತಿತ್ವವಿಲ್ಲ. ಭಾರತದ ಮುಸಲ್ಮಾನರಲ್ಲ ಮತಾಂತರ ಹೊಂದಿದ ಹಿಂದುಗಳಾಗಿದ್ದರೆ ಭಾರತೀಯ ಮುಸಲ್ಮಾನರು ಕ್ರೈಸ್ತರಂತೆ, ಸಿಖರಂತೆ ಒಂದು ಅಲ್ಪ ಸಂಖ್ಯಾಕ ಜಾತಿ, ಮತ, ಧರ್ಮ ಸಂಸ್ಕೃತಿಗೆ ಅನುಕೂಲವಾಗಿ ಕೆಲವು ರಕ್ಷಣೆಗಳನ್ನು ಪಡೆದು ಇರಬಹುದು. ಇದಕ್ಕೆ ಪ್ರತಿಕೂಲವಾಗಿ, ತಮಗಾಗಿ ಹಿಂದೂಸ್ಥಾನದ ಒಂದು ಭಾಗವನ್ನು ಪಾಲು ಮಾಡಿಕೊಂಡು ಅಥವಾ ಅಲ್ಪ ಸಂಖ್ಯಾಕರಾಗಿರುವ ತಾವು ಬಹು ಸಂಖ್ಯಾಕರ ಹಕ್ಕು, ಅಧಿಕಾರ ಸ್ವಾತಂತ್ರ್ಯಗಳನ್ನು ಪಡೆದು ಹಿಂದೂಸ್ಥಾನದಲ್ಲಿ ಇರಲಿಕ್ಕೆ ಮುಸಲ್ಮಾನರಿಗೆ ಯಾವ ಅಧಿಕಾರವೂ ಹಕ್ಕೂ ಸ್ವಾತಂತ್ರ್ಯವೂ ಇರುವದಿಲ್ಲ.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ತಾ. 12-4-40ರಲ್ಲಿ ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಆಫೀಸಿನಲ್ಲಿ ಪ್ರೆಸಿಡೆಂಟರಾದ ಶ್ರೀಯುತ ಸಿ. ಐ. ಬೆಳ್ಯಪ್ಪ ಯಂ. ಯಲ್. ಸಿ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹಾಜರು-(1) ಮ. ಸಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟ್), (2) ರಾವ್ ಬಹದ್ದೂರ್ ಸಿ. ದೇವಯ್ಯನವರು (ಖಜಾನ್ಜಿ) (3) ಮ. ಗಳಾದ ಕೆ. ಸಿ. ಕರುಂಬಯ್ಯನವರು (ಗೌರವ ಕಾರ್ಯದರ್ಶಿ), (4) ಐ. ಸಿ. ಕಾರ್ಯಪ್ಪನವರು, (5) ಪಿ. ಜಿ. ಮುದ್ದಮ್ಮಯ್ಯನವರು, (6) ಬಿ. ಸಿ. ಮಾಚಯ್ಯನವರು, (7) ಕೆ. ಕೆ. ಗಣಪತಿಯವರು, (8) ಸಿ. ಯಂ. ಪೂಣಚ್ಚನವರು (9) ಹೆಚ್. ಎಂ. ಪುಪ್ಪಣ್ಣನವರು, (10) ಪಿ. ಸಿ. ಕರುಂಬಯ್ಯನವರು, (11) ಎಸ್. ಎಸ್. ರಾಮಶೆಟ್ಟಿಯವರು, (12) ಎಂ. ಎಸ್. ಸೋಮಯ್ಯನವರು.

ಅಲ್ಲದೆ ಸಹಕಾರಿ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರವರೂ ಸಹ ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ಒಪ್ಪಲಾಯಿತು.

ಗೈರ್ಹಾಜರ.-ಮ. ಗಳಾದ ಯಂ. ಸಿ. ದೇವಯ್ಯನವರು ಮತ್ತು ಪಿ. ಜಿ. ಐಯ್ಯಪ್ಪನವರು.

(2) ಸುಪರ್‌ವಿಜನ್ ಬೋರ್ಡಿನ ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ಒಪ್ಪಲಾಯಿತು.

3. ಮಾರ್ಚಿ ತಿಂಗಳ ಲೆಕ್ಕವನ್ನು ಓದಿ ಒಪ್ಪಲಾಯಿತು.

4. ಈ ಕೆಳಗಿನ ಸೊಸೈಟಿಗಳಿಗೆ ಸಾಲ ಮಂಜೂರಾದವು. (1) ಕೋತಡಬೈಗೋಡು ಸಂಘಕ್ಕೆ ರೂ. 1500, (2) ಕಾರುಗುಂದ ಸಂಘಕ್ಕೆ ರೂ. 2000, (3) ಪಾರಾಣ ಸಂಘಕ್ಕೆ ರೂ. 1,200, (4) ಜೇನು ಮೇಣ ಸಂಘಕ್ಕೆ ರೂ. 3000, (5) ಪಾಲೂರು ಸಂಘಕ್ಕೆ ರೂ. 1500, (6) ಸಹಕಾರ ಉದ್ಯೋಗಸ್ಥರ ಸಂಘಕ್ಕೆ ರೂ. 800.

5. ಕೋದಂಬೂರು ಸಂಘದ ಅರ್ಜಿಯನ್ನು ತನಿಕೆ ಬಗ್ಗೆ ಮುಂದಣ ಮೀಟಿಂಗಿಗೆ ಇಡಲಾಯಿತು.

6. ಕುಂದಳ್ಳಿ ಕುಮಾರಳ್ಳಿ ಸಂಘದ ಪ್ರೆಸಿಡೆಂಟರು ಬ್ಯಾಂಕಿಗೆ ಪಾವತಿ ಮಾಡಲು ಬಾಕಿ ಇರುವ ಒಟ್ಟು ಮೊಬಲಗಿಗೆ ಹೆತ್ತು ಕಂತು ಕೊಡಬೇಕಾಗಿ ಬರಕೊಂಡ ಅರ್ಜಿಯನ್ನು ಆ ಸಂಘದ ಕೆಲಸ ಕಾರ್ಯಗಳ ವಿಷಯ ಯೂನಿಯನ್ ಪ್ರೆಸಿಡೆಂಟರಿಂದ ತಪಶೀಲ್ ರಿಪೋರ್ಟ್ ಬಗ್ಗೆ ಮುಂದಳ ಮೀಟಿಂಗಿಗೆ ಇಡಲಾಯಿತು.

7. ಕಣಗಾಲು ಸಂಘದ ಪ್ರೆಸಿಡೆಂಟರು ತಾ. 31-3-40ರಕ್ಕೆ ಬಾಕಿ ಇರುವ ವಾಯಿದೆ ಮೀರಿದ ಸಾಲಕ್ಕೆ ತಾರೀಕು 31-3-41ರ ವರೆಗೆ ವಾಯಿದೆ ಕೊಡಬೇಕಾಗಿ ಬರಕೊಂಡ ಅರ್ಜಿ ವಿಷಯದಲ್ಲಿ ಶನಿವಾರಸಂತೆ ಯೂನಿಯನ್ ಪ್ರೆಸಿಡೆಂಟರು ಶಿಫಾರಸ್ಸು ಮಾಡಿ ಬರಕೊಂಡ ರಿಪೋರ್ಟನ್ನು ಆ ಸಂಘದ ಹೆಚ್ಚಿನ ವಿವರದ ಬಗ್ಗೆ ಮುಂದಳ ಮೀಟಿಂಗಿಗ ಇಡುವಂತೆ ತೀರ್ಮಾನಿಸಲಾಯಿತು.

8. ಡೈರೆಕ್ಟರುಗಳ ನಂಬ್ರ 5154 ತಾ. 17-2-40ರ ತೀರ್ಮಾನದ ಮೇರೆ ನೇಗಳೆ ಕರ್ಕಳ್ಳಿ ಸೊಸೈಟಿಯ ಕೆಲಸ ಕಾರ್ಯಗಳ ವಿಷಯ ಸುಪರ್‌ವೈಜರು ಬರಕೊಂಡ ರಿಪೋರ್ಟು ಓದಲಾಯಿತು.

ಈ ರಿಪೋರ್ಟನ್ನು ಸಂಘದ ಕೆಲಸ ಕಾರ್ಯಗಳ ವಿಷಯ ಯೂನಿಯನ್ ಪ್ರೆಸಿಡೆಂಟರಿಂದ ಹೆಚ್ಚಿನ ವಿವರ ಬಗ್ಗೆ ಇನ್ನೊಂದು ಮೀಟಿಂಗಿಗೆ ಇಡುವಂತೆ ತೀರ್ಮಾನಿಸಲಾಯಿತು.

9. ಶ್ರೀಮತಿ ಅಮ್ಮಟಂಡ ಪೊನ್ನವ್ವನವರು ಮತ್ತು ವೈತಾಡಿ ದವಸ ಭಂಡಾರವು ಬ್ಯಾಂಕಿಗೆ ಮೆಂಬರಾಗಲು ಬರಕೊಂಡ ಅರ್ಜಿ ಮೇರೆ ಅವರನ್ನು ಮೆಂಬರಾಗಿ ಸೇರಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು.

10. ಮ. ಪಾಂಡಿರ ಕಾಳಪ್ಪನವರು ತನ್ನ ಮನೆ ಬೆಂದು ಹೋದದ್ದಕ್ಕಾಗಿ ಬ್ಯಾಂಕಿನಿಂದ ಧನ ಸಹಾಯ ಕೊಡಬೇಕಾಗಿ ಬರಕೊಂಡ ವಿಷಯದಲ್ಲಿ ಸುಪರ್‌ವೈಜರ ರಿಪೋರ್ಟು ಮತ್ತು ಮಡಿಕೇರಿನಾಡು ಯೂನಿಯನ್ ಪ್ರೆಸಿಡೆಂಟರ ಇಂಡಾರ್ಸ್‌ಮೆಂಟನ್ನು ಓದಲಾಯಿತು. ಜನರಲ್ ಬಾಧಿಯವರ ಮಂಜೂರಾತಿ ನಿರೀಕ್ಷಣೆ ಮೇರೆ ಕಾಮನ್‌ಗುಡ್ ಫಂಡಿನಿಂದ ರೂ. 5 ಕೊಡುವಂತೆ ತೀರ್ಮಾನಿಸಲಾಯಿತು.

11. ಕೊಟ್ಟಮುಡಿ ವನಗಳ ಜಾತ್ರೆಯ ಪ್ರೆಸಿಡೆಂಟರು ವನಗಳ ಜಾತ್ರೆ ಮತ್ತು ವಸ್ತು ಪ್ರದರ್ಶನದ ಬಗ್ಗೆ ಬ್ಯಾಂಕಿನಿಂದ 50 ರೂ. ಧನ ಸಹಾಯ ಮಾಡಬೇಕೆಂದು ಬರಕೊಂಡ ಅರ್ಜಿಯನ್ನು ಓದಲಾಯಿತು.

ಅವರ ಅರ್ಜಿ ಮೇರೆ ಹಣ ಕೊಡಲಾಗುವುದಿಲ್ಲವಾಗಿ ತೀರ್ಮಾನಿಸಲಾಯಿತು.

12. ಕೊಡಗು ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗಳಲ್ಲಿ ಡಿಪಾಜಿಟ್ಟು ಮಾಡಿರುವ ಭತ್ತವನ್ನು ಬೇರೆ ದೇಶದಲ್ಲಿ ಮಾರಾಟ ಮಾಡುವ ವಿಷಯದಲ್ಲಿ ಉತ್ತರ ಕೊಡಗು ಸ್ಟೋರು ಸುಪರ್‌ವೈಜರ ರಿಪೋರ್ಟಿಗೆ ಅಸಿಸ್ಟೆಂಟ್ ರಿಜಿಸ್ಟ್ರಾರವರ ಇಂಡಾರ್ಸ್‌ಮೆಂಟನ್ನು ಓದಲಾಯಿತು.

ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಯಲ್ಲಿರುವ ಡಿಪಾಜಿಟ್ ಭತ್ತವನ್ನು ಉತ್ತಮವಾದ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುವ ಬಗ್ಗೆ ತಕ್ಕ ಅಭಿಪ್ರಾಯ ಮಾಡಲು ಎಲ್ಲಾ ಸ್ಟೋರುಗಳ ಮತ್ತು ಬ್ಯಾಂಕಿನ ಎರಡೆರಡು ಪ್ರತಿನಿಧಿಗಳು ಸೇರಿ ತಾ. 25-4-40ರಲ್ಲಿ 10-30 ಗಂಟೆಗೆ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ಸೇರಿ ಒಂದು ಮೀಟಿಂಗು ಮಾಡುವಂತೆ ತೀರ್ಮಾನಿಸಲಾಯಿತು. ಅಲ್ಲದೆ ಬ್ಯಾಂಕಿನ ವರ ಪ್ರೆಸಿಡೆಂಟರು ಮತ್ತು ಗೌರವ ಕಾರ್ಯದರ್ಶಿಯವರನ್ನು ಸದರಿ ಮೀಟಿಂಗಿಗೆ ಬ್ಯಾಂಕಿನ ಪ್ರತಿನಿಧಿಗಳಾಗಿ ಕಳುಹಿಸುವಂತೆ ತೀರ್ಮಾನಿಸಲಾಯಿತು.

18. ಡೈರೆಕ್ಟರುಗಳ ನಂಬರು 5189 ತಾ. 20-3-40ರ ತೀರ್ಮಾನದ ಮೇರೆ ಶನಿವಾರಸಂತೆ ಕ್ರಾಪ್ ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ಸಾಲ ಮಂಜೂರ್ಮಾಡಿದ ವಿಷಯದಲ್ಲಿ ಸ್ಟೋರ್ ಸುಪರ್‌ವೈಜರ ರಿಪೋರ್ಟು ಓದಲಾಯಿತು. ಆ ಸೊಸೈಟಿಗೆ ಈ ಮೊದಲು ಮಂಜೂರು ಮಾಡಿದ ರೂ. 500 ಸಾಲ ಬಟವಾಡೆ ಮಾಡುವಂತೆ ತೀರ್ಮಾನಿಸಲಾಯಿತು.

19. ಮುಸ್ಲಿಂ ಯಂಗ್ ಮೆನ್ ಸೊಸೈಟಿಯು ಬ್ಯಾಂಕಿಗೆ ಪಾವತಿ ಮಾಡಲು ಬಾಕಿ ಇರುವ ವಾಯಿದೆ ಮೀರಿದ ಸಾಲವನ್ನು ಪಾವತಿ ಮಾಡಲು ವಾಯಿದೆ ಕೊಡುವ ವಿಷಯದಲ್ಲಿ ಮಡಿಕೇರಿ ಸರ್ಕಲ್ ಇನ್ಸ್‌ಪೆಕ್ಟರವರ ರಿಪೋರ್ಟು ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರವರ ಇಂಡಾರ್ಸ್‌ಮೆಂಟನ್ನು ಓದಲಾಯಿತು.

ಸದರಿ ಸೊಸೈಟಿಯು ಬ್ಯಾಂಕಿಗೆ ಪಾವತಿ ಮಾಡಲು ಬಾಕಿ ಇರುವ ವಾಯಿದೆ ಮೀರಿದ ಸಾಲದ ಪೈಕಿ ಶೇಕಡ 50ರಷ್ಟನ್ನು ಪಾವತಿ ಮಾಡಿದನಂತರ ಅವರ ಅರ್ಜಿ ಸಂಗತಿ ಆಲೋಚನೆ ಮಾಡುವದಾಗಿ ಸದರಿ ಸಂಘಕ್ಕೆ ತಿಳಿಸುವಂತೆ ತೀರ್ಮಾನಿಸಲಾಯಿತು.

20. ಡೈರೆಕ್ಟರುಗಳ ನಂಬರು 5193 ತಾ. 30-3-40ರ ತೀರ್ಮಾನದ ಮೇರೆ ಪೊನ್ನಂಪೇಟೆ ಸರ್ಕಲಿನ ಸುಪರ್‌ವೈಜ

ಚರಖಾ-ಸ್ವರಾಜ್ಯ-ಅಹಿಂಸಾ.

ಮೋ. ಗಾಂಧಿ (ಹರಿಜನ 13-4-40.)

'ಕಾಯಿದೆ ಭಂಗ ಚಳವಳವು ಕಾರ್ಯತಃ ಪ್ರಾರಂಭವಾಗದಿದ್ದರೂ ಭಾರತ ಭಾಗ್ಯಾಕಾಶದಲ್ಲಿ ಅದೇ ತೂಗುತ್ತಿದೆ. ಈ ಮೊದಲು ಸತ್ಯಾಗ್ರಹ ಚರಖಾ ಅಹಿಂಸಾ ಇವುಗಳಿಗಿರುವ ಪರಸ್ಪರ ಬಾಂಧವ್ಯವನ್ನು ನಾನು ವಿವರಿಸಿ ಬರೆದಿದ್ದರೂ ಪುನಹ ಕೇಳಿದಂತೆ ಅದನ್ನು ವಿವರವಾಗಿ ಇಲ್ಲಿ ವಿವೇಚಿಸಬಯಸುತ್ತೇನೆ.

ಭಾರತ ಬಡಜನತೆಯ ಉದ್ಧಾರಕ್ಕೆ ಚರಖಾವು ಆಶಾಕಿರಣವಂತಿದೆ. ಚರಖಾದ ಅವನತಿಯಿಂದಲೇ ಜನತೆಯು ತಮ್ಮ ಸ್ವಾತಂತ್ರ್ಯವನ್ನು ಕಳಕೊಂಡರು. ಇದರಿಂದ ಕೇವಲ ರಾಜಕೀಯ ಸ್ವಾತಂತ್ರ್ಯವೇ ಅಲ್ಲ; ಆರ್ಥಿಕ ಹಾಗೂ ನೈತಿಕ ಸ್ವಾತಂತ್ರ್ಯಗಳೂ ನಾಮಾವಶೇಷವಾದುವು. ಗ್ರಾಮಾಂತರಗಳಲ್ಲಿ ಕೃಷಿಯ ಜೊತೆಗೆ ಚರಖಾವು ಉಪಕೈಗಾರಿಕೆಯಾಗಿ ರೈತನಲ್ಲಿ ಒಂದು ಪ್ರತಿಷ್ಠೆಯನ್ನು ತಂದಿತ್ತು. ಚರಖಾವು ಸ್ತ್ರೀಯರ ಸ್ನೇಹಿತನಾಗಿತ್ತು. ಗ್ರಾಮಗಳಲ್ಲಿ ಸೋಮಾರಿತನವನ್ನು ನೀಗಿ ಅವರಲ್ಲಿ ಜಾಗ್ರತಿಯನ್ನುಂಟುಮಾಡಿತ್ತು. ಯಾಕೆಂದರೆ ಚರಖಾವೆಂದರೆ ಅದರಲ್ಲಿ ಅನೇಕಾನೇಕ ಕೈಗಾರಿಕೆಗಳು ಅಡಗಿವೆ. ಇವು ಗ್ರಾಮದ ಬಡಗಿಯವನಿಂದ ಸೇರಿ ಎಲ್ಲರನ್ನೂ ಕೆಲಸದಲ್ಲಿ ಇರಿಸುವವು. ಚರಖಾವು ಭಾರತದ ಏಳು ಲಕ್ಷ ಗ್ರಾಮಗಳಲ್ಲಿ ನೆಲಸಿಂತು ಪ್ರತಿಯೊಬ್ಬನೂ ಸ್ವತಂತ್ರನಾಗಿ ಜೀವನ ನಡೆಸುವ ಸಹಕಾರಿಯಾಗಿತ್ತು. ಪರದೇಶಿ ಕೈಗಾರಿಕೆಗಳ ಸ್ಪರ್ಧೆಗೆ ಸಿಲುಕಿ ಗ್ರಾಮದಲ್ಲಿ ನೆಲೆನಿಂತಿದ್ದ ಚರಖಾವು ಮಾಯವಾಗಲು ಗ್ರಾಮ ಕೈಗಾರಿಕೆಗಳು ಮಾಯವಾದವು. ಅವುಗಳ ಬದಲು ಯಾವ ಕೈಗಾರಿಕೆಯೂ ಗ್ರಾಮಗಳಿಗೆ ಕಾಲಿಕ್ಕಲಿಲ್ಲ. ಅವ ಪ್ರಯುಕ್ತ ಗ್ರಾಮಗಳು ತಮ್ಮಲ್ಲಿದ್ದ ಕೈಗಾರಿಕಾ ಸವಲತ್ತನ್ನು ಕಳೆದುಕೊಂಡು ಆರ್ಥಿಕ ಅವ್ಯವಸ್ಥೆಯ ಬೀಡಾದವು.

ಬೇರೆ ರಾಷ್ಟ್ರಗಳಲ್ಲಾದರೂ ಇದೇ ರೀತಿಯಲ್ಲಿ ಆಧುನಿಕ ಯಂತ್ರ ಕಾರ್ಖಾನೆಗಳಿಂದಾಗಿ ಗ್ರಾಮಕೈಗಾರಿಕೆಗಳು ಮೂಲೆ ಸೇರಿದವು ನಿಜ. ಆದರೆ ಅವುಗಳ ಬದಲು ಅಲ್ಲಿ ಬೇರೆ ಕೈಗಾರಿಕೆಗಳು ಪ್ರಾರಂಭಗೊಂಡು ಅವರಿಂದುಂಟಾದ ನಷ್ಟವು ಸಮಗೂಡಲ್ಪಟ್ಟಿತು. ಗ್ರಾಮದ ಜೀವನಕ್ರಮಕ್ಕೆ ಧಕ್ಕೆ ಬಾರದೆ ಮುಂದರಿಯುವಂತಾಯಿತು. ಆದರೆ ಭಾರತದ ಗ್ರಾಮಗಳಲ್ಲಿ ಈ ರೀತಿಯ ಬದಲು ಕಾರ್ಯಭಾರವು ಆಗಲಿಲ್ಲ. ಆಧುನಿಕ ನಾಗರೀಕತೆಯಲ್ಲಿ ಮುಂದರಿದಿರುವ ಪಾಶ್ಚಿಮಾತ್ಯರಾಷ್ಟ್ರಗಳು ಇತರ ರಾಷ್ಟ್ರಗಳನ್ನು ಸುಲಿಗೆ ಮಾಡುತ್ತಿವೆ. ಹಿಂದೂದೇಶವು ಈ ರೀತಿ ಸುಲಿಗೆ ಮಾಡಲ್ಪಟ್ಟ ರಾಷ್ಟ್ರ. ಆದ್ದರಿಂದ ಭಾರತೀಯರು ಸುಧಾರಿಸಿಕೊಂಡು ಆರ್ಥಿಕ ಹಾಗೂ ಇತರ ಸೌಕರ್ಯಗಳ ಭದ್ರ ತಳಹದಿಯ ಮೇಲೆ ನಿಲ್ಲಬೇಕಾದರೆ ಗ್ರಾಮಗಳಿಂದ ಮಾಯವಾಗಿರುವ ಚರಖಾದ ಪುನರ್ನಿರ್ಮಾಣವಾಗಬೇಕು. ಪ್ರತಿ ಮನೆಗಳಲ್ಲಿಯೂ ಚರಖಾದ ಮಂಜುಳಗಾನವು ಕೇಳಬರಬೇಕು. ಗ್ರಾಮಾಂತರಗಳಲ್ಲಿ ಚರಖಾದ ಪುನರ್ನಿರ್ಮಾಣವಾಗಬೇಕಾದರೆ ನಿಸ್ವಾರ್ಥ ಕೆಲಸಗಾರರ ಪಡೆಯೊಂದು ಬೇಕು. ಪ್ರತಿ ಗ್ರಾಮಗಳಲ್ಲಿ ಚರಖಾದ ಉಪಯೋಗವನ್ನು ಬೋಧಿಸಿ ಕಷ್ಟಪರಂಪರೆಯಲ್ಲಿ ಸಿಲುಕಿ ನಿಸ್ತೇಜಗೊಂಡಿರುವ ಬಡಜನತೆಗೆ ತಮ್ಮ ಉದ್ಧಾರದ ಬಗ್ಗೆ ಆಶಾಕಿರಣವಾಗಿರುವ ಚರಖಾವಲಂಬನವನ್ನು ಮಾಡಿಸುವುದು ಬೇಕು. ಇದು ನಮ್ಮ ಮುಂದಿರುವ ಪ್ರಚಂಡವಾದ ಕಾರ್ಯಕ್ರಮ. ಇದೇ ನಿಜವಾದ ಜನತಾಶಿಕ್ಷಣ. ಕ್ರಮೇಣ ಈ ಚರಖಾವು ಸಾಧನದಿಂದ ಗ್ರಾಮಾಂತರಗಳಲ್ಲಿ ಕೈಗಾರಿಕಾ ಕ್ರಾಂತಿಯನ್ನೇ ಮಾಡಿ ಗ್ರಾಮಗಳ ಯಾಕೆ? ಭರತಖಂಡದ ಮುನ್ನಡೆಗೆ ಮಾರ್ಗದರ್ಶಿಯಾಗುವುದರಲ್ಲಿ ಸಂಶಯವಿಲ್ಲ.

ಚರಖಾಕಾರ್ಯದಲ್ಲಿ 20 ವರ್ಷಗಳಿಂದ ನನಗುಂಟಾದ ಅನುಭವವು ಈ ಮೇಲ್ಕಂಡ ನನ್ನ ಹೇಳಿಕೆಗೆ ಆಧಾರವಾಗಿದೆ. ಚರಖಾವು ಬಡ ಹಿಂದೂ ಮುಸ್ಲಿಮರನ್ನು ಏಕೀಕರಿಸಿ ಪೊರೆದಿದೆ. ಯಾವದೊಂದೂ ಜಾಹೀರಾತು ಯಾ ಬಹಿರಂಗ ಘೋಷಣೆಯಿಲ್ಲದೆ ಚರಖಾವು ಈ ಬಡ ಭಾರತೀಯ ಕೆಲಸಗಾರರ ಕಿಸೆಗೆ ಐದು ಕೋಟಿ ರೂಪಾಯಿಗಳನ್ನು ಹಾಕಿದೆ. ಆದ್ದರಿಂದ ಚರಖಾವೇ ನಮ್ಮನ್ನು ಸ್ವಾತಂತ್ರ್ಯದ ಬಾಗಿಲಿಗೆ ಮುಟ್ಟಿಸುವುದರಲ್ಲಿ ಸಂಶಯವಿರಲಾರದೆಂದು ಧೈರ್ಯಪೂರ್ವಕ ನಾನು ಹೇಳಬಯಸುತ್ತೇನೆ. ಚರಖಾವು ಅಧೋಗತಿಗಿಳಿದಿರುವ ಗ್ರಾಮಗಳನ್ನು ತಮ್ಮ ನಿರ್ದಿಷ್ಟ ಸ್ಥಾನದಲ್ಲಿ ನಿಲಿಸಿ ಬಡವ ಬಲ್ಲಿದರೆಂಬ ಭೇದಭಾವವನ್ನು ತೊಡೆದು ಹಾಕಿ ಎಲ್ಲರಲ್ಲಿ ಐಕ್ಯತೆಯನ್ನು ಸ್ಥಾಪಿಸಲು ಸಮರ್ಥವಾದ ಸಾಧನ. ಆದರೆ ಜನತೆಗೆ ಅಹಿಂಸೆಯಲ್ಲಿ ನಂಬಿಕೆಯಿಲ್ಲದ ಪಕ್ಷ, ಚರಖಾವು ಭಾರತೀಯರಿಗೆ ಸ್ವಾತಂತ್ರ್ಯವನ್ನು ಗಳಿಸಲಾರದು. ಚರಖಾವು ಮನಸನ ಚಿಕಿತ್ಸೋಪದೇಶಗೊಳ್ಳುವ ನಮ್ಮನಲ್ಲ. ಸ್ವಾತಂತ್ರ್ಯ ಸಂಪಾದನೆಗಾಗಿ ಟೊಂಕಕಟ್ಟಿ ನಿಂತಿರುವ ಮಹಾಯೋಧರೇ ಚರಖಾದ ಮಹತ್ವವನ್ನರಿಯದೆ ನಿಕೃಷ್ಟಭಾವದಿಂದ ಕಾಣುವರು. ಚರಖಾವು ರಾಷ್ಟ್ರಗಳಿಗೆ ಸ್ವಾತಂತ್ರ್ಯ ಸಂಪಾದಿಸಿ ಕೊಟ್ಟ ಉದಾಹರಣೆಗಳು ಚರಿತ್ರೆಯ ಪುಟಗಳಲ್ಲಿಲ್ಲವೆನ್ನುವರು. ರಾಷ್ಟ್ರಗಳಾದರೂ ಬಿಸಿ ರಕ್ತದ ಮಳೆಯನ್ನು ಸುರಿಸಿಯೇ ಸ್ವತಂತ್ರವಾಗಿರುವವೆಂದು ಉದ್ಘರಿಸುವರು. ಆದರೆ ಚರಖಾದಲ್ಲಿ ಹಿಂಸೆಯ ಸುಳಿವಿಲ್ಲ. ಅದು ಕೇವಲ ಸಾಧು ಕಾರ್ಯಭಾರ.

1919ರಲ್ಲಿ ಭಾರತ ಸ್ವಾತಂತ್ರ್ಯಕಾಂಕ್ಷಿಗಳು ಭಾರತದ ಬಂಧವಿಮೋಚನೆಗೆ ಅಹಿಂಸೆಯೇ ಸುಗಮ ಮಾರ್ಗವೆಂದೂ, ಚರಖಾವು ಅಹಿಂಸೆಯ ಒಂದು ದ್ಯೋತಕವೆಂದೂ ಗ್ರಹಿಸಿ ಅದನ್ನು ಜಾರಿಯಲ್ಲಿ ತಂದಿರುವರು. ಚರಖಾವು 1921ರಲ್ಲಿ ರಾಷ್ಟ್ರಧ್ವಜದ ಮಧ್ಯದ ಗಣನೀಯಸ್ಥಾನ ಪಡೆಯಿತು. ಆದರೆ ಅಹಿಂಸೆಯು ಭಾರತ ಜನತೆಯ ಹೃದಯಾಂತರಾಳವನ್ನು ಹೊಕ್ಕಿಲ್ಲ. ಅದ ಪ್ರಯುಕ್ತ ಚರಖಾವು ಪಡೆಯಬೇಕಿದ್ದಷ್ಟು ಮಾನ್ಯತೆ ಪಡೆಯಲಿಲ್ಲ. ಕಾಂಗ್ರೆಸಿನ ಧ್ವಜದಡಿಯಲ್ಲಿರುವ ಅಖಂಡ ಜನತೆಯು ಅಹಿಂಸೆಯ ಮಹತ್ವವನ್ನರಿಯದ ವಿನಹ ಚರಖಾಕ್ಕೆ ಗಣನೀಯಸ್ಥಾನ ಸಿಗುವದು ಕಷ್ಟ. ಅಹಿಂಸಾದಲ್ಲಿ ಅವರು ಭಕ್ತಿಯಿಟ್ಟರೇ ಆದರೆ ಚರಖಾದ ಮಹತ್ವವನ್ನು ಅವರೇ ಕಂಡುಕೊಳ್ಳುವರು. ಅಹಿಂಸೆಯಿಲ್ಲದೆ ಅಹಿಂಸಾಯುತ ಕಾಯಿದೆ ಭಂಗವನ್ನು ಮಾಡುವದು ಶಕ್ಯವಿಲ್ಲ. ನನ್ನ ವಿಚಾರವು ತಪ್ಪಿರಬಹುದು. ಆದರೆ ನಾನು ವಿವರಿಸಿದ ವಿಚಾರದ ದೃಷ್ಟಿಯಿಂದ ಸತ್ಯಾಗ್ರಹದ ಬಗ್ಗೆ ಜನತೆಯ ಮುಂದಿಟ್ಟಿರುವ ಶರತುಗಳನ್ನು ಅವರು ಪಾಲಿಸದ ವಿನಹ ಸತ್ಯಾಗ್ರಹ ಪ್ರಾರಂಭ ಮಾಡುವುದು ನನಗೆ ಸಾಧ್ಯವಿಲ್ಲವೆಂದು ಇಲ್ಲಿ ಹೇಳಬಯಸುತ್ತೇನೆ.

ಭಾರತದ ವಿಭಜನೆ.

ಭಾರತವನ್ನು ಹಿಂದೂ ಮತ್ತು ಮುಸ್ಲಿಂ ಭಾರತಗಳೆಂದು ಎರಡು ಭಾಗಮಾಡಬೇಕೆಂಬ ಮುಸ್ಲಿಂ ಲೀಗಿನ ಘೋಷಣೆಗೆ ಉತ್ತರವನ್ನಿತ್ತ ಗಾಂಧೀಜಿಯವರ ಪತ್ರಕ್ಕೆ ಜವಾಬಾಗಿ ನವಾಬಜಾದಾ ಲಿಯಾಕತ್ ಅಲಿ ಖಾನರವರು ಕೇಳಿದ ಪ್ರಶ್ನೆಗಳಿಗೆ ಗಾಂಧೀಜಿಯವರು ಈ ರೀತಿ ಉತ್ತರ ಕೊಟ್ಟಿದ್ದಾರೆ.

'ನಾನು ಅಹಿಂಸಾ ತತ್ವೋಪಾಸಕನಾದ್ದರಿಂದ ಭಾರತವನ್ನು ಎರಡಾಗಿ ವಿಂಗಡಿಸುವ ಸೂಚನೆಯನ್ನು ಬಲಾತ್ಕಾರಯುತವಾಗಿ ವಿರೋಧಿಸಲಾರೆ. ಆದರೆ ಈ ವಿಭಜನೆಗೆ ನಾನು ಒಪ್ಪುವವನಲ್ಲ. ಅದನ್ನು ತಡೆಗಟ್ಟಲು ಎಲ್ಲ ರೀತಿಯ ಅಹಿಂಸಾ ಪ್ರಯತ್ನಗಳನ್ನು ನಾನು ಮಾಡುವೆನು. ಯಾಕೆಂದರೆ ಭಾರತದ ವಿಭಜನೆಯೆಂದರೆ ಅಸಂಖ್ಯಾತ ಹಿಂದೂ ಮುಸ್ಲಿಮರಿಂದ ಎಲ್ಲರೂ ಸಂಘಟಿತವಾಗಿ ಭಾರತದಲ್ಲಿ ಜೀವಿಸಬೇಕೆಂದು ಶತಮಾನಗಳಿಂದ ಮಾಡಲ್ಪಟ್ಟ ಮತ್ತು ಮಾಡಲ್ಪಡುತ್ತಿರುವ ಪ್ರಯತ್ನಗಳ ಬುಡಕ್ಕೇ ಕೊಡಲಿ ಹಾಕುವ ವ್ಯಾಪಾರ. ಹಿಂದೂ ಮುಸ್ಲಿಮರು ಬೇರೆ ಬೇರೆ ಮತದವರು, ತಕ್ಕದವರು ಎಂದಾಗ ನನ್ನ ಆತ್ಮವು ಇದಕ್ಕೆ ವಿರುದ್ಧ ಉದ್ರೇಕಗೊಳ್ಳುತ್ತದೆ. ಇಂಥಾ ಒಂದು ತತ್ವಕ್ಕೆ ಒಪ್ಪುವದೆಂದರೆ ನನ್ನ ಪಾಲಿಗೆ ದೇವರನ್ನು ನಿರಾಕರಿಸಿದಂತೆ. ಯಾಕೆಂದರೆ ನನ್ನ ಹೃದಯಾಂತರಾಳದಿಂದ, ಕುರಾನಿನ ದೇವರೇ ಗೀತೆಯಲ್ಲಿ ಉಲ್ಲೇಖಿಸಲ್ಪಟ್ಟ ಪರಮಾತ್ಮನೆಂದು ನಂಬಿರುವೆನು. ವಿವಿಧ ರೀತಿಯಿಂದ ನಾವು ಆತನನ್ನು ಕರೆದರೂ, ವಿವಿಧ ಹೆಸರುಗಳನ್ನು ನಾವು ನಮ್ಮೊಳಗೆ ಇಟ್ಟುಕೊಂಡರೂ ಎಲ್ಲರೂ ಜಗನ್ನಿಯಾಮಕನಾದ ಆ ಅಂತರಾತ್ಮನ ಮಕ್ಕಳೇ ಎಂಬುದು ನಮಗೆ ತಿಳಿದಿದೆ.

ಇದೆಲ್ಲಾ ನಂಬಿಕೆ. ಇದನ್ನು ತಾವು ಪ್ರತ್ಯೇಕ ಜನಾಂಗವೆಂದು ಭಾವಿಸುವ ಮುಸ್ಲಿಮರ ಗಂಟಲಿಗೆ ತುರುಕಲು ನಾನು ಪ್ರಯತ್ನಿಸಲಾರೆ. ಆದರೆ ಭಾರತೀಯರಾಗಿರುವ 8 ಕೋಟಿ ಮುಸ್ಲಿಮರು ತಾವು ಇತರ ಕೋಮುಗಳಿಗಿಂತ ಭಿನ್ನ ಇರುವವರೆಂದು ಹೇಳುವ ವಿಚಾರ ನಾನು ಒಪ್ಪಲಾರೆ. ಕಾಂಗ್ರೆಸ್ ಜಾರಿಯಲ್ಲಿ ತರಬೇಕೆಂದು ಹಂಬಲಿಸುತ್ತಿರುವ ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿಯು ಎಲ್ಲಾ ಪಕ್ಷಗಳ ಹಿತವನ್ನು ಸಲ್ಲಿಸುವದು.

ಕೋಮುವಾರು ಐಕ್ಯತೆಯಿಲ್ಲದ ಅಹಿಂಸಾಯುತ ಸ್ವರಾಜ್ಯವು ಅಸಾಧ್ಯವೆಂದು ನಾನು ಇನ್ನೂ ನಂಬಿರುವೆನು. ಎಂಟು ಕೋಟಿ ಮುಸ್ಲಿಮರು ನಿಜವಾಗಿಯೂ ಶಾಂತಿಯುತವಾದ ಸ್ವಾತಂತ್ರ್ಯ ಹಾದಿಯನ್ನು ತಡೆಯಬಲ್ಲರು. ಹೀಗಿದ್ದರೂ ನಾನು ಕಾಯಿದೆಭಂಗ ಚಳವಳದ ವಿಚಾರ ಮಾತಾಡುವದು ಬರೇ ಹಿಂದುಗಳಿಗಾಗಿಯೇ ಅಲ್ಲ; ಯಾಕೆಂದರೆ ಭಾರತ ಸ್ವಾತಂತ್ರ್ಯವು ಮುಸ್ಲಿಮರಿಗೂ ಬೇಕಿದೆ. ಸತ್ಯಾಗ್ರಹ ಅಥವಾ ಕಾಯಿದೆಭಂಗವೆಂದರೆ ಜನತೆಯಲ್ಲಿ ವಿಚಾರೋದ್ರೇಕವಾಗುವದು. ರಾಷ್ಟ್ರದ ರಾಜಕೀಯ ಮಟ್ಟವು ಮೇಲಕ್ಕೇರುವದು. ಭಾರತವು ತನ್ನ ಭವಿತವ್ಯವನ್ನು ರೂಪಿಸುವ ಶಕ್ತಿಯನ್ನು ಪಡೆದ ಕಾಲಕ್ಕೆ ಮುಸ್ಲಿಮರಿಗೆ ಅದರಲ್ಲಿ ಉಚಿತ ಭಾಗ ಲಭಿಸುವದೆಂಬುವದರಲ್ಲಿ ಸಂಶಯವಿಲ್ಲ.

ಕಾಂಗ್ರೆಸ್ಸಿನ ಧ್ಯೇಯವು ರಾಜಕೀಯ ದೃಷ್ಟಿಯಿಂದಲೇ ಆಗಿದೆ. ನನಗೆ ಯಾವುದರಲ್ಲಿ ಭಯವೂ ಇಲ್ಲ. ನನ್ನ ಜೀವನವೆಲ್ಲವೂ ತೆರೆದ ಪುಸ್ತಕದಂತೆ. ಅದರಲ್ಲಿ ಗುಟ್ಟಿಗೆ ಅವಕಾಶವಿಲ್ಲ. ನಾನೆಲ್ಲಿ ಹೋದರೂ ನನಗೆ ಮನಸ್ಸಿನಲ್ಲಿ ಶಂಕೆಯೇ ಭಾಸವಾಗುವದು. ಯಾಕೆಂದರೆ ಎಲ್ಲಾ ಮತಗಳೂ, ನನ್ನ ಮತದಂತೆಯೇ. ಎಲ್ಲರೂ ನನ್ನ ಸಹೋದರರೇ.'

ರು ಕೈಕೇರಿ ಸಂಘದ ಸಾಲ ಹೊಂದಿಕೊಂಡ ಮೆಂಬರುಗಳಿಂದ ವಸೂಲಾಗಬೇಕಾದ ಬಡ್ಡಿಯ ವಿಷಯದಲ್ಲಿ ಬರಕೊಂಡ ರಿಪೋರ್ಟನ್ನೂ ಮತ್ತು ಸದರಿ ಸಂಘದ ಪ್ರೆಸಿಡೆಂಟರು 1635 ರೂಪಾಯಿ ಹೆಚ್ಚಿನ ಸಾಲ ಕೊಡಬೇಕೆಂದು ಬರಕೊಂಡ ರಿಪೋರ್ಟನ್ನೂ ಓದಲಾಯಿತು.

ಸದರಿ ಸಂಘದ ವಸೂಲಾತಿಯು ಶೇಕಡ 50ಕ್ಕೆ ತಲಪದ್ದರಿಂದ ಕಳೆದ ಮೀಟಿಂಗಿನಲ್ಲಿ ಮಂಜೂರಾದ ಸಾಲವನ್ನು ಬಟವಾಡೆ ಮಾಡಕೂಡದಾಗಿ ತೀರ್ಮಾನಿಸಲಾಯಿತು.

21. ಕೋಟೂರು ಸಂಘಕ್ಕೆ ಕಳೆದ ಮೀಟಿಂಗಿನಲ್ಲಿ ಮಂಜೂರಾದ 1500 ರೂ. ಸಾಲಕ್ಕೆ 7 ಕಂತು ಬದಲು 10 ಕಂತು ಕೊಡಬೇಕಾಗಿ ಸದರಿ ಸಂಘದ ಪ್ರೆಸಿಡೆಂಟರು ಬರಕೊಂಡ ರಿಪೋರ್ಟಿನ ಮೇರೆ 8 ಕಂತು ಕೊಡಬಹುದಾಗಿ ತೀರ್ಮಾನಿಸಲಾಯಿತು.

22. ತಾ. 18-2-40ರ ಜನರಲ್ ಮೀಟಿಂಗಿನಲ್ಲಿ ಮಂಜೂರು ಮಾಡಿದ ಮೇರೆ ಬ್ಯಾಂಕಿನ ಕಾರ್ಯದರ್ಶಿಯವರಾಗಿದ್ದ ಮಿ. ಎಸ್. ಎನ್. ರಾಮಶೆಟ್ಟಿಯವರಿಗೆ 330 ರೂ. ಪುರ್ಯೋವೆ ಧನ ಕೊಡುವಂತೆ ತೀರ್ಮಾನಿಸಲಾಯಿತು.

ಪಿ. ವಿ. ಬೆಳ್ಯಪ್ಪ,
ಅಧ್ಯಕ್ಷರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಅ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	48,470	0	0
ಜಮೂಬಂದ ಠೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ತ್ರಿಫ್ಟ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3¼ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1–9–1937ರಿಂದ ಬಡ್ಡಿ ದೊರೆಯುತ್ತೆ.

ತಾ 1–10–1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1–4–1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1–8–38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಆದರೆ ಪುನಹ ತಾ. 29–7–39ರಿಂದ ತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.

ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.

ಸೆಕ್ರೆಟರಿ:—ಮ. ಕೆ. ಸಿ. ಕರುಂಬಯ್ಯನವರು ಎಂ. ಎಲ್. ಸಿ.

ತಾ. 1–3–1940

ಕೊಡಂದೇರ ಡಿ. ಮಾಚಯ್ಯ,

L. D. Sc. (COLLEGE OF DENTISTRY)

EX-SUPERVISOR LAXMIBAI PATEL DENTAL HOSPITAL, KARACHI

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ

ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (40) ನವೀನ ರೀತಿಯ ಚಿಕಿತ್ಸೆ.

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ

ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿಗೆ 1 ರೂ. ವಿ ಪಿ ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವುದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕ. ಮತ್ತು ಕಂಪೆನಿ,

(52–16) ಗಿರಗಾಂ, ಮುಂಬಯಿ ೪,

ನೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಆಂವರೆ-ಜಮಾ, ಖರ್ಚು, [illegible]ಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸುಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ದಾವಾ ಮತ್ತು ಆಮಲ್ದಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟೈಪ್‌ರ್ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,

Tutorial School,

52—44 **Mercara, and Virajapet.**

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:–ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ

ಕೆ. ಪಿ. ಕೆ. ಪಣಿಕರ್,

ವೈದ್ಯ & ಅಸ್ಟ್ರೊಲಜರ್,(ರಿಜಿಸ್ಟರ್ಡ್.)

52–10 **ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.**

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg. No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಬಿ. ಟಿ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೨೬—೪—೧೯೪೦. ಸಂಪುಟ ೧೯] [ಸಂಚಿಕೆ ೪೬

ಭದ್ರತೆ! ವಿಶ್ವಾಸಾರ್ಹತೆ!! ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ ಭದ್ರತೆಯನ್ನು, ಸತತ ಸೇವೆ ತೋರಿಸಿ, ಠೇವಣಾತಿದಾರರಿಗೆ ಸುರಕ್ಷಿತತೆಯನ್ನು ಹೆಚ್ಚಿಸಿ,
ಸರ್ವರ ವಿಶ್ವಾಸಕ್ಕೆ ಪಾತ್ರವಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ದೇಶಿಯ ಸಂಸ್ಥೆ.

ನಿರಖು ಠೇವಣಾತಿ ಒಂದು ವರ್ಷಕ್ಕೆ 3½% (ಸಾಲಿಯಾನ ಶೇಕಡ)
ಬಡ್ಡಿ ದರಗಳು: 2 & 3 ವರ್ಷಕ್ಕೆ 4% ,,

ಒಂದು ವರ್ಷ [illegible] ಹೆಚ್ಚು ವಾಯಿದೆಯ, ಅಲ್ಪಾವಧಿಯ, ಠೇವಣಾತಿಗಳನ್ನು
[illegible] ಬಡ್ಡಿ ದರಗಳಲ್ಲಿ ಪಡೆಯಬಹುದು.

ಮೂರು ವರ್ಷದ ಕ್ಯಾಶ್ ಸರ್ಟಿಫಿಕೇಟುಗಳು... ಬಡ್ಡಿಯ ದರವು ಸಾಲಿಯಾನ ಶೇಕಡಾ 4 ರಲ್ಲಿ. ವಾಯಿದೆಯ ಮೊದಲು, ಯಾವಾಗಲೂ 15 ದಿನಗಳ ನೋಟೀಸು ಕೊಟ್ಟಲ್ಲಿ ಹಣವನ್ನು ಹಿಂತಿರುಗಿ ಪಡೆಯಬಹುದು.
ಸೇವಿಂಗ್ಸ್ ಬೇಂಕ್ ಡಿಪಾಜಿಟ್ಸ್:—ಒಂದು ಲೆಕ್ಕದಲ್ಲಿ ರೂ 5,000 ದ ವರೆಗೆ ಹಣ ಇಡಬಹುದು. ಚೆಕ್ಕು ಮೂಲಕ ಹಣ ಹಿಂದೆ ಪಡೆಯಬಹುದು.
ಸಾಲಿಯಾನ ಶೇಕಡಾ 2½ ಸಲೆಯಲ್ಲಿ ಬಡ್ಡಿ ಸಿಗುವುದು.
ಕರೆಂಟ್ ಡಿಪಾಜಿಟ್ಸ್, ಕ್ಯುಮ್ಯುಲೇಟಿವ್ ಡಿಪಾಜಿಟ್ಸ್ ಲೆಕ್ಕಗಳನ್ನು ತೆರೆಯಬಹುದು.

ಬೊಂಬಾಯಿ, ಕಲ್ಕತ್ತಾ, ಮದ್ರಾಸು, ಕಲ್ಲಿಕೋಟೆ, ಕಣ್ಣಾನೂರು, ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ
ಅನೇಕ ಸ್ಥಳಗಳ ಮೇಲೆ ಡ್ರಾಫ್ಟುಗಳನ್ನೂ ಚೆಕ್ಕುಗಳನ್ನೂ ಕೊಡಬಹುದು; ವಟಾಯಿಸಲೂ ಬಹುದು.

THE CANARA BANKING CORPORATION LIMITED.

52–18 ಚಿನ್ನಾಭರಣಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್,
ಕಟಪಾಡಿ,—ದ. ಕನ್ನಡ.
(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

52–24

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಚಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.

ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ. ನೋಗಪ್ಪನವರು.

ನಾಪೋಕ್ಲು—ಮೆ. ಬೆಳ್ಳಿಯಂಡ ಯಂ. ಪೂಣ್ಣನವರು.
ನಾಪೋಕ್ಲು

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಸ್ಪ್ಲೀನ್ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:—	(ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:—	(ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:—	(ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52-29) ಸಂಸ್ಕೃತ ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು—ಕೆ. ರಾಮಕೃಷ್ಣರಾವ್,
ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ಡಾಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮುಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ ಏಜೆಂಟರ್ಶಿಪ್‌ಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ಸಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಶ್ರೀ ಬ್ರಹ್ಮದತ್ತ, ಬಿ.ಎಸ್ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಗಯ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-13

ರೊಮೇನಿಯಾದಲ್ಲಿ

ಜರ್ಮನರ ಬಲಾತ್ಕಾರ!

ಸತತ ಎಣ್ಣೆ ಸರಬರಾಯಿಯ ನಿರ್ಬಂಧ.

ರೊಮೇನಿಯಾಕ್ಕೆ ಮಿತ್ರರಾಷ್ಟ್ರಗಳ ಆಶ್ವಾಸನ.

ನಾಝಿ ಆರ್ಥಿಕ ಯೋಜನೆಯ ಅಂತರಂಗ.

ಎಣ್ಣೆಯ ಮಹತ್ವ.

1939ನೇ ಪ್ರಥಮ ತ್ರೈಮಾಸಿಕ ಅವಧಿಯಲ್ಲಿ ಸೋವ್ಹಿಯಟ್ ಯೂನಿಯನ್ನು ಜರ್ಮನಿಗೆ 4,000 ಟನ್ ಎಣ್ಣೆ ಪೂರೈಸಿತು. ಆದರೆ ಅದೇ ಅವಧಿಯಲ್ಲಿ ರುಮೇನಿಯಾ 44,000 ಟನ್ ಎಣ್ಣೆ ಪೂರೈಸಿತು. ಸೋವ್ಹಿಯಟ್ ಎಣ್ಣೆಯ ಹುಟ್ಟುವಳಿಯು ಯೋಚಿಸಿದಂತೆ ಹೆಚ್ಚಿಲ್ಲ. ಇಷ್ಟೇ ಅಲ್ಲ ಸ್ವಂತ ಉಪಯೋಗಕ್ಕೂ ಹೆಚ್ಚು ಎಣ್ಣೆ ಅದಕ್ಕೆ ಬೇಕಾಗುತ್ತಿದೆ.

ಸೈನ್ಯದ ಯಂತ್ರೀಕರಣದ ಮೂಲಕ ಇಂದು ಎಣ್ಣೆಗೆ ವಿಶೇಷ ಮಹತ್ವವುಂಟಾಗಿದೆ. ಆಕಾಶಬಲದ ಬೆಳವಣಿಗೆಯೂ ಇದಕ್ಕೆ ಕಾರಣವಾಗಿದೆ. ಆದರೆ ಜರ್ಮನಿಯ ಸಮುಪ್ರದಾಯದ ಪೂರೈಕೆಯು ಅನೇಕ ಕಾರಣಗಳಿಂದ ಈಗ ಕಷ್ಟಕ್ಕೀಡಾಗಿದೆ. ನಿರ್ಬಂಧವು ಒಂದು ಪ್ರಮುಖ ಕಾರಣವಾಗಿದೆಯೆನ್ನಬಹುದು. ಇದರಿಂದ ರುಮೇನಿಯಾದ ಮೇಲೆಯೇ ಜರ್ಮನಿಯ ಎಲ್ಲಾ ಭಾರವಿದೆ. 'ಇರ್‌ಸಾಜ್' ಎಂಬ ಕೃತ್ರಿಮ ಎಣ್ಣೆಯನ್ನು ಸಿದ್ಧಪಡಿಸಿ ಎಣ್ಣೆಯ ಕೊರತೆಯನ್ನು ಹೋಗಲಾಡಿಸಿಕೊಳ್ಳಬೇಕೆಂಬ ಜರ್ಮನಿಯ ಹವ್ಯಾಸವು ಸಾಧ್ಯವಾಗುವ ಲಕ್ಷಣಗಳು ಕಾಣುವದಿಲ್ಲ. ಯಾಕೆಂದರೆ ಈ ಎಣ್ಣೆಯನ್ನು ಸಿದ್ಧಪಡಿಸಲು ಅಪಾರ ವೆಚ್ಚವು ತಗಲುವದು. 'ಇರ್‌ಸಾಜ್' [ಕೃತ್ರಿಮ ಎಣ್ಣೆ] ಸಿದ್ಧಪಡಿಸುವ ವೆಚ್ಚದಲ್ಲಿ ಅದರ ಮೂರು ಪಟ್ಟು ನೈಸರ್ಗಿಕ ಎಣ್ಣೆಯು ದೊರೆಯುವದು. ಯುದ್ಧವು ಪ್ರಖರವಾದಂತೆ ಈ ಶಾಸ್ತ್ರೀಯ ಪ್ರಯೋಗವು ಮತ್ತಷ್ಟು ಬಿಕ್ಕಟ್ಟಿನದಾಗುವದು.

ಪರಕೀಯರ ಹಿತಸಂಬಂಧಗಳು.

ಮಹಾಯುದ್ಧಕ್ಕಿಂತ ಮೊದಲು ರುಮೇನಿಯಾದ ಎಣ್ಣೆಗಳೆಲ್ಲ ಆಸ್ಟ್ರಿಯಾ-ಜರ್ಮನಿಗಳ ಬಂಡವಲಿನಿಂದಲೇ ಬಹುತರ ನಡೆಯುತ್ತಿದ್ದವು. ರುಮೇನಿಯಾದ ಬಲು ದೊಡ್ಡ ಎಣ್ಣೆಯ ಖಣಿ 'ಸ್ಟಾಕಿಮೊನಾ' ಎಂಬುದು 1918ರ ವರೆಗೆ ಜರ್ಮನಿಯ ಕೈಯಲ್ಲಿಯೇ ಇದ್ದಿತೆಂದೆನ್ನಬಹುದು. ಅದರಂತೆ ಮತ್ತೆ ಮೂರು ನಾಲ್ಕು ಖಣಿಗಳೂ ಜರ್ಮನರ ಅಧೀನದಲ್ಲಿಯೇ ಇದ್ದವು. ಆದರೆ ಯುದ್ಧದ ನಂತರ ಪರಿಸ್ಥಿತಿ ಬದಲಾಯಿತು. ಜರ್ಮನಿಯ ಮಬ್ಬಳಿಕೆಗೆ ಸಿಕ್ಕಬಿದ್ದ ರುಮೇನಿಯಾಕ್ಕೆ ತನ್ನ ಎಣ್ಣೆ ಉದ್ಯೋಗವನ್ನು ಬೆಳಿಸಲು ಮೊದಲು ಸಾಧ್ಯವಾಗಿರಲಿಲ್ಲ. ಯುದ್ಧದ ನಂತರ ಉಳಿದವರಿಗೂ ಅಲ್ಲಿ ತುಂಬ ಅವಕಾಶ ದೊರೆಯಿತು. ಕಳೆದ ವರ್ಷ ರುಮೇನಿಯಾದ ಎಣ್ಣೆ ಗಣಿಗಳಲ್ಲಿ ರುಮೇನಿಯಾ 3½ ಅಬ್ಜ, ಬ್ರಿಟಿಷ್ 3½ ಅಬ್ಜ, ಆಂಗ್ಲೋ-ಡಚ್ 2.1 ಅಬ್ಜ, ಫ್ರೆಂಚ್ 2.2 ಅಬ್ಜ, ಅಮೇರಿಕಾ 1.4 ಅಬ್ಜ ಲೀಗಳನ್ನು (ರುಮೇನಿಯಾ ನಾಣ್ಯ) ತೊಡಗಿಸಿದವು. ಜರ್ಮನಿಯ ಬಂಡವಲು ಮಾತ್ರ 320 ಲಕ್ಷ ಲೀಗಳಿದ್ದಿತು! ಈ ಪ್ರಕಾರ ಪಶ್ಚಿಮ ಸರಕಾರಗಳು ರುಮೇನಿಯಾದಲ್ಲಿ ಗಟ್ಟಿಮುಟ್ಟಾಗಿ ತಳವೂರಿದವು.

ಜರ್ಮನಿಯ ಹವ್ಯಾಸ.

ಆದರೆ ಇತ್ತೀಚೆಗೆ ನಾಝಿ ಆಳಿಕೆಯ ಪ್ರಾರಂಭವಾದಂದಿನಿಂದ ಜರ್ಮನಿಯು ರುಮೇನಿಯಾ ಎಣ್ಣೆ ಗಣಿಗಳಲ್ಲಿ ಹೆಚ್ಚು ಬಂಡವಲು ತೊಡಗಿಸಬೇಕೆಂದು ಹವಣಿಸುತ್ತಲಿದೆ. ಇಷ್ಟೇ ಅಲ್ಲ ಅಲ್ಲಿಯ ಪೂರೈಕೆಯನ್ನೆಲ್ಲ ತನ್ನ ನಿರ್ಯಂತ್ರಣದಲ್ಲಿಟ್ಟುಕೊಳ್ಳಬೇಕೆಂದೂ ಅದು ಹಾತೊರೆಯುತ್ತಲಿದೆ. ರುಮೇನಿಯಾದಿಂದ ಹೆಚ್ಚು ಎಣ್ಣೆಯನ್ನು ಕೊಂಡುಕೊಳ್ಳುತ್ತ ನಡೆದಿರುವ ಜರ್ಮನಿಗೆ ಕೆಲವು ಪಟ್ಟಿಗೆ ಇದರಲ್ಲಿ ಯಶಸ್ಸೂ ದೊರೆಯಿತು. ಜರ್ಮನಿಯು ಬಾಲ್ಕನ್ ರಾಷ್ಟ್ರಗಳೊಡನೆ ವ್ಯಾಪಾರ ಸಂಬಂಧವನ್ನು ಬೆಳೆಯಿಸಲಿಚ್ಛಿಸುವದೆಂದು ಪ್ರಚಂಡ ಆಂದೋಲನವೆಬ್ಬಿಸಿ ಆ ಆಂದೋಲನದ ಲಾಭವನ್ನು ಪಡೆಯಿತು. ಕೆಲವೆಡೆಗೆ ಬೆದರಿಕೆ ಹಾಕಿಯೂ ತನ್ನ ಕಾರ್ಯ ಸಾಧಿಸಿತು. ತೀರ ಇತ್ತೀಚೆಗಂತೂ ರುಮೇನಿಯಾ ಎಣ್ಣೆಯ ಉದ್ಯೋಗವನ್ನೇ ತನ್ನ ಹಿಡಿತದಲ್ಲಿಟ್ಟುಕೊಳ್ಳುವಲ್ಲಿ ಜರ್ಮನಿಯು ಬಲು ದಕ್ಷವಾಗಿದೆ. ಪಶ್ಚಿಮ ಸರಕಾರಗಳ ಕೈವಾಡವು ರುಮೇನಿಯಾದಲ್ಲಿ ವಿಶೇಷವಾಗಿದೆಯೆಂದೂ ಅದರಿಂದ ರುಮೇನಿಯಾದ ಎಣ್ಣೆಯ ಉದ್ಯೋಗಕ್ಕೆ ತುಂಬಾ ಹಾನಿಯಾಗುವದೆಂದೂ ಜರ್ಮನಿಯು ಹೊಲಿಯೆಬ್ಬಿಸಿತು. ಝೆಕೋಸ್ಲೋವ್ಹಾಕಿಯಾ, ಪೋಲೆಂಡುಗಳ ಮೇಲೆ ಹಾರಿ ಅವುಗಳ ಗೋಳುಮುರಿದ ಈ ನಾಝಿ ಹುಲಿಯು ರುಮೇನಿಯಾದ ಹಿತಚಿಂತನೆ ಮಾಡುವದು ಒಳ್ಳೇ ಮನೋರಂಜಕವಾದದ್ದು.

ರುಮೇನಿಯಾದ ಮೇಲೆ ಒತ್ತಾಯ!

ರುಮೇನಿಯಾ ಹೊಸದಾಗಿ ಎಣ್ಣೆ ನಿಯಂತ್ರಣ ಖಾತೆಯನ್ನೇರ್ಪಡಿಸಿದೆ ಇದಕ್ಕೂ ಜರ್ಮನಿಯ ಜುಲುಮೆಯೇ ಕಾರಣವೆಂದು ಹೇಳಲಾಗುತ್ತದೆ. 'ಇದು ಒಳ್ಳೇ ದಿಟ್ಟ ಕೆಲಸ'ವೆಂದು ಜರ್ಮನ್ ಪತ್ರಿಕೆಗಳು ಹೊಗಳಿದವು. ಆದರೂ ಎಣ್ಣೆಯ ಬಗ್ಗೆ ಬಡಿದಾಟವು ಮಾತ್ರ ಇನ್ನೂ ತಪ್ಪಿಲ್ಲ. ಜರ್ಮನಿಯು ರುಮೇನಿಯಾವನ್ನು ಇನ್ನೂ ಹೆಚ್ಚು ಹೆಚ್ಚಾಗಿ ಒತ್ತಾಯಪಡಿಸುತ್ತಿದೆಯೆಂದು ಸುದ್ದಿ.

ನಾಝಿ ಬೇಡಿಕೆಗಳನ್ನು ಮನ್ನಿಸುವದರ ಪರಿಣಾಮವೇನಾಗುವದೆಂಬುದು ರುಮೇನಿಯಾಕ್ಕೆ ಚೆನ್ನಾಗಿ ಗೊತ್ತು. ಜರ್ಮನಿಯು ಕೆಲ ಆಶ್ವಾಸನಗಳನ್ನು ಕೊಡುತ್ತಿದ್ದರೂ ರುಮೇನಿಯಾಕ್ಕೆ ಭರವಸೆಯಿಲ್ಲ. ರುಮೇನಿಯಾ ಜರ್ಮನೇತರ ರಾಷ್ಟ್ರಗಳೊಡನೆ ಇದ್ದ ಸಂಬಂಧವನ್ನು ಬಿಟ್ಟುಕೊಡಬೇಕೆಂದೂ ಎಣ್ಣೆಯನ್ನು ಮಿತವಾಗಿ ವೆಚ್ಚಮಾಡಬೇಕೆಂದೂ ಜರ್ಮನಿಯು ಆಗ್ರಹಪಡಿಸಹತ್ತಿದೆಯೆಂದು ತಿಳಿಯುತ್ತದೆ. ಅದರಂತೆ ಜರ್ಮನಿಗೆ ಕೆಲವು ಪ್ರದೇಶಗಳನ್ನು ಬಿಡಲಾಗಿಡಬೇಕೆಂದೂ ಅದರ ಒತ್ತಾಯ ಹೀಗೆ ಮಾಡಿದಲ್ಲಿ ರುಮೇನಿಯಾ ತನ್ನ ಸ್ವಾತಂತ್ರ್ಯವನ್ನು ನಾಶಮಾಡಿಕೊಂಡಂತೆಯೇ ಸರಿ.

ಜರ್ಮನಿಯ ಯೋಜನೆ.

'ರುಮೇನಿಯಾ'ವನ್ನು ಪಶ್ಚಿಮ ರಾಷ್ಟ್ರಗಳ ಹಿಡಿತದಿಂದ ಪಾರುಮಾಡುವ ಉದ್ದೇಶದಿಂದಲೇ ಜರ್ಮನಿಯು ರುಮೇನಿಯನ್ ಎಣ್ಣೆ ಗಣಿಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬಯಸುತ್ತದೆ, ಎಂದು ಜರ್ಮನ್ ಪತ್ರಿಕೆಗಳೂ ರಾಜಕಾರಿಣಿಗಳೂ ಹಾರಾಡುತ್ತಿರುವರು. ಒಳ್ಳೇ ಮೋಜು ಚೀನ ದಂಡಯಾತ್ರೆಯನ್ನು ಕೈಕೊಂಡ ಜಪಾನವು 'ಏಶಿಯಾ ಏಶಿಯನ್ನರಿಗಾಗಿ ಮಾತ್ರ' ಎನ್ನುವದು ಚೀನೀಯರಿಗೆ ಹೇಗೋ ಹಾಗೆ ಜರ್ಮನಿಯ ಈ ಮಾತುಗಳು ರುಮೇನಿಯಾಕ್ಕೆ ಅನಿಸಿದವು ರುಮೇನಿಯಾದ ಆರ್ಥಿಕ ನಿಯಂತ್ರಣ ಮಾಡುವಲ್ಲಿ ಅದನ್ನು ಸಂಪೂರ್ಣ ತನ್ನ ಪ್ರಭುತ್ವದ ಕೆಳಗೆ ತರುವದೇ ಜರ್ಮನಿಯ ಉದ್ದೇಶವಾಗಿದೆ. ಆರ್ಥಿಕ ನಿಯಂತ್ರಣದ ಕಾರ್ಯಕ್ರಮವೆಂತಹದೆಂಬುದನ್ನು ಜರ್ಮನಿಯ ಲೆಕ್ಕಿಗರೇ ಬಹಿರಂಗಪಡಿಸಿರುವರು. ಜರ್ಮನಿಗೆ 'ವಾಸಿಸಲು ಸ್ಥಳಬೇಕು.' ಎಂಬ ಬೇಡಿಕೆಯನ್ನನುಸರಿಸಿಯೇ ಜರ್ಮನಿಯು ರುಮೇನಿಯಾದ ಆರ್ಥಿಕ ನಿಯಂತ್ರಣ ಮಾಡಲಿಚ್ಛಿಸುವದು. ಇದರ ಅರ್ಥವು 'ನಿರಂತರ ಪೂರೈಕೆ'ಯ ಆಶ್ವಾಸನವನ್ನು ಪಡೆಯುವದು ಮತ್ತು ಯಾವ ಪರಿಸ್ಥಿತಿಯಲ್ಲಿಯೂ ಯಾವ ಕಾರಣದಿಂದಲೂ ಜರ್ಮನಿಗೆ ಪೂರೈಕೆಯನ್ನು ರುಮೇನಿಯಾ ನಿಲ್ಲಿಸಲಾಗದು. ಅರ್ಥಾತ್ ಬೇಕಾದವರಿಗೆ ಮಾರಾಟಮಾಡುವ ಹಕ್ಕು ರುಮೇನಿಯಾಕ್ಕೆ ಉಳಿಯುವದಿಲ್ಲ. ಪೂರೈಕೆಗೆ ಯಾವ ಅಡ್ಡಿಯೂ ಬರಕೂಡದಂತೆ. ಅಂದರೆ ಜರ್ಮನಿಯು ದುಡ್ಡುಕೊಡದಿದ್ದರೂ ರುಮೇನಿಯಾ ಎಣ್ಣೆ ಕಳಿಸಬೇಕಂತೆ!! ಒಟ್ಟಿಗೆ ಜರ್ಮನಿಯ ಈ ಆರ್ಥಿಕ ಯೋಜನೆಯೆಂದರೆ ರುಮೇನಿಯಾದ ಸ್ವಾತಂತ್ರ್ಯದೇವಿಯ ಮಾರಾಟವೇ ಎಂದೆನ್ನಬಹುದು. ನಾಝಿಗಳ ನವಯುಗ ನಿರ್ಮಾಣದ ದ್ಯೋತಕವಿದು. ಎಲ್ಲ ದೇಶಗಳನ್ನು ಗುಲಾಮ ರಾಷ್ಟ್ರಗಳನ್ನಾಗಿ ಮಾಡಿ ಜರ್ಮನಿಗೆ 'ವಾಸಿಸಲು ಸ್ಥಳ ಬೇಕು' ಎನ್ನುತ್ತ ಉಳಿದವರನ್ನೆಲ್ಲ ಮೃತ್ಯುಸ್ಥಾನದಲ್ಲಿರಿಸುವದೇ ಜರ್ಮನ್ ನಾಝಿಗಳ ಕ್ರೂರ ಮನೀಷೆಯಾಗಿದೆ.

ಮಿತ್ರರಾಷ್ಟ್ರಗಳ ಬೆಂಬಲ.

ಆದರೆ ರುಮೇನಿಯಾ ತನ್ನ ಮುಂದಿನ ವಿಪರೀತ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅರಿತಿದೆ ತುಂಬಾ ಜಾಗರೂಕತೆಯಿಂದ ವರ್ತಿಸುತ್ತಲಿದೆ. ಜರ್ಮನಿಯ ಬೇಡಿಕೆಗಳನ್ನು ಸಲ್ಲಿಸುತ್ತ ಹೋದರೆ ರುಮೇನಿಯಾ ರಾಜಸಿಂಹಾಸನವೇ ಉರುಳಿ ಬೀಳಬಹುದೆಂಬುದನ್ನು ಅದು ಬಲ್ಲದು. ರುಮೇನಿಯಾದ ಸ್ವಾತಂತ್ರ್ಯ ರಕ್ಷಣೆಗಾಗಿ ತುರ್ಕರು ಹಾಗೂ ಬ್ರಿಟಿಷರು ಆಶ್ವಾಸನವಿತ್ತಿರುವರು. ಫ್ರಾನ್ಸವೂ ಬ್ರಿಟಿಷರನ್ನೇ ಅನುಸರಿಸುವದು. ತುರ್ಕಸ್ಥಾನವು ಬ್ರಿಟನ್ನಿನ ಪರಮ ಮಿತ್ರ. ಇಟಲಿಯು ಬಾಲ್ಕನ್ ಚಟುವಟಿಕೆಗಳತ್ತವೂ ರುಮೇನಿಯಾ ತನ್ನ ಲಕ್ಷ್ಯವನ್ನು ಪೂರೈಸಿದೆ. ಬಾಲ್ಕನ್ ರಾಷ್ಟ್ರಗಳಲ್ಲಿ ತನ್ನ ವಿರುದ್ಧ ಸಂಘಟಿತವಾಗುತ್ತಲಿರುವ ಬಲದ ಕಲ್ಪನೆಯು ಜರ್ಮನಿಗೆ ಈಗ ಆಗಿರಬಹುದು ಯಾಕಂದರೆ ನೆರೆಯ ಪ್ರದೇಶಗಳಲ್ಲಿ ಬ್ರಿಟಿಷ್-ಫ್ರೆಂಚ್ ಸೈನಿಕರ ಓಡಾಟದ ಬಗ್ಗೆ ಅದು ಹರಿಹಾಯುತ್ತದೆ. ಆದರೆ ಇನ್ನು ಮುಂದೆಯೂ ಜರ್ಮನಿಯ ಬಲಾತ್ಕಾರವು ಹೆಚ್ಚಿದಲ್ಲಿ (ಆರ್ಥಿಕ ಉಪಾಯಗಳಿಂದಾದರೂ ಸಹ) ಪರಿಸ್ಥಿತಿಯು ಕೈಮೀರಿ ಹೋಗಬಹುದು.

ಮೇಲಿನ ವಿವೇಚನೆಯಿಂದ ರುಮೇನಿಯಾ ಅಂತರರಾಷ್ಟ್ರೀಯ ರಾಜಕಾರಣದಲ್ಲಿ ಅಗ್ರಭಾಗದಲ್ಲಿದೆ. ಅದರಂತೆ ಎಣ್ಣೆಯ ಸಮಸ್ಯೆಯು ಆಡಿಗಲ್ಲೂ ಆಗಿದೆ ಎಂಬ ಮಾತು ಹೊಳೆಯದಿರಲಾರದು.

'ಸ. ವಿ.'

Coorg Civil Surgeon's Office
Mercara, the 16th April '40.

WANTED.

Applicants are required for training as Health Visitor to be employed in Coorg Health Department. Starting Rs. 30 per mensem.

Applicants must have S. S. L. C., or equivalent qualification and a registrable midwifery certificate.

G. P. Charlewood.
Captain, I. M. S.
Civil Surgeon, Coorg.

ಸತ್ಯಾಗ್ರಹ ಪ್ರಾರಂಭವಾದರೆ ಬಗ್ಗು ಬಡಿಯಲಾದೀತು.

ಭಾರತ ಮಂತ್ರಿಗಳಾದ ಲಾರ್ಡ್ ಜೆಟ್ಲೆಂಡರ ಭಾಷಣ.

ಕಾಂಗ್ರೆಸ್ ಮುಖಂಡರ ಟೀಕೆ.

ಹಿಂದೂಸ್ಥಾನದಲ್ಲಿ ಏಳು ಪ್ರಾಂತಗಳ ರಾಜ್ಯಭಾರವು ಕೇವಲ ಗವ್ಹರ್ನರರಿಂದ ನಡೆಸಲ್ಪಡುತ್ತಿದೆಯಷ್ಟೆ. ಕಳೆದ ಅಕ್ಟೋಬರ ತಿಂಗಳಲ್ಲಿ ಕಾಂಗ್ರೆಸು ಮಂತ್ರಿಮಂಡಲಗಳು ರಾಜೀನಾಮೆ ಕೊಟ್ಟ ಮೇಲೆ ಈ ಪ್ರಾಂತಗಳ ರಾಜ್ಯಭಾರ ನಡೆಸುವ ಹೊಣೆಯನ್ನು ಗವ್ಹರ್ನರರು ತಾವೇ ವಹಿಸಿಕೊಂಡರು. ಆದರೆ ಕೇವಲ ಆರು ತಿಂಗಳ ವರೆಗೆ ಮಾತ್ರ ಹೀಗೆ ಮಾಡಲು ಅವರಿಗೆ ಅಧಿಕಾರವಿರುತ್ತದೆ.

ಈ ಅವಧಿಯನ್ನು ಬೆಳೆಸಬೇಕಾದರೆ ಪಾರ್ಲಿಮೆಂಟಿನ ಅಪ್ಪಣೆಬೇಕು. ಅದ್ದರಿಂದ ಆ ಅಪ್ಪಣೆಯನ್ನು ಪಡೆಯಲು ಭಾರತ ಮಂತ್ರಿ ಲಾರ್ಡ್ ಝೆಟ್ಲೆಂಡರು ಇಂದು ಲಾರ್ಡ್ಸ ಸಭೆಯಲ್ಲಿ ಒಂದು ಸೂಚನೆಯನ್ನು ಮಂಡಿಸಿದರು. ಮತ್ತು ಇಂಥ ಸೂಚನೆಯನ್ನು ಮಂಡಿಸುವ ಪ್ರಸಂಗವು ತಮ್ಮ ಪಾಲಿಗೆ ಬಂದುದು ತುಂಬಾ ವಿಷಾದಕರವೆಂದು ಹೇಳಿದರು.

ಝೆಟ್ಲೆಂಡರ ಭಾಷಣ.

ನಂತರ ಅವರು ಬಂಗಾಲ ಪಂಜಾಬ ಸಿಂಧ್ ಮತ್ತು ಆಸಾಮ ಸರಕಾರಗಳು ಹಿಂದೆ ಮಾಡಿದ ಕಾರ್ಯವನ್ನು ಪ್ರಶಂಸಿದರು. ಮತ್ತು ಮುಂದೆಯಾದರೂ ಅವು ಹೀಗೆಯೇ ಕೆಲವು ಮಾಡದ ಕಾರ್ಯವನ್ನು ಪ್ರಶಂಸಿದರು. ಮತ್ತು ಮುಂದೆಯಾದರೂ ಅವು ಹೀಗೆಯೇ ಕೆಲಸ ಮಾಡಲೆಂದು ಹಾರೈಸಿದರು.

ಗವ್ಹರ್ನರರ ಅವಧಿ ಹೆಚ್ಚಿಸಬೇಕು.

'ಈಗ ಆರು ತಿಂಗಳ ಹಿಂದೆ ಕೆಲವು ಮಂತ್ರಿಮಂಡಲಗಳು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸೂಚನೆ ಪ್ರಕಾರ ರಾಜೀನಾಮೆಕೊಟ್ಟವು. ಕಾಯದೆ ಮಂಡಲ ಮತ್ತು ಮತದಾರ ಸಂಘಗಳಿಗೆ ಸಲ್ಲಿಸಬೇಕಾಗಿದ್ದ ಹೊಣೆಗಾರಿಕೆಯನ್ನು ಬಿಟ್ಟುಕೊಟ್ಟವು. ಅದ್ದರಿಂದ ಆಯಾ ಪ್ರಾಂತಗಳ ಗವರ್ನರರು ಪ್ರಾಂತಿಕ ರಾಜ್ಯಭಾರ ಸೂತ್ರವನ್ನು ಕೈಯಲ್ಲಿ ತೆಗೆದುಕೊಳ್ಳಬೇಕಾಯಿತು. ಆದರೆ ಈ ರೀತಿ ಹೆಚ್ಚು ಕಾಲ ರಾಜ್ಯಭಾರ ಮಾಡಲು ಗವರ್ನರರಿಗೆ ಅಧಿಕಾರವಿಲ್ಲ. ಅವರು ಆರು ತಿಂಗಳ ವರೆಗೆ ಮಾತ್ರ ರಾಜ್ಯಭಾರ ಮಾಡಬಲ್ಲರು. ಈ ಅವಧಿಯನ್ನು ಬೆಳೆಸಬೇಕಾಗಿದ್ದರೆ ಪಾರ್ಲಿಮೆಂಟಿನ ಅಪ್ಪಣೆ ಪಡೆಯಬೇಕೆಂದು ಹಿಂದುಸ್ಥಾನ ರಾಜ್ಯಘಟನೆಯ 93 ನೇ ಕಲಮಿನಲ್ಲಿ ಹೇಳಲಾಗಿದೆ. ಆದ್ದರಿಂದ ಬೇರೆ ಬೇರೆ ಪ್ರಾಂತಗಳಲ್ಲಿ ಗವ್ಹರ್ನರರು ಹೊರಡಿಸಿರುವ ಘೋಷಣೆಗಳ ಅವಧಿಯನ್ನು ಒಂದು ವರ್ಷದ ವರೆಗೆ ಹೆಚ್ಚಿಸುವದಕ್ಕಾಗಿ ನಾನು ಇಲ್ಲಿ ಒಂದು ಸೂಚನೆಯನ್ನು ತಂದಿದ್ದೇನೆ.'

ಗಾಂಧಿ–ವೈಸರಾಯರ ಭೇಟಿ.

ನಂತರ ಲಾರ್ಡ್ ಝೆಟ್ಲೆಂಡರು ಹಿಂದುಸ್ಥಾನದಲ್ಲಿ ನಡೆದ ಘಟನೆಗಳನ್ನೆಲ್ಲ ಸಂಕ್ಷೇಪವಾಗಿ ವಿವರಿಸಿದರು. ಮತ್ತು ಫೆಬ್ರವರಿ 5ನೇ ತಾರೀಖಿನ ದಿನ ನಡೆದ ಗಾಂಧಿ ವೈಸರಾಯರ ಭೆಟ್ಟಿಯನ್ನು ಉಲ್ಲೇಖಿಸಿ ಹೀಗೆ ಹೇಳಿದರು.

'ಆಶೆಯು ನಿರಾಶೆಯಾಯಿತು

ವೈಸರಾಯರು ಮುಂಬಯಿ ಓರಿಯೆಂಟ್ ಕ್ಲಬಿನಲ್ಲಿ ಭಾಷಣ ಮಾಡಿದ ಮೇಲೆ ಈ ಭೆಟ್ಟಿಯಾಯಿತು. ಘಟನಾತ್ಮಕ ಕ್ಷೇತ್ರದಲ್ಲಿ ಮತ್ತಷ್ಟು ಪ್ರಗತಿಯನ್ನು ಪಡೆಯಬೇಕೆಂದು ಒತ್ತಾಯಪಡಿಸುತ್ತಿರುವವರ ಆಶೋತ್ತರಗಳು ಕೈಗೂಡಬೇಕೆಂಬ ಉದ್ದೇಶದಿಂದಲೇ ವೈಸರಾಯರು ಈ ಭಾಷಣವನ್ನು ಮಾಡಿದರು. ಮತ್ತು ಅವರ ಸದುದ್ದೇಶವನ್ನು ಎಲ್ಲರೂ ಮಾನ್ಯಮಾಡಿದ್ದಾರೆ. ವೈಸರಾಯರು ಮುಂಬಯಿಯಲ್ಲಿ ಭಾಷಣ ಮಾಡಿದ ನಂತರ ದೇಶದಲ್ಲಿ ಉಂಟಾದ ವಾತಾವರಣವನ್ನು ನೋಡಿ ಗಾಂಧಿ ವೈಸರಾಯರ ಭೇಟಿಯು ಫಲಪ್ರದವಾಗುವದೆಂದು ನಂಬಿದ್ದೆವು ಆದರೆ ನಮ್ಮ ಆಶೆಯು ನಿರಾಶೆಯಾಯಿತು. ಈ ಭೆಟ್ಟಿಯಿಂದ ಹೆಚ್ಚಿಗೆ ಏನೂ ಆಗಲಿಲ್ಲ. ಹೀಗಾದದ್ದು ತುಂಬಾ ದುರ್ದೈವವು.'

ಕಾಂಗ್ರೆಸು ತನ್ನ ಧೋರಣ ಬದಲಾಯಿಸಬೇಕಂತೆ.

ಝೆಟ್ಲೆಂಡರು ಹಾಗೆಯೇ ತಮ್ಮ ಭಾಷಣವನ್ನು ಮುಂದೆ ಸಾಗಿಸುತ್ತಾ 'ಕಾಂಗ್ರೆಸು ಪಕ್ಷವು ಈಗಿನ ಧೋರಣವನ್ನೇ ಮುಂದೆಯೂ ತೋರಿಸಿದರೆ ಸನ್ಮಾನ್ಯ ಒಪ್ಪಂದವಾಗುವದು ಅತಿ ಕಷ್ಟವಾಗಬಹುದು. ಈಗಿರುವ ಅಡ್ಡಿ ಆತಂಕಗಳು ಮತ್ತಷ್ಟು ಹೆಚ್ಚಾಗಬಹುದು. ಎಂದು ಹೇಳಿದರು.

ಸಂಬಂಧವನ್ನು ಕಡಿದುಕೊಳ್ಳಲು ನಾವು ಸಿದ್ಧರಿಲ್ಲ.

'ವೈಸರಾಯರು ಮುಂಬಯಿ ಓರಿಯಂಟ್ ಕ್ಲಬಿನ ತಮ್ಮ ಭಾಷಣದಲ್ಲಿ ಕೆಲವು ಸೂಚನೆಗಳನ್ನು ಮಾಡಿದರು ಹಿಂದುಸ್ಥಾನದ ಪರಿಸ್ಥಿತಿ ಗುಣವಾದ ರಾಜ್ಯಘಟನೆಯನ್ನು ರಚಿಸುವ ಕಾರ್ಯದಲ್ಲಿ ಹಿಂದೀಯರೇ ಹೆಚ್ಚು ಭಾಗ ತೆಗೆದುಕೊಳ್ಳಬೇಕೆಂಬ ಮಾತು ನಮಗೂ ಒಪ್ಪಿಗೆಯಿದೆ. ಅದ್ದರಿಂದಲೇ ಹಿಂದೀಯರಿಗೆ ನಾವು ಕೆಲವು ಸೂಚನೆಗಳನ್ನು ಮಾಡಿದೆವು. ಆದರೆ ನಮ್ಮ ಹೊಣೆಗಾರಿಕೆಯನ್ನೇ ಬಿಟ್ಟುಕೊಟ್ಟು ಹಿಂದುಸ್ಥಾನದ ಭಾವಿ ರಾಜ್ಯಘಟನೆಯನ್ನು ರಚಿಸುವ ಕೆಲಸವು ನಮಗೆ ಸ್ವಲ್ಪವೂ ಸಂಬಂಧಿಸಿಲ್ಲವೆಂದು ಹೇಳಲು ನಾವು ಸಿದ್ಧರಿಲ್ಲ. ಈ ಮಾತನ್ನು ನಾವು ಈಗಾಗಲೇ ಸ್ಪಷ್ಟಮಾಡಿದ್ದೇವೆ. ನಾವು ಹೀಗೆ ಹೇಳಿದ್ದೇಕೆ ಎಂಬದ ನಿಮಗೆ ತಿಳಿಯಬೇಕಾಗಿದ್ದರೆ ಹಿಂದುಸ್ಥಾನದ ಇತಿಹಾಸವನ್ನು ನೀವು ನೋಡಬೇಕು. ಕಳೆದ ಇನ್ನೂರು ವರ್ಷಗಳಲ್ಲಿ ಏನು ನಡೆದಿದೆಯೆಂಬದನ್ನು ನೀವು ಓದಬೇಕು.'

ನಮ್ಮ ಹೊಣೆ.

ಈ ಮಾತಿನ ಉದಾಹರಣೆಯೆಂದು ಲಾರ್ಡ್ ಝೆಟ್ಲೆಂಡರು ಬ್ರಿಟಿಷ್ ಸರಕಾರದವರು ಸಂಸ್ಥಾನಿಕರೊಡನೆ ಮಾಡಿಕೊಂಡ ಒಪ್ಪಂದಗಳನ್ನು ಉಲ್ಲೇಖಿಸಿದರು.

ಸಂಸ್ಥಾನಿಕರು ಮೊದಲಿನಿಂದಲೂ ಇದ್ದರು. ಅವರೊಡನೆ ನಾವು ಒಪ್ಪಂದಗಳನ್ನು ಮಾಡಿಕೊಂಡಿದ್ದೇವೆ. ಅವನ್ನು ನಾವು ಮಾನ್ಯಮಾಡಲೇಬೇಕು. ಇದಲ್ಲದೆ ಹಿಂದುಸ್ಥಾನದಲ್ಲಿ ಅನೇಕ ನಮ್ಮ ಹಿತ ಸಂಬಂಧಗಳಿವೆ. ಅವು ಇಂದು ನಿನ್ನೆಯವಲ್ಲ. ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿವೆ. ಅವನ್ನು ನಾವು ರಕ್ಷಿಸಿಕೊಳ್ಳಬೇಕಾಗಿದೆ. ಇದರ ಜೊತೆಗೆ ಹಿಂದುಸ್ಥಾನದ ಸಂರಕ್ಷಣೆಯ ಪ್ರಶ್ನೆಯನ್ನೂ ನಾವು ವಿಚಾರ ಮಾಡಬೇಕು. ಮುಸಲ್ಮಾನರೇ ಮೊದಲಾದ ಅಲ್ಪ ಸಂಖ್ಯಾಕರ ಹಕ್ಕು ಬಾಧ್ಯತೆಗಳನ್ನು ರಕ್ಷಿಸಬೇಕು. ಇವೆಲ್ಲ ವಿಷಯಗಳು ಹಿಂದುಸ್ಥಾನದ ಇತಿಹಾಸವನ್ನೋದಿದವರಿಗೆ ಎದ್ದು ಕಾಣುವವು.

ಒತ್ತಾಯ ಮಾಡುವದಿಲ್ಲ.

'ಈ ಎಲ್ಲ ಕಾರಣಗಳಿಂದ ನಾವು ಕಾಂಗ್ರೆಸಿನ ಮುಖ್ಯ ಬೇಡಿಕೆಗಳನ್ನು ನಿರಾಕರಿಸಬೇಕಾಯಿತು. ಹಿಂದುಸ್ಥಾನದ ಭಾವೀರಾಜ್ಯಘಟನೆಯನ್ನು ರಚಿಸುವ ಕಾರ್ಯದಲ್ಲಿ ನಮ್ಮ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಳ್ಳಲು ಸಾಧ್ಯವಿಲ್ಲೆಂದು ಹೇಳಬೇಕಾಯಿತು. ಆದರೆ ನಾವು ಹೀಗೆ ಹೇಳಿದ ಮಾತ್ರಕ್ಕೆ ಬ್ರಿಟಿಷ್ ಸರಕಾರ ಮತ್ತು ಬ್ರಿಟಿಷ್ ಪಾರ್ಲಿಮೆಂಟ್‌ಗಳು ರಚಿಸಿದಂತಹ ರಾಜ್ಯಘಟನೆಯನ್ನೇ ಹಿಂದೀಯರು ಸ್ವೀಕರಿಸಬೇಕೆಂದು ಹೇಳಿದಂತಾಗಲಿಲ್ಲ. ಹಿಂದೀಯರ ಮನಸ್ಸಿನ ವಿರುದ್ಧವಾಗಿ ಬ್ರಿಟಿಷರು ಹಿಂದುಸ್ಥಾನದ ರಾಜ್ಯಘಟನೆಯನ್ನು ರಚಿಸುವರೆಂದು ಹೇಳಿದಂತಾಗಲಿಲ್ಲ. ಘಟನಾತ್ಮಕ ಕ್ಷೇತ್ರದಲ್ಲಿ ಅವಶ್ಯ ಕಂಡ ಸುಧಾರಣೆಗಳನ್ನು ಮಾಡಲು ಹಿಂದುಸ್ಥಾನದ ಎಲ್ಲ ಪಕ್ಷ ಪಂಗಡಗಳವರ ಅಭಿಪ್ರಾಯ ತಿಳಿದುಕೊಳ್ಳುವದಾಗಿ ಸಾರ್ವಭೌಮ ಸರಕಾರದವರು ಈಗಾಗಲೇ ಆಶ್ವಾಸನ ಕೊಟ್ಟಿದ್ದಾರೆ. ಇದರಿಂದ ಬ್ರಿಟಿಷ್ ಸರಕಾರದವರು ಎಂದಿಗೂ ಒತ್ತಾಯಮಾಡುವದಿಲ್ಲ ಎಂಬ ಮಾತು ಸ್ಪಷ್ಟವಾಗುವದು. ಸಂಧಾನಕ್ಕಾಗಿಯೇ ಅವರ ಪ್ರಯತ್ನಿಸುತ್ತಿರುವರೆಂಬದು ಗೊತ್ತಾಗುವದು'

ಈ ರೀತಿ ಝೆಟ್ಲೆಂಡರ ಭಾಷಣವಾದ ಮೇಲೆ ಅವರ ಸೂಚನೆ ಸ್ವೀಕಾರವಾಯಿತು.

ಜೆಟ್ಲೆಂಡರ ಭಾಷಣದ ಮೇಲೆ ರಾಷ್ಟ್ರಪತಿ ಅಜಾದರ ಟೀಕೆ.

'ಜೆಟ್ಲೆಂಡರ ಭಾಷಣವು ದೀರ್ಘವಾಗಿದ್ದರೂ ಭಾರತದ ಸಮಸ್ಯೆಯನ್ನು ಅದು ಇದ್ದಲ್ಲಿಯೇ ಬಿಟ್ಟಿದೆ. ಭಾರತ ಸೆಕ್ರೆಟರಿಗಳು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿರುವ ಹಿಂದೂ ಮುಸ್ಲಿಂ ಐಕ್ಯತೆ, ಅಲ್ಪ ಪಕ್ಷೀಯರ ಭದ್ರತೆ ಇವೇ ಮೊದಲಾದ ಭಯಗಳು ಕಾನ್‌ಸ್ಟಿಟ್ಯೂವೆಂಟ್ ಎಸೆಂಬ್ಲಿಯನ್ನು ಜಾರಿಗೆ ತಂದದ್ದೇ ಆದರೆ ಮಾಯವಾಗುವವು. ಬ್ರಿಟಿಷ್ ಸಾರ್ವಭೌಮ ಸರಕಾರವು, ಭಾರತದ ಭವಿತವ್ಯವನ್ನು ರೂಪಿಸುವ ಹಕ್ಕು ಭಾರತೀಯರಿಗಿದೆಯೆಂದು ಒಪ್ಪುವದಾದರೆ ಅದನ್ನು ಚುನಾಯಿತ ಹಿಂದೀಯರ ಸಭೆಗೆ ಒಪ್ಪಿಸುವದೊಂದೇ ದಾರಿ. ಅಂಥಾ ಒಂದು ಸಭೆಯು ಹಿಂದೂ ಮುಸ್ಲಿಮರ, ಅಲ್ಪ ಪಕ್ಷೀಯರ, ಆಶ್ರಿತ ರಾಜರ ಹಿತ ದೃಷ್ಟಿಯಿಂದ ಕಾರ್ಯಮಾಡಬಲ್ಲುದು. ಬ್ರಿಟಿಷ್ ಸಾಮ್ರಾಜ್ಯಶಾಹಿಯು ಭಾರತೀಯರಿಗೆ ಸಲ್ಲತಕ್ಕ ಈ ತತ್ವವನ್ನು ಒಪ್ಪದ ಪಕ್ಷ ಭಾರತವನ್ನು ಬಲಪ್ರಯೋಗದಿಂದ ಆಳಬೇಕೆಂಬ ಸಾಮ್ರಾಜ್ಯಶಾಹಿಯ ಬಯಕೆಯನ್ನು ವ್ಯಕ್ತಪಡಿಸಿದಂತಾಗುತ್ತದೆ. ಪರಿಸ್ಥಿತಿ ಇಂಥಾದ್ದಾದರೆ ಈ ಎರಡು ರಾಷ್ಟ್ರಗಳಲ್ಲಿ ಸಂಧಾನವು ದೂರವಾದಂತೆಯೇ ಸರಿ. ಆದ್ದರಿಂದ ಭಾರತ ಸೆಕ್ರೆಟರಿಗಳು ಪದೇ ಪದೇ ತಮ್ಮ ಭಾಷಣದಲ್ಲಿ ಈ ಅಲ್ಪ ಪಕ್ಷೀಯರ ವಿಚಾರ ಯಾಕೆ ಪ್ರಲಾಪಿಸುತ್ತಿರುವರೆಂಬುವುದು ತಿಳಿಯದ ವಿಚಾರ. ಕಾಂಗ್ರೆಸ್ಸಾದರೂ ತನ್ನ ಧೋರಣೆಗೆ ಇತರ ಪಂಗಡದವರು ಬಗ್ಗಿ ನಡೆಯಬೇಕೆಂದು ಬಲಾತ್ಕರಿಸುವದಿಲ್ಲ. ಅಲ್ಪ ಪಕ್ಷೀಯರ ಹಕ್ಕು ಬಾಧ್ಯತೆಗಳನ್ನು ಅದು ಮಾನಿಸುತ್ತದೆ. ಮುಸಲ್ಮಾನರ ಹಕ್ಕು ಬಾಧ್ಯತೆಗಳನ್ನೂ, ಅವರ ವೈಶಿಷ್ಟ್ಯವನ್ನೂ ಕಾಪಾಡಲು ಕಾಂಗ್ರೆಸು ಕಂಕಣಬದ್ಧವಾಗಿದೆ. ಮುಸ್ಲಿಂ ಲೀಗು ಮುಂದಿಟ್ಟಿರುವ ಭಾರತ ವಿಭಜನಾ ಯೋಜನೆಯು ವಿಘಾತುಕವೂ ಅಯೋಗ್ಯವೂ ಇದೆ. ಲೀಗು ತನ್ನ ಈ ತೀರ್ಮಾನವನ್ನು ಯಾವ ದೃಷ್ಟಿಯಿಂದ ಮಾಡಿದೆಯೆಂಬುದು ತಿಳಿಯದು. ರಾಷ್ಟ್ರವನ್ನು ವಿಭಾಗಿಸುವಂಥಾ ಈ ಅಯೋಗ್ಯ ಕಾರ್ಯಕ್ರಮಕ್ಕೆ ಮುಸ್ಲಿಮರ ಬೆಂಬಲವೇ ದೊರೆಯದೆಂದು ನಾನು ಹೇಳಬಯಸುತ್ತೇನೆ.

ಭಾರತ ವಿದೇಶಾಂಗ ಮಂತ್ರಿಗಳು ತಮ್ಮ ಭಾಷಣದಲ್ಲಿ, 'ಕಾಂಗ್ರೆಸು ಸಂಧಾನದ ಬಾಗಿಲನ್ನು ಮುಚ್ಚಬಾರದು. ಭಾರತದೊಂದಿಗೆ ಸಂಧಾನ ಮಾಡಿಕೊಳ್ಳುವದು ಬ್ರಿಟಿಷ್ ಸಾರ್ವಭೌಮ ಸರಕಾರದ ಧ್ಯೇಯ. ಕಾಂಗ್ರೆಸ್ಸಿನ ಜವಾಬಿನ ಮೇಲೆ ಭಾರತದ ಮುಂದಿನ ರಾಜಕೀಯ ವಾತಾವರ್ಣವು ನಿಂತಿದೆ' ಎಂದು ಹೇಳಿರುವರು. ಇದನ್ನು ವಿಚಾರಿಸಿದರೆ ಅರ್ಥವು ಹೊಳೆಯುವುದಿಲ್ಲ. ಕಾಂಗ್ರೆಸು ಪೂರ್ಣ ಸ್ವರಾಜ್ಯಕ್ಕಾಗಿ ಹೋರಾಡುತ್ತಿದೆ. ಇದು ಹಿಂದೂ ಮುಸ್ಲಿಮರ ಐಕ್ಯತೆಯಾಗದೆ ಸಾಗದ ವಿಚಾರ. ಹಿಂದೂ ಮುಸ್ಲಿಮರ ಐಕ್ಯತೆ

ನಾರ್ವೆ ಕದನವು ದಿನೇ ದಿನೇ ತೀವ್ರ ರೂಪವನ್ನು ತಾಳುತ್ತಿದೆ. ಜರ್ಮನರು ಪ್ರಚಂಡವಾಗಿ ಯುದ್ಧ ಮಾಡುತ್ತಿರುವರು. ಮುಖ್ಯ ಮುಖ್ಯ ಪಟ್ಟಣಗಳನ್ನು ವಶಪಡಿಸಿಕೊಂಡು ಮುನ್ನುಗ್ಗುತ್ತಿರುವರು. ಮಿತ್ರ ಪಡೆಯವರೂ ಬಹಳ ಹುರುಪಿನಿಂದ ಮುಂದೆ ಸಾಗುತ್ತಿವೆ. ಜರ್ಮನರು ವಶಪಡಿಸಿಕೊಂಡಿದ್ದ ಅನೇಕ ಪಟ್ಟಣಗಳನ್ನು ಮಿತ್ರಪಡೆಯು ಪುನಃ ವಶಮಾಡಿಕೊಂಡಿರುವರು. ಬ್ರಿಟನ್ ಹಾಗೂ ಫ್ರಾನ್ಸಿನ ಪಡೆಗಳು ಯಾವುದೊಂದೂ ತೊಂದರೆಗಳಿಲ್ಲದೆ ಬಂದು ನಾರ್ವೆಯನ್ನು ಸೇರುತ್ತಿವೆ. ಕಡಲಿನಲ್ಲಾಗಲೀ, ನೆಲದಲ್ಲಾಗಲೀ ಯಾವುದೊಂದು ಆತಂಕವೂ ಆವಾಗ ಈ ವರೆಗೆ ಬಂದಿರುವದಿಲ್ಲವೆಂದು ಬ್ರಿಟಿಷರ ಘೋಷಣೆಯಾಗಿದೆ. ಆದರೆ ಜರ್ಮನರು ಬ್ರಿಟಿಷರು ಸಾಗಿಸುತ್ತಿದ್ದ ಯುದ್ಧ ಸಾಮಗ್ರಿಗಳನ್ನು ನಾರ್ವೆ ತೀರ ಪ್ರದೇಶದಲ್ಲಿ ಮುಳುಗಿಸಲಾಗಿದೆಯೆಂದು ಪ್ರಕಟಿಸಿರುವರು.

ಫ್ರಾನ್ಸಿನ ತೃಪ್ತಿ.

ಫ್ರಾನ್ಸಿನ ಸೈನ್ಯವು ಸುರಕ್ಷಿತವಾಗಿ ನಾರ್ವೆಯನ್ನು ಸೇರಿ ತಮ್ಮ ಮಿತ್ರರಾದ ಬ್ರಿಟಿಷ್ ಮತ್ತು ನಾರ್ವೆಯವರೊಂದಿಗೆ ಜರ್ಮನರನ್ನು ಎದುರಿಸುತ್ತಿದೆಯೆಂಬುದು ಫ್ರೆಂಚರಿಗೆ ಬಹು ತೃಪ್ತಿಯನ್ನುಂಟು ಮಾಡಿದೆ.

ನಾರ್ವೆಯಲ್ಲಿ ಬ್ರಿಟಿಷರು.

ಈ ವರೆಗೆ ನಾರ್ವೆಗೆ ಬ್ರಿಟಿಷ್ ಹಾಗೂ ಫ್ರೆಂಚರ 50,000 ಸಿಪಾಯಿಗಳನ್ನೊಳಗೊಂಡ ಮೂರು ಸೈನ್ಯ ಪಡೆಗಳು ಹೋಗಿವೆಯಂತೆ. ಆದರೆ ಈ ವರೆಗೆ 14,000 ಸಿಪಾಯಿಗಳು ಮಾತ್ರ ನಾರ್ವೆಗೆ ಬಂದಿರುವರೆಂದು ತಿಳಿಯಬರುತ್ತದೆ. ಆದ್ದರಿಂದ ಈ ಅಲ್ಪ ಸಂಖ್ಯೆಯ ಜರ್ಮನರಿಗೆ ಮಿತ್ರ ರಾಷ್ಟ್ರಗಳು ಎದುರಿಸುವದು ಕಷ್ಟವಾದೀತೆಂದು ಹೇಳಿಕೆ. ಆದರೆ ಜರ್ಮನರು ತಮ್ಮ ಸೈನ್ಯವನ್ನು ಚಿಕ್ಕ ಚಿಕ್ಕ ತುಕಡಿಗಳಾಗಿ ವಿಂಗಡಿಸಿ ಅನಿರೀಕ್ಷಿತ ಹಾಗೂ ಮಿಂಚಿನಂಥಾ ವೇಗದ ಯುದ್ಧದ ನೀತಿಯನ್ನು ಕೈಕೊಂಡಿರುವರು.

ನಾರ್ವಿಕ್.

ಪ್ರಥಮತಃ ಜರ್ಮನರು ವಶ ಮಾಡಿಕೊಂಡಿದ್ದ ಈ ಪಟ್ಟಣವನ್ನು ಬ್ರಿಟಿಷರು ಪುನಹ ಆಕ್ರಮಿಸಿಕೊಂಡಿರುವರು. ಇಲ್ಲಿ ಆಹಾರದ ಅಭಾವದಿಂದಾಗಿ ಜನತೆಯು ತುಂಬಾ ತೊಂದರೆಗೊಳಗಾಗಿದೆ. ಸಮುದ್ರದಿಂದ ಹಿಡಿದು ತರುವ ಮೀನೇ ಅವರ ಆಹಾರವಾಗಿ ಉಳಿದಿದೆ. ಇಲ್ಲಿಯು ಜರ್ಮನರನ್ನೆಲ್ಲಾ ಬ್ರಿಟಿಷರು ಹಿಡಿದು ಸೆರೆ ಹಾಕಿರುವರು.

ಕೆನಡಾದ ಸಹಾಯ.

ಬ್ರಿಟಿಷರ ಆಶ್ರಿತವಾಗಿರುವ ಅಮೇರಿಕಾದ ಕೆನಡಾದಿಂದ ಸೈನಿಕರು ಬಂದು ಬ್ರಿಟಿಷ್ ಪಡೆಯನ್ನು ಸೇರಿದ್ದಾರೆ. ಇವರು ಆಕಾಶ ಯುದ್ಧದಲ್ಲಿ ನಿಪುಣರಾಗಿರುವ ಪ್ರಯುಕ್ತ ಇವರ ಸಹಾಯವು ಅಮೂಲ್ಯವೆಂದು ಪರಿಗಣಿಸಲಾಗಿದೆ.

ಯುದ್ಧ ವಾರ್ತೆ.

- ಜರ್ಮನಿಯ ಮುನ್ನುಗ್ಗಾಟವೇ?
- ಮಿತ್ರ ರಾಷ್ಟ್ರಗಳ ಹಿನ್ನೆಲೆಯ ಕಾರ್ಯವೇ?
- ಶತ್ರುಗಳ ಅಘಾತಕ್ಕೆ ಸಿಲುಕಿದವರ ಪಾಡೇ?
- ಡೆನ್ಮಾರ್ಕಿನಲ್ಲಿ ಯುದ್ಧದ ಸೂಚನೆಯೇ?
- ರಷ್ಯಾ, ಜರ್ಮನಿ ಇಟೆಲಿ ಐಕ್ಯವೇ?

ನಾರ್ವೆಯ ಸ್ಥಿತಿ.

ನಾರ್ವೆಯ ಅನೇಕಾನೇಕ ಭಾಗಗಳು ಜರ್ಮನರಿಂದ ಆಕ್ರಮಿಸಲ್ಪಟ್ಟಿದೆ. ಆಕ್ರಮಿಸಲ್ಪಟ್ಟ ಭಾಗಗಳಲ್ಲಿ ರೇಡಿಯೋ ಮೊದಲಾದ ವಿಚಾರ ಪ್ರಚಾರಕ ಯಂತ್ರಗಳ ಸಂಬಂಧವನ್ನು ಕಡಿದು ಹಾಕಿರುವ ಪ್ರಯುಕ್ತ ನಿಜವಾದ ವಾರ್ತೆಯು ಸಿಗುವದು ಕಷ್ಟವಾಗಿದೆ. ಜರ್ಮನರು ತಮ್ಮ ಪ್ರಚಂಡ ಪ್ರಚಾರ ಕಾರ್ಯವನ್ನು ತೊಡಗಿರುವರು. ಟ್ರಾಂಡಿಯಮ್ ಎಂಬಲ್ಲಿ ಜರ್ಮನರು ಮುಂದುವರಿಯುತ್ತಿರುವರು. ಬ್ರಿಟಿಷರ ಸೈನ್ಯ ಪಡೆಯೊಂದು ಜರ್ಮನರ ಸೈನ್ಯ ತುಕಡಿಯೊಂದನ್ನು ಯುದ್ಧದಲ್ಲಿ ಸೋಲಿಸಿ ಓಡಿಸಿತೆಂದು ವಾರ್ತೆ ಬಂದಿದೆ. ಬ್ರಿಟಿಷರ ಹಡಗು ಪಡೆಯು ಸಮುದ್ರ ಮಾರ್ಗವನ್ನು ಆಕ್ರಮಿಸಿಕೊಂಡಿರುವ ಕಾರಣ ಟ್ರಾಂಡಿಯಮ್‌ನಲ್ಲಿರುವ ಜರ್ಮನರಿಗೆ ಆಹಾರದ ಅಭಾವ ಉಂಟಾಗಿದೆಯಂತೆ. ವಿಮಾನ ಮೂಲಕ ಆಹಾರ ಸಾಗಿಸಬಹುದೆಂದರೆ ಮಂಜಿನ ದೆಸೆಯಿಂದ ಅಸಾಧ್ಯವಾಗಿದೆ.

ನಾರ್ವೆಯ ಅರಸು.

ಜರ್ಮನರು ಹೀಗೆ ಮುಂದರಿಯುತ್ತಿರುವುದರಿಂದ ನಾರ್ವೆಯ ಅರಸನಿಗೂ ಆತನ ಅನುಯಾಯಿಗಳಿಗೂ ನೆಲೆಯಿಲ್ಲದಂತಾಗಿದೆ. ಜರ್ಮನರು ಹತ್ತಿರ ಬಂದಂತೆ ಪಟ್ಟಣವನ್ನು ಬಿಟ್ಟು ನೆರೆಪಟ್ಟಣಕ್ಕೆ ಪಲಾಯನ ಮಾಡುವ ಪ್ರಾರಬ್ಧ ನಾರ್ವೆ ಅರಸನಾದ ಹಾಕನ್‌ನಿಗೆ ಬಂದಿದೆ.

ಬ್ರಿಟಿಷ್ ಸೈನ್ಯದ ಜಯ.

ಬ್ರಿಟಿಷರ ಪಡೆಯೊಂದು ಲ್ಯಾರ್‌ಡಾಲ್ ಎಂಬಲ್ಲಿಗೆ ತಲುಪಿ ಯುದ್ಧ ಪ್ರಧಾನವಾದ ಒಂದು ಸ್ಥಳವನ್ನು ಆಕ್ರಮಿಸಿಕೊಂಡಿರುವದಾಗಿ ತಿಳಿದುಬರುತ್ತದೆ. ಈ ಲ್ಯಾರ್‌ಡಾಲ್ ಭಾಗದಿಂದ ನಾರ್ವೆಯ ಇತರ ಯಾವ ಪ್ರಾಮುಖ್ಯ ಪ್ರದೇಶಕ್ಕೂ ವಹಿವಾಟಿನ ಸೌಕರ್ಯವಿರುವದರಿಂದ ಬ್ರಿಟಿಷರ ಮುನ್ನಡೆಗೆ ಅನುಕೂಲವಾಗಿದೆ. ಉತ್ತರದಿಂದಲೂ, ದಕ್ಷಿಣದಿಂದಲೂ ಮುಂದರಿಯುತ್ತಿರುವ ಮಿತ್ರ ರಾಷ್ಟ್ರಗಳನ್ನು ಎದುರಿಸಲು ಜರ್ಮನರ ಕಮಾಂಡರಾದ ಪೈನಿನ್‌ರವರು ತಕ್ಕ ಏರ್ಪಾಡುಗಳನ್ನು ಮಾಡುತ್ತಿರುವರು.

ಟ್ರಾಂಡಿಯಮ್‌ನಲ್ಲಿ ಘೋರ ಯುದ್ಧ.

ಇಲ್ಲಿ ಪ್ರಚಂಡ ಯುದ್ಧವಾಗಬಹುದೆಂದು ಊಹಿಸಲಾಗಿದೆ. ನಾರ್ವೆ ಸೈನಿಕರು ಸುಸಜ್ಜಿತರಾಗಿ ನಿಂತಿದ್ದಾರೆ. ಮಿತ್ರರಾಷ್ಟ್ರಗಳ ಸೈನ್ಯಪಡೆಯೊಂದಿಗೆ ಸಂಬಂಧ ಬೆಳೆಸಿ ತಮ್ಮ ಪಡೆಯನ್ನು ತಯಾರಾಗಿರುವಂತೆ ಆಜ್ಞಾಪಿಸಿರುವರು. ಜರ್ಮನರು ಈ ಪಟ್ಟಣದ ಸುತ್ತಲೂ ತಮ್ಮ ಸೈನ್ಯವನ್ನು ಹರಡಿದ್ದಾರೆ.

ಜರ್ಮನರ ಹೇಳಿಕೆ.

'ಜರ್ಮನ್ ಸೈನ್ಯವು ನಾವು ಮೊದಲೇ ನಿಶ್ಚಯಿಸಿದ ಯೋಜನೆಯಂತೆ ನಾರ್ವೆಯಲ್ಲಿ ಮುಂದರಿಯುತ್ತಿದೆ. ಬರ್ಗೆನ್ ಪ್ರದೇಶದಲ್ಲಿಯ ಅನೇಕ ದ್ವೀಪಗಳು ನಮ್ಮ ಕೈವಶವಾಗಿವೆ. ಯುದ್ಧ ಸಾಮಗ್ರಿಗಳನ್ನೂ ಸೈನಿಕರನ್ನೂ, ಸೆರೆ ಹಿಡಿದುಕೊಂಡು ಜರ್ಮನ್ ಸೇನೆಯು ಕ್ರಮವಾಗಿ ಓಸ್ಲೋದಿಂದ ಮುಂದರಿಯುತ್ತಿದೆ' ಎಂದು ಜರ್ಮನರು ಹೇಳುತ್ತಿರುವರು.

ನಾಮ್‌ಸಸ್.

ನಾಮ್‌ಸಸ್ ಎಂಬಲ್ಲಿ ಮಿತ್ರರಾಷ್ಟ್ರಗಳಿಗೂ, ಶತ್ರುರಾಷ್ಟ್ರದವರಿಗೂ ತೀವ್ರ ಕದನವಾಗುತ್ತಿದೆ. ಜರ್ಮನರು ವಿಮಾನದಿಂದ 'ಪೆರಚ್ಯೂಟ್' ಪಡೆಯನ್ನು ಇಲ್ಲಿ ಅಧಿಕವಾಗಿ ಇಳಿಸುತ್ತಿರುವರಂತೆ. ಶ್ರೀಪ್ಲೈನುಗಳಿಂದ ಬ್ರಿಟಿಷ್ ಫ್ರಾನ್ಸುಗಳ ಪಡೆಯ ಮೇಲೆ ಹೋರಾಡಲು ಜರ್ಮನರು ಈ ಹಂಚಿಕೆಯನ್ನು ಉಪಯೋಗಿಸುತ್ತಿದ್ದಾರೆ. ಜರ್ಮನಿಯ 'ಬರ್ಗೆಲ್ ಪ್ರಿನ್ಸ್' ಎಂಬ ವ್ಯಾಪಾರಿ ಹಡಗು ಮುಳುಗಿಸಲ್ಪಟ್ಟಿದೆ. ಜರ್ಮನರು ನಾರ್ವೆ ಸರಕಾರದ ಪ್ರಧಾನತಃ ಒಂದು ಸೇರಿದ್ದ ಹಮಾರ್ ಪಟ್ಟಣವನ್ನು ಹಿಡಿದುಕೊಂಡಿದ್ದರಷ್ಟೆ. ಅದನ್ನು ಪುನಹ ಬ್ರಿಟಿಷರು ವಶಪಡಿಸಿಕೊಂಡಿರುವದಾಗಿ ಅನಧಿಕೃತವಾಗಿ ತಿಳಿದು ಬಂದಿದೆ.

ಜರ್ಮನರು ಘೋಷಣೆ.

'ಶತ್ರುಗಳ ನೌಕಾಪಡೆಯು ಏಪ್ರಿಲ್ 20ರಲ್ಲಿ ನಾರ್ವಿಕ್‌ನ ಮೇಲೆ ಬಾಂಬು ಸುರಿಸಲು ಪ್ರಯತ್ನಿಸಿದವು. ಆದರೆ ಬ್ರಿಟಿಷ್ ಸೈನ್ಯವು ನಾರ್ವಿಕ್ ಪ್ರದೇಶಕ್ಕೆ ಕಾಲಿಡಲಿಲ್ಲ. ನಾರ್ವಿಕ್ ಪ್ರಾಂತದಲ್ಲಿರುವ ಜರ್ಮನ್ ಸೇನೆಯು ಮಿತ್ರರಾಷ್ಟ್ರಗಳ ಸಾವಿರ ರೈಫಲುಗಳನ್ನೂ, 31ನ ಮಿಶಿನ್ ಕೋವಿಗಳನ್ನೂ ವಶಪಡಿಸಿಕೊಂಡಿದೆ. ಶತ್ರುಗಳ ಸೈನ್ಯವು ದಡಕ್ಕೆ ಬರದಂತೆ ನಮ್ಮ ವಿಮಾನ ಪಡೆಯು ಮಾಡಿದ ಪ್ರಯತ್ನವು ವಿಶೇಷ ಫಲಕಾರಿಯಾಗಿದೆ. ಬ್ರಿಟಿಷರ 'ಹೆಲಿಕ್ರೂಸರ್' ಎಂಬ ಹಡಗನ್ನು ಬಾಂಬುಹಾಕಿ ಮುಳುಗಿಸಲಾಗಿದೆ. ಹಮಾರ್ ಪಟ್ಟಣದ 30 ಮೈಲು ಉತ್ತರದಲ್ಲಿರುವ ಲಿಲ್ಲೆಹಮಾರ್ ಎಂಬ ಪಟ್ಟಣವನ್ನು ನಮ್ಮ ಸೈನ್ಯವು ವಶಪಡಿಸಿಕೊಂಡಿದೆ.'

ಡೆನ್ಮಾರ್ಕಿನಲ್ಲಿ ಕದನ.

ಜರ್ಮನರು ಕರಗತಮಾಡಿಕೊಂಡಿರುವ ಡೆನ್ಮಾರ್ಕಿನಲ್ಲಿಯೂ ಯುದ್ಧ ಪ್ರಾರಂಭವಾಗಿದೆ. ಬ್ರಿಟಿಷ್ ರಾಯಲ್ ಏರ್‌ಫೋರ್ಸಿನ ವಿಮಾನಗಳು ತಾರೀಕು 21ರಲ್ಲಿ ಜರ್ಮನರು ವಶಪಡಿಸಿಕೊಂಡಿರುವ ವಿಮಾನ ನಿಲ್ದಾಣಗಳ ಮೇಲೆ ಬಾಂಬುಹಾಕಿರುವರು. ಈ ಅನಿರೀಕ್ಷಿತ ಘಟನೆಯಿಂದಾಗಿ ಜರ್ಮನರಿಗೆ ಆಶ್ಚರ್ಯವಾಗಿದೆ.

ಬ್ರಿಟನಿನಲ್ಲಿ ಜರ್ಮನರ ಕೈವಾಡ.

ಜರ್ಮನ್ ವಿಮಾನಗಳು ಇಂಗ್ಲೆಂಡಿನ ದಕ್ಷಿಣ ತೀರ ಪ್ರದೇಶದಲ್ಲಿ ಕಾಣಿಸಿಕೊಂಡು ಬ್ರಿಟಿಷರಿಗೆ ಗಾಬರಿಯುಂಟುಮಾಡಿವೆ. ಪ್ರಚಂಡ ಗುಂಡಿನ ಶಬ್ದವು ಕೇಳಿಬಂದಿದೆಯಂತೆ. ಜರ್ಮನರ ವಿಮಾನಗಳು ಸಮುದ್ರದಲ್ಲಿ ಮೈನ್‌ಗಳನ್ನು ಹಾಕಲು ಬಂದಿದ್ದವೆಂದು ಊಹಿಸಲಾಗಿದೆ.

ಜರ್ಮನರ ನಷ್ಟ.

ಕಳೆದ ಐದು ದಿನಗಳ ಯುದ್ಧದಲ್ಲಿ ಜರ್ಮನರು 100 ವಿಮಾನಗಳನ್ನು ಕಳಕೊಂಡರೆಂದೂ ಜರ್ಮನಿ ವಿಮಾನ ಪಡೆಯವರಿಗೆ ರಾತ್ರೆ ಯುದ್ಧದಲ್ಲಿ ಹೆಚ್ಚಿನ ನೈಪುಣ್ಯವಿಲ್ಲವೆಂದೂ ಬ್ರಿಟಿಷರ ಪ್ರಕಟಣೆಯೊಂದು ಹೇಳುತ್ತದೆ.

ನಾರ್ವೆಯ ಡೊಂಬಾಸ್ ಎಂಬಲ್ಲಿ ತೀವ್ರ ಕದನವಾಯಿತು. ಈ ಯುದ್ಧದಲ್ಲಿ ಅಮೇರಿಕಾದ (ಕೆನಡಾದ) ಪಡೆಯವರೂ ಭಾಗವಹಿಸಿದ್ದರು. ಇದರಲ್ಲಿ ಜರ್ಮನರು ಅಮೇರಿಕನ್ ಪಡೆಯ ಕೆಪ್ಟನನಾಗಿದ್ದ ಲೂಸೆ ಎಂಬವನನ್ನು ಕೊಂದು ಹಾಕಿದರು.

ಜರ್ಮನ್, ಇಟಲಿ, ರಷ್ಯಾಗಳ ಐಕ್ಯ?

ಮುಂದೆ ಜರ್ಮನ್, ಇಟಲಿ ರಷ್ಯಾಗಳು ಒಮ್ಮತದಿಂದ ಯುದ್ಧದಲ್ಲಿ ವರ್ತಿಸಬೇಕೆಂದೂ, ಆದ್ದರಿಂದ ಈ ಮೂರು ರಾಷ್ಟ್ರಗಳ ಸಂಘಟನೆಯಾಗಬೇಕೆಂದೂ ಮಾತುಕತೆಗಳು ನಡೆಯುತ್ತಿವೆ. ರಷ್ಯಾದ ರಾಯಭಾರಿಯು ಬರ್ಲಿನಿಗೆ ಹೋಗಿ ಈ ವಿಚಾರ ಮಾತುಕತೆ ನಡೆಸುತ್ತಿರುವನು.

ಪಶ್ಚಿಮ ರಣರಂಗ.

ನಾರ್ವೆಯಲ್ಲಿ ಯುದ್ಧ ನಡೆಯುತ್ತಿದ್ದಂತೆಯೇ ಫ್ರಾನ್ಸಿನ ಗಡಿಯಾದ ಪಶ್ಚಿಮ ರಣರಂಗದಲ್ಲೂ ಯುದ್ಧ ಚಟುವಟಿಕೆ ಕಂಡು ಬರುತ್ತಿದೆ. ಪರಸ್ಪರ ವಿಮಾನ ಯುದ್ಧವು ನಡೆಯುತ್ತಿದೆ. ಸ್ಥಿತಿಯು ಇನ್ನೂ ಕರಾಳರೂಪವನ್ನು ತಳೆದೀತೆಂಬ ಭಾವನೆ ಹಬ್ಬಿದೆ.

ಪ್ಯಾರಿಸ್ಸಿನ ಮೇಲೆ ಶತ್ರು ವಿಮಾನ.

ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್ಸಿನ ಮೇಲೆ ರಾತ್ರೆ ಶತ್ರು ವಿಮಾನಗಳು ಹಾರಿ ಬಂದಿದ್ದವೆಂದೂ, ನಗರರಕ್ಷಣಾ ಬಂದೂಕಗಳು ಗುಂಡು ಹಾರಿಸಿದವೆಂದೂ ವಿಮಾನಗಳು ಬಾಂಬುಗಳನ್ನಾಗಲೀ ಯಾವ ತೊಂದರೆಯನ್ನಾಗಲೀ ಮಾಡದೆ ಹೋಟು ಹೋದವೆಂದೂ ಸುದ್ದಿ.

ಕೊಡಗು

ಏಪ್ರಿಲ್ ತಾರೀಕು ೨೬ ನೇ ಶುಕ್ರವಾರ ೧೯೪೦.

ವರ್ಕಿಂಗ್ ಕಮಿಟಿಯ ತೀರ್ಮಾನ.

ರಾಮಗಡ ಕಾಂಗ್ರೆಸು ಮಹಾಸಭೆಯು ಕಳೆದನಂತರ ವರ್ಕಿಂಗ್ ಕಮಿಟಿಯು ಪ್ರಥಮಃ ತಾ. 17ರಿಂದ 19ರ ವರೆಗೆ ವರ್ಧಾದಲ್ಲಿ ಸೇರಿತ್ತು. ಅಲ್ಲಿ ಈಗಿನ ರಾಜಕೀಯ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಲ್ಪಟ್ಟು ಮುಖ್ಯವಾಗಿ ಮುಂದಿನ ಹೋರಾಟಕ್ಕೆ ತಯಾರಿಯನ್ನು ಕುರಿತು ದೀರ್ಘವಾಗಿ ಚರ್ಚಿಸಲ್ಪಟ್ಟಿತು. ಮುಂದಿನ ಸಂಗ್ರಾಮದ ಮುಂದಾಳುತನವನ್ನು ವಹಿಸಲು ಒಪ್ಪಿರುವ ಮಹಾತ್ಮ ಗಾಂಧಿಯವರು 'ಹರಿಜನ' ಪತ್ರಿಕೆಯಲ್ಲಿ ಆಗಿಂದಾಗ್ಯೆ ಪ್ರಕಟಿಸುತ್ತಿರುವ ಸೂಚನೆಗಳನ್ನನುಸರಿಸಿ ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಯವರು ಹೊರಡಿಸುತ್ತಿರುವ ಪ್ರಕಟಣೆಗಳನ್ನು ಅವಲಂಬಿಸಿ ಕಾಂಗ್ರೆಸ್ ಸಮಿತಿಗಳು ಸತ್ಯಾಗ್ರಹಗಳ ತಯಾರಿಸುವಿಕೆಗೆ ಮಾಡುತ್ತಿರುವ ಏರ್ಪಾಡುಗಳಿಗೆ ವರ್ಕಿಂಗ್ ಕಮಿಟಿಯು ಮೆಚ್ಚಿಗೆಯನ್ನು ಸೂಚಿಸಿದೆ. ಈಗಾಗಲೇ ಹಲವು ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳು ಅವರಂತೆಯೇ ಕೆಳಗಿನ ಕಾಂಗ್ರೆಸ್ ಸಮಿತಿಗಳೂ ಸತ್ಯಾಗ್ರಹ ಸಮಿತಿಗಳಾಗಿ ಮಾರ್ಪಡಿಸಲ್ಪಟ್ಟು ಹಲವು ಮುಂದಾಳುಗಳು ಮಹಾತ್ಮರು ತಯಾರಿಸಿರುವ ಪ್ರತಿಜ್ಞಾ ಪತ್ರಕ್ಕೆ ಸಹಿಯನ್ನು ಹಾಕಿರುವರು ಜೈಲುವಾಸವನ್ನು ಕೈಗೊಳ್ಳಲು ತಯಾರಿರುವ ಸಕ್ರೀಯ ಸತ್ಯಾಗ್ರಹಿಗಳು ಮತ್ತು ಸತ್ಯಾಗ್ರಹ ಚಳವಳಕ್ಕೆ ಎಲ್ಲಾ ತರದ ಸಹಾಯವನ್ನು ನೀಡಲು ತಯಾರಿರುವವರ ಪಟ್ಟಿಗಳನ್ನೂ ತಯಾರು ಮಾಡುವ ಕೆಲಸವು ಭರದಿಂದ ನಡೆಯುತ್ತಿದೆ. ಸತ್ಯಾಗ್ರಹ ಪ್ರತಿಜ್ಞೆಗೆ ಸಹಿ ಮಾಡಲು ಸಿದ್ಧರಿಲ್ಲದ ಮಹನೀಯರು ಕಾಂಗ್ರೆಸ್ ಕಮಿಟಿಗಳ ಮೆಂಬರುತನಕ್ಕೆ ರಾಜಿನಾಮೆ ಕೊಡಬೇಕೆಂದು ವರ್ಕಿಂಗ್ ಕಮಿಟಿಯು ನಿರ್ಧರಿಸಿದೆ. ಇದು ನ್ಯಾಯವಾದ ತೀರ್ಮಾನವೆಂಬುವುದರಲ್ಲಿ ಸಂಶಯವಿಲ್ಲ. ಜೈಲು ವಾಸವನ್ನು ಕೈಗೊಳ್ಳಲು ತಯಾರಿಲ್ಲದವರಿಗೆ ಸತ್ಯಾಗ್ರಹ ಕಮಿಟಿಗಳಲ್ಲಿ ಕಾರುಬಾರುಗಳನ್ನು ನಡೆಸಲು ಸಾಧ್ಯವಾಗಲಿಕ್ಕಿಲ್ಲವೆಂಬುದು ನಿಜವೆ.

ಸತ್ಯಾಗ್ರಹಿಗಳ ಸಂಖ್ಯೆಗಿಂಥಾ ಅವರ ಯೋಗ್ಯತೆಗೆ ಮಹಾತ್ಮರು ಹಾಗೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಹೆಚ್ಚಿನ ನಿಗವಿಡಬೇಕೆಂದು ಸಾರಿ ಹೇಳುತ್ತಿದ್ದಾರೆ ಯಾತಕ್ಕೆಂದರೆ ಮುಂದೆ ಬರಲಿಕ್ಕಿರುವ ಅಖೈರು ಸ್ವಾತಂತ್ರ್ಯ ಅಹಿಂಸಾಯುದ್ಧವು ಜಯಪ್ರದವಾಗಬೇಕಾದರೆ ಅದು ಅಹಿಂಸಾತತ್ವದಲ್ಲಿ ನಂಬಿಕೆಯಿಲ್ಲದ ಲಕ್ಷಗಟ್ಲೆ ಜೈಲು ಹೋಕರಿಂದಲ್ಲ; ಬದಲು ಜೈಲು ವಾಸವನ್ನು ಕೈಕೊಳ್ಳಬಹುದಾದ ಸಾವಿರ ಗಟ್ಲೆ ನಿಜವಾದ ಸತ್ಯಾಗ್ರಹಿಗಳ ಅಹಿಂಸಾ ತತ್ವದ ಬಲದಿಂದಾಗಿರಬೇಕೆಂದು ಮಹಾತ್ಮರ ಹೇಳಿಕೆಯಾಗಿದೆ. ಈ ಕಾರಣ ಪ್ರತಿಜ್ಞೆಯಲ್ಲಿ ಸೂಚಿಸಿರುವ ಪ್ರತಿಯೊಂದು ಶರತ್ತನ್ನು ಅಕ್ಷರಶಃ ಪಾಲಿಸುವವರನ್ನೇ ಸಕ್ರೀಯ ಸತ್ಯಾಗ್ರಹಿಗಳಾಗಿ ಸೇರಿಸಿಕೊಳ್ಳತಕ್ಕದ್ದಾಗಿದೆ. ಪ್ರತಿಜ್ಞೆಯಲ್ಲಿರುವ ಅಹಿಂಸಾತತ್ವಪರಿಪಾಲನೆ, ಸತತ ಖಾದಿ ಧರಿಸುವಿಕೆ, ಸರಿಯಾಗಿ ಕೈಯಿಂದ ನೂಲುವಿಕೆ ಮತ್ತು ಜೈಲುವಾಸವನ್ನು ಕೈಕೊಳ್ಳುವದು ಅವಶ್ಯವಿದ್ದರೆ ಪ್ರಾಣವನ್ನು ಸಹ ಅರ್ಪಿಸುವದು. ಇವೇ ಮುಖ್ಯವಾದ ಶರತುಗಳಾಗಿವೆ. ಮಹಾತ್ಮರ ಹೋರಾಟವೇ ಅಹಿಂಸಾ ತತ್ವದ ಅಡಿಪಾಯದಲ್ಲಿ ನಿಲ್ಲಿಸಲ್ಪಟ್ಟಿರುವ ಕಾರಣ ಆ ತತ್ವವನ್ನು ಮನೋವಾಕ್ಕಾಯ ಕರ್ಮಗಳಲ್ಲಿಯೂ ಆಚರಿಸಬೇಕೆಂದೂ ಒತ್ತಿ ಹೇಳುವದರಲ್ಲಿ ತುಂಬಾ ಅರ್ಥವಿದೆ. ನಂತರ ಕೈಯಿಂದ ನೂಲುವದು ಆದೇ ನೂಲಿನಿಂದ ತಯಾರಿಸಲ್ಪಟ್ಟ ಖಾದಿ ಬಟ್ಟೆಯನ್ನು ಧರಿಸಬೇಕೆಂದೂ ಒತ್ತಾಯಪಡಿಸುವದನ್ನು ನಿಜವಾದ ದೇಶಭಕ್ತರಾರೂ ವಿರೋಧಿಸಲಾರರು. ಇಂದು ಹಿಂದೂಸ್ಥಾನವು ಅನುಭವಿಸುತ್ತಿರುವ ಕಡುಬಡತನವನ್ನೂ ನಿರುದ್ಯೋಗವನ್ನು ಹೋಗಲಾಡಿಸಲು ದಿವ್ಯೌಷಧವಾದ ಖಾದಿ ಮಂತ್ರವನ್ನು ಎಲ್ಲರೂ ಒಪ್ಪಲೇ ಬೇಕಿದೆ. ಅದರೊಂದಿಗೆ ಖಾದಿಯನ್ನುಡುವದರಿಂದ ತಮ್ಮ ದೇಶದ ಮೇಲೆ ಉಂಟಾಗುವ ಪ್ರೇಮ ಮತ್ತು ಭಕ್ತಿಯನ್ನು ಯಾರೂ ಮರೆಯಲಾಗದು. ಖಾದಿ ಉಡುಪು ಧರಿಸುವಿಕೆಯ ಸರಿಸಮಾನತೆ ಮತ್ತು ಚರಖಾ ಮತ್ತು ತಕಲಿಯ ನೂಲುವಿಕೆಯಿಂದ ಉಂಟಾಗುವ ಮನಶ್ಶಾಂತಿ ಇವುಗಳನ್ನು ದೇಶ ಪ್ರೇಮಿಗಳು ಅನುಭವಿಸಿದರೇನೆ ಅದರ ಪ್ರಾಮುಖ್ಯತೆಯು ಅವರಿಗೆ ತಿಳಿಯಬರುವದು. ಪ್ರತಿಜ್ಞೆಯ ಕಡೇ ಶರತಿನ ತ್ಯಾಗ ಬುದ್ಧಿಯನ್ನು ಕುರಿತು ನಾವು ಹೆಚ್ಚು ಬರೆಯಬೇಕಿಲ್ಲ. ದೇಶವು ಕಳಕೊಂಡಿರುವ ಸ್ವಾತಂತ್ರ್ಯವನ್ನು ಮರಳಿ ಪಡೆಯಬೇಕಾದರೆ ಪ್ರತಿಯೊಬ್ಬ ಭಾರತಪುತ್ರಿಯೂ, ಪುತ್ರನೂ, ತನ್ನ ಕೈಯಲ್ಲಾಗುವ ತ್ಯಾಗವನ್ನು ಮಾಡಲು ಸಿದ್ಧರಾಗಬೇಕಿದೆ. ಮಹಾತ್ಮರಿಗೆ ಒಪ್ಪುವ ಸಿದ್ಧತೆಯು ಆಗದ ವಿನಹ ಸೇನಾನಾಯಕರಾದ ಮಹಾತ್ಮರು ಹೋರಾಟವನ್ನು ಪ್ರಾರಂಭಿಸಲಾರರೆಂದು ಘಂಟಾಘೋಷವಾಗಿ ಹೇಳಿರುವರು. ಆವ ಕಾರಣ ಅವರಿಗೆ ತೃಪ್ತಿಯಾಗುವಂತೆ ಸತ್ಯಾಗ್ರಹದ ತಯಾರಿಕೆಯನ್ನು ಮಾಡುವಭಾರವು ಕಾಂಗ್ರೆಸ್‌ಕೆಲಸಗಾರರ ಹಾಗೂ ಭಾರತೀಯರೆಲ್ಲರಮೇಲೆಬಿದ್ದದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಠರಾವುಗಳು.

ವರ್ಧಾದಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಈ ಠರಾವುಗಳನ್ನು ಅಂಗೀಕರಿಸಿದೆ.

ರಾಜಕೀಯ ಹಾಗೂ ಅಂತರರಾಷ್ಟ್ರೀಯ ವಿಚಾರಗಳನ್ನು ಕೂಲಂಕುಶ ವಿಚಾರಿಸಿ ಆ ಬಗ್ಗೆ ಯಾವ ನಿಶ್ಚಿತ ಠರಾವು ಮಾಡದಿದ್ದರೂ ವರ್ಕಿಂಗ್ ಕಮಿಟಿಯು ಈ ನಿರ್ಧಾರಕ್ಕೆ ಬಂದಿದೆ,—'ರಾಮಗಡದಲ್ಲಿ ಸೇರಿದ ಸಮ್ಮೇಳನದಲ್ಲಿ ಅಂಗೀಕರಿಸಿರುವ ಠರಾವು ಈ ವಿಚಾರ ಕಾಂಗ್ರೆಸಿನ ಸ್ಪಷ್ಟ ನಿರ್ಧಾರವನ್ನು ಮಾಡಿದೆ. ಆದರೆ ಈಗ ನಾವು ಮಾಡತಕ್ಕದ್ದೆಂದರೆ ಆ ನಿರ್ಣಯವನ್ನು ಕಾರ್ಯರೂಪಕ್ಕೆ ತರುವದಾಗಿದೆ. ಗೊಂದಲಕ್ಕೆ ಕಾರಣ ಮಾಡಿಕೊಂಡು ದೇಶದಲ್ಲಿ ಕ್ಷೋಭೆಯನ್ನೆಬ್ಬಿಸುವದರಲ್ಲಿ ಫಲವಿಲ್ಲ. ಶಾಸನಭಂಗ ಚಳವಳವನ್ನು ಹೂಡಿದ ಪಕ್ಷದಲ್ಲಿ ಅದು ಯಾವ ರೀತಿ ಮತ್ತು ಯಾವ ತತ್ವಗಳಿಂದಾಗಬೇಕೆಂಬ ಕುರಿತು ಗಾಂಧೀಜಿಯವರು ಹಾಕಿದ ಶರತುಗಳಿಗೊಳಗಾಗಬೇಕು. ಎಂದು ಮೊದಲಾಗಿ ಚರ್ಚಿಸಿದರು. ಆದರೂ ವರ್ಕಿಂಗ್ ಕಮಿಟಿಯು ಯಾವದೊಂದೂ ನಿರ್ಧಾರಕ್ಕೆ ಬಂದಿಲ್ಲ.

ಮುಂದೆ ವರ್ಕಿಂಗ್ ಕಮಿಟಿಯು ಸತ್ಯಾಗ್ರಹ ಶಿಬಿರಗಳ ಹಾಗೂ ಸತ್ಯಾಗ್ರಹ ಪ್ರತಿಜ್ಞೆಯನ್ನು ಕೈಕೊಳ್ಳುವ ವಿಚಾರ ವಿವರಿಸುತ್ತಾ ಕಾಂಗ್ರೆಸಿನ ಹೇಳಿಕೆಯಂತೆ ಪ್ರತಿಜ್ಞೆ ತೆಗೆದುಕೊಳ್ಳಲು ಹಾಗೂ ಅದು ಆಗಿಂದಾಗ್ಯೆ ಜಾರಿಯಲ್ಲಿ ತರಬಹುದಾದ ಶರತುಗಳನ್ನು ಪಾಲಿಸಲು ಅಸಾಧ್ಯವೆಂದು ಹೇಳುವ ಪ್ರತಿಯೊಬ್ಬ ಯಾವದೇ ಕಾಂಗ್ರೆಸ್ ಕಮಿಟಿಯ ಸದಸ್ಯನೂ ತನ್ನ ಸ್ಥಳಕ್ಕೆ ರಾಜಿನಾಮೆ ಕೊಡಬೇಕೆಂದು ನಿರ್ಧರಿಸಿರುವದು.

ವರ್ಕಿಂಗ್ ಕಮಿಟಿ ಸಭೆಯು ತಾ. 19 ರಲ್ಲಿ ಮುಕ್ತಾಯಗೊಂಡಿತು.

ಸತ್ಯಾಗ್ರಹಿಯ ಪ್ರತಿಜ್ಞೆ.

ನಾನು ಸಕ್ರೀಯ ಸತ್ಯಾಗ್ರಹಿಯಾಗಲು ಇಚ್ಛಿಸುತ್ತೇನೆ. ನಾನು ದೃಢ ನಿಶ್ಚಯದಿಂದ ಕೆಳಗಿನಂತೆ ಪ್ರತಿಜ್ಞೆಯನ್ನು ತೆಗೆದುಕೊಳ್ಳುತ್ತೇನೆ.

1. ನಾನು ಸಕ್ರೀಯ (Active) ಸತ್ಯಾಗ್ರಹಿ ಇರುವ ವರೆಗೆ ಮಾತಿನಲ್ಲಿಯೂ, ಕೃತಿಯಲ್ಲಿಯೂ ಅಹಿಂಸೆಯಿಂದ ಇರುವೆನು ಮತ್ತು ಮನಸಿನಿಂದಾದರೂ ಅಹಿಂಸೆಯಿಂದ ಇರಲು ಹೃತ್ಪೂರ್ವಕ ಪ್ರಯತ್ನಿಸುತ್ತೇನೆ. ನಮ್ಮ ದೇಶದ ಸದ್ಯದ ಪರಿಸ್ಥಿತಿಯಲ್ಲಿ ಸ್ವರಾಜ್ಯವನ್ನು ದೊರಕಿಸಲು ಹಾಗೂ ಹಿಂದು, ಮುಸಲ್ಮಾನ, ಸೀಖ, ಪಾರ್ಸಿ, ಕ್ರಿಶ್ಚಿಯನ್ ಅಥವಾ ಯಹೂದಿ ಮುಂತಾದ ಎಲ್ಲ ಜಾತಿ ಜನಾಂಗಗಳ ಒಕ್ಕಟ್ಟು ಬೆಳೆಸಲು ಅಹಿಂಸೆಯೊಂದೇ ಮಾರ್ಗವೆಂದು ನಂಬುತ್ತೇನೆ.

2. ಇಂಥಾ ಒಕ್ಕಟ್ಟನ್ನು ಬೆಳೆಸಲು ಯಾವಾಗಲೂ ನಾನು ಯತ್ನಿಸುತ್ತೇನೆ. ಅದರಲ್ಲಿ ತುಂಬಾ ನನಗೆ ನಂಬಿಗೆ ಇದೆ.

3. ಅಸ್ಪೃಶ್ಯತೆಯ ಕಲಂಕವನ್ನು ತೊಡೆದು ಹಾಕುವದು ನ್ಯಾಯ ಹಾಗೂ ಅವಶ್ಯವೆಂದು ನಾನು ನಂಬುತ್ತೇನೆ. ಹಾಗೂ ಸಾಧ್ಯವಿದ್ದ ಸಂದರ್ಭಗಳಲ್ಲೆಲ್ಲ ಹಿಂದುಳಿದ ವರ್ಗದವರ ಸಂಗಡ ನನ್ನ ಸಂಪರ್ಕ ಬೆಳಿಸಲು ಹಾಗೂ ಅವರ ಸೇವೆ ಮಾಡಲು ಪ್ರಯತ್ನಿಸುತ್ತೇನೆ.

4. ಹಿಂದುಸ್ಥಾನದ ಆರ್ಥಿಕ, ರಾಜಕೀಯ ಹಾಗೂ ನೈತಿಕ ಉದ್ಧಾರಕ್ಕೆ ಸ್ವದೇಶಿಯು ಅಗತ್ಯವೆಂದು ನಾನು ನಂಬುತ್ತೇನೆ. ಮತ್ತು ಉಳಿದ ಎಲ್ಲಾ ಅರಿವೆಗಳನ್ನು ಬಿಟ್ಟು ಕೈನೂಲಿನ ಕೈಮಗ್ಗದ ಖಾದಿಯನ್ನೇ ಉಪಯೋಗಿಸುತ್ತೇನೆ. ಹಾಗೂ ಶಕ್ಯವಿದ್ದ ಮಟ್ಟಿಗೆ ಗ್ರಾಮೋದ್ಯೋಗದ ಮತ್ತು ಕೈಯಿಂದ ತಯಾರಿಸಿದ ವಸ್ತುಗಳನ್ನು ಉಪಯೋಗಿಸುತ್ತೇನೆ.

5. ನಾನು ನಿಯಮದಿಂದ ನೂಲುತ್ತೇನೆ.

6. ನನ್ನ ಮೇಲಿನ ಅಧಿಕಾರಿಗಳ ಆಜ್ಞೆಯನ್ನು ಹಾಗೂ ಮೇಲಿನ ಕಾಂಗ್ರೆಸ್ ಸಮಿತಿ, ವರ್ಕಿಂಗ್ ಕಮಿಟಿ ಅಥವಾ ಕಾಂಗ್ರೆಸ್ಸಿನಿಂದ ಸ್ಥಾಪಿತವಾದ ಯಾವುದೇ ಸಮಿತಿಗಳು ಈ ಪ್ರತಿಜ್ಞೆಯ ಧೋರಣೆಗೆ ವಿಸಂಗತವಾಗದಂತೆ ಹಾಕಿ ಕೊಡುವ ಎಲ್ಲಾ ನಿಯಮಗಳನ್ನೂ ಪಾಲಿಸುತ್ತೇನೆ.

7. ನನ್ನ ದೇಶಕ್ಕಾಗಿ ಹಾಗೂ ಧ್ಯೇಯಕ್ಕಾಗಿ ನಾನು ಉಪ್ರೇಕಗೊಳ್ಳದೆ ಸ್ವಸಂತೋಷದಿಂದ ಕೈದಾಗಲು, ಬಡಿತ ತಿನ್ನಲು ಅಥವಾ ಪ್ರಾಣವನ್ನಾದರೂ ಕೊಡಲು ಸಿದ್ಧನಿರುತ್ತೇನೆ.

8. ನನಗೆ ಕೈದಾದಾಗ ನನ್ನ ಮತ್ತು ನನ್ನ ಮನೆತನದ ಸಲುವಾಗಿ ಅಥವಾ ನನ್ನ ಮೇಲೆ ಅವಲಂಬಿಸಿದವರ ಸಲುವಾಗಿ ಕಾಂಗ್ರೆಸ್ಸಿನಿಂದ ಯಾವ ಸಹಾಯವನ್ನೂ ಅಪೇಕ್ಷಿಸುವುದಿಲ್ಲ.

---

5 ರೂಪಾಯಿ ಬಹುಮಾನ.

ಹೊಸದಾಗಿ ಗೋಣಿಕೊಪ್ಪಲಿನಿಂದ ತಂದ ನನ್ನ ಬಾಪ್ತು ಐದು ರಾಸು ಎಮ್ಮೆ ದನಗಳು ಅಂದರೆ ಎರಡು ದೊಡ್ಡ ಎಮ್ಮೆಗಳು, ಎರಡು ಕೋಣ ಮರಿಗಳು ಮತ್ತು ಒಂದು ಎಮ್ಮೆ ಕರ ಇವು ತಾರೀಕು 17-4-40ರಲ್ಲು ಬೈರಂಬಡ ಭೂಮಿಯಿಂದ ಪರಾರಿಯಾಗಿವೆ ಇವುಗಳನ್ನು ಪತ್ತೆ ಹಚ್ಚಿ ಕೊಟ್ಟವರಿಗೆ ಐದು ರೂಪಾಯಿ ಬಹುಮಾನ ಕೊಡಲಾಗುವದು.

ಚೋಂಚಿರ ಬಿದ್ದಯ್ಯ.
ಚಿಕ್ಕಪೇಟೆ,
ವೀರಾಜಪೇಟೆ.

ಕೃತಜ್ಞತಾ ಪತ್ರ.

ನನ್ನ ಪ್ರಿಯ ಪತ್ನಿಯ ಅಕಾಲ ನಿಧನದಿಂದ ನನಗುಂಟಾದ ಶೋಕಾಂಬುಧಿಯಲ್ಲಿ ನನ್ನ ಮಿತ್ರರೂ, ಬಂಧು ವರ್ಗದವರೂ ಭಾಗಿಗಳಾಗಿ ನನಗೆ ಬರೆದಿರುವ ಸಹಾನುಭೂತಿ ಪತ್ರಗಳಿಗೆ ದುಃಖ ಸಂತಪ್ತನಾದ ನಾನು ಪ್ರತ್ಯೇಕ ಪ್ರತ್ಯೇಕ ಪತ್ರ ಬರೆಯಲು ಅಶಕ್ತನಾಗಿರುವದರಿಂದ ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಈ ಮೂಲಕ ಸಲ್ಲಿಸುತ್ತೇನೆ.

ಪುಚ್ಚಿಮಾಡ ಕೆ. ಪೂವಯ್ಯ,
ಪೊನ್ನಂಪೇಟೆ.

ವರ್ತಮಾನ ಸಂಗ್ರಹ.

ಒಳದೇಶ.

ಏಪ್ರಿಲ್ ತಾರೀಕು ೯ರಲ್ಲಿ ಮೈಸೂರು ರೆಸಿಡೆಂಟರೂ, ಕೊಡಗಿನ ಚೀಫ್‌ಕಮಿಷನರೂ ಆದ ಲೆ. ಕರ್ನಲ್ ಗಾರ್ಡನ್‌ರವರ ಮೇಲೆ ಕೈಮಾಡಿದನೆಂಬ ಅಪಾದನೆಯಲ್ಲಿ ಬಂಧಿತನಾಗಿದ್ದ ಮಿ. ಒಡೆಯುರನ್ನು ಪರೀಕ್ಷಿಸಿ ಅವರ ಜ್ಞಾನವು ಸ್ಥಿಮಿತದಲ್ಲಿಲ್ಲವೆಂದು ತೀರ್ಮಾನವಾಗಿ ಅವರು ಈಗ ಬೆಂಗಳೂರು ಮೆಂಟಲ್ ಆಸ್ಪತ್ರೆಯಲ್ಲಿರುವರೆಂದು ತಿಳಿಯುತ್ತೇವೆ.

ಕಲ್ಕತ್ತಾ, ಬೆಂಗಳೂರು ಮತ್ತು ಡೆರಡೂನಿನಲ್ಲಿ ಇಂಡಿಯಾ ಸರ್ವೆಯ ಎರಡನೆ ತರಗತಿಗೆ ಉಮೇದುವಾರರನ್ನು ಆರಿಸುವ ಪರೀಕ್ಷೆಯು ತಾ. 18-8-40ರಿಂದ ಪ್ರಾರಂಭವಾಗುವದೆಂದೂ, ಅರ್ಜಿಗಳು ತಾ. 6-5-40 ರೊಳಗೆ ಕಮಿಷನರ ಆಫೀಸಿಗೆ ತಲಪಬೇಕೆಂದೂ, ಅರ್ಜಿಫಾರಂಗಳೂ, ಹೆಚ್ಚಿನ ಮಾಹಿತಿಯೂ ಇಂಡಿಯಾ ಸರ್ವೆಯರ್ ಜನರಲ್‌ರವರ ಆಫೀಸಿನಿಂದ ಸಿಗುವದೆಂದೂ ಪ್ರಕಟವಾಗಿದೆ.

ಮೈಸೂರಿನ ಅತ್ತಿಕಾನದಲ್ಲಿ ಒಂದು ಕರಡಿಯು ಜನರಿಗೆ ವಿಪರೀತ ತೊಂದರೆ ಕೊಡುತ್ತಿದ್ದ ಪ್ರಯುಕ್ತ ಅದನ್ನು ಕೊಲ್ಲಲು ಅನೇಕ ಐರೋಪ್ಯ ಪ್ಲಾಂಟರುಗಳು ಪ್ರಯತ್ನಿಸಿದರೂ ಸಾಧ್ಯವಾಗದಿದ್ದು ಕೊಡಗಿನವರಾದ ಶ್ರೀ ತಾಣ್ಣಮನೆ ರಘುನಾಥರೈಗಳು ಕರಡಿಯು ಅವರ ಮೇಲೇರಿ ಬರುವಂಥಾ ಸಂದರ್ಭದಲ್ಲಿ ಧೈರ್ಯಗೆಡದೆ ಗುಂಡಿಸಿಂದ ಅದನ್ನು ಕೊಂದು ಹಾಕಿದರೆಂದೂ ಇದು ಐರೋಪ್ಯರಲ್ಲಿ ಆಶ್ಚರ್ಯವನ್ನುಂಟುಮಾಡಿದೆಯೆಂದೂ ತಿಳಿದುಬರುತ್ತದೆ.

ಮಡಿಕೇರಿ.

ಇಲ್ಲಿಗೆ ತಾ. 20ರಿಂದ ಇಂದಿನ ವರೆಗೆ 3 ಇಂಚು 97 ಸೆಂಟು ಮಳೆಯಾಗಿದೆ. ಈ ವಾರದಲ್ಲಿ ದೇಶದ ಎಲ್ಲಾ ಭಾಗಗಳಿಗೂ ಮಳೆ ಬಿದ್ದಿರುವದಾಗಿ ವರ್ತಮಾನ.

ಬರುವ ಮೇ ತಾರೀಕು 10ರಿಂದ 4 ತಿಂಗಳ ವರೆಗೆ ಫ್ರೇಜರ್ ಪೇಟೆ ಸಬ್‌ಅಸಿಸ್ಟೆಂಟ್ ಸರ್ಜನರಾದ ಮಿ. ಪಿ. ಯಸ್. ರಾಮಸ್ವಾಮಿ ಅಯ್ಯರ್‌ರವರು ರಜೆಯಲ್ಲಿ ಹೋಗುವದರಿಂದ ಮೂರ್ನಾಡಿನಿಂದ ಸ. ಅ. ಸರ್ಜನ್ ಮಿ. ಪಟ್ಟಮಾಡ ಅಪ್ಪಚ್ಚೀರವರು ಫ್ರೇಜರ್ ಪೇಟೆಗೆ ವರ್ಗಾಯಿಸಲ್ಪಟ್ಟಿರುವರು. ಸ. ಅ. ಸರ್ಜನ್ ಮಿ. ಡೇನಿಯಲ್ ಡಿಸೋಜರವರು 4 ತಿಂಗಳ ವರೆಗೆ ಬಾಳಲೆ ಆಸ್ಪತ್ರೆಯ ಚಾರ್ಜಿನಲ್ಲಿರುವರು.

ಕೊಡಗು ಎತ್ಲೆಟಿಕ್ ಎಸೋಸಿಯೇಷನಿನ ಆಶ್ರಯದಲ್ಲಿ ಕಮಿಷನರ ಕಪ್ಪಿನ ಹಾಕಿ ಪಂದ್ಯಾಟವು ತಾ. 22-4-40 ರಿಂದ ಪ್ರಾರಂಭವಾಗಿದೆ. ಪ್ರಥಮದಿನ ಪೋಲೀಸ್ ಟೀಮಿನವರನ್ನು ಮಡಿಕೇರಿ ಹಾಕಿ ಕ್ಲಬ್ಬಿನವರೂ, ಎರಡನೇ ದಿನ ಯಂಗ್ ಮನ್ಸ್ ಕ್ಲಬ್ಬಿನವರನ್ನು ಸೆಂಟ್ರಲ್ ಹೈಸ್ಕೂಲ್ ಟೀಮೂ, ಮೂರನೇ ದಿನ ವಾಂಡರರ್ಸ್ ಟೀಮಿನವರನ್ನು ಮಿಲಿಟರಿ ಒಂದನೇ ಟೀಮೂ, ನಾಲ್ಕನೇ ದಿನ ಮಿಲಿಟರಿ ಎರಡನೇ ಟೀಮನ್ನು ಮಡಿಕೇರಿ ಹಾಕಿ ಕ್ಲಬ್ಬಿನವರೂ ಸೋಲಿಸಿರುವರು. ಸೋಮವಾರ ದಿನ ಕಡೆ ಆಟವು ಜರಗುವದು.

ಬರುವ ತಿಂಗಳ 14ರಲ್ಲಿ ನಡೆಯುವ ಪೌರಸಭೆಯ ಚುನಾವಣೆಗೆ ಉಮೇದ್ವಾರರಾಗಿ ಕೊಡವರಿಗಾಗಿ ಇರುವ ಮೂರು ಸ್ಥಳಕ್ಕೆ ಶ್ರೀಗಳಾದ ಮುಕ್ಕಾಟಿರ ಅಪ್ಪಣ್ಣ, ಮುಂಜಾಂದಿರ ಐಯ್ಯಪ್ಪ, ಬಲ್ಲಚಂಡ ಬೆಳ್ಯಪ್ಪ, ಕೀತಿಯಂಡ ಬೆಳ್ಯಪ್ಪ, ಕೋದಂಡ ಬೆಳ್ಯಪ್ಪ, ಬಿದ್ದಂಡ ಕರುಂಬಯ್ಯ, ಮೇರಿಯಂಡ ಪೂವಪ್ಪ, ಚೌರಿರ ನಂದಣ್ಣ ಮತ್ತು ಕುಟ್ಟಂಡ ತಮ್ಮಯ್ಯನವರುಗಳೂ, ಹಿಂದುಗಳು ಮತ್ತು ಇತರರಿಗಾಗಿರುವ ಆರು ಸ್ಥಳಗಳಿಗೆ ಶ್ರೀಗಳಾದ ಗುಬ್ಬಿ ಬಸಪ್ಪ, ಆರ್. ಯಂ. ಕಪನಯ್ಯ, ಸಿ. ಎಸ್ ಕೃಷ್ಣರಾವ್, ಯು. ಯಂ. ಕೃಷ್ಣರಾವ್, ಕೆ. ಮಲ್ಲಪ್ಪ, ಕೆ. ನರಸಿಂಹಮೂರ್ತಿ, ಸಿ. ಎಸ್. ನಾರಾಯಣ, ಎಚ್. ಟಿ. ಪ್ರಸನ್ನ, ಕೆ. ಜಿ. ಸಂಗಪ್ಪಸೆಟ್ಟಿ, ಎನ್ ಸೋಮಣ್ಣ, ಬಂಟ್ರ ಸುಬ್ಬಣ್ಣ, ಸಿ. ಎನ್. ವೆಂಕಪಯ್ಯ, ಕೆ. ವೆಂಕಟಗಿರಿ ಮತ್ತು ಜಿ. ವಿಶ್ವನಾಥರೈಗಳವರೂ, ಕ್ರಿಶ್ಚಿಯನರ ಪರ ಶ್ರೀ ಎ ಎ ವಾರುಣಿಯವರೂ ಮತ್ತು ಮಹಮ್ಮದೀಯರ ಪರ ಶ್ರೀ ಕೆ. ಮಹಮ್ಮದ್ ಗೌಸ್ ಮತ್ತು ಅಬ್ದುಲ್ ರಹಮಾನ್ ಖಾನ್‌ರವರೂ ನೇಮಕ ಪತ್ರವನ್ನು ಹಾಕಿರುವರೆಂದು ತಿಳಿದುಬರುತ್ತದೆ.

ವೀರಾಜಪೇಟೆ

ಶ್ರೀ ಎಂ ಯನ್. ಕೃಷ್ಣರಾವ್‌ರವರು ಹಿಂದುಗಳು ಮತ್ತು ಇತರರ ಪರ ಇಲ್ಲಿಯ ಪೌರ ಸಭೆಯ ಒಬ್ಬ ಸದಸ್ಯರಾಗಿ ಆರಿಸಲ್ಪಟ್ಟಿರುವರೆಂದು ಪ್ರಕಟವಾಗಿದೆ.

ನಸ್ಟೋರುಗಳಲ್ಲಿ ಇಟ್ಟಿರುವ ಭತ್ತಕ್ಕೆ ಹೊರಗಡೆ ಒಳ್ಳೆಯ ಮಾರ್ಕೆಟ್ ಕಂಡುಹಿಡಿಯುವ ಒಗ್ಗ ಸ್ಟೋರು ಹಾಗೂ ಬ್ಯಾಂಕು ಪ್ರತಿನಿಧಿಗಳ ಮೀಟಿಂಗು ತಾ. 25ರಲ್ಲಿ ಇಲ್ಲಿ ಬ್ಯಾಂಕಿನ ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ನಡೆಯಿತು.

ಪೊನ್ನಂಪೇಟೆ.

ಇಲ್ಲಿಯ ಯೂನಿಯನ್ ಸಮ್ಮೇಳನವು ಅ. ರಿಜಿಸ್ಟ್ರಾರಾದ ಶ್ರೀ ಪಿ. ಯಂ. ಜಂಗಪ್ಪನವರ ಅಧ್ಯಕ್ಷತೆಯಲ್ಲೂ, ಸಹಕಾರ ಸಮ್ಮೇಳನವು ಬ್ಯಾಂಕಿನ ಪ್ರೆಸಿಡೆಂಟರಾದ ಶ್ರೀ ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲೂ ತಾ. 22ರಲ್ಲಿ ನಡೆಯಿತು.

ನಾಪೋಕ್ಲು.

ತಾ. 19ರಲ್ಲಿ ಶ್ರೀ ಸಿ. ಐ. ಬೆಳ್ಯಪ್ಪನವರು ಇಲ್ಲಿಯೂ, 22 ರಲ್ಲಿ ಪೊನ್ನಂಪೇಟೆಯಲ್ಲಿಯೂ ಇಂದಿನ ರಾಜಕೀಯ ಸ್ಥಿತಿ, ಮುಂದಿನ ಆಂದೋಲನದ ತಯಾರಿ ಮೊದಲಾದುವುದರ ವಿಚಾರ ಭಾಷಣ ಮಾಡಿದರು.

ಶನಿವಾರಸಂತೆ.

ಇಲ್ಲಿ ಒಂದು ಸಾರ್ವಜನಿಕ ಸಭೆ ನೆರೆದು ಶ್ರೀ ಕೊಳ್ಳಿಮಾಡ ಕರುಂಬಯ್ಯನವರು, ಹೆಚ್. ಯಂ. ಪುಟ್ಟಣ್ಣನವರು ಮತ್ತು ನಿಟ್ಟ ಕೃಷ್ಣಮೂರ್ತಿಯವರು ಸತ್ಯಾಗ್ರಹ ತಯಾರಿ, ನೂಲುವ ಕಾರ್ಯದ ಮಹತ್ವ ಮೊದಲಾದುದರ ವಿಚಾರ ಭಾಷಣ ಮಾಡಿದರು.

ನಿಧನ ವಾರ್ತೆ.

ಬಿಳಿಗೇರಿ ಗ್ರಾಮದ ಶ್ರೀ ಬಿಳಿಗೇರಿ ರಾಮಯ್ಯನವರು ತಾ. 20-4-40ರಲ್ಲಿ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಹಿಂದೂದೇಶ.

ಸ್ಕಾಂಡಿನೇವಿಯಾ ದೇಶಗಳಿಗೆ ಹೋಗತಕ್ಕ ಮೈಲ್ ಸರ್ವೀಸುಗಳ ವಿಚಾರದಲ್ಲಿ ಮದ್ರಾಸಿನ ಪ್ರೆಸಿಡೆನ್ಸಿ ಪೋಸ್ಟುಮಾಸ್ಟರು ಒಂದು ಪ್ರಕಟಣೆ ಹೊರಡಿಸಿದ್ದಾರೆ ಡೆನ್ಮಾರ್ಕಿಗೆ ಕಾಗದ, ಪಾರ್ಸೆಲ್, ಮನಿಯಾರ್ಡರುಗಳನ್ನು ಸದ್ಯ ಸ್ವೀಕರಿಸಲಾಗುವದಿಲ್ಲ. ನಾರ್ವೆ, ಸ್ವೀಡನ್, ಎಸ್ಟೋನಿಯಾ, ಫಿನ್‌ಲೆಂಡ್, ಲಿಟ್ವೇನಿಯಾ ಮತ್ತು ಲಿಥುವೇನಿಯಗಳಿಗೆ ಸದ್ಯ ಮೈಲ್ ಸಂಪರ್ಕವಿಲ್ಲ ಎಂಬುದು ಅದರ ಸಾರಾಂಶ.

ಸಮಗ್ರ ಭಾರತ ಕಿಸಾನ್ ಸಭೆಯ ಜನರಲ್ ಸಕ್ರೆಟರಿಗಳಾದ ಸ್ವಾಮಿ ಸಹಜಾನಂದರು, ರಾಷ್ಟ್ರೀಯ ವಾರದ ಸಂಬಂಧ, ಪಾಟ್ನಾದಲ್ಲಿ ಕೈದುಮಾಡಲ್ಪಟ್ಟಿದ್ದಾರೆ. ಹಾಗೇ ಕಿಸಾನ್ ಮುಖಂಡರಾದ ಪಂಡಿತ ರಮಾನಂದನ್ ಮಿಶ್ರರ ದಸ್ತಗಿರಿಯೊಂದಿಗೆ, ಸಂಯುಕ್ತ ಪ್ರಾಂತದ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಮೆಂಬರರಾದ ಶ್ರೀ. ರಾಜೇಂದ್ರ ದತ್ತ ನಿಗಮರಿಗೆ ಅವರೊಂದು ಭಾಷಣದ ಸಂಬಂಧ, ಕಾನ್ಪೂರದಲ್ಲಿ, 18 ತಿಂಗಳ ಕಠಿಣ ಸಜೆಯೂ ವಿಧಿಸಲಾಗಿದೆ.

ಲಾಹೋರಿನಲ್ಲಿ ಪುನಃ ಖಾಕ್ಸಾರರ ಗಲಭೆ ಕಾಣಿಸಿಕೊಂಡಿತು. ಆಯುಧಪಾಣಿಗಳಾದ ಕೆಲವು ಮಂದಿ ಖಾಕ್ಸಾರರು, ಅನಾರ್ಕಲಿ ಬೀದಿಯಲ್ಲಿ ತಿರುಗಿ ಗಲಭೆ ಮಾಡಿದರು. ಪೋಲೀಸರು ಕಣ್ಣೀರು ಬರಿಸುವ ವಾಯುವನ್ನು ಉಪಯೋಗಿಸಿ 5 ಮಂದಿಯನ್ನು ಕೈದು ಮಾಡಿದರು. ಆದರೆ ಖಾಕ್ಸಾರರ ಇನ್ನೊಂದು ತಂಡದವರು ಇನ್ನೊಂದು ಕಡೆ ಪೋಲೀಸರನ್ನು ಎದುರಿಸಿ ಅವರಲ್ಲಿ ಮೂವರಿಗೆ ಕೊಂಚ ಗಾಸಿ ಮಾಡಿದರು. ಖಾಕ್ಸಾರರಲ್ಲಿಯೂ ಇಬ್ಬರಿಗೆ ಗಾಸಿಯಾಗಿದೆ.

ಬಂಗಾಳ ಸರ್ಕಾರದವರು ಇನ್ನು ಮುಂದೆ, ಎಲ್ಲಾ ಸರ್ಕಾರದ ಅಧಿಕಾರಿಗಳು 4 ತಿಂಗಳು ಗ್ರಾಮಾಭಿವೃದ್ಧಿ ಕಾರ್ಯದ ಶಿಕ್ಷಣವನ್ನು ತೆಗೆದುಕೊಳ್ಳಬೇಕೆಂಬ ಅಪ್ಪಣೆಯನ್ನು ಜಾರಿಗೆ ತಂದಿರುತ್ತಾರೆ. ಇದರಿಂದ ಗ್ರಾಮ ನಿವಾಸಿಗಳಿಗೆ ಹೆಚ್ಚಾದ ಸಹಾಯವುಂಟಾಗುತ್ತದೆಂದು ನಿರೀಕ್ಷಿಸಲಾಗಿದೆ. ಇಂಡಿಯನ್ ಸಿವಿಲ್ ಸರ್ವಿಸಿನ ಎಲ್ಲಾ ಅಧಿಕಾರಿಗಳೂ ಕೂಡ ಈ ಅಪ್ಪಣೆಗೆ ಒಳಪಡಬೇಕಾಗಿದೆ. ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟರವರೂ ಕೂಡ ಡಕ್ಕ ಎಂಬಲ್ಲಿಗೆ ವರ್ಷಕ್ಕೊಂದಾವರ್ತಿ ಹೋಗಿ ವ್ಯವಸಾಯದ ವಿಷಯದಲ್ಲಿ ಹೆಚ್ಚಾದ ಜ್ಞಾನವನ್ನು ಸಂಪಾದಿಸಿಕೊಳ್ಳಲು ಕೃಷಿ ಶಿಕ್ಷಣವನ್ನು ಪಡೆಯಬೇಕಾಗಿದೆ.

ವಾಯುವ್ಯ ಪ್ರಾಂತ್ಯಗಳ ಗಡಿ ಸರಹದ್ದಿನಲ್ಲಿರುವ ಮಾರ್ದನ್ ಎಂಬಲ್ಲಿ ಕೆಲವು ಪ್ರಗತಿ ಪಕ್ಷದ ಸದಸ್ಯರು ಅಲ್ಲಿನ ಡೆಪ್ಯುಟಿ ಕಮಿಶನರವರ ಬಂಗಲೆಗೆ ಬಂದು ತಮಗೆ ಕಾಂಗ್ರೆಸ್ ಬಾವುಟವನ್ನು ಅಲ್ಲಿ ಏರಿಸಲು ಅಪ್ಪಣೆಯಾಗಿರುವುದೆಂದು ತಿಳಿಸಿದರು. ಡೆಪ್ಯುಟಿ ಕಮಿಶನರವರು ಅವರನ್ನು ಮರ್ಯಾದೆಯಿಂದ ಸತ್ಕರಿಸಿ ತಾವೇ ಆ ಕಾಂಗ್ರೆಸ್ ಬಾವುಟವನ್ನು ಏರಿಸುವೆನೆಂದು ಹೇಳಿದರು. ಅವರ ಮಾತಿಗೆ ಆ ಸದಸ್ಯರು ಆಶ್ಚರ್ಯಪಟ್ಟು ಒಪ್ಪಿದರು. ಅಲ್ಲಿ ಹಾರಾಡುತ್ತಿದ್ದ ಬ್ರಿಟಿಷ್ ಬಾವುಟದ ಜೊತೆಗೆ ಈಗ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಈ ಸಂಸ್ಥೆಗಳ ಬಾವುಟಗಳೂ ಹಾರಾಡುತ್ತಿವೆ. ಈ ಕಾರ್ಯವು ಆ ಪ್ರಾಂತ್ಯದಲ್ಲಿ ಬಹಳ ಆಶ್ಚರ್ಯವನ್ನುಂಟುಮಾಡಿದೆ.

ಬಾತ್ಮಿ.

ಯುದ್ಧಕ್ಕೆ ಸರ್ಕಾರಿ ನೌಕರರ ಸಹಾಯವೇನು?

ಅಯ್ಯಾ,

ಸರಕಾರದ ಈಗಿನ ಯುದ್ಧದ ಬಿಕ್ಕಟ್ಟಿನ ಸ್ಥಿತಿಯಲ್ಲಿ ಪ್ರಜೆಗಳು ಬ್ರಿಟಿಷ್ ಸರಕಾರಕ್ಕೆ ಸಹಾಯಮಾಡುವುದು ಎಷ್ಟು ಆವಶ್ಯಕವಾದದೆಂದು ಸುಬೇದಾರರುಗಳೂ, ಪಾರುಪತ್ಯಗಾರರುಗಳೂ ಹಾಗೂ ಇನ್ನಿತರ ಉದ್ಯೋಗಸ್ಥರೂ ಹೇಳಿದ ಮೇರೆ ಊಟಕ್ಕೇ ಗತಿಯಿಲ್ಲದಿರುವ ಈ ಕಾಲದಲ್ಲಿ ರೈತರೂ, ವ್ಯಾಪಾರಸ್ಥರೂ ಹೇಗೆ ಸಹಾಯಮಾಡುತ್ತಿರುವರೆಂಬುದು ಎಲ್ಲರಿಗೂ ವೇದ್ಯವಿದೆ. ವ್ಯಾಪಾರದಲ್ಲಾಗಲಿ ಬೇರೆ ಯಾವ ವ್ಯವಹಾರದಲ್ಲಾಗಲಿ ಹನ್ನೆರಡಕ್ಕೆ ಒಂದರಂತೆ ಉಚಿತಾರ್ಥ ಕೊಡುವುದು ವ್ಯಾಪಾರ ಧರ್ಮವಾಗಿದೆ. ಅದು ಪ್ರಾಪಂಚಿಕ ಕಾಯಿದೆ. ಬ್ರಿಟಿಷ್ ಮತ್ತು ಕೊಡಗಿನ ಸರಕಾರವು ಆರ್ಥಿಕ ಮುಗ್ಗಟ್ಟಿನಲ್ಲಿರುವ ಈ ಕಾಲದಲ್ಲಿ ಹನ್ನೆರಡು ವರ್ಷ ಸರಕಾರದ ಸಂಬಳವನ್ನು ತೆಗೆದುಕೊಳ್ಳುತ್ತಾ ಬಂದ ಸರಕಾರಿ ಉದ್ಯೋಗಸ್ಥರು ಒಂದು ವರ್ಷ ಸಂಬಳ ತೆಗೆದುಕೊಳ್ಳದೆಯೇ ಕೆಲಸ ಮಾಡುವುದು ಧರ್ಮವಲ್ಲವೆ? ಒಂದು ವರ್ಷ ತೀರ ಸಂಬಳವಿಲ್ಲದೆ ಕಳೆಯಲು ತೊಂದರೆಯಾಗುವುದಾದರೆ ಎರಡು ವರ್ಷ ಅರ್ಧ ಸಂಬಳ ತೆಗೆದುಕೊಂಡು ಕೆಲಸ ಮಾಡಲಿ. ಪ್ರಜೆಗಳ ಕರ್ತವ್ಯವನ್ನು ಹೇಳುತ್ತ ಕಾಯಿದೆಗಳನ್ನು ಚಲಾಯಿಸುತ್ತ ಇರುವವರು ಸರಕಾರಕ್ಕೆ ಮೊದಲು ಸಹಾಯಮಾಡಿ ಮಾದರಿ ತೋರಿಸಬೇಕಲ್ಲವೆ?

'ಒಬ್ಬ ಪ್ರಜೆ.'

ಕೊಡವರ ಸಾಮಾಜಿಕ ಪದ್ಧತಿ.

ಅಯ್ಯಾ,

ಯಾವ ಜಾತಿಯವರು ಅಥವಾ ಕೋಮಿನವರಾಗಲಿ ತಮ್ಮ ಒಗ್ಗಟ್ಟನ್ನೂ, ಹಿತವನ್ನೂ ಕಾಯಬೇಕಾದರೆ ತಮ್ಮ ತಮ್ಮ ಪದ್ಧತಿ ಮತ್ತು ಆಚಾರದಂತೆ ವರ್ತಿಸಬೇಕಾದದ್ದು ಅವಶ್ಯವಾಗಿದೆ. ಹೀಗೆಯೇ ಎಲ್ಲಾ ಜಾತಿಯವರು ಕೋಮಿನವರು ತಮ್ಮ ತಮ್ಮ ಪದ್ಧತಿಗನುಸಾರವಾಗಿ ತಮ್ಮ ಸಾಮಾಜಿಕ ಕಾರುಬಾರುಗಳನ್ನು ನಡಿಸುತ್ತಿರುವುದು ಎಲ್ಲರಿಗೂ ವೇದ್ಯವಾದ ಸಂಗತಿಯಾಗಿದೆ.

ಕೊಡವರು ಇದೇ ರೀತಿ ಬಹು ಕಾಲದಿಂದ ತಮ್ಮ ಆಚಾರದಂತೆ ಖಿಡ್ನಾಯವಾಗಿ ನಡೆಯುತ್ತಾ ಬಂದಿರುವುದರಿಂದಲೇ ಇಂದು ಅದೊಂದು ಜನಾಂಗವಾಗಿ ಉಳಿದಿದೆ. ಮಾತ್ರವಲ್ಲದೆ ಅವರ ಸ್ತ್ರೀಯರು ಪ್ರಾಯಕ್ಕೆ ಬಂದ ಮೇಲೆ ಮದುವೆ ಮಾಡುವುದು, ವಿಧವೆಯರ ಮದುವೆ, ವಧುವಿನ ಕಡೆಯಿಂದ ವರದಕ್ಷಿಣೆ ತೆಗೆದುಕೊಳ್ಳದಿರುವಿಕೆ ಮೊದಲಾದ ಸುಧಾರಿಸಿದ ಪದ್ಧತಿಗಳಿಗಾಗಿ ಈ ಜನಾಂಗವು ಬೇರೆಯವರಿಂದ ಹೊಗಳಲ್ಪಡುತ್ತಿದೆ. ಈ ತರದ ಸಮಾಜ ಸುಧಾರಣೆಗಳನ್ನು ಮಾಡಲು ಇತರ ಕೋಮಿನವರು ಯತ್ನಿಸುತ್ತಿರುವರು.

ಇಂಥಾ ಸಂದರ್ಭಗಳಲ್ಲಿ ಕೊಡವರ ಹಿಡಕಟ್ಟನ್ನು ಸಡಲಿಸುವ ಪ್ರಯತ್ನಕ್ಕೆ ಎಡೆ ಕೊಡುವದು ಯುಕ್ತವಲ್ಲ. ಈ ಮೊದಲು ಕೊಡವರ ಯುವತಿಯರಾಗಲಿ ಯಾ, ಯುವಕರಾಗಲಿ ತಮ್ಮ ಸ್ವಜಾತಿಯವರನ್ನು ಬಿಟ್ಟು ಹೊರಗಿನವರನ್ನು ಮದುವೆಯಾದರೆ ಅವರ ಕುಟುಂಬದವರನ್ನು ಸಮಾಜದವರು ತಳ್ಳಿಡುತ್ತಿದ್ದರು. ಅವರು ಊರವರು, ನಾಡವರು ಯಾ ದೇಶದವರು ಮಾಡುವ ಪಂಚಾಯತಿಯಲ್ಲಿ ವಿಧಿಸುವ ತಪ್ಪನ್ನು ಕೊಟ್ಟ ವಿನಹ ಅವರನ್ನು ಸಮಾಜಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಆದುದರಿಂದ ಆ ಕಾಲದಲ್ಲಿ ಕೊಡವ ಸಮಾಜವನ್ನು ಬಿಟ್ಟು ಹೊರಗ ಮದುವೆಯಾಗುವುದು ಬಹು ವಿರಳವಾಗಿತ್ತು. ಈಗಲಾದರೋ ಎಷ್ಟೋ ಯುವತಿಯರು ಮತ್ತು ಕೆಲವು ಯುವಕರು ಬೇರೆಯವರನ್ನು ಸರಾಗವಾಗಿ ಲಗ್ನ ಮಾಡಿಕೊಳ್ಳುತ್ತಿದ್ದರೂ ಕೂಡ ಅವರನ್ನಾಗಲೀ ಅಥವಾ ಕುಟುಂಬದವರನ್ನಾಗಲೀ ಕೇಳುವವರೇ ಇಲ್ಲದಾಗಿದೆ ಎಂಬದು ಬಹು ಶೋಚನೀಯಕರ. ಹೀಗೆ ಪ್ರಶ್ನಿಸದೆ ಬಿಟ್ಟರೆ ಮುಂದೆ ಕೊಡವರ ಜನಾಂಗವು ನಿರ್ನಾಮವಾಗುವ ಸಂಭವ ಉಂಟಾಗದಿರದು. ಇದರಂತೆಯೇ ಮದುವೆ ನಡಿಸುವ ವಿಧಾನಗಳಲ್ಲಿ ಕೂಡ ಹಳೇದಾದ ಉತ್ತಮ ಪದ್ಧತಿಗಳನ್ನು ಬಿಟ್ಟು ಪ್ರತಿಯೊಬ್ಬನೂ ತನ್ನ ಇಚ್ಛೆ ಬಂದಂತೆ ನಡಿಸುತ್ತಿರುವದು ಸಮಾಜದ ಉದ್ಧಾರದ ಚಿನ್ಹೆಯಲ್ಲ. ಈ ಸ್ಥಿತಿಯು ಬಹು ಮುಂದರಿದ ಮೇಲೆ ಅದನ್ನು ತಡೆಯಲು ಸಾಧ್ಯವಾಗಲಿಕ್ಕಿಲ್ಲ. ಆದಕಾರಣ ಕುಟುಂಬಸ್ಥರೂ, ಗ್ರಾಮಸ್ಥರೂ, ನಾಡಿನವರೂ ಮತ್ತು ದೇಶದವರೂ ಪ್ರಾರಂಭದಲ್ಲೇ ಎಚ್ಚತ್ತುಕೊಂಡು ಹೀಗೆ ದಾರಿ ತಪ್ಪಿ ಹೋಗುವುದನ್ನು ತಡೆಯಬೇಕಾಗಿದೆ. ತಡವಾಗಿ ದುಃಖಿಸಿ ಪ್ರಯೋಜನವಿಲ್ಲ. ಆದುದರಿಂದ ಸಕಾಲದಲ್ಲಿ ಜಾಗ್ರತೆಗೊಳ್ಳಿರಿ.

'ಒಬ್ಬ ಕೊಡವ'

ಇಲ್ಲಿಯೂ ವಕೀಲವೃತ್ತಿಯೇ?

'ಜಡ್ಜಿಗಳೂ, ಪಾರ್ಟಿಪಂಗಡಗಳೂ' ಎಂಬ ಶಿರೋನಾಮದಿಂದ ತಾ. 29.3.40 ರ ಕೊಡಗು ಪತ್ರಿಕೆಯಲ್ಲಿ ಪ್ರಚುರವಾದ ವಾರ್ತೆಯನ್ನೂ, ಅದಕ್ಕೆ ಜವಾಬಾಗಿ ಶ್ರೀ ನಿಡ್ಯಮಲೆ ಸೋಮಣ್ಣನವರು ತಾರೀಖು 12-4-40ರ ಅದೇ ಪತ್ರಿಕೆಯ ಸಂಚಿಕೆಯಲ್ಲಿ ಪ್ರಕಟಿಸಿರುವ ಉತ್ತರವನ್ನೂ ಅವುಗಳಿಗೆ ಸಲ್ಲತಕ್ಕ ನಿಷ್ಠೆಯಿಂದ ಓದಿದೆನು. ನಾನೂ ಬ್ಯಾಂಕು ಮೀಟಿಂಗಿನಲ್ಲಿ ಹಾಜರಿದ್ದವನಾದ ಪ್ರಯುಕ್ತ ಅವುಗಳ ಸತ್ಯಾಸತ್ಯತೆಯನ್ನು ತಿಳಿಯಲು ಪುನಹ ಪುನಹ ಬಾತ್ಮಿಗಳನ್ನು ಓದಿದೆನು. ಆದರೆ ಶ್ರೀ ಸೋಮಣ್ಣನವರು ತಮ್ಮ ಬಾತ್ಮಿಯಲ್ಲಿ ತಾನು ಯಾವ ಪಂಗಡದಲ್ಲೂ ಇಲ್ಲದ ಮಧ್ಯಸ್ಥಗಾರನಂತೆ ವರ್ತಿಸಿರುವನೂ, ಶ್ರೀ ಎನ್. ಮುದ್ದಪ್ಪನವರ ಪರ ವಾದಿಸಿದ್ದೂ ಕಂಡು ಬರುತ್ತದೆ. ವಾಚಕರಿಗೆ ವಿಚಾರಗಳ ಪೂರ್ಣ ಪರಿಚಯವಾಗಬೇಕಾದರೆ ಸೋಮಣ್ಣನವರು ಯಾರೆಂಬುದನ್ನು ಪ್ರಥಮತ ವಿವರಿಸಬೇಕಿದೆ. ಸಬ್ ಜಡ್ಜರಾದ ಶ್ರೀ ಎನ್. ಮುದ್ದಪ್ಪನವರ ಸಹೋದರರೇ ಸಮ್ಮ ಸೋಮಣ್ಣನವರು. ಮಡಿಕೇರಿ ಮುನ್ಸೀಫರಾದ ಶ್ರೀ ಐ. ಸಿ. ಸುಬ್ಬಯ್ಯನವರ ಹಾಗೂ ತಮ್ಮ ಸಹೋದರರು ಸಬ್ ಜಡ್ಜರಾಗಿರುವ ಕೋರ್ಟುಗಳಲ್ಲೇ ಈ ಸೋಮಣ್ಣನವರ ಉದರಂಭರಣ ಕಾರ್ಯವು ಜರಗುವದು. ಅಂದ ಮೇಲೆ ಇವರಲ್ಲಿ ಪರಸ್ಪರ ಮೈತ್ರಿ ಹೇಗಿರಬೇಕೆಂದು ಬೇರೆ ಹೇಳಬೇಕಿಲ್ಲ. ಆದ್ದರಿಂದ ಶ್ರೀ ಸೋಮಣ್ಣನವರು ಈ ಸರಕಾರಿ ಅಧಿಕಾರಿಗಳ ಪರ ವಾದಿಸಲು ತೊಡಗಿದ್ದರಲ್ಲಿ ವೈಶಿಷ್ಟ್ಯವೇನೂ ಇಲ್ಲವೆನಬೇಕು.

ಮತ್ತೊಂದು ವಿಚಾರ. ಶ್ರೀ ಮುದ್ದಪ್ಪನವರೂ, ಶ್ರೀ ಸುಬ್ಬಯ್ಯನವರೂ ಸಭಿಕರನ್ನು ತೀಕ್ಷ್ಣದೃಷ್ಟಿಯಿಂದ ನೋಡುತ್ತಿದ್ದರು. ಇವರಿಂದ ಅನೇಕರಿಗೆ ತಮ್ಮ ಮನೋಭಿಪ್ರಾಯವನ್ನು ಸ್ಪಷ್ಟಪಡಿಸಲು ತೊಂದರೆಯಾಗಿರಬಹುದೆಂದು 'ಬ್ಯಾಂಕಿನ ಮೆಂಬರು ಬರೆದ ವಿಚಾರವ'ನ್ನು, ಸೋಮಣ್ಣನವರು ಅಲ್ಲಗಳೆದಿದ್ದಾರೆ. ಇದು ಆಶ್ಚರ್ಯದ ವಿಚಾರ. ಶ್ರೀ. ಸೋಮಣ್ಣನವರು ಶ್ರೀ ಗಳಾದ ಐ. ಸಿ. ಸುಬ್ಬಯ್ಯ ಹಾಗೂ ಎನ್. ಮುದ್ದಪ್ಪನವರ ಹಿಂದುಗಡೆ ಭಾಷಣವೇದಿಕೆಯಲ್ಲಿ ಕುಳಿತ್ತಿದ್ದವರು. ಅಂಥಾವರಿಗೆ ಶ್ರೀ ಸುಬ್ಬಯ್ಯ ಹಾಗೂ ಮುದ್ದಪ್ಪನವರುಗಳ ಮುಖಚರ್ಯೆ ಹೇಗೆ ಕಾಣಬೇಕು. ಪಾಪ! ಅಂತೂ ವಿಚಾರಗಳನ್ನು ತಮ್ಮ ಮಾತಿನ ಮಲ್ಲತನದಲ್ಲಿ ಮುಚ್ಚಲೆತ್ನಿಸಿರುವ ಅವರ ಪ್ರಯತ್ನವು ಹೊಗಳಲರ್ಹವಾದ್ದೆ (?)

ಸೌತ್ ಇಂಡಿಯಾ ಇನ್ಶೂರೆನ್ಸ್ ಸೊಸೈಟಿಯ ವಿಚಾರ ಶ್ರೀ ಸೋಮಣ್ಣನವರು ಭಾಷಣ ಮಾಡಿದ್ದಾಗಲೀ ಯಾ ಸುಬ್ಬಯ್ಯನವರು ವಾದಿಸಿದ್ದಾಗಲೀ ಯಾವ ಪಕ್ಷವನ್ನೂ ಹಿಡಿದು ಅಲ್ಲವಂತೆ! ಶ್ರೀ ಸೋಮಣ್ಣನವರು ಬ್ಯಾಂಕಿನ ಮೆಂಬರಾಗಿ ವಿಚಾರಗಳನ್ನು ತಿಳಿದುಕೊಳ್ಳಲಿಕ್ಕೂ, ಶ್ರೀ ಸುಬ್ಬಯ್ಯನವರು ಬ್ಯಾಂಕಿನ ಮೆಂಬರುಗಳಿಗೆ ವಿಚಾರಗಳನ್ನು ಅರುಹಲಿಕ್ಕೂ ಭಾಷಣ ಮಾಡಿದ್ದಂತೆ. ಇರಲಿ, ಅಂದ ಮೇಲೆ ವಿಚಾರಗಳನ್ನು ವಿವರಿಸಿ ಮಹಾಸಭೆಯ ತೀರ್ಮಾನಕ್ಕೆ ಇಡುವದು ಧರ್ಮವಾಗಿತ್ತು. ಅದು ಬಿಟ್ಟು ಇನ್ಶೂರೆನ್ಸ್ ಸಂಸ್ಥೆಯ ವಕೀಲಿವಹಿಸಿದವರಂತೆ 'ದಾವೆ ಮಾಡಬೇಡಿ. ಬ್ಯಾಂಕಿಗೆ ನಷ್ಟವಾಗುತ್ತೆ. ವಾದದಲ್ಲಿ ಬ್ಯಾಂಕು ಸೋತು ಹೋಗುತ್ತೆ' ಎಂದು ಹೇಳುವದು ವಿಚಾರಗಳ ವಿವರಣೆಯೇ? ಬ್ಯಾಂಕಿಗೆ ತಾವು ಮಾಡಿದ ಕೆಲಸದ ಕಮಿಷನ್ ಪಡೆಯಲು ಪ್ರಯತ್ನಿಸುವದು ಬ್ಯಾಂಕಿನ ಹಿತಚಿಂತಕರ ವರ್ತನೆ. ಅದು ಬಿಟ್ಟು ಅದಕ್ಕೆ ವ್ಯತಿರಿಕ್ತ ವರ್ತಿಸುವ, ಅವರಲ್ಲೂ ಪ್ರಯತ್ನಪಡುವವರನ್ನೂ ಹಿಂದಕ್ಕೆ ನಿಲ್ಲಿಸುವ ಪ್ರಯತ್ನವು ಬ್ಯಾಂಕಿನ ಹಿತಚಿಂತನೆಯಿಂದಲೇ? ಮೇಲಾಗಿ ಈ ಐ. ಸಿ. ಸುಬ್ಬಯ್ಯನವರು ಬ್ಯಾಂಕಿನ ಡೈರೆಕ್ಟರಾಗಿದ್ದಾಗಲೇ ಈ ಸೌತ್ ಇಂಡಿಯಾ ಇನ್ಶೂರೆನ್ಸ್ ಸಂಸ್ಥೆಯೊಂದಿಗೆ ನಿಶ್ಚಿತ ಶರತುಗಳಿಲ್ಲದ ಒಪ್ಪಂದ ಮಾಡಿಕೊಂಡಿದ್ದಾಗಿದೆ ಈಗ ಅದರ ವಿಚಾರ ದಾವೆಹೂಡಬೇಡಿರೆಂದರೆ ಶ್ರೀ ಸುಬ್ಬಯ್ಯನವರು ಯಾವ ಪಾರ್ಟಿ ವಹಿಸಿರುವರೆಂಬುದು ತಿಳಿಯದೇ?

ಹೆಚ್ಚು ಬರೆಯುವ ಅಗತ್ಯವಿಲ್ಲ. ವಾಚಕ ಮಹಾಶಯರಿಗೆ ಯಾರು, ಹೇಗೆ? ಎಂಬ ವಿಚಾರ ಈಗಾಗಲೇ ಮನವರಿಕೆಯಾಗಿರಬಹುದು. ತಮ್ಮ ಅಂತರ್ಯವನ್ನು ಅಡಗಿಸಿಟ್ಟು ಸಭ್ಯರ ಸೋಗು ಹಾಕಲು ಯತ್ನಿಸುವ ಮಹಾಪುರುಷರ ಯತ್ನವು ಈ ಲೇಖನಿಯನ್ನು ಬರೆಯುವಂತೆ ಮಾಡಿತು.

'ವಿಮರ್ಶಕ.'

ಅಜಾದರ ಟೀಕೆ.

(4ನೇ ಪುಟದಿಂದ ಸಾಗಿದ್ದು)

ಯಾಗಬೇಕಾದರೆ ಕಾನ್‌ಸ್ಟಿಟ್ಯೂವೆಂಟ್ ಎಸೆಂಬ್ಲಿಯೊಂದೇ ದಾರಿ. ಲಾರ್ಡ್ ಜೆಟ್ಲೆಂಡರ ಭಾಷಣವನ್ನು ನೋಡಿದರೆ ಬ್ರಿಟಿಷ್ ಸರ್ಕಾರವು ತನ್ನ ಅಧಿಕಾರವನ್ನು ಬಿಟ್ಟು ಕೊಡುವ ಯೋಜನೆ ಇಲ್ಲವೆಂಬುವುದು ಗೋಚರವಾಗುತ್ತೆ. ಭಾರತದ ಭವಿತವ್ಯವನ್ನು ತನ್ನ ಮನ ಬಂದಂತೆ ರೂಪಿಸಿಕೊಳ್ಳುವ ಇಚ್ಛೆಯಿಂದ ವರ್ತಿಸುವಂತೆ ಕಂಡುಬರುತ್ತೆ' ಎಂದು ಜೆಟ್ಲೆಂಡರ ಭಾಷಣವನ್ನು ಟೀಕಿಸುತ್ತಾ ಮೌಲಾನಾ ಅಬುಲ್ ಕಲಾಂ ಅಜಾದರು ಒಂದು ಹೇಳಿಕೆಯನ್ನು ಕೊಟ್ಟಿರುವರು.

ಮಾಜಿ ಪ್ರಧಾನಾಮಾತ್ಯ ಶ್ರೀ ಸಿ. ರಾಜಗೋಪಾಲಾಚಾರ್ಯರ ಭಾಷಣ.

ಬ್ರಿಟಿಷ್ ರಾಜಕಾರಣ ತಜ್ಞರು ತಮ್ಮ ಯುದ್ಧ ಧ್ಯೇಯವನ್ನು ಭಾರತೀಯರಿಗೆ ಅರುಹಲು ಅಸಮರ್ಥರಾಗಿರುವರು. ಭಾರತದಲ್ಲಿ ನಡೆಯುತ್ತಿರುವ ವಿಚಾರಗಳು ಜಗತ್ತಿಗೆ ತಿಳಿಯಬಾರದೆಂದು ಬ್ರಿಟಿಷ್ ಸರ್ಕಾರದವರು ವರ್ತಿಸುವಂತೆ ಕಂಡು ಬರುತ್ತೆ. ಇಂದು ಬ್ರಿಟನಿನ ಬುದ್ಧಿ ಸ್ಥಿಮಿತದಲ್ಲಿಲ್ಲ. ಜಗತ್ತಿನ ಅಭಿಪ್ರಾಯವೇ ಬ್ರಿಟನಿಗೆ ವಿರೋಧ ಬೆಳೆಯುತ್ತಿದೆ. ಬ್ರಿಟನು ಭಾರತದಲ್ಲಿ ನ್ಯಾಯ ಸಮರ್ಪಕವಾಗಿ ವರ್ತಿಸುತ್ತಿಲ್ಲವೆಂದು ಹೇಳುತ್ತಿದೆ. ತಾನು ಹೇಳಿದ ತತ್ವಗಳನ್ನು ಮೂಲೆಗೊತ್ತಿ ಸ್ವೇಚ್ಛೆಯಾಗಿ ಬ್ರಿಟಿಷ್ ಸರಕಾರವು ವರ್ತಿಸುತ್ತಿದೆಯೆಂದು ಘೋಷಿಸುತ್ತಿದೆ. ಪಾರ್ಲಿಮೆಂಟಿನಲ್ಲಾದ ಚರ್ಚೆಯಲ್ಲಿ ಭಾರತದ ಅಯೋಗ್ಯ ಚಿತ್ರವನ್ನು ಬ್ರಿಟಿಷ್ ರಾಜಕಾರಣಿಗಳು ಅಲ್ಲಿ ಚಿತ್ರಿಸಿರುವರು. ಹಿಂದೂ ಮುಸ್ಲಿಮರ ಘರ್ಷಣೆ ಮೊದಲಾದ ಅಸಂಬದ್ಧ ವಿಚಾರಗಳನ್ನು ಅಲ್ಲಿ ಎತ್ತಿ ಹಾಕಿರುವರು. ಕಾಂಗ್ರೆಸು ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ನಿರಾಕರಿಸಿದೆಯೆಂದು ಭಾರತ ಮಂತ್ರಿಗಳು ಹುರುಳಿಲ್ಲದ ಮಾತಾಡಿರುವರು. ಕಾಂಗ್ರೆಸು ನಿರಾಕರಿಸಬೇಕಾದರೆ ಭಾರತಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಕೊಡುವದಾಗಿ ಬ್ರಿಟಿಷರು ಜಾಹೀರು ಪಡಿಸಿರುವರೇನು? ಗಾಂಧಿ ವೈಸರಾಯರೊಳಗಿನ ಮಾತು ಕತೆಯು ಮುರಿದು ಬೀಳಲು ಬ್ರಿಟಿಷ್ ಸರ್ಕಾರವು ಹೃದಯ ಬಿಚ್ಚಿ ಮಾತಾಡದಿರುವದೇ ಕಾರಣವೆಂದೂ, ಭಾರತದ ಸಂರಕ್ಷಣೆ, ಅಲ್ಪಸಂಖ್ಯಾಕರು, ಸಂಸ್ಥಾನಿಕರು ಇವರ ವಿಚಾರವನ್ನು ಮುಂದು ಮಾಡಿಕೊಂಡು ವರ್ತಿಸಿದುದೇ ಗಾಂಧಿ ವೈಸರಾಯರ ವ್ಯವಹಾರಕ್ಕೆ ಧಕ್ಕೆ ತಂದದ್ದೆಂದೂ ಹೇಳಿದರು. ಇಂದಾದರೂ ಈ ಸಮಸ್ಯೆಗಳನ್ನು ಮುಂದಕ್ಕೊಡ್ಡುತ್ತಿರುವದು ಅನುಚಿತ. ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಶರತುಗಳಾದರೂ 1935ನೇ ಆಕ್ಟಿಗಿಂತ ಮುಂದೆ ಹೋಗಲಾರವು. ಬ್ರಿಟಿಷರ ಹೇಳಿಕೆಯಂತೆ ಇದು ರೂಪುಗೊಳ್ಳಬೇಕಾದ ಕಾರಣ ಅದರಲ್ಲಿ ಹೆಚ್ಚಿನ ಸವಲತ್ತು ಭಾರತಕ್ಕೆ ಸಿಗದೆಂದು ಕಾಂಗ್ರೆಸ್ಸು ತಿಳಿದಿದೆ. ಆದ ಪ್ರಯುಕ್ತವೇ ಪೂರ್ಣ ಸ್ವರಾಜ್ಯವೇ ಕಾಂಗ್ರೆಸಿನ ಗುರಿಯೆಂದು ಸಾರಲಾಗಿದೆ. ಹಿಂದೂ ಮುಸ್ಲಿಮರ ಘರ್ಷಣೆಯಿಂದ ಭಾರತದಲ್ಲಿ ಅಶಾಂತಿಯಿದೆ ಎಂಬ ಜೆಟ್ಲೆಂಡರ ಭಾಷಣವನ್ನು ಖಂಡಿಸುತ್ತಾ ಕಾಂಗ್ರೆಸಿನ ಮುಖಂಡರಾದ ಗಾಂಧಿಯವರೂ ಮುಸ್ಲಿಂ ಲೀಗಿನ ಮುಖಂಡರಾದ ಜಿನ್ನಾರವರೂ ದಂಗೆಖೋರರಲ್ಲವೆಂದೂ ಹಿಂದೂ ಮುಸ್ಲಿಂ ವಿರೋಧವನ್ನು ಬಹುದಾಗಿ ಕಲ್ಪಿಸಿ ಬ್ರಿಟಿಷರು ಈ ರೀತಿಯ ಕಲ್ಪನೆಗಳನ್ನು ಮಾಡುವದು ಅಯೋಗ್ಯವೆಂದೂ ಹೇಳಿದರು.

ಇಂದಿನ ಪರಿಸ್ಥಿತಿಯಲ್ಲಿ ಪರಸ್ಪರರನ್ನು ಸರಿಯಾಗಿ ಅರಿತುಕೊಳ್ಳಲು ಯಾ ಎಲ್ಲಾ ಕೋಮುಗಳ ಹಿತವನ್ನು ಸಾಧಿಸಲು ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯೇ ಸುಗಮವಾದ ಹಾದಿಯೆಂದು ರಾಜಗೋಪಾಲಾಚಾರ್ಯರು ಹೇಳಿದರು. ಬ್ರಿಟಿಷ್ ಸಾಮ್ರಾಜ್ಯಶಾಹಿಯು ಯಾವ ಕಾರಣದಿಂದಾಗಿ ಈ ಯೋಜನೆಯನ್ನು ವಿರೋಧಿಸುತ್ತಿರುವದೆಂಬುದು ತಿಳಿಯದ ಸಂಗತಿಯೆಂದೂ, ಗಾಂಧಿಜೀಯವರು ಎಲ್ಲಾ ಪ್ರತಿನಿಧಿಗಳನ್ನೊಳಗೊಂಡ ಈ ರೀತಿಯ ಸಭೆಯನ್ನು ಕೇಳುತ್ತಿದ್ದರೂ ಸರಕಾರವು ಕಿವಿಗೊಡದಿರುವದರಲ್ಲಿ ಅರ್ಥವಿಲ್ಲ. ಭಾರತದ ಜಟಿಲ ಸಮಸ್ಯೆಗಳ ಪರಿಹಾರವಾಗಬೇಕಾದರೆ ಇಂಥಾ ಪ್ರತಿನಿಧಿಗಳ ಸಭೆಯಿಂದ ಬಹುಮತದಲ್ಲಿ ತೀರ್ಮಾನ ಮಾಡಲ್ಪಟ್ಟ ವಿಚಾರಗಳನ್ನು ಬ್ರಿಟಿಷ್ ಸರಕಾರವು ನಡೆಸುತ್ತಾ ಬರಬೇಕು. ಬ್ರಿಟಿಷರು ತೋರಿಸುತ್ತಿರುವ ಅನಾಸಕ್ತಿಯು ದೇಶದಲ್ಲಿ ಪ್ರಚಂಡ ಹಾಗೂ ಭಯಂಕರ ವಾತಾವರಣವನ್ನು 'ಕಲ್ಪಿಸದಿರದು' ಎಂದು ಹೇಳಿದರು.

ಕಡಲ್ರಾಣಿಯೆನಿಸಿದ ಬ್ರಿಟನಿನ ನೌಕಾಬಲ

ಆಧುನಿಕ ಯುದ್ಧದಲ್ಲಿ ನೌಕೆಗಳ ಸ್ಥಾನ.

ಜಲನಾವೆಗಳ ವಿಚಿತ್ರ ತಯಾರಿ.

ಯಾವದೊಂದು ದೇಶದ ನೌಕಾಬಲದಲ್ಲಿ ಕೆಳಗೆ ಕಾಣಿಸಿದ ತರಗತಿಯ ಹಡಗಗಳು ಇರಬೇಕಾಗುವದು. ಯುದ್ಧದ ಹಡಗಗಳು, ಯುದ್ಧನಾವೆ, ವಿಮಾನ ಒಯ್ಯುವ ಹಡಗಗಳು, ವಿನಾಶಿಕೆಗಳು ಮತ್ತು ಅಂತರ್ಜಲಗಾಮಿಗಳು. ಇವರಲ್ಲಿ ಯುದ್ಧದ ಹಡಗು ಒಳ್ಳೇ ದೊಡ್ಡದು, ಒಳ್ಳೇ ಶಕ್ತಿಯುತವಾದುದು, ನೌಕಾ ಪಡೆಯಲ್ಲಿ ಮುಖ್ಯವಾದುದೆಂದರೆ ಇದೇ. ಇದರಲ್ಲಿ ಒಳ್ಳೇ ಬಲವಾದ ತೋಫುಗಳಿರುವವು. ಮತ್ತು ಇದಕ್ಕೆ ಉಕ್ಕಿನ ತಗಡುಗಳ ದಪ್ಪವಾದ ಹೊದಿಕೆ ಇರುವದು. ಇಂಥ ಹಡಗವನ್ನು ಎದುರಿಗೆ ಯುದ್ಧಮಾಡಿ ಗೆಲ್ಲಬೇಕಾದರೆ ಇದೇ ತರಗತಿಯ ಹಡಗುಗಳಿಂದಲೇ ಸಾಧ್ಯ. ಇಂಥ ದೊಡ್ಡ ಮತ್ತು ಬಹಳ ಬೆಲೆಯ ಹಡಗುಗಳನ್ನು ಕಟ್ಟುವದು ಯೋಗ್ಯವೇ ಎಂಬ ಪ್ರಶ್ನೆ ಇತ್ತೀಚೆಗೆ ಹೊರಟಿತ್ತು. ಆದರೆ ಒಂದು ರಾಷ್ಟ್ರದ ಕಡೆಗೆ ಈ ತರಗತಿಯ ಹಡಗಗಳಿರುವಾಗ ಅದನ್ನು ಎದುರಿಸಿ ವಿಜಯ ಹೊಂದಬೇಕೆಂಬ ದೇಶಕ್ಕೂ ಸಹ ಇಂಥ ಹಡಗಗಳು ಬೇಕೇ ಬೇಕು.

ಬಹಳ ಶಕ್ತಿಯುತವಾದ ಅನೇಕ ಯುದ್ಧ ಹಡಗಗಳನ್ನು ಕಟ್ಟುವ ಕಾರ್ಯ ಈಗ ಬ್ರಿಟನ್ನದಲ್ಲಿ ನಡೆದಿದೆ. ಆದರೆ ಕಳೆದ ಯುದ್ಧದಿಂದ ಈಗಿನ ವರೆಗೆ ಕಟ್ಟಲ್ಪಟ್ಟ ಹಡಗಗಳೆಂದರೆ ನೆಲ್ಸನ್ ಮತ್ತು ರೋಡ್ನೆ ಇವೆರಡೇ. 1922ರಲ್ಲಿ ವಾಶಿಂಗ್ಟನ್‌ದಲ್ಲಿ ಆದ ಒಪ್ಪಂದದ ಪ್ರಕಾರ 35,000 ಟನ್ನುಗಳಿಗಿಂತ ದೊಡ್ಡ ಯುದ್ಧ ಹಡಗಗಳನ್ನು ಕಟ್ಟಬಾರದೆಂಬ ಕಟ್ಟಳೆಗನುಸರಿಸಿ ಇವು 35,000 ಟನ್ನಿನವಿವೆ. ಇವುಗಳಲ್ಲಿ 16½ ವ್ಯಾಸದ 9 ತೋಫುಗಳು ಇರುತ್ತವೆ. ಈ ತೋಫುಗಳಿಂದ ಒಂದು ಟನ್ನು ಒಜ್ಜೆಯ ಚಿಲ್ಲುಗಳನ್ನು 20 ಮೈಲುಗಳ ಅಂತರದ ವರೆಗೆ ಹಾರಿಸಬಹುದು.

ಇದರ ಎಂಜಿನುಗಳು 15,000 ಅಶ್ವಶಕ್ತಿಯವಿದ್ದು ಈ ಹಡಗಗಳು ಇಷ್ಟು ಭಾರದ ಇದ್ದರೂ ತಾಸಿಗೆ 23 ಮೈಲಿನಂತೆ ಓಡುತ್ತವೆ. ಇವರಲ್ಲಿ 1,400 ನಾವಿಕರಿರುವರು. ಇಂಥ ಒಂದು ಹಡಗಕ್ಕೆ 10 ಕೋಟಿ ರೂಪಾಯಿಗಳು ವೆಚ್ಚ ಬೀಳುವವು. ಇಷ್ಟು ಬೆಲೆಯ ಹಡಗವನ್ನು ತೋಫಿನ ಗುಂಡಿನಿಂದ ರಕ್ಷಿಸುವದು ಅವಶ್ಯ. ಆದ್ದರಿಂದ ನೆಲ್ಸನ್ ಮತ್ತು ರೋಡ್ನೆಗಳ ಎರಡೂ ಬದಿಗಳಿಗೆ 14 ಇಂಚು ದಪ್ಪ ಉಕ್ಕಿನ ತಗಡು ಇರುತ್ತದೆ. ಹಡಗದ ಡೆಕ್ಕಿಗೆ ಸಹ 6½ ಇಂಚಿನ ತಗಡು ಬಡೆಯಲಾಗಿದೆ. ಇಂಥ ದೊಡ್ಡ ಹಡಗನ್ನು ಶತ್ರುಗಳಿಂದ ರಕ್ಷಿಸಲು ಅನೇಕ ಚಿಕ್ಕ ಪುಟ್ಟ ಹಡಗಗಳ ಸಹಾಯ ಬೇಕಾಗುವದು.

ಯುದ್ಧ ನಾವೆಗಳು.

ಯುದ್ಧ ನಾವೆ ಮತ್ತು ಯುದ್ಧ ಹಡಗಗಳಲ್ಲಿ ಭೇದವಿರುವದು. ಅವುಗಳ ಆವರಣದಲ್ಲಿ ನಾವೆಯ ಆವರಣ ತೆಳ್ಳಗಿರುವದರಿಂದ ಒಂದೆಡೆಗೆ ನಿಂತು ಯುದ್ಧಮಾಡಲು ಅದು ಅಯೋಗ್ಯವಾಗುವದು. ಇದರ ವೇಗ ಯುದ್ಧ ಹಡಗಿಗಿಂತ ಹೆಚ್ಚಿದ್ದು ಎರಡು ನೌಕಾ ಪಡೆಗಳು ಒಂದನ್ನೊಂದು ಎದುರಿಸಿದಲ್ಲಿ ವೈರಿಪಡೆಯ ಚಿಕ್ಕ ಹಡಗಗಳನ್ನು ನಾಶ ಮಾಡುವದೇ ಇದರ ಕಾರ್ಯ. ನೌಕಾಯುದ್ಧ ಮಾಡುವಾಗ ಪಡೆಯ ಮುಖ್ಯ ಭಾಗದ ಮುಂದೆ ಚಿಕ್ಕ ಚಿಕ್ಕ ಹಡಗಗಳನ್ನು ಹರಡುವ ಪದ್ಧತಿಯಿದೆ. ಇಂಥ ಚಿಕ್ಕ ಹಡಗಗಳನ್ನು ಹಾಳು ಮಾಡಿ ಶತ್ರುಗಳ ನಿಜವಾದ ಬಲವನ್ನು ತಿಳಿದು ಯುದ್ಧನಾವೆ ತನ್ನ ಪಡೆಯ ಮುಖ್ಯಸ್ಥನಿಗೆ ತಿಳಿಸುವದು. ಇಂಥ ಹಡಗಗಳು ಈಗ ಕಡಮೆಯಾಗಿದ್ದು ಬ್ರಿಟಿಷ್ ನೌಕಾ ಬಲದಲ್ಲಿ ಇಂಥವು ಮೂರೆ ಇವೆ. ಅವುಗಳ ಹೆಸರು ಹುಡ್, ರಿಪಲ್ಸ್, ರಿನೌನ್ ಎಂದು. ಈ ಹಡಗುಗಳು ಈಗ ನಡೆದಿರುವ ಯುದ್ಧದಲ್ಲಿ ಭಾಗವಹಿಸಿ ಬಹಳ ಪ್ರಸಿದ್ಧಿಗೆ ಬಂದಿವೆ. ಫ್ರಾನ್ಸ್ ಮತ್ತು ಜರ್ಮನಿಗಳು ಇಂಥ ಹಡಗಗಳನ್ನು ಕಟ್ಟಿವೆ. ಆದರೆ ಇವುಗಳ ಮೇಲೆ ಬಹಳ ಭಾರವಾದ ಆವರಣವಿರುವದರಿಂದ ಇವುಗಳಿಗೆ ನಾವೆಗಳೆನ್ನುವದಕ್ಕಿಂತ ಹಡಗಗಳೆನ್ನುವದೇ ಲೇಸು.

ವಿಮಾನ ಒಯ್ಯುವ ಹಡಗಗಳು.

ಪ್ರತಿಯೊಂದು ಯುದ್ಧ ಹಡಗ ಮತ್ತು ನಾವೆಗಳಲ್ಲಿ ಒಂದೊಂದು ವಿಮಾನ ಇದ್ದೇ ಇರುತ್ತದೆ. ಇವುಗಳಿಗೆ ನೀರಲ್ಲಿ ತೇಲುವ ಯೋಜನೆ ಇದ್ದು ಕವಣಿ ಬಿಸುಗಿದ ಕೂಡಲೆ ಇವು ಸಮುದ್ರದಲ್ಲಿ ಇಳಿಯುತ್ತವೆ. ಆ ಮೇಲೆ ಕ್ರೇನಿನಿಂದ ಇವುಗಳನ್ನು ಹಡಗದಲ್ಲಿ ತೆಗೆದುಕೊಳ್ಳಲಾಗುವದು.

ಇನ್ನು ವಿಮಾನ ಒಯ್ಯುವ ಹಡಗಗಳ ವೈಶಿಷ್ಟ್ಯವೆಂದರೆ ಅವುಗಳಿಗೆ ಎರಡು ಡೆಕ್ಕುಗಳಿರುತ್ತವೆ. ಈ ಹಡಗವೆಂದರೆ ಓಡಾಡುವ ವಿಮಾನ ಗೃಹವಿದ್ದಂತೆ. ಮೇಲಿನ ಡೆಕ್ಕಿನಲ್ಲಿ ವಿಮಾನಗಳು ಮೇಲೆ ಹೋಗುವ ಮತ್ತು ತಿರುಗಿ ಇಳಿಯುವ ಯೋಜನೆ ಇರುವದು. ಈ ಡೆಕ್ಕಿನಲ್ಲಿ ವಿಮಾನಗಳ ಹಾರಾಟಕ್ಕೆ ಅಡ್ಡಿ ಬರುವಂತಹ ವಸ್ತುಗಳೇನೂ ಇರುವದಿಲ್ಲ. ಹೊಗೆಗೊಳವೆ ಸಹ ಹಿಂಭಾಗದಲ್ಲಿರುವದು. ಈ ಹಡಗದ ಕೆಳಭಾಗದಲ್ಲಿ ವಿಮಾನಗಳನ್ನಿಡಲು ಸ್ಥಳವಿರುವದು.

ಈ ಹಡಗದ ಮೇಲಿಂದ ಏರುವದೂ ಮತ್ತು ಹಡಗಕ್ಕೆ ತಿರುಗಿ ಬರುವದೂ ಬಹಳ ಕಠಿಣವಾದದ್ದು. ಏಕೆಂದರೆ ಹಡಗದ ಡೆಕ್ಕು ಬಹಳ ಸಣ್ಣದಿರುವದು. ವಿಮಾನಗಳಿಗೆ ಅವಶ್ಯ ಹೆಚ್ಚು ವೇಗ ಕೊಡಬೇಕೆಂದು ಹಡಗವನ್ನು ವೇಗದಿಂದ ಓಡಿಸಲಾಗುವದು. ಆಗ ವಿಮಾನಗಳು ಮೇಲೇರುವವು ಮತ್ತು ಕೆಳಗೂ ಇಳಿಯುವವು. ಹಡಗವು ಪೂರ್ಣ ವೇಗದಿಂದ ಓಡುತ್ತಿದ್ದರೂ ವಿಮಾನ ಇಳಿಯುವಾಗ ಹಡಗದಲ್ಲಿಯೇ ನಿಲ್ಲದಿದ್ದರೆ ಕೆಳಗೆ ಬೀಳದಂತೆ ಉಕ್ಕಿನ ತಂತಿಯ ಹಗ್ಗಗಳಿಂದ ರಕ್ಷಿಸಲ್ಪಡುವದು. ವಿಮಾನ ಕೆಳಗಿಳಿಯುವ ಪೂರ್ವದಲ್ಲಿ ವಿಮಾನದಿಂದ ಒಂದು ಕಬ್ಬಿಣದ ಕೊಂಡಿಯನ್ನು ಇಳಿಬಿಡಲಾಗುವದು. ಇದು ಮೇಲೆ ಹೇಳಿದ ಹಗ್ಗಗಳಿಗೆ ಸಿಕ್ಕು ವಿಮಾನ ನಿಲ್ಲುವಂತೆ ಮಾಡುವದು.

ವಿಮಾನ ಒಯ್ಯುವ ಹಡಗಕ್ಕೆ ಕಬ್ಬಿಣದ ತಗಡೂ ಇರುವದಿಲ್ಲ. ದೊಡ್ಡ ತೋಫುಗಳಿರುವುದಿಲ್ಲ. ಆದ್ದರಿಂದ ಅದು ಹೆಚ್ಚು ಗಂಡಾಂತರಕ್ಕೆ ಸಿಕ್ಕಬೀಳುವದು ಶಕ್ಯವಿದೆ. ಆದರೆ ವಿಮಾನಗಳು ಮಾತ್ರ ಇದಕ್ಕೆ ಬೇಕಾದ ರಕ್ಷಣೆಕೊಡಬಲ್ಲವು.

ನಾವೆಗಳು.

ಯುದ್ಧ ಕಾಲದಲ್ಲಿಯಷ್ಟೇ ಅಲ್ಲ. ಶಾಂತಿ ಸಮಯದಲ್ಲಿ ಸಹ ಬಹಳ ಉಪಯೋಗವಾಗುವ ಹಡಗಗಳು ಇವು. ಇವು 10,000 ಟನ್ನಿಗಿಂತ ಹೆಚ್ಚು ಭಾರವಿರಬಾರದೆಂಬ ನಿಯಮವಿದೆ. ಇದರಲ್ಲಿ ಅನೇಕ ತರಹಗಳಿವೆ.

ಬ್ರಿಟಿಷ್ ನಾವೆಗಳಲ್ಲಿ ಮೂರು ಒಳ್ಳೇ ಪ್ರಸಿದ್ಧಿಗೆ ಬಂದಿವೆ. ಪ್ಲೇಟ ಕದನದಲ್ಲಿ ಭಾಗವಹಿಸಿ, ಜರ್ಮನಿಯ ಅಡ್ಮಿರಲ್ ಗ್ರಾಫ ಸ್ಪಿಯನ್ನು ನಾಶಪಡಿಸಿದ ಶ್ರೇಯ ಇವಕ್ಕಿದೆ. ಇವುಗಳಲ್ಲಿ ಹಳೆಯ ನಾವೆಗಳನ್ನು ವಿಮಾನ ವಿರೋಧಕ ತೋಫುಗಳಿಂದ ಸಜ್ಜುಗೊಳಿಸಲಾಗಿದೆ.

ನೀರ ಮೇಲೆ ಓಡಾಡುವ ಹಡಗಗಳಲ್ಲಿ ಒಳ್ಳೇ ಸಣ್ಣವೆಂದರೆ, ವಿನಾಶಿಕೆಗಳು. ಕಳೆದ ಶತಮಾನದ ಅಂತ್ಯಭಾಗದಲ್ಲಿ ಟಾರ್ಪೆಡೋ ಬೋಟುಗಳ ನಾಶಮಾಡುವದಕ್ಕೆ ಒಳ್ಳೇ ತೀವ್ರಗಾಮಿಗಳಾದ ಹಾಗು ಚಿಕ್ಕ ತೋಫುಗಳುಳ್ಳ ಸಣ್ಣ ನಾವೆಯ ಅವಶ್ಯಕತೆಯೆನಿಸಿತು.

ಹೊಸ ಪದ್ಧತಿಯ ವಿನಾಶಿಕೆಗಳು ಸುಮಾರು 1,300 ಟನ್ನು ಭಾರದವು 30 ಮೈಲು ವೇಗದಿಂದ ಹೋಗುತ್ತವೆ. ಇವರ ಮೇಲೆ 4 ತೋಫುಗಳಿದ್ದು, 8-10 ಟಾರ್ಪೆಡೋಗಳಿರುವವು. ಇವಕ್ಕೆ ಹೆಚ್ಚಿನ ಕಬ್ಬಿಣದ ತಗಡಿನ ಆವರಣವಿರುವದಿಲ್ಲ. ಇವುಗಳ ಕೆಲಸಗಳು ಅನೇಕವಿದ್ದು ಜಲನಾವೆಗಳನ್ನು ಹಾಳುಮಾಡುವದೂ ಅವುಗಳಲ್ಲಿ ಒಂದು.

ಜಲನಾವೆಗಳು.

ಇದು ನೀರ ಮೇಲೆ ಓಡಾಡುವ ಹಡಗಗಳ ಕಥೆ. ಇನ್ನು ಜನರಿಗೆ ಹೆಚ್ಚು ಕುತೂಹಲವಿರುವ ಜಲನಾವೆಗಳು ಏನು ಕಾರ್ಯಮಾಡುವವೆಂಬದನ್ನು ತಿಳಿದುಕೊಳ್ಳುವದು. ಈ ನಾವೆ ದೊಡ್ಡ ಉಕ್ಕಿನ ಲಳಿಗೆಯಂತಿದ್ದು ಒಂದು ಕಡೆಗೆ ಸಣ್ಣದಾಗುತ್ತ ಹೋಗಿರುವದು. ಇದರಲ್ಲಿ ಎರಡು ತರದ ಎಂಜಿನುಗಳಿರುವವು. ಒಂದು ಅಂತರ್ಜ್ವಲನ ತರಹದು ಇರುತ್ತವೆ. ಇವುಗಳ ಕ್ರೂಡ ಆಯಿಲಿನಿಂದ ನಡೆಯುವವು. ಇವು ನಡೆಯಬೇಕಾದರೆ ಹವೆ ಬೇಕು. ಆದ್ದರಿಂದ ನೀರ ಮೇಲೆ ಮಾತ್ರ ಇವನ್ನು ಉಪಯೋಗಿಸಬಹುದು. ಕೆಳಗೆ ಹೋದಾಗ ವಿದ್ಯುಚ್ಛಕ್ತಿಯ ಮೋಟಾರುಗಳಿಂದ ಇದು ನಡೆಯುವದು. ವಿದ್ಯುಚ್ಛಕ್ತಿಯು ಬ್ಯಾಟರಿಗಳಿಂದ ಪೂರೈಸಲ್ಪಡುವದು. ಜಲನಾವೆಯಲ್ಲಿ ದೊಡ್ಡ ನಾಲ್ಕೆಂಟು ಕೋಣೆಗಳಿದ್ದು ನೀರಲ್ಲಿ ಮುಳುಗುವ ಪೂರ್ವದಲ್ಲಿ ಇವುಗಳನ್ನು ನೀರಿನಿಂದ ತುಂಬಲಾಗುವದು. ಆ ಮೇಲೆ ನೀರ ಮೇಲೆ ಕೆಳಗೆ ಅಥವಾ ಹೇಗೆ ಬೇಕೋ ಹಾಗೆ ನಡೆಯಿಸಲ್ಪಡುವದು, ನಾವೆ ಮೇಲೆ ಬರಬೇಕಾದರೆ ಕಬ್ಬಿಣದ ಲಳಿಗೆಗಳಲ್ಲಿ ತುಂಬಿಟ್ಟಿರುವ ಹವೆಯಿಂದ ನಾವೆಯಲ್ಲಿದ್ದ ನೀರನ್ನು ಹೊರಗೆ ಹಾಕಲಾಗುವದು.

ಇನ್ನು ಜಲನಾವೆ ನೀರಿನ ಒಳಗಿರುವ ವೇಳೆ ಅದರಲ್ಲಿಯ ವಿದ್ಯುತ್ತಿನ ಪೂರೈಕೆಯನ್ನವಲಂಬಿಸಿರುವದು. ಉಸಿರಾಡುವದಕ್ಕಾಗಿ ಹೆಚ್ಚಿಗೆ ಹವೆಯ ಪೂರೈಕೆಯೂ ಇರುವದಿಲ್ಲ. ಯಾಕೆಂದರೆ ಹವೆ ತೀರುವದರೊಳಗೆ ಬ್ಯಾಟರಿಗಳು ಬಂದಾಗುವವು. ಇವು ತೀರಿದ ಕೂಡಲೆ ಮೇಲೆ ಬಂದು ಡೀಸಲ್ ಎಂಜಿನು ಪ್ರಾರಂಭಿಸಬೇಕಾಗುವದು.

ಟಾರ್ಪೆಡೋ ಟ್ಯೂಬಗಳನ್ನು ಯಾವಾಗಲೂ ಜಲನಾವೆಯ ಮುಂಭಾಗದಲ್ಲಿಯೇ ಕೂಡಿಸಲಾಗುವದು. ಟಾರ್ಪೆಡೋ ಹೊಡೆಯುವಾಗ ಇಡೀ ಹಡಗವನ್ನೇ ಹೊರಳಿಸಿ ಗುರಿಯಿತ್ತು ಟಾರ್ಪೆಡೋ ಬಿಡಲಾಗುವದು. ನೀರ ಮೇಲಿನ ವಸ್ತುಗಳು ಕಾಣುವದಕ್ಕಾಗಿ ಪೇರಿಸ್ಕೋಪ ಎಂಬ ದುರ್ಬೀನು ಇರುವದು. ಇದು 40 ಫೂಟ್ ಆಳದ ವರೆಗೆ ಮಾತ್ರ ಉಪಯೋಗವಾಗುವದು.

'ಕ. ವಿ'

ಮಾರಾಟಕ್ಕಿದೆ.

ವೀರಾಜಪೇಟೆನಾಡು ಮೈತಾಡಿ ಗ್ರಾಮದ ಒಕ್ಕಲಿಗರ ಸಿಂಗೇಗೌಡ್ರ ಮಗ ನೇಮಣ್ಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಸಾಳೆ ನಂ. 38ರ ಸಾಗಿನ ಸ. ನ. 150/1ರ 16.70 ಏಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ಲೆ ತೋಟದ 3.90 ಯೇಕ್ರದ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕಿತ್ಲೆ ತೋಟದ .80 ಸೆಂಟಿನ ಪೈಕಿ .64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಏಕ್ರೆಯ ಬಾಣೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ಲೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯಸ್. ದೇವಣ್ಣ,
ಮೈತಾಡಿಗ್ರಾಮ,
12–7 ಮೂರ್ನಾಡು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಷೇರ್ ಬಂಡವಾಳ	–	50.000	0	0
ವಸೂಲಾದ ಷೇರ್ ಮೊಬಲಗು	–	48,470	0	0
ಜಮೂಬಂದ ಠೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ಫ್ರಿಕ್ಸ್ಡ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಫ್ರಿಕ್ಸ್ಡ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಫ್ರಿಕ್ಸ್ಡ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದ ತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:—ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮು. ಕ. ಸಿ. ಕರುಂಬಯ್ಯನವರು ಎಂ. ಎಲ್. ಸಿ.

ತಾ. 1-3-1940

ಕೊಡಂದೇರ ಡಿ. ಮಾಚಯ್ಯ,
L. D. Sc. (COLLEGE OF DENTISTRY)
EX-SUPERVISOR, LAXMIBAI PATEL DENTAL HOSPITAL, KARACHI

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (41) ನವೀನ ರೀತಿಯ ಚಿಕಿತ್ಸೆ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕೆ. ಮತ್ತು ಕಂಪನಿ,
(52-17) ಗಿರಗಾಂವ, ಮುಂಬಯಿ ೪,

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ-ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಷೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸುಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ದಾವಾ ಮತ್ತು ಅಮಲ್ಜಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟೈಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara, and Virajapet.

52—45

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:-ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಸಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್.)
52-11 ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಸಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೩—೫—೧೯೪೦.

ಸಂಪುಟ ೧೯] [ಸಂಚಿಕೆ ೫೦

ಭದ್ರತೆ! ವಿಶ್ವಾಸಾರ್ಹತೆ!! ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ ಭದ್ರತೆಯನ್ನು ದಿನೇ ದಿನೇ ಹೆಚ್ಚಿಸಿ, ಠೇವಣಾತಿದಾರರಿಗೆ ಸುರಕ್ಷಿತತೆಯನ್ನು ಹೆಚ್ಚಿಸಿ,
ಸರ್ವರ ವಿಶ್ವಾಸಕ್ಕೆ ಪಾತ್ರವಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ [illegible] ಸಂಸ್ಥೆ.

ನಿರಖು ಠೇವಣಾತಿ ಒಂದು ವರ್ಷಕ್ಕೆ 3½% (ಸಾಲಿಯಾನ ಲೆಕ್ಕದ)
ಬಡ್ಡಿ ದರಗಳು: 2 & 3 ವರ್ಷಕ್ಕೆ 4% ,,

ಒಂದು ವರ್ಷಕ್ಕಿಂತ ಹೆಚ್ಚು ಮಾಯಿದೆಯ, ಅಲ್ಪಾವಧಿಯ, ಠೇವಣಾತಿಗಳನ್ನು
ಅವಧಿಗೆ ತಕ್ಕ ಬಡ್ಡಿ ದರಗಳಲ್ಲಿ ಪಡೆಯಬಹುದು.

ಮೂರು ವರ್ಷದ ಕ್ಯಾಶ್ ಸರ್ಟಿಫಿಕೇಟುಗಳು: [illegible] 4 ರಲ್ಲಿ [illegible], ಯಾವಾಗಲೂ 15 ದಿನಗಳ ನೋಟೀಸು ಕೊಟ್ಟಲ್ಲಿ ಹಣ ಹಿಂದಕ್ಕೆ ಪಡೆಯಬಹುದು.
ಸೇವಿಂಗ್ಸ್ ಬೇಂಕ್ ಡಿಪಾಜಿಟ್ಸ್: ಒಂದು ಲೆಕ್ಕದಲ್ಲಿ ರೂ. 7,000 ದ ವರೆಗೆ ಹಣ ಇಡಬಹುದು. ಚೆಕ್ಕು ಮೂಲಕ ಹಣ ಹಿಂದೆ ಪಡೆಯಬಹುದು.
ಸಾಲಿಯಾನ ಶೇಕಡಾ 2½ ದರದಲ್ಲಿ ಬಡ್ಡಿ ಕೊಡುತ್ತದೆ.
ಕರೆಂಟ್ ಡಿಪಾಜಿಟ್ಸ್, ಕ್ಯುಮ್ಯುಲೇಟಿವ್ ಡಿಪಾಜಿಟ್ಸ್ ಮುಂತಾದವುಗಳನ್ನು ತೆರೆಯಬಹುದು

ಬೊಂಬಾಯಿ, ಕಲ್ಕತ್ತಾ, ಮದ್ರಾಸು, ಕಲ್ಲಿಕೋಟೆ, [illegible], ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ
ಅನೇಕ ಸ್ಥಳಗಳ ಮೇಲೆ ಡ್ರಾಫ್ಟುಗಳನ್ನೂ ಚೆಕ್ಕುಗಳನ್ನೂ ಕೊಡುತ್ತೇವೆ; [illegible].

THE CANARA BANKING CORPORATION LIMITED.

52-19 ಬಂಗಾರದ ಒಡವೆಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ರಂಗಗಳಲ್ಲಿ ಜಯಶೀಲತೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿಸ್ತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ಪುಷ್ಟಿ ಮಾಡುತ್ತದು, ನರಗಳಿಗೆ ನವಶಕ್ತಿಯನ್ನು ಕೊಡುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್,

ಕಟಪಾಡಿ,—ದ. ಕನ್ನಡ.
(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ಸಂಜುಂಡೇಶ್ವರ.

52-25

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು.

ನಾಪೋಕ್ಲು—ಮೆ. ಬೆಳ್ಳಿಪಂಡ ಯಂ. ಪೂಣಚ್ಚನವರು.
ನಾಪೋಕ್ಲು

ಶನಿವಾರಸಂತೆ—ಮೆ. ಎಚ್. ಎಂ. ಕೃಷ್ಣಣ್ಣನವರು.

ಸೂಚನೆ—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷಕ್ರಿಮಿಗಳು ನಾಶವಾಗುವುವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣಶಕ್ತಿಯೂ ಉಂಟಾಗುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:—	(ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:—	(ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:—	(ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟಾಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(53 29) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು—ಕೆ. ರಾಮಕೃಷ್ಣರಾವ್,
ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ಡಾಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ್‍ಷಿಪ್‍ಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್ಸಿ., ಎಲ್‍ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‍ಪುರ, ಡೆಹ್ರ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‍ಪುರ, ಲಾಹೋರ್, ಲಕ್ನೌ, ಮದ್ರಾಸ್, ಮುಲ್ತಾನ್, ಪಾಟ್ನಾ, ರಾವಲ್‍ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-14

ಭಾರತವನ್ನು ಸ್ತ್ರೀ ರಾಜ್ಯ ಹಾಗೂ ಪುರುಷರ ರಾಜ್ಯವೆಂದು ವಿಂಗಡಿಸಿರಿ.

ಗಂಡಸರು ಸ್ತ್ರೀಯರ ಮೇಲೆ ನಡೆಸುವ ದಬ್ಬಾಳಿಕೆಯು ಅಲ್ಪ ಪಕ್ಷೀಯರ ಸಮಸ್ಯೆಗಿಂಥಾ ದೊಡ್ಡದು.

ಗಂಡಸರು ಅವರು ಹೇಳಿದಂತೆ ಕೇಳಬೇಕು—ಪುರುಷರ ದಾಸ್ಯದೊಳಗಿಂದ ಸ್ತ್ರೀಯರ ಮುಕ್ತತೆ—ಅಖಿಲ ಹಿಂದುಸ್ತಾನದ ಸ್ತ್ರೀ ಸಂಘದ ಯೋಜನೆ.

- ಇತ್ತೀಚೆಗೆ ಬೇರೆ ಬೇರೆ ಸಂಸ್ಕೃತಿಗಳುಳ್ಳ ಜನಾಂಗಕ್ಕೆ ಸುಖಶಾಂತಿಗಳಿಂದ ಪರಸ್ಪರ ನೆರೆಹೊರೆಯವರಾಗಿ ಇರಲು ಬೇರೆ ಪ್ರಾಂತಗಳಿರಬೇಕೆಂಬ ವಿಚಾರವು ಪ್ರಾಬಲ್ಯದಿಂದ ತಲೆದೋರಹತ್ತಿದೆ. ಮುಸ್ಲೀಂ ಲೀಗಿನವರು ಪಾಕಿಸ್ತಾನ ಮತ್ತು ಉಸ್ಮಾನಿಸ್ತಾನಗಳ ನಿರ್ಮಾಣದ ಬಗ್ಗೆ ಕೇಳುತ್ತಿದ್ದರೆ ಶೀಖರು ಪಂಜಾಬವನ್ನು ತಮ್ಮ ವಶಕ್ಕೆ ಒಪ್ಪಿಸಬೇಕೆಂದು ಬೇಡುತ್ತಿರುವರು. ಶಿಯಾ ಜನರು ತಮ್ಮ ತಕರಾರುಗಳನ್ನು ಸ್ವಚ್ಛಂದವಾಗಿ ಸಾರುತ್ತ ತಮ್ಮ ಸಾರ್ವಜನಿಕ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ತಮಗೊಂದು ಬೇರೆ ಪ್ರಾಂತವಿರಬೇಕೆಂದು ಅನ್ನುತ್ತಿರುವರು. ಇತ್ತ ದಕ್ಷಿಣದಲ್ಲಿಯ ದ್ರಾವಿಡರು ಹಿಂದೀ ಶಿಕ್ಷಣದ ಮತ್ತು ಬ್ರಾಹ್ಮಣರ ವರ್ಚಸ್ವದಿಂದ ಮುಕ್ತರಾಗಲು ದ್ರಾವಿಡಸ್ತಾನವನ್ನು ಕೇಳುತ್ತಿರುವರು. ಈ ರೀತಿ ಬೇರೆ ಬೇರೆ ಯೋಜನೆಗಳು ಮುಂದೆ ಬಂದಿರುವಾಗ ಸಾವಿರಾರು ವರ್ಷಗಳಿಂದ ದಾಸ್ಯಶೃಂಖಲೆಯಿಂದ ಗೋಳಾಡುತ್ತಿರುವ ಸ್ತ್ರೀಯರಿಗೊಂದು ಪ್ರತ್ಯೇಕ ಪ್ರಾಂತವು ಇರುವದು ಅತ್ಯವಶ್ಯವಾಗಿದೆ.

ಅವರ ಆರ್ಥಿಕ ಸಾಮಾಜಿಕ ರಾಜಕೀಯ, ಸಾಂಸ್ಕೃತಿಕ, ಆಧ್ಯಾತ್ಮಿಕ ಮುಂತಾದ ಎಲ್ಲ ಬಗೆಯಿಂದ ವಿಚಾರ ಮಾಡಿದರೂ ಅವರಿಗೆ ಬೇರೊಂದು ಪ್ರಾಂತವಿರಬೇಕು.

ಆದರೆ ಅದು ಎಲ್ಲಿರಬೇಕು ?

ಈ ವಿಚಾರಕ್ಕೆ ಬೆಂಬಲವನ್ನೀಯುವವರಲ್ಲಿ ಕೆಲವರು ಈ ಹೊಸ ಪ್ರಾಂತವು ಗುಜರಾಥದಲ್ಲಿ ಇರಬೇಕೆಂದು ಹೇಳುವರು. ಅಲ್ಲಿ ಗಾಂಧೀಜಿಯವರು ಈಗಾಗಲೇ ಸ್ತ್ರೀಯರ ಉದ್ಧಾರವನ್ನು ಮಾಡಿರುವರು. ಅಲ್ಲಿಯ ಸ್ತ್ರೀಯರು ತಮ್ಮ ಮನೆಯ ಕಾರಭಾರವನ್ನಷ್ಟೇ ಸಾಗಿಸಿಕೊಂಡು ಹೋಗುವದಲ್ಲದೆ ತಮ್ಮ ಪತಿಗಳ ವ್ಯವಹಾರವನ್ನೂ, ಅದೇಕೆ, ದೊಡ್ಡ ವ್ಯಾಪಾರ ಉದ್ಯೋಗಗಳ ಸಂಸ್ಥೆಗಳನ್ನು ಸಹ ನಡೆಯಿಸಿಕೊಂಡು ಹೋಗುತ್ತಿರುವರು. ಮತ್ತೆ ಕೆಲವರು ಆಂಧ್ರ ದೇಶದಲ್ಲಿ ಈ ಪ್ರಾಂತವನ್ನು ನಿರ್ಮಿಸಬೇಕೆಂದು ಅಭಿಪ್ರಾಯ ಪಡುವರು. ಅಂದರೆ ಆಂಧ್ರರು ಬೇಡುತ್ತಿರುವ ಪ್ರತ್ಯೇಕ ಪ್ರಾಂತವೂ ಅವರಿಗೆ ದೊರೆತಂತಾಗುವದು. ಆಂಧ್ರ ಸ್ತ್ರೀಯರು ಒಳ್ಳೇ ಸುಂದರ ಹಾಗೂ ಚಾಣಾಕ್ಷರಿದ್ದುದರಿಂದ ಈ ಹೊಸ ರಾಜ್ಯವು ಒಳ್ಳೇ ಸ್ಥಿರವಾಗಬಹುದೆಂದು ಅವರ ಹೇಳಿಕೆ. ಮತ್ತೆ ಕೆಲವರು ಭಿನ್ನತೆಯ ಬೇರುಗಳು ಈಗಾಗಲೆ ಚನ್ನಾಗಿ ಹರಡಿದ್ದ ಬಂಗಾಲದಲ್ಲಿ ಈ ಪ್ರಾಂತವನ್ನು ನಿರ್ಮಿಸಬೇಕೆಂದು ಹೇಳುವರು.

ಮಲಬಾರವಂತೂ ಈಗ ಇದ್ದೇ ಇದೆ. ಸ್ತ್ರೀಯರಿಗೆ ಕಲಾಕೌಶಲ್ಯ ಹಾಗೂ ಸೌಂದರ್ಯದ ಮೇಲೆ ಬಹಳ ಮಮತೆಯಿರುವದರಿಂದ ಸ್ತ್ರೀ ರಾಜ್ಯಕ್ಕೆ ಶಾಂತಿನಿಕೇತನ ಉಪಯೋಗಕರನಿಂದ ಕುಮಾಯೂನ ಪರ್ವತದಲ್ಲಿ ಸ್ಥಾಪಿಸಲ್ಪಟ್ಟ ಸಂಸ್ಥೆ, ಕಾಶ್ಮೀರದಲ್ಲಿ ಸುಂದರ ಕೊಳ್ಳಗಳನ್ನು ಸಹ ಈ ಪ್ರಾಂತಕ್ಕೆ ಸೇರಿಸಬೇಕೆಂದು ಒಬ್ಬ ಮಹಿಳೆಯ ಮತ.

ಆದರೆ ಈ ನಾಲ್ಕು ಪ್ರಾಂತಗಳ ಹಕ್ಕುಗಳನ್ನೆಲ್ಲ ಚನ್ನಾಗಿ ವಿಮರ್ಶಿಸಲಾಗಿ ಸ್ತ್ರೀಯರ ಪ್ರಾಂತವು ಒಂದೇ ಇರದೆ ನಾಲ್ಕು ಬೇರೆ ಬೇರೆ ಪ್ರಾಂತಗಳನ್ನು ನಿರ್ಮಿಸಿ ಅವುಗಳ ಒಂದು ಫೆಡರೇಶನ್ ಮಾಡಬೇಕೆಂದು ನನ್ನ ವಿಚಾರ.

ಗಂಡು – ಹೆಣ್ಣುಗಳ ಸ್ಥಾನ.

ಗಂಡುಮಗು ಹುಟ್ಟಿದರೆ ಆನಂದವಾಗುವದೂ ಹೆಣ್ಣು ಮಗು ಹುಟ್ಟಿದರೆ ಒಂದು ಗಂಡಾಂತರ ಬಂದಂತಾಗುವದೂ ಹಿಂದುಸ್ತಾನದಲ್ಲಿ ಎಲ್ಲ ಕಡೆಗೆ ಸ್ವಾಭಾವಿಕವಾಗಿದೆ. ಗಂಡು ಹುಟ್ಟಿದರೆ ಫೇಡ ಹಂಚುವದು ಮೇಜವಾನಿ ಮಾಡಿಸುವದು, ಹೆಣ್ಣು ಹುಟ್ಟಿದರೆ ಯಾರೂ ಕೇಳುವವರಿಲ್ಲ. ಎಲ್ಲಿಯಾದರೂ ವೈಯಕ್ತಿಕ ಅಪವಾದಗಳಿದ್ದರೆ ಸಾಮಾನ್ಯ ನಿಯಮಕ್ಕೆ ಪುಷ್ಟಿ ಕೊಟ್ಟಂತಾಗುವದು. ಇಡೀ ಜೀವನದಲ್ಲಿ ಈ ಭೇದಭಾವವು ಅಳಿಯುತ್ತ ಹೋಗದೆ ಬೆಳೆಯುತ್ತ ಹೋಗುವದು. ಹೆಣ್ಣು ಹುಡುಗಿಯು ಬೆಳೆದ ಹಾಗೆ ತಂದೆ ತಾಯಿಗಳ ಚಿಂತೆಯು ಹೆಚ್ಚುವದು. ಹೆಣ್ಣು ಹುಡಿಗಿಯರಿಗೆ ಮನೆ ಕೆಲಸದ ಶಿಕ್ಷಣವನ್ನು ಕೊಡಬೇಕು. ಮತ್ತು ಉತ್ತಮ ವರನಿಗೆಕೊಟ್ಟು ಲಗ್ನ ಮಾಡಬೇಕು. ಗಂಡು ಹುಡುಗರಿಗೆ ಉಪಜೀವನದ ಮಾರ್ಗವನ್ನು ಕಲ್ಪಿಸಿಕೊಡಬೇಕಾಗುವದು. ಅವರ ವಿವಾಹವು ಅಷ್ಟೊಂದು ಅವಶ್ಯವಿಲ್ಲ. ಚಿಕ್ಕ ವಯಸ್ಸಿನಲ್ಲಿ ಸಹ ಬಾಲ ಬಾಲಕಿಯರ ನೈತಿಕ ಮಟ್ಟ ಬೇರೆ. ಯುವಕನು ಚಾರಿವರೆ ಯೌವನದ ಭರದಲ್ಲಿ ತಪ್ಪು ಹೆಜ್ಜೆ ಇಟ್ಟರಬಹುದೆಂದು ಅಲಕ್ಷಿಸಿದರೆ ಯುವತಿಯ ತಪ್ಪು ಹೆಜ್ಜೆಯು ಅವಳ ಜೀವಿತವನ್ನೆಲ್ಲ ಹಾಳುಮಾಡಿ ಬಿಡುವದಲ್ಲದೆ ಕುಲಕ್ಕೆ ಕಲಂಕ ತರುವದು.

ದೊಡ್ಡವರಾದ ಮೇಲೆ ಅವರ ಮಾರ್ಗಗಳು ಭಿನ್ನವಾಗಿರುವವು. ಸಾಮಾನ್ಯತಃ ಸ್ತ್ರೀಯ ಉದ್ಯೋಗವು ಮನೆತನದ ಕೆಲಸದಲ್ಲಿದ್ದರೆ ಇತರ ಸಂಪರ್ಭಗಳನ್ನೆಲ್ಲ ಪುರುಷರು ನೋಡಿಕೊಳ್ಳುವರು. ಅವರ ಆರ್ಥಿಕ ಸ್ಥಿತಿಯೂ ಭಿನ್ನವೇ. ಸ್ತ್ರೀಯರು ಪುರುಷರ ಗಳಿಕೆಯ ಮೇಲೆ ಅವಲಂಬಿಸಿರಬೇಕಾಗುವದು. ಈಗಿನ ಆರ್ಥಿಕ ಮುಗ್ಗಟ್ಟಿನಲ್ಲಿ ಸ್ತ್ರೀಯರು ತಮ್ಮ ಹೊಟ್ಟೆಯನ್ನು ತಾವೇ ಹೊರಕೊಳ್ಳುತ್ತಿದ್ದರೂ ಪುರುಷರಿಗಿಂತ ಅವರಿಗೆ ಬೆಲೆ ಕಡಿಮೆ.

ಉಡಿಗೆ ತೊಡಿಗೆಗಳು.

ವಸ್ತ್ರಗಳಲ್ಲಿಯೂ ಪರಸ್ಪರರಲ್ಲಿ ಅಂತರವಿದೆ. ಸ್ತ್ರೀಯರ ಉಡುಪುಗಳನ್ನು ಪುರುಷರು ಹಾಕಿಕೊಂಡರೆ ಇಲ್ಲವೆ ಪುರುಷರ ಉಡುಪುಗಳನ್ನು ಸ್ತ್ರೀಯರು ಹಾಕಿಕೊಂಡರೆ ಹಾಸ್ಯಕ್ಕೆ ಈಡಾಗಬೇಕಾಗುವದು. ಒಂದು ಒಗೆಯ ವಸ್ತ್ರವನ್ನು ಧರಿಸಿದರೆ ಸ್ತ್ರೀಯರಿಗೆ ಆನಂದವಾಗುತ್ತಿದ್ದರೆ ಅವನ್ನೇ ಪುರುಷರಿಗೆ ಕೊಟ್ಟರೆ ಅಸಮಾಧಾನವಾಗುವದು. ಸ್ತ್ರೀಯರು ಅಲಂಕಾರಗಳಿಂದ ಭೂಷಿತರಾಗಬೇಕು. ಅದೇ ಪುರುಷರು ಆಭರಣಗಳನ್ನಿಟ್ಟುಕೊಂಡರೆ ನಗೆಗೀಡಾಗುವರು. ಕಣ್ಣಿಗ ಕಾಡಿಗೆ ಹಚ್ಚಿಕೊಳ್ಳುವದು. ಹುಬ್ಬುಗಳನ್ನು ಕತ್ತರಿಸುವದು, ಉಗುರುಗಳಿಗೆ ಬಣ್ಣ ಹಚ್ಚಿಕೊಳ್ಳುವದು, ಮೋರೆಗೆ ಪೌಡರ್ ಹಚ್ಚಿಕೊಳ್ಳುವದು ಮುಂತಾದವುಗಳೆಲ್ಲ ಸ್ತ್ರೀಯರಿಗೆ ಶೋಭೆಯನ್ನುಂಟುಮಾಡುವವು. ಆದರೆ ಪುರುಷರು ನಾಟಕದಲ್ಲಿ ಸ್ತ್ರೀ ಪಾತ್ರವನ್ನು ವಹಿಸಿದಾಗ ಮಾತ್ರ ಈ ರೀತಿ ಮಾಡಬಹುದು.

ಭಿನ್ನ ರೂಪ.

ಅವರ ಆಕಾರದಲ್ಲಿಯೂ ಭಿನ್ನತೆಯಿರುವದು ಸ್ತ್ರೀಯರು ದುಂಡ ಎದೆ, ಸಣ್ಣ ಕಟಿಭಾಗ, ಕಿರಿ ಕಾಲುಗಳು, ಅಗಲ ಹಿಂಬದಿಗಳು, ಕುಗ್ಗಿದ ಬೆಳವಣಿಗೆ ಇವೆಲ್ಲ ಸ್ತ್ರೀಯರಲ್ಲಿ ಸಾಮಾನ್ಯವಾಗಿದ್ದರೆ ಪುರುಷರ ವಿಶಾಲ ಎದೆ ಮಧ್ಯಮ ಕಟಿಭಾಗ ಸಾದಾ ಹಿಂಬದಿ ಎತ್ತರ ಮತ್ತು ಭವ್ಯತೆಯಿಂದ ಸ್ತ್ರೀ ಪುರುಷರು ಭಿನ್ನ ವರ್ಗಕ್ಕೆ ಸೇರಿದವರೆಂದು ಕಲ್ಪನೆಯು ಬರುವದು. ಅದರಂತೆಯೇ ಅವಳ ಕಿರುಮೊಗ, ಸ್ವಚ್ಛ ಕೇಸರಹಿತ ಮೇಲ್ದುಟಿ ಮತ್ತು ಗದ್ದ ಹಾಗೂ ಅವನ ಹುರಿಮೀಸೆ, ಕೂದಲುಳ್ಳ ಗದ್ದ ಇವು ಪರಸ್ಪರ ವಿರೋಧಗಳಾಗಿ ಕಾಣಿಸುವವು.

ಸ್ವಭಾವದಲ್ಲಿ ಒಡೆದು ಕಾಣುವಂಥ ಪರಸ್ಪರ ಭೇದಗಳಿರುವವು ಅವಳ ಕಾರ್ಯ ಶಕ್ತಿಯೂ ಕೆಲಸಗಳೂ ಭಿನ್ನ. ಅವಳ ದೇಹವು ಅಶಕ್ತ, ಸೂಕ್ಷ್ಮ ಸ್ವೇಚ್ಛಾಪ್ರೇರಿತ, ಬಹಳ ಮಾತು ಪ್ರೊಣಾ ಹೇಳಿದಂತೆ ಕೇಳುವದು. ಇಲ್ಲವೆ ಎರಡನೆಯವರ ಮೇಲೆ ಒಳ್ಳೇ ದರ್ಪ ನಡೆಯಿಸುವದು ಮಾರ್ದವ ಮತ್ತು ಪ್ರೀತಿ ಈ ಗುಣಗಳು ಸ್ತ್ರೀಯರಲ್ಲಿ. ಪುರುಷರು ಸಶಕ್ತ ನಮ್ರ ಸ್ವಭಾವ, ಮೌನ ಮುಪ್ರ, ಸಹಕಾರಿ ಪುಷ್ಟ ಮತ್ತು ಸ್ನೇಹ ಪ್ರೇರಿತರು. ಸ್ತ್ರೀಯರು ವಿಚಾರ ಮತ್ತು ಧೈರ್ಯಗಳಿಗಿಂತ ನೃತ್ಯಗಳಿಂದ ಆಕರ್ಷಿಸಲ್ಪಡುವರು. ಪುರುಷರು ತಮ್ಮ ವ್ಯಕ್ತಿತ್ವದಿಂದಲೇ ಅವರನ್ನು ಒಲಿಸುವರು. ಸ್ತ್ರೀಯರ ಪ್ರೀತಿಯು ಸರಲವಾಗಿದ್ದು ಪುರುಷರು ಪ್ರೇಮದಲ್ಲಿ ಚಂಚಲವೃತ್ತಿಯವರು ಧರ್ಮದಲ್ಲಿ ಅವರು ಭಕ್ತಿಮಾರ್ಗವನ್ನು ಸ್ವಾಭಾವಿಕವಾಗಿ ಅನುಸರಿಸುವಳು. ಆದ್ದರಿಂದ ಅವರು ಭಾವಿಕರೂ ಅಂಧಶ್ರದ್ಧೆಯುಳ್ಳವಳೂ ಇರುವಳು. **ಅವನು** ಬುದ್ಧಿಪ್ರಧಾನ, ತರ್ಕದ ಮತ್ತು ಚುರುಕು. ಆದ್ದರಿಂದ ಜ್ಞಾನ ಕರ್ಮ ಮಾರ್ಗಗಳ ಕಡೆಗೆ ಅವನ ಒಲವು. ಅವರ ರುಚಿಯೂ ಭಿನ್ನ. ಲಲಿತ ಕಲೆ ಮತ್ತು ಗೃಹ ಕೆಲಸಗಳು ಅವಳಿಗೆ ರುಚಿಸಿದರೆ ಹೊರಗಿನ ಕಲಸ ಮತ್ತು ಕಾರ್ಯಮಾಡುವ ಕಡೆಗೆ ಪುರುಷರ ಪ್ರವೃತ್ತಿ. ರಾಜಕೀಯ ವಿಚಾರಗಳಲ್ಲಿ ಸ್ತ್ರೀಯರು ಪರಂಪರಾಪ್ರಿಯರು, ತೀವ್ರಗಾಮಿ ಮತ್ತು ಬಂಡುಗಾರಿಕೆಯ ವಿಚಾರಗಳಿಗಿಂತ ಅವರು ವಾಡಿಕೆ ಮತ್ತು ರೂಢಿಗಳಿಗನುಸರಿಸಿ ನಡೆಯುವವರು. ಪುರುಷರಿಗೆ ಮತ್ತು ಸ್ತ್ರೀಯರಿಗೆ ಎಲ್ಲ ಕಡೆಗೆ ಬೇರೆ ಬೇರೆ ಸ್ಥಾನಮಾನಗಳಿವೆ. ಅವುಗಳಲ್ಲಿಯ ಭೇದಗಳು ಸ್ವಲ್ಪ ಇರಲಿ ಇಲ್ಲವೆ ಹೆಚ್ಚಿಗೆ ಇರಲಿ. ಆದರೆ ಸ್ವಾಭಾವಿಕ ಭೇದವನ್ನು ಒಪ್ಪದ ಯಾವ ಕಾಯದೆಯು ಜಗತ್ತಿನಲ್ಲಿಲ್ಲ.

ಈ ಭೇದವು ಅರ್ವಾಚೀನಕಾಲದ್ದಲ್ಲ. ಐತಿಹಾಸಿಕ ಕಾಲದಿಂದಲೂ ನಡೆದು ಬಂದಿದೆ. ಜಗತ್ತಿನ ಪ್ರಾರಂಭದಿಂದಲೂ ಈ ಭೇದವು ಇದ್ದೇ ಇದೆ. ಪ್ರಾಣಿಶಾಸ್ತ್ರ ಹಾಗು ಅಂಗರಚನಾಶಾಸ್ತ್ರಗಳಲ್ಲಿ ಸಹ ಈ ಭೇದವು ಕಂಡುಬರುವದು. ಹಿಂದು, ಮುಸಲ್ಮಾನ, ಶಿಯಾ, ಸುನ್ನಿ, ಶೀಖ ದ್ರಾವಿಡಿಯನ್, ಆರ್ಯನ್, ಬ್ರಾಹ್ಮಣ, ಬ್ರಾಹ್ಮಣೇತರ. ಸ್ಪೃಶ್ಯ, ಅಸ್ಪೃಶ್ಯ, ಮುಂತಾದ ಭೇದಗಳು ಸ್ತ್ರೀಪುರುಷರಲ್ಲಿಯ ಸ್ವಾಭಾವಿಕ ಭೇದಗಳ ಮುಂದೆ ಕಾಸದಾರ್ಥವಾಗಿವೆ.

ಪುರುಷರ ದಬ್ಬಾಳಿಕೆ.

ಮಾನವ ಜನಾಂಗದ ಇತಿಹಾಸದಲ್ಲಿ ಪುರುಷರು ಸ್ತ್ರೀಯರ ಮೇಲೆ ಮಾಡಿದ ದಬ್ಬಾಳಿಕೆಯು ಸುಪ್ರಸಿದ್ಧವಾಗಿದೆ. ಪುರುಷರು ಸ್ತ್ರೀಯರನ್ನು ಮನೆಯಲ್ಲಿಯೇ ಬಂಧಿಗಳನ್ನಾಗಿ ಇರಿಸಿರುವರು. ಪರದಾ ಹಾಕಿ, ಅಂತಃಪುರದಲ್ಲಿ ಬಚ್ಚಿಟ್ಟು ಅವರಿಗೆ ಕೀಳು ಕೆಲಸಗಳನ್ನು ಕೊಟ್ಟಿರುವರು. ಅವರ ಆರ್ಥಿಕ ಸ್ವಾತಂತ್ರ್ಯವನ್ನು ಅಪಹರಿಸಿ, ರಾಜಕೀಯ ಸಮಾನತೆಯನ್ನು ಅಲ್ಲಗಳೆದು ಅಜ್ಞಾನಾಂಧಕಾರದಲ್ಲಿ ಇಟ್ಟುಬಿಟ್ಟಿರುವರು. ಅವರಿಗೆ ಸಂಸ್ಕೃತಿಯು ಸಹ ಇಲ್ಲದಂತಾಗಿದೆ. ಈ ಕ್ರೂರ ಕೃತ್ಯವು ಎರಡೂವರೆ ವರ್ಷಗಳಿಂದ ಮಾತ್ರ ನಡೆದದ್ದಲ್ಲ. ಅನಾದಿ ಕಾಲದಿಂದ ನಡೆದುಬಂದಿದೆ. ಇದು ಬಹು ಸಂಖ್ಯಾತರಿಂದ ಅಲ್ಪಸಂಖ್ಯಾತರ ಮೇಲೆ ಒತ್ತಾಯದಿಂದ ಹೇರಲ್ಪಟ್ಟದ್ದಲ್ಲ ಅವರ ಅಶಕ್ತ ಮತ್ತು ನಿರಪರಾಧಿ. ಬಹು ಸಂಖ್ಯಾತರ ಮೇಲೆ ಸಮರ್ಥ ಹಾಗು ಪಾಪಿ ಅಲ್ಪಸಂಖ್ಯಾತರಿಂದ ನಡಿಸಲ್ಪಟ್ಟ ಅನ್ಯಾಯವು. ಎರಡೂ ರಾಷ್ಟ್ರಗಳ ಯೋಜನೆಯನ್ನು ಮಾಡಬೇಕೆಂದರೆ ಸ್ತ್ರೀಯರ ಪ್ರಾಂತವನ್ನು ವಿಂಗಡಿಸುವದೇ ಎಲ್ಲ ರೀತಿಯಿಂದ ಸ್ವಾಭಾವಿಕ ಮಾನವೀ ಹಾಗೂ ದೈವೀ ಕಾಯಿದೆಗಳಿಂದ ವಿಚಾರ ಮಾಡಿದರೂ ಹೆಚ್ಚು ಅವಶ್ಯವಾಗಿದೆ.

ಸ್ವೀಡನ್.

●○●

ಪ್ರಜಾಪ್ರಭುತ್ವದಲ್ಲಿ ರಾರಾಜಿಸುತ್ತಿದೆ.
ನಿರುದ್ಯೋಗದ ದಾಂಧಲೆಯಿಂದ ಪಾರಾಗಿದೆ.
ಜನತೆಯಲ್ಲಿ ಸಮಾನತೆಯನ್ನು ನೆಲೆಸಿ ಶೋಭಿಸುತ್ತಿದೆ.
ಖನಿಜ ಸಂಪತ್ತಿನಿಂದ ವಿವಿಧ ರಾಷ್ಟ್ರಗಳನ್ನು ಆಕರ್ಷಿಸಿದೆ.
ಜರ್ಮನ್, ರಷ್ಯಾ ಮೊದಲಾದ ರಾಷ್ಟ್ರಗಳ ವಕ್ರದೃಷ್ಟಿಗೆ ಬಿದ್ದಿದೆ.
ಮುಂದಿನ ಸ್ಥಿತಿಯು ಕಾಲವಾಹಿನಿಯಲ್ಲಡಗಿದೆ.

ಉತ್ತರದ ಸಣ್ಣ ಪುಟ್ಟ ರಾಷ್ಟ್ರಗಳನ್ನು ಸ್ವಾಹಾಮಾಡಿ ಜರ್ಮನಿಯು ತೃಪ್ತಿಗೊಳ್ಳಲಿಲ್ಲ. ಇತ್ತಲಾಗಿ ಡೆನ್ಮಾರ್ಕ್ ಮತ್ತು ನಾರ್ವೆಗಳ ಜೀವಜೀವಾಳವಾದ ಸ್ವಾತಂತ್ರವನ್ನು ಕಸಿದುಕೊಂಡಿತು. ಇದೀಗ ಸ್ವೀಡನೂ ತನ್ನ ಅಧಃಪತನದ ದಿನಗಳನ್ನು ಲೆಕ್ಕ ಮಾಡುತ್ತಿದೆ. ಯುದ್ಧ ಗಡಿಯಲ್ಲಿ ಚಳಿಯ ಪ್ರಭಾವದಿಂದಾಗಿ ಯುದ್ಧ ಕಾರ್ಯಕಲಾಪಗಳು ಸ್ತಬ್ಧವಾಗಿದ್ದುವು. ದೇಶದ ಉದ್ದಗಲದಲ್ಲಿಯೂ ತಮ್ಮ ಪ್ರಚಾರಕಾರ್ಯವನ್ನು ನಡೆಸುತ್ತಿರುವ ರಾಜಕಾರಿಣಿಗಳು ದಿನೇ ದಿನೇ ಶಾಂತಿಯು ಸಂದೇಶವನ್ನು ಸಾರಿದರು. ಆದರೆ ಈ ಶಾಂತವಾತಾವರಣದ ಹಿನ್ನೆಲೆಯಲ್ಲಿ ಜರ್ಮನಿಯ ಸರ್ವಾಧಿಕಾರಿಯಾದ ಹಿಟ್ಲರನು ತನ್ನ ಮುಂದಿನ ದಿಗ್ವಿಜಯಯಾತ್ರೆಯ ಕಾರ್ಯಕ್ರಮವನ್ನು ರೂಪಿಸಿಕೊಂಡನು. ತಟಸ್ಥರಾಷ್ಟ್ರಗಳ ಸೋಗನ್ನು ಹಾಕಿಕೊಂಡಿರುವ ಸಣ್ಣ ರಾಷ್ಟ್ರಗಳ ವರ್ತನೆಯು ಜರ್ಮನಿಯ ಸರ್ವಾಧಿಕಾರಿಯನ್ನು ಕೆರಳಿಸಿದವು. ಆತನು ಅವುಗಳ ಸ್ವಾತಂತ್ರ್ಯಭಂಗಕ್ಕೆ ದಿನಗಳನ್ನು ಎಣಿಸುತ್ತಿದ್ದನು. ಯಾಕೆಂದರೆ ನಾರ್ವೆ ಮತ್ತು ಸ್ವೀಡನುಗಳ ಕಬ್ಬಿಣವೂ, ಅವುಗಳ ಬಂದರುಗಳ ಹಿಡಿತವೂ ಹಿಟ್ಲರನಿಗೆ ಆಗತ್ಯವಿದ್ದವು. ತಟಸ್ಥ ರಾಷ್ಟ್ರಗಳು ಬ್ರಿಟಿಷ್ ಫ್ರಾನ್ಸುಗಳ ಅಭಯ ಹಸ್ತದಡಿಯಲ್ಲಿ ಆಶ್ರಯಪಡೆದಿದ್ದರೂ ಜರ್ಮನಿಯ ಸರ್ವಾಧಿಕಾರಿಯೊಂದಾಗ ಅವರ ಎದೆ ನಡುಗದೆ ಇರುತ್ತಿರಲಿಲ್ಲ. ಕಾಲನಿರೀಕ್ಷಣೆಯಲ್ಲಿದ್ದ ಸರ್ವಾಧಿಕಾರಿಯು ಇದೀಗ ಡೆನ್ಮಾರ್ಕ್, ನಾರ್ವೆಗಳ ಮೇಲೆ ಕೈಮಾಡಿರುವನು. ಜಗತ್ತಿನ ವಿವಿಧ ಕ್ಷೇತ್ರಗಳಲ್ಲಿ ಪ್ರಚಲಿತವಾಗಿದ್ದ ನಮ್ಮ ದೃಷ್ಟಿಯು ಇದೀಗ ನಾರ್ವೆಯಲ್ಲಿ ಕೇಂದ್ರೀಕರಿಸಲ್ಪಡುವಂತಾಯಿತು. ಬ್ರಿಟಿಷರಾದರೂ ಈ ಪುಟ್ಟ ರಾಷ್ಟ್ರಗಳ ಪೋಷಕರಾಗಿ ರಣರಂಗಕ್ಕೆ ಧುಮುಕಿರುವರು. ಮಿ. ಚರ್ಚಿಲ್ಲರಂಥಾ ಬ್ರಿಟಿಷ್ ರಾಜಕಾರಣ ಮುತ್ಸದ್ಧಿಯ ಮರ್ಮಭೇದಕ ವಚನಗಳಿಂದ ಸೈನಿಕರು ಉದ್ರೇಕಗೊಂಡಿದ್ದಾರೆ. ಈ ಮಹಾಯುದ್ಧದಲ್ಲಿ ವಿಜಯವನ್ನು ಸಂಪಾದಿಸದೆ ಬಿಡೆವೆಂದು ಮುನ್ನುಗ್ಗುತ್ತಿದ್ದಾರೆ.

ವರ್ತಮಾನಕಾಲದ ವರೆಗೆ ತಟಸ್ಥ ರಾಷ್ಟ್ರಗಳೆಂದುಕೊಳ್ಳುವ ಉತ್ತರದ ಈ ಪುಟ್ಟ ಜನಾಂಗಗಳು ಪ್ರಜಾಪ್ರಭುತ್ವದಲ್ಲಿ ಬದುಕಿ ಬಾಳುತ್ತಿದ್ದುವು. ಸ್ವೀಡನ್ ಸರಕಾರವೂ ಈ ರೀತಿಯ ಒಂದು ತತ್ವವನ್ನನುಸರಿಸಿ ಮುಂದರಿಯುತಿತ್ತು. ಅನೇಕ ಸಾರೆ ಈ ಸ್ವೀಡನ್ ಸರಕಾರಕ್ಕೂ ಸೋವಿಯಟ್ ರಷ್ಯಾಕ್ಕೂ ಭಿನ್ನಭಿಪ್ರಾಯ ಬಂದು ಸ್ವೀಡನ್ ಸರಕಾರವು ರಷ್ಯಾದೊಂದಿಗೆ ಬಿಸಿಯುಸಿರುಗಳ ಎಚ್ಚರಿಕೆಗಳನ್ನು ನಿವೇದಿಸಿದ್ದುಂಟು. ಈ ಭಿನ್ನಭೇದಕ್ಕೆ ಕಾರಣವಾದರೂ ಈ ಎರಡು ಸರಕಾರಗಳು ಅನುಸರಿಸುತ್ತಿರುವ ಸರಕಾರ ವಿಧಾನಗಳೇ ಆಗಿದ್ದವು. ಕ್ರಮೇಣ ಸ್ವೀಡನಿನ ಸರಕಾರದವರು ಸಮಾಜಸುಧಾರಕರ ಅಂಕಸ್ಥಿಗೆ ಇಳಿದು ರಷ್ಯಾ ಸರಕಾರದ ರೀತಿನೀತಿಗಳನ್ನು ಖಂಡಿಸತೊಡಗಿದರು. ಸ್ವೀಡನಿನ ಈ ಸಮಾಜಸುಧಾರಕ ವಂಗಡವು ಕ್ರಮೇಣ ದೇಶದ ಮತವನ್ನು ಪ್ರದರ್ಶಿಸುವಷ್ಟು ಶಕ್ತವಾಗದ್ದರಿಂದ ಇವರು ಅಲ್ಲಿಯ ರೈತರ ಪಕ್ಷದೊಂದಿಗೆ ಸಂಧಾನಮಾಡಿಕೊಳ್ಳಬೇಕಾಯಿತು. ಈ ಒಪ್ಪಂದದ ಪ್ರಯುಕ್ತ ಸ್ವೀಡನಿನ ರೈತಾಪಿ ಜನರ ಆರ್ಥಿಕ ಹಾಗೂ ಸಾಂಸ್ಕೃತಿಕ ಮಟ್ಟವು ಕ್ಷಿಪ್ರದಲ್ಲಿಯೇ ಅಭಿವೃದ್ಧಿಗೊಂಡಿತು. ಹೀಗಾಗಿ ಇಂದು ಸ್ವೀಡನಿನಲ್ಲಿ ರೈತಾಪಿಜನರ ಹಾಗೂ ಸಮಾಜ ಸುಧಾರಕರ ಸಮ್ಮಿಶ್ರ ಸರಕಾರವು ನಡೆಯುತ್ತಿದೆ.

ಸಾಮಾಜಿಕ ಸಮಾನತೆಯನ್ನು ನೆಲೆಗೊಳಿಸುವ ದೃಷ್ಟಿಯಿಂದ ಈ ಸಮಾಜಸುಧಾರಕರು ಒಂದು ವಿಧದ ಆರ್ಥಿಕ ಸಮಾನತೆಯ ಯೋಜನೆಯನ್ನು ಮಾಡಿರುವರು. ಕೆಲವು ನೂತನ ಯೋಜನೆಗಳಿಂದ ಸ್ವೀಡನ್ ಸರಕಾರವು ತನ್ನ ಆರ್ಥಿಕ ತಳಹದಿಯನ್ನು ಭದ್ರವಾಗಿಟ್ಟುಕೊಂಡಿದೆ. ಸ್ವೀಡನಿನಲ್ಲಿ ನಿರುದ್ಯೋಗದ ಹಾವಳಿಯು ಮಾಯವಾಗಿದೆ. ಪ್ರತಿಯೊಬ್ಬನಿಗೂ ಉಚಿತ ಉದ್ಯೋಗ ಕಲ್ಪಿಸಿಕೊಡುವ ಯೋಜನೆಯು ನಡೆದಿದೆ. ಸ್ವೀಡನಿನ ಟ್ರೇಡ್ ಯೂನಿಯನಿನ ಕೆಲಸಗಾರ ಸದಸ್ಯರ ಸಂಖ್ಯೆ 9,00,000 ಆಗಿದೆ. ಇಲ್ಲಿಯ ಕೆಲಸಗಾರರೂ, ಅಧಿಕಾರಿಗಳು ಸೌಹಾರ್ದದಿಂದ ಮಾನದ ಜೀವನವನ್ನು ನಡೆಸುತ್ತಿರುವರು. ಸರಕಾರವು ಪ್ರತಿಯೊಬ್ಬ ಪ್ರಜೆಯ ಅವಶ್ಯಕವನ್ನು ಸಲ್ಲಿಸುವದರಲ್ಲಿ ಅತ್ಯಂತ ಶ್ರಮವಹಿಸಿ ಕೆಲಸ ಮಾಡುತ್ತಿದೆ.

ಅನಾದಿಯಿಂದಲೂ, ಕಬ್ಬಿಣ ಮೊದಲಾದ ಖನಿಜ ವಸ್ತುಗಳಿಗೆ ಸ್ವೀಡನು ಬಹು ಪ್ರಧಾನವಾದುದು. ಇಂದಾದರೂ ಯೂರೋಪಿನಲ್ಲಿ ಕಬ್ಬಿಣ ತಯಾರಿಗೆ ಸ್ವೀಡನು ಪ್ರಧಾನವಾಗಿದೆ. 1934 ರಲ್ಲಿ ಸ್ವೀಡನು 52,53,058 ಟನ್ನುಗಳಷ್ಟು ಕಬ್ಬಿಣವನ್ನು ರಫ್ತು ಮಾಡಿತು. 'ಪಿಗ್ ಐರನ್' ಎಂಬ ಇನ್ನೊಂದು ವಿಧದ ಕಬ್ಬಿಣವೂ ಯಥೇಚ್ಛವಾಗಿ ಇಲ್ಲಿ ಸಿಗುತ್ತದೆ. ದಿನೇ ದಿನೇ ಈ ಕೈಗಾರಿಕೆಯು ಇಲ್ಲಿ ಮೇರೆ ಮೀರಿ ಹಬ್ಬುತ್ತಿದೆ. ಕೆಲವು ವರ್ಷಗಳಿಂದ ಜಗತ್ತಿನ ರಾಷ್ಟ್ರಗಳಲ್ಲಿ ಯುದ್ಧ ಭೀತಿಯು ತುಂಬಿ ಯುದ್ಧ ತಯಾರಿಯು ಶಕ್ತಿಮೀರಿ ನಡೆಯುತ್ತಿರುವದರಿಂದ ಸ್ವೀಡನಿನ ಕಬ್ಬಿಣಕ್ಕೆ ವಿಪರೀತ ಗಿರಾಕಿಗಳು ಹೆಚ್ಚಿರುವರು. ಆದ್ದರಿಂದ ಸ್ವೀಡನ್ ಸರಕಾರವು ಈ ಕೇಳಿಕೆಗಳನ್ನು ಸಲ್ಲಿಸಲು ಈ ಕೈಗಾರಿಕೆಯನ್ನು ಇನ್ನಷ್ಟು ಬಲಪಡಿಸುತ್ತಿದೆ. ಜರ್ಮನಿ ಸರಕಾರವು ತಮಗೆ ಹೆಚ್ಚಿನ ಸರಬರಾಯಿ ಮಾಡಬೇಕೆಂದು ಅವರನ್ನು ಆಗ್ರಹಪಡಿಸುತ್ತಿದೆ. ಬ್ರಿಟನ್ನಾದರೂ ಅಷ್ಟೆ. ಬ್ರಿಟನಿನ ಕೇಳಿಕೆಯನ್ನು ಸಲ್ಲಿಸಲು ಸ್ವೀಡನು ಹೊಸ ಶೋಧನೆಗಳನ್ನು ಕೈಕೊಂಡು ಕಬ್ಬಿಣದ ರಫ್ತನ್ನು ಹೆಚ್ಚಿಸುವ ಪ್ರಯತ್ನ ಮಾಡುತ್ತಿದೆ. ಬ್ರಿಟಿಷರ ಮೇರೆ ಮೀರಿದ ಕೇಳಿಕೆಯನ್ನು ಸ್ವೀಡನ್ ಸರಕಾರವು ಸಲ್ಲಿಸಲು ಅಸಾಧ್ಯವಾದ ಕಾರಣ ಬ್ರಿಟನಿಗೆ ಕೋಪಬಂದಿದೆ. ಇದನ್ನು ತಿಳಿದ ಸ್ವೀಡನ್ ಸರಕಾರವು ಹೆಚ್ಚಿನ ಕಬ್ಬಿಣವನ್ನು ಬ್ರಿಟನಿಗೆ ಕಳುಹಿಸುವ ಯೋಜನೆ ಮಾಡಿದೆ. ಆದರೆ ಮತ್ತೊಂದೆಡೆ ಜರ್ಮನಿಯು ಯುದ್ಧವು ಮುಂದುವರಿದು ಬಾಲ್ಟಿಕ್ ಪ್ರಾಂತಗಳನ್ನು ಆವರಿಸುವದಾದರೆ ಸ್ವೀಡನು ತನ್ನ ಕಬ್ಬಿಣ ಸರಬರಾಯಿಯನ್ನು ಜರ್ಮನಿಗೇ ಮಾಡಬೇಕೆಂದು ಬಲಾತ್ಕರಿಸುತ್ತಿದೆ. ಈ ರೀತಿ ಖನಿಜಸಂಪತ್ತಿನ ಗೂಡಾದ ಸ್ವೀಡನ್ನು ರಾಜ್ಯವಿಸ್ತರಣಾತೃಷೆಯಿಂದ ಯುದ್ಧೋಪಕರಣಗಳ ಸನ್ನದ್ಧದಲ್ಲಿ ತೊಡಗಿರುವ ರಾಷ್ಟ್ರಗಳ ಕೇಳಿಕೆಯನ್ನು ಸಲ್ಲಿಸಲಾರದೆ ಅವರ ಆಗ್ರಹಕ್ಕೆ ಈಡಾಗಿದೆ.

ಇಂದಿನ ಪರಿಸ್ಥಿತಿಯಿಂದ ಸ್ವೀಡನಿನ ಸ್ಥಿತಿಯು ಭದ್ರ ತಳಹದಿಯಲ್ಲಿಲ್ಲವೆಂಬುದು ವ್ಯಕ್ತವಾಗುತ್ತದೆ. ಯುದ್ಧಾಸಕ್ತರಾಗಿ ಕಣ್ಣಿನಲ್ಲಿ ರಕ್ತವನ್ನು ತಳೆದಿರುವ ಯಾವ ರಾಷ್ಟ್ರವಾದರೂ ಸ್ವೀಡನಿನ ಅಪಾರ ಖನಿಜಸಂಪತ್ತಿನ ಮೇಲೆ ಕಣ್ಣಿಟ್ಟು ಅದರ ಮೇಲೆ ಕೈಮಾಡದಿರಲಾರದು. ಒಂದಲ್ಲ ಒಂದು ದಿನ ಸ್ವೀಡನು ಭಯಂಕರ ಯುದ್ಧವನ್ನು ಎದುರಿಸಬೇಕಾಗಿ ಬರುವದು. ರಷ್ಯಾವಾದರೂ ಸ್ವೀಡನಿನ ಮೇಲೆ ತನ್ನ ದೃಷ್ಟಿಯನ್ನಿರಿಸಿದೆ. ಕ್ರಮೇಣ ಜರ್ಮನಿಯು ಸ್ವೀಡನಿನ ಮೇಲೆ ಕೈಮಾಡಿದರೆ ರಷ್ಯಾವಾದರೂ ಪೋಲೆಂಡಿನಲ್ಲಿ ನುಗ್ಗಿ ತನಗೆ ಬೇಕಾದ ಭಾಗವನ್ನು ತೆಗೆದುಕೊಂಡು ಪೋಲೆಂಡನ್ನು ಹರಿದು ಹಂಚಿದಂತೆ ಸ್ವೀಡನಿನಲ್ಲಿಯೂ ವರ್ತಿಸದಿರದು. ಹೀಗೆ ಮಹಾ ಮಹಾ ರಾಷ್ಟ್ರಗಳು ಸ್ವೀಡನಿನ ಮೇಲೆ ತಮ್ಮ ಪಾಶವೀದೃಷ್ಟಿಯನ್ನಿಟ್ಟಿರಲಾಗಿ ಸ್ವೀಡನಿನಲ್ಲಿ ಶಾಂತಿಯೆಲ್ಲಿಂದ ಬರಬೇಕು. ಪ್ರಜಾಪ್ರಭುತ್ವ ರಾಜ್ಯಭಾರದಲ್ಲಿ ಯಾರ ಹಂಗೂ ಇಲ್ಲದೆ ಸ್ವತಂತ್ರಭಾಗ್ಯಾಕಾಶದಲ್ಲಿ ಮೆರೆದು ನಲಿವ ಸ್ವೀಡನು ತನ್ನ ಅಧಃಪತನದ ಗಂಡಾಂತರವನ್ನು ಎದುರಿಸಬೇಕಾಗಿ ಬಂದಿದೆ. ವಿಚಾರಗಳು ದಿನೇ ದಿನೇ ತೀವ್ರಗತಿಯಿಂದ ಬದಲಾಗುತ್ತಿವೆ. ಸ್ವೀಡನಿನ ಪರಿಸ್ಥಿತಿಯನ್ನು ಮುಂದೆ ನಿರೀಕ್ಷಿಸುವಾ.

ಅ. ಭಾ. ಸ್ತ್ರೀ ಸಂಘದ ಅವಶ್ಯಕತೆ.

ಆದ್ದರಿಂದ ಅಖಿಲ ಭಾರತ ಸ್ತ್ರೀಯರ ಸಂಘವೆಂಬ ಸಂಸ್ಥೆಯನ್ನು ಕೂಡಲೇ ನಿಯಮಿಸಬೇಕು. ಅಖಿಲಭಾರತವೆಂಬ ಹೆಸರು ತರ್ಕವಿರುದ್ಧ ತೋರಬಹುದು. ಆದರೆ ರಾಜನೀತಿಯಲ್ಲಿ ತರ್ಕವು ಕ್ಷುಲ್ಲಕ ಜನರು ವಿಚಾರಮಾಡತಕ್ಕಂತಹದು. ಈ ಸಂಸ್ಥೆಯು ಅನುಭವಿಕ ವೃದ್ಧಮಹಿಳೆಯ ಅಧ್ಯಕ್ಷತೆಯಲ್ಲಿ ರಚಿಸಲ್ಪಡಬೇಕು. ಪ್ರತಿಯೊಂದು ಕುಟುಂಬದಲ್ಲಿ ಅನಾದಿ ಕಾಲದಿಂದ ನಡೆದುಬಂದ ಪುರುಷರ ಕಾರ್ಯದ ಹಿಟ್ಲರಶಾಹಿಯು ಅರಿವು ಅವಳಿಗೆ ಇರಬೇಕು. ಅವಳು ಈ ಸಂಸ್ಥೆಯ ಕಾಯಮ ಅಧ್ಯಕ್ಷಳಾಗಿರಬೇಕು. ಹಾಗಾದರೆ ಅಧ್ಯಕ್ಷರು ಯಾರಾಗಬೇಕು? ಜಗತ್ಪ್ರಸಿದ್ಧ ಕವಯಿತ್ರಿ, ರಾಜನೀತಿ ನಿಪುಣಳಾದ ಸರೋಜಿನಿ ನಾಯುಡು ಅಧ್ಯಕ್ಷ ಪದಕ್ಕೆ ಚೆನ್ನಾಗಿ ಒಪ್ಪುವಳು. ಆದರೆ ಮೌಲಾನಾ ಅಬುಲಕಲಂ ಆಜಾದರಂತೆ ಅವಳು ಕಾಂಗ್ರೆಸಿನ ಅಧಿಕಾರ ಕ್ಷೇತ್ರದಲ್ಲಿ ಸೇರಿ ಅವಿಭಾಜ್ಯ ಏಕರಾಷ್ಟ್ರವೆಂದು ಹೇಳುವವರಲ್ಲಿ ಸೇರಿಕೊಂಡದ್ದರಿಂದ ತನ್ನ ಹಕ್ಕನ್ನು ಕಳೆದುಕೊಂಡಿರುವಳು. ಕಾರ್ಯದರ್ಶಿಯ ಸ್ಥಳಕ್ಕೆ ಅನೇಕ ಹೆಸರುಗಳನ್ನು ಸೂಚಿಸಬಹುದು. ಆದರೆ ನನ್ನ ಅಭಿಪ್ರಾಯ ಕೇಳಿದಲ್ಲಿ ಕಾರ್ಯಕ್ರಮ ಉತ್ಸಾಹೀ ಶ್ರೀಮಂತ ಹಾಗೂ ಉದಾರಳಾದ ಗುಜರಾಥೀ ಯುವತಿಯನ್ನು ಕಾರ್ಯದರ್ಶಿಯನ್ನಾಗಿ ಮಾಡಬೇಕು. ಅಂದರೆ ಅಧ್ಯಕ್ಷ ಕಾರ್ಯದರ್ಶಿಗಳಿಬ್ಬರೂ ಬೇಕಾದಂತಹ ಇಬ್ಬರು ಪುರುಷರಿಗೆ ಮಿಕ್ಕವರು.

ಸ್ತ್ರೀ ದಿನಾಚರಣೆ.

ಈ ಸಂಘವು ಇಡೀ ಜಗತ್ತಿನ ವಿಶಿಷ್ಟ ಸ್ತ್ರೀ ಸಂಘದ ಒಂದು ಅಂಗವಾಗಿರಬೇಕು.

ಈ ಸಂಘವನ್ನು ಪ್ರಾರಂಭಿಸುವಾಗ ಇಡೀ ಹಿಂದೂಸ್ಥಾನದಲ್ಲೆಲ್ಲ ಮೆರವಣಿಗೆಗಳನ್ನು ತೆಗೆದು ಸಭೆಗಳನ್ನು ಕೂಡಿಸಿ ಹಿಂದೂಸ್ಥಾನದ ಸ್ತ್ರೀಯರು ದಾಸ್ಯಶೃಂಖಲೆಯಿಂದ ಪಾರಾಗುವ ಹೊಸ ಯೋಜನೆಯ ಮಹತ್ವವನ್ನು ತಿಳಿಸಿ ಹೇಳಿ ಆ ಬಗ್ಗೆ ಒಂದು ದಿವಸವನ್ನು ಗೊತ್ತುಪಡಿಸಿ ಆ ದಿನವನ್ನು ಆಚರಿಸಬೇಕು. ಆದರೆ ಪಾಶವೀ ಪುರುಷರ ವಿರುದ್ಧ ಭಾಷಣ ಮಾಡದಂತೆ ಜಾಗರೂಕತೆಯನ್ನು ತೆಗೆದುಕೊಳ್ಳತಕ್ಕದ್ದು. ಯಾಕೆಂದರೆ ಅವನ ಸಂಸ್ಕೃತಿ ಹಾಗು ವ್ಯಕ್ತಿತ್ವದ ಬಗ್ಗೆ ಸ್ತ್ರೀಯರಿಗೆ ಅಭಿಮಾನವಿದೆ.

'ಕ. ವಿ.'

ಮಾರಾಟಕ್ಕಿದೆ.

ವೀರಾಜಪೇಟೆನಾಡು ಮೈತಾಡಿ ಗ್ರಾಮದ ಒಕ್ಕಲಿಗರ ನಿಂಗೇಗೌಡ್ರ ಮಗ ದೇವಣ್ಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕುಳ ನಂ. 38ರ ಸಾಗಿನ ಸ. ನ. 150/1ರ 16.70 ಎಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ತಲೆ ತೋಟದ 3. 90 ಯೆಕ್ರೆಯ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕಿತ್ತಲೆ ತೋಟದ .80 ಸೆಂಟಿನ ಪೈಕಿ 64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಎಕ್ರೆಯ ಬಾಣೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತಲೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯಸ್. ದೇವಣ್ಣ,
ಮೈತಾಡಿಗ್ರಾಮ,
ಮೂರ್ನಾಡು.

12-7

ಬ್ರಿಟಿಷ್ ಹಾಗೂ ಫ್ರಾನ್ಸಿನ ಸೈನ್ಯ ಪಡೆಗಳು ಸುರಕ್ಷಿತವಾಗಿ ನಾರ್ವೆಯನ್ನು ಸೇರಿ ಮುನ್ನುಗ್ಗುತ್ತಿವೆಯೆಂದು ಕಳೆದ ವಾರ ಬರೆಯಲಾಗಿತ್ತು. ಈ ಸೈನ್ಯಗಳು ಸ್ಟೆಂಕ್‌ಜರ್ ಎಂಬ ಪಟ್ಟಣದ ಸುತ್ತುವರಿದು ಅದನ್ನು ವಶಮಾಡಿಕೊಳ್ಳಲು ಯತ್ನಿಸಿದರು. ಆದರೆ ಜರ್ಮನರ ವಿಷಪೂರಿತ ಬಾಂಬುಗಳ ಅನಾಹುತದಿಂದ ಮಿತ್ರಪಕ್ಷದವರಿಗೆ ಮುಂದುವರೆಯುವದು ಕಷ್ಟವಾಗಿದೆ. ಅವರೂ ಮಿತ್ರರಾಷ್ಟ್ರಗಳು ಪ್ರಚಂಡವಾಗಿ ಹೋರಾಡುತ್ತಿರುವರು. ನಾಮ್‌ಸಸ್ಸಿನಲ್ಲೂ ತೀವ್ರ ಯುದ್ಧವಾಗುತ್ತಿದೆ. ದಿನೇ ದಿನೆ ಬ್ರಿಟಿಷರ ಸೈನ್ಯಸರಂಜಾಮುಗಳು ಹೆಚ್ಚು ಹೆಚ್ಚಾಗಿ ಅಲ್ಲಿ ಬಂದು ಸೇರುತ್ತಿವೆ. ಜರ್ಮನರು ತಮ್ಮ ಪ್ರಚಂಡ ಹೋರಾಟವನ್ನು ಪ್ರದರ್ಶಿಸುತ್ತಿದ್ದಾರೆ.

ಸ್ವೀಡನಿನ ಅಂದಾಜು.

ನಾರ್ವೆಯಲ್ಲಿ ನಡೆಯುತ್ತಿರುವ ಯುದ್ಧದ ವಿಚಾರದಲ್ಲಿ ಸ್ವೀಡನು ಈ ಅಭಿಪ್ರಾಯಪಡುತ್ತಿದೆ. 'ಜರ್ಮನರು ಬಹು ಜಾಣ್ಯಕ್ಷತೆಯಿಂದ ಯುದ್ಧ ನಡೆಸುತ್ತಿದ್ದಾರೆ. ಡೊಂಬಾಸ್ ಪಟ್ಟಣಕ್ಕೆ ಬ್ರಿಟಿಷರ ಸೈನ್ಯವು ಸಾಗದಂತೆ ಅದನ್ನು ತಡೆಗಟ್ಟಲು ಹಲವು ಉಪಾಯಗಳನ್ನು ಕೈಕೊಂಡಿದ್ದಾರೆ. ಬ್ರಿಟಿಷರಾದರೂ ಈ ವಿಚಾರದಲ್ಲಿ ಹೆಚ್ಚಿನ ಸಿಗವಹಿಸಿ ಅವರನ್ನು ಮುಂದೊತ್ತುವ ಹಂಚಿಕೆ ನಡೆಸಿದ್ದಾರೆ. ಕೆಲವು ಸಮಯದಲ್ಲಿ ಇಲ್ಲಿ ತೀವ್ರ ಕದನವಾಗಬಹುದಾಗಿದೆ'.

ಜರ್ಕಿನ್ ವಶವಾಯಿತು.

ಡೊಂಬಾಸ್ ಮತ್ತು ಸ್ಟೋಕಿನ್ ಪಟ್ಟಣಗಳ ಹತ್ತಿರದ ಜರ್ಕಿನ್ ಪ್ರದೇಶವನ್ನು ಬ್ರಿಟಿಷರು ಆಕ್ರಮಿಸಿಕೊಂಡಿರುವರೆಂದೂ ಜರ್ಮನ್ ಪಡೆಯು ಅಲ್ಲಿಯ ಪರ್ವತ ಶ್ರೇಣಿಯನ್ನು ದಾಟಿ ಮುಂದುವರಿಯುತ್ತಿದೆಯೆಂದೂ ಮ್ಯಾಡ್ರಿಡಿನ ಒಂದು ವರ್ತಮಾನ ತಿಳಿಸುತ್ತದೆ. ಆದೇ ವರ್ತಮಾನದಲ್ಲಿ ನಾರ್ವೆಯ ಇಂದಿನ ಸ್ಥಿತಿಯನ್ನು ಈ ರೀತಿ ವರ್ಣಿಸಿದೆ. 'ನಾರ್ವಿಕಿನಲ್ಲಿ ಯುದ್ಧವು ಯಾವ ವಿಷಯದಲ್ಲೂ ಮುಂದುವರಿದಿಲ್ಲ. ಆದರೆ ಮಿತ್ರರಾಷ್ಟ್ರಗಳು ಜರ್ಮನರ ಸೈನ್ಯ ಪಡೆಯು ಒಂದುಗೂಡದಂತೆ ಚದರಿಸುತ್ತಿರುವರು. ಸ್ಟೆಂಕ್‌ಜರ್‌ನಲ್ಲಿ ಎರಡು ಕಡೆಯವರೂ ಬೇಹುಗಾರರನ್ನು ಕಳುಹಿಸಿ ತಮ್ಮ ವಿರೋಧಿಗಳ ಗೂಢವನ್ನು ಅರಿತು ಕೊಳ್ಳುತ್ತಿರುವರು. ದಕ್ಷಿಣದಲ್ಲಿ ಬ್ರಿಟಿಷ್ ಮತ್ತು ನಾರ್ವೆಯ ಸೈನ್ಯಗಳು ಕ್ವಾನ್ ಎಂಬಲ್ಲಿಯ ಶತ್ರುವಿನ ಪ್ರಚಂಡ ಧಾಳಿಯನ್ನು ತಡೆದು ನಿಲ್ಲಿಸಿವೆ. ಜರ್ಮನರ ಭಯಂಕರ ಗುಂಡಿನ ಮಳೆಯನ್ನು ಎದುರಿಸಿ ವೀರಾವೇಶದಿಂದ ಈ ಸೈನ್ಯಗಳು ಹೋರಾಡುತ್ತಿವೆ.'

ಬ್ರಿಟಿಷರ ಹೇಳಿಕೆ.

'ಜರ್ಮನರು ನಮ್ಮ ಮೇಲೆ ಗುಡ್‌ಬ್ರಾನ್ಸ್ ಡೇಲನ್ ಎಂಬಲ್ಲಿ ಮಾಡಿದ ಧಾಳಿಯನ್ನು ನಾವು ಯಶಸ್ವಿಯಾಗಿ ಎದುರಿಸಿ ಅವರನ್ನು ಹಿಮ್ಮೆಟ್ಟಿಸಿರುವೆವು. ನಮ್ಮ ಪಹಿವಾಟಿನ ಮಾರ್ಗಗಳ ಮೇಲೂ ಮತ್ತು ಎಂಡೋಲ್ಸ್‌ನಾಸ್ ಎಂಬ ಪಟ್ಟಣ ಮೇಲೂ ಅವರು ಮಾಡಿದ ವಿಮಾನಧಾಳಿ ಫಲಕಾರಿಯಾಗಲಿಲ್ಲ. ನಾರ್ವಿಕ್‌ನಲ್ಲಿ ವಿಮಾನಧಾಳಿಯು ನಡೆಯಿತು. ಆದರೆ ಇದರಿಂದ ನಮ್ಮ ಸಿದ್ಧತೆಗೆ ಏನೂ ಧಕ್ಕೆ ಬಂದಿರುವದಿಲ್ಲ. ನಾಮ್‌ಸಸ್ಸಿನ ಆವರಣದಿಂದ ಹೆಚ್ಚಿನ ವಿಚಾರಗಳು ತಿಳಿದುಬಂದಿಲ್ಲ.'

ಯುದ್ಧ ವಾರ್ತೆ.

ಜರ್ಮನಿ ಮುನ್ನುಗ್ಗುತ್ತಿದೆ.

ಅಲ್ಲಲ್ಲಿ ನಾಗರೀಕರ ವಧೆ.

ಪೆಟ್ರೋಲಿಗಾಗಿ ವಿಚಿತ್ರ ಬಾಯಿದೆ.

ಜರ್ಮನರಿಗೆ ತಡೆ

'ನಾರ್ವೆಯ ಪೂರ್ವಭಾಗದಲ್ಲಿ ಯುದ್ಧವು ನಡೆಯುತ್ತಿದೆ. ಜರ್ಮನರ ಮುನ್ನಡೆಗೆ ಅಲ್ಲಿ ಪೂರಾ ತಡೆಯಾಗಿದೆ. ಓಸ್ಟ್ರೆಡಲ್ ಎಂಬಲ್ಲಿದ್ದ ಜರ್ಮನರ ಸೈನ್ಯವು ರೋರಸನ್ನು ತಲುಪಿದೆ. ನಮ್ಮ ಸೈನ್ಯವು ಜರ್ಮನರು ಮುಂದೆ ಹೋಗದಂತೆ ತಡೆದು ಹಿಡಿದಿದೆ. ನಾರ್ವಿಕ್ ಜಿಲ್ಲೆಯಲ್ಲಿ ಜರ್ಮನರ ಅನೇಕ ವಿಮಾನಗಳು ಬ್ರಿಟಿಷರಿಂದ ನಾಶಮಾಡಲ್ಪಟ್ಟವು.' ಎಂದು ನಾರ್ವೆ ಸರ್ಕಾರವು ಒಂದು ಪ್ರಕಟಣೆ ಹೊರಡಿಸಿದೆ.

ವಾಸ್ ಕರಗತವಾಯಿತು.

ಬರ್ಗೆನ್ ಪಟ್ಟಣದಿಂದ ನಲುವತ್ತು ಮೈಲುಗಳ ದೂರದಲ್ಲಿರುವ ವಾಸ್ ಎಂಬ ಪಟ್ಟಣವು ಜರ್ಮನರ ವಶವಾಗಿದೆಯೆಂದು ನಾರ್ವೆಯವರು ಒಪ್ಪುತ್ತಾರೆ. ಜರ್ಮನರ ವಿಮಾನಪಡೆಗಳು ರೈಲ್ವೆ ಲೈನುಗಳ ಮೇಲೆ ಬಾಂಬುಗಳನ್ನು ಹಾಕಿ ವಹಿವಾಟಿಗೆ ಪೂರಾ ತೊಂದರೆ ಮಾಡಿರುವರು. ಈ ಸಂದರ್ಭದಲ್ಲಿ ಜರ್ಮನರ ಒಂದು ವಿಮಾನವನ್ನು ಗುಂಡಿಸಿಂದ ಕೆಳಗುರುಳಿಸಿದರೆಂದು ಬ್ರಿಟಿಷರ ಹೇಳಿಕೆ.

ಬ್ರಿಟಿಷ್ ಸಹಾಯ ಪಥಕ.

ಯುದ್ಧದಲ್ಲಿ ಗಾಯಗೊಂಡವರ ಹಾಗೂ ನಿರಾಶ್ರಿತರ ಸಹಾಯಕ್ಕಾಗಿ ಇದೀಗ ಇಂಗ್ಲೆಂಡಿನಿಂದ ಒಂದು ಸಹಾಯ ಪಥಕವು ನಾರ್ವೆಗೆ ಹೊರಟಿದೆ.

ಜರ್ಮನರ ಘೋಷಣೆ.

'ನಾರ್ವೆಯಲ್ಲಿ ನಮ್ಮ ಸೈನ್ಯವು ಮುಂದರಿಯುತ್ತಿದೆ. ನಮ್ಮನ್ನೆದುರಿಸಿದ ಶತ್ರು ಸೈನ್ಯಗಳನ್ನು ಚದುರಿಸಿ ಓಡಿಸಿರುವೆವು. ಬರ್ಗೆನಿನ ಪೂರ್ವದಲ್ಲಿರುವ ವಾಸ್ ಪಟ್ಟಣವನ್ನೂ ವಶಮಾಡಿಕೊಂಡಿರುವದಲ್ಲದೆ 241 ಸೈನ್ಯಾಧಿಕಾರಿಗಳನ್ನೂ, 2921 ಸೈನಿಕರನ್ನೂ ಸೆರೆ ಹಿಡಿದಿರುವೆವು. ಬ್ರಿಟಿಷರ ನಾಲ್ಕು ವಹಿವಾಟಿನ ಹಡಗುಗಳನ್ನು ಮುಳುಗಿಸಿರುವದಲ್ಲದೆ ನಾಲ್ಕಕ್ಕೆ ವಿಪರೀತ ಜಖಂ ಮಾಡಲಾಗಿದೆ'. ಇದೀಗ ಜರ್ಮನರ ಹೇಳಿಕೆ.

ಮುನ್ನಡೆಗೆ ತಡೆ.

ಓಸ್ಲೊ ಪಟ್ಟಣವನ್ನು ವಶಪಡಿಸಿಕೊಂ**ಡು ಅಲ್ಲಿಂದ ಬರ್ಗೆನ್ ಮಾರ್ಗವಾಗಿ ಮುಂದರಿಯುತ್ತಿದ್ದ ಜರ್ಮನರನ್ನು ನಾರ್ವೆ ಸೈನ್ಯಗಳು ಸಂಧಿಸಿ ತಡೆಗಟ್ಟಿದ್ದಾರೆ. ಜರ್ಮನರ ಈ ಸೈನ್ಯವು ಓಸ್ಲೋದಿಂದ 85** ಮೈಲು ದೂರದಲ್ಲಿದೆ. ಅದೇ ಮಾರ್ಗವಾಗಿ ಈಗ ವಾಸ್ ಪಟ್ಟಣವನ್ನು ಹಿಡಿದುಕೊಂಡ ಜರ್ಮನ್ ಸೇನೆಯು ಮುಂದರಿಯುತ್ತಿದೆ. ನಾರ್ವೆ ಸೈನ್ಯದಿಂದ ಎದುರಿಸಲ್ಪಟ್ಟ ಜರ್ಮನ್ ಸೈನ್ಯವನ್ನು ಅವರು ಮುರಿದೊತ್ತಿ ನುಗ್ಗಿದರೆ ಅವರಿಗೆ ಮಂಜು ಮುಸುಕಿರುವ ಪರ್ವತ ಶ್ರೇಣಿಗಳನ್ನು ದಾಟಿ ಮುಂದರಿಯಬೇಕಾಗುವದು. ಎರಡು ಮಾರ್ಗಗಳನ್ನು ಬಿಟ್ಟು ಸ್ವೀಡನಿಗೆ ಹೋಗುವ ಎಲ್ಲಾ ಮಾರ್ಗಗಳೂ ಜರ್ಮನರ ಕೈವಶದಲ್ಲಿರುವದಾಗಿ ತಿಳಿದು ಬಂದಿದೆ.

ಪೆಟ್ರೋಲ್ ಅಭಾವ.

ಜರ್ಮನಿಯಲ್ಲಿ ಪೆಟ್ರೋಲಿನ ಅಭಾವವು ಉಂಟಾಗುವದೆಂಬ ಹೆದರಿಕೆಯಿಂದ ಈ ರೀತಿ ಒಂದು ಪ್ರಕಟಣೆ ಹೊರಡಿಸಲಾಗಿದೆ. 'ಯಾವನೊಬ್ಬನೂ ಸ್ವಂತ ಕಾರುಗಳನ್ನು ಅತ್ಯವಶ್ಯ ಸಂದರ್ಭಗಳಲ್ಲಲ್ಲದೆ ಉಪಯೋಗಿಸಕೂಡದು. ಲಾರಿಗಳಲ್ಲಿ ಕಂಡಾಬಟ್ಟೆ ಸಾಮಾನು ಹೇರಬಾರದು. ನಿರ್ದಿಷ್ಟವಾಗಿ ಇಷ್ಟೇ ಸಾಗಬೇಕೆಂಬ ನಿಯಮವು ಕೆಲವು ಮಾಡಲ್ಪಟ್ಟಿದೆ.'

ವಿಮಾನ ಯುದ್ಧ.

ಆಲ್‌ಸಂಡ್ ಎಂಬಲ್ಲಿ ನಾರ್ವೆ ಯುದ್ಧ ಮಾಡುವ ಮತ್ತು ಮೀನು ಹಿಡಿಯುವ ಹಡಗುಗಳ ಮೇಲೆ ಜರ್ಮನರ ವಿಮಾನಗಳು ಗುಂಡು ಹಾಗೂ ಬಾಂಬು ಹಾಕಿದರು ನಾರ್ವೆಯವರಿಗೆ ಒಂದು ಹಡಗ ನಷ್ಟವಾಗಿದೆ.

ನಾಗರೀಕರ ಮೇಲೆ ಧಾಳಿ.

ಜರ್ಮನರು ನಿರಾಶ್ರಿತ ನಾಗರೀಕರ ಹಾಗೂ ಹೆಂಗಸು ಮಕ್ಕಳ ಮೇಲೆ ಬಾಂಬುಗಳನ್ನು ಹಾಕುತ್ತಿರುವರೆಂದೂ ಇದರಿಂದ ಅನೇಕರು ಹತರಾಗಿರುವರೆಂದೂ ನಾರ್ವೆ ಸರ್ಕಾರದ ಪ್ರಕಟಣೆ.

ಇಂಡಿಯಾ ಸೈನಿಕರಿಲ್ಲ.

ಬ್ರಿಟಿಷರು ನಾರ್ವೆಯಲ್ಲಿ ಇಂಡಿಯಾದ ಸೈನಿಕರನ್ನು ಉಪಯೋಗಿಸುತ್ತಿರುವರೆಂದು ಜರ್ಮನಿಯವರು ಸಾರಿದ್ದರು. ಇದಕ್ಕೆ ಉತ್ತರವಾಗಿ ಬ್ರಿಟಿಷರು ನಾರ್ವೆಯಲ್ಲಿಯ ಕದನಕ್ಕೆ ಯಾವ ಇಂಡಿಯಾ ಸೈನ್ಯಪಡೆಯನ್ನೂ ಕಳುಹಿಸಿಲ್ಲವೆಂದು ಹೇಳಿರುವರು.

ಫ್ರೆಂಚ್ ಸೈನ್ಯ.

ಫ್ರೊಸ್‌ಗೆಸ್ ಎಂಬಲ್ಲಿ ಜರ್ಮನರು **ಮಾಡಿದ ಧಾಳಿಯನ್ನು ಫ್ರಾನ್ಸ್ ಸೈನಿಕರು ಯಾವುದೊಂದೂ ತೊಂದರೆಯಿಲ್ಲದೆ ಯಶಸ್ವಿಯಾಗಿ ಮುರಿದೊತ್ತಿದರೆಂದೂ, ಜರ್ಮನರಿಗೆ ಈ ಯುದ್ಧದಲ್ಲಿ ಸ್ವಲ್ಪ ನಷ್ಟವಾಗಿದೆಯೆಂದೂ ಫ್ರೆಂಚರ ಹೇಳಿಕೆ.**

ರೊಮೇನಿಯಾದಲ್ಲಿ ಪ್ರಚಾರ.

ಜರ್ಮನರು ಮಿತ್ರ ರಾಷ್ಟ್ರಗಳ ಕುರಿತು ರೋಮೇನಿಯಾದಲ್ಲಿ ಅಸಾಧ್ಯ ಪ್ರಚಾರವನ್ನು ಕೈಕೊಂಡಿರುವರು. ಮಿತ್ರರಾಷ್ಟ್ರಗಳ ವಿಚಾರ ಪ್ರಚಾರ ಮಾಡಿ ರೊಮೇನಿಯಾದಲ್ಲಿ ಅವರ ಬಗ್ಗೆ ಅಸ್ವಷ್ಟಭಾವನೆಯನ್ನು ಹುಟ್ಟಿಸುವದೇ ಪ್ರಚಾರದ ಗುಟ್ಟು.

NOTICE.

INCOME-TAX.

Return of total world income of the previous year (1939-40) for assessment in the year commencing on the **1st April 1940**.

In pursuance of Sub-section (1) of Section 22 of the Indian Income-tax Act XI of 1922, as applied to Coorg Province, M. S. Venkateswara Iyer, Income-tax Officer, Coorg Mercara, hereby gives notice to every person subject to his jurisdiction whose total world income during the previous year exceeded the maximum amount not chargeable to income-tax, to furnish to him within sixty days from the date of this notice a return in the prescribed form and verified in the prescribed manner (along with such other particulars as are required by the said form) the total income and the total world income of such person during that year.

A copy of the prescribed form will be supplied free of charge to any person, who for the purpose of complying with this notice, applies at the office of the Income-tax Officer, Coorg, Mercara.

PENALTY:—Any person who fails without reasonable cause to furnish the return required by this notice or cause it to be furnished within the time allowed, is liable under Section 28 of the said Act to penalty not exceeding one and half times any tax payable by him.

M. S. VENKATESWARA IYER,
Income-tax Officer,
Coorg, Mercara.
Dated 29th April 1940.

ಕೊಡಗು

ಮೇ ತಾರೀಕು ೩ ನೇ ಶುಕ್ರವಾರ ೧೯೪೦.

ಸ್ವತಂತ್ರ ಪಕ್ಷದ ಮುಸ್ಲಿಮರ ಅಭಿಪ್ರಾಯ.

ಇಷ್ಟರ ವರೆಗೆ ಮುಸ್ಲಿಂ ಲೀಗ್ ಸಂಸ್ಥೆಯೇ ಮುಸಲ್ಮಾನರ ಪ್ರತಿನಿಧಿ ಸಂಸ್ಥೆಯೆಂದೂ, ಅದಕ್ಕೆ ಕಾಂಗ್ರೆಸ್ ಮಹಾಸಭೆಯು ಸರಿಸಮಾನವಾದ ಹಕ್ಕು ಕೊಡಬೇಕೆಂದೂ ಆ ಸಂಸ್ಥೆಯ ಅಧ್ಯಕ್ಷರಾದ ಜಿನ್ನಾರವರ ಕೇಳಿಕೆಯಾಗಿತ್ತು. ಆದರೆ ಲೀಗಿಗೆ ಸೇರದಿರುವ ಮುಸಲ್ಮಾನರು ಹಲವರಿರುವರೆಂದೂ, ಆ ಕಾರಣ ಮುಸಲ್ಮಾನರ ಏಕ ಮಾತ್ರ ಪ್ರತಿನಿಧಿ ಸಂಸ್ಥೆಯು ಲೀಗು ಅಲ್ಲವೆಂದೂ ಕಳೆದ ತಾರೀಕು 27 ರಿಂದ 30ರ ವರೆಗೆ ಡೆಲ್ಲಿಯಲ್ಲಿ ನಡೆದ ಅಝಾದ್ ಮುಸ್ಲಿಮರ ಅಥವ ಸ್ವತಂತ್ರ ಪಕ್ಷದ ಮುಸ್ಲಿಮರ ಪರಿಷತ್ತಿನಿಂದ ಸಿದ್ಧವ ಮಾಡಲ್ಪಟ್ಟಿದೆ. ಸಿಂಧ್ ಪ್ರಾಂತದ ಮಾಜಿ ಮುಖ್ಯ ಮಂತ್ರಿಯಾದ ಖಾನ್ ಬಹದೂರ್ ಅಲ್ಲಾಬಕ್ಷರ ಅಧ್ಯಕ್ಷತೆಯಲ್ಲಿ ನಡೆದ ಈ ಪರಿಷತ್ತು ಸ್ವತಂತ್ರವಾದಿ ಮುಸಲ್ಮಾನರ ಪ್ರಥಮ ಮಹಾಸಭೆಯಾದರೂ ಹಿಂದೂದೇಶದ ಎಲ್ಲಾ ಭಾಗಗಳ ಮುಸಲ್ಮಾನ ಪ್ರತಿನಿಧಿಗಳಿಂದ ಕೂಡಿದ್ದಾಗಿದ್ದು ಜಯಪ್ರದವಾಗಿ ನಡೆಯಿತು. ಈ ಮಹಾಸಭೆಯಲ್ಲಿ ಹಿಂದೂಸ್ಥಾನದ ಗುರಿಯು ಸಂಪೂರ್ಣ ಸ್ವಾತಂತ್ರ್ಯವಾಗಿರಬೇಕೆಂದೂ, ಅದನ್ನು ಸಾಧಿಸಲು ಮುಸಲ್ಮಾನರು ಸರ್ವತ್ರ ಸಿದ್ಧರಿರುವರೆಂದೂ, ಮುಸ್ಲಿಂಲೀಗಿನವರು ಹಿಂದೂಸ್ಥಾನವನ್ನು ಮುಸ್ಲಿಂ ಮತ್ತು ಹಿಂದೂಭಾಗಗಳೆಂದು ವಿಂಗಡಿಸಬೇಕೆಂದು ಮಾಡಿರುವ ತೀರ್ಮಾನವನ್ನು ಪೂರ್ತಿ ವಿರೋಧಿಸುತ್ತೇವೆಂದೂ, ಮತ್ತು ಮುಸಲ್ಮಾನರ ಹಕ್ಕು ಬಾಧ್ಯತೆಗಳನ್ನು ಸ್ಥಾಪಿಸಲು ಒಂದು ಕಮಿಟಿಯನ್ನು ನೇಮಿಸಬೇಕೆಂದೂ ಮಾಡಿದ ತೀರ್ಮಾನಗಳು ಈ ಪರಿಷತ್ತಿನ ಗೊತ್ತುವಳಿಗಳಲ್ಲಿ ಪ್ರಮುಖ್ಯವಾದುವು.

ಹಿಂದೂಸ್ಥಾನದ ಸ್ವಾತಂತ್ರ್ಯ ಹೋರಾಟದ ಈ ಬಿಕ್ಕಟ್ಟಿನ ಸಮಯದಲ್ಲಿ ಮುಸ್ಲಿಂ ಲೀಗಿನವರು ಭಾರತ ಮಾತೆಯ ಗುಲಾಮಗಿರಿಯನ್ನು ಹೋಗಲಾಡಿಸುವ ಪ್ರಯತ್ನಕ್ಕೆ ಸಹಾಯವನ್ನೀಯುವದರ ಬದಲು ಹಿಂದೂಸ್ಥಾನವನ್ನು ಎರಡು ಭಾಗಗಳಾಗಿ ವಿಂಗಡಿಸಬೇಕೆಂದು ಮಾಡಿದ 'ಪಾಕಿಸ್ಥಾನ' ರಚನೆಯು ಹಿಂದೂದೇಶದ ಒಗ್ಗಟ್ಟಿಗೆ ತುಂಬಾ ಹಾನಿಯನ್ನು ತರುವಂಥಾದ್ದಾಗಿದೆಯೆಂಬುದರಲ್ಲಿ ಸಂಶಯವಿಲ್ಲ. **ಮುಸಲ್ಮಾನರೆಲ್ಲರೂ ಈ ತೀರ್ಮಾನಕ್ಕೆ ಒಪ್ಪಿರುವರೆಂಬ ತಪ್ಪು ಭಾವನೆಯು ಬ್ರಿಟಿಷರಲ್ಲಿಯೂ, ಇನ್ನಿತರರಲ್ಲಿಯೂ ಹರಡಿತ್ತು. ಅವರ ಈ ತಪ್ಪು ತಿಳುವಳಿಕೆಯನ್ನು ಮುಸ್ಲಿಂ ಸ್ವತಂತ್ರ ಪಕ್ಷದ ಈ ಮಹಾಸಭೆಯು ಸಂಪೂರ್ಣ ಹೋಗಲಾಡಿಸಿದೆ. ಹಲವು ವರ್ಷಗಳಿಂದ ಹಿಂದೂ-ಮುಸಲ್ಮಾನರು** ಈ ದೇಶದಲ್ಲಿ ಸಹೋದರರಂತೆ ಜೀವಿಸುತ್ತಾ ಬಂದಿರುವರು. ಇನ್ನು ಮುಂದಕ್ಕೂ ಹಾಗೆ ಜೀವಿಸಿದರೇನೆ ಹಿಂದೂಸ್ಥಾನದಲ್ಲಿ ಶಾಂತಿಸ್ಥಾಪನೆಯಾಗುವದು. ಇಲ್ಲವಾದರೆ ಉಭಯ ಕಡೆಯವರಿಗೂ ಭಯಂಕರವಾದ ಕಷ್ಟ ಪರಂಪರೆಗಳು ಉಂಟಾಗದಿರವು. 'ಪಾಕಿಸ್ಥಾನ'ದ ಏರ್ಪಾಡಿನಲ್ಲಿ ಹಿಂದೂ ಪ್ರಾಂತಗಳಲ್ಲಿರುವ ಕಮ್ಮಿ ಸಂಖ್ಯೆಯ ಮುಸಲ್ಮಾನರು ತಮ್ಮ ಸ್ಥಳವನ್ನು ಬಿಟ್ಟು ಸಮೀಪದ ಮುಸಲ್ಮಾನ ಪ್ರಾಂತಕ್ಕೂ ಹಾಗೆಯೇ ಮುಸಲ್ಮಾನ ಪ್ರಾಂತದಲ್ಲಿರುವ ಹಿಂದುಗಳು ಪಕ್ಕದ ಹಿಂದೂ ಪ್ರಾಂತಕ್ಕೂ ಹೋಗಬೇಕೆಂದಿತ್ತು. ಆದರೆ ಈ ಅಭಿಪ್ರಾಯವು ಹಲವು ಮುಸಲ್ಮಾನರಿಗೆ ಒಪ್ಪಿಗೆಯಾಗಿರುವದಿಲ್ಲ. ಹೀಗೆ ಮಾಡದಿದ್ದರೆ ಕೆಲವು ಪ್ರಾಂತಗಳಲ್ಲಿ ಮುಸಲ್ಮಾನರ ಅಲ್ಪ ಪಕ್ಷದ ಸಮಸ್ಯೆಯು ಮುಂದಕ್ಕೂ ಇದ್ದೇ ಇರುವದು. ಅಂದ ಮೇಲೆ 'ಪಾಕಿಸ್ಥಾನ' ರಚನೆಯ ಉದ್ದೇಶವು ಅಂದರೆ ಮುಸಲ್ಮಾನ ಅಲ್ಪ ಪಕ್ಷದವರ ಸಮಸ್ಯೆಯು ಬಿಡಿಸಲ್ಪಟ್ಟಂತಾಗುವದಿಲ್ಲ. ಬಹುಶಃ ಈ ಅಸಾಧ್ಯವಾದ ಯೋಜನೆಯಿಂದ ಹಿಂದೂಸ್ಥಾನದ ಒಗ್ಗಟ್ಟಿಗೂ, ಅಭಿವೃದ್ಧಿಗೂ ಮಾತ್ರವಲ್ಲ; ಮುಸಲ್ಮಾನರ ಹಿತಕ್ಕೂ ಕೂಡ ಅಪಾಯ ಉಂಟಾಗುವದೆಂದು ಈ ಮಹಾಸಭೆಯು ಘಂಟಾಘೋಷವಾಗಿ ಸಾರಿದೆ

ಮುಸಲ್ಮಾನರ ಹಿತವನ್ನೂ, ಏಳಿಗೆಯನ್ನೂ ಸಾಧಿಸಬೇಕಾದರೆ ಅದು ಸ್ವಾತಂತ್ರ್ಯವಾದ, ಹಿಂದೂ ಮುಸ್ಲಿಮರ ಐಕ್ಯತೆಯಿರುವ ಹಿಂದೂಸ್ಥಾನದಲ್ಲಿ ಸಾಧ್ಯವಲ್ಲದೆ ಬೇರೆ ಅಲ್ಲ. ಈ ದೃಷ್ಟಿಯಿಂದ ಮುಸಲ್ಮಾನರು ಮುಂದೆ ಬರುವ ಸ್ವಾತಂತ್ರ್ಯ ಹೋರಾಟದಲ್ಲಿ ಹಿಂದುಗಳೊಂದಿಗೆ ಭುಜಕ್ಕೆ ಭುಜ ಕೊಟ್ಟು ಹೋರಾಡಲು ಸಿದ್ಧರಿದ್ದೇವೆಂದು ಅಝಾದ್ ಮುಸ್ಲಿಂ ಪರಿಷತ್ತು ನಿಶ್ಚಯಿಸಿದ್ದು ಯೋಗ್ಯವಾಗಿದೆ. ಸ್ವತಂತ್ರ ಪ್ರಿಯರು ಹಿಂದುಗಳೇ ಆಗಲೀ, ಮುಸಲ್ಮಾನರೇ ಆಗಲೀ ಕಳೆದ ಸತ್ಯಾಗ್ರಹ ಸಮಯದಲ್ಲಿ ಹೇಗೆ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ ಹೋರಾಟಕ್ಕೆ ಧುಮುಕಿದರೋ ಹಾಗೆಯೇ ಮುಂದಕ್ಕೂ ಮಾಡುವರೆಂಬುದನ್ನು ಯಾರೂ ಮರೆಯಬಾರದು. ಆದರೆ ಮುಸಲ್ಮಾನರು ಸ್ವಾತಂತ್ರ್ಯ ಹಿಂದೂಸ್ಥಾನದಲ್ಲಿ ತಮ್ಮ ಕೋರುವ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಳ್ಳಲು ತಕ್ಕ ಏರ್ಪಾಡುಗಳನ್ನು ಮಾಡಬಾರದೆಂದು ಯಾರೂ ಹೇಳಲಾರರು. **ಮುಸಲ್ಮಾನರಂತೆಯೇ ಇನ್ನಿತರ ಅಲ್ಪ ಸಂಖ್ಯಾತರ ಹಿತವನ್ನು ಕಾಪಾಡಲು ತಕ್ಕ ಭದ್ರತೆಗಳನ್ನೀಯಲು ಕಾಂಗ್ರೆಸ್ ಸಂಸ್ಥೆಯು ಒಪ್ಪಿದೆ. ಆದರೆ ಇಷ್ಟರ ವರೆಗೆ ಮುಸಲ್ಮಾನರ ಕೋರಿಕೆಗಳು ಒ**ಗ್ಗಟ್ಟಾಗಿ ಕಾಂಗ್ರೆಸಿನ ಮುಂದಿಡುವ ಪ್ರಯತ್ನಗಳು ನಡೆಯಲಿಲ್ಲ. ಮುಸ್ಲಿಂಲೀಗಿನ ಮುಂದಾಳಾದ ಜಿನ್ನರವರೊಂದಿಗೆ ಕಾಂಗ್ರೆಸ್ ಮುಂದಾಳುಗಳು ಹಲವು ಬಾರಿ ಸಂಧಾನ ನಡೆಸಿದರೂ ಸಫಲವಾಗಲಿಲ್ಲ. ಲೀಗನ್ನು ಮುಸ್ಲಿಮರೆಲ್ಲರ ಪ್ರತಿನಿಧಿ ಸಂಸ್ಥೆಯೆಂದು ಒಪ್ಪಿಕೊಂಡು ಅದಕ್ಕೆ ಕಾಂಗ್ರೆಸಿನೊಂದಿಗೆ ಸರಿಸಮಾನತೆಯನ್ನು ಕೊಡದ ವಿನಹ ಯಾವ ತೀರ್ಮಾನಕ್ಕೂ ಸಾಧ್ಯವಿಲ್ಲವೆಂದು ಜಿನ್ನಾರವರ ಹೇಳಿಕೆಯಾಗಿದೆ. ಆದರೆ ಲೀಗಿಗೆ ಸೇರದ ಇತರ ಮುಸಲ್ಮಾನರು ಹಲವರಿರುವದರಿಂದ ಲೀಗನ್ನು ಮಾತ್ರ ಮುಸಲ್ಮಾನರ ಪ್ರತಿನಿಧಿ ಸಂಸ್ಥೆಯೆಂದು ಒಪ್ಪಿಕೊಳ್ಳಲಿಕ್ಕಾಗುವದಿಲ್ಲವೆಂದೂ, ಹಾಗೆ ಸರಿಸಮಾನತೆಯನ್ನು ಕೊಟ್ಟು ಒಪ್ಪಿಕೊಂಡದ್ದಾದರೆ ಕಾಂಗ್ರೆಸ್ ಸಂಸ್ಥೆಯು ಹಿಂದುಗಳ ಒಂದು ಕೋಮುವಾರು ಸಂಸ್ಥೆಯಾಗಿ ಎಣಿಸಲ್ಪಡುವದೆಂದೂ ಕಾಂಗ್ರೆಸಿನವರ ವಾದವಾಗಿದೆ. ಕಾಂಗ್ರೆಸ್ ಸಂಸ್ಥೆಯು ಕೋಮುವಾರು ಸಂಸ್ಥೆಯಾಗಿರದೆ, ಎಲ್ಲಾ ಮತಸ್ಥರಿಗೂ ಸರಿಸಮಾನತೆಯಿಂದ ಸೇರುವ ಹಿಂದೂಸ್ಥಾನದ ಏಕಮಾತ್ರ ರಾಜಕೀಯ ಸಂಸ್ಥೆಯೆಂಬುದು ಸರ್ವವಿದಿತವಾದ ವಿಚಾರವಾಗಿದೆ. ಜಿನ್ನಾರವರ ಈ ಹಠದಿಂದಲೇ ಇಷ್ಟರ ವರೆಗೆ ಹಿಂದೂ ಮುಸಲ್ಮಾನರ ಒಗ್ಗಟ್ಟಿನ ಸಮಸ್ಯೆಯು ಬಗ್ಗೆಹರಿಯದೆ ನಿಂತಿರುವದಾಗಿದೆ. ಆದ ಕಾರಣ ಸ್ವತಂತ್ರ ಪಕ್ಷದ ಮುಸಲ್ಮಾನರ ತೀರ್ಮಾನದಂತೆ ಮುಸಲ್ಮಾನರ ಹಕ್ಕು ಬಾಧ್ಯತೆಗಳನ್ನು ನಿಶ್ಚಯಿಸಲು ಒಂದು ಸಮಿತಿಯನ್ನು ಏರ್ಪಡಿಸಿರುವದು ಶುಭ ಚಿಹ್ನೆಯಾಗಿದೆ. ಈ ಸಮಿತಿಯವರು ತಮ್ಮ ಸೂಚನೆಗಳನ್ನು ಕಾಂಗ್ರೆಸ್ ಸಭೆಯ ಮುಂದಿಟ್ಟು ಈ ವಿಚಾರದಲ್ಲಿ ಒಂದು ಒಪ್ಪಂದಕ್ಕೆ ಬರುವಂಥಾ ಪ್ರಯತ್ನವನ್ನು ಮಾಡಿದರೆ ಹಿಂದೂ ಮುಸಲ್ಮಾನರ ಒಗ್ಗಟ್ಟಿಗೆ ತುಂಬಾ ಸಹಾಯವಾಗುವದೆಂಬುದರಲ್ಲಿ ಸಂದೇಹವಿಲ್ಲ.

ಹಿಂದೂಸ್ಥಾನವನ್ನು ಒಡೆಯಬೇಕೆಂಬ ತೀರ್ಮಾನದಿಂದಲೇ ಮುಸ್ಲಿಂ ಲೀಗಿನ ಶಕ್ತಿಯೂ, ಪ್ರಭಾವವೂ ದಿನೇ ದಿನೇ ಕಡಿಮೆಯಾಗುತ್ತಾ ಬರುತ್ತಿದೆ. ಈ ತರದ ಪ್ರಚಾರದಿಂದ ಭಾರತಭೂಮಿಯ ಒಗ್ಗಟ್ಟಿಗೂ, ಹಿತಕ್ಕೂ ಅಪಾರವಾದ ಕೆಡುಕುಂಟಾಗುವಂಥಾ ಈ ಸಮಯದಲ್ಲಿ ಸ್ವತಂತ್ರವಾದಿ ಮುಸಲ್ಮಾನರ ಮುಖಂಡರು ಒಂದುಗೂಡಿ ಹಿಂದೂ ಮುಸಲ್ಮಾನರ ಒಗ್ಗಟ್ಟನ್ನು ಸಾಧಿಸಿ **ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವನ್ನು ಕೊಡಲು ನಿಶ್ಚಯಿಸಿದ್ದು ಭಾರತದ ಭಾಗ್ಯವೆಂದೇ ಭಾವಿಸಬೇಕಿದೆ. ಈ ಮಹಾಸಭೆಯ ಉದ್ದೇಶವನ್ನು ಕೈಗೂಡಿಸಲು ಸತತ ಪ್ರಯತ್ನ ಮಾಡಲಾಗುವದೆಂದು ಆಶಿಸುತ್ತೇವೆ.**

ಸ್ವೀಕಾರ ಮತ್ತು ವಿಮರ್ಶೆ.

ಕೊಡಗಿನವರಾದ ಶ್ರೀ 'ಭಾರತೀಸುತ'ರವರಿಂದ ಬರೆಯಲ್ಪಟ್ಟು ಶೇಷಾಚಲ ಗ್ರಂಥಮಾಲೆ (ಆನಂದವನ) ಯಲ್ಲಿ ಪ್ರಕಟವಾಗಿರುವ ಈ ಪುಸ್ತಕಗಳನ್ನು ಆದರದಿಂದ ಸ್ವೀಕರಿಸಿರುವೆವು.

ಸಾಧನ ಕುಟೀರ–ಸಾಮಾಜಿಕ ಕಾದಂಬರಿ ಇದಾಗಿದೆ. ಇದರ ಬೆಲೆಯು ರೂ. 1–2–0.

ನನ್ನ ಅತ್ತಿಗೆ–ಒಂದು ಹೊಸ ಮಾದರಿಯ ಕಥೆ. ಬೆಲೆ ರೂ. 0–6–0.

ದೂರ ಹೋದಳು–ನವೀನ ರೀತಿಯದೊಂದು ಸಂಸಾರಿಕ ಚಿತ್ರ. ರೂ. 0–6–0.

ಅಮಾತ್ಯನಂದಿನಿ–ಪೌರಾಣಿಕ ವಿಚಾರವಾದ ಚಂದ್ರಹಾಸನ ಕಥೆಯನ್ನು ನವೀನ ಕಾದಂಬರಿ ರೂಪದಲ್ಲಿ ವರ್ಣಿಸಲಾಗಿದೆ. ರೂ. 1–4–0.

ಈ ಮೇಲೆ ವಿವರವುಳ್ಳ ಪುಸ್ತಕಗಳನ್ನು ನಮ್ಮ ಕೊಡಗು ನಾಡಿನವರಾದ ಒಬ್ಬರೇ ಬರದಿರುವರೆಂದರೆ ನಮಗೆ ಆದೆಷ್ಟು ಆನಂದವಾಗದಿಕ್ಕಿಲ್ಲ. ಕನ್ನಡ ಸಾಹಿತ್ಯದ ವಿಶಾಲ ಪ್ರಪಂಚದಲ್ಲಿ ನಮ್ಮ ತರುಣ ಲೇಖಕರಂಥವರಿಂದ ಕೊಡಗಿಗೂ ಒಂದು ನಿರ್ದಿಷ್ಟ ಸ್ಥಾನವಿದೆಯೆಂದರೆ ಹೆಮ್ಮೆಯ ಮಾತಲ್ಲವೇ? ಇರಲಿ, 'ಸಾಧನ ಕುಟೀರ'ದಂಥಾ ಪುಸ್ತಕವು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿರಳವೆಂದು ಹೇಳಬೇಕಿದೆ. ಭಾರತದ ಈಗಿನ ಪರಿಸ್ಥಿತಿ, ಜನತೆಯ ಹೃದಯದ್ರಾವಕ ಚಿತ್ರ, ಕುಹಕ ನೀತಿಯ ಮಾನವ ಪಶುಗಳ ಪ್ರಶ್ನೆ, ಅಬಲೆಯೆಂದೆನಿಸುವ ಭಾರತ ಮಹಿಳೆಯು ಹೇಗೆ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಸಬಲೆಯೆಂದೆನಿಸಿಕೊಳ್ಳಬಹುದೆಂಬ ವಿಚಾರ ಇವು ಸುಲಲಿತ ಭಾಷೆಯಲ್ಲಿ, ನವೀನ ರೀತಿಯಲ್ಲಿ ವರ್ಣಿತವಾಗಿವೆ. ಈ ಪುಸ್ತಕವದನ್ನು ಯಾವನೊಬ್ಬನ ಮನದಲ್ಲೂ ಜಾಗೃತಿಯನ್ನುಂಟುಮಾಡಿ, ರಾಷ್ಟ್ರಾಭಿವೃದ್ಧಿಯೆಡೆಗೆ ಆತನ ಮನವನ್ನು ಒಲಿಸದಿರದು. 'ನನ್ನ ಅತ್ತಿಗೆ' 'ದೂರ ಹೋದಳು' ಈ ಕಥೆಗಳಾದರೂ ಜನತೆಯಲ್ಲಿ ಮಹಾ ತತ್ವಗಳನ್ನು ಪ್ರಚಾರಮಾಡುವ ಸಾಧನಗಳಾಗಿವೆ. 'ಅಮಾತ್ಯನಂದಿನಿ' ಪುಸ್ತಕವು ವಿಖ್ಯಾತವಾದ ಚಂದ್ರಹಾಸನ ಕಥೆಗೆ ಇನ್ನಷ್ಟು ಕಳೆಯೇರಿಸಿದೆ. ನಮ್ಮ ತರುಣ ಲೇಖಕರ ಈ ಕೆಲಸಗಳು ನಿಜವಾಗಿಯೂ ಹೊಗಳಲರ್ಹವಾದವಾಗಿವೆ. ಇವರು ತರುಣರಿದ್ದು ಮುಂದೂ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಅಮೋಘ ಸೇವೆಮಾಡುವರೆಂಬ ಭರವಸೆ ನಮಗಿದೆ. ಹಾಗೆ ಸೇವೆ ಮಾಡಲು ಜನತೆಯು ಅವರಿಗೆ ಪ್ರೋತ್ಸಾಹವನ್ನೀಯಬೇಕು. ಅವರು ಕೃತಿಗಳನ್ನು ಪಡೆದು ಓದಿ ಜ್ಞಾನಸುಧಾ ಪಾನಮಾಡಬೇಕು.

ಕೊಡಗಿನ ಸಹಕಾರಿ ಸಂಘಗಳ 1939ರ ಆಡಿಟ್ ವರದಿಯನ್ನು ಆದರದಿಂದ ಸ್ವೀಕರಿಸಿರುವೆವು. ಸಮಯೋಚಿತವಾಗಿ ಇದನ್ನು ವಿಮರ್ಶಿಸಲಾಗುವುದು.

ವರ್ತಮಾನ ಸಂಗ್ರಹ.

ಒಳ ದೇಶ.

ಮಡಿಕೇರಿ.

ಕೊಡಗು ಟೆರಿಟೋರಿಯಲ್ ಪಟಾಲಾಮಿನ ಈ ವರ್ಷದ ಪತ್ರರಬೇತು ತಾ. 1ರಲ್ಲಿ ಅಂತ್ಯವಾಯಿತು.

ಈ ವಾರ ಅಂದರೆ ತಾ. 26ರಿಂದ ಇಂದಿನ ವರೆಗೆ ಇಲ್ಲಿ 1 ಇಂಚು 48 ಸೆಂಟು ಮಳೆಯಾಗಿದೆ.

ಕಳೆದ ವಾರ ಇಂಡಿಯಾ ಸರಕಾರದ ಮಲೇರಿಯಾ ಆಫೀಸರಾದ ಕರ್ನಲ್ ಕವೆಲ್‌ರವರು ಇಲ್ಲಿಗೆ ಬಂದು ತಾ. 29ರಲ್ಲಿ ವಾಪಾಸು ಹೋದರು.

ಕಳೆದ ಯಂ. ಬಿ. ಬಿ. ಎಸ್ ಪರೀಕ್ಷೆಯಲ್ಲಿ ಶ್ರೀ ಕೀತಿಯಂಡ ಗಣಪತಿಯವರೂ, ಶ್ರೀ ಕೋದಂಡ ಕಾರ್ಯಪ್ಪನವರೂ ತೇರ್ಗಡೆ ಹೊಂದಿರುವರೆಂದು ತಿಳಿಯುತ್ತೇವೆ.

ಕಳೆದ ತಾ. 28-4-40ರಲ್ಲಿ ಇಲ್ಲಿಯ ಸುತ್ತಲಿನ ಏಳು ಗ್ರಾಮಗಳ ಸಭೆಯೊಂದು ಕಾಟಕೇರಿ ಶಾಲೆಯಲ್ಲಿ ಮ. ಚೆಟ್ರಂಡ ಗಣಪತಿಯವರ ಅಧ್ಯಕ್ಷತೆಯಲ್ಲಿ ಸೇರಿ ವಿದ್ಯಾ ಪ್ರಚಾರ ಹಾಗೂ ಗ್ರಾಮಾಭಿವೃದ್ಧಿ ಕಾರ್ಯಕೈಕೊಳ್ಳುವಂತೆ ತೀರ್ಮಾನಿಸಿದ್ದಲ್ಲದೆ ಮುಂದಿನ ಕಾರ್ಯ ನಡೆಸುವುದಕ್ಕಾಗಿ ಪ್ರತಿ ಈ ಏಳು ಗ್ರಾಮಗಳ ಸಭೆಯನ್ನು ಕೂಡಿಸಿ ಕಾರ್ಯ ಮಂಡಳಿಯನ್ನು ರಚಿಸುವ ಬಗ್ಗೆ ಕನ್ವೀನರನ್ನಾಗಿ ಮ. ಕೊಕ್ಕಲೆರ ತಿಮ್ಮಯ್ಯನವರನ್ನು ನೇಮಿಸಲಾಯಿತೆಂದು ತಿಳಿಯುತ್ತೇವೆ.

ವೀರಾಜಪೇಟೆ

ಇಲ್ಲಿ ಒತ್ತ ಗಾಡಿಗೆ ರೂ 53 ಕ್ರಯವಿದೆ.

ಬೆಂಗಳೂರಿನ ಖಾದಿ ವಸ್ತ್ರಾಲಯದವರು ಖಾದಿ ಮಾರಾಟವನ್ನು ತಾ. 1ರಿಂದ ಇಲ್ಲಿ ತೊಡಗಿದ್ದಾರೆ. ಗುರುವಾರದ ವರೆಗೆ ಸುಮಾರು ರೂ 310ರ ಖಾದಿ ಮಾರಾಟವಾಗಿದೆ. ಮಾರಾಟ ಭರದಿಂದಸಾಗುತ್ತಿದೆ. ಅವರ ಮುಂದಿನ ಕಾರ್ಯಕ್ರಮ ಇನ್ನೊಂದೆಡೆ ಪ್ರಕಟವಾಗಿದೆ.

ಬೆಟ್ಟೋಳಿ ಗ್ರಾಮದ ಪಟ್ಟದ ಕುಟುಂಬದ ಮಹಿಳಾ ಸಂಘದವರ ಕರೆದ ತಾ. 22ರ ಕೂಟಂಗಳಲ್ಲಿ ಶ್ರೀ ಪಿ. ಐ. ಬೆಳ್ಯಪ್ಪನವರು ಖಾದಿ ಮತ್ತು ಚರಖಾವನ್ನು ಕುರಿತು ಉಪನ್ಯಾಸ ಮಾಡಿ ಕೈಯಿಂದ ನೂಲು ನೂಲುವ ವಿಧಾನವನ್ನೂ ಅವರಿಗೆ ಕಾರ್ಯತಃ ತೋರಿಸಿ ಕೊಟ್ಟರೆಂದೂ, ಆ ಸಂಘದ ಸದಸ್ಯರು ಮುಂದೆ ಕೈನೂಲು ಮಾಡಲು ನಿರ್ಧರಿಸಿರುವರೆಂದೂ ತಿಳಿಯುತ್ತೇವೆ.

ಸಿದ್ದಾಪುರ.

ಇಲ್ಲಿ ಪಟ್ಟದ ಉತ್ತಯ್ಯನವರ ತೋಟದಲ್ಲಿ ರೈಟರಾಗಿದ್ದ ಶ್ರೀ ಚೇಂದಂಡ ಮಾದಪ್ಪನವರು ಕಳೆದ ವಾರ ಬೇಟೆಗೆ ಹೋಗಿದ್ದಾಗ್ಯೆ ಒಂದು ಕಾಡು ಕೋಣವನ್ನು ಹಿಡಿದು ತಿನ್ನುತ್ತಿದ್ದ ಹುಲಿಯನ್ನು ಕಂಡು ಅದಕ್ಕೆ ಗುಂಡು ಹೊಡೆದರೆಂದೂ ಹುಲಿಯುಗಾಯಗೊಂಡು ಮಾದಪ್ಪನವರ ಮೇಲೇರಿ ಅವರ ಬಲ ಪಕ್ಕೆಲುಬಿಗೆ ಕಚ್ಚಿ ಘಾಯ ಮಾಡಿತೆಂದೂ ಆದರೂ ಮಾದಪ್ಪನವರು ಹುಲಿಯನ್ನು ಕೊಂದು ಮೂರ್ಛೆ ಹೋಗಿದ್ದರೆಂದೂ ಅವರು ಈಗ ವೀರಾಜಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದೂ ವಾರ್ತೆ.

ಅಮ್ಮತ್ತಿ.

ಅಖಿಲ ಭಾರತ ನೂಲುವ ಸಂಸ್ಥೆಯ ಕರ್ನಾಟಕ ಶಾಖೆಯವರಾದ ಬೆಂಗಳೂರಿನ ಖಾದಿ ವಸ್ತ್ರಾಲಯದವರು ಇಲ್ಲಿ ತಾ. 29 ಮತ್ತು 30ರಲ್ಲಿ ಸುಮಾರು 210ರ ವಾಯಿಯ ಖಾದಿ ಮಾರಾಟ ಮಾಡಿದರು.

ತಾ. 30ರಲ್ಲಿ ಇಲ್ಲಿ ಒಂದು ಸಾರ್ವಜನಿಕ ಸಭೆ ನಡೆದು ಶ್ರೀ ಪಿ. ಐ ಬೆಳ್ಯಪ್ಪನವರೂ ಮತ್ತು ಐ. ಪಿ. ಕಾರ್ಯಪ್ಪನವರೂ ಈಗಿನ ರಾಜಕೀಯ ಧೋರಣೆ, ಖಾದಿ ಪ್ರೋತ್ಸಾಹದ ಮಹತ್ವ, ಅಂತರರಾಷ್ಟ್ರೀಯ ಪರಿಸ್ಥಿತಿ ಈ ವಿಚಾರ ಭಾಷಣ ಮಾಡಿದರು.

ಬಾಳಲೆ.

ಕೊಡಗಿನ ಚೀಫ್ ಕಮಿಷನರು ಬಾಳೆಲೆ ಆಸ್ಪತ್ರೆಯ ಹೊಸ ಕಟ್ಟಡವನ್ನು ಈ ತಾ. 6ರಲ್ಲಿ ತೆರೆಯುವರೆಂದು ತಿಳಿಯುತ್ತೇವೆ.

ಗಜೆಟ್.

ಮಾರ್ಚ ತಿಂಗಳಲ್ಲಿ ಕೊಡಗಿನಲ್ಲಿ 294 ಮರಣಗಳೂ 338 ಜನನಗಳೂ ಸಂಭವಿಸಿವೆ ಎಂದು ಪ್ರಕಟವಾಗಿದೆ.

ಕೊಕ್ಕಂಡ ಕುಟುಂಬ, ಸುರುವಂಡ ಕುಟುಂಬ, ದೇವಣಿರ ಧನಸಭಂಡಾರ ಮತ್ತು ಕಿಗ್ಗಟ್ಟುನಾಡು ಸಹಕಾರಿ ಸ್ಟೋರು ಸಂಘಗಳ ಲಿಕ್ವಿಡೇಟರಾಗಿ ಈ ಸರ್ಕಲಿನ ಸಹಕಾರಿ ಇನ್‌ಸ್ಪೆಕ್ಟರಾದ ಶ್ರೀ ಮಂಡ ಸುಬ್ರಯ್ಯನವರನ್ನು ನೇಮಿಸಲಾಗಿದೆ.

1940ನೇ ಜುಲೈ ಒಂದರಿಂದ ಮೂರು ವರ್ಷಗಳ ವರೆಗೆ ಶ್ರೀ ಕೆ. ರಂಗಸ್ವಾಮಿ ಐಯಂಗಾರರವರನ್ನು ಮಡಿಕೇರಿಯಲ್ಲಿ ಚೀಫ್ ಕಮಿಷನರ ಆರ್ಥಿಕ ಸಲಹೆಗಾರರಾಗಿಯೂ, ಕೊಡಗಿನ ಟ್ರೆಜರಿ ಹಾಗೂ ಇನ್‌ಕಂಟ್ಯಾಕ್ಸ್ ಆಫೀಸರಾಗಿಯೂ ನೇಮಿಸಲಾಗಿದೆಯೆಂದು ಪ್ರಕಟವಾಗಿದೆ.

ಹಿಂದೂದೇಶ.

ರಂಗೂನಿನಲ್ಲಿ ಇತ್ತೀಚಿಗಿನ ದಂಗೆಗಲಭೆಗಳ ಪರಿಣಾಮವಾಗಿ ಇದು ವರೆಗ 145 ಮಂದಿ ಗಾಯ ಪಡೆದಿದ್ದಾರೆ. 53 ಮಂದಿ ಆಸ್ಪತ್ರೆಯಲ್ಲಿದ್ದಾರೆ. ಸತ್ತವರು 20 ಮಂದಿ, ಕೈದಿಗೊಳಗಾದವರು 785 ಮಂದಿ ಎಂದು ಪ್ರಕಟವಾಗಿದೆ.

ಸರಕಾರದ ಕೆಳ ತರಗತಿಯ ನೌಕರರಿಗೆ ಭಾವಜೆವಾಸಿಗನೀರಿದ ಸಂಬಂಧ ಭತ್ತೆ ಕೊಡುವ ವಿಚಾರವನ್ನು ಮದ್ರಾಸ್ ಸರ್ಕಾರದವರು ಆಲೋಚಿಸುತ್ತಿರುವರು.

ಹೊಸ ಡಿಲ್ಲಿಯಲ್ಲಿ ಆಜಾದ್ ಮುಸ್ಲಿಮರದೊಂದು ಪ್ರಚಂಡ ಕಾನ್‌ಫರೆನ್ಸ್ ಮಹಾ ವೈಭವದಿಂದ ನೆರವೇರಿದಾಗ ಅಧ್ಯಕ್ಷರಾದ ಖಾನ್ ಬಹದ್ದೂರ್ ಅಲ್ಲಾಭಕ್ಷರು, ಇಂಡಿಯಾದವರಿಗೆ ತಮ್ಮ ರಾಜ್ಯಘಟನೆಯ ನಿರ್ಮಾಣದ ಕುರಿತಾಗಿರುವ ಸ್ವಾತಂತ್ರ್ಯವ ಕುರಿತು ವಿವರಿಸಿ ಮುಸ್ಲಿಂ ಲೀಗಿನ ಪಾಕಿಸ್ಥಾನದ ಯೋಜನೆಯನ್ನು ಖಂಡಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಖಾನ್ ಬಹದ್ದೂರ್ ಶೇಕ್ ಮಹಮ್ಮದ್ ಜಾನರು ಸ್ವಾಗತ ಭಾಷಣ ಮಾಡಿದರು. ಸಮಗ್ರ ಭಾರತ ನ್ಯಾಶನಲಿಸ್ಟ್ ಮುಂದಿನ ಕಾನ್‌ಫರೆನ್ಸ್ ಬೊಂಬಾಯಿಯಲ್ಲಿಂದು ಬಂದಿದೆ.

ಕಲ್ಕತ್ತಾ ಕಾರ್ಪೋರೇಶನಿನ ಮೇಯರಾಗಿ ಮುಸ್ಲಿಂ ಲೀಗಿನ ವರ್ಕಿಂಗ್ ಕಮಿಟಿಯ ಸದಸ್ಯರಾದ ಮಿ. ಅಬ್ದುಲ್ ರಹಮಾನ್ ಸಿದ್ದಿಕ್‌ರವರು ಚುನಾಯಿತರಾಗಿದ್ದಾರೆ. ಡೆಪ್ಯುಟಿ ಮೇಯರಾಗಿ ಬಾಬು ಸುಭಾಸರ ಕಡೆಯ ಮಿ. ಫಣೀಂದ್ರನಾಥ ಬ್ರಹ್ಮರು ಚುನಾಯಿತರಾಗಿದ್ದಾರೆ.

ಬರೋಡ ಸಂಸ್ಥಾನದಲ್ಲಿ ಜನರ ಹಿತಕ್ಕಾಗಿ ಸರಕಾರವು ಮಾರ್ಗ, ಕೆರೆ, ಅಣೆಕಟ್ಟು ಮುಂತಾದವುಗಳಿಗಾಗಿ 260 ಸಾವಿರ ರೂಪಾಯಿಗಳನ್ನು ವ್ಯಯಿಸಲು ನಿಶ್ಚಯಿಸಿದೆ.

ಅಝಾದ್ ಮುಸ್ಲಿಂ ಸಮ್ಮೇಳನ.

ಡೆಲ್ಲಿಯಲ್ಲಿ ನಡೆದ ಅಖಿಲ ಭಾರತ ಸ್ವತಂತ್ರ ಮುಸ್ಲಿಮರ ಮಹಾ ಸಭೆಯು ಪ್ರಾಮುಖ್ಯ ಮೂರು ಸಭೆಗಳನ್ನು ಅಂಗೀಕರಿಸಿದೆ. (1) ಹಿಂದೂ ಮುಸ್ಲಿಂ ಐಕ್ಯತೆಯ ಬಗ್ಗೆ ಎಲ್ಲಾ ಭಾಗದ ಮುಸ್ಲಿಮರ 27 ಪ್ರತಿನಿಧಿಗಳಿಂದ ಕೂಡಿದ ಒಂದು ಸಮಿತಿಯನ್ನು ಏರ್ಪಡಿಸಿ ಮುಸ್ಲಿಮರ ಹಕ್ಕುಬಾಧ್ಯತೆಗಳನ್ನು ನಿಶ್ಚಯಿಸಿ ಎರಡು ತಿಂಗಳೊಳಗೆ ಈ ಸಭೆಯ ಮುಂದಿಡತಕ್ಕದ್ದು. (2) ಪೂರಾ ಸ್ವಾತಂತ್ರ್ಯ ಸಂಪಾದನೆಗೆ ಮುಂದೆಯೂ ಪ್ರಚಂಡ ಹೋರಾಟ ನಡೆಸಲು ಮತ್ತು ಕಾಂಗ್ರೆಸ್ಸಿನೊಡನೆ ನಿಂತು ವಾಗಿ ಚಳವಳಿ ಹೂಡಲು ಬಾಧಿಸಲು ಬಾರದು ಯಾಕೆಂದರೆ ಸ್ವಾತಂತ್ರ್ಯ ಯುದ್ಧದಲ್ಲಿ ಮುಸ್ಲಿಮರು ಎಂದೂ ಹಿಂದಿಲ್ಲ. (3) ಮುಸ್ಲಿಂ ಲೀಗಿನ ಭಾರತ ವಿಭಜನಾ ಯೋಜನೆಯು ಅನುಚಿತವೂ ಅಸಹ್ಯವೂ ಇದೆ. ಇದರಿಂದ ಮುಸ್ಲಿಮರ ಹಿತಕ್ಕೇ ಧಕ್ಕೆ ಬರುವ ಸಂಭವನೀಯವಿದೆ. ಜಿನ್ನಾರವರ ಈ ಯೋಜನೆಯು ಭಾರತಕ್ಕೆ ಹಾನಿಯನ್ನುಂಟುಮಾಡುವದಾಗಿದೆ. ಇವೇ ಆ ಠರಾವುಗಳ ಸಾರಾಂಶ.

ವಿದೇಶ.

ಇಟೆಲಿ ಸರಕಾರವು ತನ್ನ ನೌಕಾಪಡೆಯನ್ನು ಮೆಡಿಟರೇನಿಯನ್ ಸಮುದ್ರದ ಪ್ರಾಮುಖ್ಯ ಸ್ಥಳಗಳಲ್ಲಿ ನಿಲ್ಲಿಸುವ ಏರ್ಪಾಡು ಮಾಡುತ್ತಿದೆ. ಇದನ್ನು ಬ್ರಿಟಿಷರು ತಿಳಿದು ಆ ಬಗ್ಗೆ ಎಚ್ಚರಿಕೆ ವಹಿಸಿ ಕೊಳ್ಳುವರೆ, ತಮ್ಮ ನೌಕಾ ಪಡೆಯ ಒಂದು ಭಾಗವನ್ನು ಅತ್ತ ಕಳುಹಿಸುವರು. ಇಟೆಲಿಯು ಯುಗೊಸ್ಲೇವಿಯಾದ ಮೇಲೆ ಕೈಮಾಡುವ ಚಿಹ್ನೆಗಳು ಕಂಡುಬರುತ್ತಿವೆ.

ನಾರ್ವೆಯಲ್ಲಿ ಹಿಟ್ಲರನು ಸರಾಗವಾಗಿ ಮುನ್ನುಗ್ಗುತ್ತಿರುವನು. ಅನೇಕ ಪಟ್ಟಣಗಳು ಕರಗತವಾಗಿವೆ. ಮಿತ್ರರಾಷ್ಟ್ರಗಳಿಗೆ ವಿಪರೀತ ಕಷ್ಟಗಳೊದಗಿವೆ. ಹಿಟ್ಲರನು ತನ್ನ ಜಯಸಂತೋಷದಲ್ಲಿ ತನ್ನ ಸೈನ್ಯಕ್ಕೆ ವಂದನೆಗಳನ್ನು ಅರ್ಪಿಸಿದನು.

ಬ್ರಿಟನು ಇಂಡಿಯಾದ ಸ್ವಾತಂತ್ರ್ಯಾಪೇಕ್ಷೆಯನ್ನು ಬಲಪ್ರಯೋಗದಿಂದ ಅಡಗಿಸಿದರೆ, ಬ್ರಿಟನ್ನಿನ ವಿಷಯದಲ್ಲಿ ಅಮೇರಿಕಾಕ್ಕೆ ಇರುವ ಸಹಾಯ ಸಹಾನುಭೂತಿಗಳನ್ನು ಕಳೆದುಕೊಳ್ಳುವುದು. ಹಿಂದಿನ ಸ್ಥಿತಿಗತಿಗಳು ಹೇಗಿದ್ದರೂ ಈಗ ಇಂಥಾ ಹೊಡೆದಾಟ ನಡೆಸುವದು ತರವಲ್ಲ' ಎಂದು ಅಮೇರಿಕಾದ ಅಭಿಪ್ರಾಯ.

ಖಾದಿ ಬಜಾರ್.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕೋರಿಕೆ ಮೇರೆ, ಅಖಿಲಭಾರತ ನೂಲುವ ಸಂಘದವರ ಶಾಖೆಯಾದ ಬೆಂಗಳೂರು ಖಾದಿ ಭಂಡಾರದವರು ಕಳೆದ ತಾರೀಕು 29ರಿಂದ ಕೊಡಗಿನಲ್ಲಿ ಖಾದಿ ಮಾರಾಟಕ್ಕೆ ತಂದಿರುವರು. ಈಗಾಗಲೇ ಅಮ್ಮತ್ತಿ ಮತ್ತು ವೀರಾಜಪೇಟೆಯಲ್ಲಿ ತಮ್ಮ ಸಂತೆಗಳನ್ನು ಮುಗಿಸಿರುವರು. ಮುಂದೆ ಈ ಕೆಳಗಿನ ರೀತಿ ತಮ್ಮ ಮಾರಾಟವನ್ನು ಸಾಗಿಸಲಿರುವರು. ಪ್ರತಿಯೊಬ್ಬನೆ ಇಚ್ಛೆಗನುಸಾರದ ಉಡುಪಿಗೆ ಬೇಕಾದ ವಿವಿಧ ರೀತಿಯ ಕೈನೂಲಿನ ಬಟ್ಟೆಯೇ ದೊರೆಯುವದು. ಹೊಟ್ಟೆಗೆ ಅನ್ನವಿಲ್ಲದೆಯೂ, ಮೈಗೆ ಬಟ್ಟೆ ಇಲ್ಲದೆಯೂ ನರಳುತ್ತಿರುವ ಲಕ್ಷಗಟ್ಟಲೆ ನಮ್ಮ ಬಡ ಸಹೋದರ ಸಹೋದರಿಯರು ಕೈಯಿಂದಲೇ ನೂತು, ನೇಯುವ ಪವಿತ್ರವಾದ ಖಾದಿಯನ್ನೇ ಕೊಂಡು ಕೊಂಡು ಭಾರತ ಭೂಮಿಯ ಉದ್ಧಾರಕ್ಕಾಗಿ ಸರ್ವರೂ ತಮ್ಮ ಸೇವೆಯನ್ನು ಸಲ್ಲಿಸಬೇಕಾಗಿ ಕೋರಿಕೆ.

ಕಾರ್ಯಕ್ರಮ.

ತಾ 10ನೇ ಆದಿತ್ಯವಾರ ಗೋಣಿಕೊಪ್ಪ.
6ನೇ ಸೋಮವಾರ ಮಡಿಕೇರಿ.
7ನೇ ಮಂಗಳವಾರ ಪೊನ್ನಂಪೇಟೆ.
8ನೇ ಬುಧವಾರ ವೀರಾಜಪೇಟೆ.
9ನೇ ಗುರುವಾರ ಮೂರ್ನಾಡು.
10ರಿಂದ 12ರ ವರೆಗೆ ವೀರಾಜಪೇಟೆ.
12ನೇ ಆದಿತ್ಯವಾರ ಗೋಣಿಕೊಪ್ಪ.
13ನೇ ಸೋಮವಾರ ಮಡಿಕೇರಿ.
14 ಮತ್ತು 15ರಲ್ಲಿ ವೀರಾಜಪೇಟೆ.
16 ಮತ್ತು 17ರಲ್ಲಿ ಮಡಿಕೇರಿ.
18ನೇ ಶನಿವಾರ ಶನಿವಾರಸಂತೆ.
20ನೇ ಸೋಮವಾರ ಸೋಮವಾರಪೇಟೆ.
21ನೇ ಮಂಗಳವಾರ ಫ್ರೇಜರ್‌ಪೇಟೆ.
22ರಿಂದ 31ರ ವರೆಗೆ ಮಡಿಕೇರಿ.

ಬಿ. ಯಂ. ಕಾರ್ಯಪ್ಪ,
ಗೌ. ಕಾರ್ಯದರ್ಶಿ.
ಕೊ. ಜಿ. ಕಾಂಗ್ರೆಸ್ ಕಮಿಟಿ.

"FOR SALE"

210 acres Coffee Estate, Madapur Post. Those interested please communicate with Manager Jamboor Estate Madapur Post.

R. W. J. Egerton,
Manager.

ಖಾಯಿದೆ ಭಂಗ:

- ಹಿಂಸೆಯು ಹಬ್ಬುತ್ತಿದೆ.
- ಅಹಿಂಸಾ ಯುದ್ಧಕ್ಕೆ ತೊಡಕಾಗುತ್ತಿದೆ.
- ಅಂತರ್ಯದಲ್ಲಿ ನಿಂತು ವಿಧಾಯಕ ಕೆಲಸ ಮಾಡುವವರು ಬೇಕಿದೆ.
- ಇವರು ಜೈಲಿಗೆ ಹೋದ ಯಾವ ಸತ್ಯಾಗ್ರಹಿಗೂ ಕಡಿಮೆ ಇಲ್ಲ.

ಲೇ:—ಮಹಾತ್ಮ ಗಾಂಧಿ–'ಹರಿಜನ' 27–4–40.

ಈ ಸಾರಿ ವರ್ಕಿಂಗ್ ಕಮಿಟಿಯು ಯಾವುದೊಂದೂ ಮಹತ್ವದ ಠರಾವನ್ನು ಅಂಗೀಕರಿಸಲಿಲ್ಲ. ಯಾಕೆಂದರೆ ಅವರ ಮುಂದೆ ಯಾವ ಪ್ರಧಾನ ಕಾರ್ಯಕ್ರಮವೂ ಇರಲಿಲ್ಲ. ಖಾಯಿದೆ ಭಂಗದ ವಿಚಾರ ಚರ್ಚಿಸುವದೆಂದರೆ ಅದರ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಚಳವಳ ಹೂಡುವ ಭಾರವನ್ನು ನನ್ನಲ್ಲಿಟ್ಟಿರುವರು. ಆದರೆ ವರ್ಕಿಂಗ್ ಕಮಿಟಿಯು ಮುಂದೆ ನಡೆಯಬಹುದೆಂದು ಊಹಿಸುತ್ತಿರುವ ಚಳವಳದ ಹಾಗೂ ಇಂದಿನ ರಾಜಕೀಯದ ವಿಚಾರ ಆಳವಾಗಿ ಚರ್ಚೆ ನಡೆಸಿತು. ವರ್ಕಿಂಗ್ ಕಮಿಟಿಯ ಸದಸ್ಯರ ಮುಂದೆ ನಾನಿಟ್ಟ ಅಭಿಪ್ರಾಯಗಳನ್ನು ಓದುಗರ ಮಾಹಿತಿಗಾಗಿ ಇಲ್ಲಿ ಕೊಡಲು ಬಯಸುತ್ತೇನೆ.

ದೇಶದಲ್ಲಿ ಇಂದು ಮೂರ್ತಿಮತ್ತಾಗಿರುವ ಅರಾಜಕತೆಯಿಂದ ಖಾಯಿದೆ ಭಂಗವು ಬಿನ್ನವಾಗಿಲ್ಲದ ಪಕ್ಷ ಅದು ಈ ಅನ್ಯಾಯದೊಳಗೆ ಸಮ್ಮಿಶ್ರವಾಗಿ ತನ್ನ ಶಕ್ತಿಯನ್ನು ಕಳಕೊಳ್ಳುವದು. ಇಂದು ಕಾಂಗ್ರೆಸ್ಸಿನಲ್ಲಿ ಅಹಿಂಸೆಯೇ ಅದರ ಮೂಲತತ್ವನಾಗಿದ್ದರೂ ಅಲ್ಲಲ್ಲಿ ಹಿಂಸೆಯು ತನ್ನ ಕೈವಾಡವನ್ನು ನಡೆಸುತ್ತಿರುವದು ಕಂಡು ಬರುವದು. ಕಾಶ್ಪುರ ವರ್ತನೆಯು ನಿಜವಾಗಿಯೂ ಹಿಂಸಾಪೂರಿತವಾದದ್ದು. ಗಯೆಯಿಂದ ಹೋಗುತ್ತಿದ್ದ ರೈಲುಗಾಡಿಯನ್ನು ತಡೆದು ನಿಲ್ಲಿಸಿದ ಕಿಸಾನರ ಇತ್ತೀಚಿನ ವರ್ತನೆಯಾದರೂ ಅಹಿಂಸೆಯ ಪರದೆಯೊಳಗಿನ ಹಿಂಸಾಚರಣೆಯೇ. ಅಹಿಂಸೆಯ ತತ್ವ ಪ್ರಕಾರ ಅವರು ಎರಡು ದೃಷ್ಟಿಯಿಂದ ತಪ್ಪಿತಸ್ಥರು. ಯಾಕೆಂದರೆ ಅವರು ಕಾಂಗ್ರೆಸ್ಸಿನಲ್ಲಿರುವವರು. ರಾಮಗಡ ಠರಾವಿನಂತೆ ವ್ಯಕ್ತಿಗತ ಸತ್ಯಾಗ್ರಹವಾಗಲೀ ಯಾ ಒಂದೊಂದು ಪಂಗಡದ ಸತ್ಯಾಗ್ರಹವಾಗಲೀ ನನ್ನ ಅನುಮತಿ ಇಲ್ಲದೆ ಕೂಡದು. ಅಖಿಲ ಭಾರತ ಕಿಸಾನ್ ಸಭೆಯ ಉಪಾಧ್ಯಕ್ಷ ಪ್ರೊ. ರಂಗರವರ ವರ್ತನೆಯಾದರೂ ಅಹಿಂಸಾಪೂರಿತವಲ್ಲವೆಂದು ನಾನು ಹೇಳಿರುವೆನು. ನನ್ನ ಈ ಟೀಕೆಯನ್ನು ಹಿಂದ ತೆಗೆಯಬೇಕೆಂದು ಅವರ ಸ್ನೇಹಿತರು ಕೇಳಿಕೊಂಡಿರುವರು. ನಾನು ಸಹ ಪ್ರೊ ರಂಗಾರವರ ಸ್ನೇಹಿತನೇ. ಈ ಸ್ನೇಹಿತರಿಗಿಂತ ಪ್ರಾರಂಭದಲ್ಲೇ ನಾನು ರಂಗಾರವರನ್ನು ಬಲ್ಲೆನು. ಅವರ ಹೃದಯವೆಂಥಾದ್ದೆಂದು ತಿಳಿದಿರುವೆನು. ಅದ ಪ್ರಯುಕ್ತವೇ ಆ ರೀತಿಯ ಟೀಕೆಯು ನನ್ನಿಂದ ಮಾಡಲ್ಪಟ್ಟಿದ್ದಾಗಿದೆ. ರಂಗಾರವರು ನನ್ನ ಟೀಕೆಯ ಅರ್ಥವನ್ನು ಗ್ರಹಿಸಬಲ್ಲರೆಂದು ನಾನು ಬಲ್ಲೆ.

ಖಾಯಿದೆ ಭಂಗವು ನಿಜವಾಗಿಯೂ ಅಹಿಂಸಾ ದೃಷ್ಟಿಯಿಂದ ಸಾಗುವದಾದರೆ ಶತ್ರು ಪಕ್ಷದವರಿಗೂ ಅದು ಅದೇ ರೀತಿಯಲ್ಲಿ ತೋರಬೇಕು. ಶತ್ರುವು ಈ ಖಾಯಿದಭಂಗದಿಂದ ನಗೆ ತೊಂದರೆ ಮಾಡುವುದಕ್ಕೆ ಹೊರಟಿಲ್ಲವೆಂದು ಹೇಳುವಂತಾಗಬೇಕು. ಸದ್ಯಕ್ಕೆ ಸಾಮಾನ್ಯ ಬ್ರಿಟಿಷರು ಅಹಿಂಸೆಯೆಂದರೆ ಅದು ಕೇವಲ ಒಂದು ಸೋಗು ಎಂಬುವುದಾಗಿ ಭಾವಿಸುತ್ತಾರೆ. ಮುಸ್ಲಿಂಲೀಗಿನವರಾದರೂ ಖಾಯಿದೆಭಂಗವು ಹೆಚ್ಚಾಗಿ ಅವರಿಗೆ ವಿರುದ್ಧ ಹೂಡಲ್ಪಡುವ ಚಳವಳವೆಂದು ಭಾವಿಸುತ್ತಾರೆ. ಆದರೆ ಇಂದು ಬ್ರಿಟನು ತನ್ನ ಜೀವನದ ಹೋರಾಟದಲ್ಲಿ ಮುಳುಗಿರುವಾಗ ಅವರಿಗೆ ತೊಂದರೆ ಕೊಡುವದು ನನ್ನ ಮನಸಿನಲ್ಲಿಲ್ಲ. ಇದು ನನ್ನ ಸ್ವಂತ ಅಭಿಪ್ರಾಯ. ಇಂದು ನನಗೆ ಬೇಕಿರುವದೆಂದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಭಾರತವು ತನ್ನ ಮಾನಸಿನ ಬೆಂಬಲವನ್ನು ಕೊಡಲಾರದೆಂದು ಸಾರಬೇಕೆಂದಾಗಿದೆ. ಭಾರತದ ಸಾಮಗ್ರಿಗಳೆಲ್ಲಾ ಭಾರತವು ಬ್ರಿಟಿಷರ ಅಧೀನದಲ್ಲಿರುವ ಪ್ರಯುಕ್ತ ಈ ಗುರಿ ಇಲ್ಲದ ಅವರ ಯುದ್ಧದಲ್ಲಿ ಶೋಷಿಸಲ್ಪಡುತ್ತಿದೆ.

ಖಾಯಿದೆಭಂಗದಿಂದ ಬ್ರಿಟಿಷ್ ಸರಕಾರವನ್ನೇ ತೊಂದರೆಗೀಡು ಮಾಡಬೇಕೆಂಬ ದೃಷ್ಟಿ ಕಾಂಗ್ರೆಸ್ಸಿಗೆ ಇಲ್ಲವೆಂದಾಗ ಮುಸ್ಲಿಂ ಲೀಗನ್ನು ತೊಂದರೆಗೀಡು ಮಾಡಿತೆಂಬುದು ಶುದ್ಧ ತಪ್ಪಭಿಪ್ರಾಯ. ಒಂದು ಕಡೆ ಸಂಶಯಗ್ರಸ್ಥರಾಗಿಯೂ ಮತ್ತೊಂದಡೆ ಹಿಂಸಾಯುತರಾಗಿಯೂ ಇರುವ ಈ ಸೈನ್ಯದ ಮುನ್ನಡೆಯ ವಿಚಾರದಲ್ಲಿ (ಖಾಯಿದೆ ಭಂಗ ಚಳವಳ ಸಾರಲು) ಒಂದು ನಿರ್ದಿಷ್ಟ ಅಭಿಪ್ರಾಯಕ್ಕೆ ಬರಬೇಕಾದರೆ ಈ ಸೈನ್ಯದ ಮುಂದಾಳಾದ ನಾನು ಸಾವಿರ ಬಾರಿ ಹಿಂದು ಮುಂದು ಆಲೋಚಿಸಬೇಕಾಗಿದೆ.

ಇಂದಿನ ಪರಿಸ್ಥಿತಿಯ ಮಟ್ಟಿಗೆ ಸಾಮೂಹಿಕ ಸತ್ಯಾಗ್ರಹ ಚಳವಳವು ಅಸಾಧ್ಯವೆಂದೇ ನನಗನಿಸುತ್ತದೆ. ವ್ಯಕ್ತಿಗತ ಯಾ ಸಾಮೂಹಿಕ ಯಾವ ರೀತಿಯ ಸತ್ಯಾಗ್ರಹವೇ ಪ್ರಾರಂಭವಾದರೂ ಅದಕ್ಕೆ ಇಡೀ ಕಾಂಗ್ರೆಸ್ ಸಂಸ್ಥೆಯ ಬೆಂಬಲ ಬೇಕಿದೆ. ಈ ವರೆಗೆ ಕಾಂಗ್ರೆಸ್ ವೃಕ್ಷವನ್ನು ಅಕ್ಕರೆಯಿಂದ ತಮ್ಮ ತ್ಯಾಗವೆಂಬ ನೀರೆರೆದು ಬೆಳೆಸಿದ ಅಸಂಖ್ಯಾತ ಮಹನೀಯರ ಸಹಾಯ ಬೇಕಿದೆ. ಇದಕ್ಕ ಮೊದಲು ಅನೇಕ ಬಾರಿ ನಾನು ನಿಜವಾಗಿ ಕಾಂಗ್ರೆಸನ್ನು ಪ್ರೋತ್ಸಾಹಿಸಿ ನಡೆಸುವದು ಖಾಯಿದೆ ಭಂಗ ಚಳವಳಕ್ಕೆ ಸೇರಿ ಅಲ್ಲ; ವಿಧಾಯಕ ಕಾರ್ಯಕ್ರಮಗಳಾದ ಖಾದಿ ಪ್ರೋತ್ಸಾಹ ಅಸ್ಪೃಶ್ಯತಾ ನಿವಾರಣೆಯನ್ನು ನಿವಾರಿಸಿ ದಿನವಹಿ ನೂಲುವ ಅಭ್ಯಾಸವನ್ನು ಪ್ರತಿಯೊಬ್ಬನೂ ಮಾಡಿದರೆ ಸತ್ಯಾಗ್ರಹ ಸಮರದಲ್ಲಿ ಧುಮುಕಿ ಸೆರೆಮನೆ ಸೇರಿದ್ದಕ್ಕಿಂತಲೂ ಹೆಚ್ಚು ಕಾಂಗ್ರೆಸ್ಸಿನ ಸೇವೆ ಮಾಡಿದಂತಾಯಿತೆಂದು ಒರೆದಿರುವೆನು. ಖಾದಿ ಧರತಿಗೆ ಸರಿಯಾಗಿ ಇವರು ನಡದದ್ದೇ ಆದರೆ ಅಸ್ಪೃಶ್ಯ ನಿವಾರಣೆ ಮೊದಲಾದ ತತ್ವಗಳಲ್ಲೂ ಅವರು ಅಂತರಂಗತರೆಂದು ನಾನು ಒಪ್ಪುವೆನು. ಹೀಗೆ ವಿಧಾಯಕ ಕಾರ್ಯಕ್ರಮದಲ್ಲಿ ತೊಡಗಿ ಅಪ್ರತ್ಯಕ್ಷವಾಗಿ ಕಾಂಗ್ರೆಸನ್ನು ಪೋಷಿಸುವರಿಗಿಂತ ಮೇಲಾದ ಸತ್ಯಾಗ್ರಹ ಬೇರಿಲ್ಲ.

ನೋಟೀಸು.

The Canara Banking Corporation Ltd.

ದಿ. ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್ ಲಿಮಿಟೆಡ್, ಮಡಿಕೇರಿ ಬ್ರಾಂಚ್.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಆಭರಣಗಳ ಈಡಿನ ಮೇಲೆ ಸಾಲವಾಗಿ ಹೊಂದಿಕೊಂಡ ರೂಪಾಯಿಗಳನ್ನು ಯಾ ಅದರ ಬಡ್ಡಿಯನ್ನು ಸಹ ಕೊಡದೆ ಇದ್ದುದರಿಂದ ಸದರಿಯವರಿಗೆ ರಿಜಿಸ್ಟ್ರೀನೋಟೀಸುಗಳು ಕಳುಹಿಸಿದ್ದು ಜಾರಿಯಾಗದೆ ಮೃತಸಟ್ಟರುತ್ತಾರಾಗಿ ವಾಪ್ಸು ಬಂದಿರುವದರಿಂದ ಸದರಿಯವರ ಛಾಯಿದೆ ತೀರ ವಾರೀಸುದಾರರು ಸದರಿ ಸಾಲದ ಅಸ್ಲು ಬಡ್ಡಿ ಮತ್ತು ಈ ನೋಟೀಸು ಪ್ರಕಟಣೆ ಖರ್ಚು ವಗೈರೆ ಬ್ಯಾಂಕಿಗೆ ಪಾವತಿ ಮಾಡಿ, ಆಭರಣಗಳನ್ನು ತಾ. 17–5–40ರ ಒಳಗೆ ಬಿಡಿಸಿಕೊಂಡು ಹೋಗತಕ್ಕದ್ದು. ತಪ್ಪಿದರೆ ತಾ 18–5–40 ನೇ ಶನಿವಾರ ದಿನ ಮಧ್ಯಾಹ್ನ 1 ಗಂಟೆಗೆ ಯಾ ತದನಂತರ ಬ್ಯಾಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡೋಣಾಗುತ್ತದೆ ಎಂತ ಈ ಮೂಲಕ ತಿಳಿಸೋಣಾಗಿದೆ.

ಸಾ. ನಂಬ್ರ	ಹೆಸರು ವಿಳಾಸ	ಮೊಬಲಗು
435/39	ಶಾಬಂದ್ರಿ ಹಸನ್ ಬಾತುಸಾಬಿ ಇಸ್ಮಾಯಿಲ್ ಸಾಬರ ಮಗ ಮಹದೇವಪೇಟೆ ಮಡಿಕೇರಿ.	155–0–0
334/39	ತೇಲಪ್ಪನ ಚಂಗಪ್ಪ, ರಾಮಪ್ಪನವರ ಮಗ ಅರ್ವತ್ತೊಕ್ಲು ಗ್ರಾಮ, ಬೆಟ್ಟಗೇರಿ ಪೋಸ್ಟು.	10–0–0

ಬ್ಯಾಂಕಿನ ಆಫೀಸು,
ಮಡಿಕೇರಿ,
25–4–40.

ಪಿ. ಪಿ. ಶೆಣೈ,
ಏಜಂಟ್.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಈ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 27–4–40 ರಲ್ಲಿ ಬ್ಯಾಂಕು ಆಫೀಸಿನಲ್ಲಿ ಶ್ರೀಮಾನ್ ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

1. ಮ. ಗಳಾದ ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು) 2. ರಾ. ಬ. ಪಿ. ದೇವಯ್ಯನವರು (ಖಜಾನ್ಜಿ) 3. ಕೆ. ಸಿ. ಕರುಂಬಯ್ಯನವರು (ಗೌರವ ಕಾರ್ಯದರ್ಶಿ) 4. ಐ. ಪಿ. ಕಾರ್ಯಪ್ಪನವರು, 5. ಪಿ. ಜಿ. ಮುದ್ದಮ್ಮಯ್ಯನವರು, 6. ಹೆಚ್. ಯಂ. ಪುಟ್ಟಣ್ಣನವರು, 7. ಸಿ. ಸಿ. ಕರುಂಬಯ್ಯನವರು, 8. ಸಿ. ಯಂ. ಪೂಣಚ್ಚನವರು, 9. ಕೆ. ಕೆ. ಗಣಪತಿಯವರು ಮತ್ತು 10. ಕೆ. ಯಂ. ತಿಂಮಪ್ಪನವರು.

ಅಲ್ಲದ ಕೋಪರೇಟಿವ್ ಸಂಘಗಳ ರಿಜಿಸ್ಟ್ರಾರವರೂ ಮತ್ತು ಅಸಿಸ್ಟೆಂಟ್ ರಿಜಸ್ಟ್ರಾರವರು ಸಹ ಹಾಜರಿದ್ದರು.

ಗೈರುಹಾಜರಾದ ಡೈರೆಕ್ಟರುಗಳು

1. ಮ. ಗಳಾದ ಬಿ. ಪಿ. ಮಾಚಯ್ಯನವರು, 2. ಯಂ. ಸಿ. ದೇವಯ್ಯನವರು, 3. ಯಂ. ಯಸ್. ಸೋಮಯ್ಯನವರು, 4. ಯಸ್. ಯಸ್. ರಾಮಶೆಟ್ಟಿಯವರು, 5. ಪಿ. ಜಿ. ಬಯ್ಯಪ್ಪನವರು.

1. ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ಒಪ್ಪಲಾಯಿತು.

2. ಸುಪರ್‌ವಿಜನ್ ಬೋರ್ಡಿನ ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ರೆಕಾರ್ಡುಮಾಡಲಾಯಿತು.

3. ಸಾಲನಿವಾರಣೆ ಬೋರ್ಡಿನ ಕಳೆದ ಮೀಟಿಂಗಿನ ಪ್ರೊಸಿಡಿಂಗ್ಸ್ ಓದಿ ರೆಕಾರ್ಡುಮಾಡಲಾಯಿತು.

4. ಈ ಕೆಳಗಿನ ಸಂಘಗಳಿಗೆ ಸಾಲಗಳು ಮಂಜೂರಾದವು.

ನೀರುಗುಂದ ಸಂಘಕ್ಕೆ ರೂ. 1000 ಬಿಳಿಗೇರಿ ಸಂಘಕ್ಕೆ ರೂ. 1000. ಕೋಡಂಬೂರು ಸಂಘಕ್ಕೆ ರೂ. 800, ಬಡಗರಕೇರಿ ಸಂಘಕ್ಕೆ ರೂ. 2000.

5. ಕೆರೆಹಳ್ಳಿ ಸಂಘದ ಸಾಲದ ಅರ್ಜಿಯಲ್ಲಿ ಮೆಂಬರುಗಳು ಹಳೆ ಸಾಲ ತೀರಿಸಲು ಸಾಲಕ್ಕೆ ದರಕಾಸ್ತು ಮಾಡಿರುವದ

ರಿಂದ ಸಾಲಸಿವಾರಣೆ ಬೋರ್ಡಿನವರು ಸದರಿ ಮೆಂಬರುಗಳ ಸಾಲಗಾರರ ಸಾಲವನ್ನು ಕನಿಷ್ಠಯಿಂದ ಕಮ್ಮಿ ಮಾಡುವಂತೆಯೂ, ಈ ಉದ್ದೇಶ್ಯ ಸದರಿ ಸಂಘಕ್ಕೆ ರೂ 1200 ಮಂಜೂರ್ಮಾಡಲಾಯಿತು

6 ಹಾತೂರು ಸಂಘದ ಸಾಲದ ಅರ್ಜಿ ಮೇರೆ ಜಾಮಿ ರಾಶಿತ ಮಾದಲು ಅರ್ಜಿ ಬರಕೊಂಡವರಿಗೆ ಗೊತ್ತು ರೂ 100 ಸಾಲ ಕೊಡುವಂತೆಯೂ, ಹಳೆ ಸಾಲ ತೀರಿಸಲು ಪರಕಾಸ್ತು ಮಾಡಿದ ಮೆಂಬರುಗಳ ಅರ್ಜಿಯನ್ನು ಸಾಲಗಾರ ಸಾಲಸಿವಾರಣ ಬೋರ್ಡಿನವರು ತಪ್ಪಿಸಬೇಕಾಗಿಯೂ ತೀರ್ಮಾನಿಸಲಾಯಿತು

7 ಪೆರಾಜ ಸಂಘದ ಸಾಲದ ಅರ್ಜಿ ಮೇರೆ ಸದರಿ ಸಂಘವು ಒಟ್ಟು 29 ರೂಪಾಯಿ ಪಾಲು ಹಣ ಮೆಂಬರುಗಳಿಂದ ವಸೂಲ್ಮಾಡಿರುವುದರಿಂದ ಕಮ್ಮಿ ಪಕ್ಷ ಪ್ರತಿ ಮೆಂಬರರಿಂದ ಪಾಲಿನ ಬಾಬ್ತು ಸಾಲಿನ ಕಂತು ಹಣವನ್ನು ವಸೂಲ್ಮಾಡಿದ ನಂತರ ಆಲೋಚಿಸುವ ಬಗ್ಗೆ ಮುಂದರಿಸಿಡಲಾಯಿತು

8 ನಾಗೇ ಕರ್ಜಾಲ್ ಸಂಘದ ಪ್ರಸಿಡೆಂಟರು ಬ್ಯಾಂಕಿಗೆ ಸಾವತಿ ಮಾಡುವಂತಾದ ವಾಯಿದೆ ಮೀರಿದ ಸಾಲಕ್ಕೆ 5 ಕಂತು ಕೊಡಬೇಕಾಗಿ ಬರಕೊಂಡ ಅರ್ಜಿಯನ್ನು ಹೆಚ್ಚಿನ ವಿವರ ಬಗ್ಗೆ ಇನ್ಸ್‌ಪೆಕ್ಟರಿಗೆ ಮುಂದರಿಸಿಡಲಾಯಿತು.

9 ಕಾಸಿ ಪ್ಲಾಂಟರುಗಳ ಸಂಘದ ಪ್ರಸಿಡೆಂಟರು ಬ್ಯಾಂಕಿಗೆ ಪಾವತಿಮಾಡಲಿಕ್ಕಿರುವ ವಾಯಿದೆ ಮೀರಿದ ಸಾಲಕ್ಕೆ 10 ಕಂತು ಕೊಡಬೇಕಾಗಿಯೂ, ಅವರ ಬಡ್ಡಿಯನ್ನು ಶೇಕಡ 5½ ಕ್ಕೆ ಇಳಿಸಬೇಕಾಗಿಯೂ, ಸುಪರ್‌ವಿಜನ್ನು ಸಂಘನ್ನ ವಜಾ ಮಾಡಬೇಕಾಗಿಯೂ ಸಹ ಬರಕೊಂಡ ಅರ್ಜಿಯನ್ನು ಓದಲಾಯಿತು

ಬ್ಯಾಂಕಿಗೆ ಪಾವತಿ ಮಾಡಲು ಬಾಕಿ ಇರುವ ವಾಯಿದ ಮೀರಿದ ಸಾಲದ ಸ್ವಕಿ ಅಸಲು 1000 ರೂಪಾಯಿ ಮತ್ತು ಪ್ರತಿ ಹಣದ ಬಡ್ಡಿ ತಾ 31-7-40 ರೊಳಗೆ ಪಾವತಿಮಾಡುವುದಲ್ಲದೆ ಸೊಸೈಟಿಯವರು ಸಾಲಿಗ ರಿಂದ ಈಗ ಹೆಚ್ಚಿನ ಗಿರವಿ ತಗದುಕೊಂಡ ಆಸ್ತಿಗಳನ್ನು ಅಡಮಾಯಿಸಲು ಬ್ಯಾಂಕಿನವರಿಗೆ ಅನುಮತಿ ಕೊಟ್ಟಲ್ಲಿ ಉಳಿದ ಸಾಲಕ್ಕೆ ತಾರೀಕು 31-3-41 ರಿಂದ 6 ವರ್ಷದ ಕಂತು ಕೊಡುವಂತೆಯೂ ಬಡ್ಡಿಯನ್ನು ಕಮ್ಮಿ ಮಾಡಕೂಡದಾಗಿಯೂ ತೀರ್ಮಾನವಾಯಿತು ಅಲ್ಲದೆ ಸುಪರ್‌ವಿಜನು ನಡಿಸಿದ ಬಾಕಿ ಇರುವ ಸಾಬಲಗಳಲ್ಲಿ 318-6-0 ಆಣೆಯನ್ನು ತಾ 31-7-40 ರೊಳಗೆ ಪಾವತಿಮಾಡಿದಲ್ಲಿ ಬಾಕಿ ಉಳಿದ ಶೇಕಡ 50 ರಷ್ಟು ಸಾಬಲಗಳು ವಜಾ ಮಾಡುವಂತೆಯೂ ತೀರ್ಮಾನವಾಯಿತು

10 ಕಾನೂರಿನ ಗ್ರಾಮದ ಕೊಟ್ಟಂಡ ಮಾಚಯ್ಯನವರು ತನ್ನ ಮನೆ ವಗೈರೆ ಬಂದು ಹೋದ ಉದ್ದೇಶ್ಯ ಬ್ಯಾಂಕಿನಿಂದ ಧನಸಹಾಯ ಕೊಡಬೇಕಾಗಿ ಬರಕೊಂಡ ಅರ್ಜಿ ಮೇರೆ ಸದರಿ ಯೂನಿಯನ್ ಪ್ರಸಿಡೆಂಟರ ಮತ್ತು ಸುಪರ್‌ವೈಜರ ರಿಪೋರ್ಟನ್ನು ಓದಲಾಯಿತು

ಜನರಲ್ ಬಾಡಿಯವರ ಮಂಜೂರಾತಿ ನಿರೀಕ್ಷಣೆ ಮೇರೆ ಕಾಮನ್ ಗುಡ್ ಫಂಡಿನಿಂದ ಹತ್ತು ರೂಪಾಯಿ ಕೊಡುವಂತೆ ತೀರ್ಮಾನವಾಯಿತು.

11 ತಾ 13-2-40 ರಲ್ಲಿ ನಡೆದ ಜನರಲ್ ಮೀಟಿಂಗಿನಲ್ಲಿ ಹಾಜರಿದ್ದ ಡಾರಗಳಿಗೆ ಖರ್ಚಾದ ಲೆಕ್ಕಗಳನ್ನು ಚೆಕ್ಕು ಮಾಡಲು ನಂಬ್ರು 5180 ತಾ 1-3-40 ರ ಮೀಟಿಂಗಿನಲ್ಲಿ ನೇಮಿಸಲ್ಪಟ್ಟ ಕೆ. ಸಿ ಕರುಂಬೈಯ್ಯ ಮತ್ತು ಐ ಪಿ ಕಾರ್ಯಪ್ಪನವರುಗಳನ್ನು ವಿವರಿಸಿದ ಮೇರೆ ಅವರು ಲೆಕ್ಕಗಳನ್ನು ಚಕ್ಕುಮಾಡಿ ಅವರು ಬರಕೊಂಡ ರಿಪೋರ್ಟನ್ನು ಓದಿ ಮಂಜೂರ್ಮಾಡಿದ್ದಲ್ಲದೆ, ನಂಬ್ರು 5125 ತಾ. 20-1-40 ರ ತೀರ್ಮಾನದ ಮೇರೆ ಮಂಜೂರುಮಾಡಿದ ಮೊಬಲಗಿಗಿಂತ 10-6-7 ಹೆಚ್ಚಿಗೆ ಖರ್ಚಾದನ್ನು ಜನರಲ್ ಬಾಡಿಯವರ ಮಂಜೂರಾತಿ ನಿರೀಕ್ಷಣೆ ಮೇರೆ ಕಾಮನ್ ಗುಡ್ ಫಂಡಿನಿಂದ ಖರ್ಚು ಮಾಡುವಂತೆ ಮಂಜೂರ್ಮಾಡಲಾಯಿತು.

12 ಕೊಡಗಿನಲ್ಲಿರುವ ಎಲ್ಲಾ ಭತ್ತದ ಸ್ಟೋರುಗಳ ರೆಪ್ರೆಸೆಂಟೆಟಿವುಗಳ ಮೀಟಿಂಗು ಸಿಂಗರಾಜನ್‌ಪೇಟೆಯಲ್ಲಿ ತಾ 25-1-40 ರಲ್ಲಿ ನಡೆದ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಲಾಯಿತು

ಕೊಡಗಿನಲ್ಲಿರುವ ಭತ್ತದ ಸ್ಟೋರುಗಳಲ್ಲಿ ಸ್ಟಾಕು ಮಾಡಿದ ಭತ್ತವನ್ನು ಕೊಡಗಿನ ಹೊರಗಣ ಮಾರ್ಕೆಟುಗಳಲ್ಲಿ ಪ್ರತ್ಯಕ್ಷ ಮಾರುವ ಏರ್ಪಾಟು ತಕ್ಕದ್ದಾಗಿ ಮಾಡಲು ಪ್ರತಿ ಭತ್ತದ ಸ್ಟೋರುಗಳಲ್ಲಿ ಸ್ಟಾಕು ಮಾಡಿದ ಭತ್ತದಲ್ಲಿ ಬಟ್ಟಿ 1 ರ ಒಂದು ಕಾಸು ಮೇರೆ ಆಗುವ ಮಾಬಲಗನ್ನು ಪತ್ರ ಬ್ಯಾಂಕಿನ ಸುಪರ್‌ವಿಜನ ಬೋರ್ಡಿಗೆ ಕೊಡುವಂತೆ ಎಲ್ಲಾ ಭತ್ತದ ಸ್ಟೋರುಗಳ ಮೆಂಬರುಗಳನ್ನು ಕೇಳಿಕೊಳ್ಳುವಂತೆ ತೀರ್ಮಾನವಾಯಿತು

13 ಮೇಸು ವಾಪ್ಸು ಪ. ಜ ಸಂಘದ ಬಲಿಕ ಕಾರ್ಯಗಳ ವಿಷಯ ಅಸಿಸ್ಟೆಂಟ್ ರಿಜಿಸ್ಟ್ರಾರವರು ಇನ್ಸ್‌ಪೆಕ್ಷನ್ ಮಾಡಿ ಅವರು ಬರಕೊಂಡ ರಿಪೋರ್ಟ್ ಓದಲಾಯಿತು

ಸದರಿ ಸಂಘಕ್ಕೆ ಕಳೆದ ಮೀಟಿಂಗಿನಲ್ಲಿ ಮಂಜೂರಾದ ಮೂರು ಸಾವಿರ ರೂಪಾಯಿನ್ನು ಬಟವಾಡೆ ಮಾಡುವಂತೆ ತೀರ್ಮಾನಿಸಲಾಯಿತು

14 ಕಣಗಾಲು ಸಂಘದಿಂದ ಬ್ಯಾಂಕಿಗೆ ಪಾವತಿ ಮಾಡಲು ಬಾಕಿರುವ ವಾಯಿದೆ ಮೀರಿದ ಸಾಲಕ್ಕೆ ತಾ 31-3-41 ರ ವರೆಗೆ ವಾಯಿದೆ ಕೊಡಬೇಕಾಗಿ ಬರಕೊಂಡ ಅರ್ಜಿ ಮೇರೆ ಯೂನಿಯನ್ ಪ್ರೆಸಿಡೆಂಟರು ವಾಯಿದೆ ಕೊಡಬಹುದಾಗಿ ಬರಕೊಂಡ ರಿಪೋರ್ಟ್ ಓದಲಾಯಿತು.

ಸದರಿ ಸಂಘವು ಬ್ಯಾಂಕಿಗೆ ಪಾವತಿ ಮಾಡಲು ಬಾಕಿರುವ ವಾಯಿದೆ ಮೀರಿದ ಸಾಲದ ಸ್ವಕಿ ಇನ್ನು 200 ರೂಪಾಯಿ ಮತ್ತು ಪ್ರತಿ ಹಣದ ಬಡ್ಡಿ ತಾ. 31-6-40 ರೊಳಗೆ ಪಾವತಿ ಮಾಡಿದಲ್ಲಿ ವಾಯಿದೆ ಕೊಡುವ ಬಾಬಿನಲ್ಲಿ ಆಲೋಚಿಸಬಹುದೆಂತ ತೀರ್ಮಾನವಾಯಿತು

15 ಹೊಸ್ಕೂರು ಗ್ರಾಮದ ಚೆಟ್ಟಿಮಾಡ ಕಾಟುಂಬಣ್ಣರು ತಮ್ಮ ಮನೆ ವಗೈರೆ ಬೆಂದು ಹೋದ ಉದ್ದೇಶ್ಯ ಬ್ಯಾಂಕಿನಿಂದ ಧನ ಸಹಾಯ ಕೊಡಬೇಕಾಗಿ ಬರಕೊಂಡ ಅರ್ಜಿ ಮೇರೆ ಸದರಿ ಯೂನಿಯನ್ ಪ್ರಸಿಡೆಂಟರವರ ಮತ್ತು ಸುಪರ್‌ವೈಜರ ರಿಪೋರ್ಟುಗಳನ್ನು ಓದಲಾಯಿತು.

ಜನರಲ್ ಬಾಡಿಯವರ ಮಂಜೂರಾತಿ ನಿರೀಕ್ಷಣೆ ಮೇರೆ ಬ್ಯಾಂಕಿನ ಕಾಮನ್ ಗುಡ್ ಫಂಡಿನಿಂದ ಹತ್ತು ರೂಪಾಯಿ ಕೊಡುವುದೆಂದ ತೀರ್ಮಾನವಾಯಿತು.

ಪಿ ಐ ಬೆಳ್ಯಪ್ಪ,
(ಅಧ್ಯಕ್ಷರು)

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರರ ಜನರೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅನೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್ಸ್‌ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(52-6)

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಅ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	48,470	0	0
ಜಮೂಬಂದ ಠೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ಟ್ರಿಫ್ಟ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಟ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಟ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದ ತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮ. ಕೆ. ಸಿ. ಕರುಂಬಯ್ಯನವರು ಎಂ. ಎಲ್. ಸಿ.

ತಾ. 1-3-1940

ಕೊಡಂದೇರ ಡಿ. ನಾಣಯ್ಯ,

L. D. Sc. (COLLEGE OF DENTISTRY)

EX SUPERVISOR LAXMIDAS PATEL DENTAL HOSPITAL, KARACHI

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ

ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (42) ನವೀನ ರೀತಿಯ ಚಿಕಿತ್ಸೆ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಣಕಂಠೀರವ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣಗುಣವಾಗಿ ಬಸ್ತ್ಯಾಗಿ ... ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಣ. ಮತ್ತು ಕಂಪನಿ,

(52-18) [illegible]

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ಧವಸ ಭಂಡಾರಗಳಲ್ಲಿ ಬೇಕಾದ ರಿಜಿಸ್ಟರುಗಳು ಅಂದರೆ-ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕಾಂಟಿನ್ ಖರ್ಚು, ಆರ್ಬಿಟ್ರೇಷನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ಧವಸ ಭಂಡಾರದ ಖರಾರು, ಸ್ಟೋರ್ ಶೀಟ್ ಬಾಂಡು ಫಾರಂ ಮತ್ತು ಇತರ ಫಾರಂ ಸಾಮಾನುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ ಪಿ ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೇಂಡ್, ಟ್ಯಾಪ್‌ರ್ಯಾಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಉತ್ಕೃಷ್ಟವಾದ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara, and Virajapet.

52—46

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕಾಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52–12

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಸಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩—೮—೦

ತಾ. ೧೦—೫—೧೯೪೦.

ಸಂಪುಟ ೧೯] [ಸಂಚಿಕೆ ೩೦

ಭದ್ರತೆ! ವಿಶ್ವಾಸಾರ್ಹತೆ!! ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ ಭದ್ರತೆಯನ್ನು ಸಾಬೀತು ಪಡಿಸಿ ತೋರಿಸಿ, ಠೇವಣಾತಿದಾರರಿಗೆ ಸುರಕ್ಷಿತತೆಯನ್ನು ಹೆಚ್ಚಿಸಿ, ಸರ್ವರ ವಿಶ್ವಾಸಕ್ಕೆ ಪಾತ್ರವಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ದೇಶೀಯ ಸಂಸ್ಥೆ.

ನಿರಖು ಠೇವಣಾತಿ	ಒಂದು ವರ್ಷಕ್ಕೆ	3½% (ಸಾಲಿಯಾನ ಶೇಕಡ)
ಬಡ್ಡಿ ದರಗಳು:	2 & 3 ವರ್ಷಕ್ಕೆ	4% ,,

ಒಂದು ವರ್ಷಕ್ಕಿಂತ ಕಡಿಮೆ ವಾಯಿದೆಯ, ಅಲ್ಪಾವಧಿಯ, ಠೇವಣಾತಿಗಳನ್ನು ಅವಧಿಗೆ ತಕ್ಕ ಬಡ್ಡಿ ದರಗಳಲ್ಲಿ ಪಡೆಯಬಹುದು.

ಮೂರು ವರ್ಷದ ಕೇಶ್ ಸರ್ಟಿಫಿಕೇಟುಗಳು: ಬಡ್ಡಿಯು ವರ್ಷ ಸಾಲಿಯಾನ ಶೇಕಡಾ 4 ರಲ್ಲಿ. ವಾಯಿದೆಯ ಮೊದಲು, ಯಾವಾಗಲೂ 15 ದಿನಗಳ ನೋಟೀಸು ಕೊಟ್ಟಲ್ಲಿ ಹಣವನ್ನು ಹಿಂದಕ್ಕೆ ಪಡೆಯಬಹುದು.

ಸೇವಿಂಗ್ಸ್ ಬೇಂಕ್ ಡಿಪಾಜಿಟ್ಸು:-ಒಂದು ಲೆಕ್ಕದಲ್ಲಿ ರೂ. 5,000 ದ ವರೆಗೆ ಹಣ ಇಡಬಹುದು. ಚೆಕ್ಕು ಮೂಲಕ ಹಣ ಹಿಂದೆ ಪಡೆಯಬಹುದು. ಸಾಲಿಯಾನ ಶೇಕಡಾ 2½ ಸಲೆಯಲ್ಲಿ ಬಡ್ಡಿ ನಡೆಯುವುದು.

ಕರೆಂಟ್ ಡಿಪಾಜಿಟ್ಸು, ಕ್ಯುಮ್ಯುಲೇಟಿವ್ ಡಿಪಾಜಿಟ್ಸು ಲೆಕ್ಕಗಳನ್ನು ತೆರೆಯಬಹುದು.

ಬೊಂಬಾಯಿ, ಕಲ್ಕತ್ತಾ, ಮದ್ರಾಸು, ಕಲ್ಲಿಕೋಟೆ, ಕಣ್ಣಾನೂರು, ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ ಅನೇಕ ಸ್ಥಳಗಳ ಮೇಲೆ ಡ್ರಾಫ್ಟುಗಳನ್ನೂ ಚೆಕ್ಕುಗಳನ್ನೂ ಕೊಡಬಹುದು; ವಟಾಯಿಸಲೂ ಬಹುದು.

THE CANARA BANKING CORPORATION LIMITED.

52-20 ಚಿನ್ನಾಭರಣಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.

ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್,

ಕಟಪಾಡಿ,—ದ. ಕನ್ನಡ.

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು, ದಿ. ಮಂಗಳೂರು ಸ್ಟೋರ್ಸ್, ಡಾ. ಬಿ. ಕೆ. ನಂಜುಂಡೇಶ್ವರ.

52-26

ವೀರಾಜಪೇಟೆ ಏಜಂಟರು, ಕೆ. ರಾಮಕೃಷ್ಣ ರಾವ್ ಜೆ. ಹೆಚ್. ಹಾ

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ| ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ| ಮುಂಡೇಪಂಡ ಸೋಮಯ್ಯನವರು
ಮೆ| ಕೆ. ಯಂ. ಸುಬ್ರಾಯನವರು

ಅಮ್ಮತ್ತಿ—ಸಿದ್ದಾಪುರ— ಮೆ| ಐನಂಡ ಮಾದಪ್ಪನವರು

ಪೊನ್ನಂಪೇಟೆನಾಡು—ಮೆ| ಪಿ. ಜಿ. ಮುದ್ದಮ್ಮಯ್ಯನವರು

ಹುದಿಕೇರಿ—ಮೆ| ಅಜ್ಜಮಾಡ ಮಾದಪ್ಪನವರು ಮತ್ತು ಮೆ| ಜಿ. ಮಾಚಮ್ಮಯ್ಯನವರು.

ಸುಂಟಿಕೊಪ್ಪ—ಮೆ| ಅಪ್ಪಚೆಟ್ಟೋಳಂಡ ಮಾಚಯ್ಯನವರು

ಸೋಮವಾರಪೇಟೆ—ಮೆ| ಕೆ. ಮೊಗಪ್ಪನವರು

ನಾಪೋಕ್ಲು—ಮೆ| ಬೆಳ್ಳಿಯಂಡ ಯಂ. ಪೂಣಚ್ಚನವರು
ನಾಪೋಕ್ಲು

ಶನಿವಾರಸಂತೆ—ಮೆ| ಎಚ್. ಎಂ. ಪುಟ್ಟಣ್ಣನವರು

ಸೂಚನೆ:—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್.
ಮತ್ತು ಆಯುರ್ವೇದ ವಿದ್ವಾನ್

(53-30)

ZANDU

ವೀರಾಜಪೇಟೆಯ ಏಜೆಂಟರು—ಕೆ. ರಾಮಕೃಷ್ಣರಾವ್,
ವೀರಾಜಪೇಟೆ (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ್ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ಸಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಸಿಲ್ಹೆಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-15

ದೇಶದ ಕಲ್ಯಾಣದ ಸಾಧನೆ ಹೇಗೆ?

●○●

ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯೆಂದರೇನು?

●

ರಾಷ್ಟ್ರದ ಪ್ರಗತಿ, ಪ್ರತಿಷ್ಠೆ ಹೇಗೆ ಆಗುವದು?

●

ಜನತೆಯ ಕಾರ್ಯವೇನು?

●

ಭಾರತದ ರಾಷ್ಟ್ರೀಯ ಹೋರಾಟವು ಒಂದು ವಿಶೇಷ ಪರಿಸ್ಥಿತಿಯನ್ನು ಬಂದು ಮುಟ್ಟಿದೆ. ರಾಜಕೀಯ ವಾತಾವರಣದಲ್ಲಿ ಆಂದೋಳನವು ಬಹಳ ಜೋರಿನಿಂದ ಸಾಗಿಬಂದಿದೆ. ಒಂದು ಪಕ್ಷವು ಬ್ರಿಟಿಷ್ ಸಾಮ್ರಾಜ್ಯ ಶಾಹಿಯೊಂದಿಗೆ ಒಪ್ಪಂದಮಾಡಿಕೊಳ್ಳಲು ತಯಾರಿದೆ. ಮತ್ತೊಂದು ಪಕ್ಷವು ಯಾವುದೇ ವಿಧದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯೊಂದಿಗೆ ಒಪ್ಪಂದ ಮಾಡಿಕೊಳ್ಳಕೂಡದೆಂದೂ, ಅದರೊಡನೆ ಯಾವುದೇ ವಿಧವಾದ ಸಂಬಂಧವಿರಕೂಡದೆಂದೂ ಆಂದೋಲನವನ್ನು ನಡೆಸುತ್ತಿದೆ. ಈ ಎರಡೂ ಪಕ್ಷಗಳು ಒಂದು ಅಂಶವನ್ನು ಒಪ್ಪಿಕೊಂಡಿವೆ. ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿ ಅಥವಾ ರಾಷ್ಟ್ರ ರಚನಾತ್ಮಕ ಸಭೆಯು ಸೇರಿ ಮುಂದಿನ ಸ್ವಾತಂತ್ರ್ಯ ಭಾರತದ ರಾಷ್ಟ್ರ ರಚನೆ (Constitution) ಯನ್ನು ಮಾಡಬೇಕೆಂದು ಸಾರಿ ಹೇಳುತ್ತಿವೆ. ಈ ಎರಡು ಪಕ್ಷಗಳೂ ಹೇಳುತ್ತಿರುವದನ್ನು ನೋಡಿದರೆ ಆದೂ ಪಕ್ಷದವರೊಳಗಿನ ಭೇದಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯು ಹಿಂದೂಸ್ಥಾನದಲ್ಲಿ ರಾಷ್ಟ್ರಕೂಟ ಸಭೆಯು ಸೇರುವುದಕ್ಕೆ ಅಸ್ಪದ ಕೊಟ್ಟು ಅದರಲ್ಲಿ ನಿಶ್ಚಿತವಾಗುವ ರಾಜ್ಯ ಘಟನೆಯನ್ನು ಬ್ರಿಟಿಷ್ ಸರಕಾರವು ಒಪ್ಪತಕ್ಕದ್ದೆಂದು ಒಂದು ಪಕ್ಷದ ಅಭಿಪ್ರಾಯ. ಹೋರಾಟದಲ್ಲಿಯೇ ಜನ್ಮ ತಾಳಿ, ಸಾಮ್ರಾಜ್ಯಶಾಹಿಯಿಂದ ಸ್ವತಂತ್ರವಾಗಿ ಈ ಸಭೆಯನ್ನು ನೆರೆಯಿಸಿ ರಾಷ್ಟ್ರಘಟನೆಯನ್ನು ನಿಶ್ಚಯಿಸತಕ್ಕದ್ದೆಂದು ಮತ್ತೊಂದು ಪಕ್ಷದ ಅಭಿಪ್ರಾಯ. ಮೊದಲನೆಯ ಪಂಗಡದ ಅಭಿಪ್ರಾಯದಂತೆ ಈ ಸಭೆಯು ಸಾಮ್ರಾಜ್ಯ ಶಾಹಿಯ ಆಶ್ರಯದಲ್ಲಿ ಸೇರುವುದು. ಅಂದರೆ ಸಾಮ್ರಾಜ್ಯ ಶಾಹಿಗೆ ಚ್ಯುತಿಯಿಲ್ಲದಂತೆ ಅದರಲ್ಲಿಯೇ ಅಂತರ್ಗತವಾದ ರಾಜ್ಯಾಂಗರಚನೆಯನ್ನು ಹಿಂದೂಸ್ಥಾನಕ್ಕೆ ಕೊಟ್ಟಂತಾಗುವದು. ಹೀಗೆ ಮಾಡುವುದರಿಂದ ಸಾಮ್ರಾಜ್ಯಶಾಹಿಯು ನಾಶವಾಗದೆ ಹಿಂದೂಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೆಂದಿಗೂ ಸಿಗಲಾರದು. ಹಿಂದೀಯರು ಹಾಗೂ ಜಗತ್ತಿನ ಕಲ್ಯಾಣವೆಂದಿಗೂ ಸಾಧ್ಯವಾಗಲಾರದು. ಇದು ಮತ್ತೊಂದು ಪಂಗಡದವರ ಅಭಿಪ್ರಾಯ.

ಇದನ್ನು ನಾವು ಸ್ಪಷ್ಟವಾಗಿ ವಿಚಾರ ಮಾಡುವುದೊಳ್ಳೆಯದು. ಅಭಿಪ್ರಾಯಗಳನ್ನು ಸ್ಪಷ್ಟಮಾಡಿ ಹಿತಾಹಿತಗಳನ್ನು ಕೂಲಂಕುಶವಾಗಿ ವಿಚಾರಮಾಡಿದ ಹೊರತು ಸರಿಯಾದ ಮಾರ್ಗವು ನಮಗೆ ದೊರೆಯುವುದಸಾಧ್ಯ.

ನಮ್ಮ ಹೋರಾಟದ ಆಶಯವೇನು? ಕೇವಲ ರಾಜಕೀಯ ಅಧಿಕಾರದ ಲಾಲಸೆಯೇ? ರಾಜಕೀಯ ಅಧಿಕಾರವು ಬ್ರಿಟಿಷರ ಕೈಯಿಂದ ತಪ್ಪಿ ಹಿಂದೀಯರ ವಶವಾಗಿ ಯಥಾಪ್ರಕಾರವಾಗಿ ರಾಜ್ಯಾಡಳಿತವು ನಡೆದುಕೊಂಡು ಬರಬೇಕೆಂತಲೇ? ಅಲ್ಲ. ನಮ್ಮ ಸದ್ಯದ ಆರ್ಥಿಕ ದುರವಸ್ಥೆಯಿಂದ ಪಾರಾಗಲು ರಾಜಕೀಯ ಅಧಿಕಾರವು ಅತ್ಯವಶ್ಯಕ. ಅಂದ ಮೇಲೆ **ರಾಜಕೀಯ ಅಧಿಕಾರವು ಕೇವಲ ಸಾಧನ** ಮಾತ್ರ, ಆರ್ಥಿಕ ಜೀವನದ ಸುವ್ಯವಸ್ಥೆಯು ನಮ್ಮ ಲಕ್ಷ್ಯ ಅಥವಾ ಹೇತು.

ನಮ್ಮಿಂದಿನ ಸ್ಥಿತಿ

ಹಿಂದೀ ಜನ ಸಾಮಾನ್ಯರ ದಾರಿದ್ರ್ಯವು ಜಗತ್ಪ್ರಸಿದ್ಧವಾಗಿದೆ. ಸುಮಾರು ಹದಿಮೂರು ಕೋಟಿ ಜನರಿಗೆ ವರ್ಷವೊಂದಕ್ಕೆ ಸರಾಸರಿ ಹತ್ತು ರೂಪಾಯಿಗಳಿಗಿಂತ ಕಡಿಮೆ ಆದಾಯವುಂಟು. ಇನ್ನು ಇಪ್ಪತ್ತು ಕೋಟಿ ಜನರು ಹಾಗೂ ಹೀಗೂ ಕುಟುಂಬಭರಣ ಮಾಡಿಕೊಂಡು ದಿನ ಸಾಗಿಸುತ್ತಾರೆ. ಇದೀಗ ನಮ್ಮ ದುಃಸ್ಥಿತಿ. ಇದಕ್ಕೆ ಕಾರಣವಾದರೂ ಏನು? ಜನರು ತಮ್ಮ ಜೀವನಾಧರಕ್ಕೆ ಬೇಕಾಗುವಷ್ಟು ಮಾತ್ರಕ್ಕಾದರೂ ದುಡಿಯುವುದಿಲ್ಲವೇ; ಅಥವಾ ದುಡಿಯಲು ತಯಾರಿಲ್ಲವೇ? ಜನರು ದುಡಿಯಲು ಸಿದ್ಧರಿದ್ದಾರೆ. ಹಾಗೂ ದುಡಿಯುತ್ತಾರೆ. ಆದರೆ ಎಷ್ಟು ದುಡಿದರೂ ಅವರ ದುಡಿತದ ಫಲ ಅವರ ಕೈಹತ್ತುವದಿಲ್ಲ. ಇವರು ದುಡಿದುದರ ಫಲವನ್ನು ಬೇರೊಬ್ಬರು ಅನುಭವಿಸುತ್ತಾರೆ. ಆದ್ದರಿಂದಲೇ ಜನರು ದರಿದ್ರಾವಸ್ಥೆಗೀಡಾಗುವದು. ಇದಕ್ಕೆ 'ಶೋಷಣ ಪದ್ಧತಿ' ಯೆಂದು ಹೆಸರು. ಈ ಶೋಷಣೆಗೆ ನಮ್ಮ ಸಮಾಜದಲ್ಲಿ ಮುಪ್ಪು ಬಿದ್ದಿರುತ್ತದೆ. ಜನರು ಸಂತೋಷವಾಗಿ ಈ ತರದ ಸುಲಿಗೆಗೆ ಒಪ್ಪಿಕೊಂಡಿದ್ದರು. ಅದು ನಡೆದು ಬರುತ್ತಿದೆ. ಅದೇ ಇಂದಿನ ರಾಜಸತ್ತೆಯ ಜೀವಾಳ. ಈ 'ಶೋಷಣ ಪದ್ಧತಿ' ಯು ಯಥಾವಿಧಿಯಾಗಿ ನಡೆಸುಕೊಂಡು ಬರಲು ಜನತೆಯಲ್ಲಿದ್ದ ಮೌಢ್ಯದಿಂದ ಸಾಧ್ಯವಾಗಿದೆ. ಶೋಷಣಾಪದ್ಧತಿಯು ಸಮಾಜ ಜೀವನದ ಮೇಲೆ ಮಾಡುತ್ತಿರುವ ಪರಿಣಾಮ ತೊಲಗಿತೆಂದರೆ ಜನಸಾಮಾನ್ಯರ ದುಡಿಮೆಯ ಫಲವು ಪೂರ್ಣವಾಗಿ ಜನರ ಕೈಸೇರುವದು. ಆದರೆ ಪದ್ಧತಿಯ ರಕ್ಷಣಾರ್ಥವಾಗಿ ರಾಜಕೀಯ ಅಧಿಕಾರ ಶ್ರೇಣಿಯು ನಿಂತಿದೆ. ಅಧಿಕಾರಬಲದಿಂದ ಜನತೆಯನ್ನು ಬಡತನಕ್ಕಿಳಿಸುವ ಈ ಪದ್ಧತಿಗೆ ವಿರುದ್ಧವಾಗಿ ನಡೆಯುವ ಯಾವುದೇ ಆಂದೋಲನವನ್ನೂ ತಲೆಯೆತ್ತದಂತೆ ಮಾಡಲಾಗುತ್ತಿದೆ. ಅಂದ ಮೇಲೆ ಮೊದಲು ರಾಜಕೀಯ ಅಧಿಕಾರವನ್ನು ಕೈವಶಮಾಡಿಕೊಂಡು ಆ ಬಲದಿಂದ ಶೋಷಣ ವಿಧಾನವನ್ನು ನಿಲ್ಲಿಸಬೇಕಾಗುತ್ತದೆ. ಇದಕ್ಕಾಗಿಯೇ ನಮಗೆ ಸ್ವಾತಂತ್ರ್ಯವು ಬೇಕು. ಇದಕ್ಕಾಗಿಯೇ **ರಾಜಕೀಯ ಅಧಿಕಾರವು ಹಿಂದೀಯರ ಕರಗತ**ವಾಗಬೇಕು; ಹಿಂದೀಯರ ಅಂದರೆ ಹಿಂದೀ ಜನ ಸಾಮಾನ್ಯರ ವಶವಾಗಬೇಕು. ಶೋಷಣೆಗೆ ತುತ್ತಾದ ಜನಸಾಮಾನ್ಯರ ವಶದಲ್ಲಿ ರಾಜಕೀಯ ಅಧಿಕಾರವು ಬಂದಿತೆಂದರೆ ಇಂದಿನ ಕಷ್ಟಮಯ ಜೀವನವು ಹೋಗಿ ಸುಖದ ಮಾರ್ಗವನ್ನು ಹಿಡಿಯಲು ಸಾಧ್ಯವಾಗುವದು.

ಪಾಲುದಾರರು.

ಹಿಂದೂಸ್ಥಾನದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ರಾಜ್ಯಾಧಿಕಾರವನ್ನು ತನ್ನ ವಶದಲ್ಲಿಟ್ಟುಕೊಂಡಿರುವುದರ ಮೂಲಕಾರಣ ಶೋಷಣೆ (ಸೂರೆ) ಮಾಡುವರಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕಾಗಿ ತಮ್ಮ ಲಾಭೋದ್ದೇಶದಿಂದಲೇ ಬ್ರಿಟಿಷರು ಹಿಂದೂಸ್ಥಾನದಲ್ಲಿ ರಾಜ್ಯವಾಳುತ್ತಿರುವರು. ಬಂಡವಾಳ ಶಾಹಿಯ ಮೂಲ ಉದ್ದೇಶ ಲಾಭ ಸಂಪಾದನೆ. ಉತ್ಪತ್ತಿ ಮಾಡುವುದು ಲಾಭಕ್ಕಾಗಿ, ಲಾಭ ದೊರೆಯಬೇಕಾದರೆ ದುಡಿಯುವವರನ್ನು ಅರೆಗರುಳಿನಲ್ಲಿಟ್ಟು ಅವರ ಪಾಲಿನ ಜೀತದಲ್ಲಿ ಆದಷ್ಟು ಹೆಚ್ಚು ಭಾಗವನ್ನು ತನ್ನ ಪಾಲೆಂದು ಉಳಿಸಿಕೊಂಡಲ್ಲದೆ ಗತ್ಯಂತರವಿಲ್ಲ. ಸಾಮ್ರಾಜ್ಯಶಾಹಿಯು ಬಂಡವಾಳ ಶಾಹಿಯ ಅತ್ಯುತ್ಕಟದಶೆ. ಬಂಡವಾಳಶಾಹಿಯು ತನ್ನ ದೇಶದ ಗಡಿಯನ್ನು ಬಿಟ್ಟು ಹೊರಪ್ರದೇಶಗಳಿಗೆ ಹರಡಿ ಹೊಕ್ಕಿತೆಂದರೆ ಸಾಮ್ರಾಜ್ಯಶಾಹಿಯ ರೂಪವನ್ನು ತಾಳುತ್ತದೆ. ಈ ಆರ್ಥಿಕ ಸಾಮ್ರಾಜ್ಯ ಶಾಹಿಯನ್ನು ರಕ್ಷಣೆಮಾಡಲು ರಾಜಕೀಯ ಸತ್ತೆ ಅಥವಾ ಅಧಿಕಾರವು ಅದರ ಹಿಂದೆಯೇ ಬೆಂಬಲವಾಗಿ ಹೊರಡಬೇಕಾಗುತ್ತದೆ. ಹಿಂದೂಸ್ಥಾನದ ಸ್ಥಿತಿಯಾದರೂ ಇಷ್ಟೇ. ಹಿಂದೀ ಜನಸಾಮಾನ್ಯದಲ್ಲಿ ಚೈತನ್ಯವಿರಲಿ, ಇಲ್ಲದಿರಲಿ ಅದರ ಸುಲಿಗೆ ತನ್ನ ಬೊಕ್ಕಸ ತುಂಬಿಕೊಳ್ಳುವದೇ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕಾರ್ಯವಾದಂತೆ ಕಾಣುತ್ತಿದೆ. ಈ ಶೋಷಣೆಯನ್ನು ಇಷ್ಟು ದೊಡ್ಡ ದೇಶದಲ್ಲಿ ಪ್ರತ್ಯಕ್ಷವಾಗಿ ನಡೆಸಲು ಸಾಧ್ಯವಿಲ್ಲದ್ದರಿಂದ ದೇಶೀಯರ ಸಹಾಯದಿಂದ ಪರೋಕ್ಷಮಾರ್ಗಗಳಲ್ಲಿ ಈ ಶೋಷಣೆಯನ್ನು ಸಾಗಿಸುತ್ತದೆ. ಅಂದ ಮೇಲೆ ಶೋಷಣೆಯಿಂದ ಬಂದ ಲಾಭದಲ್ಲಿ ಹಂಚಿಕೆಯಾಗಬೇಕು. ಶೋಷಣೆಯಲ್ಲಿ ಇಬ್ಬರಿಗೂ ಒಂದೇ ಸಮನಾದ ಹಿತವುಂಟು. **ಹಂಚಿಕೆ ಮಾಡಿಕೊಳ್ಳುವುದರಲ್ಲಿ ಭೇದ ಉತ್ಪನ್ನವಾಗಬಹುದು.** ಅದರಿಂದ ಪರಸ್ಪರ ವೈಮನಸ್ಯವೂ ಉಂಟಾಗಬಹುದು. ಆದರೆ ಒಬ್ಬರೊನ್ನೊಬ್ಬರು ನಾಶಮಾಡುವಷ್ಟು ದೂರ ಆ ಜಗಳ ಹೋಗಲು ಸಾಧ್ಯವಿಲ್ಲ. ಏಕೆಂದರೆ ಇದರಿಂದ ಇಬ್ಬರೂ ನಾಶವಾಗಬಹುದು. ಕಾಲಾನುಕೂಲ ಒದಗುವಂತೆ ಪಾಲು ಹಂಚಿಕೊಳ್ಳುವದರಲ್ಲಿ ಹೆಚ್ಚು ಕಡಿಮೆ ಸರಿಹೋಗಿಸಿಕೊಂಡು ಮತ್ತೆ ಇಬ್ಬರೂ ಕೂಡಿಕೊಳ್ಳುತ್ತಾರೆ. ಇದೀಗ ಹಿಂದೂಸ್ಥಾನದಲ್ಲಿ ನಮಗೆ ಕಾಣಬರುತ್ತಿರುವ ದೃಶ್ಯ.

ನಮಗೇನು ಬೇಕು?

ಹೀಗಿರುವಾಗ ಸಾಮ್ರಾಜ್ಯ ಶಾಹಿಯನ್ನು ಕಿತ್ತೊಗೆಯುವದಕ್ಕೆ ದೇಶೀಯ ಪೋಷಿತ ವರ್ಗಗಳು ಎಂದೆಂದಿಗೂ ಮುಂದೆ ಬರುವುದಿಲ್ಲ. ಹಾಗೆ ಬಂದಿದ್ದಾದರೆ ಅವುಗಳು ಸಾಮ್ರಾಜ್ಯ ಶಾಹಿಯೊಡನೆ ತಾವೂ ನಾಶವಾಗುವವು. ಅದನ್ನು ನಾಶಮಾಡಬೇಕಾದರೆ (ತಪ್ಪಿಸಬೇಕಾದರೆ) ಸಾಮ್ರಾಜ್ಯ ಶಾಹೀ ಹಾಗೂ ಅದರ ದೇಶೀ ಮಿತ್ರ ಶೋಷಕ ವರ್ಗಗಳಿಂದ ಶೋಷಿತರಾಗುತ್ತಿರುವ ಪ್ರಜಾ ವರ್ಗಗಳೇ ಈ ಹೋರಾಟದಲ್ಲಿ ಭಾಗವಹಿಸಬೇಕಾಗುತ್ತದೆ. ಅವರೆಗೇ ಸಾಮ್ರಾಜ್ಯಶಾಹಿಯು ಪ್ರತಿಪಕ್ಷ-ಶೋಷಕ-ವರ್ಗಗಳು ಇರುವ ವರೆಗೂ ಶೋಷಿತ ವರ್ಗಗಳು ಉದ್ಧಾರವಾಗಲಾರವು. ಅಂದ ಮೇಲೆ ಸಾಮ್ರಾಜ್ಯ ಶಾಹೀ ಮೊದಲಾದ ಶೋಷಕ ವರ್ಗಗಳಿಂದ ಪಾರಾಗುವದು ಹಿಂದೀ ಜನಸಾಮಾನ್ಯರ ಆದ್ಯ ಕರ್ತವ್ಯವಾಗುತ್ತದೆ. ಹಾಗೆ ಮಾಡಿದ ಹೊರತು ಗತ್ಯಂತರವಿಲ್ಲ. ಎಂದಿನವರೆಗೆ ರಾಜಕೀಯ ಅಧಿಕಾರವು ಶೋಷಕ ವರ್ಗದವರ ವಶದಲ್ಲಿರುತ್ತದೆಯೋ ಅಲ್ಲಿನವರೆಗೆ ಶೋಷಣವನ್ನಾದರೂ ನಿಲ್ಲಿಸಲು ಸಾಧ್ಯವಿಲ್ಲ. ರಾಜಕೀಯ ಅಧಿಕಾರವನ್ನು ವಶಮಾಡಿಕೊಂಡರೆ ಮಾತ್ರ ಆ ಅಧಿಕಾರದ ಮೂಲಕವಾಗಿ ಆರ್ಥಿಕ ಜೀವನದಲ್ಲಿ ಬೇಕಾಗುವಂತಹ ಮಾರ್ಪಾಟನ್ನು ಮಾಡಲು ಸಾಧ್ಯವಾಗುವದು.

ಮುಂದಿನ ರಾಜಸತ್ತೆಯ ಅಂಕುರಗಳು ಎಲ್ಲೆಡೆಗಳಲ್ಲಿಯೂ ಭದ್ರವಾಗಿ ಬೇರೂರಿ, ಗಿಡವಾಗಿದ್ದವು ಮರವಾದರೆ ಮಾತ್ರ ಶೋಷಿತವರ್ಗಗಳು ರಾಜಕೀಯ ಅಧಿಕಾರವನ್ನು ಕೈವಶಮಾಡಿಕೊಳ್ಳಬಲ್ಲವು. ರಾಜ ಸತ್ತೆಯನ್ನು ವಶಮಾಡಿಕೊಳ್ಳಬೇಕೆಂದು ಬಾಯಲ್ಲಿ ಹೇಳಿದ ಮಾತ್ರಕ್ಕೇ ರಾಜ ಸತ್ತೆಯು ವಶವಾಗಲಾರದು. ಇಂದಿನ ರಾಜಸತ್ತೆಯು ಕ್ಷೀಣವಾಗುತ್ತಾ ಬಂದು ಅದರ ಪರಿವರ್ತನಕ್ಕೆ ಅವಕಾಶವಾಗಿ, ಇಂದಿನ ಶೋಷಿತ ವರ್ಗದವರ ಬಲವು ಹೆಚ್ಚಿದಂತೆಲ್ಲಾ ನಮ್ಮ ಪ್ರಯತ್ನವು ಸಫಲವಾಗುವುದು. ಇಂದಿನ ರಾಜಸತ್ತೆಯ ಶಕ್ತಿಯನ್ನು ತಗ್ಗಿಸುತ್ತಾ ಬರಬೇಕು. ಈ ಕಡೆ ನಮ್ಮ ಪ್ರಯತ್ನ ನಡೆಯಬೇಕು.

ವರ್ಗವೈಷಮ್ಯ ಹೋಗಬೇಕು.

ಇಂದಿನ ನಮ್ಮ ಹೋರಾಟದಲ್ಲಿ ನಾನಾ ಬಗೆಗಳ ಅಥವಾ ವರ್ಗಗಳು ಭಾಗವಹಿಸಿ ಕೆಲಸಮಾಡುತ್ತಿವೆ. ಶೋಷಿತ ವರ್ಗಗಳೂ ಇವೆ. ಶೋಷಕವರ್ಗಗಳೂ ಇವೆ. ಈ ಪಂಗಡಗಳ ಹಿತಾಹಿತಗಳಾದರೂ ಬೇರೆ ಇವೆ. ಶೋಷಿತ ವರ್ಗದ ಹಿತವೇ ಶೋಷಕವರ್ಗದ ಅಹಿತವಾಗುತ್ತದೆ. **ಅಥವಾ ತದ್ವಿರುದ್ಧವಾಗಿರುತ್ತದೆ.**

ಅಂದ ಮೇಲೆ ಇವೆರಡು ಪಂಗಡಗಳು ತಮ್ಮ ತಮ್ಮ ವರ್ಗವೈಶಿಷ್ಟ್ಯಗಳನ್ನು ನಾಶ ಮಾಡಿಕೊಳ್ಳದೆ ಒಂದೇ ಗುರಿಯ ಕಡೆ ಸಾಗಲಾರವು. ಹೀಗಿರುವಾಗ ಇವೆರಡು ಪಂಗಡಗಳು ಒಟ್ಟಿಗೆ ಸೇರಿ ಸರ್ವಮಾನ್ಯವಾದ ಅಥವಾ ಬಹುಜನ ಹಿತವನ್ನುಂಟು ಮಾಡುವ ರಾಜ್ಯಾಂಗ ರಚನೆಯನ್ನೆಂತು ಮಾಡಲಾಪವು? ಇದಂತೂ ಸಾಧ್ಯವೇ ಇಲ್ಲ. ಹಾಗೆ ಮಾಡಿದರೂ ಆರ್ಥಿಕ ಅಧಿಕಾರವು ಯಾರ ಕೈಯಲ್ಲಿ ಸೇರುತ್ತದೋ ರಾಜಸತ್ತೆಯೂ ಸಹ ಅವರ ವಶವಾಗಿ ರಾಜ್ಯಾಂಗ ರಚನೆಯು ಅವರ ಹಿತಕ್ಕಾಗಿ ನಿಲ್ಲುವುದು.

ಇಂತಹ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿಯನ್ನು ನೇಮಗೊಡಿಸುವದರಿಂದ ಇಂದಿನ ಶೋಷಿತ ವರ್ಗಗಳಿಗಾದರೂ ಹಿತ ಹೇಗಾದೀತು? ರಾಜ್ಯಾಂಗ ರಚನಾ ಸಭೆಯ ಕರ್ತವ್ಯವಾದರೂ ಏನು? ಮುಂದಿನ ರಾಜ್ಯಾಂಗದ ವಿವರಗಳನ್ನು ಬಿಡಿಸಿಕೊಡುತ್ತ ಕೂಡುವುದಲ್ಲ. ಮುಂದಿನ ರಾಜ್ಯಘಟನೆಯ ಮೂಲ ಸಿದ್ಧಾಂತಗಳನ್ನು ಹಾಕಿಕೊಡುವದು ಮಾತ್ರ. ಆ ಸಿದ್ಧಾಂತಗಳ ಆಧಾರದ ಮೇಲೆ ರಾಜ್ಯಶಾಸನ ಘಟನೆಯನ್ನು ವಿವರವಾಗಿ ನಿರ್ಣಯಿಸುವದು ಪ್ರತ್ಯೇಕ ಮಾತು.

ಹೋರಾಟವು ನಡೆಯುತ್ತಿರುವ ಸಮಯದಲ್ಲಿಯೇ ಇದರಲ್ಲಿ ಅಡಕವಾಗಿರುವ ಬೇರೆ ಬೇರೆ ವರ್ಗಗಳ ಬಲಾಬಲಗಳು ವಿಂಗಡವಾಗುತ್ತಾ ಬಂದು ಇಂದಿನ ಶೋಷಿತ ವರ್ಗಗಳೇ ಪ್ರಧಾನ ಪಾತ್ರವನ್ನು ವಹಿಸಬೇಕಾಗುತ್ತದೆ. ಅಂದಿಗೆ ಅವೆಲ್ಲವೂ ಸೇರಿ ತಮ್ಮ ತಮ್ಮ ಹಿತಾಹಿತಗಳ ಕಡೆಗೆ ಗಮನ ಕೊಟ್ಟು ಮುಂದಿನ ರಾಜ್ಯಘಟನೆಯ ಸ್ವರೂಪವನ್ನು ಅಥವಾ ಮೂಲ ಸಿದ್ಧಾಂತವನ್ನು ನಿರ್ಣಯಿಸಬೇಕು. ಉದಾಹರಣಾರ್ಥವಾಗಿ ಶೋಷಣೆಯನ್ನು ನಿಲ್ಲಿಸಬೇಕೆಂದು ತೆಗೆದುಕೊಳ್ಳೋಣ. ಶೋಷಣೆಯಾಗುವದು ಖಾಸಗೀ ಸಂಪತ್ತಿರುವದರಿಂದ. ಮುಂದಿನ ಆರ್ಥಿಕ ಜೀವನದಲ್ಲಿ ಶೋಷಣೆಗೆ ಆಸ್ಪದ ಕೊಡುವಂತಹ ಸಂಪತ್ತು ಖಾಸಗೀ ವ್ಯಕ್ತಿಗಳ ಅಧೀನದಲ್ಲಿರಕೂಡದು ಎಂದು ನಿರ್ಣಯಿಸಿದರೂ ಮುಂದಿನ ಜನಜೀವನದಲ್ಲಿ ರಾಜಸತ್ತೆಯು ಈ ಸಿದ್ಧಾಂತವನ್ನು ರಕ್ಷಿಸುವದು, ಇತ್ಯಾದಿ. ಹೀಗೆ ಮೂಲ ಸಿದ್ಧಾಂತಗಳನ್ನು ನಿರ್ಣಯಿಸಿದ ನಂತರವೇ ಹೋರಾಡಿ ಕ್ಲಿಪ್ತವಾದ ಗುರಿಯನ್ನು ಮುಟ್ಟಲು ಸಾಧ್ಯವಾಗುವದು. ಅಂದ ಮೇಲೆ ಈ ಮೂಲ ಸಿದ್ಧಾಂತಗಳನ್ನು ಹಾಕಿಕೊಡುವ ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿ ಅಥವಾ ರಾಷ್ಟ್ರಕೂಟವೆಂಬ ರಾಜ್ಯಘಟನಾಸಭೆಯು ರಾಜಕೀಯ ಅಧಿಕಾರ ಅಥವಾ ರಾಜಸತ್ತೆಯನ್ನು ಸಂಪೂರ್ಣ ಕೈವಶ ಮಾಡಿಕೊಳ್ಳುವದಕ್ಕಿಂತ ಮೊದಲು ಸೇರಬೇಕಾಗುತ್ತದೆ. ಈ ತರುವಾಯ ಸಭೆಯು ಸೇರುವದಾದರೂ ನಮ್ಮ ಹೋರಾಟದ ಮಧ್ಯದಲ್ಲಿಯೇ ಸೇರುತ್ತದೆ. ಇದೀಗ ಹಿಂದೂಸ್ಥಾನದಲ್ಲಿ ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿಯು ಮಾಡಬೇಕಾಗಿರುವ ಕರ್ತವ್ಯ.

ಎರಡು ಭಿನ್ನ ಹಿತಗಳು.

ಹಿಂದೂಸ್ಥಾನದಲ್ಲಿ ಹೋರಾಟವು ಕಾಂಗ್ರೆಸ್ಸಿನ ನೇತೃತ್ವದಲ್ಲಿ ನಡೆಯುತ್ತಿದೆ. ಕಾಂಗ್ರೆಸ್ಸಿನ ಅಂಗಗಳು ಪ್ರತಿಹಳ್ಳಿ ಅಥವಾ ತಾಲೂಕುಗಳಲ್ಲಿಯೂ ಇವೆ. ಹೀಗಿರುವಾಗ ಈ ಕಾಂಗ್ರೆಸ್ ಕಮಿಟಿಗಳು ಮುಂದೆ ಕೇವಲ ಶೋಷಿತ ಅಥವಾ ಆರ್ಥಿಕವಾಗಿ ಪತಿತ ವರ್ಗದ ಪ್ರತಿನಿಧಿಯಾಗುವಂತಾದರೆ ಮಾತ್ರ ಇವು ಮುಂದಿನ ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿಯ ಅಂಗಗಳಾಗಿಯೇ ಬೆಳೆಯುತ್ತಾ ಬರಲು ಯೋಗ್ಯತೆ ಪಡೆಯುತ್ತವೆ. ಕಾಂಗ್ರೆಸ್ಸಿನವರೂ ಆ ಮಾರ್ಗವನ್ನೇ ಹಿಡಿದು ನಡೆದು ಬರುತ್ತಿದೆ. ಹೀಗೆಂದ ಮಾತ್ರಕ್ಕೇ ನಮ್ಮ ಮೊದಲ ಪರಿಷ್ಕರಣದ ಕೆಲಸವೆಲ್ಲ ಮುಗಿದಂತಾಯಿತೆಂತಲ್ಲ. ಪ್ರತಿಯೊಂದು ಸ್ಥಳೀಯ ಕಾಂಗ್ರೆಸ್ ಸಂಸ್ಥೆಯೂ ನಿಜವಾದ ಪ್ರಜಾ ಸಂಸ್ಥೆಗಳಾಗಬೇಕು. ಹೀಗಾಗಬೇಕಾದರೆ ಈ ಕೆಳಗಿನ ಸಂಸ್ಥೆಗಳು ಮೊದಲುಗೊಂಡು ಶೋಷಕರಾಗೂ ಶೋಷಿತ ವರ್ಗಗಳನ್ನು ಪ್ರತ್ಯೇಕಿಸುತ್ತಾ ಬರಬೇಕು. ಏಕೆಂದರೆ ಮೇಲೆಯೇ ಹೇಳಿದಂತೆ ಶೋಷಕ ವರ್ಗಕ್ಕೆ (ಕೂಲಿ ಯಜಮಾನರೆನಿಸಿ, ಅನ್ಯರ ಸಂಪಾದನೆಯ ಮೇಲೆ ಜೀವಿಸುವ) ಇಂದಿನ ಸಮಾಜ ಜೀವನವನ್ನು ಯಥಾ ಪ್ರಕಾರವಾಗಿ ನಡೆಸಿಕೊಂಡು ಬರುವುದರಲ್ಲಿ ಅವರಿಗೆ ಹಿತವಿದೆ. ಇಂದಿನ ಸಮಾಜ ಜೀವನವನ್ನು ಮಾರ್ಪಾಡು ಮಾಡುವುದರಿಂದ ಶೋಷಿತ (ಕೆಲಸಗಾರ-ತೆರುವವ) ವರ್ಗದವರ ಭವಿಷ್ಯ ಹಿತವಾಗುವುದು.

ಜನಜಾಗೃತಿ.

ಪ್ರಜೆಗಳ ಹಿತಾಹಿತಗಳೆಂದರೆ ಅವರ ಆರ್ಥಿಕ ಹಿತಾಹಿತಗಳು. ಇವುಗಳಿಗಾಗಿ ನಡೆಯುವ ಸಣ್ಣ ಪುಟ್ಟ ಹೋರಾಟಗಳಲ್ಲಿ ಪ್ರಜೆಗಳು ಸಂಪೂರ್ಣವಾಗಿ, ಮನಃಪೂರ್ತಿಯಾಗಿ, ಭಾಗವಹಿಸುತ್ತಾರೆ. ಈ ಹೋರಾಟಗಳೂ ಕಾಂಗ್ರೆಸ್ಸಿನ ನೇತೃತ್ವದಲ್ಲಿ ನಡೆಯುವುದರಿಂದ ಕಾಂಗ್ರೆಸ್ಸು ಸಂಪೂರ್ಣ ಪ್ರಜಾಸಂಸ್ಥೆಯಾಗುತ್ತದೆ. ಈ ಹೋರಾಟಗಳ ಮೂಲಕವಾಗಿ ರಾಜಕೀಯ ತಿಳುವಳಿಕೆಯನ್ನು ಅವರಲ್ಲಿ ಉದಯಿಸುವಂತೆ ಮಾಡಿ ಅವರ ಮುಂದಿನ ಧ್ಯೇಯದ ಸಂಬಂಧವಾಗಿ ಅವರೇ ತಮ್ಮ ಅಭಿಪ್ರಾಯಗಳನ್ನು ಕೊಡಲು ಶಕ್ಯವಷ್ಟು ಪ್ರಜ್ಞೆಯನ್ನು ಜನರಲ್ಲಿ ಹರಡಲು ಅನುವಾಗುವುದು. ಹೀಗಾದರೆ ಮುಂದಿನ ಹೋರಾಟವಾದರೂ ನಿಜವಾದ ಪ್ರಜಾಪ್ರಭುತ್ವ ಸಿದ್ಧಾಂತಗಳಿಗನುಸಾರವಾಗಿ ನಡೆದು ನಮ್ಮ ಹಾದಿಯು ಸುಗಮವಾಗುವುದು. ಜನಸಾಮಾನ್ಯರೆಲ್ಲರೂ ಏಕಮುಖವಾಗಿ ತಮ್ಮ ಹಿತಾಹಿತಗಳನ್ನು ಲಕ್ಷ್ಯದಲ್ಲಿಟ್ಟು ಅಧಿಕಾರ ಶಾಸನ ಮೂಲವನ್ನು ತಿಳಿದು ಮುಂದಿನ ರಾಜ್ಯಘಟನೆಯ ಬಗ್ಗೆ ಸರಿಯಾದ ಅಸ್ತಿಭಾರವನ್ನು ಹಾಕಲುದ್ಯುಕ್ತರಾಗುವರು.

ಕೆಲವು ಕಡೆಗಳಲ್ಲಿ ಒಂದು ಭ್ರಾಂತು ಇರುವಂತೆ ಕಂಡು ಬರುತ್ತದೆ. ಈ ಸಭೆಯು ಹೋರಾಟ ಮುಗಿದ ನಂತರ ಸೇರತಕ್ಕದ್ದೆಂದು ಅವರ ಅಭಿಪ್ರಾಯ. ಮುಂದಿನ ರಾಜ್ಯಾಂಗದ ಮೂಲ ಸಿದ್ಧಾಂತಗಳನ್ನೇ ನಿರ್ಣಯಮಾಡದೆ ಹೋರಾಟಕ್ಕೆ ರೂಪ ಕೊಡುವುದಾದರೂ ಹೇಗೆ? ರಾಜಕೀಯ ಅಧಿಕಾರವನ್ನು ಯಾವ ಉದ್ದೇಶದಿಂದ ವಶಮಾಡಿಕೊಳ್ಳಬೇಕು ಎಂಬುದೇ ನಿರ್ಣಯವಾಗದಿದ್ದಲ್ಲಿ ರಾಜ್ಯಘಟನೆಗೆ ರೂಪವನ್ನು ಕೊಡುವುದಾದರೂ ಹೇಗೆ? ನಾನಾ ಪಂಗಡಗಳು ಈ ಹೋರಾಟದಲ್ಲಿ ಭಾಗಿಗಳಾಗಿ ಬೇರೆ ಬೇರೆ ಹಿತಗಳುಳ್ಳವರೆಲ್ಲ ಸೇರಿದ ಮೇಲೆ ಮೇಲ್ಗೈ ಇರುವವರು ತಮ್ಮ ಇಚ್ಛೆಯಂತೆಯೇ ರಾಜ್ಯಘಟನೆಯನ್ನು ನಿರೂಪಿಸಿ ಅಧಿಕಾರವನ್ನು ತಮ್ಮ ವಶಮಾಡಿಕೊಳ್ಳುವರು. ಇದು ಇತಿಹಾಸ ಸಿದ್ಧವಾದ ವಿಷಯ. ಇದನ್ನು ನಾವು ಮರೆಯಲಾಗದು. ಸಮಾಜದಲ್ಲಿ ಪ್ರತ್ಯೇಕ ಹಿತಗಳುಳ್ಳ ಇಬ್ಭಾಗವಿರುವಾಗ ಈ ಕಡೆಗೆ ಗಮನಕೊಟ್ಟು ಮುಂದಿನ ಹೆಜ್ಜೆಯಿಡುವುದು ಶ್ರೇಯಸ್ಕರವಾದುದು.

ಇದೀಗ ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿಯ ರಚನೆ ಮತ್ತು ಅರ್ಥ. ಇದು ಸಾಮ್ರಾಜ್ಯಶಾಹಿಯ ಆಶ್ರಯದಲ್ಲಿ ಕೂಡುವುದೂ ಅಲ್ಲ. ಸಾಮ್ರಾಜ್ಯಶಾಹಿಯಾದರೂ ಅದನ್ನು ಕೂಡಿಸಿ ತಾನು ನೋಡುತ್ತಾ ಕೂಡುವುದೂ ಅಲ್ಲ. ಇದು ಹೋರಾಟದಲ್ಲಿಯೇ ಬೆಳೆದು ರಾಜಸತ್ತೆಯು ಪ್ರಜೆಗಳ ಕೈವಶವಾಗುವ ಮೊದಲು ಪೂರ್ಣಾಧಿಕಾರಕ್ಕೆ ಬಂದು ಮುಂದಿನ ಮಾರ್ಗವನ್ನು ನಿರ್ಣಯಿಸುವುದು. ಇದನ್ನು ತಿಳಿದು ಎಷ್ಟು ಮಟ್ಟಿಗೆ ನಾವು ನಮ್ಮ ಮಾರ್ಗದಲ್ಲಿ ಮುಂದುವರಿಯುತ್ತೇವೋ ಅಷ್ಟು ಮಟ್ಟಿಗೆ ನಾವು ಸಾಮ್ರಾಜ್ಯಶಾಹಿಯನ್ನು ಪರಿವರ್ತನೆ ಮಾಡಲು ಶಕ್ಯರಾಗುತ್ತೇವೆ.

'ವಿ. ಕ.'

ಗಿರಣಿ ಅಕ್ಕಿ-ಹಿಟ್ಟು ಅನಾರೋಗ್ಯಕರ.

ಸುಧಾರಿಸಿದ ಹಾಗು ರುಚಿಕಟ್ಟಾದ ಆಹಾರದಿಂದ ದೇಹದ ಜೀರ್ಣಕಾರಕ ಅಂಗಗಳಿಗೂ ಮತ್ತು ದೇಹಕ್ಕೂ ಸಹ ಬಹಳ ಅನಿಷ್ಟ ಉಂಟಾಗುತ್ತದೆಯೆಂದು ಇತ್ತೀಚೆಗೆ ವಿಜ್ಞಾನ ಸಂಶೋಧಕರು ತಿಳಿಸುತ್ತಾರೆ. ಹೆಚ್ಚು ಸಕ್ಕರೆಯು ಬಾಯಿಯಲ್ಲಿ ಹುಳಿತು ಹಲ್ಲುಗಳು ಜಾಗ್ರತೆಯಾಗಿ ಕೆಟ್ಟು ಹೋಗುತ್ತವೆಯೆಂದು ಜನರು ತಿಳಿದಿದ್ದರು. ಆದರೆ ಈಗ ಸಂಶೋಧಕರು ಶೋಧನಮಾಡಿ ಸುಧಾರಿಸಿದ ಆಹಾರವು ದೇಹದಲ್ಲಿ ಕೊಳೆಯುವುದಕ್ಕೆ ಕಾರಣವಾದ, ಮತ್ತು ಹಲ್ಲುಗಳಿಗೆ ಬೇಕಾಗುವ 'ವ್ಹಿಟಾಮಿನ್' (ಕ್ಯಾಲ್ಸಿಯಂ ಫಾಸ್ಪರಸ್ ಮೆಟೊಬ್ಲಾಸಂ) ಸಾಕಷ್ಟು ಇಲ್ಲದಿರುವದರಿಂದ ಹೀಗಾಗುತ್ತದೆಯೆಂದು ಅಭಿಪ್ರಾಯಪಡುತ್ತಾರೆ. ಸುಧಾರಿಸಿದ ಆಹಾರವಾದ ಬಿಳಿಯ ಹಿಟ್ಟಿನೊಡನೆ ಸಾಧಾರಣವಾಗಿ ಕೆಡದ ಇದ್ದ ಹಲ್ಲುಗಳನ್ನು ಇಟ್ಟು ಪಯೋಗಿಸಿದಾಗ ಈ ಹಲ್ಲುಗಳು ಬಹಳ ಜಾಗ್ರತೆಯಾಗಿ ಕೆಡುವುದಕ್ಕೆ ಆರಂಭಿಸಿದವು. ಆದರೆ ಸುಧಾರಿಸದೆ ಆಸಿದ್ಧವಿದ್ದ ಕಬ್ಬಿನ ಹಾಲಿನಲ್ಲಿ ಇಟ್ಟು ಉಪಯೋಗಿಸಿದಾಗ ಹಲ್ಲುಗಳು ಕೆಟ್ಟಿರಲಿಲ್ಲ. ಇದು ಹೀಗೇಕೆಂಬ ಪ್ರಶ್ನೆಯು ಉದ್ಭವಿಸುವದು ಸಹಜವಾಗಿದೆ. ಹಲ್ಲುಗಳು ಗಟ್ಟಿಯಾಗಿರಲು ಸಹಕಾರಿಯಾದ 'ಕಾರ್ಬೋಹೈಡ್ರೇಟ್' ವಿಟ್ಯಾಮಿನವು ಸುಧಾರಿಸುವ ಕ್ರಮದಲ್ಲಿ ನಾಶಹೊಂದಿರುತ್ತದೆ. ಈ ಪ್ರಮೇಯವನ್ನು ಸ್ಪಷ್ಟೀಕರಿಸಲಿಕ್ಕೆ ಆಫ್ರಿಕದ ಬಾಂಟು ಜನಗಳೇ ಉದಾಹರಣೆಯಾಗಿದ್ದಾರೆ. ಈಚೆಗೆ ಈ ಜನಗಳು ಮಿಶನುಗಳಲ್ಲಿ ತಯಾರಾದ ಹಿಟ್ಟಿನ ರೊಟ್ಟಿಯನ್ನು ಮತ್ತು ಯಂತ್ರದ್ವಾರ ತಯಾರಾದ ಸಕ್ಕರೆ ತಿನ್ನುವುದರಿಂದ ಹಲ್ಲಿಗೆ ಸಂಬಂಧಪಟ್ಟ ರೋಗಗಳಿಂದ ನರಳುತ್ತಿದ್ದಾರೆ. ಹಳೆಯ ಸಂಪ್ರದಾಯದ ಆಹಾರವನ್ನು ಸುಧಾರಿಸಿದ ಸಕ್ಕರೆ, ಹಿಟ್ಟು, ಇತ್ಯಾದಿ ಉಪಯೋಗಮಾಡಿದರೆ ನಮ್ಮ ಗತಿಯಾದರೂ ಹೀಗೆಯೇ ಆಗುವುದೆಂದು ಕಂಠೋಕ್ತವಾಗಿ ಹೇಳಬಹುದು.

ಸುಧಾರಿಸುವ ಕ್ರಮದಲ್ಲಿ ಆಹಾರದಲ್ಲಿನ ಜೀರ್ಣಕಾರಕ ಮತ್ತು ಸಾರವತ್ತಾದ ಪದಾರ್ಥಗಳು ಅವಶ್ಯವಾಗಿ ಹೋಗುವುವು. ಉದಾಹರಣಾರ್ಥವಾಗಿ ಅಕ್ಕಿಯ ಮೇಲ್ಭಾಗದಲ್ಲಿ ಆಹಾರದಲ್ಲಿ ಉತ್ತಮವೆನಿಸಿದ ಪ್ರೊಟೀನ್ ಕೊಬ್ಬು, ಮತ್ತು ಖನಿಜ ಸಂಬಂಧ ಧಾತುಗಳು ಇವೆ. ಅವರೆ ಬತ್ತವನ್ನು ಯಂತ್ರಕ್ಕೆ ಕೊಟ್ಟು ಹೆಚ್ಚು ಹೊಳಪು ಕೊಡುವ ಭರದಲ್ಲಿ ಮೇಲೆ ಹೇಳಿದ ವ್ಹಿಟಾಮಿನ್ ಎಲ್ಲವೂ ಹೊಟ್ಟಿನಲ್ಲಿ ಸೇರುವವು. ಬೆಂಗಳೂರಿನಲ್ಲಿ ಡಾ. ಶ್ರೀನಿವಾಸನ್‌ರವರು ಪ್ರಯೋಗ ನಡೆಯಿಸಿದಾಗ 100 ಕ್ಕೆ 25 ರಷ್ಟು ಪ್ರೊಟೀನ್ 100ಕ್ಕೆ 30 ರಷ್ಟು ಹೊಟ್ಟು ಮತ್ತು 100 ಕ್ಕೆ 75 ರಷ್ಟು ಖನಿಜ ಸಂಬಂಧ ಧಾತುಗಳು ಯಂತ್ರದಲ್ಲಿ ಕುಟ್ಟುವಾಗ ಅಥವಾ ಬೀಸುವಾಗ ನಶಿಸುತ್ತವೆಯೆಂದು ಶೋಧನಮಾಡಿದ್ದಾರೆ. ಅಕ್ಕಿಯು ಯಂತ್ರದಿಂದ ಕುಟ್ಟಿದಾಗ ಅದರ ಮೇಲ್ಭಾಗವು ಹೋಗಿ ಹೀಗೆ ಆಗಲು ಕಾರಣವಾಗುತ್ತದೆ. ಆದರೆ ಮನೆಯಲ್ಲಿ ಕುಟ್ಟಿದ ಅಕ್ಕಿಯು ಹೀಗಾಗಲು ಕಾರಣವಿಲ್ಲ. ಹೊಳಪುಕೊಟ್ಟ ಅಕ್ಕಿಯನ್ನು ತುಸು ಬೇಯಿಸಿಯೂ ಮತ್ತು ಹೊಳಪು ಕೊಡದೆ ಇದ್ದ ಅಕ್ಕಿಯನ್ನು ಬಹಳ ಬೇಯಿಸಿ ಪ್ರಯೋಗ ನಡೆಯಿಸಿದಾಗ, ಹೊಳಪುಕೊಟ್ಟ ಅಕ್ಕಿಯಿಂದ ಮಾಡಿದ ಅನ್ನದಲ್ಲಿ ಪ್ರೊಟೀನ್ ಮತ್ತು ಫಾಸ್ಪರಸ್ ಇವು ಹೊಳಪು ಕೊಡದೆ ಇದ್ದ ಅಕ್ಕಿಯಿಂದ ಮಾಡಿದ ಅನ್ನದಲ್ಲಿ ಹೆಚ್ಚು ಪ್ರಮಾಣದಿಂದ ಇದೆಯೆಂದು ಕಂಡು ಬರುತ್ತದೆ. ಇದೇ ಶೋಧವನ್ನು ಮುಂದುವರಿಸಿದಾಗ ಬಡವರು ಉಪಯೋಗ ಮಾಡುವ ಅರ್ಧಮರ್ಧ ಕುಟ್ಟಿದ ಕೆಂಪು ಅಕ್ಕಿಯು ಗೋಧಿಗೆ ಸಮಾನವಾದ ಶ್ರೇಷ್ಠ ಆಹಾರವೆಂದೂ ಮತ್ತು ಅದರಲ್ಲಿ ಹೆಚ್ಚು ಅಂಶದ ಜೀರ್ಣಕಾರಕ ಪದಾರ್ಥಗಳಾದ ಪ್ರೊಟೀನ್ ಖನಿಜ ಸಂಬಂಧ ಧಾತು ಫಾಸ್ಪರಸ್ ಕ್ಯಾಲ್ಸಿಯಂ ಇವು ಇವೆಯೆಂದು ಕಂಡುಹಿಡಿದಿದ್ದಾರೆ. ಅಲ್ಲದೆ ಈ ಕೆಂಪು ದಪ್ಪ ಅಕ್ಕಿಯ ಮೇಲ್ಭಾಗವು ಇರುವದರಿಂದ ಕುಟ್ಟುವ ಕ್ರಮದಲ್ಲಿ ಹೆಚ್ಚು ಅಂಶ ಮೇಲ್ಭಾಗವು ಹೋಗುವದಿಲ್ಲ. ಇಂತಹ ಅಕ್ಕಿಯನ್ನು ಬಹಳ ದಿವಸ ಇಟ್ಟರೆ ಕೆಡುವ ಸಂಭವವಿದೆ.

ಯುದ್ಧದ ಭೀಭತ್ಸ ರೂಪ!

ದಕ್ಷಿಣ ನಾರ್ವೆಯಲ್ಲಿ ಮಿತ್ರರಾಷ್ಟ್ರಗಳ ಸೋಲು. ಬ್ರಿಟಿಷ್ ಮಂತ್ರಿ ಮಂಡಳದ ಮೇಲೆ ಅತ್ಯುಗ್ರ ಟೀಕೆ. ಮಿತ್ರ ರಾಷ್ಟ್ರಗಳ ವಿಮಾನ ನಷ್ಟ. ಜರ್ಮನರ ಮುನ್ನಡೆ. ಉತ್ತರ ಭಾಗದ ಎಲ್ಲಾ ರಂಗಗಳಲ್ಲೂ ಘೋರ ಯುದ್ಧ.

ಯುದ್ಧವು ಕ್ರಮಶಃ ಮುಂದುವರಿದಂತೆ ಜರ್ಮನಿಯ ಕೈ ಮೇಲಾಗುತ್ತಿದೆ. ಕಳೆದ ವಾರದ ಯುದ್ಧದಲ್ಲಿ ಬ್ರಿಟಿಷರು ನಾರ್ವೆಯ ಟ್ರಾಂಡ್‌ಜೆಮ್ ಹಾಗೂ ನಾಮ್ಸಸ್ ಪ್ರಾಂತಗಳನ್ನು ಬಿಟ್ಟು ತಮ್ಮ ಸೈನ್ಯವನ್ನು ಹಿಂದೆಗೆಯಬೇಕಾಯಿತು. ಹೀಗೆ ಬ್ರಿಟಿಷರು ಒಂದೊಂದು ಪ್ರಾಂತ್ಯದಿಂದ ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಳ್ಳುತ್ತಿರುವರು. ಬ್ರಿಟಿಷ್ ಸೈನ್ಯದ ಈ ರೀತಿಯ ಕಾರ್ಯಕ್ರಮವು ಬ್ರಿಟಿಷ್ ಪಾರ್ಲಿಮೆಂಟಿನ ಮುಖಂಡರನೇಕರಿಗೆ ಅತೃಪ್ತಿಯನ್ನುಂಟುಮಾಡಿದೆ. ಈ ವಿಚಾರದಲ್ಲಿ ಮಿ. ಅಟ್ಲಿಯವರು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸುತ್ತಾ ನಮ್ಮ ಜನಾಂಗವು ಇಂದಿನ ಬಿಕ್ಕಟ್ಟಿನಲ್ಲಿ ಸರ್ವಸ್ವವನ್ನೂ ತ್ಯಾಗ ಮಾಡಲು ತಯಾರಿರುವಾಗ ನಮ್ಮನ್ನು ಮುನ್ನಡೆಸುವ ಮುಖಂಡರು ಈ ರೀತಿ ಅಳ್ಳೆದೆಯ ಧೋರಣೆಯನ್ನನುಸರಿಸುವುದು ತೀರಾ ಅವಮಾನಕರ. ಆದ್ದರಿಂದ ಬ್ರಿಟಿಷ್ ಜನತೆಯನ್ನು ಸುರಕ್ಷಿತವಾಗಿ ಮುನ್ನಡೆಸುವ ಮುಖಂಡರಿರಬೇಕು. ಆದ್ದರಿಂದ ಇಂದಿನ ಮಂತ್ರಿ ಮಂಡಳವನ್ನು ಪುನರ್ರಚಿಸುವದು ಹಿತವಿದೆ' ಎಂದಿರುವರು. ಕಳೆದ ಘೋರ ಯುದ್ಧದ ಕಾಲಕ್ಕೆ ಬ್ರಿಟಿಷ್ ಜನಾಂಗದ ಸೂತ್ರ ಚಾಲನೆಯನ್ನು ವಹಿಸಿದ್ದ ಮಿ. ಲಾಯಿಡ್ ಜಾರ್ಜರವರು ನಾರ್ವೆಯಲ್ಲಿ ಬ್ರಿಟಿಷರು ಹಿಮ್ಮೆಟ್ಟಿದ ವಿಚಾರ ಟೀಕಿಸುತ್ತಾ ಅದು ಕೇವಲ ಕಿಳಿಗೇಡಿ ಹಾಗೂ ಮುಂದಾಲೋಚನೆಯಿಲ್ಲದ ವರ್ತನೆಯೆಂದಿರುವರು. ಬ್ರಿಟಿಷ್ ಜನಾಂಗವನ್ನು ಜರ್ಮನಿಯಂಥಾ ಪ್ರಚಂಡ ಶತ್ರುವಿನೆದುರು ಜಯಪ್ರದವಾಗಿ ನಡೆಸುವಂಥಾ ಚಾಣಾಕ್ಷ್ಯ ಹಾಗೂ ತಮ್ಮ ಸಮಯವನ್ನೆಲ್ಲಾ ಯುದ್ಧದ ಮುನ್ನಡೆಯ ಬಗ್ಗೆ ಉಪಯೋಗಿಸುವ ಮುಂದಾಳುಗಳು ಬೇಕು. ಆದ್ದರಿಂದ ಮಂತ್ರಿ ಮಂಡಲದ ಪುನರ್ವ್ಯವಸ್ಥೆಯು ಅಗತ್ಯವೆಂದಿದ್ದಾರೆ. ಈ ರೀತಿಯಾಗಿ ಲಂಡನಿನಲ್ಲಿ ಕೋಲಾಹಲವೆದ್ದಿದೆ. ಈ ವಾರ ಪಾರ್ಲಿಮೆಂಟಿನಲ್ಲಿ ಇದರ ಕೂಲಂಕುಷ ಚರ್ಚೆ ನಡೆಯಲಿದೆ.

ನಾರ್ವೆಯ ದಕ್ಷಿಣ ಭಾಗದಲ್ಲಿ ಮಿತ್ರ ರಾಷ್ಟ್ರಗಳು ಜಯ ಪಡೆಯದಿರಲು ನಾರ್ವೆಯ ಕರೆಗೆ ಕಿವಿಗೊಟ್ಟು ಕ್ಷಿಪ್ರದಲ್ಲಿಯೇ ಬ್ರಿಟಿಷ್ ಪಡೆಯು ನಾರ್ವೆಗೆ ಬಂದಿಳಿದುದರಿಂದ ಯೋಗ್ಯವಾದ ವ್ಯವಸ್ಥೆ ಹಾಗೂ ಸಾಹಿತ್ಯ ಸರಂಜಾಮುಗಳಿಲ್ಲದ ಏಕಾ ಏಕಿ ಜರ್ಮನ್ ಸೈನ್ಯವನ್ನು ಎದುರಿಸಬೇಕಾಗಿ ಬಂದದ್ದೇ ಕಾರಣವೆಂದು ಹೇಳುತ್ತಿರುವರು. ಜರ್ಮನರು ಬ್ರಿಟಿಷರ ಸೈನ್ಯಕ್ಕೆ ಆಹಾರ ಸಾಮಗ್ರಿಗಳು ಸಿಕ್ಕದಂತೆ ತಡೆ ಹಾಕಿದ್ದೂ, ತಡೆಬಡೆಯಿಲ್ಲದ ಶತ್ರುಗಳ ವಿಮಾನ ಧಾಳಿಯೂ ತಮ್ಮ ಸೋಲಿಗೆ ಮುಖ್ಯೊಂದು ಕಾರಣವೆಂದಿದ್ದಾರೆ.

ಜರ್ಮನರು ತಮ್ಮ ಜಯದಿಂದ ಪ್ರೋತ್ಸಾಹಗೊಂಡವರಾಗಿ ಮುನ್ನುಗ್ಗುತ್ತಿದ್ದಾರೆ.

ರಣರಂಗ

ನಾರ್ವೆ ಯುದ್ಧ ಪರಿಸ್ಥಿತಿಯನ್ನು ಕುರಿತು ಅವರ ವಿದೇಶ ಮಂತ್ರಿಯಾದ ಮಿ. ಕೋಟ್ಸ್‌ರವರು ಹೀಗೆನ್ನುವರು.

'ಈ ಯುದ್ಧದಲ್ಲಿ ನಮ್ಮ ನಷ್ಟವು ವಿಪರೀತವಾಗಿದೆ. ಲಕ್ಷಾಂತರ ಜನರು ಸೆರೆಯಾಳುಗಳಾಗಿರುವರು. ಸಾವಿರಾರು ಜನರು ಮೃತರಾಗಿರುವರು. ಸೈನ್ಯದ ಅನೇಕ ಭಾಗಗಳು ನಾಶವಾಗಿರುವವು. ಅಂಥಾ ನಾರ್ವೆಯ ಉತ್ತರ ಭಾಗದಲ್ಲಿ ನಮ್ಮ ಸೈನ್ಯವು ತಯಾರಾಗಿಯೇ ಇದೆ. ನಾರ್ವೆಯಲ್ಲಿ ಜರ್ಮನರ ಒಂದು ಲಕ್ಷ ಸೈನಿಕರಿರಬಹುದು. ನಾರ್ವೆ ಸರಕಾರವು ಸ್ವೀಡನಿನಿಂದ ಯಾವ ಸಹಾಯವನ್ನು ಪಡೆಯಲೂ ಇಚ್ಛಿಸುವುದಿಲ್ಲ. ನಾವು ಶತ್ರುಗಳ ಉಪಟಳಕ್ಕೆ ಸಿಕ್ಕಿ ಕೊಂಪರೆಪಡುತ್ತಿರುವಂತೆ ಅವರನ್ನಾದರೂ ಇಂಥಾ ತೊಂದರೆಗೆ ಸಿಕ್ಕಿಸಲು ಇಚ್ಛಿಸುವುದಿಲ್ಲ'.

ವಿಮಾನ ತಯಾರಿ.

ಇಂಗ್ಲೆಂಡಿನಲ್ಲಿ ವಿಮಾನ ತಯಾರಿಯು ಭರದಿಂದ ನಡೆಯುತ್ತಿದೆ. ಪ್ರಚಂಡ ವಿಮಾನ ತಯಾರಿಯು ಆಗುತ್ತಿದೆ.

ನಾರ್ವಿಕ್ ಕದನ.

ಜರ್ಮನರ ವಶವಿರುವ ನಾರ್ವಿಕಿನ ಮೇಲೆ ಮಿತ್ರ ರಾಷ್ಟ್ರಗಳು ತಾರೀಕು 6ರಲ್ಲಿ ಬಾಂಬು ಹಾಕಿದವು. ಬಾಂಬು ಹಾಕುವ ಮೊದಲು ಪಟ್ಟಣದ ನಾಗರೀಕರಿಗೆ ಎಚ್ಚರಿಕೆ ಕೊಡಲಾಗಿತ್ತು. ಜರ್ಮನರು ಈ ಭಾಗದಲ್ಲಿ, ನಾರ್ವೆಯ ದಕ್ಷಿಣ ಭಾಗದಲ್ಲಿ ಜಯಪಡೆದಂತೆ ಗೆಲ್ಲುವದು ಸುಲಭಸಾಧ್ಯವಲ್ಲವೆಂದು ಬ್ರಿಟಿಷರ ಹೇಳಿಕೆ.

ಜರ್ಮನರ ಪ್ರಯತ್ನ.

ನಾರ್ವೆಯ ಉತ್ತರ ಭಾಗವನ್ನು ವಶಮಾಡಿಕೊಳ್ಳುವ ಉದ್ದಿಶ್ಯ ಜರ್ಮನರು ಒಳ್ಳೇ ಹುರುಪಿನಿಂದ ಯುದ್ಧ ಮಾಡುತ್ತಿರುವರು. ಉತ್ತರ ಭಾಗಕ್ಕೆ ತಾರೀಕು 6ರ ಒಂದೇ ದಿನ 100 ವಿಮಾನಗಳನ್ನು ಕಳುಹಿಸಿರುವರು. ನಾರ್ವಿಕಿನ ಸುತ್ತು ನಾರ್ವೆಯ 25 ಸಾವಿರ ಸೈನ್ಯವು ಆವರಿಸಿದೆಯಂತೆ. ಈ ವರೆಗೆ ಜರ್ಮನರ ವಶವಾಗಿರುವ 10 ಸಾವಿರ ನಾರ್ವೆಯನರನ್ನು ನಾರ್ವೆಯಲ್ಲಿ ವ್ಯವಸಾಯ ಮತ್ತು ಕೈಗಾರಿಕೆ ವೃತ್ತಿಗಳಿಗೆ ಜರ್ಮನರು ಹಚ್ಚುತ್ತಿರುವರು.

ಎರಡು ವಿಮಾನಗಳ ನಷ್ಟ.

ಕಳೆದ ಆದಿತ್ಯವಾರ ನಾರ್ವೆಯಿಂದ ದೂರದಲ್ಲಿದ್ದ ಬ್ರಿಟಿಷರ ಎರಡು ವಿಮಾನಗಳನ್ನು ಜರ್ಮನರು ಗುಂಡು ಹಾರಿಸಿ ನಾಶ ಮಾಡಿರುವರು. ಇದನ್ನು ಬ್ರಿಟಿಷರೇ ಒಪ್ಪುತ್ತಾರೆ. ಅಲ್ಲದೆ ಬ್ರಿಟಿಷರ 'ಆಫ್ರಿಡೀ' ಎಂಬ ಸಬ್ ಮರೀನನ್ನು ಜರ್ಮನರು ಮುಳುಗಿಸಿರುವರಂತೆ.

ಫ್ರೆಂಚರ 'ಬ್ರೈಸನ್' ಎಂಬ ಡಿಸ್ಟ್ರಾಯರನ್ನು ಜರ್ಮನರ ವಿಮಾನವೊಂದು ಕಳೆದ ಶುಕ್ರವಾರ ಉತ್ತರ ಸಮುದ್ರದಲ್ಲಿ ಮುಳುಗಿಸಿತು. ಹಡಗಿನಲ್ಲಿದ್ದ ಜನರನ್ನೆಲ್ಲಾ ರಕ್ಷಿಸಲಾಯಿತಂತೆ.

ತಾರೀಕು 6ರಲ್ಲಿ ಬ್ರಿಟಿಷರ ಇನ್ನೊಂದು ಸಬ್‌ಮರೀನನ್ನು ಜರ್ಮನಿಯ ಎರಡು ವಿಮಾನಗಳು ಸೇರಿ ವಶಪಡಿಸಿಕೊಂಡು ಅದರ ಕಮಾಂಡರನ್ನೂ, ಸೈನಿಕರನ್ನೂ ಸೆರೆ ಹಿಡಿದವು.

ಇಟಲಿ, ಬ್ರಿಟನ್.

ಮೆಡಿಟರೇನಿಯನ್ ಸಮುದ್ರದಲ್ಲಿ ಬ್ರಿಟಿಷರ ಧೋರಣೆಯೇನೆಂದು ಇಟಲಿಯ ಪ್ರಶ್ನೆಪ್ಪಕ್ಕೆ ಬ್ರಿಟನು ಉತ್ತರಿಸುತ್ತಾ ಇಟಲಿಯೊಡನೆ ಸೌಹಾರ್ದತೆಯನ್ನು ವರ್ಧಿಸುವದು ಬ್ರಿಟಿಷರ ಧ್ಯೇಯವೆಂದೂ ಇಟಲಿಯ ಕೆಲವು ಪತ್ರಿಕೆಗಳ ಪ್ರಚಾರದ ನಿಮಿತ್ತ ತಮ್ಮ ಹಿತ ರಕ್ಷಣೆಗಾಗಿ ಎಚ್ಚರಿಕೆ ವಹಿಸಲಾಗಿಯೆಂದಲೂ ಬ್ರಿಟಿಷರು ತಿಳಿಸಿರುವರು.

ಜರ್ಮನಿಯ ಭರವಸೆ.

ಸ್ವೀಡನಿನ ಸ್ವಾತಂತ್ರ್ಯಕ್ಕೆ ಜರ್ಮನಿಯು ಯಾವ ತೊಂದರೆಯನ್ನೂ ಮಾಡನೆಂದೂ ಅದರ ತಾಟಸ್ಥ್ಯವನ್ನು ಮನ್ನಿಸಲಾಗುವದೆಂದೂ ಹಿಟ್ಲರನು ಭರವಸೆಯನ್ನಿತ್ತಿರುವನು.

ಮೊಸರು ಸಕ್ಕರೆ ಖೋತೆ.

ಡೆನ್ಮಾರ್ಕ್ ಜರ್ಮನರ ಆಕ್ರಮಕ ರಾಜ್ಯವಾದಂದಿನಿಂದ ಬ್ರಿಟಿಷರಿಗೆ ಅವರು ಸರಬರಾಯಿ ಮಾಡುತ್ತಿದ್ದ ಮೊಸರು ಮತ್ತು ಸಕ್ಕರೆಯೂ ನಿಂತು ಹೋಗಿರುವದರಿಂದ ಮುಂದೆ ಬ್ರಿಟನಿನಲ್ಲಿ ಇದನ್ನು ಅಲ್ಪಪ್ರಮಾಣದಲ್ಲಿ ಉಪಯೋಗಿಸಬೇಕೆಂದೂ ಪ್ರಕಟಣೆ ಹೊರಬಿದೆ.

ಬ್ರಿಟನಿನಲ್ಲಿ ಭಾರತೀಯ ಸೈನ್ಯ.

ಭಾರತ ಸೈನ್ಯವೊಂದು ಯುದ್ಧಕ್ಕಾಗಿ ಹೊರಟಿದ್ದು ಲಂಡನಿಗೆ ತಲುಪಿದೆ. ಅದಕ್ಕೆ ಅಭೂತಪೂರ್ವ ಸ್ವಾಗತವನ್ನಿತ್ತು ಬ್ರಿಟಿಷರು ಮನ್ನಿಸಿರುವರು. ಲಂಡನಿನ ವಿಚಿತ್ರ ನೋಟಗಳನ್ನು ತೋರಿಸುವ ಕಾರ್ಯಕ್ರಮವು ಆಗಿದೆ. ಚಹಪಾರ್ಟಿಗಳೂ, ಸಿನೇಮಾ ಮೊದಲಾದ ಇತರ ಮನರಂಜಕ ವಿಚಾರಗಳ ಸೌಲಭ್ಯ ಕಲ್ಪಿಸಿಕೊಟ್ಟಿರುವರು.

ಹಳ್ಳಿಗಳ ಜೀವನದ ಆರೋಗ್ಯವನ್ನು ವೃದ್ಧಿಮಾಡಬೇಕಾದರೆ ಮನೆಯಲ್ಲಿಯೇ ಕುಟ್ಟುವದಾಗಲೀ ಬೀಸುವದಾಗಲೀ ಮಾಡಬೇಕು. ಮನುಷ್ಯನ ದೇಹದ ಕ್ರಮಕ್ಕೆ ಯಂತ್ರದಲ್ಲಿ ಕುಟ್ಟಿದ ಅಕ್ಕಿ ಗಿರಣಿಯಲ್ಲಿ ಬೀಸಿದ ಹಿಟ್ಟು ಮತ್ತು ಯಂತ್ರದಿಂದ ಮಾಡಿದ ಸಕ್ಕರೆ ಇವು ಹಾನಿಕರವಾಗಿರುವುದರಿಂದ ಮನೆಯಲ್ಲಿ ಬೀಸಿದ ಹಿಟ್ಟು ಕೈಯಿಂದ ಕುಟ್ಟಿದ ಅಕ್ಕಿ ಮತ್ತು ಬೆಲ್ಲ ಇವುಗಳನ್ನು ಮಾಡಲು ಪ್ರಚಾರ ಪಡೆಯಬೇಕು. ಕ. ವಿ.

ಬಿನ್ನಹ ಪತ್ರ.

ಪೊನ್ನಂಪೇಟೆನಾಡು ಬಾಳೆಲೆ ಗ್ರಾಮದ ಆಸ್ಪತ್ರೆ ಕಟ್ಟಡ ಕಮಿಟಿಯವರು ಕೊಡಗು ಚೀಫ್ ಕಮಿಷನರವರಿಗೆ ತಾ. 8-5-40 ರಲ್ಲಿ ಬಾಳೆಲೆ ಆಸ್ಪತ್ರೆಯ ಹೊಸ ಕಟ್ಟಡ ತೆರೆಯುವ ಸಮಾರಂಭದಲ್ಲಿ ಅರ್ಪಿಸಿದ ಬಿನ್ನವತ್ತಳೆಯ ಸಾರಾಂಶ.

'ನಮ್ಮ ಆಮಂತ್ರಣವನ್ನು ಸ್ವೀಕರಿಸಿ ತಾವು ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಇಲ್ಲಿಗೆ ಬಂದುದಕ್ಕೆ ನಿಮಗೆ ನಾವು ತುಂಬಾ ಕೃತಜ್ಞರಾಗಿರುವೆವು. ಈ ಭಾಗಕ್ಕೆ ಚೀಫ್ ಕಮಿಷನರು ಬಂದದ್ದು ಇದೇ ಮೊದಲೆಂದರೆ ತಪ್ಪಾಗದು. ನಮ್ಮಲ್ಲಿಯವರ ಕೋರಿಕೆಗಳಲ್ಲಿ ಒಂದಾದ ಈ ಆಸ್ಪತ್ರೆಯನ್ನು ದಯಪಾಲಿಸಿದ್ದಕ್ಕೆ ನಿಮಗೆ ತುಂಬಾ ಋಣಿಗಳಾಗಿರುವೆವು. ಜನತೆಯಲ್ಲಿ ಆಸ್ಪತ್ರೆಯ ವಿಚಾರ ಆದರ ಹೆಚ್ಚುತ್ತಿರುವದರಿಂದ ಹೆಚ್ಚು ಜನರಿಗೆ ಇದರಿಂದ ಉಪಯೋಗವಾಗುವದರಲ್ಲಿ ಸಂಶಯವಿಲ್ಲ. ಆದ್ದರಿಂದ ಇದನ್ನು ಕೇವಲ ಗ್ರಾಮಾಸ್ಪತ್ರೆಯಾಗಿಡದೆ ಇತರ ಆಸ್ಪತ್ರೆಗಳ ಸರಿಸಮಾನತೆಗೆ ಏರಿಸಬೇಕೆಂದು ಕೋರುತ್ತೇವೆ.

ಒತ್ತಿನ ಬೆಳೆಗೆ ಪ್ರಖ್ಯಾತವಾದ ಈ ನಾಡಿಗೆ ಸರಕಾರದ ತಕ್ಕ ಸಹಾಯ ಸಿಗದ್ದರಿಂದ ಜನತೆಯು ಆರ್ಥಿಕ ಮುಗ್ಗಟ್ಟಿನಲ್ಲಿ ಬಳಲುತ್ತಿರುವರು. ಆದ ಪ್ರಯುಕ್ತ ಈ ಮೂರು ಬೇಳಿಕೆಗಳನ್ನು ತಾವು ದಯವಿಟ್ಟು ನಡೆಸಿಕೊಡಬೇಕಿದೆ. (1) ಲಕ್ಷ್ಮಣ ತೀರ್ಥ ಹೊಳೆಗೂ, ಇತರ ಚಿಕ್ಕ ಹೊಳೆಗಳಿಗೂ ಅಣೆಕಟ್ಟು ಕಟ್ಟಿಸಿ ವ್ಯವಸಾಯಕ್ಕೆ ನೀರು ಸರಬರಾಯಿ ಮಾಡುವದು (2) ಬಾಳೆಲೆಗೆ ಬರುವ ಜಿಲ್ಲಾ ಬೋರ್ಡ್ ರಸ್ತೆಯನ್ನು ಕಲ್ಲು ಹಾಕಿಸಿಕೊಡುವದು. (3) ಇಲ್ಲಿಯವರ ಬತ್ತ ದಾಸ್ತಾನುಮಾಡುವ ಒಂದು ಸ್ಟೋರು ಕಟ್ಟಡಕ್ಕಾಗಿ ರೂ. 5,000 ಕ್ಕೆ ಕಡಿಮೆಯಿಲ್ಲದೆ ಹಣ ಸಹಾಯಮಾಡಬೇಕು.

ತಾವು ಕೊಡಗಿನಲ್ಲಿಯ ತಮ್ಮ ಅಧಿಕಾರವನ್ನು ಬೇಗನೆ ಬಿಡಲಿರುವಿರೆಂದು ತಿಳಿದು ವಿಷಾದಿಸುತ್ತೇವೆ. ನೀವು ಕೊಡಗಿನಿಂದ ಬಿಡುಗಡೆಗೊಳ್ಳುವ ಮೊದಲು ಈ ಮೇಲ್ಕಂಡ ಮೂರು ವಿಚಾರಗಳನ್ನು ಅಗತ್ಯ ನಡಸಿಕೊಡಬೇಕು.

ನಮ್ಮ ಈ ಆಸ್ಪತ್ರೆ ಕಟ್ಟಡಕ್ಕೆ ಉದಾರ ಭಾವದಿಂದ ಸ್ಥಳ ಮತ್ತು ದ್ರವ್ಯ ಸಹಾಯ ಮಾಡಿದ ಮಹನೀಯರ ಹೆಸರುಗಳನ್ನು ತಮ್ಮ ಮುಂದಿಡಲು ಸಂತೋಷವೆನಿಸುತ್ತದೆ. ಇವರೆಲ್ಲರಿಗೂ ನಮ್ಮ ವಂದನೆಗಳಿವೆ. ಅಲ್ಲದೆ ಇಲ್ಲಿಯ ಡಾಕ್ಟರರ ವಸತಿ ಗೃಹ ಕಟ್ಟಲಿಕ್ಕಾಗಿ ನಿಮ್ಮ ಡಿಸ್ಕ್ರೀಷನರಿ ಗ್ರಾಂಟಿನಿಂದ ರೂ. 500 ರನ್ನಾದರೂ ದಯಪಾಲಿಸಿ ಪ್ರೋತ್ಸಾಹಿಸಬೇಡುತ್ತೇವೆ.

ತಮ್ಮ ಶ್ರಮಕ್ಕೆ ವಂದಿಸಿ ಈ ಕಟ್ಟಡವನ್ನು ದಯಮಾಡಿ ತೆರೆದು ಅದರ ಪುರೋಭಿವೃದ್ಧಿಯನ್ನು ಕೋರಬೇಕಾಗಿ ಕೇಳಿಕೊಳ್ಳುತ್ತೇವೆ.

ತಮ್ಮ ವಿಧೇಯರಾದ
ಬಾಳೆಲೆ ಆಸ್ಪತ್ರೆ ಕಟ್ಟಡ
ಕಮಿಟಿಯವರು.

ಕೊಡಗು

ಮೇ ತಾರೀಕು ೧೦ ನೇ ಶುಕ್ರವಾರ ೧೯೪೦.

ಬ್ರಿಟಿಷರ ಯುದ್ಧದ ರೀತಿ.

ಜರ್ಮನಿಯು ದಿನೇ ದಿನೇ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುತ್ತಾ ಬರುತ್ತಿದೆ. ಆಸ್ಟ್ರಿಯಾ, ಜೆಕೊಸ್ಲೊವಾಕಿಯಾ, ಪೋಲೇಂಡು, ಡೆನ್ಮಾರ್ಕ್, ನಾರ್ವೆ ಮೊದಲಾದ ಪ್ರದೇಶಗಳು ಒಂದರನಂತರ ಒಂದಾಗಿ ಹಿಟ್ಲರನ ಸೈನಿಕರ ಧಾಳಿಗೆ ತುತ್ತಾಗಿ ಜರ್ಮನಿಯ ವಶವಾಗುತ್ತಾ ಬಂದವೆ. ಹಿಟ್ಲರನು ಯುದ್ಧಕ್ಕೆ ಸೇರದ ಯಾವ ಜನಾಂಗದ ಸ್ವಾತಂತ್ರ್ಯವನ್ನೂ ಗೌರವಿಸುವಂತೆ ಕಾಣುವದಿಲ್ಲ. ತನಗೆ ಅವಶ್ಯ ತೋರಿದಾಗ ಆ ಜನಾಂಗಗಳ ಮೇಲೆ ತನ್ನ ಸೈನ್ಯವನ್ನು ನಡಿಸಿಯೇ ಬಿಡುತ್ತಾನೆ. ಈ ಕಾರಣದಿಂದ ಜರ್ಮನಿಯ ಸುತ್ತುಮುತ್ತಲಿನ ಚಿಕ್ಕ ಜನಾಂಗಗಳೆಲ್ಲವೂ ಭಯಭೀತರಾಗಿ ನಡಗುತ್ತಿರುವವು. ಹಾಗೆಯೇ ಕೆಲವು ದಿನಗಳ ಹಿಂದೆ ಎನೊಂದೂ ಕಾರಣವಿಲ್ಲದೆ ಅನಿರೀಕ್ಷಿತವಾಗಿ ಜರ್ಮನಿಯ ಸೈನ್ಯವು ಡೆನ್ಮಾರ್ಕ್ ಮತ್ತು ನಾರ್ವೆಯ ಮೇಲೆ ಹಾಯ್ದು ಡೆನ್ಮಾರ್ಕನ್ನು ಪೂರ್ತಿಯಾಗಿಯೂ, ನಾರ್ವೆಯ ಹಲವು ಮುಖ್ಯ ಪಟ್ಟಣಗಳನ್ನೂ ಸ್ವಾಧೀನಪಡಿಸಿಕೊಂಡಿತು. ಯುದ್ಧಕ್ಕೆ ಸೇರದೆ ಇರುವ ಸ್ವತಂತ್ರ ಜನಾಂಗಗಳ ಮೇಲೆ ಜರ್ಮನಿಯು ಯುದ್ಧ ಹೂಡಿದ್ದಾದರೆ ತಾವು ಸಹಾಯ ಮಾಡುವೆವೆಂದು ಬ್ರಿಟನು ಮತ್ತು ಫ್ರಾನ್ಸ ಭರವಸೆಯನ್ನೀಯುತ್ತಾ ಬಂದಿವೆ. ಆದರೆ ಝೆಕೊಸ್ಲೊವಾಕಿಯಾ, ಪೋಲೇಂಡು ಮೊದಲಾದ ದೇಶಗಳ ಮೇಲೆ ಶತ್ರುಗಳು ಧಾಳಿ ನಡಿಸಿದಾಗ್ಯೆ ಮಿತ್ರ ಪಕ್ಷದವರಿಗೆ ಸಹಾಯ ಮಾಡಲು ಸಾಧ್ಯವಾಗಲಿಲ್ಲ. ಡೆನ್ಮಾರ್ಕ ಸ್ವಲ್ಪವೂ ವಿರೋಧಿಸಲು ಸಾಧ್ಯವಾಗದೆ ಶತ್ರುಗಳ ಸೈನ್ಯದ ಅಧೀನವಾಯಿತು. ಆದರೆ ನಾರ್ವೆಯು ಬ್ರಿಟನ್ನಿನ ಸಹಾಯವನ್ನು ಕೋರಿತು. ಬ್ರಿಟನು ತುರಿತದಲ್ಲೇ ಸಹಾಯವನ್ನು ನೀಡಲು ನಿರ್ಧರಿಸಿ, ತಮ್ಮದೊಂದು ಸೈನ್ಯವನ್ನು ಅಲ್ಲಿಗೆ ಕಳುಹಿಸಿತು. ಹಡಗು ಪಡೆಯ ಯುದ್ಧವನ್ನು ನಡೆಸಿ ಜರ್ಮನರ ಹಲವು ಯುದ್ಧ ಹಡಗುಗಳನ್ನು ನಾಶಪಡಿಸಿತು. ಅಲ್ಲದೆ ನಾರ್ವೆಯಲ್ಲಿ ಕೆಲವು ದಿವಸಗಳ ವರೆಗೆ ಜರ್ಮನಿಯ ಬಲವಾದ ಸೈನ್ಯದೊಂದಿಗೆ ಹೋರಾಟವನ್ನು ನಡೆಸಿತು. ಆದರೆ ಅವರಿಗೆ ಅಲ್ಲಿ ಸಾಕಷ್ಟು ವಿಮಾನ ನಿಲ್ದಾಣ ದೊರೆಯದ ಕಾರಣ ದಕ್ಷಿಣ ನಾರ್ವೆಯಿಂದ ತಮ್ಮ ಸೈನ್ಯವನ್ನೆಲ್ಲಾ ಹಿಂತೆಗೆಯಬೇಕಾಯಿತೆಂದು ಪ್ರಧಾನ ಮಂತ್ರಿಯವರು ಮೊನ್ನೆ ತಾನೇ ಪಾರ್ಲಿಮೆಂಟಿನಲ್ಲಿ ತಿಳಿಸಿದರು. ಬ್ರಿಟಿಷ್ ಮಂತ್ರಿ ಮಂಡಳಿಯ ಈ ರೀತಿಯ ಯುದ್ಧ ನೀತಿಯು ಬ್ರಿಟನಿನ ಜನರಲ್ಲಿ ತುಂಬಾ ಅಸಮಧಾನವನ್ನುಂಟು ಮಾಡಿದೆ. ಪತ್ರಿಕೆಗಳ ಮೂಲಕ ಮಾತ್ರವಲ್ಲ, ಪಾರ್ಲಿಮಂ ಈ ವರ್ತನೆಯನ್ನು ತುಂಬಾ ಟೀಕಿಸಿರುವರು. ಈ ವಿಚಾರವಲ್ಲಿ ಪ್ರಧಾನ ಮಂತ್ರಿಯವರ ಹೇಳಿಕೆಯು ಜನತೆಯಲ್ಲಿ ಸಮಧಾನವನ್ನುಂಟುಮಾಡಿರುವದಿಲ್ಲ. ನಾರ್ವೆಗೆ ಸಹಾಯ ಮಾಡುವದು ಮಿತ್ರ ಮಂಡಳಿಯವರ ಕರ್ತವ್ಯವಾಗಿದ್ದರೂ ತಮ್ಮ ಸಿದ್ಧತೆ ಮತ್ತು ಅನುಕೂಲತೆಗಳನ್ನು ನೋಡಿಕೊಳ್ಳದೆ ಆತುರದಲ್ಲಿ ನಾರ್ವೆಗೆ ಸೈನ್ಯವನ್ನು ಕಳುಹಿಸಿದ್ದು ಬ್ರಿಟಿಷ್ ಮಂತ್ರಿ ಮಂಡಳಿಯವರ ಯುದ್ಧ ರೀತಿಗೆ ಕೀರ್ತಿಯನ್ನು ತಂದಿರುವುದಿಲ್ಲ. ನಾರ್ವೆಯಲ್ಲಿ ಶತ್ರುಗಳ ಮಹತ್ತಾದ ಸೈನ್ಯದಿಂದ ಸಂಪೂರ್ಣ ನಾಶ ಹೊಂದುವದರ ಬದಲು ಸೈನ್ಯಗಳನ್ನು ಹಿಂದಕ್ಕೆ ಕರೆಯಿಸಿದ್ದು ಯುಕ್ತವೆಂದು ತೋರಿದರೂ, ಮಂತ್ರಿ ಮಂಡಳಿಯವರು ಅಲ್ಲಿಗೆ ಸೈನ್ಯ ಕಳುಹಿಸುವ ಮುಂಚಿತವಾಗಿಯೇ ತಕ್ಕಷ್ಟು ಮುಂಜಾಗ್ರತೆಯಿಂದ ವರ್ತಿಸಬೇಕಿತ್ತು. ತಮ್ಮ ತೀರ್ಮಾನಕ್ಕೆ ಪ್ರಧಾನ ಮಂತ್ರಿಯವರು ಎಷ್ಟೆಷ್ಟೋ ಕಾರಣಗಳನ್ನು ಕೊಟ್ಟರೂ ಕೂಡ ಪಾರ್ಲಿಮೆಂಟಿನ ಮೆಂಬರುಗಳಿಗೂ, ಜನಸಮುದಾಯಕ್ಕೂ ತಮ್ಮ ಸಂಶಯವು ಸಂಪೂರ್ಣ ಪರಿಹಾರವಾಗದೆ, ಮಂತ್ರಿಮಂಡಳಿಯವರು ಯುದ್ಧದ ವಿಚಾರದಲ್ಲಿ ಸಾಕಷ್ಟು ಮುಂದಾಲೋಚನೆಯಿಂದಲೂ, ಜೋರಿನಿಂದಲೂ ವರ್ತಿಸುತ್ತಿಲ್ಲವೆಂಬ ಅಭಿಪ್ರಾಯವು ಬಲವಾಗುತ್ತಿದೆ. ಮಂತ್ರಿಗಳ ಪೈಕಿ ಉತ್ಸಾಹಭರಿತರಾಗಿರುವ ಮಿ. ಚರ್ಚಿಲ್ಲರಿಗೆ ಯುದ್ಧ ಕಾರುಬಾರುಗಳನ್ನು ನಡೆಸುವ ಜವಾಬ್ದಾರಿಯನ್ನು ಸಂಪೂರ್ಣ ವಹಿಸಲಾಗಿದೆಯೆಂದು ಪ್ರಧಾನರು ಸೂಚಿಸಿರುವರಾದರೂ ಕೂಡ ಹುರುಪಿನಿಂದ ತುಂಬಿದ ಯುವಕ ಮುಂದಾಳುಗಳನ್ನೊಳಗೊಂಡ ಎಲ್ಲಾ ಪಕ್ಷಗಳ ಮಂತ್ರಿಮಂಡಳಿಯನ್ನು ರಚಿಸುವದು ಉತ್ತಮವೆಂದು ಹಲವರ ಅಭಿಪ್ರಾಯವಾಗಿದೆ. ಕಾಮನ್ಸ್ ಪಾರ್ಲಿಮೆಂಟಿನಲ್ಲಿ ಈ ವಿಚಾರ ಚರ್ಚೆ ನಡೆದ ಮೇಲೆ ಈ ಅಭಿಪ್ರಾಯವು ಎಷ್ಟರ ಮಟ್ಟಿಗೆ ರೂಪಿತಗೊಳ್ಳುವದೆಂದು ಈಗ ಹೇಳಲಾಗುವದಿಲ್ಲ. ಹೇಗೂ ಮಿತ್ರಮಂಡಳಿಯವರ ಯುದ್ಧ ರೀತಿಯಲ್ಲಿ ಯೋಗ್ಯವಾದ ಬದಲಾವಣೆಗಳಾಗದಿದ್ದರೆ ಮುಂದಿನ ಯೂರೋಪಿನ ಸ್ಥಿತಿಯು 'ಭಯಾನಕವಾಗುವದೆಂಬುದರಲ್ಲಿ ಸಂದೇಹವಿಲ್ಲ.

ಜರ್ಮನಿಗೆ ಒಂದು ಕಡೆ ಇಟೆಲಿಯವರು ಸಹಾಯಾರ್ಥವಾಗಿ ಮೆಡಿಟರೇನಿಯನ್ ಸಮುದ್ರದಲ್ಲಿ ತಮ್ಮ ಹಿಡಿತವನ್ನು ಬಿಗಿ ಮಾಡಲು ಯತ್ನಿಸುತ್ತಿರುವರು. ಇನ್ನೊಂದು ಕಡೆ ಜರ್ಮನಿಯು ಹಾಲೆಂಡಿನ ಮೇಲೆ ಅಥವ ಬಾಲ್ಕನ್ ರಾಷ್ಟ್ರಗಳ ಮೇಲೆ ಅನಿರೀಕ್ಷಿತವಾಗಿ ಥಕ್ಕನೆ ಧಾಳಿ ನಡೆಸಬಹುದೆಂಬ ವಾರ್ತೆಯು ಹಬ್ಬುತ್ತಿ ಪ್ರಸಿದ್ದನು. ಆವನು ಎಂದು ಎಲ್ಲಿ ತನ್ನ ಸೈನ್ಯದ ಪ್ರಭಾವವನ್ನು ಬೀರುವನೆಂದು ಯಾರಿಗೂ ಹೇಳಲಾಗುವದಿಲ್ಲ. ಆದ ಕಾರಣ ಮಿತ್ರಮಂಡಳಿಯವರು ಶತ್ರುಗಳ ಯಾವ ದೊಡ್ಡ ಕಾರ್ಯಕ್ಕಾದರೂ ಸದಾ ಸಿದ್ದರಿರಬೇಕಾಗಿದೆ. ಇಂಥಾ ಸಿದ್ಧತೆಗೆ ವಿಶಾಲವಾದ ಭಾರತಭೂಮಿಯ ಮನಪೂರ್ತಿಯಾದ ಸಹಾಯವು ಅಗತ್ಯವಾಗಿದೆ. ಈ ಉದ್ದೇಶ, ಬ್ರಿಟಿಷ್ ಸರ್ಕಾರದವರು ಭಾರತೀಯರ ನ್ಯಾಯವಾದ ಕೋರಿಕೆಗಳನ್ನು ಸಲ್ಲಿಸಿ ಅವರ ಸಹಾಯವನ್ನು ಪಡೆಯುವರಾಗಿ ಆಶಿಸುತ್ತೇವೆ. ಇದರಿಂದ ಬ್ರಿಟನಿಗೂ, ಹಿಂದೂ ದೇಶಕ್ಕೂ, ಹಾಗೂ ಪ್ರಪಂಚದ ಶಾಂತಿಗೂ ಹಿತವಾಗುವದೆಂಬದರಲ್ಲಿ ಸಂದೇಹವಿಲ್ಲ.

ಬಾಳೆಲೆ ಆಸ್ಪತ್ರೆಯ ಹೊಸ ಕಟ್ಟಡ ತೆರೆಯುವ ಸಮಾರಂಭ.

ಪೊನ್ನಂಪೇಟೆನಾಡು ಬಾಳೆಲೆ ಆಸ್ಪತ್ರೆಯ ಹೊಸ ಕಟ್ಟಡವನ್ನು ತೆರೆಯುವ ಸಮಾರಂಭವು ಚೀಫ್ ಕಮಿಷನರಾದ ಲೆ. ಕರ್ನಲ್ ಗಾರ್ಡನ್‌ರವರಿಂದ ಈ ತಾ. 6ನೇ ಸೋಮವಾರ ನಡೆಸಲ್ಪಟ್ಟಿತು. ಅಲ್ಲಿಯ ಸುತ್ತುಮುತ್ತಲಿನ ಮುನ್ನೂರು ಜನರಲ್ಲದೆ ಡಿ. ಬೋರ್ಡಿನ ಪ್ರೆಸಿಡೆಂಟರೂ, ಚೀಫ್ ಕಮಿಷನರ ಪರ್ಸನಲ್ ಅಸಿಸ್ಟೆಂಟರೂ, ದ. ಕೊಡಗಿನ ಸುಬೆದಾರರೂ, ಶ್ರೀ ಕೆ. ಸಿ. ಕರುಂಬಯ್ಯ ಯಂ. ಎಲ್. ಸಿ ಯವರೂ, ಶ್ರೀ ಸಿ. ಯಂ. ಪೂಣಚ್ಚ ಡಿ. ಬಿ. ಯಂ. ರವರೂ, ಪೊನ್ನಂಪೇಟೆಯ ಎಕ್ಸೈಸ್ ಸಬ್ ಇನ್ಸ್‌ಪೆಕ್ಟರವರೂ, ವೆಟರಿನರಿ ಡಾಕ್ಟರವರೂ, ಪೋಲೀಸು ಸಬ್ ಇನ್ಸ್‌ಪೆಕ್ಟರವರೇ ಮೊದಲಾದವರೂ ಹಾಜರಿದ್ದರು.

ಬೆಳಿಗೆ 11 ಗಂಟೆಗೆ ಕಟ್ಟಡದ ಕಮಿಟಿಯವರು ಚೀಫ್ ಕಮಿಷನರರಿಗೆ ವಾದ್ಯದೊಡನೆ ಸ್ವಾಗತವನ್ನು ನೀಡಿ ಕಟ್ಟಡದ ಅಂಗಳದಲ್ಲಿ ಹಾಕಿದ್ದ ಚಪ್ಪರಕ್ಕೆ ಕರೆತಂದು ಅವರಿಗೂ, ಇನ್ನಿತರರಿಗೂ ಹೂವಿನ ಹಾರಗಳನ್ನು ಹಾಕಿದ ಮೇಲೆ ಕಟ್ಟಡ ಕಮಿಟಿಯ ಅಧ್ಯಕ್ಷರಾದ ಶ್ರೀ ಎ. ಎನ್. ಪೊನ್ನಪ್ಪನವರು ಒಂದು ಬಿನ್ನಹ ಪತ್ರವನ್ನು, ಚೀಫ್ ಕಮಿಷನರಿಗೆ ಅರ್ಪಿಸಿದ್ದಲ್ಲದೆ ಕಟ್ಟಡದ ಖರ್ಚಿನ ಲೆಕ್ಕ ಪಟ್ಟಿಯನ್ನು ಮತ್ತು ಧನ ಸಹಾಯ ಮಾಡಿದವರ ಹೆಸರುಗಳನ್ನು ಓದಿದರು. ಬಿನ್ನಹ ಪತ್ರದ ಇಂಗ್ಲಿಷಿನ ತರ್ಜುಮೆಯು ಶ್ರೀ ಮಲಚೀರ ಮುತ್ತಣ್ಣನವರಿಂದ ಓದಲ್ಪಟ್ಟಿತು. ಈ ಬಿನ್ನ ಪತ್ರದ ಸಾರಾಂಶವನ್ನು ೮ ನೇ ಪೇಜಿನಲ್ಲಿ ಕೊಡಲಾಗಿದೆ.

ಚೀಫ್ ಕಮಿಷನರ ಭಾಷಣ.

ಚೀಫ್ ಕಮಿಷನರು ಬಿನ್ನಹ ಪತ್ರಕ್ಕೆ ಉತ್ತರವಾಗಿ ತನಗೆ ಈ ಬಹುಮಾನವನ್ನು ಕೊಟ್ಟದಕ್ಕಾಗಿ ಕಟ್ಟಡ ಕಮಿಟಿಯವರಿಗೆ ತುಂಬಾ ವಂದಿಸಿದರು. 'ಈ ಆಸ್ಪತ್ರೆಯನ್ನು ಸ್ಥಾಪಿಸಿದ ಜಿಲ್ಲಾ ಬೋರ್ಡಿನವರಿಗೂ, ಹೊಸ ಕಟ್ಟಡಕ್ಕೆ ಸ್ಥಳ ಮತ್ತು ನನ್ನ ಧನ್ಯವಾದಗಳಿವೆ. ಆಸ್ಪತ್ರೆಯ ಆವಶ್ಯಕತೆಯು ಇಲ್ಲಿ ತುಂಬಾ ಇರುವದರಿಂದ ಈ ಸಂಸ್ಥೆಯಿಂದ ಇಲ್ಲಿಯ ಜನತೆಗೆ ತುಂಬಾ ಪ್ರಯೋಜನವಾಗುವದೆಂದು ನಂಬುತ್ತೇನೆ. ಕೊಡಗಿನ ಸರಕಾರದವರು ಮತ್ತು ಜಿಲ್ಲಾ ಬೋರ್ಡಿನವರು ದೇಶದ ಅಭಿವೃದ್ಧಿಗಾಗಿ ಜನರ ಹಿತದೃಷ್ಟಿಯಿಂದ ಕೆಲಸ ಮಾಡಲು ತಯಾರಿದ್ದಾರೆಂದು ಹೇಳುತ್ತೇನೆ. ಆದರೆ ಸ್ಥಳೀಯ ಸರಕಾರದ ಹಾಗೂ ಜಿಲ್ಲಾ ಬೋರ್ಡಿನ ಹಣದ ಅಭಾವದ ಸ್ಥಿತಿಯು ಹೆಚ್ಚಿನ ಕೆಲಸ ಮಾಡಲು ಬಿಡುವಂತಿಲ್ಲವೆಂದು ತಿಳಿಸಲು ವ್ಯಸನಪಡುತ್ತೇನೆ. ನಿಮ್ಮ ಬಿನ್ನ ಪತ್ರದಲ್ಲಿ ಸೂಚಿಸಿರುವ ಮೇರೆ ಲಕ್ಷ್ಮಣತೀರ್ಥ ಹೊಳೆಗೆ ಅಣೆಕಟ್ಟು ಕಟ್ಟಿಸಲು ರೆವಿನ್ಯೂ ಇಲಾಖೆಯವರ ಸರ್ವೆ ಮುಗಿದಿದೆ. ಡಿ. ಪಿ. ಡಬ್ಲ್ಯುಯವರ ವಿವರವಾದ ಸರ್ವೆಗಾಗಿ ರೂ. 3000 ಮಂಜೂರ್ಮಾಡಲಾಗಿದೆ. ಈ ಕಾಮಗಾರಿಯಿಂದ ಪ್ರಥಮ ಸರ್ವೆಯಲ್ಲಿ ಲಾಭದಾಯಕವಾಗಬಹುದೆಂದು ಕಂಡು ಬಂದಿರುವ ಕಾರಣ ಇದು ರೂಪಿತಗೊಳ್ಳಬಹುದೆಂದು ತೋರುತ್ತದೆ. ಎರಡನೆಯದಾಗಿ ಗೋಣಿಕೊಪ್ಪಲಿನಿಂದ ಬಾಳೆಲೆಗೆ ಬರುವ ರಸ್ತೆಗೆ ಕಲ್ಲು ಹಾಕುವದು ಅವಶ್ಯವಾದ್ದೇ. ಭಾಗಮಂಡ್ಲ ರಸ್ತೆಗೆ ಕಲ್ಲು ಹಾಕುವ ಕೆಲಸವು ಈ ವರ್ಷ ಮುಗಿಯಬಹುದು. ನಂತರ ಈ ರಸ್ತೆಯ ಕಡೆಗೆ ಗಮನ ಕೊಡಲಾಗುವದೆಂದು ಆಶಿಸುತ್ತೇನೆ. 3ನೇ ಕೋರಿಕೆಗೆ ಇಲ್ಲಿಯವರ ಭತ್ತ ದಾಸ್ತಾನು ಮಾಡಲು ಒಂದು ಸ್ಟೋರು ಕಟ್ಟಡಕ್ಕೆ ರೂ. 5000 ಧನ ಸಹಾಯ ಮಾಡುವ ವಿಚಾರ ಪೊನ್ನಂಪೇಟೆಯಲ್ಲಿ ಭತ್ತ ಸ್ಟೋರು ಕಟ್ಟಡವಿದೆ ಅದು ಇಲ್ಲಿಯ ಜನರಿಗೆಷ್ಟು ಸಹಾಯಕರವಾಗಿದೆಯೋ ತಿಳಿಯದು. ಹೇಗೂ ಇದು ಸಂಬಂಧಪಟ್ಟ ಅಧಿಕಾರಿಗಳಿಂದ ಆಲೋಚಿಸಲ್ಪಡುವದು. ಕಡೆಯದಾಗಿ ಇಲ್ಲಿಯ ಡಾಕ್ಟರರ ವಸತಿ ಮನೆಗೆ ಡಿಸ್ಕ್ರೀಶನರಿ ಗ್ರಾಂಟಿನಿಂದ ರೂ. 500 ಕೊಡಬೇಕೆಂಬ ಪಕ್ಕೆ ನಿರ್ಧಿಷ್ಟವಾದ ಜವಾಬು ಕೊಡಲಾಗುವುದಿಲ್ಲ. ಯಾಕೆಂದರೆ ಆದಳಿತೆಯ ಬದಲಾವಣೆಯಿಂದ ನಾನು ಬೇಗನೆ ನಿಮ್ಮ ಪ್ರಾಂತದ ಮುಖ್ಯಾಧಿಕಾರವನ್ನು ಬಿಡಬೇಕಾದುದರಿಂದ ಡಿಸ್‌ಕ್ರೀಷನರಿ ಗ್ರಾಂಟಿನಿಂದ ಇಂತಿಷ್ಟೇ ಹಣ ಕೊಡುತ್ತೇನೆಂದು ಹೇಳಲು ಸಾಧ್ಯವಿಲ್ಲ. ಆದನ್ನು ಮುಂದಿನ ಚೀಫ್ ಕಮಿಷನರು ಆಲೋಚನೆ ಮಾಡುವರೆಂದು ಮಾತ್ರ ಹೇಳಬಲ್ಲೆ. ಪುನಹ ನಿಮ್ಮನ್ನೆಲ್ಲಾ ವಂದಿಸಿ ಈ ಆಸ್ಪತ್ರೆಯು ಸುತ್ತುಮುತ್ತಲಿನ ಜನ ಸಮುದಾಯಕ್ಕೆ ತುಂಬಾ ಸಹಾಯಕರವಾಗಿ ಅಭಿವೃದ್ಧಿಗೊಳ್ಳಲೆಂದು ಹಾರೈಸುತ್ತೇನೆ.' ನಂತರ ಕಟ್ಟಡದ ಬಾಗಿಲನ್ನು ಬೆಳ್ಳಿಯ ಬೀಗದ ಕೈಯಿಂದ ತೆರೆದು ಅದನ್ನು ಹರಸಿದರು. ಕೂಡಲೇ ಚೀಫ್ ಕಮಿಷನರು ಅಲ್ಲಿಯ ಶಾಲೆಯನ್ನೂ, ಆಸ್ಪತ್ರೆಯ ಹಳೇ ಕಟ್ಟಡವನ್ನೂ ಸಂದರ್ಶಿಸಿದರು. ಫಲಹಾರವಾದನಂತರ ಅಧ್ಯಕ್ಷರಿಗೂ, ನೆರೆದ ಮಹನೀಯರಿಗೂ ವಂದನೆಗಳಿಂದ ಸಮಾರಂಭವು ಮುಕ್ತಾಯಗೊಂಡಿತು.

ವರ್ತಮಾನ ಸಂಗ್ರಹ.

ಒಳದೇಶ.

ಅಖಿಲ ಭಾರತ ಚರಖಾ ಸಂಘದ ಕರ್ನಾಟಕ ಶಾಖೆಯವರು ಕೊಡಗಿನಲ್ಲಿ ನಡೆಸುತ್ತಿರುವ ಖಾದಿ ಮಾರಾಟವು ತಾ. 8-5-40 ರ ವರೆಗೆ ಈ ಕೆಳಗಿನ ಸ್ಥಳಗಳಲ್ಲಿ ಈ ರೀತಿಯಾಗಿದೆ. ಅಮ್ಮತ್ತಿ, ರೂ. 230, ವೀರಾಜಪೇಟೆ ರೂ. 480, ಗೋಣಿಕೊಪ್ಪ ರೂ. 200, ಪೊನ್ನಂಪೇಟೆ ರೂ. 150, ಹುದಿಕೇರಿ ರೂ. 40. ಮಾರಾಟವು ಭರದಿಂದ ನಡೆಯುತ್ತಿದೆ.

ಜುಲೈ ತಾ. ಒಂದರಿಂದ ಬೆಂಗಳೂರಿನಲ್ಲಿರುವ ಚೀಫ್ ಕಮಿಷನರ ಹುದ್ದೆಯು ಸಹಜವಾಗಿ ಕೊಡಗಿಗೇ ಪ್ರತ್ಯೇಕ ಒಬ್ಬ ಚೀಫ್ ಕಮಿಷನರು ನೇಮಿಸಲ್ಪಡುವ ಪ್ರಯುಕ್ತ ಈ ವರೆಗೆ ಚೀಫ್ ಕಮಿಷನರ್, ಬೆಂಗಳೂರು, ಮತ್ತು ಅವರ ಸೆಕ್ರೆಟರಿಯವರಿಗೆ ಬರೆಯುತ್ತಿದ್ದ ಪತ್ರವ್ಯವಹಾರಗಳನ್ನು ಚೀಫ್ ಕಮಿಷನರು, ಕೊಡಗು, ಮಡಿಕೇರಿ ಎಂದು ಬರೆಯಬೇಕೆಂದು ಪ್ರಕಟವಾಗಿದೆ.

ಮಡಿಕೇರಿ.

ಚೀಫ್ ಕಮಿಷನರು ತಾ. 9 ರಲ್ಲಿ ಇಲ್ಲಿಂದ ಬೆಂಗಳೂರಿಗೆ ಹೋದರು.

ಇಲ್ಲಿ ಈ ವಾರ ಅಂದರೆ ತಾರೀಕು 3 ರಿಂದ ಇಂದಿನ ವರೆಗೆ 2 ಇಂಚು 88 ಸೆಂಟು ಮಳೆಯಾಗಿದೆ.

ಇಲ್ಲಿ ಇದ್ದ ಓರಿಯಂಟಲ್ ಲೈಫ್ ಎಷ್ಯೂರೆನ್ಸ್ ಕಂಪನಿಯ ಶಾಖೆಯು ಜೂನ್ ತಾರೀಕು 1 ರಿಂದ ಮಂಗಳೂರಿಗೆ ವರ್ಗಾಯಿಸಲ್ಪಡುವದಾಗಿ ತಿಳಿಯುತ್ತೇವೆ.

ಮುಚ್ಚಲ್ಪಟ್ಟಿರುವ ತಿರುವಾಂಕೂರು ಮತ್ತು ಕ್ವಿಲೋನ್ ಬ್ಯಾಂಕಿನಿಂದ ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿಗೆ ಸಿಕ್ಕಬೇಕಾಗಿದ್ದ 43,709-7-8 ನ್ನು (ಬಡ್ಡಿ ಸಮೇತ) ಪ್ರಕಿ ತಾ. 15-9-39 ರಲ್ಲಿ 1 ನೇ ಡಿವಿಡೆಂಡ್ ರೂಪಾಯಿಗೆ 3 ಆಣೆ ಪ್ರಕಾರ 8,194-15-0 ದೊರೆತದಲ್ಲದೆ 2 ನೇ ಡಿವಿಡೆಂಡ್ ರೂಪಾಯಿಗೆ 2 ಆಣೆ ಪ್ರಕಾರ 5,463-4-11 ನ್ನು ಈ ವಾರ ದೊರೆತಿದೆಯಾಗಿ ತಿಳಿಯುತ್ತೇವೆ.

ವೀರಾಜಪೇಟೆ

ಇಲ್ಲಿಯ ಸಿನೇಮಾ ಪ್ರದರ್ಶನವು ಮುಂದೆ ಮಳೆಗಾಲದ ಪ್ರಯುಕ್ತ ತಾ. 9 ರಿಂದ ನಿಲ್ಲಿಸಲ್ಪಟ್ಟಿದೆ.

ಗೋಣಿಕೊಪ್ಪಲು.

ಈ ತಾ. 5 ರಲ್ಲಿ ಇಲ್ಲಿಯ ಸಂತೆಯಲ್ಲಿ ಖಾದಿ ಬಟ್ಟೆ ಮಾರಾಟ ನಡೆಯುತ್ತಿದ್ದಂಥಾ ಸಮಯದಲ್ಲಿ ರಾಷ್ಟ್ರೀಯ ಧ್ವಜದೊಡನೆ ಮೆರವಣಿಗೆಯೊಂದನ್ನು ನಡೆಸಿ ಶ್ರೀ ಕೆ. ಸಿ. ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನೆರೆಯಿತು. ಶ್ರೀ ಪಿ. ಐ. ಬೆಳ್ಯಪ್ಪನವರು ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧಿಯವರು ಕೈನೂಲಿನ ಖಾದಿಗೆ ಕೊಟ್ಟ ಪ್ರಾಮುಖ್ಯತೆಯನ್ನು ವಿವರಿಸಿದರು.

ಪೊನ್ನಂಪೇಟೆ.

ತಾ. 6-5-40 ರಲ್ಲಿ ಬಾಳೆಲೆ ಸ್ಕೂಲ್ ಬಳಿ ಒಂದು ಸಾರ್ವಜನಿಕ ಸಭೆಯೊಂದು ಶ್ರೀ ಪುಚ್ಚಿಮಾಡ ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಯುತರುಗಳಾದ ಪಿ. ಐ. ಬೆಳ್ಯಪ್ಪನವರು, ಕೆ. ಸಿ. ಕರುಂಬಯ್ಯನವರು, ಸಿ. ಯಂ. ಪೂಣಚ್ಚನವರು ಹಿಂದೂದೇಶದ ಇಂದಿನ ರಾಜಕೀಯ ವಾತಾವರಣವನ್ನು ವಿವರಿಸಿ ಮುಂದಿನ ಹೋರಾಟಕ್ಕೆ ಸತ್ಯಾಗ್ರಹಿಗಳ ತಯಾರಿ ಬಗ್ಗೆ ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮಗಳನ್ನೂ ಕುರಿತು ಭಾಷಣ ಮಾಡಿದರು.

ಚೀಫ್ ಕಮಿಷನರಿಗೆ ಸತ್ಕಾರ ಕೂಟ.

ಕೊಡಗಿನ, ಮುಖ್ಯವಾಗಿ ಮಡಿಕೇರಿಯ ಸುಮಾರು ನೂರು ಜನ ಉದ್ಯೋಗಸ್ಥರು ಮತ್ತು ಉದ್ಯೋಗಸ್ಥರಲ್ಲದವರು ಈ ತಾರೀಕು 8 ರ ಸಾಯಂಕಾಲ ಮಡಿಕೇರಿ ಕೋಟೆಯಲ್ಲಿ ಸೇರಿ ಚೀಫ್ ಕಮಿಷನರಾದ ಲೆ. ಕ. ಗಾರ್ಡನ್‌ರವರಿಗೆ ಒಂದು ಸತ್ಕಾರ ಕೂಟವನ್ನು ನಡೆಸಿ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು. ಅದರಲ್ಲಿ ಕರ್ನಲ್ ಗಾರ್ಡನ್‌ರವರು ಕೊಡಗಿನ ಸರ್ಕಾರದ ಆರ್ಥಿಕ ಸ್ಥಿತಿಯನ್ನು ಸರಿಪಡಿಸಲು ಮಾಡಿದ ಯತ್ನಗಳನ್ನು ಹೊಗಳಿ ಇಂಡಿಯಾ ಸರ್ಕಾರದಿಂದ ವಾರ್ಷಿಕ ವಂತಿಗೆ ಪಡೆಯಲು ಯತ್ನಿಸಬೇಕೆಂದು ಕೇಳಿಕೊಳ್ಳಲಾಗಿತ್ತು. ಚೀಫ್ ಕಮಿಷನರು ಅದಕ್ಕೆ ಉತ್ತರವನ್ನೀಯುತ್ತಾ ಕೊಡಗಿನ ಆಡಳಿತ ಕ್ರಮದಲ್ಲಿ ಆಗಿರುವ ಮತ್ತು ಆಗಲಿಕ್ಕಿರುವ ಬದಲಾವಣೆಗಳನ್ನು ಕುರಿತು ವಿವರಿಸಿ ಹೇಳಿದರು. ನಂತರ ತಿಂಡಿ ತೀರ್ಥಗಳೂ, ಟೆನ್ನಿಸ್ ಆಟವೂ ಇತ್ತು. ಆದರೆ ತಿಂಡಿ ತೀರ್ಥದೊಡನೆ ನಿಷಾಪಾನಾರ್ಥಕ್ಕೆ ಎಡೆ ಕೊಟ್ಟದ್ದನ್ನು ಕೇಳಿ ವಿಷಾದ ಪಡಬೇಕಾಗಿದೆ.

ಸತ್ಯಾಗ್ರಹಿಗಳ ತರಬೇತು.

ಕೊಡಗು ಜಿಲ್ಲಾ ಸತ್ಯಾಗ್ರಹ ಕಮಿಟಿಯ ಕಾರ್ಯಕಾರಿ ಮಂಡಳಿಯವರು ಈ ತಾ. 11 ನೇ ಶನಿವಾರ ವೀರಾಜಪೇಟೆಯಲ್ಲಿ ಸತ್ಯಾಗ್ರಹ ಶಿಬಿರಗಾರರ ತರಬೇತಿನ ಶಿಬಿರವನ್ನು ತೆರೆಯಲು ನಿಶ್ಚಯಿಸಿರುವರು. ಇಂದಿನ ವರೆಗೆ ಈ ಕೆಳಗಿನ ಮಹನೀಯರು ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಮಾಡಿರುವರೆಂದು ತಿಳಿಯಬರುತ್ತೆ. ಶ್ರೀಯುತರುಗಳಾದ (1) ಪಂದ್ಯಂಡ ಐ. ಬೆಳ್ಯಪ್ಪನವರು, (2) ಕೊಳ್ಳಿಮಾಡ ಕರುಂಬಯ್ಯನವರು, (3) ಶ್ರೀಮತಿ ಪಂದ್ಯಂಡ ಸೀತಮ್ಮನವರು, (4) ಪಕ್ಕಲಿಗರ ತಮ್ಮಯ್ಯನವರು. (5) ಚೆಪ್ಪುಡೀರ ಪೂಣಚ್ಚನವರು, (6) ಕೆ. ಯಂ. ಸುಬ್ರಾಯನವರು, (7) ಮುಂಡೇಪಂಡ ಸೋಮಯ್ಯನವರು, (8) ಬಿದ್ದಂಡ ಯಂ. ಕಾರ್ಯಪ್ಪನವರು, (9) ಪಲ್ಲೇಂಗಳ ಚಂಗಪ್ಪನವರು, (10) ಪುಟ್ಟಿಚಂಡ ಪೊಣ್ಣಪ್ಪನವರು, (11) ಪಂದ್ಯಂಡ ಚಂಗಪ್ಪನವರು, (12) ಪೂಜಾರಿ ರಾಮಪ್ಪನವರು, (13) ಮುಚ್ಚಿಯಂಡ ಐಯ್ಯಪ್ಪನವರು, (14) ಹೊಳ್ಳ ನಾರಾಯಣನವರು, (15) ಕಾಳೇಂಗಡ ಚಿಣ್ಣಪ್ಪನವರು, (16) ಪುಲಿಯಂಡ ಸುಬ್ಬಯ್ಯನವರು, (17) ಸಣ್ಣುವಂಡ ಬೋಪಯ್ಯನವರು, (18) ಪುತ್ತಮನೆ ಮುದ್ದಪ್ಪಯ್ಯನವರು, (19) ಮೂಕಳೇರ ಕುಶಾಲಪ್ಪನವರು, (20) ಜಮ್ಮಡ ಮಾದಪ್ಪನವರು, (21) ಅಜ್ಜಿಕುಟ್ಟಿರ ಪೊನ್ನಪ್ಪನವರು, (22) ಎಚ್. ಬಿ. ತಮ್ಮಯ್ಯನವರು, (23) ಅಜ್ಜಮಾಡ ಮಾದಪ್ಪನವರು, ಪ್ರತಿಜ್ಞೆಗೆ ರುಜುಮಾಡಿದವರ ಹೆಸರು ನಮಗೆ ತಲುಪಿದಂತೆ ಮುಂದೆ ಪ್ರಕಟಿಸಲಾಗುವದು.

ಹಿಂದೂದೇಶ.

ಬೊಂಬಾಯಿಯಲ್ಲಿ ಕೆಲವು ಪಠಾಣ-ಭಯ್ಯಾರೊಳಗೆ ಕೈಕೈಯಾಗಿ, 10 ಮಂದಿಗೆ ಗಾಯಗಳಾದವು; 15 ಮಂದಿಗಳ ಕೈದಾಗಿದೆ.

ಬರುವ ತಿಂಗಳಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗ್ ನಡೆಯಬಹುದೆಂದು ಶ್ರೀ. ಕೃಪಲಾನಿಯವರ ಹೇಳಿಕೆ.

ಕುನ್ವಾರ್ ಸರ್ ಮಹಾರಾಜ ಸಿಂಗರವರು ಲಕ್ನೋ ವಿಶ್ವವಿದ್ಯಾನಿಲಯಕ್ಕೆ 5 ಸಾವಿರ ರೂಪಾಯಿಗಳನ್ನೂ, ಅಲ್ಲಿನ ಇಸ್ಬೆಲ್ ತೊಬರ್ನ್ ಕಾಲೇಜಿಗೆ 4 ಸಾವಿರವನ್ನೂ ದಾನಮಾಡಿದ್ದಾರೆ.

ಮೊಂಟ್‌ಗೊಮೆರಿ ಸೆಂಟ್ರಲ್ ಜೈಲಿನಲ್ಲಿ ಸುಮಾರು 6 ಮಂದಿ ರಾಜಕೀಯ ಬಂದಿಗಳು ಉಪವಾಸಕ್ಕೆ ಆರಂಭಿಸಿದ್ದು ಅವರಿಗೆ ಬಲಾತ್ಕಾರವಾಗಿ ಆಹಾರವನ್ನು ಉಣ್ಣಿಸಲಾಗುತ್ತಿದೆ ಎಂದು ಪ್ರಕಟವಾಗಿದೆ.

ಒವರ್‌ಸೀಯರರ ಪರೀಕ್ಷೆಯ 2 ದಿನಗಳ ಪ್ರಶ್ನಾಪತ್ರಗಳು ಬಹಳ ಕಠಿನವಾಗಿದ್ದುವೆಂದು ಲಕ್ನೋವಿನ 140 ಮಂದಿ ಇಂಜನಿಯರಿಂಗ್ ವಿದ್ಯಾರ್ಥಿಗಳು ಆ ಪರೀಕ್ಷೆಗೆ ಬಹಿಷ್ಕಾರ ಹಾಕಿ ಪರೀಕ್ಷೆಯಿಂದ ದೂರ ನಿಂತಿದ್ದಾರೆ.

ರಾಜಕೋಟೆಯಲ್ಲಿ ಅಲ್ಲಿನ ದಿವಾನರೂ, ಇಬ್ಬರು ಕೌನ್ಸಿಲರರೂ ಕೊಟ್ಟ ರಾಜೀನಾಮೆಯನ್ನು ಅಲ್ಲಿನ ಮಹಾರಾಜರು ಅಂಗೀಕರಿಸಿರುವುದಲ್ಲದೆ, ಶ್ರೀ. ಎನ್. ಎನ್. ಅಂಕ್ಲೇಸರಿಯಾ, ಸಿ. ಐ. ಇ. ಬಾರ್-ಎಟ್-ಲಾ ಇವರನ್ನು ಆ ಸಂಸ್ಥಾನದ ಹೊಸ ದಿವಾನರನ್ನಾಗಿ ನೇಮಿಸಿರುವರೆಂದೂ ಪ್ರಕಟವಾಗಿದೆ.

ಒಬ್ಬ ಹುಡುಗಿಯು ರೈಲ್ವೆಯಲ್ಲಿ ಪ್ರಯಾಣಮಾಡುತ್ತಿದ್ದ ಹಾಗೆ ಅಕಸ್ಮಾತ್ ಗಾಡಿಯ ಬಾಗಿಲು ತನ್ನಿಂತೆ ತೆರೆಯಲ್ಪಟ್ಟು ಆಕೆ ಬಿದ್ದು ಗಾಸಿ ಹೊಂದಿದ ಸಂಬಂಧ ಆ ಪ್ಯೆಸರ್ ಹುಡುಗಿಗೆ ರೈಲ್ವೆ ಕಂಪೆನಿಯವರು 3 ಸಾವಿರದ ಪರಿಹಾರ ದ್ರವ್ಯ ಕೊಡಬೇಕೆಂದು ಲಕ್ನೋ ಪ್ರಾಂತದ ಮಲಿಹಾಬಾದಿನ ಸಿವಿಲ್ ಜಡ್ಜರು ಅಪ್ಪಣೆ ಮಾಡಿದ್ದಾರೆ.

ಕರಾಚಿಯ ಸಿಟಿ ಜನರಲ್ ಪೋಸ್ಟಾಫೀಸಿನಿಂದ ಬೇರೆ ಕಡೆಗೆ ಕಳುಹಿಸಲಾದ 10 ಸಾವಿರ ರೂಪಾಯಿಗಳ ಕರೆನ್ಸಿ ನೋಟುಗಳುಳ್ಳ ಒಂದು ಇನ್ಶ್ಯೂರ್ ಪಾರ್ಸೆಲ್ ಆಶ್ಚರ್ಯಕರವಾದ ರೀತಿಯಲ್ಲಿ ಅದೃಶ್ಯವಾಗಿದೆ. ವಿಳಾಸದಾರರು ಈ ಪಾರ್ಸೆಲ್ ಪಡೆದಾಗ ಅದರಲ್ಲಿ ನೋಟುಗಳಿರಲಿಲ್ಲ. ಚಿಂದಿಚೂರುಗಳಿದ್ದುವು. ಪೋಲೀಸರ ತನಿಖೆ ನಡೆಯುತ್ತಿದೆ.

ಚೀನಾ ಜಪಾನ್ ಯುದ್ಧ.

ಉತ್ತರ ಚೀನಾ ದೇಶದಲ್ಲಿರುವ ಶಾನ್‌ಸಿ ಪ್ರಾಂತ್ಯದ ದಕ್ಷಿಣ ಭಾಗದ ಬೆಟ್ಟಗುಡ್ಡಗಳ ಪ್ರದೇಶವನ್ನು ಬಹಳ ಕಾಲದಿಂದ ಹಿಡಿದುಕೊಂಡಿದ್ದ ಚೀನಾ ದೇಶದವರ ಒಂದು ಸೈನ್ಯವನ್ನು ತಾವು ಪ್ರಬಲವಾಗಿ ಸೋಲಿಸಿರುವರೆಂದು ಜಪಾನಿನವರು ಒಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ. 4,500 ಮಂದಿ ಚೀನಾ ದೇಶದವರು ಆ ಕದನದಲ್ಲಿ ಮಡಿದಿರುವರೆಂದು ಜಪಾನಿನವರು ಹೇಳಿಕೆಯಿಂದ ತಿಳಿದುಬರುತ್ತದೆ. ಅದೇ ಶಾನ್ಸಿ ಪ್ರಾಂತ್ಯದಲ್ಲಿ ಜಪಾನಿನವರು ತಾವು ಚೀನಾ ದೇಶದವರ ಕೇಂದ್ರ ನಗರ ಠಾಣ್ಯವಾದ ತ್ಸೆಚಾ ಎಂಬ ನಗರವನ್ನು ವಶಪಡಿಸಿಕೊಂಡು 20 ಸಾವಿರ ಮಂದಿ ಚೀನಾ ದೇಶದ ಸೈನಿಕರನ್ನು ಕೊಂದಿರುತ್ತಾರೆಂದು ತಿಳಿಸುತ್ತಾರೆ. ಚೀನಾ ದೇಶದವರು ತಾವು ಶಾನ್ಸಿ ಪ್ರಾಂತ್ಯಕ್ಕೆ ದಕ್ಷಿಣದಲ್ಲಿರುವ ಹೊನಾನ್ ಪ್ರಾಂತ್ಯದಲ್ಲಿನ ದೊಡ್ಡ ಪಟ್ಟಣವಾದ ಕೈಫಿಂಗ್ ಎಂಬ ಊರನ್ನು ಬಿಟ್ಟು ಹಿಂತೆರಳಿದ್ದಾರೆಂದು ಒಪ್ಪಿಕೊಂಡಿದ್ದಾರೆ. ಆ ಪಟ್ಟಣದ ರಸ್ತೆಗಳಲ್ಲಿ ಚೀನಾದವರಿಗೂ, ಜಪಾನಿನವರಿಗೂ ಘೋರ ಯುದ್ಧವಾಗಿ 2,800 ಮಂದಿ ಜಪಾನಿನ ಸೈನಿಕರು ಮಡಿದಿರುವರೆಂದು ಚೀನಾದವರು ತಿಳಿಸುತ್ತಾರೆ. ಈ ಹೇಳಿಕೆಯಾಗಲೀ ಚೀನಾದವರ 20 ಸಾವಿರ ಮಂದಿ ಮಡಿದರೆಂಬ ಜಪಾನಿನವರ ಮೇಲೆ ಕಂಡ ಹೇಳಿಕೆಯಾಗಲೀ ವಾಸ್ತವವೆಂದು ಹೇಳುವುದು ಕಷ್ಟ.

ಚೀನಾ ದೇಶದವರು ತಾವು ಜಪಾನಿನವರನ್ನು ಎಲ್ಲಾ ಕಡೆಗಳಲ್ಲೂ ಹಿಮ್ಮೆಟ್ಟಿಸುತ್ತಿರುವರೆಂದೂ ಮುಖ್ಯವಾಗಿ ಮಧ್ಯ ಚೀನಾ ದೇಶದಲ್ಲಿ ತಮಗೆ ಹೆಚ್ಚಾದ ಜಯವು ಲಭಿಸುತ್ತಿರುವದೆಂದೂ ತಿಳಿಸುತ್ತಾರೆ. ಚೀನಾ ದೇಶದವರ ಸೈನ್ಯವು ಹಾನ್‌ಕೌ ಪಟ್ಟಣಕ್ಕೆ ಆಗ್ನೇಯದಲ್ಲಿ 120 ಮೈಲು ದೂರದಲ್ಲಿರುವ ಕಿಯಾಂಗ್ಸಿ ಪ್ರಾಂತ್ಯದ ಮುಖ್ಯ ಪಟ್ಟಣವಾಗಿರುವ ನಾನ್‌ಚಾಂಗಿನ ಪಟ್ಟಣ ಸಂದಣಿಯೊಳಗೆ ಪ್ರವೇಶಿಸಿದೆ ಎಂದೂ ಚೀನಾದವರು ಈಗ ಜಪಾನಿನವರ ವಶದಲ್ಲಿರುವ ಮಧ್ಯ ಚೀನಾದಲ್ಲಿ ದೊಡ್ಡ ಪಟ್ಟಣವಾದ ಹಾಂಕೌವನ್ನು ಕೂಡ ಉತ್ತರ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಿಂದ ಮುತ್ತುತ್ತಿರುವರೆಂದು ಹೇಳಲಾಗಿದೆ.

"FOR SALE"

210 acres Coffee Estate, Madapur Post. Those interested please communicate with Manager Jamboor Estate Madapur Post.

R. W. J. Egerton,
Manager.

ಇಸ್ಲಾಂ ಮತಕ್ಕೆ ವಿರೋಧ.

ಭಾರತ ವಿಭಜನಾ ಯೋಜನೆ.

ಲೇ:-ಮಹಾತ್ಮಗಾಂಧಿ. 'ಹರಿಜನ' 4-5-40.

ಹಿಂದೂ ಮುಸ್ಲಿಮರ ಸಮಸ್ಯೆಯನ್ನು ಮುಸ್ಲಿಂಲೀಗಿನ ಭಾರತ ವಿಭಜನಾ ಯೋಜನೆಯು ತೀರಾ ಬದಲು ಮಾಡಿದೆ. ಮುಸ್ಲಿಮರ ಈ ಯೋಜನೆಯನ್ನು ನಾನು ಸಮರ್ಥಿಸಲಾರೆನು. ಆದರೆ ಮುಸ್ಲಿಮರು ತಮ್ಮದೇ ಬೇರೊಂದು ಭಾರತ ವಿರಬೇಕೆಂದು ಹಠತೊಡುವದಾದರೆ ಅದನ್ನು ವಿರೋಧಿಸುವದಾದರೂ ಅಸಾಧ್ಯವೆಂದು ನಾನು ಹೇಳಿರುವೆನು. ಅವರ ವಿರೋಧವಿದ್ದರೆ ಮರ್ಯಾದೆಪೂರ್ವಕವಾದ ಯಾವ ಒಪ್ಪಂದವೂ ಆಗದು. ಇದು ಮೇಲ್ಕಂಡ ಯೋಜನೆಯ ರಾಜಕೀಯ ಅಂತರ್ಯ. ಆದರೆ ರಾಜಕೀಯಕ್ಕಿಂಥಾ ಹೆಚ್ಚಾದ ಮತೀಯ ಮತ್ತು ಮಾನಸಿಕ ವಿಚಾರವೇನಾಗಬೇಕು. ಭಾರತವನ್ನು ವಿಭಜಿಸುವ ಈ ಪ್ರಶ್ನೆಯ ಅಡಿಗಲ್ಲೆಂದರೆ ಹಿಂದೂ ಮುಸ್ಲಿಂ ಮತಗಳ ಪರಸ್ಪರ ವಿರೋಧ. ಮುಸ್ಲಿಮರು ಹಿಂದುಗಳನ್ನು ದ್ವೇಷಿಸುವದೂ, ಹಿಂದೂ ಅರಸರ ಕೈಕೆಳಗೆ ಬಾಳುವದೆಂದರೆ ಪಾಪವೆಂದು ಪರಿಗಣಿಸುವದೂ, ಹಿಂದೂ ಮುಸ್ಲಿಮರ ಸಮ್ಮಿಶ್ರ ರಾಜ್ಯಭಾರವು ಸಹ ಅಯೋಗ್ಯವೆಂದು ಹೇಳುವದೂ, ಮುಸ್ಲಿಂ-ಹಿಂದುಗಳು ಈಗಾಗಲೇ ಪರಸ್ಪರ ಯುದ್ಧದಲ್ಲಿರುವರೆಂಬುವನ್ನು ವ್ಯಕ್ತಗೊಳಿಸುತ್ತದೆ.

ಮುಸ್ಲಿಮರು ಹಿಂದುಗಳ ಬದ್ಧ ವಿರೋಧಿಗಳೆಂದೆಣಿಸುವ ಕಾಲವೊಂದಿತ್ತು. ಆದರೆ ಹಿಂದೂ ತತ್ವವು ವಿರೋಧಿಗಳನ್ನು ಕಟ್ಟಿಕೊಳ್ಳುವಂಥಾದ್ದಲ್ಲ. ವಿರೋಧಿಗಳೊಡನೆ ಸಂಧಾನಮಾಡಿಕೊಂಡಿತು. ಆ ಸಂಧಾನ ಇನ್ನೂ ಚಿರಸ್ಥಾಯಿಯಾಗಿ ಉಳಿದಿಲ್ಲ. ಹಿಂದುಗಳನ್ನು ಅಸ್ಪೃಶ್ಯರೆಂದು ಭಾವಿಸಿದ ಮುಸ್ಲಿಮರ ಸ್ಮೃತಿಸಮೂಹದ ಇನ್ನೂ ಆ ಚಿಹ್ನೆಯು ಅಳಿಸಿಹೋಗಿಲ್ಲ. ಈ ಸಂದರ್ಭದಲ್ಲಿ ಶ್ರೀ ಅತುಲಾನಂದ ಚಕ್ರವರ್ತಿಯವರ ಪುಸ್ತಕ ಒಂದರಲ್ಲಿ ಉದ್ಧರಿಸಿದ ವಾಕ್ಯಗಳನ್ನು ಇಲ್ಲಿ ಕೊಡಬಯಸುತ್ತೇನೆ. ಹಿಂದೂ ಇಸ್ಲಾಂ ಮತಗಳ ಸಂಬಂಧ ಬೆಳೆದಂದಿನಿಂದ ಈ ಎರಡು ಪಂಗಡಗಳ ಸಭ್ಯ ಮುಖಂಡರಲ್ಲಿ ಪರಸ್ಪರ ಮತಗಳ ಹೆಗ್ಗಳಿಕೆಯನ್ನು ಅರಿತು ಈ ಎರಡು ಮತಗಳಿಗಿರುವ ಸಂಬಂಧವನ್ನು ಜನತೆಗೆ ವಿವರಿಸಿ ಹೇಳುವ ಕಾರ್ಯವನ್ನು ಮಾಡುತ್ತಿದ್ದರು. ಪರಸ್ಪರ ಭಿನ್ನಗಳನ್ನು ಎತ್ತಿ ಹೇಳುವದರಿಂದ ಯಾವ ಪುರುಷಾರ್ಥವೂ ಸಾಧಿಸದ್ದೆಂದು ಅವರಿಗೆ ತಿಳಿದಿತ್ತು. ಇಸ್ಲಾಂ ಧರ್ಮದ ವಿವರಣೆಯು ಮೇಲ್ಕಂಡ ಗ್ರಂಥಕರ್ತರಿಂದ ಚೆನ್ನಾಗಿ ಕೊಡಲ್ಪಟ್ಟಿದೆ. ಹಿಂದೂಗಳಾಗಲೀ ಮುಸ್ಲಿಮರಾಗಲೀ ಆ ಪುಸ್ತಕ ಪಠನೆ ಮಾಡಿದರೆ ತಮ್ಮ ಮತಗಳ ಅಂತರ್ಯವನ್ನು ಅರಿತುಕೊಳ್ಳಲು ಸಾಧ್ಯವಾಗುವದು. ಈ ಪುಸ್ತಕ ಮುಸ್ಲಿಂ ಮಹಾಮಹಾ ಮುಖಂಡರ ಶಿಫಾರಸ್ಸಿನಿಂದೊಡಗೂಡಿರುವದು. ಅದು ಭಾರತದಲ್ಲಿ ಇಸ್ಲಾಂಧರ್ಮವು ಮಾಡಿದ ಬದಲಾವಣೆಯನ್ನು ವಿವರಿಸಿರುವದು. ಅದನ್ನು ಕೂಲಂಕುಶ ವಿಚಾರಿಸಿದರೆ ಮುಸ್ಲಿಂಲೀಗಿನ ಭಾರತ ವಿಭಜನಾಯೋಜನೆಯು ತೀರಾ ಇಸ್ಲಾಂ ಧರ್ಮಕ್ಕೆ ವಿರೋಧವೆಂಬುದು ಗೊತ್ತಾಗುವದು.

ಮತವೆಂಬುದು ಮಾನವ ಜೀವಿಯನ್ನು ದೇವರೊಡನೆ ಸಂಯೋಜಿಸುವ ಹಾಗೂ ಮಾನವನನ್ನು ಮಾನವನೊಡನೆ ಸೌಹಾರ್ದದಿಂದಿರುವಂತೆ ಬೋಧಿಸುವ ದಾರಿ. ಪೈಗಂಬರರು ಮಾಡಿದ ಬೋಧನೆಯು ಕೇವಲ ಮಹಮ್ಮದೀಯರಿಗೆ ಸಂಬಂಧಪಡುವದೇನು? ಮುಸ್ಲಿಮರೊಳಗೆ ಮಾತ್ರ ಶಾಂತಿಯಿರಬೇಕು. ಇತರ ಮತಗಳೊಡನೆ ತೀವ್ರ ವಿರೋಧವಿರಬೇಕೆಂದು ಅವರು ಸಾರಿರುವರೇನು? ಎಂಟು ಕೋಟಿ ಸಂಖ್ಯೆಯಲ್ಲಿರುವ ಮುಸ್ಲಿಮರು ಪರಮತ ದ್ವೇಷಣೆಯ ವಿಷಬೀಜದಿಂದ ಮಲಿನವಾಗಿ ತಮ್ಮ ಮತಸ್ಥಾಪಕರ ಇಚ್ಛೆಗೆ ವಿರೋಧ ನಡೆಯುವದೇನು? ಈ ವಿಷಬೀಜವನ್ನು ಬಿತ್ತುತ್ತಿರುವ ಮುಖಂಡರು ಇಸ್ಲಾಂತತ್ವದ ಬುಡಕ್ಕೇ ಕೊಡಲಿ ಹಾಕುತ್ತಿರುವರೆಂದು ನಾನು ಹೇಳಬಲ್ಲೆನು. ಅವರ ಈ ವರ್ತನೆಯು ಇಸ್ಲಾಂ ಸಮ್ಮತವಲ್ಲವೆಂದು ನನಗೆ ತಿಳಿದಿದೆ. ಮುಸ್ಲಿಮರೊಂದಿಗೆ ನಾನು ಜೀವಿಸಿದ್ದು, ಅವರ ಆಚಾರ ವಿಚಾರಗಳಲ್ಲಿ ಭಾಗಿಯಾದ್ದು ಒಂದು ದಿನವಲ್ಲ. ಕಳೆದ 20 ವರ್ಷಗಳಿಂದಲೂ ಅವರ ಸಂಬಂಧದಲ್ಲಿಯೇ ನಾನು ಜೀವಿಸಿರುವೆನು. ನನ್ನ ಈ ಅನುಭವದಲ್ಲಿ ಯಾವನೊಬ್ಬ ಮುಸ್ಲಿಮನೂ ಇಸ್ಲಾಂ ಧರ್ಮವು ಹಿಂದೂಧರ್ಮಕ್ಕೆ ವಿರೋಧವೆಂದು ಹೇಳಿದ್ದಿಲ್ಲ.

ಖಾಕ್ಸಾರ್ ಚಳವಳ.

ಹಿಂದೂಸ್ಥಾನದಲ್ಲಿ ಮುಸ್ಲಿಂ ರಾಜ್ಯಸ್ಥಾಪನೆಯ ಉದ್ದೇಶ.

ಈಗೀಗ ಪತ್ರಿಕೆಗಳಲ್ಲಿ ಖಾಕ್ಸಾರರ ದಸ್ತಗಿರಿಗಳೂ, ಗೋಳಿಬಾರೂ ಕೇಳಬರುತ್ತಿದೆಯಲ್ಲವೇ? ಈ ಖಾಕ್ಸಾರರು ಯಾರೆಂಬದು ವಾಚಕರಲ್ಲಿ ಉಪಸ್ಥಿತವಾಗಿರಬಹುದಾದ ಪ್ರಶ್ನೆ.

ಮುಖ್ಯವಾಗಿ ಹಿಂದೂಸ್ಥಾನದಲ್ಲಿ ಮುಸ್ಲಿಂ ರಾಜ್ಯಸ್ಥಾಪನೆಯೇ ಈ ಚಳವಳದ ಉದ್ದೇಶವಾಗಿದೆ. ಇಡೀ ಭಾರತದಲ್ಲಿ ಇವರ ಧ್ವಜವು ಹಾರಾಡಬೇಕೆಂಬುದೇ ಇವರ ಧ್ಯೇಯ, ಧೋರಣೆ, ರೀತಿನೀತಿಗಳಾಗಿವೆ. ಅದ್ದರಿಂದ ಈ ದಳದ ಸದಸ್ಯರೆಲ್ಲರೂ ಮುಸ್ಲಿಂ ತರುಣರು. ಇಷ್ಟರೊಳಗಾಗಿ ಈ ದಳದಲ್ಲಿ 3 ಲಕ್ಷಕ್ಕಿಂಥಾ ಹೆಚ್ಚಿನ ಸದಸ್ಯರಿರುವರೆಂದು ಹೇಳಲಾಗಿದೆ. ಈ ಸದಸ್ಯರಿಗೆ ಸೇನಾಶಿಕ್ಷಣವು ಕೊಡಲ್ಪಡುತ್ತಿದೆ. ಇವರು ಪ್ರತ್ಯೇಕ ಒಂದು ಯೂನಿಫಾರಂ ಧರಿಸುವರು. ಲಾಹೋರಿನಲ್ಲಿ ಇವರು ಸೈನ್ಯದಂತೆ ನಗರದ ರಸ್ತೆಗಳಲ್ಲಿ 'ಪರೇಡ್' ನಡೆಸಿದುದರಿಂದ ಇವರ ಮೇಲೆ ಪಂಜಾಬ್ ಸರಕಾರವು ಗೋಳಿಬಾರುಮಾಡಿ ಇವರ ಮುಖಂಡರನ್ನು ಜೈಲಿಗಟ್ಟಿರುವರು.

ಈ ದಳಕ್ಕೆ ಮುಸ್ಲಿಂ ಲೀಗಿನ ಪೂರ್ಣ ಬೆಂಬಲವಿದೆ. ಇವರ ಪ್ರಚಾರವು ಅಸಾಂ, ಮದಿನಾಡು, ಬಂಗಾಲ, ಪಂಜಾಬ್ ಮೊದಲಾದ ಪ್ರಾಂತಗಳಲ್ಲಿ ಪ್ರಚಂಡವಾಗಿ ನಡೆಯುತ್ತಿದೆ. ಇವರು ಧರಿಸುವ ಆಯುಧವೆಂದರೆ 'ಹಾಜ' ಹಾರೆಯನ್ನು ಬೆನ್ನ ಮೇಲೆ ಹಾಕಿಕೊಂಡು ಇವರು ನಗರಗಳಲ್ಲಿ ಸುತ್ತುತ್ತಾರೆ. ಇವರಿಗೆ ಕೆಲವು ಅಶ್ರಿತ ರಾಜರು ಗುಪ್ತ ಸಹಾಯ ಮಾಡ್ತುತ್ತಿರುವರೆಂದೂ ಪ್ರತೀತಿ ಇದೆ. ಹಿಂದೂಸ್ಥಾನದಲ್ಲಿ ಮುಸಲ್ಮಾನ ರಾಜ್ಯಸ್ಥಾಪಿಸುವ ಹೆಬ್ಬಯಕೆಯೇ ಈ ದಳದ ನಿರ್ಮಾಣಕ್ಕೆ ಕಾರಣ.

ಅಹಿಂಸೆಯಿಂದೇನು?

ಯುದ್ಧವು ಹಿಂಸೆಯ ಟೊಳ್ಳುತನವನ್ನು ಪ್ರದರ್ಶಿಸುತ್ತದೆ.

ಲೇ:-ಮಹಾತ್ಮಗಾಂಧಿ. 'ಹರಿಜನ' 4-5-40.

'ನಾರ್ವೆಯ ಜನತೆಯು ಜರ್ಮನರ ವಿಮಾನ ಹಾಗೂ ಮಿಶಿನ್ ಗುಂಡುಗಳ ಅನಾಹುತದಿಂದ ಲಕ್ಷಗಟ್ಟಲೆಯಾಗಿ ಜೀವ ತೆರುತ್ತಿರುವರು. ಆಧುನಿಕ ನಾಗರೀಕತೆಯ ಪ್ರಕಾರ ನವೀನ ಯುದ್ಧೋಪಕರಣಗಳಿಂದ ಸುಸಜ್ಜಿತವಾಗಿಲ್ಲವೆಂಬ ಕಾರಣದಿಂದ ಆ ಜನರು ಹೀಗೆ ನಾಶದ ಪಥದಲ್ಲಿ ನರಳುತ್ತಿರುವರೆಂದರೆ ಯಾರಿಗೆ ತಾನೇ ವ್ಯಸನವಾಗದಿರದು. ಹಿಂಸೆಯ ಟೊಳ್ಳುತನವನ್ನೂ, ಯಾಕೆ? ತಾತ್ಕಾಲಿಕ ಅವರ ಜಯವನ್ನೂ ಇಂದಿನ ಯುದ್ಧವು ಪ್ರದರ್ಶಿಸುತ್ತಿದೆ. ನಾರ್ವೆ ಜನಾಂಗವು ಹಿಂಸೆಯನ್ನು ಹಿಂಸೆಯಿಂದ ಎದುರಿಸಿದ್ದರ ಫಲಿತಾಂಶವೇನು? ಅದರೆ ದೊಡ್ಡ ಹಿಂಸಾದಳವಾದ ಜರ್ಮನಿಯ ಕೈ ಮೇಲಾಗಿದೆ. ಹಿಂಸೆಯು ಚಿರಕಾಲ ಬಾಳದೆಂಬುದು ಯಾರಿಗೂ ತಿಳಿಯದ್ದಲ್ಲ. ಆದರೆ ಭಾರತೀಯರಾದ ನಾವು ಜಗತ್ತಿನ ಈ ಸಮಸ್ಯೆಗೆ ಅಹಿಂಸೆಯ ಸಂದೇಶವನ್ನು ಸಾರುತ್ತಿರುವೆವೇ? ನಾರ್ವೆ, ಸ್ವೀಡನ್ ಯಾ ಡೆನ್ಮಾರ್ಕಿಗೆ ನಮ್ಮ ಅಹಿಂಸೆಯಿಂದೇನು ಪ್ರಯೋಜನವಾದೀತು? ನಿಜವಾಗಿಯೂ ನಾವು ಬ್ರಿಟನಿಗೆ ಸಹಾಯಮಾಡುತ್ತಿರುವೆವೇನು? ನಾವು ಬ್ರಿಟನನ್ನು ಪೇಚಿನಲ್ಲಿ ಸಿಕ್ಕಿಸುವ ವಿಚಾರದಲ್ಲಿಲ್ಲದೆ ಹೆಚ್ಚಿನದೇನೂ ಮಾಡುತ್ತಿಲ್ಲ. ಬ್ರಿಟನಿಗೆ ತೊಂದರೆ ಕೊಡುವವರಿಂದ ಅವರ ಆಶ್ರಯದಲ್ಲಿರುವ ಇತರ ಚಿಕ್ಕ ಜನಾಂಗಗಳಿಗೂ ತೊಂದರೆ ಕೊಟ್ಟಂತಲ್ಲವೇ? ಇಂಗ್ಲೆಂಡಿನ ಹೃದಯ ಪರಿವರ್ತನೆ ಮಾಡುವದು ಅಸಾಧ್ಯವಾಗಿ ನನಗೆ ಕಂಡು ಬರುತ್ತಿದೆ. ಕಷ್ಟದಲ್ಲಿ ಸಿಕ್ಕಿರುವ ನಾರ್ವೆ ಮೊದಲಾದ ರಾಷ್ಟ್ರಗಳು ನಿಜವಾಗಿಯೂ ನಮ್ಮ ವರ್ತನೆಯನ್ನು ಹೊಗಳಲಾರವು. ನಮ್ಮ ಇಂದಿನ ಧೋರಣೆಯಿಂದ ಈ ಮೊದಲು ನಾವು ಸ್ಪೆಯಿನ್, ಚೈನಾ ಮೊದಲಾದುವಕ್ಕೆ ಕೊಟ್ಟ ಸಹಾಯವನ್ನು ತಪ್ಪು ರೀತಿಯಿಂದ ಅಂತರ ರಾಷ್ಟ್ರೀಯ ಜಗತ್ತು ಪ್ರಕ್ಷಿಸುವ ಸಂಭವವಿದೆ. ಈಗ ತೊಂದರೆಗೀಡಾಗಿರುವ ರಾಷ್ಟ್ರಗಳಿಗಿಂಥಾ ಚೀನಾ, ಸ್ಪೆಯಿನ್‌ಗಳು ಹೆಚ್ಚು ಸಹಾಯಕ್ಕೆ ಯೋಗ್ಯವಾಗಿದ್ದವೇನು? ಅದಿಲ್ಲದಿದ್ದರೆ ಈ ಪಕ್ಷಪಾತವೇಕೆ? ಸಾಮ್ರಾಜ್ಯಷಾಹಿಯು ತಾನು ಹೇಳಿಕೊಳ್ಳುವ ಉಚ್ಛ ಧ್ಯೇಯಕ್ಕಾಗಿ ನಾರ್ವೆಗೆ ಸಹಾಯಮಾಡುತ್ತಿದೆಯೆಂದರೆ ಭಾರತೀಯರಾದ ನಾವು ಸಹಾಯಮಾಡದಿರಬೇಕೆ? ಕಳೆದ ಯುದ್ಧದಲ್ಲಿ ನೀವೇ ಯುದ್ಧಕ್ಕಾಗಿ ಸೈನಿಕರನ್ನು ನೇರಿಸಿದಿರಿ. ಆದರೆ ಇಂದಿನ ಯುದ್ಧವು ಅದೇ ರೀತಿಯದ್ದಾದರೂ ನಿಮ್ಮ ವರ್ತನೆಯು ತೀರಾ ಭಿನ್ನವಾಗಿದೆ' ಇದೀಗ ಗಾಂಧೀಜಿಯವರನ್ನು ಸಂಬೋಧಿಸಿ ಒಬ್ಬ ಭಾರತೀಯ ಮುಖಂಡನು ಬರೆದ ಪತ್ರದ ಸಾರಾಂಶ.

ಮಹಾತ್ಮರು ಇದಕ್ಕೆ ಎನ್ನವಿವರಣೆಯನ್ನು ಕೊಡುತ್ತಾ ಈ ರೀತಿ ಹೇಳಿರುವರು.

'ಎಲ್ಲರೂ ಡೆನ್ಮಾರ್ಕ ಹಾಗೂ ನಾರ್ವೆಯ ಬಗ್ಗೆ ಸಂತಾಪಪಡುತ್ತಿರುವರು. ಈ ಯುದ್ಧವು ಹಿಂಸೆಯ ಟೊಳ್ಳುತನವನ್ನು ಪ್ರದರ್ಶಿಸುತ್ತಿದೆ. ಹಿಟ್ಲರನು ಯುದ್ಧದಲ್ಲಿ ಒಂದು ವೇಳೆ ಜಯಶೀಲನಾದನೆಂದು ಭಾವಿಸೋಣ, ಆತನು ಬ್ರಿಟನು ಫ್ರಾನ್ಸುಗಳನ್ನು ಬಿಟ್ಟಾನೆ? ಅಂದರೆ ಪುನಹ ಇನ್ನೊಂದು ಯುದ್ಧವಾಗುವದು. ಅಲ್ಲ; ಮಿತ್ರ ಪಕ್ಷದವರೇ ಯುದ್ಧದಲ್ಲಿ ಗೆದ್ದರೆಂದು ತಿಳಿಯುವಾ, ಅದರಿಂದಾದರೂ ಜಗತ್ತಿಗೆ ಶಾಂತಿ ಲಭಿಸೀತೆ? ಮಿತ್ರ ಪಕ್ಷದವರು ಸೌಮ್ಯದಿಂದ ಇದ್ದಾರು; ಆದರೆ ಅವರ ವರ್ತನೆಯೇನೂ ಬದಲಾಗಲಾರದು. ಯುದ್ಧದಿಂದ ಅವರು ಅಹಿಂಸಾಚಾರವನ್ನು ಕಲಿತಲ್ಲದೆ, ಹಿಂಸೆಯಿಂದ ಸಂಪಾದಿಸಿದ್ದನ್ನು ಬಿಟ್ಟಲ್ಲದೆ ಜಗತ್ತಿನ ಶಾಂತಿಯಾಗದು.

ಭಾರತೀಯರ ಅಹಿಂಸಾತತ್ವವು ಇನ್ನೂ ಕೈವಶದಲ್ಲೇ ಇರುವ ನ್ಯಾಯಕ್ಕಾ ಆದು ಪಾಶ್ಚಿಮಾತ್ಯರನ್ನು ಆಕರ್ಷಿಸುತ್ತಿಲ್ಲ. ಅಂತರ ರಾಷ್ಟ್ರೀಯದ ವಿಚಾರವೇಕೆ? ಕಾಂಗ್ರೆಸಿನ ಪ್ರಥಮ ತತ್ವವು ಅಹಿಂಸೆಯಾದರೂ ಅದರೊಳಗೇ ಭಿನ್ನಬೇಧಗಳು ಇರುವದು. ಅಂದ ಮೇಲೆ ಇದು ಪಾಶ್ಚಿಮಾತ್ಯರನ್ನು ಆಕರ್ಷಿಸುವದೆಂತು? ಸ್ಪೆಯಿನಿಗೂ, ಚೈನಾಕ್ಕೂ ಭಾರತವು ಕೊಟ್ಟ ಸಹಾಯವು ತೀರಾ ಮಾನಸಿಕವಾದ್ದು. ಸಾಧನ ಸಾಮಗ್ರಿಯ ಸಹಾಯವು ಈ ಮಾನಸಿಕ ಸಹಾನುಭೂತಿಯ ಸ್ಮಾರಕಗಳು. ತಮ್ಮ ಸ್ವಾತಂತ್ರವನ್ನು ಕಳಕೊಂಡ ಡೆನ್ಮಾರ್ಕ ಹಾಗೂ ನಾರ್ವೆಗಳಿಗಾಗಿ ವ್ಯಸನಪಡದ ಭಾರತೀಯನಾರೂ ಇರಲಿಕ್ಕಿಲ್ಲ. ಚೈನಾ, ಮತ್ತು ಸ್ಪೆಯಿನಿನ ಸಮಸ್ಯೆಗಿಂಥಾ ಇವುಗಳ ಪ್ರಶ್ನೆಯು ಭಿನ್ನವಾಗಿದ್ದರೂ ಅವುಗಳ ನಾಶವು ಸಮೂಲವಾಗಿ ಆಗಿದೆ. ಒಂದು ಭಾರತವು ತನ್ನ ಸಹಾಯವನ್ನು ಕಳುಹಿಸಲು ಬಗೆದರೆ ಅಹಿಂಸೆಯಲ್ಲದೆ ಬೇರೆ ಏನುಂಟು? ಆದರೆ ಅಹಿಂಸೆಯಾದರೂ ನಾವು ಕಳುಹಿಸಬಹುದಾದ ಸಾಮಗ್ರಿಯಲ್ಲಿ ಆದರೆ ಭಾರತವು ತನ್ನ ಸ್ವಾತಂತ್ರ್ಯವನ್ನು ಅಹಿಂಸೆಯ ಮುಖಾಂತರ ಪಡಕೊಂಡಾಗ ಮಾತ್ರ ತನ್ನ ಅಹಿಂಸೆಯನ್ನು ಬೇರೆ ರಾಷ್ಟ್ರಗಳಿಗೆ ಕಳುಹಿಸಲು ಶಕ್ತಿಯುಳ್ಳದ್ದಾಗುವದು.

ಬ್ರಿಟನಿನ ಸಮಸ್ಯೆಯನ್ನು ನೋಡಿದರೆ ಕಾಂಗ್ರೆಸು ಬ್ರಿಟನಿಗೆ ಯಾವ ತೊಂದರೆ

ಯನ್ನೂ ಮಾಡಿರುವದಿಲ್ಲ. ಭಾರತದಲ್ಲಿ ಅನಾಯಕತ್ವವು ನಡೆದರೆ ಮಾತ್ರ ಬ್ರಿಟಿಷ ರಿಗೆ ತೊಂದರೆ ತಪ್ಪಿದ್ದಲ್ಲ. ನನ್ನ ಶಿಸ್ತಿನ -ಒಳಗೆ ಕಾಂಗ್ರೆಸು ಇರುವ ವರೆಗೆ ತೊಂದ ರೆಗೆ ಕಾರಣವಿಲ್ಲ.

ಕಾಂಗ್ರೆಸು ಇಂದು ತನ್ನಿಂದ ಮಾಡ ಲಸಾಧ್ಯವಾದದೆಂದು ಹೇಳುತ್ತಿದ್ದರೆ ಅ ದು ಬ್ರಿಟಿಷರಿಗೆ ತಮ್ಮ ಮಾನಸಿಕ ಸಹಾ ಯ. ಮಾನಸಿಕ ಸಹಾಯವು ಇತರ ಸಾ ಮಗ್ರಿಗಳಂತೆ ತೆಗೆದುಕೊಡುವವಲ್ಲ. ಬ್ರಿ ಟಿಷರು ಅದನ್ನು ನಮ್ಮಿಂದ ಪಡಕೊಳ್ಳಬೇ ಕಿದ. ಆದರೆ ಬ್ರಿಟಿಷ್ ರಾಜಕಾರಿಣಿಗ ಳು ಶಸ್ತ್ರಸಹಾಯವೇ ಇಂದಿನ ಯುದ್ಧಾ ಸಕ್ತ ಜಗತ್ತಿನಲ್ಲಿ ಅಗತ್ಯವೆಂದು ನಂಬಬಿ ಡುದು. ಹಾಗೆ ಅವರು ತಿಳಿದರೆ ಅದು ತಪ್ಪಾಗದು. ಯಾಕೆಂದರೆ ಇಂದಿನ ಯು ದ್ಧದಲ್ಲಿ ನೀತಿ, ಸದಾಚಾರಗಳಿಗೆ ಸ್ಥಳವಿ ಲ್ಲ. ನಾನು ಬ್ರಿಟಿಷರಿಗೆ ವಿರೋಧಿಯ ಲ್ಲ. ಬ್ರಿಟಿಷರ ಅಧಃಪತನವೆಂದರೆ ನನ ಗೆ ದುಃಖವಾಗುತ್ತದೆ. ಭಾರತೀಯರ ಮಾನಸಿಕ ಸಹಾಯವನ್ನು ಪಡೆಯಬೇ ಕಾದರೆ ಭಾರತದ ಸಮಸ್ಯೆಯು ಬಗೆಹರಿ ಯಬೇಕು.

ನಾನು ಕಳೆದ ಯುದ್ಧದ ಸಂದರ್ಭ ದಲ್ಲಿ ಬ್ರಿಟಿಷರಿಗೆ ಸೈನ್ಯ ಸಂಗ್ರಹದಲ್ಲಿ ಸ ಹಾಯಮಾಡಿದ್ದರ ಹಾಗೂ ಇಂದಿನ ಯು ದ್ಧದಲ್ಲಿ ಅದಕ್ಕೆ ವಿರೋಧ ವರ್ತಿಸುವದರ ಕಾರಣವನ್ನು ನನ್ನ ಟಾತ್ಮಿದಾರರು ತಿಳಿ ದಿರುವದಿಲ್ಲ. ಅಂದಿನ ಯುದ್ಧದಲ್ಲಿ ಈ ಮಾನಸಿಕ ಸಹಾಯದ ಪ್ರಶ್ನೆಯೇ ಇ ರಲಿಲ್ಲ. ಅಂದು ಅಹಿಂಸೆಯನ್ನೇ ಕಾಂ ಗ್ರೆಸು ತನ್ನ ತತ್ವವನ್ನಾಗಿ ಅಂಗೀಕರಿಸಿರ ಲಿಲ್ಲ. ಇಂದಿನಂತೆ ಅದು ಜನತೆಯ ಮೇಲೆ ತನ್ನ ಮಾನಸಿಕ ಹಿಡಿತವನ್ನಿಟ್ಟಿರ ಲಿಲ್ಲ. ಅಂದು ನಾನು ಜನತೆಯಲ್ಲಿ ಬೋಧಿಸಿದ್ದಾದರೂ ಬಲಾತ್ಕಾರದಿಂದಲ್ಲ. ಹಿಂಸಾಚರಣೆಯಲ್ಲಿ ನಂಬಿಕೆ ಇರುವವರಿ ಗೆ ಯುದ್ಧವೇ ದಾರಿ ಎಂದು ಶ್ರುತಪಡಿಸಿ ರುವೆನು. ಅಂದು ನಾನು ಯಾವ ಅಹಿಂ ಸಾ ಆರಾಧಕನಿಗೂ ಯುದ್ಧದಲ್ಲಿ ಭಾಗ ವಹಿಸಲು ಬೋಧಿಸಿದ್ದಿಲ್ಲ. ಆದರೆ ಇಂ ದು ಭಾರತೀಯರಲ್ಲಿ ಪರದೇಶೀಯರ ಭಾರವನ್ನು ಕಿತ್ತೊಗೆಯುವ ನಿರ್ಧಾರವು ಬಂದಿದೆ.

ಕಳೆದ ಘೋರ ಯುದ್ಧದಿಂದ ಎಲ್ಲಾ ವಾತಾವರಣವೂ ಬದಲಾಗಿದೆ. ಭಾರ ತೀಯರು ಆ ಯುದ್ಧದಲ್ಲಿ ತಮ್ಮ ಜೀವ ನವನ್ನು ತೃಣಪ್ರಾಯವಾಗಿ ಭಾವಿಸಿ ಸ ಹಾಯ ಮಾಡಿದರೂ ಬ್ರಿಟಿಷರ ವರ್ತನೆ ಯು ರೌಲೆಟ್ ಆಕ್ಟು ಮೊದಲಾದ ರೂ ಪದಲ್ಲಿ ಹೊರಬಿತ್ತು. ಬ್ರಿಟಿಷರ ಈ ದ ಬ್ಬಾಳಿಕೆಯ ವರ್ತನೆಯನ್ನು ಖಂಡಿಸಲು ಕಾಂಗ್ರೆಸು ಅಹಿಂಸಾ ಅಸಹಕಾರವನ್ನು ಕೈಗೊಂಡಿತು. ಆದರೆ ಇದರ ಫಲಿತಾಂ ಶವಾಗಿಯೇ ಜಾಲಿಯನ್ ವಾಲಾ ಬಾಗಿ ನ ಕೊಲೆ, ಸೈಮನ್ ಕಮಿಷನ್, ದುಂಡು ಮೇಜಿನ ಪರಿಷತ್ತು ಮೊದಲಾದುವ ಸ್ಮಾ ರಕಗಳಾಗಿ ನಿಂತಿವೆ. ಕಾಂಗ್ರೆಸು ಅಹಿಂ ಸೆಯನ್ನು ಅಂಗೀಕರಿಸಿರುವ ಪ್ರಯುಕ್ತ ನಾನು ಯುದ್ಧಕ್ಕೆ ಜನಸೇರಿಸುವ ಕರ್ತ ವ್ಯ ಮಾಡಬೇಕಿಲ್ಲ. ಕಾಂಗ್ರೆಸಿನ ಮು ಖಾಂತರವಾಗಿಯೇ ನಾನು ಅಂದಿಗಿಂಥಾ ಹೆಚ್ಚಿನ ಸೇವೆ ಮಾಡುತ್ತಿರುವೆನು. ಆದ ರೆ ಕಾಂಗ್ರೆಸಿನ ಮುಖಾಂತರದ ಆ ಸಹಾ ಯ ಬ್ರಿಟನಿಗೆ ಬೇಕಿಲ್ಲ. ನನಗೆ ಮನಸಿ ದೆ ಆದರೆ ಏನು ಮಾಡುವದು, ನಾನು ಅ ಸಹಾಯಸ್ಥಿತಿಯಲ್ಲಿರುವೆನು.'

ಮೊರಾಟಕ್ಕಿದೆ.

ವೀರಾಜಪೇಟೆನಾಡು ನೈತಾಡಿ ಗ್ರಾ ಮದ ವಕ್ಕಲಿಗರ ಸಿಂಗೇಗೌಡ್ರ ಮಗ ದೇ ವಣ್ಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕುಳ ನಂ. 38ರ ಸಾಗಿನ ಸ. ನ. 150/1ರ 16.70 ಏಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿ ನ ಸ. ನ. 155/3ರ ಕಿತ್ತಿ ತೋಟದ 3. 90 ಯೇಕ್ರೆದ ಪೈಕಿ 3.12 ಸೆಂಟ ನ್ನೂ, ಸಾಗಿನ ಸ. ನ. 155/4ರ ಕಿತ್ತಿ ತೋಟದ .80 ಸೆಂಟಿನ ಪೈಕಿ 64 ಸೆಂ ಟನ್ನೂ, ಸಾಗಿನ ಸ. ನ. 155/2ರ 8.69 ಏಕ್ರೆಯ ಬಾಣೆಯ ಪೈಕಿ 6.95 ಸೆಂಟ ನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾ ಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾ ಹಿತಿಯನ್ನು ಈ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತಿ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯನ್. ದೇವಣ್ಣ,
ನೈತಾಡಿಗ್ರಾಮ,
12-9 ಮೂರ್ನಾಡು.

ಖಾದಿ ಬಜಾರ್.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿ ಟಿಯ ಕೋರಿಕೆ ಮೇರೆ, ಅಖಿಲಭಾರತ ನೂಲುವ ಸಂಘದವರ ಬೆಂಗ ಳೂರು ಖಾದಿ ಭಂಡಾರದವರು ಕಳೆದ ತಾರೀಕು 29ರಿಂದ ಕೊಡಗಿನಲ್ಲಿ ಖಾದಿ ಮಾರಾಟಕ್ಕೆ ತಂದಿರುವರು. ಈಗಾಗಲೇ ಅಮ್ಮತ್ತಿ ಮತ್ತು ವೀರಾಜಪೇಟೆಯಲ್ಲಿ ತ ಮ್ಮ ಸಂತೆಗಳನ್ನು ಮುಗಿಸಿರುವರು. ಮುಂ ದೆ ಈ ಕೆಳಗಿನ ರೀತಿ ತಮ್ಮ ಮಾರಾಟವ ನ್ನು ಸಾಗಿಸಲಿರುವರು. ಪ್ರತಿಯೊಬ್ಬನ ಇಚ್ಛೆಗನುಸಾರದ ಉಡುಪಿಗೆ ಬೇಕಾದ ವಿವಿಧ ರೀತಿಯ ಕೈನೂಲಿನ ಬಟ್ಟೆಯೇ ದೊರೆಯುವವು. ಹೊಟ್ಟೆಗೆ ಅನ್ನವಿಲ್ಲದೆ ಯೂ, ಮೈಗೆ ಬಟ್ಟೆ ಇಲ್ಲದೆಯೂ ನರಳು ತ್ತಿರುವ ಲಕ್ಷಗಟ್ಟಲೆ ನಮ್ಮ ಬಡ ಸಹೋ ದರ ಸಹೋದರಿಯರು ಕೈಯಿಂದಲೇ ನೂ ತು, ನೇಯ್ದ ಪವಿತ್ರವಾದ ಖಾದಿಯನ್ನೇ ಕೊಂಡು ಕೊಂಡು ಭಾರತ ಭೂಮಿಯ ಉದ್ಧಾರಕ್ಕಾಗಿ ಸರ್ವರೂ ತಮ್ಮ ಸೇವೆ ಯನ್ನು ಸಲ್ಲಿಸಬೇಕಾಗಿ ಕೋರಿಕೆ.

ಕಾರ್ಯಕ್ರಮ.

10ರಿಂದ 12ರ ವರೆಗೆ ವೀರಾಜಪೇಟೆ.
12ನೇ ಆದಿತ್ಯವಾರ ಗೋಣಿಕೊಪ್ಪ.
13ನೇ ಸೋಮವಾರ ಮಡಿಕೇರಿ.
14 ಮತ್ತು 15ರಲ್ಲಿ ವೀರಾಜಪೇಟೆ.
16 ಮತ್ತು 17ರಲ್ಲಿ ಮಡಿಕೇರಿ.
18ನೇ ಶನಿವಾರ ಶನಿವಾರಸಂತೆ.
20ನೇ ಸೋಮವಾರ ಸೋಮವಾರಪೇಟೆ.
21ನೇ ಮಂಗಳವಾರ ಫ್ರೇಜರ್‌ಪೇಟೆ.
22ರಿಂದ 31ರ ವರೆಗೆ ಮಡಿಕೇರಿ.

ಬಿ. ಯಂ. ಕಾರ್ಯಪ್ಪ,
ಗೌ. ಕಾರ್ಯದರ್ಶಿ.
ಕೊ. ಜಿ. ಕಾಂಗ್ರೆಸ್ ಕಮಿಟಿ.

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅಮೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಪ್ಪಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(52-7)

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ	ಪೈ.
ಶೇರ್ ಬಂಡವಾಳ	-	50,000	0	0
ವಸೂಲಾದ ಶೇರ್ ಮೊಬಲಗು	-	48,470	0	0
ಜಮೂಬಂದ ರೇವಣಾತಿ	-	2,19,851	8	4
ವಸೂಲಾದ ಕ್ಷೇಮನಿಧಿ	-	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	-	36,942	0	7
ಕ್ರಿಪ್ಟ್ ಡಿಪಾಜಿಟ್ಟು	-	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯೂನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯೂನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ಕ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಕ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದತತ್ಕಾಲಕ್ಕೆ ನಿಲ್ಲಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯವರು
ಸೆಕ್ರೆಟರಿ:—ಮ. ಕೆ. ಸಿ.ಕರುಂಬಯ್ಯವರು ಎಂ ಎಲ್. ಸಿ.

ತಾ. 1-3-1940

ಕೊಡಂದೇರ ಡಿ. ಮಾಚಯ್ಯ,
L.D Sc. (COLLEGE OF DENTISTRY)
EX SUPERVISOR LAXMIBAI PATEL DENTAL HOSPITAL, KARACHI

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (43) **ನವೀನ ರೀತಿಯ ಚಿಕಿತ್ಸೆ.**

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿಯವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವುದು ಬಾಟ್ಲಿಗೆ 1 ರೂ

ಗಣೇಶ ರಾಮಚಂದ್ರ ಕರ್ಕೆ. ಮತ್ತು ಕಂಪನಿ,
(52-19) ಗಿರಗಾಂವ, ಮುಂಬಯಿ ೪,

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ-ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸುಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ದಾನಾ ಮತ್ತು ಅನುಲ್ಲಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟೈಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
52—47 **Mercara, and Virajapet.**

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:-ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಾಲಜರ್,(ರಿಜಿಸ್ಟರ್ಡ್.)
52-13 **ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.**

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಬುಧವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. | ತಾ. ೧೭—೫—೧೯೪೦. | ವಾರ್ಷಿಕ ಚಂದಾ ರೂ. ೩-೮-೦

ಸಂಪುಟ ೧೯] [ಸಂಚಿಕೆ ೫೦

ಭದ್ರತೆ! ವಿಶ್ವಾಸಾರ್ಹತೆ!! ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ ಭದ್ರತೆಯನ್ನು ಸದಾ ಸರ್ವದಾ ತೋರಿಸಿ, ಠೇವಣಾತಿದಾರರಿಗೆ ಸುರಕ್ಷಿತತೆಯನ್ನು ಹೆಚ್ಚಿಸಿ,
ಸರ್ವರ ವಿಶ್ವಾಸಕ್ಕೆ ಪಾತ್ರವಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ದೇಶೀಯ ಸಂಸ್ಥೆ.

ನಿರಖು ಠೇವಣಾತಿ — ಒಂದು ವರ್ಷಕ್ಕೆ 3½% (ಸಾಲಿಯಾನ ಶೇಕಡ)
ಬಡ್ಡಿ ದರಗಳು: — 2 & 3 ವರ್ಷಕ್ಕೆ 4% ,,

ಒಂದು ವರ್ಷಕ್ಕಿಂತ ಕಡಿಮೆ ಸಾಮಯಿಕ, ಅಲ್ಪಾವಧಿಯ, ಠೇವಣಾತಿಗಳನ್ನು
ಅವಧಿಗೆ ತಕ್ಕ ಬಡ್ಡಿ ದರಗಳಲ್ಲಿ ಪಡೆಯಬಹುದು.

ಮೂರು ವರ್ಷದ ಕೇಶ್ ಸರ್ಟಿಫಿಕೇಟುಗಳು: ಬಡ್ಡಿಯ ದರವು ಸಾಲಿಯಾನ ಶೇಕಡಾ 4 ರಲ್ಲಿ. [illegible] ಯಾವಾಗಲೂ 15 ದಿನಗಳ ನೋಟೀಸು ಕೊಟ್ಟಲ್ಲಿ ಹಣವನ್ನು ಹಿಂದಕ್ಕೆ ಪಡೆಯಬಹುದು.

ಸೇವಿಂಗ್ಸ್ ಬೇಂಕ್ ಡಿಪಾಜಿಟ್ಸ್:- ಒಂದು ಲೆಕ್ಕದಲ್ಲಿ ರೂ 5,000 ದ ವರೆಗೆ ಹಣ ಇಡಬಹುದು. ಚೆಕ್ಕು ಮೂಲಕ ಹಣ ಹಿಂದೆ ಪಡೆಯಬಹುದು. ಸಾಲಿಯಾನ ಶೇಕಡಾ 2½ ದರದಲ್ಲಿ ಬಡ್ಡಿ [illegible].

ಕರೆಂಟ್ ಡಿಪಾಜಿಟ್ಸ್, ಕ್ಯುಮ್ಯುಲೇಟಿವ್ [illegible] ಲೆಕ್ಕಗಳನ್ನು ತೆರೆಯಬಹುದು.

ಬೊಂಬಾಯಿ, ಕಲ್ಕತ್ತ, ಮದ್ರಾಸು, ಕೊಚ್ಚಿನ್, ಕಣ್ಣಾನೂರು, ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ
ಅನೇಕ ಸ್ಥಳಗಳ ಮೇಲೆ ಡ್ರಾಫ್ಟುಗಳನ್ನೂ ಚೆಕ್ಕುಗಳನ್ನೂ ಕೊಡುವ ಹಾಗೂ ವಸೂಲಿಸಲೂ ಬರುವ.

THE CANARA BANKING CORPORATION LIMITED.

52-21

ಚಿನ್ನಾಭರಣಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿಶ್ಶಕ್ತಿ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ,—ದ. ಕನ್ನಡ.
(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

52-27

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮಿ. ಮುಕ್ಕಾಟಿರ ಜೋಯಪ್ಪನವರು.

ಚಾಟಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮಿ ಮಂಡೇಪಂಡ ಸೋಮಯ್ಯನವರು,
ಮಿ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮಿ ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮಿ ಪಿ. ■ ಮುದ್ದಮ್ಮಯ್ಯನವರು.

ಮುದಿಕೇರಿ—ಮಿ ಅಜ್ಜಮಾಡ ಮಾಚಪ್ಪನವರು ಮತ್ತು ಮಿ. ಈ: ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮಿ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮಿ ಕೆ. ಬೊಗಪ್ಪನವರು.

ನಾಪೋಕ್ಲು—ಮಿ. ಬೆಳ್ಯಪಂಡ ಯಂ. ಪೂಣಚ್ಚನವರು.
ನಾಪೋಕ್ಲು

ಶನಿವಾರಸಂತೆ—ಮಿ ಎಚ್. ಎಂ. ಪುಟ್ಟಣ್ಣನವರು.

ಸೂಚನೆ — ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:—	(ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:—	(ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:—	(ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್.
(53-31) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು—ಕೆ. ರಾಮಕೃಷ್ಣರಾವ್,
ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ಡಾಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಷರತುಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ.
ಅಥವಾ
ಎಂ. ಸಿ. ಸಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಕ್ಷೇಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆರೈಲಿ, ಬೀರಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚನಾಪಳ್ಳಿ ಮತ್ತು ವೆಲ್ಲೂರು.

52-16

ಆಧುನಿಕ

ಯುದ್ಧದ ಸಾಧನಗಳು.

ತೋಫು ಮತ್ತು ಟಾರ್ಪೆಡೊಗಳು.

ಹಿಂದೊಮ್ಮೆ ಯುದ್ಧ ಹಡಗಗಳು ಆವುಗಳ ಬಲಾಬಲ, ಶಕ್ತಿ, ವೇಗ, ಅವುಗಳ ವರ್ಗ ಇವೇ ಮೊದಲಾದವುಗಳ ಬಗ್ಗೆ ಬರೆಯಲಾಗಿದೆ

ಆಗಲು 9 ಇಂಚಿನ ತೋಫು. 18 ಇಂಚಿನ ಆವರಣ, ತಿರುಗುವ ತೋಫುಗಳ ಬಗ್ಗೆ ಸ್ವಲ್ಪ ಹೇಳಲಾಗಿದೆ. ಅವನ್ನೇ ಈ ಸಲ ಮುಂದರಿಸಲಾಗುವದು.

ನೌಕಾಪಡೆಯ ಮುಖ್ಯ ಶಸ್ತ್ರವಂದರೆ ತೋಫು. ಮೊದಲನೆಯ ತೋಫು 1338 ರಲ್ಲಿ ಉಪಯೋಗಿಸಲ್ಪಟ್ಟಿತು. ಆಗಿನ ಮತ್ತು ಆಗಿನ ಕಾಲದಲ್ಲಿ ಉಪಯೋಗಿಸಲ್ಪಡುತ್ತಿದ್ದ ತೋಫುಗಳಲ್ಲಿ ಮುಖ್ಯವಾದ ಭೇದವೆಂದರೆ ಮೊದಲಿನ ತೋಫುಗಳ ಒಳಭಾಗ ನುಣುಪಾಗಿರುತ್ತಿತ್ತು. ಮತ್ತು ತೋಫಿನ ಮುಂಭಾಗದಿಂದಲೇ ಗುಂಡು ಮತ್ತು ಮದ್ದನ್ನು ಜಡಿಯಲಾಗುತ್ತಿತ್ತು. ಆದರೆ ಈಗ ಹಾಗಿಲ್ಲ. ತೋಫಿನ ಕೊಳವೆಯ ಒಳಭಾಗದಲ್ಲಿ ಚಕ್ರಾಕಾರದ ಗೀರುಗಳಿದ್ದುದರಿಂದ ಗುಂಡಿನ ವೇಗ ಹೆಚ್ಚುವದು. ಮತ್ತು ಅದರ ಗುರಿಯು ತಪ್ಪುವದಿಲ್ಲ.

ಅನೇಕ ಶತಮಾನಗಳ ವರೆಗೆ ತೋಫುಗಳಿಗೆಲ್ಲ ಮದ್ದನ್ನು ಉಪಯೋಗಿಸಿದರೆ ಈಗ ಅದರ ಬದಲು ಕೊರ್ಡಾಯಿಟನ್ನು ಉಪಯೋಗಿಸಲಾಗುತ್ತಿದೆ. ಮದ್ದಿನಕಿಂತ ಕೊರ್ಡಾಯಿಟದಿಂದಾಗುವ ಲಾಭವೆಂದರೆ, ಮದ್ದಿನ ಸಿಡಿತದಿಂದ ಗುಂಡಿಗೆ ಸಿಗುವ ವೇಗಕ್ಕಿಂತ ಕೊರ್ಡಾಯಿಟ ಗ್ಯಾಸಿನಿಂದ ಹೆಚ್ಚು ವೇಗ ಗುಂಡಿಗೆ ಸಿಕ್ಕುತ್ತದೆ.

ಇನ್ನು ನೌಕೆಯಲ್ಲಿ ಉಪಯೋಗಿಸುವ ತೋಫುಗಳಲ್ಲಿ ಕೆಲವನ್ನು ಪರೀಕ್ಷಿಸುವಾ. ತೋಫಿನ ಬಾಯಿಯ ಆಕತಿಗೆ 'ಬೋರ' ಅನ್ನುತ್ತಾರೆ.

ಬ್ರಿಟಿಷ್ ನೌಕಾಪಡೆಯಲ್ಲಿ ಉಪಯೋಗಿಸಲ್ಪಡುವ ತೋಫುಗಳಲ್ಲಿ 16 ಇಂಚಿನಿಂದ 4 ಇಂಚಿನ ವರೆಗಿನ ತೋಫುಗಳಿವೆ. 16 ಇಂಚಿನ ತೋಫುಗಳು 105 ಟನ್ ಒಜ್ಜೆಯಿದ್ದು 65 ಫೂಟ್ ಉದ್ದವಿರುತ್ತವೆ. ಇವು ಒಂದು ಟನ್ ಭಾರದ ಗುಂಡನ್ನು 20 ಮೈಲ್ ದೂರದ ವರೆಗೆ ಎಸೆಯಬಲ್ಲವು.

ತೋಫಿನಲ್ಲಿ ಹಾಕುವ ಗುಂಡಿಗೆ ನಿಜವಾದ ಹೆಸರು ಕರಟವೆಂದು ಇದರಲ್ಲಿ ಎರಡು ಭಾಗಗಳಿವೆ. ತೋಫಿನ ಗುಂಡು ಒಂದು ಭಾಗದಲ್ಲಿ ಅದನ್ನು ಹಾರಿಸುವ ಶಕ್ತಿ ಕೊಡುವ ಕೊರ್ಡಾಯಿಟ ಇನ್ನೊಂದು ಭಾಗದಲ್ಲಿ. ಈ ಕೊರ್ಡಾಯಿಟಿಗೆ ಉರಿ ಹಚ್ಚಲು ಮದ್ದು ಅಥವಾ ಕಾಡತೂಸನ್ನು ಉಪಯೋಗಿಸಲಾಗುವದು. ಈ ಮದ್ದು ಅಥವಾ ಕಾಡತೂಸಿಗೆ ಉರಿ ಹತ್ತಿದ ಕೂಡಲೆ ತೋಫು ಹಾರಿ ಬಿಡುವದು.

ಸಣ್ಣ ಹಡಗಗಳಲ್ಲಿ ತೋಫುಗಳು 4 ರಿಂದ 8 ಇಂಚು ವ್ಯಾಸದವಿರುವವು. ಒತ್ತರ ಎಲ್ಲ ಹೊಸ ಹಡಗಗಳ ತೋಫುಗಳನ್ನು ಯಂತ್ರ ಶಕ್ತಿಯಿಂದ ಹೊರಳಿಸುವಂತಿರುತ್ತವೆ. ಇದರಿಂದ ವಿಮಾನಗಳ ವಿರುದ್ಧ ಸಹ ಅವುಗಳನ್ನು ಉಪಯೋಗಿಸಲು ಬರುವದು.

6 ಇಂಚು ತೋಫುಗಳ ವರೆಗೆ ಮಾತ್ರ ಕರಟಗಳನ್ನು ಕೈಯಿಂದ ಹಾಕಬಹುದು. ಆದರೆ ಅವುಗಳಿಗಿಂತ ದೊಡ್ಡವುಗಳಿಗೆ ಗುಂಡುಗಳನ್ನು ಯಂತ್ರಗಳಿಂದ ತುಂಬಿ ಹಾರಿಸಲಾಗುವದು.

ಹಡಗಗಳಲ್ಲಿ ತೋಫುಗಳನ್ನು ಹೇಗೆ ಇಡುವರೆಂಬುದನ್ನು ನೋಡೋಣ. 3 ತೋಫುಗಳ ಮುಖಗಳು ಮಾತ್ರ ಒಂದು ಉಕ್ಕಿನ ಪೆಟ್ಟಿಗೆಯೊಳಗಿಂದ ಹೊರಬಿದ್ದಿರುತ್ತವೆ. ತೋಫು ಹೊಡೆಯುವರು ಅಥವಾ ಗೋಲಂದಾಜರು ಈ ಪೆಟ್ಟಿಗೆಯಲ್ಲಿಯೇ ಇರುವರು. ಈ ಪೆಟ್ಟಿಗೆಯಲ್ಲಿ ತೋಫನ್ನು ತಿರುಗಿಸುವ ಯಂತ್ರಗಳು ಇರುತ್ತವೆ. ಇಲ್ಲಿಂದ ಮದ್ದಿನ ಕೋಣೆಯವರೆಗೆ ಒಂದು ನಳಿಕೆಯಿದ್ದು ಈ ನಳಿಕೆಯಲ್ಲಿ ಸಣ್ಣ ತೊಟ್ಟಿಲುಗಳಿರುವವು. ಈ ತೊಟ್ಟಿಲುಗಳೇ ತೋಫಿಗೆ ಬೇಕಾದ ಆಹಾರ ಒದಗಿಸುವವು. ಈ ಪೆಟ್ಟಿಗೆಯ ಒಳಭಾಗದಲ್ಲಿ ಒಂದರ ತೋಫಿನ ಹಿಂಭಾಗವು ತೆರೆದದ್ದು ಕಾಣುವದು. ತೋಫು ಹಾರಿಸಿದ ಕೂಡಲೆ ಹವೆಯನ್ನು ಜೋರಿನಿಂದ ತೋಫಿನಲ್ಲಿ ತುಂಬಲಾಗುವದು. ಆ ಮೇಲೆ ನೀರಿನಿಂದ ಅದನ್ನು ತೊಳೆಯಲಾಗುವದು. ಇಷ್ಟರಲ್ಲಿ ತೋಫಿನ ಗುಂಡು ತೊಟ್ಟಿಲಲ್ಲಿ ಬಂದು ಸಿದ್ಧವಾಗುವದು. ಅದನ್ನು ಒಳಗೆ ತುರುಕಲಾಗುವದು. ಆ ಮೇಲೆ ಕೊರ್ಡಾಯಿಟನ್ನು ಒಳಗೆ ಹಾಕಿದೊಡನೆ ತೋಫಿನ ಹಿಂಭಾಗ ಮುಚ್ಚಿಕೊಳ್ಳುವದು. ಇಷ್ಟೆಲ್ಲ ಕೆಲಸ ಚಿಕಿನಿಮಿಷದಲ್ಲಿ ಮುಗಿದು ಹೋಗುವದು.

ಹಡಗದ ತೀರ ಎತ್ತರ ಭಾಗದಲ್ಲಿ ಕೆಲ ಅಧಿಕಾರಿಗಳು ನಿಂತು ತೋಫನ್ನು ಹಾರಿಸುವ ಬಗ್ಗೆ ಸೂಚನೆ ಕೊಡುವರು. ಈ ಸೂಚನೆಗಳು ಕೆಳಗಿನ ಭಾಗದಲ್ಲಿಯ ಅಧಿಕಾರಿಗಳಿಗೆ ಮುಟ್ಟುವವು. ಅಲ್ಲಿ ಅವರು ಲೆಕ್ಕಾಹಾಕಿ ಗೋಲಂದಾಜನಿಗೆ ತೋಫು ಹಾರಿಸುವ ವೇಳೆ ಮತ್ತು ಇತರ ಸೂಚನೆ ಕೊಡುವರು.

ಗುಂಡುಗಳಲ್ಲಿ ಅನೇಕತರಹಗಳಿವೆ. ಆಯಾ ಕೆಲಸದ ಬಗ್ಗೆ ಇವುಗಳ ಉಪಯೋಗವಾಗುವದು. ತೋಫುಗಳಿಂದ ರಕ್ಷಿಸುವ ಸಾಧನವೆಂದರೆ ಉಕ್ಕಿನ ಕವಚ ಆದರೆ ಇದು ದಪ್ಪವಾದಂತೆ ಹಡಗದ ವೇಗ ಕಡಿಮೆಯಾಗುವದು. ಆದ್ದರಿಂದ ತೀರ ದಪ್ಪ ತಗಡನ್ನು ಹೊಂದಿಸುವದು ಸಾಧ್ಯವಿಲ್ಲ.

ಇತ್ತೀಚಿಗೆ ನಾವು ಹೇಳಿದುವ ಹಡಗ ವಿನಾಶಕ ಸಾಧನವೆಂದರೆ ಟಾರ್ಪೆಡೋ ಇದೆಂದರೆ 20 ಉದ್ದವಾದ ಮತ್ತು 2 ಗಡುತರವಾದ ಒಂದು ಆಯುಧ ಇದನ್ನು ಸಿದ್ಧಪಡಿಸಲು ಒಂದಕ್ಕೆ 30, ಸಾವಿರ ರೂಪಾಯಿ ಬೀಳುವದು ಇದು ಒಂದು ಸಣ್ಣ ಹಡಗವಿದ್ದಂತೆಯೇ ಇದಕ್ಕೆ ಎಂಜಿನು ಚಕ್ರಾಣಿಗಳಿರುವವು. ಹಿಂಭಾಗದಲ್ಲಿ ಸಿಡಿಮದ್ದು ಇರುವದು. ತನ್ನ ಎಂಜಿನು ಚುಕ್ಕಾಣಿಗಳ ಸಹಾಯದಿಂದ ಟಾರ್ಪೆಡೋ ತಾಸಿಗೆ 35 ಮೈಲು ಚಲಿಸಬಲ್ಲದು. ಇವುಗಳನ್ನು ನೀರಿನ ಮೇಲೆ ನೀರೊಳಗಿಂದ ಮತ್ತು ವಿಮಾನದಿಂದ ಬಿಡಬಹುದು. ಗುಂಡು ಒಂದು ಟನ್ ಮುಖಾಂತರ ಹಾರಿಸಲ್ಪಡುತ್ತಿದೆ. ಕೊಳವೆಯೊಳಗಿಂದ ಹೊರಬಿದ್ದ ಕೂಡಲೇ ಅದು ಪ್ರಚಂಡ ವೇಗದಿಂದ ಗುರಿಯತ್ತ ಸಾಗುವದು ಮತ್ತು ಗುರಿಯನ್ನು ನಾಶಪಡಿಸುವದು.

ನೆವ್ವಿಲ್

ಚೇಂಬರ್ಲೇನರ ರಾಜಿನಾಮೆ.

ವಿನ್‌ಸ್ಟನ್

ಚರ್ಚಿಲ್ಲರು ಪ್ರಧಾನ ಮಂತ್ರಿಗಳಾದರು.

ಬ್ರಿಟಿಷ್ ಯುದ್ಧ ಧೋರಣೆಯ ಉಗ್ರ ಟೀಕೆ.

ನಾರ್ವೆಯಲ್ಲಿಯ ಬ್ರಿಟಿಷ್ ಸೈನ್ಯದ ಯುದ್ಧ ಚಟುವಟಿಕೆಯ ವಿಚಾರ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಚರ್ಚೆನಡೆಯಿತು. ಪ್ರಧಾನ ಮಂತ್ರಿಗಳಾದ ಚೆಂಬರ್ಲೇನರು ಬ್ರಿಟಿಷ್ ಸರಕಾರದ ಯುದ್ಧ ಧೋರಣೆಯನ್ನು ವಿವರಿಸಿ, ಬ್ರಿಟಿಷ್ ಸೈನ್ಯಗಳು ಯಾಕೆ ದಕ್ಷಿಣ ನಾರ್ವೆಯಿಂದ ಹಿಂತಿರುಗಿದವೆಂಬುದನ್ನು ತಿಳಿಸಿದರು.

ಕೂಲಿಕಾರರ ಪಕ್ಷದ ಮುಂದಾಳಾದ ಮೇಜರ್ ಅಟ್ಲಿಯವರೂ, ಲಿಬರಲ್ ಪಕ್ಷದ ಸರ್ ಆರ್ಚಿಬಾಲ್ಡ್ ಸಿಂಕ್ಲೇಯವರೂ, ಲಾಯಡ್ ಜಾರ್ಜರವರೂ, ಡಫ್ ಕೂಪರರೇ ಮೊದಲಾದವರು, 'ನಾವು ನಾರ್ವೆಯಲ್ಲಿ ಹಿಮ್ಮೆಟ್ಟಿದ್ದೇವೆ. ಇದರಿಂದ ಮುಂದೆ ನಾವು ಪಾಠಕಲಿಯಬೇಕು. ನಮ್ಮ ದೇಶದ ಜನರು ವೀರರು, ಸಾಹಸಿಗಳು. ಅವರನ್ನು ಮುನ್ನಡೆಸುವ ಮುಖಂಡರ ಕರ್ತವ್ಯ ನ್ಯೂನತೆಯಿಂದ ಅವರು ಹಿಂದಿರುಗಬೇಕಾಯಿತು. ಸರಕಾರದ ಇಂದಿನ ಧೋರಣೆಯು ತೀರಾ ಅಸಮಾಧಾನವಿದೆ. ನಾವು ಘೋರ ಯುದ್ಧದಲ್ಲಿ ತೊಡಗಿದ್ದೇವೆ. ಒಂದರಮೇಲೊಂದು ಅಪಜಯವಾಗುವದನ್ನು ಸಹಿಸುವದು ನಮ್ಮಿಂದಾಗದು. ನಾರ್ವೆ ಸ್ವೀಡನುಗಳಿಂದ ಬರುತ್ತಿದ್ದ ಸಾಮಾನುಗಳು ನಿಂತು ಹೋಯಿತು. ಬಾಲ್ಟಿಕ್ ರಾಷ್ಟ್ರಗಳ ವ್ಯಾಪಾರ ನಿಂತಿತು. ನಮ್ಮ ಮುತ್ಸದ್ಧಿತನಕ್ಕೆ ಕುಂದುಬಂದಿತು. ನಮ್ಮ ಮಂತ್ರಿಗಳು ಕೇವಲ ದೀರ್ಘ ಭಾಷಣಗಳಲ್ಲೇ ಮಗ್ನರಾಗಿದ್ದಾರೆ. ಜರ್ಮನರು ಮಾತಿನಲ್ಲಿ ಕಾಲಕಳೆಯದೆ ಮಿಂಚಿನ ವೇಗದಲ್ಲಿ ರಾಷ್ಟ್ರರಾಷ್ಟ್ರಗಳ ಮೇಲೆ ಧಾಳಿ ಮಾಡುತ್ತಿರುವರು. ಇದರಿಂದ ನಾವು ಪಾಠಕಲಿಯಬೇಕು. ಇಂದು ಪ್ರಧಾನ ಅಧಿಕಾರಗಳನ್ನು ಹೊತ್ತವರು ತಮ್ಮ ಸ್ಥಾನದ ಜವಾಬ್ದಾರಿಯನ್ನು ನಿರ್ವಹಿಸಿದಂತೆ ಕಂಡು ಬರುವದಿಲ್ಲ. ನಮ್ಮ ಮೇಲೆ ಇಂದು ಬಂದಿರುವ ಗಂಡಾಂತರವು 1914 ರದ್ದಕ್ಕಿಂಥಾ ಕಠಿಣವಾಗಿದೆ. ಯುದ್ಧ ಕೌಶಲ್ಯ ದೃಷ್ಟಿಯಿಂದ ಬ್ರಿಟಿಷರು ಬಹಳ ಕುಗ್ಗಿಹೋಗಿರುವರು. ಜನರಿಗೆ ಬಲಿದಾನಮಾಡಿ ದೇಶಸೇವೆಮಾಡಬೇಕೆಂದು ಬೋಧಿಸುತ್ತಿರುವ ಮಿ. ಚೆಂಬರ್ಲೇನರೇ ತಮ್ಮ ಪ್ರಧಾನ ಮಂತ್ರಿ ಪದಕ್ಕೆ ರಾಜಿನಾಮೆಯಿತ್ತು ಬೇರೆಯವರಿಗೆ ಸ್ಥಳಮಾಡಿದ್ದಲ್ಲಿ ಬ್ರಿಟಿಷರಿಗೆ ಇಂದಿನ ಯುದ್ಧದಲ್ಲಿ ಜಯವಾಗುವದು ಖಂಡಿತ' ಎಂದು ಮೊದಲಾಗಿ ಸರಕಾರವನ್ನು ಟೀಕಿಸಿದರು. ನಂತರ ಓಟಿಗೆ ಹಾಕಿ ನೋಡಲಾಗಿ ಸರಕಾರಕ್ಕೆ ಪರವಾಗಿ 281 ಓಟುಗಳೂ ವಿರೋಧವಾಗಿ 200 ಓಟುಗಳೂ ಆದ ಪ್ರಯುಕ್ತ ಚೆಂಬರ್ಲೇನರ ಸರಕಾರವು ಉಳಿದುಕೊಂಡಿತು. ಆದರೂ ಸಹ ಜನತೆಯು ದೇಶದ ಹಿತದೃಷ್ಟಿಯಿಂದ ಚೇಂಬರ್ಲೇನರು ಮುಖ್ಯ ಮಂತ್ರಿತ್ವವನ್ನು ದಕ್ಷತೆಯಿಂದ ಯುದ್ಧವನ್ನು ನಡೆಸಬಲ್ಲ ಬೇರೊಬ್ಬನಿಗೆ ಬಿಟ್ಟುಕೊಡಬೇಕೆಂದು ಅವರನ್ನು ಕೇಳಿಕೊಂಡಿತು. ರಾಷ್ಟ್ರದ ಹಿತದೃಷ್ಟಿಯಿಂದ ಚೇಂಬರ್ಲೇನರು ಈ ತ್ಯಾಗವನ್ನು ಮಾಡಬೇಕೆಂದರು. ಕಡೆಗೆ ಮಿ. ಚೇಂಬರ್ಲೇನರು ರಾಜಿನಾಮೆ ಕೊಡಲೊಪ್ಪಿದರು. ಮಂತ್ರಿ ಪದವಿಗೆ ಮೂರು ಜನರು ಉಮೇದುವಾರರಿದ್ದರು. ಲಾರ್ಡ ಹಾಲಿಫಾಕ್ಸ್, ಚರ್ಚಿಲ್ ಮತ್ತು ಲಾಯಡ್ ಜಾರ್ಜ್, ಲಾರ್ಡ ಹಾಲಿಫಾಕ್ಸರು ಲಾರ್ಡ್ಸ ಸಭೆಯ ಸದಸ್ಯರಾದ ಕಾರಣ ಅವರ ಉಮೇದುವಾರಿಕೆಯು ಅಂಗೀಕೃತವಾಗಲಿಲ್ಲ. ಉಳಿದವರಲ್ಲಿ ವಿನ್‌ಸ್ಟನ್ ಚರ್ಚಿಲ್ಲರವರು ಮುಖ್ಯ ಮಂತ್ರಿಗಳಾಗಿ ಆರಿಸಲ್ಪಟ್ಟಿದ್ದಾರೆ. ಮಂತ್ರಿಮಂಡಳದ ಪುನರ್ಘಟನೆಯಾಗಿದೆ. ಅಂತೋಣಿ ಈಡನ್‌ರವರು ಯುದ್ಧ ಸೆಕ್ರೆಟರಿಗಳಾಗಿದ್ದಾರೆ. ಸಿಂಕ್ಲೆಯವರು ವಿಮಾನ ಪಡೆಯ ಸೆಕ್ರೆಟರಿಗಳಾಗಿದ್ದಾರೆ. ಹಾಲಿಫಾಕ್ಸರು ತಮ್ಮ ಮುಂಚಿನ ಹುದ್ದೆಯಾದ ವಿದೇಶಾಂಗ ಮಂತ್ರಿತ್ವದಲ್ಲೇ ಇರುವರು. ಪ್ರಧಾನರಾಗಿದ್ದ ಚೆಂಬರ್ಲೇನರು ಕೌನ್ಸಿಲಿನ ಲಾರ್ಡ ಪ್ರೆಸಿಡೆಂಟರಾಗಿರುವರು. ಒಂದು ಸಣ್ಣ ಯುದ್ಧ ಸಮಾಲೋಚನಾ ಸಮಿತಿಯು ನೇಮಕವಾಗುವದಿದೆ.

ಲೋಕಕಂಟಕ ಹಿಟ್ಲರ್.

ಬೆಲ್ಜಿಯಂ ಹಾಲೆಂಡುಗಳ ಮೇಲೆ ಪ್ರಚಂಡ ಧಾಳಿ.

ನಾರ್ವೆಯಲ್ಲಿ ಕಳೆದ ವಾರ ಜರ್ಮನಿಗೂ ಮಿತ್ರರಾಷ್ಟ್ರಗಳಿಗೂ ಯುದ್ಧ ನಡೆಯುತ್ತಿತ್ತಷ್ಟೆ. ಈ ಸಂದರ್ಭದಲ್ಲಿ ಹಿಟ್ಲರನ ಸೈನ್ಯವು ಹಾಲೆಂಡಿನ ಕಡೆ ಧಾವಿಸಿ, ಹಾಲೆಂಡ್, ಬೆಲ್ಜಿಯಂ, ಲಕ್ಸೆಂಬರ್ಗ್‌ಗಳ ಮೇಲೆ ಧಾಳಿಯಿಟ್ಟಿದೆ. ಜರ್ಮನ್ ದಂಡುಗಳು ಕಳೆದ ಶುಕ್ರವಾರ ಬೆಳಗ್ಗೆ ಹಾಲೆಂಡಿನ ಮೇಲೆ ಧಾಳಿ ಮಾಡಿದರು. ರಬ್ಬರ್ ದೋಣಿಗಳಲ್ಲಿ ಈ ಜರ್ಮನ್ ಸೈನಿಕರು ಕುಳಿತು ವೆಲ್ಲಾಂಡ ನದಿಯ ಮುಖಾಂತರ ಹಾಲೆಂಡದ ಗಡಿಯೊಳಗೆ ಪ್ರವೇಶಿಸಿದರಂತೆ. ಹಾಲೆಂಡದ ಮುಖ್ಯಪಟ್ಟಣವಾದ ಹೇಗ್‌ಪಟ್ಟಣದ ಬಳಿ ಜರ್ಮನಿಯ ವಿಮಾನ ಸೈನಿಕರು ಬಂದು ಕೊಡೆಯ ಮುಖಾಂತರ ಕೆಳಗಿಳಿದರಂತೆ. ಜರ್ಮನರು ಡಚ್ ಸೈನಿಕರಂತೆಯೇ ವೇಷಹಾಕಿಕೊಂಡು ಅಲ್ಲಲ್ಲಿ ವಿಮಾನಗಳಿಂದ ಇಳಿಯುತ್ತಿರುವರಂತೆ. ಇದೇ ರೀತಿ ಬೆಲ್ಜಿಯಂ, ಲಕ್ಸೆಂಬರ್ಗ್‌ಗಳಲ್ಲಿ ಅವರ ಪ್ರವೇಶವು ನಡೆಯುತ್ತಿದೆ.

ಆಂಟ್‌ವರ್ಪ ಮೇಲೆ ಧಾಳಿ.

ಈ ಚಿಕ್ಕ ಹಾಗೂ ತಟಸ್ಥರಾಷ್ಟ್ರಗಳಾದ ಬೆಲ್ಜಿಯಂ, ಹಾಲೆಂಡ್, ಮತ್ತು ಲಕ್ಸೆಂಬರ್ಗ್‌ಗಳು ತಮ್ಮ ಸ್ವಾತಂತ್ರ್ಯರಕ್ಷಣೆಗಾಗಿ ಹೋರಾಡುತ್ತಿರುವರು. ಹಾಲೆಂಡಿನ ಅನೇಕ ಕಡೆಗಳಲ್ಲಿ ಡಚ್ ಸೈನಿಕರಿಗೂ, ಜರ್ಮನರಿಗೂ ತೀವ್ರ ಕದನಗಳಾಗುತ್ತಿವೆ. ಅನೇಕ ಪಟ್ಟಣಗಳ ಮೇಲೆ ಜರ್ಮನರು ವಿಮಾನ ಧಾಳಿ ಮಾಡಿರುವರು. ಬ್ರಿಟಿಷ್ ಸೈನ್ಯಪಡೆಗಳು ಬೆಲ್ಜಿಯಂ, ಹಾಗೂ ಇತರ ಯುದ್ಧಕ್ಕೆ ಈಡಾಗಿರುವ ರಾಷ್ಟ್ರಗಳ ಸಹಾಯಕ್ಕೆ ಧಾವಿಸುತ್ತಿರುವವು. ಹಾಲೆಂಡಿನ ರಾಜಧಾನಿಯಾದ ಆಂಟ್‌ವರ್ಪಿನ ಮೇಲೆ ಜರ್ಮನ್ ವಿಮಾನಗಳು ಧಾಳಿ ಮಾಡಿ ಅಲ್ಲಿದ್ದ ಮಿಲಿಟರಿ ದವಾಖಾನೆಯನ್ನು ನಾಶಪಡಿಸಿರುವರು.

ಬ್ರಿಟನಿನ ಯುದ್ಧ ಸಿದ್ಧತೆ.

ಚಕ್ರವರ್ತಿಗಳು ತಾರೀಕು 5 ರಲ್ಲಿ ಒಂದು ಹೇಳಿಕೆಯನ್ನು ಹೊರಡಿಸಿ ಹತ್ತೊಂಭತ್ತು ವರ್ಷ ವಯಸ್ಸಿನ ಮೇಲೆ ಮೂವತ್ತೇಳು ವರ್ಷಗಳ ಒಳಗಿನ ಯುವತ್ತ ಪುರುಷರು ತಾಯ್ನಾಡಿನ ಸೇವೆಗೆ ಸನ್ನದ್ಧರಾಗಿ ಸೈನ್ಯಕ್ಕೆ ಸೇರಬೇಕೆಂದು ಘೋಷಿಸಿರುವರು. ಈ ಜಾಹೀರನಾಮೆಯ ಮೇಲೆ ಸುಮಾರು 25 ಲಕ್ಷ ಜನರು ಸೈನ್ಯಕ್ಕೆ ಸೇರಬಹುದೆಂದು ಅಂದಾಜು ಹಾಕಿರುವರು.

ನಾರ್ವೆದಂಡಿನ ಪಜೀತಿ.

ಮಿತ್ರರಾಷ್ಟ್ರಗಳ ದೃಷ್ಟಿಯು ಹಾಲೆಂಡು, ಬೆಲ್ಜಿಯಮಿನ ಕಡೆ ಬಿದ್ದಿರುವ ಪ್ರಯುಕ್ತ ನಾರ್ವೆಗೆ ಮಿತ್ರಪಕ್ಷದವರಿಂದ ಮೊದಲಿನಷ್ಟು ಸಹಾಯ ದೊರೆಯುವದು ಕಷ್ಟವಾಗಿದೆ. ಜರ್ಮನ್‌ಸೈನ್ಯಗಳು ಉತ್ತರ ನಾರ್ವೆಯನ್ನು ಪ್ರವೇಶಿಸುತ್ತಿರುವವು. ಈ ದಂಡನ್ನು ಎದುರಿಸಿದ ನಾರ್ವೆಸೈನ್ಯವು ಜರ್ಮನರಿಗೆ ಶರಣುಹೋಗಬೇಕಾಯಿತು. ಹೆಗ್ರೆಕೋಟೆಯನ್ನು ಜರ್ಮನರು ವಶಪಡಿಸಿಕೊಂಡಿರುವರು. ನಾರ್ವೆಸೈನ್ಯದ 156 ಅಧಿಕಾರಿಗಳು ಜರ್ಮನರ ಸೆರೆಸಿಕ್ಕಿರುವರು.

ತೀವ್ರ ಹೋರಾಟ.

ಆಂಸ್ಟರಡಾಮಿನಲ್ಲಿ ಎರಡು ಕಡೆಯವರಿಗೂ ತೀವ್ರ ವಿಮಾನ ಯುದ್ಧ ನಡೆಯುತ್ತಿದೆ. ಜರ್ಮನ್ ಸೈನಿಕರು ವಿಮಾನದಿಂದ ಕೊಡೆಗಳ ಮೂಲಕ ಇಳಿದು ರಾಟರ್‌ಡಾಮಿಗೆ ಮುನ್ನುಗ್ಗುತ್ತಿದ್ದಾಗ ಅವರನ್ನು ಡಚ್ಚರು ತಡೆಗಟ್ಟಿದರು. ಜರ್ಮನ್ ಸೈನಿಕರು ಡಚ್ ಅಥವ ಮಿತ್ರರಾಷ್ಟ್ರಗಳ ಸೈನಿಕರನ್ನು ವೇಷದಲ್ಲಿ ಬಂದು ಇಳಿಯುತ್ತಿರುವ ಪ್ರಯುಕ್ತ ಅವರನ್ನು ಕಂಡೊಡನೆ ಸರಕಾರಕ್ಕೆ ತಿಳಿಸಬೇಕೆಂಬ ಆಜ್ಞೆಯಾಗಿದೆ. ಡಚ್ಚರು ಯಾಸೆಲ್ ಮತ್ತು ಮ್ಯೂಸೆ ನದಿಗಳ ಸೇತುವೆಗಳನ್ನು ಮುರಿದು ಹಾಕಿರುವರು. ಶತ್ರುಗಳಿಗೆ ಆ ಮೂಲಕ ಬರುವದು ಅಸಾಧ್ಯ.

ರಾಟರ್‌ಡಾಮ್ ಯುದ್ಧ.

ಹಾಲೆಂಡಿನ ಪ್ರಾಮುಖ್ಯ ಒಂದು ಪಟ್ಟಣವಾದ ರಾಟರ್‌ಡಾಮನ್ನು ಜರ್ಮನರು ಹೇಗೆ ನುಗ್ಗಿದರೆಂಬುದು ಆಶ್ಚರ್ಯಕರವಾಗಿದೆ. ಲಾಲ್ ನದಿಯಲ್ಲಿ ಮುಚ್ಚಲ್ಪಟ್ಟ ದೋಣಿಗಳಲ್ಲಿ ಜರ್ಮನ್ ಸೈನಿಕರು ಯಾರಿಗೂ ತಿಳಿಯದಂತೆ ಕೂತು ಮುಸುಕಿನಲ್ಲಿ ನದಿಯಲ್ಲಿ ಪ್ರಯಾಣಮಾಡಿ ಪಟ್ಟಣವನ್ನು ಒಡನೆ ಮುಂಚಿನ ವೇಗದಿಂದ ಮುತ್ತಿದರಂತೆ. ಅನಿರೀಕ್ಷಿತವಾದ ಈ ಘಟನೆಯಿಂದ ದಂಗುಬಡೆದಂತಾದ ಡಚ್ಚರು ತಮ್ಮ ಸಿದ್ಧತೆಗಳನ್ನು ಮಾಡಲು ಅವಕಾಶವಿಲ್ಲದೆ ತೊಂದರೆಗೀಡಾಗಬೇಕಾಯಿತಂತೆ.

ಹಾಲೆಂಡ್ ರಾಣಿಯನ್ನು ಸೆರೆಹಿಡಿಯುವ ಯತ್ನ.

ಹಾಲೆಂಡಿನ ರಾಣಿಯಾದ ವಿಲ್‌ಹೆಲ್ಮಿನಾಳನ್ನು ಸೆರೆಹಿಡಿದರೆ ಡಚ್ಚರ ಎದೆಬಿರಿದಂತಾಗಿ ಮುಂದೆ ಅವರು ಜರ್ಮನರನ್ನು ಎದುರಿಸಲಾರರೆಂದು ಯೋಚಿಸಿ ರಾಣಿಯನ್ನು ಸೆರೆಹಿಡಿಯಲು ಬಗ್ಗೆ ಜರ್ಮನ್ ವಿಮಾನ ಪಡೆಗಳು ರಾಣಿಯ ಅರಮನೆಯ ಹತ್ತಿರದ ವಿಮಾನ ನಿಲ್ದಾಣವಾದ ವಾಲ್ಕೆನ್‌ಬರ್ಗ್‌ನಲ್ಲಿ ಇಳಿದರು. ಆದರೆ ಈ ಉಪಾಯವನ್ನು ತಿಳಿದ ಡಚ್ಚರು ಸುಸಜ್ಜಿತ ಕಾರುಗಳಲ್ಲಿ ಕುಳಿತು ವಾಲ್ಕೆನ್‌ಬರ್ಗಿಗೆ ಬಂದು ಮುತ್ತಿಗೆ ಹಾಕಿದರು. ಅನಿರೀಕ್ಷಿತ ಈ ಯುದ್ಧದಿಂದ ಜರ್ಮನರು ನಷ್ಟಪಟ್ಟು ಹಿಂದೆ ಸರಿಯಬೇಕಾಯಿತು.

ಬ್ರಿಟಿಷರ ಸಹಾಯ.

ಜರ್ಮನರ ವಶವಾಗಿರುವ ರಾಟರ್‌ಡಾಮ್ ವಿಮಾನ ನಿಲ್ದಾಣದ ಮೇಲೆ ಬ್ರಿಟಿಷ್ ರಾಯಲ್ ಏರ್‌ಫೋರ್ಸಿನವರು ಧಾಳಿ ನಡೆಸಿದರು. ತಾರೀಕು 10 ರಾತ್ರಿ ಮತ್ತು 11 ರ ಬೆಳಗ್ಗೆ ಅಲ್ಲಿ ಪ್ರಚಂಡ ಧಾಳಿ ನಡೆಯಿತು. ಸಾವಿರಾರು ಬಾಂಬುಗಳು ಹಾಕಲ್ಪಟ್ಟವು. ಬ್ರಿಟಿಷ್ ವಿಮಾನಪಡೆಗಳು ಒಂದರ ನಂತರ ಒಂದು ಸಮುದ್ರದ ತೆರೆಯೋಪಾದಿ ಬಂದು ಮುತ್ತಿದವು. ಜರ್ಮನರ ಅನೇಕ ವಿಮಾನಗಳು ನಾಶವಾದವು. ಇಡೀ ವಿಮಾನ ನಿಲ್ದಾಣವೇ ಬೆಂಕಿಗೆ ಆಹುತಿಯಾಯಿತು. ಆದರೆ ನಿಲ್ದಾಣವು ಇನ್ನೂ ಜರ್ಮನರ ವಶದಲ್ಲಿಯೇ ಇದೆ.

ಲಕ್ಸೆಂಬರ್ಗ್‌ನಲ್ಲಿ ಜರ್ಮನರು.

ಲಕ್ಸೆಂಬರ್ಗ್‌ನಲ್ಲಿ ಜರ್ಮನರು ತೀವ್ರ ಮುಂದರಿಯುತ್ತಿರುವರು. ಇದರ ದಕ್ಷಿಣ ಭಾಗವು ಮಿತ್ರ ರಾಷ್ಟ್ರಗಳ ವಶದಲ್ಲಿದ್ದರೂ ಜರ್ಮನ್ ಸೈನ್ಯವು ಆಲ್‌ಬರ್ಟ್ ಕಾಲುವೆಯನ್ನು ದಾಟಿ ರೋರ್‌ಮಂಡಿನ ಕಡೆ ಮುನ್ನುಗ್ಗುತ್ತಿರುವದು. ಜರ್ಮನರ ದೊಡ್ಡ ಸೈನ್ಯಗಳು ಉತ್ತರ ಭಾಗದಲ್ಲಿ ಮುಂದರಿಯುತ್ತಿರುವವು. ವಿಮಾನದಿಂದ ಸೈನಿಕರು ಅಸಂಖ್ಯಾತವಾಗಿ ಬಂದಿಳಿಯುತ್ತಿರುವರು. ಹಾಲೆಂಡಿನ ಆಮ್‌ಸ್ಟರಡಾಮಿನ ಮೇಲೆ ಜರ್ಮನರು ಬಾಂಬುಹಾಕಿದರು. ಇದರಿಂದ 30 ಜನರು ಕೊಲ್ಲಲ್ಪಟ್ಟು ಅನೇಕರಿಗೆ ಗಾಯಗಳಾಯಿತು.

ಬೆಲ್ಜಿಯಮಿನಲ್ಲಿ ತೀವ್ರ ಕಾಳಗ.

ಬೆಲ್ಜಿಯಮಿಗೆ ಶತ್ರುಗಳು ನುಗ್ಗಿದಂದಿನಿಂದಲೂ, ಅವರು ತೀವ್ರವಾಗಿ ವಿರೋಧಿಗಳನ್ನು ಎದುರಿಸುತ್ತಿರುವರು. ಮಿತ್ರರಾಷ್ಟ್ರಗಳು ಬೆಲ್ಜಿಯಮಿನ ಸಹಾಯಕ್ಕೆ ಬಂದು ಮುಂದರಿಯುತ್ತಿವೆ. ಜರ್ಮನರು ಇವರ ಮುನ್ನಡೆಗೆ ತಡೆಯಾಗುವಂತೆ ಪಹಿವಾಟಿನ ಮಾರ್ಗಗಳನ್ನು ನಾಶಪಡಿಸುತ್ತಿರುವರು. ಮಿತ್ರರಾಷ್ಟ್ರಗಳ ಹಾವಳಿ, ಬೆಲ್ಜಿಯಮಿನ ವಿರೋಧ ಇವುಗಳಿಂದಾಗಿ ಜರ್ಮನರ ಮುನ್ನಡೆಗೆ ಧಕ್ಕೆ ಬಂದಿದೆ.

ಫ್ರಾನ್ಸ್, ಜರ್ಮನರ ಕೈ. ಕೈ.

ತಾರೀಕು 10 ರಲ್ಲಿ ಲಕ್ಸೆಂಬರ್ಗಿನ ಗಡಿಯಲ್ಲಿ ಫ್ರಾನ್ಸ್ ಸೈನ್ಯಕ್ಕೂ, ಜರ್ಮನಿಯ ದಳಕ್ಕೂ ಖಾಡಾಖಾಡಿ ಯುದ್ಧವಾಯಿತು. ಮೋಸಲೆಯ ಪೂರ್ವ ದಿಗ್ಭಾಗದಲ್ಲಿ ಮುಂದರಿಯಲು ಜರ್ಮನರು ಬಹಳ ಪ್ರಯತ್ನಮಾಡಿದರು. ಆದರೆ ಫ್ರಾನ್ಸಿನವರು ಜರ್ಮನರನ್ನು ತಡೆದು ನಿಲ್ಲಿಸಿದರು. ಚರಿತ್ರೆಯಲ್ಲೇ ಇಂಥಾ ಕದನವು ನಡೆಯಲಿಲ್ಲವೆಂದೂ; ಈ ಜಯವನ್ನು ನಾವು ಹೊಗಳಿಕೊಂಡು ಮೈಮರೆಯುವದು ಹಿತವಲ್ಲವೆಂದೂ ಈ ಯುದ್ಧದ ವಿಚಾರ ಫ್ರಾನ್ಸಿನ ಪ್ರಚಾರಕನೊಬ್ಬನಂದಿರುವನಂತೆ.

ನಾಗರೀಕರ ಕೊಲೆ.

ಫ್ರಾನ್ಸಿನಲ್ಲಿ ಜರ್ಮನರ ವಿಮಾನ ಧಾಳಿಯಿಂದಾಗಿ 22 ನಾಗರೀಕರು ತಾರೀಕು 10 ರಲ್ಲಿ ಮೃತರಾದರೆಂದು ಹೇಳಲಾಗಿದೆ. ತಾರೀಕು 11 ರ ಕದನದಲ್ಲಿ ಸುಮಾರು ನೂರು ಜನರು ಆಹುತಿಯಾಗಿರಬಹುದಾಗಿ ಅಂದಾಜು ಹಾಕಲಾಗಿದೆ. ಬ್ರಿಟಿಷರ ಹೇಳಿಕೆಯ ಮೇರೆ ತಾರೀಕು 10 ರ ವಿಮಾನ ಯುದ್ಧದಲ್ಲಿ ಜರ್ಮನರ 50 ವಿಮಾನಗಳನ್ನು ನಾಶಪಡಿಸಲಾಗಿದೆಯೆಂದೂ, ಅನೇಕ ವಿಮಾನಗಳಿಗೆ ಧಕ್ಕೆ ತಗಲಿದೆಯೆಂದೂ ತಿಳಿದು ಬಂದಿದೆ. ಅದರೊಂದಿಗೆ ಬ್ರಿಟಿರ ಇಪ್ಪತ್ತು ವಿಮಾನಗಳು ಕಾಣದಾಗಿವೆಯೆಂದೂ ಹೇಳಲಾಗಿದೆ.

ಜರ್ಮನರ ಘೋಷಣೆ.

'ಮೂಸ್ ನದಿಯ ಹಾಗೂ ಆಲ್‌ಬರ್ಟ್ ಕಾಲುವೆಯನ್ನು ಹತೋಟಿಯಲ್ಲಿಟ್ಟುಕೊಂಡಿದ್ದ ಬೆಲ್ಜಿಯಮಿನ ಪ್ರಸಿದ್ಧ ಕೋಟೆಯನ್ನು ನಾವು ವಶಪಡಿಸಿಕೊಂಡಿರುವೆವು. ಈ ಸಂದರ್ಭದಲ್ಲಿ ಆ ಕೋಟೆಯ ಕಮಾಂಡರನನ್ನೂ, ಸಾವಿರ ಜನರನ್ನೂ ಸೆರೆಹಿಡಿಯಲಾಗಿದೆ. ನಮ್ಮ ಸೈನ್ಯಗಳು, ಬೆಲ್ಜಿಯಮ್, ಹಾಲೆಂಡು ಮತ್ತು ಲಕ್ಸೆಂಬರ್ಗ್ ಗಡಿಗಳನ್ನು ದಾಟಿ ಮುಂದರಿಯುತ್ತಿವೆ. ಫ್ರಾನ್ಸಿನ ಮೇಲೆ ಪ್ರಚಂಡ ವಿಮಾನಧಾಳಿಯನ್ನು ನಡೆಸಲಾಯಿತು. ಈ ಧಾಳಿಯಲ್ಲಿ ಫ್ರಾನ್ಸಿನ 72 ವಿಮಾನ ನಿಲ್ದಾಣಗಳ ಮೇಲೆ ಬಾಂಬು ಹಾಕಿದ್ದಲ್ಲದೆ ಮುನ್ನೂರರಿಂದ ನಾನೂರರ ವರೆಗೆ ವಿಮಾನಗಳನ್ನು ನಾಶಪಡಿಸಲಾಗಿದೆ.'

ಬೆಲ್ಜಿಯನರ ಪ್ರಕಟಣೆ.

'ತಾರೀಕು 10-11 ರಲ್ಲಿ ಶತ್ರುಗಳು ನಮ್ಮ ಅನೇಕ ನಗರಗಳ ಮೇಲೆ ಬಾಂಬು ಹಾಕಿದವು. ಅನೇಕ ಪಟ್ಟಣಗಳಿಗೆ ಮುತ್ತಿಗೆ ಹಾಕಿದವು. ಮತ್ತೆ ಅನೇಕ ಸ್ಥಳಗಳಲ್ಲಿ ಸೈನಿಕರು ವಿಮಾನ ಮಾರ್ಗವಾಗಿ ಬಂದಿಳಿದರು. ಆದರೆ ನಮ್ಮ ಸೈನ್ಯಗಳು ಅವರನ್ನು ಯಶಸ್ವಿಯಾಗಿ ಎದುರಿಸಿದವು. ಅವರ ವಿಮಾನ ಕೊಡೆಯ ದಳಕ್ಕೆ ಹೆಚ್ಚಿನ ನಷ್ಟವನ್ನುಂಟುಮಾಡಲಾಗಿದೆ. ಶತ್ರುಗಳು ವಿಮಾನ ಧಾಳಿಯನ್ನು ಪ್ರಚಂಡವಾಗಿ ನಡೆಸಿದರೂ ಹೆಚ್ಚಿನ ನಷ್ಟವಾಗಲಿಲ್ಲ. ಬೆಲ್ಜಿಯಂ ಮತ್ತು ಹಾಲೆಂಡುಗಳ ಸುತ್ತು ಸಮುದ್ರದ ನೀರು ಹಾಯಿಸಿ ಶತ್ರುಗಳು ಬರದಂತೆ ತಡೆಗಟ್ಟಿರುವದರಿಂದ ಈ ರಾಷ್ಟ್ರಗಳ ಗಡಿಗಳು ಭದ್ರವಾಗಿ ಕಾಯಲ್ಪಟ್ಟಿವೆ.

ಫ್ರಾನ್ಸಿನಲ್ಲಿ ಯುದ್ಧ.

ತಾರೀಕು 11 ರಲ್ಲಿ ಫ್ರಾನ್ಸಿನ ಸ್ವಿಟ್ಜರ್ಲೆಂಡ್ ಗಡಿಯನ್ನು ಜರ್ಮನರು ಮುತ್ತಿದರು. ಫ್ರಾನ್ಸಿನ ಅನೇಕ ಕಡೆಗಳಲ್ಲಿ ಪುನಹ ಜರ್ಮನರು ಬಾಂಬು ಹಾಕಿದರು. ಫ್ರಾನ್ಸಿನ ವಿಮಾನ ಪಡೆಯವರು ಯಥೋಚಿತವಾಗಿ ಅವರಿಗೆ ಬಾಂಬಿನ ಉತ್ತರವಿತ್ತಿರುವರಂತೆ. ಈ ಯುದ್ಧದಲ್ಲಿ ಶತ್ರುಗಳ 37 ವಿಮಾನಗಳು ಕೆಳಗುರುಳಿದವಂತೆ. ಫ್ರಾನ್ಸಿನ ಮೋಸಲೆ ಎಂಬ ಪಟ್ಟಣವನ್ನು ಜರ್ಮನರು ಮುತ್ತಿ ಧಾಳಿ ನಡೆಸಿದರು. ಇದರಿಂದಾಗಿ 148 ಜನರು ಹತರಾದುದಲ್ಲದೆ 337 ಜನರಿಗೆ ಗಾಯವಾಗಿದೆ.

ಇಂಗ್ಲೆಂಡದ ಮೇಲೆ ಧಾಳಿ ಪ್ರಯತ್ನ.

ಕಳೆದ ಶುಕ್ರವಾರ ರಾತ್ರಿ ಜರ್ಮನ್ ವಿಮಾನಗಳು ಇಂಗ್ಲೆಂಡದ ನೈರುತ್ಯಕರಾವಳಿಯಲ್ಲಿಯೂ, ಡೋವರ್, ಕೇಂಟರ್

ಬರಿ ಮೊದಲಾದ ಪ್ರದೇಶಗಳಲ್ಲಿ ಥಾಳಿ ಮಾಡಲೆತ್ನಿಸಿದವು. ಆದರೆ ಬ್ರಿಟಿಷಿನ ವಿಮಾನ ವಿರೋಧಕ ದಳದವರು ಅನೇಕ ಸ್ಥಳಗಳಲ್ಲಿ ತೋಪುಗಳನ್ನು ಹಾರಿಸಿ ಅವರನ್ನು ಹಿಂದಕ್ಕಟ್ಟಿರುವರು.

ಸ್ವಿಟ್ಜರ್ಲೆಂಡಿನ ಮೇಲೆ ಥಾಳಿ.

ಪೂರ್ವಭಾಗದಲ್ಲಿ ಫ್ರಾನ್ಸಿಗೂ, ಜರ್ಮನಿಗೂ ಮಧ್ಯದಲ್ಲಿ ತಟಸ್ಥ ರಾಷ್ಟ್ರವಾದ ಸಿಟ್ಜರ್ಲೆಂಡು ಇದೆ. ತಾರೀಕು 11 ರಲ್ಲಿ ಇದರ ಮೇಲೆ ಜರ್ಮನರ ಥಾಳಿ ನಡೆಯಿತು. ಬ್ಯಾಸಲ್‌ದ ಆಗ್ನೇಯದಲ್ಲಿ 20 ಮೈಲಿನಲ್ಲಿರುವ ಕೋರೆಂಡಲಿನ್‌ದ ಮೇಲೆ ಜರ್ಮನ್ ವಿಮಾನಗಳು ಬಾಂಬು ಹಾಕಿದವು. ಅಲ್ಲಿಯ ಕೈಲ್ಪ್ ಪ್ರದೇಶವು ಇದರಿಂದ ನಾಶವಾಗಿದೆ. ಟೂರ್ನಿಬಳಿಯಲ್ಲಿಯೂ ವಿಮಾನ ಯುದ್ಧವು ನಡೆಯಿತು. ಸ್ವಿಸ್‌ಜನರು ವಿರೋಧಿ ವಿಮಾನ ಪಡೆಗಳಿಗೆ ತೋಪುಗಳನ್ನು ಹಾರಿಸಿದರು.

ಫ್ರಾನ್ಸಿನ ಮೇಲೆ ಹಲ್ಲೆ.

ಜರ್ಮನ್ ವಿಮಾನ ಪಡೆಯವರು ಫ್ರಾನ್ಸಿಗೆ ಎರಡು ಕಡೆಗಳಿಂದ ನುಗ್ಗಿ ಥಾಳಿಮಾಡಿರುವರು. ಬೆಲ್ಜಿಯಮಿನ ಮೇಲೆ ಜರ್ಮನ್ ವಿಮಾನಗಳು ಹಾಯ್ದು ಫ್ರಾನ್ಸಿಗೆ ನುಗ್ಗಿ ಅನೇಕ ಪಟ್ಟಣಗಳ ಮೇಲೆ ಥಾಳಿಮಾಡಿವೆ. ಇತ್ತ ಪೂರ್ವಭಾಗದಲ್ಲಿ ಸ್ವಿಟ್ಜರ್ಲೆಂಡಿನ ಮಾರ್ಗವಾಗಿ ಹಾದು ಫ್ರಾನ್ಸಿನ 18 ಪಟ್ಟಣಗಳ ಮೇಲೆ ವಿಮಾನ ಥಾಳಿ ನಡೆಸಿವೆ.

ಹಾಲೆಂಡಿನಲ್ಲಿ ಯುದ್ಧ. ತಾ. 10.

ತಾರೀಕು ಹತ್ತರಲ್ಲಿ ಬೆಳಿಗ್ಯೆ ಸುಮಾರು 3 ಗಂಟೆಗೆ ಜರ್ಮನ್ ಸೈನ್ಯಗಳು ಡಚ್ ಗಡಿಯನ್ನು ದಾಟಿ ಅನೇಕ ವಿಮಾನ ನಿಲ್ದಾಣಗಳ ಮೇಲೆ ಬಾಂಬು ಸುರಿಸಿದವು. ಡಚ್ಚರು ತಮ್ಮ ರಾಷ್ಟ್ರದ ಸುತ್ತು ಇರುವ ಕಾಲುವೆಯಲ್ಲಿ ನೀರು ಹಾಯಿಸಿ ಜರ್ಮನ್ ಸೈನ್ಯವು ಮುಂದರಿಯದಂತೆ ತಡೆಯಲು ಪ್ರಯತ್ನಿಸುತ್ತಿರುವರು. ಈ ವರೆಗಿನ ಯುದ್ಧದಲ್ಲಿ ಜರ್ಮನರ ಆರು ವಿಮಾನಗಳನ್ನು ಅವರು ನಾಶಪಡಿಸಿರುವದಾಗಿ ವಾರ್ತೆ ಇದೆ. ಯೂಸೆಲ್ ಮತ್ತು ಮ್ಯಾಸ್‌ಭಾಗಗಳಲ್ಲಿ ಡಚ್ಚರು ಜರ್ಮನರನ್ನು ತೀವ್ರವಾಗಿ ಎದುರಿಸುತ್ತಿರುವರು. ವೆನ್‌ಲೋ ಪಟ್ಟಣವನ್ನು ಜರ್ಮನರು ಜಯಪ್ರದವಾಗಿ ಮುತ್ತಿಗೆ ಹಾಕಿದರು. ಈಗಾಗಲೇ ಅನೇಕ ಡಚ್ಚರು ಜರ್ಮನರ ಸೆರೆಯಾಗಿದ್ದಾರೆ.

ಡಚ್ಚರ ಹೇಳಿಕೆ.

ಡಚ್ಚರು ಜರ್ಮನರ ನೂರು ವಿಮಾನಗಳನ್ನು ನಾಶಪಡಿಸಿರುವರಂತೆ. ಜರ್ಮನರ ವಶವಾಗಿದ್ದ ವಿಮಾನ ನಿಲ್ದಾಣಗಳ ಪೈಕಿ ಒಂದನ್ನು ಬಿಟ್ಟು ಉಳಿದವುಗಳೆಲ್ಲವನ್ನೂ ಪುನಹ ವಶಮಾಡಿಕೊಂಡಿರುವರಂತೆ. ಜರ್ಮನರ ನೂರು ವಿಮಾನಗಳನ್ನು ಕೆಡಹಿದ್ದು ಅತಿಶಯೋಕ್ತಿ ಏನೂ ಅಲ್ಲವೆಂದು ಅವರ ಹೇಳಿಕೆ.

ತಾರೀಕು 13.

ಹಾಲೆಂಡ್.ರಾಣಿಯು ಲಂಡನಿನಲ್ಲಿ.

ಹಾಲೆಂಡಿನ ರಾಣಿಯಾದ ವಿಲ್‌ಹೆಲ್ಮಿನಾರವರು ಲಂಡನಿಗೆ ತಲಪಿರುವರು. ಬ್ರಿಟನಿನ ಯುದ್ಧನಾವೆಯೊಂದರಲ್ಲಿ ಕುಳಿತು ಅವರು ಲಂಡನಿಗೆ ಪ್ರಯಾಣಮಾಡಿದರು. ಅವರು ಇಂಗ್ಲೆಂಡಿಗೆ ಹೋಗಿದ್ದರ ವಿಚಾರ ಈ ರೀತಿ ಪ್ರಕಟಿಸಿ ಹೊರಡಿಸಿರುವರು. 'ರಾಣಿಯವರ ... ಬಿಟ್ಟು ಹೋಗ... [illegible] ಪ್ರ... [illegible] ಗೆ ಅಂದರೆ ಶತ್ರುವಿನ ಉಪಟಳವಿಲ್ಲದಲ್ಲಿ ನಿಂತು ತನ್ನ ಸರಕಾರವನ್ನು ನಡೆಸುವ ಇಚ್ಛೆಯಿಂದ ಇಂಗ್ಲೆಂಡಿಗೆ ಹೋಗಿರುವದಾಗಿದೆ. ಆದಷ್ಟು ಬೇಗ ರಾಣಿಯು ತನ್ನ ದೇಶಕ್ಕೆ ಹಿಂದಿರುಗುವ ಅಭಿಪ್ರಾಯದಲ್ಲಿರುವರು.'

ಡಚ್ಚರ ಹೇಳಿಕೆ.

'ಯೂಸೆಲನ್ನು ದಾಟಿ ಬಂದ ಜರ್ಮನರ ಪಡೆಯನ್ನು ಗಿಲ್ಡರ್‌ಲೇಂಡ್ ಎಂಬಲ್ಲಿ ನಮ್ಮ ಪಡೆಯು ಎದುರಿಸಿದೆ. ಯೂಸೆಲ್ ಸರೋವರದ ಹತ್ತಿರ ಡಚ್ಚರು ಅಲ್ಪಸ್ವಲ್ಪ ನಷ್ಟದಿಂದ ವಾಪಾಸು ಬರಬೇಕಾಯಿತು. ಡಚ್ಚರು ತೀವ್ರತರವಾಗಿ ಭಯಂಕರ ರಕ್ತ್ರವಾದ ಜರ್ಮನರನ್ನು ಎದುರಿಸುತ್ತಿರುವರು. ಜರ್ಮನರು ವಿಮಾನಥಾಳಿಯನ್ನು ಎಡೆಬಿಡದೆ ಮಾಡುತ್ತಿರುವರು. ಕೆಲವು ಪ್ರಾಂತಗಳಲ್ಲಿ ಜರ್ಮನರು ವಶಪಡಿಸಿಕೊಂಡಿದ್ದ ಭಾಗಗಳನ್ನು ಪುನಹ ವಶಪಡಿಸಿಕೊಳ್ಳಲಾಗಿದೆ. ನಮ್ಮ ಯುದ್ಧ ವಿರೋಧಕ ತೋಪುಗಳಿಂದ ಜರ್ಮನರು ವಿಪರೀತ ನಷ್ಟಕ್ಕೊಳಗಾಗಿರುವರು.'

ಹಡಗು ಮುಳುಗಿತು.

ಡಚ್ಚರ 'ವಾನ್‌ರೆನ್‌ಸಿಬರ್' ಎಂಬ ಹಡಗು ಮೈನಿಗೆ ತಗಲಿ ಮುಳುಗಿಹೋಯಿತು. ಅದರ ಕಪ್ತಾನನು ಹೃದಯಕ್ರಿಯೆನಿಂತು ಮರಣ ಹೊಂದಿದನು. ಅದರಲ್ಲಿದ್ದ ನೂರೈವತ್ತು ಜನರಲ್ಲಿ ಐದು ಜನರು ಕಾಣೆಯಾಗಿರುವರು.

ರಾಟರ್‌ಡಾಮಿನಲ್ಲಿದ್ದ ಬ್ರಿಟಿಷ್ ಹಡಗುಗಳ ಉಪದೇಶಕರಾದ ಕ. ಕಾರ್ಟ್‌ರೈಟ್ ಎಂಬವರು ವಿಮಾನಥಾಳಿಯಿಂದ ಕೊಲ್ಲಲ್ಪಟ್ಟರು.

ಜರ್ಮನರ ಅಮೋಘ ಶಕ್ತಿಸಾಮರ್ಥ್ಯದಿಂದ ಡಚ್ಚ್ ಗಡಿಯಲ್ಲಿ ಡಚ್ಚರಿಗೆ ತುಂಬಾ ನಷ್ಟವಾಗಿದೆಯೆಂದು ಫ್ರೆಂಚರ ಊಹನೆ.

ನಿರಾಶ್ರಿತರ ವ್ಯವಸ್ಥೆ.

ಬೆಲ್ಜಿಯಮ್, ಹಾಲೆಂಡುಗಳ ಜರ್ಮನ್ ಥಾಳಿಯಿಂದ ನಿರಾಶ್ರಿತರಾದವರಿಗೆ ಬ್ರಿಟನೂ, ಫ್ರಾನ್ಸೂ ಆಶ್ರಯಕೊಡುವ ಏರ್ಪಾಡು ಮಾಡುತ್ತಿವೆ. ಫ್ರಾನ್ಸು 8,00,000 ಜನರಿಗೆ ಆಶ್ರಯಕೊಡುವಂತೆ ನಿರ್ಧರಿಸಿದೆ. ಈಗಾಗಲೇ ನಿರಾಶ್ರಿತರು ಈ ರಾಷ್ಟ್ರಗಳಿಗೆ ಬಂದು ಸೇರುತ್ತಿರುವರು.

ಜರ್ಮನರ ಬೆದರಿಕೆ.

ಜರ್ಮನ್ ಸರಕಾರವು ಮಿತ್ರರಾಷ್ಟ್ರಗಳಿಗೆ ಈ ರೀತಿಯ ಬೆದರಿಕೆ ಹಾಕಿದೆ. 'ವಿಮಾನಕೊಡೆಯಿಂದಿಳಿಯುವ ನಮ್ಮ ಸೈನಿಕರಿಗೆ ಹೆಚ್ಚು ಉಪಟಳಕೊಡುತ್ತಿರುವದು ನಮಗೆ ತಿಳಿದಿದೆ. ಇದು ಅಂತರರಾಷ್ಟ್ರೀಯ ಕಾನೂನಿಗೆ ವಿರೋಧವಾಗಿದೆ. ಈ ರೀತಿ ನಮ್ಮ ವಿಮಾನಪಡೆಯವರಿಗೆ ತೊಂದರೆಕೊಟ್ಟದ್ದೇ ಆದರೆ ಪ್ರತಿಯೊಬ್ಬ ಜರ್ಮನ್ ಯೋಧನಿಗೆ ಹತ್ತರಂತೆ ಮಿತ್ರರಾಷ್ಟ್ರದ ಸೈನಿಕರ ಪ್ರಾಣವನ್ನು ತೆಗೆದುಕೊಳ್ಳಲಾಗುವದು.'

[illegible]

ತಾರೀಕು 13 ರ ಬೆಳಿಗ್ಯೆ ಸುಸಜ್ಜಿತವಾದ ಜರ್ಮನರ ಮೋಟಾರು ಪಡೆಯು ಬೆಲ್ಜಿಯಮಿನ ಅನೇಕ ಭಾಗಗಳಿಗೆ ಮುತ್ತಿಗೆ ಹಾಕಿದೆ. ಬೆಲ್ಜಿಯಮರು ಮಿತ್ರಸೈನ್ಯದೊಡಗೂಡಿ ವೀರಾವೇಶದಿಂದ ಕಾದುತ್ತಿರುವರಂತೆ. ಶತ್ರುವಿನವಶವಾಗಿದ್ದ ಕೆಲವು ಗ್ರಾಮಗಳನ್ನು ಈ ಮಿತ್ರರಾಷ್ಟ್ರಗಳ ಸಹಾಯದಿಂದ ಬೆಲ್ಜಿಯನರು ಪುನಹ ವಶಪಡಿಸಿಕೊಂಡಿರುವರಂತೆ. ಬೆಲ್ಜಿಯಮಿನ ಸೈಕಲ್ ಪಡೆಯವರೂ, ವಿಮಾನ ಪಡೆಯವರೂ ಹೆಚ್ಚು ಚಾತುರ್ಯದಿಂದ ಯುದ್ಧ ಮಾಡುತ್ತಿರುವರಂತೆ. ಇದು ಬೆಲ್ಜಿಯನರ ಹೇಳಿಕೆ.

ಬೆಲ್ಜಿಯನರ ಎಚ್ಚರಿಕೆ.

'ಜರ್ಮನ್ ವಿಮಾನಗಳಿಂದ ಕೊಡೆಯ ಮುಖಾಂತರ ಬಂದಿಳಿಯುವ ಪಡೆಯವರು ನಮಗೆ ತಿಳಿದಿರುವದೇನೆಂದು ಬೆಲ್ಜಿಯಂ ನಾಗರೀಕರ ವೇಷದಲ್ಲೂ, ಹೆಂಗಸರ ವೇಷದಲ್ಲೂ ಇಳಿಯುತ್ತಿರುವರು. ಆದ್ದರಿಂದ ಜನರು ಇವರನ್ನು ಕಂಡೊಡನೆ ಸಕಾಲದಲ್ಲಿ ಸರಕಾರಕ್ಕೆ ಸೂಚಿಸಬೇಕು' ಎಂದು ಬೆಲ್ಜಿಯನ ಸರಕಾರವು ಪ್ರಕಟಿಸಿದೆ.

ನಾರ್ವೆ ಕದನ.

ನಾರ್ವೆಯಲ್ಲಿ ಯುದ್ಧವು ಪ್ರಬಲವಾಗಿ ನಡೆಯುತ್ತಿದೆ. ಜರ್ಮನರು ಮುಂದುವರಿಯುತ್ತಿದ್ದಾರೆ. ನಾರ್ವೆಯವರ ಆವೇಶಪೂರ್ಣ ಎದುರಾಟದಿಂದ ಜರ್ಮನರಿಗೆ ಸ್ವಲ್ಪ ತೊಡಕಾಗಿದೆಯೆಂದು ತಿಳಿದುಬರುತ್ತದೆ. ನಾರ್ವಿಕಿನ ಸುತ್ತಲಿರುವ ಪ್ರದೇಶವನ್ನು ಆಕ್ರಮಿಸುವ ಬಗ್ಯೆ ಜರ್ಮನರು ಪ್ರಯತ್ನಿಸುತ್ತಿರುವರು. ಮಿತ್ರರಾಷ್ಟ್ರದ ಸಹಾಯಕ ಸೈನ್ಯದೊಂದೊಡಗೂಡಿದ ನಾರ್ವೆ ಸೈನ್ಯವು ಅವರನ್ನು ತಡೆಗಟ್ಟಿದೆ. ಯುದ್ಧವು ಘೋರ ರೀತಿಯಿಂದ ನಡೆಯುತ್ತಿದೆ.

ಫ್ರೆಂಚರ ಕೈಚಳಕ.

ಯುದ್ಧವು ದಿನೇ ದಿನೇ ನಿಸ್ಸಾರಗೊಂಡು ಜಗತ್ತಿನ ಯುದ್ಧವಾಗಿ ಪರಿಣಮಿಸುವ ವಿಧಾನ ಕಂಡುಬರುತ್ತಿದೆ. ಜರ್ಮನರು ತಮ್ಮ ಮಿಂಚಿನ ವೇಗದಿಂದ ಮಿತ್ರರಾಷ್ಟ್ರಗಳನ್ನು ದಂಗುಬಡಿಸಿರುವರು. ಬೆಲ್ಜಿಯಮ್ಮಿನ ಒಂದು ಕಡೆ ಫ್ರೆಂಚರ 2 ಸಾವಿರ ಟ್ಯಾಂಕುಗಳು ಯುದ್ಧದಲ್ಲಿ ತೊಡಗಿದ್ದುವಂತೆ. ಈ ಯುದ್ಧದ ಪರಿಣಾಮದಿಂದ ಫ್ರೆಂಚರ ಶಕ್ತಿಯು ಜಗತ್ತಿಗೆ ಪ್ರದರ್ಶವಾಗಿದೆ ಎಂದು ಅವರ ಹೇಳಿಕೆ. ಹಾಲೆಂಡಿನ ಪಶ್ಚಿಮ ಪ್ರಾಂತಗಳಲ್ಲಿ ಜರ್ಮನರು ಮುನ್ನುಗ್ಗುತ್ತಿದ್ದಾರೆ. ಟ್ಯಾಂಕುಗಳು ಇಂದಿನ ಯುದ್ಧದಲ್ಲಿ ರಾಕ್ಷಸರಂತೆ ಯುದ್ಧ ಮಾಡುತ್ತಿರುವವು.

ವಿಮಾನ ಯುದ್ಧ.

ಹಾಲೆಂಡಿನ ಜೂಡಾರ್ಜೀ ಕೊಲ್ಲಿಯ ಕರಾವಳಿಯಲ್ಲಿಯ 250 ಮೈಲು ಮಾರಗಳ ವರೆಗೆ ಮೇಲಿನರೀತಿ ನೆಲ ಯುದ್ಧ ನಡೆಯುತ್ತಿದ್ದರೆ ಅದೇ ರೀತಿ ವಿಮಾನ ಯುದ್ಧವೂ ತೀವ್ರವಾಗಿ ನಡೆಯುತ್ತಿದೆ. ನೆಲ ಯುದ್ಧ ನಡೆಯುತ್ತಿರುವ ಆಕಾಶದಲ್ಲಿ ವಿಮಾನ ಯುದ್ಧವೂ ತೀಕ್ಷ್ಣವಾಗಿ ನಡೆಯುತ್ತಿದೆ.

ಹಾಲೆಂಡು, ಲಕ್ಸೆಂಬರ್ಗಿನಲ್ಲಿ ಶತ್ರುಗಳ ವಶವಿರುವ ಪಟ್ಟಣಗಳ ಮೇಲೆ ಬ್ರಿಟಿಷ್ ರಾಯಲ್ ವಿಮಾನಪಡೆಯವರು ಪ್ರಚಂಡ ಥಾಳಿ ಮಾಡಿದರೆಂದೂ, ಶತ್ರುಗಳು 400 ವಿಮಾನಗಳನ್ನು ನಾಶಪಡಿಸಿರುವರೆಂದೂ ಹಗಲು ಹೊತ್ತಿನಲ್ಲಿ ಲಕ್ಸೆಂಬರ್ಗಿನಲ್ಲಿ ಮಾಡಿದ ಥಾಳಿ ಯಶಸ್ವಿಯಾಯಿತೆಂದೂ, ಬ್ರಿಟಿಷರ ಹೇಳಿಕೆ.

ಬ್ರಿಟಿಷರ ಖಂಡನೆ.

ಇಟಲಿಯಲ್ಲಿ ಬ್ರಿಟಿಷರ ವಿರೋಧಪ್ರಚಾರವು ತೀವ್ರವಾಗಿ ನಡೆಯುತ್ತಿದೆ. ಬೀದಿ ಬೀದಿಗಳಲ್ಲಿ ಇವರಿಗೆ ವಿರೋಧದ ಬೋರ್ಡುಗಳು ಹಾಕಲ್ಪಟ್ಟಿವೆ. ಬ್ರಿಟಿಷ್ ಸರಕಾರದ ರೋಮಿನ ರಾಯಭಾರಿಯು ಈ ವಿಚಾರದಲ್ಲಿ ಇಟಲಿಯನರ ವಿವರಣೆ ಕೇಳಿದ್ದಾನೆ. ಈ ಮಧ್ಯೆ ರಸ್ತೆಯಲ್ಲಿದ್ದ ಬ್ರಿಟಿಷ್ ವಿರೋಧದ ಬೋರ್ಡನ್ನು ಹರಿದು ಹಾಕಿದನೆಂಬ ಕಪ್ಪಿಗಾಗಿ ಬ್ರಿಟಿಷ ನಾಗರೀಕರನ್ನು ಪಟ್ಟಣದಿಂದ ಓಡಿಸಲಾಗುತ್ತಿದೆಯಂತೆ. ಈ ಅವಮಾನದ ಬಗ್ಯೆ ಬ್ರಿಟಿಷರು ರೋಮ್ ಸರಕಾರದ ವಿವರಣೆಯನ್ನು ಕೇಳಿದ್ದಾರೆ. ಇಟಲಿಯನರು ದಿನೇ ದಿನೇ ಬ್ರಿಟಿಷರ ಮೇಲೆ ರೇಗುತ್ತಿರುವದು ಕಂಡು ಬರುತ್ತಿದೆ.

ನಾಜಿಗಳ ಘೋಷಣೆ.

'ಜರ್ಮನರು ಯಶಸ್ವಿಯಾಗಿ ಮುಂದರಿಯುತ್ತಿದ್ದಾರೆ. ಹಾಲೆಂಡಿನ ಪಶ್ಚಿಮದಲ್ಲಿ ನಮ್ಮ ಸೈನ್ಯವು ನಮ್ಮ ವಿಮಾನ ಪಡೆಯವರನ್ನು ಸಂಧಿಸಿದೆ. ತಾ. 13ರಿಂದ ನಮ್ಮ ಸ್ವಾಸ್ತಿಕಾ ಬಾವುಟವು ಗೆದ್ದ ಭಾಗಗಳಲ್ಲಿ ಅವಿಚ್ಛಿನ್ನವಾಗಿ ಹಾರಾಡುತ್ತಿದೆ. ದಕ್ಷಿಣ ಬೆಲ್ಜಿಯಮಿನಲ್ಲಿ ಕೆಲವು ಸೈನ್ಯದ ನಮ್ಮನ್ನು ಎದುರಿಸುತ್ತಿದೆ. ಫ್ರೆಂಚ್ ಸೈನ್ಯವನ್ನು ಹಿಮ್ಮೆಟ್ಟಿಸಲಾಗಿದೆ. ಅನೇಕರು ನಮಗೆ ಶರಣಾಗಿರುವರು.

ಬ್ರಿಟಿಷರ ಸೈನ್ಯವು ಡಚ್ ಮತ್ತು ಬೆಲ್ಜಿಯಂ ಕರಾವಳಿಗಳಲ್ಲಿ ಬಂದಿಳಿಯುವ ಸಂದರ್ಭದಲ್ಲಿ ನಮ್ಮ ವಿಮಾನ ಪಡೆಗಳು ಅವುಗಳ ಮೇಲೆ ಬಾಂಬು ಮಳೆಗರೆದವು. ಇದರಿಂದಾಗಿ ಅನೇಕ ಜನರು ನಾಶವಾಗಿರುವದಲ್ಲದೆ ಅವರ ಸಾಧನ ಸಾಮಗ್ರಿಗಳು ಅಸ್ತವ್ಯಸ್ತವಾಗಿವೆ. ಅನೇಕ ಯುದ್ಧ ಹಡಗಗಳು ಬೆಂಕಿಯ ಆಘಾತದಿಂದ ನಿರುಪಯೋಗವಾದವು. ನಮ್ಮ ವಿಮಾನ ಕೊಡೆಯ ಪಡೆಯು ಸೇತುವೆಗಳನ್ನೆಲ್ಲಾ ಹಠೋಟೆಘುಲ್ಲಿಟ್ಟು ಇವರ ಮುನ್ನಡೆಯನ್ನು ತಡೆದಿದೆ. ಇದರಿಂದ ಬ್ರಿಟಿಷ್ ಸೈನ್ಯವು ದಿಕ್ಕು ಕಾಣದೆ ಹಾಲೆಂಡಿನ ನೀರಿನಿಂದಾವೃತವಾದ ಕೋಟೆಯ ಆಶ್ರಯ ಪಡೆಯಬೇಕಾಯಿತು.' ಎಂದು ಜರ್ಮನರು ಹೇಳಿಕೆ ಹೊರಡಿಸಿರುವರು.

ಕೊಡಗು

ಮೇ ತಾರೀಕು ೧೭ ನೇ ಶುಕ್ರವಾರ ೧೯೪೦.

ಮತ್ತೆರಡು ಜನಾಂಗಗಳು ಬಲಿಬಿದ್ದವು.

ಜರ್ಮನಿಯ ಸರ್ವಾಧಿಕಾರಿಯಾದ ಹಿಟ್ಲರನ ಶಕ್ತಿ ಪ್ರದರ್ಶನ ಮತ್ತು ರಾಜ್ಯವಿಸ್ತರಣದ ಮಹದಗ್ನಿಗೆ ಮತ್ತೆರಡು ಸ್ವತಂತ್ರ ರಾಷ್ಟ್ರಗಳು—ಹಾಲೆಂಡು ಮತ್ತು ಬೆಲ್ಜಿಯಮ್ ಬಲಿಬಿದ್ದವು. ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಜರ್ಮನಿಯು ಯುದ್ಧವನ್ನು ಪ್ರಾರಂಭ ಮಾಡಿದ ಕೂಡಲೇ ಬಹು ಸಮೀಪವಾದ ಇವೆರಡು ರಾಜ್ಯಗಳು ಹಿಟ್ಲರನ ಧಾಳಿಗೆ ತುತ್ತಾಗುವವೆಂದು ನಿರೀಕ್ಷಿಸಲಾಗಿತ್ತು. ಆದರೆ ಅನಿರೀಕ್ಷಿತ ಕಾರ್ಯಗಳಿಗೆ ಹೆಸರುಗೊಂಡ ಈ ಸರ್ವಾಧಿಕಾರಿಯು ಇವೆರಡು ದೇಶಗಳೆಡೆಗೆ ತಿರುಗಿ ನೋಡದೆ ತಮ್ಮ ಶಕ್ತಿಪ್ರಭಾವವನ್ನು ಝೆಕೊಸ್ಲೊವಾಕಿಯಾ, ಪೋಲೆಂಡು, ನಾರ್ವೆ, ಡೆನ್ಮಾರ್ಕ್ ಮೊದಲಾದವುಗಳ ಕಡೆ ಬೀರಿದನು. ಅಲ್ಲೆಲ್ಲಾ ಜಯವನ್ನು ಪಡೆದು ಉಬ್ಬಿದ ಹಿಟ್ಲರನು ನಾರ್ವೆಯಲ್ಲಿ ಬ್ರಿಟಿಷ್ ಸೈನ್ಯಕ್ಕೆ ಉಂಟಾದ ಅಪಜಯದಿಂದ ಬ್ರಿಟಿಷ್ ಮಂತ್ರಿ ಮಂಡಳಿಯಲ್ಲಿ ಸಂಭವಿಸಿದ ಅಸಮಾಧಾನದ ಭಿನ್ನಾಭಿಪ್ರಾಯಗಳ ಸಂದರ್ಭವನ್ನು ಉಪಯೋಗಿಸಿಕೊಂಡು ಹಾಲೆಂಡು ಮತ್ತು ಬೆಲ್ಜಿಯಮಿನ ಮೇಲೆ ತನ್ನ ಸೈನ್ಯವನ್ನು ಮಿಂಚಿನಂತೆ ನಡೆಸಿಯೇ ಬಿಟ್ಟನು. ಬಹು ದೀರ್ಘ ಕಾಲದಿಂದ ಮಹಾ ಯುದ್ಧಕ್ಕೆ ತಯಾರು ಮಾಡುತ್ತಿದ್ದ ಈತನ ಸೈನ್ಯ ಶಕ್ತಿಯು ಈಗ ಅತ್ಯುತ್ತಮ ಸ್ಥಿತಿಯಲ್ಲಿದೆ. ಅಲ್ಲದೆ ಯುದ್ಧವನ್ನು ಇನ್ನೂ ದೀರ್ಘಕಾಲ ಎಳೆಯುತ್ತಾ ಬಂದರೆ ಮಿತ್ರ ಮಂಡಳಿಯವರ ಶಕ್ತಿ ಹೆಚ್ಚಾಗುವದೆಂದೂ ತನ್ನ ದೇಶದ ಆರ್ಥಿಕ ಸ್ಥಿತಿಯು ಹೀನವಾಗುವದೆಂದೂ ಹಿಟ್ಲರನು ತಿಳಿದುಕೊಂಡಿರಬಹುದು. ಆದುದರಿಂದಲೇ ಒಂದರ ನಂತರ ಒಂದರಂತೆ ಸ್ವತಂತ್ರ ದೇಶಗಳ ಮೇಲೆ ಅನುಕ್ರಮವಾಗಿ ಧಾಳಿ ನಡೆಸುತ್ತಿರುವನು.

1914 ರ ಘೋರ ಯುದ್ಧದಲ್ಲಿ ಜರ್ಮನಿಯು ಹಾಲೆಂಡನ್ನು ಬಿಟ್ಟು ಬೆಲ್ಜಿಯಮಿನ ಮೇಲೆ ಮಾತ್ರ ಧಾಳಿ ನಡೆಸಿತು. ಇದರಿಂದ ಅವರ ಯುದ್ಧ ರಂಗದ ಸ್ಥಿತಿಯು ಅಷ್ಟೊಂದು ಬಲವಾಗಿರಲಿಲ್ಲ. ಆ ಕಾರಣ ಈ ಸಾರಿ ಇವೆರಡು ದೇಶಗಳನ್ನೂ ತಮ್ಮ ಸ್ವಾಧೀನಪಡಿಸಲು ನಿಶ್ಚಯಿಸಿದ್ದಿರಬೇಕು. ಜರ್ಮನಿಯ ಸೈನ್ಯವು ಹಾಲೆಂಡಿನ ಗಡಿದಾಟಿ ಒಂದು ವಾರದೊಳಗೇನೇ ಹಾಲೆಂಡನ್ನು ಪೂರ್ತಿ ಕೈವಶ ಮಾಡಿಕೊಂಡಿತು. ಹಾಲೆಂಡವೂ ಸಾಧ್ಯವಿದ್ದಷ್ಟು ಶಕ್ತಿಯಿಂದ ಜರ್ಮನರ ಧಾಳಿಯನ್ನು ಪ್ರತಿಭಟಿಸಿತು. ಮಿತ್ರ ಮಂಡಳಿಯವರು ಶೀಘ್ರದಲ್ಲೇ ತಮ್ಮ ಸಹಾಯವನ್ನೀಯಲು ನಿಶ್ಚಯಿಸಿದರು. ಆದರೆ ಅಂಥಾ ಸಹಾಯವು ಹಾಲೆಂಡಿಗೆ ಸಾಕಷ್ಟು ತಲಪುವದರೊಳಗಾಗಿ ಹಾಲೆಂಡಿನ ಚಿಕ್ಕ ಸೈನ್ಯವು ಜರ್ಮನಿಯ ಮಹಾ ಸೈನ್ಯದ ಮುಂದೆ ನಿಲ್ಲಲಾರದೆ ಹೋಯಿತು. ಅಲ್ಲಿಯ ಮುಖ್ಯ ಸೇನಾಧಿಪತಿಯು ಇನ್ನು ಮುಂದೆ ಅನಾವಶ್ಯವಾಗಿ ಆಗಬಹುದಾದ ನರಹತ್ಯವನ್ನು ನಿವಾರಿಸಲಿಕ್ಕಾಗಿ ಯುದ್ಧವನ್ನು ನಿಲ್ಲಿಸುವಂತೆ ಸೈನಿಕರಿಗೆ ಹುಕುಂ ಮಾಡಿದನು. ಇಡೀ ಹಾಲೆಂಡು ಜರ್ಮನಿಗೆ ಶರಣಾಗತವಾಯಿತು. ಆದರೆ ಆ ದೇಶದ ರಾಣಿಯವರು ಯುದ್ಧ ಪ್ರಾರಂಭವಾದ ಕೂಡಲೇ ತನ್ನ ಸರಕಾರದೊಂದಿಗೆ ಲಂಡನಿಗೆ ಬಂದು ಸುರಕ್ಷಿತರಾಗಿರುವರು

ಬೆಲ್ಜಿಯಮಿನಲ್ಲಾದರೋ ಜರ್ಮನರಿಗೆ ಹಾಲೆಂಡಿನಷ್ಟು ಸುಲಭವಾಗಿ ಜಯ ದೊರೆತಿರುವುದಿಲ್ಲ. ಅಲ್ಲಿಗೆ ಮಿತ್ರ ಮಂಡಳಿಯವರ ಸೈನ್ಯವು ತಕ್ಕಷ್ಟು ಪರಿಮಾಣದಲ್ಲಿ ಹೋಗಿ ತಲಪಿದೆ. ಉಭಯ ಕಡೆಯವರಿಗೂ ಘೋರವಾದ ಯುದ್ಧವು ನಡೆಯುತ್ತಿದೆ. ಇಲ್ಲಿಯ ಜಯಾಪಜಯವು ಮುಂದೆ ಮಿತ್ರ ಮಂಡಳಿಯವರಿಗೂ ಹಿಟ್ಲರನ ಸೈನ್ಯಕ್ಕೂ ನಡೆಯಬಹುದಾದ ಮಹಾ ಯುದ್ಧದ ಫಲಿತಾಂಶವನ್ನು ಬಹು ಮಟ್ಟಿಗೆ ನಿಶ್ಚಯಿಸಬಹುದಾದ ಕಾರಣ ಹಿಟ್ಲರನು ತನ್ನ ಸರ್ವ ಶಕ್ತಿಯನ್ನೆಲ್ಲ ಕೇಂದ್ರೀಕರಿಸಿ ತಾನೇ ಸ್ವತಃ ರಣ ರಂಗದಲ್ಲಿ ನಿಂತು ಸೈನಿಕರಲ್ಲಿ ಹುರಿದುಂಬಿಸಿ ಬಹು ನಿಷ್ಠೆಯಿಂದ ಯುದ್ಧವನ್ನು ನಡೆಸುತ್ತಿರುವನು ಬೆಲ್ಜಿಯಮು ಎಷ್ಟರ ವರೆಗೆ ಜರ್ಮನರ ಧಾಳಿಯನ್ನು ಎದುರಿಸುವದೋ ಈಗ ಹೇಳಲಾಗುವದಿಲ್ಲ. ಹೇಗೂ ಕೆಲವು ದಿವಸಗಳಲ್ಲಿ ಅಲ್ಲಿಯ ಕಾದಾಟದ ಫಲಿತಾಂಶವು ತಿಳಿಯಬರಬಹುದು. ಒಂದು ವೇಳೆ ಬೆಲ್ಜಿಯಮೂ ಕೂಡ ಜರ್ಮನಿಗೆ ಶರಣಾಗತವಾಗುವ ಪರಿಸ್ಥಿತಿ ಬಂದರೂ ಮಿತ್ರ ಮಂಡಳಿಯವರು ಧೈರ್ಯಗೆಡಬೇಕಾಗುವ ಸಂಭವವಿಲ್ಲ. ಇವೆರಡೂ ದೇಶಗಳು ಹಿಟ್ಲರನ ಕರಗತವಾದರೆ ಮುಂದಿನ ಯುದ್ಧಕ್ಕೆ ಜರ್ಮನಿಯ ಸೈನ್ಯಕ್ಕೆ ತುಂಬಾ ಅನುಕೂಲವುಂಟಾಗುವದರಲ್ಲಿ ಸಂಶಯವಿಲ್ಲ. ಇಂಗ್ಲೆಂಡ ಮತ್ತು ಫ್ರಾನ್ಸಿನ ಮೇಲೆ ಧಾಳಿ ನಡೆಸಲು ಡಚ್ ಬಂದರುಗಳೂ, ಬೆಲ್ಜಿಯಮಿನ ಗಡಿಯೂ ಜರ್ಮನರಿಗೆ ತುಂಬಾ ಪ್ರಯೋಜನವಾಗುವವು. ಆದರೆ ಇಂಗ್ಲೆಂಡಿನ ಉತ್ಕೃಷ್ಟವಾದ ನೌಕಾ ಸೈನ್ಯವು ಮತ್ತು ಬಲವಾದ ವಿಮಾನಪಡೆಯೂ ಫ್ರಾನ್ಸಿನ ಜಗದ್ವಿಖ್ಯಾತವಾದ ನೆಲಸೈನ್ಯವೂ ಹಿಟ್ಲರನ ಆಸೆಯನ್ನು ನೆರವೇರಿಸಲು ಅಷ್ಟೊಂದು ಸುಲಭಸಾಧ್ಯ ಮಾಡಲಾರವು. ಜರ್ಮನಿಯ ಸೈನ್ಯದ ನಷ್ಟವು ದಿನೇ ದಿನೇ ಹೆಚ್ಚುತ್ತಾ ಬರುವಲ್ಲಿ ಮಿತ್ರಮಂಡಳಿಯವರು ತಮ್ಮ ಯುದ್ಧ ಸಿದ್ಧತೆಗಳನ್ನು ಬಲಪಡಿಸುತ್ತಾ ಬರುತ್ತಿರುವದರಿಂದ ಹಿಟ್ಲರನ ಧಾಳಿಯು ಮುಂದಕ್ಕೂ ಜಯಪ್ರದವಾಗಿ ನಡೆಯುವದೆಂದು ಹೇಳಲಾಗುವದಿಲ್ಲ. ಉಭಯ ಕಡೆಯವರ ಸೈನ್ಯಬಲ, ಪರಾಕ್ರಮ, ನಷ್ಟ, ಕಷ್ಟ ಸಹಿಷ್ಣುತೆ ಮೊದಲಾದವುಗಳ ಪರೀಕ್ಷೆಯು ಮುಂದೆ ಬರುವ ಮಹಾ ಕದನದಲ್ಲಿ ಗೊತ್ತಾಗುವದು. ಹೇಗೂ ಯುದ್ಧಕ್ಕೆ ಸೇರದಿರುವ ಅಮೇರಿಕಾ ಮೊದಲಾದ ಜನಾಂಗಗಳ ಸಹಾನುಭೂತಿಯು ಸಂಪೂರ್ಣ ಮಿತ್ರಮಂಡಳಿಯ ಕಡೆ ಇದೆ. ನ್ಯಾಯವಿದ್ದಂತೆ ಜಯವಾಗಲೆಂಬುದೇ ನಮ್ಮ ಹಾರೈಕೆ.

ಯುದ್ಧದ ಬಗ್ಗೆ ಜವಾಹಿರಲಾಲರ ಅಭಿಮತ.

ಅಂತರ ರಾಷ್ಟ್ರೀಯ ಸಂದಿಗ್ಧ ಪರಿಸ್ಥಿತಿಯ ಬಗ್ಗೆ ಜವಾಹರಲಾಲರು ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಿರುವರು.

'ಹಾಲೆಂಡು, ಬೆಲ್ಜಿಯಂ, ಲಕ್ಸೆಂಬರ್ಗ್ ಮೊದಲಾದ ರಾಷ್ಟ್ರಗಳ ಆಕ್ರಮಣವನ್ನೊಳಗೊಂಡ ಇಂದಿನ ಯೂರೋಪು ಯುದ್ಧದ ಪರಿಸ್ಥಿತಿಯು ಇಂದು ಹೊಸ ಅಂತಸ್ಥೋದಕ್ಕೆ ತಲಪಿದೆ. ಈ ಯುದ್ಧವು ಕ್ರಮೇಣ ವಿಸ್ತೃತವಾಗಿ ಇಡೀ ಮಾನವ ಜನಾಂಗವನ್ನೇ ವಿನಾಶದ ದಾರಿ ಹಿಡಿಸುವ ಚಿಹ್ನೆಗಳು ಕಂಡುಬರುತ್ತಿವೆ. ಇಂಥಾ ಒಂದು ಪ್ರಕ್ಷುಬ್ಧವಾದ ಪರಿಸ್ಥಿತಿಯು ಯೂರೋಪಿನಲ್ಲಿಂಟಾದುದಕ್ಕೆ ಪ್ರತಿಯೊಬ್ಬನೂ ವ್ಯಸನಪಡಬೇಕು. ಜರ್ಮನಿಯ ಸೈನ್ಯಪಡೆಯ ಶಿಸ್ತು, ಧೈರ್ಯ, ಸಾಮರ್ಥ್ಯಗಳು ಪ್ರತಿಯೊಬ್ಬನಿಗೂ ಆಶ್ಚರ್ಯವನ್ನುಂಟುಮಾಡಿದ್ದರೂ ಈ ನಾಜಿಗಳ ಪಾಶವೀ ಮಹತ್ವಾಕಾಂಕ್ಷೆಯು ಯೂರೋಪನ್ನೇ ಅಲ್ಲ, ಇಡೀ ವಿಶ್ವವನ್ನೇ ವಿಪತ್ತಿನ ದವಡೆಯಲ್ಲಿ ಸಿಲುಕಿಸದಿರದೆಂಬುದು ಸಿದ್ಧಾಂತ. ಈ ಮಧ್ಯೆ ಬ್ರಿಟಿಷ್ ಸರಕಾರವು ಒಂದೆಡೆ ಮಧ್ಯ ಯೂರೋಪಿನ ಚಿಕ್ಕ ರಾಷ್ಟ್ರಗಳ ಬಗ್ಗೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳೆಂಬ ಹೆಗ್ಗಳಿಕೆಯನ್ನಿಟ್ಟು ಪೌರೋಹಿತ್ಯ ನಡೆಸುತ್ತಿದೆ. ಮತ್ತೊಂದೆಡೆ ಈ ತತ್ವಕ್ಕೆ ವಿರೋಧವೆಂಬಂತೆ ಭಾರತದಲ್ಲಿ ತನ್ನ ಸಾಮ್ರಾಜ್ಯಶಾಹಿ ಹಿಡಿತವನ್ನು ಬಿಡಲಾರದೆ ಜಿಗಣೆಯಂತೆ ಅಂಟಿಕೊಂಡಿದೆ. ಇದರ ಪರಿಣಾಮವೇನೆಂದರೆ ಸೌಹಾರ್ದದಿಂದ, ಸ್ನೇಹ ಪುರಸ್ಸರವಾಗಿ ಮಾಡಬಹುದಾಗಿದ್ದ ಕಾರ್ಯವನ್ನು ಬಲಪ್ರಯೋಗದಿಂದ ಹೊರಗಿನ ಶಕ್ತಿಯು ಶುರು ಮಾಡಿಸುವ ಕಾಲವು ಬರುವದು. ಇದರಿಂದ ಪರಸ್ಪರ ಐಕ್ಯತೆ, ಸಂಬಂಧಗಳು ಕಳಚಿ ರಾಷ್ಟ್ರಗಳು ವಿರೋಧಿಗಳಾಗುವ ಸಂಭವವೂ ಆಗಬಹುದು. ಇಂಗ್ಲೆಂಡಿ ಯುದ್ಧದ ಮುಖಂಡರಾಗಿದ್ದವರ ಈ ವರೆಗಿನ ತೋರಿಕೆಯ ಅಹಿಂಸಾ ಪ್ರದರ್ಶನವೇ ಇಂದು ನಾಜಿ ರಾಕ್ಷಸನ ಏಳಿಗೆಗೆ ಸಹಕಾರಿಯಾಯಿತೆಂದು ಹೇಳಬಹುದು. ಇನ್ನೂ ಬ್ರಿಟನು ತನ್ನ ಸಾಮ್ರಾಜ್ಯಶಾಹಿ ದೃಷ್ಟಿಯನ್ನು ಬಿಡದೆ ವರ್ತಿಸುತ್ತಾ ನಡೆದರೆ ಮುಂದೆ ಅದು ಅತ್ಯಮೋಘ ವಿಪತ್ಪರಂಪರೆಗೊಳಗಾಗಬೇಕಾಗುವದು. ಭಾರತೀಯರಾದ ನಾವು ಈ ಸಂದರ್ಭದಲ್ಲಿ ಯಥೋಚಿತ ವರ್ತಿಸಬೇಕಿದೆ. ನಾವು ಹಿಟ್ಲರ್ ಶಾಹಿ ತತ್ವಕ್ಕೆ ತೀರಾ ವಿರೋಧವಿರುವದು ಸ್ವತಃಸಿದ್ಧ. ಆದರೂ ಬ್ರಿಟಿಷ್ ಸಾಮ್ರಾಜ್ಯಶಾಹಿಯು ತನ್ನ ನಿರ್ದಿಷ್ಟ ತತ್ವವನ್ನು ಬಿಟ್ಟು ಭಾರತವನ್ನು ಗೌರವಪೂರ್ವಕವಾಗಿ ಮನ್ನಿಸದ ವಿನಹ ನಮ್ಮ ಸಹಾಯವನ್ನು ಅವರು ಕೇಳುವದು ನಿಷ್ಫಲ. ಏನೇ ಆಗಲಿ, ಎಂಥಾ ದುರ್ದೆಸೆಯೇ ಬರಲಿ ಭಾರತವನ್ನು ಸ್ವತಂತ್ರ ರಾಷ್ಟ್ರವೆಂದು ಪರಿಗಣಿಸದೆ ತಮ್ಮ ಅಧಿಕಾರ ದರ್ಪದಿಂದ ಅದನ್ನು ಯುದ್ಧಕ್ಕೆ ನೂಕುವದಾದರೆ ಯಾವ ಜನಾಂಗದೊಂದಿಗೂ ನಾವು ಸಹಕರಿಸಲಾರೆವು. ವಿಚಾರಗಳು ತೀವ್ರತರವಾಗಿ ರೂಪುಗೊಳ್ಳುತ್ತಿವೆ. ಈ ಸಂದರ್ಭದಲ್ಲಿ ನಮ್ಮ ಮಾನಸಿಕ ಸ್ಥಿಮಿತವನ್ನು ಕಳಕೊಂಡು ವರ್ತಿಸುವದರಿಂದ ಪ್ರಯೋಜನವಿಲ್ಲ. ಎಂಥಾ ಪ್ರಸಂಗ ಬಂದರೂ ಅದನ್ನು ಎದುರಿಸಲು ನಾವು ಸಿದ್ಧರೇ ಇರಬೇಕು. ಅಂಥಾ ಬಿಕ್ಕಟ್ಟಿಗೆ ನಾವು ತಯಾರಾಗೋಣ'.

ಸತ್ಯಾಗ್ರಹಿಗಳ ತರಬೇತು.

ಸತ್ಯಾಗ್ರಹಿಗಳ ತರಬೇತಿನ ಶಿಬಿರವು ವೀರಾಜಪೇಟೆಯಲ್ಲಿ ಈ ತಾ. 12ರಲ್ಲಿ ಪ್ರಾರಂಭವಾಗಿದೆ. ಈ ಶಿಬಿರವು ನೂರು ಅವಶ್ಯ ಬಿದ್ದರೆ ನಾಲ್ಕು ವಾರಗಳ ವರೆಗೆ ತಂಡ ತಂಡವಾಗಿ ನಡಿಸಲ್ಪಡುವದು. ಒಂದು ತಂಡದ ತರಬೇತು ಕಮ್ಮಿ ಪಕ್ಷ ಒಂದು ವಾರದವರೆಗಾದರೂ ನಡೆಯುವದು. ತರಬೇತಿನ ವಾರವು ಪ್ರತಿ ಆದಿತ್ಯವಾರ ಪ್ರಾರಂಭವಾಗುವದು. ಕಾಂಗ್ರೆಸ್ಸಿನ ಸತ್ಯಾಗ್ರಹ ಪ್ರತಿಜ್ಞೆಗೆ ರುಜು ಮಾಡಿದ ಪ್ರತಿಯೊಬ್ಬ ಸತ್ಯಾಗ್ರಹಿಯೂ ಈ ಶಿಬಿರದಲ್ಲಿ ತರಬೇತು ಹೊಂದಬೇಕಾಗಿ ನಿರೀಕ್ಷಿಸಲಾಗಿದೆ. ಸತ್ಯಾಗ್ರಹಿಗಳು ಈ ಶಿಬಿರಕ್ಕೆ ಬರುವಾಗ್ಯೆ ಹಾಸಿಗೆ ಮತ್ತು ಬಿಳಿ ಖಾದಿಯ ಯೂನಿಫಾರಂನ್ನು ಮಾತ್ರ ತಂದರೆ ಸಾಕಾಗಿದೆ. ಊಟದ ಮತ್ತು ಉಳಕೊಳ್ಳುವ ಏರ್ಪಾಡು ಶಿಬಿರದಲ್ಲಿ ಮಾಡಲ್ಪಡುವದು. ಸತ್ಯಾಗ್ರಹಿಗಳು ಆದಷ್ಟು ಬೇಗನೆ ಈ ಶಿಬಿರಕ್ಕೆ ಸೇರಿ ತಮ್ಮ ತರಬೇತನ್ನು ಪೂರೈಸಿಕೊಳ್ಳಬೇಕಾಗಿ **ಕೋರಿಕೆ.**

ಬಿ. ಯಂ. ಕಾರ್ಯಪ್ಪ,
ಕೊ. ಕಾ. ಸತ್ಯಾಗ್ರಹ ಕಮಿಟಿ.
ತಾ. 15-5-40.

"FOR SALE"

210 acres Coffee Estate, Madapur Post. Those interested please communicate with Manager Jamboor Estate Madapur Post.

R. W. J. Egerton,
Manager.

ವರ್ತಮಾನ ಸಂಗ್ರಹ.

ಒಳದೇಶ.

ಕಳೆದ ವಾರದಲ್ಲಿ ಪ್ರಕಟಿಸಿದ 23 ಜನರಲ್ಲದೆ ಕಾಂಗ್ರೆಸ್ಸಿನ ಪ್ರತಿಜ್ಞಾಪತ್ರಕ್ಕೆ ಶ್ರೀಗಳಾದ (24) ಕಾಳಮಾಡ ಗಣಪತಿ, (25) ಐನಂಡ ಕಾರ್ಯಪ್ಪ, (26) ಬಾಚಮಾಡ ಗಣಪತಿ, (27) ಡಾ. ಬಿ. ಕೆ. ನಂಜುಂಡೇಶ್ವರ, (28) ಕಡೇಮಾಡ ಪೂವಯ್ಯ, (29) ಸಿ. ಕೆ. ಬೋಳಿಯ, (30) ಪಿ. ಯಂ. ಬೋಳ, (31) ಬಾಕೆಟ್ಟಿರ ಚಿಣ್ಣಪ್ಪ, (32) ಎಚ್. ಎಂ. ಮಲ್ಲಪ್ಪ, (33) ಮಳವಂಡ ಚಂಗಪ್ಪ, ಇವರುಗಳು ಸಹಿ ಮಾಡಿರುವರು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಡಾ. ನಾಗಣ್ಣಗೌಡ ಯಂ. ಎಸ್ ಸಿ. (ಪಿ. ಎಚ್ ಡಿ) ಯವರು ಕೊಡಗಿಗೆ ತಾ. 25 ರಲ್ಲಿ ಬಂದು ತಾ. 26ರಲ್ಲಿ ಗೋಣಿಕೊಪ್ಪಲಿನಲ್ಲಿ ಒಂದು ಭಾಷಣ ಮಾಡುವರೆಂದೂ ಮಾರಣೆಯ ದಿನ ವೀರರಾಜಪೇಟೆಯಲ್ಲಿ ಕೂಡುವ ಜಿಲ್ಲಾ ಸತ್ಯಾಗ್ರಹ ಕಮಿಟಿ ಮೀಟಿಂಗಿನಲ್ಲಿ ಹಾಜರಿದ್ದು ಅದೇ ದಿನ ಸಾಯಂಕಾಲ ಮಡಿಕೇರಿಯಲ್ಲೊಂದು ಭಾಷಣ ಮಾಡುವರೆಂದೂ ತಿಳಿದು ಬರುತ್ತದೆ.

ಸಹಕಾರಿ ಸೆಂಟ್ರಲ್ ಬ್ಯಾಂಕಿನವರು ಅವರ ಮೆಂಬರುಗಳು ಮತ್ತು ... ಲೋಕಲ್ ಬೋರ್ಡಿನ ಪ್ರೆಸಿಡೆಂಟ್ ಮತ್ತು ಕನ್ನಿಂದರುಗಳಾದ ಮ. ಐಚೆಟ್ಟಿರ ಸಿ. ಸುಬ್ಬಯ್ಯ ಯಂ. ಎ ಬಿ. ಎಲ್ ರವರ ಮತ್ತು ಮ. ಮನೆಯಪಂಡ ಬೆಳ್ಯಪ್ಪ ಯಂ. ಎಚ್. ಸಿ ಯವರುಗಳ ಮೇಲೆ ಅಸಿಸ್ಟೆಂಟ್ ರಿಜಿಸ್ಟ್ರಾರರ ಕೋರ್ಟಿನಲ್ಲಿ ಹೂಡಿದ ದಾವೆಯಲ್ಲಿ ಸದರಿ ಕೋರ್ಟಿಗೆ ಅಧಿಕಾರವಿಲ್ಲವೆಂದು ಅವರು ಮಾಡಿದ ವಾದದ ಫಲಿತಾಂಶವಾಗಿ ಸದರಿ ಕೋರ್ಟಿಗೆ ಸಹಕಾರಿ ಆಕ್ಟು ಸೆ. 51ರ ಮೇರೆ ಅಧಿಕಾರವಿದೆಯೆಂದು ಮ. ರಿಜಿಸ್ಟ್ರಾರರು ಈ ತಾ. 13ರಲ್ಲಿ ತೀರ್ಮಾನವನ್ನು ಕೊಟ್ಟಿರುವರೆಂದು ತಿಳಿಯಬರುತ್ತದೆ.

ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಈ ರೀತಿಯಾಗಿ ವಿದ್ಯಾರ್ಥಿಗಳು ಆಯಾಯ ಶಾಲೆಗಳಲ್ಲಿ ಪಾಸಾಗಿರುವರು. (1) ಕಕ್ಕಬೆ ಪರೀಕ್ಷೆಗೆ ಕೂತ 8 ವಿದ್ಯಾರ್ಥಿಗಳಲ್ಲಿ 8. (2) ಮಡಿಕೇರಿ ಕ ಸ್ಕೂಲಿನಲ್ಲಿ 21ರಲ್ಲಿ 16. (3) ಪೊನ್ನಂಪೇಟೆ 26 ರಲ್ಲಿ 14. (4) ವೀರರಾಜಪೇಟೆ 59 ರಲ್ಲಿ 32. (5) ಹುದಿಕೇರಿ 23 ರಲ್ಲಿ 12. (6) ಕೊಡ್ಲಿಪೇಟೆ 12 ರಲ್ಲಿ 6. (7) ಅಮ್ಮತ್ತಿ 32ರಲ್ಲಿ 12. (8) ಸೋಮವಾರಪೇಟೆ 18ರಲ್ಲಿ 5. (9) ಮಡಿಕೇರಿ 73 ರಲ್ಲಿ 31. (10) ಮೂರ್ನಾಡು 17ರಲ್ಲಿ 4. (11) ನಾಪೋಕ್ಲು 21ರಲ್ಲಿ 5. (12) ಕಾಕೋಟುಪರಂಬು 24ರಲ್ಲಿ 3. (13) ಕೊಟ್ಟೂರು 13ರಲ್ಲಿ 1.

ಮಡಿಕೇರಿ.

ಈ ವಾರ ಇಲ್ಲಿ 69 ಸೆಂಟು ಮಳೆಯಾಗಿದೆ.

ಕಳೆದ ಮೈಸೂರು ಇಂಟರ್ಮೀಡಿಯೇಟ್ ಪರೀಕ್ಷೆಯಲ್ಲಿ ನಿವೃತ್ತ ಸಬ್ ಜಡ್ಜರಾದ ಶ್ರೀ ತಿರುಮಲಾಚಾರ್ಯರ ಪುತ್ರಿ ಶ್ರೀಮತಿ ಎಚ್. ಟಿ. ಶಾಂತಾರವರು ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ.

ಕಮಿಷನರವರು ಈ ತಾ. 20 ರಲ್ಲಿ ಪೊನ್ನಂಪೇಟೆಗೆ ಹೋಗಿ, ಅಲ್ಲಿಂದ ತಾ. 24ರಲ್ಲಿ ಮಡಿಕೇರಿಗೆ ವಾಪಸು ಬರುವರೆಂದು ತಿಳಿಯಬರುತ್ತದೆ.

ಈ ತಾ. 13ರಲ್ಲಿ ಕೊಡಗು ಡಿಸ್ಟ್ರಿಕ್ಟ್ ಫಂಡ್ ರೆಗ್ಯುಲೇಶನ್ ತಿದ್ದುಪಡಿಯ ಮಸೂದೆಯ (ಲೆಜಿಸ್ಲೇಟಿವ್ ಕೌನ್ಸಿಲಿನ) ಸಿಲೆಕ್ಟ್ ಕಮಿಟಿಯ ಮೀಟಿಂಗು ಕಮಿಷನರ ಅಧ್ಯಕ್ಷತೆಯಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು.

ಇಲ್ಲಿಯ ತಾಲೋಕು ಕಾಂಗ್ರೆಸ ಕಮಿಟಿಯ ಮೀಟಿಂಗು ತಾ. 9ರಲ್ಲಿ ನಡೆದು ಅದನ್ನು ಸತ್ಯಾಗ್ರಹ ಸಮಿತಿಯನ್ನಾಗಿ ಮಾರ್ಪಡಿಸಲಾಯಿತೆಂದೂ, ಇಲ್ಲಿ ವಾರಕ್ಕೊಂದಾವರ್ತಿ ನೂಲುವ ಒಂದು ಶಾಲೆಯನ್ನು ತೆರೆಯಬೇಕೆಂದು ತೀರ್ಮಾನಿಸಲಾಯಿತೆಂದೂ ಆ ಬಗ್ಗೆ ಖರ್ಚಿಗೆ ಶ್ರೀ ಪ್ರಾಂತರಿರ ಚಂಗಪ್ಪನವರನ್ನು ಭಾರವಾಹಕ್ಕೆ ಕಳುಹಿಸುವರೆಂದೂ ವಾರ್ತೆ.

ತಾರೀಕು 11ರಲ್ಲಿ ನಡೆದ ಇಲ್ಲಿಯ ಪೌರ ಸಭೆಯ ಚುನಾವಣೆಯಲ್ಲಿ ಕ್ರಿಶ್ಚಿಯನ ಸ್ಥಾನಕ್ಕೆ ಶ್ರೀ ಎ. ಎ. ವಾರಣೆಯವರೂ, ಮುಸ್ಲಿಮರ ಸ್ಥಾನಕ್ಕೆ ಶ್ರೀ ಗಳಾದ ಅಬ್ದುಲ್ ರಹಮಾನ್ ಖಾನ್ ಮತ್ತು ಮಹಮ್ಮದ್ ಗೌಸ್ ರವರೂ ಅವಿರೋಧವಾಗಿ ಆರಿಸಲ್ಪಟ್ಟಿರುವರು. ಕೊಡವರಿಗಿರುವ ಸ್ಥಾನಕ್ಕೆ ಶ್ರೀ ಗಳಾದ ಮುಕ್ಕಾಟಿರ ಅಪ್ಪಣ್ಣ, ಕಾಳಿಂದ ತಮ್ಮಯ್ಯ ಮತ್ತು ಕೋಟೆರ ದೇವಪ್ಪನವರುಗಳೂ, ಹಿಂದುಗಳ ಸ್ಥಾನಕ್ಕೆ ಶ್ರೀ ಗಳಾದ ವಿಶ್ವನಾಥ ಶೈ, ಬಿ ಮಲ್ಲಪ್ಪ, ಎನ್. ವೆಂಕಟರಮಣ್ಣ, ಬಿ ಸುಬ್ಬಣ್ಣ, ಕೆ. ನರಸಿಂಹಮೂರ್ತಿ ಮತ್ತು ಸಿ. ಎನ್. ವೆಂಕಪ್ಪಯ್ಯನವರುಗಳೂ ಚುನಾಯಿತರಾಗಿರುವರು.

ವೀರರಾಜಪೇಟೆ

ಕುಂದ ಗ್ರಾಮದ ಭದ್ರಕಾಳಿ ದೇವರ ಉತ್ಸವವು ಇದೇ ಮೇ ತಾ. 20, 21 ರಲ್ಲಿ ನಡೆಯುತ್ತದೆಂದು ತಿಳಿಯುತ್ತೇವೆ.

ಕಡಂಗಮರೂರು ಗ್ರಾಮದ ಶ್ರೀ ಬಲ್ಲಚಿಕಾಳಂಡ ಪೂವಯ್ಯನವರಲ್ಲಿ ತಾ. 10ರಂದ 3 ದಿನದ ಎತ್ತುಗಳು ಬಂದು ಸೇರಿರುವವೆಂದೂ, ಮಾಲೀಕರು ಸರಿಯಾದ ರುಜುವಾತು ಕೊಟ್ಟು ಅವನ್ನು ಪಡೆಕೊಳ್ಳಬಹುದೆಂದೂ ಅವರು ತಿಳಿಸುತ್ತಾರೆ.

ಬಿಟ್ಟಂಗಾಲದ ಕುಪ್ಪಂಡ ಕುಟುಂಬ ಸಹಕಾರಿ ಸಂಘದ ಪ್ರೆಸಿಡೆಂಟರಾಗಿದ್ದ ಮ. ಕುಪ್ಪಂಡ ಸಿ ಬೆಳ್ಯಪ್ಪನವರು ಸದರಿ ಸಂಘದ ಹಣ ದುರುಪಯೋಗಪಡಿಸಿದರ ಮೊಕದ್ದಮೆ ನಡೆದು ಅವರಿಗೆ ಕೋರ್ಟು ಏಳುವ ವರೆಗೆ ಸಜೆಯೂ, ರೂ. 25 ಜುಲುಮಾನೆಯೂ ವಿಧಿಸಿದ್ದನ್ನು ಅಪ್ಪೀಲಿನಲ್ಲಿ ಸೆಷನ್ಸ್ ಜಡ್ಜರು ಖಾಯಂ ಮಾಡಿರುವರಾಗಿ ತಿಳಿಯುತ್ತೇವೆ.

ಕೊಡಗಿನ ಸತ್ಯಾಗ್ರಹ ತರಬೇತಿನ ಶಿಬಿರವು ಈ ತಾರೀಕು 12ರಲ್ಲಿ ಇಲ್ಲಿ ಪ್ರಾರಂಭಿಸಲ್ಪಟ್ಟಿದೆ. ಇದು ಶ್ರೀ ಪಿ. ಐ. ಬೆಳ್ಯಪ್ಪನವರಿಂದ ಆ ದಿನ ಪ್ರಾತಃಕಾಲ ತೆರೆಯಲ್ಪಟ್ಟಿತು. ಈಗ ತರಬೇತು ಹೊಂದುತ್ತಿರುವ ಪ್ರಥಮ ತಂಡದಲ್ಲಿ ಈ ಕೆಳಗಿನ ಸತ್ಯಾಗ್ರಹಿಗಳು ಸೇರಿರುವರು-ಶ್ರೀ ಗಳಾದ ಕೊಳ್ಳಿಮಾಡ ಕರುಂಬಯ್ಯ, 2. ಪಂದ್ಯಂಡ ಚಂಗಪ್ಪ, 3. ಕಡೇಮಾಡ ಪೂವಯ್ಯ, 4. ಪುಲಿಯಂಡ ಸುಬ್ಬಯ್ಯ, 5. ಪೂಜಾರಿ ರಾಮಪ್ಪ, 6. ಎಚ್. ಪಿ. ನಾರಾಯಣ, 7. ಮಚ್ಚಿಯಂಡ ಐಯ್ಯಪ್ಪ, 8. ಎಚ್. ಯಂ. ಮಲ್ಲಪ್ಪ, 9. ಪಿ. ಎಂ. ಬೋಳ, 10. ಸಿ. ಕೆ. ಬೋಳಿಯ ಇವರುಗಳು. ಶ್ರೀ ಕೆ. ಸಿ. ಕರುಂಬಯ್ಯನವರು ಈ ತಂಡದ ಶಿಬಿರಾಧಿಪತಿಗಳಾಗಿರುವರು. ಎರಡನೇ ತಂಡದ ತರಬೇತು ತಾ. 19ರ ಆದಿತ್ಯವಾರ ಸಾಯಂಕಾಲದಿಂದ ಪ್ರಾರಂಭವಾಗುವದು.

ಇಲ್ಲಿಯ ಶಿಬಿರದಲ್ಲಿ ತರಬೇತು ಹೊಂದುತ್ತಿರುವ ಸತ್ಯಾಗ್ರಹಿಗಳು ತಾ. 15ರ ಬುಧವಾರ ಕಾಂಗ್ರೆಸ್ ಧ್ವಜವನ್ನು ಹಿಡಿದು ರಾಷ್ಟ್ರಗೀತೆಗಳನ್ನು ಹಾಡುತ್ತಾ ಪೇಟೆಯ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯನ್ನು ನಡೆಸಿ ಮೀಟಿಂಗ್ ರೂಮಿನ ಎದುರುಗಡೆ ಇರುವ ಮೈದಾನದಲ್ಲಿ ರಾಷ್ಟ್ರೀಯ ಧ್ವಜಾರೋಹಣವನ್ನು ಮಾಡಿದನಂತರ ಅಲ್ಲಿ ಶ್ರೀ ಬಿ. ಪಿ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿಯಿತು. ಮುಂದಿನ ಸ್ವಾತಂತ್ರ್ಯ ಹೋರಾಟದ ತಯಾರಿಗಾಗಿ ಕಾಂಗ್ರೆಸು ನಡೆಸುತ್ತಿರುವ ಕಾರ್ಯಕ್ರಮವನ್ನು ವಿವರಿಸಿ ಶ್ರೀ ಗಳಾದ ಸಿ. ಐ ಬೆಳ್ಯಪ್ಪ, ಕೆ. ಸಿ. ಕರುಂಬಯ್ಯ, ಸಿ. ಯಂ. ಪೂಣಚ್ಚ ಇವರುಗಳು ಭಾಷಣಗಳನ್ನಿತ್ತರು. ಧ್ವಜಾವರೋಹಣವನಂತರ 'ವಂದೇ ಮಾತರಂ' ಗೀತೆಯಿಂದ ಸಭೆಯು ಮುಕ್ತಾಯಗೊಂಡಿತಾಗಿ ತಿಳಿಯಬರುತ್ತದೆ.

ಪೊನ್ನಂಪೇಟೆ.

ಮೈಸೂರು ಗವರ್ನಮೆಂಟ್ ಆಯುರ್ವೇದ ಕಾಲೇಜಿನಲ್ಲಿ ಓದುತ್ತಿದ್ದ ಶ್ರೀ ಪುತ್ತಮನೆ ನಾರಾಯಣರವರು ಎಲ್. ಎ. ಎಂ. ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯಬರುತ್ತದೆ.

ತಾರೀಕು 13ರಲ್ಲಿ ಬೆಸಗೂರು ಗ್ರಾಮದಲ್ಲಿ ಒಂದು ಸಾರ್ವಜನಿಕ ಸಭೆಯು ಶ್ರೀ ಪುಚ್ಚಿಮಾಡ ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತೆಂದೂ, ಶ್ರೀ ಕೊಳ್ಳಿಮಾಡ ಕರುಂಬಯ್ಯನವರು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯದ ವಿವರ, ಖಾದಿಧಾರಣೆಯ ಮಹತ್ವ ಮತ್ತು ಈಗಿನ ಅಂತರಾಷ್ಟ್ರೀಯ ಅವ್ಯವಸ್ಥೆಯ ವಿಚಾರ ಭಾಷಣ ಮಾಡಿದರು.

ಯುದ್ಧವಾರ್ತೆ.

ಹಾಲೆಂಡಿನಲ್ಲಿ ಜರ್ಮನರು ನುಗ್ಗಿ ಯುದ್ಧ ಮಾಡುತ್ತಿದ್ದರಷ್ಟೆ. ಲೋಕಕಂಟಕ ಹಿಟ್ಲರನ ಸೈನ್ಯವು ಮೇಲಿಂದ ಮೇಲೆ ಅಸಂಖ್ಯಾತ ಸಂಖ್ಯೆಯಲ್ಲಿ ಹಾಲೆಂಡನ್ನು ನುಗ್ಗಿದ್ದರಿಂದ ಹಾಲೆಂಡ್ ಸೈನ್ಯವು ಅವುಗಳನ್ನು ಎದುರಿಸಲಾರದೆ ಶರಣು ಹೋಗಬೇಕಾಯಿತು. ಹಾಲೆಂಡು ಜರ್ಮನರ ಕರಗತವಾಯಿತು.

ಬೆಲ್ಜಿಯಮ್ಮಿನಲ್ಲಿ ಯುದ್ಧವು ಪ್ರಚಂಡವಾಗಿ ನಡೆಯುತ್ತಿದೆ. ಬ್ರಿಟಿಷರ ಸಹಾಯ ಸೈನ್ಯವು ಚೆನ್ನಾಗಿ ಅಲ್ಲಿ ದೊರೆತಿರುವುದಾಗಿ ತಿಳಿದುಬಂದಿದೆ.

ಇಟಲಿಯಲ್ಲಿ ಬ್ರಿಟಿಷರ ವಿರೋಧ ಪ್ರಚಾರವು ಬಹು ತೀವ್ರ ರೀತಿಯಿಂದ ನಡೆಯುತ್ತಿದೆ. ಯುಗೋಸ್ಲೇವಿಯಾದ ಮೇಲೆ ಇಟಲಿಯು ಕಣ್ಣಿಟ್ಟಂತೆ ತೋರಿ ಬರುತ್ತಿದೆ.

ಹಿಟ್ಲರನ ದುಸ್ಸಾಹಸವನ್ನು ವಿರೋಧಿಸಿ ಅಮೇರಿಕವು ಜರ್ಮನಿಗೆ ಒಂದು ಎಚ್ಚರಿಕೆಯನ್ನು ಕೊಟ್ಟಿದೆ. ಹಿಟ್ಲರನು ತನ್ನ ಅಮಾನುಷ ಕೃತ್ಯಗಳನ್ನು ಮುಂದರಿಸಿದ್ದೆ ಆದರೆ ಅಮೇರಿಕಾವೂ ಮಿತ್ರರಾಷ್ಟ್ರಗಳ ಸಹಾಯಕ್ಕೆ ನಿಲ್ಲುವುದೆಂಬುವುದೇ ಎಚ್ಚರಿಕೆಯ ಅರ್ಥ.

ಸತ್ಯಾಗ್ರಹ ಪ್ರತಿಜ್ಞೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ಅಪ್ಪಣೆ ಮೇರೆ ಮುಂದೆ ಬರುವ ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧಗೊಳಿಸುವ ಬಗ್ಗೆ ಕೊಡಗಿನಲ್ಲಿ ಸತ್ಯಾಗ್ರಹಿಗಳ ಸೈನ್ಯ ಕೂಡಿಸುವಿಕೆಯ ಕಾರ್ಯವು ಈಗಾಗಲೇ ಪ್ರಾರಂಭಮಾಡಲ್ಪಟ್ಟಿದೆ. ಹೀಗೆ ಸತ್ಯಾಗ್ರಹಿಗಳಾಗಬಿಚ್ಛಿಸುವವರು ವರ್ಕಿಂಗ್ ಕಮಿಟಿಯು ಸಿದ್ಧಮಾಡಿರುವ ಪ್ರತಿಜ್ಞಾ ಪತ್ರಕ್ಕೆ ಸಹಿ ಹಾಕಬೇಕಾಗಿದೆ. ಅಚ್ಚಾದ ಈ ಪ್ರತಿಜ್ಞಾ ಪತ್ರವು ಜಿಲ್ಲಾ ಮತ್ತು ತಾಲೋಕು ಸತ್ಯಾಗ್ರಹ ಸಮಿತಿಯ ಆಫೀಸುಗಳಲ್ಲಿ ದೊರೆಯುವವು. ತಮ್ಮ ಮಾತೃಭೂಮಿಯ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಇಚ್ಛಿಸುವ ಮಹಿಳೆ ಮಹನೀಯರುಗಳು ಆದಷ್ಟು ಶೀಘ್ರವಾಗಿ ಈ ಪ್ರತಿಜ್ಞಾ ಪತ್ರವನ್ನು ಹೊಂದಿಕೊಂಡು ಅದಕ್ಕೆ ತಮ್ಮ ಸಹಿ ಹಾಕಿ ಕೊಡಬೇಕಾಗಿ ಕೋರಲಾಗಿದೆ. ವರ್ಕಿಂಗ್ ಕಮಿಟಿಯ ತೀರ್ಮಾನದ ಮೇರೆ ಈ ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಲು ಸಿದ್ಧರಿಲ್ಲದ ಜಿಲ್ಲಾ ಮತ್ತು ತಾಲೋಕು ಕಾಂಗ್ರೆಸ್ ಕಮಿಟಿಗಳ ಮೆಂಬರುಗಳು ತಮ್ಮ ಕಮಿಟಿ ಮೆಂಬರುತನಕ್ಕೆ ಕೂಡಲೇ ರಾಜಿನಾಮೆ ಕೊಡಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಬಿ. ಯಂ. ಕಾರ್ಯಪ್ಪ,
ಕೊ. ಜಿ. ಸತ್ಯಾಗ್ರಹ ಸಮಿತಿ

13-5-40.

ಯುದ್ಧದ ಬಗ್ಗೆ ರಾಜೇಂದ್ರ ಪ್ರಸಾದರ ಅಭಿಪ್ರಾಯ.

ಯೂರೋಪಿನಲ್ಲಿ ನಡೆಯುತ್ತಿರುವ ಪ್ರಚಂಡ ಯುದ್ಧ ಪರಿಣಾಮದಿಂದಾಗಿ ಅನುಕ್ರಮವಾಗಿ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವನ್ನು ಕಳಕೊಂಡು ಬಲಾಢ್ಯರ ಪದತಲದಲ್ಲಿ ಹೊರಳಾಡಬೇಕಾಗುವಂಥ ಪ್ರಸಂಗವು ತೀರಾ ಹೃದಯದ್ರಾವಕವಿದೆ. ಕಳೆದ ಕೆಲವು ದಿನಗಳ ಅಂತರರಾಷ್ಟ್ರೀಯ ಅನಿರೀಕ್ಷಿತ ಘಟನೆಗಳಿಂದಾಗಿ ನನ್ನ ಮನಸ್ಸೇ ಅಲ್ಲೋಲಕಲ್ಲೋಲವಾಗಿದೆ. ನಿಜವಾಗಿಯೂ ನನಗೆ ಬ್ರಿಟಿಷರ ಧೋರಣೆಯಲ್ಲಿ ಮಮತೆ ಇಲ್ಲ. ಅಲ್ಲದೆ ನಮ್ಮ ಭಾರತ ಭೂಮಿಯ ವಿಚಾರದಲ್ಲಿ ಇಂಗ್ಲೆಂಡು ಯಥೋಚಿತ ವರ್ತಿಸಲಿಲ್ಲವೆಂಬುವುದೂ ನಮಗೆ ಗೊತ್ತಿರುವದೇ. ಆದರೂ ಹಿಟ್ಲರ್ ತತ್ವದ ಪಾಶವೀ ಕೃತ್ಯಗಳು ಜಯ ಹೊಂದುವುದಕ್ಕಿಂತ ಮಿತ್ರ ರಾಷ್ಟ್ರಗಳಿಗೆ ಜಯ ದೊರೆಯಲೆಂದು ನಾನು ಬಯಸುತ್ತೇನೆ. ಇಂಗ್ಲೆಂಡು ಭಾರತದ ನ್ಯಾಯ ಬದ್ಧವಾದ ಕೇಳಿಕೆಗಳನ್ನು ಸಲ್ಲಿಸಲು ಹಿಂದೆಗೆಯುತ್ತಿದ್ದರೂ, ಜಗತ್ತಿನ ವಿಚಾರಗಳ ಬಗ್ಗೆ ನಾವು ಕಣ್ಣು ಮುಚ್ಚಿ ಕೂಡುವದು ಸಾಧ್ಯವಿಲ್ಲ. ಕಾಂಗ್ರೆಸು ಅಂತರರಾಷ್ಟ್ರೀಯ ವಿಚಾರವನ್ನು ಚೆನ್ನಾಗಿ ಗಮನಕ್ಕೆ ತೆಗೆದುಕೊಳ್ಳಬೇಕು. ಮಾನವನಿಗೆ ಪ್ರಧಾನವಾದ ಸ್ವಾತಂತ್ರ್ಯವನ್ನೇ ಕಳಕೊಂಡ ಪೋಲೆಂಡು, ಫಿನ್ಲೆಂಡು, ನಾರ್ವೆ, ಡೆನ್ಮಾರ್ಕ್, ಹಾಲೆಂಡು, ಬೆಲ್ಜಿಯಂ, ಜೆಕೊಸ್ಲೊವಾಕಿಯಾ ಮೊದಲಾದ ರಾಷ್ಟ್ರಗಳಿಗೆ ನಮ್ಮ ಪೂರ್ಣ ಸಹಾನುಭೂತಿ ಇದೆ.

ಬಾತ್ಮಿ.

ಕೊಡಗರು ಅರಬಿಯರೇ?

ಲೇ:- ಐ. ಮಾ. ಮು.

ಲೇಖಾಂಕ ೧.

ಕೊಡಗರು ಅರಬಿಯರೆಂಬ ವಿಷಯದಲ್ಲಿ ಹೊರಬಿದ್ದ ಒಂದು ಚಿಕ್ಕ ಗ್ರಂಥದ ಪರಿಚಯವು ಈಗಾಗಲೇ ನನಗಾಯಿತು. ಅದನ್ನು ಬರೆದ ನಮ್ಮ ಮುಸ್ಲಿಂ ಮಹಾನುಭಾವರು ಲೋಕದಲ್ಲಿ ಸರ್ವರಿಗೂ ಸ್ವಂತ ಅಭಿಪ್ರಾಯ ಕೊಡುವ ಹಕ್ಕಿದೆ ಎಂಬ ಭರತ್ತಿನ ಮೇರೆ ಈ ಗ್ರಂಥವನ್ನು ರಚಿಸಿರುವರು. ಕೊಡಗು ಅರಬಿಯರೆಂದು ಹೇಳುವ ನೆವದಲ್ಲಿ ಇತರ ಅನೇಕ ವಿಷಯಗಳನ್ನು ಅಸಂಬಂಧವಾಗಿ ಸೇರಿಸಿರುವರು. ಆದರೆ ನನಗೆ ತಿಳಿದ ಕೆಲವು ವಿಷಯದಲ್ಲಿ ಅವರು ಬರೆದು ತಿಳಿಸಿದುವುಗಳು ಅರ್ಥವಿಲ್ಲದುವುಗಳಾಗಿ ತೋರುವುದರಿಂದ ನಾನು ನನ್ನ ಮಟ್ಟಿಗೆ ಯಥಾರ್ಥವಾದುದೆಂದು ತಿಳಿದು ಸ್ವಲ್ಪ ಬರೆಯಲಿಚ್ಛಿಸುತ್ತೇನೆ.

'ಕೊಡಗು' ಎಂಬ ಹೆಸರು ಯಾವ ಕಾರಣದಿಂದ ಬಂತೆಂಬುದು ಇಲ್ಲಿಯವರಿವಿಗೂ ನಿರ್ಧಾರವಾಗಿಲ್ಲ. ಅನೇಕ ಮಹನೀಯರ ಅನೇಕ ಅಭಿಪ್ರಾಯಗಳಿದ್ದರೂ ನಂಬಲರ್ಹವಾದದ್ದು ಒಂದೂ ಅದರೆದೆ ತೋರುವದಿಲ್ಲ. ಇವರ ಜತೆಗೆ ಸ್ವಂತ ಅಭಿಪ್ರಾಯವನ್ನು ಕೊಡುವ ಹಕ್ಕಿನಿಂದ ಹೇಳಿದವರು ಕುರ್ದಿಸ್ಥಾನದ ಜನರು ಬಂದು ನೆಲಸಿದ್ದರಿಂದ ಆ ಹೆಸರು ಬಂತೆಂದು ಹೇಳುತ್ತಾರೆ. ಇನ್ನೊಂದೆಡೆಯಲ್ಲಿ ಇವು ನನ್ನ ಸ್ವಂತ ಅಭಿಪ್ರಾಯವಲ್ಲ' ವೆಂದೂ ಹೇಳುತ್ತಾರೆ. ಅದಂತಿರಲಿ. 'ಕುರ್ದ್' ಎಂಬ ಶಬ್ದದಿಂದ 'ಕೊಡಗು' ಎಂದೂ, 'ಕುರ್ದರು' ಎಂಬುದರಿಂದ 'ಕೊಡಗರು' ಆದದ್ದು ಸ್ಪಷ್ಟವಾದ್ದರಿಂದ ಕೊಡಗರು ಅರಬಿಸ್ಥಾನ ದೇಶದ ಕುರ್ದಿಸ್ಥಾನ್ ಎಂಬ ಜಿಲ್ಲೆಯವರೆಂಬುದು ಸಂಪೂರ್ಣ ನಿಜವಾಗಿದೆ' ಎಂದು ಅವರು ಬರೆದಿರುತ್ತಾರೆ. ಇದಕ್ಕೆ ಯಾವುದೊಂದು ಶಾಸನ ಸನ್ನದುಗಳಿಲ್ಲದೆ, ಕಲ್ಪನೆಯಲ್ಲಿ ಸ್ವಾರಿಣ್ಯವಿರುವದರಿಂದ ಸಂಪೂರ್ಣ ನಿಜವೆಂದು ತಮ್ಮ ಕಷ್ಟಕ್ಕೆ ಒಪ್ಪಿಬಿಟ್ಟಿದ್ದಾರೆ. ಇವರು ಈ ವಿಷಯಕ್ಕೆ ಕೊಟ್ಟ ಆಧಾರವಿಷ್ಟೇ ಆಗಿದೆ. 'ದಿ. ಬ. ಕೆ. ಚಂಗಪ್ಪನವರಿಗೆ ಶ್ರೀರಂಗಪಟ್ಟಣದಲ್ಲಿ ಯಾರೋ ಸಾಹೇಬರು ಕೊಟ್ಟ ಯಾವುದೋ ಒಕ್ಕೆ ಬೈಂಡಿನ ಪುಸ್ತಕದಲ್ಲಿ ಈ ಕೊಡಗರ ವಿಷಯಗಳೆಲ್ಲಾ ಇದೆಯಂತೆ', ಎಂದು. ಈ ಪುಸ್ತಕ ಯಾರು ಬರೆದದ್ದು, ಅದರಲ್ಲೇನು ವಿಷಯಗಳಿವೆ ಎಂಬುದು ಹೊರಪಡಿಸಲಿಲ್ಲ. ಅಥವಾ ಆ ಪುಸ್ತಕವನ್ನು ಅವರು ನೋಡಲಿಲ್ಲವೋ ಏನೋ! ಹೇಗೂ ಕುರ್ದರು ಎಂಬುದರಿಂದ ಕೊಡಗರು ಆಯಿತೆಂಬುದು ಆ ಪುಸ್ತಕದಿಂದ ಸಮರ್ಥಿಸಲ್ಪಟ್ಟಿದೆ. ಅದಕ್ಕೆ ಹೆಸರಃ ವರೋ 'ಹಸರು ಬೈಂಡಿನ ಬುಕ್ಕು' ಎಂದಂತೆ.

ಬರೇ ಕಲ್ಪನೆ ಮಾತ್ರದಿಂದಲೇ ಇನ್ನೊಬ್ಬೋ ವಿಧದಿಂದ ಇನ್ನಾವ ದೇಶವನ್ನಾಗಲೀ, ಊಡಿಗೆ ತೊಡಿಗೆಗಳಾಗಲೀ, ಗದ್ದೆ ಮನೆಗಳಾಗಲೀ ಹೋಲಿಸಿ ಹೇಳಿಬಿಡಬಹುದು. ಅದು ಬಹು ಕಷ್ಟವೇನೂ ಇಲ್ಲ. ಆದರೆ ಪ್ರತಿಯೊಂದು ದೇಶದ ಹೆಸರು ಯಾ ಗ್ರಾಮದ ಯಾ ಕುಟುಂಬದ ಹೆಸರುಗಳ ಪದಗಳಿಗೆ ಪೂರ್ವಿಕರು ಒರೇ ಸಿಕ್ಕಿದ ಹಾಗೆಲ್ಲಾ ಹೆಸರಿಕ್ಕದೆ ಅರ್ಥಗರ್ಭಿತವಾದ ಪದ ಸಂಯೋಜನೆಯಿಂದಲೇ ಹೆಸರು ಹಾಕಿರುವರೆಂದು ನಾವು ನಂಬಬೇಕಾಗಿದೆ. ಪ್ರತಿಯೊಂದು ಹೆಸರಿನಲ್ಲೂ ಅನೌಚಿತ್ಯ ಇದೆಯೆಂದು ನಂಬಿದ ನಾನು 'ಕೊಡಗು' ಎಂಬ ಹೆಸರನ್ನೇ ಅಲ್ಲದೆ ಕೊಡಗಿನ ನೆರೆಯೂರುಗಳಿಗೆ ಆ ಹೆಸರು ಹೇಗಾಗಿರಬಹುದೆಂದು ತಿಳಿಸಲಿಚ್ಛಿಸುತ್ತೇನೆ. 'ಮಲೆ' ಎಂದರೆ ಮಲೆನಾಡು 'ಯಾಳ' ಎಂದರೆ 'ಆರಂ' ಎಂಬುವುದರಿಂದ ಬಂದು ಗುಡ್ಡ ಪ್ರದೇಶವೆಂದರ್ಥವಾಗುವುದು. ಈ ರೀತಿ ಮೈಸೂರಿಗಾದರೋ ಪೂರ್ವದಿಂದ ಶ್ರೀ. ಮಹಿಷ್ಮತಿನಗರ ಮಹಿಷಮಂಡಲ, ಎಂದು ಕರೆಯುತ್ತಿದ್ದರು. ಕಾರಣವಾದರೋ ಎಮ್ಮೆಗಳು ಬಹುವಾಗಿ ಇರುವ ಸ್ಥಳವೆಂಬರ್ಥದಿಂದ. ಅದೇ ರೀತಿ ತಮಿಳಿನಲ್ಲೂ 'ಎರ್‌ಮೈಪುರ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಅದೇ ಈಗ ಸಂಕ್ಷೇಪವಾಗಿ ಮಹಿಸೂರ್ ಅನಂತರ ಮೈಸೂರೆಂದಾಯಿತು. ನಮ್ಮ ನೆರೆ ಜಿಲ್ಲೆಯಾದ ದಕ್ಷಿಣ ಕನ್ನಡವು ಬಹು ಹಿಂದಿನಿಂದಲೇ ಕನ್ನಡ ದೇಶವೆಂದು ಕರೆಯಲ್ಪಟ್ಟು ಮೈಸೂರು ಇತ್ಯಾದಿ ದೇಶದ ಭಾಗಗಳೆಲ್ಲಾ ಅದಕ್ಕೆ ಸೇರಿಸಲ್ಪಟ್ಟು ವಿಸ್ತಾರವಾಗಿತ್ತು. ಈ ರೀತಿ ದೇಶದ ಹೆಸರು ಆಯಾಯ ಸಂದರ್ಭಕ್ಕನುಗುಣವಾಗಿ ಬೀಳುವುದಲ್ಲದೆ ಇತರ ಹೆಸರುಗಳಿಗೆ ಸರಿ ಹೋಲಿಸಿ ಹೇಳುವುದೆಂದರೆ ಬಹು ಅಪಕೃತವಾದುದೆಂದೇ ಹೇಳಬೇಕಾಗಿದೆ. ಅದಂತಿರಲಿ, ಪುರಾತನ ದ್ರಾವಿಡರ ಕಾಲದಿಂದಲೇ ರೂಢಿಯಲ್ಲಿದ್ದಂತೆ 'ಕುಡ' ಎಂದರೆ ಪಶ್ಚಿಮ, 'ಅಗಂ' ಎಂದರೆ ಒಳಭಾಗ ಎಂಬರ್ಥವಿದೆ. ಕಿಟ್ಟೆಲ್ ಶಬ್ದ ಕೋಶದಲ್ಲಿ ಕುಡ ಎಂದರೆ ಬೆಟ್ಟಪ್ರದೇಶವೆಂಬರ್ಥವಿದೆ. ಹೇಗೂ ಈ ಶಬ್ದಗಳ ಸಂಯೋಜನೆ ಹೇಗಾಯಿತೆಂದರೆ ಕುಡ-ಅಗಂ ಅಲ್ಲಿಂದ ಕುಡಾಗಂ, ಅನಂತರ ಕೊಡಗು ಎಂದಾಯಿತು. ಇದು ವ್ಯವಹಾರ ರೂಪದಿಂದುಂಟಾದ ಸಂಪೂರ್ಣ ಅರ್ಥಕೃತವಾದ ಹೆಸರಾಗಿದೆ. ಕುಡನಾಡು ಎಂದೂ ಹೀಗೇ ಕರೆದರು. ಇದಕ್ಕೆ ಕುಡಿಯರನಾಡು ಎಂದು ತಪ್ಪಭಿಪ್ರಾಯವನ್ನು ತಂದುಕೊಂಡಿದ್ದಾರೆ. ಆರ್ಯ ಸಂಸ್ಕೃತಿಯನ್ನು ಹೊಂದದ ಹಿಂದಿನ ದ್ರಾವಿಡರ ಭಾಷಾ ರೂಪ ಪ್ರಕಾರ ಈ ಕುಡಾಗಂ ಎಂಬದ್ದು 'ಕೊಡಗು' ಆಯಿತೆಂಬುವುದಕ್ಕೆ ಸಂದೇಹವೇ ಇಲ್ಲ. ಇದು ಪ್ರಸಿದ್ಧ ವಿದ್ವಾಂಸರ ದೃಢವಾದ ಮತವಾಗಿದೆ.

ಆದ್ದರಿಂದ 'ಕುರ್ದ್' ಎಂಬ ಶಬ್ದದಿಂದ 'ಕೊಡಗು' ಎಂಬ ಹೆಸರು ಆಗಿರಲಿಕ್ಕಿಲ್ಲ. ಕಾರಣ ಇದಲ್ಲದೆ ಬೆಟ್ಟಪ್ರದೇಶವಾದ್ದರಿಂದ ಬೆಟ್ಟ ಜನರು ಎಂದು ಕರೆಯಬಹುದಿತ್ತು ಎಂಬ ಅಪಕೃತ ಮಾತನ್ನೂ ಹೇಳಿದ್ದಾರೆ. ಈಗಿನ ಆಂಗ್ಲೇ ಕ್ರಮದಂತೆ 'ಕೂರ್ಗ್' ಎಂಬುದೇ ರೂಢಿಯಲ್ಲಿದ್ದಿದ್ದರೆ ಅವರಿಗೆ ಅದು ಒಂದು ಆಧಾರವಂತೆ ಸಾಧಿಸಬಹುದಿತ್ತು. ಬಿಂದಿತವಾಗಿಯೂ ಅವರು ಹಾಗೇ ಹೇಳುತ್ತಿದ್ದರು. ಸುದೈವವಶಾತ್ 'ಕೊಡಗು' ಎಂಬ ಹೆಸರು ಈ ಪತ್ರಿಕೆ ದೆಸೆಯಿಂದಾಗಿ ಇಷ್ಟು ಉಳಿದುಕೊಂಡಿದೆ ಎಂದು ಹೇಳಬಹುದು. ಈ ಹೆಸರಿನ ಮಟ್ಟಿಗೆ ಅಬ್ದುಲ್ ಗಫೂರರ ಅಭಿಪ್ರಾಯ ಸಂಪೂರ್ಣ ತಪ್ಪೇ ಆಗಿದೆ. ಅಲ್ಲದೆ ಇತರ ಅನೇಕ ಗ್ರಂಥ ಲೇಖನಗಳಲ್ಲೂ ಹಲವು ಅಭಿಪ್ರಾಯಗಳಿರುವದು ಸರಿಯಲ್ಲವೆಂದೇ ನನ್ನ ಭಾವನೆಯಾಗಿದೆ.

ಕಣ್ಣು ಮುಚ್ಚಾಲೆ ಆಟವೇ?

ಕೆಲವು ದಿನಗಳ ಹಿಂದೆ ಫಾರೆಸ್ಟ್ ಇಲಾಖೆಯಲ್ಲಿ ಕಾಲಿ ಇರುವ ಒಂದು ಫಾರೆಸ್ಟರ ಸ್ಥಳಕ್ಕೆ ಅರ್ಜಿ ಬರಕೊಳ್ಳಬಹುದೆಂದು, 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿದ್ದರ ಮೇಲೆ 14 ಜನರು ಅರ್ಜಿ ಬರಕೊಂಡಿದ್ದರೆಂತಲೂ, ಅವರನ್ನೆಲ್ಲಾ ಚೀಫ್ ಫಾರೆಸ್ಟ್ ಆಫೀಸರು ಮತ್ತು ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ಭೇಟಿಯಿಂದ ಅದರ ಪೈಕಿ 10 ಜನರನ್ನು ಆರಿಸಿದರೆಂತಲೂ ತಿಳಿಯುತ್ತೇನೆ. ಹೀಗೆ ಆರಿಸಿ ಬಂದವರಿಗೆ ಶಾರೀರಿಕ ಹಾಗೂ ಮಾನಸಿಕ ಪರೀಕ್ಷೆಗಳಿವೆಯೆಂತಲೂ, ಶಾರೀರಿಕ ಪರೀಕ್ಷೆಗೆ 10 ಮೈಲು ಓಟವೂ, ಬರವಣಿಗೆ ಪರೀಕ್ಷೆಗೆ ಲೆಕ್ಕ ಪರೀಕ್ಷೆಯನ್ನೂ ಇಟ್ಟಿದ್ದರೆಂದೂ ತಿಳಿಯುತ್ತೇನೆ. ಅದರ ಈ ಓಟದ ದಿನ ಫಾರೆಸ್ಟ್ ಇಲಾಖೆಯಲ್ಲಿ 11 ವರ್ಷ, 5 ವರ್ಷ ಮತ್ತು 3 ತಿಂಗಳು ಚಾಕರಿಯಲ್ಲಿ ಇರುವ ಮೂವರಿಗೆ ಓಡುವ ತೊಂದರೆ ಕೊಡಲಿಲ್ಲವಂತೆ. ಯಾವ ಕಾರಣದಿಂದ ಇವರನ್ನು ವಿನಾಯಿಸಿದರೆಂದು ಗೊತ್ತಾಗುವದಿಲ್ಲ. ಓಟವಾದ ಕೂಡ್ಲೆ ಓಡಿದವರು ಡಾಕ್ಟರರಿಂದ ಪರೀಕ್ಷಿಸಲ್ಪಟ್ಟರಂತೆ. ಲೆಕ್ಕ ಪರೀಕ್ಷೆಗೆ ಎಲಿಮೆಂಟರಿ ಲೆಕ್ಕ ಹಾಕುವರೆಂದು ಹೇಳಿ ಆಪ್ಷನಲ್ ಲೆಕ್ಕವನ್ನು ಮಿಶ್ರಮಾಡಿರುವರಂತೆ. ಈ ಪರೀಕ್ಷೆಗೆ ಓಟದಲ್ಲಿ ಆರಿಸಲ್ಪಟ್ಟ 5 ಜನರೂ ಮತ್ತು ಇಲಾಖೆಯಲ್ಲಿ 3 ತಿಂಗಳ ಚಾಕರಿಯಲ್ಲಿರುವ ಒಬ್ಬರು ಕೂಡು ಲೆಕ್ಕದಲ್ಲಿ 1 ನೆಯದಾಗಿ ಮಾರ್ಕು ತೆಗೆದ ಇಲಾಖಾದಾರರನ್ನು ಚಾಕರಿಗೆ ಆರಿಸಿರುವರೆಂದು ತಿಳಿಯುತ್ತೇವೆ.

ಈ ಮೇಲಿನ ಸಂಗತಿಗಳನ್ನು ಚೆನ್ನಾಗಿ ಆಲೋಚಿಸಿದರೆ ಮೊದಲೇ ಒಬ್ಬನ ಮೇಲೆ ಗುರಿಯಿಟ್ಟುಕೊಂಡು ಜನರ ಕಣ್ಣಿಗೆ ಮಣ್ಣು ಎರಚಲು ಪತ್ರಿಕೆಯಲ್ಲಿ ಪ್ರಕಟಿಸಿದರೆಂದು ಯಾರಿಗೆ ತಾನೆ ತಿಳಿಯದರದು. ಬಹುಶಃ ಪರೀಕ್ಷೆಗಳಲ್ಲಿ 1 ನೆಯವನಾದವನ್ನು ಆರಿಸುವರೆಂದರೆ ಈಗ ಆರಿಸಿದ್ದು ಸರಿಯಾಯಿತ್ತೋ? ಒಂದು ಪರೀಕ್ಷೆಗೆ ಸೇರದೆ ಒಂದಕ್ಕೆ ಮಾತ್ರ ಸೇರಿ ಮುಂದೆ ಬಂದವನನ್ನು ಆರಿಸಿದರೆಂದರೆ ಇವರಿಗಿಂತ ಹೆಚ್ಚು ಶ್ರಮ ತೆಗೆದುಕೊಂಡು 10 ಮೈಲು ಓಟದಲ್ಲಿ ಮುಂದೆ ಬಂದವರನ್ನು ಯಾಕೆ ಆರಿಸಲಿಲ್ಲ. ಒಂದು ವೇಳೆ ಇಲಾಖೆಯಲ್ಲಿ ಕೆಲಸ ಮಾಡಲು ಲೆಕ್ಕದಲ್ಲಿ ಮುಂದೆ ಬಂದವರೆ ಅರ್ಹರು ಎಂದಾದರೆ ಓಟಕ್ಕೆ ಮುಂಚೆ ಎಲ್ಲಾ ಅರ್ಜಿದಾರರಿಗೂ ಒಟ್ಟಾಗಿ ಯಾಕೆ ಲೆಕ್ಕ ಪರೀಕ್ಷೆ ಇಡಲಿಲ್ಲ.' ಶಾರೀರಿಕ ಸ್ಪರ್ಧೆಯ ಕಣ್ಣು ಮುಚ್ಚಾಲೆ ಯಾಕೆ? ಇಲಾಖೆ ವಾರರಲ್ಲಿ ಒಬ್ಬನಿಗೆ ಕೊಡಬೇಕೆಂದು ಇದ್ದರೆ ಯಾವ ಕಾರಣದಿಂದ ಪತ್ರಿಕೆಯಲ್ಲಿ ಪ್ರಕಟಿಸಿದ್ದು'

ಮೇಲ್ಕಂಡ ಸಂಬಂಧಪಟ್ಟ ಅಧಿಕಾರಿಗಳು ಜನರ ತಿಳುವಳಿಗೆ ಬಗ್ಗೆ ವಿವರವನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಇಲ್ಲದೆ ಈ ಮೇರೆ ಈಗ ಆರಿಸಿದ್ದು ಖಂಡಿತವಾಗಿಯೂ ನ್ಯಾಯವಾದುದಲ್ಲವಾದ್ದರಿಂದ ಪುನಹ ಮುಂಚಿನ ಎಲ್ಲಾ ಅರ್ಜಿದಾರರನ್ನು ಎರಡು ಪರೀಕ್ಷೆಗೂ ಒಳಪಡಿಸಿ ಎರಡರಲ್ಲಿಯೂ ಯೋಗ್ಯನೆಂಬುದಾಗಿ ಕಂಡು ಬಂದವನನ್ನು ಆರಿಸಬೇಕೆಂದು ಕೋರುತ್ತೇನೆ.

'ಅರ್ಜಿದಾರನ ಕೂಗು.'

ಮಾರಾಟಕ್ಕಿದೆ.

ವೀರಾಜಪೇಟೆನಾಡು ಮೈತಾಡಿ ಗ್ರಾಮದ ಒಕ್ಕಲಿಗರ ನಿಂಗೇಗೌಡ್ರ ಮಗ ದೇವಣ್ಣನ ಹೆಸರಿನಲ್ಲಿ ಜಮಾಬಂದ ನಡೆದು ಬರುವ ಕುಳ ನಂ. 38ರ ಸಾಗಿನ ಸ. ನ. 150/1ರ 16.70 ಎಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ತಲೆ ತೋಟದ 3. 90 ಯೇಕ್ರೆಯ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕಿತ್ತಲೆ ತೋಟದ .80 ಸೆಂಟಿನ ಪೈಕಿ 64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಎಕ್ರೆಯ ಬಾಣೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತಲೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯಸ್. ದೇವಣ್ಣ,
ಮೈತಾಡಿಗ್ರಾಮ,
12-10 ಮೂರ್ನಾಡು.

ನಿಜ ಶಿಕ್ಷಣದ ಸ್ವರೂಪವೇನು?

● ○ ●

ಶಿಶುವು ಜನ್ಮಿಸಿದಾಗಿನಿಂದಲೇ, ಅದರ ಶಿಕ್ಷಣವೂ ಸಹ ಪ್ರಾರಂಭವಾಗುವುದೆಂದು ಜನರು ಹೇಳುವರು. ಆದರೆ ಇದು ಸಂಪೂರ್ಣವಾಗಿ ಸತ್ಯವಲ್ಲ. ಏಕೆಂದರೆ ಪೂರ್ವ ಜನ್ಮ ಪುನರ್ಜನ್ಮಗಳಲ್ಲಿ ನಂಬಿಕೆ ಇರುವವರು ಮನುಷ್ಯನ ಆತ್ಮವು ಯುಗಯುಗಗಳಿಂದಲೂ ಪ್ರಗತಿ ಹೊಂದುತ್ತ ಬರುತ್ತಿರುವುದೆಂದೇ ಹೇಳುವರು. ಈ ದೃಷ್ಟಿಯಿಂದ ವಿಚಾರಮಾಡಿದರೆ, ಬಾಲಕರ ಶಿಕ್ಷಣದ ಆರಂಭವು ಆದರ ಜನ್ಮಕ್ಕೆ ಮೊದಲೇ ಏಕೆ ಜನ್ಮ ಜನ್ಮಾಂತರದಿಂದಲೂ ಆಗಿ ಹೋಗಿ ಅದರಲ್ಲಿ ಕ್ರಮವಾದ ಉನ್ನತಿಯಾಗುತ್ತಲೇ ಇರುವುದು. ಇರಲಿ.

ಶಿಕ್ಷಣವೆಂದರೆ ಮಾನವ ಸರ್ವಾಂಗಗಳ ವಿಕಾಸ. ವಿಕಾಸವೆಂದರೆ, ಶಾರೀರಿಕ ಇಂದ್ರಿಯಗಳ, ಮನಸ್ಸಿನ, ಮನುಷ್ಯನ ಹೃದಯಗಳಲ್ಲಿ ನೆಲೆಸಿರುವ ಶುಭಭಾವನೆಗಳ ಮತ್ತು ಇತರ ಎಲ್ಲ ಶಕ್ತಿಗಳ ಉತ್ತರೋತ್ತರ ವೃದ್ಧಿ ಅವುಗಳ ವಿಸ್ತಾರ ಮತ್ತು ಪರಿಪೂರ್ಣತೆ.

ವಿಕಾಸದ ಈ ಕ್ರಿಯೆಯು ಆತ್ಮದಂತೆ ಸ್ವಯಂಭುವೇ ಆಗಿದೆ. ಅಂದರೆ ವಿಕಾಸವು ಮನುಷ್ಯನ ಪ್ರವೃತ್ತಿಯಲ್ಲಿ ಸಹಜವೂ ಸ್ವಾಭಾವಿಕವೂ ಆಗಿರುವದು. ವಿಕಾಸವನ್ನು ವಿರೋಧಿಸುವುದು ಅಥವಾ ದಮನಮಾಡುವದು ಈ ಪ್ರಕೃತಿಗೆ ವಿರೋಧವಾದುದು.

ಶಿಕ್ಷಣದ ಆ ಯೋಜನೆ ಮತ್ತು ಪ್ರಬಂಧಗಳನ್ನು ಮಾಡುವ ಶಕ್ತಿಗಳು ಮನುಷ್ಯನಿಗೆ ಅನುಕೂಲ ಪರಿಸ್ಥಿತಿಯನ್ನುಂಟುಮಾಡಿದರೆ, ಅವನ ಸರ್ವಾಂಗೀಣ ವಿಕಾಸವಾಗುವಂತೆ ಸಹಾಯಮಾಡಿದರೆ, ವಿಕಾಸವು ಶೀಘ್ರದಲ್ಲಿ ಆಗುವುದು. ಅವನು ಪುಷ್ಟನಾಗಿ ಅವನ ಲಕ್ಷ್ಯವು ಅವನ ಉತ್ತರೋತ್ತರ ವೃದ್ಧಿಯಲ್ಲಾಗಿ ಆತ್ಮ ಸಾಕ್ಷಾತ್ಕಾರವು ಬೇಗನೆ ಆಗುವುದು.

ಈಗಿನ ಕಾಲದಲ್ಲಿ ಲೋಕ ಶಿಕ್ಷಣದ ಈ ವಿಧಾನವನ್ನು ಸಿದ್ಧಾಂತ ರೀತಿಯಲ್ಲಿ ಪ್ರಾಯಶಃ ಎಲ್ಲರೂ ಮರೆತಿರುವರು. ಈ ಕಾರಣದಿಂದಲೇ ಶಿಕ್ಷಣದ ಅರ್ಥವು ಬಹಳ ಸಂಕುಚಿತವಾಗಿ ಹೋಗಿದೆ. ಇದರಿಂದ ಮನುಷ್ಯನು ತನ್ನನ್ನು ತಾನು ಅರಿಯಲು ಅಗತ್ಯವಿರುವ ಆವಶ್ಯಕತೆಗಳು ಅಪ್ರಾಪ್ತವಾಗಿವೆ. ಶರೀರದ ಇಂದ್ರಿಯಗಳ, ಬುದ್ಧಿಯ, ನಾಗರೀಕತೆಯ ವಿಕಾಸಕ್ಕೆ ಮನುಷ್ಯನು ರಾಷ್ಟ್ರದ ಉತ್ತಮಅಂಗವಾಗಲಿಕ್ಕೆ, ಮನುಷ್ಯ ಧರ್ಮವನ್ನು ಪಾಲನೆ ಮಾಡಿಕೊಳ್ಳುವದಕ್ಕೆ ಈ ವ್ಯವಸ್ಥೆಯು ಅಪೂರ್ಣವಾಗಿದೆ. ಯಾವುದನ್ನು ಹೊಂದಿ ಮನುಷ್ಯನು ಮುಕ್ತಿ ಮಾರ್ಗದ ಪಥಿಕನಾಗುವನೋ, ಅದೇ ವಿಕಾಸದ ಸಂಪೂರ್ಣ ವ್ಯವಸ್ಥೆಯು.

ಇಂತಹ ವ್ಯವಸ್ಥೆಯ ವಿಧಾನವು ಬಾಲ್ಯದಿಂದಲೇ ಆಗಬೇಕು. ಶಿಕ್ಷಣದ ದೃಷ್ಟಿಯಿಂದ ಬಾಲಕನ ಜನ್ಮ ಸಮಯದಿಂದ ಹಿಡಿದು ಅವನ ಕೊನೆಯ ದಿನಗಳವರೆಗೂ ಅವನಿಗೆ ಕಲ್ಯಾಣಕಾರಿಯಾದ ವಾತಾವರಣ ಆದರ್ಶ ಆಚರಣೆ. ಜ್ಞಾನ ವಿಜ್ಞಾನದ ಶಿಕ್ಷಣ ಮತ್ತು ಸತ್ಸಂಗಾದಿಗಳ ಲಾಭವು ದೊರೆಯುವಂತಹ ಸಾಧನವಿರಬೇಕು. ನಾವು ಕಲಿಯತಕ್ಕ ವಿಷಯಗಳ ಅಂಶಿನು ಗುರಿ ಯಾವಾಗಲೂ ಕಣ್ಣಿನೆದುರಿನಲ್ಲಿರಬೇಕು [sic]... ನೆಯಿದೆ. ಇದಕ್ಕೆ ಪ್ರಮಾಣವೇನೆಂದರೆ ಇಂದಿನ ಪಾಠ ಕ್ರಮಗಳಲ್ಲಿ ಆತ್ಮದ ಹಸಿವನ್ನು ತೃಪ್ತಿಪಡಿಸುವ ಯಾವ ಸಾಧನೆಯೂ ಇಲ್ಲದಿರುವುದೇ.

ಬಾಲ್ಯದಲ್ಲಿಯೇ ಮನುಷ್ಯನು ತನ್ನ ಯೌವನ, ವೃದ್ಧಾಪ್ಯದ ಮತ್ತೂ ಮೃತ್ಯುವಿನ ಬೀಜವನ್ನು ಬಿತ್ತಿಕೊಳ್ಳುವನು. ಸೂರ್ಯನ ಉದಯದೊಡನೆಯೇ, ಅವನ ಅಸ್ತದ ಕಾಲವು ಪ್ರಾರಂಭವಾಗುವುದು. ಇದೇ ರೀತಿ ಬಾಲಕವೃದ್ಧಿಯೊಡನೆಯೇ ಅವನ ಅಂತ್ಯದ ಕ್ರಿಯೆಯೂ ಆರಂಭವಾಗುವುದು. ಇಂತಹ ಪರಿಸ್ಥಿತಿಯಲ್ಲಿ ನಾವು ಮನುಷ್ಯನ ಜನ್ಮದೊಡನೆಯೇ ಅವನ ಅಂತ್ಯಕಾಲಕ್ಕೆ ಬೇಕಾಗುವ ವಸ್ತುವನ್ನು ದೊರಕಿಸುವ ಕಾರ್ಯವನ್ನೂ ಆರಂಭ ಮಾಡಬೇಕು.

ಅದೇ ಯುಕ್ತಿ-ಬದ್ಧ - ಯೋಜನೆ ಆನಂದ. ಎರಡೇ ಎರಡು ಎಲೆಗಳಿರುವ ಸಣ್ಣ ಗಿಡವೂ ಒಂದು ಸಂಪೂರ್ಣ ವೃಕ್ಷವೇ-ಅದು ಪ್ರತಿಗಳಿಗೆಯಲ್ಲಿಯೂ ಹಣ್ಣು ಹೂಗಳಿಗಾಗಿಯೇ ಜೀವಿಸಿದ್ದು ಪೋಷಣ ಗ್ರಹಣಮಾಡುವುದು. ವೃಕ್ಷವು ಹುಟ್ಟಿದ ಗಳಿಗೆಯಿಂದಲೇ ಹೂ, ಹಣ್ಣುಗಳಿಗಾಗಿ ಪೋಷಣೆಯನ್ನು ಹೊಂದಲಾರಂಭಿಸುವುದು. ಅದೇ ರೀತಿ ಸಣ್ಣವರಾಗಿದ್ದರೂ ಸಹ ಬಾಲಕರು ಬಾಲ್ಯದಿಂದಲೇ ಸಂಪೂರ್ಣ ಮಾನವನಾಗುವ ಶಿಕ್ಷಣವನ್ನು ಗ್ರಹಣ ಮಾಡಬಲ್ಲನು. ವಿರೋಧವಿಲ್ಲದ ದ್ವರೆ ಮುಂಚೆಯೇ ಗ್ರಹಣ ಮಾಡುವನು.

ಆತ್ಮವಿಕಾಶದ ಅವಶ್ಯಕತೆ.

ಇಂದಿನ ಶಾಲೆಗಳಲ್ಲಿ ನೈತಿಕ ವಿಕಾಸ, ಬೌದ್ಧಿಕ ವಿಕಾಸ, ಇಂದ್ರಿಯ ವಿಕಾಸ ಅಥವಾ ಶಾರೀರಕ ವಿಕಾಸಗಳ ಕಡೆಗೆ ಯಾರೂ ವಿಶೇಷ ಗಮನವನ್ನೇ ಕೊಡುತ್ತಿಲ್ಲ. ಬಲವಂತದಿಂದ ಇತರರ ಆಜ್ಞೆಯನ್ನೂ ಪಾಲಿಸುವದು, ಸತ್ಯ ಮೊದಲಾದ ಗುಣಗಳನ್ನು ಕಲಿಯಲು ಭಯ ಅಥವಾ ಪಾರಿತೋಷಕಗಳ ಶರಣು ಹೋಗುವದು, ತೀರ ಅನುಪಯುಕ್ತವೂ, ಅನೀತಿ ಪೂರ್ಣವೂ ಆದ ವಿಚಾರ! ಇವುಗಳ ಆಶ್ರಯದಿಂದ ನಮ್ಮ ಬಾಲಕರನ್ನು ನೀತಿವಂತರಿಗೆ ಬದಲಾಗಿ ನೀತಿ ದ್ರೋಹಿಗಳನ್ನಾಗಿ ಮಾಡುತ್ತಿರುವೆವು.

ಸತ್ಯ-ಅಸತ್ಯ, ಒಳ್ಳೆಯದು - ಕೆಟ್ಟದು ಇವುಗಳ ವಿವೇಕವುಂಟಾದಾಗ ನ್ಯಾಯ ಅನ್ಯಾಯಗಳನ್ನರಿಯ ಬಲ್ಲವನಾಗಿ ಮನಸ್ಸು ಸಮತೆಯಿಂದ ಕೂಡಿದುದಾದಾಗ, ವಿಚಾರಗಳಲ್ಲಿ ವಿಶಾಲತೆಯುಂಟಾದಾಗ ಬುದ್ಧಿಯ ವಿಕಾಸಕ್ಕಿಂತ ಹಾನಿಯಾಗುವುದೇ ಹೆಚ್ಚು.

ಇಂದ್ರಿಯಗಳ ವಿಕಾಸವೆಂದರೇನೆಂಬುವನ್ನು ನಮ್ಮ ವಿದ್ಯಾಲಯಗಳು ಇನ್ನೂ ತಿಳಿದಿಲ್ಲ. ಇಂದ್ರಿಯಗಳು ಮನಸಿನ ಕೇವಲ ಶಸ್ತ್ರಗಳು ಮಾತ್ರವೇ. ಇಂದ್ರಿಯಗಳ, ಇಂದ್ರಿಯಗಳ ಶಕ್ತಿಯು, ಅವುಗಳ ವೇಗ ಸಂಯಮಗಳ ಅಗತ್ಯಕ್ಕೆ ಕಾರಣವೇನೆಂದರೆ ನಾವು ಅವುಗಳ ಮೂಲಕ ಬಾಹ್ಯಜಗತ್ತನ್ನು ಅರಿಯಬಲ್ಲೆವು. ಮನಸ್ಸು ಇಂದ್ರಿಯಗಳ ಉಪಯೋಗವನ್ನು ಮಹಾಕಾರ್ಯಗಳಿಗೆ ಉಪಯೋಗಿಸಿಕೊಳ್ಳಬೇಕು. ಅಷ್ಟು ಸೂಕ್ಷ್ಮವಾಗಿರಬೇಕು ಅವುಗಳು.

ಣ್ಣಿನೆದುರಿನಲ್ಲಿರಬೇಕು. ಕಲಿಯುವವನಿಗೆ ವಿಷಯಗಳ ಜ್ಞಾನವು ಬೇಗ ಆಗುವಂತಿರಬೇಕು.

ಈ ರೀತಿ ಮಾಡಿದಲ್ಲಿ, ಲೇಖನ, ವಾಚನ, ಗಣಿತ, ಪ್ರಕೃತಿ ಪರಿಚಯ, ವಿಜ್ಞಾನ, ಕಲೆ, ಕುಶಲತೆ ಮೊದಲಾದ ವಿಷಯಗಳ ಶಿಕ್ಷಣವು ಈಗಿರುವಂತೆ ಸಂಕುಚಿತ ಅರ್ಥದಲ್ಲಿ ಆಗದೆ, ವಿಶಾಲವೂ ಪರಮ ವ್ಯಾಪಕವೂ ಆದ ಲಕ್ಷ್ಯವನ್ನೆದುರಿನಲ್ಲಿಟ್ಟುಕೊಂಡು, ಮುಂದೆ ಸಾಗುವುದು. ಆ ರೀತಿ ಆದರೆ, ಶಿಕ್ಷಣದ ದೃಷ್ಟಿ ಕೋಣವು ಕೇವಲ ಐಹಿಕವಾಗದೆ, ಅದಕ್ಕೆ ಬದಲಾಗಿ ಐಹಿಕ ಮತ್ತು ಪಾರಮಾರ್ಥಿಕವಾದ ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷಗಳನ್ನೂ ಹೊಂದಿ ಶಾಂತಿಯನ್ನು ಅನುಭವಿಸುವನು.

ಇಂದಿನ ಶಿಕ್ಷಣ.

ಈಗ ನಮ್ಮ ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣಾಲಯಗಳ ಲಕ್ಷ್ಯವು ಆದಿ ಭೌತಿಕವೇ ಆಗಿದ್ದು, ಅದು ತ್ಯಾಜ್ಯವಾಗಿದೆ. ಇಂದು ಕಲಿಸುವವರ ಅರ್ಥವು ತಿಳಿಯಲಿ, ತಿಳಿಯದೆ ಹೋಗಲಿ ಯಾವುದಾದರೊಂದು ವಿಷಯವನ್ನು ಕಂಠಪಾಠ ಮಾಡಿಸುವುದೇ ಆಗಿದೆ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೇ ಇಂದಿನ ಶಿಕ್ಷಣದ ಅಭಿಪ್ರಾಯವಾಗಿದೆ. ಇದು ಎಷ್ಟು ಕ್ಷುದ್ರವೂ, ಸಂಕುಚಿತವೂ ಆದ ಅರ್ಥ! ವಿದ್ಯಾಭ್ಯಾಸದ ನಂತರ ಮನುಷ್ಯನು ಏನಾದರೂ ಜೀವಿಕೋಪಾರ್ಜನ ಮಾಡಬಲ್ಲಂತಾದರೆ, ವಿದ್ಯೆಯು ಸಮಾಪ್ತಿಯಾದಂತೆ ಭಾವಿಸುವರು. ಇದು ಸಂತೋಷ ಜನಕವಾದ ವಚನವಲ್ಲ.

ಶಿಕ್ಷಣದ ಲಕ್ಷ್ಯವು ಸ್ಪಷ್ಟವೂ, ಸುನಿಶ್ಚಿತವೂ ಆಗಿ, ಅದನ್ನು ಹೊಂದಲು, ಎಲ್ಲ ಉಚಿತ ಸಾಧನೆಗಳೂ ಇರುವಂತೆ, ಇದರಲ್ಲಿ ಪರಿವರ್ತನೆಯಾಗಬೇಕಾಗಿದೆ.

ಪರಿವರ್ತನೆಯ ಪ್ರಥಮಪಾದ.

ಈ ಪರಿವರ್ತನೆಯಲ್ಲಿ ಮೊದಲನೆಯದು ಬಾಲಕರ ಸನ್ಮಾನ. ಬಾಲಕನಲ್ಲಿರುವ ಅಂತಃಶಕ್ತಿಯು ಅವನ ಶರೀರದಂತೆ ಅಲ್ಪವೂ ಅಸಹಾಯವೂ ಆದುದಲ್ಲದೆಂಬುದನ್ನು ನಾವು ಮರೆತಿರುವೆವು. ಬೀಜವು ತೀರ ಸಣ್ಣದಾಗಿದ್ದರೂ, ಅದರಲ್ಲಿ ಸಂಪೂರ್ಣ ವೃಕ್ಷವೇ ಸಮಾವೇಶವಾಗಿರುವದರಿಂದ ಬೀಜದ ಮಹತ್ವವು, ಫಲಕ್ಕಿಂತ ಯಾವ ರೀತಿ ಕಮ್ಮಿಯಾಗಿಲ್ಲವೋ. ಅದೇ ರೀತಿ ಬಾಲಕನಲ್ಲಿಯೂ ಭವಿಷ್ಯದಲ್ಲಿ ವಿಕಸಿತವಾಗುವ ವಿರಾಟ್ ಮನುಷ್ಯನ ಸಂಪೂರ್ಣ ಸತ್ವವು ಸಮಾವೇಶವಾಗಿದೆಯೆಂಬುದನ್ನು ಎಲ್ಲರೂ ಸ್ಮರಣೆಯಲ್ಲಿಟ್ಟಿರಬೇಕು. ನಾವು ನಮ್ಮ ಆತ್ಮಗೌರವವನ್ನು ಮರೆತಿರುವೆವಾದುದರಿಂದ, ನಮ್ಮ ಹೃದಯಗಳಲ್ಲಿ ಇಂದು ಬಾಲಕರ ವಿಚಾರದಲ್ಲಿ ತಿರಸ್ಕಾರ, ತುಚ್ಛತೆ, ಅವಹೇಳನೆ ಮತ್ತು ಅವಮಾನ ಆದಿಗಳ ಭಾವನೆಗಳಿವೆ. ಬಾಲಕನನ್ನು ಅವನ ದೇಹವಷ್ಟೇ ಚಿಕ್ಕವನೆಂದು ತಿಳಿದು ಅವನ ಶಿಕ್ಷಣ ವಿಷಯದಲ್ಲಿ ನಾವು ವಿಶೇಷ ಗಮನವನ್ನು ಕೊಟ್ಟಿರುವದಿಲ್ಲ. ಈಗ ಪ್ರಚಲಿತವಾಗಿರುವ ಶಿಕ್ಷಣ ಪ್ರಣಾಳಿಯಲ್ಲಿ ಮನುಷ್ಯನನ್ನು ತನ್ನ ಇಂದ್ರಿಯಗಳ ಮೂಲಕ ಸಂಚರಿಸುವ ಒಂದು ಶರೀರಧಾರಿ ಎಂಬ ಕ

ಬಲವಂತ ಮಾಘಸ್ನಾನ ಬೇಡ.

ಇಂದಿನ ಶಾಲೆಗಳಲ್ಲಿ ಕೊಡಲ್ಪಡುತ್ತಿರುವ ಸದಾಚಾರದ ವಿದ್ಯೆಯಂತೂ ನಿರರ್ಥಕವೆಂದು ಸಿದ್ಧವಾಗಿದೆ. ಮಹಾಪುರುಷರ ಜೀವನಚರಿತ್ರೆಗಳನ್ನು ತಿಳಿಸುವದರಿಂದ ಸದಾಚಾರ ವ್ಯಾಖ್ಯಾನಗಳನ್ನು ಕೊಡುವುದರಿಂದ ಅಥವಾ ಸದಾಚಾರಿಯಾಗದೆ ಹೋದವನಿಗೆ ಶಿಕ್ಷೆವಿಧಿಸುವದರಿಂದ ಅದಕ್ಕೆ ಭಯ ಅಥವಾ ಪುರಸ್ಕಾರವನ್ನು ತೋರಿಸುವದರಿಂದ, ಮನುಷ್ಯನಲ್ಲಿ ಅದುಉಂಟಾಗುವದಿಲ್ಲ. ಸ್ವಭಾವದಿಂದಲೇ ಮನುಷ್ಯನು ಸದಾಚಾರಪ್ರಿಯನು ಆದರೆ ಅವನನ್ನೂ ಸದಾಚಾರಿಯನ್ನಾಗಿ ಮಾಡಲುಪಯೋಗಮಾಡುತ್ತಿರುವ ಶಿಕ್ಷಣ ಪದ್ಧತಿಯಿಂದ ಅವನು ಅದಕ್ಕೆ ವಿರೋಧಿಯಾಗುವನು ಈ ಬಲವಂತ ಮಾಘಸ್ನಾನದಿಂದ ಇಂದು ಗುರುದ್ರೋಹ, ಪಿತೃದ್ರೋಹಗಳು ಸಮಾಜದಲ್ಲಿ ದಿನದಿನವೂ ವೃದ್ಧಿಯಾಗುತ್ತಿರುವವು.

ಪ್ರತಿಯೊಂದು ವಸ್ತುವೂ ತನ್ನ ವಿಕಾಸಕ್ಕಾಗಿ ಒಳ್ಳೆಯ ವಾತಾವರಣ, ವ್ಯಾಸಂಗ ಮತ್ತು ಅಭ್ಯಾಸವನ್ನು ಅಪೇಕ್ಷಿಸುವದು. ಸಹಾನುಭೂತಿ ಮತ್ತು ಸಂರಕ್ಷಣೆಯನ್ನು ಬಯಸುವದು. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಆತ್ಮವಿಕಾಸದ ಹೆಸರೇ ಇಲ್ಲದಂತಾಗಿದೆ. ಆತ್ಮಸಾಕ್ಷಾತ್ಕಾರಕ್ಕಾಗಿ, ಇಂತಿಂತಹ ಶಿಕ್ಷಣದ ವ್ಯವಸ್ಥೆಯಾಗಬೇಕು, ಎಂಬ ಅರಿವುಂಟಾದಲ್ಲಿ, ಅಂತಹುದನ್ನು ಪ್ರಾರಂಭದಿಂದಲೇ ಮಾಡುವದು ನಮ್ಮ ಕರ್ತವ್ಯ. ಆದರೆ ಇಂದಿನ ಶಿಕ್ಷಣವು ನಿರಾಕಾರವಾದುದು.

ಬಾಲಕರ ಶ್ವಾಸೋಚ್ಛ್ವಾಸಕ್ಕೆ ಶುದ್ಧವಾದ ಗಾಳಿಯು ಹೇಗೆ ಅಗತ್ಯವೋ, ಹಾಗೇ ಬಾಲಕರಿಗೂ ಆತ್ಮವಿದ್ಯೆಯು ಅಗತ್ಯವಿದೆ. ಆದರೆ ಆ ಗಾಳಿಯನ್ನು ನಾವು ಪಂಪುಗಳಿಂದ ಹೇಗೆ ಒಳಗೆ ಕಳುಹಿಸಲಾರೆವೋ ಅದೇ ರೀತಿ ಇದನ್ನು ಸಹ ಬಲವಂತದಿಂದ ಕಲಿಸಲಾಗುವದಿಲ್ಲ. ವಾತಾವರಣವೇ ಉತ್ತಮವಾದುದಾಗಬೇಕು.

ಗುರುವೇ ಶಿಕ್ಷಣದ ಸರ್ವಸ್ವಃ ಲಕ್ಷಣ.

ಗುರುವೇ ಸ್ವಯಂ ಒಂದು ವಾತಾವರಣವಂತೆ ಆತನ ಜ್ಞಾನವು ಆತ್ಮ ಲಕ್ಷಿತಯಾಗಿದ್ದು, ಕ್ರಿಯೆಯು ಕಲ್ಯಾಣಕಾರಿಯಾಗಿರಬೇಕು. ಗುರುವಾಗುವುದು ಬಹಳ ಕಠಿಣವಾದ ಕೆಲಸ. ಏಕೆಂದರೆ ಅವನು ಸ್ವಯಂ ಬಾಲಕರ ಹಿತದ ದೃಷ್ಟಿಯಿಂದ ವಾತಾವರಣದ ರೂಪವೇ ಆಗಬೇಕಾಗುವದು.

ಆದುದರಿಂದ ಶಿಕ್ಷಕನ ಯಾವುದೇ ಮತವಾಗಲೀ, ಪಂಥವಾಗಲಿ ಇರುವದಿಲ್ಲ. ಸ್ಥಾನ, ಕಾಲದ ಬಾಧೆಯಿರುವುದಿಲ್ಲ. ಸಮಾಜ ರಾಷ್ಟ್ರಗಳ ಕಡೆಗೆ ಅವನ ದೃಷ್ಟಿ ಇರುವುದಿಲ್ಲ. ಆತನ ದರ್ಶನವು ವಿಶುದ್ಧದರ್ಶನವಾಗಿಯೂ, ಜ್ಞಾನವಿಜ್ಞಾನವು ಪರಮ ಜ್ಞಾನವಾಗಿಯೂ, ಧ್ಯೇಯವು ಮುಕ್ತಿಯ ಉಪಾಸನೆಗೆ ಅನುಕೂಲವಾಗಿಯೂ ಇರುವಂತಹ ವಾತಾವರಣವನ್ನುಂಟುಮಾಡಿಕೊಳ್ಳಬೇಕಾಗಿರುವದು.

'ಎ. ಕೆ.'

ಯುದ್ಧದ ಬಗ್ಗೆ ರಾಜೇಂದ್ರ ಪ್ರಸಾದರ ಅಭಿಪ್ರಾಯ.

ಯೂರೋಪಿನಲ್ಲಿ ನಡೆಯುತ್ತಿರುವ ಪ್ರಚಂಡ ಯುದ್ಧ ಪರಿಣಾಮದಿಂದಾಗಿ ಅನುಕ್ರಮವಾಗಿ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವನ್ನು ಕಳಕೊಂಡು ಬಲಾಢ್ಯರ ಪದತಲದಲ್ಲಿ ಹೊರಳಾಡಬೇಕಾಗುವಂಥ ಪ್ರಸಂಗವು ತೀರಾ ಹೃದಯದ್ರಾವಕವಿದೆ. ಕಳೆದ ಕೆಲವು ದಿನಗಳ ಅಂತರರಾಷ್ಟ್ರೀಯ ಅನಿರೀಕ್ಷಿತ ಘಟನೆಗಳಿಂದಾಗಿ ನನ್ನ ಮನಸ್ಸೇ ಅಲ್ಲೋಲಕಲ್ಲೋಲವಾಗಿದೆ. ನಿಜವಾಗಿಯೂ ನನಗೆ ಬ್ರಿಟಿಷರ ಧೋರಣೆಯಲ್ಲಿ ಮಮತೆ ಇಲ್ಲ. ಅಲ್ಲದೆ ನಮ್ಮ ಭಾರತ ಭೂಮಿಯ ವಿಚಾರದಲ್ಲಿ ಇಂಗ್ಲೆಂಡು ಯಥೋಚಿತ ವರ್ತಿಸಲಿಲ್ಲವೆಂಬುವುದೂ ನನಗೆ ಗೊತ್ತಿರುವದೇ. ಆದರೂ ಹಿಟ್ಲರ್ ತತ್ವದ ಪಾಶವೀ ಕೃತ್ಯಗಳು ಜಯ ಹೊಂದುವುದಕ್ಕಿಂತ ಮಿತ್ರ ರಾಷ್ಟ್ರಗಳಿಗೆ ಜಯ ದೊರೆಯಲೆಂದು ನಾನು ಆಶಿಸುತ್ತೇನೆ. ಇಂಗ್ಲೆಂಡು ಭಾರತದ ನ್ಯಾಯ ಬದ್ಧವಾದ ಕೇಳಿಕೆಗಳನ್ನು ಸಲ್ಲಿಸಲು ಹಿಂದೆಗೆಯುತ್ತಿದ್ದರೂ, ಜಗತ್ತಿನ ವಿಚಾರಗಳ ಬಗ್ಗೆ ನಾವು ಕಣ್ಣು ಮುಚ್ಚಿ ಕೂಡುವದು ಸಾಧ್ಯವಿಲ್ಲ. ಕಾಂಗ್ರೆಸು ಅಂತರರಾಷ್ಟ್ರೀಯ ವಿಚಾರವನ್ನು ಚೆನ್ನಾಗಿ ಗಮನಕ್ಕೆ ತೆಗೆದುಕೊಳ್ಳಬೇಕು. ಮಾನವನಿಗೆ ಪ್ರಧಾನವಾದ ಸ್ವಾತಂತ್ರ್ಯವನ್ನೇ ಕಳಕೊಂಡ ಪೋಲೆಂಡು, ಫಿನ್ಲೆಂಡು, ನಾರ್ವೆ, ಡೆನ್ಮಾರ್ಕ್, ಹಾಲೆಂಡು, ಬೆಲ್ಜಿಯಂ, ಜೆಕೊಸ್ಲೊವಾಕಿಯಾ ಮೊದಲಾದ ರಾಷ್ಟ್ರಗಳಿಗೆ ನಮ್ಮ ಪೂರ್ಣ ಸಹಾನುಭೂತಿ ಇದೆ.

ಬಾತ್ಮಿ.

ಕೊಡಗರು ಅರಬಿಯರೇ?

ಲೇ:– ಐ. ಮಾ. ಮು.

ಲೇಖಾಂಕ ೧.

ಕೊಡಗರು ಅರಬಿಯರೆಂಬ ವಿಷಯದಲ್ಲಿ ಹೊರಬಿದ್ದ ಒಂದು ಚಿಕ್ಕ ಗ್ರಂಥದ ಪರಿಚಯವು ಈಗಾಗಲೇ ನನಗಾಯಿತು. ಅದನ್ನು ಬರೆದ ನಮ್ಮ ಮುಸ್ಲಿಂ ಮಹಾನುಭಾವರು ಲೋಕದಲ್ಲಿ ಸರ್ವರಿಗೂ ಸ್ವಂತ ಅಭಿಪ್ರಾಯ ಕೊಡುವ ಹಕ್ಕಿದೆ ಎಂಬ ಶರತ್ತಿನ ಮೇರೆ ಈ ಗ್ರಂಥವನ್ನು ರಚಿಸಿರುವರು. ಕೊಡಗು ಅರಬಿಯರೆಂದು ಹೇಳುವ ನೆವದಲ್ಲಿ ಇತರ ಅನೇಕ ವಿಷಯಗಳನ್ನು ಅಸಂಬಂಧವಾಗಿ ಸೇರಿಸಿರುವರು. ಆದರೆ ನನಗೆ ತಿಳಿದ ಕೆಲವು ವಿಷಯದಲ್ಲಿ ಅವರು ಬರೆದು ತಿಳಿಸಿದುವುಗಳು ಅರ್ಥವಿಲ್ಲದುವುಗಳಾಗಿ ತೋರುವುದರಿಂದ ನಾನು ನನ್ನ ಮಟ್ಟಿಗೆ ಯಥಾರ್ಥವಾದುದೆಂದು ತಿಳಿದು ಸ್ವಲ್ಪ ಬರೆಯಲಿಚ್ಛಿಸುತ್ತೇನೆ.

'ಕೊಡಗು' ಎಂಬ ಹೆಸರು ಯಾವ ಕಾರಣದಿಂದ ಬಂತೆಂಬುದು ಇಲ್ಲಿಯವರೆವಿಗೂ ನಿರ್ಧಾರವಾಗಿಲ್ಲ. ಅನೇಕ ಮಹನೀಯರ ಅನೇಕ ಅಭಿಪ್ರಾಯಗಳಿದ್ದರೂ ನಂಬಲರ್ಹವಾದದ್ದು ಒಂದೂ ಆದರೆಡೆ ತೋರುವದಿಲ್ಲ. ಇವರ ಜತೆಗೆ ಸ್ವಂತ ಅಭಿಪ್ರಾಯವನ್ನು ಕೊಡುವ ಹಕ್ಕಿನಿಂದ ಹೇಳಿದವರು ಕುರ್ದಿಸ್ಥಾನದ ಜನರು ಬಂದು ನೆಲಸಿದ್ದರಿಂದ ಆ ಹೆಸರು ಬಂತೆಂದು ಹೇಳುತ್ತಾರೆ. ಇನ್ನೊಂದೆಡೆಯಲ್ಲಿ ಇವು ನನ್ನ ಸ್ವಂತ ಅಭಿಪ್ರಾಯವಲ್ಲ' ವೆಂದೂ ಹೇಳುತ್ತಾರೆ. ಅದಂತಿರಲಿ. 'ಕುರ್ದ್' ಎಂಬ ಶಬ್ದದಿಂದ 'ಕೊಡಗು' ಎಂದೂ, 'ಕುರ್ದರು' ಎಂಬುದರಿಂದ 'ಕೊಡಗರು' ಆದದ್ದು ಸ್ಪಷ್ಟವಾದ್ದರಿಂದ ಕೊಡಗರು ಅರಬಿಸ್ಥಾನ ದೇಶದ ಕುರ್ದೀಸ್ಥಾನ್ ಎಂಬ ಜಿಲ್ಲೆಯವರೆಂಬುದು ಸಂಪೂರ್ಣ ನಿಜವಾಗಿದೆ' ಎಂದು ಅವರು ಬರೆದಿರುತ್ತಾರೆ. ಇದಕ್ಕೆ ಯಾವುದೊಂದು ಶಾಸನ ಸನ್ನದುಗಳಿಲ್ಲದೆ, ಕಲ್ಪನೆಯಲ್ಲಿ ಪ್ರಾವೀಣ್ಯವಿರುವದರಿಂದ ಸಂಪೂರ್ಣ ನಿಜವೆಂದು ತಮ್ಮ ಸ್ವಕ್ಕೆ ಒಪ್ಪಿಬಿಟ್ಟಿದ್ದಾರೆ. ಇವರು ಈ ವಿಷಯಕ್ಕೆ ಕೊಟ್ಟ ಆಧಾರವಿಷ್ಟೇ ಆಗಿದೆ. 'ದಿ. ಬ. ಕೆ. ಚೆಂಗಪ್ಪನವರಿಗೆ ಶ್ರೀರಂಗಪಟ್ಟಣದಲ್ಲಿ ಯಾರೋ ಸಾಹೇಬರು ಕೊಟ್ಟ ಯಾವುದೋ ಒಳ್ಳೆ ಪ್ರೆಂಚಿನ ಪುಸ್ತಕದಲ್ಲಿ ಈ ಕೊಡಗರ ವಿಷಯಗಳೆಲ್ಲಾ ಇದೆ ಯಂತೆ', ಎಂದು. ಈ ಪುಸ್ತಕ ಯಾರು ಬರೆದದ್ದು, ಅದರಲ್ಲೇನು ವಿಷಯಗಳಿವೆ ಎಂಬುದು ತೋರಪಡಿಸಲಿಲ್ಲ. ಅಥವಾ ಆ ಪುಸ್ತಕವನ್ನು ಅವರು ನೋಡಲಿಲ್ಲವೋ ಏನೋ! ಹೇಗೂ ಕುರ್ದರು ಎಂಬುದರಿಂದ ಕೊಡಗರು ಆಯಿತೆಂಬುದು ಆ ಪುಸ್ತಕದಿಂದ ಸಮರ್ಥಿಸಲ್ಪಟ್ಟಿದೆ. ಅದಕ್ಕೆ ಹೆಸರೇ ಪರೋ 'ಹಸರು ಪ್ರೆಂಚಿನ ಬುಕ್ಕ್' ಎಂದಂತೆ.

ಬರೇ ಕಲ್ಪನೆ ಮಾತ್ರದಿಂದಲೇ ಇನ್ನೊಬ್ಬೋ ವಿಧದಿಂದ ಇನ್ನಾವ ದೇಶವನ್ನಾಗಲೀ, ಊರಿಗೆ ಕೊಡಿಗೆಗಾಗಲೀ, ಗಡ್ಡ ಮೀಸೆಗಳಿಗಳೀ ಹೋಲಿಸಿ ಹೇಳಿಬಿಡಬಹುದು. ಅದು ಬಹು ಕಷ್ಟವೇನೂ ಇಲ್ಲ. ಆದರೆ ಪ್ರತಿಯೊಂದು ದೇಶದ ಹೆಸರು ಯಾ ಗ್ರಾಮದ ಯಾ ಕುಟುಂಬದ ಹೆಸರುಗಳ ಪದಗಳಿಗೆ ಪೂರ್ವಿಕರು ಒದಗಿಸಿಕ್ಕಿದ ಹಾಗೆಲ್ಲಾ ಹೆಸರಿಕ್ಕದೆ ಅರ್ಥಗರ್ಭಿತವಾದ ಪದ ಸಂಯೋಜನೆಯಿಂದಲೇ ಹೆಸರು ಹಾಕಿರುವರೆಂದು ನಾವು ನಂಬಬೇಕಾಗಿದೆ. ಪ್ರತಿಯೊಂದು ಹೆಸರಿನಲ್ಲೂ ಅನೌಚಿತ್ಯ ಇರಲೆಂದು ನಂಬಿದ ನಾನು 'ಕೊಡಗು' ಎಂಬ ಹೆಸರನ್ನೇ ಅಲ್ಲದೆ ಕೊಡಗಿನ ನೆರೆಯೂರುಗಳಿಗೆ ಆ ಹೆಸರು ಹೇಗಾಗಿರಬಹುದೆಂದು ತಿಳಿಸಲೆತ್ನಿಸುತ್ತೇನೆ. 'ಮಲೆ' ಎಂದರೆ ಮಲೆನಾಡು 'ಯಾಳ' ಎಂದರೆ 'ಅರೆ' ಎಂಬುವುದರಿಂದ ಬಂದು ಗುಡ್ಡ ಪ್ರದೇಶವೆಂದರ್ಥವಾಗುವುದು. ಈ ರೀತಿ ಮೈಸೂರಿಗಾದರೋ ಪೂರ್ವದಿಂದ ಶ್ರೀ. ಮಹಿಷ್ಮತಿನಗರ ಮಹಿಷಮಂಡಲ, ಎಂದು ಕರೆಯುತ್ತಿದ್ದರು. ಕಾರಣವಾದರೋ ಎಮ್ಮೆಗಳು ಬಹುವಾಗಿ ಇರುವ ಸ್ಥಳವೆಂಬರ್ಥದಿಂದ. ಅದೇ ರೀತಿ ತಮಿಳಿನಲ್ಲೂ 'ಎರ್‌ಮೈಪುರ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಅದೇ ಈಗ ಸಂಕ್ಷೇಪವಾಗಿ ಮಹಿಷೂರ್ ಅನಂತರ ಮೈಸೂರೆಂದಾಯಿತು. ನಮ್ಮ ನೆರೆ ಜಿಲ್ಲೆಯಾದ ದಕ್ಷಿಣ ಕನ್ನಡವು ಬಹು ಹಿಂದಿನಿಂದಲೇ ಕನ್ನಡ ದೇಶವೆಂದು ಕರೆಯಲ್ಪಟ್ಟು ಮೈಸೂರು ಇತ್ಯಾದಿ ದೇಶದ ಭಾಗಗಳೆಲ್ಲಾ ಅದಕ್ಕೆ ಸೇರಿಸಲ್ಪಟ್ಟು ವಿಸ್ತಾರವಾಗಿತ್ತು. ಈ ರೀತಿ ದೇಶದ ಹೆಸರು ಆಯಾಯ ಸಂದರ್ಭಕ್ಕನುಗುಣವಾಗಿ ಬೀಳುವುದಲ್ಲದೆ ಇತರ ಹೆಸರುಗಳಿಗೆ ಸರಿ ಹೋಲಿಸಿ ಹೇಳುವುದೆಂದರೆ ಬಹು ಅಪಕೃತವಾದುದೆಂದೇ ಹೇಳಬೇಕಾಗಿದೆ. ಅದಂತಿರಲಿ, ಪುರಾತನ ವ್ಯಾಪಿಡರ ಕಾಲದಿಂದಲೇ ರೂಢಿಯಲ್ಲಿದ್ದಂತೆ 'ಕುಡ' ಎಂದರೆ ಪಶ್ಚಿಮ, 'ಅಗಂ' ಎಂದರೆ ಒಳಭಾಗ ಎಂಬರ್ಥವಿದೆ. ಕಿಟ್ಟೆಲ್ ಶಬ್ದ ಕೋಶದಲ್ಲಿ ಕುಡ ಎಂದರೆ ಬೆಟ್ಟಪ್ರದೇಶವೆಂಬರ್ಥವಿದೆ. ಹೇಗೂ ಈ ಶಬ್ದಗಳ ಸಂಯೋಜನೆ ಹೇಗಾಯಿತೆಂದರೆ ಕುಡ–ಅಂಗಂ ಅಲ್ಲಿಂದ ಕುಡಾಗಂ, ಅನಂತರ ಕೊಡಗು ಎಂದಾಯಿತು. ಇದು ವ್ಯವಹಾರ ರೂಪದಿಂದುಂಟಾದ ಸಂಪೂರ್ಣ ಅರ್ಥಸ್ವಕವಾದ ಹೆಸರಾಗಿದೆ ಕುಡನಾದು ಎಂದೂ ಹೀಗೇ ಕರೆವರು. ಇದಕ್ಕೆ ಕುಡಿಯರನಾಡು ಎಂಬ ತಪ್ಪಭಿಪ್ರಾಯವನ್ನು ತಂದುಕೊಂಡಿದ್ದಾರೆ. ಆರ್ಯ ಸಂಸ್ಕೃತಿಯನ್ನು ಹೊಂದಿದ ಹಿಂದಿನ ದ್ರಾವಿಡರ ಭಾಷಾ ರೂಪ ಪ್ರಕಾರ ಈ ಕುಡಾಗಂ ಎಂಬುದ್ದು 'ಕೊಡಗು' ಆಯಿತೆಂಬುವುದಕ್ಕೆ ಸಂದೇಹವೇ ಇಲ್ಲ. ಇದು ಪ್ರಸಿದ್ಧ ವಿದ್ವಾಂಸರ ದೃಢವಾದ ಮತವಾಗಿದೆ.

ಆದ್ದರಿಂದ 'ಕುರ್ದ್' ಎಂಬ ಶಬ್ದದಿಂದ 'ಕೊಡಗು' ಎಂಬ ಹೆಸರು ಆಗಿರಲಿಕ್ಕಿಲ್ಲ. ಮೊದಲು ಇದಲ್ಲದೆ ಬೆಟ್ಟಪ್ರದೇಶವಾದ್ದರಿಂದ ಬೆಟ್ಟ ಜನರು ಎಂದು ಕರೆಯಬಹುದಿತ್ತು ಎಂಬ ಅಪಕೃತ ಮಾತನ್ನೂ ಹೇಳಿದ್ದಾರೆ. ಈಗಿನ ಆಂಗ್ಲೇ ಕ್ರಮದಂತೆ 'ಕೂರ್ಗ್' ಎಂಬುದೇ ರೂಢಿಯಲ್ಲಿದ್ದು ಬಿಟ್ಟಿದ್ದರೆ ಬಾನರಿಗೆ ಅದು ಒಂದು ಆಧಾರದಂತೆ ಸಾಧಿಸಬಹುದಿತ್ತು. ಬಿಂಡಿತವಾಗಿಯೂ ಅವರು ಹಾಗೇ ಬೆಳೆಸುತ್ತಿದ್ದರು. ಸುದೈವವಶ ತ್ 'ಕೊಡಗು' ಎಂಬ ಹೆಸರು ಈ ಪತ್ರಿಕೆ ದಿನೆಯಿಂದಾಗಿ ಇಷ್ಟು ಉಳಿದುಕೊಂಡಿದೆ ಎಂದು ಹೇಳಬಹುದು. ಈ ಹೆಸರಿನ ಹುಟ್ಟಿಗೆ ಅಬ್ದುಲ್ ಗಫೂರರ ಅಭಿಪ್ರಾಯ ಸಂಪೂರ್ಣ ತಪ್ಪೇ ಆಗಿದೆ. ಅಲ್ಲದೆ ಇತರ ಅನೇಕ ಗ್ರಂಥ ಲೇಖನಗಳಲ್ಲೂ ಹಲವು ಅಭಿಪ್ರಾಯಗಳಿರುವದು ಸರಿಯಲ್ಲವೆಂದೇ ನನ್ನ ಭಾವನೆಯಾಗಿದೆ.

ಕಣ್ಣು ಮುಚ್ಚಾಲೆ ಆಟವೇ?

ಕೆಲವು ದಿನಗಳ ಹಿಂದೆ ಫಾರೆಸ್ಟ್ ಇಲಾಖೆಯಲ್ಲಿ ಕಾಲಿ ಇರುವ ಒಂದು ಫಾರೆಸ್ಟರ ಸ್ಥಳಕ್ಕೆ ಅರ್ಜಿ ಬರಕೊಳ್ಳಬಹುದೆಂದು, 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿದ್ದರ ಮೇರೆ 14 ಜನರು ಅರ್ಜಿ ಬರಕೊಂಡಿದ್ದರೆಂತಲೂ, ಅವರನ್ನೆಲ್ಲಾ ಚೀಫ್ ಫಾರೆಸ್ಟ್ ಆಫೀಸರು ಮತ್ತು ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ಭೇಟಿಯಿಂದ ಅವರ ಪೈಕಿ 10 ಜನರನ್ನು ಆರಿಸಿದರೆಂತಲೂ ತಿಳಿಯುತ್ತೇನೆ. ಹೀಗೆ ಆರಿಸಿ ಬಂದವರಿಗೆ ಶಾರೀರಿಕ ಹಾಗೂ ಮಾನಸಿಕ ಪರೀಕ್ಷೆಗಳಿವೆಯೆಂತಲೂ, ಶಾರೀರಿಕ ಪರೀಕ್ಷೆಗೆ 10 ಮೈಲು ಓಟವೂ, ಬರವಣಿಗೆ ಪರೀಕ್ಷೆಗೆ ಲೆಕ್ಕ ಪರೀಕ್ಷೆಯನ್ನೂ ಇಟ್ಟಿದ್ದರೆಂದೂ ತಿಳಿಯುತ್ತೇವೆ. ಆದರೆ ಈ ಓಟದ ದಿನ ಫಾರೆಸ್ಟ್ ಇಲಾಖೆಯಲ್ಲಿ 11 ವರ್ಷ, 5 ವರ್ಷ ಮತ್ತು 3 ತಿಂಗಳು ಚಾಕರಿಯಲ್ಲಿ ಇರುವ ಮೂವರಿಗೆ ಓಡುವ ತೊಂದರೆ ಕೊಡಲಿಲ್ಲವಂತೆ. ಯಾವ ಕಾರಣದಿಂದ ಇವರನ್ನು ವಿನಾಯಿಸಿದರೆಂದು ಗೊತ್ತಾಗುವದಿಲ್ಲ. ಓಟವಾದ ಕೂಡ್ಲೆ ಓಡಿದವರು ಡಾಕ್ಟರರಿಂದ ಪರೀಕ್ಷಿಸಲ್ಪಟ್ಟರಂತೆ. ಲೆಕ್ಕ ಪರೀಕ್ಷೆಗೆ ಎಲಿಮೆಂಟರಿ ಲೆಕ್ಕ ಹಾಕುವರೆಂದು ಹೇಳಿ ಆಫ್‌ಷನಲ್ ಲೆಕ್ಕವನ್ನು ಮಿಶ್ರಮಾಡಿರುವರಂತೆ. ಈ ಪರೀಕ್ಷೆಗೆ ಓಟದಲ್ಲಿ ಆರಿಸಲ್ಪಟ್ಟ 5 ಜನರೂ ಮತ್ತು ಇಲಾಖೆಯಲ್ಲಿ 3 ತಿಂಗಳ ಚಾಕರಿಯಲ್ಲಿರುವ ಒಬ್ಬರು ಕೂಡ ಲೆಕ್ಕದಲ್ಲಿ 1 ನೆಯದಾಗಿ ಮಾರ್ಕು ತೆಗೆದ ಇಲಾಖಾದಾರರನ್ನು ಚಾಕರಿಗೆ ಆರಿಸಿರುವರೆಂದು ತಿಳಿಯುತ್ತೇವೆ.

ಈ ಮೇಲಿನ ಸಂಗತಿಗಳನ್ನು ಚೆನ್ನಾಗಿ ಆಲೋಚಿಸಿದರೆ ಮೊದಲೇ ಒಬ್ಬನ ಮೇಲೆ ಗುರಿಯಿಟ್ಟುಕೊಂಡು ಜನರ ಕಣ್ಣಿಗೆ ಮಣ್ಣು ಎರಚಲು ಪತ್ರಿಕೆಯಲ್ಲಿ ಪ್ರಕಟಿಸಿದರೆಂದು ಯಾರಿಗೆ ತಾನೆ ತಿಳಿಯದಿರದು. ಬಹುಶಃ ಪರೀಕ್ಷೆಗಳಲ್ಲಿ 1 ನೆಯದವರಾದವನ್ನು ಆರಿಸುವರೆಂದರೆ ಈಗ ಆರಿಸಿದ್ದು ಸರಿಯಾಯಿತ್ತೋ? ಒಂದು ಪರೀಕ್ಷೆಗೆ ಸೇರದೆ ಒಂದಕ್ಕೆ ಮಾತ್ರ ಸೇರಿ ಮುಂದೆ ಬಂದವರನ್ನು ಆರಿಸಿದರೆಂದರೆ ಇವರಿಗಿಂತ ಹೆಚ್ಚು ಶ್ರಮ ತೆಗೆದುಕೊಂಡು 10 ಮೈಲು ಓಟದಲ್ಲಿ ಮುಂದೆ ಬಂದವರನ್ನು ಯಾಕೆ ಆರಿಸಲಿಲ್ಲ. ಒಂದು ವೇಳೆ ಇಲಾಖೆಯಲ್ಲಿ ಕೆಲಸ ಮಾಡಲು ಲೆಕ್ಕದಲ್ಲಿ ಮುಂದೆ ಬಂದವರೇ ಅರ್ಹರು ಎಂದಾದರೆ ಓಟಕ್ಕೆ ಮುಂಚೆ ಎಲ್ಲಾ ಅರ್ಜಿದಾರರಿಗೂ ಒಟ್ಟಾಗಿ ಯಾಕೆ ಲೆಕ್ಕ ಪರೀಕ್ಷೆ ಇಡಲಿಲ್ಲ.' ಶಾರೀರಿಕ ಸ್ಪರ್ಧೆಯ ಕಣ್ಣು ಮುಚ್ಚಾಲೆ ಯಾಕೆ? ಇಲಾಖಾದಾರರಲ್ಲಿ ಒಬ್ಬನಿಗೆ ಕೊಡಬೇಕೆಂದು ಇದ್ದರೆ ಯಾವ ಕಾರಣದಿಂದ ಪತ್ರಿಕೆಯಲ್ಲಿ ಪ್ರಕಟಿಸಿದ್ದು?'

ಸಂಬಂಧಪಟ್ಟ ಅಧಿಕಾರಿಗಳು ಜನರ ತಿಳುವಳಿಗೆ ಬಗ್ಗೆ ವಿವರವನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಇಲ್ಲದೆ ಈ ಮೇರೆ ಈಗ ಆರಿಸಿದ್ದು ಖಂಡಿತವಾಗಿಯೂ ನ್ಯಾಯವಾದುದಲ್ಲವಾದ್ದರಿಂದ ಪುನಹ ಮುಂಚಿನ ಎಲ್ಲಾ ಅರ್ಜಿದಾರರನ್ನು ಎರಡು ಪರೀಕ್ಷೆಗೂ ಒಳಪಡಿಸಿ ಎರಡರಲ್ಲಿಯೂ ಯೋಗ್ಯನೆಂಬುದಾಗಿ ಕಂಡು ಬಂದವರನ್ನು ಆರಿಸಬೇಕೆಂದು ಕೋರುತ್ತೇನೆ.

'ಅರ್ಜಿದಾರನ ತಂದೆ.'

ಮಾರಾಟಕ್ಕಿದೆ.

ವೀರಾಜಪೇಟೆನಾಡು ಮೈತಾಡಿ ಗ್ರಾಮದ ಒಕ್ಕಲಿಗರ ನಿಂಗೇಗೌಡ್ರ ಮಗ ದೇವಣ್ಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕೆಳ ನಂ. 38ರ ಸಾಗಿನ ಸ. ನ. 150/1ರ 16.70 ಏಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ತೆ ತೋಟದ 3. 90 ಯೇಕ್ರೆಯ ಪೈಕಿ 3.12 ಸೆಂಟನ್ನು, ಸಾಗಿನ ಸ. ನ. 155/4ರ ಕಿತ್ತೆ ತೋಟದ .80 ಸೆಂಟಿನ ಪೈಕಿ 64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಏಕ್ರೆಯ ಬಾಣೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯನ್. ದೇವಣ್ಣ,
ಮೈತಾಡಿಗ್ರಾಮ,
12-10 ಮೂರ್ನಾಡು.

ನಿಜ ಶಿಕ್ಷಣದ ಸ್ವರೂಪವೇನು?

●○●

ಶಿಶುವು ಜನ್ಮಿಸಿದಾಗಿನಿಂದಲೇ, ಅದರ ಶಿಕ್ಷಣವೂ ಸಹ ಪ್ರಾರಂಭವಾಗುವುದೆಂದು ಜನರು ಹೇಳುವರು. ಆದರೆ ಇದು ಸಂಪೂರ್ಣವಾಗಿ ಸತ್ಯವಲ್ಲ. ಏಕೆಂದರೆ ಪೂರ್ವ ಜನ್ಮ ಪುನರ್ಜನ್ಮಗಳಲ್ಲಿ ನಂಬಿಕೆ ಇರುವವರು ಮನುಷ್ಯನ ಆತ್ಮವು ಯುಗಯುಗಗಳಿಂದಲೂ ಪ್ರಗತಿ ಹೊಂದುತ್ತ ಬರುತ್ತಿರುವುದೆಂದೇ ಹೇಳುವರು. ಈ ದೃಷ್ಟಿಯಿಂದ ವಿಚಾರಮಾಡಿದರೆ, ಬಾಲಕರ ಶಿಕ್ಷಣದ ಆರಂಭವು ಅವರ ಜನ್ಮಕ್ಕೆ ಮೊದಲೇ ಏಕೆ ಜನ್ಮ ಜನ್ಮಾಂತರದಿಂದಲೂ ಆಗಿ ಹೋಗಿ ಅದರಲ್ಲಿ ಕ್ರಮವಾದ ಉನ್ನತಿಯಾಗುತ್ತಲೇ ಇರುವುದು. ಇರಲಿ.

ಶಿಕ್ಷಣವೆಂದರೆ ಮಾನವ ಸರ್ವಾಂಗಗಳ ವಿಕಾಸ. ವಿಕಾಸವೆಂದರೆ, ಶಾರೀರಿಕ ಇಂದ್ರಿಯಗಳ, ಮನಸ್ಸಿನ, ಮನುಷ್ಯನ ಹೃದಯಗಳಲ್ಲಿ ನೆಲೆಸಿರುವ ಶುಭಭಾವನೆಗಳ ಮತ್ತು ಇತರ ಎಲ್ಲ ಶಕ್ತಿಗಳ ಉತ್ತರೋತ್ತರ ವೃದ್ಧಿ ಅವುಗಳ ವಿಸ್ತಾರ ಮತ್ತು ಪರಿಪೂರ್ಣತೆ.

ವಿಕಾಸದ ಈ ಕ್ರಿಯೆಯು ಆತ್ಮದಂತೆ ಸ್ವಯಂಭುವೇ ಆಗಿದೆ. ಅಂದರೆ ವಿಕಾಸವು ಮನುಷ್ಯನ ಪ್ರವೃತ್ತಿಯಲ್ಲಿ ಸಹಜವೂ ಸ್ವಾಭಾವಿಕವೂ ಆಗಿರುವದು. ವಿಕಾಸವನ್ನು ವಿರೋಧಿಸುವುದು ಅಥವಾ ದಮನಮಾಡುವದು. ಈ ಪ್ರಕೃತಿಗೆ ವಿರೋಧವಾದುದು.

ಶಿಕ್ಷಣದ ಆ ಯೋಜನೆ ಮತ್ತು ಪ್ರಬಂಧಗಳನ್ನು ಮಾಡುವ ಶಕ್ತಿಗಳು ಮನುಷ್ಯನಿಗೆ ಅನುಕೂಲ ಪರಿಸ್ಥಿತಿಯನ್ನುಂಟುಮಾಡಿದರೆ, ಅವನ ಸರ್ವಾಂಗೀಣ ವಿಕಾಸವಾಗುವಂತೆ ಸಹಾಯಮಾಡಿದರೆ, ವಿಕಾಸವು ಶೀಘ್ರದಲ್ಲಿ ಆಗುವುದು. ಅವನು ಪುಷ್ಟನಾಗಿ ಅವನ ಲಕ್ಷ್ಯವು ಅವನ ಉತ್ತರೋತ್ತರ ವೃದ್ಧಿಯಲ್ಲಾಗಿ ಆತ್ಮ ಸಾಕ್ಷಾತ್ಕಾರವು ಬೇಗನೆ ಆಗುವುದು.

ಈಗಿನ ಕಾಲದಲ್ಲಿ ಲೌಕಿಕ ಶಿಕ್ಷಣದ ಈ ವಿಧಾನವನ್ನು ಸಿದ್ಧಾಂತ ರೀತಿಯಲ್ಲಿ ಪ್ರಾಯಶಃ ಎಲ್ಲರೂ ಮರೆತಿರುವರು. ಈ ಕಾರಣದಿಂದಲೇ ಶಿಕ್ಷಣದ ಅರ್ಥವು ಬಹಳ ಸಂಕುಚಿತವಾಗಿ ಹೋಗಿದೆ. ಇದರಿಂದ ಮನುಷ್ಯನು ತನ್ನನ್ನು ತಾನು ಅರಿಯಲು ಅಗತ್ಯವಿರುವ ಅವಶ್ಯಕತೆಗಳು ಅಪ್ರಾಪ್ತವಾಗಿವೆ. ಶರೀರದ ಇಂದ್ರಿಯಗಳ, ಬುದ್ಧಿಯ, ನಾಗರೀಕತೆಯ ವಿಕಾಸಕ್ಕೆ ಮನುಷ್ಯನು ರಾಷ್ಟ್ರದ ಉತ್ತಮ ಅಂಗವಾಗಲಿಕ್ಕೂ, ಮನುಷ್ಯ ಧರ್ಮವನ್ನು ಪಾಲನೆ ಮಾಡಿಕೊಳ್ಳುವದಕ್ಕೂ ಈ ವ್ಯವಸ್ಥೆಯು ಅಪೂರ್ಣವಾಗಿದೆ. ಯಾವುದನ್ನು ಹೊಂದಿ ಮನುಷ್ಯನು ಮುಕ್ತಿ ಮಾರ್ಗದ ಪಥಿಕನಾಗುವನೋ, ಅದೇ ವಿಕಾಸದ ಸಂಪೂರ್ಣ ವ್ಯವಸ್ಥೆಯು.

ಇಂತಹ ವ್ಯವಸ್ಥೆಯ ವಿಧಾನವು ಬಾಲ್ಯದಿಂದಲೇ ಆಗಬೇಕು. ಶಿಕ್ಷಣದ ದೃಷ್ಟಿಯಿಂದ ಬಾಲಕನ ಜನ್ಮ ಸಮಯದಿಂದ ಹಿಡಿದು ಅವನ ಕೊನೆಯ ದಿನಗಳವರೆಗೂ ಅವನಿಗೆ ಕಲ್ಯಾಣ ಕಾರಿಯಾದ ವಾತಾವರಣ ಆದರ್ಶ ಆಚರಣೆ, ಜ್ಞಾನ ವಿಜ್ಞಾನದ ಶಿಕ್ಷಣ ಮತ್ತು ಸತ್ಸಂಗಾದಿಗಳ ಸತತ ಲಾಭವು ದೊರೆಯುವಂತಹ ಸಾಧನಗಳಿರಬೇಕು. ನಾವು ಕಲಿಯತಕ್ಕ ವಿಷಯಗಳ ಅಂತಿಮ ಗುರಿ ಯಾವಾಗಲೂ ಕಳ್ಳನೆಯಿದೆ. ಇದಕ್ಕೆ ಪ್ರಮಾಣವೇನೆಂದರೆ ಇಂದಿನ ಪಾಠ ಕ್ರಮಗಳಲ್ಲಿ ಆತ್ಮದ ಹಸಿವನ್ನು ತೃಪ್ತಿಪಡಿಸುವ ಯಾವ ಸಾಧನೆಯೂ ಇಲ್ಲದಿರುವುದೇ.

ಬಾಲ್ಯದಲ್ಲಿಯೇ ಮನುಷ್ಯನು ತನ್ನ ಯೌವನ, ವೃದ್ಧಾಪ್ಯದ ಮತ್ತೂ ಮೃತ್ಯುವಿನ ಬೀಜವನ್ನು ಬಿತ್ತಿಕೊಳ್ಳುವನು. ಸೂರ್ಯನ ಉದಯದೊಡನೆಯೇ, ಅವನ ಅಸ್ತದ ಕಾಲವು ಪ್ರಾರಂಭವಾಗುವುದು. ಇದೇ ರೀತಿ ಬಾಲಕವೃದ್ಧಿಯೊಡನೆಯೇ ಅವನ ಅಂತ್ಯದ ಕ್ರಿಯೆಯೂ ಆರಂಭವಾಗುವುದು. ಇಂತಹ ಪರಿಸ್ಥಿತಿಯಲ್ಲಿ ನಾವು ಮನುಷ್ಯನ ಜನ್ಮದೊಡನೆಯೇ ಅವನ ಅಂತ್ಯಕಾಲಕ್ಕೆ ಬೇಕಾಗುವ ವಸ್ತುವನ್ನು ದೊರಕಿಸುವ ಕಾರ್ಯವನ್ನೂ ಆರಂಭ ಮಾಡಬೇಕು.

ಅದೇ ಮುಕ್ತಿ-ಬಂಧ - ವಿಮೋಚನೆ ಆನಂದ. ಎರಡೇ ಎರಡು ಎಲೆಗಳಿರುವ ಸಣ್ಣ ಗಿಡವೂ ಒಂದು ಸಂಪೂರ್ಣ ವೃಕ್ಷವೇ-ಅದು ಪ್ರತಿಗಳಿಗೆಯಲ್ಲಿಯೂ ಹಣ್ಣುಹೂಗಳಿಗಾಗಿಯೇ ಜೀವಿಸಿದ್ದು ಪೋಷಣ ಗ್ರಹಣಮಾಡುವುದು. ವೃಕ್ಷವು ಹುಟ್ಟಿದ ಗಳಿಗೆಯಿಂದಲೇ ಹೂ, ಹಣ್ಣುಗಳಿಗಾಗಿ ಪೋಷಣೆಯನ್ನು ಹೊಂದಲಾರಂಭಿಸುವುದು. ಅದೇ ರೀತಿ ಸಣ್ಣವರಾಗಿದ್ದರೂ ಸಹ ಬಾಲಕರು ಬಾಲ್ಯದಿಂದಲೇ ಸಂಪೂರ್ಣ ಮಾನವನಾಗುವ ಶಿಕ್ಷಣವನ್ನು ಗ್ರಹಣ ಮಾಡಬಲ್ಲನು. ವಿರೋಧವಿಲ್ಲದ ದ್ದರೆ ಮುಂಚೆಯೇ ಗ್ರಹಣ ಮಾಡುವನು.

ಆತ್ಮವಿಕಾಶದ ಆವಶ್ಯಕತೆ.

ಇಂದಿನ ಶಾಲೆಗಳಲ್ಲಿ ನೈತಿಕ ವಿಕಾಸ, ಬೌದ್ಧಿಕ ವಿಕಾಸ, ಇಂದ್ರಿಯ ವಿಕಾಸ ಅಥವಾ ಶಾರೀರಿಕ ವಿಕಾಸಗಳ ಕಡೆಗೆ ಯಾರೂ ವಿಶೇಷ ಗಮನವನ್ನೇ ಕೊಡುತ್ತಿಲ್ಲ. ಬಲವಂತದಿಂದ ಇತರರ ಆಜ್ಞೆಯನ್ನೂ ಪಾಲಿಸುವದು, ಸತ್ಯ ಮೊದಲಾದಗುಣಗಳನ್ನು ಕಲಿಯಲು ಭಯ ಅಥವಾ ಪಾರಿತೋಷಕಗಳ ಶರಣು ಹೋಗುವುದು, ತೀರ ಅನುಪಯುಕ್ತವೂ, ಅನೀತಿ ಪೂರ್ಣವೂ ಆದ ವಿಚಾರ! ಇವುಗಳ ಆಶ್ರಯದಿಂದ ನಮ್ಮ ಬಾಲಕರನ್ನು ನೀತಿವಂತರಿಗೆ ಬದಲಾಗಿ ನೀತಿ ದ್ರೋಹಿಗಳನ್ನಾಗಿ ಮಾಡುತ್ತಿರುವೆವು.

ಸತ್ಯ-ಅಸತ್ಯ, ಒಳ್ಳೆಯದು – ಕೆಟ್ಟದು ಇವುಗಳ ವಿವೇಕವುಂಟಾದಾಗ ನ್ಯಾಯ ಅನ್ಯಾಯಗಳನ್ನರಿಯ ಬಲ್ಲವನಾಗಿ ಮನಸ್ಸು ಮಮತೆಯಿಂದ ಕೂಡಿದುದಾದಾಗ, ವಿಚಾರಗಳಲ್ಲಿ ವಿಶಾಲತೆಯುಂಟಾದಾಗ ಬುದ್ಧಿಯ ವಿಕಾಸಕ್ಕಿಂತ ಹಾನಿಯಾಗುವುದೇ ಹೆಚ್ಚು.

ಇಂದ್ರಿಯಗಳ ವಿಕಾಸವೆಂದರೇನೆಂಬುವನ್ನು ನಮ್ಮ ವಿದ್ಯಾಲಯಗಳು ಇನ್ನೂ ತಿಳಿದಿಲ್ಲ. ಇಂದ್ರಿಯಗಳು ಮನಸ್ಸಿನ ಕೇವಲ ಶಸ್ತ್ರಗಳು ಮಾತ್ರವೇ. ಇಂದ್ರಿಯಗಳ, ಇಂದ್ರಿಯಗಳ ಶಕ್ತಿಯ, ಅವುಗಳ ವೇಗ ಸಂಯಮಗಳ ಅಗತ್ಯಕ್ಕೆ ಕಾರಣವೇನೆಂದರೆ ನಾವು ಅವುಗಳ ಮೂಲಕ ಬಾಹ್ಯಜಗತ್ತನ್ನು ಅರಿಯಬಲ್ಲೆವು. ಮನಸ್ಸು ಇಂದ್ರಿಯಗಳ ಉಪಯೋಗವನ್ನು ಮಹಾಕಾರ್ಯಗಳಿಗೆ ಉಪಯೋಗಿಸಿಕೊಳ್ಳಬೇಕು. ಅಷ್ಟು ಸೂಕ್ಷ್ಮನಾಗಿರಬೇಕು ಅವುಗಳು.

ಣ್ಣಿನೆದುರಿನಲ್ಲಿರಬೇಕು. ಕಲಿಯುವವನಿಗೆ ವಿಷಯಗಳ ಜ್ಞಾನವು ಬೇಗ ಆಗುವಂತಿರಬೇಕು.

ಈ ರೀತಿ ಮಾಡಿದಲ್ಲಿ, ಲೇಖನ, ವಾಚನ, ಗಣಿತ, ಪ್ರಕೃತಿ ಪರಿಚಯ, ವಿಜ್ಞಾನ, ಕಲೆ, ಕುಶಲತೆ ಮೊದಲಾದ ವಿಷಯಗಳ ಶಿಕ್ಷಣವು ಈಗಿರುವಂತೆ ಸಂಕುಚಿತ ಅರ್ಥದಲ್ಲಿ ಆಗದೆ, ವಿಶಾಲವೂ ಪರಮ ವ್ಯಾಪಕವೂ ಆದ ಲಕ್ಷ್ಯವನ್ನೆದುರಿನಲ್ಲಿಟ್ಟುಕೊಂಡು, ಮುಂದೆ ಸಾಗುವುದು. ಆ ರೀತಿ ಆದರೆ, ಶಿಕ್ಷಣದ ದೃಷ್ಟಿ ಕೋಣವು ಕೇವಲ ಐಹಿಕವಾಗದೆ, ಅದಕ್ಕೆ ಬದಲಾಗಿ ಐಹಿಕ ಮತ್ತು ಪಾರಮಾರ್ಥಿಕವಾದ ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷಗಳನ್ನೂ ಹೊಂದಿ ಶಾಂತಿಯನ್ನು ಅನುಭವಿಸುವನು.

ಇಂದಿನ ಶಿಕ್ಷಣ.

ಈಗ ನಮ್ಮ ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣಾಲಯಗಳ ಲಕ್ಷ್ಯವು ಅದಿ ಭೌತಿಕವೇ ಆಗಿದ್ದು, ಅದು ತ್ಯಾಜ್ಯವಾಗಿದೆ. ಇಂದು ಕಲಿಸುವವರ ಅರ್ಥವು ತಿಳಿಯಲಿ, ತಿಳಿಯದೆ ಹೋಗಲಿ ಯಾವುದಾದರೊಂದು ವಿಷಯವನ್ನು ಕಂಠಪಾಠ ಮಾಡಿಸುವುದೇ ಆಗಿದೆ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೇ ಇಂದಿನ ಶಿಕ್ಷಣದ ಅಭಿಪ್ರಾಯವಾಗಿದೆ. ಇದು ಎಷ್ಟು ಕ್ಷುದ್ರವೂ, ಸಂಕುಚಿತವೂ ಆದ ಅರ್ಥ! ವಿದ್ಯಾಧ್ಯಯನದ ನಂತರ ಮನುಷ್ಯನು ಏನಾದರೂ ಜೀವಿಕೋಪಾರ್ಜನ ಮಾಡಬಲ್ಲಂತಾದರೆ, ವಿದ್ಯೆಯ ಸಮಾಪ್ತಿಯಾದಂತೆ ಭಾವಿಸುವರು. ಇದು ಸಂತೋಷ ಜನಕವಾದ ವಚನವಲ್ಲ.

ಶಿಕ್ಷಣದ ಲಕ್ಷ್ಯವು ಸ್ಪಷ್ಟವೂ, ಸುನಿಶ್ಚಿತವೂ ಆಗಿ, ಅದನ್ನು ಹೊಂದಲು, ಎಲ್ಲ ಉಚಿತ ಸಾಧನೆಗಳೂ ಇರುವಂತೆ, ಇದರಲ್ಲಿ ಪರಿವರ್ತನೆಯಾಗಬೇಕಾಗಿದೆ.

ಪರಿವರ್ತನೆಯ ಪ್ರಥಮಪಾದ.

ಈ ಪರಿವರ್ತನೆಯಲ್ಲಿ ಮೊದಲನೆಯದು ಬಾಲಕರ ಸನ್ಮಾನ. ಬಾಲಕನಲ್ಲಿರುವ ಅಂತಶ್ಶಕ್ತಿಯು ಅವನ ಶರೀರದಂತೆ ಅಲ್ಪವೂ ಅಸಹಾಯವೂ ಆದುದಲ್ಲದೆಂಬುವನ್ನು ನಾವು ಮರೆತಿರುವೆವು. ಬೀಜವು ತೀರ ಸಣ್ಣದಾಗಿದ್ದರೂ, ಅದರಲ್ಲಿ ಸಂಪೂರ್ಣ ವೃಕ್ಷವೇ ಸಮಾವೇಶವಾಗಿರುವದರಿಂದ ಬೀಜದ ಮಹತ್ವವು, ಫಲಕ್ಕಿಂತ ಯಾವ ರೀತಿ ಕಮ್ಮಿಯಾಗಿಲ್ಲವೋ, ಅದೇ ರೀತಿ ಬಾಲಕನಲ್ಲಿಯೂ ಭವಿಷ್ಯದಲ್ಲಿ ವಿಕಸಿತವಾಗುವ ವಿರಾಟ್ ಮನುಷ್ಯನ ಸಂಪೂರ್ಣ ಸತ್ವವು ಸಮಾವೇಶವಾಗಿದೆ ಯೆಂಬುವನ್ನು ಎಲ್ಲರೂ ಸ್ಮರಣೆಯಲ್ಲಿಟ್ಟಿರಬೇಕು. ನಾವು ನಮ್ಮ ಆತ್ಮಗೌರವವನ್ನು ಮರೆತಿರುವೆವಾದುದರಿಂದ, ನಮ್ಮ ಹೃದಯಗಳಲ್ಲಿ ಇಂದು ಬಾಲಕರ ವಿಚಾರದಲ್ಲಿ ತಿರಸ್ಕಾರ, ತುಚ್ಛತೆ, ಅವಹೇಳನೆ ಮತ್ತು ಅವಮಾನ ಆದಿಗಳ ಭಾವನೆಗಳಿವೆ. ಬಾಲಕನನ್ನು ಅವನ ದೇಹದಷ್ಟೇ ಚಿಕ್ಕವನೆಂದು ತಿಳಿದು ಅವನ ಶಿಕ್ಷಣ ವಿಷಯದಲ್ಲಿ ನಾವು ವಿಶೇಷ ಗಮನವನ್ನು ಕೊಟ್ಟಿರುವದಿಲ್ಲ. ಈಗ ಪ್ರಚಲಿತವಾಗಿರುವ ಶಿಕ್ಷಣ ಪ್ರಣಾಳಿಯಲ್ಲಿ ಮನುಷ್ಯನನ್ನು ತನ್ನ ಇಂದ್ರಿಯಗಳ ಮೂಲಕ ಸಂಚರಿಸುವ ಒಂದು ಶರೀರಧಾರಿ ಎಂಬ ಕ

ಬಲವಂತ ಮಾಘಸ್ನಾನ ಬೇಡ.

ಇಂದಿನ ಶಾಲೆಗಳಲ್ಲಿ ಕೊಡಲ್ಪಡುತ್ತಿರುವ ಸದಾಚಾರದ ವಿದ್ಯೆಯಂತೂ ನಿರರ್ಥಕವೆಂದು ಸಿದ್ಧವಾಗಿದೆ. ಮಹಾಪುರುಷರ ಜೀವನಚರಿತ್ರೆಗಳನ್ನು ತಿಳಿಸುವದರಿಂದ ಸದಾಚಾರ ವ್ಯಾಖ್ಯಾನಗಳನ್ನು ಕೊಡುವುದರಿಂದ ಅಥವಾ ಸದಾಚಾರಿಯಾಗದೆ ಹೋದವನಿಗೆ ಶಿಕ್ಷೆವಿಧಿಸುವದರಿಂದ ಅದಕ್ಕೆ ಭಯ ಅಥವಾ ಪುರಸ್ಕಾರವನ್ನು ತೋರಿಸುವದರಿಂದ, ಮನುಷ್ಯನಲ್ಲಿ ಅದುಉಂಟಾಗುವದಿಲ್ಲ. ಸ್ವಭಾವದಿಂದಲೇ ಮನುಷ್ಯನು ಸದಾಚಾರಪ್ರಿಯನು ಆದರೆ ಅವನನ್ನೂ ಸದಾಚಾರಿಯನ್ನಾಗಿ ಮಾಡಲುಪಯೋಗಮಾಡುತ್ತಿರುವ ಶಿಕ್ಷಣ ಪದ್ಧತಿಯಿಂದ ಅವನು ಅದಕ್ಕೆ ವಿರೋಧಿಯಾಗುವನು ಈ ಬಲವಂತ ಮಾಘಸ್ನಾನದಿಂದ ಇಂದು ಗುರುದ್ರೋಹ, ಪಿತೃದ್ರೋಹಗಳು ಸಮಾಜದಲ್ಲಿ ದಿನದಿನವೂ ವೃದ್ಧಿಯಾಗುತ್ತಿರುವವು.

ಪ್ರತಿಯೊಂದು ವಸ್ತುವೂ ತನ್ನ ವಿಕಾಸಕ್ಕಾಗಿ ಒಳ್ಳೆಯ ವಾತಾವರಣ, ಸ್ವಾಸಂಗ ಮತ್ತು ಅಭ್ಯಾಸವನ್ನು ಅಪೇಕ್ಷಿಸುವದು. ಸಾಹಾನುಭೂತಿ ಮತ್ತು ಸಂರಕ್ಷಣೆಯನ್ನು ಬಯಸುವದು. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಆತ್ಮವಿಕಾಸದ ಹೆಸರೇ ಇಲ್ಲದಂತಾಗಿದೆ. ಆತ್ಮಸಾಕ್ಷಾತ್ಕಾರಕ್ಕಾಗಿ, ಇಂತಿಂತಹ ಶಿಕ್ಷಣದ ವ್ಯವಸ್ಥೆಯಾಗಬೇಕು. ಎಂಬ ಅರಿವುಂಟಾದಲ್ಲಿ, ಅಂತಹುದನ್ನು ಪ್ರಾರಂಭದಿಂದಲೇ ಮಾಡುವದು ನಮ್ಮ ಕರ್ತವ್ಯ. ಆದರೆ ಇಂದಿನ ಶಿಕ್ಷಣವು ನಿಸ್ಸಾರವಾದುದು.

ಬಾಲಕರ ಶ್ವಾಸೋಚ್ಛ್ವಾಸಕ್ಕೆ ಶುದ್ಧವಾದ ಗಾಳಿಯು ಹೇಗೆ ಅಗತ್ಯವೋ, ಹಾಗೇ ಬಾಲಕರಿಗೂ ಆತ್ಮವಿದ್ಯೆಯು ಆಗತ್ಯವಿದೆ. ಆದರೆ ಆ ಗಾಳಿಯನ್ನು ನಾವು ಪಂಪುಗಳಿಂದ ಹೇಗೆ ಒಳಗೆ ಕಳುಹಿಸಲಾರೆವೋ ಅದೇ ರೀತಿ ಇದನ್ನು ಸಹ ಬಲವಂತದಿಂದ ಕಲಿಸಲಾಗುವದಿಲ್ಲ. ವಾತಾವರಣವೇ ಉತ್ತಮವಾದುದಾಗಬೇಕು.

ಗುರುವೇ ಶಿಕ್ಷಣದ ಸರ್ವಸ್ವಃ ಲಕ್ಷಣ.

ಗುರುವೇ ಸ್ವಯಂ ಒಂದು ವಾತಾವರಣದಂತೆ ಆತನ ಜ್ಞಾನವು ಆತ್ಮ ಲಕ್ಷ್ಮಿಯಾಗಿದ್ದು, ಕ್ರಿಯೆಯು ಕಲ್ಯಾಣಕಾರಿಯಾಗಿರಬೇಕು. ಗುರುವಾಗುವುದು ಬಹಳ ಕಠಿಣವಾದ ಕೆಲಸ. ಏಕೆಂದರೆ ಅವನು ಸ್ವಯಂ ಬಾಲಕರ ಹಿತದ ದೃಷ್ಟಿಯಿಂದ ವಾತಾವರಣದ ರೂಪೇ ಆಗಬೇಕಾಗುವದು.

ಆದುದರಿಂದ ಶಿಕ್ಷಕನ ಯಾವುದೇ ಮತವಾಗಲೀ, ಪಂಥವಾಗಲಿ ಇರುವದಿಲ್ಲ. ಸ್ಥಾನ, ಕಾಲದ ಬಾಧೆಯಿರುವುದಿಲ್ಲ. ಸಮಾಜ ರಾಷ್ಟ್ರಗಳ ಕಡೆಗೆ ಅವನ ದೃಷ್ಟಿ ಇರುವುದಿಲ್ಲ. ಆತನ ದರ್ಶನವು ವಿರಾಡ್ದರ್ಶನವಾಗಿಯೂ, ಜ್ಞಾನವಿಜ್ಞಾನವು ಪರಮ ಜ್ಞಾನವಾಗಿಯೂ, ಧ್ಯೇಯವು ಮುಕ್ತಿಯ ಉಪಾಸನೆಗೆ ಅನುಕೂಲವಾಗಿಯೂ ಇರುವಂತಹ ವಾತಾವರಣವನ್ನುಂಟುಮಾಡಿಕೊಳ್ಳಬೇಕಾಗಿರುವದು.

'ವಿ. ಕ.'

———

ಯುದ್ಧದ ಬಗ್ಗೆ ರಾಜೇಂದ್ರ ಪ್ರಸಾದರ ಅಭಿಪ್ರಾಯ.

ಯೂರೋಪಿನಲ್ಲಿ ನಡೆಯುತ್ತಿರುವ ಪ್ರಚಂಡ ಯುದ್ಧ ಪರಿಣಾಮದಿಂದಾಗಿ ಅನುಕ್ರಮವಾಗಿ ರಾಷ್ಟ್ರಗಳು ತಮ್ಮ ಸ್ವಾತಂತ್ರ್ಯವನ್ನು ಕಳಕೊಂಡು ಬಲಾಢ್ಯರ ಪದತಲದಲ್ಲಿ ಹೊರಳಾಡಬೇಕಾಗುವಂಥ ಪ್ರಸಂಗವು ತೀರಾ ಹೃದಯದ್ರಾವಕವಿದೆ. ಕಳೆದ ಕೆಲವು ದಿನಗಳ ಅಂತರರಾಷ್ಟ್ರೀಯ ಅನಿರೀಕ್ಷಿತ ಘಟನೆಗಳಿಂದಾಗಿ ನನ್ನ ಮನಸೇ ತಲ್ಲೋಲಕಲ್ಲೋಲವಾಗಿದೆ. ನಿಜವಾಗಿಯೂ ನಮಗೆ ಬ್ರಿಟಿಷರ ಧೋರಣೆಯಲ್ಲಿ ಮಮತೆ ಇಲ್ಲ. ಅಲ್ಲದೆ ನಮ್ಮ ಭಾರತ ಭೂಮಿಯ ವಿಚಾರದಲ್ಲಿ ಇಂಗ್ಲೆಂಡು ಯಥೋಚಿತ ವರ್ತಿಸಲಿಲ್ಲವೆಂಬುವುದೂ ನಮಗೆ ಗೊತ್ತಿರುವದೇ. ಆದರೂ ಹಿಟ್ಲರ್ ತತ್ವದ ಪಾಶವೀ ಕೃತ್ಯಗಳು ಜಯ ಹೊಂದುವುದಕ್ಕಿಂತ ಮಿತ್ರ ರಾಷ್ಟ್ರಗಳಿಗೆ ಜಯ ದೊರೆಯಲೆಂದು ನಾನು ಆಶಿಸುತ್ತೇನೆ. ಇಂಗ್ಲೆಂಡು ಭಾರತದ ನ್ಯಾಯ ಬದ್ಧವಾದ ಕೇಳಿಕೆಗಳನ್ನು ಸಲ್ಲಿಸಲು ಹಿಂದೆಗೆಯುತ್ತಿದ್ದರೂ, ಜಗತ್ತಿನ ವಿಚಾರಗಳ ಬಗ್ಗೆ ನಾವು ಕಣ್ಣು ಮುಚ್ಚಿ ಕೂಡುವದು ಸಾಧ್ಯವಿಲ್ಲ. ಕಾಂಗ್ರೆಸು ಅಂತರರಾಷ್ಟ್ರೀಯ ವಿಚಾರವನ್ನು ಚೆನ್ನಾಗಿ ಗಮನಕ್ಕೆ ತೆಗೆದುಕೊಳ್ಳಬೇಕು. ಮಾನವನಿಗೆ ಪ್ರಧಾನವಾದ ಸ್ವಾತಂತ್ರ್ಯವನ್ನೇ ಕಳಕೊಂಡ ಪೋಲೆಂಡು, ಫಿನ್ಲೆಂಡು, ನಾರ್ವೆ, ಡೆನ್ಮಾರ್ಕ್, ಹಾಲೆಂಡು, ಬೆಲ್ಜಿಯಂ, ಜೆಕೊಸ್ಲೊವಾಕಿಯಾ ಮೊದಲಾದ ರಾಷ್ಟ್ರಗಳಿಗೆ ನಮ್ಮ ಪೂರ್ಣ ಸಹಾನುಭೂತಿ ಇದೆ.

ಬಾತ್ಮಿ.

ಕೊಡಗರು ಅರಬಿಯರೇ?

ಲೇ:- ಐ. ಮಾ. ಮು.

ಲೇಖಾಂಕ ೧.

ಕೊಡಗರು ಅರಬಿಯರೆಂಬ ವಿಷಯದಲ್ಲಿ ಹೊರಬಿದ್ದ ಒಂದು ಚಿಕ್ಕ ಗ್ರಂಥದ ಪರಿಚಯವು ಈಗಾಗಲೇ ನನಗಾಯಿತು. ಅದನ್ನು ಬರೆದ ನನ್ನ ಮುಸ್ಲಿಂ ಮಹಾನುಭಾವರು ಲೋಕದಲ್ಲಿ ಸರ್ವರಿಗೂ ಸ್ವಂತ ಅಭಿಪ್ರಾಯ ಕೊಡುವ ಹಕ್ಕಿದೆ ಎಂಬ ಶರತ್ತಿನ ಮೇರೆ ಈ ಗ್ರಂಥವನ್ನು ರಚಿಸಿರುವರು. ಕೊಡಗು ಅರಬಿಯರೆಂದು ಹೇಳುವ ನೆವದಲ್ಲಿ ಇತರ ಅನೇಕ ವಿಷಯಗಳನ್ನು ಅಸಂಬಂಧವಾಗಿ ಸೇರಿಸಿರುವರು. ಆದರೆ ನನಗೆ ತಿಳಿದ ಕೆಲವು ವಿಷಯದಲ್ಲಿ ಅವರು ಬರೆದು ತಿಳಿಸಿದುವುಗಳು ಅರ್ಥವಿಲ್ಲದುವುಗಳಾಗಿ ತೋರುವುದರಿಂದ ನಾನು ನನ್ನ ಮಟ್ಟಿಗೆ ಯಥಾರ್ಥವಾದುದೆಂದು ತಿಳಿದು ಸ್ವಲ್ಪ ಬರೆಯಲಿಚ್ಛಿಸುತ್ತೇನೆ.

'ಕೊಡಗು' ಎಂಬ ಹೆಸರು ಯಾವ ಕಾರಣದಿಂದ ಬಂತೆಂಬುದು ಇಲ್ಲಿಯವರಿವಿಗೂ ನಿರ್ಧಾರವಾಗಿಲ್ಲ. ಅನೇಕ ಮಹನೀಯರ ಅನೇಕ ಅಭಿಪ್ರಾಯಗಳಿದ್ದರೂ ನಂಬಲರ್ಹವಾದದ್ದು ಒಂದೂ ಅವರೆಡೆ ತೋರುವದಿಲ್ಲ. ಇದರ ಜತೆಗೆ ಸ್ವಂತ ಅಭಿಪ್ರಾಯವನ್ನು ಕೊಡುವ ಹಕ್ಕಿನಿಂದ ಹೇಳಿದವರು ಕುರ್ದಿಸ್ಥಾನದ ಜನರು ಬಂದು ನೆಲಸಿದ್ದರಿಂದ ಆ ಹೆಸರು ಬಂತೆಂದು ಹೇಳುತ್ತಾರೆ. ಇನ್ನೊಂದೆಡೆಯಲ್ಲಿ ಇವು ನನ್ನ ಸ್ವಂತ ಅಭಿಪ್ರಾಯವಲ್ಲ' ವೆಂದೂ ಹೇಳುತ್ತಾರೆ. ಅದಂತಿರಲಿ. 'ಕುರ್ದ್' ಎಂಬ ಶಬ್ದದಿಂದ 'ಕೊಡಗು' ಎಂದೂ, 'ಕುರ್ದರು' ಎಂಬುದರಿಂದ 'ಕೊಡಗರು' ಆದದ್ದು ಸ್ಪಷ್ಟವಾದ್ದರಿಂದ ಕೊಡಗರು ಅರಬಿಸ್ಥಾನ ದೇಶದ ಕುರ್ದೀಸ್ಥಾನ್ ಎಂಬ ಜಿಲ್ಲೆಯವರೆಂಬುದು ಸಂಪೂರ್ಣ ನಿಜವಾಗಿದೆ' ಎಂದು ಅವರು ಬರೆದಿರುತ್ತಾರೆ. ಇದಕ್ಕೆ ಯಾವುದೊಂದು ಶಾಸನ ಸನ್ನದುಗಳಿಲ್ಲದೆ, ಕಲ್ಪನೆಯಲ್ಲಿ ಪ್ರಾವೀಣ್ಯನಿರುವದರಿಂದ ಸಂಪೂರ್ಣ ನಿಜವೆಂದು ತಮ್ಮ ಮನಸ್ಸಿಕ್ಕೆ ಒಪ್ಪಿಬಿಟ್ಟಿದ್ದಾರೆ. ಇವರು ಈ ವಿಷಯಕ್ಕೆ ಕೊಟ್ಟ ಆಧಾರವಿಷ್ಟೇ ಆಗಿದೆ. 'ದಿ. ಬ. ಕೆ. ಚಂಗಪ್ಪನವರಿಗೆ ಶ್ರೀರಂಗಪಟ್ಟಣದಲ್ಲಿ ಯಾರೋ ಸಾಹೇಬರು ಕೊಟ್ಟ ಯಾವುದೋ ಒಳ್ಳೆ ಬೈಂಡಿನ ಪುಸ್ತಕದಲ್ಲಿ ಈ ಕೊಡಗರ ವಿಷಯಗಳೆಲ್ಲಾ ಇದೆ ಯಂತೆ', ಎಂದು. ಈ ಪುಸ್ತಕ ಯಾರು ಬರೆದದ್ದು, ಅದರಲ್ಲೇನು ವಿಷಯಗಳಿವೆ ಎಂಬುದು ಹೊರಪಡಿಸಲಿಲ್ಲ. ಅಥವಾ ಆ ಪುಸ್ತಕವನ್ನು ಅವರು ನೋಡಲಿಲ್ಲವೋ ಏನೋ! ಹೇಗೂ ಕುರ್ದರು ಎಂಬುದರಿಂದ ಕೊಡಗರು ಆಯಿತೆಂಬುದು ಆ ಪುಸ್ತಕದಿಂದ ಸಮರ್ಥಿಸಲ್ಪಟ್ಟಿದೆ. ಅದಕ್ಕೆ ಹೆಸರಾದರೋ 'ಹಸರು ಬೈಂಡಿನ ಬುಕ್ಕ್' ಎಂದಂತೆ.

ಬರೇ ಕಲ್ಪನೆ ಮಾತ್ರದಿಂದಲೇ ಇನ್ನೆಷ್ಟೋ ವಿಧದಿಂದ ಇನ್ನಾವ ದೇಶವನ್ನಾಗಲೀ, ಉಡಿಗೆ ತೊಡಿಗೆಗಾಗಲೀ, ಗಡ್ಡ ಮೀಸೆಗಾಗಲೀ ಹೋಲಿಸಿ ಹೇಳಿಬಿಡಬಹುದು. ಅದು ಬಹು ಕಷ್ಟವೇನೂ ಇಲ್ಲ. ಆದರೆ ಪ್ರತಿಯೊಂದು ದೇಶದ ಹೆಸರು ಯಾ ಗ್ರಾಮದ ಯಾ ಕುಟುಂಬದ ಹೆಸರುಗಳ ಪದಗಳಿಗೆ ಪೂರ್ವಿಕರು ಬರೀ ಸಿಕ್ಕಿದ ಹಾಗೆಲ್ಲಾ ಹೆಸರಿಕ್ಕದೆ ಅರ್ಥಗರ್ಭಿತವಾದ ಪದ ಸಂಯೋಜನೆಯಿಂದಲೇ ಹೆಸರು ಕೊಡಲಾಗಿರುವದೆಂದು ನಾವು ನಂಬಬೇಕಾಗಿದೆ. ಪ್ರತಿಯೊಂದು ಹೆಸರಿನಲ್ಲೂ ಅನೌಚಿತ್ಯ ಇದೆಯೆಂದು ನಂಬಿದ ನಾನು 'ಕೊಡಗು' ಎಂಬ ಹೆಸರನ್ನೇ ಅಲ್ಲದೆ ಕೊಡಗಿನ ನೆರೆಯೂರುಗಳಿಗೆ ಆ ಹೆಸರು ಹೇಗಾಗಿರಬಹುದೆಂದು ತಿಳಿಸಲೆತ್ನಿಸುತ್ತೇನೆ. 'ಮಲೆ' ಎಂದರೆ ಮಲೆನಾಡು 'ಯಾಳ' ಎಂದರೆ 'ಆರಂ' ಎಂಬುವುದರಿಂದ ಬಂದು ಗುಡ್ಡ ಪ್ರದೇಶವೆಂದರ್ಥವಾಗುವುದು. ಈ ರೀತಿ ಮೈಸೂರಿಗಾದರೋ ಪೂರ್ವದಿಂದಲೇ ಮಹಿಷ್ಮತಿನಗರ ಮಹಿಷಮಂಡಲ, ಎಂದು ಕರೆಯುತ್ತಿದ್ದರು. ಕಾರಣವಾದರೋ ಎಮ್ಮೆಗಳು ಬಹುವಾಗಿ ಇರುವ ಸ್ಥಳವೆಂಬರ್ಥದಿಂದ. ಅದೇ ರೀತಿ ತಮಿಳಿನಲ್ಲೂ 'ಎರ್ಮೆಪುರ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಅದೇ ಈಗ ಸಂಕ್ಷೇಪವಾಗಿ ಮಹಿಷಾರ್ ಅನಂತರ ಮೈಸೂರೆಂದಾಯಿತು. ನಮ್ಮ ನೆರೆ ಜಿಲ್ಲೆಯಾದ ದಕ್ಷಿಣ ಕನ್ನಡವು ಬಹು ಹಿಂದಿನಿಂದಲೇ ಕನ್ನಡ ದೇಶವೆಂದು ಕರೆಯಲ್ಪಟ್ಟು ಮೈಸೂರು ಇತ್ಯಾದಿ ದೇಶದ ಭಾಗಗಳೆಲ್ಲಾ ಅದಕ್ಕೆ ಸೇರಿಸಲ್ಪಟ್ಟು ವಿಸ್ತಾರವಾಗಿತ್ತು. ಈ ರೀತಿ ದೇಶದ ಹೆಸರು ಆಯಾಯ ಸಂದರ್ಭಕ್ಕನುಗುಣವಾಗಿ ಬೀಳುವುದಲ್ಲದೆ ಇತರ ಹೆಸರುಗಳಿಗೆ ಸರಿ ಹೋಲಿಸಿ ಹೇಳುವುದೆಂದರೆ ಬಹು ಅಪಕೃತವಾದುದೆಂದೇ ಹೇಳಬೇಕಾಗಿದೆ. ಅದಂತಿರಲಿ, ಪುರಾತನ ದ್ರಾವಿಡರ ಕಾಲದಿಂದಲೇ ರೂಢಿಯಲ್ಲಿದ್ದಂತೆ 'ಕುಡ' ಎಂದರೆ ಪಶ್ಚಿಮ, 'ಅಗಂ' ಎಂದರೆ ಒಳಭಾಗ ಎಂಬರ್ಥವಿದೆ. ಕಿಟ್ಟೆಲ್ ಶಬ್ದ ಕೋಶದಲ್ಲಿ ಕುಡ ಎಂದರೆ ಬೆಟ್ಟಪ್ರದೇಶವೆಂಬರ್ಥವಿದೆ. ಹೇಗೂ ಈ ಶಬ್ದಗಳ ಸಂಯೋಜನೆ ಹೇಗಾಯಿತೆಂದರೆ ಕುಡ-ಅಂಗಂ ಅಲ್ಲಿಂದ ಕುಡಾಗಂ, ಅನಂತರ ಕೊಡಗು ಎಂದಾಯಿತು. ಇದು ವ್ಯವಹಾರ ರೂಪದಿಂದುಂಟಾದ ಸಂಪೂರ್ಣ ಅರ್ಥಕೃತವಾದ ಹೆಸರಾಗಿದೆ. ಕುಡನಾಡು ಎಂದೂ ಹೀಗೇ ಕರೆವರು. ಇದಕ್ಕೆ ಕುಡಿಯರನಾಡು ಎಂದು ತಪ್ಪಭಿಪ್ರಾಯವನ್ನು ತಂದುಕೊಂಡಿದ್ದಾರೆ. ಆರ್ಯ ಸಂಸ್ಕೃತಿಯನ್ನು ಹೊಂದದ ಹಿಂದಿನ ದ್ರಾವಿಡರ ಭಾಷಾ ರೂಪ ಪ್ರಕಾರ ಈ ಕುಡಾಗಂ ಎಂದಿದ್ದು 'ಕೊಡಗು' ಆಯಿತೆಂಬುವುದಕ್ಕೆ ಸಂದೇಹವೇ ಇಲ್ಲ. ಇದು ಪ್ರಸಿದ್ಧ ವಿದ್ವಾಂಸರ ನೈಜವಾದ ಮತವಾಗಿದೆ.

ಆದ್ದರಿಂದ 'ಕುರ್ದ್' ಎಂಬ ಶಬ್ದದಿಂದ 'ಕೊಡಗು' ಎಂಬ ಹೆಸರು ಆಗಿರಲಿಕ್ಕಿಲ್ಲ. ಇವರು ಇದಲ್ಲದೆ ಬೆಟ್ಟಪ್ರದೇಶವಾದ್ದರಿಂದ ಬೆಟ್ಟ ಜನರು ಎಂದು ಕರೆಯಬಹುದಿತ್ತು ಎಂಬ ಅಪಕೃತ ಮಾತನ್ನೂ ಹೇಳಿದ್ದಾರೆ. ಈಗಿನ ಆಂಗ್ಲೇಯರ ಮತದಂತೆ 'ಕುರ್ಗ್' ಎಂಬುದೇ ರೂಢಿಯಲ್ಲಿದ್ದು ಬಿಟ್ಟಿದ್ದರೆ ಇವರಿಗೆ ಅದು ಒಂದು ಆಧಾರದಂತೆ ಸಾಧಿಸಬಹುದಿತ್ತು. ಬಿಂಡಿಕವಾಗಿಯೂ ಅವರು ಹಾಗೇ ಹೇಳುತ್ತಿದ್ದರು. ಸುದೈವವಶಾತ್ 'ಕೊಡಗು' ಎಂಬ ಹೆಸರು ಈ ಪತ್ರಿಕೆ ದೆಸೆಯಿಂದಾಗಿ ಇಷ್ಟು ಉಳಿದುಕೊಂಡಿದೆ ಎಂದು ಹೇಳಬಹುದು. ಈ ಹೆಸರಿನ ಮಟ್ಟಿಗೆ ಅಬ್ದುಲ್ ಗಫೂರರ ಅಭಿಪ್ರಾಯ ಸಂಪೂರ್ಣ ತಪ್ಪೇ ಆಗಿದೆ. ಅಲ್ಲದೆ ಇತರ ಅನೇಕ ಗ್ರಂಥ ಲೇಖನಗಳಲ್ಲೂ ಹಲವು ಅಭಿಪ್ರಾಯಗಳಿರುವದು ಸರಿಯಲ್ಲವೆಂದೇ ನನ್ನ ಭಾವನೆಯಾಗಿದೆ.

ಕಣ್ಣು ಮುಚ್ಚಾಲೆ ಆಟವೇ?

ಕೆಲವು ದಿನಗಳ ಹಿಂದೆ ಫಾರೆಸ್ಟ್ ಇಲಾಖೆಯಲ್ಲಿ ಖಾಲಿ ಇರುವ ಒಂದು ಫಾರೆಸ್ಟರ ಸ್ಥಳಕ್ಕೆ ಅರ್ಜಿ ಬರಕೊಳ್ಳಬಹುದೆಂದು, 'ಕೊಡಗು' ಪತ್ರಿಕೆಯಲ್ಲು ಪ್ರಕಟಿಸಿದ್ದರ ಮೇರೆ 14 ಜನರು ಅರ್ಜಿ ಬರಕೊಂಡಿದ್ದರೆಂತಲೂ, ಅವರನ್ನೆಲ್ಲಾ ಚೀಫ್ ಫಾರೆಸ್ಟ್ ಆಫೀಸರು ಮತ್ತು ಅಸಿಸ್ಟಂಟ್ ಕಮಿಷನರ್ ಸಾಹೇಬರವರು ಭೇಟಿಯಿಂದ ಅವರ ಪೈಕಿ 10 ಜನರನ್ನು ಆರಿಸಿದರೆಂತಲೂ ತಿಳಿಯುತ್ತೇವೆ. ಹೀಗೆ ಆರಿಸಿ ಬಂದವರಿಗೆ ಶಾರೀರಿಕ ಹಾಗೂ ಮಾನಸಿಕ ಪರೀಕ್ಷೆಗಳವೆಯೆಂತಲೂ, ಶಾರೀರಿಕ ಪರೀಕ್ಷೆಗೆ 10 ಮೈಲು ಓಟವೂ, ಬರವಣಿಗೆ ಪರೀಕ್ಷೆಗೆ ಲೆಕ್ಕ ಪರೀಕ್ಷೆಯನ್ನೂ ಇಟ್ಟಿದ್ದರೆಂದೂ ತಿಳಿಯುತ್ತೇವೆ. ಆದರೆ ಈ ಓಟದ ದಿನ ಫಾರೆಸ್ಟ್ ಇಲಾಖೆಯಲ್ಲು 11 ವರ್ಷ, 5 ವರ್ಷ ಮತ್ತು 3 ತಿಂಗಳು ಚಾಕರಿಯಲ್ಲು ಇರುವ ಮೂವರಿಗೆ ಓಡುವ ತೊಂದರೆ ಕೊಡಲಿಲ್ಲವಂತೆ. ಯಾವ ಕಾರಣದಿಂದ ಇವರನ್ನು ವಿನಾಯಿಸಿದರೆಂದು ಗೊತ್ತಾಗುವದಿಲ್ಲ. ಓಟವಾದ ಕೂಡ್ಲೆ ಓಡಿದವರು ಡಾಕ್ಟರರಿಂದ ಪರೀಕ್ಷಿಸಲ್ಪಟ್ಟರಂತೆ. ಲೆಕ್ಕ ಪರೀಕ್ಷೆಗೆ ಎಲಿಮೆಂಟರಿ ಲೆಕ್ಕ ಹಾಕುವರೆಂದು ಹೇಳಿ ಆಫ್ಷನಲ್ ಲೆಕ್ಕವನ್ನು ಮಿಶ್ರಮಾಡಿರುವರಂತೆ. ಈ ಪರೀಕ್ಷೆಗೆ ಓಟದಲ್ಲಿ ಆರಿಸಲ್ಪಟ್ಟ 5 ಜನರೂ ಮತ್ತು ಇಲಾಖೆಯಲ್ಲು 3 ತಿಂಗಳ ಚಾಕರಿಯಲ್ಲಿರುವ ಒಬ್ಬರು ಕೂಡು ಲೆಕ್ಕದಲ್ಲು 1 ನೆಯದಾಗಿ ಮಾರ್ಕು ತೆಗೆದ ಇಲಾಖಾದಾರರನ್ನು ಚಾಕರಿಗೆ ಆರಿಸಿರುವರೆಂದು ತಿಳಿಯುತ್ತೇವೆ.

ಈ ಮೇಲಿನ ಸಂಗತಿಗಳನ್ನು ಚೆನ್ನಾಗಿ ಆಲೋಚಿಸಿದರೆ ಮೊದಲೇ ಒಬ್ಬನ ಮೇಲೆ ಗುರಿಯಿಟ್ಟುಕೊಂಡು ಜನರ ಕಣ್ಣಿಗೆ ಮಣ್ಣು ಎರಚಲು ಪತ್ರಿಕೆಯಲ್ಲಿ ಪ್ರಕಟಿಸಿದರೆಂದು ಯಾರಿಗೆ ತಾನೆ ತಿಳಿಯದಿರದು. ಬಹುಶಃ ಪರೀಕ್ಷೆಗಳಲ್ಲಿ 1 ನೆಯವರಾದವನ್ನು ಆರಿಸುವರೆಂದರೆ ಈಗ ಆರಿಸಿದ್ದು ಸರಿಯಾಯಿತ್ತೋ? ಒಂದು ಪರೀಕ್ಷೆಗೆ ಸೇರದೆ ಒಂದಕ್ಕೆ ಮಾತ್ರ ಸೇರಿ ಮುಂದೆ ಬಂದವರನ್ನು ಆರಿಸಿದರೆಂದರೆ ಇವರಿಗಿಂತ ಹೆಚ್ಚು ಶ್ರಮ ತೆಗೆದುಕೊಂಡು 10 ಮೈಲು ಓಟದಲ್ಲಿ ಮುಂದೆ ಬಂದವರನ್ನು ಯಾಕೆ ಆರಿಸಲಿಲ್ಲ. ಒಂದು ವೇಳೆ ಇಲಾಖೆಯಲ್ಲು ಕೆಲಸ ಮಾಡಲು ಲೆಕ್ಕದಲ್ಲಿ ಮುಂದೆ ಬಂದವರೆ ಅರ್ಹರು ಎಂದಾದರೆ ಓಟಕ್ಕೆ ಮುಂಚೆ ಎಲ್ಲಾ ಅರ್ಜಿದಾರರಿಗೂ ಒಟ್ಟಾಗಿ ಯಾಕೆ ಲೆಕ್ಕ ಪರೀಕ್ಷೆ ಇಡಲಿಲ್ಲ.' ಶಾರೀರಿಕ ಸ್ಪರ್ಧೆಯ ಕಣ್ಣು ಮುಚ್ಚಾಲೆ ಯಾಕೆ? ಇಲಾಖಾದಾರರಲ್ಲಿ ಒಬ್ಬನಿಗೆ ಕೊಡಬೇಕೆಂದು ಇದ್ದಿದ್ದರೆ ಯಾವ ಕಾರಣದಿಂದ ಪತ್ರಿಕೆಯಲ್ಲು ಪ್ರಕಟಿಸಿದ್ದು.'

ದಯಮಾಡಿ ಸಂಬಂಧಪಟ್ಟ ಅಧಿಕಾರಿಗಳು ಜನರ ತಿಳುವಳಿಗೆ ಬಗ್ಗೆ ವಿವರವನ್ನು ಪತ್ರಿಕೆಯಲ್ಲು ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಇಲ್ಲದೆ ಈ ಮೇರೆ ಈಗ ಆರಿಸಿದ್ದು ಖಂಡಿತವಾಗಿಯೂ ನ್ಯಾಯವಾದುದಲ್ಲವಾದ್ದರಿಂದ ಪುನಹ ಮುಂಚಿನ ಎಲ್ಲಾ ಅರ್ಜಿದಾರರನ್ನು ಎರಡು ಪರೀಕ್ಷೆಗೂ ಒಳಪಡಿಸಿ ಎರಡರಲ್ಲಿಯೂ ಯೋಗ್ಯನೆಂಬುದಾಗಿ ಕಂಡು ಬಂದವರನ್ನು ಆರಿಸಬೇಕೆಂದು ಕೋರುತ್ತೇನೆ.

'ಅರ್ಜಿದಾರನ ತಂದೆ.'

ಮಾರಾಟಕ್ಕಿದೆ.

ವೀರಾಜಪೇಟೆನಾಡು ಮೈತಾಡಿ ಗ್ರಾಮದ ಒಕ್ಕಲಿಗರ ಸಿಂಗೇಗೌಡ್ರ ಮಗ ದೇವಣ್ಣನ ಹೆಸರಿನಲ್ಲಿ ಜಮಾಬಂದ ನಡೆದು ಬರುವ ಕುಳ ನಂ. 38ರ ಸಾಗಿನ ಸ. ನ. 150/1ರ 16.70 ಏಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ತಲೆ ತೋಟದ 3. 90 ಯೇಕ್ರೆಯ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕಿತ್ತಲೆ ತೋಟದ .80 ಸೆಂಟಿನ ಪೈಕಿ 64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಏಕ್ರೆಯ ಬಾಣೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತಲೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯಸ್. ದೇವಣ್ಣ,
ಮೈತಾಡಿಗ್ರಾಮ,
12-10 ಮೂರ್ನಾಡು.

ನಿಜ ಶಿಕ್ಷಣದ ಸ್ವರೂಪವೇನು?

ಶಿಶುವು ಜನ್ಮಿಸಿದಾಗಿನಿಂದಲೇ, ಅದರ ಶಿಕ್ಷಣವೂ ಸಹ ಪ್ರಾರಂಭವಾಗುವುದೆಂದು ಜನರು ಹೇಳುವರು. ಆದರೆ ಇದು ಸಂಪೂರ್ಣವಾಗಿ ಸತ್ಯವಲ್ಲ. ಏಕೆಂದರೆ ಪೂರ್ವ ಜನ್ಮ ಪುನರ್ಜನ್ಮಗಳಲ್ಲಿ ನಂಬಿಕೆ ಇರುವವರು ಮನುಷ್ಯನ ಆತ್ಮವು ಯುಗಯುಗಗಳಿಂದಲೂ ಪ್ರಗತಿ ಹೊಂದುತ್ತ ಬರುತ್ತಿರುವುದೆಂದೇ ಹೇಳುವರು. ಈ ದೃಷ್ಟಿಯಿಂದ ವಿಚಾರಮಾಡಿದರೆ, ಬಾಲಕರ ಶಿಕ್ಷಣದ ಆರಂಭವು ಅವರ ಜನ್ಮಕ್ಕೆ ಮೊದಲೇ ಏಕೆ ಜನ್ಮ ಜನ್ಮಾಂತರದಿಂದಲೂ ಆಗಿ ಹೋಗಿ ಅವರಲ್ಲಿ ಕ್ರಮವಾದ ಉನ್ನತಿಯಾಗುತ್ತಲೇ ಇರುವುದು. ಇರಲಿ.

ಶಿಕ್ಷಣವೆಂದರೆ ಮಾನವ ಸರ್ವಾಂಗಗಳ ವಿಕಾಸ. ವಿಕಾಸವೆಂದರೆ, ಶಾರೀರಿಕ ಇಂದ್ರಿಯಗಳ, ಮನಸ್ಸಿನ, ಮನುಷ್ಯನ ಹೃದಯಗಳಲ್ಲಿ ನೆಲೆಸಿರುವ ಶುಭಭಾವನೆಗಳ ಮತ್ತು ಇತರ ಎಲ್ಲ ಶಕ್ತಿಗಳ ಉತ್ತರೋತ್ತರ ವೃದ್ಧಿ ಅವುಗಳ ವಿಸ್ತಾರ ಮತ್ತು ಪರಿಪೂರ್ಣತೆ.

ವಿಕಾಸದ ಈ ಕ್ರಿಯೆಯು ಆತ್ಮದಂತೆ ಸ್ವಯಂಭುವೇ ಆಗಿದೆ. ಅಂದರೆ ವಿಕಾಸವು ಮನುಷ್ಯನ ಪ್ರವೃತ್ತಿಯಲ್ಲಿ ಸಹಜವೂ ಸ್ವಾಭಾವಿಕವೂ ಆಗಿರುವದು. ವಿಕಾಸವನ್ನು ವಿರೋಧಿಸುವುದು ಅಥವಾ ದಮನಮಾಡುವದು. ಈ ಪ್ರಕೃತಿಗೆ ವಿರೋಧವಾದುದು.

ಶಿಕ್ಷಣದ ಆ ಯೋಜನೆ ಮತ್ತು ಪ್ರಬಂಧಗಳನ್ನು ಮಾಡುವ ಶಕ್ತಿಗಳು ಮನುಷ್ಯನಿಗೆ ಅನುಕೂಲ ಪರಿಸ್ಥಿತಿಯನ್ನುಂಟು ಮಾಡಿದರೆ, ಅವನ ಸರ್ವಾಂಗೀಣ ವಿಕಾಸವಾಗುವಂತೆ ಸಹಾಯಮಾಡಿದರೆ, ವಿಕಾಸವು ಶೀಘ್ರದಲ್ಲಿ ಆಗುವುದು. ಅವನು ಪುಷ್ಟನಾಗಿ ಅವನ ಲಕ್ಷ್ಯವು ಅವನ ಉತ್ತರೋತ್ತರ ವೃದ್ಧಿಯಲ್ಲಾಗಿ ಆತ್ಮ ಸಾಕ್ಷಾತ್ಕಾರವು ಬೇಗನೆ ಆಗುವುದು.

ಈಗಿನ ಕಾಲದಲ್ಲಿ ಲೋಕ ಶಿಕ್ಷಣದ ಈ ವಿಧಾನವನ್ನು ಸಿದ್ಧಾಂತ ರೀತಿಯಲ್ಲಿ ಪ್ರಾಯಶಃ ಎಲ್ಲರೂ ಮರೆತಿರುವರು. ಈ ಕಾರಣದಿಂದಲೇ ಶಿಕ್ಷಣದ ಅರ್ಥವು ಬಹಳ ಸಂಕುಚಿತವಾಗಿ ಹೋಗಿದೆ. ಇದರಿಂದ ಮನುಷ್ಯನು ತನ್ನನ್ನು ತಾನು ಅರಿಯಲು ಅಗತ್ಯವಿರುವ ಆವಶ್ಯಕತೆಗಳು ಅಪ್ರಾಪ್ತವಾಗಿವೆ. ಶರೀರದ ಇಂದ್ರಿಯಗಳ, ಬುದ್ಧಿಯ, ನಾಗರೀಕತೆಯ ವಿಕಾಸಕ್ಕೆ ಮನುಷ್ಯನು ರಾಷ್ಟ್ರದ ಉತ್ತಮ ಅಂಗವಾಗಲಿಕ್ಕೂ, ಮನುಷ್ಯ ಧರ್ಮವನ್ನು ಪಾಲನೆ ಮಾಡಿಕೊಳ್ಳುವದಕ್ಕೂ ಈ ವ್ಯವಸ್ಥೆಯು ಅಪೂರ್ಣವಾಗಿದೆ. ಯಾವುದನ್ನು ಹೊಂದಿ ಮನುಷ್ಯನು ಮುಕ್ತಿ ಮಾರ್ಗದ ಪಥಿಕನಾಗುವನೋ, ಅದೇ ವಿಕಾಸದ ಸಂಪೂರ್ಣ ವ್ಯವಸ್ಥೆಯು.

ಇಂತಹ ವ್ಯವಸ್ಥೆಯ ವಿಧಾನವು ಬಾಲ್ಯದಿಂದಲೇ ಆಗಬೇಕು. ಶಿಕ್ಷಣದ ದೃಷ್ಟಿಯಿಂದ ಬಾಲಕನ ಜನ್ಮ ಸಮಯದಿಂದ ಹಿಡಿದು ಅವನ ಕೊನೆಯ ದಿನಗಳವರೆಗೂ ಅವನಿಗೆ ಕಲ್ಯಾಣ ಕಾರಿಯಾದ ವಾತಾವರಣ ಆದರ್ಶ ಆಚರಣೆ, ಜ್ಞಾನ ವಿಜ್ಞಾನದ ಶಿಕ್ಷಣ ಮತ್ತು ಸತ್ಸಂಗಾದಿಗಳ ಸತತ ಲಾಭವು ದೊರೆಯುವಂತಹ ಸಾಧನಗಳಿರಬೇಕು. ನಾವು ಕಲಿಯತಕ್ಕ ವಿಷಯಗಳ ಅಂತಿಮ ಗುರಿ ಯಾವಾಗಲೂ ಕಣ್ಣೆದುರಿನಲ್ಲಿರಬೇಕು. ಕಲಿಯುವವನಿಗೆ ವಿಷಯಗಳ ಜ್ಞಾನವು ಬೇಗ ಆಗುವಂತಿರಬೇಕು.

ಈ ರೀತಿ ಮಾಡಿದಲ್ಲಿ, ಲೇಖನ, ವಾಚನ, ಗಣಿತ, ಪ್ರಕೃತಿ ಪರಿಚಯ, ವಿಜ್ಞಾನ, ಕಲೆ, ಕುಶಲತೆ ಮೊದಲಾದ ವಿಷಯಗಳ ಶಿಕ್ಷಣವು ಈಗಿರುವಂತೆ ಸಂಕುಚಿತ ಅರ್ಥದಲ್ಲಿ ಆಗದೆ, ವಿಶಾಲವೂ ಪರಮ ವ್ಯಾಪಕವೂ ಆದ ಲಕ್ಷ್ಯವನ್ನೆದುರಿನಲ್ಲಿಟ್ಟುಕೊಂಡು, ಮುಂದೆ ಸಾಗುವುದು. ಆ ರೀತಿ ಆದರೆ, ಶಿಕ್ಷಣದ ದೃಷ್ಟಿಕೋಣವು ಕೇವಲ ಐಹಿಕವಾಗದೆ, ಅದಕ್ಕೆ ಬದಲಾಗಿ ಐಹಿಕ ಮತ್ತು ಪಾರಮಾರ್ಥಿಕವಾದ ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷಗಳನ್ನೂ ಹೊಂದಿ ಶಾಂತಿಯನ್ನು ಅನುಭವಿಸುವನು.

ಈಗ ನಮ್ಮ ಶಾಲೆಗಳಲ್ಲಿ ಆತ್ಮದ ಹಸಿವನ್ನು ತೃಪ್ತಿಪಡಿಸುವ ಯಾವ ಸಾಧನೆಯೂ ಇಲ್ಲದಿರುವುದೇ.

ಬಾಲ್ಯದಲ್ಲಿಯೇ ಮನುಷ್ಯನು ತನ್ನ ಯೌವನ, ವೃದ್ಧಾಪ್ಯದ ಮತ್ತೂ ಮೃತ್ಯುವಿನ ಬೀಜವನ್ನು ಬಿತ್ತಿಕೊಳ್ಳುವನು. ಸೂರ್ಯನ ಉದಯದೊಡನೆಯೇ, ಅವನ ಅಸ್ತದ ಕಾಲವು ಪ್ರಾರಂಭವಾಗುವುದು. ಇದೇ ರೀತಿ ಬಾಲಕವೃದ್ಧಿಯೊಡನೆಯೇ ಅವನ ಅಂತ್ಯದ ಕ್ರಿಯೆಯೂ ಆರಂಭವಾಗುವುದು. ಇಂತಹ ಪರಿಸ್ಥಿತಿಯಲ್ಲಿ ನಾವು ಮನುಷ್ಯನ ಜನ್ಮದೊಡನೆಯೇ ಅವನ ಅಂತ್ಯಕಾಲಕ್ಕೆ ಬೇಕಾಗುವ ವಸ್ತುವನ್ನು ದೊರಕಿಸುವ ಕಾರ್ಯವನ್ನೂ ಆರಂಭ ಮಾಡಬೇಕು.

ಅದೇ ಮುಕ್ತಿ–ಬಂಧ – ವಿಮೋಚನೆ ಆನಂದ. ಎರಡೇ ಎರಡು ಎಲೆಗಳಿರುವ ಸಣ್ಣ ಗಿಡವೂ ಒಂದು ಸಂಪೂರ್ಣ ವೃಕ್ಷವೇ–ಅದು ಪ್ರತಿಗಳಿಗೆಯಲ್ಲಿಯೂ ಹಣ್ಣು ಹೂಗಳಿಗಾಗಿಯೇ ಜೀವಿಸಿದ್ದು ಪೋಷಣ ಗ್ರಹಣಮಾಡುವುದು. ವೃಕ್ಷವು ಹುಟ್ಟಿದ ಗಳಿಗೆಯಿಂದಲೇ ಹೂ, ಹಣ್ಣುಗಳಿಗಾಗಿ ಪೋಷಣೆಯನ್ನು ಹೊಂದಲಾರಂಭಿಸುವುದು. ಅದೇ ರೀತಿ ಸಣ್ಣವರಾಗಿದ್ದರೂ ಸಹ ಬಾಲಕರು ಬಾಲ್ಯದಿಂದಲೇ ಸಂಪೂರ್ಣ ಮಾನವನಾಗುವ ಶಿಕ್ಷಣವನ್ನು ಗ್ರಹಣ ಮಾಡಬಲ್ಲನು. ವಿರೋಧವಿಲ್ಲದಿದ್ದರೆ ಮುಂಚೆಯೇ ಗ್ರಹಣ ಮಾಡುವನು.

ಆತ್ಮವಿಕಾಶದ ಅವಶ್ಯಕತೆ.

ಇಂದಿನ ಶಾಲೆಗಳಲ್ಲಿ ನೈತಿಕ ವಿಕಾಸ, ಬೌದ್ಧಿಕ ವಿಕಾಸ, ಇಂದ್ರಿಯ ವಿಕಾಸ ಅಥವಾ ಶಾರೀರಿಕ ವಿಕಾಸಗಳ ಕಡೆಗೆ ಯಾರೂ ವಿಶೇಷ ಗಮನವನ್ನೇ ಕೊಡುತ್ತಿಲ್ಲ. ಬಲವಂತದಿಂದ ಇತರರ ಆಜ್ಞೆಯನ್ನೂ ಪಾಲಿಸುವದು, ಸತ್ಯ ಮೊದಲಾದಗುಣಗಳನ್ನು ಕಲಿಯಲು ಭಯ ಅಥವಾ ಪಾರಿತೋಷಕಗಳ ಶರಣು ಹೋಗುವುದು, ತೀರ ಅನುಪಯುಕ್ತವೂ, ಅನೀತಿ ಪೂರ್ಣವೂ ಆದ ವಿಚಾರ! ಇವುಗಳ ಆಶ್ರಯದಿಂದ ನಮ್ಮ ಬಾಲಕರನ್ನು ನೀತಿವಂತರಿಗೆ ಬದಲಾಗಿ ನೀತಿ ದ್ರೋಹಿಗಳನ್ನಾಗಿ ಮಾಡುತ್ತಿರುವೆವು.

ಸತ್ಯ–ಅಸತ್ಯ, ಒಳ್ಳೆಯದು – ಕೆಟ್ಟದು ಇವುಗಳ ವಿವೇಕವುಂಟಾದಾಗ ನ್ಯಾಯ ಅನ್ಯಾಯಗಳನ್ನರಿಯ ಬಲ್ಲವನಾಗಿ ಮನಸ್ಸು ಸಮತೆಯಿಂದ ಕೂಡಿದುದಾದಾಗ, ವಿಚಾರಗಳಲ್ಲಿ ವಿಶಾಲತೆಯುಂಟಾದಾಗ ಬುದ್ಧಿಯ ವಿಕಾಸಕ್ಕಿಂತ ಹಾನಿಯಾಗುವುದೇ ಹೆಚ್ಚು.

ಇಂದ್ರಿಯಗಳ ವಿಕಾಸವೆಂದರೇನೆಂಬುವನ್ನು ನಮ್ಮ ವಿದ್ಯಾಲಯಗಳು ಇನ್ನೂ ತಿಳಿದಿಲ್ಲ. ಇಂದ್ರಿಯಗಳು ಮನಸ್ಸಿನ ಕೇವಲ ಶಸ್ತ್ರಗಳು ಮಾತ್ರವೇ. ಇಂದ್ರಿಯಗಳ, ಇಂದ್ರಿಯಗಳ ಶಕ್ತಿಯ, ಅವುಗಳ ವೇಗ ಸಂಯಮಗಳ ಆಗತ್ಯಕ್ಕೆ ಕಾರಣವೇನೆಂದರೆ ನಾವು ಅವುಗಳ ಮೂಲಕ ಬಾಹ್ಯಜಗತ್ತನ್ನು ಅರಿಯಬಲ್ಲೆವು. ಮನಸ್ಸು ಇಂದ್ರಿಯಗಳ ಉಪಯೋಗವನ್ನು ಮಹಾಕಾರ್ಯಗಳಿಗೆ ಉಪಯೋಗಿಸಿಕೊಳ್ಳಬೇಕು. ಅಷ್ಟು ಸೂಕ್ಷ್ಮವಾಗಿರಬೇಕು ಅವುಗಳು.

ಇಂದಿನ ಶಿಕ್ಷಣ.

ಈಗ ನಮ್ಮ ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣಾಲಯಗಳ ಲಕ್ಷ್ಯವು ಅದಿ ಭೌತಿಕವೇ ಆಗಿದ್ದು, ಅದು ತ್ಯಾಜ್ಯವಾಗಿದೆ. ಇಂದು ಕಲಿಸುವವರ ಅರ್ಥವು ತಿಳಿಯಲಿ, ತಿಳಿಯದೆ ಹೋಗಲಿ ಯಾವುದಾದರೊಂದು ವಿಷಯವನ್ನು ಕಂಠಪಾಠ ಮಾಡಿಸುವುದೇ ಆಗಿದೆ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೇ ಇಂದಿನ ಶಿಕ್ಷಣದ ಅಭಿಪ್ರಾಯವಾಗಿದೆ. ಇದು ಎಷ್ಟು ಕ್ಷುದ್ರವೂ, ಸಂಕುಚಿತವೂ ಆದ ಅರ್ಥ! ವಿದ್ಯಾಧ್ಯಯನದ ನಂತರ ಮನುಷ್ಯನು ಏನಾದರೂ ಜೀವಿಕೋಪಾರ್ಜನ ಮಾಡಬಲ್ಲಂತಾದರೆ, ವಿದ್ಯೆಯು ಸಮಾಪ್ತಿಯಾದಂತೆ ಭಾವಿಸುವರು. ಇದು ಸಂತೋಷ ಜನಕವಾದ ವಚನವಲ್ಲ.

ಶಿಕ್ಷಣದ ಲಕ್ಷ್ಯವು ಸ್ಪಷ್ಟವೂ, ಸುನಿಶ್ಚಿತವೂ ಆಗಿ, ಅದನ್ನು ಹೊಂದಲು, ಎಲ್ಲ ಉಚಿತ ಸಾಧನೆಗಳೂ ಇರುವಂತೆ, ಇದರಲ್ಲಿ ಪರಿವರ್ತನೆಯಾಗಬೇಕಾಗಿದೆ.

ಪರಿವರ್ತನೆಯ ಪ್ರಥಮಪಾದ.

ಈ ಪರಿವರ್ತನೆಯಲ್ಲಿ ಮೊದಲನೆಯದು ಬಾಲಕರ ಸನ್ಮಾನ. ಬಾಲಕನಲ್ಲಿರುವ ಅಂತಶ್ಶಕ್ತಿಯು ಅವನ ಶರೀರದಂತೆ ಅಲ್ಪವೂ ಅಸಹಾಯವೂ ಆದುದಲ್ಲವೆಂಬುದನ್ನು ನಾವು ಮರೆತಿರುವೆವು. ಬೀಜವು ತೀರ ಸಣ್ಣದಾಗಿದ್ದರೂ, ಅದರಲ್ಲಿ ಸಂಪೂರ್ಣ ವೃಕ್ಷವೇ ಸಮಾವೇಶವಾಗಿರುವದರಿಂದ ಬೀಜದ ಮಹತ್ವವು, ಫಲಕ್ಕಿಂತ ಯಾವ ರೀತಿ ಕಮ್ಮಿಯಾಗಿಲ್ಲವೋ, ಅದೇ ರೀತಿ ಬಾಲಕನಲ್ಲಿಯೂ ಭವಿಷ್ಯದಲ್ಲಿ ವಿಕಸಿತವಾಗುವ ವಿರಾಟ್ ಮನುಷ್ಯನ ಸಂಪೂರ್ಣ ಸತ್ವವು ಸಮಾವೇಶವಾಗಿದೆಯೆಂಬುವನ್ನು ಎಲ್ಲರೂ ಸ್ಮರಣೆಯಲ್ಲಿಟ್ಟಿರಬೇಕು. ನಾವು ನಮ್ಮ ಆತ್ಮಗೌರವವನ್ನು ಮರೆತಿರುವೆವಾದುದರಿಂದ, ನಮ್ಮ ಹೃದಯಗಳಲ್ಲಿ ಇಂದು ಬಾಲಕರ ವಿಚಾರದಲ್ಲಿ ತಿರಸ್ಕಾರ, ತುಚ್ಛತೆ, ಅವಹೇಳನೆ ಮತ್ತು ಅವಮಾನ ಆದಿಗಳ ಭಾವನೆಗಳಿವೆ. ಬಾಲಕನನ್ನು ಅವನ ದೇಹದಷ್ಟೇ ಚಿಕ್ಕವನೆಂದು ತಿಳಿದು ಅವನ ಶಿಕ್ಷಣ ವಿಷಯದಲ್ಲಿ ನಾವು ವಿಶೇಷ ಗಮನವನ್ನು ಕೊಟ್ಟಿರುವದಿಲ್ಲ. ಈಗ ಪ್ರಚಲಿತವಾಗಿರುವ ಶಿಕ್ಷಣ ಪ್ರಣಾಳಿಯಲ್ಲಿ ಮನುಷ್ಯನನ್ನು ತನ್ನ ಇಂದ್ರಿಯಗಳ ಮೂಲಕ ಸಂಚರಿಸುವ ಒಂದು ಶರೀರಧಾರಿ ಎಂಬ ಕ

ಬಲವಂತ ಮಾಘಸ್ನಾನ ಬೇಡ.

ಇಂದಿನ ಶಾಲೆಗಳಲ್ಲಿ ಕೊಡಲ್ಪಡುತ್ತಿರುವ ಸದಾಚಾರದ ವಿದ್ಯೆಯಂತೂ ನಿರರ್ಥಕವೆಂದು ಸಿದ್ಧವಾಗಿದೆ. ಮಹಾಪುರುಷರ ಜೀವನಚರಿತ್ರೆಗಳನ್ನು ತಿಳಿಸುವದರಿಂದ ಸದಾಚಾರ ವ್ಯಾಖ್ಯಾನಗಳನ್ನು ಕೊಡುವುದರಿಂದ ಅಥವಾ ಸದಾಚಾರಿಯಾಗದೆ ಹೋದವನಿಗೆ ಶಿಕ್ಷೆವಿಧಿಸುವದರಿಂದ ಅದಕ್ಕೆ ಭಯ ಅಥವಾ ಪುರಸ್ಕಾರವನ್ನು ತೋರಿಸುವದರಿಂದ, ಮನುಷ್ಯನಲ್ಲಿ ಅದುಉಂಟಾಗುವದಿಲ್ಲ. ಸ್ವಭಾವದಿಂದಲೇ ಮನುಷ್ಯನು ಸದಾಚಾರಪ್ರಿಯನು ಆದರೆ ಅವನನ್ನೂ ಸದಾಚಾರಿಯನ್ನಾಗಿ ಮಾಡಲುಪಯೋಗಮಾಡುತ್ತಿರುವ ಶಿಕ್ಷಣ ಪದ್ಧತಿಯಿಂದ ಅವನು ಅದಕ್ಕೆ ವಿರೋಧಿಯಾಗುವನು ಈ ಬಲವಂತ ಮಾಘಸ್ನಾನದಿಂದ ಇಂದು ಗುರುದ್ರೋಹ, ಪಿತೃದ್ರೋಹಗಳು ಸಮಾಜದಲ್ಲಿ ದಿನದಿನವೂ ವೃದ್ಧಿಯಾಗುತ್ತಿರುವವು.

ಪ್ರತಿಯೊಂದು ವಸ್ತುವೂ ತನ್ನ ವಿಕಾಸಕ್ಕಾಗಿ ಒಳ್ಳೆಯ ವಾತಾವರಣ, ವ್ಯಾಸಂಗ ಮತ್ತು ಅಭ್ಯಾಸವನ್ನು ಆಪೇಕ್ಷಿಸುವದು. ಸಾಹಾನುಭೂತಿ ಮತ್ತು ಸಂರಕ್ಷಣೆಯನ್ನು ಬಯಸುವದು. ನಮ್ಮ ಶಿಕ್ಷಣ ಪದ್ಧತಿಯಲ್ಲಿ ಆತ್ಮವಿಕಾಸದ ಹೆಸರೇ ಇಲ್ಲದಂತಾಗಿದೆ. ಆತ್ಮಸಾಕ್ಷಾತ್ಕಾರಕ್ಕಾಗಿ, ಇಂತಿಂತಹ ಶಿಕ್ಷಣದ ವ್ಯವಸ್ಥೆಯಾಗಬೇಕು. ಎಂಬ ಅರಿವುಂಟಾದಲ್ಲಿ, ಅಂತಹುದನ್ನು ಪ್ರಾರಂಭದಿಂದಲೇ ಮಾಡುವದು ನಮ್ಮ ಕರ್ತವ್ಯ. ಆದರೆ ಇಂದಿನ ಶಿಕ್ಷಣವು ನಿಸ್ಸಾರವಾದುದು.

ಬಾಲಕರ ಶ್ವಾಸೋಚ್ಛ್ವಾಸಕ್ಕೆ ಶುದ್ಧವಾದ ಗಾಳಿಯು ಹೇಗೆ ಆಗತ್ಯವೋ, ಹಾಗೇ ಬಾಲಕರಿಗೂ ಆತ್ಮವಿದ್ಯೆಯು ಅಗತ್ಯವಿದೆ. ಆದರೆ ಆ ಗಾಳಿಯನ್ನು ನಾವು ಪಂಪುಗಳಿಂದ ಹೇಗೆ ಒಳಗೆ ಕಳುಹಿಸಲಾರೆವೋ ಅದೇ ರೀತಿ ಇದನ್ನು ಸಹ ಬಲವಂತದಿಂದ ಕಲಿಸಲಾಗುವದಿಲ್ಲ. ವಾತಾವರಣವೇ ಉತ್ತಮವಾದುದಾಗಬೇಕು.

ಗುರುವೇ ಶಿಕ್ಷಣದ ಸರ್ವಸ್ವ: ಲಕ್ಷಣ.

ಗುರುವೇ ಸ್ವಯಂ ಒಂದು ವಾತಾವರಣದಂತೆ ಆತನ ಜ್ಞಾನವು ಆತ್ಮ ಲಕ್ಷಿತವಾಗಿದ್ದು, ಕ್ರಿಯೆಯು ಕಲ್ಯಾಣಕಾರಿಯಾಗಿರಬೇಕು. ಗುರುವಾಗುವುದು ಬಹಳ ಕಠಿಣವಾದ ಕೆಲಸ. ಏಕೆಂದರೆ ಅವನು ಸ್ವಯಂ ಬಾಲಕರ ಹಿತದ ದೃಷ್ಟಿಯಿಂದ ವಾತಾವರಣದ ರೂಪೇ ಆಗಬೇಕಾಗುವದು.

ಆದುದರಿಂದ ಶಿಕ್ಷಕನ ಯಾವುದೇ ಮತವಾಗಲೀ, ಪಂಥವಾಗಲಿ ಇರುವದಿಲ್ಲ. ಸ್ಥಾನ, ಕಾಲದ ಬಾಧೆಯಿರುವುದಿಲ್ಲ. ಸಮಾಜ ರಾಷ್ಟ್ರಗಳ ಕಡೆಗೆ ಅವನ ದೃಷ್ಟಿ ಇರುವುದಿಲ್ಲ. ಆತನ ದರ್ಶನವು ವಿರಾಡ್ದರ್ಶನವಾಗಿಯೂ, ಜ್ಞಾನವಿಜ್ಞಾನವು ಪರಮ ಜ್ಞಾನವಾಗಿಯೂ, ಧ್ಯೇಯವು ಮುಕ್ತಿಯ ಉಪಾಸನೆಗೆ ಅನುಕೂಲವಾಗಿಯೂ ಇರುವಂತಹ ವಾತಾವರಣವನ್ನುಂಟುಮಾಡಿಕೊಳ್ಳಬೇಕಾಗಿರುವದು.

'ವಿ. ಕ.'

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50.000	0	0
ವಸೂಲಾದ ಶೇರ್ ಮೊಬಲಗು	–	48,470	0	0
ಜಮೂಬಂದ ಠೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ಟ್ರಿಸ್ಟ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3¾ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9 1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಟ್ರಿಸ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಟ್ರಿಸ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದ ತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡಿಸಿಕೊಳ್ಳುತ್ತಾರೆ.

ಪ್ರೆಸಿಡೆಂಟ್:–ಪಂಧ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.

ಟ್ರೆಜರರ್:—ರಾವ್ ಬಹದ್ದೂರ್ ಸಿ. ದೇವಯ್ಯನವರು.

ಸೆಕ್ರೆಟರಿ:—ಮ. ಕೆ. ಸಿ.ಕರುಂಬಯ್ಯನವರು ಎಂ. ಎಲ್. ಸಿ.

ತಾ. 1-3-1940

ಕೊಡಂದೇರ ಬಿ. ಮಾಚಯ್ಯ,

L. D. Sc. (COLLEGE OF DENTISTRY)

EX-SUPERVISOR, LAXMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ

ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (44) ನವೀನ ರೀತಿಯ ಚಿಕಿತ್ಸೆ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

[illegible]

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣಗುಣವಾಗಿ ಜನ್ಮಕ್ಕೆ ಶಕ್ತಿ ಉಂಟಾಗುವುದು. ಬಾಟ್ಲಿಗೆ 1 ರೂ.

ಗೋವರ್ಧನ ರಾಮಚಂದ್ರ ಕಶಿರ್. ಮತ್ತು ಕಂಪೆನಿ,

(52-20) [illegible], ಮುಂಬಯಿ,

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ನೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ–ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಷನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸುಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ದಾವಾ ಮತ್ತು ಅನುಲ್ಲಂಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರ್‍ಯಾಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara, and Virajapet.

52—48

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:–ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಸಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್.)
ಮೆಡಿಲ್ ಪ್ರಾಕ್ಟಿಷನರ್, ವೀರಾಜಪೇಟೆ.

52–14

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩—೮—೦

ತಾ. ೨೪—೫—೧೯೪೦. ಸಂಪುಟ ೧೯] [ಸಂಚಿಕೆ ೫೧

ಭದ್ರತೆ! ವಿಶ್ವಾಸಾರ್ಹತೆ!! ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ ಭದ್ರತೆಯನ್ನು ವರ್ಷೇ ವರ್ಷೇ ತೋರಿಸಿ, ಠೇವಣಾತಿದಾರರಿಗೆ ಸುರಕ್ಷಿತತೆಯನ್ನು ಹೆಚ್ಚಿಸಿ,
ಸರ್ವರ ವಿಶ್ವಾಸಕ್ಕೆ ಪಾತ್ರವಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ದೇಶಿಯ ಸಂಸ್ಥೆ.

ನಿರಖು ಠೇವಣಾತಿ ಒಂದು ವರ್ಷಕ್ಕೆ 3½% (ವಾರ್ಷಿಕದಾನ ಲೆಕ್ಕದ)
ಬಡ್ಡಿ ದರಗಳು: 2 ರಿಂದ 3 ವರ್ಷಕ್ಕೆ 4% ..

ಒಂದು ವರ್ಷಕ್ಕಿಂತ ಕಡಿಮೆ ಕಾಲದ ಮತ್ತು, ಅಲ್ಪಾವಧಿಯ, ಠೇವಣಾತಿಗಳನ್ನು
ಅವಧಿಗೆ ತಕ್ಕ ಬಡ್ಡಿ ದರಗಳಲ್ಲಿ ಪಡೆಯಬಹುದು.

ಮೂರು ವರ್ಷದ ಕ್ಯಾಶ್ ಸರ್ಟಿಫಿಕೇಟುಗಳು: ಬಡ್ಡಿಯು ವರ್ಷ ವಾರ್ಷಿಕದಾನ ಲೆಕ್ಕದ 4 ರಲ್ಲಿ. ಬಯಸಿದರೆ ಮೊದಲು, ಯಾವಾಗಲೂ 15 ದಿನಗಳ ನೋಟೀಸು ಕೊಟ್ಟಲ್ಲಿ ಹಣವನ್ನು ಹಿಂದಕ್ಕೆ ಪಡೆಯಬಹುದು.

ಸೇವಿಂಗ್ಸ್ ಬೇಂಕ್ ಡಿಪಾಜಿಟ್ಟು: ಒಂದು ಖಾತೆಯಲ್ಲಿ ರೂ 5,000 ದ ವರೆಗೆ ಹಣ ಇಡಬಹುದು. ಚೆಕ್ಕು ಮೂಲಕ ಹಣ ಹಿಂದೆ ಪಡೆಯಬಹುದು. ಶಾಲಿಯಾನ ಲೆಕ್ಕದಾ 2½ ಸಡಿಯಲ್ಲಿ ಬಡ್ಡಿ ನಡೆಯುವುದು.

ಕರೆಂಟ್ ಡಿಪಾಜಿಟ್ಟು, ಕ್ಯುಮ್ಯುಲೇಟಿವ್ ಮೊದಲಾದ ಲೆಕ್ಕಗಳನ್ನು ತೆರೆಯಬಹುದು.

ಬೊಂಬಾಯಿ, ಕಲ್ಕತ್ತಾ, ಮದ್ರಾಸು, ಕಲ್ಲಿಕೋಟೆ, ಕಣ್ಣಾನೂರು, ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ
ಅನೇಕ ಸ್ಥಳಗಳ ಮೇಲೆ ಡ್ರಾಫ್ಟುಗಳನ್ನೂ ಚೆಕ್ಕುಗಳನ್ನೂ ಕೊಡಬಹುದು; ಪಡೆಯಿಸಲೂ ಬಹುದು

THE CANARA BANKING CORPORATION LIMITED.

52–22 ಚಿನ್ನಾಭರಣಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ
ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ
ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ,—ದ. ಕನ್ನಡ.
(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

52–28

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮ ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ, ಮುಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮೊದಪ್ಪನವರು.

ಪೊನ್ನಂಪೇಟೆನಾಡು—ಮ ಪಿ. ಜಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮ, ಅಜ್ಜಮಾಡ ಮಾದಪ್ಪನವರು ಮತ್ತು ಮ. ಜಿ. ಮಾದಮ್ಮಯ್ಯನವರು.

ಕುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ ಕೆ. ಮೊಗಪ್ಪನವರು.

ನಾಪೋಕ್ಲು—ಮ. ಬೆಳ್ಳಿಪಂಡ ಯಂ. ಪೂಣಚ್ಚನವರು.
ನಾಪೋಕ್ಲು

ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:—	**(ದಿನಕ್ಕೆ ಮೂರು ವೇಳೆ)**
ಗರ್ಭಿಣಿಯರಿಗೆ:—	**(ದಿನಕ್ಕೆ ಮೂರು ವೇಳೆ)**
ಮಕ್ಕಳಿಗೆ:—	**(ವೈದ್ಯರ ಸಲಹೆಯಂತೆ)**

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್.
(53-32) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು—ಕೆ. ರಾಮಕೃಷ್ಣರಾವ್,
ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ್ಷಿಪ್ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಥುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-17

ಆಕರ್ಷಕ ಸುರಂಗಗಳು.

ಯೂರೋಪಿನ ದ್ವಿತೀಯ ಮಹಾಯುದ್ಧವು ಪ್ರಾರಂಭವಾದ ಕೆಲ ದಿನಗಳಲ್ಲಿ ಜರ್ಮನಿಯು ತನ್ನಲ್ಲಿರುವ ಗುಪ್ತ ಅಸ್ತ್ರಗಳಿಂದ ಶತ್ರುಗಳನ್ನು ಅರೆಕ್ಷಣದಲ್ಲಿ ನಾಶ ಮಾಡುವೆನೆಂದು ಬೆದರಿಕೆ ಹಾಕಿತು. ಮುಂದೆ ಒಂದೆರಡು ವಾರಗಳಲ್ಲಿ ಆಕರ್ಷಕ ಜಲ ಸುರಂಗಗಳ ಹಾವಳಿಯು ಹೆಚ್ಚಾಗಿ ಮಿತ್ರ ರಾಷ್ಟ್ರಗಳ ತಟಸ್ಥ ರಾಷ್ಟ್ರಗಳ ಹಡಗುಗಳು ಸಮುದ್ರದ ತಳಕ್ಕೆ ಬರಹತ್ತಿತು.

ಈ ಆಕರ್ಷಕ ಜಲ ಸುರಂಗಗಳ ಹಾವಳಿಯನ್ನು ತಡೆಯಲು ಬ್ರಿಟಿಷ್ ಹಡಗುಗಳಿಗೆ ಒಂದು ವಿಶಿಷ್ಟ ಸಾಧನವನ್ನು ಜೋಡಿಸಲಾಯಿತು. ಮತ್ತು ಇಂಗ್ಲಂಡಿನ 'ರಾಣಿ ಎಲಿಜಾಬೆಥ್' ಹಡಗವು ನ್ಯೂಯಾರ್ಕ (ಅಮೇರಿಕ)ಕ್ಕೆ ಹೋಗಿ ತಲುಪಿದೊಡನೆ ಈ ಸಾಧನದ ಸಾಮರ್ಥ್ಯ ಅಧಿಕೃತವಾಗಿ ಸಾರಲ್ಪಟ್ಟಿತು.

(ಜರ್ಮನಿಯ ಹಿಟ್ಲರ್.)

ಈಗಲೂ ಈ ಸಾಧನದ ವಿವರಗಳು ಸಾಕಷ್ಟು ಬಯಲಿಗೆ ಬಂದಿಲ್ಲ. ಯಾಕಂದರೆ ಅದು ರಹಸ್ಯ. ಆದರೆ ಅದರ ಸಾಮಾನ್ಯ ತತ್ವವನ್ನು ವಿದ್ಯುತ್ ಹಾಗೂ ಆಕರ್ಷಣ ಈ ವಿಷಯ ವಿವೇಚನೆಯಿಂದ ತಿಳಿಯಬಹುದು. ಡಿ. ಗಾಸ್. ಎಂದು ಅದರ ವೈಜ್ಞಾನಿಕ ಹೆಸರು. ಯಾಕಂದರೆ ಇದು ಕಳೆದ 25 ವರ್ಷಗಳ ಹಿಂದೆ ಓರ್ವ ಜರ್ಮನಿ ವೈಜ್ಞಾನಿಕನು ಶೋಧಿಸಿದ ತತ್ವವನ್ನವಲಂಬಿಸಿ ಸಿದ್ಧಮಾಡಲ್ಪಟ್ಟಿದೆ.

ಗಾಸ ಇವರ ತತ್ವವು ಗಡಚಾಗಿದ್ದು ಸಾಮಾನ್ಯ ವಾಚಕರಿಗೆ ತಿಳಿಯದು. ಆದುದರಿಂದ ನೂತನ ಸಾಧನದ ಉಪಯೋಗ ಹೇಗೆ ಮಾಡಲ್ಪಡುತ್ತಿದೆಯೆಂಬದನ್ನು ಮಾತ್ರ ಇಲ್ಲಿ ವಿವೇಚಿಸಲಾಗುತ್ತಿದೆ.

ಮೊಟ್ಟ ಮೊದಲು 'ಆಕರ್ಷಕ ಜಲ ಸುರಂಗ'ಗಳೇನೆಂಬವನ್ನು ತಿಳಿದುಕೊಳ್ಳುವ. ಹಡಗವು ಸಂಚರಿಸುತ್ತಿರುವಾಗ ಅದು ಕೆಳಗೆ ಹಾಕಲ್ಪಟ್ಟ ಈ ಸುರಂಗಗಳನ್ನು ಆಕರ್ಷಿಸುವದೆಂದು ಹಲವರು ತಿಳಿದುಕೊಂಡಿರುವರು. ಇದು ತಪ್ಪು. ಹಡಗದಂಥ ದೊಡ್ಡ ಕಬ್ಬಿಣ ವಸ್ತುವೊಂದು ಮೇಲೆ ಸಂಚರಿಸುತ್ತಿರುವಾಗ್ಗೆ ಅದರ ಸುತ್ತಲು ನಿರ್ಮಾಣವಾಗುವ ಆಕರ್ಷಣ ರೇಷೆಗಳು ಹರಡಿ ಕೆಳಗೆ ಸುರಂಗದಲ್ಲಿ ತಿರುಗುವ ಸೂಜಿಯು ಒಂದು ತುದಿಯನ್ನು ಮೇಲಕ್ಕೆಳೆಯುವದು. ಈ ಸೂಜಿಯೇ ಈ ಸುರಂಗದ ಮುಖ್ಯ ಕೈ. ಒಂದು ತುದಿಯು ಮೇಲಕ್ಕೆ ಬಂದೊಡನೆ ಮತ್ತೊಂದು ತುದಿಯು ಕೆಳಕ್ಕೆ ಹೋಗುವದು. ಇದರಿಂದ ವಿದ್ಯುತ್ಪ್ರವಾಹವು ಪ್ರಾರಂಭವಾಗಿ ಸ್ಫೋಟಕ ದ್ರವ್ಯಗಳು ಧಡಲ್ ಎಂದು ಹಾರುವವು. ಜಲ ಸುರಂಗಗಳು ಹೇಗೆ ಹಾರುವವೆಂಬುದರ ಸಾಮಾನ್ಯ ಪರಿಚಯವಿದು. ಆದರೆ ಇದು 'ಸೂಕ್ಷ್ಮ ಆಕರ್ಷಣ ರೇಷೆಗಳ ತಾಕಲಾಟ' ಎಂದು ಅವುಗಳನ್ನು ಪರೀಕ್ಷಿಸಿದ ಇಂಜಿನಿಯರರು ಅನ್ನುವರು.

ಈ 'ಜಲ ಸುರಂಗ'ಗಳ ಆಕಾರವು ತತ್ತಿಯಂತಿದ್ದು ಒಂದು ತುದಿ ತುಸು ಚೂಪಾಗಿರುವದು. ಅದಕ್ಕೆ ಅಲ್ಯೂಮಿನ್ನದ ಕವಚವಿರುವದು. ಇದರಲ್ಲಿ 1,500 ಪೌಂಡು ಸ್ಫೋಟಕ ದ್ರವ್ಯವಿರುವದು–ಇದರ ಹೊಡತದಿಂದ ಅರಕ್ಷಿತವಾದ ಬೇಕಾದ ಹಡಗವು ಮುಗ್ಗರಿಸುವದು – ಜಲಸಮಾಧಿ ಹೊಂದಿದರೂ ಹೊಂದಬಹುದು. ಆದರೆ ಇಂಥಾ ಸುರಂಗಗಳ ಉಪಯೋಗವು ಹರವಾದ ಸಮುದ್ರದಲ್ಲಿ ಮಾತ್ರ ಆಗುವದು. ಇದೊಂದು ಸುದೈವವು.

ಇಷ್ಟು 'ಜಲಸುರಂಗ'ದ ಬಗ್ಗೆ ಆಯಿತು. ಇನ್ನು ಇವುಗಳನ್ನು ತಡೆಯಲು ಕೈಕೊಂಡ ಉಪಾಯಗಳನ್ನಿಷ್ಟು ನೋಡುವ. ಹಡಗದ ಮುಂಭಾಗವು ಕಬ್ಬಿಣದ್ದಿರುವದರಿಂದ ಅದೊಂದು ಪ್ರಬಲವಾದ ಸೂಜಿಗಲ್ಲೇ ಸರಿ. ಮ್ಯಾಗ್ನೆಟೋಮೀಟರ ಹಾಗೂ ಗಾಸ ತತ್ವದ ಸಹಾಯದಿಂದ ತಜ್ಞನು ಹಡಗ ಆಕರ್ಷಕ ಶಕ್ತಿಯನ್ನು ಅಳೆಯಬಲ್ಲನು. ಮತ್ತು ಆ ಮೇಲೆ ಅವನು ಅಷ್ಟೇ ಶಕ್ತಿಯುಳ್ಳ ಆದರೆ ತದ್ವಿರುದ್ಧ ಚುಂಬಕ ಶಕ್ತಿಯ ವಿದ್ಯುಚ್ಚುಂಬಕ ಸೂಜಿಗಲ್ಲನ್ನು ನಿರ್ಮಿಸಬಲ್ಲನು. ಅಂದರೆ ನೀರಿನ ಮೇಲಿನ ಹಡಗದ ಭಾಗದ ಸುತ್ತಲೂ ರೇಶಿಮೆ ಸುತ್ತಿದ ತಂತಿಗಳನ್ನು ಸುತ್ತಿದರೆ ಇಂಥಾ ಸೂಜಿಗಲ್ಲು ನಿರ್ಮಾಣವಾಗುವದು.

ಇದಕ್ಕೆ ಬೇಕಾಗುವ ತಂತಿಯು ಹಡಗವು ದೊಡ್ಡದಿದ್ದರೆ ಸುಮಾರು 10 ಮೈಲು ಉದ್ದವಿರುವದು. ಇದನ್ನು ಒಂದೊಂದು ಫೂಟು ಅಂತರದಲ್ಲಿರುವ ಕಬ್ಬಿಣ ಕೊಂಡಿಗಳಲ್ಲಿ ಅಡಕಿಸಲ್ಪಟ್ಟಿರುವದು. ಗೊತ್ತುಪಡಿಸಿದ ವಿದ್ಯುಚ್ಛಕ್ತಿಯು ಪ್ರವಹಿಸಹತ್ತಿದ ಕೂಡಲೆ ಆಕರ್ಷಕ ಕ್ಷೇತ್ರವನ್ನು ನಾಶಮಾಡುವದು. ಇದರಿಂದ ಹಡಗವು ಸುರಂಗದ ಸೂಜಿಯನ್ನು ಎಷ್ಟು ಮಾತ್ರವೂ ಕದಡದೇ ಸುರಕ್ಷಿತವಾಗಿ ಮುಂದೆ ಹೋಗುವದು.

ಹಡಗಗಳಲ್ಲಿನ ಕೋವಿಗಳು.

ಹಡಗಗಳು, ಸಬ್‌ಮೇರಿನ್‌ಗಳು, ಟಾರ್ಪಿಡೊಗಳು, ಕೋವಿಗಳು, ವಿಮಾನಗಳೇ ಮೊದಲಾದ ಸಕಲ ರೀತಿಯ ಶಸ್ತ್ರಾಸ್ತ್ರಗಳ ಕುರಿತಾಗಿಯೂ, ನಾವು ದಿನೇ ದಿನೇ ಓದುತ್ತಿದ್ದೇವೆ. ಅಷ್ಟುವಾಗ, ಅವುಗಳ ವಿಸ್ತಾರವಾಗಿ ತಿಳಿದುಕೊಳ್ಳುವ ಆಗತ್ಯವೂ ಅಲ್ಪವಲ್ಲ. ಮೊದಲಾಗಿ ಹಡಗು ಪಡೆಗಳ ಶಕ್ತಿಯಾದ ಕೋವಿಗಳ ಕುರಿತಾಗಿಯೂ, ಟಾರ್ಪಿಡೊಗಳ ವಿಷಯವಾಗಿಯೂ ಅರಿತುಕೊಳ್ಳೋಣ.

ಯುದ್ಧದ ಹಡಗಗಳ ಶಕ್ತಿಯು, ಅವುಗಳ ಬಲದಲ್ಲಿಯೂ, ಅವುಗಳಲ್ಲಿ ಹೇರಲ್ಪಟ್ಟ ಕೋವಿಗಳ ಶಕ್ತಿಯಲ್ಲಿಯೂ, ಹೊಂದಿಕೊಂಡಿದೆ. ಕೋವಿಗಳಲ್ಲಿನ ಸುರಂಗಮಾರ್ಗದ ವ್ಯಾಸದ ಅಳತೆಯ ಮೇಲೆ, ಆ ಕೋವಿ ಎಷ್ಟು ಅಂಗುಲದ್ದೆಂದು ತಿಳಿದುಕೊಳ್ಳುವರು. 12 ಅಂಗುಲದ ಕೋವಿ ಅಂದರೆ ಅದರ ಮದ್ದು ಅಥವಾ ಗುಂಡು ತುಂಬುವ ಸುರಂಗದ ವ್ಯಾಸ ಅಷ್ಟು ಅಗಲ ಇದೆ ಎಂದರ್ಥ. ಕೋವಿಯ ಉದ್ದ ಕೆಲವು ಗಜಗಳಷ್ಟು ಇರಬಹುದು.

16 ಅಂಗುಲದ ಕೋವಿ ಸುಮಾರು 105 ಟನ್‌ಗಳಷ್ಟು ಭಾರವಿರುತ್ತದೆ. ಉದ್ದ 65 ಅಡಿಯಿಕ್ಕಿರುವವಲ್ಲದ ಇದರ ಗುಂಡು ಸುಮಾರು 20 ಮೈಲಿಗಳ ದೂರಕ್ಕೆ ಸರಿಯುಯುವುದು. ಯುದ್ಧದ ಹಡಗಗಳು ಹಾಗೂ 'ಬೆಟ್ಲ ಕ್ರ್ಯೂಸರ'ಗಳಲ್ಲಿ ಸುಮಾರು 15-16 ಅಂಗುಲಗಳ ಕೋವಿಗಳನ್ನು ಹೇರಿಸುವರು. ಪ್ರಬಲ 'ಕ್ರ್ಯೂಸರ'ಗಳಲ್ಲಿ 8 ಅಂಗುಲದ, ಸಾಮಾನ್ಯ ಕ್ರ್ಯೂಸರ'ಗಳಲ್ಲಿ 6 ಅಂಗುಲದ ಡಿಸ್ಟ್ರಾಯರ'ಗಳಲ್ಲಿ 4½ ಅಥವಾ 4 ಅಂಗುಲದ ಕೋವಿಗಳನ್ನು ಇರಿಸುವರು.

ದೊಡ್ಡ ಯುದ್ಧದ ಹಡಗುಗಳಲ್ಲಿ ಕೂಡಾ ವೈರಿಗಳನ್ನು ಇದಿರಿಸುವದಕ್ಕಾಗಿ ಹಾಗೂ ಚಿಕ್ಕ ಪುಟ್ಟ ಕ್ರ್ಯೂಸರುಗಳನ್ನು ಹೊಡೆಯುವುದಕ್ಕಾಗಿ 5½ ಅಥವಾ 6ಅಂಗುಲದ ಕೋವಿಗಳನ್ನೂ ಇರಿಸುವರು

6 ಅಂಗುಲಕ್ಕಿಂತ ಮಿಗಿಲ್ದ ಕೋವಿಗಳಿಗೆ ಕೈಯಿಂದಲೇ ಮದ್ದುಗುಂಡು ತುಂಬಿಸಲು ಸಾಧ್ಯವಿಲ್ಲ; ಬದಲು ಯಂತ್ರದ ಮೂಲಕ ಈ ಕಾರ್ಯ ಸಾಧಿಸಲ್ಪಡುತ್ತಿದೆ. ಹಾರಿಸಲ್ಪಟ್ಟ ಗುಂಡು ಅತಿ ದೂರದಲ್ಲಿದ್ದ ವೈರಿಗಳ ಹಡಗದ ಮೇಲೆ ಬಿದ್ದು ಅದನ್ನು ನಾಶಮಾಡುವುದು. ಅಥವಾ ಹಡಗದಿಂದ ಗುಂಡುಗಳನ್ನು ನಗರ ಬಂದರುಗಳ ಮೇಲೂ, ಮಂದಿಯ ಮೇಲೂ ಬಾಂಬೆಸೆವ ವಿಮಾನಗಳ ಮೇಲೂ ಹಾರಿಸಬಹುದಾಗಿದೆ.

ಇಂತಹ ಗುಂಡುಗಳಿಂದ ಪಾರಾಗುವ ಬಗೆ ಎಂದರೆ, ಇವುಗಳಿಂದ ಭೇದಿಸಲಾಗದ ಪ್ರಬಲವಾದ ಉಕ್ಕಿನ ಹಾಳೆಗಳಿಂದ ಹಡಗುಗಳನ್ನು ಭದ್ರಪಡಿಸುವುದು. ಆದರೆ ಇದೊಂದು ಹೆಚ್ಚಿನ ಸಮಸ್ಯೆಯೇ ಆಗಿದೆ. ಕಾರಣ, ಹಡಗುಗಳ ಭಾರ ಅಧಿಕವಾಗದಂತೆ ಅದರ ತಯಾರಕರು ಎಚ್ಚರಿಕೆ ವಹಿಸಬೇಕಾಗುತ್ತದೆ.

ಟಾರ್ಪೆಡೊ.

ಸುಮಾರು 20 ಅಡಿ ಉದ್ದ, 2 ಅಡಿ ದಪ್ಪದ ಚುಟ್ಟದಂತೆ ಇವೆ. ಇವುಗಳ ಒಂದು ತುದಿ ಮೊಂಡಾಗಿಯೂ, ಒಂದು ಬದಿ ಮೊನಚಾಗಿಯೂ ಇದೆ. ಇವುಗಳ ಮೊಂಡಾದ ಭಾಗದಲ್ಲಿ ಸುಮಾರು ಕಾಲು ಟನ್ನಿನಷ್ಟು ಸ್ಫೋಟಕ ದ್ರವ್ಯವಿದ್ದು, ಇವು ಇವುಗಳೊಳಗೆ ಇರುವ ಯಂತ್ರಗಳ ಸಹಾಯದಿಂದ ತನ್ನಂತೆ ನೀರ ಅಡಿಯಲ್ಲಿ ನೇರಾಗಿ ಚಲಿಸಬಲ್ಲವು.

ಸಮುದ್ರದಲ್ಲಿ ಹಡಗುಗಳಿಂದ ಅಥವಾ ಸಬ್‌ಮೆರಿನ್‌ಗಳಿಂದ, ವೈರಿಗಳ ಹಡಗುಗಳ ಚಲನವಲನೆಯ ಲೆಕ್ಕದ ಮೇಲೆ, ಇವನ್ನು ಬಿಟ್ಟುಬಿಡುವರು. ಇವು ನೇರಾಗಿ ವೈರಿಗಳ ಹಡಗಗಳಿರುವೆಡೆ ಸಾಗಿ, ಅವುಗಳನ್ನು ಭೇದಿಸುವವು. ಇವರ ವೇಗ ಸುಮಾರು 45 ಮೈಲಿಗಳಷ್ಟಿದೆ. ಟಾರ್ಪೆಡೋವಿನಿಂದ ತಪ್ಪಿಸಿಕೊಳ್ಳುವ ಉಪಾಯವೆಂದರೆ, ಅದರ ಸುಳಿವು ತಿಳಿದೊಡನೆ ಅದರ ದಾರಿಯಿಂದ ಪಾರಾಗುವದು. ಒಂದು ಟಾರ್ಪೆಡೋವಿನ ಬೆಲೆ ಸುಮಾರು 30 ಸಾವಿರ ರೂಪಾಯಿಗಳಾಗುತ್ತದೆ.

ಟಾರ್ಪೆಡೊ ನೇರಾಗಿ ಸಾಗುವದರಿಂದ, ಅದು ಸಾಗುವ ದಾರಿಯಿಂದ ತಪ್ಪಿಸಿಕೊಂಡು ಹಡಗಗಳು ಪಾರಾಗಬಹುದು. ಆದರೆ ಅದರ ಸುಳಿವು ತಿಳಿಯುವುದು ಕಷ್ಟವಾಗುತ್ತದೆ. ವಿಮಾನಗಳೂ ಇಂತಹ ಟಾರ್ಪೆಡೋಗಳನ್ನು ವೈರಿಗಳ ಹಡಗದಿಂದ ಒಹಳ ದೂರದಲ್ಲಿ, ಆ ಹಡಗಗಳ ಕಡೆಗೆ ಮೊಗ ಮಾಡಿ ನೀರಲ್ಲಿ ಇಳುಹುವದಿದೆ.

'ಕ. ರ.'

ಇಂಥಾ ಸಾಧನಗಳುಳ್ಳ ಹಡಗಗಳು ಎರಡು ಸಲ ಅಂದರೆ ಈ ಸಾಧನದ ಉಪಯೋಗವಿಲ್ಲದಿರುವಾಗ್ಯೆ ಒಮ್ಮೆ, ಮತ್ತೊಮ್ಮೆ ಉಪಯೋಗದಲ್ಲಿದ್ದಾಗ್ಯೆ ಕಂಪಾಸನ್ನು ಸರಿಪಡಿಸಿಕೊಳ್ಳಬೇಕಾಗುವದು.

'ಕ. ವಿ.'

ಭಾರತಕ್ಕೆ ಸೆಲ್ಫ್ ಗವರ್ನಮೆಂಟ್.

ಮದ್ರಾಸಿನ ನ್ಯೂ ಇಂಡಿಯಾ ಲೀಗಿನ ಪ್ರೆಸಿಡೆಂಟರಾದ ಡಾ. ಜಿ. ಎಸ್. ಅರುಂಡೇಲರು ವೈಸರಾಯರಿಗೊಂದು ತಂತಿ ಬಿಟ್ಟು ಅದರಲ್ಲಿ ಇಂಡಿಯಾಕ್ಕೆ ಕೂಡಲೇ ಸೆಲ್ಫ್ ಗವರ್ನಮೆಂಟಿನ ಹಕ್ಕನ್ನು ಕೊಡಬೇಕಾಗಿ ಪ್ರಾರ್ಥಿಸಿರುವದಲ್ಲದೆ, ಮಹಾತ್ಮರಿಗೆ ಸಂಯುಕ್ತವಾದ, ಏಕಮುಖವಾದ ಕಾರ್ಯಕ್ರಮವನ್ನನುಸರಿಸಬೇಕೆಂದೂ ತಂತಿ ಬಿಟ್ಟಿರುವರು.

ಯುದ್ಧ ವಾರ್ತೆ.

ನಾಮುರಿನಲ್ಲಿ ಘೋರವಾದ ಹೋರಾಟ.

ಸ್ವದೇಶ ಪ್ರೇಮಕ್ಕಾಗಿ ಜೀವದಾನ!

ಜರ್ಮನರ ಮುಂದುವರಿಕೆ.

ತಾ. 18-5-40

ಫ್ರಾನ್ಸಿನಲ್ಲಿ ಜರ್ಮನಿಯ ಸೈನ್ಯವು ಮುಂದುವರಿಯುತ್ತಿದೆ. ಆರ್ಡೆನ್ಸ್ ಪರ್ವತ ತಪ್ಪಲುಗಳಲ್ಲಿ ಜರ್ಮನರ ದೊಡ್ಡ ಸೈನ್ಯದ ದುಮುಕುವಿಕೆಯು ಮತ್ತು ವಿಮಾನಗಳ ಬಾಂಬಿನ ಸುರಿಮಳೆಯು ಫ್ರೆಂಚ್ ಸೈನ್ಯ ಪಂಗುಗೊಳಿಸಿದೆ. ಜರ್ಮನರು ಈಗ ಉಪಯೋಗಿಸುತ್ತಿರುವ ಭಾರವಾದ ಟೇಂಕ್‌ಗಳನ್ನು ಎದುರಿಸುವುದು ಫ್ರೆಂಚರಿಗೆ ಕಷ್ಟವಾಗಿದೆ. ಸೇಂಬರ್ ಮತ್ತು ರೇತರ್ ಎಂಬಲ್ಲಿ ಜರ್ಮನರ ಒಟ್ಟು ಆರ್ಧವಷ್ಟು ಟೇಂಕ್‌ಗಳು ತೋಪುಗಳು ಉಪಯೋಗಿಸಲ್ಪಡುತ್ತಿವೆ. ಫ್ರೆಂಚ್ ಸೈನಿಕರು ಈ ತೋಪುಗಳ ಧಾಳಿಗೆ ಅಭ್ಯಾಸವಾಗಿ ಅವುಗಳನ್ನು ಎದುರಿಸಲು ತಯಾರಾಗಿರುತ್ತಿರುವರು.

ಸೈನ್ಯ ಹಿಂದೆಗೆಯುವಿಕೆ.

ಬ್ರಿಟಿಷ್ ಮತ್ತು ಬೆಲಿಜಿಯನ್ ಸೈನ್ಯಗಳು ತಮ್ಮ ಸ್ಥಳವನ್ನು ಬದಲಾಯಿಸಿ ಬ್ರೆಸೇಲ್ಸ್ ಪಟ್ಟಣದ ಪಶ್ಚಿಮದಿಕ್ಕಿಗೆ ತೆರಳಿರುವರು. ಇಲ್ಲಿ ನಷ್ಟವೇನೂ ಹೆಚ್ಚಾಗಿರುವುದಿಲ್ಲ.

1500 ವಿಮಾನಗಳ ನಷ್ಟ.

ಜರ್ಮನರ 12ರ ಪೈಕಿ 11 ಯಂತ್ರೋಪಕರಣಗಳ ಡಿವಿಜನ್‌ಗಳು ಯುದ್ಧ ರಂಗದಲ್ಲಿ ಕಾದಾಡುತ್ತಿವೆ. ಅವರ 1600 ವಿಮಾನಗಳು ನಾಶಮಾಡಲ್ಪಟ್ಟಿವೆ. ಇಂಥಾ ಇನ್ನೊಂದು ಧಾಳಿಯನ್ನು ನಡಿಸಲು ಜರ್ಮನರಿಗೆ ಸಾಧ್ಯವಿಲ್ಲವೆಂತಲೂ, ಇದೊನ್ಮೆ ಅವರ ಸೈನ್ಯವನ್ನು ಹಿಮ್ಮೆಟ್ಟುವಂತೆ ಮಾಡಿದರೆ ಮುಂದೆ ಹಿಟ್ಲರನು ಮುಂದೆ ಬರಲಾರನೆಂತಲೂ ಮೇರಿಸಿನ ಅಧಿಕಾರಿಗಳ ಅಭಿಪ್ರಾಯ.

ಮೇಗ್‌ನೆಟ್ ಲೈನ್ ಮುರಿಯಲಿಲ್ಲ.

ಈ ಮೊದಲು ಫ್ರಾನ್ಸಿನ ಮೆಗಿನೆಟ್ ಲೈನಿ ಕೋಟೆಗಳನ್ನು ಜರ್ಮನರು ಮುರಿದು ಹಾಕಿದರೆಂಬ ವಾರ್ತೆಯು ನಿಜವಲ್ಲವೆಂದು ಲಂಡನಿನ ಸುದ್ದಿಯಾಗಿದೆ.

ಬ್ರಿಟಿಷ್ ಸೈನ್ಯದ ಸಹಾಯ.

ಬ್ರಿಟಿಷ್ ಸೈನ್ಯವು ತೋಪು ಟೇಂಕ್ ಸಮೇತ ಸಾಕಷ್ಟು ಸಂಖ್ಯೆಯಲ್ಲಿ ಫ್ರಾನ್ಸ್‌ಗಾಗಿ ಬೆಲ್ಜಿಯಮಿನ ರಣರಂಗಕ್ಕೆ ತುರಿತವಾಗಿ ಕಳುಹಿಸಲ್ಪಟ್ಟಿವೆ. ಸೇಂಬರಾ ಮತ್ತು ಸೇಡಾರನ್ ಮಧ್ಯಕ್ಕಾಗಿ ಜೋರಾದ ಕಾದಾಟವು ನಡೆಯುತ್ತಿದೆ.

ಜರ್ಮನರ ಹೇಳಿಕೆ.

2 ಸಾವಿರಕ್ಕಿಂತ ಹೆಚ್ಚು ಡಚ್ಚು ಮತ್ತು ಫ್ರೆಂಚ್ ಸೈನ್ಯಕರು ಕ್ಯಾವಸ್ ಮತ್ತು ಸವುತ್ ಬ್ವೀವುಲೇಂಡ್ ದ್ವೀಪಗಳಲ್ಲಿ ಜರ್ಮನರಿಂದ ಸೆರೆಹಿಡಿಯಲ್ಪಟ್ಟವೆಂದೂ ಎಂಟ್‌ವರಫ್, ಮೋಬೇಜ್, ಸೇಂಬರ್, ಆಯಿಸ್ ಎಂಬ ಕಡೆಗಳಲ್ಲಿ ಮಿತ್ರಮಂಡಳಿಯವರ ಸೈನ್ಯವು ಹಿಂದಕ್ಕೆ ಒತ್ತಲ್ಪಟ್ಟಿವೆಂದೂ ಬರ್ಲಿನಿನ ವಾರ್ತೆ.

ನಾರ್ವಿಕ್ಕಿನ ಯುದ್ಧ.

ನಾರ್ವೆಯ ನಾರ್ವಿಕ್ಕ್ ಪಟ್ಟಣಕ್ಕಾಗಿ ನಡೆಯುತ್ತಿರುವ ಯುದ್ಧದಲ್ಲಿ ಬ್ರಿಟೇಷ್ ಸೈನ್ಯವು ಜರ್ಮನರನ್ನು ಹಿಂದಕ್ಕೆ ಓಡಿಸಿರುವರು. ಅವರ ಹಡಗುಗಳನ್ನು ಮುಳುಗಿಸಿರುವರು. ಆ ಪಟ್ಟಣವು ಈಗ ಬ್ರಿಟಿಷರ ಸ್ವಾಧೀನದಲ್ಲಿದೆ.

ವಿಮಾನ ಧಾಳಿ.

ಬ್ರಿಟಿಷ್ ವಿಮಾನಗಳು ಜರ್ಮನಿಯ ಹೇಂಬರ್ಗ್ ಬ್ರಾಮಿನ್ ಮುಂತಾದ ಪಟ್ಟಣಗಳಲ್ಲಿರುವ ಯುದ್ಧ ಸಾಮಾನುಗಳ ಸ್ಟೋರುಗಳ ಮೇಲೆ ಬಾಂಬುಗಳನ್ನು ಎಸೆದು ತುಂಬಾ ನಷ್ಟಪಡಿಸಿವೆ. ಈ ವಿಮಾನಧಾಳಿಯಿಂದ ಹೆಚ್ಚಿನ ನಷ್ಟವಾಗಲಿಲ್ಲವೆಂದು ಜರ್ಮನ ಹೇಳಿಕೆ. ಫ್ರಾನ್ಸಿನ ಒಂದು ಕಡೆ 9 ಬ್ರಿಟಿಷ್ ವಿಮಾನಗಳು ಬಾಂಬೆಸೆಯುವ ಹದ್ದು ಜರ್ಮನ್ ವಿಮಾನಗಳನ್ನು ನೆಲಕ್ಕುರುಳಿಸಿದವು.

ಬೆಲ್ಜಿಯಮಿನಲ್ಲಿ ಕಾದಾಟ.

ಕಾರಣಾಂತರಗಳಿಂದ ಬೆಲ್ಜಿಯಮಿನ ಸೈನ್ಯವು ಎಂಟ್‌ವರಫ ಮತ್ತು ಬ್ರೆಸ್ಸೇಲ್ಸ್ ಪಟ್ಟಣಗಳನ್ನು ಬಿಟ್ಟು ಬೇರೆ ಕಡೆ ಸರಿಯಬೇಕಾಯಿತು. ಲೀಜ್ ಮತ್ತು ನಾಮೋರ್ ಕೋಟೆಗಳಲ್ಲಿ ಅವರು ಅತಿ ಸಹಸದಿಂದ ಕಾದಾಡುತ್ತಿರುವರು. ಎಂಟ್‌ವರಫ್ ಪ್ರಾಂತದಲ್ಲಿ ಹಲವು ಕಡೆ ಜರ್ಮನರ ಮುಂದುವರಿಕೆಯನ್ನು ತಡೆದಿರುವರು. ಎಂಟ್‌ವರಫಿನ ಟೌನ್ ಹಾಲ್‌ನಲ್ಲಿ ಜರ್ಮನರ ಧ್ವಜವು ಹಾರಿಸಲ್ಪಟ್ಟಿದೆ.

ರಷ್ಯಾದ ಶಾಂತಿ.

ತಾರೀಕು 19-5-1940.

ಜರ್ಮನಿಗೆ ಹಾಲೆಂಡು ಮತ್ತು ಬೆಲ್ಜಿಯಮಿನಲ್ಲಿ ಉಂಟಾಗಿರುವ ಜಯದಿಂದ ರಷ್ಯಾದ ಅಧಿಕಾರಿಗಳಲ್ಲಿ ಅಶಾಂತಿಯುಂಟಾಗಿದೆಂದೂ ಹಿಟ್ಲರಿನ ಕೈವಳದಲ್ಲಿರುವ ಯೂರೋಪಿನಲ್ಲಿ ತಮಗೆ ತೊಂದರೆಯಾಗದಿರದೆಂದೂ ಆದಕಾರಣ ಜರ್ಮನಿಯ ಈಗಿನ ಧಾಳಿಯನ್ನು ಮಿತ್ರ ಮಂಡಳಿಯವರು ಒಮ್ಮೆ ತಡೆದು ನಿಲ್ಲಿಸಿದರೆ ರಷ್ಯಾದ ಸಹಾನುಭೂತಿಯು ಮಿತ್ರ ಮಂಡಳಿಯವರ ಕಡೆಗೆ ತಿರುಗದೆ ಇರದೆಂದೂ ಅಮೇರಿಕಾದ ಒಂದು ಪತ್ರಿಕೆಯ ಅಭಿಪ್ರಾಯವಾಗಿದೆ.

ಅಮೇರಿಕನರ ಸಹಾಯ.

ಬ್ರಿಟಿಷರ ಕೋರಿಕೆ ಮೇರೆ ಅಮೇರಿಕಾದವರು ಮಾರಲೊಪ್ಪಿರುವ 4,000 ವಿಮಾನಗಳನ್ನು ಆಗುವಷ್ಟು ಶೀಘ್ರವಾಗಿ ಕಳುಹಿಸಿಕೊಡಲು ಏರ್ಪಾಡುಗಳು ಬಿರುಸಾಗಿ ನಡೆಯುತ್ತಿವೆ.

ಆಗಸ್ಟು ತಾ. 15ರಲ್ಲಿ ಶಾಂತಿ!

ಬರುವ ಆಗಸ್ಟು 15 ರೊಳಗೆ ಶಾಂತಿ ಸ್ಥಾಪಿಸುವೆನೆಂದು ಹಿಟ್ಲರನು ಜರ್ಮನರಿಗೆ ಭರವಸೆ ಇತ್ತಿರುವನಂತೆ. ಜರ್ಮನಿಯ ಆರ್ಥಿಕ ಸ್ಥಿತಿಯು ದಿನೇ ದಿನೇ ಕೆಡುತ್ತಿರುವುದರಿಂದ ಅವರು ದೀರ್ಘ ಕಾಲ ಯುದ್ಧ ಮಾಡಲಾರರು.

ಭೀಕರವಾದ ಕದನ.

ಫ್ರಾನ್ಸಿನ ಗೈಜ್ ಮತ್ತು ಲೇಂಡ್ರ್‌ಸಿಸ್ಸಿನ ಮಧ್ಯದಲ್ಲಿ ಭೀಕರವಾದ ಯುದ್ಧವು ನಡೆಯುತ್ತಿದೆ. ಕೆಲವು ಗ್ರಾಮಗಳು ಆಕ್ಷಿತ್ತ ಕೈದಾಟುತ್ತಿದೆ. ಜರ್ಮನರ ಧಾಳಿಯು ಬಹು ಜೋರಾಗಿತ್ತು. ಬೆಲ್ಜಿಯಮಿನ ಕೆಲವು ಭಾಗದಲಿ ಮಿತ್ರಮಂಡಳಿಯವರ ಸೈನ್ಯವು ಕ್ರಮಪ್ರಕಾರ ಹಿಂತೆಗೆಯುತ್ತಿದೆ. ಮೊಬೇಜಿನ ಸ್ಥಿತಿಯು ಅನ್ಶಿತ್ತವಾಗಿದೆ. ಆದರೆ ಇವರ ಕೋಟೆಯ ಪಶ್ಚಿಮ ಭಾಗದಲ್ಲಿ ಯುದ್ಧವು ಬಿರುಸಾಗಿ ನಡೆಯುತ್ತಿದೆ. ಸಮಯವು ಕಳೆದಂತೆ ಜರ್ಮನರ ಧಾಳಿಯ ರಭಸವು ಕಡಿಮೆಯಾಗುತ್ತದೆಂದು ಮಿಲಿಟರಿಯ ತಜ್ಞರ ಅಭಿಪ್ರಾಯವು.

ಜರ್ಮನರ ಹೇಳಿಕೆ.

ಹಾಲೆಂಡು ಅವರ ದ್ವೀಪಗಳ ಸಮೇತ ಜರ್ಮನರ ಕೈವಶವಾಗಿದೆ. ಉತ್ತರ ಬೆಲ್ಜಿಯಮಿನಲ್ಲಿ ಅಂಡ್‌ವರ್‌ಫನ್ನು ಗೆದ್ದು ಶತ್ರುಗಳನ್ನೂ ಬೇರೆ ಕಡೆ ಹಿಂದಕ್ಕೆ ಅಟ್ಟುತ್ತಿರುವರು. ಮೋಬೆಜ್ ಮತ್ತು ಟಾರ್ಪೆಡೊ ಎಂಬಲ್ಲಿ ಯುದ್ಧವು ನಡೆಯುತ್ತಿದೆ. ಸೇಂಬರ್ ಮತ್ತು ಆಯಿಷ್‌ಗಳನ್ನು ದಾಟಿ ಲೇಕಾಟೋ ಮತ್ತು ಸೆಂಟ್ ಕ್ವಿಂಟೆನ್ ಸ್ವಾದೀನ ಪಡಿಸಿಕೊಂಡಿವೆ. ಮೇಗಿನೆಟ್ ಲೈನಿನ ಒಂದು ಭಾಗ ಅವರ ಸ್ವಾಧೀನವಾಗಿದೆ. ಡಚ್ಚರನ್ನು ಬಿಟ್ಟು ಇಷ್ಟರವರೆಗೆ ಜರ್ಮನರ ಕೈವಶವಾದ ಸೈನಿಕರ ಸಂಖ್ಯೆ 1,10,000 ಅಷ್ಟಕ್ಕೆ ಏರಿದೆ. 147 ಶತ್ರುಗಳ ವಿಮಾನಗಳು ನಾಶಮಾಡಲ್ಪಟ್ಟವು. 27 ಜರ್ಮನರ ವಿಮಾನಗಳು ಕಾಣದಾಗಿರುವವು.

ಸೆಂಟ್‌ಕ್ವಿಂಟೆನಲ್ಲಿ ಬಲವಾದ ಯುದ್ಧವು ನಡೆಯುತ್ತಿದೆ. ಜರ್ಮನರ ಬಲವಾದ ಧಾಳಿಯನ್ನು ಫ್ರೆಂಚರು ತಡೆದು ಹಾಕಿರುವರು. ಜರ್ಮನರ ವಿಮಾನ ಪಡೆಗೆ ತುಂಬಾ ನಷ್ಟ ಉಂಟುಮಾಡಿದೆ.

ಜರ್ಮನಿಯ ಎಣ್ಣೆ ಡಿಪೊದ ಮೇಲೆ ಬೆಂಕಿ.

ಬ್ರಿಟಿಷರ ವಿಮಾನಗಳು ಜರ್ಮನಿಯ ಎಣ್ಣೆಕೆರೆಗೆ ಬಾಂಬಿನ ಸುರಿಮಳೆಯನ್ನು ಸುರಿಸಿದಲ್ಲದೆ ಫ್ರಾನ್ಸಿನಲ್ಲಿ ಜರ್ಮನರ ಪಡೆಯನ್ನು ಮುಂದುವರಿಯದಂತೆ ಬಾಂಬಿನ ಪ್ರಯೋಗವನ್ನು ಮಾಡಿದರು.

ಜರ್ಮನರ ಸೈನ್ಯವು ಮುಂದುಬರಲು ಸಾಧ್ಯವಾಗಲಿಲ್ಲ. ಮಿತ್ರಮಂಡಳಿಯವರು ಹಗಲಿರುಳು ತಮ್ಮ ವಿಮಾನಗಳ ಧಾಳಿಯಿಂದ ಜರ್ಮನರು ಮುಂಬರುತ್ತಿರುವ ರೈಲುದಾರಿಯನ್ನು ಬಾಂಬಿನ ಕಿಚ್ಚನ್ನು ಬಿತ್ತಿ ಸೈನ್ಯದ ಮೇಲೆ ಧಾಳಿ ನಡೆಸದಂತೆ ಮಾಡಿದರು.

ಬೆಲ್ಜಿಯಮ್‌ನಲ್ಲಿ ಜರ್ಮನರಿಗೆ ಸಂಭವಿಸಿದ ತೊಂದರೆ.

ಜರ್ಮನರ ಸೈನ್ಯವು ತಮ್ಮ ಕೈವಾಡವನ್ನು ನಡಿಸದಂತೆ ಬ್ರಿಟಿಷರ ವಿಮಾನಗಳು ಬಾಂಬಿನ ಮೂಲಕ ರಸ್ತೆ, ಸೇತುವೆಗಳನ್ನು ಮುರಿದು ಛಿನ್ನ ಭಿನ್ನವಾಗಿ ಮಾಡಿದಲ್ಲದೆ ಜರ್ಮನಿ ಸೈನ್ಯದ ಕುತೂಹಲವನ್ನು ಭಂಗ ಮಾಡಿದರು.

ಹೇಂಬರ್ಗಿನಲ್ಲಿ ಅಪಘಾತಗಳು.

ಮಿತ್ರಮಂಡಳಿಯವರ ವಿಮಾನಧಾಳಿಗಳು ಜರ್ಮನಿಯಲ್ಲಿ ಬಾಂಬಿನ ಸಹಾಯದಿಂದ ಉತ್ತರದ ಹೇಂಬರ್ಗಿನಿಂದ ಹಿಡಿದು ದಕ್ಷಿಣದ ಸೇಡನ್ ಎಂಬಲ್ಲಿಯವರೆಗೆ ವ್ಯಾಪಿಸಿರುವ ಎಣ್ಣೆಗಳ ಡಿಪೊವನ್ನೂ, ರೈಲು ರಸ್ತೆಗಳನ್ನೂ ನಾಶಮಾಡಿರುವರು.

ಬ್ರೆಮೆನ್ ಎಣ್ಣೆ ಡಿಪೋದಲ್ಲಿ 300 ಬಾಂಬನ್ನು ಸುರಿಸಿರುವರು. ಇದರ ಫಲಿತಾಂಶದಿಂದ ದೊಡ್ಡದಾದ ಎಣ್ಣೆ ಸಂಗ್ರಹಿಸಲ್ಪಟ್ಟ ಕೆರೆಗೆ ಬೆಂಕಿ ಹಿಡಿದು ವಾತಾವರಣವೇ ಧೂಮಮಯವನ್ನು ಹೊಂದಿತ್ತು. ಸುಮಾರು 2.000 ಅಡಿಗಳ ಎತ್ತರದ ವರೆಗೆ ಹೊಗೆಯು ಆವರಿಸಿಕೊಂಡು ಗಾಢಾಂಧಕಾರವನ್ನು ಬೀರಿತು.

ಬೆಲ್ಜಿಯಮ್ ರಾಜನ ಹೊಗಳಿಕೆ.

ದೇಶೀಯರು ತಮ್ಮ ಹೃದಯಪೂರ್ವಕವಾದ ಕೃತಜ್ಞತೆಯನ್ನು ಮೃತ್ಯು ಮುಖವನ್ನು ಸಹ ಗಮನಕ್ಕೆ ತರದೆ ಸ್ವಾತಂತ್ರ್ಯಕ್ಕಾಗಿ ಜೀವದಾನ ಮಾಡಲು ಸಿದ್ಧರಿದ್ದು ಶತ್ರು ಪಡೆಯನ್ನು ತಡೆದು ಹಾಕಿದ ವೀರ ಭಟ್ಟರಿಗೆ ಒಪ್ಪಿಸಿರುತ್ತಾರೆಂದು ರಾಜನಾದ ಲೇಪಾಲ್ಡ್‌ನ ಹೇಳಿಕೆ.

ಪ್ರಧಾನ ಮಂತ್ರಿಯವರ ಹೇಳಿಕೆ.

ಪಶ್ಚಿಮ ರಂಗದಲ್ಲಿ ನಡೆಯುತ್ತಿರುವ ಯುದ್ಧ ವಾರ್ತೆಯ ವಿಷಯವಾಗಿ ತಾ. 21 ರಲ್ಲು ಸೇರತಕ್ಕ ಸಭೆಯಲ್ಲು ಪ್ರಧಾನ ಮಂತ್ರಿಯಾದ ಚರ್ಚಿಲ್ಲರು ಉದ್ದ ಭಾಷಣ ಮಾಡುವರಾಗಿ ಹೇಳಿದ್ದಾರೆ.

ಒಬ್ಬ ಜರ್ಮನನ ದಸ್ತಗಿರಿ.

ಅಮೇರಿಕಾದ ಬಿವುನ್ಸ್ ಆರಿಸ್ ಎಂಬ ಪಟ್ಟಣಕ್ಕೆ 50 ಮೈಲು ದೂರದಲ್ಲಿ ಒಬ್ಬ ಜರ್ಮನಿಯನು ಗುಟ್ಟಾಗಿ ರೇಡಿಯೋವನ್ನು ನಡಿಸುತ್ತಿದ್ದನೆಂದೂ, ಅವನನ್ನು ಈಚೆಗೆ ದಸ್ತಗಿರಿ ಮಾಡಿರುವರೆಂದೂ ವರ್ತಮಾನ.

ಫ್ರೆಂಚ್ ಕಮೇಂಡಿಗ್ ಆಫೀಸರ ಬದಲಾವಣೆ.

ಜನರಲ್ ವೇಗೆಂಡ್ ಎಂಬವರನ್ನು ಫ್ರೆಂಚ್‌ದಳಪತಿಯಾಗಿ ನೇಮಿಸಿರುವರು.

ಇವರ ನಾಯಕತ್ವದಲ್ಲಿ ಫ್ರೆಂಚರ ಸೈನ್ಯವು ಯುದ್ಧದಲ್ಲಿ ಮುಂದುವರಿಯಬಹುದಾಗಿ ಊಹಿಸಲಾಗಿದೆ. ಜರ್ಮನರಿಗೂ ಫ್ರೆಂಚರಿಗೂ ನಡೆಯುತ್ತಿರುವ ಯುದ್ಧದ ಭವಿಷ್ಯವು ಜನರಲ್ ವೇಗೆಂಡ್‌ರ ಕೈಯಲ್ಲಿದೆ ಎಂಬ ಜನರ ಅಭಿಪ್ರಾಯ.

ಜರ್ಮನಿಯಲ್ಲಿ ಪೆಟ್ರೋಲಿನ ಅಭಾವ.

ಯುದ್ಧ ಸಾಮಗ್ರಿಯನ್ನು ತಯಾರು ಮಾಡಲು ಬೇಕಾದ ಕಲ್ಲಿದ್ದಲು ಮತ್ತು ಸೆಲ್ಲುಲೋಸ ಮೊದಲಾದ ವಸ್ತುಗಳು ಜರ್ಮನಿನಲ್ಲಿ ದೊರೆತರೂ ಪೆಟ್ರೋಲಿಗೆ ನ್ಯೂನತೆ ಇದೆ ಎಂದು ಇಟಲಿಯವರ ಅಭಿಪ್ರಾಯ.

ಹತ್ತು ಸಾವಿರ ಮಕ್ಕಳನ್ನು ವೇಲ್ಸಿಗೆ ಒಯ್ದರು.

ಇಂಗ್ಲೆಂಡಿನ ಪೂರ್ವ ಮತ್ತು ದಕ್ಷಿಣ ಭಾಗದಿಂದ ಹತ್ತು ಸಾವಿರ ಮಕ್ಕಳನ್ನೂ, ಅವರ ಪೋಷಣಾರ್ಥವಾಗಿ ಆಹಾರ ಸಾಮಗ್ರಿಗಳನ್ನೂ ವೇಲ್ಸಿಗೆ ಒಯ್ದರೆಂದು ವಾರ್ತೆ.

ಜರ್ಮನರ ಜಯ.

ಜರ್ಮನರು ತಮ್ಮ ಮಿಂಚಿನ ವೇಗದಿಂದ ಮುಂದುವರಿಯುತ್ತಿರುವರು. ಮಿತ್ರ ರಾಷ್ಟ್ರಗಳು ಸರ್ವ ಪ್ರಯತ್ನದಿಂದ ಅವರ ಮುನ್ನಡೆಯನ್ನು ತಡೆಯಲು ಪ್ರಯತ್ನಿಸುತ್ತಿರುವರು. ಸೆಂಟ್ ಕ್ವೆಂಟಿನಿನ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಇಕ್ಕಡೆಯವರಿಗೂ ಜಿಡಾಜಿಡಿ ಯುದ್ಧವಾಯಿತು. ಜರ್ಮನರು ತಮ್ಮ ಸೈನ್ಯ ನಿಪುಣತೆಯ ಪರಿಣಾಮದಿಂದಾಗಿ ಮುನ್ನುಗ್ಗುತ್ತಿರುವರು. ಆದರೆ ಜರ್ಮನರ ನುಗ್ಗಾಟವು ಮಿತ್ರ ರಾಷ್ಟ್ರಗಳ ತಡೆಯಿಂದ ಬಹು ಮಟ್ಟಿಗೆ ಕಡಿಮೆಯಾಗಿದೆ. ಮಾಂಟಿಮಿಡಿ ಎಂಬಲ್ಲಿ ಜರ್ಮನರ ಸೈನ್ಯವು ವಿಶೇಷ ಧಾಳಿ ಮಾಡಿತು. ಫ್ರೆಂಚ್ ಸೈನ್ಯವು ಇದನ್ನು ತೀವ್ರ ಪ್ರತಿಭಟಿಸಿದೆ. ಜರ್ಮನರು ಮ್ಯಾಗ್‌ನಟ್ ಲೈನಿನ ಮೇಲೆ ಹೊಸ ಧಾಳಿಯೊಂದನ್ನು ಮಾಡಿದರು. ಆದರೆ ಅದು ಫಲಕಾರಿಯಾಗಲಿಲ್ಲ.

ಬ್ರಿಟಿಷರ ಹೇಳಿಕೆ.

'ಫ್ರಾನ್ಸಿನಲ್ಲಿ ಯುದ್ಧವೇನೋ ಭಯಂಕರ ರೂಪದಿಂದ ನಡೆಯುತ್ತಿದೆ. ಅಂದ ಮಾತ್ರಕ್ಕೆ ನಾವು ಧೈರ್ಯಗೆಡುವ ಅವಕಾಶವಿಲ್ಲ. ಜರ್ಮನ್ ಹಾಗೂ ಬ್ರಿಟಿನಿನ ಸೈನ್ಯಗಳು ಪರಸ್ಪರ ಎದುರು ಯುದ್ಧ ಮಾಡಿದ ಪ್ರತಿಯೊಂದು ಸಂದರ್ಭದಲ್ಲಿ ಕೂಡ ಜರ್ಮನರ ಮುಖದಲ್ಲಿ ಬೆವರಿಳಿಸಿ ಕಳುಹಿಸಿದ್ದಾರೆ ನಮ್ಮ ಯೋಧರು. ಇದರೊಂದಿಗೆ ಬೆಲ್ಜಿಯಂ ಸೈನ್ಯವಾದರೂ ನಮ್ಮೊಡನೆ ಸಹಕರಿಸಿ ಪ್ರಚಂಡ ಹೋರಾಟ ನಡೆಸುತ್ತಿದೆ. ಬಲ್ಗೆ ಎಂಬಲ್ಲಿ ಜರ್ಮನರು ಮುಂದುವರಿಯುತ್ತಿರುವರು. ಅವರ ಸೈನ್ಯಗಳು ಟ್ಯಾಂಕು ಮೊದಲಾದ ಸಾಧನಗಳಿಂದ ಸಜ್ಜಿತವಾಗಿ ನೆಲದಲ್ಲಿ ಮುಂದಡಿಯಿಡುತ್ತಿದ್ದರೆ ವಿಮಾನಗಳು ಪಕ್ಷಿ ಸಮೂಹದೋಪಾದಿ ಆಕಾಶದಲ್ಲೂ ಮುಂಬರುತ್ತಿರುವವು.

ಫ್ರೆಂಚರ ಘೋಷಣೆ.

ಪಶ್ಚಿಮ ಗಡಿಯಲ್ಲಿ ನಡೆಯುತ್ತಿರುವ ಯುದ್ಧದ ವಿಚಾರ ಫ್ರೆಂಚರ ಅಭಿಪ್ರಾಯ ಈ ರೀತಿ ಇದೆ—ಮಿತ್ರ ಸೈನ್ಯಗಳು ತತಮ್ಮ ಯುದ್ಧ ನೈಪುಣ್ಯವನ್ನು ಈ ಕಡೆಗಳಲ್ಲಿ ಪ್ರದರ್ಶಿಸುತ್ತಿರುವರು. ಕಾಂಬ್ರೈ ಎಂಬಲ್ಲಿ ಜರ್ಮನರ ಮುನ್ನುಗ್ಗುವಿಕೆಯನ್ನು ತಡೆದು [illegible] ಕಾಂಬ್ರೈಯ ಪಶ್ಚಿಮ ಭಾಗದಲ್ಲಿ ಶತ್ರುವು ಮುನ್ನುಗ್ಗುವುದು ಕಡಿಮೆಯಾಗಲಿಲ್ಲ. ಕಳೆದ 24 ಗಂಟೆಗಳಲ್ಲಿ (ತಾ. 20) ಶತ್ರುವು ಮುನ್ನುಗ್ಗಲು ಮಾಡಿದ ಪ್ರಯತ್ನಗಳನ್ನೆಲ್ಲಾ ಮೂಲೆ ಸೇರಿಸಿರುವೆವು. ಯುದ್ಧ ಸ್ಥಿತಿಯು ತೀರಾ ಭಯಾನಕವಿದ್ದರೂ ಕಳೆದ 24 ಗಂಟೆಗಳಲ್ಲಿ ವಿಶೇಷ ವಿಚಾರಗಳಾಗಲಿಲ್ಲ. ರಿತೆಲ್ ಪ್ರಾಂತದಲ್ಲಿ ಐಸ್‌ನೆಯನ್ನು ದಾಟಲು ಮಾಡಿದ ಜರ್ಮನರ ಎರಡು ಪ್ರಯತ್ನಗಳನ್ನು ಮಣ್ಣುಗೂಡಿಸಲಾಯಿತು. ಈ ಭಾಗದಲ್ಲಿ ಜರ್ಮನರಿಗೆ ಸಿಕ್ಕಿದ ಅಲ್ಪಸ್ವಲ್ಪ ಜಯವೆಂದರೆ ಮೋಗ್‌ನೆಟ್ ಲೈನಿನ ಹತ್ತಿರದ ಕೆಲವು ಚಿಕ್ಕ ಭಾಗಗಳಾಗಿವೆ. ಕಾಂಬ್ರೈ ಮತ್ತು ಅಮ್ಯಾಂಡ್‌ರೆಸಿಸ್ ಎಂಬಲ್ಲಿ ಅತ್ಯುಗ್ರ ಯುದ್ಧವು ನಡೆಯುತ್ತಿದೆ. ಆದರೆ ಶತ್ರುವು ಈ ಭಾಗದಲ್ಲಿ ಹೆಚ್ಚು ಮುಂದುವರಿದಂತೆ ಕಂಡುಬರುವದಿಲ್ಲ. ಲೋಂಡ್‌ನಿಸ್ ಮತ್ತು ಲ್ಯಾನ್ಸ್ ಭಾಗದಲ್ಲಿ ಜರ್ಮನರ ಕಾದಾಟವು ಅಮೋಘವಾಗಿದೆ. ಫ್ರೆಂಚ್, ಬ್ರಿಟಿಷ್ ಹಾಗೂ ಜರ್ಮನರ ಟ್ಯಾಂಕುಗಳು ಮಿಶ್ರವಾಗಿ ಪರಸ್ಪರ ಭ್ರಮೆಯುಂಟಾಗಿದೆ. ಒಟ್ಟಾರೆ ಈ ಪ್ರಾಂತ್ಯದಲ್ಲಿ ಜರ್ಮನರು ಮುಂದುವರಿಯುತ್ತಿರುವರೆಂದು ಹೇಳಬಹುದು. ಈ ಭಾಗದ ಪರಿಸ್ಥಿತಿಯು ಘೋರ ಚಿಂತಾಜನಕವಾಗಿದೆ.

ವೇಗಾಂಡರ ನೇಮಕ.

ಜನರಲ್ ವೇಗಾಂಡರನ್ನು ಫ್ರೆಂಚ್ ಸೈನ್ಯದ ಮುಖ್ಯಾಧಿಕಾರಿಯಾಗಿ ನೇಮಿಸಿರುವದರಿಂದ ಫ್ರೆಂಚ್ ಸೈನ್ಯವು ಹುರುಪುಗೊಂಡು ಹೆಚ್ಚು ಶಿಸ್ತಿನಿಂದ ಕಾದುತ್ತಿವೆಯೆಂದು ಹೇಳಲಾಗಿದೆ. ಇವರು ಜಯವನ್ನು ಹೇಗಾದರೂ ಪಡೆಯುವರೆಂದು ತಮ್ಮ ಸೈನ್ಯಕ್ಕೆ ಭರವಸೆಯಿತ್ತಿರುವರು.

ಬೆಲ್ಜಿಯಮಿನಿಂದ ವಾಪಸು.

ಬ್ರಿಟಿಷ್ ಹಾಗೂ ಫ್ರೆಂಚ್ ಸೈನ್ಯಗಳು ಯಾವುದೊಂದೂ ನಷ್ಟವಿಲ್ಲದೆ ಹಿಂದೆ ಬರುತ್ತಿರುವವು. ಅಲ್ಲಿಯ ಸ್ಥಿತಿಯು ಭಯಾನಕವೇ ಅಲ್ಲ; ಅಪಾಯಕಾರಿಯಾಗಿದೆ. ಜರ್ಮನರ ಹಿಡಿತವು ದಿನೇ ದಿನೇ ಹೆಚ್ಚುತ್ತಾ ಬರುತ್ತಿದೆ. ಆದರೂ ಧೈರ್ಯಗೆಡುವ ಅವಶ್ಯವಿಲ್ಲವಂತೆ. ಬೆಲ್ಜಿಯಮಿನ ನಾಮೂರ್ ಮತ್ತು ಲೀಜ ಬಂದರುಗಳಲ್ಲಿ ಪ್ರಚಂಡ ಕಾಳಗವಾಗಿದೆ. ಬೆಲ್ಜಿಯನರು ಜೀವವನ್ನು ತೃಣಪ್ರಾಯವಾಗಿ ಕಂಡು ಹೋರಾಡುತ್ತಿರುವರು.

ಫ್ರೆಂಚ್ ಸರಕಾರದ ಆಜ್ಞೆ.

ಶತ್ರುಗಳ ಸುಳ್ಳು ಪ್ರಚಾರವು ಮೇರೆ ಮೀರಿ ನಡೆಯುತ್ತಿದೆ. ಕಾರ್ಖಾನೆಗಳ ಹಾಗೂ ಇತರ ಕೆಲಸ ಕೇಂದ್ರಗಳಲ್ಲಿ ಬಾಂಬುಗಳ ಅಪಾಯದ ವಿಚಾರದಲ್ಲಿ ವಿಪರೀತ ಪ್ರಚಾರವನ್ನು ಜರ್ಮನರು ಕೈಕೊಂಡಿರುವರು. ಇದರಿಂದಾಗಿ ಕೆಲಸಗಾರರು ತಮ್ಮ ಕೆಲಸ ಬಿಟ್ಟು ಹೋಗುವ ಸಂದರ್ಭ ಹೆಚ್ಚಾಗಿ ಕೈಗಾರಿಕೆಗೆ ಧಕ್ಕೆ ಬೀಳುವ ಸಂಭವ ಉಂಟಾಗುವದರಿಂದ ಫ್ರೆಂಚ ಸರಕಾರವು ಒಂದು ಪ್ರಕಟಣೆ [illegible] ಪ್ರಚಾರಗಳಿಗೆ [illegible] ಕೆಲಸವನ್ನು ಬಿಟ್ಟು ಹೋಗುತ್ತಿದ್ದರೋ ಅವರಿಗೆ ಕಠಿಣ ಶಿಕ್ಷೆ ಹಾಗೂ ಜುಲ್ಮಾನೆಯನ್ನು ವಿಧಿಸಲಾಗುವುದು. ಅವರನ್ನು ಸೈನ್ಯದಿಂದ ಯುದ್ಧ ಮಾಡದೆ ಓಡಿ ಹೋಗುವ ಸೈನಿಕರ ಪಕ್ತೀರಿಗೆ ಗುರಿಪಡಿಸಲಾಗುವದೆಂದು ಸಾರಿರುವರು.

ಜರ್ಮನರ ಘೋಷಣೆ.

ಜರ್ಮನರು ಓಸ್ಟೆಂಡನ್ನು ಹಿಡಿದುಕೊಂಡು ಓಯಿಸ್ ಐಸ್‌ನೇ ಕಾಲುವೆಯನ್ನು ಮುಟ್ಟಿರುವರಂತೆ. 'ಶತ್ರುಗಳು ನಮ್ಮನ್ನೆದುರಿಸಿ ವಿಪರೀತ ನಷ್ಟಕ್ಕೊಳಗಾಗಿರುವರು. ಈಗ ಅವರು ಪಶ್ಚಿಮ ಭಾಗದಿಂದ ಕಾಲ್ತೆಗೆಯುತ್ತಿರುವರು. ದಕ್ಷಿಣ ಭಾಗದಲ್ಲಿ ನಮ್ಮ ಸೈನ್ಯವು ಕಳೆದ ಘೋರ ಯುದ್ಧದ (1916) ಸ್ಥಳವಾದ ಸೋಮ್ ಎಂಬ ಪಟ್ಟಣವನ್ನು ವಶಪಡಿಸಿಕೊಂಡಿರುವದು. ಲೀಜ್ ಹಾಗೂ ನಾಮೂರಿನ ಎಲ್ಲಾ ಬಂದರುಗಳು ನಮ್ಮ ಕೈಗಳಾಗಿವೆ. ನಮ್ಮ ವಿಮಾನ ಪಡೆಗಳು ಉತ್ತರ ಫ್ರಾನ್ಸು ಮತ್ತು ಬೆಲ್ಜಿಯಮಿನಲ್ಲಿ ಮಿತ್ರ ರಾಷ್ಟ್ರಗಳ ಮೇಲೆ ಬಾಂಬಿನ ಮಳೆಗರೆದು ವಿಪರೀತ ನಷ್ಟಗಳನ್ನುಂಟುಮಾಡಿವೆ. ಅಲ್ಲದೆ ಮಿತ್ರ ರಾಷ್ಟ್ರಗಳ ಎರಡು ಹಡಗುಗಳನ್ನು ಮುಳುಗಿಸಿ ಒಂದು ಟಾರ್ಪೆಡೊ ಜಹಜನ್ನು ನಾಶ ಮಾಡಲಾಗಿದೆ. ತಾ. 19ರಲ್ಲಿ ಒಟ್ಟಾರೆ ಮಿತ್ರರಾಷ್ಟ್ರಗಳಿಗೆ 143 ವಿಮಾನಗಳ ನಷ್ಟವಾಗಿದೆ. ನಮ್ಮ 31 ವಿಮಾನಗಳು ನಾಶವಾಗಿವೆ. ಬ್ರಿಟಿಷರ ರಾಯಲ್ ಏರ್‌ಫೋರ್ಸಿನ ಪಡೆಯವರು ಉತ್ತರ ಜರ್ಮನಿಯಲ್ಲಿ ಬಾಂಬು ಹಾಕಿದರು. ಇದರಿಂದಾಗಿ ನಾಗರೀಕ ಪ್ರಜೆಗಳನೇಕರು ಮೃತರಾದರು. ಜರ್ಮನ್ ಸೈನ್ಯಕ್ಕೆ ಇದರಿಂದ ಯಾವ ನಷ್ಟವೂ ಸಂಭವಿಸಿರುವದಿಲ್ಲ. ನಮ್ಮ ಪಶ್ಚಿಮಗಡಿಯಲ್ಲಿ ಕೇವಲ ಎಂಟು ವಾರಗಳ ತರಬೇತನ್ನು ಪಡೆದ ಕಾಲಾಳು ದಳವು ತನ್ನ ಕಾರ್ಯವನ್ನು ಯಶಸ್ವಿಯಾಗಿ ಮಾಡಿ ಮಿತ್ರ ರಾಷ್ಟ್ರಗಳ ಸೈನ್ಯಗಳನ್ನು ಹಿಮ್ಮೆಟ್ಟಿಸುತ್ತಿರುವವು.

ಬ್ರಿಟಿಷ್ ವಿಮಾನ ಪಡೆ.

'ಬ್ರಿಟಿಷ್ ರಾಯಲ್ ಏರ್‌ಫೋರ್ಸ್ ಪಡೆಯು ಶತ್ರು ಪಡೆಯ ಮೇಲೆ ಬಾಂಬು ಹಾಕಿ ಅವರ ಮುನ್ನಡೆಗೆ ಆತಂಕ ಉಂಟು ಮಾಡಿರುವದು. ಜರ್ಮನಿಯ ಉತ್ತರದಲ್ಲಿ ಎಣ್ಣೆ ಸರಬರಾಯಿಯ ಕೇಂದ್ರಗಳಿಗೆ ಬಾಂಬು ಹಾಕಿ ವಿಪರೀತ ನಷ್ಟ ಮಾಡಿರುವದು. ಶತ್ರುಗಳೂ ಸಹ ಪ್ರಚಂಡವಾಗಿ ನಮ್ಮನ್ನೆದುರಿಸಿದರೂ ಸಹ ನಮ್ಮ ಎರಡು ವಿಮಾನಗಳು ಮಾತ್ರ ಕಾಣದಾಗಿವೆ. ಆದರೆ ಶತ್ರುಗಳ 50 ವಿಮಾನಗಳನ್ನು ಕೆಳಗುರುಳಿಸಲಾಗಿದೆ.

ಜರ್ಮನರ ಪ್ರಚಂಡ ವಿಜಯ.

ಸೋಮೇ ಪ್ರಾಂತದ ಉತ್ತರ ಭಾಗದಲ್ಲಿ ಜರ್ಮನರು ತೀವ್ರ ಮುನ್ನುಗ್ಗುತ್ತಿರುವರು. ಅಮಿಯನ್ಸ್ ಮತ್ತು ಅರಾಸ್ ಇವು ಶತ್ರುವಿನ ವಶವಾಗಿವೆ.

308 ವಿಮಾನಗಳ ನಷ್ಟ.

ಮೇ ತಾರೀಕು 10ರ ವರೆಗೆ ಜರ್ಮನರ 308 ವಿಮಾನಗಳನ್ನು ನಾಶಪಡಿಸಿರುವದಾಗಿ ಫ್ರೆಂಚರದೊಂದು ಹೇಳಿಕೆ.

ತೀವ್ರ ಯುದ್ಧ.

ಕಾಂಬ್ರೈಯಲ್ಲಿ ಪ್ರಬಲವಾದ ಯುದ್ಧ ನಡೆಯುತ್ತಿದೆ. ಜರ್ಮನರು ತಮ್ಮ ಜಯದಿಂದ ಉದ್ರೇಕಗೊಂಡು ವೀರಾವೇಶದಿಂದ ಹೋರಾಡುತ್ತಿದ್ದಾರೆ. ಸೋಮೇ ಪ್ರಾಂತದ ಉತ್ತರದಲ್ಲಿ ನಡೆದ ಯುದ್ಧದಲ್ಲಿ ಜರ್ಮನರ ವಿಮಾನ ಕೊಡೆಯ ಪಡೆಯವರು ಬೆಂಕಿಯ ಬಾಂಬುಗಳಿಂದ ಸುಸಜ್ಜಿತರಾಗಿ ಪ್ರಾಮುಖ್ಯ ಭಾಗ ವಹಿಸಿದರು. ಇವರ ಉಪಟಳದಿಂದ ರಸ್ತೆಗಳು, ಕಟ್ಟಡಗಳು, ರೈಲ್ವೆ ಸ್ಟೇಷನ್ ವಗೈರೆಗಳು ನಾಶವಾಗಿವೆ.

ಯುದ್ಧದ ಮುನ್ನಡೆ.

ಜನರಲ್ ವೆಗಾಂಡರವರು ರಣಕ್ಷೇತ್ರಕ್ಕೆ ದಯಮಾಡಿಸಿ ಯುದ್ಧವು ಮುನ್ನಡೆಯುವ ಬಗ್ಗೆ ವಿಶಿಷ್ಟ ಪ್ರಯತ್ನಗಳನ್ನು ಮಾಡುತ್ತಿರುವರು. ಫ್ರೆಂಚರು ಪ್ರಚಂಡವಾಗಿ ಹೋರಾಡುತ್ತಿದ್ದಾರೆ. ಅವರ ಮೋಟಾರು ಸೈಕಲ್ ಪಡೆಯು ಇತರ ಕಾಲಾಳು ಸೈನ್ಯದೊಡನೆ ಮುನ್ನುಗ್ಗುತ್ತಿದೆ. ವೆಗಾಂಡರ ನೇತೃತ್ವದಲ್ಲಿ ಫ್ರೆಂಚರಿಗೆ ಜಯ ದೊರೆತೀತೆಂದು ಜನರಲ್ಲಿ ನಂಬಿಕೆ ಹುಟ್ಟಿದೆ.

ಹೆಚ್ಚಿನ ವಿಮಾನಪಡೆ.

ಬ್ರಿಟಿಷರು ಇನ್ನೂ ಪ್ರಚಂಡವಾದ ವಿಮಾನ ತಯಾರಿಯಲ್ಲಿದ್ದಾರೆ. ಕಾರ್ಖಾನೆಗಳು ಹಗಲಿರುಳೆನ್ನದೆ ಕಾರ್ಯ ಮಾಡುತ್ತಿವೆ. ಈ ಬಗ್ಗೆ ಸರಕಾರವು ಒಂದು ಪ್ರಕಟಣೆ ಹೊರಡಿಸಿ ಕೆಲಸದಲ್ಲಿ ಸಹಕರಿಸಿ ದೇಶದ ಕಲ್ಯಾಣ ಸಾಧಿಸಬೇಕೆಂದು ಸಾರಿದೆ.

ರಷ್ಯಾದ ಧೋರಣೆ.

ಯೂರೋಪಿನ ವಾತಾವರಣವನ್ನು ನೋಡುತ್ತಿದ್ದ ರಷ್ಯಾವು ಈಗ ತನ್ನ ಸೈನ್ಯ ಚಟುವಟಿಕೆಗೆ ಪ್ರಾರಂಭಿಸಿದೆ. ಜರ್ಮನಿಯ ಮತ್ತು ಹಂಗೇರಿಯಾದ ಗಡಿಗಳಲ್ಲಿ ಅವು ಶೇಖರವಾಗುತ್ತಿವೆ. ಈ ಧೋರಣೆಯನ್ನು ನೋಡುವಾಗ ಯಾವುದೋ ಒಂದು ರಾಷ್ಟ್ರದ ಮೇಲೆ ಅದು ಕಣ್ಣಿಟ್ಟಂತೆ ಕಂಡು ಬರುತ್ತಿದೆ.

ಫ್ರೆಂಚ್ ಜನರಲನ ಕೈಸೆರೆ.

'ಸೆಡಾನಿನಿಂದ ನಾಮೂರಿಗೆ ಹೋಗುವ ಮಾರ್ಗವನ್ನು ಕಾಯುತ್ತಿದ್ದ ಫ್ರೆಂಚರ 9ನೇ ಸೈನ್ಯವನ್ನು ಜರ್ಮನರು ಎದುರಿಸಿ ಚೆಲ್ಲಾಪಿಲ್ಲಿಯಾಗಿ ತುಂಡರಿಸಿರುವರು. 7ನೇ ಫ್ರೆಂಚ್ ಸೈನ್ಯದ ಕಮಾಂಡರಾಗಿದ್ದ ಜನರಲ್ ಗಿರಾಡರನ್ನು ಕೈಸೆರೆ ತೆಗೆದುಕೊಳ್ಳಲಾಗಿದೆ. ನಮ್ಮ ಸೈನ್ಯ ಪಡೆಗಳು ಬಹು ದಕ್ಷತೆಯಿಂದ ಮುಂದರಿಯುತ್ತಿವೆ.'

ಕೊಡಗು

ಮೇ ತಾರೀಕು ೨೪ ನೇ ಶುಕ್ರವಾರ ೧೯೪೦.

ಘೋರ ಸಂಗ್ರಾಮ.

ಯೂರೋಪಿನ ಯುದ್ಧವು ಅತ್ಯಂತ ಭೀಕರ ಸ್ವರೂಪವನ್ನು ತಾಳುತ್ತಿದೆ. ಜರ್ಮನಿಯ ಸೇನೆಗಳೂ, ಯಂತ್ರ ಸಾಧನಗಳೂ ತಮ್ಮ ಕೀರ್ತಿಗೆ ತಕ್ಕಂತೆ ಕಾದಾಡುತಿವೆ. ಯುದ್ಧದ ನವೀನ ಯಂತ್ರ ಸಾಧನಗಳಿಂದಲೂ, ವಿಮಾನ ಬಲದಿಂದಲೂ, ತಮ್ಮ ಮಿಂಚಿನ ವೇಗದಿಂದಲೂ ಜರ್ಮನ್ ದಂಡು ನಿರ್ದಯವಾಗಿ ತನ್ನ ಧ್ವಂಸ ಕಾರ್ಯವನ್ನು ಪೂರೈಸುತ್ತಾ ಮುನ್ನಡೆದಿದೆ. ನಾರ್ವೆ, ಹಾಲೆಂಡು, ಹಾಗೂ ಬೆಲ್ಜಿಯಮ್ಮಿನ ಮುಖ್ಯ ಬಂದರುಗಳು ವಶವಾಗಿರುವ ಪ್ರಯುಕ್ತ ಜರ್ಮನರಿಗೆ ಯುದ್ಧರಂಗಕ್ಕೆ ಅವಶ್ಯವಾದ ಒಳ್ಳೇ ಆಯಕಟ್ಟಿನ ಸ್ಥಳಗಳೇ ಲಭಿಸಿವೆ ಅನ್ನಬೇಕು. ಹೀಗೆ ಸುತ್ತಲಿರುವ ರಾಷ್ಟ್ರಗಳು ಜರ್ಮನರ ಅಂಕೆಗೆ ಬಂದಿರುವ ಪ್ರಯುಕ್ತ ಉತ್ತರ ಸಮುದ್ರದಲ್ಲಿ ಜರ್ಮನರ ಕೈವಾಡವೇ ಮೇಲಾಗುವದೆಂಬುವದು ಸ್ವಯಂವ್ಯಕ್ತವಾಗುತ್ತದೆ. ಜರ್ಮನರು ಈ ರೀತಿಯಾಗಿ ತಗ್ಗಿದ ರಾಷ್ಟ್ರಗಳಲ್ಲಿ ತನ್ನ ಇಚ್ಛೆಯನ್ನು ಪೂರೈಸಿಕೊಂಡು ಫ್ರಾನ್ಸಿನೊಳನುಗ್ಗಿದೆ. ಫ್ರಾನ್ಸಿನೊಳಗೆ ಧಾಳಿ ನಡೆಸಿಕೊಂಡು ರಾಜಧಾನಿಯಾದ ಪ್ಯಾರಿಸಿನ ಸಮೀಪಗತರಾಗುತ್ತಿರುವರೆಂದು ವಾರ್ತೆ ಬಂದಿದೆ. ಇದರಿಂದ ಯುದ್ಧದ ಗಭೀರತೆಯು ಸುವ್ಯಕ್ತವಾಗುವುದು. ಮಿಲಿಯಾಂತರ ಸೇನೆ, ಉಕ್ಕಿನ ಕೋಟೆಗಳಂತಿರುವ ಟ್ಯಾಂಕುಗಳು, ಸಾವಿರಗಟ್ಲೆ ವಿಮಾನಗಳು ಉಭಯ ಪಕ್ಷದಲ್ಲೂ ಕಲೆತು ಯುದ್ಧ ಮಾಡುತ್ತಿವೆ. ಇಲ್ಲಿ ಉಪಯೋಗಿಸಲ್ಪಡುವ ತೋಪುಗಳ ಶಬ್ದವು ಲಂಡನ್ ನಗರದ ವರೆಗೆ ಕೇಳಿಸುತ್ತಿದೆಯೆಂದೂ, ಭೂಕಂಪವಾದಂತೆ ಮನೆಗಳು ನಡುಗುತ್ತಿವೆಯೆಂದೂ ತಿಳಿದು ಬಂದುದನ್ನು ಪರಿಶೀಲಿಸಿದರೆ ಯುದ್ಧವು ಎಷ್ಟು ಭಯಂಕರವಿರಬೇಕು, ಎಷ್ಟು ಲಕ್ಷ ಸೈನಿಕರು ತುಪಾಕಿಗೆ ತುತ್ತಾಗಿರಬೇಕು, ಗಗನ ಚುಂಬಿಯಾಗಿ ಮೆರೆಯುತ್ತಿದ್ದ ಭವ್ಯ ಕೋಟೆ ಕೊತ್ತಳಗಳು ಯಾವ ರೀತಿ ನೆಲಸಮವಾಗಿರಬೇಕು ಎಂದು ಊಹಿಸಬಹುದು.

ಇಷ್ಟಾದರೂ ಮಿತ್ರರಾಷ್ಟ್ರಗಳ ಪರ ಕೆಲವೊಂದು ಅಂಶಗಳನ್ನಿಲ್ಲಿ ಹೇಳಲಿರಲಾಗುವುದಿಲ್ಲ. ಬೆಲ್ಜಿಯಮ್ಮಿನ ಮುಖ್ಯ ಬಂದರುಗಳೇ ಹಿಟ್ಲರನ ವಶವಾಗಿದ್ದರೂ ಅವರು ಕಾದಾಡುವವನ್ನು ಬಿಟ್ಟಿಲ್ಲ. ಅವರು ನಾಝಿ ರಾಕ್ಷಸನಿಗೆ ಶರಣಾಗತರಾಗಲು ಒಪ್ಪಿಲ್ಲ. ತಮ್ಮ ಸ್ವಾತಂತ್ರ್ಯವನ್ನು ಮಾರಿಕೊಳ್ಳಲು ಅವರು ಸಿದ್ಧರಿಲ್ಲ. ಇಷ್ಟರಲ್ಲೇ ಮಿತ್ರರಾಷ್ಟ್ರಗಳು ಅವರ ಸಹಾಯಕ್ಕೆ ಕೈ ನೀಡಿ ಪ್ರಯತ್ನಿಸುತ್ತಿವೆ. ಹಿಟ್ಲರನ ಯಂತ್ರ ಸಾಮಗ್ರಿಗಳು ಎಂಥಾ ಅನಾಹುತವನ್ನು ನಡೆಸುತ್ತಿದ್ದರೂ ಮಿತ್ರರಾಷ್ಟ್ರಗಳು ಧೈರ್ಯಪೂರ್ವಕವಾಗಿ ಅವರನ್ನು ಎದುರಿಸುತ್ತಿರುವರು. ಫ್ರಾನ್ಸಿನ ಸೆನ್ಯಾಧಿಕಾರಿಯ ಬದಲಾವಣೆಯಾಗಿ ಜನರಲ್ ವೇಗಾಂಡರವರು ನೇಮಕ ಹೊಂದಿರುವದರಿಂದ ಫ್ರಾನ್ಸಿನ ಸೈನ್ಯದಲ್ಲಿ ಅಪೂರ್ವ ಉತ್ಸಾಹವು ಕಂಡು ಬರುತ್ತಿದೆ. ಫ್ರಾನ್ಸಿನ ಸೈನಿಕರು ಪ್ರತೀತಿಗೊಂಡ ಶೂರ ಯೋಧರು. ಒಮ್ಮೆ ಹಿಟ್ಲರನ ಕಾಲು ಹಿಂದೆ ಬಿತ್ತೆಂದರೆ ಆತನಿಗೆ ಎಲ್ಲಿಯೂ ನೆಲೆ ಸಿಗದಂತಾಗಬಹುದಾದ ಸಂದರ್ಭವು ಇದೆ. ಈ ಯುದ್ಧದಲ್ಲಿಯೇ ಜಗತ್ತಿನ ಭವಿತವ್ಯವು, ರಾಷ್ಟ್ರಗಳ ಉನ್ನತಿ ಯಾ ಅವನತಿಯು ನಿಂತಿರುವ ಪ್ರಯುಕ್ತ ಮಿತ್ರರಾಷ್ಟ್ರಗಳು ಬಹು ಜಾಗರೂಕತೆಯಿಂದ ಕಾರ್ಯ ಮಾಡುತ್ತಿವೆ.

ಕಳೆದ ಘೋರ ಯುದ್ಧದ ಫಲಿತಾಂಶವನ್ನೂ, ಈಗಿನ ಯುದ್ಧದ ಮುನ್ನಡೆಯನ್ನೂ ಹೋಲಿಸಿ ನೋಡಿದರೆ ಮಿತ್ರರಾಷ್ಟ್ರಗಳು ಬೆದರಿಕೊಳ್ಳುವ ಅಗತ್ಯವಿಲ್ಲ. ಕಳೆದ ಸಂಗ್ರಾಮದಲ್ಲಿ ಜರ್ಮನರು ಕೆಲವೇ ದಿನಗಳಲ್ಲಿ ಫ್ರಾನ್ಸಿನ ಬಹು ಭಾಗವನ್ನು ಆಕ್ರಮಿಸಿದ್ದರು. ಆದರೆ ಇಂದು ಫ್ರೆಂಚರು ತಾಳ್ಮೆಯಿಂದ ಶತ್ರುಗಳನ್ನು ಎದುರಿಸುತ್ತಿರುವರು. ದುಡುಕಿ ಮುಂದುವರಿಯುತ್ತಿರುವ ಜರ್ಮನಿಗೆ ಅವರು ಪಾಠ ಕಲಿಸದಿರರೆಂಬುದು ವ್ಯಕ್ತವಾಗದಿರದು.

ಕ್ರಮೇಣ ಯುದ್ಧವು ಜಗತ್ತಿನ ಯುದ್ಧವಾಗಿ ಪರಿಣಮಿಸುವ ಸಂಭವ ಕಾಣುತ್ತಿದೆ. ಇಟೆಲಿಯು ಜರ್ಮನಿಗೆ ಸಹಾಯ ನೀಡುವ ಹಾಗೆಯೇ ಅಮೇರಿಕವು ಮಿತ್ರ ರಾಷ್ಟ್ರಗಳ ಪರ ನಿಲ್ಲುವ ಚಿಹ್ನೆಗಳು ಕಂಡು ಬರುತ್ತಿವೆ. ಆ ರೀತಿ ಈ ರಾಷ್ಟ್ರಗಳು ವರ್ತಿಸಿದರೆ ಮಹಾ ಯುದ್ಧವಲ್ಲದೆ ಗಂತ್ಯಂತರವೆಲ್ಲಿಂದ? ಇತ್ತ ರಷ್ಯಾವು ಒಂದೆಡೆ ತನ್ನ ಸೈನ್ಯವನ್ನು ಹಂಗೇರಿ ಮತ್ತು ಜರ್ಮನಿ ಗಡಿಗಳಲ್ಲಿ ಶೇಖರಿಸುತ್ತಿದೆ. ಇದರಿಂದ ಪೂರ್ವದಲ್ಲಿ ರಷ್ಯಾವು ತನ್ನ ತಾಂಡವ ಲೀಲೆಯನ್ನು ಪ್ರಾರಂಭಿಸಬಹುದೇ ಎಂಬ ಸಂದೇಹವು ಉಪಸ್ಥಿತವಾಗುತ್ತಿದೆ. ಹೀಗೆ ಇಡೀ ವಿಶ್ವವೇ ರಣದ ಕಣವಾಗಿ ಮಾರ್ಪಡುವ ಸಂಭವ ಕಂಡು ಬರುತ್ತಿದೆ. ಇದರ ಪರಿಣಾಮವೇನೋ ನೋಡಬೇಕಾಗಿದೆ. ಹಿಟ್ಲರಿಜಂ ಮತ್ತು ನಾಜಿ ಪದ್ಧತಿಯನ್ನು ನಿರ್ನಾಮ ಮಾಡುವುದರಲ್ಲಿ ಮಿತ್ರ ರಾಷ್ಟ್ರಗಳು ಜಯಶೀಲರಾಗುವರೇ ಯಾ ನಾಜಿಗಳ ಪ್ರಭಾವ, ಅಧಿಕಾರ ದರ್ಪಗಳೊಳಗೆ ಸೇರಿ ಹೋಗುವರೇ ಎಂಬ ವಿಚಾರ ತಿಳಿಯಲು ಹೆಚ್ಚು ದಿನಗಳಿಲ್ಲ. ಇನ್ನೊಂದು ಸಂವತ್ಸರವೇನೂ ಇದಕ್ಕಾಗಿ ಕಾಯಬೇಕಿಲ್ಲ.

ವಿಮಾನಗಳು ಭಾರತಕ್ಕೆ ಹೊಸದಲ್ಲ.

ಕಥಾಸರಿತ್ಸಾಗರ ಮತ್ತು ಸಮರಾಂಗನ ಸೂತ್ರಧರ ಸಂಸ್ಕೃತ ಗ್ರಂಥಗಳಲ್ಲಿ ವಿವರವಿದೆ.

ಪ್ರಾಚೀನ ಹಿಂದೂಸ್ಥಾನದಲ್ಲಿ ವಿಮಾನಗಳನ್ನು ರಚಿಸುತ್ತಿದ್ದರೆಂದು ತಿಳಿಯಲಾಗಿದೆ. ರಾಮಾಯಣದಲ್ಲಿ ಸೂಚಿಸಲ್ಪಟ್ಟ ಕೆಲವು ವಿಷಯಗಳೂ ಅದನ್ನು ಪುಷ್ಟೀಕರಿಸುತ್ತಿವೆ. ಉದಾಹರಣೆಗಾಗಿ ಶ್ರೀ ರಾಮನು ಸೀತಾ ಸಮೇತನಾಗಿ ಲಂಕೆಯಿಂದ ಪುಷ್ಪಕ ವಿಮಾನದಲ್ಲಿ ಬಂದನೆಂದು ಹೇಳಿರುವರು. ಗಗನ ಮಂಡಲದಲ್ಲಿ ಆ ವಿಮಾನವು ಹಾರುತ್ತಿತ್ತೆಂದೂ ವಿವರವನ್ನು ಕೊಡಲಾಗಿದೆ. ಇದು ಕವಿಯ ಕಲ್ಪನೆಯೆಂದು ಕೆಲವರು ತರ್ಕ ನಡೆಸುತ್ತಿರುವರು. ಆದರೆ ಯಂತ್ರಗಳು ಇದ್ದುವೆಂಬುದಕ್ಕೆ ಇತ್ತೀಚೆಗೆ ಎಷ್ಟೋ ಆಧಾರಗಳು ದೊರೆತಿರುವವು.

ಶಿಲ್ಪಿ 'ಮಯನು' ಮೊತ್ತ ಮೊದಲು ವಿಮಾನ ಯಂತ್ರಗಳನ್ನು ಕಂಡು ಹಿಡಿದ ದಂತಕತೆಯನ್ನು ನಮ್ಮ ಜನರು ಇನ್ನೂ ಆಡಿಕೊಳ್ಳುತ್ತಿರುವರು. ಈ ಕಥೆಗೆ ಸಂಬಂಧಪಟ್ಟ ಸಾಹಿತ್ಯವೂ ಲಭಿಸಿದೆ. ಇತ್ತೀಚೆಗೆ ದೊರೆತಿರುವ 'ಕಥಾಸರಿತ್ಸಾಗರ' ಎಂಬ ಸಂಸ್ಕೃತ ಗ್ರಂಥದಲ್ಲಿ ಇಬ್ಬರು ಪ್ರಂಧರ ಮತ್ತು ರಾಜ್ಯಧರ ಎಂಬ ಬಡಗಿ ವಿಜ್ಞಾನಿಗಳ ಶೋಧನೆಯು ಉಲ್ಲೇಖಿಸಲ್ಪಟ್ಟಿದೆ. ಅದು ಈ ರೀತಿ ಇದೆ.

ವಟಯಂತ್ರ ವಿಮಾನ.

'ಕಾಂಚಿಯಲ್ಲಿದ್ದ ಭೂಭುಲ ರಾಜ್ಯದಲ್ಲಿ ವಾಸಿಸುತ್ತಿದ್ದ ಸಹೋದರರು ನಾವು ಜನ್ಮತಃ ಬಡಗಿಗಳು. ಮಾಯ ಶೋಧಿಸಿದಂಥಾ ಮರದ ಮಾಯಾ ಯಂತ್ರಗಳನ್ನು ತಯಾರಿಸುವುದರಲ್ಲಿ ನಾವು ನಿಪುಣರಿದ್ದೆವು. ಅಣ್ಣನಾದ ಪ್ರಂಧರನು ಬಡ ಯುವತಿಯೊಬ್ಬಳೊಡನೆ ಪ್ರಣಯ ಬೆಳೆಸಿದ. ಆದರೆ ವಿವಾಹವಾಗಲು ಅವನಲ್ಲಿ ಧನದ ಅಭಾವವಿದ್ದಿತು. ಇದನ್ನು ನಿವಾರಿಸಲು ಅವನೊಂದು ಉಪಾಯ ಹೂಡಿದ. ಮರದಿಂದ ಎರಡು ಹಂಸಗಳನ್ನು ರಚಿಸಿದ. ಹಂಸದ ಹೊಟ್ಟೆಯೊಳಗೆ ಯಂತ್ರವನ್ನಿಟ್ಟಿದ್ದ. ಅರಸನ ಖಜಾನೆಗೆ ಇದ್ದ ಕಿಟಿಕಿಯ ಮೂಲಕ ಈ ಹಂಸಗಳನ್ನು ಕಳುಹಿಸಿದ. ಸರಿಗೆಯನ್ನು ಎಳೆದ ಕೂಡಲೇ ಆ ಹಂಸಗಳು ಕೊಕ್ಕು ಬಿಚ್ಚಿ, ಖಜಾನೆಯಲ್ಲಿದ್ದ ಬುಟ್ಟಿಯಿಂದ ಚಿನ್ನದ ಚೆಂಡುಗಳನ್ನು ಕಚ್ಚಿ ಹಿಂದೆ ಬಂದವು. ಅದನ್ನು ಮಾರಿ ಅಣ್ಣನು ವಿವಾಹವಾದ. ಆದರೆ ಇದು ಹೇಗೋ ಕಾವಲುಗಾರರಿಗೆ ಗೊತ್ತಾಯಿತು. ಏಕೆಂದರೆ ಯಂತ್ರದ ಒಂದು ಮೊಳೆ ಖಜಾನೆಯಲ್ಲಿ ಬಿದ್ದಿತ್ತು. ಯಂತ್ರರಚನೆಗಳಲ್ಲಿ ನಾವು ನಿಪುಣರಿದ್ದರಿಂದ ಅರಸನು ನಮ್ಮನ್ನು ಹಿಡಿಯದೇ ಇರಲಾರನೆಂದು ಅಣ್ಣನಿಗೆ ಸಂಶಯ ಬಂದಿತು. ಆದುದರಿಂದ ರಾತ್ರಿ ಬೆಳಗಾಗುವದರೊಳಗೆ ನಾವು ಪರಾರಿಯಾಗಬೇಕೆಂದು ಅಣ್ಣ ನುಡಿದ. 'ನನ್ನ ಬಳಿ ವಟಯಂತ್ರ ವಿಮಾನವಿದೆ. ಒಂದು ಸ್ಪ್ರಿಂಗ್ ಒತ್ತಿದರೆ ಇದು 800 ಯೋಜನ (6400 ಮೈಲು) ಪ್ರಯಾಣ ಮಾಡಬಲ್ಲುದು. ಇದರಲ್ಲಿ ನಾವಿಬ್ಬರೂ ತೆರಳೋಣ, ಎಂದು ಅಣ್ಣ ಸಲಹೆ ಕೊಟ್ಟ. ಪ್ರಂಧರು ಆ ರೀತಿ ನುಡಿದು ತನ್ನ ಹೆಂಡತಿ ಬಂಧುಗಳೊಡನೆ ಆ ವಿಮಾನವೇರಿ ಆಕಾಶಮಾರ್ಗದಲ್ಲಿ ಪ್ರಯಾಣಮಾಡಿದ. ವಿಮಾನದಲ್ಲಿ ತುಂಬ ಜನರಿದ್ದುದರಿಂದ ನಾನು ಕೂತುಕೊಳ್ಳಲು ಒಪ್ಪಲಿಲ್ಲ. ಆದರೆ ಅರಸನಿಂದ ನನಗೆ ಗಂಡಾಂತರ ಬರಬಹುದೆಂದು ನಾನು ಹೆದರಿದೆ. ನಾನೇ ತಯಾರಿಸಿದ ವಿಮಾನದಲ್ಲಿ ಕೂತು 200 ಯೋಜನ ತೆರಳಿದೆ. ಮತ್ತೆ ಅಲ್ಲಿಂದ ಪುನಃ 200 ಯೋಜನ ದಾಟಿ ಬೇರೊಂದು ದೇಶಕ್ಕೆ ಹೋದೆ.'

'ರಾಮಾಯಣದಲ್ಲಿ ಸೂಚಿಸಿದ್ದ ಪುಷ್ಪಕ ವಿಮಾನವು ಕಟ್ಟುಕಥೆಯಾದರೆ 'ಕಥಾಸರಿತ್ಸಾಗರ'ದಲ್ಲಿ ಕೊಟ್ಟ ಈ ವಿವರಗಳು ಸುಳ್ಳೆಂದು ಹೇಳಲು ಸಾಧ್ಯವಿಲ್ಲ. ಅಲ್ಲಿ ಕೊಟ್ಟ ವಿವರಗಳನ್ನೂ ಈಗಿನ ವಿಮಾನಗಳನ್ನು ಹೋಲಿಸಿದರೆ ಸಾಧ್ಯವಿದೆಯೆಂದು ಹೇಳಬಹುದು. ಪೆಟ್ರೋಲಿನ ಬದಲು ಸ್ಪ್ರಿಂಗ್‌ಗಳ ಮೂಲಕ ವಿಮಾನ ನಡೆಯುತ್ತಿದ್ದರೆಂದರೆ ವಿಜ್ಞಾನದಲ್ಲಿ ಎಷ್ಟರ ಮಟ್ಟಿಗೆ ಅವರು ಮುಂದಿದ್ದರೆಂದು ಊಹಿಸಬಹುದು. ಸ್ಪ್ರಿಂಗ್ ಮೋಟರ್ ಈಗ ಇರುವಾಗ ಸ್ಪ್ರಿಂಗ್ ವಿಮಾನ ನಡೆಸಲು ಅಶಕ್ಯವೆಂದು ಹೇಳುವದು ಹೇಗೆ?

ಸಂಸ್ಕೃತ ಒಪ್ಪಂದಗಳು.

ಇನ್ನು ರಾಜರಾಜರೊಳಗೆ ಆದ ಒಪ್ಪಂದವಲ್ಲೂ ಈ ವಿಮಾನಗಳು ಸೂಚಿಸಲ್ಪಟ್ಟಿವೆ, ಎಂಬುವದನ್ನು ಸಂಸ್ಕೃತ ಗ್ರಂಥಕಾರರು ಬಲ್ಲರು. 1924ನೇ ಇಸವಿಯಲ್ಲಿ ಬರೋಡದಲ್ಲಿ 'ಸಮರಾಂಗಣ ಸೂತ್ರಧರ' ಎಂಬ ಮಹಾಗ್ರಂಥವು ಪ್ರಕಾಶಿಸಲ್ಪಟ್ಟಿತು. ಅದರಲ್ಲಿ 31ನೇ ಅಧ್ಯಾಯವು 'ಯಂತ್ರವಿಧಾನ' ವಿಷಯಕ್ಕೆ ಸಂಬಂಧಿಸಿದೆ. 11ನೇ ಶತಮಾನದಲ್ಲಿ ಮಾಳವ ರಾಜ್ಯದಲ್ಲಿ ಭೋಜದೇವನು ಅರಸನಾಗಿದ್ದಾಗ ಈ ಗ್ರಂಥವು ಬರೆಯಲ್ಪಟ್ಟಿದೆ. ಇದರಲ್ಲಿ ವಿಮಾನಗಳನ್ನು ಹೇಗೆ ರಚಿಸಬೇಕು. ಎದುರಿಗಿರುವ ಪ್ರೊಪೆಲ್ಲರ್ ಯಾವ ರೀತಿ ಇರಬೇಕು. ಎಂಬುದು ಈ ರೀತಿ ಬರೆಯಲ್ಪಟ್ಟಿದೆ.

ಯಂತ್ರ ವಿಧಾನ.

'ಈ ಮಹಾವಿಹಾನಗಂ' (ಭೂತ ಪಕ್ಷಿ)ನ್ನು ಹಗುರವಾದ ಮರದ ತುಂಡುಗಳಿಂದ ಶರೀರ ಹೊಲಿದು ಕಟ್ಟಬೇಕು. ಅ

ವರ್ತಮಾನ ಸಂಗ್ರಹ.

ಒಳದೇಶ.

ಶ್ರೀ ಚಾಮರಾಜ ಟೆಕ್ನಿಕಲ್ ಇನ್ಸಿಟ್ಯೂಟನಲ್ಲಿ ಫೈನ್ ಆರ್ಟ್ಸ್, ಮೋಡೇಲಿಂಗ್ ಮತ್ತು ಸ್ಕಾಲ್ಪರಿಂಗ್ ಇವುಗಳ ತರಬೇತು ಹೊಂದುತ್ತಿದ್ದ ಶ್ರೀ ಮುಕ್ಕಾಟಿರ ಪೂವಯ್ಯನವರು ಪ್ರಥಮ ತರಗತಿಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಕಳೆದ ವಾರಗಳಲ್ಲಿ ಪ್ರಕಟಿಸಿದ 33 ಜನರಲ್ಲದೆ ಕಾಂಗ್ರೆಸ್ ಪ್ರತಿಜ್ಞಾ ಪತ್ರಕ್ಕೆ ಶ್ರೀ ಗಳಾದ (34) ತಡಿಯಂಗಳ ತಿಮ್ಮಯ್ಯ, (35) ಚೇಂದಿರ ಮುದ್ದಯ್ಯ, (36) ಮಲ್ಲಂಡ ಎ. ಮುದ್ದಯ್ಯ, (37) ಸ್ಥಾನಿಕ ಈಶ್ವರಯ್ಯ ಇವರುಗಳು ಸಹಿ ಮಾಡಿರುವರು.

ಕಳೆದ ಮದ್ರಾಸ್ ಯೂನಿವರ್ಸಿಟಿ ಬಿ. ಎ. ಪರೀಕ್ಷೆಯಲ್ಲಿ ಶ್ರೀಗಳಾದ ಉದಿಯಂಡ ದೇವಯ್ಯ ಮತ್ತು ಜಿ. ಎಸ್. ಕೃಷ್ಣರಾಜುರವರು ಪೂರ್ತಿಯಾಗಿಯೂ, ಶ್ರೀಮತಿ ಪಾಂಡಂಡ ದೇಚಮ್ಮನವರು ಒಂದನೇ ಮತ್ತು ಮೂರನೇ ಭಾಗ (ಫಸ್ಟ್ ಕ್ಲಾಸ್)ಗಳಲ್ಲಿಯೂ ತೇರ್ಗಡೆಯಾಗಿರುವರು.

ಕಳೆದ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಎಸ್. ಕೃಷ್ಣರಾವ್ (ಒಂದನೇ ತರಗತಿ) ಚೇಂದಂಡ ಕರುಂಬಯ್ಯ, ಕೋದಾಂಡ ಕಾರ್ಯಪ್ಪ, ಕಡೇಮಾಡ ಬಿದ್ದಪ್ಪ, ಪಾಲೇಕಂಡ ಪೂಣ್ಣಪ್ಪ, ಮುಂಡಂಡ ಉತ್ತಪ್ಪ, ಬಾಡನ ಅಪ್ಪಯ್ಯ, ಬಾಗನ ಚಿಕ್ಕ ಸುಬ್ಬಯ್ಯ, ಕೆಂಚೆಟ್ಟಿ ನಂಜಪ್ಪ, ಇವರುಗಳು ಪೂರ್ತಿಯಾಗಿಯೂ ಶ್ರೀ ಕೋಡಿಮಣಿಯಂಡ ಚಂಗಪ್ಪನವರು ಒಂದನೇ ಭಾಗದಲ್ಲೂ, ಶ್ರೀ ಪಟ್ಟಚೆರವಂಡ ದೇವಯ್ಯನವರು ಎರಡನೇ ಮತ್ತು ಮೂರನೇ ಭಾಗದಲ್ಲೂ, ಶ್ರೀ ಇಟ್ಟೀರ ನಾಣಯ್ಯ ಮತ್ತು ಕೊಕ್ಕಲೆರ ಕಾಳಯ್ಯನವರು ಎರಡನೇ ಭಾಗಗಳಲ್ಲಿಯೂ ಉತ್ತೀರ್ಣರಾಗಿರುವರು. ಇವರೆಲ್ಲರಿಗೂ ನಮ್ಮ ಅಭಿನಂದನೆಗಳಿವೆ.

ಮಡಿಕೇರಿ.

ಕರ್ಣಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಡಾ. ನಾಗಣ್ಣಗೌಡ ಎಂ. ಎಸ್. ಸಿ. ಯವರು ಈ ದಿನ ಇಲ್ಲಿಗೆ ಬಂದು 5 ಗಂಟೆಗೆ ಜಮೀನ್ದಾರರ ಸಂಘದ ಕಟ್ಟಡದ ಮುಂದುಗಡೆ ಸಾರ್ವಜನಿಕ ಭಾಷಣ ಮಾಡಲಿರುವರು.

ಗ್ರಾಮಾಭಿವೃದ್ಧಿ ಕಮಿಟಿ ಮೀಟಿಂಗು ತಾರೀಕು 27ರಲ್ಲಿ ಇಲ್ಲಿ ನಡೆಯುವದು.

ಈ ವಾರ ಅಂದರೆ ತಾ. 18ರಿಂದ ಇಂದಿನ ವರೆಗೆ ಇಲ್ಲಿ 1 ಇಂಚು 41 ಸೆಂಟು ಮಳೆಯಾಗಿದೆ.

ಇಲ್ಲಿಯ ಪೌರ ಸಭೆಯ ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ ಮುಕ್ಕಾಟಿರ ಅಪ್ಪಣ್ಣನವರು ಅಧ್ಯಕ್ಷರಾಗಿಯೂ, ಶ್ರೀ ಎ. ಎ. ವಾರುಣಿಯವರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟಿರುವರು.

ತಾ. 21-5-40ರಲ್ಲಿ ಕಮಿಷನರ್ ಹಾಕಿ ಕಪ್ಪಿನ ಪಂದ್ಯಾಟದ ಕಡೇ ಆಟವು ಸ್ಕೂಲ್ ಎ. ಟೀಮಿನವರಿಗೂ, ಮಡಿಕೇರಿ ಸ್ಪೋರ್ಟ್ಸ ಕ್ಲಬ್ಬಿನವರಿಗೂ ನಡೆದು ಸ್ಪೋರ್ಟ್ಸ ಕ್ಲಬ್ಬಿನವರು ಜಯಶೀಲರಾಗಿ ಬಟ್ಟಲನ್ನು ಗೆದ್ದರು.

ವೀರಾಜಪೇಟೆ

ತಾ. 26ರಲ್ಲಿ ಜಿಲ್ಲಾ ಸತ್ಯಾಗ್ರಹ ಕಮಿಟಿಯ ಮೀಟಿಂಗು ಇಲ್ಲಿಯ ಸತ್ಯಾಗ್ರಹ ಶಿಬಿರದಲ್ಲಿ ಬೆಳಿಗ್ಗೆ 9 ಗಂಟೆಗೆ ಜರಗುವದು.

ಈ ತಾ. 22ರಲ್ಲಿ ಇಲ್ಲಿಯ ಸತ್ಯಾಗ್ರಹ ಶಿಬಿರದವರು ರಾಷ್ಟ್ರ ಧ್ವಜದೊಡನೆ ಮೆರವಣಿಗೆ ಮಾಡಿ ಶ್ರೀ ಬಿ. ಎಂ. ಕಾರ್ಯಪ್ಪ ಎಂ. ಎಲ್. ಸಿ.ಯವರ ಅಧ್ಯಕ್ಷತೆಯಲ್ಲಿ ಇಲ್ಲಿ ಒಂದು ಸಾರ್ವಜನಿಕ ಸಭೆ ನಡೆಸಿದರು. ಶ್ರೀ ಗಳಾದ ಪಿ. ಐ. ಬೆಳ್ಯಪ್ಪನವರು ಮತ್ತು ಕೆ. ಸಿ. ಕರುಂಬಯ್ಯನವರ ಇಂದಿನ ರಾಜಕೀಯ ಪರಿಸ್ಥಿತಿ, ಹಾಗೂ ಮುಂದಿನ ಚಳವಳಿದ ತಯಾರಿಯ ಬಗ್ಗೆ ಭಾಷಣ ಮಾಡಿದರು. ಶ್ರೀ. ಪಿ. ಐ. ಚಂಗಪ್ಪನವರು ರಾಷ್ಟ್ರೀಯ ಧ್ವಜದ ವಿಚಾರ ಭಾಷಣ ಮಾಡಿದರು.

ಇಲ್ಲಿಯ ಸತ್ಯಾಗ್ರಹ ಶಿಬಿರದ ಪ್ರಥಮ ಪಂಗಡದ ತರಬೇತು ಪೂರ್ತಿಯಾಗಿ ಎರಡನೇ ತಂಡದ ತರಬೇತು ತಾ. 20ರಿಂದ ಪ್ರಾರಂಭವಾಗಿದೆ. ಶ್ರೀ. ಪಿ. ಐ. ಬೆಳ್ಯಪ್ಪನವರು ಶಿಬಿರಾಧಿಪತಿಗಳಾಗಿರುವರು. ಶಿಬಿರದಲ್ಲಿ ಶ್ರೀಮತಿ ಪಂದ್ಯಂಡ ಶೀತಮ್ಮ, ಶ್ರೀ ಗಳಾದ ಬಿ. ಎಂ. ಕಾರ್ಯಪ್ಪ, ಅಜ್ಜಿಕುಟ್ಟಿರ ಪೊನ್ನಪ್ಪ, ಕಾಳೇಂಗಡ ಚಿಣ್ಣಪ್ಪ, ಎಚ್. ಬಿ. ತಮ್ಮಯ್ಯ, ಮಳವಂಡ ಚಂಗಪ್ಪ, ಕೆ. ಜಿ. ಪೂವಯ್ಯ, ಐ. ಐ. ಚಂಗಪ್ಪ, ಪುಲಿಯಂಡ ಸುಬ್ಬಯ್ಯ, ಇವರುಗಳು ತರಬೇತು ಹೊಂದುತ್ತಿರುವರು. ಇನ್ನೊಂದು ತಂಡದ ತರಬೇತು ತಾ. 27ರ ಬೆಳಿಗ್ಗೆ ಪ್ರಾರಂಭವಾಗುತ್ತದೆ. ಸತ್ಯಾಗ್ರಹಿಗಳು ಆದಿತ್ಯವಾರ ಸಾಯಂಕಾಲವೇ ಬರಬೇಕಿದೆ.

ನಾಪೋಕ್ಲು.

ಇಲ್ಲಿಯ ಪಾಲೂರು ಗ್ರಾಮದ ಶ್ರೀ ಮುಂದನೆರವಂಡ ಭೀಮಯ್ಯನವರು ಈ ತಾ. 22 ರಲ್ಲಿ ತಮ್ಮ ಕೊಟ್ಟಿಗೆಯಿಂದ ಸೌದೆಯನ್ನು ಸಾಗಿಸಿ ಅವಕ್ಕೆ ಬೆಂಕಿ ಹಾಕಿ ಅದರಲ್ಲಿ ತಾವು ಹಾರಿಕೊಂಡು ಆತ್ಮಹತ್ಯ ಮಾಡಿಕೊಂಡರೆಂದೂ, ಪೋಲೀಸು ತನಿಕೆ ನಡೆಸಿದಾಗ್ಯೆ ಅವರು ಬರೆದ ಒಂದು ಪತ್ರ ಸಿಕ್ಕಿ ಅದರಲ್ಲಿ ಯಾರಿಗೂ ಪೋಲೀಸರು ತೊಂದರೆ ಕೊಡಬಾರದಾಗಿಯೂ ಶ್ರೀ ಕೃಷ್ಣಸ್ತ್ರೀತ್ಯರ್ಥವಾಗಿ ತಾನು ಆತ್ಮಹತ್ಯ ಮಾಡಿಕೊಂಡದೆಂದೂ ಬರೆದಿತ್ತೆಂದೂ ವರ್ತಮಾನ.

ಗಜೆಟ್.

ಜೂನ್ ತಾರೀಕು ಒಂದರಿಂದ 6½ ತಿಂಗಳುಗಳ ವರೆಗೆ ಅ. ಕಮಿಷನರೂ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೂ ಆದ ಶ್ರೀ ಯಂ. ಎಸ್. ಮಂದಣ್ಣನವರಿಗೆ ರಜಾ ಮಂಜೂರಾಗಿದೆಯೆಂದೂ, ಕಡೆಯ 2½ ತಿಂಗಳನ್ನು ಅವರು ಇಂಡಿಯಾ, ಸಿಲೋನ್, ನೇಪಾಳ, ಬರ್ಮ ಅಥವಾ ಏಡನಿನ ಹೊರಗೆ ಕಳೆಯುವದಾದರೆ ಮಾತ್ರ ಅವರಿಗೆ ಸರಾಸರಿ ವೇತನವನ್ನು ಕೊಡಲಾಗುವದೆಂದೂ ಇಲ್ಲವಿದ್ದರೆ ಆ 2½ ತಿಂಗಳನ್ನು ಅರ್ಧ ಸಂಬಳದ ರಜಾವಾಗಿ ಪರಿಗಣಿಸಲಾಗುವದೆಂದು ಪ್ರಕಟವಾಗಿದೆ.

ರಜಾದಲ್ಲಿರುವ ಅ. ಕಮಿಷನರ ಹಾಗೂ ಡಿ. ಮೇಜಿಸ್ಟ್ರೇಟರ ಬದಲಿಗೆ ದಕ್ಷಿಣ ಕೊಡಗು ತಾಲೋಕಿನ ಸುಬೆದಾರರಾದ ಶ್ರೀ ನೆಲ್ಲಮಕ್ಕಳ ಸುಬ್ಬಯ್ಯನವರನ್ನು ತಾ. 1-6-40ರಿಂದ ನೇಮಿಸಲಾಗಿದೆ.

ಸಬ್ ಜಡ್ಜರ ಕೋರ್ಟನಲ್ಲಿ ಶಿರಸ್ತೆದಾರರಾಗಿದ್ದ ಶ್ರೀ ಕೇಳಪಂಡ ಐಯ್ಯಣ್ಣನವರನ್ನು ಅ. ಕಮಿಷನರಾಗಿ ನೇಮಕ ಹೊಂದಿರುವ ಶ್ರೀ ನೆಲ್ಲಮಕ್ಕಳ ಸುಬ್ಬಯ್ಯನವರ ಬದಲಿಗೆ ದಕ್ಷಿಣಕೊಡಗಿನ ಸುಬೆದಾರರಾಗಿ ನೇಮಿಸಲಾಗಿದೆ.

ವಿಜ್ಞಾಪನೆ.

ಕೆಳಗಿನ ವಿಳಾಸದಾರರು ಕೆಲವು ವರ್ಷಗಳಿಂದ ಚಿನ್ನ, ಬೆಳ್ಳಿ, ವ್ಯಾಪಾರ ಮಾಡುತ್ತಿರುವದು ಕೊಡಗಿನ ಮಹನೀಯರಿಗೆ ತಿಳಿದ ವಿಷಯವಾಗಿದೆ. ಇವರು ಈ ಮೂಲಕ ವಾಚಕರಿಗೆ ತಿಳಿಯಪಡಿಸುವದೇನಂದರೆ, ಚಿನ್ನ ಮತ್ತು ಬೆಳ್ಳಿಯ ಧಾರಣೆಯು ಈಗ ಬಹಳ ಮಟ್ಟಿಗೆ ಏರಿರುವದರಿಂದ ಅವುಗಳನ್ನು ನಿಮ್ಮ ಮನೆಗೆ ಬರುವ ವ್ಯಾಪಾರಗಾರರಿಗೆ ನೀವು ಕ್ರಯವನ್ನು ನಮ್ಮಲ್ಲಿ ಸರಿಯಾಗಿ ವಿಚಾರಿಸದೆ ಚಿನ್ನದ ಮತ್ತು ಬೆಳ್ಳಿಯ ಸಾಮಾನುಗಳನ್ನು ಮಾರಬೇಡಿ.

ಆರ್. ಯಂ. ಕಪನೈಯ್ಯ.
ಚಿನ್ನ ಮತ್ತು ಬೆಳ್ಳಿ ವ್ಯಾಪಾರಿ ಮಡಿಕೇರಿ.

ಅಪರಂಜಿ ತೊಲಕ್ಕೆ 45-2-0
ಪೌನಿಗೆ 1ಕ್ಕೆ 30-1-0
ಮೂಸ ಚಿನ್ನ ತೊಲಕ್ಕೆ 44-7-0
ಬೆಳ್ಳಿ ನೂರು ತೊಲಕ್ಕೆ 62-10-0

ಮಾರಾಟಕ್ಕಿದೆ.

ವೀರಾಜಪೇಟೆನಾಡು ಮೈತಾಡಿ ಗ್ರಾಮದ ವಕ್ಕಲಿಗರ ನಿಂಗೇಗೌಡ್ರ ಮಗ ದೇವಣ್ಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕುಳ ನಂ. 38ರ ಸಾಗಿನ ಸ. ನ. 150/1ರ 16.70 ಏಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ತಲೆ ತೋಟದ 3. 90 ಯೇಕ್ರೆಯ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕಿತ್ತಲೆ ತೋಟದ .80 ಸೆಂಟಿನ ಪೈಕಿ 64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಏಕ್ರೆಯ ಬಾಣೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತಲೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯಸ್. ದೇವಣ್ಣ,
ಮೈತಾಡಿಗ್ರಾಮ,
12-11 ಮೂನಾರ್ಡು.

ಸತ್ಯಾಗ್ರಹಿಗಳ ತರಬೇತು.

ಸತ್ಯಾಗ್ರಹಿಗಳ ತರಬೇತಿನ ಶಿಬಿರವು ವೀರಾಜಪೇಟೆಯಲ್ಲಿ ಈ ತಾ. 12ರಲ್ಲಿ ಪ್ರಾರಂಭವಾಗಿದೆ. ಈ ಶಿಬಿರವು ಮೂರು ಅವಶ್ಯ ಬಿದ್ದರೆ ನಾಲ್ಕು ವಾರಗಳ ವರೆಗೆ ತಂಡ ತಂಡವಾಗಿ ನಡಿಸಲ್ಪಡುವದು. ಒಂದು ತಂಡದ ತರಬೇತು ಕಮ್ಮಿ ಪಕ್ಷ ಒಂದು ವಾರದ ವರೆಗಾದರೂ ನಡೆಯುವದು. ತರಬೇತಿನ ವಾರವು ಪ್ರತಿ ಆದಿತ್ಯವಾರ ಪ್ರಾರಂಭವಾಗುವದು. ಕಾಂಗ್ರೆಸ್ಸಿನ ಸತ್ಯಾಗ್ರಹ ಪ್ರತಿಜ್ಞೆಗೆ ರುಜು ಮಾಡಿದ ಪ್ರತಿಯೊಬ್ಬ ಸತ್ಯಾಗ್ರಹಿಯೂ ಈ ಶಿಬಿರದಲ್ಲಿ ತರಬೇತು ಹೊಂದಬೇಕಾಗಿ ನಿರೀಕ್ಷಿಸಲಾಗಿದೆ. ಸತ್ಯಾಗ್ರಹಿಗಳು ಈ ಶಿಬಿರಕ್ಕೆ ಬರುವಾಗ್ಯೆ ಹಾಸಿಗೆ ಮತ್ತು ಬಿಳಿ ಖಾದಿಯ ಯೂನಿಫಾರಂನ್ನು ಮಾತ್ರ ತಂದರೆ ಸಾಕಾಗಿದೆ. ಊಟದ ಮತ್ತು ಉಳಕೊಳ್ಳುವ ಏರ್ಪಾಡು ಶಿಬಿರದಲ್ಲಿ ಮಾಡಲ್ಪಡುವದು. ಸತ್ಯಾಗ್ರಹಿಗಳು ಆದಷ್ಟು ಬೇಗನೆ ಈ ಶಿಬಿರಕ್ಕೆ ಸೇರಿ ನಮ್ಮ ತರಬೇತನ್ನು ಪೂರೈಸಿಕೊಳ್ಳಬೇಕಾಗಿ ಕೋರಿಕೆ.

ಬಿ. ಯಂ. ಕಾರ್ಯಪ್ಪ,
ಕೊ. ಕಾ. ಸತ್ಯಾಗ್ರಹ ಕಮಿಟಿ.
ತಾ. 15-5-40.

ದರ ಪೊಟ್ಟೆಯಲ್ಲಿ ರಸಯಂತ್ರ ಇಡಬೇಕು. ಅವಶ್ಯವಿದ್ದಷ್ಟು ಉರಿ ಶಕ್ತಿ ಈ ಯಂತ್ರಕ್ಕೆ ಇರಬೇಕು. ಎದುರಿಗಿದ್ದ ಪ್ರೊಪೆಲ್ಲರ್ ತಿರುಗಿದಾಗ ಪೊಟ್ಟೆಯೊಳಗೆ ಪಾದರಸದ ಸಹಾಯದಿಂದ ಇಂಜಿನ್ ತಿರುಗುವದು. ವಿಮಾನವನ್ನು ಮುಂದೆ ಮುಂದೆ ದೂಡುವುದು. ದಿವ್ಯವಿಮಾನ (ಮರದ ವಿಮಾನ) ವು ಅತಿ ವೇಗವಾಗಿ ಹಾರುತ್ತಿದೆಯಲ್ಲದೆ ಸಿಂಹಗರ್ಜನೆ ಮಾಡುತ್ತದೆ. ಇದನ್ನು ಪರಿಶೀಲಿಸಿದರೆ ಭೋಜದೇವ ಅರಸನ ಕಾಲದಲ್ಲಿದ್ದ ವಿಮಾನಗಳಿಗೂ ಈಗಿನ ವಿಮಾನಗಳಿಗೂ ಹೆಚ್ಚಿನ ಭಿನ್ನತೆ ಇರಲಿಕ್ಕಿಲ್ಲವೆಂದು ಹೇಳಬಹುದು. ಜರ್ಮನಿಯಲ್ಲಿ ಪೆಟ್ರೋಲಿನ ಕೊರತೆಯನ್ನು ನಿವಾರಿಸುವದಕ್ಕಾಗಿ ಇತ್ತೀಚೆಗೆ ಪಾದರಸವನ್ನು ವಿಮಾನದಲ್ಲಿಟ್ಟು ನಡೆಸುತ್ತಿದ್ದಾರೆ. ಈ ಎಲ್ಲಾ ಆಧಾರಗಳಿಂದ ಪ್ರಾಚೀನ ಭಾರತದಲ್ಲಿ ವಿಮಾನಗಳು ಇದ್ದುವೆಂದು ಮುಕ್ತಕಂಠದಿಂದ ಹೇಳಬಹುದು. ಆದರೆ ಈ ವಿದ್ಯೆಯು ನಾಶ ಹೇಗಾಯಿತು. ಎಂಬುದು ದೊಡ್ಡ ಸೋಜಿಗವೇ ಆಗಿದೆ. ಕಾರ್ಕಳ ಶ್ರವಣಬೆಳಗೊಳದ ಗುಮ್ಮಟ ರಾಯನನ್ನು ಕೆತ್ತಿದ ಶಿಲ್ಪ ಚಾತುರ್ಯವನ್ನು ಬಲ್ಲವರು ಈಗ ಎಷ್ಟು ಮಂದಿ ಇದ್ದಾರೆ. ಈ ಕಲೆಯು ಬಿದ್ದುಹೋದಂತೆಯೆ ವಿಮಾನರಚನಾ ಕೌಶಲ್ಯವೂ ಅಳಿಯಿತೆಂದು ಹೇಳಬಹುದು.

'ಪ್ರಭಾತ'

ಅಸಹಕಾರ.

ಅಸಹಕಾರವು ಅತ್ಯಮೋಘ ಆಯುಧ. ಸ್ವಾರ್ಥಿಗಳು ತಮ್ಮ ನಿಶ್ಚಿತ ಧ್ಯೇಯಕ್ಕಾಗಿ ಅದರ ದುರುಪಯೋಗಪಡಿಸಿದರೆಂಬ ಪರಿ ಅಸಹಕಾರವನ್ನು ತೆಗಳುವದು ತಪ್ಪು. ಅದರ ನ್ಯೂನತೆ ತತ್ವದಲ್ಲಿಲ್ಲ. ಉಪಯೋಗಿಸುವ ಜನತೆಯಲ್ಲಿ.

● ○ ●

ಲೇ:- ಮಹಾತ್ಮ ಗಾಂಧಿ. 'ಹರಿಜನ' ತಾರೀಕು 18-5-40.

ಗಾಂಧೀಜಿಯವರಿಗೆ ಈ ಕೆಳಗಿನಂತೆ ಭಾರತದ ರಾಜಕೀಯ ಧುರೀಣರೊಬ್ಬರು ಕಾಗದ ಬರೆದಿರುವರು.

'ನೀವು ನಿಮ್ಮ ಈ ವರೆಗಿನ ಜೀವಮಾನದಲ್ಲಿ ದೊಡ್ಡ ದೊಡ್ಡ ಜವಾಬ್ದಾರಿಯನ್ನು ಹೊತ್ತು ಕಾರ್ಯ ಮಾಡಿರುವಿರಿ. ಅನೇಕ ಜಟಿಲ ಸಮಸ್ಯೆಗಳನ್ನು ಸುಸೂತ್ರವಾಗಿ ಬಿಡಿಸಿರುವಿರಿ. ಆದರೆ ಕಳೆದ ರಾಮಗಡ ಕಾಂಗ್ರೆಸು ನಿಮ್ಮ ಮೇಲೆ ಹೊರಿಸಿರುವ ಜವಾಬ್ದಾರಿಯು ಅವಕ್ಕೆಲ್ಲಕ್ಕಿಂಥಾ ದೊಡ್ಡದಾದುದು. ಭಾರತದ ಭವಿತವ್ಯ, ಯಾಕೆ? ಜಗತ್ತಿನ ಭವಿಷ್ಯವೇ ಅದರಲ್ಲಡಗಿದೆ.

ಜ್ಞಾನ ಹಾಗೂ ಅನುಭವದಲ್ಲಿ ನೀವು ನನಗಿಂಥಾ ಮೇಲಿನ ಸ್ಥಿತಿಯಲ್ಲಿರುವಿರಿ. ನೀವು ಸಾವಿರಾರು ಜನರೊಡನೆ ಸಂಪರ್ಕವಿಟ್ಟುಕೊಂಡು ಪ್ರತಿಯೊಬ್ಬನಿಗೂ ಸಂಭವಿಸಿದ ಕಾರ್ಯಭಾರದಲ್ಲಿ ಕೈಹಾಕಿ ಸತ್ಯಶೋಧನೆ ಮಾಡುತ್ತಿರುವದು ನನ್ನನ್ನು ಮುಗ್ಧನನ್ನಾಗಿ ಮಾಡಿದೆ. ಅಹಿಂಸಾ, ಸತ್ಯಾಗ್ರಹದ ಪ್ರಚಾರದ ನಿಮ್ಮ ಪ್ರಯತ್ನವನ್ನು, ಆ ಬಗ್ಗೆ ನೀವು ಬರೆಯುವ ಪ್ರತಿ ಲೇಖನಗಳನ್ನೂ ಕೂಲಂಕಷವಾಗಿ ಅಭ್ಯಸಿಸುತ್ತಿರುವೆನು. ಅಹಿಂಸಾ, ತತ್ವದಿಂದ ಜಗತ್ತಿನಲ್ಲಿ ಅಶಾಂತಿಯನ್ನು ತೊಲಗಿಸಿ ಸುಖಶಾಂತಿಯನ್ನುಂಟುಮಾಡಲು ಸಾಧ್ಯವೆಂದು ಹೇಳುತ್ತೀರಿ. ಆದರೆ ನಿಮ್ಮ ಈ ತತ್ವಗಳು ಜಗತ್ತಿನಲ್ಲಿ ಮಾನಿಸಲ್ಪಡುತ್ತಿವೆಯೆಂದು ನಾನು ಹೇಳಬಲ್ಲೆನು. ಇದರ ಕಾರಣವೆಂದರೆ ಈ ತತ್ವಗಳ ಶಕ್ತಿಯು ಜನತೆಗೆ ತಿಳಿದೊಡನೇ ಕ್ಷುಲ್ಲಕ ಕಾರಣಗಳಿಗೂ ಸಹ ಈ ತತ್ವಗಳನ್ನು ಉಪಯೋಗಿಸಿ ಅನಾವಶ್ಯದ ತೊಂದರೆಗಳು ಹುಟ್ಟುವಂತಾಗಿದೆ. ಇದರಿಂದ ದೇಶದಲ್ಲಿ ಕ್ಷೋಭೆಯು ಏಳುತ್ತಿದೆ. ಇಂಥಾ ಕ್ಷೋಭೆಗಳನ್ನು ಅಡಗಿಸಲು ಅನೇಕ ವರ್ಷಗಳ ಸತತ ಪ್ರಯತ್ನವು ಅಗತ್ಯ. ಅಸಹಕಾರವು ಪ್ರತಿಯೊಬ್ಬನ ಜೀವನದಲ್ಲಿಯೂ ಕಾಣತೊಡಗಿದೆ. ಅದರ ಅಸುಚಿತ ಪರಿಣಾಮವು ಕುಟುಂಬ, ಸಂಸ್ಥೆ, ವ್ಯಾಪಾರ, ಶಾಸನ, ಸರಕಾರ ಇವುಗಳೆಲ್ಲದರಲ್ಲಿಯೂ ಕಾಣತೊಡಗಿದೆ. ಅದರಲ್ಲೂ ಈ ಆಯುಧವನ್ನು ನಿರಪರಾಧಿಗಳ ಮೇಲೂ ಉಪಯೋಗಿಸುತ್ತಿರುವರು. ನಿಮ್ಮ ಈ ಆಯುಧದಿಂದ ಸತ್ಪಥದಲ್ಲಿ ನಡೆಯುತ್ತಿದ್ದವರಿಗೆ ತೊಂದರೆಯಾಗುತ್ತಿದೆಯೆಂದು ನನ್ನ ಅಭಿಪ್ರಾಯ. ಅಸಹಕಾರದ ಆಯುಧವು ಪ್ರತ್ಯಕ್ಷ ಮನುಷ್ಯನನ್ನು ಹೊಡೆಯದಿದ್ದರೂ ಅಪ್ರತ್ಯಕ್ಷವಾಗಿ ಅವನ ಜೀವವನ್ನೇ ಹಿಂಡುತ್ತದೆ. ಭಾರತರಾಜಕೀಯ ಆಂದೋಲನದಲ್ಲಿ ಎರಡು ಬಾರಿ ಈ ಆಯುಧವನ್ನು ಉಪಯೋಗಿಸಿದ್ದನ್ನು ನಾನು ಕಂಡಿರುವೆನು. ಮತ್ತೊಮ್ಮೆ ಭಾರತ ಸ್ವಾತಂತ್ರ್ಯಕ್ಕಾಗಿ ಈ ಆಯುಧವನ್ನು ಉಪಯೋಗಿಸುವದೆಂದರೆ ನನಗೆ ಭಯವಾಗುತ್ತಿದೆ. ಅಹಿಂಸಾ ತತ್ವದ ಬಲವನ್ನು ನಿಮ್ಮಿಂದ ಅರಿತು ಸ್ವಾರ್ಥಪರರು ತಮ್ಮ ಧ್ಯೇಯಸಾಧನೆಗಾಗಿ ಅದನ್ನು ಉಪಯೋಗಿಸುತ್ತಿರುವರು. ಆದ್ದರಿಂದ ಇಂಥಾ ಆಯುಧವನ್ನು ರಾಜಕೀಯದಲ್ಲಿ ಉಪಯೋಗಿಸಬಾರದಾಗಿ ಪ್ರಾರ್ಥಿಸುತ್ತೇನೆ. ಇದರಿಂದ ನಮಗೆ ಕೆಲವು ಹಕ್ಕುಗಳು ಲಭಿಸಬಹುದು. ಆದರೆ ಅವು ಮಾನವರೊಳಗೆ ವೈಷಮ್ಯವನ್ನು ಹರಡುವವು. ನಾವು ಪೂರ್ಣ ಮಾನವರಲ್ಲ. ನಮ್ಮ ಸ್ವಾರ್ಥವನ್ನು ಬಿಟ್ಟು ನಿಮ್ಮಂಥಾ ದೈವೀಪುರುಷರಂತೆ ವರ್ತಿಸುವದು ಕಠಿಣ. ದೇವರು ನಿಮಗೆ ಬೇರೆ ಯಾವದಾದರೂ ಉಪಕರಣಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ. ಯುದ್ಧದ ಬಿಕ್ಕಟ್ಟಿನಲ್ಲಿ ಸಿಲುಕಿರುವ ಬ್ರಿಟಿಷರನ್ನು ತೊಂದರೆಮಾಡಬೇಡವೆಂದು ಕೇಳಿಕೊಳ್ಳುತ್ತೇನೆ. ಕಾಂಗ್ರೆಸು ನಿಮ್ಮ ಸೂಚನೆಯಂತೆ ವರ್ತಿಸುತ್ತಿದ್ದರೂ ಅದು ಬ್ರಿಟಿಷ್ ಸರಕಾರಕ್ಕೆ ತೊಂದರೆ ಕೊಡದಿರಲಾರದೆಂದು ನಾನು ಹೇಳಬಲ್ಲೆ. ಅಸಹಕಾರವು ಪ್ರಾರಂಭಿಸಲ್ಪಟ್ಟರೆ ಅದರಿಂದುಂಟಾಗುವ ಕೋಮುವಾರು ಭಿನ್ನಭೇದ, ವೈಷಮ್ಯ ಇವುಗಳು ಭಾರತವನ್ನು ಇನ್ನೂ ಭೀಕರ ಅಧೋಗತಿಗೆ ತಳ್ಳುವದೆಂದು ಹೇಳಬಯಸುತ್ತೇನೆ. ಸರಕಾರಕ್ಕೆ ತೊಂದರೆ ಕೊಡುವದಾದರೆ ಕಾಂಗ್ರೆಸು ಪುನಃ ಅಧಿಕಾರ ಸ್ವೀಕಾರ ಮಾಡಿ, ಕೌನ್ಸಿಲು, ಎಸೆಂಬ್ಲಿಗಳಿಗೆ ಬಹಿಷ್ಕಾರ ಹಾಕುವ ಮೊದಲಾದ ಕಾರ್ಯಗಳನ್ನು ಮಾಡಬೇಕು. ಇದೇ ನಿಜವಾದ ಯೋಜನೆಯಾಗಿದೆ. ಹಿಂದೂ ಮುಸ್ಲಿಂ ಐಕ್ಯತೆಯ ವಿಚಾರದಲ್ಲಿ ಎಲ್ಲಾ ಪಾರ್ಟಿ ಪಂಗಡಗಳ ಮುಖಂಡರನ್ನು ಕರೆಸಿ ಸಮ್ಮೇಳನ ನೆರೆಸಿ ವಿಚಾರ ವಿನಿಮಯ ಮಾಡಬೇಕಿದೆ. ನಾವು ಈಗಲೇ ಆ ಪ್ರಯತ್ನ ಮಾಡಿದರೆ ಸರಕಾರವು ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯನ್ನು ಕೊಡುವ ಮನಸ್ಸು ಮಾಡುವದರಲ್ಲಿ ನಮ್ಮ ಐಕ್ಯತೆಯನ್ನು ಸಾಧಿಸಬಹುದು. ಈಗ ದಿನ ನೂಕುವದರಿಂದ ಪ್ರಯೋಜನವಿಲ್ಲ. ದಿನ ಹೋದಂತೆ ಮುಸ್ಲಿಮರ ಕೇಳಿಕೆಯು ಏರುತ್ತಾ ಹೋಗುತ್ತಿದೆ. ತ್ವರಿತದಲ್ಲಿ ನಾವು ಕಾರ್ಯ ಕೈಕೊಂಡರೆ ಐಕ್ಯತೆಯನ್ನು ಸಾಧಿಸಲು ದೇವರು ಸಹಕಾರಿಯಾಗುವನೆಂಬುದರಲ್ಲಿ ಸಂಶಯವಿಲ್ಲ. ದೇವರು ಭಾರತಭೂಮಿಯ ಕಡಿವಾಣವನ್ನು ನಿಮ್ಮ ಕೈಗೆ ಕೊಟ್ಟಿರುವನು. ಅದರ ಸೌಭಾಗ್ಯವನ್ನು ಹೆಚ್ಚಿಸುವ ಯಾ ಕುಗ್ಗಿಸುವ ಶಕ್ತಿ ನಿಮ್ಮಲ್ಲಿದೆ.'

ಈ ಲೇಖನಕ್ಕೆ ಗಾಂಧೀಜಿಯವರು ಈ ರೀತಿಯಾಗಿ ಉತ್ತರ ಬರೆದಿರುವರು.

'ನಮ್ಮಲ್ಲಿ ಈ ಲೇಖಕರು ಹೆಚ್ಚು ಶ್ರದ್ಧಾವಂತರು. ಅವರು ಇಂದಿನ ಸಮಸ್ಯೆಯ ಒಂದು ಭಾಗವನ್ನು ಮಾತ್ರವಿರಿಸಿರುವ ಪ್ರಯುಕ್ತ ಅದು ಮನಸ್ಸನ್ನು ಅಲ್ಲೋಲಕಲ್ಲೋಲಮಾಡಿದೆ. ಯಾವದೊಂದು ಶಕ್ತಿಯುತ ಸಾಧನವಾದರೂ ದುರುಪಯೋಗಕ್ಕೆ ತುತ್ತಾಗುವರು. ಅಫೀಮ್ ಅಮೂಲ್ಯ ಔಷಧಿಯಾದರೂ ಜನರಿಂದ ದುರುಪಯೋಗಪಡಿಸಲ್ಪಟ್ಟ ಕಾರಣ ಅದರ ಘನತೆಯು ಮಾಯವಾಗಿದೆ. ಹೆಚ್ಚಿನ ಉಪಯೋಗದಿಂದ ದುಷ್ಪರಿಣಾಮವಾದರೆ ಅದರ ಸದ್ಗುಣವನ್ನು ದೂಷಿಸುವದು ಯುಕ್ತವಲ್ಲ. ಕೆಲವು ಸಂದರ್ಭಗಳಲ್ಲಿ ಅಸಹಕಾರವು ದುರುಪಯೋಗ ಪಡಿಸಲ್ಪಟ್ಟಿದ್ದರೆ, ಅನೇಕ ಸಂದರ್ಭಗಳಲ್ಲಿ ಅದು ಅಮೋಘ ಸತ್ಕಾರ್ಯಗಳನ್ನು ಮಾಡಿದೆ. ಯಾವದೊಂದು ಸಾಧನದ ಬೆಲೆಯು ಅದರ ನಿಷ್ಪಕ್ಷ ಫಲಿತಾಂಶದಿಂದ ನಿರ್ಣಯಿಸಲ್ಪಡಬೇಕು. ಆ ದೃಷ್ಟಿಯಿಂದ ಅಹಿಂಸಾ ಅಸಹಕಾರದಿಂದ ಭಾರತಭೂಮಿಗೆ ಹೆಚ್ಚಿನ ಲಾಭವಾಗುವದು. ಅಂಧಕಾರದಲ್ಲಿ ಬಿದ್ದು ನರಳುತ್ತಿದ್ದ ಮಾನವಕೋಟಿಯಲ್ಲಿ ಅದು ಜಾಗೃತಿಯನ್ನುಂಟುಮಾಡಿತು. ಈ ಅಸಹಕಾರವಿಲ್ಲದಿದ್ದ ಪಕ್ಷ ಜನತೆಯು ಜಾಗೃತಿಗೊಳ್ಳಲು ಶತಮಾನಗಳು ಬೇಕಿತ್ತು. ಅದು ರಕ್ತಪಾತ, ಅನಾಯಕತ್ವ ಇವುಗಳನ್ನು ಹೋಗಲಾಡಿಸಿ ಒಟ್ಟಾರೆ ಬ್ರಿಟಿಷ್ ಹಾಗೂ ಭಾರತೀಯರ ಬಾಂಧವ್ಯವನ್ನು ಹೆಚ್ಚಿಸಿದೆ. ಅಸಹಕಾರವು ಸಾರ್ವಜನಿಕರ ಉಪಯೋಗದ ವಸ್ತು. ಚೆನ್ನಾಗಿ ಅರಿತು ಅದನ್ನು ಉಪಯೋಗಮಾಡಿದರೆ ರಾಜಕೀಯರಂಗದಲ್ಲಿ ಇಷ್ಟರ ರೆಗಳಿಂದ ಸಹ ಅಸಾಧ್ಯವಾದ ಕಾರ್ಯಗಳನ್ನು ಅದು ಮಾಡಬಲ್ಲದು. ಆದ್ದರಿಂದ ತಪ್ಪು ಯಾ ದುರುಪಯೋಗವು ತತ್ವದಲ್ಲಿ ಅಲ್ಲ; ಅದನ್ನು ಉಪಯೋಗಿಸುವ ಜನತೆಯಲ್ಲಾಗಿದೆ. ಅನಾವಶ್ಯ ಸಂದರ್ಭಗಳಲ್ಲಿ ಯಾ ಸ್ವಾರ್ಥದೃಷ್ಟಿಯಿಂದ ಜನತೆಯು ಇದನ್ನು ಉಪಯೋಗಿಸುವದಾದರೂ ಕ್ರಮೇಣ ಅದರ ಸತ್ಪ್ರಯೋಗದ ಅರಿವಾದಂತೆ ಕಮ್ಮಿಯಾಗುವದು.

ಅಸಹಕಾರದಲ್ಲಿ ಒಂದು ಪ್ರಧಾನ ವಿಚಾರವೇನೆಂದರೆ ದುರ್ಮಾರ್ಗದಲ್ಲಿ ಅದನ್ನುಪಯೋಗಿಸಿದರೆ ಅದರ ಕೆಡುಕು ಉಪಯೋಗಿಸ ಬಯಸುವವನಿಗೇ ಹೆಚ್ಚಾಗಿ ತಗಲುವದು. ಇದರ ಉಪದ್ರವು ಮನೆಯ ದೈನಂದಿನ ಕಾರ್ಯಕಲಾಪಗಳಲ್ಲೂ ಸಹ ಕಂಡುಬರುವದು. ಮಾತಾಪಿತೃಗಳಲ್ಲಿ, ಪತಿಪತ್ನಿಯರಲ್ಲಿ ಇದು ಹೆಚ್ಚು ಬರುವದುಂಟು.

ನಮ್ಮ ಲೇಖಕರು ಅಸಹಕಾರಕ್ಕಿಂಥಾ ಕಾಂಗ್ರೆಸಿಗರು ಅಧಿಕಾರ ಸ್ವೀಕರಿಸಿ ಪಾರ್ಲಿಮೆಂಟರಿ ಕಾರ್ಯಕ್ರಮದಿಂದ ಸರಕಾರಕ್ಕೆ ಆತಂಕ ತರಬೇಕೆಂದು ಸೂಚಿಸಿರುವರು. ಆದರೆ ಅಸಹಕಾರ, ಅಹಿಂಸಾ ಇವುಗಳ ಬೆಂಬಲವಿಲ್ಲದೆ ಮಾಡುವ ಅಂಥಾ ಕಾರ್ಯಭಾರದ ಟೊಳ್ಳುತನವು ಈಗಾಗಲೇ ನಮಗೆ ತಿಳಿದಿದೆ.

ಬ್ರಿಟಿಷರ ಮಟ್ಟಿಗೆ ಅವರಿಗೆ ಯಾವ ತೊಂದರೆಯನ್ನೂ ಈ ಬಿಕ್ಕಟ್ಟಿನಲ್ಲಿ ಕೊಡಬಾರದೆಂದು ನಾನು ಈ ಮೊದಲೇ ಹೇಳಿಬಿಟ್ಟಿರುವೆನು. ನಮ್ಮೊಳಗೆ ಒಂದು ಘರ್ಷಣೆಬಾರದಿರಲೆಂದು ಅಚಲ ಪ್ರಯತ್ನ ಮಾಡುತ್ತಿರುವೆನು. ಆದರೆ ಅಂಥಾ ಒಂದು ಘರ್ಷಣೆಯು ಅನಿವಾರ್ಯವೆಂದು ಈಗ ಕಂಡುಬರುತ್ತಿದೆ. ಅಂಥಾ ಸಂದರ್ಭ ಬಂದರೂ ಬ್ರಿಟಿಷರಿಗೆ ತೊಂದರೆಯಾಗದೆ ಜೊತೆಯಲ್ಲೇ ಭಾರತ ಭವಿತವ್ಯಕ್ಕೆ ಧಕ್ಕೆ ಬಾರದ ಒಂದು ತೀರ್ಮಾನವನ್ನು ಹುಡುಕುತ್ತಿರುವೆನು. ತಾತ್ಕಾಲಿಕ ಹಿಂಸಾಪೂರಿತ ದೊಡ್ಡೆಯ ಚಳವಳಿಗಳು ಅಹಿಂಸೆಯ ವರದ ತತ್ವಗಳನ್ನು ಮುರಿದು ಹಾಕುತ್ತಿದ್ದವು. ಆದರೆ ಜನತೆಯು ಅದನ್ನರಿತು ಇಂದು ವಹಿಸಿರುವ ಶಿಸ್ತು, ಸಮಾಧಾನ ಇವು ಭಾರತ ಭವಿತವ್ಯದ ನಿರ್ಣಯದ ಬಗ್ಗೆ ನನಗೆ ಧೈರ್ಯ ಹುಟ್ಟಿಸುತ್ತಿವೆ.

ಹಿಂದೂ ಮುಸ್ಲಿಮರ ಐಕ್ಯತೆಯ ಸಮಸ್ಯೆಯು ಒಂದು ಆಂತರಿಕ ವಿಚಾರ. ನಮ್ಮ ಲೇಖಕರು ದಿನ ಹೋದಂತೆ ಮುಸ್ಲಿಮರ ಕೇಳಿಕೆಯು ಹೆಚ್ಚಿನ ಸಂಭವವಿದೆಯೆಂದು ಹೇಳುತ್ತಾರೆ. ಅವರ ಈ ಕೇಳಿಕೆಗಳು ಯಾರಲ್ಲಿ? ಬೇರೆ ಪಂಗಡದವರಿಗೆ ಹೇಗೋ ಹಾಗೆಯೇ ಭಾರತಾಂಬೆ ಅವರಿಗೂ ಜನ್ಮದಾಯಿನಿಯು. ಐಕ್ಯತೆಯು ಬೇಕೆಂದರೆ ನ್ಯಾಯಸಮ್ಮತವಾದ ಕೇಳಿಕೆ. ಅವರ ಮುಸ್ಲಿಂ ಲೀಗಿನ ಭಾರತ ವಿಭಜನಾಯೋಜನೆಯು ತತ್ಕಾಲ ಐಕ್ಯತಾ ಪ್ರಶ್ನೆಯು ಬುಡಕ್ಕೆ ಕೊಡಲಿ ಹಾಕಿದಂತಾದ ಬ್ರಿಟಿಷ್ ಸರಕಾರವು ನಮಗೆ ನ್ಯಾಯಪೂರ್ವಕವಾದ ಸುಧಾರಣೆಯನ್ನು ಕೊಡುವದಕ್ಕೆ ಮೊದಲು ಬಗೆಹರಿಯಲ್ಪಡಬೇಕಾದ ಸಮಸ್ಯೆಯು ಇದೆಂದು ನಾನೆಣಿಸಲಾರೆ. ಭಾರತಕ್ಕೆ ಸ್ವಯಂ ನಿರ್ಣಯದ ಹಕ್ಕನ್ನು ಕೊಡಬೇಕೆಂದು ನಿರ್ಧರಿಸಿದ ಮರುದಿನವೇ ಇಂದು ಅವರು ಮುಂದೆ ಹಾಕುತ್ತಿರುವ ಅನಾವಶ್ಯದ ಕಾರಣಗಳೆಲ್ಲವೂ ಬಿಸಿಲಿನ ತಾಪಕ್ಕೆ ಇಟ್ಟ ಮಂಜುಗಡ್ಡೆಯಂತೆ ಕರಗಿಹೋಗುವವು. ಸ್ವಯಂ ನಿರ್ಣಯದ ಹಕ್ಕು ಎಂದರೆ ಭಾರತ ಭವಿತವ್ಯವನ್ನು ನಿಶ್ಚಯಿಸುವದರಲ್ಲಿ ಪಂಗಡಗಳಿಗೇ ಅಲ್ಲ; ವ್ಯಕ್ತಿಗಳಿಗೆ ಸಹ ಭಾಗ ವಹಿಸುವ ಅಧಿಕಾರವಿರತಕ್ಕದ್ದು. ವ್ಯಕ್ತಿ ಹಾಗೂ ಪಂಗಡಗಳ ಅಭಿಪ್ರಾಯವು ಕಾನ್‌ಸ್ಟಿಟ್ಯೂಯೆಂಟ್ ಎಸೆಂಬ್ಲಿಯ ನಿರ್ಣಯದಿಂದಾಗುವದೆಂದೇ ಕಾಂಗ್ರೆಸು ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಗೆ ಕಾತರಿಸುತ್ತಿದೆ. ಆದರೆ ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿ ಜಾರಿಗೆ ಬಾರದೆ ವ್ಯತಿರಿಕ್ತವಾಗುವದಾದರೆ ಭಾರತವನ್ನು ವಿಭಜಿಸುವ ಯೋಜನೆಗೆ ಬೆಂಬಲವಿತ್ತು ಪರದೇಶೀ ನೊಗವನ್ನು ಕತ್ತೊಗೆಯಬೇಕು. ಇಲ್ಲವೇ ಅದರ ಭಾರದಲ್ಲೇ ಕುಗ್ಗಿ ಕೂರಬೇಕು. ಒಂದಲ್ಲದಿದ್ದರೆ ಒಂದು ಆಗಿಯೇ ತೀರಬೇಕು. ಆದರೆ ನಾನು ಆಶಾವಾದಿ. ಆ ಸಮಯ ಬಂದಾಗ ಹಿಂದೂ, ಮುಸ್ಲಿಮರು, ಸಿಕ್ಕರು ಮೊದಲಾದ ಪಂಗಡಗಳು, ಎಲ್ಲರ ಮಾತೆಯಾದ ಭಾರತಾಂಬೆಯ ನೆರವಿಗೆ ಬಂದು ಭಾರತದ ಕೀರ್ತಿಯನ್ನು ಉಳಿಸುವರೆಂಬ ನಂಬಿಕೆ ನನಗಿದೆ.

ಬಾತ್ಮಿ.

ಕೊಡಗರು ಅರಬಿಯರೇ?

ಲೇ:-ಐ. ಮಾ. ಮು.

ಲೇಖಾಂಕ ೨.

ಹಿಂದೂಸ್ಥಾನದಷ್ಟು ದೊಡ್ಡದಾದ ದೇಶಗಳಲ್ಲಿ ಎಷ್ಟೋ ಜಿಲ್ಲೆಗಳೂ, ದೇಶಗಳೂ ಇವೆ. ಅದರೆಡೆಯಲ್ಲಿ ಅತೀ ಚಿಕ್ಕದಾದ ನಮ್ಮ ಜಿಲ್ಲೆಯೂ ಒಂದು. ಯಾವ ಜನಾಂಗದವರಲ್ಲೂ ಈವರೆಗೆ ತಮ್ಮ ಮತ ಇತ್ಯಾದಿಗಳ ನಿರ್ಣಯವಾಗದಿದ್ದಿರಲಿಕ್ಕಿಲ್ಲ. ಆದರೆ ನಮ್ಮ ಕೊಡಗರು ಕೊಡವ ಮತವೋ, ಹಿಂದೂಮತವೋ, ಇಸ್ಲಾಂ ಮತವೋ ಎಂಬ ಊಹನೆಯಲ್ಲೇ ಇದ್ದೇವೆ. ಹಲವು ಗ್ರಂಥಕರ್ತರು ತಮ್ಮ ಅಭಿಪ್ರಾಯವನ್ನಿತ್ತಿದ್ದರೂ ಅದು ತೃಪ್ತಿಕರವಾಗಿಲ್ಲ. ಉಗ್ರರೆಂದೂ, ಶೀಯರೆಂದೂ, ಕ್ಷತ್ರಿಯರೆಂದೂ ಇತ್ಯಾದಿ ಹಲವು ಹೇಳಿಕೆಗಳಿವೆ. ಇವರಲ್ಲಿ ಯಾವುದೂ ಸರಿ ಇಲ್ಲವೆಂದೂ ಅವನ್ನೆಲ್ಲಾ ಬದಿಗೊತ್ತಿ ಗಫೂರ್ ಖಾನರು ಕುರ್ದಿಸ್ತಾನದ ಜನರ ಸಂತತಿಯವರೆಂದು ತಿಳಿಸಿದ್ದಾರೆ. 'ನಮ್ಮ ಕೊಡವರಿಗೆ ಈ ವಿಷಯ ತಿಳಿಯದೆ ಅವರು ಕೊಡವಮತದವರೆಂದು ಹೇಳುತ್ತಾರಲ್ಲದೆ ಬೇರೆ ಹಿಂದೂಮತ ಮುಂತಾದ್ದಾಗಿ ಹೇಳುವುದಿಲ್ಲ' ವೆಂದು ಅವರ ಅಂಬೋಣವಾಗಿದೆ. ಹಾಗವರೆ ಎಷ್ಟೋ ಜನರು ಎಷ್ಟೋ ವ್ಯವಹಾರ ಸಂಬಂಧ ಹಿಂದೂಮತವೆಂದು ಬರೆದುಬಿಟ್ಟು ಮತಮೃತ್ಯುಗಳಾದರಲ್ಲವೆ? ಇದಂತಿರಲಿ.

ಮತವೆಂದರೆ ಅರ್ಥವೇನೆಂಬುದನ್ನು ತಿಳಿದಿದ್ದರೆ ಕೊಡವ ಮತವೆಂಬುದರ ಪ್ರಸ್ತಾಪ ಬರಲಿಕ್ಕಿತ್ತಿಲ್ಲ. ಮತವೆಂದರೆ ಅಭಿಪ್ರಾಯವೆಂಬರ್ಥವಿದೆ. ಹಾಗೆ ಕ್ರಿಸ್ತ, ಮಹಮ್ಮದ, ಬುದ್ಧ ಇವರ ಅಭಿಪ್ರಾಯಕ್ಕನುಸಾರವಾಗಿ ಅದನ್ನನುಸರಿಸುವವರ ಜನಾಂಗಕ್ಕೆ ಕ್ರೈಸ್ತ ಮತ ಇತ್ಯಾದಿಯಾಗಿ ಕರೆಯಲ್ಪಡುತ್ತವೆ. ಸನಾತನ ಅಭಿಪ್ರಾಯಕ್ಕನುಗುಣವಾಗಿ ವರ್ತಿಸುವವರು ಹಿಂದೂಮತ ಇತ್ಯಾದಿಯಾಗಿ ಪ್ರಸಿದ್ಧಿಯಾಗಿದೆ. ಈಚೆಗೆ ದ್ವೈತ, ಅದ್ವೈತ ಮುಂತಾದ್ದಾಗಿ ಕೆಲವು ಭಕ್ತಶ್ರೇಷ್ಠರಿಂದ ಮತಗಳು ಸ್ಥಾಪಿಸಲ್ಪಟ್ಟಿವೆ. ಹೀಗಿರುವಲ್ಲಿ ಗಫೂರ್ ಖಾನರೊಡನೆ ಯಾರೋ 'ನಮ್ಮದು ಕೊಡವಮತ' ಎಂದು ಹೇಳಿದ್ದನ್ನು ಇವರು ಅರಬಿಯರೆಂದು ಹೇಳುವ ಅಭಿಪ್ರಾಯಕ್ಕೆ ಅದೇ ಒಂದು ಆಧಾರವೆಂದು ತಿಳಿದು ಬರೆದುಬಿಟ್ಟಿದ್ದಾರೆ. ಮತ ಎಂದರೆ ಅವರ ಸ್ಥಾಪಕರೋ ಯಾ ಇತರ ಪುರಾವೆಗಳೋ ಬೇರೆ ಇರಬೇಕು. ಆದರೆ ಇಷ್ಟು ಚಿಕ್ಕ ಜನಾಂಗದವರು ಲೋಕದ ಯಾವ ಮತಕ್ಕೂ ಸೇರದೆ ತಮ್ಮದೇ ಒಂದು 'ಕೊಡವ ಮತ' ಎಂದರೆ ಸಂಪೂರ್ಣ ಅರ್ಥವಿಲ್ಲದೆ ಸ್ವಾಭಿಪ್ರಾಯವನ್ನು ವಿನಿಯೋಗಮಾಡುವ ಬಗೆಯನ್ನರಿಯದೆ ಬರೆದರೆಂಬುದನ್ನು ನಾವು ಗ್ರಹಿಸಬೇಕಾಗಿದೆ.

ಆದರೆ ಕೊಡವರು ಹಿಂದೂಮತದವರಲ್ಲವಾದದರಿಂದ ಬೇರೆ ಯಾವ ಮತಕ್ಕೆ ಸೇರಿದವರೆಂಬುದನ್ನು ತಿಳಿಯದ್ದರಿಂದ ಹೀಗೆ ಹೇಳಿದರೆಂದು ಗಫೂರ್ ಖಾನರ ಭಾವವಾಗಿದೆ. ಅವರ ಅರೆಬಿಯ ಜನರ ಮತಾನುಯಾಯಿಗಳೆಂದು ತಿಳಿಸಿದ್ದಕ್ಕೆ ಕೊಟ್ಟ ಆಧಾರವೆಂದರೆ ಕಳೆದ ಲೇಖನದಲ್ಲಿ ಹೇಳಿದಂತೆ ಯವನರೋ ಹಸರು ಬೈಂದವ ಬುಸ್ತು, ಇನ್ನೊಂದು ಒಬ್ಬ ಲಾಯರ ಭಾಷಣ, ಮತ್ತೊಂದು ಕೆಲವು ರಾವ್ ಬಹದ್ದೂರ್ ಇತ್ಯಾದಿಗಳೊಡನೆ ಇವರು ಮಾತಾಡುವಾಗ ಅವರು ಒಪ್ಪಿಕೊಂಡರೆಂಬುದು. ಹೀಗೆ ಕೆಲವು ವಿಷಯಗಳನ್ನು ಯಾವುದೋ ಒಂದು ಅಭಿಪ್ರಾಯದಿಂದ ಪುಸ್ತಕವನ್ನು ಸರಿಪಡಿಸಲಿಕ್ಕೆ ತಕ್ಕಷ್ಟು ಹೇಳಿದ್ದಾರೆ. ಲೋಕದ ಜನಾಂಗವನೇ ಸನಾತ್ಮಿ ಮತದಲ್ಲಿ ಎಷ್ಟು ಪೂರ್ವವಾದರೂ ಎಷ್ಟು ಕಾಲವಾದರೂ ಯಾವ ಬದಲಾವಣೆಯಾಗಲಿಕ್ಕಿಲ್ಲವೆಂದು ಇವರು ಖಡ್ಡ ಬರೆದಿದ್ದಾರೆ. ಕೆಲವು ವಿಷಯದಲ್ಲಿ ಇದು ಸರಿಯೆ! ಆದರೆ ಕೊಡಗಿನ ವಿಷಯಕ್ಕೆ ಈ ಪ್ರಸ್ತಾಪ ತಂದೊಡ್ಡಿದ್ದು ಹಲಸಿನ ಮರದಿಂದ ತೆಂಗಿನಕಾಯಿ ಬಿತ್ತು ಎಂದಂತೆ ತಿಳಿಯಬೇಕಾಗಿದೆ. ಇದನ್ನು ಮುಂದಿನ ಲೇಖನದಲ್ಲಿ ಚರ್ಚಿಸುವೆನು.

ಆದರೆ ಗಫೂರ್ ಖಾನರು ರಿಕ್ಟರ್, ರೈಸ್, ಸಿ. ಮುತ್ತಣ್ಣ, ಇವರುಗಳ ಅಭಿಪ್ರಾಯ ಊಹನಾಮಾತ್ರದಿಂದು ತೆಗಳಿದ್ದಾರೆ. ಪ್ರಾರಂಭದಲ್ಲಿ ಸ್ವಂತ ಅಭಿಪ್ರಾಯ ಕೊಡುತ್ತೇನೆಂದು ಹೇಳಿದವರು ಇದು ನನ್ನದೆಂದು ತಿಳಿಯಕೂಡದು ಎಂದು ಕಡೆಗೆ ಹೇಳುವಾಗ ಈ ವಿಷಯದಲ್ಲಿ ಅವರೇ ಎಷ್ಟು ದೃಢಪಟ್ಟಿದ್ದಾರೆ ಎಂದು ತಿಳಿಯಬಹುದು. ಟೀಪು ಸುಲ್ತಾನನಿಗೆ ಅವರು ದೊಡ್ಡ ಸ್ಥಾನವನ್ನು ಕೊಟ್ಟಿದ್ದಾರೆ. ಚರಿತ್ರಕಾರರು ಮುಸಲ್ಮಾನ ಚಕ್ರವರ್ತಿಗಳು ಕೆಲವರು ದುಷ್ಟರು ಎಂದು ಹೇಳಿದಂತೆ ಟೀಪುವನ್ನೂ ಹೇಳಿದರೆಂದು ನಾನು ಭಾವಿಸಲಾರೆ. ಇದು ನವೀನ ವಿಷಯವಾಗಿದೆ. ಕೊಡಗರನ್ನೆಲ್ಲಾ ಟೀಪುವು ತನ್ನ ಮತದವರೆಂದು ತಿಳಿದು ಸಾಗಿಸಿದನಂತೆ. ಹಾಗಾದರೆ ಅವನು ಇತರ ಅನೇಕ ರಾಜ್ಯಗಳ ಮೇಲೆ ಲೂಟಿ ಮಾಡಿದ್ದು ಯಾವ ಭಾವನೆಯಿಂದ? ಅಲ್ಲಿಗೆ ಯಾವ ಧರ್ಮವನ್ನು ಕಲ್ಪಿಸಬಹುದು! ಮಾತು ವಿಪರೀತವಾದೀತು. ಚರಿತ್ರಕರ್ತರು ಯಾವ ಸಂಖ್ಯೆಯನ್ನೇ ಆಗಲಿ ದೊಡ್ಡದಾಗಿ ಹಾಕುವುದು ಅವರ ಸ್ವಭಾವವಾಗಿದೆ. ಕಥೆಗಳಲ್ಲಿ ವಿವರಣೆಯ ಸ್ವಾರಸ್ಯ ಹೇಗೋ ಹಾಗೇ ಚರಿತ್ರೆಗೆ ಇಂಥದ್ದರಿಂದ ಸಾರಸ್ಯ ದೆಚ್ಚಿಸುತ್ತಾರಂತೆ. ಅದಕ್ಕಾಗಿ ಕೆರೆಯು ಯಾವುದೋ ಒಂದು ಭಾಗದಲ್ಲಿ ಗುಂಡಿ ಇದೆಯೆಂದು ತಿಳಿದ ಮಾತ್ರಕ್ಕೆ ಎಲ್ಲೆಡೆಯೂ ಹಾಗೇ ಎಂದು ವಿವಾದಿಸಬೇಕಿಲ್ಲ. ಅದ್ದರಿಂದ ನಮ್ಮ ಕೊಡಗಿನ ಮಟ್ಟಿಗೆ ಶಾಸನಗಳೇನಿದ್ದರೂ ಅನೇಕ ನೆಲದೊಳಗೆ ಸ್ವಸ್ಥ ನಿದ್ರೆಯಲ್ಲಿರಬಹುದು. ಅವು ಏಳದ ವಿನಹ ನಮ್ಮ ದೃಢಾಭಿಪ್ರಾಯವು ಸಾರ್ಥಕವಾಗಲಿಕ್ಕಿಲ್ಲವೆಂದೇ ಅವರು ತಿಳಿಯತಕ್ಕದ್ದು. ಕೊಡಗರ ಹಾಗೇ ಪ್ರತ್ಯೇಕ ಜನಾಂಗವು ಚಿಕ್ಕದಾಗಿ ಉತ್ತರ ಹಿಂದೂಸ್ಥಾನದಲ್ಲಿ ಎಷ್ಟೋ ಇವೆ. ತಮ್ಮ ಸಂಸ್ಕೃತಿಗನುಸಾರವಾಗಿ ಇಂಥ ಮತದವರೆಂಬ ನಿರ್ಣಯದ ಮೇರೆ ನೆಮ್ಮದಿಯಲ್ಲಿದ್ದಾರೆ. ಆ ಕಾರಣ ನಾವು ಕೊಡವಮತ ಮುಂತಾದ್ದಾಗಿ ಅರ್ಥವಿಲ್ಲದೆ, ಏನೇನೋ ಅಂದುಕೊಂಡು ಗಾಬರಿ ಪಡಬೇಕಾದ ಅವಶ್ಯವಿಲ್ಲ.

ಮಿತವ್ಯಯದ ಅಭ್ಯಾಸವನ್ನು ಚಿಕ್ಕಂದಿನಲ್ಲಿಯೇ ಪ್ರೋತ್ಸಾಹಿಸಿ ನಿಮ್ಮ ಮಕ್ಕಳ ಮುಂದಿನ ಪ್ರಾದುರ್ಭಾವಕ್ಕೆ ಸಾಕಾದಷ್ಟು ಅನುಕೂಲವನ್ನು ಕಲ್ಪಿಸಿ.

ಕೂಡಲೇ "ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್" ನ ಒಂದು ಪಾಲಿಸಿಯನ್ನು

ಅತ್ಯಂತ ಭದ್ರವಾದ ಮತ್ತು ಜನಾದರಣೀಯವಾದ

ಭಾರತೀಯ ವಿಮಾ ಕಂಪೆನಿಯಾದ

" ಓ ರಿ ಯಂ ಟ ಲ್ "

ನಲ್ಲಿ ತೆಗೆದುಕೊಳ್ಳಿರಿ.

ಚಿಲ್ಡ್ರನ್ಸ್ ಡೆಫರ್ಡ್ ಅಶ್ಯೂರೆನ್ಸ್:-ಇದೊಂದು ಹೊಸ ರೀತಿಯ ಯೋಜನೆ. ಇದರ ಪ್ರಕಾರ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಸುಲಭದರದ ಪ್ರೀಮಿಯಮ್ಮಿನ ಲಿಮಿಟೆಡ್ ಹೋಲ್ ಲೈಫ್ ಅಥವಾ ಎಂಡೋಮೆಂಟ್ ವಿಮಾ ಪಾಲಿಸಿಯನ್ನು ಪಡೆಯಬಹುದು. ಇದರಲ್ಲಿ ಈ ಪಾಲಿಸಿಯ 'ರಿಸ್ಕ್' 22 ವರ್ಷ ವಯಸ್ಸಿಗೆ ಕಡಮೆ ಇಲ್ಲದ ಯಾವುದಾದರೊಂದು ಕ್ಲುಪ್ತ ಕಾಲದಿಂದ ಪ್ರಾರಂಭವಾಗುತ್ತದೆ.

52-8) ವಿವರಗಳಿಗೆ ಬರೆಯಿರಿ:— ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ-1874. ಹೆಡ್ ಆಫೀಸು ಬೊಂಬಾಯಿ. ಅಥವಾ ದಿ ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	48.470	0	0
ಜಮೂಬಂದ ಠೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ತ್ರಿಫ್ಟ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಕಾಲಿಯೂನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಕಾಲಿಯೂನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರಿಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಆದರೆ ಪುನಹ ತಾ. 29-7-39ರಿಂದತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮ. ಕೆ. ಸಿ.ಕರುಂಬಯ್ಯನವರು ಎಂ. ಎಲ್. ಸಿ.

ತಾ. 1-3-1940

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ-ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ ಬಾಂಡು ದಾವಾ ಮತ್ತು ಅಮಲ್ದಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara, and Virajapet.

52—49

ಕೊಡಂದೇರ ಡಿ. ನಾಚಯ್ಯ,

L.D Sc. (COLLEGE OF DENTISTPY)
EX-SUPERVISOR, LAXMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (45) ನವೀನ ರೀತಿಯ ಚಿಕಿತ್ಸೆ.

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕ. ಮತ್ತು ಕಂಪೆನಿ,
(52-21) ಗಿರಗಾಂವ, ಮುಂಬಯಿ ೪,

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:–ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕುಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಾಲಜರ್,(ರಿಜಿಸ್ಟರ್ಡ್.)
ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.

52-15

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಬಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೩೧—೫—೧೯೪೦. ಸಂಪುಟ ೧೯] [ಸಂಚಿಕೆ ೨೧

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

ಭದ್ರತೆ! ವಿಶ್ವಾಸಾರ್ಹತೆ!! ಸುರಕ್ಷಿತತೆ!!!

ದಿ ಕೆನರಾ ಬೇಂಕಿಂಗ್ ಕೊಪೊರೇಶನ್ ಲಿಮಿಟೆಡ್.

1906 ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾದದ್ದು.

ತನ್ನ ಭದ್ರತೆಯನ್ನು ದಿನೇ ದಿನೇ ತೋರಿಸಿ, ಠೇವಣಾತಿದಾರರಿಗೆ ಸುರಕ್ಷಿತತೆಯನ್ನು ಹೆಚ್ಚಿಸಿ, ಸರ್ವರ ವಿಶ್ವಾಸಕ್ಕೆ ಪಾತ್ರವಾಗಿ, ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವ ಬೇಂಕಿಯ ಸಂಸ್ಥೆ.

ನಿರಖು ಠೇವಣಾತಿ ಒಂದು ವರ್ಷಕ್ಕೆ 3½% (ಸಾಲಿಯಾನ ಶೇಕಡ)

ಬಡ್ಡಿ ದರಗಳು: 2 & 3 ವರ್ಷಕ್ಕೆ 4% ,,

ಒಂದು ವರ್ಷಕ್ಕಿಂತ ಕಡಿಮೆ ಮಿಯಾದೆಯು, ಅಲ್ಪಾವಧಿಯ, ಠೇವಣಾತಿಗಳನ್ನು ಅವಧಿಗೆ ತಕ್ಕ ಬಡ್ಡಿ ದರಗಳಲ್ಲಿ ಪಡೆಯಬಹುದು.

ಮೂರು ವರ್ಷದ ಕೇಶ್ ಸರ್ಟಿಫಿಕೇಟುಗಳು:-ಬಡ್ಡಿಯು ಪರವಾ ಸಾಲಿಯಾನ ಶೇಕಡಾ 4 ರಲ್ಲಿ. ಆ ಮಿಯಾದು ಮೊದಲು, ಯಾವಾಗಲೂ 15 ದಿನಗಳ ನೋಟೀಸು ಕೊಟ್ಟಲ್ಲಿ ಹಣವನ್ನು ಹಿಂತಕ್ಕೆ ಪಡೆಯಬಹುದು.

ಸೇವಿಂಗ್ಸ್ ಬೇಂಕ್ ಡಿಪಾಜಿಟ್ಸ್:-ಒಂದು ಲೆಕ್ಕದಲ್ಲಿ ರೂ. 5,000 ದ ವರೆಗೆ ಹಣ ಇಡಬಹುದು. ಚೆಕ್ಕು ಮೂಲಕ ಹಣ ಹಿಂದೆ ಪಡೆಯಬಹುದು. ಸಾಲಿಯಾನ ಶೇಕಡಾ 2½ ದರದಲ್ಲಿ ಬಡ್ಡಿ ಸಲ್ಲಿಸಲ್ಪಡುವುದು.

ಕರೆಂಟ್ ಡಿಪಾಜಿಟ್ಸ್, ಕ್ಯುಮ್ಯುಲೇಟಿವ್ ಡಿಪಾಜಿಟ್ಸ್ ಲೆಕ್ಕಗಳನ್ನು ತೆರೆಯಬಹುದು.

ಬೊಂಬಾಯಿ, ಕಲ್ಕತ್ತಾ, ಮದ್ರಾಸು, ಕಲ್ಲಿಕೋಟೆ, ಕಣ್ಣಾನೂರು, ಬೆಂಗಳೂರು, ಮೈಸೂರು, ಮಂಗಳೂರು ಮುಂತಾದ ಅನೇಕ ಸ್ಥಳಗಳ ಮೇಲೆ ಡ್ರಾಫ್ಟುಗಳನ್ನೂ ಚೆಕ್ಕುಗಳನ್ನೂ ಕೊಡುತ್ತೇವೆ; ವಟಾಯಿಸಲೂ ಬಹುದು.

THE CANARA BANKING CORPORATION LIMITED.

52-23 ಚಿನ್ನಾಭರಣಗಳ ಮೇಲೆ ಸಾಲಗಳು ಯಾವಾಗಲೂ ಸಿಗುತ್ತವೆ.

ವಿಶೇಷ ಮಾಹಿತಿಯನ್ನು ಮಡಿಕೇರಿ ಮತ್ತು ವೀರಾಜಪೇಟೆ ಶಾಖೆಗಳಿಂದ ಪಡೆಯಬಹುದು.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು

ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ

ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ

ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು.

ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ,—ದ. ಕನ್ನಡ.

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಮಡಿಕೇರಿ ಏಜಂಟರು,
ದಿ. ಮಂಗಳೂರು ಸ್ಟೋರ್ಸ್,
ಡಾ. ಬಿ. ಕೆ. ನಂಜುಂಡೇಶ್ವರ.

52-29

ವೀರಾಜಪೇಟೆ ಏಜಂಟರು,
ಕೆ. ರಾಮಕೃಷ್ಣ ರಾವ್,
ಜಿ. ಹೆಚ್. ಹೌಸ್.

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ, ಮುಂಡೇಪಂಡ ಸೋಮಯ್ಯನವರು,
ಮ ಕೆ ಯಂ. ಸುಬ್ಬಯ್ಯನವರು.

ಅಮ್ಮತ್ತಿ—ಸಿದ್ದಾಪುರ— ಮ ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ ಪಿ ಜಿ ಮುದ್ದಮ್ಮಯ್ಯನವರು.

ಹುದಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ.
ಜಿ ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮ ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮ ಕೆ. ಮೊಗಪ್ಪನವರು

ನಾಪೋಕ್ಲು—ಮ. ಬೆಳ್ಯಪಂಡ ಯಂ. ಪೂಣಚ್ಚನವರು.
ನಾಪೋಕ್ಲು

ಶನಿವಾರಸಂತೆ—ಮ ಎಚ್ ಎಂ. ಪುಟ್ಟಣ್ಣನವರು.

ಸೂಚನೆ —ಪ್ರಿಂಟುಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಝಂಡುರವರ 'ಸ್ಪ್ಲೀನೋಲ್'

ಪೂರ್ವ ಪಶ್ಚಿಮಾತ್ಯ ದೇಶಗಳ ಅತ್ಯುತ್ತಮ ರಸಾಯನಿಕ ಮತ್ತು ವನಸ್ಪತಿಗಳ ಮೂಲಕ ತಯಾರಿಸಿದ್ದು. ಮಲೇರಿಯಾ ಜ್ವರಕ್ಕೆ ಸಿದ್ಧೌಷಧ. ಹೊಟ್ಟೆಯೊಳಗಿನ ಗಡ್ಡೆಯನ್ನು ಕರಗಿಸುತ್ತದೆ. ಜೌಗು ಪ್ರದೇಶಗಳ ಸೊಳ್ಳೆಗಳ ಕಡಿತದಿಂದ ಈ ಖಾಯಿಲೆಯು ಬರುವುದು.

ಇದರ ಸೇವನೆಯಿಂದ ಶರೀರದೊಳಗೆ ಉತ್ಪತ್ತಿಯಾಗುವ ಮಲೇರಿಯಾ ವಿಷ ಕ್ರಿಮಿಗಳು ನಾಶವಾಗುವವು. ಅಲ್ಲದೆ ಹೃದಯಕ್ಕೆ ಬಲವೂ, ಹೆಚ್ಚಾದ ಜೀರ್ಣ ಶಕ್ತಿಯನ್ನೂ ಉಂಟುಮಾಡುವುದು. ಪುನಃ ಮಲೇರಿಯಾ ಬರದಂತೆ ಶರೀರವನ್ನು ಕಾಪಾಡುತ್ತದೆ. ಗರ್ಭವತಿಯರಿಗೂ ಇದನ್ನು ಕೊಡುವುದು. ಗರ್ಭಸ್ರಾವವಾಗುವುದಿಲ್ಲ.

ದೊಡ್ಡವರಿಗೆ:— (ದಿನಕ್ಕೆ ಮೂರು ವೇಳೆ)
ಗರ್ಭಿಣಿಯರಿಗೆ:— (ದಿನಕ್ಕೆ ಮೂರು ವೇಳೆ)
ಮಕ್ಕಳಿಗೆ:— (ವೈದ್ಯರ ಸಲಹೆಯಂತೆ)

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್.
(53-33) ಮತ್ತು ಆಯುರ್ವೇದ ವಿದ್ವಾನ್

ZANDU

ವೀರಾಜಪೇಟೆಯ ಏಜೆಂಟರು-ಕೆ. ರಾಮಕೃಷ್ಣರಾವ್,
ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ್ಷಿಪ್ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಸಿಲ್ಹೆಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-18

ನಿರುದ್ಯೋಗ ನಿವಾರಣೆ.

ಗ್ರಾಮಗಳ ಪುನರುದ್ಧಾರವಾಗಬೇಕು. ಒಂದು ಕಾಲಕ್ಕೆ ಅಪಾರ ಕೀರ್ತಿಪ್ರತಾಪಗಳಿಂದ ಮೆರೆದ ಗ್ರಾಮಗಳು ಸ್ವಾವಲಂಬಿಗಳಾಗಬೇಕು. ಪರದೇಶಿ ವಸ್ತುಗಳ ಮೋಹಜಾಲವನ್ನು ಬಿಟ್ಟಲ್ಲದೆ ದೇಶದ ಉನ್ನತಿಯು ಸಾಧನೆಯಾಗದು. ಸ್ವಾವಲಂಬಿಯಾಗಿ ಪ್ರತಿಯೊಬ್ಬನೂ ಆತನ ಕರ್ತವ್ಯ ಮಾಡುವವನಾದರೆ ನಿರುದ್ಯೋಗವು ನಿವಾರಣೆಯಾಗುವದು.

ನಮ್ಮ ಭಾರತ ದೇಶವು ಧನಸಂಪನ್ನ ಉನ್ನತಶೀಲ ಹಾಗೂ ಸುಧಾರಿಸಿದ ದೇಶವೆಂದು ಒಂದಾನೊಂದು ಕಾಲಕ್ಕೆ ಎನಿಸಿಕೊಳ್ಳುತ್ತಿತ್ತೆಂದು ಇತಿಹಾಸದ ಮೇಲಿಂದ ತಿಳಿದು ಬರುತ್ತಿದೆ. ನಾವು ಆ ಸಮಯದಲ್ಲಿ ಧನ, ಧರ್ಮ ಹಾಗೂ ಕಲಾಕೌಶಲ್ಯಗಳಲ್ಲಿ ಉಚ್ಚ ಸ್ಥಾನವನ್ನು ಹೊಂದಿದ್ದೆವು. ಸೂರ್ಯನ ಪ್ರಕಾಶದಿಂದ ಸುದೂರ ಪಶ್ಚಿಮ ಮಂಡಲವೂ ಕೂಡ ಪ್ರಕಾಶ ಹೊಂದುತ್ತದೆ ವಾಲಿಯ ಉಕ್ತಿಯ ಪ್ರಕಾರ ಇಂದು ಸುಧಾರಿಸಿದ ಜಾತಿಯೆಂದೆನಿಸಿಕೊಳ್ಳುವಂಥವುಗಳು ಸುಧಾರಣೆಯ ಪಾಠವನ್ನು ನಮ್ಮ ದೇಶದಿಂದಲೇ ಕಲಿತಿರುತ್ತವೆ. ನಮ್ಮ ಭಾರತ ದೇಶವು ಧನಧಾನ್ಯಗಳಿಂದ ಪರಿಪೂರ್ಣವಾಗಿತ್ತು.

ಹದಿನಾರುನೂರನೇ ಇಸ್ವಿಯಲ್ಲಿ ಪಶ್ಚಿಮ ದೇಶದವರ ಆಗಮನವು ಭಾರತದಲ್ಲಿ ಆಯಿತು. ದೇಶೀ ರಾಜ್ಯಗಳಲ್ಲಿಯ ಒಡಕುಗಳೇ ಭಾರತದ ಮೇಲೆ ಅಧಿಕಾರ ಮಾಡಲಿಕ್ಕೆ ಅವರಿಗೆ ದಾರಿಗೊಟ್ಟವು. ಇವರ ಶಾಸನ ಕಾಲದಲ್ಲಿಯೇ ಭಾರತದ ಆರ್ಥಿಕ ಸ್ಥಿತಿಯು ಕ್ರಮೇಣ ಹೀನವಾಗುತ್ತ ನಡೆಯಿತು. ಆದರೆ ಪರಿಣಾಮವು ನಮ್ಮ ಅನ್ನದಾತರಾದ ಒಕ್ಕಲಿಗರಿಗೆ ಹಗಲೂ ಇರುಳೂ ಕಠಿಣ ಪರಿಶ್ರಮ ಮಾಡಿದಾಗ್ಯೂ ಹೊಟ್ಟೆ ತುಂಬ ಕೂಳು ಸಿಗಲಾರದಷ್ಟು ಕಷ್ಟವಾಗಿ ಹೋಯಿತು. ನಮ್ಮ ಉದ್ಯೋಗ ಕಲಾಕೌಶಲ್ಯಗಳು ನಾಶವಾದವು.

ಸಂಸಾರವು ಪ್ರಗತಿಶೀಲವಿದೆಯೆಂದು ನಾವು ಒಪ್ಪುತ್ತೇವೆ. ಇದರಲ್ಲಿ ಪ್ರತಿನಿತ್ಯವೂ ಹೊಸ ಹೊಸ ಬದಲಾವಣೆಗಳು ಆಗುತ್ತಿರುತ್ತವೆ. ಆದರಿಂದ ಹೊಸ ಹುಟ್ಟುವಳಿಗಳು ಆಗುವದು ಅವಶ್ಯವಿದೆ. ಆದರೆ ಈ ಸಿದ್ಧಾಂತಕ್ಕೆ ಒಪ್ಪುವವರು ಹುಟ್ಟಿದ ಅಥವಾ ಹುಟ್ಟುವ ಯಾವದಾದರೊಂದು ಉದ್ಯೋಗವು ಯಾವದೇ ಸಮುದಾಯಕ್ಕೆ ಹಾನಿಕಾರಕವಿದೆಯೋ ಎಂಬುದನ್ನು ಮತ್ತು ಅದನ್ನು ಹುಟ್ಟಿಸುವಾಗ ಕಲ್ಪನೆ ಮಾಡುವಾಗ ಕೂಡ ವ್ಯರ್ಥವೆಂಬುದನ್ನು ಧ್ಯಾನದಲ್ಲಿಡತಕ್ಕದ್ದು. ಈ ಹೊತ್ತು ಬಟ್ಟೆ, ಅಕ್ಕಿ, ಎಣ್ಣೆ, ಸಕ್ಕರೆ ಮುಂತಾದವುಗಳಿಂದ ಗಿರಣಿಗಳಿಗೆ ಜನ್ಮ ಕೊಟ್ಟ ಪ್ರಸಿದ್ಧ ಹುಟ್ಟುವಳಿಗಾರರಿಗೆ ನಮ್ಮ ಬಡ ಕೂಲಿಕಾರರೆಷ್ಟು ಶಾಪ ಕೊಡುತ್ತಿರುವರೋ ?

ಇನ್ನು ನಾವು ನಮ್ಮ ಪ್ರಾಚೀನ ಉದ್ಯೋಗಗಳ ಕಡೆಗೆ ಹೊರಳುವಾ. ಮನುಷ್ಯನ ಅವಶ್ಯಕತೆಗಳಲ್ಲಿ ಬಟ್ಟೆಯೊಂದು ಮುಖ್ಯವಾದ ವಸ್ತುವು. ಗಿರಣಿಗಳು ಭಾರತದಲ್ಲಿ ಬರುವದಕ್ಕಿಂತ ಮೊದಲು ಭಾರತೀಯರು ನಮ್ಮ ದೇಶದಲ್ಲಿ ತಯಾರಾದ ಬಟ್ಟೆಯನ್ನು ಧರಿಸುತ್ತಿದ್ದರು. ಆ ಕಾಲದಲ್ಲಿ ನೂಲುವವರ ಮತ್ತು ನೇಯುವವರ ಉದ್ಯೋಗಗಳು ಚನ್ನಾಗಿ ನಡೆಯುತ್ತಿದ್ದವು. ಅತಿ ಸೂಕ್ಷ್ಮ ಮತ್ತು ಸುಂದರವಾದ ಬಟ್ಟೆಯು ಆ ಸಮಯಕ್ಕೆ ನಮ್ಮ ದೇಶದಲ್ಲಿಯೇ ತಯಾರಾಗುತ್ತಿತ್ತೆಂದು ಹೇಳಲು ಢಾಕಾದ ಮಲಮಲ್ಲಿನ ಉದಾಹರಣೆಯೊಂದೇ ಸಾಕು.

ಆದರೆ ನಮ್ಮ ಭಾರತ ದೇಶದಲ್ಲಿ ಪರದೇಶೀ ಬಟ್ಟೆಯ ಆಗಮನದಿಂದ ಈ ಉದ್ಯೋಗಕ್ಕೆ ಬಹು ದೊಡ್ಡ ಪೆಟ್ಟು ತಗಲಿತು. ಸಹಸ್ರಾವಧಿ ಬಡಜನರು ತಮ್ಮ ರೊಟ್ಟಿಗೆ ನೀರು ಬಿಡಬೇಕಾಯಿತು. ನೇಕಾರ ಮೊದಲಾದವರು ಹೊಟ್ಟೆಗಿಲ್ಲದೆ ಪ್ರಾಣ ಬಿಡಹತ್ತಿದರು. ಇತ್ತ ಹಳ್ಳಿಯ ಬಡಜನರು ಹೇಳಲಾರದಷ್ಟು ದುರ್ದೆಸೆಗೆ ಒಳಗಾಗಹತ್ತಿದರು. ಅತ್ತ ಧನವಂತರು ರಾಟೆಗಳನ್ನು ದುರ್ಲಕ್ಷಿಸಿ ಪರದೇಶಗಳಿಂದ ಗಿರಣಿಗಳನ್ನು ತರಿಸಿ ನಾಜೂಕಾದ ಬಟ್ಟೆಗಳನ್ನು ತಯಾರಿಸಲು ಪ್ರಾರಂಭ ಮಾಡಿದರು. ತಮ್ಮ ವ್ಯಾಪಾರದ ಪ್ರಚಾರ ಮಾಡುವದಕ್ಕೋಸುಗ ಬಟ್ಟೆಯನ್ನು ಅಗ್ಗ ಮಾಡಿದರು. ಪ್ರತಿಯೊಬ್ಬನೂ ಸೂಕ್ಷ್ಮ ಅಗ್ಗದ ಬಟ್ಟೆಗೆ ಮೋಹಿಸಿದರು. ಲಕ್ಷಗಟ್ಟಲೆ ರೂಪಾಯಿಯ ಅರಳೆಯು ಪರದೇಶಕ್ಕೆ ಹೋಗಹತ್ತಿತು. ಭಾರತೀಯರು ಉದ್ಯೋಗಕ್ಕೆ ನೀರು ಬಿಡಬೇಕಾಯಿತು. ಆದರೆ ಮುಂದೆ ಅಸಹಕಾರ ಚಳವಳಿಯಿಂದ ರಾಟೆಗಳ ಪ್ರಚಾರವಾಗಿ ಅವುಗಳ ಮಧುರವಾದ ಧ್ವನಿಯು ಪುನಃ ಕೇಳಬರಹತ್ತಿತು. ಅದೂ ಕೂಡ ಸ್ವಲ್ಪ ಸಮಯದ ನಂತರ ಕಡಿಮೆಯಾಗಿ ಪುನಃ ಅವುಗಳ ಪ್ರಚಾರವಾಗಿ ಅವುಗಳ ಸಂಖ್ಯೆಯು ಹೆಚ್ಚಾಗಿ ಅವುಗಳ ಮಧುರ ಧ್ವನಿಯು ಈಗ ಪ್ರತಿಯೊಂದು ಹಳ್ಳಿಗಳಲ್ಲಿ ಕೇಳಿಬರಹತ್ತಿದೆ. ಎಲ್ಲಿಯ ವರೆಗೆ ಈ ಉದ್ಯೋಗದ ಕಡೆಗೆ ನಮ್ಮ ಸುಶಿಕ್ಷಿತ ಜನರು ಲಕ್ಷ್ಯ ಕೊಡುವದಿಲ್ಲವೋ ಅಲ್ಲಿಯ ವರೆಗೆ ಇದರ ಉದ್ಧಾರವಾಗುವದು ಕಠಿಣ. ಆದ್ದರಿಂದ ಅವರೆಲ್ಲ ಈಗಿನಿಂದಲೇ ತಮ್ಮ ದೇಶದಲ್ಲಿ ಹುಟ್ಟಿದ ಬಟ್ಟೆಯನ್ನು ಧರಿಸುತ್ತ ಹೋದರೆ ಆ ಹಣವು ತಮ್ಮ ಬಡ ಬಂಧುಗಳಿಗೆ ಸಿಕ್ಕುವದಲ್ಲದೆ ತಮ್ಮ ದೇಶದ ಉದ್ಯೋಗದ ಉನ್ನತಿಯಾಗುವದು.

ಮನುಷ್ಯನಿಗೆ ಬಟ್ಟೆಯಂತೆ ಅನ್ನವೂ ಮುಖ್ಯವಾದ ಒಂದು ವಸ್ತು. ಬಟ್ಟೆಯಂತೆ ಕೆಲವು ವರುಷಗಳ ಪೂರ್ವದಲ್ಲಿ ಪ್ರತಿಯೊಬ್ಬರೂ ಕೈಯಿಂದ ಕುಟ್ಟಿದ ಅಕ್ಕಿಯನ್ನೇ ಉಪಯೋಗಿಸುತ್ತಿದ್ದರು. ಹೆಣ್ಣುಮಕ್ಕಳು ಕೈಯಿಂದ ಭತ್ತ ಕುಟ್ಟಿ ಅಕ್ಕಿಯ ರೂಪದಿಂದಲೇ ಕೂಲಿಯನ್ನು ಪಡೆಯುತ್ತಿದ್ದರು. ಆದರಿಂದ ಅವರ ಜೀವನ ನಿರ್ವಾಹಕ್ಕೆ ಸಾಕಷ್ಟು ಸಿಗುತ್ತಿತ್ತು. ಕಾರ್ತಿಕ ಮಾಸದಲ್ಲಿ ಬೆಳೆಬಂದು ಕೊಯ್ಯಲು ಸುರುವು ಮಾಡಿದೊಡನೆಯೇ ಪ್ರತಿಯೊಬ್ಬ ಹಳ್ಳಿಗರ ಮನೆಯಲ್ಲಿ ಒನಿಕೆಯ ಇಲ್ಲವೆ ತೊಳಲಿ ಕಲ್ಲಿನ ಇಂಪಾದ ಧ್ವನಿಯು ಕೇಳಬರುತ್ತಿದ್ದಿತು. ಸಾವಿರಾರು ಜನ ಸ್ತ್ರೀ-ಪುರುಷರು ಇದೇ ಉದ್ಯೋಗದಿಂದ ತಮ್ಮ ಉದರ ಪೋಷಣೆ ಮಾಡಿಕೊಳ್ಳುತ್ತಿದ್ದರು. ಆದರೆ ಭತ್ತ ಒಡೆಯುವ ಗಿರಣಿಯ ಆಗಮನವು ಭಾರತದಲ್ಲಿ ಆಗುತ್ತಲೇ ಈ ಉದ್ಯೋಗವೂ ಬರಿದಾಯಿತು. ಇದೇ ಕಾರಣದಿಂದಲೇ ಈ ಹೊತ್ತು ಸಾವಿರಾರು ಜನರು ನಿರುದ್ಯೋಗಿಗಳಾಗಿ ಕುಳಿತಿದ್ದಾರೆ. ಹೊಟ್ಟೆಗೆ ಕೂಳಿಲ್ಲದೆ ಸಾಯುತ್ತಿದ್ದಾರೆ.

ಇದೇ ರೀತಿಯಿಂದ ಕೆಲ ವರುಷಗಳ ಪೂರ್ವದಲ್ಲಿ ನಮ್ಮ ದೇಶದ ಪ್ರತಿಯೊಂದು ಮನೆಯಲ್ಲಿ ಕೈಯಿಂದ ಬೀಸಿದ ಹಿಟ್ಟನ್ನೇ ಅಡಿಗೆಗೆ ಉಪಯೋಗಿಸುತ್ತಿದ್ದರು. ಆದರೆ ನಾವು ಈಗ ಶೋಕಿ ಹಾಗು ರೊಕ್ಕದ ಉಳಿತಾಯವನ್ನು ನೋಡಿ ಗಿರಣಿಯಲ್ಲಿ ಬೀಸಿದ ಹಿಟ್ಟನ್ನು ತಿನ್ನಲಾರಂಭಿಸಿದೆವು.

ಸಕ್ಕರೆಯ ಗಿರಣಿಗಳು ಬರುವದಕ್ಕಿಂತ ಮೊದಲು ನಮ್ಮ ದೇಶದಲ್ಲಿ ಸ್ವತಂತ್ರ ರೂಪದಿಂದ ಬೆಲ್ಲದ ಉಪಯೋಗವಾಗುತ್ತಿತ್ತು. ಆಯುರ್ವೇದ ಶಾಸ್ತ್ರವೂ ಸಹ 'ಬೆಲ್ಲವು ಲಾಭದಾಯಕ ಮತ್ತು ಸ್ವಾಸ್ಥ್ಯವರ್ಧಕ ವಸ್ತು' ಎಂದು ಹೇಳುತ್ತದೆ. ಆದರೆ ಸಕ್ಕರೆಯ ಗಿರಣಿಗಳು ತೆರೆದ ಹಾಗೆಲ್ಲ ಎಲ್ಲದಕ್ಕೂ ಉಪಯೋಗವಾಗುತ್ತಿದ್ದ ಅದೇ ಬೆಲ್ಲವು ಜನರ ಅನಾದರಕ್ಕೆ ಪಾತ್ರವಾಯಿತು. ಇದೇ ಬೆಲ್ಲದ ಪ್ರಚಾರದಿಂದ ಲಕ್ಷಗಟ್ಟಲೆ ಜನರ ಪಾಲನೆಯಾಗುತ್ತಿತ್ತು. ಆದರೆ ಈ ಗಿರಣಿಗಳ ಕಾರಣದಿಂದ ಈ ಉದ್ಯೋಗ ನಷ್ಟವಾದದ್ದಲ್ಲದೆ ಲಕ್ಷಗಟ್ಟಲೆ ಜನರೂ ಕೂಳಿಲ್ಲದೆ ಬಳಲುತ್ತಿರುವರು.

ಗಿರಣಿಯ ಒಡೆಯರು ಬಡ ಪ್ರಾಣಿಗಳಾದ ಒಕ್ಕಲಿಗರಿಂದ ಕಬ್ಬು ಖರೀದಿಮಾಡಿಕೊಂಡು ಅದರ ರಸ ತೆಗೆದು ಅದನ್ನು ಪೂರ್ಣವಾಗಿ ಯಂತ್ರದಲ್ಲಿ ಕಾಸಿ ಸಕ್ಕರೆಯನ್ನು ತಯಾರು ಮಾಡುತ್ತಾರೆ. ಈ ಬಿಳೀ ಹೊಳಪುಳ್ಳ ವಸ್ತುವಿನ ಮೋಹಕ್ಕೆ ಬಲಿಬಿದ್ದ ಸಭ್ಯ, ಸಾಕ್ಷರ ಹಾಗೂ ಸಂಪನ್ನ ಭಾರತೀಯರು ಬೆಲ್ಲವನ್ನು ನಿರ್ಲಕ್ಷಿಸಿ ಹೆಚ್ಚು ಕಿಮ್ಮತ್ತು ಕೊಟ್ಟು ಸಕ್ಕರೆಯನ್ನು ಖರೀದಿ ಮಾಡಿ ತಿನ್ನುವದನ್ನು ಪ್ರಾರಂಭ ಮಾಡಿದರು. ಬೆಲ್ಲದ ವ್ಯಾಪಾರವು ಕಡಿಮೆಯಾಯಿತು. ಭಾರತದ ವ್ಯಾಪಾರಿಗಳು ನಿರುದ್ಯೋಗಿಗಳಾದರು. ಇನ್ನಾದರೂ ನಾವು ಬೆಲ್ಲವನ್ನೇ ಉಪಯೋಗಿಸುತ್ತ ಹೋದರೆ ಪುನಃ ನಮ್ಮ ದೇಶದ ಉದ್ಯೋಗವನ್ನು ಸುರುವುಮಾಡಿದಂತಾಗಿ ಬಡ ಹಳ್ಳಿಗಳ ಆರ್ಥಿಕ ಸ್ಥಿತಿಯು ಸುಧಾರಿಸಿ ಸುಖದಿಂದ ಇರುವರೆಂಬುದರಲ್ಲಿ ಸಂದೇಹವಿಲ್ಲ.

ಇನ್ನು ಗಾಣಗಳು-ಗಿರಣಿಯ ಎಣ್ಣೆ ಬರುವದಕ್ಕಿಂತ ಮೊದಲು ಕೈಯಿಂದ ತಿರುವಿದ ಇಲ್ಲವೆ ಎತ್ತುಗಳಿಂದ ತಿರುವಿದ ಗಾಣದ ಎಣ್ಣೆಯನ್ನೇ ಉಪಯೋಗಿಸುತ್ತಿದ್ದರು. ಈ ಗಾಣಗಳಿಂದಲೇ ಲಕ್ಷಗಟ್ಟಲೆ ಜನರ ಜೀವನ ನಿರ್ವಾಹವಾಗುತ್ತಿತ್ತು. ಹಾಗೂ ದೇಶಗಳಲ್ಲಿಯ ಹಣವು ದೇಶದಲ್ಲಿಯೇ ಉಳಿದು ಬಡ ಜನರ ಹಿತವಾಗುತ್ತಿತ್ತು. ಆದರೆ ಎಣ್ಣೆಯ ಗಿರಣಿಗಳ ಪ್ರಚಾರವಾದಾಗಿನಿಂದಲೇ ಲಕ್ಷಾವಧಿ ಜನ ಗಾಣಿಗರು ನಿರುದ್ಯೋಗಿಗಳಾಗಿ ಕುಳಿತಿದ್ದಾರೆ. ಹಾಗೂ ಜೀವನ ನಿರ್ವಾಹದ ಸಲುವಾಗಿ ಯಾವದೂ ಸಾಧನವಿಲ್ಲದೆ ಹೊಟ್ಟೆ ಬಡಕೊಂಡು ಸಾಯುತ್ತಿದ್ದಾರೆ. ಜನರು ಮಾತ್ರ ಅತ್ತ ಕಡೆ ತಿಲಮಾತ್ರವೂ ಲಕ್ಷ್ಯಕೊಡದೆ ಇದ್ದಾರೆ. ಅವರು ಸುಧಾರಿಸಿದವರಲ್ಲವೇ ? ಅವರಿಗೆ ಸ್ವಚ್ಛತೆ ಬೇಕಲ್ಲವೇ ? ಗಿರಣಿಗಳಲ್ಲಿ ಸ್ವಚ್ಛತೆ ಎಷ್ಟು ಉಂಟೆಂಬುದನ್ನು ಅವರೇನು ಬಲ್ಲರು ! ಗಾಣಿಗರ ಎಣ್ಣೆಯು ಪ್ರತಿಯೊಂದು ಹಳ್ಳಿಯಲ್ಲಿ ನೋಡಲು ಸಿಗುತ್ತದೆ. ಅದು ಪೌಷ್ಟಿಕ ಮತ್ತು ರುಚಿಕರವಾದದ್ದೆಂಬುದು ಪಾಪ! ಆ ಸುಧಾರಿಸಿದ ಜನರಿಗೇನು ಗೊತ್ತು! ಇಂತ ಎಣ್ಣೆ ಅವರಿಗೆ ಬೇಡಾದದ್ದರಿಂದಲೇ ಮತ್ತು ಗಿರಣಿಗಳ ಪ್ರಭಾವದಿಂದಲೇ ಸಾವಿರಾರು ಬಡ ಗಾಣಿಗರ ರೊಟ್ಟಿಯು ಅವರ ಕೈ ಬಿಡಬೇಕಾಯಿತು. ನಾವು ನಮ್ಮ ಕೃಷಿ ಪ್ರಧಾನವಾದ ದೇಶದಲ್ಲಿ ಅದಕ್ಕೆ ಸಂಬಂಧವಿರುವ ಪ್ರತಿಯೊಂದು ಉದ್ಯೋಗ ಮಾಡುತ್ತ ಹೋದರೆ ನಮ್ಮ ಆರ್ಥಿಕ ಸ್ಥಿತಿಯು ಸುಧಾರಿಸುವದೆಂಬುದರಲ್ಲಿ ಸಂದೇಹವೇನು ?

ಬೇರೆ ಬೇರೆ ಸಣ್ಣ ಸಣ್ಣ ಉದ್ಯೋಗಗಳು ಕಮ್ಮಾರ ಹಾಗು ಬಡಿಗರ ಮುಖ್ಯ ಉದ್ಯೋಗಗಳು. ಪರದೇಶಗಳ ಕಂಪನಿಗಳ ಮುಖಾಂತರ ತಯಾರಾಗಿ ನಮಗೆ ಬರಹತ್ತಿವೆ. ರಂಟೆ ಮೊದಲಾದ ಹೊಲ ಕೆಲಸದ ಸಾಮಾನುಗಳೂ ಹೊರಗಿನಿಂದಲೇ ಬರಹತ್ತಿವೆ. ಹರಿಜನರ ಕೈಯಿಂದ ಚರ್ಮದ ಉದ್ಯೋಗವು ಕೂಡ ಕಸಿದುಕೊಳ್ಳಲ್ಪಟ್ಟಿದೆ. ಎಲ್ಲ ರೀತಿಯಿಂದಲೂ ಭಾರತದಲ್ಲಿ ನಿರುದ್ಯೋಗಿತನದ ತಾಂಡವ ನೃತ್ಯವಾಗಹತ್ತಿದೆ.

ಭಾರತದ ಉದ್ಯೋಗಗಳೆಲ್ಲವೂ ನಷ್ಟವಾಗಿ ಹೋಗಿವೆ. ಒಂದೊಂದೇಯಾಗಿ ಅವುಗಳ ಮೇಲೆ ಪರದೇಶಗಳ ಗಿರಣಿಗಳು ಅಧಿಕಾರ ಕೂಡಿಸಿ ಬಿಟ್ಟಿವೆ. ಇದಕ್ಕೆ ಇಟಲಿಯ ಕಂಬಳಿ, ಜಪಾನಿನ ಕಾಲ್ಮರಿಗಳ ಉದಾಹರಣೆಯೇ ಸಾಕು. ಅತಿ ಸಣ್ಣ ವಸ್ತುವನ್ನು ಮೊದಲು ಮಾಡಿಕೊಂಡು ಅತಿ ದೊಡ್ಡ ವಸ್ತುವಿನ ವರೆಗೂ ಪರದೇಶದಿಂದ ಬರಹತ್ತಿವೆ. ಕೋಟಿಗಟ್ಟಲೆ ರೂಪಾಯಿಗಳು ಪರದೇಶಕ್ಕೆ ಹೋಗಹತ್ತಿವೆ. ನಮ್ಮಲ್ಲಿ ಬಡತನ ಹಾಗೂ ನಿರುದ್ಯೋಗವು ಮಾತ್ರ ಹಬ್ಬಹತ್ತಿವೆ. ಬಿ. ಎ., ಎಂ. ಎ ಮೊದಲಾದ ಡಿಗ್ರಿಹೊಂದಿದವರು ನೌಕರಿ ಸಲುವಾಗಿ ತಿರುಗುತ್ತಿದ್ದಾರೆ. ನೌಕರಿ ಸಿಗದೇ ಇದ್ದ ಪಕ್ಷದಲ್ಲಿ ವಿಷಪಾನ! ಆತ್ಮಹತ್ಯೆ!!

ಈಗಂತೂ ಭಾರತದ ವಾಯುಮಂಡಲದ ನಾಲ್ಕೂ ಕಡೆಯಿಂದ 'ಕೆಲಸವಿಲ್ಲ,

"ನಾಜಿ ಜರ್ಮನಿಯು ಮುಂದುವರಿಯುತ್ತಿರುವ ಪಾಶವೀಕೃತ್ಯದಿಂದಾಗಿ ಬ್ರಿಟಿಷರ ಜೀವನ ನೌಕೆಯಲ್ಲಿ ನೀರು ಕ್ರಮೇಣ ಸೇರುವಂತಾಗಿದೆ. ಇಂಥಾ ಸಂದರ್ಭದಲ್ಲಿ ನಾವು ನಮ್ಮ ರಾಷ್ಟ್ರೀಯ ಧ್ಯೇಯಕ್ಕಿಂಥಾ ಒಂದಣುವಷ್ಟು ಕಮ್ಮಿಯಾದ ಸಂಧಾನ ಯಾ ಸುಧಾರಣೆಯನ್ನು ಒಪ್ಪುವದಿಲ್ಲವೆಂದಿರುವಾಗ, ನಾವು ನಮ್ಮ ಅಹಿಂಸಾತತ್ವದನ್ವಯವಾಗಿ ಬ್ರಿಟಿಷರಿಗೆ ತೊಂದರೆ ಕೊಡೆವೆಂದೂ, ಕಾಯಿದೆಭಂಗ ಚಳವಳಿಯನ್ನು ಈ ಸಂದಿಗ್ಧ ಸಮಯದಲ್ಲಿ ಹೂಡೆನೆಂದೂ ಹೇಳುವದು ಧರ್ಮವಲ್ಲವೇ? ಇಂದು ನಾಝಿ ರಾಕ್ಷಸನು ಯಾವ ತತ್ವಕ್ಕಾಗಿ ಹೋರಾಡುತ್ತಿರುವನು, ಅವನ ಜಯದಿಂದಾಗಿ ಮಾನವನ ಸ್ವಾತಂತ್ರ್ಯಕ್ಕೆ ಎಂಥಾ ಧಕ್ಕೆ ಬಂದೀತು ಎಂಬೀ ವಿಚಾರಗಳನ್ನು ವಿವೇಚಿಸಿದರೆ ಯಾರಿಗೆ ತಾನೇ ಭಯವಾಗಲಿಕ್ಕಿಲ್ಲ? ಮಾನವ ಕೋಟಿಯು ಮುಂದಿನ ಘಳಿಗೆಯೇ ವಿನಾಶದ ಪಥದಲ್ಲಿ ಕ್ರಮಿಸುತ್ತಿರುವಂತೆ ಭಾಸವಾಗುವದಿಲ್ಲವೇ? ಭಾರತೀಯರಾದ ನಮ್ಮ ಸ್ವಾತಂತ್ರ್ಯದ ಜೀವನ ಹೋರಾಟವೆಂಬುದು ಸತ್ಯ. ಆದರೆ ಜಗತ್ತಿನ ವಿನಾಶಕ್ಕೇ ಕಂಕಣಬದ್ಧನಾಗಿರುವ ಪರಮ ವೈರಿಯನ್ನು ಬ್ರಿಟಿಷ್ ಸರಕಾರವು ಎದುರಿಸುತ್ತಿರುವಾಗ ಅವರಿಗೆ ನಮ್ಮ ಮಾನಸಿಕ ಸಹಾಯವನ್ನಿತ್ತು ಅಂತ್ಯದಲ್ಲಿ ಅವರ ಹೃದಯವನ್ನು ಗೆಲ್ಲುವದು ವಿಹಿತವಲ್ಲವೇ? ಇಂಥಾ ನಮ್ಮದೊಂದು ವರ್ತನೆಯೂ ನಮ್ಮ ವಿರೋಧಿಯಾದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಮನಕರಗಿಸಲು ಶಕ್ಯವಾದರೆ ಸಾರ್ವಭೌಮ ಸರಕಾರವು ಯಾವ ಬಿಕ್ಕಟ್ಟಿನಲ್ಲೂ ಇಲ್ಲದ ಸಂದರ್ಭದಲ್ಲಿ ನಾವು ಅಹಿಂಸಾಯುತ ಯುದ್ಧವನ್ನು ಹೂಡುವದು ನಮಗೆ ಹೆಚ್ಚಿನ ಪ್ರತಿಷ್ಠೆಯನ್ನು ತರಲಿಕ್ಕಿಲ್ಲವೇ? ಇಂಥಾ ಗೌರವಪೂರ

ಕೆಲಸವಿಲ್ಲ' 'ಕೂಳು, ಕೂಳು' ಎಂಬ ಧ್ವನಿಯು ಕೇಳಿಬರುತ್ತಿವೆ. ಇಂಥ ಸ್ಥಿತಿಯಲ್ಲಿ ನಾವು ನಮ್ಮ ಉದ್ಯೋಗಗಳ ಪುನಃ ಉತ್ಥಾನ ಮಾಡಿದರೆ ಹಾಗೂ ಪ್ರತಿಯೊಬ್ಬ ಭಾರತೀಯನು ತಮ್ಮ ದೇಶದಲ್ಲಿಯೇ ತಯಾರಾದ ವಸ್ತುಗಳನ್ನು ಉಪಯೋಗಿಸುವೆವೆಂದು ದೃಢನಿಶ್ಚಯ ಮಾಡಿದರೆ ಮಾತ್ರ ಈ ಹೊತ್ತು ಹೊಟ್ಟೆಗಿಲ್ಲದೇ ಬಳಲುತ್ತಿರುವ ಲಕ್ಷಗಟ್ಟಲೆ ಜನರು ಜೀವಂತ ಉಳಿಯುವರು. ನಿರುದ್ಯೋಗಿತನದ ಸಮಯ ಬೇಗನೆ ಬಿಡುವದು ಹಾಗು ನಮ್ಮ ದೇಶದ ಆರ್ಥಿಕ ಸ್ಥಿತಿಯು ಸುಧಾರಿಸುವದು ಸಾಧ್ಯ. ನಮ್ಮ ಉದ್ಯೋಗಗಳನ್ನು ಪುನಃ ಹುಟ್ಟಿಸಿ ಢಾಕಾದ 'ಮಲಮಲ್ಲಿ' ನ ಆಟ ಮಾಡಬಲ್ಲೆವು. ಆ ರೀತಿ ಕೆಲಸವು ಪುನಃ ನಮಗೆ ಪ್ರಾಪ್ತವಾಗಬಲ್ಲುದು. ನಮ್ಮ ಪೂರ್ವಜರ ಪ್ರಾಚೀನ ಕಲೆಯನ್ನು ನಾವು ಪುನಃ ಉನ್ನತಸ್ಥಾನದಲ್ಲಿ ಕಾಣಬಲ್ಲೆವು. ಆದರೆ ನಾವೆಲ್ಲರೂ ಉದ್ಯೋಗಿಗಳಾದಾಗ ಹಾಗೂ ಗ್ರಾಮೋದ್ಯೋಗಗಳ ಪುನರ್ಜನ್ಮವಾದಾಗ ಮಾತ್ರ ಇದು ಸಾಧ್ಯ.

ಕೆ. ವಿ.

ನಮ್ಮ ಕರ್ತವ್ಯ.

ಭಾರತವು ಅಧೀನ ರಾಷ್ಟ್ರ. ಬ್ರಿಟಿಷರು ಅಧಿಕಾರದಿಂದ ಅವರ ಶೋಷಣೆಯನ್ನು ನಡೆಸಿದ್ದಾರೆ. ಭಾರತಕ್ಕೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕಿಲ್ಲ. ಬ್ರಿಟನಿನ ಇಚ್ಛೆಯಂತೆ ಅದು ಇಂದು ವರ್ತಿಸುತ್ತಿದೆ. ಆದರೂ ಬ್ರಿಟಿಷರಿಗೆ ಈ ಸಂದರ್ಭದಲ್ಲಿ ತೊಂದರೆಕೊಡಲಾರೆ. ವಿಧಾಯಕ ಕಾರ್ಯಗಳನ್ನು ಕೈಕೊಂಡು ಅಹಿಂಸೆಯನ್ನು ಪಾಲಿಸಿರಿ. ಸ್ವಾತಂತ್ರ್ಯವು ಕರಗತವಾಗದಿರದು. ಭಾರತ ಬಂಧವಿಮೋಚನಾ ಚಿಂತನೆಯಲ್ಲೇ ನನ್ನ ಸರ್ವ ಸಮಯವನ್ನು ಕಳೆಯುತ್ತಿರುವೆನು. ಭಾರತ ಸ್ವಾತಂತ್ರ್ಯ ಭಾನುವು ಉದಯಿಸುವ ದಿನವು ಹೆಚ್ಚು ದೂರವಿರಲಾರದೆಂದು ಖಂಡಿತ ನಂಬಿರುವೆನು.

ಕವಾದ ನಮ್ಮ ಪ್ರಯತ್ನದಿಂದ ಲಭಿಸಿದ ಸ್ವಾತಂತ್ರ್ಯವು ಚಿರಸ್ಥಾಯಿಯಾಗಿ ಉಳಿದು ಯುದ್ಧಾಸಕ್ತ ರಾಷ್ಟ್ರಗಳಿಗೆ ನಮ್ಮ ವರ್ತನೆಯು ಮಾದರಿರೂಪವಾಗಿ ಪರಿಣಮಿಸಲಿಕ್ಕಿಲ್ಲವೇ? ಅಹಿಂಸವು ಶೂರರ ಆಯುಧವೆಂಬ ಮಾತು ನಿಜವೆಂದು ಆಗ ಜಗತ್ತಿಗೆ ವಿಶದವಾಗಲಿಕ್ಕಿಲ್ಲವೇ?" ಇದೀಗ ಅನೇಕ ಪತ್ರವ್ಯವಹಾರಿಗಳಿಂದ ಗಾಂಧೀಜಿಯವರಿಗೆ ಹಾಕಲ್ಪಟ್ಟ ಪ್ರಶ್ನೆಗಳ ವರಂಗರೆ. ಇವುಗಳಿಗೆ ಗಾಂಧೀಜಿಯವರು ಉತ್ತರವೀಯುತ್ತಾ ಈ ರೀತಿ ಅಂದಿರುವರು.

'ಈ ಲೇಖಕರಿಗೆ ಬ್ರಿಟಿಷರ ಸ್ವಭಾವದ ಪರಿಚಯವಿರಲಿಕ್ಕಿಲ್ಲ. ಬ್ರಿಟಿಷ್ ಜನತೆಯು ಸ್ವಾತಂತ್ರ್ಯ ಹೀನ ಪ್ರಜೆಗಳ ಸಹಾನುಭೂತಿಗೆ ಕಾತರಿಸುತ್ತಿಲ್ಲ. ಯಾಕೆಂದರೆ ಅವರಿಗೆ ಬೇಕಾದುದನ್ನು ಅಧಿಕಾರ ಪ್ರಯೋಗದಿಂದ ಅವರು ಮಾಡಿಸುವರು. ಅವರು ವೀರ ಹಾಗೂ ಪ್ರತಿಷ್ಠಾವಂತ ಜನ. ನಾರ್ವೆಯಲ್ಲಿ ಅವರಿಗೆ ಸಂಭವಿಸಿದಂಥಾ ಅವಜಯಗಳು ಡಜನ ಗಟ್ಟಲೆಯಾದರೂ ಅವರು ತಮ್ಮ ಮಾನಸಿಕ ಸ್ಥೈರ್ಯವನ್ನು ಕಳಕೊಳ್ಳಲಿಕ್ಕಿಲ್ಲ. ಅವರಿದಿರು ಬರುವ ಎಂಥಾ ಕಷ್ಟವನ್ನೂ ಯಶಸ್ವಿಯಾಗಿ ಎದುರಿಸುವ ಶಕ್ತಿ ಅವರಲ್ಲಿದೆ. ಭಾರತಕ್ಕೆ ಯುದ್ಧದ ವಿಚಾರದಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕಿಲ್ಲ. ಬ್ರಿಟಿಷ್ ಮಂತ್ರಿ ಮಂಡಲದ ಒಂದೇ ಮಾತಿನಿಂದ ಭಾರತವೂ ಯುದ್ಧಾಸಕ್ತ ರಾಷ್ಟ್ರವಾಗಿ ಮಾರ್ಪಡಿಸಲ್ಪಟ್ಟಿದೆ. ಬ್ರಿಟಿಷ್ ಮಂತ್ರಿ ಮಂಡಲದ ಇಚ್ಛೆಯಂತೆ ಭಾರತೀಯರ ಬಂಡಾರವು ಉಪಯೋಗಿಸಲ್ಪಡುತ್ತಿದೆ. ಇಂಡಿಯಾವು ಅಧೀನ ರಾಷ್ಟ್ರ. ಹಿಂದೆ ಮಾಡಿದಂತೆ ಬ್ರಿಟನು ಇಂದೂ ಅಧೀನ ರಾಷ್ಟ್ರವಾದ ಭಾರತವನ್ನು ಶೋಷಿಸುತ್ತಿದೆ. ಇಂಥಾ ಪರಿಸ್ಥಿತಿಯಲ್ಲಿ ಕಾಂಗ್ರೆಸು ಏನು ಮಾಡೀತು? ಅದು ಮಾಡಬಹುದಾದ ಕಾರ್ಯದ ಪರಮಾವಧಿ ಎಂದರೆ ಇಂದು ಅದು ಅನುಸರಿಸುತ್ತಿರುವ ಧೋರಣೆ. ಕಾಂಗ್ರೆಸು ದೇಶದಲ್ಲಿ ತೊಂದರೆಯನ್ನು ಹಬ್ಬಿಸದೆ ತನ್ನ ನಿಶ್ಚಿತ ಪಥದಲ್ಲಿ ಅದು ಕ್ರಮಿಸುತ್ತಿದೆ. ಬ್ರಿಟಿಷರನ್ನು ಈ ಬಿಕ್ಕಟ್ಟಿನಲ್ಲಿ ತೊಂದರೆಗೀಡುಮಾಡೆನೆಂಬ ನನ್ನ ಅಭಿಪ್ರಾಯವನ್ನು ಮತ್ತೊಮ್ಮೆ ಕಂಠೋಕ್ತವಾಗಿ ಸಾರುವೆನು. ಅವರಿಗೆ ತೊಂದರೆಕೊಟ್ಟದ್ದೇ ಆದರೆ ನನ್ನ ಸತ್ಯಾಗ್ರಹ ತತ್ವಕ್ಕೆ ವಿರೋಧ ನಡೆದಂತೆಯೇ ಆಗುವದು. ಇದಕ್ಕಿಂಥಾ ಮುಂದೆ ಹೋಗುವದು ಕಾಂಗ್ರೆಸಿನ ಶಕ್ತಿಯಲ್ಲಿಲ್ಲ. ಸ್ವಾತಂತ್ರ್ಯದ ಬೇಡಿಕೆಯನ್ನು ಮುಂದಿಟ್ಟು, ಮುಂದಿನ ಹೋರಾಟಕ್ಕೆ ಸತ್ಯಾಗ್ರಹಿಗಳನ್ನು ತರಬೇತು ಮಾಡುವದು ಕಾಂಗ್ರೆಸಿನ ಬದ್ಧ ಕರ್ತವ್ಯ. ಈ ತರಬೇತು ನಿಜವಾಗಿಯೂ ಗಮನಾರ್ಹವಾದ ವಿಚಾರ. ಖಾದಿ ಹಾಗೂ ಗ್ರಾಮ ಕೈಗಾರಿಕೆಗಳ ಪ್ರೋತ್ಸಾಹ, ಕೋಮುವಾರು ಐಕ್ಯ ಹಾಗೂ ಅಸ್ಪೃಶ್ಯತಾ ನಿವಾರಣೆ, ಪಾನನಿರೋಧ, ಇವುಗಳ ಬಗ್ಗೆ ಕಾಂಗ್ರೆಸಿಗೆ ಸದಸ್ಯರನ್ನು ಸೇರಿಸಿ ತರಬೇತು ಮಾಡಬೇಕು. ಕಾಂಗ್ರೆಸು ಅಹಿಂಸಾತತ್ವವನ್ನು ಕೂಲಂಕುಶವಾಗಿ ಪಾಲಿಸಿ ವಿಧಾಯಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಾಗಿಸಿದ್ದೇಯಾದರೆ ಸ್ವರಾಜ್ಯವು ಸಂದೇಹವಿಲ್ಲದೆ ಕರಗತವಾಗುವದು ನಿಶ್ಚಯವೆಂದು ನಾನು ಧೃಢವಾಗಿ ಹೇಳಬಲ್ಲೆ. ಅಂಥಾ ಕಾಲಕ್ಕೆ ಬ್ರಿಟಿಷರಿಗೆ ಯಾವ ರೀತಿಯ ಸಹಾಯ ಮತ್ತು ಹೇಗೆ ಎಂಬ ವಿಚಾರ ತೀರ್ಮಾನಿಸುವ ಹಕ್ಕು ಭಾರತಕ್ಕೆ ಬರುವದು.

ಮಿತ್ರರಾಷ್ಟ್ರಗಳಿಗೆ ಭಾರತವು ಸಹಾಯ ಮಾಡುವದಾದರೆ ಅದು ಅಹಿಂಸೆಯನ್ನು ಕೃತಿಯಲ್ಲಿ ತೋರಿಸಿ, ಸತ್ಯದಿಂದ ವರ್ತಿಸಿ, ಭಾರತ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಅವಿಚಲವಾಗಿ ಹೋರಾಡಬೇಕು. ಹೀಗಾದರೆ ಜಗತ್ತಿನ ಶಾಂತಿಗೆ ಭಾರತವು ಪ್ರಯತ್ನಿಸಿದಂತಾಯಿತು. ಬ್ರಿಟನು ಕಾಂಗ್ರೆಸಿನ ನ್ಯಾಯಬದ್ಧ ಕೇಳಿಕೆಗಳನ್ನು ಒಪ್ಪದೆ ಕ್ಷುಲ್ಲಕ ಕಾರಣಗಳನ್ನು ಮುಂದು ಹಾಕುತ್ತಾ ಭಾರತೀಯರಿಗೆ ಅತೃಪ್ತಿಯನ್ನುಂಟುಮಾಡುತ್ತಿರುವದರಿಂದ ಅದರ ಹಿತಕ್ಕೇ ಧಕ್ಕೆ ಬರುತ್ತಿದೆ. ನನ್ನಿಂದ ಸೂಚಿಸಲ್ಪಟ್ಟ ರಾಷ್ಟ್ರಘಟನಾ ಸಭೆ (ಕಾನ್ಸ್ಟಿಟ್ಯುವೆಂಟ್ ಎಸಂಬ್ಲಿ) ಯು ಬ್ರಿಟಿಷರು ಮುಂದಿಟ್ಟಿರುವ ಕುಂಟು ನೆಪಗಳನ್ನು ದೂರ ಮಾಡುವದು. ರಾಷ್ಟ್ರಘಟನಾ ಸಭೆಯು ಬ್ರಿಟಿಷರು ಭಾರತ ಭವಿತವ್ಯವನ್ನು ನಿರ್ಧರಿಸುವ ಹಕ್ಕನ್ನು ಕಡಿದು ಹಾಕುವದು. ಇದೇ ಇಂದು ರಾಷ್ಟ್ರಘಟನಾ ಸಮಿತಿಯನ್ನು ಜಾರಿಗೆ ತರುವಲ್ಲಿ ಸರಕಾರಕ್ಕಿರುವ ತೊಂದರೆ ಇರಬಹುದು. ಹಾಗಾದ ಪಕ್ಷ ಅದು ಸರಕಾರಕ್ಕೆ ತೊಂದರೆಯಲ್ಲ, ಭಾರತ ಭವಿತವ್ಯವನ್ನು ರೂಪಿಸುವ ಹಕ್ಕು ಭಾರತೀಯರ ಜನ್ಮಸಿದ್ಧ ಹಕ್ಕು ಎಂಬ ಮನವರಿಕೆಯಾಗುವ ವರೆಗೆ ಕಾಂಗ್ರೆಸು ಕಾಯಬೇಕಾಗುವದು.

ಈ ಸಂದರ್ಭದಲ್ಲಿ, ಸತ್ಯಾಗ್ರಹ ಪ್ರಾರಂಭಿಸಲು ನಾನು ಹಿಂಜರಿಯುತ್ತಿರುವೆನೆಂದೂ ಒಂದಿಲ್ಲೊಂದು ಕಾರಣದಿಂದ ಅಮೂಲ್ಯ ಸಮಯವನ್ನು ಕಳೆಯುತ್ತಿರುವೆನೆಂದೂ ನನ್ನನ್ನು ದೂಷಿಸಿ ಬಂದ ಪತ್ರಗಳಿಗೆ ಜವಾಬುಕೊಡಬಯಸುತ್ತೇನೆ. ಅಹಿಂಸಾಶಸ್ತ್ರದ ಜಯಪ್ರದ ಪ್ರದರ್ಶನದ ಬಗ್ಗೆ ಈ ನನ್ನ ಲೇಖಕರಿಗಿಂತಲೂ ನನಗೆ ಹೆಚ್ಚಿನ ಜವಾಬ್ದಾರಿಯಿದೆ. ಈ ಶೋಧನೆಯಲ್ಲಿ ನಾನು ಒಂದು ನಿಮಿಷವನ್ನೂ ಅನಾವಶ್ಯ ಹಾಳುಮಾಡುತ್ತಿಲ್ಲ. ನನಗೆ ಸುಗಮ ಹಾದಿಯನ್ನು ತೋರಿಸುವ ಬಗ್ಗೆ ದೇವರಲ್ಲಿ ಶರಣುಹೋಗಿರುವೆನು. ಆದರೆ ಹೊರಗಿನ ಬಲಾತ್ಕಾರದಿಂದ ನಾನು ಸತ್ಯಾಗ್ರಹ ಚಳವಳ ಪ್ರಾರಂಭಿಸೆನು. ಅಂತೆಯೇ ಹೊರಗಿನ ಕೇಳಿಕೆಯಂತೆ ಅದನ್ನು ನಿಲ್ಲಿಸಲೂ ನಾನು ಒಪ್ಪಲಾರೆನು. ಇದು ನನ್ನ ಪರೀಕ್ಷೆಯ ಕಾಲವೆಂದು ನನಗೆ ಗೊತ್ತಿದೆ. ಅನೇಕ ಕಾಂಗ್ರೆಸಿಗರ ಹೃದಯದಲ್ಲಿ ಹಿಂಸೆಯೂ, ಸ್ವಾರ್ಥಬುದ್ಧಿಯೂ ನೆಲೆಸಿದೆಯೆಂಬುವನ್ನು ತೋರಿಸಲು ನನಗೆ ಆಧಾರಗಳು ಬೇಕಾದಷ್ಟಿವೆ. ಕಾಂಗ್ರೆಸಿನವರು ಅಹಿಂಸೆಯ ನಿಜವಾದ ಅರ್ಥವನ್ನು ತಿಳಿದು ವರ್ತಿಸಿದ್ದೇ ಆಗಿದ್ದರೆ ನಮಗೆ 1921 ರಲ್ಲೇ ಸ್ವರಾಜ್ಯಲಭಿಸುತ್ತಿತ್ತು. ಈಚೆಗೆ ಭಾರತ ಚರಿತ್ರೆಯು ಬೇರೊಂದು ವಿಧವಾಗಿ ಬರೆಯಲ್ಪಡುತ್ತಿತ್ತು. ಆದರೆ ನಾನು ದೂರುವ ಅಗತ್ಯವಿಲ್ಲ. ನನ್ನಲ್ಲಿರುವ ಸಾಧನಗಳಿಂದ ನಾನು ಕೆಲಸ ಮಾಡಬೇಕು. ನನ್ನ ಈಗಿನ ತಾಟಸ್ಥ್ಯ ಭಾವದ ಅರ್ಥವನ್ನು ಕಾಂಗ್ರೆಸಿಗರು ಕೂಲಂಕುಶ ತಿಳಿದುಕೊಳ್ಳಲಿ.

ಮಾರಾಟಕ್ಕಿದೆ.

ವೀರಾಜಪೇಟೆನಾಡು ಮೈತಾಡಿ ಗ್ರಾಮದ ವಕ್ಕಲಿಗರ ನಿಂಗೇಗೌಡ್ರ ಮಗ ದೇವಣ್ಣನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಕುಳ ನಂ. 38ರ ಸಾಗಿನ ಸ. ನ. 150/1ರ 16.70 ಎಕ್ರೆಯ ಪೈಕಿ, 13.36 ಸೆಂಟು ಭೂಮಿಯನ್ನೂ, ಸಾಗಿನ ಸ. ನ. 155/3ರ ಕಿತ್ತಲೆ ತೋಟದ 3. 90 ಯೇಕ್ರೆಯ ಪೈಕಿ 3.12 ಸೆಂಟನ್ನೂ, ಸಾಗಿನ ಸ. ನ. 155/4ರ ಕಿತ್ತಲೆ ತೋಟದ .80 ಸೆಂಟಿನ ಪೈಕಿ 64 ಸೆಂಟನ್ನೂ, ಸಾಗಿನ ಸ. ನ. 155/2ರ 8.69 ಎಕ್ರೆಯ ಬಾಣೆಯ ಪೈಕಿ 6.95 ಸೆಂಟನ್ನೂ ಮತ್ತು ಸ. ನ. 150/2ರ 0.03 ಸೆಂಟಿನ ಕೆರೆಯನ್ನೂ ಸಹ ವಿಕ್ರಯಿಸಲಾಗುತ್ತೆ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ಪತ್ತೆಗೆ ಬರೆದು ತಿಳಿದುಕೊಳ್ಳಬಹುದು. ಕಾಫಿ ಮತ್ತು ಕಿತ್ತಲೆ ವ್ಯವಸಾಯಕ್ಕೆ ಫಲವತ್ತಾದ ಬಾಣೆ ಜಾಗಗಳು.

ವಿ. ಯನ್. ದೇವಣ್ಣ,
ಮೈತಾಡಿಗ್ರಾಮ,
12–12 ಮೂರ್ನಾಡು.

ಯುದ್ಧ ವಾರ್ತೆ.

ಜರ್ಮನರ ಅತುಳ ಪರಾಕ್ರಮ.
ಬೆಲ್ಜಿಯನರ ಶಸ್ತ್ರ ಸನ್ಯಾಸ.
ಮಿತ್ರ ರಾಷ್ಟ್ರಗಳ ಪ್ರಚಂಡ ಹೋರಾಟ.
ಕ್ಯಾಲೆ ಬಂದರದ ಆಕ್ರಮಣ.
ಯುದ್ಧದ ಭೀಬತ್ಸ ದೃಶ್ಯ.

ಜರ್ಮನರ ಮುನ್ನುಗ್ಗಾಟವು ತೀವ್ರವಾಗಿ ನಡೆದೇ ಇದೆ. ಫ್ರಾನ್ಸಿನಲ್ಲಿ ಜರ್ಮನರು ಅನುಕ್ರಮವಾಗಿ ಪಟ್ಟಣಗಳನ್ನು ಹಿಡಿದುಕೊಂಡು ಮುಂದರಿಯುತ್ತಿರುವರು. ಜರ್ಮನಿಯು ಎಲ್ಲಾ ಸೈನ್ಯಗಳು ಫ್ರಾನ್ಸನ್ನು ನುಗ್ಗಿದ ನಂತರ ಮೇಗ್ನಿಟ್ ಲೈನ್ಸಿನ ಭದ್ರಪಡಿಸಿ ಜರ್ಮನರು ಹಿಂದೋಡದಂತೆ ತಡೆಗಟ್ಟಿ ಬಗ್ಗುಬಡಿಯಬೇಕೆಂದು ಯೋಚಿಸಿದ ಫ್ರಾನ್ಸಿನ ಗಾಳಿಗೋಪುರವು ಜರ್ಮನಿಯ ಮಿಂಚಿನ ವೇಗದ ಮುನ್ನುಗ್ಗಾಟದಲ್ಲಿ ಕೊಚ್ಚಿಕೊಂಡು ಹೋಗಿದೆ. ಇನ್ನೊಂದು ವಾರದಲ್ಲಿ ಫ್ರಾನ್ಸಿನ ಗತಿಯು ಏನಾಗುವುದೆಂದು ಹೇಳುವುದು ಕಷ್ಟಸಾಧ್ಯವಾಗಿದೆ.

ಬೆಲೋನ್ ಪಟ್ಟಣವು ಕೈವಶವಾಯಿತು.

ತಾರೀಕು 24 ರಲ್ಲಿ ಜರ್ಮನರ ಸೈನ್ಯಪಡೆಯು ಬೆಲೋನ ಪಟ್ಟಣಕ್ಕೆ ನುಗ್ಗಿ ಅದನ್ನು ವಶಪಡಿಸಿಕೊಂಡಿದೆ. ಮಿತ್ರಸೈನ್ಯಗಳು ಪ್ರಚಂಡವಾಗಿ ಹೋರಾಡಿದರೂ ಜರ್ಮನರ ನುಗ್ಗಾಟವು ತಡೆಗಟ್ಟಲ್ಪಟ್ಟಿರುವುದಿಲ್ಲ. ಜರ್ಮನರು ಆಷ್ಟೆವಲ್ಲಿ ಪಟ್ಟಣದ ಮೇಲೆ ಬಾಂಬಿನ ಸುರಿಮಳೆ ಸುರಿಸಿ ಅದನ್ನು ನಾಶಮಾಡಿರುವರು. ಜರ್ಮನರ ಉಪಟಳಕ್ಕೆ ತುತ್ತಾದ ಸೈನಿಕರ ರಕ್ಷಣೆಗೆ ಫ್ರಾನ್ಸಿನಿಂದ ಆಸ್ಪತ್ರೆ ಹಡಗುಗಳು ಇದೀಗ ಧಾವಿಸಿ ಬಂದಿವೆ.

ಫ್ರೆಂಚರ ಹೇಳಿಕೆ.

ಆರಾಸ್ ಮತ್ತು ಕಂಬ್ರೈ ಪ್ರಾಂತ್ಯಗಳಿಂದ ಜರ್ಮನರು ಮುಂದರಿಯುತ್ತಿದ್ದಾರೆ. ಜನರಲ್ ವೇಗಂಡರವರ ದಕ್ಷ ನೇತೃತ್ವದಲ್ಲಿ ಫ್ರಾನ್ಸಿನ ಸೈನ್ಯವು ಇವರನ್ನು ತಡೆಗಟ್ಟುತ್ತಿದೆ. ಆರಾಸ್ ಮತ್ತು ಕಂಬ್ರೈ ಪ್ರಾಂತ್ಯಗಳಿಂದ ಬ್ರಿಟಿಷ್ ಮತ್ತು ಬೆಲ್ಜಿಯನ್ ಸೈನ್ಯಗಳು ಹಿಂದಕ್ಕೆ ಬಂದಿವೆ. ಮಿತ್ರಸೈನ್ಯಗಳು ಆಮೇನ್ಸ ಎಂಬಲ್ಲಿ ಜರ್ಮನರ ಸೈನ್ಯವನ್ನು ಎದುರಿಸಿ ಅವರಲ್ಲಿ ಐದು ಸಾವಿರ ಜನರನ್ನು ಪ್ರಧಾನ ಸೈನ್ಯದಿಂದ ಬೇರ್ಪಡಿಸಿರುವರು.

ಜರ್ಮನರ ಘೋಷಣೆ.

ಕಾದಾಗ ಕಬ್ಬಿಣವನ್ನು ಬಡಿಯಬೇಕೆಂದು ತಿಳಿದ ಜರ್ಮನರು ಮಿತ್ರ ರಾಷ್ಟ್ರಗಳು ಅವ್ಯವಸ್ಥಿತವಾಗಿರುವ ಈ ಸಂದರ್ಭವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಫ್ರಾನ್ಸಿನಲ್ಲಿ ಜಯಶ್ರೀಯನ್ನು ಒಲಿಸಿಕೊಂಡದ್ದೇ ಆದರೆ ಮುಂದಿನ ಯುದ್ಧವು ಸರಾಗವಾಗುವುದೆಂದು ಅವರು ಮನಗಂಡಿದ್ದಾರೆ. ಅಂತೆಯೇ ಅವರು ತಮ್ಮ ವಿಶಿಷ್ಟ ಶಕ್ತಿ ಸಾಮರ್ಥ್ಯವನ್ನು ಉಪಯೋಗಿಸಿ ಇಲ್ಲಿ ಹೋರಾಡುತ್ತಿದ್ದಾರೆ. ಯುದ್ಧದ ಸಿಂಹಾವಲೋಕನವನ್ನು ಮಾಡುತ್ತಾ 'ಉತ್ತರ ಪ್ರಾಂತ್ಯದಲ್ಲಿ ನಮ್ಮ ಪಡೆಯು ಅಲ್ಲಿದ್ದ ಶತ್ರು ಸೈನ್ಯವನ್ನು ಮುರಿದು ಅರಸಿನ ಉತ್ತರದಲ್ಲಿರುವ ಲಾಕೇಟ್ ಎಂಬ ಪ್ರಾಂತ್ಯವನ್ನು ಆಕ್ರಮಿಸಿರುವರು. ಆರಸ್ ಮತ್ತು ಸಮುದ್ರದ ಮಧ್ಯ ಪ್ರಾಂತ್ಯಕ್ಕಾಗಿ ನಮ್ಮ ಸುಸಜ್ಜಿತ ಸೈನ್ಯವು ಮುನ್ನುಗ್ಗುತ್ತಿದೆ. ಕಳೆದ ಎರಡು ದಿನಗಳಲ್ಲಿ ಶತ್ರುವಿನ ಒಂದು ಹಡಗೂ, ನಾಲ್ಕು ಜಲಾಂತರ್ಗಾಮಿಗಳೂ, ಆರು ವಿಟಿವಾಟಿನ ಹಡಗುಗಳೂ ಮುಳುಗಿಸಲ್ಪಟ್ಟಿವೆ. ನಮ್ಮ ವಿಮಾನಪಡೆಯು ಯಶಸ್ವಿಯಾಗಿ ಶತ್ರುವನ್ನು ಎದುರಿಸಿದಲ್ಲದೆ, ನಾರ್ವೆಯ ಮುಖ್ಯ ಪಟ್ಟಣವಾದ ನಾರ್ವಿಕ್ಕಿನಲ್ಲಿ ಬಂದು ಇಳಿಯುತ್ತಿದ್ದ ಮಿತ್ರರಾಷ್ಟ್ರಗಳ ಸೈನ್ಯದ ಮೇಲೆ ಬಾಂಬು ಹಾಕಿ ವಿಪರೀತ ನಷ್ಟಪಡಿಸಿವೆ.

ಇಟಲಿಯ ಘೋಷಣೆ.

ತಟಸ್ಥ ರಾಷ್ಟ್ರವೆಂದಿದ್ದ ಇಟಲಿಯು ಈಗೀಗ ಯುದ್ಧ ವಿಚಾರದ ಹೆಚ್ಚು ಆಸಕ್ತಿ ತೋರಿಸುತ್ತಿದೆ. ಇಟಲಿ ವಾರ್ತಾಪತ್ರಿಕೆಗಳು ಮಿತ್ರರಾಷ್ಟ್ರಗಳ ಮೇಲೆ ಅಪಪ್ರಚಾರದ ಸುರಿಮಳೆಯನ್ನು ಸುರಿಸುತ್ತಿವೆ. ಇದೀಗ ಇಟಲಿಯು ತನ್ನ ಸೈನ್ಯಕ್ಕೆ ಎಚ್ಚರಿಕೆಯನ್ನು ಕೊಟ್ಟು ಯುದ್ಧ ಸಜ್ಜಿತವಾಗಿ ನಿಲ್ಲಿಸಿದೆ.

ಸಾರ್ವಭೌಮರ ಹೇಳಿಕೆ.

ತಾರೀಕು 24 ರಲ್ಲಿ ಒಂದು ಬ್ರಾಡ್‌ಕಾಸ್ಟ ಭಾಷಣ ಮಾಡುತ್ತಾ ಚಕ್ರವರ್ತಿ ಸಾರ್ವಭೌಮರು ಇಂದಿನ ಬಿಕ್ಕಟ್ಟಿನ ಸಂದರ್ಭದಲ್ಲಿ ಪ್ರತಿಯೊಬ್ಬನು ದೇಶದ ಕಲ್ಯಾಣವನ್ನು ಬಯಸಿ ಯಥಾಶಕ್ತಿ ಸಹಾಯ ಮಾಡಬೇಕೆಂದೂ ಇಂದಿನ ಯುದ್ಧವು ನಮ್ಮ ಜೀವನವನ್ನು ರೂಪಿಸುವ... ಇಲ್ಲವೆ ಮಾರ್ಪಡಿಸುವಂಥಾದ ಪ್ರಯುಕ್ತ ಜವಾಬ್ದಾರಿಯನ್ನು ಹೊತ್ತವರೆಲ್ಲರೂ ತಮ್ಮ ಕರ್ತವ್ಯ ನಿರ್ವಹಣದಲ್ಲಿ ದಕ್ಷತೆಯಿಂದ ವರ್ತಿಸಬೇಕೆಂದೂ ನಮ್ಮ ಆಶ್ರಿತ ಜನಾಂಗಗಳು ಹಿಂದಿನ ಯುದ್ಧಕ್ಕಿಂತಲೂ ಹೆಚ್ಚಾಗಿ ನಮಗೆ ಸಹಾಯ ಮಾಡುವುದರಲ್ಲಿ ಸಂಶಯವಿಲ್ಲವೆಂದೂ ಹೇಳಿದರು.

ಬೆಲ್ಜಿಯಮಿನಿಂದ ಧಾಳಿ.

ಜರ್ಮನರು ಬೆಲ್ಜಿಯಮಿನಿಂದ ಫ್ರಾನ್ಸಿಗೆ ದಾಟಿ ಬ್ರಿಟಿಷ್ ಕಾಲುವೆಯ ಕಡೆಗಾಗಿ ಮುಂದರಿಯುತ್ತಿರುವರು. ಬೆಲ್ಜಿಯಮಿನ ಸಮುದ್ರ ಕರಾವಳಿಯಲ್ಲಿರುವ ಬಂದರುಗಳನ್ನು ವಶಪಡಿಸಿಕೊಂಡದಕ್ಕಿಂತಲೂ ಫ್ರಾನ್ಸಿನ ಬಂದರುಗಳು ಪ್ರಾಮುಖ್ಯವಾಗಿವೆ. ಫ್ರಾನ್ಸಿನ ಬಂದರುಗಳು ಇಂಗ್ಲೆಂಡಿಗೆ ತೀರಾ ಸಮೀಪವಿರುವ ಪ್ರಯುಕ್ತ ಬ್ರಿಟನಿನ ಮೇಲೆ ಜರ್ಮನರು ಕೈ ಮಾಡುವ ಸಂಭವ ಹೆಚ್ಚು. ಇದಾಗಲೇ ಜರ್ಮನರು ಫ್ರಾನ್ಸಿನ ಕೆಲ ಬಂದರಕ್ಕೆ ತಲುಪಿರುವರು. ಈ ಪಟ್ಟಣವು ಅವರ ವಶವಾದರೆ ಮುಂದೆ ಇಂಗ್ಲಿಷ್ ಕಾಲುವೆಯಲ್ಲಿ ಬ್ರಿಟಿಷರ ಹಡಗು ಪಡೆ ಓಡಾಡದಂತೆ ಜರ್ಮನರು ತಡೆಗಟ್ಟಬಹುದು. ಇಲ್ಲವೇ ಕೆಲ ಬಂದರದಿಂದಲೇ ಇಂಗ್ಲೆಂಡಿನ ಮೇಲೆ ಧಾಳಿ ಮಾಡಲೂ ಬಹುದು. ಪರಿಸ್ಥಿತಿ ತೀರ ಬಿಕ್ಕಟ್ಟಿಗೆ ತಲುಪಿದೆ.

ಬೆಲ್ಜಿಯಂ ಪ್ರಕರಣ.

ಬೆಲ್ಜಿಯಮಿನಲ್ಲಿ ತೀವ್ರ ಕದನವಾಗುತ್ತಿತ್ತಷ್ಟೆ. ಇದೀಗ ನಿನ್ನೆ ಬೆಲ್ಜಿಯಮಿನ ರಾಜನಾದ ಲ್ಯೂಪೋಲ್ಡರವರು ಯುದ್ಧವನ್ನು ನಿಲ್ಲಿಸಬೇಕೆಂದು ಸಾರಿರುವರು. ಬೆಲ್ಜಿಯಂ, ನಾಜೀ ಸೈನ್ಯದ ಉಪಟಳವನ್ನು ಸಹಿಸಲಾರದೆ ಈ ರೀತಿ ಹೇಳಿರಬಹುದಾಗಿ ನಂಬಲಾಗಿದೆ. ಬೆಲ್ಜಿಯಂ ರಾಜನು ಹೀಗೆ ಅನಿರೀಕ್ಷಿತವಾಗಿ ಯುದ್ಧ ನಿಲ್ಲಿಸಿರುವುದರಿಂದ ಮಿತ್ರ ಸೈನ್ಯಗಳಿಗೆ ತೊಂದರೆ ಹೆಚ್ಚಾಗಿದೆ. ಮಿತ್ರ ಸೈನ್ಯಗಳು ಈ ವಿಚಾರದಲ್ಲಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿ ತಾವು ಬೆಲ್ಜಿಯಮಿನ ರಕ್ಷಣೆಗೆ ಬಂದದ್ದರೂ, ಬೆಲ್ಜಿಯನರು ಆ ಸಹಾಯವನ್ನರಿಯದೆ ಈ ರೀತಿಯ ವಿಘಾತುಕ ಕಾರ್ಯ ಮಾಡಿರುವುದು ಶೋಭಿಸುವ ವಿಚಾರವಲ್ಲವೆಂದಿದ್ದಾರೆ. ಇತ್ತ ಬೆಲ್ಜಿಯಮಿನಲ್ಲಿ ರಾಜರು ತಮ್ಮ ಸ್ವಂತ ಅಭಿಪ್ರಾಯದಿಂದ ಯುದ್ಧವನ್ನು ನಿಲ್ಲಿಸುವರೆ ಆಜ್ಞೆ ಮಾಡಿರುವ ಪ್ರಯುಕ್ತ ಅಲ್ಲಿಯ ಮಂತ್ರಿ ಮಂಡಳವು ರಾಜನ ಘೋಷಣೆಯನ್ನು ನ್ಯಾಯ ವಿರುದ್ಧವೆಂದು ಸಾರಿರುವರು. ಯುದ್ಧವನ್ನು ಅವರು ಮುಂದರಿಸುವ ಚಿಹ್ನೆಗಳು ಕಂಡು ಬರುತ್ತಿವೆ.

ಫ್ರೆಂಚ್ ಪ್ರಧಾನರ ಹೇಳಿಕೆ.

'ಮುಂದೆ ಯುದ್ಧದಲ್ಲಿ ಬೆಲ್ಜಿಯನರ ಸಹಾಯವನ್ನಪೇಕ್ಷಿಸುವುದು ನಿರರ್ಥಕ. ಬೆಲ್ಜಿಯನರು ತಮ್ಮ ಸ್ವಾತಂತ್ರ್ಯವನ್ನು ಮಾರಿಕೊಂಡರು. ಈಗ ಬ್ರಿಟನ್ ಹಾಗೂ ಫ್ರೆಂಚರು ಮಾತ್ರ ಶತ್ರುಗಳನ್ನು ಎದುರಿಸಬೇಕಾಗಿದೆ. ಯುದ್ಧವು ಭರದಿಂದ ನಡೆಯುತ್ತಲೇ ಇದೆ. ಫ್ರಾನ್ಸಿನ ಬಂದರುಗಳಲ್ಲೊಂದಾದ ಡನ್‌ಕರ್ಕಿನಲ್ಲಿ ಯುದ್ಧವಾಗುತ್ತಿತ್ತು. ಅದನ್ನು ಕಾಯುತ್ತಿದ್ದ ಬೆಲ್ಜಿಯನ್ ಸೈನ್ಯಗಳು ರಾಜನ ಹೇಳಿಕೆಯಂತೆ ಅದನ್ನು ಬಿಟ್ಟುಹೋಗಿರುವರು. ಈ ವಿಚಾರವನ್ನು ತಮ್ಮ ಸಹಪಡೆಯಾಗಿ ಯುದ್ಧ ಮಾಡುತ್ತಿದ್ದ ಫ್ರಾನ್ಸು ಹಾಗೂ ಬ್ರಿಟನ್ ಸೈನ್ಯಗಳಿಗೆ ಹೇಳದೆ ವರ್ತಿಸಿದ್ದರಿಂದ ಆ ಬಂದರವು ಸುಲಭವಾಗಿ ಜರ್ಮನರ ಕೈ ಸೇರುವಂತಾಗಿದೆ. ಹದಿನೆಂಟು ದಿನಗಳಿಗೆ ಮೊದಲು ಇದೇ ರಾಜ ಲ್ಯೂಪೋಲ್ಡರು ಸಹಾಯಕ್ಕಾಗಿ ನಮ್ಮನ್ನು ಬೇಡಿದರು. ಅದರಂತೆಯೇ ನಾವು ವರ್ತಿಸಿದೆವು. ಇಂದು ಅದೇ ರಾಜನು ತನ್ನ ಸೈನ್ಯಕ್ಕೆ ಶಸ್ತ್ರ ಸನ್ಯಾಸವನ್ನು ಕೈಕೊಳ್ಳಲು ಹೇಳುತ್ತಿರುವರು. ಇದು ಚರಿತ್ರೆಯಲ್ಲಿ ಈ ವರೆಗೆ ನಡೆಯದ ವಿಚಾರ. ಆದರೆ ಈಗ ಬೆಲ್ಜಿಯನ್ ದೇಶ ಪ್ರೇಮಿಗಳು ಹೊಸದೊಂದು ಸೈನ್ಯ ಸ್ಥಾಪಿಸಿ ಮಿತ್ರ ಸೈನ್ಯಗಳೊಡನೆ ಕಲೆತು ಯುದ್ಧ ಮಾಡುವ ಏರ್ಪಾಡುಗಳಾಗುತ್ತಿವೆ. ನಮ್ಮ ಸೈನ್ಯವು ಬೆಲ್ಜಿಯನರ ಈ ಮೋಸದಿಂದ ಧೃತಿಗೆಟ್ಟಿರುವುದಿಲ್ಲ. ಈ ಹದಿನೆಂಟು ದಿನಗಳ ಯುದ್ಧದಲ್ಲಿ ಅವರು ಸಾವಿರಾರು ಚರಿತ್ರಾರ್ಹವಾದ ವೀರ ಕಾರ್ಯಗಳನ್ನು ಮಾಡಿರುವರು. ನಮಗೆ ಜಯವೆಂಬುವುದು ಸಿದ್ಧಾಂತ. ಈ ಪರೀಕ್ಷಾ ಕಾಲದಲ್ಲಿ ನಾವು ಯಥೋಚಿತ ವರ್ತಿಸಿ ಜಗತ್ತಿನ ಚಿತ್ತಭಿತ್ತಿಯಲ್ಲಿ ಫ್ರಾನ್ಸಿನ ಅಚ್ಚಳಿಯದ ಚಿತ್ರವನ್ನು ಕೆತ್ತಬೇಕಿದೆ.'

ಜರ್ಮನರ ಉದ್ಗಾರ.

'ಅಸಮಾನ ವೀರ ಜರ್ಮನ್ ಸೈನ್ಯದ ಮುಂದೆ ನಿಂತು ಮೃತ್ಯುವನ್ನಾಲಿಂಗಿಸುವ ಮಿತ್ರರಾಷ್ಟ್ರಗಳ ಮೌಢ್ಯತೆಯನ್ನು ಕಂಡು ಬೆಲ್ಜಿಯನ್ ರಾಜರು ತಮ್ಮ ಸೈನ್ಯಕ್ಕೆ ಯುದ್ಧ ನಿಲ್ಲಿಸುವಂತೆ ಆಜ್ಞಾಪಿಸಿರುವರು. ಆದ್ದರಿಂದ ಬೆಲ್ಜಿಯನ್ ಸೈನ್ಯವು ಶಸ್ತ್ರ ಕೆಳಗಿರಿಸಿದೆ. ಮುಂದೆ ಬೆಲ್ಜಿಯನ್ ಸೈನ್ಯವೇ ಇಲ್ಲದಂತಾಗುವುದು.'

ಉತ್ತರದಲ್ಲಿ ಘೋರಯುದ್ಧ.

ಫ್ರಾನ್ಸಿನ ಉತ್ತರ ಪ್ರಾಂತದಲ್ಲಿ ತೀವ್ರ ಕದನವಾಗುತ್ತಿದೆ. ಜರ್ಮನರು ತಮ್ಮ ವಿಶಿಷ್ಟ ಶಕ್ತಿ ಸಾಮರ್ಥ್ಯವನ್ನು ಇಲ್ಲಿ ಉಪಯೋಗಿಸುತ್ತಿರುವರು. ಲೈನ್ ಪ್ರಾಂತದಲ್ಲಿ ಜರ್ಮನರು ಹೆಚ್ಚು ಉತ್ಸಾಹದಿಂದ ಯುದ್ಧ ಮಾಡುತ್ತಿರುವರು. ಫ್ಲಾಂಡರ್ಸಿನಲ್ಲಿ ಜರ್ಮನರು ನಾಗರೀಕರ ಮೇಲೂ ಸಹ ತಮ್ಮ ಧಾಳಿಯನ್ನು ನಡೆಸಿದ್ದಾರೆಂದು ಫ್ರೆಂಚರ ಹೇಳಿಕೆ. ಲಕ್ಷೋಪಲಕ್ಷ ನಾಗರೀಕರು ಇವರ ಧಾಳಿಗೆ ತುತ್ತಾಗಿರುವರೆಂದು ಹೇಳಲಾಗಿದೆ. ಕಳೆದ ಘೋರ ಸಂಗ್ರಾಮದಲ್ಲಿ ಜರ್ಮನರು ಉಪಯೋಗಿಸಿದ ಯುದ್ಧ ವಿಧಾನವನ್ನು ಇದೀಗ ಕೈಕೊಂಡಿರುವರಂತೆ.

ಕ್ಯಾಲೇ ವಶವಾಯಿತು.

ಇಂಗ್ಲೆಂಡಿಗೆ ಅತೀ ಸಮೀಪವೂ, ಫ್ರಾನ್ಸಿನ ಪ್ರಾಮುಖ್ಯ ಬಂದರುಗಳಲ್ಲೊಂದೂ ಆದ ಕ್ಯಾಲೆಯು ಹಾದಾಹಾದಿ ಕಾಳಗದ ನಂತರ ಜರ್ಮನರ ವಶವಾಗಿದೆಯೆಂದು ಜರ್ಮನರು ಹೇಳಿರುವರು. ಮುಂದುವರಿಸುತ್ತಾ—ದಕ್ಷಿಣ ಗಡಿಯಲ್ಲಿ ಜರ್ಮನರು ಮುಂದರಿದು ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್ಸಿನ ಆವರಣದಲ್ಲಿರುವ ವಿಮಾನ ನಿಲ್ದಾಣಗಳ ಮೇಲೆ ಬಾಂಬು ಹಾಕಿರುವರು. ಒಂದು ನಿಲ್ದಾಣದಲ್ಲಿ 21 ವಿಮಾನಗಳು ನಾಶವಾದುವು. ಶತ್ರುವು 73 ವಿಮಾನಗಳನ್ನು ಕಳಕೊಂಡಿತು. ವಿಮಾನ ಯುದ್ಧದಲ್ಲಿಯೇ ಮೂವತ್ತೆರಡನ್ನು ಕೆಳಗುರುಳಿಸಲಾಯಿತು. ನಮ್ಮ ಹೊಸ ಸೈನ್ಯಗಳು ಬರುತ್ತಲೇ ಇವೆ—ಎಂದು ಹೇಳುತ್ತಿರುವರು.

ಕಾಣೆಯಾಗಿರುವರು.

ಫ್ರಾನ್ಸಿನಲ್ಲಿ ಯುದ್ಧ ಮಾಡುತ್ತಿದ್ದ ಬ್ರಿಟಿಷ್ ಸಾರ್ವಭೌಮರ ಅಕ್ಕನ ಮಗನಾದ ಲಾರ್ಡ್ ಫ್ರೆಡರಿಕ್ ಎಂಬವರು ಕಾಣೆಯಾಗಿರುವರೆಂದು ಲಂಡನಿನ ವಾರ್ತೆ.

ಕ್ಯಾಲೇ ವಶವಾಗಿಲ್ಲ.

ಕ್ಯಾಲೇ ಬಂದರದಲ್ಲಿ ಘೋರ ಯುದ್ಧವಾಗುತ್ತಿದೆಯೆಂದೂ, ಇದು ಪ್ರಾಮುಖ್ಯ ಸ್ಥಳವಾದ್ದರಿಂದ ಮಿತ್ರಸೈನ್ಯಗಳು ತಮ್ಮ ವಿಶಿಷ್ಟ ಶಕ್ತಿಯಿಂದ ಹೋರಾಡುತ್ತಿರುವವೆಂದೂ, ಅಲ್ಲಿ ನಡೆದ ವಿಮಾನ ಯುದ್ಧದಲ್ಲಿ 42 ಶತ್ರು ವಿಮಾನಗಳನ್ನು ಕೆಳಗುರುಳಿಸಲಾಗಿದೆಯೆಂದೂ ಲಂಡನಿನ ಹೇಳಿಕೆ. ಕ್ಯಾಲೇ ಬಂದರವು ಇನ್ನೂ ಮಿತ್ರರಾಷ್ಟ್ರಗಳ ವಶದಲ್ಲೇ ಇದೆಯಂತೆ.

ಕೊಡಗು

ಮೇ ತಾರೀಕು ೩೧ ನೇ ಶುಕ್ರವಾರ ೧೯೪೦.

ಈಗಿನ ಪರಿಸ್ಥಿತಿ.

ಯುರೋಪಿನಲ್ಲಿ ಯುದ್ಧವು ದಿನೇ ದಿನೇ ಹೆಚ್ಚು ಹೆಚ್ಚು ಜೋರಿನಿಂದ ನಡೆಯುತ್ತಿದೆ. ಹದಿನೆಂಟು ದಿನಗಳ ವರೆಗೆ ಬೆಲ್ಜಿಯನರು ಜರ್ಮನಿಯ ನಾಜಿಗಳೊಂದಿಗೆ ಬಲು ಸಾಹಸದಿಂದ ಕಾದಾಡಿ ಈಗ ಯುದ್ಧವನ್ನು ನಿಲ್ಲಿಸಿರುವರು. ಇದು ಅವರ ಮುಖ್ಯ ಸೇನಾಧಿಪತಿಯಾಗಿರುವ ಅವರ ಅರಸರ ಹುಕುಮಿನಿಂದಾಗಿದೆ. ಆದರೆ ಅಲ್ಲಿಯ ಮಂತ್ರಿ ಮಂಡಳಿಯವರು ಇದಕ್ಕೆ ಪೂರ್ತಿ ವಿರುದ್ಧವಿರುವರೆಂದೂ, ಬೆಲ್ಜಿಯನರು ಯುದ್ಧವನ್ನು ಮುಂದರಿಸುವರೆಂದು ಭರವಸೆಯನ್ನಿತ್ತಿರುವರು. ಹೇಗೂ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಧೈರ್ಯಗುಂದದೆ ಫ್ರಾನ್ಸಿನಲ್ಲಿ ಜರ್ಮನರೊಂದಿಗೆ ಕಾದಾಡುತ್ತಿರುವರು.' ಫ್ರಾನ್ಸಿನಲ್ಲಿ ಕೆಲವು ಬಂದರು ಪಟ್ಟಣಗಳು ಜರ್ಮನರ ಸ್ವಾಧೀನವಾಗಿದ್ದರೂ ಮಿತ್ರ ಮಂಡಳಿಯವರು ನಾಜಿ ಸೈನ್ಯಗಳ ಮುಂಮುನ್ನರಿಕೆಯನ್ನು ಅತಿ ಸಾಹಸದಿಂದ ತಡೆಗಟ್ಟುತ್ತಿರುವರು. ಆಹಾರ ಮತ್ತು ಯುದ್ಧ ಸಾಮಗ್ರಿಗಳು ಯಥೇಚ್ಛವಾಗಿರುವ ಮಿತ್ರ ಮಂಡಳಿಯವರಿಗೆ ರಣರಂಗದಲ್ಲಿ ತತ್ಕಾಲ ಸ್ವಲ್ಪ ಕಷ್ಟ ತೋರಿಬಂದರೂ ಕಡೆಗೆ ಅವರಿಗೆ ಜಯವಾದೀತೆಂದು ಮಿಲಿಟರಿ ತಜ್ಞರೂ, ರಾಜಕೀಯ ಪಟುಗಳೂ ಒತ್ತಿ ಹೇಳುತ್ತಿರುವರು. ಈ ಕಾರಣ ಸೈನಿಕರಲ್ಲಿಯೂ, ಜನತೆಯಲ್ಲಿಯೂ ನಿರಾಶೆಯ ಚಿಹ್ನೆಗಳು ಹುಟ್ಟದೆ ಮನಸ್ಸ್ಥಿರತೆಯೂ, ಶಾಂತಿಯೂ ಕಂಡುಬರುವದು ಶುಭ ಚಿಹ್ನೆಯಾಗಿದೆ.

ಹಿಂದೂದೇಶದ ಪರಿಸ್ಥಿತಿಯನ್ನು ಸ್ವಲ್ಪ ಅವಲೋಕಿಸುವದು ಅಗತ್ಯವಾಗಿದೆ. ಈ ಮೊದಲು ಭಾರತ ಸೆಕ್ರೆಟರಿಗಳಾಗಿದ್ದ ಲಾರ್ಡ್ ಜೆಟ್ಲೆಂಡ್‌ರವರು ಆ ಹುದ್ದೆಯಿಂದ ನಿವೃತ್ತರಾಗಿ ಅವರ ಬದಲು ಮಿ. ಎಮರಿಯವರು ನೇಮಿಸಲ್ಪಟ್ಟಿರುವರು. ಇವರು ಹಿಂದೂದೇಶದ ರಾಜಕೀಯ ಕೋರಿಕೆಗೆ ಸಹಾನುಭೂತಿ ತೋರಿಸಬೇಕೆಂಬ ಪ್ರಯತ್ನದಲ್ಲಿ ಈ ಮೊದಲಿನ ಅಧಿಕಾರಸ್ಥರು ಹೇಳಿದ ಮಾತುಗಳನ್ನೇ ಪುನಹ ಅಂದಿರುವರು. ಪ್ರಧಾನ ಮಂತ್ರಿಯಾದ ವಿನ್‌ಸ್ಟನ್ ಚರ್ಚಿಲ್ಲರಿಗಾದರೂ ಯುದ್ಧದ ಗೊಂದಲದಿಂದ ಹಿಂದೀಯರ ವಿಚಾರಕ್ಕೆ ಗಮನ ಕೊಡಲು ಸಮಯವಿಲ್ಲದಾಗಿದೆ. ಹೇಗೂ ಬ್ರಿಟನಿನವರು ಈಗಿನ ಯುದ್ಧಕ್ಕೆ ಹಿಂದೂ ದೇಶೀಯರ ಸಂಪೂರ್ಣ ಸಹಾಯ ಸಹಾನುಭೂತಿಗಳನ್ನು ನಿರೀಕ್ಷಿಸುತ್ತಿರುವರು. ಯುದ್ಧದ ಗುರಿಯಲ್ಲಿ ಹಿಂದೂಸ್ಥಾನದ ಸ್ವಾತಂತ್ರ್ಯವು ಸೇರಿಸಲ್ಪಡದಿದ್ದರೆ ಹಿಂದೂಸ್ಥಾನದ ಮನಪೂರ್ತಿಯಾದ ಸಹಾನುಭೂತಿಯು ಮಿತ್ರಮಂಡಳಿಯವರಿಗೆ ದೊರೆಯಲಾರದೆಂದು ಇಂಡಿಯಾದವರಾದರೂ ಈ ಮೊದಲು ಎಷ್ಟೋ ಬಾರಿ ಸಾರಿರುವರು. ಆದರೂ ಕೂಡ ಬ್ರಿಟಿಷ್ ಅಧಿಕಾರಿಗಳು ಈ ಕೋರಿಕೆಗೆ ಏನೊಂದೂ ಗಮನ ಕೊಡದಿರುವದು ವ್ಯಸನಕರ. ಸ್ಥಿತಿಯು ಹೀಗಿದ್ದರೂ ಕೂಡ ಮಹಾತ್ಮ ಗಾಂಧಿಯವರು ಬಿಕ್ಕಟ್ಟಿನ ಈ ಪರಿಸ್ಥಿತಿಯಲ್ಲಿ ಬ್ರಿಟಿಷರಿಗೆ ತೊಂದರೆ ಕೊಡಲಿಚ್ಛಿಸುವದಿಲ್ಲ. ಒಂದು ಕಡೆ ಉತ್ಸಾಹಭರಿತರೂ, ಸ್ವಾತಂತ್ರ್ಯಪ್ರಿಯರೂ ಆದ ಯುವಕರು ಕೂಡಲೆ ಸತ್ಯಾಗ್ರಹ ಚಳವಳವನ್ನು ಹೂಡಬೇಕೆಂತಲೂ ಅಲ್ಲಸಲ್ಲದ ಕಾರಣಗಳನ್ನು ಹೂಡಿ ಮಹಾತ್ಮರು ಇದನ್ನು ಮುಂದಕ್ಕೆ ತಳ್ಳುತ್ತಿರುವದು ನ್ಯಾಯವಲ್ಲವೆಂತಲೂ ಟೀಕಿಸುತ್ತಿರುವರು. ಬ್ರಿಟಿಷರು ಯುದ್ಧದ ಮಡುವಿನಲ್ಲಿ ಸಿಕ್ಕಿ ತಮ್ಮ ಸರ್ವ ಶಕ್ತಿಯನ್ನೂ ಅದಕ್ಕಾಗಿ ವಿನಿಯೋಗಿಸುತ್ತಿರುವಂಥಾ ಈ ಕಷ್ಟಕಾಲದಲ್ಲಿ ಅವರಿಗೆ ತೊಂದರೆಯನ್ನು ಕೊಡುವದು ಯೋಗ್ಯವಲ್ಲವೆಂದೂ ಹಾಗೆಯೇ ಸತ್ಯಾಗ್ರಹ ಚಳವಳವನ್ನು ಈಗ ಹೂಡಿದ್ದಾದರೆ ಅದು ಅಹಿಂಸಾ ತತ್ವಕ್ಕೆ ವಿರುದ್ಧವಾಗುವದೆಂದೂ ಇನ್ನೊಂದು ಕಡೆ ಬ್ರಿಟಿಷರ ಯುದ್ಧ ಉದ್ದೇಶದಲ್ಲಿ ಸಹಾನುಭೂತಿಇರುವವರು ಮಹಾತ್ಮರಿಗೆ ಬರೆಯುತ್ತಿರುವರು. ವಿಶಾಲ ಹೃದಯರಾದ ಮಹಾತ್ಮರು ಈ ಕಷ್ಟದ ಪರಿಸ್ಥಿತಿಯಲ್ಲಿ ಬ್ರಿಟಿಷರ ಯುದ್ಧ ಸಾಧನೆಗೆ ತಾನು ಯಾವ ರೀತಿಯಲ್ಲೂ ಅಡ್ಡಿ ಮಾಡಲಿಚ್ಛಿಸುವದಿಲ್ಲವೆಂದು ಸ್ಪಷ್ಟವಾಗಿ ಹೇಳಿರುವರು. ಆದರೆ ಭಾರತೀಯರು ತಮ್ಮ ಸ್ವಾತಂತ್ರ್ಯ ಹೋರಾಟವನ್ನು ನಿಲ್ಲಿಸಬೇಕೆಂದು ಅವರು ಹೇಳುವದಿಲ್ಲ. ಯುರೋಪಿನ ಯುದ್ಧದ ಪರಿಣಾಮವು ಹೇಗೇ ಆಗಲಿ, ಭಾರತಭೂಮಿಯು ತನ್ನ ಸ್ವಾತಂತ್ರ್ಯವನ್ನು ಪಡೆಯಲೇ ಬೇಕಾಗಿದೆ. ಆದ ಕಾರಣ ಸ್ವಾತಂತ್ರ್ಯ ಹೋರಾಟದ ಒಗ್ಗೆ ತಯಾರಿಯು ನಡೆಯಲೇ ಬೇಕಾಗಿದೆ. ಈ ದೃಷ್ಟಿಯಿಂದ ಪ್ರತಿಜ್ಞಾಪತ್ರಿಕೆಗೆ ಸಹಿ ಮಾಡುವ ಸತ್ಯಾಗ್ರಹಿಗಳನ್ನು ಜಮಾಯಿಸಿ ಅವರಿಗೆ ಶಿಬಿರಗಳಲ್ಲಿ ಅಹಿಂಸಾತತ್ವಾಚರಣೆ, ಖಾದಿ ಪ್ರಚಾರ, ಕೈನೂಲು ಮಾಡುವದು, ಅಸ್ಪೃಶ್ಯತಾ ನಿವಾರಣೆ, ನಿಶಾನಿಷೇಧ ಮತ್ತು ಜಾತೀಯ ಐಕ್ಯತೆ ಮುಂತಾದ ವಿಷಯಗಳಲ್ಲಿ ತರಬೇತು ಕೊಡುವ ಕಾರ್ಯವು ಎಡೆಬಿಡದೆ ನಡೆಯಬೇಕು. ಅಹಿಂಸಾತತ್ವವನ್ನು ಸಂಪೂರ್ಣ ನಂಬಿ ಮೇಲಿನ ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮವನ್ನು ನಿಷ್ಠೆಯಿಂದ ಮಾಡುತ್ತ ಬಂದರೆ ಅದು ಬ್ರಿಟಿಷರ ಯುದ್ಧ ನೀತಿಗೆ ಯಾವ ರೀತಿಯಲ್ಲೂ ಅಡ್ಡಿ ಬರುವಂತಿಲ್ಲ. ಆದರೆ ಇದರಿಂದ ಸ್ವಾತಂತ್ರ್ಯ ಸ್ಥಾಪನೆಯು ಖಂಡಿತವಾಗುವದು ಎಂದು ಮಹಾತ್ಮರ ಅಭಿಪ್ರಾಯವಾಗಿದೆ. ಮಹಾತ್ಮ ಗಾಂಧಿಯವರನ್ನು ಕಾಂಗ್ರೆಸಿನವರು ಹಾಗೂ ಭಾರತೀಯರು ತಮ್ಮ ಮುಂದಾಳಾಗಿ ಒಪ್ಪಿಕೊಂಡಿರುವರು. ಅಂದ ಮೇಲೆ ಅವರ ಸೂಚನೆಗಳನ್ನನುಸರಿಸಿ ಅವರು ಹೇಳುವ ರೀತಿ ತರಬೇತು ಹೊಂದಿ ಮುಂದಿನ ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧರಾಗಬೇಕಾದ್ದು ಪ್ರತಿಯೊಬ್ಬ ಹಿಂದೀಯನ ಕರ್ತವ್ಯವಾಗಿದೆ.

ಬೆಲ್ಜಿಯನ್ ಪ್ರಧಾನ ಮಂತ್ರಿಗಳ ಹೇಳಿಕೆ.

ರಾಜರ ವರ್ತನೆ ರಾಷ್ಟ್ರಘಾತಕವಾದ್ದು.

ಬೆಲ್ಜಿಯಮಿನ ಪ್ರಧಾನ ಮಂತ್ರಿಗಳಾದ ಮಿ. ಯಂ ಪೀರ್‌ಲಟ್‌ರವರು ರಾಜರು ತಮ್ಮ ಸೈನ್ಯಕ್ಕೆ ಯುದ್ಧ ನಿಲ್ಲಿಸುವಂತೆ ಆಜ್ಞಾಪಿಸಿದ್ದರ ವಿಚಾರ ಟೀಕಿಸುತ್ತಾ ಈ ರೀತಿ ಅಂದಿರುವರು. 'ಮಿತ್ರರಾಷ್ಟ್ರಗಳೊಡನೆ ಭುಜಕ್ಕೆ ಭುಜಕೊಟ್ಟು ನಿಂತು ತಮ್ಮ ಆರ್ಜಿಯ ಕೀರ್ತಿಪ್ರತಾಪಗಳಿಗೆ ತಕ್ಕಂತೆ ಯುದ್ಧ ಮಾಡುತ್ತಿದ್ದ ಬೆಲ್ಜಿಯನ್ ವೀರಯೋಧರು ರಾಜರಾದ ಲಿಯೊಪಾಲ್ಡರ ರಾಷ್ಟ್ರವಿಘಾತುಕ ಹೇಳಿಕೆಯಿಂದ ಶಸ್ತ್ರ ಕೆಳಗಿರಿಸಿರುವರು. ದೇಶದ ಸ್ವಾತಂತ್ರ್ಯಕ್ಕಾಗಿ ಜೀವವನ್ನು ತೃಣಪ್ರಾಯವಾಗಿ ಎಣಿಸಿದ ಬೆಲ್ಜಿಯನರು ಈ ರೀತಿ ವರ್ತಿಸಬೇಕಾಗಿ ಬಂದದ್ದು ವ್ಯಸನಕರ. ಆದರೆ ರಾಜರ ಹೇಳಿಕೆಯು ನೀತಾ ನ್ಯಾಯಬದ್ಧವಲ್ಲದಾಗಿದೆ ಮಾತ್ರವಲ್ಲ; ಏಕಮಾತ್ರ ವ್ಯಕ್ತಿಯಿಂದ ತೀರ್ಮಾನಿಸಲ್ಪಟ್ಟಿದೆ. ಪ್ರಜಾಪ್ರಭುತ್ವ ರಾಷ್ಟ್ರವಾದ ಬೆಲ್ಜಿಯಮು ಇಂಥಾ ಒಂದು ತೀರ್ಮಾನಕ್ಕೆ ಬದ್ಧವಾಗದು.

ವಿಶಿಷ್ಟ ಬೆಲ್ಜಿಯನ್ ಜನಾಂಗಕ್ಕೆ ಸಂಬಂಧಪಡುವಂಥಾ ಒಂದು ತೀರ್ಮಾನವನ್ನು ಒಬ್ಬ ವ್ಯಕ್ತಿಯು ಮಾಡುವದು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧ. ಈ ವರೆಗೆ ಯಾವ ಜಾಹೀರನಾಮೆಯೇ ಆಗಲೀ, ಪ್ರಕಟಣೆಯೇ ಆಗಲೀ ಮಂತ್ರಿಗಳ ಸಹಿ ಇಲ್ಲದೆ ಜಾರಿಗೆ ಬಂದದ್ದಿಲ್ಲ. ಮಂತ್ರಿಗಳು ಚುನಾವಣೆ ಮುಖಾಂತರ ಆರಿಸಲ್ಪಡುವ ಪ್ರಯುಕ್ತ ಅವರೇ ರಾಷ್ಟ್ರದ ಅಭಿಪ್ರಾಯವನ್ನು ಅರಿಯಬಲ್ಲರು. ಅಂಥಾದ್ದಿರುವಾಗ ರಾಜರ ಹೇಳಿಕೆಯು ಯಾವ ರೀತಿಯಿಂದಲೂ ನಮ್ಮ ಸೈನ್ಯಕ್ಕೆ ಅನ್ವಯಿಸದು. ಸ್ವಾತಂತ್ರ್ಯ ಪ್ರಿಯರಾದ ಬೆಲ್ಜಿಯನರು ಧೃತಿಗೆಡದೆ ಶತ್ರುವನ್ನೆದುರಿಸಬೇಕಿದೆ. ವೀರ ಯುವಕರ ಹೊಸ ದಂಡನ್ನು ಸೇರಿಸುವ ಕಾರ್ಯವು ಕೈಕೊಳ್ಳಲ್ಪಟ್ಟಿದೆ. ರಾಜರ ಈ ವರ್ತನೆಯು ಕೇವಲ ರಾಷ್ಟ್ರವಿಘಾತುಕವೇ ಅಲ್ಲ; ನಮ್ಮ ಕರೆಯಂತೆ ಸಹಾಯಕ್ಕೆ ಓಡಿಬಂದ ಮಿತ್ರರಾಷ್ಟ್ರಗಳಿಗೆ ಮೋಸಮಾಡುವಂಥಾದ್ದೂ ಆಗಿದೆ. ಆದ್ದರಿಂದ ಮಂತ್ರಿಗಳಿಂದ ಕೂಡಿದ ಇಂದಿನ ಜನತಾ ಸರಕಾರವು ಯುದ್ಧವನ್ನು ತೀವ್ರ ಮುಂದರಿಸುವದರಲ್ಲಿ ಸಂಶಯವಿಲ್ಲ. ಬೆಲ್ಜಿಯನರ ಚರಿತ್ರೆಯಲ್ಲಿ ಈ ವರೆಗೆ ಈ ರೀತಿಯ ಸಂಭವಗಳುಂಟಾಗಿಲ್ಲ. ಅಂಥಾ ಪವಿತ್ರ ಆರ್ಜಿಯ ಕೀರ್ತಿಗೆ ಕಳಂಕವನ್ನು ತರದಂತೆ ಪ್ರತಿಯೊಬ್ಬನೂ ಹೋರಾಡುವದು ಕರ್ತವ್ಯ.'

ಮಿ. ಡಫ್‌ಕೂಪರ ಹೇಳಿಕೆ.

ಬ್ರಿಟಿಷ್ ಪ್ರಚಾರ ಮಂತ್ರಿಯಾದ ಮಿ ಡಫ್‌ಕೂಪರವರು ಈ ರೀತಿ ಹೇಳಿರುವರು.—'ತಾ. 28ರ ಬೆಳಿಗ್ಗೆ ಬೆಲ್ಜಿಯಂ ಶತ್ರುಗಳ ವಶವಾಯಿತು. ಅದರ ವಿಚಾರ ನಮ್ಮ ವಿಮರ್ಶೆ ಮಾಡಲು ಇದು ಸಮಯವಲ್ಲ. ಯುದ್ಧ ಪ್ರಾರಂಭದಿಂದಲೂ ಬೆಲ್ಜಿಯನ್ ಸೈನ್ಯವು ನಮ್ಮೊಡನೆ ಸಹಕರಿಸಿ ಧೈರ್ಯದಿಂದ ಯುದ್ಧ ಮಾಡುತ್ತಿದೆ. ಯುದ್ಧದ ಪರಿಸ್ಥಿತಿಯು ಇಂದು ವಿಷಮಾವಸ್ಥೆಗೆ ತಲಪಿದೆ. ತತ್ಕಾಲಿಕ ಇಂದಿನ ಯುದ್ಧದ ಪರಿಣಾಮವು ಏನೇ ಆಗಲಿ ಕ್ರಮೇಣ ನಾವು ವಿಜಯಶ್ರೀಯನ್ನು ವರಿಸದಿರೆವೆಂಬ ನಂಬಿಕೆ ನಮಗೆ ಪೂರ್ಣವಿದೆ. ಶತ್ರು ಸೈನ್ಯವು ನಮ್ಮ ಸೈನ್ಯವನ್ನು ಎರಡು ಭಾಗವಾಗಿ ವಿಂಗಡಿಸಿ ಸಮುದ್ರದ ವರೆಗೆ ಮುಂದರಿದಿರುವದು ನಿಜ. ಆದರೆ ಮಿತ್ರ ಸೈನ್ಯಗಳು ಪರಾಜಯವನ್ನು ಹೊಂದಲಿಲ್ಲ. ಶತ್ರುವನ್ನು ನಾವು ಎದುರಿಸಿದಾಗಲೆಲ್ಲಾ ನಮ್ಮ ಉಚ್ಚ ಯುದ್ಧ ವಿದ್ಯೆಯನ್ನು ಪ್ರದರ್ಶಿಸಿ ಅವರನ್ನು ಹಿಮ್ಮೆಟ್ಟಿಸಿರುವೆವು. ನಾವು ಕೆಲವು ಭಾಗಗಳಿಂದ ಹಿಂದೆಗೆದಿರುವದು ನಿಜ. ಆದರೆ ಅದು ಪರಾಜಯದಿಂದಾಗಿ ಅಲ್ಲ. ಯೋಗ್ಯ ಸ್ಥಳದಲ್ಲಿ ನಿಂತು ಶತ್ರುವನ್ನು ಎದುರಿಸುವ ಒಗ್ಗೆ ನಾವು ಹಿಂದೆಗೆದಿರುವೆವು. ನಮ್ಮ ಪ್ರತಿಯೊಬ್ಬ ಸೈನಿಕನೂ, ಅಧಿಕಾರಿಯೂ ಶತ್ರುವನ್ನು ಎದುರಿಸಲು ಕುದಿದ ರಕ್ತದಿಂದ ಕೂಡಿರುವನು. ಅಪಾಯವು ಹೆಚ್ಚಾದಂತೆ ಧೈರ್ಯವು ಇಮ್ಮಡಿಯಾಗುವುದು. ಸ್ವಾತಂತ್ರ್ಯ ಧ್ಯೇಯವು ಖಂಡಿತಾ ಜಯವನ್ನು ಪಡೆಯುವದು. ನಮ್ಮ ಕಡೆಯವರು ವಿಜಯಶಾಲಿಗಳಾಗುವೆಂಬುದರಲ್ಲಿ ಸಂಶಯವಿಲ್ಲ.'

ಖಾದಿ ಸಂತೆ.

ಅಖಿಲ ಭಾರತ ಚರಖಾ ಸಂಘದ ಬೆಂಗಳೂರು ಶಾಖೆಯ ಖಾದಿ ಮಾರಾಟದವರು ಬರುವ ಜೂನ್ ತಾ. ೮ರ ವರೆಗೆ ಮಡಿಕೇರಿಯಲ್ಲಿದ್ದು ಬೆಂಗಳೂರಿಗೆ ಹೊರಟು ಹೋಗುವರು. ಆದ್ದರಿಂದ ದೇಶಾಭಿಮಾನಿಗಳು ತಮಗೆ ಬೇಕಾದ ಖಾದಿಯನ್ನು ಕೊಂಡು ಕೊಂಡು ಸ್ವಾತಂತ್ರ್ಯ ಹೋರಾಟಕ್ಕೆ ಸಹಾಯ ಮಾಡಬೇಕಾಗಿ ಕೋರಲಾಗಿದೆ. ಖಾದಿ ಹುಂಡಿಯನ್ನು ಪಡಕೊಂಡವರೆಲ್ಲ ಒಂದು ವಾರದೊಳಗೆ ಖಾದಿಯನ್ನು ಕೊಂಡುಕೊಳ್ಳಬೇಕಾಗಿಯೂ ನಂತರ ಅವರಿಗೆ ಹಣ ವಾಪಸು ದೊರೆಯಲಾರದಾಗಿಯೂ ಈ ಮೂಲಕ ತಿಳಿಸಲಾಗಿದೆ.

ಮಡಿಕೇರಿ, 31-5-40. } ಬಿ. ಯಂ. ಕಾರ್ಯಪ್ಪ, ಕೊ. ಜಿ. ಸ. ಕಮಿಟಿ.

ವರ್ತಮಾನ ಸಂಗ್ರಹ.

ಒಳದೇಶ.

ಮದ್ರಾಸು ಯೂನಿವರ್ಸಿಟಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಶ್ರೀ ಮುಂಡೀಪಂಡ ಅಪ್ಪಯ್ಯನವರು ಬಿ. ಎಸ್ ಸಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಕಳೆದ ಬಿ. ಎ. ಪರೀಕ್ಷೆಗೆ ಕಕ್ಕಬೆ ಶಾಲೆಯಲ್ಲಿ ಉಪಾಧ್ಯಾಯರಾಗಿರುವ ಶ್ರೀ. ಮೊಣ್ಣಂಡ ಜಿ. ಕಾರ್ಯಪ್ಪನವರು ಸ್ವಂತವಾಗಿ ಕುಳಿತು ಒಂದು ಮತ್ತು ಎರಡನೇ ಭಾಗಗಳಲ್ಲಿ ತೇರ್ಗಡೆ ಹೊಂದಿರುವರಾಗಿ ತಿಳಿಯುತ್ತೇವೆ.

ಮಡಿಕೇರಿ.

ಯುದ್ಧದಲ್ಲಿ ಬ್ರಿಟಿಷ್ ಸಾರ್ವಭೌಮರಿಗೆ ಜಯವನ್ನು ಕೋರಿ ತಾ. 30 ರಲ್ಲಿ ಓಂಕಾರ ದೇವಸ್ಥಾನದಲ್ಲಿ ಪೂಜ ಪುನಸ್ಕಾರಗಳು ನಡೆದವು.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾ. 13-6-40ರಲ್ಲಿ ನಡೆಯುವದೆಂದೂ, ಸುಪರ್‌ವಿಜನ್ ಬೋರ್ಡಿನ ಮೀಟಿಂಗು 4-6-40 ರಲ್ಲಿ ನಡೆಯುವದೆಂದೂ ತಿಳಿಯುತ್ತೇವೆ.

ತಾರೀಕು 27 ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ನಡೆದ ಕೊಡಗು ಗ್ರಾಮಾಭಿವೃದ್ಧಿ ಫಂಡು ಕಮಿಟಿಯ ಮೀಟಿಂಗಿನಲ್ಲಿ ಸಮಿತಿಯ ಅಧ್ಯಕ್ಷರಾದ ಕಮಿಷನರು ಗೈರ್ಹಾಜರಾಗಿದ್ದ ಕಾರಣ ಡಿ. ಬೊ. ಪ್ರಸಿಡೆಂಟರಾದ ಶ್ರೀ ಸಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಸದರಿ ಮೀಟಿಂಗು ನಡೆಸಲ್ಪಟ್ಟಿತೆಂದು ತಿಳಿಯಬರುತ್ತದೆ.

ಡಾ. ನಾಗಣ್ಣಗೌಡರವರು ತಾ. 24 ರಲ್ಲಿ ಮಡಿಕೇರಿಗೆ ಬಂದು, ಮರುದಿನ ವೀರಾಜಪೇಟೆಯ ಸತ್ಯಾಗ್ರಹ ಶಿಬಿರವನ್ನು ಸಂದರ್ಶಿಸಿ ಮಾರನೇದಿನ ಗೋಣಿಕೊಪ್ಪಲಿನಲ್ಲಿ ಸತ್ಯಾಗ್ರಹಿಗಳ ಮೆರವಣಿಗೆ ನಡೆಸಿದ ನಂತರ ಶ್ರೀ ಕೆ. ಸಿ. ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸಿನ ಕಾರ್ಯಕ್ರಮವನ್ನು ಕುರಿತು ಭಾಷಣ ಮಾಡಿದರು. ನಂತರ ಮೈಸೂರಿಗೆ ಹೊರಟು ಹೋದರು.

ನಿವೃತ್ತರಾಗುವ ಮೊದಲು ರಜೆಯಲ್ಲಿ ಹೋಗುವ ಡಿ. ಮೇಜಿಸ್ಟ್ರೇಟರೂ ಅ. ಕಮಿಷನರೂ ಆದ ರಾವ್ ಸಾಹೇಬ್ ಮುಂಡೇಪಂಡ ಮಂದಣ್ಣನವರಿಗೆ ಕೊಡಗಿನ ಹೆಚ್ಚಾಗಿ ಮಡಿಕೇರಿಯ ಕೆಲವು ಉದ್ಯೋಗಸ್ಥರೂ ಮತ್ತು ಉದ್ಯೋಗಸ್ಥರಲ್ಲದ ಮಹನೀಯರೂ ಸೇರಿ ತಾ. 30 ರಲ್ಲಿ ಕೋಟೆಯಲ್ಲಿ ಒಂದು ಚಹ ಪಾರ್ಟಿಯನ್ನಿತ್ತು ಬಿನ್ನವತ್ತಳೆಯನ್ನರ್ಪಿಸಿದರೆಂದು ತಿಳಿಯುತ್ತೇವೆ. ದೇಶಕ್ಕೆ ಮಾದರೀ ಪುರುಷರೆನ್ನುವ ಈ ಮಹನೀಯರ ಪಾರ್ಟಿಯಲ್ಲಿ ನಿಶಾಪದಾರ್ಥಕ್ಕೆ ಎಡೆಕೊಟ್ಟದ್ದು ತುಂಬಾ ವ್ಯಸನಕರ.

ಕಳೆದ ವಾರಗಳಲ್ಲಿ ಪ್ರಕಟಿಸಿದವರಲ್ಲದೆ ಕಾಂಗ್ರೆಸ್ ಸತ್ಯಾಗ್ರಹ ಪ್ರತಿಜ್ಞೆಗೆ ಶ್ರೀಗಳಾದ ಹೆಚ್. ಯಂ. ಪುಪ್ಪಣ್ಣ, ಕ. ವೀರಪ್ಪ, ಹೆಚ್. ಯಂ. ವೀರಪ್ಪ, ನಿಡ್ಯ ಕೃಷ್ಣಮೂರ್ತಿ, ಕೋರನ ದೇವಯ್ಯ, ಕೆದಂಬಾಡಿ ಗಣಪತಿ, ಹೊಟ್ಟೇಂಗಡ ಕುಶಾಲಪ್ಪ, ಸೋಮಯಂಡ ಅಚ್ಚಯ್ಯ, ಬೆಟ್ಟೋಳಂಡ ಮಾಚಯ್ಯ, ಇವರುಗಳು ಸಹಿಮಾಡಿರುವರು.

ವೀರಾಜಪೇಟೆ

ಮೂರನೇ ತಂಡದ ಸತ್ಯಾಗ್ರಹ ತರಬೇತು ಈ ತಾರೀಕು 26 ನೇ ಸೋಮವಾರ ಇಲ್ಲಿಯ ಶಿಬಿರದಲ್ಲಿ ಪ್ರಾರಂಭವಾಗಿದೆ. ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಮಾಡಿರುವ ಶನಿವಾರಸಂತೆಹೋಬಳಿಯ ಶ್ರೀ. ಎಚ್. ಎಂ. ಪುಟ್ಟಣ್ಣನವರು, ಕೆ. ವೀರಪ್ಪನವರು, ಎಚ್. ಯಂ ವೀರಪ್ಪನವರು, ನಿಡ್ತ ಕೃಷ್ಣಮೂರ್ತಿಯವರು ಮತ್ತು ಮಲ್ಲೇಂಗಡ ಚಂಗಪ್ಪನವರು, ಸಣ್ಣುವಂಡ ಬೋಪಯ್ಯನವರು, ಕೋರನ ದೇವಯ್ಯನವರು, ಕೆದಂಬಾಡಿ ಗಣಪತಿಯವರು, ಬಾಚಿಟ್ಟೀರ ಚಿಣ್ಣಪ್ಪನವರು ಮತ್ತು ಸಿ. ಐ. ಚಂಗಪ್ಪನವರುಗಳು ತರಬೇತು ಹೊಂದುತ್ತಿರುವರು. ನಾಲ್ಕನೆಯ ತಂಡದ ತರಬೇತು ಜೂನ್ 3 ನೇ ಸೋಮವಾರ ಪ್ರಾರಂಭವಾಗುವದು.

ಇಲ್ಲಿಯ ಸತ್ಯಾಗ್ರಹ ಶಿಬಿರದಲ್ಲಿ ಸತ್ಯಾಗ್ರಹಿಗಳ ತರಬೇತು ನಡೆಯುತ್ತಿರುವ ಕಾರಣ ಪ್ರತಿ ಬುಧವಾರ ಇಲ್ಲಿ ಸಾರ್ವಜನಿಕ ಸಭೆಗಳು ನಡೆಸಲ್ಪಡುತ್ತಿವೆ. ಅದೇ ಪ್ರಕಾರ ಈ ತಾರೀಕು 29 ರ ಮಧ್ಯಾಹ್ನ ಸತ್ಯಾಗ್ರಹಿಗಳು ಶಿಬಿರದಿಂದ ರಾಷ್ಟ್ರೀಯಧ್ವಜ ರಾಷ್ಟ್ರೀಯಗೀತೆಗಳಿಂದ ಕೂಡಿ ಮೆರವಣಿಗೆ ಹೊರಟು ಪೇಟೆಯ ಮುಖ್ಯ ಬೀದಿಗಳಲ್ಲಿ ಸುತ್ತಿ ರೀಡಿಂಗ್ ರೂಮಿನ ಎದುರಿನಲ್ಲಿ ಸಾರ್ವಜನಿಕ ಸಭೆಯು ನಡೆಸಲ್ಪಟ್ಟಿತ್ತು. ಶ್ರೀ ಜಪ್ಪಂಡ ದೊಡ್ಡಪ್ಪನವರು ಅಧ್ಯಕ್ಷರಾಗಿದ್ದರು. ಶ್ರೀ ಐ ಪಿ. ಕಾರ್ಯಪ್ಪನವರು ಈಗಿನ ರಾಜಕೀಯ ವಾತಾವರಣವನ್ನೂ, ಶ್ರೀ ಸಿ. ಐ. ಬೆಳ್ಯಪ್ಪನವರೂ ಅಸ್ಪೃಶ್ಯತಾ ನಿವಾರಣೆಯನ್ನೂ ಕುರಿತು ಭಾಷಣ ಮಾಡಿದರು.

ಕೊಡಗು ಜಿಲ್ಲಾ ಸತ್ಯಾಗ್ರಹ ಸಮಿತಿಯ ಸಭೆಯೊಂದು ತಾರೀಕು 29 ರಲ್ಲಿ ಇಲ್ಲಿಯ ಸತ್ಯಾಗ್ರಹ ಶಿಬಿರದಲ್ಲಿ ಶ್ರೀ ಕೆ. ಸಿ. ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸತ್ಯಾಗ್ರಹ ಪ್ರತಿಜ್ಞೆಗೆ ರುಜು ಮಾಡಿದವರೆಲ್ಲರೂ ಶಿಬಿರದಲ್ಲಿ ಒಂದು ವಾರದ ತರಬೇತು ಹೊಂದಬೇಕೆಂತಲೂ, ಹಾಗೆ ತರಬೇತು ಹೊಂದದವರ ಪ್ರತಿಜ್ಞಾ ಪತ್ರಗಳನ್ನು ವಜಾಮಾಡಲಾಗುವದೆಂದಲೂ ತೀರ್ಮಾನಿಸಲಾಗಿದೆ. ಸತ್ಯಾಗ್ರಹ ಸಮಿತಿಯ ಇನ್ನೊಂದು ಮೀಟಿಂಗು ತಾ. 5-6-40 ರಲ್ಲಿ ನಡೆಯುವದು.

ಚೆಂಬೆಬೆಳಿಯೂರು ಗ್ರಾಮದ ಅಜ್ಜಿಕಂಡ ಒಬ್ಬರ ಮದುವೆಯು ಅಮ್ಮತ್ತಿಯ ಕುಟ್ಟಂಡ ಮನೆಗೆ ಹೋಗಿ ಹೆಣ್ಣನ್ನು ಕರಕೊಂಡು ವಾಪಸು ಬರುವಾಗ ಹೆಗ್ಗಡೆ ಮುತ್ತಡೆಯ ದಾರಿಯಲ್ಲಿ 'ಬಾಳೆ ಬಿರುದು' ಮಡಗಿದನ್ನು ಸ್ವೀಕರಿಸಲಿಲ್ಲವೆಂಬ ಕಾರಣದಿಂದ ಎರಡು ಕಡೆಯವರಿಗೂ ಜಗಳವಾಗಿ ಸದರಿ ಮುತ್ತಡೆಗೆ ಪ್ರಾಣಾಂತ ಖಂ ಆಗಿ ಸದರಿಯವರು ಮೃತರಾದರೆಂದೂ ಪೊಲೀಸು ಕೇಸು ನಡೆಯುತ್ತಿದೆಯೆಂದೂ, ಗುಮಾನಿ ಮೇರೆ 5-6 ಜನರನ್ನು ದಸ್ತಗಿರಿ ಮಾಡಿರುವರಾಗಿಯೂ ಸುದ್ದಿ.

ನಿಧನ ವಾರ್ತೆ.

'ಕೊಡಗು ಚಂದ್ರಿಕೆ' ಎಂಬ ಮಾಸಪತ್ರಿಕೆಯ ಸಂಪಾದಕರಾಗಿದ್ದ ಬಳಿಗೇರಿ ಗ್ರಾಮದ ಶ್ರೀ ಬಿ ಆರ್. ಸುಬ್ರಾಯನವರು ಮಡಿಕೇರಿಯಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಹಿಂದೂ ದೇಶ.

ಮದ್ರಾಸ್ ಹೈಕೋರ್ಟಿನಲ್ಲಿ ಕೆಲಸ ಹೇರುತ್ತಿರುವುದರಿಂದ ಜಡ್ಜರ ಸಂಖ್ಯೆಯನ್ನು 16 ರ ಅತ್ಯಧಿಕ ಮಿತಿಗೇ ಹೆಚ್ಚಿಸುವುದು ಸಂಭವವೆಂದು ತಿಳಿದು ಬರುತ್ತಿದೆ.

ಬೊಂಬಾಯಿಯ ಗವರ್ನರರು ಆ ಪ್ರಾಂತದ ಶಾಸನ ಸಭೆಯ ಅಧಿಕಾರಿಗಳು ಹಾಗೂ ಸದಸ್ಯರ ಸಂಬಳ ಭತ್ತೆಯನ್ನು ಇದೇ ಬರುವ ಜುಲೈ 1ರಿಂದ ನಿಲ್ಲಿಸಬೇಕೆಂದಾಲೋಚಿಸಿ ಆ ಬಗೆಗೊಂದು ಮಸೂದೆ ತರಲಿರುವರು.

ಮಹಾತ್ಮರು ಮಿ. ಅಮ್ರಿಯವರ ಈಚಿನ ಹೇಳಿಕೆಯ ಕುರಿತಾಗಿ ಅಭಿಪ್ರಾಯ ಕೊಡುತ್ತ, 'ಈಗಿನ ಭಾರತದ ಕಗ್ಗಂಟು ಬಿಡಿಸುವಂತೆ ನನ್ನ ಕೈಲಾದ ಯಾವತ್ತು ಯತ್ನಗಳನ್ನೂ ನಡೆಸುವೆನು' ಎಂದಿರುವರು. ಶ್ರೀ. ರಾಜಗೋಪಾಲಾಚಾರಿಯವರು 'ಸಂಘಟನೆಗಳನ್ನು ಕಾದು ನೋಡಿ ಆ ಮೇಲೆ ಮಾತಾಡುವ' ಎಂದಿರುವರು.

'ಅನ್ಯರಾಷ್ಟ್ರದ ಸಹಾಯದಲ್ಲೇ ಇಂಡಿಯದ ಮೇಲೆ ಬೀಳಬಹುದೆಂಬ ಬೆದರಿಕೆಯನ್ನು ಪಟ್ಟುಕೊಳ್ಳಬೇಕಿಲ್ಲವಾದರೂ ಕೇಂದ್ರ ಅಧಿಕಾರವು ದುರ್ಬಲಗೊಂಡರೆ ಒಳಗಿನ ಗೊಂದಲ ಹೆಚ್ಚಬಹುದೆಂದು' ಪಂಡಿತ ನೆಹರುಗಳು ಮುದ್ರಾಲಯದ ಪ್ರತಿನಿಧಿಗಳಿಗೆ ಲಾಹೋರಲ್ಲಿ ತಿಳಿಸಿರುವರಲ್ಲದ, ಸತ್ಯಾಗ್ರಹದ ಆಚರಣೆಯ ಸಾಧ್ಯಾಸಾಧ್ಯತೆಯನ್ನು ವಿವರಿಸಿರುವರು.

ನಮ್ಮ ಸ್ಟೇಟ್ ಸೆಕ್ರೆಟರಿಗಳ ಪಾರ್ಲಿಮೆಂಟಿನ ಇದೇ ಹೇಳಿಕೆಯ ಕುರಿತಾಗಿ ಪಂಡಿತ ನೆಹರುಗಳು ತಮ್ಮ ಅಭಿಪ್ರಾಯ ಸೂಚಿಸುತ್ತ 'ಸೆಕ್ರೆಟರಿಗಳ ಧ್ವನಿಯೇ ನೋ ಸಮಜಾಯಿಸುವಂತಾಗಿದೆ; ಆದರೆ ಅವರಲ್ಲಿನ ವಿಷಯಗಳು ಇಂಡಿಯಕ್ಕಾಗಲೀ, ಯೂರೋಪಿಗಾಗಲೀ ಸಂಬಂಧವಿಲ್ಲ. ಸೆಕ್ರೆಟರಿಗಳು ಇಂಡಿಯಾ ಆಕ್ಟಿನ ಪುನರ್ವಿಮರ್ಶೆ ಅಥವಾ ಯುದ್ಧದ ಬಳಿಕ ಏನಾಗಬಹುದು ಎಂದು ಮುಂತಾಗಿ ಮಾಡಿದ ಫಲವಿಲ್ಲ. ಬ್ರಿಟನ್ ಇಂಡಿಯದ ಸಂಪೂರ್ಣ ಸ್ವಾತಂತ್ರ್ಯವನ್ನೊಪ್ಪಬೇಕು. ಭಾರತದ ಮುಂದಿನ ರಾಜ್ಯರಚನೆಯಲ್ಲಿ ಇಂಡಿಯದವರಿಗೆ ಅವರ ಇಷ್ಟದ ಮೇರೆಗೆ ವರ್ತಿಸುವ ಹಕ್ಕಿದೆ ಎಂಬುದನ್ನು ಅವರು ಅಂಗೀಕರಿಸಬೇಕು' ಎಂದಿರುವರು. ಶ್ರೀ. ಸತ್ಯಮೂರ್ತಿಗಳು 'ಮಿ. ಅಮ್ರಿ ಗಾಂಧಿಜಿಗಳ ಭೇಟಿಯಾಗಲಿ'ಎಂದು ಸೂಚಿಸಿದ್ದಾರೆ.

'ಮಸೀದಿಗಳ ಮುಂದೆ ಓಲಗ ತಾಳಮೇಳಗಳು ನಡೆಯದಂತೆ ಪ್ರತಿಬಂಧಿಸಲು ಖುರಾನಿನಲ್ಲಿ ಯಾವ ಆಧಾರವೂ ಇಲ್ಲ.' ಹೀಗೆಂದು ತಿರುವಾಂಕೂರು ಸಂಸ್ಥಾನದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ಖಾನ್ ಬಹದೂರ್ ಅಬ್ದುಲ್ ಕರೀಮ್‌ರವರು ಹೇಳಿರುತ್ತಾರೆ. ಅವರು ಮುಂದುವರಿದು ಮಸೀದಿಗಳಲ್ಲಿ ದೇವಾರಾಧನೆಗಳು ನಡೆಯುದಿದ್ದಾಗಲೂ ಸಹ ಅವರ ಮುಂದೆ ವಾದ್ಯಗಳನ್ನು ಬಾರಿಸಬಾರದೆಂದು ಕೆಲವರು ಅಪೇಕ್ಷಿಸುತ್ತಾರೆ. ಇದು ಮಿತಿಮೀರಿದವರ ವಾದ. ಇದಕ್ಕೆ ಹೆಚ್ಚು ಗಮನ ಕೊಡುವ ಆವಶ್ಯಕತೆಯಿಲ್ಲ. ಮಸೀದಿಯೊಳಗೆ ಭಕ್ತ ಸಮೂಹವು ದೇವರಾಧನೆ ನಡಿಸುತ್ತಿರುವಾಗಲೂ ಸಹ ಹೊರಗಡೆ ವಾದ್ಯಘೋಷವನ್ನಾಗಲಿ ಅಥವಾ ಮತ್ಯಾವ ಶಬ್ದವನ್ನಾಗಲಿ ಮಾಡಬಾರದೆಂದು ಮುಸ್ಲಿಮರು ಒತ್ತಾಯಪಡಿಸಬೇಕಾದುದೇನೂ ಅಗತ್ಯವಿಲ್ಲ ಏಕೆಂದರೆ ಏಕಾಗ್ರತೆಯಾದ ಧ್ಯಾನದ ಮುಖ್ಯ ತತ್ವ, ಹೊರಗಡೆ ಎಂಥಾ ಗಲಿಬಿಲಿ ನಡೆದಾಗ್ಯೂ ಅನ್ಯಮನಸ್ಕರಾಗದೆ ಧ್ಯಾನ ಮಾಡುವದೇ ಆಗಿದೆ. ಸತ್ಯವಾಗಿ ನೋಡಿದಲ್ಲಿ ಪರಮಾತ್ಮನು ಗಾನಲೋಲುಪ್ರಿಯನು. ಸಂಗೀತ ಸೇವೆಯೂ ಪರಮಾತ್ಮನಿಗೆ ಇಷ್ಟವಾದುದೇ. ಇದಕ್ಕೆ ನಿದರ್ಶನವನ್ನು ಅಜ್ಮೀರ್, ದೆಹಲಿ, ಮುಂತಾದೆಡೆಗಳಲ್ಲಿ ಪ್ರತಿ ಗುರುವಾರವೂ ನೋಡಬಹುದು. ಮಸೀದಿಗಳ ಮುಂದೆ ವಾದ್ಯಘೋಷಮಾಡುವುದೂ ಮತ್ತು ಗೋವಧೆಯೂ ಉತ್ತರ ಹಿಂದೂಸ್ಥಾನದಲ್ಲಿ ಹಿಂದೂ ಮಹಮ್ಮದೀಯರ ಲೋಪುವಾರು ಕಲಹಕ್ಕೆ ಕಾರಣವಾಗಿರುವದು ಅತ್ಯಂತ ವ್ಯಸನದುದು. ಈ ವಿಷಯಗಳನ್ನು ಸರಿಯಾದ ದೃಷ್ಟಿಯಿಂದ ವಿಮರ್ಶಿಸಿ ನೋಡಿದಲ್ಲಿ ವೈಮನಸಿಗೆ ಕಾರಣವೇ ಇರುವದಿಲ್ಲ.

WANTED

A Manager fo
HOTEL-DE-COORG.

For particulars
Apply—

The Proprietor,
HOTEL-DE-COORG.
Mercara.

ಸತ್ಯಾಗ್ರಹಕ್ಕೆ ಸಂಬಂಧಪಟ್ಟ ಕೆಲವು ಪ್ರಶ್ನೆಗಳು.

(ಮಹಾತ್ಮರನ್ನು ಕುರಿತು ಕೇಳಿದ ಕೆಲವು ಪ್ರಶ್ನೆಗಳಿಗೆ ಅವರು ಈ ರೀತಿಯ ಉತ್ತರಗಳನ್ನಿತ್ತಿರುವರು.)

ನೂಲುವದು.

ಪ್ರಶ್ನೆ–ಸತ್ಯಾಗ್ರಹಿಗೆ ಹಾಕಿದ ಶರತುಗಳಲ್ಲಿರುವ 'ನೂಲುವದು' ಎಂಬುದರ ವಿವರವೇನು? ನೂಲುವದೆಂದರೆ ಹೇಗೆ? ಅದರ ಅವಧಿಯೆಷ್ಟು?

ಉತ್ತರ–ನೂಲುವದೆಂದರೆ ದಿನವಹಿ ನೂಲುವದೆಂದರ್ಥ. ವಾರಕ್ಕೊಮ್ಮೆಯಾಗಲೀ, ಇಲ್ಲವೇ ಕೆಲವೊಂದು ದಿನವಾಗಲೀ ನೂಲುವದು ಸಾಲದು. ದಿನವಹಿ ಪ್ರತಿಯೊಬ್ಬನೂ ಕನಿಷ್ಠ ಪಕ್ಷ ಒಂದು ಗಂಟೆಯವರೆಗಾದರೂ ನೂಲಬೇಕು.

ಅಸ್ಪೃಶ್ಯತೆ.

ಪ್ರಶ್ನೆ–ವಾಲಂಟಿಯರರನ್ನು ತರಬೇತು ಮಾಡುತ್ತಿರುವ ಸತ್ಯಾಗ್ರಹ ತರಬೇತು ಶಿಬಿರಗಳು ಅಸ್ಪೃಶ್ಯತೆಯನ್ನು ದೂರವಿರಿಸಿದಂತೆ ಕಾಣುವದಿಲ್ಲ. ಅಸ್ಪೃಶ್ಯತಾ ಭಾವನೆಯನ್ನು ತೊಡೆದು ಹಾಕದಿರುವವರಿಗೆ ಶಿಬಿರದಲ್ಲಿ ಸ್ಥಳವಿರಬಾರದೆಂಬುದಕ್ಕೆ ನೀವು ಒಪ್ಪುವದಿಲ್ಲವೇ?

ಉತ್ತರ–ಯಾವನೇ ಆಗಲೀ ಅವನಲ್ಲಿ ಅಸ್ಪೃಶ್ಯತೆಯ ಭಾವನೆಯು ಒಂದಣುವಷ್ಟು ಇದ್ದರೂ ಸಹ ಆತನು ಸತ್ಯಾಗ್ರಹ ಸೇನೆಯಲ್ಲಿರಲು ಅನರ್ಹನು. ಅಸ್ಪೃಶ್ಯತೆಯೇ ಭಾರತೀಯರಾದ ನಮ್ಮ ಅವನತಿಗೆ ಮೂಲ ಕಾರಣವೆಂದೂ, ಅದನ್ನು ಕಿತ್ತೊಗೆಯದ ವಿನಹ ಭಾರತದ ಉನ್ನತಿಯು ಸಾಧಿಸಲ್ಪಡದೆಂದೂ ಕಂಠೋಕ್ತವಾಗಿ ಹೇಳುವೆನು.

ಲಾಯರುಗಳು ಸತ್ಯಾಗ್ರಹಿಗಳಾಗಬಹುದೇ?

ಪ್ರಶ್ನೆ–ಲಾಯರುಗಳ ವೃತ್ತಿಯು ಎಂಥಾ ದುರ್ನಡತೆಗಳಿಗೆ ಹೆದ್ದಾರಿಯೆಂಬುದು ನಿಮಗೆ ಗೊತ್ತಿರಲಿಕ್ಕೆ ಸಾಕು. ಅಂಥಾ ಲಾಯರುಗಳು ತಮ್ಮ ಕೆಲಸವನ್ನು ನಿರ್ವಹಿಸಿಕೊಂಡು ಸಕ್ರೀಯ ಸತ್ಯಾಗ್ರಹಿಗಳಾಗಲು ಸಾಧ್ಯವೇ?

ಉ–ಲಾಯರನ್ನೊಬ್ಬನಿಗೆ ಸಕ್ರೀಯ ಸತ್ಯಾಗ್ರಹಿಯಾಗಲು ಬಯಕೆಬರಬೇಕಾದರೆ ಹಾಗೂ ಸತ್ಯಾಗ್ರಹಿಯಾದರೆ ಅವನ ಕೆಲವು ದುರ್ಗುಣಗಳು ಮಾಯವಾಗಲೇಬೇಕು. ಇದರಿಂದ ಅವನಲ್ಲಿ ಒಂದು ವಿಧದ ಪರಿಶುದ್ಧತೆಯು ಉಪಸ್ಥಿತವಾಗಬೇಕು. ಕಾಂಗ್ರೆಸಿನಲ್ಲಿ ಪವಿತ್ರ ಖಾದಿ ಹೊದಿಕೆಯಲ್ಲಿ ದುರಾತ್ಮರು ಇರುವರೆಂಬುದು ನಿಜ. ಆದರೆ ಕಾಂಗ್ರೆಸಿನಂಥಾ ಮಹಾ ಸಂಸ್ಥೆಯಲ್ಲಿ ಅದು ಅನಿವಾರ್ಯ. ಆದರೆ ಒಬ್ಬನು ಇಂಥಾ ಕೆಲಸದಲ್ಲಿರುವದರಿಂದ ಸತ್ಯಾಗ್ರಹಿಯಾಗಲು ಅನರ್ಹನೆಂದು ಹೇಳಬರುವದಿಲ್ಲ.

ಕ್ಲಾಸು.

ಪ್ರಶ್ನೆ–ಸತ್ಯಾಗ್ರಹಿಯು ಸೆರೆಮನೆಗೆ ತಳ್ಳಲ್ಪಟ್ಟಾಗ 'ಎ' ಹಾಗೂ 'ಬಿ' ತರಗತಿಗಳ ಬಗ್ಗೆ ಚಳವಳ ಮಾಡುವದುಚಿತವೇ?

ಉತ್ತರ–ನನ್ನ ಅಭಿಪ್ರಾಯದಲ್ಲಿ ಕ್ಲಾಸಿಗಾಗಿ ಪ್ರಯತ್ನಪಡುವದು ಅಹಿತ. ವ್ಯಕ್ತಿಶಃ ನಾನು ಇಂಥಾ ತತ್ವಕ್ಕೆ ವಿರೋಧವಿರುವೆನು.

ಪ್ರಶ್ನೆ–ಅವಮಾನಕರವಾದ ತೊಂದರೆಗಳನ್ನು ಕೊಡುತ್ತಿರುವಂಥಾ ಸೆರೆಮನೆಗಳಲ್ಲೂ ಸಹ ಅದಕ್ಕೆ ಬಗ್ಗಿ ನಡೆಯಬೇಕೆ? ಅದನ್ನು ಪ್ರತಿಭಟಿಸುವ ಹಕ್ಕಿಲ್ಲವೇ?

ಉತ್ತರ–ಮಾನವನಿಗೆ ಸಲ್ಲತಕ್ಕದ್ದಲ್ಲದ ಉಪಚಾರಗಳನ್ನು ಕೊಡುವ ಸೆರೆಮನೆಯ ಕಾರ್ಯಭಾರವನ್ನು ನ್ಯಾಯಬದ್ಧ ರೀತಿಯಲ್ಲಿ ಸಿರೋಧಿಸಿ ಮಾನವ ಘನತೆಗೆ ತಕ್ಕಂತೆ ವರ್ತಿಸುವ ಹಕ್ಕು ಇದೆ.

ಈಗಿನ ತರತರಹದ ವಿದ್ಯಮಾನಗಳನ್ನು ತಿಳಿಯಬೇಕಾದರೆ ಪ್ರತಿ ವಾರದ 'ಕೊಡಗು' ಪತ್ರಿಕೆಯನ್ನು ತಪ್ಪದೆ ಓದಿ!

ORIENTAL
GOVERNMENT SECURITY, LIFE ASSURANCE COMPANY, LTD.

It is notified for the information of the public that the Inspectorate office of the Company at mercara will be transferred to mangalore with effect from 3rd June 1940 and in order to enable the Shifting of the office, it will be necessary to close the office at Mercara on 1. st June 1940. Arrangements have, however, been made with the Local branch of the canara banking corporation Ltd., to receive premiums from policy holders and Proposers.

L. F. C VAZ.
Inspector, Oriental Life, Office.
Mercara.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಈ ಕಂಪೆನಿಯ ಮಡಿಕೇರಿ ಇನ್ಸ್‌ಪೆಕ್ಟೊರೇಟ್ ಆಫೀಸನ್ನು ಜೂನ್ ತಾ. 3 ರಿಂದ ಮಂಗಳೂರಿಗೆ ವರ್ಗಾಯಿಸುವ ಪ್ರಯುಕ್ತ, ಆಫೀಸನ್ನು ಅಲ್ಲಿಗೆ ಸಾಗಿಸುವ ಕಾರಣದಿಂದ ಜೂನ್ 1 ನೇ ತಾರೀಕಿನ ದಿನ ಆಫೀಸನ್ನು ಮುಚ್ಚಲಾಗುತ್ತಿಯಾದ್ದರಿಂದ ಈ ವಿಚಾರ ಪಬ್ಲಿಕ್ ಮಹಾಜನರಿಗೆ ಈ ಮೂಲಕ ತಿಳಿಸಲಾಗಿದೆ. ಆದರೂ ಪಾಲಿಸಿದಾರರು ಹಾಗು ಪ್ರಪೋಸರುಗಳಿಂದ ಪ್ರೀಮಿಯಮ್ಮನ್ನು ಸ್ವೀಕರಿಸಲು ಸ್ಥಳೀಯ ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನಿನ ಶಾಖೆಯೊಡನೆ ತಕ್ಕ ವ್ಯವಸ್ಥೆ ಮಾಡಲಾಗಿದೆ.

ಎಲ್. ಎಫ್. ಸಿ. ವಾಸ್.
ಇನ್ಸ್‌ಪೆಕ್ಟರ್, ಓರಿಯಂಟಲ್ ಲೈಫ್ ಆಫೀಸ್, ಮಡಿಕೇರಿ.

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಬೊಂಬಾಯಿ.

1938ನೇ ಇನ್ಶ್ಯೂರೆನ್ಸ್ ಆಕ್ಟ್ 48(1) ಸೆಕ್ಷನ್ ಮೇರೆಗೆ ಮೂರು ಡೈರೆಕ್ಟರರನ್ನು ಚುನಾಯಿಸಲು ಕಂಪೆನಿಯ ಪಾಲಿಸಿ ಪಡೆದ ಪಾಲಿಸಿದಾರರ ಸಭೆಯು ಶುಕ್ರವಾರ, ತಾ. 26-8-1940, ಮಧ್ಯಾಹ್ನ 3 ಘಂಟೆಗೆ ಬೊಂಬಾಯಿ ಫ್ರೋರ್ಟ್‌ನಲ್ಲಿರುವ ಎಸಪ್ಲನೇಡ್ ರೋಡ್, ಸೆಂಟ್ರಲ್ ಬ್ಯಾಂಕ್ ಕಟ್ಟಡದಲ್ಲಿ ಡೀನ್ ಸಂದಿನ ಬಾಗಿಲು, ಮೂರನೇ ಮಹಡಿಯಲ್ಲಿರುವ ಕಂಪೆನಿಯ ಆಫೀಸಿನಲ್ಲಿ ಜರಗುವದಾಗಿ ಈ ಮೂಲಕ ನೋಟೀಸು ತಿಳಿಸಲಾಗಿದೆ.

1939ನೇ ಇನ್ಶ್ಯೂರೆನ್ಸ್ ರೂಲ್ಸಿನ 13ನೇ ರೂಲು ಪ್ರಕಾರ ಕಂಪೆನಿಯ ಡೈರೆಕ್ಟರರಾಗಲು ಯಾರು ಅರ್ಹರೆಂದರೆ:–

(a) ಅಪೈನಮೆಂಟ್ ಯಾ ಟ್ರಾನ್ಸಫರ ಮೂಲಕವಲ್ಲದೆ ಒಂದು ಅಥವಾ ಹೆಚ್ಚು ಜೀವ ವಿಮೆ ಪಾಲಿಸಿಗಳನ್ನು ಕಂಪೆನಿಯಿಂದ ಪಡೆದಿರಬೇಕಲ್ಲದೆ ಈ ಕೆಳಗೆ ನಮೂದಿಸಿದ ವಿಷಯಗಳನ್ನೂ ಪೂರೈಸಿರಬೇಕು.

(i) ಪಾಲಿಸಿಯು ಪೂರ್ಣ ಜೀವ ವಿಮೆಯಿಂದಾಗಲೀ, ಎಂಡೋಮೆಂಟ್ ಪಾಲಿಸಿ ಆಗಲಿ ಆಗಿರಬೇಕು; ಮತ್ತು ಪಾಲಿಸಿಯು ಯಾವ ತರಹದ ಸಾಲ ಇತ್ಯಾದಿಗಳಿಗೆ ಒಳಪಟ್ಟಿರಕೂಡದು.

(ii) ಚುನಾವಣೆಯ ತಾರೀಕಿಗೆ ಮುಂಚಿತವಾಗಿಯೇ ಬೋನಸ್ ಸಮೇತ ಪಾಲಿಸಿಯ ಮೊತ್ತ ರೂ. 2000ಕ್ಕೆ ಕಡಿಮೆಯಾಗಿರಕೂಡದು.

(iii) ಪ್ರತಿಯೊಂದು ಪಾಲಿಸಿಯು ಮೂರು ವರುಷಗಳಿಗಿಂತ ಕಡಿಮೆ ಇಲ್ಲದೆ ಜಾರಿಯಲ್ಲಿರತಕ್ಕದ್ದು.

(b) ಡೈರೆಕ್ಟರು (ಕಂಪೆನಿಯಿಂದ ಚುನಾಯಿಸಲ್ಪಟ್ಟದ್ದಲ್ಲವೆ) ಇತರ ಯಾವ ಇನ್ಶ್ಯೂರೆನ್ಸ್ ಕಂಪೆನಿಯ ಮೇನೇಜರ್, ಲೀಗಲ್ ಅಥವಾ ಟೆಕ್ನಿಕಲ್ ಎಡ್ವೈಜರ್, ಮೇನೇಜಿಂಗ್ ಏಜೆಂಟ್, ಇನ್ಶ್ಯೂರೆನ್ಸ್ ಏಜೆಂಟ್, ವಿಮೆದಾರರ ನೌಕರ ಅಥವಾ ಇನ್ಶ್ಯೂರೆನ್ಸ್ ಏಜೆಂಟರ ನೌಕರ ಆಗಿರಕೂಡದು.

ಡೈರೆಕ್ಟರಾಗಲು ಅರ್ಹತೆ ಮತ್ತು ಅಪೇಕ್ಷೆ ಉಳ್ಳವರು ಅರ್ಜಿ ಮಾಡಬಹುದು. ಇಂಥಾ ಅರ್ಜಿಗಳನ್ನು ರಿಜಿಸ್ಟರ್ ಟಪ್ಪಾಲು ದ್ವಾರ ಬೊಂಬಾಯಿ ಫ್ರೋರ್ಟ್ ಎಸಪ್ಲನೇಡ್ ರೋಡಿನಲ್ಲಿರುವ ಕಂಪೆನಿಯ ಹೆಡ್ಡಾಫೀಸಿಗೆ ತಾರೀಕು 18-6-1940 ಒಳಗೆ ತಲಪುವಂತೆ ರವಾನಿಸಬೇಕು. ಅರ್ಜಿಯು ಇಂಗ್ಲಿಷ್‌ನಲ್ಲಾಗಲಿ, ಅಥವಾ ಬೊಂಬಾಯಿ ಆಧಿಪತ್ಯದ ಮುಖ್ಯ ಭಾಷೆಯಲ್ಲಾಗಲೀ ಬರೆದಿರಬೇಕು.

ಯಾವನೊಬ್ಬ ಪಾಲಿಸಿದಾರನು ಈ ಸಭೆಗೆ ಬರಲು ಇಚ್ಛಿಸುವದಾದರೆ ತಾ. 13-6-1940 ಒಳಗಾಗಿ ಕಂಪೆನಿಗೆ ತಲಪುವಂತೆ ಪ್ರವೇಶ ಸರ್ಟಿಫಿಕೇಟಿಗೆ ಅರ್ಜಿ ಕೊಡತಕ್ಕದ್ದು. ಸದರಿ ಪ್ರವೇಶ ಸರ್ಟಿಫಿಕೇಟುಗಳನ್ನು ಟಪ್ಪಾಲು ದ್ವಾರಾ ಪಾಲಿಸಿದಾರರ ನಿಳಾಸಕ್ಕೆ ಮಾತ್ರ ಕಳುಹಿಸಲಾಗುವದು. ಖುದ್ದು ಬಂದಲ್ಲಿ ಸದರಿ ಸರ್ಟಿಫಿಕೇಟುಗಳನ್ನು ಪಾಲಿಸಿದಾರರು ಹಾಜರು ಮಾಡಿದರೆ ಕೊಡಲಾಗುವದು. ಸದರಿ ಸರ್ಟಿಫಿಕೇಟು ಇತರರಿಗೆ ಕೊಡಕೂಡದು. ಅಲ್ಲದೆ ಸಭೆಯ ಪ್ರವೇಶಕ್ಕೆ ಮೊದಲು ಸರ್ಟಿಫಿಕೇಟನ್ನು ತೋರಿಸಲೇಬೇಕು.

ಜನರಲ್ ಮೇನೇಜರ್.

ಮಡಿಕೇರಿ ಸಾರ್ವಜನಿಕ ಸಭೆ.

ಕರ್ನಾಟಕ ಪ್ರಾಂತೀಕ ಸತ್ಯಾಗ್ರಹ ಸಮಿತಿಯ ಪ್ರೆಸಿಡೆಂಟರ ಭಾಷಣ.

ಕರ್ನಾಟಕ ಪ್ರಾಂತೀಕ ಸತ್ಯಾಗ್ರಹ ಸಮಿತಿಯ ಪ್ರೆಸಿಡೆಂಟರಾದ ಡಾ. ನಾಗಣ್ಣಗೌಡ ಯಂ. ಎಸ್ ಸಿ. ಯವರು ತಾ. 24ರಲ್ಲಿ ಮಡಿಕೇರಿಗೆ ಬಂದರು. ಅದೇ ದಿನ ಮಡಿಕೇರಿ ಜಮಿನ್ದಾರ ಕಟ್ಟಡದ ಮುಂದಿನ ಮೈದಾನದಲ್ಲಿ ಒಂದು ಸಾರ್ವಜನಿಕ ಸಭೆಯು ಶ್ರೀ ಚೆಪ್ಪುಡೀರ ಟಿ. ಮಾಚಯ್ಯ ಬಾರ್-ಅಟ್-ಲಾರವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ರಾಷ್ಟ್ರೀಯ ಧ್ವಜಾರೋಹಣದ ನಂತರ ಅಧ್ಯಕ್ಷರಾದ ಮಾಚಯ್ಯನವರು ಡಾ. ನಾಗಣ್ಣಗೌಡರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟು ಅವರನ್ನು ಭಾಷಣಮಾಡಬೇಕೆಂತ ಆಜ್ಞಾಪಿಸಿದರು.

ಪ್ರೆಸಿಡೆಂಟರ ಭಾಷಣ.

ಡಾ. ನಾಗಣ್ಣಗೌಡರು ಸಭಿಕರನ್ನು ವಂದಿಸಿ ಕೊಡಗಿಗೂ ಕರ್ನಾಟಕಕ್ಕೂ ಇರುವ ಸಂಬಂಧವನ್ನು ವಿವರಿಸಿ ಹೇಳಿದರು. ಮುಂದುವರಿಸುತ್ತಾ ಅವರು ಹೇಳಿದೇನಂದರೆ-ಇಂದು ಇಡೀ ಜಗತ್ತೇ ವಿನಾಶದ ಪಥದಲ್ಲಿ ಕ್ರಮಿಸುತ್ತಿದೆ. ಅತ್ಯುಚ್ಚ ಶಿಖರವನ್ನೇರಿದ ಪಾಶ್ಚಾತ್ಯ ನಾಗರೀಕತೆಯು ಮಾನವ ಕುಲದ ಬುಡಕ್ಕೇ ಕೊಡಲೀ ಹಾಕಲುದ್ಯುಕ್ತವಾಗಿದೆ. ರಾಜ್ಯ ವಿಸ್ತರಣಾ ದಾಹದಿಂದ ಪರಿತಪಿಸುತ್ತಿರುವ ಪಾಶ್ಚಾತ್ಯ ಜನಾಂಗಗಳು ಸ್ವಾತಂತ್ರ್ಯದ ಮಾರಣ ಹೋಮಕ್ಕೆ ತೊಡಗಿವೆ. ಆದರೆ ಇಂದು ಈ ಹಿಂಸಾಕಾರ್ಯದ ಟೊಳ್ಳುತನವು ವಿಶದವಾಗುತ್ತಾ ಬಂದಿದೆ. ಭಾರತ ನಭೋಮಂಡಲದಲ್ಲಿ ಮಹಾತ್ಮರಂಥಾ ತಾರೆಗಳು ಉದಿಸಿ ಪ್ರಪಂಚದ ಶಾಂತಿಯು ಅಹಿಂಸೆಯಿಂದಲೇ ಸಾಧ್ಯವೆಂದು ಘೋಷಿಸುತ್ತಿದ್ದಾರೆ. ಅಂತರರಾಷ್ಟ್ರೀಯ ರಾಜಕೀಯದಲ್ಲಿ ಅಹಿಂಸೆಯನ್ನು ಉಪಯೋಗಿಸುವದು ಬೇಕಿದೆ; ಇಲ್ಲವೆ ಮಾನವ ಜನಾಂಗಕ್ಕೆ ಸುಖಶಾಂತಿ ಎಂದೂ ಲಭಿಸದೆಂದು ಸಾರಿದ್ದಾರೆ. ಭಾರತವಲ್ಲಾದರೂ ಇಂದು ಆರ್ಥಿಕ ಮುಗ್ಗಟ್ಟಿನಲ್ಲಿ ಜನತೆಯು ತತ್ತರಿಸುತ್ತಿರುವರು. ದಿನಕ್ಕೊಂದು ಊಟವಿಲ್ಲದ ನಿರ್ಗತಿಕರ ಕರುಳಿನ ಕೂಗು ಅಂತಃಕರಣವನ್ನು ಕೆರಳಿಸುತ್ತಿದೆ. ಇಂಥಾ ದರಿದ್ರಾವಸ್ಥೆಗೆ ಕಾರಣವೇನು ? ಪರದೇಶಿ ಸಾಮಾನುಗಳ ಸ್ಪರ್ಧೆಗೆ ಸಿಲುಕಿ ದೇಶೀಯ ಕೈಗಾರಿಕೆಗಳು ಮೂಲೆಪಾಲಾದವು. ಜನತೆಯು ಸ್ವತಃ ಕೈಯಿಂದ ತಯಾರಿಸಿ ದೇಶದ ಬಡತನವನ್ನು ಹಿಂಗಿಸುತ್ತಿದ್ದ ಆಕಾಲದಲ್ಲಿ ಆಗ್ಗದ ಯಂತ್ರ ಸಾಮುಗ್ರಿಗಳಿಗೆ ಮನಸೋತು ತಮ್ಮ ಸ್ವಾವಲಂಬನವನ್ನು ಮಾರಿಕೊಂಡರು ದೇಶೀಯ ಕೈಗಾರಿಕೆ ಮೂಲೆಸೇರಿದವು. ಆದರೆ ಇದೋ ಇಂದೀಗ ಭಾರತಭಾಗ್ಯವಿಧಾತ ಪೂಜ್ಯಗಾಂಧೀಜಿ, ಚರಖಾತತ್ವವನ್ನು ಉಪದೇಶಿಸುತ್ತಿರುವರು. ಮಾನವನಿಗೆ ಬೇಕಾದ ಅವಶ್ಯಕಗಳಲ್ಲಿ ಪ್ರಥಮಶ್ರೇಣಿಯಲ್ಲಿ ಬಟ್ಟೆಯು ನಿಲ್ಲುತ್ತಿದೆ. ಅಂಥಾ ಬಟ್ಟೆಯನ್ನು ನಾವೇ ಸ್ವತಹ ಮಾಡಿಕೊಂಡರೆ ದೇಶದ ದಾರಿದ್ರ್ಯವು ಮಾಯವಾಗಲೇಬೇಕು. ಚರಖಾದ ತತ್ವವು ಇಂದಿನ ಯಂತ್ರಯುಗದಲ್ಲಿ ಸರಿಹೋಗದೆಂದು ವಾದಿಸುವವರಿಗೆ ಕಡಿಮೆಯಿಲ್ಲ. ಆದರೆ ಭಾರತಕ್ಕೆ ಇದಲ್ಲದೆ ಗತ್ಯಂತರವಿಲ್ಲ. ಯಂತ್ರ ಸಾಮುಗ್ರಿಗಳನ್ನು ತಯಾರಿಸಿ ಪರದೇಶಿ ವಸ್ತುಗಳೊಡನೆ ಸ್ಪರ್ಧೆ ನಡೆಸುವದು ಸದ್ಯಕ್ಕೆ ಆಗದ ಮಾತು. ಚರಖಾದ ತತ್ವದಲ್ಲಿರುವ ಗೂಢವಾದ ಅರ್ಥವೇ ಸ್ವಾವಲಂಬನ. ಚರಖಾವು ಭಾರತೋದ್ಧಾರಕ್ಕೆ ಪ್ರಥಮ ಸೋಪಾನವೆಂದು ಬೇರೆ ನಿದರ್ಶನಗಳು ಬೇಕಿಲ್ಲ.

ತಜ್ಞ ಪರಿಶೋಧಕರ ಲೆಕ್ಕಾಚಾರದಂತೆ ದೇಶದ ಜನತೆಯ ಶೇಕಡ 10ನೇ ಭಾಗವು ಇಡೀ ದೇಶೀಯರಿಗಿರುವ ಅನ್ನವನ್ನು ಬೆಳೆಸಬಲ್ಲುದು. ಆದರೆ ನಮ್ಮ ಭರತಖಂಡದಲ್ಲಿ ಶೇಕಡ 90 ಜನರು ಕೃಷಿಯನ್ನೇ ಅವಲಂಬಿಸಿರುವರೆಂದರೆ ದೇಶದ ಪ್ರಗತಿಯೆಂತಾಗಬೇಕು ? ಬೇಸಾಯಗಾರರ ಉತ್ಪತ್ತಿಯಾದ ದವಸಧಾನ್ಯಗಳಿಗೆ ಸರಿಯಾದ ಬೆಲೆಯಿಲ್ಲವೆಂದರೆ ರಾಷ್ಟ್ರದ ಆರ್ಥಿಕ ಸ್ಥಿತಿ ಸುಧಾರಿಸುವದೆಂತು ?

ಅಸ್ಪೃಶ್ಯತೆಯು ಮಹಾಭೂತವು ನಾಶ ಹೊಂದದ ವಿನಹ ಭಾರತೀಯರಲ್ಲಿ ಸಹೋದರಭಾವವು ಬರದು. ಅಂಥಾ ಬಾಂಧವ್ಯವಿಲ್ಲದೆ ರಾಷ್ಟ್ರದ ಪ್ರಗತಿಯಾಗದು. ಹರಿಜನರನ್ನು ಅಸ್ಪೃಶ್ಯರೆಂದು ತುಚ್ಛೀಕರಿಸಿ ಅವರ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವರನ್ನು ನಾಯಿ ಬೆಕ್ಕುಗಳಿಗಿಂತ ಕಡೆಯಾಗಿಕಂಡು ಅವರನ್ನು ಅಧೋಗತಿಗಿಳಿಸಿರುವ ನಮ್ಮ ವರ್ತನೆಯು ಖಂಡನೀಯವಾದದ್ದು. ಹೀಗೆ ಹರಿಜನರ ಹಕ್ಕನ್ನು ಅಪಹರಿಸಿರುವ ನಾವು ಅದನ್ನು ಸರಿಪಡಿಸದ ವಿನಹ ಬ್ರಿಟಿಷರಲ್ಲಿ ನಮ್ಮ ಹಕ್ಕು ಬಾಧ್ಯತೆಗಳನ್ನು ನೀವು ಕಡೆಗಣಿಸಿರುವಿರೆಂದೂ, ನಮ್ಮ ಭವಿತವ್ಯದ ನಿರ್ಣಯ ನಮ್ಮಿಂದಲೇ ಆಗಬೇಕೆಂದೂ ಕೇಳುವದು ಹೇಗೆ? ಒಂದೆಡೆ ತತ್ವ ವಿರುದ್ಧವಾಗಿ ನಾವು ವರ್ತಿಸಿ ಬೇರೊಂದೆಡೆ ಪರರಿಗೆ ಉಪದೇಶ ಮಾಡಿದರೆ ಅದಕ್ಕೆ ಎಷ್ಟರ ಮಟ್ಟಿನ ಬೆಲೆ ಇದ್ದೀತು? ಆದ್ದರಿಂದ ಅಸ್ಪೃಶ್ಯತಾ ನಿವಾರಣೆಯಾದಲ್ಲದ ಭಾರತದ ವಿಮೋಚನೆಯು ಅಶಕ್ಯವೆಂಬುದು ಸಿದ್ಧಾಂತ. ಆದ್ದರಿಂದ ಈ ಬಗ್ಗೆ ಅಚಲ ಪ್ರಯತ್ನ ನಡೆಯಬೇಕಿದೆ' ಎಂದು ಮುಂತಾಗಿ ಭಾಷಣ ಮಾಡಿದರು.

ಮಿಸೆಸ್ ನಾಗಣ್ಣಗೌಡರ ಭಾಷಣ.

ಡಾ. ನಾಗಣ್ಣಗೌಡರ ಭಾಷಣವಾದನಂತರ ಅವರ ಪತ್ನಿಯವರಾದ ಡಾ. ಸಾವಿತ್ರಮ್ಮನವರು ಒಂದು ಚಿಕ್ಕ ಭಾಷಣ ಮಾಡಿದರು. ಭಾಷಣದ ಸಾರ ಹೀಗಿದೆ- 'ಇಡೀ ಭಾರತೀಯರು ಜಾಗೃತಿಗೊಂಡು ಇಂದು ದೇಶದ ಸ್ವಾತಂತ್ರ್ಯ ಸಂಪಾದನೆಗೆ ಹೊರಟಿರುವರು. ಈ ಆಂದೋಲನದಲ್ಲಿ ಸ್ತ್ರೀಯರ ಕರ್ತವ್ಯವು ಬಹು ಪ್ರಾಮುಖ್ಯವಾದುದು. 'ತೊಟ್ಟಿಲನ್ನು ತೂಗುವ ಕೈ ರಾಷ್ಟ್ರವನ್ನಾಳುವದು' ಎಂಬ ನಾಣ್ನುಡಿಯಂತೆ ಸ್ತ್ರೀಯ ವ್ಯಕ್ತಿತ್ವವು ಅಪಾರ ಗೌರವಯುತವಾದುದು. ಒಂದು ಜನಾಂಗದ ಏಳ್ಗೆಯು ಸ್ತ್ರೀಯರ ಸಹಕಾರವಿಲ್ಲದೆ ಆಗದು. ಆದ್ದರಿಂದ ಸ್ತ್ರೀ ವಿದ್ಯಾಪ್ರಚಾರವು ಆಗಬೇಕು. ವಿದ್ಯೆಯೆಂದರೆ ಇಂಗ್ಲಿಷ್ ಹಾಗೂ ಕನ್ನಡ ಓದುವದಲ್ಲ; ತನ್ನ ಕುಟುಂಬ ವ್ಯವಹರಣ ನೀತಿ, ಬಾಲಕರ ಪೋಷಣ ಮಾರ್ಗ, ಸಮಾಜದ ಏಳ್ಗೆಯ ಸಾಧನ ಇದರಲ್ಲಿ ಅರಿಯುಂಟಾಗುವಂತೆ ತಕ್ಕ ಸೌಲಭ್ಯಗಳಾಗಬೇಕು. ಇಂದು ನಾಗರೀಕರೆಂದೆನಿಸುವ ರಾಷ್ಟ್ರಗಳಲ್ಲಿ ಹೆಂಗಸರು ನಾಗರೀಕತೆಯ ಪಥದಲ್ಲಿ ಬಹುದೂರ ಹೋಗಿರುವರು. ಅತ್ಯಾಧುನಿಕ ರೀತಿಯ ವಾಹನಗಳನ್ನು ನಡೆಸುವ, ಕಾರ್ಖಾನೆಗಳಲ್ಲಿ ದಕ್ಷತೆಯಿಂದ ಕೆಲಸ ಮಾಡುವ, ಕೃಷಿ ವಿಧಾನವನ್ನು ಯಶಸ್ವಿಯಾಗಿ ಜರಗಿಸುವ ಶಕ್ತಿಯನ್ನು ಪಡೆದಿರುವರು. ಒಂದು ಕುಟುಂಬದ ಉನ್ನತಿ ಹಾಗೂ ಅವನತಿಯಾಗಬೇಕಾದರೆ ಅದು ಹೆಚ್ಚಾಗಿ ಗೃಹಿಣಿಯಿಂದ. ಆದ್ದರಿಂದ ದೇಶವು ಪ್ರಗತಿಪಥದಲ್ಲಿ ನಡೆದು ಭಾರತದ ವಿಮೋಚನೆಯಾಗಬೇಕಾದರೆ ಸ್ತ್ರೀಯು ಹೆಚ್ಚು ಜಾಗರೂಕತೆ ವಹಿಸಬೇಕು. ಪ್ರತಿಯೊಬ್ಬಳಲ್ಲಿಯೂ ಸ್ವಾವಲಂಬನ ಗುಣ ಬೆಳೆಯಬೇಕು. ಖಾದಿ, ಸ್ವದೇಶಿ ಹಾಗೂ ಸ್ವತಂತ್ರ್ಯಾಭಿಲಾಷೆಯು ಎಲ್ಲರಲ್ಲಿಯೂ ಹುಟ್ಟಬೇಕು. ಅಂದೇ ಭಾರತದ ಉದ್ಧಾರವಾಗುವದು'.

ಅಧ್ಯಕ್ಷರ ಭಾಷಣ.

ಅಧ್ಯಕ್ಷರಾದ ಶ್ರೀ ಸಿ. ಟಿ. ಮಾಚಯ್ಯ ಬಾರ್-ಅಟ್-ಲಾರವರು ತಮ್ಮ ಅಂತ್ಯದ ಭಾಷಣದಲ್ಲಿ ಹೀಗೆಂದರು. ಅದರ ಸಾರಾಂಶ ಹೀಗಿದೆ-'ನನ್ನ ಕೊಡಗು ನಾಡೆಂದರೆ ನನಗೊಂದು ಹೆಮ್ಮೆ. ಇಂಥಾ ಹುಲುಸಾದ ಭೂಮಿ ಭಾರತದಲ್ಲಿ ಅತಿ ವಿರಳ. ಒಂದು ಕಾಲಕ್ಕೆ ಈ ನಾಡು ಸಕಲ ಸೌಭಾಗ್ಯಗಳಿಂದ ತುಂಬಿ ಮೆರೆಯುತಿತ್ತು. ಆದರೆ ಇಂದು ಇಲ್ಲಿ ಏನು ನಡೆದಿದೆ. ಬಡತನ, ಪರಾವಲಂಬನ, ಪರಾನುಕರಣೆ ಈ ಭೂತಗಳು ಹಬ್ಬಿ ಕೊಡಗಿನ ಬಾಂಧವರ ಜೀವನ ಅಂತಸ್ತು ಕೆಳಗಿಳಿದಿದೆ. ಹಾಲಿಗೆ ತವರೂರೆನಿಸಿದ ಕೊಡಗಿನಲ್ಲಿ ಇಂದು ಕುಡಿಯಲು ಹಾಲಿಲ್ಲ. ಇಂಥಾ ದುರವಸ್ಥೆಯು ನಮ್ಮ ಪವಿತ್ರ ನಾಡಿಗೆ ಬರಲು ಕಾರಣವೇನು? ಕೊಡಗರಾದ ನಾವು ಇತರರ ಸೋಗಿಗೆ ಮರುಳಾಗುವವರು! ಮಾನಸಿಕ ಸ್ಥೈರ್ಯವು ನಮಗಿಲ್ಲ. ಇನ್ನೊಂದು ಕಾರಣವೆಂದರೆ, ನಮ್ಮ ಪಿತೃಗಳು ನಮಗೆ ಸಂಪಾದಿಸಿರುವ ಭೂಮಿಯೇ ನಮ್ಮನ್ನು ಸುಖಪ್ರಾಯರನ್ನಾಗಿ ಮಾಡಿದೆ. ತಂದೆ ಗಳಿಸಿದ ಭೂಮಿ ಇದೆ, ನಾವೇಕೆ ಕಷ್ಟಪಟ್ಟು ಕೆಲಸ ಮಾಡಬೇಕು? ಇದೀಗ ನಮ್ಮನ್ನು ನಾಶ ಮಾಡುತ್ತಿರುವ ನಮ್ಮ ಒಣ ಹೆಮ್ಮೆ. ನನ್ನ ತಂದೆಗೆ ಹುಲುಸಾದ ತೋಟವಿತ್ತು ಆದರೆ ಇಂದು ನನ್ನ ಮೇಲುಸ್ತುವಾರಿಯಲ್ಲಿ ಅದು ಸುಂದರವಾದ ಕಾಡಾಗಿದೆ. ಒಂದು ಕಾಲಕ್ಕೆ ಲಕ್ಷಾಂತರ ರೂಪಾಯಿಗಳ ಕಾಫಿಯನ್ನು ರಫ್ತು ಮಾಡುತ್ತಿದ್ದ ನಮ್ಮ ನಾಡು ಇಂದು ಭಯಂಕರ ಬಡತನಕ್ಕೆ ತುತ್ತಾಗಿದೆ. ನಮಗೆ ಸ್ವರಾಜ್ಯ ಬೇಕೆಂದು ಹಂಬಲಿಸುತ್ತಿರುವೆವು. ಆದರೆ ಸ್ವರಾಜ್ಯವು ನಮ್ಮಂಥಾ ಸೋಮಾರಿಗಳಿಗೆ ಲಭಿಸದು. 'ಕೈ ಕೆಸರಾದರೆ ಬಾಯಿ ಮೊಸರು' ಎಂಬಂತೆ ಕಾರ್ಯ ಮಾಡದೆ ಫಲ ದೊರೆಯದು. ಕೊಡಗಿನಂಥಾ ನಾಡಿನಲ್ಲಿ ದಾರಿದ್ರ್ಯವೆಂದರೆ ಅದು ಸೋಮಾರಿತನವಲ್ಲದೆ ಮತ್ತೇನು? ಕೊಡಗು ಎಂಥಾ ನಾಡು, ಎಂಬ ಅರಿವೆಯುಂಟಾಗಬೇಕಾದರೆ ಹೊರಗಿನ ದೇಶಗಳನ್ನು ನೋಡಿ ತಿಳಿಯಬೇಕು. ಇದು ನಿಜವಾಗಿಯೂ ದೇವಲೋಕ. ಕೊಡವರಲ್ಲಿ ನೂರಕ್ಕೆ ತೊಂಬತ್ತೊಂಭತ್ತು ಜನರು ತಂದೆಯ ಆಸ್ತಿಗೆ ಕಾದು ಕೂಡುವವರು. ಇದೇ ನಮ್ಮಲ್ಲಿರುವ ನ್ಯೂನತೆ. ಇಂಥಾ ಭೀಕರ ಬಡತನವನ್ನು ಹೋಗಲಾಡಿಸಲೇ ಬೇಕು. ನೂಲುವ ಹವ್ಯಾಸವನ್ನು ಪ್ರತಿಯೊಬ್ಬನೂ ಬೆಳೆಸಬೇಕು. ನೂಲಲು ಅಶಕ್ತರಾದವರು, ಇತರರು ನೂತ ಬಟ್ಟೆಯನ್ನು ಕ್ರಯಕ್ಕೆ ಪಡೆದು ಪ್ರೋತ್ಸಾಹಿಸಬೇಕು. ಅಂದರೇನೇ ನಮ್ಮ ಬಡತನವು ಹಿಂಗೀತು.

ಅನಂತರ ಅಧ್ಯಕ್ಷರಿಗೂ, ಡಾ. ನಾಗಣ್ಣಗೌಡ ದಂಪತಿಗಳಿಗೂ, ನೆರೆದವರಿಗೂ ವಂದನೆಯನ್ನರ್ಪಿಸಿ ಸಭೆಯು ಮುಕ್ತಾಯಗೊಂಡಿತು.

ವಿಜ್ಞಾಪನೆ.

ಕೆಳಗಿನ ವಿಳಾಸದಾರರು ಕೆಲವು ವರ್ಷಗಳಿಂದ ಚಿನ್ನ, ಬೆಳ್ಳಿ, ವ್ಯಾಪಾರ ಮಾಡುತ್ತಿರುವದು ಕೊಡಗಿನ ಮಹನೀಯರಿಗೆ ತಿಳಿದ ವಿಷಯವಾಗಿದೆ. ಇವರು ಈ ಮೂಲಕ ವಾಚಕರಿಗೆ ತಿಳಿಯಪಡಿಸುವದೇನೆಂದರೆ, ಚಿನ್ನ ಮತ್ತು ಬೆಳ್ಳಿಯ ಧಾರಣೆಯು ಈಗ ಬಹಳ ಮಟ್ಟಿಗೆ ಏರಿರುವದರಿಂದ ಅವುಗಳನ್ನು ನಿಮ್ಮ ಮನೆಗೆ ಬರುವ ವ್ಯಾಪಾರಗಾರರಿಗೆ ನೀವು ಕ್ರಯವನ್ನು ನಮ್ಮಲ್ಲಿ ಸರಿಯಾಗಿ ವಿಚಾರಿಸದೆ ಚಿನ್ನದ ಮತ್ತು ಬೆಳ್ಳಿಯ ಸಾಮಾನುಗಳನ್ನು ಮಾರಬೇಡಿ.

ಆರ್. ಯಂ. ಕಪನ್ನಯ್ಯ.
ಚಿನ್ನ ಮತ್ತು ಬೆಳ್ಳಿ ವ್ಯಾಪಾರಿ ಮಡಿಕೇರಿ.

ಅಪರಂಜಿ ತೊಲಕ್ಕೆ 45-2-0
ಪವನಿಗೆ 1¼ 30-1-0
ಮಾಸ ಚಿನ್ನ ತೊಲಕ್ಕೆ 44-7-0
ಬೆಳ್ಳಿ ನೂರು ತೊಲಕ್ಕೆ 62-10-0

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಅ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	48,470	0	0
ಜಮೂಬಂದ ರೇವಣಾತಿ	–	2,19,851	8	4
ವಸೂಲಾದ ಕ್ಷೇಮನಿಧಿ	–	1,56,752	7	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	36,942	0	7
ತ್ರಿಫ್ಟ್ ಡಿಪಾಜಿಟ್ಟು	–	23,523	9	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ರೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1–9–1937ರಿಂದ ಬಡ್ಡಿ ದೊರೆಯುತ್ತೆ.

ತಾ. 1–10–1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1–4–1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1–8–38ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿತ್ತು. ಆದರೆ ಪುನಹ ತಾ. 29–7–39ರಿಂದ ತತ್ಕಾಲಕ್ಕೆ ನಿಲ್ಲಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ–ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಸಿ. ದೇವಯ್ಯನವರು.
ಸೆಕ್ರೆಟರಿ:—ಮಿ. ಕೆ. ಸಿ. ಕರುಂಬಯ್ಯನವರು ಎಂ. ಎಲ್. ಸಿ.

ತಾ. 1–3–1940

ಕೊಡಂದೇರ ಡಿ. ಮಾಚಯ್ಯ,

L.D Sc. (COLLEGE OF DENTISTRY)
EX-SUPERVISOR LAXMIBAI PATEL DENTAL HOSPITAL, KARACHI

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (45) ನವೀನ ರೀತಿಯ ಚಿಕಿತ್ಸೆ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

[illegible]

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗ್ಯೆ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗ್ಯೆ) ಆದರೂ ಇದರ ಸೇವನೆಯಿಂದ ಪೂರ್ಣಗುಣವಾಗಿ ಚನ್ನಾಗಿ ರಕ್ತ ಉಂಟಾಗುವದು. ಬಾಟ್ಲಿಗೆ 1 ರೂ

ಗಣೇಶ ರಾಮಚಂದ್ರ ಶೆಟೆ. ಮತ್ತು ಕಂಪೆನಿ,
(52–21) ಗಿರಗಾಂವ್, ಮುಂಬಯಿ ೪,

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಇರಬೇಕಾದ ರಿಜಿಸ್ಟರುಗಳು ಅಂದರೆ–ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರುಗಳು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ, ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಗಳೂ, ಫೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸ ಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ದಾವಾ ಮತ್ತು ಅಪಲ್ಯಾರಿ ಫಾರ್ಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

Shorthand, Typing etc.

ಶಾರ್ಟ್‌ಹೆಂಡ್, ಟ್ಯಾಪ್‌ರ್ಯಾಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿಯಲ್ಲಿರುವ ಆೖಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara, and Virajapet.

52—50

ನಿಮ್ಮ ಜಾಹಿರಾತುಗಳಿವೆಯೋ? ಹಾಗಾದರೆ ಇಂದೇ

'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸಿ

ಲಾಭ ಪಡೆಯಿರಿ. ದರ ಅತೀ ಕಡಿಮೆ.

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:–ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಾಜರ್, (ರಿಜಿಸ್ಟರ್ಡ್.)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52–16

Printed & Published by P. I. Belliappa, at 'Kodagu' Press Mercara for 'Kodagu' Ltd.







FLASH NO:2